ಶಂಬಾ ಕೃತಿ ಸಂಪುಟ

ಕಂನಾಡು - ಕರ್ನಾಟ ೧



ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ
ಬೆಂಗಳೂರು 560 018

ಜನಪ್ರಿಯ ಪುಸ್ತಕ ಮಾಲೆ

ಶಂಬಾ ಕೃತಿಸಂಪುಟ

೧

ಕಂನಾಡು-ಕರ್ನಾಟ

ಮಲ್ಲೇಪುರಂ ಜಿ. ವೆಂಕಟೇಶ
ಸಂಪಾದಕ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಪಂಪಮಹಾಕವಿ ರಸ್ತೆ
ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮

SHAMBA KRUTI SAMPUTA : VOL. 1

KANNADU - KARNATA

Complete Works of Dr. Shamba Joshi
Edited by : Prof. Mallepuram G. Venkatesha
Kannada University, Hampi

Published by The Administrative Officer
Kannada Pustaka Pradhikara
(Kannada Book Authourity)
Pampa Mahakavi Road, Chamarajpet
Bangalore - 560 018

First Edition : 1999

Page : xxxii + viii + 470

ಈ ಆವೃತ್ತಿಯ ಹಕ್ಕುಗಳು : **ಕನ್ನಡ ಪುಸ್ತಕ ಪ್ರಾಧಿಕಾರ**

ಮುಖಪುಟ ವಿನ್ಯಾಸ : **ಟಿ. ಎಫ್. ಹಾದಿಮನಿ**

ಬೆಲೆ : **125/-**

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ಚಾಮರಾಜಪೇಟೆ, ಬೆಂಗಳೂರು - ೧೮
ದೂರವಾಣಿ : ೬೬೧೩೧೨೩, ೬೬೧೮೭೫೨

ಮಹಾರಾಷ್ಟ್ರದ ಮೂಲ

ಶಂ. ಬಾ. ಜೋಶಿ

ಮನೋಹರ ಗ್ರಂಥಪ್ರಕಾಶನ ಸಮಿತಿ
ಧಾರವಾಡ

: २ :

स्थलनामें आणि समाजेतिहास

मानवेतिहास जाणण्याचीं पुष्कळ साधनें आहेत. त्यांत स्थलनामांचा अभ्यास हें एक साधन आहे. कोणत्याहि साधनाकडून होऊं शकणाऱ्या साहाय्याला कांहीं एक मर्यादा असते. त्या मर्यादेपलीकडे तें साधन गैरलागू ठरून निरुपयोगी होतें. इतकेंच नव्हे तर त्यामुळें, आपण जें सत्य जाणूं इच्छितों त्यापासून दूर आडमार्गांत जाण्याची भीति असते. स्थलनामांच्या अभ्यासांत तर ही भीति याहून विशेषच आहे. या साधनाचा उपयोग करतेवेळीं दिशाभूल होऊं नये म्हणून जितकी काळजी घेतां येईल तितकी हितावह आहे. शक्य ती दक्षता बाळगूनहि नकळत कांहीं उणीवा या राहतातच. पण त्यांचीहि योग्य छाननी व्हावी व जास्तींत जास्त सत्य जाणतां आलें तर जाणावें या हेतूनेंच या लहानशा मुद्यावर कांहीं विचार या प्रकरणांत मांडले आहेत.

स्थलनामांच्या मागील जुना इतिहास

अतिपरिचयामुळें पुष्कळ गोष्टींतील अर्थ-स्वारस्य बरेचसें कमी होतें म्हणतात, तें कांहीं खोटें नाहीं. याला अतिशय जवळचेंच उदाहरण म्हणजे आपल्या गांवांचीं नांवेंच घ्या. आपण राहात असलेल्या गांवाला मिळालेलें विशिष्ट नांव कां प्राप्त झालें हें निश्चितपणें सांगणें आज जवळ जवळ अशक्य

ಋಗ್ವೇದಕಾಲದಿಂದ ಕನ್ನಡರ ಕಥೆ

A new approach
to the Dravidian Problem

ಕರ್ಣಾಟದ ವೀರಕ್ಷತ್ರಿಯರು

ಶ್ರೀ

ಬರೆದವರು:

ಶಂ. ಬಾ. ಜೋಶಿ

೧೯[illegible]

ಕನ್ನಡರನೆಲೆ

ಶಿವ-ರಹಸ್ಯ

卐

ಲೇಖಕರು:

ಶಂ. ಬಾ. ಜೋಶಿ


★

ಭಾವಕ್ಕಗಮ್ಯನ ಕಂಡೆನಯ್ಯಾ! ಎನ್ನ ಒಳಹೊರಗೆ
ಸರ್ವಾಂಗ ಪರಮ ಪ್ರಕಾಶದೊಳು ಬೆಳಗುವ
ಜ್ಯೋತಿಯ ಕಂಡೆ ನೋಡಾ ಗುಹೇಶ್ವರಾ!


೧೯೩೯

ಬೆಲೆ: ಒಂದು ರೂಪಾಯಿ

ಕನ್ನಡರನೆಲೆ



ಶಿವರಾಮಕಾರಂತ ಹಾಗೂ ಅವರ ಮಿತ್ರರೊಡನೆ



ಮಂ. ಗೋವಿಂದ ಪೈ, ಶಂ. ಬಾ. ಜೋಶಿ ಮತ್ತು ಪ್ರೊ. ಕೆ. ವಿ. ರಾಘವಾಚಾರ್

ಶ್ರೀಮತಿ ಜೋಗಳೇಕರ ಸೀತಾಬಾಯಿಯವರು



ಹಲವರಿಗೆ
ವ್ರತೋಪವಾಸ
ಯಮ-ನಿಯಮಾದಿಗಳ
ಪರಿಶ್ರಮದಿಂದಲೂ ಸಾಧಿಸಲು
ದುಃಸಾಧ್ಯವಾಗಿರುವಂತಹ ಹಲವು
ದೈವೀಗುಣಗಳು ಹುಟ್ಟುಗುಣವಾಗಿರುವ
ಪೂಜ್ಯಳಾದ ಅಮ್ಮನ
ಅಡಿದಾವರೆಗಳಲ್ಲಿ


ಮುಡಿಪು




ಶಂ. ಬಾ. ಜೋಶಿ, ಕು. ಸಂಧ್ಯಾ, ಪತ್ನಿ ಪಾರ್ವತಿಬಾಯಿ, ಮಗಳು ವಿಮಲ ಡಿಸ್ಕಳ್ಕರ್
ಮೊಮ್ಮಗಳು ಮಂಗಳಾ, ಸೊಸೆ ಪ್ರಭಾ ಮತ್ತು ಮಗ ಬಲ್ಲಾಳ ಜೋಶಿ



ಶಂ. ಬಾ. ಜೋಶಿ, ಪತ್ನಿ ಪಾರ್ವತಿಬಾಯಿ, ಹೆಂಡತಿಯ ತಾಯಿ ತಂದೆ
ಭಾಗೀರಥಿ ಬಾಯಿ - ಹರಿಭಾವು ಕರಂದೀಕರ್




೧೯೭೦ರಲ್ಲಿ ಡಾ. ಶಂ. ಬಾ. ಜೋಶಿ



ಮರಿಮಗ ಸುಹಾಸನ ಹುಟ್ಟುಹಬ್ಬದಂದು ವಿಮಲಕ್ಕನ ಅಳಿಯ ಅತುಲ್, ಮಂಗಳಾ
ಪಾರ್ವತಿಬಾಯಿ ಮತ್ತು ಶಂಬಾ
ನಿಂತಿರುವವರು : ಮೊಮ್ಮಗಳು ಸಂಧ್ಯಾ, ವಿಮಲನಾರಿಂಗರಕರ್, ಬಲ್ಲಾಳ ಜೋಶಿ
ಪ್ರಮಿಳಾ ಡಾಗರ್, ಚಂದ್ರಕಾಂತ ನಾರಿಂಗಿರ್‌ಕರ್




ಮುಂಬಯಿಯ ವಿಮಾನ ನಿಲ್ದಾಣದಲ್ಲಿ ವಿದೇಶಕ್ಕೆ ಬೀಳ್ಕೊಡುಗೆ ೧೯೭೧ರಂದು
ಶಂಬಾ ಜೋಶಿ ಮಗ ಬಲ್ಲಾಳ ಜೋಶಿ, ಪತ್ನಿ ಪಾರ್ವತಿಬಾಯಿ ಕುಟುಂಬದ ಸದಸ್ಯರೊಡನೆ



ಎಲಿಫೆಂಟ್ ಗುಹೆಯ ಬಳಿ ಶಂಬಾ ಪಾರ್ವತಿಬಾಯಿ
ಮಧುಕರ ಜೋಶಿ, ಜಗನ್ನಾಥ್ ಮತ್ತು ಮಂಗಳ




ಡಾ. ಪ್ರಹ್ಲಾದ ನರೇಗಲ್ ಮತ್ತು ಅವರ ಕುಟುಂಬ ವರ್ಗ ಶಂಬಾ ಜೋಶಿ
ಅವರ ಮನೆಯ ಎದುರು



ಮಗ ಬಲ್ಲಾಳ ಜೋಶಿ ೧೯೫೨ರಲ್ಲಿ
ಇಂಗ್ಲೆಂಡಿಗೆ ಹೊರಟಾಗ ಹಡಗಿನ ಬಳಿ ಬೀಳ್ಕೊಡುಗೆ
ಶಂಬಾ ಮತ್ತು ಪತ್ನಿ ಪಾರ್ವತಿಬಾಯಿ



ಶಂಬಾ, ಮೊಮ್ಮಕ್ಕಳು ಮಂಗಳಾ, ಉಷಾ ಮತ್ತು ಸಂಧ್ಯಾ



ಪಾರ್ವತಿಬಾಯಿ ಮತ್ತು ಶಂಬಾ ೧೯೫೧ರಲ್ಲಿ
ಒಂದು ಅಪರೂಪದ ಚಿತ್ರ

ಮುನ್ನುಡಿ

ಜ್ಞಾನ ಸಂಪಾದನೆ ಮತ್ತು ಜ್ಞಾನ ಪ್ರಸಾರಗಳ ಅತ್ಯಂತ ಪ್ರಬಲ ಮತ್ತು ಪರಿಣಾಮಕಾರಿ ಮಾಧ್ಯಮ ಅಕ್ಷರ ಮಾಧ್ಯಮ. ಈ ಮಾಧ್ಯಮದಲ್ಲಿ ಆಹ್ಲಾದಕಾರಿಯೂ, ಆತ್ಮಾಕರ್ಷಕವೂ, ಜೀವನ ಸೌಂದರ್ಯದಾಯಕವೂ, ಸಂಸ್ಕೃತಿ ಸಂಪನ್ನವೂ, ಬುದ್ಧಿ ಮನಸ್ಸುಗಳ ವರ್ಧಕವೂ ಆದ ಅಪೂರ್ವ ಮಾಧ್ಯಮವೇ ಸಾಹಿತ್ಯ. ನಿತ್ಯ ಪರಿವರ್ತನಶೀಲವಾದ ಜಗತ್ತಿನ ಜ್ಞಾನ ವಿಜ್ಞಾನ ಸಂಸ್ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರವಹಣ ಮಾಡುತ್ತ ಮನುಷ್ಯನ ಜೀವನವನ್ನು ಪುಷ್ಟಿಗೊಳಿಸುತ್ತ, ತುಷ್ಟಿಗೊಳಿಸುತ್ತ, ವಿಕಾಸಗೊಳಿಸುತ್ತ, ಪೂರ್ಣತೆಯ ಕಡೆಗೆ ಅವನನ್ನು ಕರೆದೊಯ್ಯುವುದೇ ಇದರ ಪರಮ ಗುರಿ. ಇಂಥ ಜೀವನೋತ್ಥಾನಕಾರಿಯಾದ ಉತ್ತಮ ಜ್ಞಾನಸಂಪತ್ತನ್ನು ವಿಶಿಷ್ಟ ಹಾಗೂ ಅರ್ಥಪೂರ್ಣ ಗ್ರಂಥಗಳ ಮೂಲಕ ಕನ್ನಡ ಓದುಗರಿಗೆ ಒದಗಿಸುವ ಗುರುತರ ಜವಾಬ್ದಾರಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರ ಹೊತ್ತುಕೊಂಡು ನಿರ್ವಹಿಸುತ್ತಿದೆ.

ಜ್ಞಾನ, ಸಂಸ್ಕೃತಿ ಮತ್ತು ಸಾಹಿತ್ಯ ಪ್ರಸಾರ ಕಾರ್ಯಕ್ಕೆ ಕರ್ನಾಟಕ ಸರ್ಕಾರ ಬಹು ಹಿಂದಿನಿಂದ ಒತ್ತಾಸೆ ನೀಡುತ್ತ ಬಂದಿದೆ. ಈ ಮೌಲಿಕ ಪರಂಪರೆಯನ್ನು ಆರಂಭಿಸಿದ ಕೀರ್ತಿ ಕರ್ನಾಟಕ ಕಂಡ ಅತ್ಯಂತ ದಕ್ಷ ಹಾಗೂ ದೂರದೃಷ್ಟಿಯ ಮುಖ್ಯಮಂತ್ರಿಗಳಲ್ಲಿ ಒಬ್ಬರಾದ ಶ್ರೀ ಕೆಂಗಲ್ ಹನುಮಂತಮ್ಯ ಅವರಿಗೆ ಸಲ್ಲಬೇಕು. ಕನ್ನಡದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಶ್ರೇಷ್ಠ ಗ್ರಂಥಗಳನ್ನು ಸುಲಭ ಬೆಲೆಯಲ್ಲಿ ಓದುಗರಿಗೆ ತಲುಪಿಸುವ ಸ್ತುತ್ಯ ಕಾರ್ಯವನ್ನು ಅಂದಿನಿಂದ ನಿರ್ವಹಿಸುತ್ತ ಬಹುಬೇಡಿಕೆಯ ನೂರಾರು ಕೃತಿಗಳನ್ನು ಸರ್ಕಾರ ಪ್ರಕಟಿಸಿ ಜನಮನ್ನಣೆಯನ್ನು ಗಳಿಸಿದೆ.

ಇದುವರೆಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸುತ್ತಿದ್ದ ಇಂಥ ಪ್ರಾಚೀನ ಹಾಗೂ ಆಧುನಿಕ ಜನಪ್ರಿಯ ಪುಸ್ತಕಗಳನ್ನು ಈಗ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಅಲಭ್ಯವಾಗಿರುವ ಹಾಗೂ ಬಹು ಬೇಡಿಕೆಯ, ಸಾಹಿತ್ಯ ಮೌಲ್ಯ ಮತ್ತು ವೈಚಾರಿಕ ಮೌಲ್ಯಗಳನ್ನು ಒಳಗೊಂಡಿರುವ ಕೃತಿಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಕನ್ನಡ ಸಹೃದಯರಿಗೆ ನೀಡುವುದೇ ಈ 'ಜನಪ್ರಿಯ ಪುಸ್ತಕಮಾಲೆ'ಯ ಮುಖ್ಯೋದ್ದೇಶ.

ಈ ಮಾಲೆಯಲ್ಲಿ ಕನ್ನಡದ ಅತ್ಯಂತ ಪ್ರಸಿದ್ಧ ಹಾಗೂ ಸ್ವೋಪಜ್ಞಶೀಲ ವಿದ್ವಾಂಸರಾದ, ಡಾ. ಶಂಬಾ ಜೋಶಿ ಅವರ ಸಮಗ್ರ ಕೃತಿಗಳನ್ನು ಒಟ್ಟು ಆರು ಸಂಪುಟಗಳಲ್ಲಿ ಪುಸ್ತಕ ಪ್ರಾಧಿಕಾರವು ಇದೀಗ ಪ್ರಕಟಿಸುತ್ತಿದೆ. ಲೇಖಕರೊಬ್ಬರ ಸಮಗ್ರ ಕೃತಿಗಳ ಸಂಪುಟಗಳನ್ನು ಹೊರತರುವಲ್ಲಿ ಇದು ಪ್ರಾಧಿಕಾರದ ಯೋಜನೆಯ ಮೊದಲ ಪ್ರಯತ್ನ. ಡಾ : ಶಂಕರರಾವ್ ಬಾಳದೀಕ್ಷಿತ ಜೋಶಿ ಅವರು ಕರ್ನಾಟಕ ಕಂಡ ಅತ್ಯಂತ ಶ್ರೇಷ್ಠ ಸಾಂಸ್ಕೃತಿಕ ಸಂಶೋಧಕರು. ನಮ್ಮ ಈ ನಾಡಿನ ಪ್ರತಿಭಾಪೂರ್ಣ ವಿದ್ವತ್ ಪರಂಪರೆಯಲ್ಲಿ

ಡಾ: ಜೋಶಿ ಅವರದ್ದು ಅಪೂರ್ವವೂ ಮತ್ತು ವಿಶಿಷ್ಟವೂ ಆದ ಮಾರ್ಗ. ಜೋಶಿ ಅವರು ಹಿಡಿದಿರುವ ಮತ್ತು ನಡೆದು ಬಂದಿರುವ ಈ ಮಾರ್ಗ ಅನ್ಯಸುಗಮವಾದುದಲ್ಲ. ಅವರು ಪರಂಪರಾಗತ ಸಂಶೋಧನೆಗೆ ಮತ್ತು ಕರ್ನಾಟಕದ ಸಾಂಸ್ಕೃತಿಕ ಹಾಗೂ ವಿದ್ವತ್ ಕ್ಷೇತ್ರಕ್ಕೆ ವಿನೂತನ ಆಯಾಮವನ್ನು ನೀಡಿದ ಅಪರೂಪದ ಸಂಶೋಧಕರು. ಅವರು ತೆರೆದ ಆಯಾಮಗಳು ವೈವಿಧ್ಯಮಯವಾದವುಗಳು. ಕನ್ನಡ ವಿದ್ವತ್ ಪರಂಪರೆಯಲ್ಲಿ ಹೊಸ ಸಂಶೋಧನ ಪದ್ಧತಿಯೊಂದನ್ನೆ ಅವರು ರೂಪಿಸಿದರು. ಸಂಶೋಧನೆಗೆ ವಿಶಾಲವ್ಯಾಪ್ತಿಯನ್ನು ಮತ್ತು ಗಟ್ಟಿತಳಹದಿಯನ್ನು ನೀಡುವ ಸಲುವಾಗಿ ಹಲವು ಬಗೆಯ ಜ್ಞಾನಮಾರ್ಗಗಳನ್ನು ತಮ್ಮ ಶೋಧನೆ ಹಾಗೂ ಸತ್ಯಪ್ರತಿಪಾದನೆಯ ಆಕರಗಳನ್ನಾಗಿ ದುಡಿಸಿಕೊಂಡರು. ಅವರು ನಡೆಸಿದ ಸಾಂಸ್ಕೃತಿಕ ಅನ್ವೇಷಣೆ ಬೌದ್ಧಿಕ ವ್ಯಾಪಾರವಲ್ಲ; ವರ್ತಮಾನದ ವಿಸಂಗತಿಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವುಗಳನ್ನು ದಾಟಿ ಸರ್ವಮಾನ್ಯವೆನಿಸಬಹುದಾದ ವೈಜ್ಞಾನಿಕ ಚಿಂತನೆಯ ಒಂದು ವಿಶಿಷ್ಟ ಉಪಕ್ರಮವಾಗಿ ಅದನ್ನು ಸ್ವೀಕರಿಸಿದರು. ತಾವು ಸತ್ಯವೆಂದು ನಂಬಿದ ಮತ್ತು ಕಂಡ ಅಂಶಗಳನ್ನು ಅನ್ಯಮೂಲಗಳಿಂದ ಪರೀಕ್ಷಿಸುವುದಕ್ಕಾಗಿ ಮತ್ತು ಪರಿಷ್ಕರಿಸುವುದಕ್ಕಾಗಿ ಅವರು ಪ್ರಾಚೀನ ಗಡಿಪ್ರದೇಶಗಳನ್ನು ಕಾಣುವ ವಿಶೇಷ ಪ್ರಯತ್ನ ಮಾಡಿದರು. ಕನ್ನಡ ನಾಡಿನಲ್ಲಿ ಮಾತ್ರವಲ್ಲದೇ ಮಹಾರಾಷ್ಟ್ರ, ಮಧ್ಯಪ್ರದೇಶ, ಬಂಗಾಳ, ಬಿಹಾರ ಮತ್ತು ಇನ್ನು ಹಲವು ಹತ್ತುಕಡೆಗಳಿಂದ ತಮ್ಮ ಸಂಶೋಧನೆಗೆ ಪೂರಕವಾದ ನೂರಾರು ಸಾಕ್ಷಿ ಮತ್ತು ಸಾಮಗ್ರಿಗಳನ್ನು ಹೆಕ್ಕಿಹೆಕ್ಕಿ ತೆಗೆದು; ಆ ಮೂಲಕ ವಿವಿಧ ವಾದ ಮತ್ತು ಅಭಿಪ್ರಾಯಗಳ ನಡುವೆ ಗೊಂದಲಮಯವಾಗಿದ್ದ ಕನ್ನಡನಾಡಿನ ಭೌಗೋಳಿಕ ಜಾನಾಂಗಿಕ ಮತ್ತು ಸಾಂಸ್ಕೃತಿಕ ಎಲ್ಲೆಗಳನ್ನು ಪುನರ್‌ರಚನೆ ಮಾಡಿದರು. ತಾವು ಸಮೃದ್ಧವಾಗಿ ಕಂಡು ಹಿಡಿದು, ಅಧ್ಯಯನಮಾಡಿದ ಆಕರಗಳ ಬೆಳಕಿನಲ್ಲಿ ನೂತನ ನೆಲೆಗಳನ್ನು ಕಂಡು ಕಾಣಿಸಿದರು. ಹಾಗೆಯೇ, ತಮ್ಮ ಸತತ ಪರಿಶ್ರಮ ಮತ್ತು ಶ್ರದ್ಧಾತಪಸ್ಸು ಗಳಿಂದ ದರ್ಶಿಸಿದ ಆ ನೆಲೆಗಳ ಮತ್ತು ಸೆಲೆಗಳ ಫಲಿತಗಳನ್ನು ಕಾಲಕಾಲಕ್ಕೆ ಕನ್ನಡದ ಅಗ್ರಮಾನ್ಯ ವಿದ್ವಾಂಸರ, ಸಂಶೋಧಕರ ಎದುರು ಇಟ್ಟು ಆರೋಗ್ಯಕರ ಚರ್ಚೆ ಮತ್ತು ವಿದಗ್ಧವಾದಗಳ ವೇದಿಕೆಯನ್ನು ಸೃಷ್ಟಿಸುವ ಮೂಲಕ ಕನ್ನಡನಾಡಿನಲ್ಲಿ ಹೊಸ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಚಿಂತನೆಗಳ ಮಿಂಚಿನ ಅಲೆಗಳನ್ನು ಎಬ್ಬಿಸಿದರು.

ಡಾ : ಶಂಬಾ ಅವರ ಆಸಕ್ತಿ, ಅಧ್ಯಯನ, ಸಂಶೋಧನೆ ಮತ್ತು ಚಿಂತನೆಗಳ ಬೀಸು ತುಂಬಾ ವ್ಯಾಪಕವಾದುದು. ಈ ಕಾರಣ ಅವರು ಇತಿಹಾಸದ ಭಾಷಾ ವಿಶ್ಲೇಷಣಾ ಪದ್ಧತಿಯನ್ನು ಕರುನಾಡಿನ ಎಡೆಗಳ ಹೆಸರುಗಳ, ದೇವತಾ ಪ್ರತಿರೂಪಗಳ, ಸಾಂಕೇತಿಕ ನೆಲೆಗಳ, ಮನೋವೈಜ್ಞಾನಿಕ ಶೋಧನೆಗಳ, ಧಾರ್ಮಿಕ, ಚಿಂತನೆಗಳ ಸಂಕೀರ್ಣ ಪಥವನ್ನು ಹಿಡಿದು ನಡೆದರು. ತಿರುವು ಮುರುವು ಆಗಿರುವ ಸಮಕಾಲೀನ ಮೌಲ್ಯಗಳ ಜೊತೆಗೆ ಪ್ರಾಚೀನ ಸಂಸ್ಕೃತಿಯ ಸಾಧಾರವಿವರಗಳನ್ನು ಇಟ್ಟು ತೌಲನಿಕವಾಗಿ ನೋಡಿದ್ದು ಮತ್ತು ವಿಶ್ಲೇಷಿಸಿದ್ದು ಜಾಗತಿಕ ಸಾಂಸ್ಕೃತಿಕ ಅಧ್ಯಯನದ ಅಖಂಡ ಇತಿಹಾಸದಲ್ಲೇ ಹೊಸಬಗೆಯದು. ಹೀಗಾಗಿ ಆಧುನಿಕ ಸಮಾಜದ ಬಹುಮುಖ ನೆಲೆಗಳನ್ನು ಅರಿಯಲು ಮತ್ತು ಅರ್ಥೈಸಲು ಪ್ರಾಚೀನ ಆಕರಗಳನ್ನು ಯಥೇಚ್ಛವಾಗಿ ಬಳಸಿಕೊಂಡು ಮುನ್ನಡೆದ ಶಂಬಾ ಅವರು ಹೊಸ ಅರ್ಥಗ್ರಹಣ ಪದ್ಧತಿಯನ್ನೇ ತಮ್ಮ ಬರಹಗಳ ಮೂಲಕ ನಮಗೆ ನೀಡಿದ್ದಾರೆ. ಇಂದಿನ ಸಂಕೀರ್ಣಯುಗದ ಮಾನವನ ಅಧೋಗತಿಗೆ ಸಮಾಜ ಸಮ್ಮುಖ ಆಚರಣೆಗಳು ಹಿಂದೆ ಸರಿದು ವ್ಯಕ್ತಿ ವಿಶಿಷ್ಟ ಆಚರಣೆಗಳು ದೈತ್ಯಾಕಾರವನ್ನು ತಳೆದು ನಿಂತದ್ದೆ ಕಾರಣವೆಂದು ತಮ್ಮ ಸತತ ಮತ್ತು ಸುವಿಸ್ತಾರವಾದ ಸಂಶೋಧನೆಯ ನೆಲೆಯಲ್ಲಿ ಅವರು ಕಂಡುಕೊಂಡಿದ್ದಾರೆ. ಈ ಎಲ್ಲಾ ಕಾರಣಗಳಿಂದಾಗಿ ಡಾ : ಶಂಬಾ ಅವರದು ಬಹುಮುಖವಾದ ಮತ್ತು ಬಹುಶ್ರುತವಾದ ಅಪರೂಪದ ವ್ಯಕ್ತಿತ್ವ. ಅವರು ನಮ್ಮ ಸಾಂಸ್ಕೃತಿಕ ಚಿಂತಕರಲ್ಲಿ ಪ್ರಥಮರಲ್ಲಿ ಪ್ರಥಮರು. ಕಲ್ಪನಾಪ್ರಧಾನ ಸಾಂಪ್ರದಾಯಕ ಸಾಂಸ್ಕೃತಿಕ ಇತಿಹಾಸದ ಪರಂಪರೆಯ ಮೃದುಶಯ್ಯೆಯ ಮೇಲೆ ನಿರಾಳವಾಗಿ ಮಲಗಿದ್ದ ವೈದಿಕಶಾಹಿ ಚಿಂತನಕ್ರಮವನ್ನು, ತನ್ನ ಜಾತ್ಯತೀತ ನಿಲುವಿನ ಸತ್ಯಶೋಧನೆಯ ಅಚ್ಚರಿಗೊಳಿಸುವ ಫಲಿತಗಳ ಮೂಲಕ ತಲ್ಲಣಗೊಳಿಸಿ ಹೂತು ಹೋಗಿದ್ದ ತಥ್ಯಗಳಿಗೆ

ಜೀವದಾನ ಮಾಡಿ ಹೊಸ ಬೆಳಕಿನ ಪಥವನ್ನು ನಿರ್ಮಿಸಿದ ಅಸಾಧಾರಣ ವ್ಯಕ್ತಿ. ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾಳಜಿಗಳು, ವಿಶಾಲನೆಲೆಗಟ್ಟಿನ ಸೂಕ್ಷ್ಮತಮ ಚಿಂತನೆಗಳು, ಅಪ್ರಿಯವಾದರೂ ಕಷ್ಟದ ಕಲ್ಲುಮುಳ್ಳುಗಳನ್ನು ತುಳಿದು ಸತ್ಯಸೂರ್ಯನನ್ನು ದರ್ಶನ ಮಾಡಿಸುವ ವಿದ್ವತ್ ತಪಸ್ಸು-ಇವುಗಳೆಲ್ಲ ಅನ್ಯಾದೃಶ್ಯವಾಗಿ ಮೈತಳೆದು ನಿಂತ ಅವರ ಬರಹಗಳ ಸುಮಾರು ೪೦೦೦ ಪುಟಗಳ ಬೃಹತ್ ರಾಶಿಯೇ ನಮ್ಮ ಮುಂದಿದೆ. ಭೂತ ಮತ್ತು ವರ್ತಮಾನಗಳನ್ನು ನಿಷ್ಕೃಷ್ಟವಾಗಿ ಅರಿತು ಅವುಗಳ ತಳಹದಿಯ ಮೇಲೆ ಬಹುಶ್ರುತ ಚಿಂತನೆ ಮತ್ತು ಕ್ರಿಯೆಗಳನ್ನು ರೂಪಿಸುವ ಅದ್ಭುತ ಸ್ಫೂರ್ತಿಯ ಜೀವಕೇಂದ್ರಗಳಿವು. ಈ ಕಾರಣಗಳಿಂದಾಗಿ ಜೋಶಿ ಅವರ ಸಮಗ್ರ ಕೃತಿಗಳನ್ನು ಪ್ರಾಧಿಕಾರ ಹೊರತರುವ ಮೂಲಕ ಕನ್ನಡನಾಡಿನ ಜನರಿಗೆ ತಮ್ಮ ಸಂಸ್ಕೃತಿ ಮತ್ತು ಇತಿಹಾಸ ಪರಿಜ್ಞಾನವನ್ನು ಬೆಳಸಿಕೊಳ್ಳಲು ಇವು ಸಾಧಕವಾಗುತ್ತವೆ ಎಂದು ಭಾವಿಸಿದ್ದೇನೆ. ೨೦ನೆಯ ಶತಮಾನದ ಅಂಚಿನಲ್ಲಿ ನಿಂತಿರುವ ನಮಗೆ ಇವು ಹೊಸ ಆಕರಗಳಾಗಿ, ಮೌಲ್ಯಗಳ ಅನ್ವೇಷಣೆಯ ದಾರಿದೀಪಗಳಾಗಿ, ಮುಂದೆ ನಡೆಯಬಹುದಾದ ಮತ್ತು ನಡೆಯಬೇಕಾದ ಅರ್ಥಪೂರ್ಣ ಪಥಗಳನ್ನು ತಿಳಿಸುವ ಮೈಲುಗಲ್ಲುಗಳಾಗಿ ನೆಲೆನಿಲ್ಲುತ್ತವೆಂಬ ನಂಬುಗೆ ನಮ್ಮದು. ಈ ದೃಷ್ಟಿಯಿಂದ ಇವು ಈ ಶತಮಾನದ ಅಮೂಲ್ಯ ಸಂಪುಟಗಳು.

ಕನ್ನಡನಾಡಿನ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಶ್ರೀಮಂತ ಆಕರಗಳನ್ನು ಕನ್ನಡ ಓದುಗರಿಗೆ ಒದಗಿಸಬೇಕೆಂಬ ಹೆಬ್ಬಯಕೆಯಿಂದ ಕರ್ನಾಟಕ ಸರ್ಕಾರದ ಉಪ ಮುಖ್ಯಮಂತ್ರಿಗಳೂ ಹಾಗು ಹಣಕಾಸು ಸಚಿವರಾದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯ ಅವರು ಈ ಸಂಪುಟಗಳ ಪ್ರಕಟಣೆಗಳಿಗಾಗಿ ವಿಶೇಷ ಅನುವಾದವನ್ನು ತುಂಬಾ ಪ್ರೀತಿ ಮತ್ತು ಸಂತೋಷಗಳಿಂದ ಒದಗಿಸಿಕೊಟ್ಟಿದ್ದಾರೆ. ಲೋಕಸೇವಾ ಆಯೋಗದ ಸದಸ್ಯರಾದ ಶ್ರೀ ಮುಕಡಪ್ಪ ಅವರು ಈ ಯೋಜನೆಯಲ್ಲಿ ವಿಶೇಷ ಆಸಕ್ತಿತೋರಿ ಸಹಕರಿಸಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಸಹೃದಯ ಸದಸ್ಯರು ಈ ಯೋಜನೆ ನನಸಾಗಲು ಒತ್ತಾಸೆ ನೀಡಿದ್ದಾರೆ. ಈ ಸಂಪುಟಗಳ ಸಲಹಾ ಸಮಿತಿಯ ಮಾನ್ಯ ಸದಸ್ಯರುಗಳಾದ ಪ್ರೊ : ದೇ. ಜವರೇಗೌಡ, ಪ್ರೊ. ದೇವೇಂದ್ರಕುಮಾರ ಹಕಾರಿ ಮತ್ತು ಶ್ರೀಮತಿ ವಿಮಲ ಡಿಸ್ಕಳ್ಕರ್ ಅವರು ಸೂಕ್ತ ಸಲಹೆ ಮತ್ತು ಮಾರ್ಗದರ್ಶನಗಳನ್ನು ನೀಡಿ ಈ ಸಂಪುಟಗಳು ಉಪಯುಕ್ತವಾಗಿ ಪ್ರಕಟವಾಗುವಲ್ಲಿ ನೆರವಾಗಿದ್ದಾರೆ. ಪ್ರಸಿದ್ಧ ವಿದ್ವಾಂಸರೂ ಮತ್ತು ಸಂಶೋಧಕರೂ ಹಾಗು ಡಾ : ಶಂಬಾ ಅವರ ಅಭಿಮಾನಿಗಳೂ ಆದ ಪ್ರೊ : ಮಲ್ಲೇಪುರಂ ಜಿ. ವೆಂಕಟೇಶ ಅವರು ಈ ಆರು ಸಂಪುಟಗಳ ಬಹು ಜವಾಬ್ದಾರಿಯುತವಾದ ಸಂಪಾದಕತ್ವವನ್ನು ವಹಿಸಿಕೊಂಡು ವಿಶೇಷ ಪರಿಶ್ರಮ, ಶ್ರದ್ಧೆ ಮತ್ತು ಅರ್ಪಣಾ ಮನೋಭಾವಗಳಿಂದ ದುಡಿದಿದ್ದಾರೆ. ಖ್ಯಾತ ಯುವಕಲಾವಿದ ಶ್ರೀ ಹಾದಿಮನಿ ಅವರು ಈ ಸಂಪುಟಗಳಿಗೆ ಅರ್ಥಪೂರ್ಣ ಮುಖಪುಟಗಳನ್ನು ವಿನ್ಯಾಸಗೊಳಿಸಿ ಇವುಗಳ ಸೌಂದರ್ಯವನ್ನು ವರ್ಧಿಸಿದ್ದಾರೆ. ಕಲಾತ್ಮಕ ಮುದ್ರಣಕ್ಕೆ ಹೆಸರಾದ ಲಕ್ಷ್ಮಿ ಮುದ್ರಣಾಲಯದ ಶ್ರೀ ಅಶೋಕ ಕುಮಾರ್ ಮತ್ತು ಸಿಬ್ಬಂದಿ ವರ್ಗ ಅತ್ಯಂತ ಆಸಕ್ತಿ ಮತ್ತು ಸಂತೋಷದಿಂದ ಅತ್ಯಲ್ಪಕಾಲದಲ್ಲಿ ಈ ಸಂಪುಟಗಳನ್ನು ಮುದ್ರಿಸಿ ದಾಖಲೆ ನಿರ್ಮಿಸಿದ್ದಾರೆ. ಪ್ರಾಧಿಕಾರದ ಸಿಬ್ಬಂದಿ ವರ್ಗ ಇವುಗಳ ತ್ವರಿತ ಪ್ರಕಟಣೆಗಾಗಿ ಹಗಲಿರುಳು ಶ್ರಮಿಸಿದೆ. ಇವರೆಲ್ಲರಿಗೂ ವೈಯಕ್ತಿಕವಾಗಿ ಮತ್ತು ಪ್ರಾಧಿಕಾರದ ಪರವಾಗಿ ಗೌರವದ ಪ್ರೀತಿಯ ಕೃತಜ್ಞತೆಗಳು.

ದಿನಾಂಕ : ೮.೦೭.೧೯೯೯ — ಡಾ|| ಎಚ್. ಜೆ. ಲಕ್ಕಪ್ಪಗೌಡ

ಬೆಂಗಳೂರು - ೫೬೦ ೦೧೮ — ಅಧ್ಯಕ್ಷರು

ಸಂಪಾದಕನ ಅರಿಕೆ

ಶಂಬಾ ಎಂಬ ಎರಡಕ್ಷರಗಳಿಂದಲೇ ಸುಪ್ರಸಿದ್ಧರಾದ ಡಾ. ಶಂಕರರಾವ್ ಬಾಳದೀಕ್ಷಿತ ಜೋಶಿ (೧೮೯೬-೧೯೯೧) ಕನ್ನಡದ ಮಹಾವಿದ್ವಾಂಸರು. ಅವರು ಕನ್ನಡ ಸಂಶೋಧನ ಕ್ಷೇತ್ರದ ಅಶ್ವತ್ಥವೃಕ್ಷ. ಬಹುಶ್ರುತರೂ, ಚಿಂತಕರೂ ಆದ ಶಂಬಾ, ಎಪ್ಪತ್ತು ವರ್ಷಗಳಿಗೂ ಹೆಚ್ಚುಕಾಲ 'ಜೀವನದ ಅರ್ಥಗ್ರಹಣ ಪದ್ಧತಿ'ಯ ಜಾಡು ಹಿಡಿದು ನಡೆಸಿದ ಕೆಲಸಗಳು ಅನನ್ಯವಾದವು. ಅವರು ವಿದ್ವತ್ತು ಮತ್ತು ವೈಚಾರಿಕ ಚಿಂತನೆಗಳ ಅಪೂರ್ವ ಸಂಗಮವಾಗಿದ್ದರು. ಅವರು ಸೃಜಿಸಿದ ಸಾಂಸ್ಕೃತಿಕ ಸಂಶೋಧನೆ, ಭೂತ ಹಾಗೂ ವರ್ತಮಾನ ಕಾಲಗಳ ನಡುವಣ ನೆಲೆಗಳನ್ನು ತಿಳಿಯಲು ಅನುವು ಮಾಡಿಕೊಡುತ್ತವೆ. 'ಕೃತಿಗಳೇ ಆಕೃತಿ ನಿರ್ಮಾಣಕ್ಕೆ ಮುಖ್ಯ ನೆಲೆಗಳು' ಎಂಬುದು ಅವರ ನಿಷ್ಠೆ ಹಾಗೂ ಶ್ರದ್ಧೆ. ವ್ಯಕ್ತಿವಿಶಿಷ್ಟ ಸಂಗತಿಗಳು ಬದುಕಿನಲ್ಲಿ ಗೌಣವಾಗಿದ್ದು, ಜೀವನ ಸಮಷ್ಟಿ ಸಂಗತಿಗಳು ಮುಖ್ಯವಾಗಬೇಕೆಂಬ ಹಂಬಲ ಅವರದಾಗಿತ್ತು. ಅವರು ಈ ಜಾಡಿನಲ್ಲಿ ಕೊನೆಯ ವರೆಗೂ ನಡೆದರು.

ಡಾ. ಶಂ. ಬಾ. ಅವರು ತೀರಿಕೊಂಡು ಇಂದಿಗೆ ಎಂಟು ವರ್ಷಗಳು ಆದುವು. ೧೯೯೬ ಅವರ ಜನ್ಮ ಶತಮಾನೋತ್ಸವದ ವರ್ಷ. ಆ ಹೊತ್ತಿಗೆ ಅವರ ಎಲ್ಲ ಪುಸ್ತಕಗಳು ಪ್ರಕಟಗೊಳ್ಳಬೇಕೆಂಬ ಅಪೇಕ್ಷೆ ಇತ್ತು. ಆ ಬಗೆಗೆ ಪ್ರಯತ್ನ ನಡೆದರೂ ಆಗ ಕೈಗೂಡಲಿಲ್ಲ. ಒಮ್ಮೆ ಖ್ಯಾತಕಲಾವಿದ, ಗೆಳೆಯ ಸಿ. ಚಂದ್ರಶೇಖರ್ ಅವರ ಮನೆಯಲ್ಲಿ ಲೋಕಸೇವಾ ಆಯೋಗದ ಸದಸ್ಯರೂ ಶಂಬಾ ಜೋಶಿ ಅವರ ಪ್ರಿಯ ಅಭಿಮಾನಿಗಳೂ ಕನ್ನಡ ಸಂಸ್ಕೃತಿ ಅಭ್ಯಾಸಿಗಳೂ ಆದ ಶ್ರೀ ಮುಕಡಪ್ಪ ಅವರ ಸ್ನೇಹವಾಯಿತು. ಅವರು ಶಂಬಾ ಅವರ ಕೃತಿಗಳು ಹಲವು ಸಂಪುಟಗಳಾಗಿ ಸಮಗ್ರರೂಪದಲ್ಲಿ ಬರಬೇಕೆಂದು ಹೇಳಿ ಒತ್ತಾಯಿಸಿದರು. ಆನಂತರ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರು ಬಂದ ಮೇಲೆ ನನ್ನ ಅಭಿಲಾಷೆಯನ್ನೂ ಶ್ರೀ ಮುಕಡಪ್ಪ ಅವರ ಇಚ್ಛೆಯನ್ನೂ ಅವರ ಬಳಿ ಹೇಳಿಕೊಂಡೆ. ಅನಂತರ ಈ ಯೋಜನೆಗೆ ಚಾಲನೆ ಸಿಕ್ಕಿತು. ಕರ್ನಾಟಕ ಸರ್ಕಾರದ ಉದಾರವಾದ ನೆರವು ಈ ಯೋಜನೆಗೆ ದೊರಕಿ, ಈ ಹಿನ್ನೆಲೆಯಲ್ಲಿ ಶಂಬಾ ಕೃತಿಸಂಪುಟಗಳು ಹೊರಬರುತ್ತಿವೆ.

ನಮ್ಮ ಕಾಲದ ಅಪರೂಪ ವಿದ್ವಾಂಸರೂ ಸಾಂಸ್ಕೃತಿಕ ಆಚಾರ್ಯರೂ ಆದವರೊಬ್ಬರ ಸಮಗ್ರ ಸಾಹಿತ್ಯ ವನ್ನು ಸಂಪಾದಿಸುವ ದೊಡ್ಡಹೊಣೆಯನ್ನು ಗೌರವವನ್ನು ಪಡೆದಿರುವುದು ನನಗೆ ತುಂಬಾ ಸಂತೋಷ ಉಂಟು ಮಾಡಿದೆ. ಇದು ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಎಚ್. ಜೆ. ಲಕ್ಕಪ್ಪಗೌಡ ಹಾಗೂ ಲೋಕಸೇವಾ ಆಯೋಗದ ಸದಸ್ಯರಾದ ಶ್ರೀ ಮುಕಡಪ್ಪ ಅವರ ವಿಶ್ವಾಸದಿಂದ ಸಾಧ್ಯವಾಗಿದೆ. ಅದಕ್ಕಾಗಿ ಅವರಿಬ್ಬರಿಗೂ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳು ಮೊದಲಿಗೆ ಸಲ್ಲುತ್ತವೆ.

ಶಂಬಾ ಜೋಶಿ ಅವರು ಪುಸ್ತಕರೂಪದಲ್ಲಿ ಪ್ರಕಟಿಸಿರುವ ಸಾಹಿತ್ಯ ಸುಮಾರು ಡೆಮ್ಮೈ ಆಕಾರದಲ್ಲಿ ನಾಲ್ಕು ಸಾವಿರ ಪುಟಗಳಾಗುತ್ತವೆ. ೧೯೨೧ ರಿಂದ ಹಿಡಿದು ೧೯೮೬ರ ವರೆಗಿನ ಕಾಲಾವಧಿಯಲ್ಲಿ ಈ ಎಲ್ಲ ಕೃತಿಗಳು ರಚನೆಗಳಾಗಿವೆ. ಇವಲ್ಲದೆ ನೂರಾರು ಬಿಡಿಲೇಖನಗಳಿವೆ. ಅವು ವಿವಿಧ ವಿಷಯಗಳಿಗೆ ಸೇರಿವೆ. ಅವುಗಳಲ್ಲಿ ಅಪೂರ್ವವಾದ ಕೆಲವು ಲೇಖನಗಳನ್ನು ಆಯ್ದು ಪುಸ್ತಕರೂಪದಲ್ಲಿ 'ಕನ್ನಡ ಪುಸ್ತಕ ಪ್ರಾಧಿಕಾರ'ವು ೧೯೯೬ರಲ್ಲಿ ಪ್ರಕಟಿಸಿದೆ. ಅವರು ಬರೆದಿರುವ ಒಟ್ಟು ಪುಸ್ತಕಗಳು ಮೂವತ್ತೆರಡು. ಇವುಗಳಲ್ಲಿ ಮರಾಠಿ ಅನುವಾದ 'ಭಗವದ್ಗೀತೆ'ಯ ಮೊದಲಭಾಗ ಮತ್ತು ರಾನಡೆ ಅವರ 'ಉಪನಿಷತ್ ರಹಸ್ಯ'ದ 'ಮನಃಶಾಸ್ತ್ರ'ದ ಭಾಗ ಇವುಗಳನ್ನು ಸಂಪುಟಗಳಲ್ಲಿ ಸೇರಿಸಿಲ್ಲ. ಉಳಿದ ಎಲ್ಲ ಪುಸ್ತಕಗಳು ಸೇರ್ಪಡೆಗೊಂಡಿವೆ. ಅವುಗಳನ್ನು ವಿಷಯ ಹಾಗೂ ಚಾರಿತ್ರಿಕಾನುಗುಣವಾಗಿ ಜೋಡಿಸಿ ಈ ಸಂಪುಟಗಳನ್ನೂ ಸಿದ್ಧಪಡಿಸಿ ಹೀಗೆ ವಿನ್ಯಾಸಗೊಳಿಸಲಾಗಿದೆ.

ಸಂಪುಟ - ೧ ಕಂನಾಡು-ಕರ್ನಾಟ

ಈ ಸಂಪುಟದಲ್ಲಿ ಕಣ್ಮರೆಯಾದ ಕನ್ನಡ ೧೯೩೩, ಮಹಾರಾಷ್ಟ್ರದ ಮೂಲ ೧೯೩೪, ಮರ್‍ಹಾಟಿ ಸಂಸ್ಕೃತಿ : ಕೆಲವು ಸಮಸ್ಯೆಗಳು - ೧೯೮೯, (ಮರ್‍ಹಾಟಿ ಸಂಸ್ಕೃತಿ : ಕಾಂಹಿ ಸಮಸ್ಯಾ - ೧೯೫೭ರ ಮರಾಠಿ ಕೃತಿಯ ಕನ್ನಡಾನುವಾದ) ಕರ್ನಾಟದ ವೀರಕ್ಷತ್ರಿಯರು - ೧೯೩೭ ಇವು ಮುಖ್ಯವಾಗಿ ಕನ್ನಡದ ನೆಲೆಯನ್ನೂ ಮೂಲಿಗರ ಸಾಂಸ್ಕೃತಿಕ ನೆಲೆಗಳನ್ನು ಕುರಿತಿವೆ.

ಸಂಪುಟ - ೨ ಕಂನಡ-ಕಂನುಡಿ

ಈ ಸಂಪುಟವು 'ಕನ್ನಡದ ನೆಲೆ ೧೯೩೯, ಎಡೆಗಳು ಹೇಳುವ ಕಂನಾಡ ಕತೆ ೧೯೪೭, ಕಂನುಡಿಯ ಹುಟ್ಟು ೧೯೩೭, ಕನ್ನಡ ನುಡಿಯ ಜೀವಾಳ ೧೯೪೦ ಇವುಗಳನ್ನು ಒಳಗೊಂಡಿದೆ. ಮೊದಲೆರಡು ಪುಸ್ತಕಗಳು ಕನ್ನಡ ಸಂಸ್ಕೃತಿ ವಿಚಾರಧಾರೆಯ ಮೂಲಗಾಮಿ ಚರ್ಚೆಗಳನ್ನು ಮತ್ತು ಭಾಷೆಯ ಹಲವು ಬಗೆಯ ನಂಟುಗಳ ವಿಶಿಷ್ಟ ನೆಲೆಗಳನ್ನು ಚರ್ಚಿಸುತ್ತವೆ.

ಸಂಪುಟ - ೩ ಕರ್ನಾಟ ಸಂಸ್ಕೃತಿ

ಈ ಸಂಪುಟವು ಹಾಲುಮತದರ್ಶನ ೧೯೬೦, ಕರ್ಣಾಟ : ಸಂಸ್ಕೃತಿಯ ಪೂರ್ವಪೀಠಿಕೆ ಭಾಗ - ೨, ೧೯೬೭ ಇವೆರಡನ್ನು ಒಳಗೊಂಡಿದೆ ಈ ಹಿಂದಿನ ಕಂನಾಡ ಮೂಲಿಗರ ಸಂಸ್ಕೃತಿ-ಭಾಷೆ, ಪಾರಸ್ಪರಿಕ ಸಂಬಂಧ ಅವುಗಳ ಇಳಿಗಾಲಕ್ಕೆ ಈಡಾದ ಕಾರಣಮೀಮಾಂಸೆ ಯನ್ನು ಕುರಿತು ಈ ಸಂಪುಟಗಳು ಚರ್ಚಿಸುತ್ತವೆ.

ಸಂಪುಟ - ೪ ಭಾರತೀಯ ಸಂಸ್ಕೃತಿ

ಋಗ್ವೇದಸಾರ : ನಾಗಪ್ರತಿಮಾ ವಿಚಾರ - ೧೯೭೨, ಸತ್ತ್ಯ-ಸತ್ಯ ೧೯೭೫, ಭಾಷೆ ಮತ್ತು ಸಂಸ್ಕೃತಿ ೧೯೭೫ ಇವುಗಳನ್ನು ಒಳಗೊಂಡಿದೆ. ಕಂನಾಡ ನೆಲೆಯಿಂದ ಅಖಿಲ ಭಾರತೀಯ ಸಂಸ್ಕೃತಿಯ ಜೀವನ ಕ್ರಮವನ್ನು, ಜೀವನದ ಅರ್ಥಗ್ರಹಣದ ನೆಲೆಗಳನ್ನು ಇವು ವ್ಯಾಖ್ಯಾನಿಸಿ ತಿಳಿಸುತ್ತವೆ.

ಸಂಪುಟ - ೫ ಮಾನವ ಸಂಸ್ಕೃತಿ

ಈ ಸಂಪುಟವು ಪ್ರವಾಹ ಪತಿತರ ಕರ್ಮ ಹಿಂದೂ ಎಂಬ ಧರ್ಮ ೧೯೭೬, ಶ್ರೀಮತ್ ಭಗವದ್ಗೀತೆಯಲ್ಲಿ ಹುದುಗಿರುವ ರಾಜಯೋಗದ ಸ್ವರೂಪ ೧೯೭೭, ಮಾನವಧರ್ಮದ ಆಕೃತಿ ೧೯೭೯, ಬುಧನ ಜಾತಕ ೧೯೮೦, ಬಿತ್ತಿದ್ದನ್ನು ಬೆಳಕೊ ೧೯೮೪, ಜೀವನದ ಅರ್ಥಗ್ರಹಣ ಪದ್ಧತಿ ೧೯೮೬ ಇವುಗಳನ್ನು ಒಳಗೊಂಡಿದೆ. ಇವುಗಳಲ್ಲಿ ಕಂನಾಡು, ಭಾರತೀಯ ನೆಲೆಗಳಿಂದ ಜಾಗತಿಕ ಸಂಸ್ಕೃತಿ ನೆಲೆಗಳ ಪುರಾಣ ಹಾಗೂ ಹಲವು ಜ್ಞಾನಶಾಖೆಗಳ ಜಾಡು ಹಿಡಿದು ಮನುಷ್ಯನ ಅಧಃಪತನಕ್ಕೆ ಕಾರಣವಾದ ನೆಲೆಗಳನ್ನು ತಿಳಿಯುವ ಕಡೆಗೆ ಸಾಗುತ್ತವೆ.

ಸಂಪುಟ - ೬ ಸಂಸ್ಕೃತಿ-ಸಾಹಿತ್ಯ

ಈ ಸಂಪುಟವು, ಮಹರ್ಷಿ ಅರವಿಂದ ಘೋಷ ಇವರ ಸಂಕ್ಷಿಪ್ತ ಚರಿತ್ರವು ೧೯೨೧, ಟಿಳಕ ಕಥಾಮೃತಸಾರ ೧೯೩೨, ರೂಢಿ ಹಾಗೂ ಭಾವಿಕ ಕಲ್ಪನೆಗಳು ೧೯೪೦, ಎದ್ದೇಳು ಕನ್ನಡಿಗಾ ಅಥವಾ ಸಂತೋಷವೆ ಏಳ್ಗೆಯ ಮೂಲ - ೧೯೪೩, ಯಕ್ಷ ಪ್ರಶ್ನೆ ಅಥವಾ ಬರಲಿರುವ ಸಮಾಜ ೧೯೪೮, ಸಮಾಜದರ್ಶನ ೧೯೪೯, ಮಕ್ಕಳ ಒಡಪುಗಳು ೧೯೪೦, ಸೌಂದರ್ಯವಿಚಾರ ೧೯೪೯, ದಾರಿಯ ಬುತ್ತಿ ೧೯೫೦, ಕರ್ಣನ ಮೂರು ಚಿತ್ರಗಳು ೧೯೪೭, ಇವುಗಳನ್ನು ಒಳಗೊಂಡಿದೆ. ಇವುಗಳಲ್ಲಿ ಎರಡು ಜೀವನ ಚರಿತ್ರೆಗಳು, ನಾಲ್ಕು ಸಮಾಜ ಚಿಂತನೆಗಳೂ, ನಾಲ್ಕು ಸಾಹಿತ್ಯ ಸಂಸ್ಕೃತಿಯನ್ನು ಒಳಗೊಂಡ ಪುಸ್ತಕಗಳಿವೆ.

ಶಂಬಾ ಜೋಶಿಯವರ ಎಲ್ಲ ಪುಸ್ತಕಗಳನ್ನು ಈ ಆರುಸಂಪುಟಗಳಲ್ಲಿ ಅಡಕಗೊಳಿಸಲಾಗಿದೆ. ಆರನೆಯ ಸಂಪುಟಕ್ಕೆ ಸೇರಬೇಕಾದ ೧೯೭೬ರಲ್ಲಿ ಪ್ರಕಟವಾದ 'ಕನ್ನಡ ಸಾಹಿತ್ಯ ಅಭಿವೃದ್ಧಿ' ಪುಸ್ತಿಕೆ ಕೊನೆಯ ವೇಳೆಯ ವರೆಗೂ ಲಭ್ಯವಾಗಲಿಲ್ಲ. ಅದನ್ನು ಇಲ್ಲಿ ಸೇರಿಸಲಾಗಿಲ್ಲ.

ಶಂಬಾ ಅವರು ಸಾಂಸ್ಕೃತಿಕ ಸಂಶೋಧನೆಯ ಹಾದಿಯಲ್ಲಿ ನಡೆದದ್ದು ಸುದೀರ್ಘ ನೆಲೆಯಲ್ಲೇ. ಅವರು ಅತ್ತ ಮಹಾರಾಷ್ಟ್ರ, ಇತ್ತ ಕರ್ನಾಟಕ ಈ ಎರಡೂ ಸಾಂಸ್ಕೃತಿಕ ಸಾಗರದಲ್ಲಿ ಮಿಂದೆದ್ದವರು. ಅವರು ಉಸಿರಾಡಿದ್ದು ಕಂನಾಡಿನ ಪುಣ್ಯ. ಅವರ ಕೃತಿಗಳನ್ನು ಬೇರೆ ಬೇರೆ ಕ್ಷೇತ್ರದ ಹಾಗೂ ಬೇರೆ ಬೇರೆ ಕಾಲಘಟ್ಟದ ಓದುಗರಿಗೆ ಪುನರ್ ಓದಿಕೆಗೆ ಸಜ್ಜುಗೊಳಿಸಿಕೊಡುವ ಆವಶ್ಯಕತೆ ಇತ್ತು. ಆ ಬಗೆಯ ಸಜ್ಜುಗೊಳಿಸುವ ಸಂಪಾದಕತ್ವದ ಕೆಲಸವನ್ನು ಈ ಆರು ಸಂಪುಟಗಳಲ್ಲಿ ಕೈಗೊಳ್ಳಲಾಗಿದೆ. ಈ ಸಂಪುಟಗಳನ್ನು ಸಿದ್ಧಪಡಿಸುವಾಗ ಕೆಲವೊಂದು ನಿಯಮಗಳನ್ನು ಹಾಕಿಕೊಳ್ಳಲಾಯಿತು. ಆ ನಿಯಮಗಳು ಹೀಗಿವೆ:

i) ಶಂಬಾ ಅವರ ಕಾಲದಲ್ಲಿ ಪ್ರಕಟವಾದ ಮೊದಲ ಮುದ್ರಣ ಹಾಗೂ ಅನಂತರದ ಪುನರ್ಮುದ್ರಣಗಳನ್ನು ಗಮನಿಸುವುದು

ii) ಶಂಬಾ ಅವರ ಕೃತಿಗಳಲ್ಲಿ ಕಾಣಬರುವ ಅಚ್ಚಿನ ದೋಷಗಳು ಹಾಗೂ ಉದ್ಧೃತ ಭಾಗಗಳ ಪರಿಷ್ಕರಣ.

iii) ಪ್ರತಿಸಂಪುಟಗಳ ಅನುಬಂಧಗಳಲ್ಲಿ ಶಂಬಾ ಕೃತಿಗಳ ವಿವರಣಾತ್ಮಕ ಸೂಚಿ, ಆಕರ ಗ್ರಂಥಗಳ ಸೂಚಿ, ಶಬ್ದಸೂಚಿ ನೀಡುವುದು.

iv) ಪ್ರತಿ ಸಂಪುಟಗಳಿಗೂ ಪ್ರತ್ಯೇಕವಾದ ಪ್ರಸ್ತಾವನೆ ಬರೆಯುವುದು.
ಈ ಪ್ರಸ್ತಾವನೆಯು ಸಮಕಾಲೀನ ಸಂಸ್ಕೃತಿ, ಭಾಷೆಯ ವಾಗ್ವಾದಗಳನ್ನು ಶಂಬಾ ಜೋಶಿಯವರ ಸಾಂಸ್ಕೃತಿಕ ನಡೆಯ ನೆಲೆಗಳನ್ನು ಅವರ ಕೊಡುಗೆಗಳ ವೈಶಿಷ್ಟ್ಯಗಳು ಅದರಲ್ಲಿ ಬರುವಂತೆ ನೋಡಿ ಕೊಳ್ಳುವುದು.

v) ಪ್ರತಿಸಂಪುಟಗಳಿಗೂ ಆಯಾ ಸಂಪುಟಗಳಲ್ಲಿ ಇರುವ ಅಪರೂಪದ ಪುಸ್ತಕಗಳ ಮುಖಚಿತ್ರ, ಶಂಬಾ ಅವರ ಹಳೆಯ ಭಾವಚಿತ್ರ ಮೊದಲಾದುವುಗಳನ್ನು ನೀಡುವುದು.

ಈ ಅಂಶಗಳಿಗೆ ಸಂಪಾದಕ ಸಲಹಾ ಸಮಿತಿಯ ಸದಸ್ಯರೆಲ್ಲರೂ ಒಪ್ಪಿಗೆ ಸೂಚಿಸಿದರು. ಶಂಬಾ ಜೋಶಿಯವರ ಮಗಳು ಶ್ರೀಮತಿ ವಿಮಲ ಡಿಸ್ಕಳ್ಕರ್ ಅವರು ನೀಡಿದ ಸಲಹೆ ಮತ್ತು ಸಹಕಾರಗಳು ಈ ಸಂಪುಟಗಳು ಉತ್ತಮಗೊಳ್ಳಲು ಪರೋಕ್ಷವಾಗಿ ಕಾರಣವಾಗಿವೆ.

ಇನ್ನು, ಕೊನೆಯದಾಗಿ ನೆನೆಯಬೇಕಾದದ್ದು ಈ ಸಂಪುಟಗಳಿಗೆ ಚಾಲನೆ ಕೊಟ್ಟು, ವಿಶೇಷಾನುದಾನ ನೀಡಿದ ಕರ್ನಾಟಕ ಸರಕಾರಕ್ಕೆ, ಲೋಕಸೇವಾ ಆಯೋಗದ ಸದಸ್ಯರೂ ನನ್ನ ಹಿರಿಯ ಮಿತ್ರರೂ ಆದ ಶ್ರೀ ಮುಕಡಪ್ಪ ಅವರಿಗೆ, ಈ ಹೊಣೆಗಾರಿಕೆಯನ್ನು ನನ್ನ ಹೆಗಲಿಗೆ ಹೊರಿಸಿ ಅಡಿಗಡಿಗೂ ಪ್ರೋತ್ಸಾಹ ನೀಡಿ ಈ ಸಂಪುಟಗಳು ಉತ್ತಮವಾಗಿ ಬರಲು ಕಾರಣರಾದ ಹಿರಿಯ ವಿದ್ವಾಂಸರೂ ಸಮರ್ಥ ಆಡಳಿತಗಾರರೂ ಆದ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರಿಗೆ, ಸಂಪಾದಕ ಸಲಹಾ ಸಮಿತಿಯ ಸದಸ್ಯರಾದ ಡಾ. ದೇ ಜವರೇಗೌಡ, ಶ್ರೀಮತಿ ವಿಮಲ ಡಿಸ್ಕಳ್ಕರ್ ಹಾಗೂ ಡಾ. ದೇವೇಂದ್ರಕುಮಾರ ಹಕಾರಿ ಅವರಿಗೆ, ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ವಿ. ಎನ್. ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕರಾದ ಶ್ರೀ ಜೆ. ಎನ್. ಶಾಮರಾವ್ ಅವರಿಗೆ, ಸಿಬ್ಬಂದಿವರ್ಗದವರಿಗೆ, ಹಲವು ಬಗೆಗಳಲ್ಲಿ ನೆರವಾದ ವಿದ್ವಾನ್ ಎಂ. ಆರ್. ರಕ್ಷಿತ್, ಶಂಬಾ ವಿಚಾರ ವೇದಿಕೆಯ ಎಸ್. ಶಿವಲಿಂಗಯ್ಯ ಇವರಿಗೆ, ಶ್ರೀ ಕೃಷ್ಣಾನಂದ ಕಾಮತ್, ಶ್ರೀ. ಕೆ. ಜಿ. ಸೋಮಶೇಖರ್, ಎಂ. ಮಲ್ಲಿಕಾರ್ಜುನಯ್ಯ ಇನ್ನು ಮುಂತಾದ ಗೆಳೆಯರು ತೆಗೆದ ಛಾಯಾಚಿತ್ರಗಳನ್ನು ವಿಶ್ವಾಸ ಹಾಗೂ ಕೃತಜ್ಞತಾಪೂರ್ವಕವಾಗಿ ಉಪಯೋಗಿಸಿಕೊಳ್ಳಲಾಗಿದೆ. ಈ ಮಹನೀಯರಿಗೆ, ಆರು ಸಂಪುಟಗಳ ಮುಖಪುಟ ವಿನ್ಯಾಸ ಮಾಡಿಕೊಟ್ಟ ತರುಣ ಕಲಾವಿದ ಶ್ರೀ ಹಾದಿಮನಿ ಅವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಲಕ್ಷ್ಮಿ ಮುದ್ರಣಾಲಯದ ಗೆಳೆಯರಾದ ಶ್ರೀ ಅಶೋಕ್ ಕುಮಾರ್ ಮತ್ತು ಅವರ ಎಲ್ಲ ಸಿಬ್ಬಂದಿ ವರ್ಗದವರಿಗೆ, ಪರೋಕ್ಷವಾಗಿ ಅಪರೋಕ್ಷವಾಗಿ ಹಲವು ವಿಧಗಳಲ್ಲಿ ನೆರವಾದ ಹಾಗೂ ಈ ಮೇಲೆ ಹೆಸರಿಸದ ಎಲ್ಲರಿಗೂ ತುಂಬು ವಂದನೆಗಳು.

ಇವು ಡಾ. ಶಂ. ಬಾ. ಜೋಶಿ ಅವರ ಕೃತಿಸಂಪುಟಗಳು. ಇದರ ಗುಣಾತ್ಮಕ ಶ್ರೇಯಸ್ಸೆಲ್ಲವೂ ಅವರಿಗೆ ಸಲ್ಲಬೇಕು. ಉಪನಿಷತ್ತು ಶ್ರೇಯಸ್ಸು- ಪ್ರೇಯಸ್ಸು ಎಂದು ಎರಡು ತತ್ವಗಳನ್ನು ಹೇಳುತ್ತದೆ. ಶ್ರೇಯಸ್ಸು ಮುಖ್ಯವೆಂದು, ಅದೇ ಜೀವನ ಶ್ರದ್ಧೆಯೆಂದು, ಉಪನಿಷತ್ತು ಹೇಳುತ್ತದೆ. ಶಂಬಾ ಕಂನಾಡಿನ ಶ್ರೇಯಸ್ಸಿಗಾಗಿ ದುಡಿದವರು. ಇದರ ಸಮಗ್ರದರ್ಶನವನ್ನು ಅವರ ಕೃತಿಗಳು ರುಜುವಾತುಗೊಳಿಸುತ್ತವೆ. ಅವರ ಸಮಗ್ರ ಸಂಪುಟಗಳನ್ನು ನಿಮ್ಮ ಉಡಿಯಲ್ಲಿ ಹಾಕುತ್ತಿದ್ದೇವೆ. ಸಂಪುಟಗಳು ಹಲವು ರೀತಿಯ ಓದಿಕೆಗೆ ಹಾಗೂ ನಿಮ್ಮ ಪ್ರೀತಿಗೆ ಒಳಗಾಗಲಿ. ಈ ಸಂಪುಟಗಳಲ್ಲಿ ಏನಾದರೂ ಕೊರತೆಗಳಿದ್ದರೆ ಅದು ಸಂಪಾದಕನ ಸೀಮಿತ ಫಲ. ಇದಕ್ಕಾಗಿ ಕಂನಾಡ ಓದುಗರು ಮನ್ನಿಸಬೇಕು. ಇಷ್ಟು ಹೇಳಿದರೆ ತೀರೀತೆ?

ಕಂನಾಡಿನ ಜನರು ಈ ಸಂಪುಟಗಳನ್ನು ಸಹೃದಯತೆಯಿಂದ ಸ್ವೀಕರಿಸಬೇಕೆಂದೂ ಕುಗ್ಗಿರುವ ಕಂನಾಡನ್ನು ಹಿಗ್ಗುವ ತೆರದಲ್ಲಿ ಹೊರಳಬೇಕೆಂದೂ ಬೇಡುತ್ತೇನೆ. ನಮ್ಮ ತರುಣ ಜನಾಂಗವು ಶಂಬಾ ಅವರನ್ನು ಹೊಸ ಓದಿನ ನೆಲೆಯಲ್ಲಿ ಸ್ವೀಕರಿಸಬೇಕೆಂದೂ ಕೋರುತ್ತೇನೆ.

ಜುಲೈ ೨೫, ೧೯೯೯
ಕನ್ನಡ ವಿಶ್ವವಿದ್ಯಾಲಯ-ಹಂಪಿ
ವಿದ್ಯಾರಣ್ಯ

ಮಲ್ಲೇಪುರಂ ಜಿ. ವೆಂಕಟೇಶ
ಸಂಪಾದಕ

ಪ್ರಸ್ತಾವನೆ

ಸಾಂಸ್ಕೃತಿಕ ಯಾತ್ರೆಯ ತೀವ್ರ ಕ್ಷಣಗಳು

ಶಂಬಾ ಜೋಶಿ ಅವರು ನಡೆಸಿದ ಸುದೀರ್ಘ ಸಂಸ್ಕೃತಿ ಚಿಂತನೆ ಬಹುಮುಖವಾದುದು ಮಾತ್ರವಲ್ಲ ಬಹುವ್ಯಾಪಕವೂ ಕೂಡಾ. 'ಬಹುಮುಖ' ಅನ್ನುವುದು ಹಲವು ಜ್ಞಾನಕ್ಷೇತ್ರಗಳ ನೆಲೆಗಳನ್ನು ಅವಲಂಬಿಸಿದ್ದರೆ; 'ವ್ಯಾಪಕತೆ' ಎನ್ನುವುದು ಗಡಿ, ಸೀಮೆ, ಅನುಮಾನಿತ ಸತ್ಯ, ವಾಸ್ತವ ನೆಲೆಗಳ ಶೋಧನೆ ಮೊದಲಾದವುಗಳನ್ನು ಒಳಗೊಂಡಿದೆ. ಇದು ಕಡುಕಷ್ಟದ ಹಾದಿ. ಈ ಹಾದಿಯಲ್ಲಿ ಅವರು ಹೆಜ್ಜೆ ಊರಿದ್ದು ಒಂದು ಆಕಸ್ಮಿಕ ಯೋಗಾಯೋಗ! ಅವರ ಮಾತಿನಲ್ಲೆ ಹೇಳಬಹುದಾದರೆ:

> ಒಂದನ್ನು ಹುಡುಕುವಾಗ ಇನ್ನೂ ಒಂದು ಕೈಗೆ ಬಂದಂತಾಗಿದೆ. ಇಂತಹ ಅಭೂತ-ಪೂರ್ವ ವೈಭವ ಶಾಲಿಯಾದ ಕರ್ಣಾಟದ ಅವನತಿಯ ಕಾರಣಗಳಾವವು; ಎಂಬುದನ್ನು ಅರಿತುಕೊಳ್ಳಲು ಮೊದಲು ನಾನು ಹೊರಟುದು; ಆದರೆ, ಅಲ್ಲಿ ಕಣ್ಣಿಗೆ ಬಿದ್ದುದು 'ಕಣ್ಮರೆಯಾದ ಕನ್ನಡ'. ಸಂಶೋಧಕನೆಂದು ನಾನಿದನ್ನು ಬರೆಯಲು ಕೈಗೊಂಡವನಲ್ಲ. ಏಕೆಂದರೆ, ನನಗೆ ಆ ಅಧಿಕಾರವಿಲ್ಲ. ಅಲ್ಲದೆ, ಇತಿಹಾಸದ ಸಂಶೋಧನವು ನನ್ನ ಕ್ಷೇತ್ರವೂ ಅಲ್ಲ. ನನಗಿದನ್ನೂ ಬರೆಯ್ಬುವುದರಲ್ಲಿ ಮನುಷ್ಯನ ಸ್ವಭಾವವೆ ಮುದಲ್ಲು (ಮೊದಲು). ಇತಿಹಾಸ ಮತ್ತು ಭಾಷಾಶಾಸ್ತ್ರ (Philology) ಗಳ ಬೆಳಕಿನಲ್ಲಿ ಮನುಷ್ಯ ಸ್ವಭಾವದ ಸುಳಿವು ಹಿಡಿದು ಮುಂದೆ ಸಾಗಿದ್ದೇನೆ.

ಈ ಮಾತಿನ ತಾತ್ಪರ್ಯ ಅಥವಾ ಇದರ ಹಿಂದಿನ ಸಾಂಸ್ಕೃತಿಕ ಇತಿಹಾಸ ತಿಳಿಯುವುದು ಅವಶ್ಯ. ಈ ಶತಮಾನದ ಮೊದಲ ದಶಕಗಳು ಎರಡು ಬಗೆಯ ನೆಲೆಗಳನ್ನು ಎದುರಿಸುತ್ತಿದ್ದುವು. ಒಂದು ಮರಾಠಿಯ ಒಲವಿನಲ್ಲಿ ಕನ್ನಡವು ನಲುಗುತ್ತಿದ್ದ ಅಥವಾ ಕುಗ್ಗುತ್ತಿದ್ದ ಸಂಗತಿ. ಇನ್ನೊಂದು ಸಂಸ್ಕೃತ-ಇಂಗ್ಲಿಷ್ ಭಾಷೆಗಳು ಕನ್ನಡ ಸಂಸ್ಕೃತಿಯ ಮೇಲೆ ನಡೆಸುತ್ತಿದ್ದ ಆಧಿಪತ್ಯ. ಮರಾಠಿಯು ಕನ್ನಡ ಮಾತನ್ನು, ಕನ್ನಡತವನ್ನು ಆಪೋಷಣ ತೆಗೆದುಕೊಳ್ಳುತ್ತಿದ್ದ ಪ್ರಸಂಗಗಳು ಬೆಳಗಾವಿ, ಗೋಕಾಕ, ಧಾರವಾಡ ಮೊದಲಾದ ಪ್ರದೇಶಗಳಲ್ಲಿ ಕಾಣುತ್ತಿದ್ದರೆ: ಕನ್ನಡನಾಡಿನ ಆದ್ಯಂತ ವೆರ್ನಾಕ್ಯುಲರ್ ಶಾಲೆಗಳ ಸ್ಥಾಪನೆ ಹಾಗೂ ಹೊಸ ಇಂಗ್ಲಿಷ್‌ಸಂಸ್ಕೃತಿಯ ಬೀಸು; ಅವುಗಳ ಬಳಕೆ ಮತ್ತೊಂದು ಕಡೆ, ಸಂಸ್ಕೃತದ ಮೂಲಕವೇ ಕನ್ನಡ ಸಂಸ್ಕೃತಿಯ ಕಿಟಕಿಯನ್ನು ನೋಡಲು ಉಪಕ್ರಮಿಸುತ್ತಿದ್ದ ಬಗೆ. ಈ ಬಗೆಯ ಉದಾಹರಣೆಗಳು 'ಕನ್ನಡ'ದ ಅಸ್ತಿತ್ವ ಏನು ಎಂಬುದನ್ನು ತಿಳಿಯಲು

ಪ್ರಚೋದಿಸುತ್ತಿದ್ದುವು. ಈ ಉದಾಹರಣೆಗಳನ್ನು ಆ ಕಾಲದ ಪತ್ರಗಳಿಂದ, ಶೈಕ್ಷಣಿಕ ಕ್ರಮಗಳಿಂದ, ರಾಜಕೀಯ ನೆಲೆಗಳಿಂದ, ಸಾಮಾಜಿಕ ಚಟುವಟಿಕೆಗಳಿಂದ ತಿಳಿಯಬಹುದು. ಇದು ಸಮಾಜೋ ಸಾಂಸ್ಕೃತಿಕ ಪರಿಸ್ಥಿತಿಯ ವಿಹಂಗಾಮಾವಲೋಕನ.

ಈ ಅಂಶದ ಹಿನ್ನೆಲೆಯಲ್ಲಿ ಇನ್ನೊಂದು ಮುಖ್ಯ ನೆಲೆಯನ್ನು ಚರ್ಚಿಸಬಹುದು. ಈ ಚರ್ಚೆಯು ಆ ಕಾಲಘಟ್ಟದ ಸಾಂಸ್ಕೃತಿಕಾಧ್ಯಯನದ ಏಕರೂಪತೆಯನ್ನು ತೋರಿಸುತ್ತದೆ. ಅಥವಾ ಈ ಮಾತನ್ನು ಇನ್ನಷ್ಟು ವಿಸ್ತರಿಸಿ ಹೇಳಬಹುದಾದರೆ: ಏಕಮುಖೀ ಸಂಸ್ಕೃತಿಯ ಮಂಡನೆಯನ್ನು ಪರ್ಯಾಯವಾಗಿ ತಿಳಿಸುತ್ತದೆ. ಅಥವಾ ಬಳಸಿಕೊಳ್ಳುವ ಸಾಮಗ್ರಿಗಳ ಏಕರೂಪಾತ್ಮಕ ವಸ್ತ್ವಂಶಗಳನ್ನು ಪರ್ಯಾಯವಾಗಿ ತಿಳಿಸುತ್ತವೆ. ಕನ್ನಡ, ಕರ್ನಾಟಕ ಎಂಬ ಮಾತು ಕನ್ನಡ ಪತ್ರಗಳಲ್ಲಿ ಕಾಣುವ ಸಂಪ್ರದಾಯ ಇತ್ತು. ಪಂಪನ ಬನವಾಸಿ, ಕವಿರಾಜ ಮಾರ್ಗಕಾರನ ಪುಲಿಗೆರೆ, ಕೊಪಣ ಮತ್ತು ಒಕ್ಕುಂದದ ನಡುವಿನ ತಿರುಳ್ಗನ್ನಡ ಪ್ರದೇಶ; ಕದಂಬ, ಗಂಗ, ಹೊಯ್ಸಳರ ರಾಜ್ಯದ ಎಲ್ಲೆಕಟ್ಟುಗಳು; ರಾಷ್ಟ್ರಕೂಟರ ಸಾಂಸ್ಕೃತಿಕ ವಿಸ್ತರಣೆ ಹಾಗೂ ಅವುಗಳ ಎಳೆಗಳು - ಈ ಸ್ಥೂಲರೂಪೀ ಜಗತ್ತಿನಲ್ಲಿ 'ಕನ್ನಡ'ವು ಅಡಕಗೊಂಡಿತ್ತು. ಒಂದೆಡೆ ಅಭೂತಪೂರ್ವ ಕರ್ನಾಟಕದ ಹಿರಿಮೆಯ ವರ್ಣನೆ ಮತ್ತು ವೈಭವೀಕರಣ; ಇನ್ನೊಂದೆಡೆಗೆ ಕನ್ನಡ ಸಂಸ್ಕೃತಿಯು ಹಲವು ಎಳೆಗಳಲ್ಲಿ ಕುಗ್ಗಿದ ಉಪಕ್ರಮ. ಇವೆರಡೂ ಬೇರೆ ಬೇರೆಯೇ ಆಗಿದ್ದುವು. ಇದು ಅಂದು ವಾಸ್ತವವೂ ಆಗಿತ್ತು.

ವರ್ತಮಾನ ಮತ್ತು ಭೂತದ ಎಳೆಗಳು ಶಂಬಾ ಅವರನ್ನು ತುಂಬಾ ಕಾಡಿದುವು. ಅಭೂತಪೂರ್ವ ಕನ್ನಡ ಸಂಸ್ಕೃತಿಯು ಇಳಿಗಾಲಕ್ಕೆ ಇಳಿದ ನೆಲೆ ಯಾವುದು? ಇದರ ಮುಖ್ಯ ಕಾರಣಮೀಮಾಂಸೆ ಯಾವುದು? ಇದು ಆ ಹೊತ್ತಿಗೆ ಬಹುಮುಖ್ಯ ಪ್ರಶ್ನೆಯಾಗಿ ಶಂಬಾ ಅವರನ್ನು ಕಾಡಿದ್ದುವು. ಈ ಪ್ರಶ್ನೆಯನ್ನು ಮೊದಲ ಬಾರಿಗೆ ಬಹುಧೈರ್ಯದಿಂದ ಎತ್ತಿದವರು ಶಂಬಾ ಜೋಶಿ ಅವರೇ. ಇದಕ್ಕೊಂದು ಚಾರಿತ್ರಿಕ ಕಾರಣವುಂಟು. ಆಲೂರರ 'ಕರ್ನಾಟಕ ಗತವೈಭವ' ೧೯೧೭ರಲ್ಲಿ ಮೊದಲು ಮುದ್ರಣಗೊಂಡು ಪ್ರಕಟವಾಗಿತ್ತು. ಅದು ಕನ್ನಡಿಗರ ಹಿರಿಮೆ-ಗರಿಮೆ, ಶಕ್ತಿ-ಸಾಮರ್ಥ್ಯಗಳ ಮೂಲಧನವನ್ನು ಎತ್ತಿ ತೋರಿಸುತ್ತಿತ್ತು. ಆದರೆ, ಇದಕ್ಕೆ ತದ್ವಿರುದ್ಧವಾದ ಪರಿಸ್ಥಿತಿ ವಾಸ್ತವವಾಗಿ ಆಗ ಅವರ ಎದುರಿಗಿತ್ತು. ಇವೆರಡನ್ನೂ ಒಟ್ಟಿಗೆ ಹಿಡಿದು ನೋಡಿದಾಗ ನಿಜಕ್ಕೂ ಬೆಚ್ಚಿ ಬೆದರುವ ಸ್ಥಿತಿಯೇ. ಆಗ ಅವರು ಪ್ರಾರ್ಥಿಸಿಕೊಂಡದ್ದೂ ಹೀಗೆ:

ಹೊನ್ನ ಮುಸುಕನ್ನು ಓಸರಿಸಿ ತಾಯ್‌ನನ್ನಿಯೇ
ನಿನ್ನ ಮೊಗವನ್ನು ತೋರೆ।
ಬನ್ನಬಡುತಿಹೆ ನಾನು ನಿನ್ನ ದರುಶನಕಾಗಿ
ಹಡೆದಮ್ಮ ವರವ ನೀಡೆ।

ಈ ಪ್ರಾರ್ಥನೆಯ ಹಿಂದಿನ ಮನೋಭಾವನೆ ತೀರ ಸರಳವಾದದ್ದಲ್ಲ. ಇದು ಶಂಬಾ ಅವರು ಬರೆದ ಮೊದಲ ಸ್ವತಂತ್ರಕವಿತೆ, ಭಾಗಶಃ ಕೊನೆಯದೂ ಕೂಡ. ಈ 'ಕವಿತೆ'ಯು ಅಚ್ಚಾದದ್ದು 'ಮಹಾರಾಷ್ಟ್ರದ ಮೂಲ'ವೆಂಬ ಪುಸ್ತಕದಲ್ಲಿ. ಕನ್ನಡವು ಮರಾಠಿ ಪ್ರಾಬಲ್ಯದಲ್ಲಿ ನಲುಗುತ್ತಿತ್ತು. ಹಿಂದೊಮ್ಮೆ ಕನ್ನಡವೇ ಆಗಿದ್ದ ಮಹಾರಾಷ್ಟ್ರದ ನೆಲವು ಇಂದು ಕನ್ನಡತನ ಕಳೆದುಕೊಂಡಿತ್ತು. ಇದರ ಕಾರಣಮೀಮಾಂಸೆ ಯಾವುದೆಂಬ ತಳಮಳದಲ್ಲಿ ಹುಟ್ಟಿಕೊಂಡ ಜಿಜ್ಞಾಸೆ. 'ಕಣ್ಮರೆಯಾದ ಕನ್ನಡ'ವು ಕನ್ನಡರ ಮೂಲಸ್ಥಾನ ಯಾವುದೆಂದು ಹುಡುಕಿದರೆ; 'ಮಹಾರಾಷ್ಟ್ರದ ಮೂಲ'ವು ಕನ್ನಡಿಗರು ಮರಾಠಿ ಪ್ರಾಬಲ್ಯಕ್ಕೆ ಅಥವಾ ಆರೇ ಭಾಷೆ-ಸಂಸ್ಕೃತಿಗೆ ಎರವಾದ ಬಗೆಯನ್ನು ತೋರಿಸುತ್ತದೆ. ಇವೆರಡೂ ಸಂಗತಿಗಳು ಪರಸ್ಪರ ಸಂಬಂಧವುಳ್ಳವುಗಳೇ. ಇದು ಶಂಬಾ ಅವರು ಪ್ರಾರಂಭಿಸಿದ ಸಾಂಸ್ಕೃತಿಕ ಯಾತ್ರೆಯ ಪ್ರಾರಂಭಿಕ ನೆಲೆಗಳಾಗಿರುವುದನ್ನು ನಾವು ಮರೆಯುವಂತಿಲ್ಲ.

ಶಂಬಾ ಅವರು ನಡೆಸಿದ ಸಾಂಸ್ಕೃತಿಕ ದೀರ್ಘಯಾತ್ರೆಗೆ ಹಲವು ಮಗ್ಗುಲುಗಳುಂಟು. ಆ ಮಗ್ಗುಲುಗಳ ಸ್ಥೂಲರೂಪೀ ಅಂಶಗಳು ಹೀಗಿವೆ:

೧. ಕನ್ನಾಡಿನ ಒಟ್ಟು ಸಾಂಸ್ಕೃತಿಕ ಚಿತ್ರಣ ಹಾಗೂ ವರ್ತಮಾನಕಾಲೀನ ವಿಸಂಗತಿ.
೨. ಕನ್ನಡದ ಪ್ರಾಚೀನ ನೆಲೆಗಳ ಶೋಧ ಅದರ ಸಾಂಸ್ಕೃತಿಕ ಅಗತ್ಯತೆಯ ಕಾರಣಮೀಮಾಂಸೆ.
೩. ಭಾಷೆ ಮತ್ತು ಸಂಸ್ಕೃತಿಯ ಪಾರಸ್ಪರಿಕ ಸಂಬಂಧಗಳು ಹಾಗೂ ಅವುಗಳ ಉಪಕ್ರಮ
೪. ಸಂಸ್ಕೃತಿಯ ಅನ್ವೇಷಣೆಗೆ ಬಳಸಿಕೊಂಡ ವಿವಿಧ ಜ್ಞಾನಕ್ಷೇತ್ರಗಳ ಆಶಯ

ಈ ನಾಲ್ಕು ಅಂಶಗಳು ಅವರ ಎಲ್ಲ ಕೃತಿಗಳ ಮುಖ್ಯ ನೆಲೆಗಳಾಗಿವೆ. ಆ ನೆಲಗಳನ್ನು ಕುರಿತು ತುಸು ಚರ್ಚಿಸಬಹುದು:

ಒಂದು ಸಂಸ್ಕೃತಿಯ ಗ್ರಹಿಕೆಯನ್ನು ಜಡಗೊಂಡ ಭೂತಕಾಲದ ವಿವರಗಳಿಂದ ಮಾತ್ರ ವ್ಯಾಖ್ಯಾನಿಸಿ ಬಿಡಬಹುದು. ಅದು ತುಂಬಾ ಸುಲಭದ ದಾರಿ. ಆ ದಾರಿಯು ನಮ್ಮನ್ನು 'ಭೂತ'ದಲ್ಲೆ ಕೂಡಿ ಹಾಕಿ ಬಿಡುತ್ತದೆ. ಸತ್ಯದ 'ನವ' ದರ್ಶನ ಅಲ್ಲಿ ಸಾಧ್ಯವಿಲ್ಲ. ಕೇವಲ ಕುತೂಹಲ, ಅಸ್ಪಷ್ಟ ಚಿತ್ರಗಳು ಮಾತ್ರ ಸಿಗಬಲ್ಲವು. ಅದು ಎರಡು ರೀತಿ ಆಗಬಹುದು. ಸಂಸ್ಕೃತಿಯೊಂದರ ಪ್ರಾಥಮಿಕ ಗ್ರಹಿಕೆ ಹಾಗೂ ತನ್ನ ನೆರಳನ್ನು ಅದರಲ್ಲಿ ಕಾಣುವ ಕ್ರಮ. ಇಲ್ಲಿ ತನ್ನ ನಂಬಿಕೆ ಹಾಗೂ ಪೂರ್ವನಿರ್ದಿಷ್ಟ ಆಶಯಗಳಿಗೆ ಅನುಗುಣವಾಗಿ ರೂಪಿಸಿಕೊಳ್ಳುವ ನಿಲುವುಗಳನ್ನು ಕಾಣುತ್ತೇವೆ. ಶಂಬಾ ಅವರು 'ಇತಿಹಾಸ' ವನ್ನು ಹೀಗೆ ಗ್ರಹಿಸಿಕೊಳ್ಳಲು ಹಲವು ಬಗೆಯ ಕಾರಣಗಳಿವೆ. ಮನುಷ್ಯ ಜೀವನ ವಿಧಾನದ ಸಾಂಸ್ಕೃತಿಕ ಎಳೆಗಳ ಶೋಧವೇ ಪರಮ ಪ್ರಮಾಣ ಎಂಬ ನಂಬುಗೆ ಹಾಗೂ ಅವುಗಳಾದ ರೂಪಿತಗೊಂಡ ಆಶಯಗಳ ಹಿನ್ನೆಲೆಯಲ್ಲಿರುವ ಕಾರಣಮೀಮಾಂಸೆ ಯಾವುದೆಂದು ತಿಳಿಯುವ ಹಂಬಲ. ಇವು ಅವರ ಶೋಧನೆಯ ಮುಖ್ಯ ತಾತ್ವಿಕ ನೇಯ್ಗೆ ಆಗಿತ್ತು. ಸಾಂಸ್ಕೃತಿಕ ಎಳೆಗಳನ್ನು ತಿಳಿಯುವವರು ಆಲೂರರ 'ಕರ್ನಾಟಕ ಗತವೈಭವ'ದಲ್ಲಿ ಕೊಟ್ಟ ಉಪಕ್ರಮವನ್ನೂ 'ಕಣ್ಮರೆಯಾದ ಕನ್ನಡ'ದಲ್ಲಿ ಶಂಬಾ ಅವರು ನೀಡಿದ ಉಪಕ್ರಮವನ್ನೂ ಒಟ್ಟಿಗೆ ಇಟ್ಟು ನೋಡಬಹುದು. ಆಲೂರರು ನೀಡಿರುವ ಪರಿವಿಡಿ ಹಾಗೂ ಶಂಬಾ ಅವರ ಪುಸ್ತಕದ ಪರಿವಿಡಿ-ಇವುಗಳ ಜತೆಗೆ ನಾಡಿನ ಸಾಂಸ್ಕೃತಿಕ ಇತಿಹಾಸದ ಎಳೆಗಳಿಗಾಗಿ ಬಳಸಿದ ಭಾಷೆ-ಪರಿಭಾಷೆಗಳನ್ನೂ ಒಟ್ಟೊಟ್ಟಿಗೆ ಗಮನಿಸುವುದು ಅವಶ್ಯ ಎನಿಸುತ್ತದೆ. ಈ ಅಂಶಗಳ ಸ್ಪಷ್ಟತೆಗಾಗಿ ಇನ್ನಷ್ಟು ವಿವರಗಳು ಕಡೆ ಹೋಗೋಣ.

ಜ್ಞಾನದ ಬಲದಿಂದ-ಅಜ್ಞಾನದ ಕೇಡು

ಈ ಶತಮಾನದ ಮೂರನೆಯ ದಶಕ ನಾಡಿನ ಸಾಂಸ್ಕೃತಿಕ ಪುನಾರಚನೆಯ ಕಾಲವಾಗಿತ್ತಷ್ಟೆ. ಈ ಪುನಾರಚನೆ ಭೌತಿಕವಾಗಿ ಹಾಗೂ ಮಾನಸಿಕವಾಗಿ ಎರಡೂ ಬಗೆಯ ನೆಲೆಗಳಲ್ಲಿ ಉಪಕ್ರಮಿಸುತ್ತಿತ್ತು. ಭೌತಿಕವಾಗಿ ಆ ಕಾಲದ ಕನ್ನಡಿಗರು ಧಾರವಾಡದತ್ತ 'ವಿದ್ಯಾವರ್ಧಕ ಸಂಘ', ಬೆಂಗಳೂರಿನತ್ತ 'ಕರ್ನಾಟಕ ಸಾಹಿತ್ಯ ಪರಿಷತ್ತು' ನಿರ್ಮಾಣ ಮಾಡಿಕೊಂಡರು. ಈ ಶತಮಾನದ ಆರಂಭದಲ್ಲೆ ಅಲ್ಲಿ 'ಜಯಕರ್ನಾಟಕ'; ಇಲ್ಲಿ 'ಪ್ರಬುದ್ಧ ಕರ್ನಾಟಕ' ಪತ್ರಿಕೆಗಳು ಹೊರ ಬಂದುವು. ಇವು ಸಾಂಸ್ಕೃತಿಕವಾಗಿ ಹಲವು ಬಗೆಯ ಆಕಾರಗಳನ್ನು ನಿರ್ಮಾಣ ಮಾಡಿಕೊಂಡವು. ಇದು ಈ ಶತಮಾನದ ಪ್ರಾರಂಭಿಕ ದಶಕಗಳಲ್ಲಿ ಕನ್ನಡನಾಡನ್ನು ಭೌತಿಕವಾಗಿ ನಿರ್ಮಿಸಿಕೊಂಡ ನೆಲೆಯನ್ನು ಕಾಣುತ್ತೇವೆ. ಈ ಭೌತಿಕಾಕೃತಿ ಮುಂದೆ ಭಾಷಿಕಾಕೃತಿಯ ಕಡೆಗೆ ನಮ್ಮನ್ನು ಕರೆದೊಯ್ಯುತ್ತದೆ. ಸೃಜನಶೀಲ ಹಾಗೂ ಸೃಜನೇತರ ಎರಡೂ ಬಗೆಯ ಸಾಧನಗಳ ವಿಸ್ತರಣೆಗಳನ್ನು ನಾವು ಇಲ್ಲಿ ಕಾಣುತ್ತೇವೆ. ಬೇಂದ್ರೆಯವರ ನಾದಲೀಲೆ-ಗರಿ ಕವನ ಸಂಕಲನಗಳು, ಕುವೆಂಪು ಅವರ 'ಕೊಳಲು', ಪಂಡಿತ ತಾರಾನಾಥರ 'ಧರ್ಮಸಂಭವ' ಡಿ.ವಿ.ಜಿ. ಅವರ 'ವನಸುಮ' ಹಾಗೂ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಮಾಸ್ತಿಯವರ 'ಜನತೆಯ ಸಂಸ್ಕೃತಿ' ಬಿ.ಎಂ. ಶ್ರೀ ಅವರ 'ಇಂಗ್ಲಿಷ್ ಗೀತಗಳು' ಹೀಗೆ ಹಲವು ಕೃತಿಗಳು ಭಾಷಿಕಾಕೃತಿಯು ಮೂಲಕ ಕಂನಡ ಸಾಹಿತ್ಯ ಸಂಸ್ಕೃತಿಯ ಪುನಾರಚನೆಗೆ ತೊಡಗಿದ್ದವು. ಬೇಂದ್ರೆ, ಕುವೆಂಪು, ಪುತಿನ, ಇವರ ಸೃಜನಶೀಲ ನೆಲೆಗಳನ್ನು ಕೇವಲ ಸಾಹಿತ್ಯಾಕೃತಿಗಳ ಆಶಯಗಳಾಗಿ ನಾವು ತಿಳಿಯುತ್ತ ಬರುತ್ತಿದ್ದೇವೆ. ನಿಜಕ್ಕೂ ಅವು ಸಾಂಸ್ಕೃತಿಕಾಕೃತಿಗಳೇ. ಕನ್ನಡವನ್ನು ತಿಳಿಯುವ, ಅದನ್ನು ವರ್ತಮಾನಗೊಳಿಸುವ

ಪ್ರಯತ್ನ ಇದರ ಹಿನ್ನೆಲೆಗೆ ಇತ್ತು. ಬೇಂದ್ರೆಯವರು 'ಕನ್ನಡವು ಕನ್ನಡವ ಕನ್ನಡಿಗೊಳಿಸುತಿರಬೇಕು' ಎಂದು ಹೇಳಿದ್ದು ಈ ಅರ್ಥದಲ್ಲಿಯೇ. ಈ ಅರ್ಥಮೀಮಾಂಸೆಯ ಜಾಡು ಅವರ ಕಾವ್ಯದ ಮುಖ್ಯ ಧಾತುಗಳಲ್ಲಿ ಕನ್ನಡ ಎಂಬುದು ಒಂದು. ಭಾಷಿಕಾಕೃತಿ ಹೇಗೋ ಅದು ಅಂತಿಮವಾಗಿ ಸಾಂಸ್ಕೃತಿಕಾಕೃತಿಯೇ. ನಮ್ಮ ಉಜ್ವಲ ಪರಂಪರೆಯ ಬಗೆಗೆ ಪ್ರೀತ್ಯಭಿಮಾನಗಳು ಕೇವಲ ವೈಯಕ್ತಿಕವಾದವುಗಳಲ್ಲ; ಸಮಷ್ಟಿ ಸ್ವರೂಪದ್ದು. ನಾಡು ಎಂಬುದು ಕೇವಲ ಮಣ್ಣು, ಅಲ್ಲಿಯ ಕಟ್ಟಡಗಳು, ನೆಲೆಗೊಂಡ ವಸಾಹತು, ಮೊದಲಾದುವುಗಳು ಮಾತ್ರವಲ್ಲ; ಭಾಷೆ ಮತ್ತು ಸಂಸ್ಕೃತಿಯ ಮೂಲಕ ಮೈದಾಳಿದ ಸಮಸ್ತಾಂಶಗಳ ಅರಿವು. ಈ ಅರಿವಿನ ಗುಣಲಕ್ಷಣಗಳು ಸಾಂಸ್ಕೃತಿಕಾಕೃತಿ ಯಾಗಿಯೇ ಶಂಬಾ ಜೋಶಿ ಅವರು ನಡೆಸಿದ್ದು. ಅದರ ಫಲಿತವನ್ನು 'ಸಾಂಸ್ಕೃತಿಕಾಕೃತಿ' ಎಂಬ ಪರಿಭಾಷೆಯಲ್ಲಿ ಅಡಕಗೊಳಿಸಬಹುದು. ಇದು ಮಾನವಜೀವನ ಶೋಧನೆಯ ನೆಲೆಯಾಗಿ ಸ್ವೀಕರಿಸಿದ ಕ್ರಮವೇ ಆಗಿತ್ತು. ಸಂಶೋಧನೆ ಎಂಬುದು, ಒಂದು ಅಧ್ಯಯನ ಕ್ರಮವಲ್ಲ; ಅದು ಜೀವನಕ್ರಮದ ಪುನಾರಚನೆ ಎಂಬ ಗ್ರಹಿಕೆ ಶಂಬಾ ಅಧ್ಯಯನದ ಹಿನ್ನೆಲೆಗಿತ್ತು. ಈ ಹಿನ್ನೆಲೆಯು ನಾನು ಹಿಂದೆ ಹೇಳಿದಂತೆ, ವರ್ತಮಾನದ ವಿಸಂಗತಿಗಳಿಂದಲೇ 'ಭೂತ'ದತ್ತ ಚಲಿಸಲು ಅನುವು ಮಾಡಿಕೊಡುತ್ತದೆ. ಈ ಶತಮಾನದ ಮೊದಲ ಮೂರು ನಾಲ್ಕು ದಶಕಗಳ ಸಾಂಸ್ಕೃತಿಕಾಧ್ಯಯನಕ್ಕೆ ಇದ್ದ ಆಸಕ್ತಿ ಕೇವಲ ತಿಳಿಯುವ ಕ್ರಮವೇ ಹೊರತು, ಅರಿವಿನೊಳಗಿನ ಅರಿವಿನ ಕ್ರಮವಲ್ಲ. ತಿಳಿಯುವಿಕೆಯಲ್ಲಿ ಕೇವಲ ಕುತೂಹಲ ಮತ್ತು ಸಂಭ್ರಾಮಕತೆ ಮಾತ್ರ ಇರುತ್ತದೆ. ಅರಿಯುವಿಕೆಯು ತಿಳಿಯುವ ಹಾಗೂ ಅದನ್ನು ದಾಟಿ ಇಂದಿನ ಜೀವನ ಕ್ರಮದ ನೆಲೆಗಳನ್ನು ಶೋಧಿಸುವ ಯತ್ನ ಮಾಡುತ್ತದೆ. ಹೀಗೆ ಅರಿಯುವ ಕ್ರಮ, ಶಂಬಾ ಅವರ ಸಾಂಸ್ಕೃತಿಕಾಧ್ಯಯನಕ್ಕೆ ಮುಖ್ಯ ನೆಲೆಯಾಗಿತ್ತೆಂಬುದೇ ವಿಶೇಷ. 'ಕಣ್ಮರೆಯಾದ ಕನ್ನಡ' ಎಂಬ ಪರಿಭಾಷೆ, ಅರಿಯುವ, ಅರಿವಿನೊಳಗಿನ ಅರಿವಿನ ಕ್ರಮಗಳನ್ನು ವಿಸ್ಮಯದ ಆಕಾಂಕ್ಷೆಯನ್ನು ಪಡೆದಿತ್ತು. ಇದು ಅಲ್ಲಮನ ಮಾತಿನಲ್ಲಿ 'ಜ್ಞಾನದ ಬಲದಿಂದ ಅಜ್ಞಾನದ ಕೇಡು'.

ವರ್ತಮಾನದ ಬದುಕಿನ ಎಳೆಗಳನ್ನು ಹಿಡಿದು ನೋಡಲು ಭೂತದ ಅನ್ವೇಷಣೆ ಮುಖ್ಯವಷ್ಟೆ. ಸಾಂಸ್ಕೃತಿಕ ಚರಿತ್ರೆಯನ್ನು ನಾವು ಗ್ರಹಿಸಿರುವ ಹಾಗೂ ಗ್ರಹಿಸುತ್ತಿರುವ ಬಗೆಗಳು ಕೂಡ ಸ್ಪಷ್ಟವಾಗುವುದು ಇಲ್ಲಿಯೇ. ಸಾಂಸ್ಕೃತಿಕ ಚರಿತ್ರೆಯೆಂಬುದು ಕಳೆದು ಹೋದದ್ದರ ಹುಡುಕಾಟವಲ್ಲ; ಬದಲಾಗಿ ಅದು ವರ್ತಮಾನದ ಹುಡುಕಾಟವೂ ಕೂಡ. ವರ್ತಮಾನದ ಏರುಪೇರುಗಳ ಹಿನ್ನೆಲೆಯಲ್ಲಿ ಕಳೆದುಹೋದದ್ದರ ಪರಿಪ್ರೇಕ್ಷ್ಯವೂ ಅಡಗಿರುತ್ತದೆ. ಕಳೆದ ಕಾಲವೆಂದರೆ; ಮನುಷ್ಯನ ಒಟ್ಟು ವರ್ತನೆಗಳು ಎಂದೇ ಗ್ರಹಿಸಬೇಕು. ಸಂಸ್ಕೃತಿಯ 'ಬರುವಳಿ' ಅನ್ನುವುದು ಇಲ್ಲಿಯೇ. ಸಂಸ್ಕೃತಿಗಿರುವ ಹಲವು ಅರ್ಥಪೂರ್ಣ ಸಾಧ್ಯತೆಗಳಲ್ಲಿ ಭೂತದ ಸಂಗತಿಗಳನ್ನು ತನ್ನ ಒಡಲಲ್ಲಿಟ್ಟುಕೊಳ್ಳುವುದು ಒಂದೇನೊ ನಿಜ. ಅದರೊಡನೆ ವರ್ತಮಾನದ ವಿಸಂಗತಿಗಳನ್ನು ತನ್ನ ಕಣ್ಣೆದುರು ಅನುಭವಿಸುವುದೂ ಕೂಡ ಮತ್ತೊಂದು ಬಗೆಯದು.

ಶಂಬಾ ಅವರು 'ಸಂಸ್ಕೃತಿ' ಅನ್ವೇಷಣವನ್ನು ಸತ್ಯದ ನೆಲೆಯಲ್ಲಿ ನಡೆಸಿದರು. ಮೇಲೆ ಹೇಳಿದ ಹೊಳಹುಗಳೂ ಮತ್ತು ಇದರೊಡನೆ ದಾಟಿ ಬಂದ ಆತಂಕಗಳೂ ಅವರ ಜತೆಗೆ ಇವೆ. ಅವರಿಗೆ ಕಂಡ ಆತಂಕ ಮತ್ತು ಇಕ್ಕಟ್ಟು ಎರಡು ಬಗೆಯದು! ಒಂದು : ಸಂಸ್ಕೃತಿ ವೈಭವೀಕರಣದ ನೆಲೆ; ಎರಡು: ಕನ್ನಡ ಸಂಸ್ಕೃತಿಯ ಅಂತಸ್ಸತ್ವ ಏನು ಮಹಾ? ಅನ್ನುವ ಧಿಮಾಕು. ಇವೆರಡು ಅಧ್ಯಯನಗಳ ಮಾದರಿಯು 'ಕನ್ನಡ ಸಂಸ್ಕೃತಿ'ಯ ತಳಪಾಯವನ್ನು ಗ್ರಹಿಸುವ ಅರ್ಥಸಾಧ್ಯತೆಗಳಲ್ಲಿ ಆತಂಕ ಮತ್ತು ಇಕ್ಕಟ್ಟನ್ನು ಉಂಟುಮಾಡಿದ್ದು ನಿಜ. ಸಂಸ್ಕೃತಿಯ 'ವೈಭವೀಕರಣ' ಅನ್ನುವುದು ಮೇಲು ಪದರದ ನೋಟವೇ ಹೊರತು; ತಾತ್ಕಾಲಿಕ ಅಭಿನಿವೇಶವನ್ನು ಪಡೆದಿರುವಂಥದ್ದು. ಸಂಸ್ಕೃತಿಯ ವೈಭವೀಕರಣ ಅನ್ನುವುದಲ್ಲ. ಒಂದು ಮಾದರಿಯ ಜನಪ್ರಿಯ ಆವೇಶವನ್ನು ತರುತ್ತದೆಯಷ್ಟೆ. ಇದು ವರ್ತಮಾನದ ಸತ್ಯಸಂಗತಿಗಳನ್ನು ನಿರಾಕರಿಸುವ ಮುಖವಾಡವನ್ನು ಜತೆಜತೆಗೆ ಇರಿಸಿಕೊಂಡಿರುತ್ತದೆ. ಸಂಸ್ಕೃತಿಯ ಹೆಸರಿನಲ್ಲಿ ಧರ್ಮದ ನೆಲೆಗಳ ಬಗ್ಗೆ, ತಾತ್ವಿಕ ಸಂಗತಿಗಳ ಬಗ್ಗೆ 'ಅಪರಿಮಿತಂ ಭವ್ಯಂ' ಎಂಬಂತಹ

ಮಾತುಗಳು ಹೊರಬರುತ್ತವೆ. ಇಂತಹ ಮಾತುಗಳು, ಸಂಸ್ಕೃತಿಯ ಹೊರಗಿನ ರೂಪಗಳನ್ನು ಎದುರಿಸುವುದಕ್ಕೆ ಹೂಡಿಕೊಳ್ಳುವ ಆಟ. ಶಂಬಾ ಅಧ್ಯಯನದ ಒಟ್ಟು ಸಂದರ್ಭ ಒಂದು ಹಂತದಲ್ಲಿ ಹೇಳುವುದಾದರೆ : ಸಂಸ್ಕೃತಿಯನ್ನು ಗ್ರಹಿಸಿಕೊಳ್ಳುವ 'ಕುರುಹು' ಕೂಡ ಆಗಿತ್ತು. ಅಧ್ಯಯನದ ಮಾದರಿಗಳೆಂದರೆ: ಒಂದರ್ಥದಲ್ಲಿ ಬದುಕುತ್ತಿರುವ ನಮ್ಮ ವರ್ತಮಾನದ ಚರಿತ್ರೆಯ ಮಾದರಿಗಳೂ ಕೂಡಾ. ಅವುಗಳನ್ನು ಒಂದಕ್ಕೊಂದು ಬೇರೆ ಬೇರೆ ಎಂದು ಹೇಳುವುದು ಅಸಾಧ್ಯದ ಮಾತು ತಾನೆ? ಅವೆರಡೂ ಕೂಡ ಒಮ್ಮೆ ಪಡೆಯುವುದು ಸಂಸ್ಕೃತಿಯಲ್ಲೇ. ವೈಭವೀಕರಿಸುವ ನೆಲೆಯ ಮಾದರಿಗಳು ಒಂದು ಬಗೆಯದಾದರೆ; ಸಂಸ್ಕೃತಿಯ ಅಂತಸ್ಸತ್ತ್ವ ಎಂಥದ್ದೆಂಬ ಧಿಮಾಕು ಇನ್ನೊಂದು ಬಗೆಯದು. ಈ ಹಿನ್ನೆಲೆಯಲ್ಲಿ ಸಂಸ್ಕೃತಿಯನ್ನು ನೋಡುವ ರೀತಿ ಕೆಳಹಂತದ್ದೇ ಹೊರತು; ಭಿನ್ನ ಮಾದರಿಯದ್ದಲ್ಲ. ಸಂಸ್ಕೃತಿಯನ್ನು ಹೀಗಳೆಯುತ್ತ ಉನ್ನತ ಸಂಸ್ಕೃತಿಯ ವಾರಸುದಾರನೆಂಬ ಧಿಮಾಕು ಕೂಡ ಇದೇ ಮಾದರಿಯ ಅಪಾಯವನ್ನು ತರುತ್ತದೆ. ಉನ್ನತನೆಲೆಯ ಹುಡುಕಾಟದಲ್ಲಿ ಚಲಿಸುವ ಇಂಥ ಮನಸ್ಸು, ಒಟ್ಟು ಸಂಸ್ಕೃತಿಯ ಬೇರೆ ಬೇರೆ ಪದರುಗಳನ್ನು ತನ್ನ ನೆಲದಲ್ಲೇ ಕಾಣಲು ಹೊರಡುತ್ತದೆ. ಇದು ತಾನು ಬದುಕುತ್ತಿರುವ ವರ್ತಮಾನದ ಒಟ್ಟು ವರ್ತನೆ ಮತ್ತು ಭವಿಷ್ಯದ ಬದುಕನ್ನು ನಿರಸನಗೊಳಿಸುವ ರೀತಿಯಾಗಿರುತ್ತದೆ. ಶಂಬಾ ಅವರು, ಕನ್ನಡ ಸಂಸ್ಕೃತಿಯ ನೆಲೆಗಳನ್ನು ಗ್ರಹಿಸಿಕೊಳ್ಳಲು ಹೊರಟಾಗ ಇದ್ದ ಒಟ್ಟು ಪರಿಸ್ಥಿತಿ ಈ ಬಗೆಯದೇ. ಇಂತಹ ಪರಿಸ್ಥಿತಿಯು ಚರಿತ್ರೆಯನ್ನು ವೈಭವೀಕರಿಸುವುದಾಗುತ್ತದೆ. ಇಲ್ಲ ಚರಿತ್ರೆಯನ್ನು ಆಧ್ಯಾತ್ಮೀಕರಿಸುವುದಾಗುತ್ತದೆ. ಒಂದು ಹಂತದಲ್ಲಿ ಬದುಕಿಗೆ ಅನ್ವಯಿಸುವ ಈ ಮಾತನ್ನು ಸಂಸ್ಕೃತಿಯ ಚರಿತ್ರೆಗೂ ಒಟ್ಟಾಗಿ ಅನ್ವಯಿಸುವ ಮಾತಾಗುತ್ತದೆ. ಈ ಬಗೆಯ ಇಕ್ಕಟ್ಟುಗಳ ನಡುವೆ 'ಸಂಸ್ಕೃತಿ'ಯ ಸ್ವರೂಪವನ್ನು ಇದ್ದ ನೆಲೆಯಲ್ಲೇ ಹುಡುಕುವ ಅದರ ಪದರುಗಳನ್ನು ಬಿಚ್ಚಿ ನೋಡುವ ಸಾಹಸ ಹುಡುಗಾಟದ ಮಾತಲ್ಲ. ಇದನ್ನು ಜಯಿಸಿಕೊಂಡು ಸಂಶೋಧಕ ಸತ್ಯದ 'ನವದರ್ಶನ'ವನ್ನು ಕಾಣಬೇಕಾಗುತ್ತದೆ.

ಸತ್ಯದ 'ನವ' ದರ್ಶನ

ಸಂಶೋಧನೆಯಲ್ಲಿ ಸತ್ಯದ 'ನವದರ್ಶನ'ವಾಗುವುದು - ಅವನು ಆಯ್ದುಕೊಂಡು ಸಂಶೋಧನ ವಿಧಾನಗಳ ಮೇಲೂ ಅವಲಂಬಿಸಿರುತ್ತದೆ. ಇಂತಹ ಸಂಶೋಧನ ವಿಧಾನ ಪಾರಂಪರಿಕ ನೆಲೆಯನ್ನು ಅರ್ಥೈಸುವ ಒಂದು ಮಾರ್ಗೋಪಾಯಕ್ಕೆ ಮಾತ್ರ ನೆಲೆ ನಿಲ್ಲುವುದಿಲ್ಲ. ಅದು ಒಟ್ಟು ಆಕೃತಿಯ ಕಡೆಗೆ ಮುಖ ಹಾಕುತ್ತದೆಯೇ ಹೊರತು; ಬಿಡಿಯಾದ ಆಶಯಗಳ ಕಡೆಗಲ್ಲ. ಮಾರ್ಗೋಪಾಯ ಎನ್ನುವುದು ಸಾಂಸ್ಕೃತಿಕ ಪಾತಳಿಗಳ ಮೇಲೆ ನಿಂತಿರುವುದಿಲ್ಲ; ಬದಲಾಗಿ ಅದು 'ಹಾಸು'ಗಳ ಮೇಲೆ ನಿಂತಿರುತ್ತದೆ. ಒಟ್ಟು ಸಂಸ್ಕೃತಿಯ ನವದರ್ಶನವೆನ್ನುವುದು ಹಾಸು-ಹೊಕ್ಕುಗಳ ಒಟ್ಟು ನೆಲೆ ಎನ್ನುವ ಗ್ರಹಿಕೆ ಮುಖ್ಯವೇ ಹೊರತು; ಅದರ ಏಕಮುಖ ನೆಲೆ ಅನ್ನುವುದಲ್ಲ. ಒಟ್ಟು ಕನ್ನಡದ ಸಾಂಸ್ಕೃತಿಕ ಸತ್ಯಾನ್ವೇಷಣೆಯ ಚರ್ಚೆಗಳ ನೆಲೆ, ಹಿನ್ನೆಲೆ ಹಾಗೂ ಮುನ್ನೆಲೆಗಳು ಅಲ್ಪಸ್ವಲ್ಪ ಕೂಡಿಕೊಳ್ಳಬೇಕೆನ್ನುವ ಕಾರಣದಿಂದ ಈ ಬಗೆಯ ಮಾತುಗಳನ್ನು ಹೇಳಬೇಕಾಯಿತು. 'ಸಂಸ್ಕೃತಿ'ಯ ಒಟ್ಟು ಪರಿವೇಶವನ್ನು ಏಕಗ್ರಾಹಿ ನೆಲೆಯದ್ದಲ್ಲ. ಅದು ಬಹ್ವಾಕೃತಿಯ ಕಡೆಗೆ ಚಲಿಸುವ ಹುಮ್ಮಸ್ಸನ್ನು ಪಡೆದಿರುತ್ತದೆ.

ಶಂಬಾ ಜೋಶಿಯವರು ಈ ಶತಮಾನದ ಮೂರನೆಯ ದಶಕದಲ್ಲಿ ಸಂಸ್ಕೃತಿಯ 'ನವದರ್ಶನ' ಕಾಣುವ ವೇಳೆಯಲ್ಲಿ, ಈ ಬಗೆಯ ಹಲವು ಉಪಾಯಾಂತರಗಳನ್ನು ಇಕ್ಕಟ್ಟುಗಳನ್ನು ಅವರು ಎದುರಿಸಬೇಕಾಯಿತು. ಅವರು ತಮ್ಮ ಪುಸ್ತಕಗಳ ಮುನ್ನುಡಿಗಳಲ್ಲಿ ಬೇರೆ ಬೇರೆ ಬಿಡಿಬರೆಹಗಳಲ್ಲಿ ಈ ಬಗೆಯ ಆತಂಕ ಮತ್ತು ಇಕ್ಕಟ್ಟುಗಳನ್ನು ಹೇಳಿಕೊಂಡಿದ್ದಾರೆ. ಬಹುಜ್ಞಾನಕ್ಷೇತ್ರಗಳ ಅರಿವಿಲ್ಲದೆ, ಸಂಸ್ಕೃತಿಯ ಅರ್ಥಗ್ರಹಣಕ್ಕೆ ಹೊರಡುವುದು ಅಥವಾ ತೊಡಗುವುದು ಸುಖಕರವಲ್ಲ ಅನ್ನುವುದು ಅವರ ಅಳಲು. ಭಾಷಿಕ ಭೂಮಿಕೆಗಳ ಜತೆಗೆ ಇನ್ನೂ ಹಲವಾರು ಜ್ಞಾನಕ್ಷೇತ್ರಗಳು ನೆರವಾಗಬೇಕು. ಅವರ ಮಾತೇ ಹೀಗಿದೆ:

> "ಭಾಷಾಶಾಸ್ತ್ರವು ಕೊಡುವ ಸಲಹೆ-ಸೂಚನೆಗಳು ಸಮಾಜ ವಿಕಾಸಶಾಸ್ತ್ರ, ವಂಶ ವಿಜ್ಞಾನ, ಪುರಾಣಶಾಸ್ತ್ರ, ಪರಂಪರೆ, ಧರ್ಮ, ಮಾನವಶಾಸ್ತ್ರ ಅಥವಾ ಪುರಾತನ ವಸ್ತುವಿಜ್ಞಾನ ಇಂತಹ ಬೇರೆ ಬೇರೆ ಶಾಖೆಯ ಶಾಸ್ತ್ರಗಳ ಬೆಂಬಲವೂ ದೊರೆತರೆ ಮಾತ್ರ ಆ ಮಾತನ್ನು ನಿಶ್ಚಿತ ಸಿದ್ಧಾಂತವೆಂದಲ್ಲದಿದ್ದರೂ ವಿಚಾರಾರ್ಹವೆಂದು ಸಂಗ್ರಹಿಸಿ ಮುಂದಡಿಯಿಡಲು ಅಡ್ಡಿಯಿಲ್ಲ. ಇವೆಲ್ಲ ಶಾಸ್ತ್ರಗಳಲ್ಲಿ ಪಾರಂಗತರಾದ ವಿದ್ವಾಂಸರು ಈ ಕೆಲಸವನ್ನು ಎಂದು ಕಯ್ಕೊಳ್ಳುವರೋ ಅದು ಕರ್ನಾಟಕದ ಇತಿಹಾಸದ ಸುವರ್ಣ ದಿನ. ಆದರೆ, ಅಲ್ಲಿಯ ವರೆಗೆ ಉಳಿದವರು ತಮ್ಮ ಅಭ್ಯಾಸದಲ್ಲಿ ಹೊಳೆದುದನ್ನು, ತಿಳಿದುದನ್ನು, ಅರಿತುದನ್ನು, ಕುರಿತುದನ್ನು ಸಂಗ್ರಹಿಸಿ ತಮ್ಮ 'ಅಳಿಲುಸೇವೆ'ಯನ್ನು ಸಲ್ಲಿಸುವುದು ಅಪರಾಧವಾದೀತೆ?"[೧]

ಈ ಬಗೆಯ ಚಾರಿತ್ರಿಕ ವಿಧಾನಗಳು, ಒಂದು ಹಂತದಲ್ಲಿ ಸಂಸ್ಕೃತಿಯ ಅಂತರ್‌ನೆಲೆಗಳನ್ನು ನಮ್ಮ ಕಣ್ಣ ಮುಂದೆ ತಂದು ನಿಲ್ಲಿಸುತ್ತವೆ. ಕೇವಲ 'ಚರಿತ್ರೆ'ಯನ್ನು ವರದಿ ಒಪ್ಪಿಸುವುದು ಶಂಬಾ ಅವರಿಗೆ ಎಂದೂ ಮುಖ್ಯವಾಗಿಲ್ಲ. ಚರಿತ್ರೆಯ ಹಿಂದಿರುವ ಜೀವನಸ್ಥ ನೆಲೆಗಳ ಚರ್ಯೆಯನ್ನು ಹುಡುಕುವುದು ಅವರ ವಿಶೇಷ ಆಸಕ್ತಿಯಾಗಿದೆ. ಪ್ರೊ. ಕೀರ್ತಿನಾಥ ಕುರ್ತಕೋಟಿಯವರು ಇದನ್ನು ಸರಿಯಾಗಿಯೇ ಗುರುತಿಸಿದ್ದಾರೆ.

> "ಸಾಮಾಜಿಕ ಅಧ್ಯಯನ, ಕಲೆಯೆಂದರೆ ಕಲೆ, ಶಾಸ್ತ್ರವೆಂದರೆ ಶಾಸ್ತ್ರ, ಭೌತಶಾಸ್ತ್ರದಂತೆ ಅದು ಕೇವಲ ಶಾಸ್ತ್ರೀಯ ನಿಯಮಗಳನ್ನು ಅನುಸರಿಸಿ ಬೆಳೆಯಲಾರದು. ಸಾಮಾಜಿಕ ಅಧ್ಯಯನ ಕೇಂದ್ರವಸ್ತು ಮನುಷ್ಯನೇ ಹೊರತು ಜಡವಸ್ತುವಲ್ಲ. ಜಡವಸ್ತುವಿನ ಪ್ರಾಮಾಣಿಕ ಸ್ವರೂಪ ಮನುಷ್ಯನಿಗಿಲ್ಲ. ಅದೇ ರೀತಿ ಮನುಷ್ಯ ತೋರಿಸುವ ಪ್ರತಿಕ್ರಿಯೆಯನ್ನು ಜಡವಸ್ತು ತೋರಿಸಲಾರದು. ಆದ್ದರಿಂದ ಸಾಮಾಜಿಕ ಅಧ್ಯಯನದಲ್ಲಿ ಸಜೀವತೆ ಮತ್ತು ವಸ್ತುನಿಷ್ಠೆಗಳು ಕೂಡಿಯೇ ಇರಬೇಕಾದದ್ದು ಅನಿವಾರ್ಯವಾಗಿದೆ. ಜೋಶಿಯವರ ಈ ಗ್ರಂಥದಲ್ಲಿ ಅಂಥ ಅಪರೂಪದ ಹೊಂದಾಣಿಕೆ ಇದೆ."[೨]

ನಿಜ, ಮನುಷ್ಯನ ಗ್ರಹಿಕೆಗಳ ಮೊತ್ತವೇ ಸಾಮುದಾಯಿಕ ಜೀವನದ ಒಟ್ಟು ಫಲಿತ. ಶಂಬಾ ಅವರಿಗೆ, ಸಾಮುದಾಯಿಕ ಜೀವನ ವಿಧಾನದ ಮೇಲೆ ಅಗಣಿತ ಪ್ರೀತಿ. ತನ್ಮೂಲಕ ಇಡಿಯಾದ ಆಕೃತಿಯ ಮೇಲೆ ಅವರ ಒತ್ತು ಇದ್ದುದು ಸಹಜವಾಗಿದೆ.

ಶಂಬಾ ಅವರ ಒಟ್ಟು ಬರೆಹಗಳಿಗೆ ಅನ್ವಯಿಸುವ ಮಾತು ಇದು. ಅವರು ಕನ್ನಡ ಸಂಸ್ಕೃತಿಯನ್ನು ಗ್ರಹಿಸಿಕೊಂಡ ಚಿಂತನ ವಿಧಾನದ ಮೇಲೆಯೂ ಪರಿಣಾಮಕಾರಿಯಾಗಿ ಇದು ಕೆಲಸ ಮಾಡಿದೆ. ಕನ್ನಡ ಸಂಸ್ಕೃತಿಗೆ ಸಂಬಂಧಿಸಿದ ಮನುಷ್ಯನ ಒಟ್ಟು ಗ್ರಹಿಕೆ ಮತ್ತು ಸಮಸ್ಯೆ ಭಾರತೀಯ ಸಂಸ್ಕೃತಿಗೂ ಅನ್ವಯಿಸುವ ಮಾತಷ್ಟೆ. ಏಕೆಂದರೆ, ಇದು ಕರ್ನಾಟಕಾಂತರ್ಗತ ಸಂಸ್ಕೃತಿ ವಿಚಾರ. ಕೇವಲ ಕನ್ನಡ ಸಂಸ್ಕೃತಿಯ ನೆಲೆಯನ್ನು ಹುಡುಕುವುದು ಅವರ ಒಟ್ಟು ಶೋಧನೆಯ ಧಾಟಿಯಾಗಿರಲಿಲ್ಲ; ಬದಲಾಗಿ ಸಂಸ್ಕೃತಿಯನ್ನು 'ಇಡಿ'ಯಾಗಿ ಗ್ರಹಿಸುವುದೇ ಅವರ ಮೂಲ ಆಶಯವಾಗಿತ್ತು. 'ಕಣ್ಮರೆಯಾದ ಕನ್ನಡ' (೧೯೩೩) ಬರೆಯುವ ಕಾಲಕ್ಕೆ ಅವರ ಬರೆವಣಿಗೆಯ ಹಿಂದೆ 'ಭಾವನಾತ್ಮಕ ನೆಲೆ' ತುಸುಮಟ್ಟಿಗೆ ಪ್ರಾಧಾನ್ಯವನ್ನು ವಹಿಸಿತ್ತೆಂಬುದು ನಿಜ. 'ಮಹಾರಾಷ್ಟ್ರದ ಮೂಲ', 'ಶಿವರಹಸ್ಯ' ಈ ಕೃತಿಗಳನ್ನು ಬರೆಯುವ ಕಾಲಕ್ಕೆ ಈ ಬಗೆಯ ನೋಟದ ಇಳಿಗಾಲವೆಂದೇ ಹೇಳಬೇಕು.[೩]

---

೧ ಶಂಬಾ ಕೃತಿ ಸಂಪುಟ : ೧ 'ಕಂನಾಡು-ಕರ್ನಾಟ' ಪುಟ: ೨೬೬, ೧೯೯೯

೨. ಪೂರ್ವೋಕ್ತ, ಅದೇ ಪುಟ : ೧೧೦, ೧೯೯೯

೩. ಈ ಮಾತನ್ನು ಇನ್ನೊಂದಿಷ್ಟು ವಿಸ್ತರಿಸಬೇಕು. ಶೋಧನೆಯನ್ನು ಪ್ರಾಧಾನ್ಯವಹಿಸುವ ಭಾಷೆಯ ಹಿಂದೆ, ಭಾವನಾತ್ಮಕ ಏರಿಳಿತಗಳಿರುತ್ತವೆ. ಆದರೆ, ಭಾವನಾತ್ಮಕ ಏರಿಳಿತಗಳೇ ಶೋಧನೆಯನ್ನು ನಿಯಂತ್ರಣ ಮಾಡಿದರೆ; ಶೋಧನೆಯು

ಅಷ್ಟು ಹೊತ್ತಿಗೆ, ಶಂಬಾ ಇಡಿಯಾದ ಆಕೃತಿಯ ಮುಖಾಂತರ ಒಟ್ಟು ಸಂಸ್ಕೃತಿಯ ಆಶಯವನ್ನು ಗ್ರಹಿಸಿಕೊಳ್ಳುವ ತವಕ ಹುಟ್ಟಿ ಬಿಟ್ಟಿತ್ತು. ಹೀಗಾಗಿ, ಕನ್ನಡ ಸಂಸ್ಕೃತಿ ಸಮಸ್ಯೆಗಳ ಬೇರನ್ನು ಭಾರತೀಯ ಸಂಸ್ಕೃತಿಯ ಅಂತರ್‌ನೆಲೆಗಳ ಹಾಸು-ಹೊಕ್ಕುಗಳಲ್ಲಿ ಅವರು ಹುಡುಕಿಕೊಳ್ಳುವ ಪ್ರಯತ್ನದಲ್ಲಿದ್ದರು. ಅವರು, ಅಲ್ಲಿಯ ವರೆಗೆ ಪ್ರಚಲಿತದಲ್ಲಿದ್ದ ಎರಡೂ ಬಗೆಯ ಚಿಂತನಾತ್ಮಕ ನೆಲೆಗಳನ್ನು ಮೀರಿ ಅಧ್ಯಯನದ ಫಲಿತದಿಂದ ಹುಟ್ಟಿಕೊಂಡ ಸಾಂಸ್ಕೃತಿಕ ಚಿಂತನಪದ್ಧತಿಯ ನೆಲೆಗಳನ್ನು ಅವರು ಶೋಧಿಸಿಕೊಂಡರು. ಕನ್ನಡ ಸಂಸ್ಕೃತಿ ಯನ್ನು ಅವರು ಗ್ರಹಿಸಿಕೊಂಡದ್ದು ಹೀಗೆ : ಅವು ಸ್ಥೂಲವಾಗಿ ಆರುನೆಲೆಗಳನ್ನು ಒಳಗೊಂಡಿದ್ದವು.

೧. ಭೌಗೋಳಿಕ ವ್ಯಾಪ್ತಿಯ ನೆಲೆಗಳು
೨. ಜ್ಞಾನಾಂಗೀಯ ಅಧ್ಯಯನದ ನೆಲೆಗಳು
೩. ಭಾಷಿಕ ಅಂತಃಪ್ರಮಾಣದ ನೆಲೆಗಳು
೪. ಆಚರಣಾಮೂಲದ ನೆಲೆಗಳು
೫. ದೈವತ ಕಥೆಗಳ ಸಾಂಕೇತಿಕ ಆಕೃತಿಗಳ ನೆಲೆಗಳು

ಇಲ್ಲಿಯ ವಿಂಗಡಣೆ ಏಕಮುಖವಾಗಿಲ್ಲ ಅಥವಾ ಅನುಕ್ರಮವೆಂದು ಭಾವಿಸುವಂತಿಲ್ಲ. ಇಲ್ಲಿಯ ಆರು ನೆಲೆಗಳು ಪಾರಸ್ಪರಿಕವೇ ಹೊರತು; ಅಸಾಂಗತ್ಯ ಮಾದರಿಗಳದ್ದಲ್ಲ ಎಂಬುದನ್ನು ಮೊದಲೆ ಸೂಚಿಸಿಬಿಡುತ್ತೇನೆ.

ಸಂಸ್ಕೃತಿಯ ಅಂತಃಸತ್ವದ ನೆಲೆಗಳು

ಕನ್ನಡ ಸಂಸ್ಕೃತಿಯ ಜೀವನಸ್ಥ ಗ್ರಹಿಕೆಗೆ, ಅವರು ಬಳಸಿಕೊಡ ಚಿಂತನ ವಿಧಾನಗಳು ಈ ಮೇಲಿನವಷ್ಟೆ. ಇವುಗಳನ್ನು ಒಂದೊಂದಾಗಿ ತೆಗೆದುಕೊಂಡು, ಕನ್ನಡ ಸಂಸ್ಕೃತಿಯಲ್ಲಿ ಉಂಟಾದ ವಿಕಲ್ಪಗಳನ್ನು ಏಳುಬೀಳು ಗಳನ್ನು ಪಲ್ಲಟಗಳನ್ನು ನೋಡುವುದು ತಾತ್ತ್ವಿಕವಾಗಿ ಯುಕ್ತವಾದ ಕೆಲಸವೇ ಆಗಿದೆ. ಈ ಬಗೆಯ ತಾತ್ತ್ವಿಕ ಒಳನೋಟವು, ಶಂಬಾ ಅವರ ಒಟ್ಟು ಚಿಂತನಧಾರೆಯ ಮೇಲೆ ಕೆಲಸವನ್ನು ಮಾಡಿದೆ. ಸಂಸ್ಕೃತಿಯ ಅರ್ಥಗ್ರಹಣ ಅನ್ನುವುದು ಕೇವಲ 'ಹೊರರೂಪ'ದ ಅರ್ಥದ ನೆಲೆಗಳಿಂದ ಬದ್ಧವಾಗಿರುವುದಿಲ್ಲ; ಬದಲಾಗಿ ಅದು 'ಒಳರೂಪ'ದ ಅರ್ಥಸಾಧ್ಯತೆಗಳ ಅರ್ಥಗ್ರಹಣದ ನೆಲೆಗಳಲ್ಲಿ ಕೂಡಿಕೊಂಡಿರುತ್ತವೆ. ಇವು ಒಂದೊಂದೂ ಬಿಡಿಬಿಡಿ ರೂಪದ ಆಶಯಗಳು ಮಾತ್ರವೆಂದು ಭಾವಿಸುವಂತಿಲ್ಲ; ಒಂದಕ್ಕೊಂದು ಅಂತರ್ ಸಂಬಂಧಗಳಿಂದ ಕೂಡಿದ ನೆಯ್ಗೆಯನ್ನು ಒಳಗೊಂಡಿರುತ್ತದೆ. ಆ ಬಗೆಯ ವಿಸ್ತಾರವಾದ ಅಧ್ಯಯನಕ್ಕೆ ಹಾಗೂ ವಿಶ್ಲೇಷಣೆಗೆ ಇಲ್ಲಿ ಅವಕಾಶವಿಲ್ಲ; ಅದರ ಸ್ಥೂಲರೇಖೆಯನ್ನು ಮಾತ್ರ ಸದ್ಯ ನೀಡಬಹುದು.

೧. ಭೌಗೋಳಿಕ ವ್ಯಾಪ್ತಿಯ ನೆಲೆಗಳು : ಕನ್ನಡ ಜನರ ಮೂಲಸ್ಥಾನ ಯಾವುದು? ಅವರ ಭೌಗೋಳಿಕ ನೆಲೆ ಎಲ್ಲಿ? ಅವರು ಬದುಕಿದ ಪರಿಸರ, ಉಸಿರಾಡಿದ ಸ್ಥಾನ, ಎಲ್ಲಿ ಎಂಬ ಪ್ರಶ್ನೆ ಮಹತ್ವದ್ದು. ಶಂಬಾ ಅವರು ಈ ಪ್ರಶ್ನೆಗೆ ಉತ್ತರವನ್ನು ಹೀಗೆ ಕಂಡುಕೊಂಡರು. ಅವರ ತೀರ್ಮಾನದ ಪ್ರಕಾರ! ಗೋದಾವರಿ, ನರ್ಮದಾ ನದಿಯ ತೀರವೇ ಕನ್ನಡರ ಮೂಲಸ್ಥಾನ. "ನಮ್ಮ ಹಳೆಯ ಕನ್ನಾಡು ಈಗಣ ಖಾನದೇಶವೆ ಆಗಿರಬೇಕೆಂದು ಮಾಡಿರುವ ನಿರ್ಧಾರವು ತುಂಬಾ ಶ್ಲಾಘನೀಯವೇ" ಎಂದು ಗೋವಿಂದ ಪೈ ಅವರು ಕೈವಾರಿಸಿದ್ದು ಶಂಬಾ ಅವರಿಗೆ ಸಂಶೋಧನೆಯ ದಿಕ್ಕಿನಲ್ಲಿ ಹೊಸ ಚೈತನ್ಯವನ್ನು ತಂದುಕೊಟ್ಟಿತು. ಈ ದಿಕ್ಕಿನಲ್ಲಿ ಅವರು ಸಂಶೋಧನೆಯನ್ನು ನಡೆಸಿದರು. ನಾಗಪುರ, ಚಂದಾ, ಬಂಡಾರ ಮೊದಲಾದ ಕಡೆ ಕಂದಮಿಳರ ನೆಲೆಗಳು ಇದ್ದುದನ್ನು ಪತ್ತೆ ಹಚ್ಚಿದ್ದು

ಏಕಮುಖವಾಗಿ ಬಿಡುತ್ತದೆ. ಈ ಅಪಾಯಕ್ಕೆ ಕರ್ನಾಟಕದ ಏಕೀಕರಣ, ಕನ್ನಡನಾಡು ನಮ್ಮದು ಎಂಬ ಅಭಿನಿವೇಶನದ ಮಾತುಗಳು ಪರ್ಯಾಯವಾಗಿ ಕಾರಣವಾಗಿದ್ದುವು. ಆಲೂರರು, ಬೇಂದ್ರೆ, ಶಂಬಾ, ಆನಂದಕಂದರ ಮೊದಲ ಬರೆಹಗಳನ್ನು ಈ ದೃಷ್ಟಿಯಿಂದ ಗಮನಿಸಬೇಕಾಗಿದೆ.

ಗಮನಾರ್ಹವಾದ ಶೋಧನೆಯೇ ಸರಿ. ಕಾವೇರಿಯಿಂದ ಗಂಗೆಯ ವರೆಗೆ, ನೀಲಗಿರಿಯಿಂದ ರಾಜ ಮಹಾಲದವರೆಗೆ ಕರ್ನಾಟಕ ಭೌಗೋಳಿಕ ವ್ಯಾಪ್ತಿಯನ್ನು ಹಿಗ್ಗಲಿಸುತ್ತ-ಅದರೊಡನೆ ಕನ್ನಡರ ಮೂಲನೆಲೆ ಪತ್ತೆ ಹಚ್ಚಲು ತೊಡಗಿದರು. ಶಂಬಾ ಅವರು, ಕಾವೇರಿಯಿಂದ ಗಂಗೆಯ ವರೆಗೆ ಹಟ್ಟಿಕಾರರ ನೆಲೆಯಿರುವುದನ್ನು ಗಮನಿಸಿದರು. ಹೀಗೆ ವಿಸ್ತಾರಗೊಂಡಿದ್ದ ಹಟ್ಟಿಕಾರರ ನೆಲೆ, ಕಾಲಕ್ರಮೇಣ ಕುಗ್ಗುತ್ತ ಬಂದ ಕಾರಣಮೀಮಾಂಸೆಯ ಕಡೆಗೆ ಅವರು ಹೊರಳಿದರು. ಈ ಸಂಗತಿ ಹಾಗಿರಲಿ! ಕಾವೇರಿಯಿಂದ ಗೋದಾವರಿಯ ವರೆಗೆ ಇದ್ದ ನಾಡು ಬರುಬರುತ್ತ ಕುಗ್ಗಿಹೋದುದಕ್ಕೆ ಕಾರಣಗಳೇನು? ಒಂದು ಕಾಲಕ್ಕೆ ಮಹಾರಾಷ್ಟ್ರ ಪ್ರದೇಶ ಕನ್ನಡವಾಗಿತ್ತಷ್ಟೆ? ಯಾವ ಕಾರಣದಿಂದ, ನಾವು ಅದನ್ನು ಕಳೆದುಕೊಂಡು ಭೌಗೋಳಿಕ ವ್ಯಾಪ್ತಿಯನ್ನು ಕುಗ್ಗಿಸಿಕೊಂಡೆವು.[೪] ಶಂಬಾ ಅವರು ಚಾರಿತ್ರಿಕವಾಗಿ ಕಂಡುಕೊಂಡ ಉತ್ತರವನ್ನು ವರ್ತಮಾನ ಕಾಲಕ್ಕೂ ಅನ್ವಯಿಸಿಕೊಳ್ಳಬೇಕಾಗುತ್ತದೆ. ಆರ್ಯೀಕರಣದ ಪ್ರಭಾವದಿಂದ ಕನ್ನಡ ಸಂಸ್ಕೃತಿ ತನ್ನ ಮೂಲ ಲಕ್ಷಣಗಳನ್ನು ಕಳೆದುಕೊಂಡಿತು. ವಾಸ್ತವವಾಗಿ, ಇದೇ ಕಣ್ಮರೆಯಾದ 'ಕನ್ನಡ ಸಂಸ್ಕೃತಿ'ಯ ಕತೆಯಾಗಿದೆ. ಆರ್ಯೀಕರಣದ ಪ್ರಭಾವದಲ್ಲಿ ಕಂದಮಿಳರು ತಮ್ಮ ಕೀಳರಿಮೆಯನ್ನು ಹೆಚ್ಚಿಸಿಕೊಂಡರು. 'ಆರ್ಯತನವನ್ನು ತಮ್ಮದಾಗಿಸಿಕೊಳ್ಳಬೇಕು' ಎಂಬ ಭಾವವೇ (ಆ ಭಾಗದಲ್ಲಿ) ಕನ್ನಡವು ವಿಸ್ಮೃತಿಗೊಳ್ಳಲು ಪರ್ಯಾಯವಾಗಿ ಕಾರಣವಾಯಿತು. ಈ ವಿಚಾರದ ಅಧ್ಯಯನ ಸದ್ಯ ಮುಂದುವರೆಸಬೇಕಾದ ಅಗತ್ಯವಿದೆ. ಅವರ ಮಾತನ್ನೇ ಬಳಸಿ ಹೇಳಬಹುದಾದರೆ:

> "ಕನ್ನಡ ಭಾಷೆಯಲ್ಲಿ ಅವೈದಿಕ ಮಾರ್ಗಾವಲಂಬಿಗಳ ಸಾಹಿತ್ಯವೇ ಹೆಚ್ಚು. ವೈದಿಕ ಧರ್ಮದ ಅಭಿವೃದ್ಧಿಯಾಗಬೇಕೆನ್ನುವವರೂ ಕನ್ನಡದ ಕಡೆಗೆ ಅಷ್ಟೊಂದು ಆತ್ಮೀಯ ಭಾವದಿಂದ ನೋಡದೆ ಇರುವುದು ಸ್ವಾಭಾವಿಕವಾಗಿದೆ. ಅಂತು ಕನ್ನಡಿಗರಲ್ಲಿ ತೆಲುಗು ಭಾಷೆಗೆ ಹೇಗೆ ಪ್ರವೇಶವು ದೊರೆತಿರಬೇಕೆಂಬುದು ಕೆಲಮಟ್ಟಿಗಾದರೂ ಸ್ಪಷ್ಟ ವಾಗುತ್ತಲಿದೆ. ಇಂತಹ ಏನೊಂದು ಕಾರಣದಿಂದಲೇ ಕನ್ನಡಿಗರು ತೆಲುಗನ್ನು ತಿರಸ್ಕಾರ ಬುದ್ಧಿಯಿಂದ ನೋಡದೇ 'ತೆಲುಗಿನ ತೇಟ' ಎಂಬ ಗಾದೆ ತಲೆದೋರಿರಬೇಕು. ತೆಲುಗಿಗಿಂತಲೂ ಮರಾಠಿಯ ಬೇರುಗಳು ಕನ್ನಡದಲ್ಲಿ, ಬಹಳ ಆಳದ ವರೆಗೆ ಹೋಗಿವೆ. ಕನ್ನಡಿಗರು ಮರಾಠಿಗೆ 'ಅರಿಯ' ಮಾತು ಅಥವಾ 'ಆರೇ' ಮಾತು ಎಂದು ಕರೆಯುವುದು ವಾಡಿಕೆ. ಅರಿಯ (ಆರೆ) ಎಂಬುದು ಆರ್ಯ ಶಬ್ದದ ತದ್ಭವ. ಮರಾಠಿಯು ಆರ್ಯರ ಮಾತು ಎಂದೆನ್ನುವುದರಿಂದಲೇ ಆ ಭಾಷೆಯ ವಿಷಯದಲ್ಲಿದ್ದ ಕನ್ನಡಿಗರ ಗೌರವವು ವ್ಯಕ್ತವಾಗುತ್ತದೆ.."[೫]

ಶಂಬಾ ಅವರು ಹೇಳುವಂತೆ : ಸಾಂಸ್ಕೃತಿಕ ಪ್ರಭಾವ ಹೊಯ್ಸಳರ ಕಾಲಕ್ಕೆ ಏರುವೆಯಾಗಿಯೇ ನಡೆಯಿತು. ಅವರ ಕಾಲಕ್ಕೆ ರಾಜಕೀಯ ಆಕ್ರಮಣಶೀಲತೆಯಿಂದಲೂ ತನ್ನ ಪ್ರಭಾವವನ್ನು ಬೀರಿತು. ದೇವಗಿರಿ ಯಾದವರ ಕಾಲದಲ್ಲಿ, ಹೊಯ್ಸಳರಿಗೂ ಯಾದವರಿಗೂ ಆದ ಕಾದಾಟವು ಮರಾಠಿ ಮತ್ತು ಕನ್ನಡ, ಇವೆರಡರ ವಿರೋಧ ಬಂದುದನ್ನು ಸೂಚಿಸುತ್ತದೆ. ಇದರಿಂದಾದ ಫಲಿತವೆಂದರೆ : ರಾಜಕೀಯವಾಗಿ ಆರ್ಯೀಕರಣದ ಶ್ರೇಷ್ಠತೆಯನ್ನು ಒಪ್ಪಿಕೊಂಡದ್ದು. ಹನ್ನೆರಡು - ಹದಿಮೂರನೆಯ ಶತಮಾನದ ಅನಂತರ, ಇದು ಏರಿಕೆಯ ಕ್ರಮವಾಗಿಯೇ ಬೆಳೆಯಿತು. ಇದು ಹೆಚ್ಚು ಕುತೂಹಲಕರವೂ ಸ್ವಾರಸ್ಯವೂ ಆದ ಸಂಗತಿ.

---

೪. ಇಂದೂ ಕೂಡ, ಹಲವು ಕಾರಣಗಳಿಂದ ಕ್ರಮಕ್ರಮೇಣ ಭೂಪ್ರದೇಶಗಳನ್ನು ಸಾಂಸ್ಕೃತಿಕವಾಗಿ ಕಳೆದುಕೊಳ್ಳುತ್ತಿದ್ದೇವೆ. ಕಾಸರಗೋಡು, ಬೆಳಗಾವಿ ಮುಂತಾದ ಗಡಿಪ್ರದೇಶಗಳ ಸಮಸ್ಯೆಗಳನ್ನು ಕೇವಲ ವರ್ತಮಾನ ರಾಜಕಾರಣದಿಂದ ನೋಡುವುದು ತರವಲ್ಲ. ಇದಕ್ಕೆ ಇನ್ನೂ ಕೆಲವು ಬೇರೆ ಬೇರೆ ಆಯಾಮಗಳಿವೆ. ಅವುಗಳನ್ನು ತಿಳಿಯುವ ಅಗತ್ಯ ಇದೆ.

೫. ಶಂಬಾ ಕೃತಿ ಸಂಪುಟ : ೨ ಕಂನಡ - ಕಂನುಡಿ ಪುಟ : ೧೮, ೧೯೬೬

೨. ಜಾನಾಂಗೀಯ ಅಧ್ಯನದ ನೆಲೆಗಳು : ಕನ್ನಡ ಸಂಸ್ಕೃತಿಯ ಭೌಗೋಳಿಕ ವ್ಯಾಪ್ತಿ ಕುಗ್ಗಿದುದನ್ನು ಗುರುತಿಸಿಕೊಳ್ಳುವ ತವಕ ಶಂಬಾ ಅವರ ಅಧ್ಯಯನದ ಹಿನ್ನೆಲೆಯಾಗಿತ್ತಷ್ಟೆ. ಅವರು ಕನ್ನಡಿಗರ ವಸತಿ, ಅವರ ಪ್ರಭಾವಗಳ ಹಿನ್ನೆಲೆಯ ಸ್ಥೂಲನೋಟದ ಮುಖಾಂತರ ಶೋಧನೆಯ ನೆಲೆಯನ್ನು ವಿಸ್ತರಿಸಿಕೊಂಡರು. ಆ ನೆಲೆಯನ್ನು 'ಜಾನಾಂಗೀಯ ಅಧ್ಯಯನದ ನೆಲೆಗಳು' ವಿಸ್ತರಿಸುತ್ತವೆ. ಮನುಷ್ಯನ ಚರಿತ್ರೆಯಲ್ಲಿ ಎರಡು ಮುಖ್ಯ ಕಾಲಘಟ್ಟಗಳಿವೆ. ಮೊದಲನೆಯದು, ಆಹಾರ ಸಂಚಯನದ ಕಾಲ; ಎರಡನೆಯದು ಆಹಾರೋತ್ಪಾದನೆಯ ಕಾಲ. ಸಂಚಯನದ ಕಾಲದಲ್ಲಿ ಮನುಷ್ಯ ಇನ್ನೂ ಕಾಡಾಡಿ; ಅಲೆದಾಟದಲ್ಲಿಯೇ ಬದುಕಿದ್ದವನು. ಆದರೆ, ಆಹಾರೋತ್ಪಾದನೆಯ ಕಾಲದಲ್ಲಿ ಮನುಷ್ಯ ನೆಲೆಯೂರಿ ನಾಗರೀಕತೆಗೆ ಪ್ರವೇಶಿಸುತ್ತಿದ್ದ ಕಾಲ. ಒಕ್ಕಲು ಹೂಡಿ, ಕುಲಗಳನ್ನು ಕಟ್ಟಿಕೊಂಡು ಊರನ್ನು ನಿರ್ಮಿಸಿ ನಾಡು ಮಾಡಿದ್ದೂ ಇಂತಹ ಸಂದರ್ಭಗಳಲ್ಲಿಯೇ. ಜಾನಾಂಗೀಯ ಅಧ್ಯಯನದ ನೆಲೆಗಳಿಗೆ ತುಸು ಪೂರ್ವಪೀಠಿಕೆಯಾಗಿ ಈ ಮಾತುಗಳನ್ನು ಹೇಳಬೇಕಾಯಿತು. ಶಂಬಾ ಅವರು ತಿಳಿಸುವಂತೆ :

> "ಜನಾಂಗವೆಂಬುದು ಜಾತಿಧರ್ಮಗಳಿಂದ ಭಿನ್ನವಾದುದು. ಜನಾಂಗವೆಂದರೆ ಸಾಮಾನ್ಯವಾಗಿ ತೀರ ಆರಂಭಕಾಲದಲ್ಲಿ ಒಟ್ಟಿಗೆ ಇದ್ದು ಬೆಳೆದ ಒಂದು ಮನುಷ್ಯ ಸಮಾಜ"[೬]

ಪ್ರಾಚೀನ ಇತಿಹಾಸದ ಶೋಧನೆಯಲ್ಲಿ; ಹಳ್ಳಿಗರ ಹಾಡು, ಕತೆ, ಪ್ರಾಚೀನ ವಸ್ತುಗಳು, ಪರಂಪರೆ ಮೊದಲಾದವುಗಳು ಬಹುಮುಖ್ಯವಾದ ಸಾಧನಗಳಷ್ಟೆ. ಇವುಗಳನ್ನು ತಿಳಿಯದ, ಯಾವುದೇ ಜನಾಂಗದ ಸಂಪೂರ್ಣ ಇತಿಹಾಸವನ್ನು ತಿಳಿಯುವುದು ಸರಿಯಲ್ಲ. ಇವುಗಳ ಬೆಳಕಿನಲ್ಲಿ ಶಂಬಾ ಜಾನಾಂಗೀಯ ಅಧ್ಯಯನವನ್ನು ನಡೆಸಿದರು. ಹಟ್ಟಿಕಾರ ಜನಾಂಗವೇ ಅಖಿಲ ಭಾರತೀಯ ಜನಾಂಗವೆಂಬುದನ್ನು ಅನೇಕ ದೃಷ್ಟಿಗಳಿಂದ ಶೋಧಿಸಿಕೊಂಡರು. ಯೂರೋಪೀಯ ಸಂಶೋಧಕರು ಹೇಳುವ 'ದ್ರಾವಿಡ ಜನಾಂಗ' ಎಂಬ ಮಾತನ್ನು 'ಹಟ್ಟಿಕಾರ' ಎಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಶಂಬಾ ಅವರು ಗುರುತಿಸಲು ಪ್ರಯತ್ನಿಸಿದರು. ದ್ರಾವಿಡ ಎಂಬ ಪರಿಕಲ್ಪನೆಯನ್ನು ಸಂಶೋಧನೆಯಲ್ಲಿ ಬಳಸುವುದು ಕಷ್ಟದ ಕೆಲಸ. ಅದನ್ನು ಬಳಸುವಾಗ ಇನ್ನಿತರ ಪೂರಕ ಪ್ರಮಾಣಗಳೊಂದಿಗೆ ನೆರವಾಗದಿರುವ ಅಪಾಯ ಯಾವತ್ತೂ ಇದ್ದೇ ಇರುತ್ತದೆ. ಹೀಗಾಗಿ, 'ಹಟ್ಟಿಕಾರ' ಎಂಬ ಪರಿಕಲ್ಪನೆ ಪ್ರಾಚೀನ ಸಂಸ್ಕೃತಿಯನ್ನು ನಮ್ಮ ಮುಂದೆ ತಂದು ನಿಲ್ಲಿಸಲು-ಸಮರ್ಥವೆಂಬ ವಿಚಾರವನ್ನು ಹಲವು ಬಗೆಗಳಿಂದ ಶೋಧಿಸುತ್ತ ಹೊರಟರು.[೭] ವೇದದಲ್ಲಿ ಬರುವ 'ಪತ್ತಿಃ' ಎಂಬ ಪದವು ಮೂಲತಃ 'ಪಟ್ಟಿ'ಯಿಂದ ಬಂದದ್ದು. ಪಟ್ಟಿ>ಹಟ್ಟಿ, ಪಟ್ಟಿಕಾರರು ಹಟ್ಟಿಕಾರರು ಈ ಸಾಮ್ಯತೆ ಆ ಜನಾಂಗದ ಒಕ್ಕಲುನೆಲೆಯನ್ನು ತಿಳಿಯಲು ನೆರವಾಗುವ ಪರಿಯನ್ನು ತಿಳಿಸಿಕೊಟ್ಟರು-ಮಾತ್ರವಲ್ಲ; ಆ ದಿಕ್ಕಿನಲ್ಲಿ ಶಂಬಾ ಮೊದಲಬಾರಿಗೆ ಮುನ್ನಡೆದರು.

ಹಟ್ಟಿಕಾರರಲ್ಲಿ ಕುರು (ಂವ), ತುರುವ ಮತ್ತು ಕುಡುವ ಎಂಬ ಮೂರು ಬಗೆಯವರು ಇದ್ದಾರೆ ಕುರುಂವರಲ್ಲಿ ಕುಂತಲ, ಕಳವರ್, ಇಡೈಯರ್, ಮಲವರ್ ಇವರೆಲ್ಲರೂ ಪರ್ಯಾಯ ಹೆಸರುಗಳಿಂದ ಇದ್ದಾರೆ. ಕ್ರಿ. ಪೂ. ೨೦೦೦ದ ಸುಮಾರಿಗೆ ಅಂಡೆ (ಹಂಡೆ) ಜಾಡ ಇವರುಗಳು ಅವರಲ್ಲಿ ಬೇರೆ ಬಗೆಯವರು, ಹಂಡೆ, ಜಾಡರೆಲ್ಲ ನರ್ಮದಾ-ಗೋದಾವರಿ ತೀರದಲ್ಲಿ ಬೀಡುಬಿಟ್ಟವರು. ತುರುವರು ತೆಲುಗು ಭಾಗದಲ್ಲಿ ಬೀಡುಬಿಟ್ಟು, ಮುಂದೆ

---

೧. ಶಂಬಾ ಕೃತಿಸಂಪುಟ : ೧ ಕಂನಾಡು-ಕರ್ನಾಟ ಪುಟ : ೨೬೯, ೧೯೯೯

೬. ಕರ್ನಾಟವೀರಕ್ಷತ್ರಿಯರು, ಧಾರವಾಡ ಪುಟ : ೮, (೧೯೩೬)

೭. "ದ್ರಾವಿಡ ಈ ಶಬ್ದದ ಅರ್ಥ ತಮಿಳು ಎಂದಷ್ಟೇ ಇದ್ದರೆ ಮತ್ತು ವೇದದಲ್ಲಿ ದ್ರಾವಿಡ ಶಬ್ದ ದೊರೆಯುವುದಿಲ್ಲವಾದ್ದರಿಂದ, ನಿಶ್ಚಿತ ಅರ್ಥವನ್ನು ವ್ಯಕ್ತಪಡಿಸುವ ದೃಷ್ಟಿಯಿಂದ ತಮಿಳು ಜನವಾಚಕವಾದ, ಸಂದಿಗ್ಧಾರ್ಥದ, ಅನುಚಿತವಾದ 'ದ್ರವಿಡ' ಶಬ್ದವನ್ನು ಅದಷ್ಟು ಬೇಗನೆ ಉಪಯೋಗದಿಂದ ತೆಗೆದುಹಾಕುವುದು ಅಗತ್ಯವಾಗಿದೆ" (ನೋಡಿ : ಪೂರ್ವೋಕ್ತ ಪುಟ:)

ಮಿಥಿಳೆ, ನೇಪಾಳ, ರಾಢಗಳ ಬ್ರಹ್ಮಕ್ಷತ್ರಿಯರಾಗಿ; 'ಕರ್ನಾಟ ಕ್ಷತ್ರಿಯ'ರೆನಿಸಿದ ನಾನ್ಯದೇವ, ಬಲ್ಲಾಳ ಸೇನಾದಿಗಳ ಪರಂಪರೆಗೆ ಸೇರುತ್ತಾರೆ. ಕುಡುವರಂತೂ 'ಆರೇ' ನಾಡಿನಲ್ಲಿ ಬೆಳೆದವರು. ಕುರುವ, ತುರುವ ಮತ್ತು ಕುಡುವ ಇವರನ್ನು ಕುರಿತು ವಿಶಿಷ್ಟವಾದ ಅಧ್ಯಯನಗಳು ನಡೆಯಬೇಕಿವೆ.[೮] ಶಂಬಾ ಅಧ್ಯಯನದ ನೆಲೆಯಲ್ಲಿ ಕೆಲವು ಸಂಭಾವ್ಯ ಊಹೆಗಳಿವೆ. ಅವುಗಳನ್ನು ಚರಿತ್ರೆಯ ಬೆಳಕಿನಲ್ಲಿಟ್ಟು ನೋಡಬೇಕು, ಇವು ಪ್ರತ್ಯಕ್ಷ ಶೋಧನೆಯಿಂದ ರುಜುವಾತಾಗಿಲ್ಲ. ಆದರು ಕೆಲವು ಅಂಶಗಳನ್ನು ದೃಢವಾಗಿ ಇಟ್ಟುಕೊಳ್ಳಬಹುದು. ಸ್ಥೂಲವಾಗಿ ಹಟ್ಟಿಕಾರರು (ನೆಯ್‌ಕಾರರು) ವೇದಪೂರ್ವ ಜನಾಂಗದವರೆಂಬುದನ್ನು ಶಂಬಾ ನಡೆಸಿರುವ ಅಧ್ಯಯನ ಮತ್ತು ಆಧಾರಗಳ ಮೇಲಿಂದ ಖಚಿತವಾಗಿ ಹೇಳಬಹುದಾಗಿದೆ. ಈ ಅಂಶಕ್ಕೆ ಸಾಕಷ್ಟು ಅಧ್ಯಯನಾತ್ಮಕ ನೆಲೆಗಳಿವೆ.

ಜನಾಂಗದ ಪೂರ್ವೋತ್ತರಗಳನ್ನು ಬಿಡಿಬಡಿಯಾಗಿಯೂ ಶೋಧಿಸುವ ಆವಶ್ಯಕತೆಯಿದೆ. ಈಗ ಸಿಗುವ ಬಿಡಿಬಿಡಿಯಾದ ವಿವರಗಳಿಂದ ಇಡಿಯಾದ ಆಶಯಗಳನ್ನು ಗ್ರಹಿಸಲು ಸಾಧ್ಯ. ಶಂಬಾ ಅವರ ಬರೆವಣಿಗೆಯ ಹಿಂದೆ ಇದು ಕೆಲಸ ಮಾಡಿದೆ. ಖಾನದೇಶ-ನಾಸಿಕಗಳ ಸುತ್ತಲಿನ ನಾಡಿನಲ್ಲಿ 'ಕಾನಡ'ರೆಂಬ ಹೆಸರಿನ ಹಟ್ಟಿಕಾರರು ಇದ್ದರೆಂದು ಹೇಳಿ ಇಂದಿಗೆ ಆರುವತ್ತು ವರ್ಷಗಳು ಮಿಕ್ಕಿದವು. ಈಗಲಾದರೂ ಪ್ರಾಚೀನ ಬುಡಕಟ್ಟು ಜನಾಂಗದ ಅನ್ವೇಷಣೆಯನ್ನು ಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನಿಸುವ ಅಗತ್ಯದ ಕಡೆ ಶಂಬಾ ಅವರ ಒತ್ತು ಇದೆ. ಅವರು ನಮ್ಮ ಗಮನವನ್ನು ಇತ್ತ ಸೆಳೆದಿದ್ದಾರೆ. ದಕ್ಷಿಣದವರಲ್ಲಿ 'ಕುರುಬ' ಎಂಬ ಶಬ್ದವು ಔತ್ತರೇಯರ ಉಚ್ಚಾರದಲ್ಲಿ ಕುರುಕ-ಕುರ್ಬ ಎಂದು ವ್ಯತ್ಯಾಸ ಹೊಂದಿದೆ ಎಂದು ವಾದಿಸುತ್ತಾರೆ. ಕುರ್ಬ ಜನಾಂಗವು ನೀಲಗಿರಿಯಿಂದ ಉತ್ತರಕ್ಕೆ ಗಂಗಾ ಶೋಣಭದ್ರಾ ನದಿಯ ವರೆಗೆ ಈ ಜನಾಂಗವು ವ್ಯಾಪಿಸಿಕೊಂಡಿದೆ. ಈ ಕೆಲವು ಸಂಗತಿಗಳನ್ನು ಶಂಬಾ ತೀರ್ಮಾನದ ಧಾಟಿಯಲ್ಲಿ ಹೇಳುವುದಿಲ್ಲ : ಬದಲಾಗಿ ಶೋಧನೆಯ ಧಾಟಿಯಲ್ಲಿ ಹೇಳುತ್ತಾರೆ. ಹಟ್ಟಿಕಾರರು, ಅನೇಕ ಉಪಪಂಗಡಗಳಾಗಿ ಕಾಲಕ್ರಮೇಣ ಒಬ್ಬರು ಮತ್ತೊಬ್ಬರಲ್ಲಿ, ಬೆರೆತುಹೋದರು. ಇದಕ್ಕೆ ಶಂಬಾ ಮೂರು ಕಾರಣಗಳನ್ನು ಕೊಡುತ್ತಾರೆ. ಮೊದಲನೆಯದು : ಪರ್ಯಟನ; ಎರಡನೆಯದು ; ಯುದ್ಧ ಮೂರನೆಯದು : ವ್ಯಾಪಾರ-ವ್ಯವಹಾರಗಳು, ವಂಶದ ಮಿಶ್ರಣ.

೩. ಭಾಷಿಕ ಅಂತಃಪ್ರಮಾಣದ ನೆಲೆಗಳು : ಕನ್ನಡ ಸಂಸ್ಕೃತಿಯ ನೆಲೆಯನ್ನು ಅನ್ವೇಷಿಸುವಲ್ಲಿ, ಈ ಮೊದಲೇ ಹೇಳಿದಂತೆ : ಭೌಗೋಳಿಕ ವ್ಯಾಪ್ತಿಯ ನೆಲೆಗಳು, ಜಾನಾಂಗೀಯ ಅಧ್ಯಯನದ ನೆಲೆಗಳು ಹೇಗೆ ನೆರವಾಗುವವೋ ಭಾಷಿಕ ಅಂತಃಪ್ರಮಾಣದ ನೆಲೆಗಳೂ ಸಹಾಯ ಮಾಡುತ್ತವೆ. ಊರು-ಪಟ್ಟಿ ಪಾಡಿ-ವಾಡಿ; ಹಟ್ಟಿ-ಹಾಟ; ಬಾಡ-ಬೀಡು ಎಂಬ ಸ್ಥಳಸೂಚಕ ಭಾಷಿಕ ಪ್ರಮಾಣಗಳನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಅದೇ ರೀತಿ, ಧನ-ದನ; ಖೊಬರೇ-ಕೊಬ್ಬರಿ; ಖಾಟೀಕ-ಕಟುಕ; ಧಾಳಿ-ದಾಳಿ; ಧನಗರ-ಇಂತಹ ಸ್ವೀಕರಣ ಭಾಷಿಕ ಪ್ರಮಾಣಗಳು; ಭಾಷೆಯಿಂದ ಭಾಷೆಗೆ ಆದ ಮುಖ್ಯ ಪರಿವರ್ತನೆಗಳನ್ನು ಹೇಳುತ್ತವೆ. ಜಾವಳಿ<ಜವಳಿ ಆಗುವಾಗ ಈ ಶಬ್ದ ಪ್ರತಿಮೆಯು ವ್ಯಾಪಾರದತ್ತ ಸಾಗಿದೆ. ವಿಶಿಷ್ಟ ನೆಲೆಯನ್ನು ಇದು ಸೂಚಿಸುತ್ತದೆ. ಉಣ್ಣೆಯನ್ನು ಬಳಸಿ ಬಟ್ಟೆ ಮಾಡಿದ್ದು; ಅದನ್ನು ಹೊತ್ತು ಮಾರುವ ಉದ್ಯೋಗಕ್ಕೆ ಇಳಿದದ್ದು 'ಜಾವಳಿ-ಜವಳಿ' ಶಬ್ದ ಪ್ರತಿಮೆಯಿಂದ ನಮ್ಮ ಗಮನಕ್ಕೆ ಬರುತ್ತದೆ. ಇಂದು ವ್ಯಾಪಾರಿಗಳನ್ನು 'ಜವಳಿ'ಗಳೆಂದೇ ಕರೆಯುತ್ತಾರೆ. ಇಂತಹ ಭಾಷಿಕ ವಿವರಗಳು, ಕನ್ನಡ ಜನರಾದ ಹಟ್ಟಿಕಾರರತ್ತ ನಮ್ಮನ್ನು ಕರೆದೊಯ್ಯುತ್ತವೆ.

ಮೇಲಿನ ಸಂಗತಿಗಳನ್ನು ಇನ್ನಷ್ಟು ವಿವರಿಸಬಹುದು. ದಕ್ಷಿಣ ಭಾರತದ ಜನವಸತಿಗಳು ಊರು, ಬೀಡು, ಬಾಡು, ಬಾಳು, ಪಾಡಿ, ಪಟ್ಟಿ ಎಂಬಂತಹ ಕಂದಮಿಳ ರೂಪಗಳಿಂದ ಕೂಡಿವೆ. ಕೂಡು>ಗೂಡು, ಮಾನವ ವ್ಯಕ್ತಿಯು ಇರುವ ಸ್ಥಳವನ್ನು ಸೂಚಿಸುವ ಪ್ರತಿಮಾತ್ಮಕ ಶಬ್ದ ತಾನೆ? (ಇದರಿಂದ ಗೂಡುಗುಡಿಯಾಗಿದೆ.) ಗೂಡಿನಲ್ಲಿ ವಾಸಿಸುವವರು ಕುಡಿಯರು; ಒಕ್ಕಲಿಗರು; ಇವರು ಆರ್ಯಪೂರ್ವ ಜನಾಂಗದವರು. ಇಲ್ಲಿಯೇ ಒಂದು ಅಂಶವನ್ನು ಗಮನಿಸಬೇಕು; ಭಾಷಿಕ ಪ್ರಮಾಣಗಳು ಎರಡು ಬಗೆಯವು. ಒಂದು ವಿಶಿಷ್ಟಸೂಚಕ ಪದ, ವ್ಯತ್ಯಾಸ ಹೊಂದದೆ ಇದ್ದರೂ ಆದರ ಅರ್ಥದ ನೆಲೆಯಲ್ಲಿ ಮಾತ್ರ ಗಮನಿಸುತ್ತಿರುತ್ತೇವೆ. ಇನ್ನು ಕೆಲವು

ಸಾಂಸ್ಕೃತಿಕ ವಿಶಿಷ್ಟ ಸೂಕ್ತ ಪದಗಳಿರುತ್ತವೆ. ಅವುಗಳು, ಹೊರರೂಪದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಹೊಂದಿದ್ದರೂ ಒಳರೂಪದಲ್ಲಿ ಯಾವುದೇ ಅರ್ಥವ್ಯತ್ಯಾಸ ಹೊಂದಿರುವುದಿಲ್ಲ. ಈಗಲೂ ಕುಟಿ-ಗುಡಿ, ಕೂಡು-ಗೂಡು ಇಂತಹ ಕಂದಮಿಳ ಭಾಷಾವರ್ಗ ಮೂಲದ 'ಕುಡು'ವಿನಿಂದ ಬೆಳೆದ ಗೊಂಡ (ಕೊಂಡ, ಕುಂಡ) ಕೊಂತ ಎಲ್ಲವೂ ಅಂಕುಡೊಂಕಾದ ತಗ್ಗುಮಿಟ್ಟೆಯ ಪ್ರದೇಶ ಸೂಚಕ ಪದಗಳೇ. ಕುಡು-ಕುಡ-ಕೂಟವು (ನೆನೆಪು ಮಾಡಿಕೊಳ್ಳಿ ತ್ರಿಕೂಟ ಪದವನ್ನು) ಪರ್ವತವಾಚಿಯೂ ಹೌದು; ಅಂಕುಡೊಂಕಾದ ತಗ್ಗುಮಿಟ್ಟೆಯ ಪರ್ವತ ಪ್ರದೇಶದಲ್ಲಿ ಮೊದಲು ವಾಸಿಸುತ್ತಿದ್ದ ಕಂನಾಡ ಮೂಲಿಗರನ್ನು ಅರಿಕೆಗೆ ತಂದುಕೊಡುವ ಪ್ರದೇಶವಾಚಿಯೂ ಆಗಿದೆ. ಈ ಬಗೆಯ ಅಂತಸ್ಥ ಭಾಷಿಕ ಪ್ರಮಾಣ ಪ್ರತಿಮೆಗಳು, ನಮ್ಮ ಎದುರಿಗೆ ಪ್ರಾಚೀನ ಸಂಸ್ಕೃತಿಯನ್ನು ತಂದು ನಿಲ್ಲಿಸುವ ಆಶಯ ಸೂಚಕ ಪ್ರತಿಮೆಗಳಾಗಿಲ್ಲವೆ?

ಪತ್ತಿಜನ-ಯದುವರ್ತುಸು-ಆರ್ಯೇತರರಿಗೆ ಸಂಸ್ಕೃತಕ್ಕಿಂತ ಭಿನ್ನವಾದ ಭಾಷೆಯೊಂದು ಇದ್ದಿರಬೇಕು. ಈ ಅಂಶದ ಬಗ್ಗೆ ಸಂದೇಹಕ್ಕೆ ಅವಕಾಶವಿಲ್ಲ. ವೇದಗಳಲ್ಲಿ ಕೋಲ ಮತ್ತು ಮುಂಡಾ ವರ್ಗದ ಶಬ್ದಗಳು ಇವೆಯೆಂದು ವಿದ್ವಾಂಸರು ಹೇಳುತ್ತ ಬಂದಿದ್ದಾರೆ. ಇವುಗಳ ಜೊತೆಗೆ ಇನ್ನು ಬೇರೆ ವಿಧದ ತಥಾಕಥಿತ ದ್ರಾವಿಡ ವರ್ಗದ ಶಬ್ದಗಳೂ ಅವುಗಳ ಜತೆ ಸೇರಿಕೊಂಡಿರುವ ಸಾಧ್ಯತೆಗಳಿವೆ. ಇವನ್ನು ಸದ್ಯ ಕಂದಮಿಳು ಎಂದು ಕರೆಯುವುದು ಸರಿಯೆಂಬ ತೀರ್ಮಾನಕ್ಕೆ ಶಂಬಾ ಬರುತ್ತಾರೆ. ಆರ್ಯಪೂರ್ವದ ಅನೇಕ ಪದಗಳು ಋಗ್ವೇದದೊಳಗೆ ಸೇರಿಕೊಂಡಿವೆ. ಶ್ಚಂದ್ರ, ಶಿಂವ ಇವು ಆರ್ಯೀಕರಣಕ್ಕೆ ಒಳಗಾದ ಪದಗಳಾಗಿವೆ. ಮೂಲತಃ ಇವು ಪತ್ತಿಜನರ ಭಾಷೆಯೊಳಗೆ ಪ್ರಚಲಿತವಿದ್ದವು. ಹೀಗೆ ಪ್ರಚಲಿತದಲ್ಲಿದ್ದುದಕ್ಕೆ ಆಚಾರಮೂಲದ ನೆಲೆಯಿಂದ ಶಂಬಾ ಅವರು ಪ್ರಮಾಣಗಳನ್ನೂ ಸಾಕ್ಷ್ಯಗಳನ್ನೂ ಒದಗಿಸುತ್ತಾರೆ. ಬೆಳ್ದಿಂಗಳಪ್ಪನ ಪೂಜೆ, ಹುಣ್ಣಿಮೆ ಉತ್ಸವ ಇಂದಿಗೂ ಮಹಾರಾಷ್ಟ್ರ ಮತ್ತು ಕನ್ನಡಿಗರ ವಿಶಿಷ್ಟ ಆಚಾರಣೆಯ ಹಬ್ಬಗಳಾಗಿವೆ. ಚಂದ್ರ ಶಬ್ದವು ಇಡೋ-ಜರ್ಮ್ಯಾನಿಕ್ ಭಾಷೆಯಲ್ಲಿ ಇಲ್ಲ; ಅಲ್ಲಿ ಸಿಗುವುದೂ ಇಲ್ಲ. ಶಿನ್, ಕೆನ್, ಚೆನ್ ಇಂತಹ ರೂಪಗಳಲ್ಲಿ ಈ ಅಂಶವು ಅಡಗಿಕೂತಿದೆ. ಪತ್ತಿಜನರ ಭಾಷಿಕ ಪ್ರಮಾಣವನ್ನು; ಆ ಜನರ ಒಟ್ಟು ನಡೆವಳಿ-ನುಡಿವಳಿಯನ್ನು ನಮ್ಮ ಗಮನಕ್ಕೆ ತರುತ್ತವೆ.

೪. ಆಚರಣ ಮೂಲದ ನೆಲೆಗಳು : ಇದನ್ನು ಇನ್ನೊಂದು ದಿಕ್ಕಿನಿಂದ ಮುಂದುವರೆಸಿ ಹೇಳಬಹುದಾದರೆ : ಆಚರಣ ಮೂಲದ ನೆಲೆಗಳಲ್ಲಿ 'ಕಂನಾಡ' ಸಂಸ್ಕೃತಿಯ ಹಿನ್ನೆಲೆಗಳನ್ನು, ಅದರ ವೈಶಿಷ್ಟ್ಯಗಳನ್ನು ಗುರುತಿಸಬಹುದು. ಶಂಬಾ ಗುರುತಿಸಿ ಹೇಳಿರುವಂತೆ :

> "ಮಹಾನವಮಿ ಮತ್ತು ದೀಪಾವಳಿಗಳು ನಮ್ಮಲ್ಲಿ ಬಹಳ ದೊಡ್ಡ ಹಬ್ಬ. 'ನಿನಗೆ ಮಾನಾಮಿಯಂ ದೀವಳಿಗೆಯಂ ಮಾಡೆನೆ' ಎಂಬ ಲೋಕೋಕ್ತಿಯು ಪಂಪನ ಭಾರತದಲ್ಲಿ ಬಂದಿದೆ. ಇವು ಸಾವಿರಾರು ವರ್ಷಗಳಿಂದಲೂ ನಡೆದು ಬಂದ ನಮ್ಮ ನಾಡಿನ ಹಬ್ಬ; ನಾಡಹಬ್ಬ. ಸುಮಾರಾಗಿ ಇವೆರಡೂ ಒಂದೇ ಹಬ್ಬ, ಒಂದಕ್ಕೊಂದು ಹೊಂದಿಕೊಡ ಹಬ್ಬ. ದೀಪಾವಳಿಗೆ ಜಾನಪದ ಪರಿಭಾಷೆಯಲ್ಲಿ ಹಟ್ಟಿಯ ಹಬ್ಬವೆಂದು ಹೆಸರು. ಹಟ್ಟಿಯೆಂದರೆ ದನಕರುಗಳ ಬೀಡು; ಹಟ್ಟಿಕಾರನೆಂದರೆ ಜೀವಧನಂಗಳ ಸಾಕಿ ಬದುಕುವವನು. ಆದುದರಿಂದ, ಹಟ್ಟಿಯ ಹಬ್ಬವೆಂದರೆ ಹಟ್ಟಿಕಾರರ ಹಬ್ಬ; ದನಕರುಗಳ ಹಬ್ಬ, ಹಟ್ಟಿಯ ಹಬ್ಬದ ಆರಂಭ ವಸು-ದ್ವಾದಶಿಯಿಂದ. ಆಶ್ವೀಜ ಬಹುಳ ದ್ವಾದಶಿಯಿಂದ ಗೋಪೂಜೆ, ಕಾರ್ತಿಕ ಶುದ್ಧ ಪ್ರತಿಪದೆಗೆ 'ಗೋಕ್ರೀಡನ'ದ ಹಬ್ಬವೆಂಬುದನ್ನು ಈಗ ಕಣ್ಣಾರೆ ಕಾಣುವುದು ಶಕ್ಯವಿಲ್ಲದಿದ್ದರೂ, ಇದನ್ನು ಪಂಚಾಂಗದಲ್ಲಿ ಯಾದರೂ ಬರೆಯುವರೆಂದು ಉಳಿದಿದೆ. ಈ ಬಗೆಯಾಗಿ ಹಟ್ಟಿಯ ಹಬ್ಬದಲ್ಲಿ ಗೋಪೂಜೆಯಷ್ಟೆ ಅಲ್ಲ; ಕುರಿಗಳ ಪೂಜೆಯೂ ನಡೆಯುವುದು. ರೈತರು ಎತ್ತುಗಳನ್ನು ಸಿಂಗರಿಸಿ ಊರಲ್ಲಿ ಮೆರೆಯಿಸುವುದುಂಟು. ಈ ಹಬ್ಬದಲ್ಲಿ ದನಕರುಗಳ ಪೂಜೆ

> ನಡೆಯದ ಮನೆಯೇ ದೊರೆಯದು. ಇದು ಮೊಟ್ಟ ಮೊದಲಿಗೆ ದನಗಾರರ ಹಬ್ಬ.
> 'ದನ'ವು ದನಗಾರರಿಂದ-ಮೇಟಿ-ಒಕ್ಕಲರ-ಕೈಯಿಂದ ಜಾರಿ ವರ್ತಕಕಲ್ಲಿ ಸೇರುತ್ತಲೇ
> 'ಹಟ್ಟಿ ಹಬ್ಬ'ವು ದೀವಳಿಗೆಯಾಯಿತು. ಅದಕ್ಕೆ ಈಗಿನ ಸ್ವರೂಪವೇ ಪ್ರಾಪ್ತವಾಯಿತು"[೯]

ನಮ್ಮ ಅನೇಕ ಆಚರಣೆಯ ಹಿಂದೆ ಸಂಸ್ಕೃತಿಯು ಉಳಿಸಿಕೊಂಡಿರುವ ಹಲವಾರು ಅವಶೇಷಗಳಿವೆ. ಮದುವೆಯ ದಿನ ಕರಿಉಣ್ಣೆಯ ದಾರವನ್ನು ಕಂಕಣವನ್ನಾಗಿ ಕಟ್ಟಿಕೊಳ್ಳುವುದು; ಹುಡುಗಿ ಮೈನೆರೆದಾಗ ಹಸಿರುಗುಡ್ಡು ಹಾಕುವುದು; ಈ ಬಗೆಯ ನೆಲೆಗಳುಂಟು. ಇವುಗಳೊಡನೆ ಶ್ರುತಿ-ಸ್ಮೃತಿಗಳಲ್ಲಿ ಉಕ್ತವಾದ ಆಚರಣಾ ಮೂಲದ ನೆಲೆಗಳನ್ನು ತಾಳೆಯಾಗಿ ನೋಡುವುದಕ್ಕೆ ಸಾಧ್ಯತೆಗಳಿವೆ. ದೇಸಿ ಸಂಸ್ಕೃತಿ ಮತ್ತು ವೈದಿಕ ಸಂಸ್ಕೃತಿಗಳ ತುಲನಾತ್ಮಕ ಶೋಧನ ಹೊಸ ಸಾಧ್ಯತೆಗಳಿಗೆ ನಮ್ಮನ್ನು ಕರೆದೊಯ್ಯಲು ಸಾಧ್ಯವುಂಟು. ಶಂಬಾ ಜೋಶಿ ಅವರ ಬರೆಹಗಳು ಇದನ್ನು ನಿಜಮಾಡಿವೆ.

೫. ದೈವತ ಕಥೆಗಳ ಸಾಂಕೇತಿಕ ಆಕೃತಿಗಳ ನೆಲೆಗಳು- ಶಂಬಾ ಅವರ ಸಾಂಸ್ಕೃತಿಕ ಚಿಂತನ ವಿಧಾನದ ಹಿಂದಿರುವ ಬಹುಮುಖ್ಯವಾದ ಅಧ್ಯಯನಗಳಲ್ಲಿ ಇದೂ ಒಂದು. ದೈವತಕತೆಗಳ ಅಧ್ಯಯನ ಹಾಗೂ ದೇವತಾ ಪ್ರತಿಮಾ ಭೂಮಿಕೆಯ ಅಧ್ಯಯನಗಳೆರಡನ್ನು ಒಟ್ಟಿಗೆ ಇಟ್ಟುಕೊಂಡು ನೋಡಲು ಸಾಧ್ಯವಿದೆ. ಮಾನವ ಸಂಸ್ಕೃತಿಯಲ್ಲಿ 'ದೇವತಾಪ್ರತಿಮೆ' ಅರಿಕೆಗೆ ಬರುವುದು ಒಂದು ವಿಶಿಷ್ಟ ಕಾಲಘಟ್ಟದಲ್ಲಿಯೇ. ಶಿವ-ರುದ್ರ ಮತ್ತು ಚಂದ್ರ ದೇವತಾ ಪ್ರತಿಮೆಗಳನ್ನು ಸಾಂಕೇತಿಕ ಅರ್ಥಗ್ರಹಣಕ್ಕೆ ಶಂಬಾ ಬಳಸಿಕೊಂಡರಷ್ಟೆ. ಅವರು ತಾತ್ತ್ವಿಕಭೂಮಿಕೆಯಿಂದ ದೈವತಕತೆಗಳ ಅನುಸಂಧಾನ ಮಾಡಿದರು. ರುದ್ರಾಧ್ಯಾಯದಲ್ಲಿ 'ಪತ್ತೀನಾಂ ಪತಯೇ ನಮಃ' ಎಂಬ ನುಡಿಯೊಂದು ಬರುತ್ತದೆ. 'ಪತ್ತಿಃ' ಅಂದರೆ name of the people ಎಂದು ಪ್ರಾಚೀನ-ಅರ್ವಾಚೀನ ಕೋಶಗಳು ಹೇಳುತ್ತವೆ.[೧೦] ರುದ್ರ-ಶಿವ ಅಭಿನ್ನರೇ? ಭಿನ್ನರೇ? ಎಂಬ ಪ್ರಶ್ನೆಯೊಳಕ್ಕೆ ನಾನು ಸೇರುವುದಿಲ್ಲ. ಆದರೆ, ರುದ್ರಾಧ್ಯಾಯದೊಳಗೆ 'ಪತ್ತಿ, ವ್ರಾತ್ಯ' ಎಂಬಂತಹ ವಿಶಿಷ್ಟ ಕಂದಮಿಳ ನುಡಿಗಳು ಸೇರಿಕೊಳ್ಳುವ ವಿಶೇಷ ಏನು? ಈ ಪ್ರಶ್ನೆ ತುಂಬ ಮಹತ್ವದ್ದು. ಶಂಬಾ ಜೋಶಿಯವರು ಈ ಕಡೆಗೆ ಗಮನಕೊಟ್ಟು ಅಧ್ಯಯನ ಮಾಡಿದರು.

ಈಗಲೂ ಕನ್ನಡ ಜನರಲ್ಲಿ ಮಲ್ಲಯ್ಯ ಇದ್ದಾನೆ; ಸಂಸ್ಕೃತದಲ್ಲಿ ಪರ್ವತೇಶ್ವರ ಇದ್ದಾನೆ. ಮರ್ಹಾಟಿಯಲ್ಲಿ ಖಂಡೇರಾಯ ಖಂಡೋಬಾ ಹಾಗೂ ಕುರ್ಬ ಜನಾಂಗದಲ್ಲಿ ಡೊಂಗರದೇವ ಇದ್ದಾನೆ. ಇವೆಲ್ಲ ಒಂದೇ ಮೂಲದ ದೇವಾತಾವಾಚಕ ಶಬ್ದ ಪ್ರತಿಮೆಗಳೇ ಆಗಿವೆ. ಆರ್ಯರು ತಮಗಿಂತ ಹಿಂದೆ ಇದ್ದ ಜನಾಂಗದವರಿಂದ ದೇವತಾ ಪ್ರತಿಮೆಗಳ ಆಶಯವನ್ನು ಪಡೆದುಕೊಂಡರು. ಶಂಬಾ ಅವರು ಸೂಚಿಸುವ ಪುರಾಣದ ಕತೆಯೊಂದರಿಂದ ಇನ್ನಷ್ಟು ಸ್ಪಷ್ಟಪಡಿಸಿಕೊಳ್ಳಬಹುದು. ಹಟಗಾರ- ಜಾಡರುಂಟಷ್ಟೆ ಇವರು ಇಂದಿನ ನೇಗಿಯವರು. ಇವರು ದೇವಾಂಗರೆಂಬ ಹೆಸರಿನಿಂದಲೇ ಸುಪ್ರಸಿದ್ಧರಿದ್ದಾರೆ. 'ದೇವಾಂಗ ಪುರಾಣ'ವೆಂಬ ಒಂದು ಗ್ರಂಥವೂ ಇದೆ. ಇದರ ಹೆಸರೇ ಪುರಾಣ. ಇದು ಪ್ರಾಚೀನವಲ್ಲ; ಹನ್ನೆರಡನೆಯ ಶತಮಾನಕ್ಕೆ ಸೇರಿರಬಹುದು. ಆದರೆ ಪುರಾಣದ,

---

೯ ಶಂಬಾ ಕೃತಿ ಸಂಪುಟ ೧ ಪೂರ್ವೋಕ್ತ ಪುಟ : ೨೭೧

೧೦. ರುದ್ರಾಧ್ಯಾಯದಲ್ಲಿ 'ರುದ್ರ'ನನ್ನು ಕುರಿತು ಅನೇಕ ಸ್ತೋತ್ರಗಳು ಬರುತ್ತವೆ. ಅಲ್ಲಿ ವಿಶೇಷ್ಯಗಳಿಗೆ ವಿಶೇಷಣ ಭಾವವು ಸೇರಿಕೊಂಡಿದೆ. ವೈದಿಕ ಮಂತ್ರಗಳಲ್ಲಿ ರುದ್ರಾಧ್ಯಾಯಕ್ಕೆ ಮಹತ್ವ ಉಂಟು. ಆಚರಣಾಮೂಲದಲ್ಲಿ ದೇವತೆಯನ್ನು ನೆನೆಸುವ ಪ್ರಾಚೀನ ಆಶಯವನ್ನು ಈ ಮಂತ್ರವು ಪ್ರತಿನಿಧಿಸುತ್ತದೆ. ಇಂದಿನ ಆಚರಣೆಯ ಹಿಂದೆ ಸಹಸ್ರಾರು ವರ್ಷಗಳ ಸ್ಮೃತಿ ಇರುತ್ತದೆ. ಮಾನವಜೀವನ ಎನ್ನುವುದು ಇಂತಹ ಸ್ಮೃತಿಗಳ ಗಂಟುತಾನೆ? ಶಂಬಾ ಅವರು 'ಪ್ರಾಚೀನ ಸ್ಮೃತಿ'ಗಳನ್ನು ಪ್ರಮುಖ ಆಕರಗಳಾಗಿ, ತಾತ್ವಿಕ ವಿಧಾನಗಳಾಗಿ ಬಳಸಿಕೊಳ್ಳುವುದು ಇದೇ ಕಾರಣಕ್ಕಾಗಿ. ಕನ್ನಡದ ಸಂದರ್ಭದಲ್ಲಿ ಈ ಬಗೆಯ ಅಧ್ಯಯನ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ.

ಅದ್ಯತನವನ್ನು ತನ್ನ ಗರ್ಭದಲ್ಲಿಟ್ಟುಕೊಂಡ ಹಾಗೆಯೇ, ಪೂರ್ವಪರಂಪರೆಯ ಚಹರೆಯನ್ನು ತನ್ನ ಒಡಲಲ್ಲಿಟ್ಟು ಕೊಂಡಿರುತ್ತದೆ. ಈ ಪುರಾಣದ ಪ್ರಕಾರ ದೇವಾಂಗದವರು 'ನಂದೀಧ್ವಜ'ರೆಂದು ಹೇಳಿದೆ. ನಂದೀಧ್ವಜ ಇರುವುದರಿಂದ, ಇವರು ಶಿವೋಪಾಸಕರು; ಅದರಂತೆಯೇ ಎತ್ತು- ಆಕಳುಗಳಿಂದ ಉಪಜೀವಿಸುವವರು ಎಂಬ ಅರ್ಥವೂ ಬರುತ್ತದೆ. ಇದೇ ಪುರಾಣದಲ್ಲಿ ಪಾರ್ವತಿಯು ದೇವಾಂಗನಿಗೆ ಕಂಕಣವನ್ನು ದಯಪಾಲಿಸಿದ ಸಂಗತಿಯಿದೆ. ಆ ಕಂಕಣ ಪಡೆದ ಮೇಲೆ ಅವನು 'ನೆಯ್ಗೆ' ವೃತ್ತಿಯನ್ನು ಕಂಡುಕೊಂಡನೆಂದೂ ಹೇಳುತ್ತದೆ. ಪುರಾಣದ ಈ ಕತೆಯ ಆಶಯದ ಪ್ರಕಾರ, ಪಟ-ಪಟಕಾರ (ವಸ್ತ್ರಗಳನ್ನು ಮಾಡುವವರು)ರ ಮೂಲಕ ಪ್ರಾಚೀನ ಜನಾಂಗದ ಜೀವನ ವಿಧಾನದ ಎಳೆಗಳನ್ನು ತಿಳಿಯಲು ಸಾಧ್ಯವಿದೆ. ಜಾಡರಲ್ಲೆ ಕರಿಜಾಡ-ಬಿಳಿಜಾಡ ರೆಂಬ ಪ್ರಭೇದಗಳಿರುವುದನ್ನು ಜಾನಪದ ಕಥೆ, ಐತಿಹ್ಯ, ಹಾಡುಗಳು ಎತ್ತಿ ಹೇಳುತ್ತವೆ.

೬. ಸ್ಥಳನಾಮಗಳು ಅಧ್ಯಯನ : ಸ್ಥಳನಾಮಶಾಸ್ತ್ರ ಈಗ ಸಾಕಷ್ಟು ಬೆಳೆದಿದೆ: ಅದೇ ಒಂದು ಪ್ರತ್ಯೇಕಶಾಸ್ತ್ರವೂ ಆಗಿದೆ. ಪ್ರತ್ಯೇಕಶಾಸ್ತ್ರದಿಂದ ಪಡೆಯುವ ಫಲಿತ ಒಂದಾದರೆ; ಹಲವಾರು ಶಾಸ್ತ್ರಗಳ ಇಡಿಯಾದ ಭೂಮಿಕೆಯಿಂದ ಬರುವ ಆಶಯವು ಇದಕ್ಕಿಂತ ಬೇರೆಯದೇ ಆಗಿರುತ್ತದೆ. ಸ್ಥಳನಾಮವನ್ನು ಒಂದು ಪ್ರತ್ಯೇಕ ಶಾಸ್ತ್ರವಾಗಿ ನೋಡುವುದೇನೊ ಸರಿ; ಅದರೊಂದಿಗೆ ಸಂಸ್ಕೃತಿಯ ಹಿನ್ನೆಲೆಯಲ್ಲೂ ನೋಡಬೇಕಾಗುತ್ತದೆ. ಶಂಬಾ ಅವರು ಸ್ಥಳನಾಮಗಳ ಅಧ್ಯಯನವನ್ನು ಸಂಸ್ಕೃತಿಯ ಹಿನ್ನೆಲೆಯಲ್ಲಿ ನೋಡುತ್ತಾರೆ; 'ಎಡೆಗಳು ಹೇಳುವ ಕಂನಾಡ ಕತೆ' ಎಂದು ಶಂಬಾ ಜೋಶಿಯವರು ಹೇಳಿದ್ದು ಇದಕ್ಕಾಗಿಯೇ. ಬಂಗಾಳದ ಕಡೆ ಇರುವ ಪಟ್ಟಿ, ಪಾಡಿ, ಪಾಟಕ, ಹಟ್ಟಿ, ಊರು, ಸಂತಿ, ಕಂಟೆ, ಗಡ್ಡಿ, ಪೊಲ ಎಂಬಿವು ಗ್ರಾಮನಾಮಗಳಾಗಿವೆ; ಇಲ್ಲವೇ ಕೆಲವು ಅಂತ್ಯ ಪದಪ್ರತ್ಯಯಗಳಾಗಿವೆ. ಇಂತಹ ಗ್ರಾಮನಾಮಗಳಿಗೆ ಕಾರಣರಾದವರು ಪಟ್ಟಿ (ಪತ್ರಿ)ಗಳು. ಗೋವಳರಿಂದಲೇ ಆ ನಾಡಿಗೆ 'ಗೌಡದೇಶ' ಎಂಬ ಹೆಸರು ಬಂದಿರಬೇಕು. ಕರ್ನಾಟಕದಲ್ಲಿ ಅನೇಕ ಊರಿನ ಹೆಸರುಗಳ ಆದಿಪದವು ಪ್ರತ್ಯಯದಲ್ಲೊ, ಅಂತ್ಯ ಪದಪ್ರತ್ಯಯಗಳಲ್ಲೊ ಕೋಲ ಮತ್ತು ಮುಂಡ ಎಂಬ ಹೆಸರುಗಳು ವಿಪುಲವಾಗಿ ಬಂದಿವೆ. ಕನ್ನಡ ಸಂಸ್ಕೃತಿಯ ಪ್ರಾಚೀನ ಜನಾಂಗದವರಲ್ಲಿ ಕೋಲರು ಮತ್ತು ಮುಂಡರು ಕೂಡ ಇದ್ದಾರಷ್ಟೆ. ಹೀಗಾಗಿ, ಈ ಜನ ಕಂನಾಡಿನ ಬೇರೆ ಬೇರೆ ಭಾಗಗಳಲ್ಲಿ ವಾಸಿಸುತ್ತಿರಬಹುದೆಂಬ ಅನುಮಾನವನ್ನು ಶಂಬಾ ವ್ಯಕ್ತಪಡಿಸುತ್ತಾರೆ. ಒಂದು ಹೆಸರು, ಪರಂಪರೆಯಿಂದ ಬಾಯ್ನುಡಿಯಲ್ಲಿ ಬಂದು ಸ್ಥಿರೀಕರಿಸಬಹುದು; ಕೆಲವು ಬದಲಾವಣೆಗೊಳಪಟ್ಟಿರ ಬಹುದು. ಆದರೆ, ಸ್ಥೂಲವಾಗಿ ಎಡೆಗಳ ಮುಖಾಂತರ ಕಂನಾಡಿನ ಬೇರನ್ನು ತಡಕುವ ರೀತಿ ಮಾತ್ರ ಹೊಸ ಬಗೆಯದೇ ಆಗಿದೆ.[೧೧]

ಒಟ್ಟಾರೆ, ಶಂಬಾ ಅವರು, ಕನ್ನಡ ಸಂಸ್ಕೃತಿಯನ್ನು ಕುರಿತು ಆಲೋಚಿಸುವ ಹಾಗೂ ಶೋಧಿಸುವ ನೆಲೆಗಳು ಮಹತ್ವದವುಗಳಾಗಿವೆ. ಸ್ಥೂಲವಾಗಿ, ನರ್ಮದಾ-ಗೋದಾವರಿ ನಡುವಣ ಭಾಗದಲ್ಲಿ ಕನ್ನಡ ಮಾತನಾಡುವ ಜನ ಇದ್ದರು. ಅವರ ಜೀವನ ರೀತಿ, ಆರಾಧನೆ, ಆಚರಣೆಗಳು ವಿಶಿಷ್ಟವಾಗಿದ್ದವು. ಇವುಗಳನ್ನು ಗ್ರಹಿಸಲು ಇಂದಿನ ಬುಡಕಟ್ಟುಗಳ ಮತ್ತು ಆಚರಣೆಗಳ ಅಧ್ಯಯನವು ಹೆಚ್ಚು ಉಪಯೋಗವಾಗುತ್ತದೆ. ಪತ್ತಿಜನ, ಪಟ್ಟಿ ಜನ, ಕುರುಬ, ಧನಗಾರ, ಜಾಡ, ತುರುವ, ಕುರುಂಬ ಅಂಡೆಕುರುಬ ಈ ಬಗೆಯ ಜನಾಂಗದ ಮೂಲಾಧ್ಯಯನ ಆಗಬೇಕಾಗಿದೆ; ಗ್ರಾಮೀಣ ದೇವತೆಗಳ ಅಧ್ಯಯನವೂ ಇದರೊಡನೆ ಸೇರಿಕೊಳ್ಳುತ್ತದೆ. ಶಿವ-ರುದ್ರ, ಚಂದ್ರರಂತಹ ಪ್ರಾಚೀನ ದೇವತೆಗಳು ವೈದಿಕ ದೇವತೆಗಳಾಗಿ ಮಾರ್ಪಟ್ಟಿದ್ದು ಸಾಂಸ್ಕೃತಿಕ ಹಾಗೂ ತುಲಾನಾತ್ಮಕ ಅಧ್ಯಯನವನ್ನು ಬಯಸಿದರೆ; ಮಲ್ಲಯ್ಯ, ಪರ್ವತೇಶ್ವರ, ಗೊಂಡರದೇವ, ಪಟ್ಟಿಮಾರಮ್ಮ, ಮಾಳವ್ವೆ ಈ ಬಗೆಯ ಗ್ರಾಮದೇವತೆಗಳ

---

೧೧. ಎಡೆಗಳ ಹೆಸರಿನ ಹಿನ್ನೆಲೆಯಲ್ಲಿ ನಾಡಿಗರ ರೂಢಿ, ಸಂಪ್ರದಾಯ ಮತ್ತು ಪೂರ್ವಪರಂಪರೆಗಳನ್ನು ಮಾನವ ಸಮಾಜ ವಿಕಾಸಶಾಸ್ತ್ರದ ಬೆಂಬಲದಿಂದ ಹೊಂದಿಸಿ ಹೇಳುವುದೇ ಈ ಲೇಖನದ ಗುರಿಯಾಗಿದೆ" (ನೋಡಿ : ಎಡೆಗಳು ಹೇಳುವ ಕಂನಾಡಕತೆ, ಮುನ್ನುಡಿ ಪುಟ : ೩, ೧೯೪೬)

ಅಧ್ಯಯನವು ತುಲಾನಾತ್ಮಕ ಸಾಂಸ್ಕೃತಿಕ ಅಧ್ಯಯನವನ್ನು ಬಯಸುತ್ತದೆ. ಪ್ರತ್ಯೇಕವಾಗಿ ನಡೆಸುವ ಅಧ್ಯಯನ ಎಷ್ಟು ಉಪಯೋಗವೋ ತುಲನಾತ್ಮಕವಾಗಿ ನಡೆಸುವ ಅಧ್ಯನವೂ ಅಷ್ಟೇ ಉಪಯೋಗ ವಾಗುತ್ತದೆ. ಇವು ಹೊಸ ಹೊಳಹುಗಳಿಗೆ ದಾರಿ ಮಾಡಿಕೊಡುತ್ತವೆ. ಶಂಬಾ ಜೋಶಿ ಅವರು, ಈ ಬಗೆಯ ತುಲನಾತ್ಮಕ ಅಧ್ಯಯನಗಳಿಗೆ ದಾರಿಯನ್ನು ನಿರ್ಮಿಸಿಕೊಟ್ಟಿದ್ದಾರೆ. ನಮ್ಮ ಸಾಂಸ್ಕೃತಿಕ ಅಧ್ಯಯನದ ನಲೆಗಳನ್ನು ವಿಸ್ತರಿಸಿದ್ದಾರೆ.

ಕಂನಾಡು-ಕರ್ನಾಟ ಎಂಬ ಸಂಪುಟದಲ್ಲಿ ಸೇರ್ಪಡೆಗೊಂಡಿರುವ ಶಂಬಾಕೃತಿಗಳು ಒಂದೆಡೆ ಕಂನಡ ಸಂಸ್ಕೃತಿಯ ಬೇರುಗಳನ್ನು ಹುಡುಕುತ್ತಲೇ ಇಂದಿನ ವರ್ತಮಾನ ಸಂಗತಿಗಳ 'ನಡೆ'ಯನ್ನು ತಿಳಿಯುವ ಯತ್ನ ಮಾಡುತ್ತವೆ. ಈ ಹೊತ್ತಿನ ಅಧ್ಯಯನಕ್ಕೆ ಇದು ಹೊಸ 'ಅರ್ಥನೆಲೆ'ಗಳ ಸಾಧ್ಯತೆ ಎಂಬುದನ್ನು ನಾವು ಮೊದಲು ತಿಳಿಯಬೇಕಾಗಿದೆ. ಒಂದು ಹೊಸಜ್ಞಾನ ಎಂಬುದು ವೈಯಕ್ತಿಕ ಅರಿವಿನ ವಿಸ್ತರಣೆ ಮಾತ್ರವಲ್ಲ; ಸಮಸ್ತರ ಅರಿವಿನ ವಿಸ್ತರಣೆ ಕೂಡಾ. ಒಂದು 'ಜ್ಞಾನ' ಕ್ಷೇತ್ರದ ಮಹತ್ವ ಇರುವುದೇ ಇಂಥ ನೆಲೆಗಳಲ್ಲಿ. ಶಂಬಾ ಅವರು ಈ ಶತಮಾನದ ಸಂಶೋಧಕರು, ಸಂಸ್ಕೃತಿಯ ಅಧ್ಯನಕಾರರು. ಈ ಮಾತುಗಳನ್ನು ನಿರ್ದಿಷ್ಟವಾಗಿ ಎಲ್ಲರಿಗೂ ಬಳಸಲು ಸಾಧ್ಯವಿಲ್ಲ. ಅವರ ಕೃತಿಗಳು ಇದನ್ನು ಸಾಧ್ಯವಾಗಿಸಿವೆ. ಪ್ರಾಮುಖ್ಯವಾಗಿ ಕಂನಾಡು-ಕರ್ನಾಟ ಎಂಬುದು ಭೌಗೋಳಿಕ ನಿರ್ದಿಷ್ಟತೆ ಮಾತ್ರವಲ್ಲ, ಅಂತಿಮವಾಗಿ ಮನುಷ್ಯ ಮಾನವ ಜನಾಂಗದ ಮಾನಸ ನೆಲೆಗಳೂ ಕೂಡ ಆಗಿವೆ. ಈ ಅಂಶವನ್ನು ಗಮನದಲ್ಲಿರಿಸಿಕೊಂಡು-ಖ್ಯಾತ ಮಾನವಶಾಸ್ತ್ರಜ್ಞ ಎ. ಎಲ್. ಕ್ರೋಬರ್ 'ಕಾನ್‌ಫಿಗ ರೇಷನ್ ಆಫ್ ಕಲ್ಚರಲ್ ಗ್ರೋತ್' ಎಂದು ಹೇಳಿದ್ದು. ಇದು ಒಂದು ಹಂತದಲ್ಲಿ ಸಾಮುದಾಯಿಕ ಸಂಕೇತ ಪ್ರತಿಮೆ, ಇನ್ನೊಂದು ಹಂತದಲ್ಲಿ ನಾವು ಆಚರಿಸಬೇಕಾದ, ತಿಳಿಯಬೇಕಾದ ಪ್ರತಿಮಾಸಂಕೇತವೂ ಹೌದು. ಈ ಅಂಶವನ್ನು ಶಂಬಾ ಅವರ ಪ್ರಾರಂಭಿಕಕೃತಿಗಳು ರುಜುವಾತು ಮಾಡಿ ತೋರಿಸುತ್ತವೆ.


ಮಲ್ಲೇಪುರಂ ಜಿ. ವೆಂಕಟೇಶ

ಪರಿವಿಡಿ

ಕಣ್ಮರೆಯಾದ ಕನ್ನಡ

ಅಥವಾ

ಕನ್ನಡರ ಮೂಲಸ್ಥಾನ


ಮಥುರಾ
ಗಂಗಾ
ಯಮುನಾ
ಅನಹಿಲವಾಡ
ಧಾರಾ
ವಿಂಧ್ಯ
ನರ್ಮದಾ
ತಾಪಿ
ನಾಸಿಕ
ಕಟಕ
ಕರ್ಹಾಟ
ಕಲಬುರ್ಗಿ
ಕೃಷ್ಣಾ
ವೆಂಗಿಮಂಡಲ
ಬಾದಾಮಿ
ತುಂಗಭದ್ರಾ
ಗೋಕರ್ಣ
ಮಂಗಳೂರು
ಮೈಸೂರು
ತಲಚೇರಿ
ಕಾವೇರಿ

ಅರಿಕೆ

ಏಳುಸುತ್ತಿನ ಹೊನ್ನಕೋಟೆಯಲಿ ಹುದುಗಿರುವ
ನಲ್ದಾಯೆ ತೆರೆತೆರೆದು ನಿನ್ನ ನಿಲುವನ್ನು ತೋರು

-ಈಶೋಪನಿಷತ್ತು

ಒಂದನ್ನು ಹುಡುಕುವಾಗ ಇನ್ನೂ ಒಂದು ಕೈಗೆ ಬಂದಂತಾಗಿದೆ. ಇಂತಹ ಅಭೂತಪೂರ್ವ ವೈಭವಶಾಲಿಯಾದ ಕರ್ಣಾಟಕದ ಅವನತಿಯ ಕಾರಣಗಳಾವುವು, ಎಂಬುದನ್ನು ಅರಿತುಕೊಳ್ಳಲು ಮೊದಲು ನಾನು ಹೊರಟುದು; ಆದರೆ, ಅಲ್ಲಿ ಕಣ್ಣಿಗೆ ಬಿದ್ದುದು 'ಕಣ್ಮರೆಯಾದ ಕನ್ನಡ.' ಸಂಶೋಧಕವೆಂದು ನಾನಿದನ್ನು ಬರೆಯಲು ಕೈಕೊಂಡವನಲ್ಲ. ಏಕೆಂದರೆ ನನಗೆ ಆ ಅಧಿಕಾರವಿಲ್ಲ! ಅಲ್ಲದೆ, ಇತಿಹಾಸ ಸಂಶೋಧನ ನನ್ನ ಕ್ಷೇತ್ರವೂ ಅಲ್ಲ. ನನಗಿದನ್ನು ಬರೆಯುವುದರಲ್ಲಿ ಮನುಷ್ಯನ ಸ್ವಭಾವವೆ ಮುದಲ್ಲು (ಮೂಲಧನ). ಇತಿಹಾಸ ಮತ್ತು ಭಾಷಾಶಾಸ್ತ್ರ (Philolagy) ಗಳ ಬೆಳಕಿನಲ್ಲಿ ಮನುಷ್ಯ ಸ್ವಭಾವದ ಸುಳಿವು ಹಿಡಿದು ಮುಂದೆ ಸಾಗಿದ್ದೇನೆ.

ಇದರಲ್ಲಿ ಬಂದಿರುವ ಹಲವು ವಿಚಾರಗಳಲ್ಲಿ ಕೆಲವರಿಗೆ ಕೆಲಕೆಲವು ಸಮ್ಮತವಿರಲಿಕ್ಕಿಲ್ಲ. ಅದು ಏನೇ ಇರಲಿ; 'ಕನ್ನಡದ ಮೂಲಸ್ಥಾನವು ಆವುದು' ಎಂಬ ಮುಖ್ಯ ವಿಷಯವನ್ನು ಕುರಿತು ಮಾತ್ರ ಎಲ್ಲ ಬಲ್ಲಿದರ ಅಭಿಪ್ರಾಯಗಳನ್ನೂ ತಿಳಿದುಕೊಳ್ಳಲು ಉತ್ಸುಕನಾಗಿದ್ದೇನೆ. ಇದರೊಳಗಿನ ಯಾವ ಮಾತನ್ನೂ ವಜ್ರಲಿಖಿತವೆಂದು ನಾನು ಭಾವಿಸಿಲ್ಲ. ಪ್ರತಿಯೊಂದು ಸಂಗತಿಯನ್ನು ಎರಡು ಮೂರು ಬಗೆಗಳಿಂದ ವಿಮರ್ಶಿಸಿ ವಿಚಾರಿಸಿ ಹಾಗೆ ಸರಿಹೊಂದಿದುದನ್ನು, ಒರೆಗೆ ಇಳಿದುದನ್ನು ಮಾತ್ರ ಇಲ್ಲಿ ಬರೆಯಲು ಯತ್ನಿಸಿದ್ದೇನೆ. ಕನ್ನಡರಲ್ಲದವರಿಗೆ ಈ ಪ್ರಬಂಧದೊಳಗಿನ ಕೆಲವು ಮಾತುಗಳು ಸರಿದೋರಲಿಕ್ಕಿಲ್ಲ ಕೆಲವು ಕಠೋರವಾದುವೆಂದು ಎನಿಸಬಹುದು. ಆದರೆ, ಅಂತಹ ಕಡೆಗಳಲ್ಲಿ ಕೆಲರಿಗೆ ಅಪ್ರಿಯವಿದ್ದರೂ ಸತ್ಯವಿದ್ದುದನ್ನು ಆಡದೆ ಇರುವುದು ಅಪರಾಧವೆನಿಸಿ ಅದನ್ನು ಬರೆಯದೆ ಇರುವುದಾಗಲಿಲ್ಲ. 'ಮೂಲ ಕರ್ಣಾಟವು ಎಲ್ಲಿರಬಹುದು' ಎಂಬ ಮಾತಿನ ಕೊನೆಯ ನಿರ್ಣಯವು ಈ ಪ್ರಬಂಧದಿಂದ ಆಗಿಯೆ ಬಿಡದಿದ್ದರೂ ಈ ಲೇಖನವು ಹಲವು ವಿದ್ವಾಂಸರನ್ನು ಆ ವಿಚಾರಕ್ಕೆ ಪ್ರವೃತ್ತರನ್ನಾಗಿ ಮಾಡಿದರೂ ಎಷ್ಟೋ ಕೆಲಸವಾಯಿತೆಂದು ಎಣಿಸುತ್ತೇನೆ. ಇದನ್ನು ಬರೆಯುವುದರ ಮುಖ್ಯೋದ್ದೇಶವು ಯಾವ ನನ್ನದೊಂದು ಸಿದ್ಧಾಂತ-ಸ್ಥಾಪನೆಯಲ್ಲ. ಕೇವಲ ಸತ್ಯ ಸಂಶೋಧನೆ.

ನಾನು ಇದರಲ್ಲಿ ವಿವರಿಸಿರುವಂತೆ ಕರ್ಣಾಟದ ಮೂಲಸ್ಥಾನದ ನಿರ್ಣಯವು ಒಮ್ಮೆ ಆಗಿಬಿಟ್ಟರೆ ದಕ್ಷಿಣದ ಇತಿಹಾಸ ಪ್ರಪಂಚದಲ್ಲಿ (History of Deccan) ಇನ್ನೂ ಸಮರ್ಪಕವಾಗಿ ಸಮಾಧಾನಕರವಾಗಿ ಉತ್ತರಗಳು ದೊರೆಯದೆ ಉಳಿದಿರುವ ಹಲಕೆಲವು ಒಗಟುಗಳಿಗೆ ಬಹಳ ಸಹಜ ಮನೋಹರವಾದ ರೀತಿಯಲ್ಲಿ ಅರ್ಥವು ಹತ್ತುವುದೆಂದು ನನ್ನ ಅನುಭವ.

'ಕನ್ನಾಡು', 'ಕನ್ನಾಟ'ವೆಂಬುದು ಎಂದಾದರೂ ಎಲ್ಲಿಯಾದರೂ ಪ್ರತ್ಯೇಕ ಪ್ರಾಂತವಾಗಿದ್ದಿತೆ, ಇಲ್ಲವೆ? ಮಹಾರಾಷ್ಟ್ರ ಶಬ್ದವು ಫಕ್ಕನೆ ಹೇಗೆ ಮತ್ತು ಏಕೆ ತಲೆಯೆತ್ತಿತು? ಮರ್‍ಹಾಟಕಕ್ಕೂ ಕನ್ನಾಟಕ್ಕೂ ಏನಾದರೂ ಸಂಬಂಧವು ಇದ್ದಿತೆ, ಇಲ್ಲವೆ? ಮರ್‍ಹಾಟದಂತಹ ಆ ದೂರಿನ ನಾಡಿನ ಬ್ರಾಹ್ಮಣರ ಮನೆಗಳಲ್ಲಿಯೂ 'ಗಡಿಗೆ ನೀರು,' 'ಕೈವಾರ.' 'ಗುಡಿತೋರಣ', 'ದಂಡೆ ಬಾಸಿಂಗ' ಈ ಬಗೆಯ ಅಚ್ಚಗನ್ನಡದ ವಾಕ್ಪ್ರಚಾರಗಳೂ ರೀತಿಗಳೂ ಹೇಗೆ ಸೇರಿದುವು? ಮಿಥಿಲೆ, ನೇಪಾಳ, ಬಂಗಾಳಗಳಲ್ಲಿ ರಾಜ್ಯ ಸ್ಥಾಪಿಸಿದ 'ಕರ್ಣಾಟ ಕ್ಷತ್ರಿಯರೂ' ಅವರ ಕೆಚ್ಚೆದೆಯ ದಂಡಾಳುಗಳೂ ಯಾರು? ಎಲ್ಲಿಯವರು? ದಕ್ಷಿಣಾಪಥದಲ್ಲೆಲ್ಲ ಕರ್ಣಾಟ-ವಿಜಯ ಧ್ವಜವನ್ನು ಮೆರೆಯಿಸಿ ಉತ್ತರದವರಿಗೂ ತಮ್ಮ ಶೌರ್ಯ, ಧೈರ್ಯದ ಮಾದರಿಯನ್ನು ತೋರಿಸಿದ ಕನ್ನಡ ನಾಡಿನ ಆ ಗಂಡು ಕುಲವು (Martial Race) ಆವುದು? ಅದು ಈಗ ಆವ ಜನಾಂಗ? ಆಂಧ್ರ ಮತ್ತು ಕರ್ಣಾಟಗಳ ಸಂಬಂಧಗಳೇನು? ದ್ರಾವಿಡ ಶಬ್ದದ ವ್ಯಾಪ್ತಿ, ಅತಿ-ವ್ಯಾಪ್ತಿಗಳಿಗೆ ಏನಾದರೂ ಎಲ್ಲೆ ಕಟ್ಟುಗಳುಂಟೆ? ಈಗಿನ ಕರ್ಣಾಟದ ಜನಾಂಗಗಳಲ್ಲಿ ಪರಸ್ಪರರೊಳಗೆ ಆತ್ಮೀಯ ಭಾವವು ಉಂಟಾಗುವಂತಹ, ತಾವೆಲ್ಲ ಒಂದು ನಾಡಿನ ಒಂದೇ ರಾಷ್ಟ್ರಪುರುಷನ ಅವಿಭಾಜ್ಯ ಅವಯವಗಳು ಎಂಬ ನೆರನಂಬುಗೆಯುಂಟಾಗುವಂತಹ ಸಂಬಂಧಗಳು, ಋಣಾನುಬಂಧಗಳು, ಐತಿಹಾಸಿಕ ಪರಂಪರೆಗಳು ಏನಾದರೂ ಇವೆಯೆ? ಇಲ್ಲವೆ ಸುಮ್ಮನೆ ಕನ್ನಡ ನಾಡು ಒಂದು, ನಾವೆಲ್ಲ ಒಂದು ಎಂದು ಹೇಳುವುದೆ? ಇಂತಿವೆಲ್ಲ ಪ್ರಶ್ನೆಗಳಿಗೆ ಎದೆಗೂ ತಲೆಗೂ ಕೂಡಿಯೆ ಒಪ್ಪಿಗೆಯಾಗುವಂತಹ ಸಯುಕ್ತಿಕವಾದ ಸಾಧಾರವಾದ ಉತ್ತರಗಳಿಗಾಗಿ ಜೀವವು ಬಹುದಿನಗಳಿಂದಲೂ ಹಸಿದಿತ್ತು, ನೀರಡಿಸಿತ್ತು. ಕನ್ನಡರ ಮೂಲಸ್ಥಾನದ ದರ್ಶನದಿಂದ ನನ್ನ ಈ ಹಸಿವು ನೀರಡಿಕೆಗಳು ಹಿಂಗಿದುವು. ಈ ಸಮಾಧಾನದ ಸ್ವಲ್ಪಾಂಶವಾದರೂ ಓದುಗರಿಗೆ ದೊರೆತರೆ ಅದರಲ್ಲಿ ನನಗೂ ಸಂತೋಷ

ನನ್ನ ಕಿರಿಯ ತಿಳಿವಿನಿಂದ, ಅಥವಾ ಅರಿತುದನ್ನು ಅಷ್ಟು ಸರಿಯಾಗಿ ಅಡಿತೋರಿಸುವ ಹದವನ್ನು ಅರಿಯದವನಾದ್ದರಿಂದ ಈ ಪುಸ್ತಕದಲ್ಲಿ ಅಲ್ಲಿ, ಇಲ್ಲಿ ಕೆಲ ತಪ್ಪುತಡೆಗಳು ಉಳಿದಿರಲಿಕ್ಕೆ ಸಾಕು. ಅಂತಹವುಗಳನ್ನು ತಿದ್ದಿಕೊಳ್ಳಲು ನಾನು ಯಾವಾಗಲೂ ಸಿದ್ಧ. ಬಲ್ಲಿದರು ಪರಾಮರ್ಶಿಸಿ ಅವನ್ನು ತಿಳಿಸಬೇಕಾಗಿ ಬಿನ್ನಹ. ಗ್ರಂಥ ಸಂಗ್ರಹದ ಅನುಕೂಲತೆಗಳು ಇಲ್ಲದ್ದರಿಂದಲೂ ಒಮ್ಮೆ ಓದಿದ ಪುಸ್ತಕವನ್ನು ಇನ್ನೊಮ್ಮೆ ದೊರಕಿಸಬೇಕೆಂದರೆ ಅದು ಸಹ ಅಸಾಧ್ಯವಾದುದರಿಂದಲೂ ನನಗೆ ತೃಪ್ತಿಕರವಾಗುವಷ್ಟು ಟಿಪ್ಪಣಿಗಳನ್ನು ಸೇರಿಸಲಿಕ್ಕೆ ಸಾಧ್ಯವಾಗಲಿಲ್ಲ. ಹಾಕಿದ ಟಿಪ್ಪಣಿಗಳಲ್ಲಿಯೂ ಕೆಲವು ಕೊರತೆಗಳು ಕೈಮೀರಿ ಉಳಿದುವು. ನಾನಿಲ್ಲಿ ನಿರ್ಗತಿಕ. ಪುಸ್ತಕದ ಆಕಾರವು ಮೊದಲು ಎಣಿಸಿದ್ದರ ಇಮ್ಮಡಿಗಿಂತ ಹೆಚ್ಚಾದುದರಿಂದ ಕೊನೆಯ ಭಾಗಗಳಲ್ಲಿ ವಿವರಣೆಗಿಂತ ನಿರ್ಣಯಗಳನ್ನು ಹೇಳುವುದು ಅನಿವಾರ್ಯವಾಯಿತು.

ಕೆಲ ಸ್ನೇಹಿತರ ಒತ್ತಾಯವಿಲ್ಲದಿದ್ದರೆ ಇದು ಈಗಲೆ ಬೆಳಕು ಕಾಣುತ್ತಿದ್ದಿಲ್ಲ. ನನ್ನ ಅಣ್ಣ ಅಪ್ಪೆ ಶಂಕರರಾಯರೂ ಹಿತಚಿಂತಕರಾದ ಶ್ರೀ ಜೋಶಿ ಕೃಷ್ಣರಾಯರೂ ನನಗೆ ಅತಿ ಆವಶ್ಯಕವಾದ ಕೆಲವು ಪುಸ್ತಕಗಳನ್ನು ಒದಗಿಸಿಕೊಟ್ಟು ನೆರವಾದರು. ಮನೋಹರ ಗ್ರಂಥಮಾಲೆಯ ಸಂಚಾಲಕರು ಪ್ರಕಟನೆಯ ಹೊಣೆಯನ್ನು ಹೊತ್ತರು. ಇದನ್ನು ಬರೆಯುವಾಗ ಶ್ರೀ ಬೆಟಗೇರಿ, ಮಂಗಳವೇಡು ಪ್ರಭೃತಿಗಳು ಸಲಹೆಗಳನ್ನು ಕೊಟ್ಟು ಹುರಿಗೊಳಿಸಿದರು. ಶ್ರೀ ರಾಯದುರ್ಗ ಕೃಷ್ಣರಾಯರು ಅವಧಿ ಸ್ವಲ್ಪವಿದ್ದರೂ ಹುಬ್ಬಳ್ಳಿಯಲ್ಲಿ ಸೇರಲಿರುವ ಕರ್ಣಾಟ-ಸಾಹಿತ್ಯ ಸಮ್ಮೇಳನದ ಹೊತ್ತಿಗೆ ಮುದ್ರಿಸಿಕೊಡುವ ತತ್ಪರತೆಯನ್ನು ತೋರಿಸಿದರು. ಶ್ರೀ ಪೋತದಾರರು ನಕ್ಷೆಯ ಪಡಿಯಚ್ಚಿನ ಅನುಕೂಲತೆಯನ್ನು ಕಲ್ಪಿಸಿಕೊಟ್ಟರು. ಇಂತಿವೆಲ್ಲ ಬಗೆಗಳಿಂದ ನೆರವಾದವರಿಗೆ ಈ ಪುಸ್ತಕದ ಶ್ರೇಯಸ್ಸಿನ ಬಹುಭಾಗವು ನಿಜವಾಗಿ ಸಲ್ಲತಕ್ಕದ್ದು.

ಸಾಧನಕೆರೆ, ಧಾರವಾಡ

೨೫-೧೨-೩೩

- ಶಂ. ಬಾ. ಜೋಶಿ

'ಕರ್ಣಾಟ'ವೆಂಬ ದೇಶವಿಭಾಗವು ಪ್ರತ್ಯೇಕವಾಗಿದ್ದಿತೆ?

ಶ್ರೀಮನ್ಮಹಾಭಾರತದಲ್ಲಿ ಕರ್ಣಾಟ ಮತ್ತು ಕರ್ನಾಟಕ ಎಂದು ಎರಡು ಬಗೆಯಿಂದ ಈ ಶಬ್ದವು ಬಂದಿದೆ.[೧] ಆದರೆ, ಇವೆರಡರಲ್ಲಿ ಭಿನ್ನಾರ್ಥವನ್ನು ಕಲ್ಪಿಸಿದವರು ಮಾತ್ರ ಯಾರೂ ಇಲ್ಲ. ಕರ್ಣಾಟರೊಡನೆ ಮಹಾಭಾರತದಲ್ಲಿ ವನವಾಸಿ, ಕುಂತಲ, ಮಹಿಷಮಂಡಲಗಳ ಸ್ವತಂತ್ರ ಉಲ್ಲೇಖವಿದೆ! ಈಗ ಇವೆಲ್ಲ ಕರ್ಣಾಟದ ಒಳನಾಡುಗಳು. ವನವಾಸಿ, ಕುಂತಲ, ಮಹಿಷಮಂಡಲಾದಿಗಳಿಂದ ಕರ್ಣಾಟವನ್ನು ಬೇರ್ಪಡಿಸಿ ಹೇಳಿರುವುದರಿಂದ ಆಗ ಈ ಹೆಸರಿನ ಬೇರೆ ಒಂದು ಪ್ರದೇಶವೆ ಇರಬಹುದೆ? ಎಂಬ ಜಿಜ್ಞಾಸೆಯುಂಟಾಗುತ್ತದೆ. ಬೃಹತ್‌ಸಂಹಿತೆ ಹರಿವಂಶಾದಿಗಳಲ್ಲಿ ಸಹ ಕರ್ಣಾಟದೊಡನೆ ವನವಾಸಿ ಕುಂತಲಾದಿಗಳನ್ನು ವಿಂಗಡಿಸಿ ಹೇಳಿದುದೇ ಕಂಡುಬರುತ್ತದೆ. ಇದರಿಂದಂತೂ ಮೊದಲಿನ ಕುತೂಹಲವು ಇಮ್ಮಡಿಸುತ್ತದೆ. ದಕ್ಷಿಣದ ನಾಡು ಮತ್ತು ನುಡಿಗಳನ್ನು ವಿವರಿಸುವಾಗ ಪ್ರಾಕೃತಚಂದ್ರಿಕಾಕಾರನು 'ಕರ್ಣಾಟ', 'ಹೈವ' 'ಕೌಂತಲ' ಭಾಷೆಗಳೂ ಬೇರೆ ಬೇರೆ ಎನ್ನುತ್ತಾನೆ! ಆದರೆ ಪ್ರಾಕೃತಸರ್ವಸ್ವವೆಂಬ ತನ್ನ ಟೀಕೆಯಲ್ಲಿ ಮಾರ್ಕಂಡೇಯನು 'ಡಕಾರಬಹುಲೌ ಕೌಂತಲೀ;' 'ವರ್ಣವಿಪರ್ಯಯಾತ್ ಕರ್ಣಾಟೀ' ಎಂದು ಮುಂತಾಗಿ ಹೇಳಿ ಕೊನೆಗೆ ಹೀಗೆಲ್ಲ ಭೇದಗಳನ್ನು ಕಲ್ಪಿಸುವುದು ಕಾಲ್ಪನಿಕವೆಂಬ ವಿಚಾರಕ್ಕೆ ಬಂದು ನಿಂತಿದ್ದಾನೆ.[೨] ಪ್ರಾಕೃತಚಂದ್ರಿಕೆಯಲ್ಲಾಗಲಿ. ಅದರ ಟೀಕಾಗ್ರಂಥವಾದ ಪ್ರಾಕೃತಸರ್ವಸ್ವದಲ್ಲಾಗಲಿ, ಅವರು ಹೀಗೆ ಹೇಳುವುದಕ್ಕೆ ಸ್ವಲ್ಪ ಕಾರಣವೂ ಇಲ್ಲದಿಲ್ಲ. ಜಗತ್ತಿನ ಯಾವುದೇ ದೇಶದಲ್ಲಿ ತೀರ ಒಂದೇ ಬಗೆಯ ಭಾಷೆಯು ಇರುವುದೇ ಇಲ್ಲ. ಅದರಲ್ಲಿಯೂ ಬಳಕೆ, ಬೆರಕೆಗಳ ಅನನುಕೂಲತೆಗಳು ಇರುವಲ್ಲಿ ಈ ಒಳಭೇದಗಳಿಗೆ ಇನ್ನಿಷ್ಟು ಅವಕಾಶ. ಒಂದೇ ಭಾಷೆಯನ್ನಾಡುವ ಜನಸಮುದಾಯವೆ ಬಹಳ ವಿಸ್ತೃತವಾದ ಪ್ರದೇಶದಲ್ಲಿ ಹಬ್ಬಿ ಬೇರೆ ಬೇರೆ ಸಣ್ಣಪುಟ್ಟ ರಾಜ್ಯಗಳನ್ನು ಕಟ್ಟಿಕೊಂಡು ಸ್ಪರ್ಧೆಯ ಜೀವನವನ್ನು ಸಾಗಿಸಿದ್ದರಂತೂ ಮಾತೆ ಮುಗಿಯಿತು. ಆ ಭಾಷಾಪ್ರಭೇದಗಳಿಗೆ ಕೊನೆ ಇಲ್ಲ. ಅಂತಹ ಕಾರಣಗಳಿಂದಲೆ, ಹಿಂದಕ್ಕೆ ಕನ್ನಡವು ಕ್ಷೀಣವಾದುದು; ಇಂದಿಗೂ ಕ್ಷೀಣವಾಗುತ್ತಲಿರುವುದು! ಆದರೆ, ಕನ್ನಡದ ಈ ದುಃಸ್ಥಿತಿಯನ್ನು ನೋಡಿ ರಾಜಾಧಿರಾಜನಾದ ನೃಪತುಂಗ ದೇವನಿಗೆ ಆದ ದುಃಖವು ಅನಿತಿನಿತಲ್ಲ. ಒಂದು ಕನ್ನಡನುಡಿಯಲ್ಲಿ ನೂರಾರು ಒಳಭೇದಗಳು; ಹತ್ತೆಂಟು ಹರಿದಾರಿಗೊಂದೊಂದು ದೇಸಿ! ಒಂದು ಕನ್ನಡವಿರುವುದರ ಬದಲು ಆಗ ಇದ್ದುದು 'ಕನ್ನಡಂಗಳು'![೩]

ನೃಪತುಂಗದೇವನಿಗೆ, ತನ್ನ ನಾಡಿನಲ್ಲಿ ಒಡಕು ಇರುವುದೆಂದರೆ ತನ್ನ 'ಅತಿಶಯ ಧವಲ' ಕೀರ್ತಿಗೆ ದೊಡ್ಡ ಕಲಂಕವೆನಿಸುತ್ತಿರಬೇಕು. ಕರ್ಣಾಟವನ್ನು ಗೆದ್ದು ಆತನು ಇಲ್ಲಿ ಆಳುತ್ತಿದ್ದರೆ, ಆ ರೀತಿಯೆ ಬೇರೆ ಆಗುತ್ತಿತ್ತು. ಹೆರವರನ್ನು ಗೆಲ್ದು ಆಳುವ ಅರಸನಿದ್ದರೆ ಅವನು ಅಲ್ಲಿಯ ನಾಡು-ನುಡಿಗಳ ಸಮಕಟ್ಟಿನ ಕೆಲಸಕ್ಕೆ ಎಂದೂ ಕೈಯಿಕ್ಕಲಾರನು. ಏಕೆಂದರೆ ಹಗೆಗಳ ಒಕ್ಕಟ್ಟೆ ಅವನಿಗೆ ಬಿಕ್ಕಟ್ಟು. ಆದರೆ, ತನ್ನ ನಾಡಿನಲ್ಲಿಯೆ ಸಣ್ಣಪುಟ್ಟ ಒಳಪಂಗಡಗಳಿದ್ದುದು ಏಳಿಗೆಯನ್ನು ಬಯಸುವ ಆವ ಅರಸನಿಗೆ ತಾನೆ ಸಮ್ಮತವಾದೀತು? ಐಕ್ಯವೆ ಐಶ್ವರ್ಯದ ಮೂಲಾಧಾರ. ರಾಜನೀತಿಯೊಳಗಿನ ಈ ಗುಟ್ಟನ್ನು ಅರಿತಿರದಿದ್ದರೆ ನೃಪತುಂಗದೇವನು ಆ ಕಾಲದ ಜಗದ್ವಿಖ್ಯಾತ

ರಾದ ಚಕ್ರೇಶ್ವರರಲ್ಲಿ ಗಣ್ಯನಾಗುವುದೇ ಸಾಧ್ಯವಿದ್ದಿಲ್ಲ. ಒಂಬತ್ತನೆಯ ಶತಮಾನದಲ್ಲಿ ಪ್ರಪಂಚದಲ್ಲೆಲ್ಲ ವಿಖ್ಯಾತರಾದ ಮೂವರು ಸಾಮ್ರಾಟರೊಡನೆ ಸರಿಸಮಾನಸ್ಕಂಧನಾದವನು (ಚೀನ, ಬಾಹಾದ್, ಮತ್ತು ಇಸ್ತಂಬೂಲಿನ ರಾಜಾಧಿರಾಜರಿಗೆ ಸರಿಸಮಾನನು) ನೃಪತುಂಗನು," ಎಂದು ಆ ಕಾಲದವನೆ ಆದು ಸುಲೈಮಾನನೆಂಬ ವರ್ತಕನು (೮೫೧) ಬರೆದಿದ್ದಾನೆ.[೪] ನೃಪತುಂಗದೇವನು ತನ್ನ ನಾಡು ಮತ್ತು ನುಡಿಗಳ ಸಮಕಟ್ಟಿಗಾಗಿ ಅಮೋಘ ಪ್ರಯತ್ನ ಗಳನ್ನು ಮಾಡಿದುದು ಆತನ ಅನುಮತಿಯಿಂದ ವಿರಚಿತವಾದ ಕವಿರಾಜಮಾರ್ಗದಿಂದಲೆ ಗೊತ್ತಾಗುತ್ತದೆ.[೫] 'ನೆಗಳ್ದಿರ್ದ ಕನ್ನಡಂಗಳೊಳ್,......ಬಗೆದು ಒಂದು ಮಾಡಿ ಪೇಳೊಡೆ ಸೊಗಯಿಸುಗುಂ.[೬] ಎಂದು ಬೇರೆ ಬೇರೆ 'ಕನ್ನಡಂಗಳೊಳಗಿನ' ಸೊಬಗನ್ನು ಜಾಣ್ಮೆಯಿಂದ ಒಂದೆಡೆಗೆ ತಂದು ಸೊಗಯಿಸುವ ಹೊಸ ಕನ್ನಡದ ಒಂದು ನುಡಿಯನ್ನು ಮಾಡಬೇಕೆಂದು ತುಂಬಾ ಪರಿಶ್ರಮ ಪಟ್ಟುದರ ಪ್ರತ್ಯಕ್ಷ ಫಲವೇ ಕವಿರಾಜಮಾರ್ಗವೆಂಬ ಗ್ರಂಥ. ಕವಿಗಳಿಗೆ ಸುರಮ್ಯವಾದ ರಾಜಮಾರ್ಗವು ದೊರೆತಮೇಲೆ ಅವರು ನೃಪತುಂಗದೇವನಿಗೆ ಆದೆಷ್ಟು ಕೃತಜ್ಞರಾಗಿರಬೇಕು? ಈ ಕೃತಜ್ಞತಾಭಾವವು 'ನಿನ್ನನ್ನಂ ನೀನೆ, ನಿನ್ನನ್ನಂ ನೀನೆ ಅತಿಶಯಧವಲಾ' ಎಂದು ಮುಂತಾಗಿ ಪದ್ಯಗಳ ರೂಪದಿಂದ ಉಕ್ಕಿ ಹೊರಸೂಸಿದುದನ್ನು 'ಕಾವ್ಯಾವಲೋಕನ'ದಲ್ಲಿ ಉದಾಹೃತವಾದ ಹಲವು ಪದ್ಯಗಳಿಂದ ಅರಿತುಕೊಳ್ಳಬಹುದು. ನೃಪತುಂಗದೇವನು 'ಕನ್ನಡಂಗಳನ್ನೆ'ಲ್ಲ ಹಿಂದೆ ದೂಡಿ 'ಸೊಗಯಿಸುವ ಒಂದು ಕನ್ನಡವನ್ನು' ಮುಂದೆ ತಂದಂತೆ ಆ ನಾಡು, ಈ ನಾಡುಗಳೆಂದಿದ್ದ ಭಿನ್ನ ಭೇದಗಳನೆಲ್ಲ ಕಿತ್ತೊಗೆದು ಒಂದೇ ಕನ್ನಡವನ್ನು ನೆಲೆಗೊಳಿಸಿದನು. 'ಕಾವೇರಿಯಿಂದಂ ಗೋದಾವರಿವರಂ ಇರ್ದ ನಾಡೆಲ್ಲಮಾ ಕನ್ನಡದೊಳ್ ಭಾವಿಸಿದ ಜನಪದಂ' ಎಂದು ಲೋಕಕ್ಕೆಲ್ಲ ಸಾರಿಹೇಳಿದನು.[೭] ಇದೆಲ್ಲವೂ ಸರಿ; ಕನ್ನಡದ ನಾಡು-ನುಡಿಗಳ ಏಕೀಕರಣ ಮಾಡಿದ ಮೊದಲನೆಯ ಮಹಾಮಹಿಮನು ನೃಪೋತ್ತುಂಗಮಹಾರಾಜನೇ ನಿಜ. ಆದರೆ, ನಮಗೆ ಅರಿತುಕೊಳ್ಳಬೇಕಾದುದು ಇದನ್ನಲ್ಲ. ನೃಪತುಂಗದೇವನ ಕಾಲದಲ್ಲಿ ವನವಾಸಿ, ಮಹಿಷಮಂಡಲಾದಿಗಳಲ್ಲಿ ಐಕ್ಯವಾದ ಕರ್ನಾಟಕವಲ್ಲ. ನೃಪತುಂಗನ ಮೊದಲು-ಮಹಾಭಾರತಾದಿಗಳಲ್ಲಿ ಉಲ್ಲೇಖಿತವಾದ ಮತ್ತು ವನವಾಸಿ ಕುಂತಳಾದಿಗಳಿಂದ ಭಿನ್ನವಾದ ಕರ್ನಾಟವು ಮೊದಲು ಎಲ್ಲಿರಬಹುದು ಎಂಬುದೆ ಇಲ್ಲಿ ಮುಖ್ಯ ವಿಷಯ. ಆಗ ಕರ್ನಾಟವೆಂಬ ಹೆಸರಿನಿಂದ ಮೆರೆಯುತ್ತಿದ್ದ ನಾಡು ಈಗಿನ ಯಾವ ಪ್ರಾಂತ? ಎಂಬುದನ್ನು ಕುರಿತು ಇಲ್ಲಿ ವಿಚಾರಿಸುವುದು ಕರ್ತವ್ಯ.

ಪ್ರಾಚೀನ ಕಾಲದಲ್ಲಿ 'ಕರ್ನಾಟ' ವೆಂಬುದು ಕುಂತಲ ಮಹಿಷ ಮಂಡಳಾದಿಗಳಿಂದ ಬೇರೆಯಾದ ಒಂದು ಪ್ರದೇಶವು ಇರಬೇಕೆಂದು ಭಾರತಾದಿಗಳಿಂದ ಊಹಿಸಲು ಅವಕಾಶವಿದೆ, ಎನ್ನುತ್ತಲೆ 'ಹಾಗಾದರೆ ಕುಂತಲಮಹಿಷಮಂಡಳಾದಿಗಳಲ್ಲಿ ಕನ್ನಡವು ಇರಲಿಲ್ಲವೆ?' ಎಂದು ಸಂದೇಹ ಪಟ್ಟುಕೊಳ್ಳುವರು ಕೆಲರು ಆದರೆ, ಈ ಬಗೆಯ ಸಂಶಯಗಳಿಗೆ ನಿಜವಾಗಿಯೂ ಅವಕಾಶವೆ ಇಲ್ಲ. ಏಕೆಂದರೆ 'ಕಾವೇರಿಯಿಂದ ಗೋದಾವರಿ ಯವರೆಗೆ ಕನ್ನಡ' ಎಂದು ನೃಪತುಂಗದೇವನು ಹೇಳಿಬಿಟ್ಟಿದ್ದಾನೆ. ಕುಂತಳಾದಿಗಳೆಲ್ಲವೂ ಇವೆರಡೂ ನದಿಗಳ ನಡುವಿನ ನಾಡಿನಲ್ಲಿಯೆ ಬಂದು ಹೋಗುತ್ತವೆ. ಅಲ್ಲದೆ, ಆ ಸೀಮೆಯೆಲ್ಲ ಕನ್ನಡವೆಂದು ಸಾರುವವನು ಮತ್ತಾರಲ್ಲ; ಆ ನಾಡನ್ನೆಲ್ಲ ಒಂದೇ ಕೊಡೆಯಿಂದ ಆಳಿದ ಮಹಾ-ರಾಜಾಧಿರಾಜ ನೃಪತುಂಗದೇವನು. ಒಂದು ಸೀಮೆಯ ನಡೆನುಡಿಗಳು ಆವುವು ಎಂಬುದನ್ನು ಹೇಳಲು ಅಲ್ಲಿ ಆಳುವ ಅರಸನಷ್ಟು ಅರ್ಹರಾದವರು ಬೇರೆ ಯಾರೂ ಇಲ್ಲ. ಏಕೆಂದರೆ, ತನ್ನ ನಾಡಿನ ಒಳಹೊರಗುಗಳನ್ನೆಲ್ಲ ಕೂಲಂಕಷವಾಗಿ ಗುಪ್ತರೀತಿಯಿಂದಲೂ ವ್ಯಕ್ತರೀತಿಯಿಂದಲೂ ಅರಿತುಕೊಳ್ಳುವುದು ಅರಸನ ದಿನದ ಮುಖ್ಯ ಕೆಲಸವೇ ಆಗಿದೆ. ಆದುದರಿಂದ, ತಾನು ಆಳುತ್ತಿದ್ದ ನಾಡಿನ ನುಡಿಯು ಕನ್ನಡ, ನಾಡು ಕನ್ನಡವೆಂದು ಹೇಳುವ ನೃಪತುಂಗದೇವ ಮಹಾರಾಜನ ಮಾತಿನಲ್ಲಿ ಅವಿಶ್ವಾಸವನ್ನು ತೋರ್ಪಡಿಸುವುದೂ (ತಾನು ಬದುಕಿರುವಾಗಲೆ) ತನ್ನ ಅಸ್ತಿತ್ವದಲ್ಲಿ ತಾನೆ ಸಂಶಯಪಟ್ಟುಕೊಳ್ಳುವುದೂ ಎರಡು ಒಂದೇ. ಭಾರತಕಾಲದಿಂದಲೂ ಕರ್ನಾಟಮಹಾಮಂಡಳದಲ್ಲಿ ಕರ್ನಾಟವೆಂಬುದು ಮುಖ್ಯ ವಿಭಾಗ; ಕುಂತಳ, ವನವಾಸಿ ಮಹಿಷಮಂಡಳಾದಿಗಳು ಅದರ ಉಪಭಾಗಗಳಾಗಿರಬೇಕು. ಮುಂಬೈ ಸುತ್ತಲಿನ ಕೆಲವು ಪ್ರದೇಶದೊಂದಿಗೆ ಆ ಹೆಸರಿನ ಒಂದು ಸ್ವತಂತ್ರ ವಿಭಾಗವು (Division) ಇರುವುದಲ್ಲದೆ ಗುಜರಾತ, ಸಿಂಧು ಮೊದಲಾದ

ಉಪಭಾಗಗಳೆಲ್ಲ ಕೂಡಿ ಮತ್ತೆ ಮುಂಬೈ ಇಲಾಖೆ (Presidency) ಆಗಿರುವುದಷ್ಟೆ. ಹಾಗೆ, ಒಂದು ಕಾಲಕ್ಕೆ ಕರ್ಣಾಟವು ಒಂದು ಸ್ವತಂತ್ರ ಪ್ರದೇಶವಾಗಿದ್ದು ವನವಾಸಿ ಕುಂತಳಾದಿಗಳೆಲ್ಲ ಸೇರಿ 'ಕರ್ಣಾಟಮಹಾಮಂಡಳ' ಎನಿಸುತ್ತಿರಬೇಕು.

'ಬನವಾಸಿ, ಕುಂತಳಾದಿಗಳಿಂದ ಭಿನ್ನವಾದ ಕರ್ಣಾಟ-ಕನ್ನಡ ಎಂಬ ಹೆಸರಿನ ಒಂದು ಪ್ರದೇಶವು ಇರಲೇಬೇಕು' ಎಂದು ಕೇವಲ ಭಾರತಾದಿ ಗ್ರಂಥಗಳಿಂದಲೆ ಅನುಮಾನಿಸಬೇಕಾಗಿಲ್ಲ; 'ಕನ್ನಡ' ಶಬ್ದಕ್ಕೆ 'ನಿನ್ನ ಮನಸು ಬಿಚ್ಚಿ ಒಳಗುಟ್ಟನ್ನು ಹೇಳು' ಎಂದು ಒಲಿಸಿ ಕೇಳಿದರೆ, ಅದೂ ಹೀಗೆಯೆ ಹೇಳುತ್ತಿದೆ. ಕರ್ಣಾಟ (ದ್ರವಿಡ) ಭಾಷೆಯ ಶಬ್ದದ್ರವ್ಯವು-ಶಬ್ದಮೂಲವು ಎರಡು ಅಕ್ಷರಗಳಿಗಿಂತ ಎಂದಿಗೂ ದೊಡ್ಡದಿರುವುದಿಲ್ಲ. ಅಚ್ಚಕನ್ನಡದ ಮೂರಕ್ಕರದ ನುಡಿಯಿದ್ದರೆ ಅದು ಸಾಧಿತಶಬ್ದವೆಂದು ಯಾವ ಎಡೆತಡೆಗಳಿಲ್ಲದೆ ಹೇಳಬಹುದು. ಆದುದರಿಂದ, 'ಕನ್ನಡ' ಶಬ್ದವು ಸಾಧಿತ. ಇದನ್ನು ಕನ್+ನಡ ಎಂದು ಬಿಡಿಸಬಹುದು. ನಾಡು ಶಬ್ದದ ಒಂದು ರೂಪವೆ ನಡ. ಕರ್ಣಾಟ, ಪುನ್ನಾಟಗಳೊಳಗಿನ 'ನಾಟ'ವು ನಾಡು ಶಬ್ದ ಸ್ವಲ್ಪ ವಿಕೃತರೂಪವೆಂದು ಸಹಜವಾಗಿ ಗೊತ್ತಾಗುವಂತಿದೆ. 'ಕನ್ನಡ'ವಾಗಲಿ 'ಕರ್ಣಾಟ'ವಾಗಲಿ ಮೊತ್ತಮೊದಲಲ್ಲಿ ಭಾಷಾದರ್ಶಕ ಶಬ್ದವಲ್ಲ; ದೇಶವಾಚಕ. ಇಂಗ್ಲಿಷು, ಫ್ರೆಂಚು, ಅರಬ್ಬಿ ಮುಂತಾದ ಭಾಷೆಗಳಿಗೆ ಆಯಾ ನಾಡುಗಳಿಂದ ಹೆಸರು ಬಂದಿವೆ. ಕನ್ನಡ ಶಬ್ದಕ್ಕೆ ಆರಂಭದಲ್ಲಿ ದೇಶ ಮತ್ತು ಭಾಷೆಗಳೆಂಬ ಎರಡೂ ಅರ್ಥಗಳಿದ್ದುವು. 'ಕನ್ನಡದೊಳ್ ಭಾವಿಸಿದ ಜನಪದಂ' ಎಂದು ಕವಿರಾಜಮಾರ್ಗವು ಹೇಳುವಲ್ಲಿ ಕನ್ನಡ ಶಬ್ದಕ್ಕೆ ದೇಶವಾಚಕ ಅರ್ಥವೇ ಇದೆ. 'ಕನ್ನಡ'ವು ನಾಡನ್ನು ಹೇಳುವ ಶಬ್ದವೆ ಇದ್ದು, ಅದಕ್ಕೆ ಮತ್ತೆ ನಾಡು, ದೇಶವೆಂಬ ಪದಗಳನ್ನು ಸೇರಿಸುವುದು 'ಕನ್ನಡ'ದ ವಿಷಯಕ್ಕಿರುವ ನಮ್ಮ ಅಜ್ಞಾನವು ಹೆಚ್ಚಿರುವುದರ ಲಕ್ಷಣವಾಗಿದೆ. ಕೂಡಲಸಂಗಮ, ಹಿಂದುಸ್ಥಾನ ದೇಶ, ಮಲಯ ಪರ್ವತಾದಿಗಳಲ್ಲಿಯೂ ಈ ಬಗೆಯ ತಪ್ಪನ್ನೆ ಕಾಣಬಹುದು. ಮೂಲಶಬ್ದಕ್ಕಿರುವ ಅರ್ಥವು ಜನಸಾಮಾನ್ಯರಿಗೆ ಮರೆತು ಹೋಗುತ್ತಲೆ ಇಂತಹ ದೋಷಗಳು ತಲೆದೋರುತ್ತವೆ. 'ಕನ್ನಡ' ಎನ್ನುತ್ತಲೆ ಕೇವಲ ಭಾಷೆಯಷ್ಟೆ ಕಣ್ಣೆದುರು ನಿಲ್ಲುವುದು! 'ಕರ್ಣಾಟ'ವೆಂಬ ಸ್ಥಿರವಾದ ನಿಶ್ಚಿತವಾದ ಹೆಸರುಳ್ಳ ದೇಶವೆ ನೆನಪಾಗುವುದಿಲ್ಲ. 'ಮೈಸೂರ ಕರ್ಣಾಟ', 'ಉತ್ತರ ಕರ್ಣಾಟ' ಹೀಗೆ ಸಂಯುಕ್ತನಾಮಗಳೆ ಎಲ್ಲ! ಅಲ್ಲದೆ, ಪ್ರಾದೇಶಿಕ ಅರ್ಥವು ಇಷ್ಟವಿದ್ದಾಗ 'ಕನ್ನಡ' ಎಂದಿಷ್ಟೆ ಹೇಳಿದರೆ ಸರಿಯಾದ ಅರ್ಥಬೋಧೆಯಾಗದವರೆ ಬಹಳ. 'ಕನ್ನಡ ನಾಡು,' 'ಕನ್ನಡದೇಶ' 'ಕನ್ನಡ ಜಿಲ್ಲೆ' ಎಂದು (ದ್ವಿರುಕ್ತಿ ದೋಷವನ್ನು ಸ್ವೀಕರಿಸಿ) ಸ್ಥಾನನಿರ್ದೇಶಕ. ಇನ್ನು ಒಂದು ಹೆಚ್ಚಿನ ಪದವನ್ನು ಸೇರಿಸಿ ಹೇಳಬೇಕಾಗುತ್ತದೆ. 'ಕನ್ನಡ' ಶಬ್ದವು 'ಫ್ರಾನ್ಸ್' 'ಇಂಗ್ಲೆಂಡ್ ಈ ಶಬ್ದಗಳಂತೆ! ಒಂದು ವಿಶಿಷ್ಟ ದೇಶವಾಚಕ, ಎಂಬುದರ ಅರಿವೂ ಕೂಡ ಈಗ ಉಳಿದಿಲ್ಲ. ಸ್ವಯಂ ಸಿದ್ಧಸಂಗತಿಯನ್ನು ಅನುಮಾನ ತರ್ಕಗಳ ಸಹಾಯದಿಂದ ಮನಗಾಣಿಸಿಕೊಡುವ ಹೊತ್ತು ಬಂದಿದೆ! 'ಕರ್ಣಾಟವು'-'ಕನ್ನಡವು' ಜನರ ಕಣ್ಮರೆಯಾಗಿ ಸಾವಿರಾರು ವರುಷಗಳು ಆಗಿ ಹೋದುದೆ, ಈ ಅವಸ್ಥೆಗೆ ಮೂಲಕಾರಣ. ಇದೆ ಸುದೈವ: 'ಕನ್ನಡ' ನುಡಿ ಎಂಬರ್ಥದಲ್ಲಾದರೂ ಉಳಿಯಿತು! ಪರ್ಶಿಯಾ ದೇಶವು ಕೈಬಿಟ್ಟು ಹೋಗಿ (ಫಾರ್ಸಿಗಳಿಗೆ) ಪಾರ್ಷಿ ಭಾಷೆಯಷ್ಟೆ ಉಳಿದ ಹಾಗೆ!

'ಕನ್ನಡ'ವು ಮೂಲದಲ್ಲಿ ಭಾಷಾವಾಚಕವೆ ಆಗಿದ್ದರೆ, ಇದರ ರೂಪವು ಕನ್+ನಡ ಎಂದಿರದೆ ಕನ್ನುಡಿ (ಕನ್+ನುಡಿ) ಎಂದಿರಬೇಕಾಗಿತ್ತು. ಆದರೆ, ಈ ಬಗೆಯ ಶಬ್ದ ಪ್ರಯೋಗವು ತೀರ ಹಳೆಯ ಶಾಸನಗಳಲ್ಲಾಗಲಿ, ತಾಡವಾಲೆಗಳಲ್ಲಾಗಲಿ ಎಲ್ಲಿಯೂ ದೊರೆಯುವುದಿಲ್ಲ. ಆದ್ದರಿಂದ? ಕನ್ನಡವು ದೇಶವಾಚಕ ಶಬ್ದವೆಂದಮೇಲೆ ಈ ಹೆಸರಿನ ಪ್ರತ್ಯೇಕವಾದ ಪ್ರದೇಶವು ಎಲ್ಲಿಯಾದರೂ ಇರಲೇಬೇಕಷ್ಟೆ? ಕವಿರಾಜಮಾರ್ಗದಲ್ಲಿ ಹೇಳಿರುವುದು ಕಾವೇರಿಯಿಂದ ಗೋದಾವರಿವರಂ ಇರ್ದ್ದ ನಾಡು ಕನ್ನಡ' ಎಂದು. ಆದ್ರೆ, ಇವೆರಡೂ ಹೊಳೆಗಳ ನಡುವಿನ ಸೀಮೆಯಲ್ಲಿ ಒಳಗೊಳ್ಳುವ ನಾಡುಗಳ ನಾಮಾವಳಿಯನ್ನು ಈ ವರೆಗೆ ಬೆಳಕಿಗೆ ಬಂದಿರುವ ಐತಿಹಾಸಿಕ ಆಧಾರಗಳಿಂದ ಪರಿಶೋಧಿಸಿದರೆ ಅದರಲ್ಲಿ ಕನ್ನಡ ಕರ್ಣಾಟವೆಂದು ಹಲವು ಕಾಲದಿಂದಲೂ ಇದೇ ಹೆಸರು ನಡೆಯುತ್ತ ಬಂದ ಪ್ರದೇಶವೆ ಕಂಡುಬರುವುದಿಲ್ಲ. ಕಾವೇರಿ ಗೋದಾವರಿಗಳ ನಡುವಿನ ನಾಡಿನಲಿ ಹಿಂದಕ್ಕೆ

ಪುನ್ನಾಟ, ಎರುಮೈನಾಡು (ಮೈಸೂರು), ಕುಡುನಾಡು (ಕೊಡಗು), ತಮಿಳುನಾಡು, ನಾಗರಖಂಡ, ಹೈವೆ, ಬನವಸೆನಾಡು, ಕುಡಾಳ, ಗೋಮಂತ, ಅಪರಾಂತ, ಕರ್ಹಾಟ, ವೆಂಗಿಮಂಡಲ ಎಂಬುದಾಗಿ ನೂರಾರು ನಾಡುಗಳಿದ್ದುದಾಗಿ ಕಂಡುಬರುತ್ತದೆ. 'ಕನ್ನಡ'ವು ಮಾತ್ರ ಎಲ್ಲಿಯೂ ಇಲ್ಲ! 'ಕನ್ನಡ' 'ಕರ್ಣಾಟ'ವೆಂಬ ಹೆಸರಿನ ದೇಶವು ಹಿಂದಕ್ಕೆ ಇದ್ದೇ ಇದ್ದಿತೆಂಬುದು ನಿಶ್ಚಿತವಾಗಿದ್ದು, ಕಾವೇರಿ ಗೋದಾವರಿಗಳ ಮಧ್ಯಪ್ರದೇಶದಲ್ಲಿ ಬೇರೆ ಅದರ ಸುಳಿವು ಸಹ ದೊರೆಯುವುದಿಲ್ಲ! ಹಾಗಾದರೆ ಅದು ಎಲ್ಲಿರಬಹುದು? ಕಾವೇರಿ (ನೀಲಗಿರಿಗಳ) ದಕ್ಷಿಣಕ್ಕೆ ತಮಿಳು. ತಮಿಳರು ಅತಿ ಪ್ರಾಚೀನರು. ಆದುದರಿಂದ ಅತ್ತಕಡೆಗೆ ಕರ್ಣಾಟವಿರಬಹುದೆ ಎಂದು ತಪ್ಪಿಸಹ ಇಣಿಕಿ ನೋಡುವಂತಿಲ್ಲ. ಗೋದಾವರಿಯ ದಕ್ಷಿಣಕ್ಕಂತೂ ಮೊದಲೆ ಇಲ್ಲ. ಇನ್ನುಳಿಯಿತು ಗೋದಾವರಿಯ ಉತ್ತರತೀರ. ಅದು ಈಗ ಮಹಾರಾಷ್ಟ್ರದಲ್ಲಿ ಎಣಿಸಲ್ಪಡುತ್ತಿದೆ. ಆದರೆ, ಮಹಾರಾಷ್ಟ್ರ ಶಬ್ದವೆ ಅಸ್ತಿತ್ವದಲ್ಲಿ ಬಂದುದು ಆರನೆಯ ಶತಮಾನದಿಂದ ಈಚೆಗೆ. 'ಮಹಾರಾಷ್ಟ್ರ' ವೆಂಬ ಹೆಸರು ಬರುವ ಮೊದಲು ಆ ಪ್ರದೇಶಕ್ಕೆ ಏನು ಹೆಸರಿರಬಹುದು? ಅದೆ ನಿಜಕರ್ಣಾಟವು ಏಕೆ ಆಗಬಾರದು? 'ಕಾವೇರಿ ಗೋದಾವರಿಗಳ ನಡುವಿನ ನಾಡು ಕನ್ನಡ'ವೆಂದು ಹೇಳಿದ ನೃಪತುಂಗ ದೇವನು (ಕ್ರಿ.ಶ. ೮೧೫) ಒಂಬತ್ತನೆಯ ಶತಮಾನದವನು. 'ಮಹಾರಾಷ್ಟ್ರ' ವೆಂಬ ಶಬ್ದವು ಅಸ್ತಿತ್ವದಲ್ಲಿ ಬಂದುದು ಆರನೆಯ ಶತಮಾನ. ಇದರಿಂದ ನೃಪತುಂಗದೇವನು ಆಳುವುದಕ್ಕೆ ಐದು ಮತ್ತು ಆರು ಶತಮಾನ ಮೊದಲೆ ಗೋದಾವರಿಯ ಉತ್ತರತೀರದ ಕರ್ಣಾಟವು ಹಾಳಾಗಿರಲಿಕ್ಕೆ ಸಾಕು.

ಕನ್ನಡಮೆನಿಪ್ಪಾ ನಾಡು

'ಗೋದಾವರಿಯ ಉತ್ತರಕ್ಕೆ ಏತಕ್ಕೆ ಓಡುವುದು? ಕಂಕುಳಲ್ಲಿಯೆ ತನ್ನ ಕೂಸಿರುವ ಅರಿವು ಇಲ್ಲದೆ ಊರನ್ನೆಲ್ಲ ಸುತ್ತುವ ಹಾಗೆ ಇದೆಲ್ಲವೂ ವ್ಯರ್ಥ ಪರಿಶ್ರಮ. ಈಗಿನ ಮುಂಬೈ ಮದ್ರಾಸ ಇಲಾಖೆಗಳಲ್ಲಿ ಇಬ್ಭಾಗವಾದ (ಉತ್ತರ, ದಕ್ಷಿಣ) ಕನ್ನಡ ಜಿಲ್ಹೆಯೆ ಪ್ರಾಚೀನ ಕರ್ಣಾಟವಲ್ಲವೆ' ಎಂದು ಕೆಲವರು ಆಕ್ಷೇಪಿಸಬಹುದು. ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಆಂಡಯ್ಯ ಕವಿಯನ್ನು ಕುರಿತು ಸೊಗಸಾದ ಒಂದು ಲೇಖನವನ್ನು ಬರೆದು ಆಂಡಯ್ಯನು 'ಕಬ್ಬಿಗರ ಕಾವ'ದಲ್ಲಿ ವರ್ಣಿಸಿರುವ 'ಕನ್ನಡಮೆನಿಪ್ಪಾ ನಾಡು' ಈಗಿನ ಕನ್ನಡ ಜಿಲ್ಲೆ ಎಂದು ಚೆನ್ನಾಗಿ ವಿವರಿಸಿದ್ದಾರೆ. ಆದರು ಈ (ಉತ್ತರ ದಕ್ಷಿಣ ಸಹಿತ) ಕನ್ನಡ ಜಿಲ್ಹೆಯು ಮಹಾಭಾರತಾದಿಗಳಲ್ಲಿ ಉಲ್ಲೇಖಿತ ಪ್ರಾಚೀನ ಕರ್ಣಾಟವೆಂದು ನಂಬುವುದು ಕಷ್ಟ. ಏಕೆಂದರೆ, ಈ ಜಿಲ್ಲೆಯ ಒಂದೊಂದು ಭಾಗಕ್ಕೂ ಒಂದೊಂದು ಪ್ರಾಚೀನಕಾಲದ ಹೆಸರೆ ಬೇರೆ! ದಕ್ಷಿಣ ಕನ್ನಡಕ್ಕೆ ತುಳುನಾಡು ಎಂಬುದು ಇಂದಿಗೂ ಪರ್ಯಾಯ ನಾಮ. ಕ್ರಿಸ್ತಶಕ ಎರಡನೆಯ ಶತಮಾನದಲ್ಲಿದ್ದ ಸುಪ್ರಸಿದ್ಧ ಪ್ರವಾಸಿಯೂ ಕವಿಯೂ ಆದ ಮಾಮೂಲನಾರ್ ಎಂಬ ತಮಿಳನು 'ಎರುಮೈನಾಡು' ಮೊದಲಾದವುಗಳಂತೆ ತುಳುನಾಡನ್ನು ಹೇಳುತ್ತಾನೆ. ಹಿಂದಕ್ಕೆ ಉತ್ತರಕನ್ನಡ ಜಿಲ್ಹೆಯ ಒಂದು ಭಾಗವು ನಾಗರ ಖಂಡ, ಇನ್ನೊಂದು ಹೈವೆ; ಮತ್ತೊಂದು ಬನವಾಸಿ. ಇವೆಲ್ಲವುಗಳಲ್ಲಿ ಬನವಾಸಿ ದೇಶಕ್ಕೆ ಪ್ರಾಶಸ್ತ್ಯ. ಕ್ರಿ.ಪೂ. ಮೂರನೆಯ ಶತಮಾನದಲ್ಲಿ ಅಶೋಕನು ಬೌದ್ಧ ಭಿಕ್ಷುಗಳನ್ನು ಧರ್ಮೋಪದೇಶಕ್ಕಾಗಿ ಕಳುಹಿದುದು ಬನವಾಸಿ ದೇಶಕ್ಕೆ. ಕ್ರಿ.ಶ. ೨ನೆಯ ಶತಮಾನದ ಟಾಲಮಿಯೂ ಈ ನಾಡಿನ ಹೆಸರೆತ್ತಿದ್ದಾನೆ. ಕ್ರಿ.ಶ. ೩-೪ ಶತಮಾನ ಕದಂಬರು ಆಳಿದ್ದುದು ಬನವಾಸಿ ವಿಷಯವನ್ನೇ. ಈ ರಾಜರಿಂದ ಇದಕ್ಕೆ 'ಕದಂಬವಿಷಯ'ವೆಂಬ ಹೆಸರು ಕೆಲಕಾಲ ರೂಢವಾಗಿತ್ತು. ಆದರೆ, ಸ್ಥಿರವಾಗಿ ಉಳಿಯಲಿಲ್ಲ. ಹತ್ತನೆಯ ಶತಮಾನದ ಪಂಪಮಹಾಕವಿಯು ತನ್ನ ದೇಶಾಭಿಮಾನದ ಆವೇಶದಲ್ಲಿ ಉಸುರಿದ್ದುದು 'ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂದು. ಹನ್ನೊಂದನೆಯ ಶತಮಾನದ ಅಲ್ಬೆರೂನಿ ಭಾರತವರ್ಷದ ದೇಶಗಳಲ್ಲಿ ಬನವಾಸಿಯನ್ನು ಪ್ರತ್ಯೇಕಿಸಿ ಹೇಳಿದ್ದಾನೆ. ಕ್ರಿಸ್ತಶಕಕ್ಕೆ ಮೊದಲಿನಿಂದ ಅಲ್ಬೆರೂನಿ ತುಳುನಾಡು, ಬನವಾಸಿದೇಶವೆಂದು ಹೆಸರಿದ್ದ ನಾಡುಗಳಿಗೆ ಆಂಡಯ್ಯನ ಕಾಲಕ್ಕೆ ಅಂದರೆ ಹದಿಮೂರನೆಯ ಶತಮಾನದಲ್ಲಿ 'ಕನ್ನಡ ಮೆನಿಪ್ಪಾ

ನಾಡು' ಎಂಬ ನವೀನ ನಾಮವು ಪ್ರಾಪ್ತವಾಗಿದ್ದರೆ ಅದು ಆಗಂತುಕವೆಂದೆ ಹೇಳಬೇಕಲ್ಲವೆ? ಆಂಡಯ್ಯನಿಗೂ ಇದರ ಅರಿವು ಇರಬೇಕೆಂದು ತೋರುತ್ತದೆ. 'ಇದು ಕನ್ನಡನಾಡು' ಎಂದಿಷ್ಟೆ ಹೇಳದೆ 'ಕನ್ನಡಂ ಎನಿಪ್ಪ ಆ ನಾಡು' ಎಂಬ ಪದಸಮುಚ್ಚಯದಿಂದ ಆಂಡಯ್ಯನು ಈ ಅಭಿಪ್ರಾಯವನ್ನೆ ಬಲುಜಾಣ್ಮೆಯಿಂದ ಸೂಕ್ಷ್ಮವಾಗಿ ವ್ಯಕ್ತಪಡಿಸಿರುವನೇನೊ?

ಇನ್ನೂ ಒಂದು ತೊಡಕು! 'ಕನ್ನಡ' ಇದೊಂದೆ ಇದ್ದುದಾದರೆ ಹೇಗೋ ಏನೊ ಸಮಾಧಾನಪಟ್ಟು ಕೊಂಡಿರಬಹುದಾಗಿತ್ತು. ಆದರೆ, ಈಗ ವಿಜಾಪೂರ ಜಿಲ್ಹೆಯಲ್ಲಿ ಇನ್ನೂ ಒಂದು 'ಕನ್ನಡ'ವು ಬೆಳಕಿಗೆ ಬಂದಿದೆ. ಅದು ಕನ್ನಡ, ನಾಲ್ಕು ಸಾವಿರದ ನಾಡು. ಹುನಗುಂದ ತಾಲ್ಲೂಕು ಕಂದಗಲ್ಲಿನಲ್ಲಿ ದೇವಗಿರಿ ಯಾದವನ (೧೨೧೦) ಒಂದು ಶಾಸನವು ದೊರೆತಿದೆ. ಅದರಲ್ಲಿ ಕನ್ನಡ ನಾಲ್ಕುಸಾವಿರಕ್ಕೆ ಕಂದಗಲ್ಲವೆಳೆಗೆಯಮನೆ* ಆಂಡಯ್ಯನು ಇದ್ದುದು ಸುಮಾರು ಕ್ರಿ.ಶ. ೧೩೩೫, ಕಂದಗಲ್ಲ ಶಾಸನದ ಕಾಲವು ಸುಮಾರು ೧೨೧೦. ಆದುದರಿಂದ ಆಂಡಯ್ಯನು ವರ್ಣಿಸಿದುದು ಈ ಕನ್ನಡ ನಾಲ್ಕುಸಾವಿರದ ನಾಡು ಆಗಿರಲಿಕ್ಕಿಲ್ಲವಷ್ಟೆ? ಎಂಬ ಸಂದೇಹವು ಒಂದು ಅರೆಗಳಿಗೆ ಮುಂದೆ ಬಂದು ನಿಲ್ಲುವುದು. ಆದರೆ, ಅದು ಅರಗಳಿಗೆಯೇ. ಏಕೆಂದರೆ, ಆಂಡಯ್ಯನು ವರ್ಣಿಸಿದುದು 'ಮೆಲ್ಲೆಲರಿಂ, ಪೂತಕೊಳಂಗಳಿಂ, ಕಾಲೂರ್ಗಳಿಂ, ಕೆಯ್ಗಳಿಂ' ಮೆರೆಯುತಿದ್ದು 'ಹಲವು ನಾಲಗೆಗಳುಳ್ಳ ಆದಿಶೇಷನು ಸಹ ಯಾವ ನಾಡಿನ ಸೃಷ್ಟಿಸೌಂದರ್ಯವನ್ನು ಸಂಪೂರ್ಣವಾಗಿ ಹೇಳಲಾರನೊ' ಅಂತಹ ಭುವನದ ನಂದನವನದಂತಿರುವ ಮಲೆನಾಡೆ ಹೊರ್ತು 'ಊರು ಸನಿಹದಲಿಲ್ಲದೆ, ನೂರೊಂದು ಗಾವುದವಿರುವ ಸೇರಿ ನಿಲ್ಲುವರೆ ನೆರಳಿಲ್ಲದ' ಎರೆನಾಡು ಆಗಿರಲಾರದು. ಕವಿಗಳು ಎಷ್ಟೇ ಅತಿಶಯೋಕ್ತಿಯನ್ನು ಮಾಡುತ್ತಾರೆಂದು ಕಲ್ಪಿಸಿದರೂ ಅದರಲ್ಲಿ ಕೂಡ ಒಂದು ಮರ್ಯಾದೆಯಿದೆ.

ಅಂತೂ ಹದಿಮೂರನೆಯ ಶತಮಾನದ ಸುಮಾರಿಗೆ ಎರಡು ಕನ್ನಡಗಳು! ಆದರೆ, ಎರಡೂ ಪ್ರಾಚೀನಕಾಲ ದಿಂದ ನಡೆದು ಬಂದ ಹೆಸರುಗಳಲ್ಲ. ಕಂದಗಲ್ಲ ಭಾಗವು ಆ ಸೀಮೆಯಲ್ಲಿ ಬಿಜ್ಜಳನು (೧೧೫೭-೧೧೬೭) ಆಳುತ್ತಿದ್ದಾಗ ತರ್ದ್ದವಾಡಿಯಲ್ಲಿ ಗಣ್ಯವಾಗಿತ್ತು. ಬನವಾಸಿನಾಡಿನಂತೆ ಇದರ ಹೆಸರು ಏನೊ ಆಕಸ್ಮಿಕ ಘಟನೆಗಳಿಂದ ಬದಲಾಗಿರಬೇಕು. ತುಳು-ಬನವಾಸಿ ನಾಡಿಗೆ ಈ ಕಾಲಕ್ಕೆ ಬಂದ ಹೊಸ ಹೆಸರು ಒಂದಿಲ್ಲೊಂದು ರೂಪದಲ್ಲಿ (ಉತ್ತರ ದಕ್ಷಿಣ ಕನ್ನಡ, ಕ್ಯಾನರಾ ಜಿಲ್ಲೆ) ಹೇಗೂ ಉಳಿದಿದೆ. ಆದರೆ, ಕಂದಗಲ್ಲ ಸೀಮೆಯಲ್ಲಿ ಆ ಹೆಸರಿನ ಸುಳಿವೂ ಸಹ ಇಲ್ಲ. ಕಲಾದಗಿ ಜಿಲ್ಹೆ ವಿಜಾಪೂರಜಿಲ್ಹೆ ಎಂಬ 'ಕನ್ನಡ'ಕ್ಕೆ ಏನೂ ಸಂಬಂಧವಿಲ್ಲದ ಹೆಸರುಗಳು! ಥಕ್ಕನೆ ಬಂದುವು ತಟ್ಟನೆ ಹೋದುವು. ಜನರ ಮನಸ್ಸಿನಲ್ಲಿ ಬೇರೂರಿದ ಹೆಸರುಗಳು ಒಮ್ಮೆಲೆ ಎಂದೂ ಬದಲಾಗುವುದಿಲ್ಲ. ಒಬ್ಬ ಮನುಷ್ಯನ ಬದಲಾದ ಹೊಸ ಹೆಸರು ರೂಢಿಯಲ್ಲಿ ಬರುವುದಕ್ಕೆ ಎಷ್ಟೋ ಕಷ್ಟ, ಎಷ್ಟೊ ಕಾಲವು ಬೇಕಾಗುವುದು. ಅಂದ ಬಳಿಕ, ಸಾವಿರಾರು ಜನಗಳುಳ್ಳ ನಾಡಿನ ಮಾತೇನು? ಅನೇಕ ಶತಮಾನಗಳಿಂದ ಒಳಗೊಳಗೆ ಪರಿವರ್ತನಗಳು ನಡೆದು ನಡೆದು ಕೊನೆಗೊಮ್ಮೆ ತತ್ಕಾಲಕ್ಕೆ ಒದಗಿದ ಒಂದು ವಿಶೇಷ ಘಟನೆಯಿಂದ ಅದರ ನವೀನ ನಾಮಕರಣವಿಧಿಯು ಪೂರ್ಣವಾಗುವುದುಂಟು. ಹದಿಮೂರನೆಯ ಶತಮಾನದಲ್ಲಿ ತಲೆಯೆತ್ತಿದ ಕನ್ನಡಗಳೆರಡೂ ಬನವಾಸಿ ಮತ್ತು ಬಾದಾಮಿ ಎಂಬ ಹೆಸರಿನಿಂದ ಅತಿ ಪ್ರಾಚೀನ ಕಾಲದಿಂದಲೂ ಪ್ರಖ್ಯಾತವಾದ ನಾಡುಗಳು. ಇಲ್ಲಿ ರಾಜಾಶ್ರಯವನ್ನು ಹೊಂದಿ ನೆಮ್ಮದಿಯಿಂದ ಬಾಳುವುದಕ್ಕೆ ಸಾವಿರಾರು ಜನರು ಬೇರೆಡೆಗಳಿಂದ ಮೇಲಿಂದ ಮೇಲೆ ಬರುತ್ತಿದ್ದರೆ ಸೋಜಿಗವಿಲ್ಲ. ಹೀಗೆ, ಹೊರಗಿನವರು ಗುಳೆಕಟ್ಟಿಕೊಂಡು ಈ ನಾಡಿನಲ್ಲಿ ಕಾಲೂರಿ ನಿಲ್ಲಲು ಕ್ರಿ. ಶ. ೫-೬ನೆಯ ಶತಮಾನಕ್ಕೆ ಮೊದಲಿನಿಂದಲೆ

---

* ಶ್ರೀಮದಯ್ಯಾವಳಿಯಯ್ನೂರ್ವ್ವಸ್ವಾಮಿಗಳು ಮುಖ್ಯವಾಗಿ ಕನ್ನಡನಾಲ್ ಸಾಯಿರಕರ (ವೇಂ) ಕೆಗೊಣಂ ಮಳಿಗೆಯ ಮನೆ ಕಂದಗಲೆಯ ಸ್ಥಳದಲು ಶ್ರೀಮನ್ಮಹಾಪ್ರಭು ಜಕ್ಕರಸನ ಮಗ ಸೋಮರಸನು......... The Archeological servey of India 1928-29 Page 118..........

ಬರುವುದಕ್ಕೆ ಆರಂಭವಾಗಿರಬೇಕು. ೧೩ನೆಯ ಶತಮಾನದ ಆರಂಭಕ್ಕೆ ಇದರ ಪರಮಾವಧಿಯಾಗಿ ಬಂದ ಜನರ ಹೆಚ್ಚಳದಿಂದ ತುಳು, ಬನವಾಸಿ ಮತ್ತು ಬಾದಾಮಿ ನಾಡುಗಳಿಗೆ ಕನ್ನಡ ವೆಂಬ ಹೊಸ ಹೆಸರು ಪ್ರಾಪ್ತವಾಗಿರುವ ಸಂಭವವಿದೆ.

ಪ್ರಬಲವಾದ ಹೆಸರು ಮುಂದೆ ಬರುವುದು; ಪ್ರಾಶಸ್ತ್ಯವನ್ನು ಪಡೆದ ಹೆಸರೆ ಪ್ರಸಿದ್ಧಿಯನ್ನು ಹೊಂದುವುದು ಸಾಮಾನ್ಯ ಸಿದ್ಧಾಂತ. ಹಳೆಯ ಹೆಸರು ಹಿಂದೆ ಬಿದ್ದು ತುಳು, ಬನವಾಸಿ, ಮತ್ತು ಬಾದಾಮಿ ನಾಡುಗಳಲ್ಲಿ 'ಕನ್ನಡ'ವೆಂಬ ಹೊಸ ಹೆಸರು ೧೩ನೆಯ ಶತಮಾನದ ಆರಂಭದಲ್ಲಿ ಪ್ರಖ್ಯಾತಿಯನ್ನು ಪಡೆದಿರಬೇಕು. ಈ ಪ್ರದೇಶಗಳ ನವೀನ ನಾಮಕರಣಕ್ಕೆ ಹೊಸತಾಗಿ ಬಂದು ಊರಿಕೊಂಡು ನಿಲ್ಲುತ್ತಿರುವ ಜನಗಳೆ ಕಾರಣವಾಗಿರಬೇಕಲ್ಲವೆ? ಇತಿಹಾಸದಲ್ಲಿ ಇಂತಹ ಉದಾಹರಣೆಗಳಿಗೆ ಕೊರತೆಯಿಲ್ಲ. ಅಹಿರ (ಆಭೀರ)ರು ಒಕ್ಕಲಾದ ನಾಡು ಆಭೀರದೇಶ. ಆಭೀರದೇಶವು ಕ್ರಿಸ್ತಶಕದ ಮೊದಲು ಸಿಂಧ ಪಂಜಾಬಗಳ ಕಡೆಗೆ ಇತ್ತು. ಅವರು ೩-೪ನೆಯ ಶತಕದ ಸುಮಾರಿಗೆ ಮಾಳವಾ ಖಾನದೇಶಗಳನ್ನು ಆಕ್ರಮಿಸಿದ ಬಳಿಕ ಆ ಸೀಮೆಯ ಕೆಲವೊಂದು ಭಾಗಕ್ಕೂ ಆಭೀರದೇಶವೆಂಬ ಹೊಸ ಹೆಸರಾಯಿತು. ಹೀಗೆ, ಆಭೀರರು (ಅಹಿರರು) ನಿಂತಲ್ಲಿ ಆಭೀರ ದೇಶವಾದ ಉದಾಹರಣವಿದೆ. ಅದರಂತೆ ತುಳು, ಬನವಾಸಿ, ಬಾದಾಮಿನಾಡುಗಳಿಗೆ 'ಕನ್ನಡ'ವೆಂಬ ಹೊಸ ಹೆಸರು ಬರಬೇಕಾದರೆ ಇಲ್ಲಿ ಕಾಲೂರಿ ನಿಲ್ಲಲು ಬಂದವರು ಕನ್ನಡರೆ ಆಗಿರಲಿಕ್ಕೆ ಬೇಕಲ್ಲವೇ? ಬಂದ ಜನಾಂಗವು ಕನ್ನಡವಾಗಿದ್ದ ಬಳಿಕ ಇವರು ಮೊದಲು ನೆಲೆಸಿದ್ದ ನಾಡಿನ ಹೆಸರು 'ಕನ್ನಡ' 'ಕರ್ನಾಟಕ' ವಾಗಿರಬೇಕೆಂದು ಬೇರೆ ಹೇಳಬೇಕೇಕೆ? ಈ ಬಂದ ಜನಗಳು ತೆಂಕಣರಲ್ಲ. ನೀಲಗಿರಿ ಮತ್ತು ಮೈಸೂರು ಸೀಮೆಯಲ್ಲಿ ಇರುವ 'ಬಡಗರೇ' (ಉತ್ತರದವರು) ಇದಕ್ಕೆ ನಿದರ್ಶನ. ತುಳು, ಬನವಾಸಿ, ಬಾದಾಮಿ ನಾಡಿಗೆ ಬಂದವರ ಮೇಲುಗೈಯಾಗಿ ಆ ನಾಡಿಗೂ ಅವರ ಹೆಸರೇ (ಅಂದರೆ 'ಕನ್ನಡ') ಬಂದಿದ್ದರೆ ಸೋಜಿಗವಲ್ಲ. ತುಳು, ಬನವಾಸಿ, ಬಾದಾಮಿಗಳ ಕಡೆಗೆ ತುಂಬಾ ಜನರು ಬಂದಿರಬೇಕು. ಅಷ್ಟು ಪ್ರಬಲವೆನಿಸುವಷ್ಟು ಜನಗಳು ನೀಲಗಿರಿ ಮಹಿಷಮಂಡಲಗಳ ಕಡೆಗೆ ಹೋಗದೆ ಇದ್ದುದರಿಂದ ಇವರಿಗೆ ಅಲ್ಲಿ ಬರಿ 'ಬಡಗರು' - ಉತ್ತರದಿಂದ ಬಂದವರು -ಎಂಬ ಹೆಸರು ಮಾತ್ರ ಬಂದಿರಲಿಕ್ಕೆ ಸಾಕು. ಒಟ್ಟಿನಲ್ಲಿ ಹೇಳುವುದಾದರೆ, ಒಂದಾನೊಂದು ಕಾಲದಲ್ಲಿ ಉತ್ತರಕ್ಕೆ ಎಲ್ಲಿಯೊ ಒಂದು ನಾಡಿನಲ್ಲಿ ಕನ್ನಡ ಜನಾಂಗವು ನೆಲೆಯಾಗಿರಬೇಕೆಂದು ಊಹಿಸಲು ಅಡ್ಡಿ ಇಲ್ಲ. ಆದರೆ ಎರಡನೆಯ ಪರಿಚ್ಛೇದದ ಕೊನೆಗೆ, ಕರ್ನಾಟಕವು ಹೊರಗೆ ಎಲ್ಲಿಯಾದರೂ ಇದ್ದರೆ, ಅದು ಗೋದಾವರಿಯ ಮೇಗಡೆಯಲ್ಲಿಯೇ ಇರಲಿಕ್ಕೆ ಬೇಕು ಎಂದು ಇನ್ನೊಂದು ಬಗೆಯಿಂದ ವಿಚಾರಿಸಿ ಅನುಮಾನಿಸಿದ್ದಾಗಿದೆ. ಕನ್ನಡ ಜನಾಂಗವಿದ್ದಿತೆಂದು ಐತಿಹಾಸಿಕ ಸಂಗತಿಗಳು ಸೂಚಿಸುತ್ತಲಿವೆ. ಕರ್ನಾಟಕವು ಪ್ರತ್ಯೇಕವಾಗಿದ್ದಿತೆಂದು ಮಹಾಭಾರತಾದಿಗಳಿಂದ ವ್ಯಕ್ತವಾಗುತ್ತಲಿದೆ. ಆದುದರಿಂದ, ಗೋದಾವರಿಯ ಮೇಗಡೆಯ ಈಗಿನ ಖಾನದೇಶ, ವರ್‍ಹಾಡಗಳನ್ನೊಳಗೊಂಡ ಪ್ರದೇಶವೇ ಪ್ರಾಚೀನ ಕರ್ನಾಟಕವಾಗಿದ್ದಿತೆಂದು ಎಣಿಸಲು ಅಡ್ಡಿಯೇನು?

ಗೋದಾವರಿಯ ಉತ್ತರದಲ್ಲಿ ಕನ್ನಡದ ಕುರುಹುಗಳು

ಈವರೆಗಿನ ಅನುಮಾನ, ಊಹೆಗಳಿಗಿಂತಲೂ ಸಬಲವಾದ ಪ್ರಮಾಣಗಳೇನಾದರೂ ಉಂಟೆ? ಇಲ್ಲವಾದರೆ ಬರಿ ಬಹುದುಗಿಹುದುಗಳಿಂದ ಯಾರ ಮನಸ್ಸಿಗೂ ಸಾಕಷ್ಟು ತೃಪ್ತಿಯಾಗಲಾರದೆಂದು ಕೆಲವರು ಆಕ್ಷೇಪಿಸಬಹುದು. ಹಿಂದಕ್ಕೆ ಗೋದಾವರಿಯ ಮೇಗಡೆಯಲ್ಲಿ ಕರ್ನಾಟಕವು ಇದ್ದಿತೆಂದು ಸಿದ್ಧಮಾಡಿ ತೋರಿಸುವುದಕ್ಕೆ ತರ್ಕಕ್ಕಿಂತಲೂ ಹೆಚ್ಚಿನ ಆಧಾರಗಳು ಇಲ್ಲದಿಲ್ಲ. ಆದರೆ, ಅವುಗಳಲ್ಲಿ ಒಂದೊಂದೇ ಪ್ರಮಾಣವನ್ನು ಬೇರೆ ಬೇರೆಯಾಗಿ ವಿಚಾರಿಸಿದರೆ ಅದು ಅಷ್ಟು ಸಬಲವೆನಿಸಲಾರದು. ಪ್ರಮಾಣಗಳ ದುರ್ಬಲತೆಯು ಇದಕ್ಕೆ ಕಾರಣವಲ್ಲ.

ಕರ್ನಾಟರು ೧೫೦೦-೨೦೦೦ ವರುಷಗಳಿಂದ ಮೈಮರೆತು, ಮನಮರೆತು ವರ್ತಿಸಿದುದರ ಫಲವಿದು. ಆದುದರಿಂದ, ಅವೆಲ್ಲ ಆಧಾರಗಳನ್ನು ಸಮಾಲೋಚಿಸಿ ಕೇಂದ್ರೀಕರಿಸಿ ನೋಡಿದರೆ 'ಪ್ರಾಚೀನ ಕರ್ನಾಟಕವು ಇದ್ದರೆ ಅದು ಇಲ್ಲಿಯೆ' ಎಂದು ಹೇಳುವ ಗತ್ಯಂತರವಿಲ್ಲ. ಈ ವಿಷಯದಲ್ಲಿ ಪ್ರಾಚೀನ ಅಥವಾ ಅರ್ವಾಚೀನ ಪಂಡಿತರೊಳಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ದ್ರವಿಡರು ದಕ್ಷಿಣದಿಂದ ಹಿಂದೂದೇಶವನ್ನು ಹೊಕ್ಕರು ಎಂದು ಹೇಳಲಿ, ಅಥವಾ ಆರ್ಯರಂತೆ ವಾಯವ್ಯ ದಿಕ್ಕಿನಿಂದ ಬಂದರೆಂದು ಹೇಳಲಿ, ಇದಾವುದರಿಂದಲೂ ವಿಂಧ್ಯಗಿರಿಯಿಂದ ತೆಂಕಣಕ್ಕೆ ದ್ರವಿಡರ ಪ್ರಾಬಲ್ಯವಿತ್ತೆಂಬ ಮತಕ್ಕೆ ವಿರೋಧವುಂಟಾಗುವುದಿಲ್ಲ. ಆರ್ಯರಿಂದಲೂ ಮೊದಲು ಹಿಂದೂದೇಶದಲ್ಲಿ ನೆಲೆಸಿದವರು ದ್ರವಿಡರೆಂದು ಸಂಶೋಧಕರು ಸಿದ್ಧ ಮಾಡಿದ್ದಾರೆ. ಆರ್ಯಾವರ್ತದ ಸೀಮಾ ಪ್ರದೇಶದಲ್ಲಿದ್ದು ಆರ್ಯರನ್ನು ಮೇಲಿಂದ ಮೇಲೆ ಪೀಡಿಸುತ್ತಿದ್ದ ಅನಾರ್ಯರ ತಂಡಗಳ ಉಲ್ಲೇಖಗಳು ವೇದಗಳಲ್ಲಿ ಬೇಕಾದಷ್ಟಿವೆ. ಭಿನ್ನ ಸಂಸ್ಕೃತಿಯ, ಭಿನ್ನ ಅಭಿರುಚಿಯ ತಂಡಗಳು ಒಂದಕ್ಕೊಂದು ಎದುರಾಗಲು ಅವರು ಆರಂಭಕ್ಕೆ ಒಬ್ಬರೊಬ್ಬರಿಗೆ ಹೆಸರಿಡುವ ಬಗೆಯು ವಿಚಾರಣೀಯವಾಗಿದೆ. ಆ ತಂಡಗಳಲ್ಲಿ ಇದ್ದ ಆರಂಭದ ತಿರಸ್ಕಾರವು, ವೈಮನಸ್ಯವು ಆ ಹೆಸರುಗಳಲ್ಲಿ ಚೆನ್ನಾಗಿ ಒಡೆದು ಕಾಣುತ್ತಿರುತ್ತದೆ. ಎಷ್ಟೋ ಸಾರೆ, ಈ ಬಗೆಯ ಹಲವು ಹೆಸರುಗಳಲ್ಲಿ ಎದುರುಬಂದ ತಂಡಗಳ ಒಂದೊಂದು ಗುಣ ವಿಶೇಷವೂ ಧ್ವನಿತವಾಗುತ್ತಿರುವುದುಂಟು. ವೇದಕಾಲದಿಂದ ಸಂಸ್ಕೃತ ಶಬ್ದಭಾಂಡಾರದಲ್ಲಿ ಕಣ್ಣಿಗೆ ಬೀಳುವ ದಸ್ಯು, ಅಸುರ, ಶಬರ, ನಿಷಾದ, ಆಂಧ್ರ ಮೊದಲಾದ ನುಡಿಗಳೇ ಇದಕ್ಕೆ ನಿದರ್ಶನ.

ಆರ್ಯರಿಗೆ ತಮ್ಮ ಆರ್ಯಾವರ್ತದ ವಿಷಯದಲ್ಲಿದ್ದ ಅಭಿಮಾನವು ಅನ್ಯಾದೃಶ. ಆರ್ಯಾವರ್ತದಿಂದ ಹೊರಗೆ ಹೋಗುವುದು ಅಧಾರ್ಮಿಕ ಅಧೋಗತಿಗೆ ಕಾರಣವೆಂಬ ವಿಚಾರವು ಒಂದು ಕಾಲಕ್ಕೆ ಬಹಳ ಪ್ರಬಲವಾಗಿದ್ದಿತು. ಸಾಮಾನ್ಯವಾಗಿ ಹಿಮವತ್ಪರ್ವತ ಮತ್ತು ವಿಂಧ್ಯಗಳ ನಡುವಿನ ನಾಡು ಆರ್ಯಾವರ್ತ[೮] ಇದರ ದಕ್ಷಿಣಕ್ಕೆ ಮಲಯ (ಮಾಳವಾ)ದ ಭೀಕರವಾದ ಅರಣ್ಯ ಆರ್ಯರಿಗೆ ಬೇಡರಾದವರ ನಾಡು. ದಕ್ಷಿಣವು ಮೃತ್ಯುಲೋಕ, ಯಮಲೋಕವೆಂದಿರುವಲ್ಲಿ ಈ ಜನಗಳ ವಿಷಯಕ್ಕೆ ಆರ್ಯರಿಗಿದ್ದ ಭಾವನೆಯೆ ಒಡಮೂಡಿಲ್ಲವೆಂದು ಹೇಗೆ ಹೇಳಲಿಕ್ಕಾದೀತು? ಯಮರಾಯನ ಮೈಬಣ್ಣ ವೆಂತಹುದು? ಅಸುರರ (ಕಪ್ಪು) ಮೈಬಣ್ಣವು ದೇವಗಣ್ಯನಾದ ಯಮನಿಗೂ ಇರಬೇಕೆ! ಆವುದೇ ಶುಭಕಾರ್ಯದಲ್ಲಿ ಮೋರೆ ಸಹ ತಿರುವುಗಳಾದ, ಅಮಂಗಲಕರವಾದ ದಿಕ್ಕು ದಕ್ಷಿಣ! ಪಶ್ಚಿಮ ದಿಕ್ಕಿನ ಬಗ್ಗೆ ಮುಸಲ್ಮಾನರಲ್ಲಿರುವ ಭಕ್ತಿ ಪ್ರೀತಿಗಳು ಆರ್ಯರಿಗೆ ಉತ್ತರ ದಿಕ್ಕಿನ ಸಲುವಾಗಿ; ಅಭಿವೃದ್ಧಿಯಾಗಲಿ, ಏಳ್ಗೆಯನ್ನು ಹೊಂದಲಿ ಎಂಬ ಹರಕೆಗೆ ಉತ್ತರೋತ್ತರವಾಗಲಿ ಎಂದು ನಾಡನುಡಿ! ಆರ್ಯಾವರ್ತವನ್ನು ಬಿಟ್ಟು ಹೊರಗೆ ಹೋದವನು ವ್ರಾತ್ಯನು ಅನಾರ್ಯನಿಗೆ ಸಮಾನನು. ಇವನನ್ನು ಮರಳಿ ಆರ್ಯನನ್ನಾಗಿ ಮಾಡಿಕೊಳ್ಳಲು ವ್ರಾತ್ಯಸ್ತೋಮವೆಂಬ ವೈದಿಕ ವಿಧಿ ವಿಧಾನವಾಗಬೇಕು.

'ಆತ್ಮಘಾತಿಗಳು-ಅನಾಚಾರಿಗಳು. ಅಸುರನಾಡಿಗೆ ಹೋಗುವರು. ಅಸುರರ ನಾಡು ಕಗ್ಗತ್ತಲೆಯಿಂದ ಮುಸುಕಿದೆ.

ಅಸುರ್ಯಾನಾಮ ತೇ ಲೋಕಾಃ ಅಂಧೇನ ತಮಸಾವೃತಾಃ!
ತಾನ್ ತೇ ಪ್ರೇತ್ಯಾಭಿಗಚ್ಛಂತಿ ಯೇ ಕೇ ಚಾತ್ಮಹನೋ ಜನಾಃ'

ಎಂದು ಈಶಾವಾಸ್ಯೋಪನಿಷತ್ತಿನಲ್ಲಿ (೩) ಹೇಳಿದ್ದು ಕೇವಲ ಸಾಂಕೇತಿಕ ಅರ್ಥದಿಂದಲ್ಲ. ಮಲಯ (ಮಾಳವಾ), ವಿಂಧ್ಯ, ದಂಡಕಾರಣ್ಯಗಳ ಕಗ್ಗತ್ತಲ ನಾಡಿನಲ್ಲಿ ನೆಲಸಿದ್ದ ಕಪ್ಪುಬಣ್ಣದ ಜನಗಳೆ ಕಣ್ಣೆದುರಿಗೆ ಕಟ್ಟಿ ಆ ಮನೀಷಿಯು (ಜ್ಞಾನಿಯು) ಈ ಬಗೆಯಾಗಿ ಉಸಿರಿರುವುದು ಅಸಂಭವನೀಯವಲ್ಲ. ಈಶಾವಾಸ್ಯದ ಕವಿಯು ಉಲ್ಲೇಖಿಸಿದ ಅಂಧಂತಮಸ್ಸಿನ ಲೋಕದವರಿಗೆ ಮುಂದೆ ಐತರೇಯ-ಬ್ರಾಹ್ಮಣದಲ್ಲಿ (ಅಂಧಸ್-ಅಂಧರ್) ಆಂಧ್ರರೆಂದು ಹೇಳಿರಲಿಕ್ಕೆ ಸಾಕು.

ಈಶಾವಾಸ್ಯವು ಯುರ್ವೇದೀಯ ಕಾಣ್ವಶಾಖೆಯ ಉಪನಿಷತ್ತು. ಅನೇಕಾನೇಕ ಯಜುರ್ವೇದಿಗಳು ದಕ್ಷಿಣಕ್ಕೆ

ನೆಲೆಯಾಗಲು ಹೊರಡುತ್ತಿದ್ದುದು ಈ ಉಪನಿಷತ್ಕಾರರಿಗೆ ಸಮ್ಮತವಿದ್ದಿಲ್ಲವೆಂದು ತೋರುತ್ತದೆ. ಇದೇ ಶಾಖೆಯ ಯಾಜ್ಞವಲ್ಕ್ಯನು 'ಮುಕ್ತಸ್ಥಿತಿಯಲ್ಲಿ ಮನುಷ್ಯನು ಪರಿವ್ರಾಜಕನಾಗಿ, ಭಿಕ್ಷಾಚರ್ಯೆಯಿಂದ ಜೀವಿಸುತ್ತ' ಎಲ್ಲಿ, ಬೇಕಾದಲ್ಲಿರಬಹುದು ಎಂದು ಹೇಳುತ್ತಾನೆ.[೯] ಆ ಕಾಲದಲ್ಲಿ ತಮ್ಮ ಸಂಸ್ಕೃತಿ, ಪರಂಪರೆಗಳನ್ನು ಕಾಯ್ದುಕೊಳ್ಳಬೇಕೆಂಬ ಆರ್ಯರಿಗೆ ಎರಡು ಬಗೆಯ ಸಂಕಟಗಳು ಉಂಟಾಗಿರಬೇಕು. ಹೆಣ್ಣು, ಹೊನ್ನು, ಮಣ್ಣಿನ ಎಳತದಿಂದ ಆರ್ಯಾವರ್ತವನ್ನು ತೊರೆಯಲು ಸಿದ್ಧರಾದ 'ವ್ರಾತ್ಯರ' ಚಿಂತೆಯೊಂದು, ಬ್ರಹ್ಮಾನಂದವು ದೊರೆತ ಬಳಿಕ ಮನೆಯೇನು ಮಠವೇನು, ನಾಡೇನು, ಕಾಡೇನು, ಎಲ್ಲವೂ ಅಷ್ಟೇ ಎಂದು ನಿಸ್ಸಂಗರಾಗಿ ಹೊರಟ ಪರಿವ್ರಾಜಕರ ಚಿಂತೆಯಿನ್ನೊಂದು. ಈ ಎರಡೂ ಜಾತಿಯ ಚರಂತಿಗಳು ಆತ್ಮಘಾತುಕರರಾಗಿ ಅಸುರಲೋಕಕ್ಕೆ ಹೋಗದೆ ಆರ್ಯಾವರ್ತದಲ್ಲಿಯೆ ಕಾಲೂರಿ ನಿಲ್ಲಬೇಕೆಂದು ಆರ್ಯಋಷಿಗಳು ಹಲವು ಬಗೆಯ ಯುಕ್ತಿಪ್ರಯುಕ್ತಿಗಳನ್ನು ಮಾಡಿದ್ದುಂಟು "ಕರ್ಮಿಯಾಗಿ, ಕಾಮುಕನಾಗಿ ಅವಿದ್ಯೆಯಲ್ಲಿ ಮೈಮರೆವ ವ್ರಾತ್ಯನೂ ಆಗಬೇಡ; ವಿದ್ಯೆವಿದ್ಯೆಯೆಂದು ಅಸಂಭೂತಿಯ ಅಭಿಮಾನಿಯು, ಬರಿ ಶೂನ್ಯ ಸಂಪಾದಕನೂ ಆಗಬೇಡ. ವಿದ್ಯೆ ಅವಿದ್ಯೆಗಳ ಹದವನರಿತು, ಸಂಭೂತಿ ಅಸಂಭೂತಿಗಳ ಕೀಲವನ್ನು ತಿಳಿದು ಸಮಕಟ್ಟಿನಿಂದ ಸಾಗು, ಎರಡೂ ಬಗೆಯ ಅತಿವಾದಗಳನ್ನು ಅಲ್ಲಗಳೆದು, ಸತ್ಯಸಮನ್ವಯದ ಸುವರ್ಣ ಮಧ್ಯವನ್ನು ಅನುಸರಿಸಿ ಆನಂದವನ್ನು ಅನುಭವಿಸು. ಇದೇ ಶಾಶ್ವತ ಧರ್ಮ; ಮಧ್ಯಮಾರ್ಗವನ್ನು ಬಿಟ್ಟವನು 'ಅಸುರರ ಅಂಧಂತಮಸ್ಸಿನ ಲೋಕಕ್ಕೆ ಹೋಗುವನು' ಎಂದು ಈಶಾವ್ಯಾಸವು ಒತ್ತಿ ಒತ್ತಿ ಹೇಳುತ್ತದೆ.[೧೦]

ಕಾಲಪ್ರವಾಹಕ್ಕೆ ಅಡ್ಡಗಟ್ಟಿ ಸಾಗಬೇಕಾದುದೇನು? ಆತ್ಮರಕ್ಷಣೆಯೆ ಮನುಷ್ಯನ ಮೂಲಸ್ವಭಾವ. ತಾನು ಬದುಕಬೇಕು ಎಂಬುದಕ್ಕಾಗಿಯೆ ತನ್ನತನದ ಅಭಿಮಾನವು 'ಅಹಂ' 'ಆಂ' - 'ನಾನು' ಇದು ಅವನೊಡನೆಯೇ ಹುಟ್ಟಿ ಬಂದಿರುತ್ತದೆ. 'ಅಹಂ'ದ ಸುವ್ಯವಸ್ಥಿತ ಸ್ವರೂಪವೇ ಪರಂಪರಾ ಪ್ರೀತಿ; ಸಂಪ್ರದಾಯಗಳ ಅಭಿಮಾನ; ಸಂಸ್ಕೃತಿ ಸಂರಕ್ಷಣಾಭಿಮಾನ. ಆದರೆ, ಆತ್ಮರಕ್ಷಣೆಯೊಂದೆ ಮನುಷ್ಯನ ಮೂಲ ಸ್ವಭಾವವಲ್ಲ; ಆತ್ಮವಿಸ್ತಾರದ ಇನ್ನೂ ಒಂದು ಮೂಲಭೂತ ಪ್ರವೃತ್ತಿಯು ಅವನಲ್ಲಿದೆ. ಸಿಡಿಲು ಗಾಳಿಗಳನ್ನು ತಡೆಯಬಹುದು. ಆದರೆ, ಮನುಷ್ಯನ ಮೂಲ ಪ್ರವೃತ್ತಿಗಳನ್ನು ವಿರೋಧಿಸುವುದು ಅಸಾಧ್ಯ. ಅನೇಕಾನೇಕ ಧಾರ್ಮಿಕ ಕಟ್ಟಳೆಗಳೂ ರಾಜ್ಯ ಸಾಮ್ರಾಜ್ಯಗಳೂ ಇದರ ಸೆಳೆತದಲ್ಲಿ ಸಿಲುಕಿ ನುಗ್ಗುನುಸಿಯಾಗಿದ್ದುದನ್ನು ಇತಿಹಾಸವು ಸಾರುತ್ತಲಿದೆ. ಅಸುರರೆಂದಾಯಿತು; ಅನಾರ್ಯರೆಂದು ಹೆಸರಿಟ್ಟುದೂ ಆಯಿತು. ಏನೆ ಎಂದರು ಮಲಯ ದಂಡಕಾರಣ್ಯಗಳ 'ಆಂಧ್ರ' (ಅಂಧಸ್ಸಿನ) ನಾಡಿಗೆ ಆರ್ಯರ ಒಂದು ಪಿಳ್ಳೆಯೂ ಹೋಗದಂತೆ ಮಾಡುವುದು ಮಾತ್ರ ಸಾಧ್ಯವಾಗಲಿಲ್ಲ. 'ಕಗ್ಗತ್ತಲೆಯ ಅಂದರೆ ಆಂಧ್ರ ನಾಡಿಗೆ ಹೋಗದಿರಿ ಎಂದು ಹಿಂದಿನ ಋಷಿಗಳು ಹೇಳುವುದರಲ್ಲಿಯೂ ಹುರುಳಿತ್ತು. ಆರ್ಯ ಪರಂಪರೆಯು ನಷ್ಟವಾದೀತು. ವರ್ಣ ಸಂಕರವಾಗಿ ಬಣ್ಣ ಕೆಟ್ಟೀತು ಎಂಬುದೆ ಅವರ ಹೆದರಿಕೆ. ಮೊದಲು ಹೋಗಿ ನೆಲೆಸಿದವರ ಹಾಡನ್ನು ಕಣ್ಣಾರೆ ಕಂಡೇ ಉಪನಿಷತ್ಕಾಲದ ಋಷಿಗಳು ಹೀಗೆ ಹೇಳಿದ್ದು - "ಅಂಧಂತಮಸ್ಸಿನ ನಾಡಿಗೆ ಹೋದವರು ಅನಾಚಾರಿಗಳಾಗುತ್ತಾರೆ. (ಅನಾಚಾರಿಗಳು ಅಂಧಂತಮಸ್ಸಿಗೆ ಹೋಗುತ್ತಾರೆ), ಎಂದು ನಮ್ಮ ಹಿರಿಯರಿಂದ ಕೇಳುತ್ತ ಬಂದಿದ್ದೇವೆ. (ಇತಿ ಶುಶ್ರುಮಧೀರಾಣಾಂ ಯೇನ ತದ್ವಿಚಚಕ್ಷಿರೇ)" ಎಂದು ಈಶ, ಬೃಹದಾರಣ್ಯಕಗಳಲ್ಲಿರುವ ಅವರ ಈ ಅನುಭವವು ತೀರ ಸುಳ್ಳಾಗಲಿಲ್ಲ.

ಕ್ಷತ್ರಿಯರಿಗೂ ವೈಶ್ಯರಿಗೂ ಜನಸಾಮಾನ್ಯರಲ್ಲಿ ಬೆರೆತುಕೊಳ್ಳದೆ ಬಾಳುವುದೆ ಸಾಧ್ಯವಿಲ್ಲ. ಆದುದರಿಂದ ನಾಡಿನವರೊಡನೆ ಸಮರಸವಾಗುವುದಕ್ಕೆ ಬಹಳ ಕಾಲವು ಹಿಡಿದಿರಲಿಕ್ಕಿಲ್ಲ. ಆದರೆ, ಬ್ರಾಹ್ಮಣರು ಮಾತ್ರ ಜೀವ ಹೋದರೂ ತಮ್ಮ ನುಡಿ, ತಮ್ಮ ನಡೆವಳಿಯನ್ನು ಬಿಡಲಿಕ್ಕಿಲ್ಲೆಂದು ಬದ್ಧಪ್ರತಿಜ್ಞರು. ಆ ಕಾಲದಲ್ಲಿ ಇವರಿಗೆ ಬಹುಜನ ಸಮಾಜದಿಂದ ಕೆಲದೂರವಿದ್ದೂ ನಡೆಯುವಂತಿತ್ತು. ಆದುದರಿಂದಲೇ, ಈ ವರ್ಗದವರಿಗೆ ಕೆಲವು ಮಟ್ಟಿಗಾದರೂ ತಮ್ಮ ವೈಶಿಷ್ಟ್ಯವನ್ನು ಕಾಯ್ದುಕೊಳ್ಳಲು ಸಾಧ್ಯವಾಯಿತು. ಆದರೂ ಅಂಧಂತಮಸ್ಸಿನ ಲೋಕದ ಕತ್ತಲೆಯು ಇವರಿಗೆ ಸಹ ಅಂಟಿಕೊಳ್ಳದೆ ಬಿಡಲಿಲ್ಲ. ಕಸ್ತೂರಿಯನ್ನು ಎತ್ತಿಕೊಳ್ಳುವಾಗ ನೆಲಕ್ಕೆ ಬಿದ್ದ ಮೃಗಮದದೊಡನೆ ಸ್ವಲ್ಪ ಮಣ್ಣಿನ ಅಂಶವೂ ಬರತಕ್ಕುದೆ. ವಸ್ತುವಿನೊಡನೆ ಅದರ ಕತ್ತಲೆಯೂ ಬೆನ್ನಬಿಡದು.

ಕರಿಯನು ಬ್ರಾಹ್ಮಣನು! ಧವಳಗಿರಿಯು ದಕ್ಷಿಣಕ್ಕೆ ಬಂದು ನೀಲಗಿರಿಯಾಯಿತು! ಬ್ರಾಹ್ಮಣರ ಮೇಲೆ ಕತ್ತಲೆ (ಅಂಧ್ರ) ನಾಡಿನ ಛಾಯೆ ಬಿದ್ದುದರ ಪರಿಣಾಮವಿದು. ಅವರಲ್ಲಿ ನಿಡುಮೂಗು, ವಿಶಾಲಾಕ್ಷ, ಭವ್ಯದೇಹ, ಗೌರಾಂಗಗಳು ಅಪರೂಪವಾಗುತ್ತಿವೆ. ಅಗಲಮೂಗು, ದಪ್ಪತುಟಿ, ಗುಳ್ಳೆಗಣ್ಣು, ಚೌಕುಮೋರೆ, ಸರಳವಲ್ಲದ ಕೇಶ, ಗಿಡ್ಡ ಆಕಾರ, ತಿಳಿಗಪ್ಪಿನಿಂದ ಇದ್ದಲಿಕಪ್ಪಿನ ವರೆಗೆ ಎಲ್ಲ ಬಗೆಯ ಕೃಷ್ಣವರ್ಣ, ಇವೆಲ್ಲವುಗಳೂ ಬ್ರಾಹ್ಮಣರಲ್ಲಿ ಸಮುಚ್ಚಯದಿಂದ ಗೋಚರವಾಗುವುದು ಕಡಮೆ. ಆದರೂ ಇವುಗಳಲ್ಲಿ ಒಂದೂ ಇಲ್ಲದಿರುವ ಮನೆ ಮಾತ್ರ ಒಂದೂ ಇಲ್ಲ. ಇದು ಉತ್ತರದವರ ಮೇಲೆ ಬಿದ್ದ ದಕ್ಷಿಣ ದೇಶದ ಮುದ್ರೆ; ಋಷಿಗಳ ಆದೇಶಗಳನ್ನು ಅತಿಕ್ರಮಿಸಿದುದಕ್ಕೆ ಪ್ರಾಯಶ್ಚಿತ್ತ. ಅಗಸ್ತ್ಯನು ವಿಂಧ್ಯದ ಬಲಿತ ಪುಚ್ಛಗಳನ್ನು ಕತ್ತರಿಸಿ ದಕ್ಷಿಣಾಪಥಕ್ಕೆ ಹೊರಡುವವರಿಗೆ ದಾರಿಯನ್ನು ಮಾಡಿ ಕೊಟ್ಟವರಲ್ಲಿ ಮೊದಲಿಗನೆಂದು ಬಲ್ಲವರ ಅಭಿಪ್ರಾಯ 'ಗುಂಪು ಕಟ್ಟಿ ಕೊಂಡು ಬ್ರಾಹ್ಮಣರಲ್ಲಿ ಮೊದಲು ಹೊರಟವರು ಯಜುರ್ವೇದಿಗಳು' ಎಂದು ಇರುವ ಗ್ರಹಿಕೆಯಲ್ಲಿ ಸತ್ಯಾಂಶವು ಇಲ್ಲದಿಲ್ಲ. ಅಂಧಂತಮನಸ್ಸಿನ ಲೋಕದ ಉಲ್ಲೇಖವು ಯಜುರ್ವೇದೀಯ ಉಪನಿಷತ್ತುಗಳಲ್ಲಿರುವುದೂ ಯಜುರ್ವೇದದಲ್ಲಿ ಕೃಷ್ಣ ಮತ್ತು ಶುಕ್ಲವೆಂಬ ಶಾಖೆಗಳಿರುವುದೂ ಈ ಊಹೆಗೆ ಇನ್ನಿಷ್ಟು ಪೋಷಕವಾಗಿದೆ. ಕಣ್ವನು (ಯಜುರ್ವೇದಿ) ಆಂಧ್ರಭಾಷೆಯ ಆದಿವ್ಯಾಕರಣಕಾರನೆಂಬ ದಂತಕಥೆಯು ಸಟೆಯಿರಲಿ ದಿಟವಿರಲಿ ಇದನ್ನೇ ಸೂಚಿಸುವುದು. (ಅಂಧರ್) ಆಂಧ್ರ ನಾಡಿಗೆ ಹೊರಟ ಬ್ರಾಹ್ಮಣರಲ್ಲಿ ಕಣ್ವರೆ ಪ್ರಥಮ ಶಾಖೆಯವರಾಗಿರಬೇಕು. ಕಣ್ವಶಾಖೆಯವರಿಗೆ ಪ್ರಥಮ ಶಾಖೆಯವರೆಂದು ಈಗಲೂ ಹೇಳುವುದುಂಟು. ಬ್ರಾಹ್ಮಣರು ಪ್ರಥಮ, ದ್ವಿತೀಯ ಎಂದು ಮುಂತಾಗಿ ತಮ್ಮ ಶಾಖೆಗಳನ್ನು ಹೇಳುವುದಿಲ್ಲ. ಕಾಣ್ವರು ಸಹ ನಿತ್ಯ ಸಂಧ್ಯಾವಂದನೆಯಲ್ಲಿ ಕೊನೆಗೆ ಕಾಣ್ವಶಾಖೆಯೆಂದು ಉಚ್ಚರಿಸುವರೆ ಹೊರತು ಪ್ರಥಮಶಾಖೆಯೆಂದು ಹೇಳುವ ಪರಿಪಾಠವು ಅವರಲ್ಲಿಲ್ಲ. ಆದರೂ ಇವರಿಗೆ ಪ್ರಥಮಶಾಖೆಯವರೆಂದು ಸಂಜ್ಞೆ!

ದ್ರವಿಡ ಶಬ್ದವು ಆಂಧ್ರದಷ್ಟು ಪ್ರಾಚೀನವಲ್ಲ. ಆಂಧ್ರ ಶಬ್ದವು ಐತರೇಯ ಬ್ರಾಹ್ಮಣದಲ್ಲಿದೆ. ದ್ರವಿಡ ಶಬ್ದವನ್ನು ಆ ತರುವಾಯದ ಲೇಖನಗಳಲ್ಲಿ ಅಂದರೆ ಬೌದ್ಧರ ಗ್ರಂಥಗಳಲ್ಲಿ ಪುರಾಣಗಳಲ್ಲಿ ಮಾತ್ರ ಕಾಣಬಹುದು. ಆಂಧ್ರಶಬ್ದವು ಹಿಂದೆ ಬಿದ್ದು ಮುಂದೆ ದ್ರಾವಿಡ ಶಬ್ದಕ್ಕೆ ಪ್ರಾಶಸ್ತ್ಯವು ದೊರೆಯುತ್ತ ನಡೆದುದಕ್ಕೂ ಕಾರಣವಿದೆ. ಕಗ್ಗತ್ತಲೆಯ ಅಸುರರ ನಾಡು ಎಂಬ ಅರ್ಥವು ಅಂಟಿಕೊಂಡಿದ್ದ ಆಂಧ್ರಶಬ್ದವು ಇಲ್ಲಿ ಬೀಡುಮಾಡಿಕೊಂಡಿರುವ ಸ್ವಾಭಿಮಾನಿಗಳಿಗೆ ಹೇಗೆ ರುಚಿಸಬೇಕು? ತಿಳಿವು ತಲೆದೋರಿದವನು ಹೆರವರಿಂದ ಹೆಸರಿಡಿಸಿಕೊಳ್ಳಲು ಎಂದೂ ಒಪ್ಪಲಾರನು. ಇನ್ನೂ ಮಬ್ಬಿನಲ್ಲಿರುವ ತನ್ನರಿವು ತನಗೇ ಇಲ್ಲದ ಸಮಾಜವು ಮಾತ್ರ ಹೆರವರಿಟ್ಟ ಹೆಸರಿನಿಂದಲೇ ಬದುಕಿಕೊಂಡಿರಲು ಒಪ್ಪಿಕೊಳ್ಳಬಹುದು. ಆದರೆ, ಅದಕ್ಕೆ ಸಹ ತಾನು ಯಾರು, ಎಂಬ ಅರಿವು ಉಂಟಾದ ಕೂಡಲೇ ಮೊದಲಿನ ಅಪಾರ್ಥವುಳ್ಳ ಹೆಸರನ್ನು ಬದಲಿಸಿಕೊಳ್ಳಲು ಹವಣಿಸುವುದು; ಇಲ್ಲವೆ ಬೇರೊಂದು ಹೆಸರನ್ನಾದರೂ ಧರಿಸುವುದು. ಆಂಧ್ರರಿಗೆ ತೆಲುಗರು ಎಂಬ ಇನ್ನೂ ಒಂದು ಹೆಸರಿದ್ದುದಕ್ಕೆ ಬೇರೆ ಕಾರಣವೇನು? ಕನ್ನಡರು ಮತ್ತು ತಮಿಳರು ಮಾತ್ರ ಆಂಧ್ರ ಶಬ್ದಕ್ಕೆ ತಲೆವಾಗಲಿಲ್ಲ. ಆರ್ಯಾವರ್ತದ ದಕ್ಷಿಣದ ಎಲ್ಲ ನಾಡಿಗೆ, ಎಲ್ಲ ದಕ್ಷಿಣಾಪಥಕ್ಕೆ ಕಗ್ಗತ್ತಲೆಯ ನಾಡು, ಅಂಧರ್-ಆಂಧ್ರಲೋಕ "ಅಸುರ್ಯಾನಾಮ ತೇ ಲೋಕಾಃ ಅಂಧೇನ ತಮಸಾವೃತಾಃ"[೧೧] ಎಂದು ಸಾಮಾನ್ಯವಾಗಿ ಆರ್ಯರು ಹೇಳುತ್ತಿದ್ದು; ಪೆರಿಪ್ಲಸಿನಲ್ಲಿ ಆಂಧ್ರ ಶಬ್ದವು ದಕ್ಷಿಣಾ ಪಥವೆಂಬರ್ಥದಲ್ಲಿಯೆ ನಿಸ್ಸಂದಿಗ್ಧವಾಗಿ ಉಪಯೋಗಿಸಲ್ಪಟ್ಟಿದೆ. ಅಂಧ (ಕಾ) ಅಸುರನನ್ನು ಸಂಹರಿಸಿ ಆರ್ಯರು ದಕ್ಷಿಣಾಪಥಕ್ಕೆ ಅಡಿಯಿಟ್ಟುದರ ಕುರುಹು ನರ್ಮದಾ ತೀರದಲ್ಲಿದೆ. ರೇವಾ (ನರ್ಮದಾ) ಖಂಡದ ಮಹಾತ್ಮ್ಯೆಯಲ್ಲಿ ಇದರ ವರ್ಣನೆ ಇದೆ.[೧೨] ಆದರೆ, ಬಳಕೆ ಹೆಚ್ಚಾಗಿ ಒಳಭೇದಗಳ ಬೇರೆ ಬೇರೆ ಜನಾಂಗಗಳ ಪರಿಚಯವಾದ ಹಾಗೆ ಸಾಮಾನ್ಯಾರ್ಥದ ಆಂಧ್ರ ಶಬ್ದವು ಹಿಂದೆ ಬಿದ್ದು ಕರ್ಣಾಟ, ದ್ರವಿಡ ಎಂಬ ಹೊಸಶಬ್ದಗಳು ಆ ಕಾಲದ ಸಾಹಿತ್ಯದಲ್ಲಿ ಮೆಲ್ಲಮೆಲ್ಲನೆ ತಲೆಯೆತ್ತಿದುದು ಸ್ವಾಭಾವಿಕ. ತೆಲುಗು ಎಂಬ ನಾಮಾಭಿಧಾನವನ್ನು ಧರಿಸುವ ವರೆಗೂ ಆ ಸಮಾಜವು (ಆಂಧ್ರರು) ಇನ್ನೂ ಬಾಲ್ಯಾವಸ್ಥೆಯಲ್ಲಿಯೆ ಇದ್ದಿತೆಂದು ಹೇಳಲು ಅಡ್ಡಿತೋರುವುದಿಲ್ಲ.

ಅವರ ಸಾಹಿತ್ಯದ ಇತಿಹಾಸವು ಸಹ ಇದಕ್ಕೂ ಬೇರೆ ಕಥೆಯನ್ನು ಹೇಳುವುದಿಲ್ಲ. ತೆಲುಗಿನ ತವರುಮನೆ ವೆಂಗಿಮಂಡಲ. ಈ ವೆಂಗಿಮಂಡಲವೆ ಹನ್ನೆರಡನೆಯ ಶತಮಾನದವರೆಗೂ ಕನ್ನಡದ ಉದ್ದಾಮ ಕವಿಗಳ ಜನ್ಮಭೂಮಿ. ಪಂಪ, ನಾಗವರ್ಮ, ನಾರಾಯಣಭಟ್ಟ, ಪಾಲ್ಕುರಿಕೆ ಸೋಮನಾಥರೆ ಇದಕ್ಕೆ ಸಾಕ್ಷಿ.[೧೩] ತೆಲುಗುನಾಡಿನ ಜನರ ಮನಸ್ಸಿನ ಮೇಲೆ ಕನ್ನಡ ಜೈನಭಾರತಗಳನ್ನು ಓದಿ ಓದಿ ಆದ ಪರಿಣಾಮಗಳನ್ನು ತೊಳೆದುಬಿಡುವುದಕ್ಕಾಗಿ, ಜನರ ಮನಸ್ಸಿನಲ್ಲಿ ಬೇರೂರಿದ ಜೈನಧರ್ಮದ ವಿಚಾರಗಳನ್ನು ಕಿತ್ತೊಗೆಯುವುದಕ್ಕಾಗಿ ನನ್ನಯ್ಯಭಟ್ಟನು ಆಂಧ್ರಭಾಷೆಯಲ್ಲಿ ವೈದಿಕ ಮಾರ್ಗಾನುವರ್ತಿಯಾದ ಭಾರತವನ್ನು ಬರೆದನೆಂದು ತೆಲುಗರಲ್ಲಿ ಅಗಾಧ ಧೀಮಂತರಾದ ಶ್ರೀಮಾನ್ ಸಿ. ಆರ್. ರೆಡ್ಡಿಯವರೆ ಒಪ್ಪಿಕೊಳ್ಳುತ್ತಾರೆ.[೧೪] ಉತ್ಕಟ ಆಂಧ್ರಾಭಿಮಾನಿಗಳಾದ ಶ್ರೀ ಸಿ. ಆರ್. ರೆಡ್ಡಿಯವರು ಹೀಗೆ ಹೇಳುವರೆಂದ ಬಳಿಕ ಅದರಲ್ಲಿ ಇನ್ನಿಷ್ಟು ವಿಶೇಷವಿದೆ. ಪ್ರಾಚೀನ ಕಾಲದ ವೆಂಗಿಮಂಡಲದಲ್ಲಿದ್ದ ಕನ್ನಡದ ವರ್ಚಸ್ಸಿನ ಬಗ್ಗೆ ಸಂದೇಹವೆ ಉಳಿಯಲಿಲ್ಲ. ಇನ್ನೊಂದು ಬಗೆಯಿಂದ ನೋಡಿದರೆ ಶ್ರೀಮಾನ್ ಸಿ. ಆರ್. ರೆಡ್ಡಿಯಂತಹರು ಊಹಿಸಿಹೇಳುವ ಆವಶ್ಯಕತೆಯೂ ಇಲ್ಲ. ಏಕೆಂದರೆ ಈ ನಾಡಿಗೆಲ್ಲ ಏಕಛತ್ರಾಧಿಪತಿಯಾಗಿದ್ದು ೬೧ ವರುಷ ಅರಸುಗೈದ ನೃಪತುಂಗದೇವನು ತನ್ನ ಆಳಿಕೆಯಲ್ಲಿ (೮೧೫-೮೭೬) ಕಣ್ಣಾರೆ ಕಂಡುದನ್ನು ಬರೆಯಿಸಿ ಇಟ್ಟಿದ್ದಾನೆ. 'ಕಾವೇರಿಯಿಂದ ಗೋದಾವರಿವರಂ ಇರ್ದ್ದ ನಾಡೆಲ್ಲವೂ ಕನ್ನಡ' ಎಂದು ಅಸಂದಿಗ್ಧ ಶಬ್ದಗಳಲ್ಲಿ ಹೇಳಿದ್ದಾನೆ. ಆ ಕಾಲದಲ್ಲಿ ತೆಲುಗು ಅಸ್ತಿತ್ವದಲ್ಲಿ ಇರಲೇ ಇಲ್ಲವೆಂತಲ್ಲ; ಇಂಗ್ಲಿಷ್ ದ್ವೀಪಗಳ ಭಾಷೆ ಇಂಗ್ಲಿಷು. ಆದರೆ, ಆ ಒಂದು ಗೇಣುನಾಡಿನಲ್ಲಿಯೆ ಸ್ಕಾಚ್, ವೆಲ್ಸ ಎಂಬ ಅರೆಭಾಷೆಗಳು ಅಲ್ಲಿ ನೆಲಹಿಡಿದುಕೊಂಡು ಇಲ್ಲವೆ? ಹಾಗೆ, ಆಗ ತೆಲುಗು ಇತ್ತು. ಕ್ರಿಸ್ತಶಕದ ೧೧-೧೩ನೆಯ ಶತಮಾನಗಳ ತನಕ ವಿಂಧ್ಯದ ದಕ್ಷಿಣದಲ್ಲಿ ನೀಲಗಿರಿಯ ವರೆಗೆ ತೆಲುಗು ಆಗಲಿ, ಮರ್ಹಾಟಿಯಾಗಲಿ ಇನ್ನೂ ತಲೆಯೆತ್ತಿ ಮೆರೆಯುತ್ತಿದ್ದಿಲ್ಲ. ಜನಪದ ಸಾಹಿತ್ಯದಿಂದ ಬೆಳೆದು ದೊಡ್ಡದಾಗಿ 'ಪಂಡಿತರೂ ವಿವಿಧ ಕಲಾಮಂಡಿತರೂ' ಆದವರಿಗೆ.ರುಚಿಸುವಂತಹ ಸಾಹಿತ್ಯವು ತೆಲುಗಿನಲ್ಲಿ ತಲೆದೋರಲಾರಂಭಿಸಿದುದು ೧೧ನೆಯ ಶತಮಾನದಲ್ಲಿ, ಮರ್ಹಾಟಿಯಲ್ಲಿ ೧೨ನೆಯ ಶತಮಾನದಲ್ಲಿ. ತೆಲುಗಿನ ಆದಿಕವಿ ನನ್ನಯ್ಯಭಟ್ಟನು (೧೦೪೦), (ಕನ್ನಡದಲ್ಲಿ ಕವಿತ್ವ ಶಕ್ತಿಯುಳ್ಳ) ಜೀವದ ಗೆಳೆಯ ನಾರಾಯಣಭಟ್ಟನ ನೆರವು ಇಲ್ಲದೆ ತನ್ನಿಂದ ಕಾವ್ಯವನ್ನು ಬರೆಯುವುದೆ ಸಾಧ್ಯವಿದ್ದಿಲ್ಲವೆಂದು ನನ್ನಯ್ಯಭಟ್ಟನು ಹೇಳುತ್ತಾನೆ. ನನ್ನಯ್ಯಭಟ್ಟನಿಗೆ ನಾರಾಯಣಭಟ್ಟನೆ ಕಾವ್ಯವನ್ನು ಬರೆದುಕೊಟ್ಟನೆಂದು ಇದರಿಂದ ತಿಳಿದುಕೊಳ್ಳಲು ಕಾರಣವಿಲ್ಲ. ನಾರಾಯಣಭಟ್ಟನು ಪ್ರೋತ್ಸಾಹಿಸಿ ಬರೆಯಿಸಿದನೆಂದು ಗ್ರಹಿಸುವುದು ಉಚಿತವೆಂಬುದಾಗಿ ತೆಲುಗು ಅಭಿಮಾನಿಗಳು ಹೇಳುವ ಮಾತಿಗೆ ಬೇರೆ ನುಡಿಯುವ ಕಾರಣವಿಲ್ಲ.[೧೫] ಆದರೆ, ತೆಲುಗು ಸಾಹಿತ್ಯವೃಕ್ಷಕ್ಕೆ ಕಸಿಮಾಡಿ ಕಟ್ಟೆಯನು ಕಟ್ಟಿ ನೀರೆರೆದವರು ಕನ್ನಡಕ್ಕೆ ಸಂಬಂಧಪಟ್ಟಿದ್ದರೆಂಬ ಮಾತನ್ನು ಮಾತ್ರ ಯಾರಿಂದಲೂ ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲ. "ತೆಲುಗು ಕವಿಗಳಲ್ಲಿ ನನ್ನೆಚೋಡು, ನಾಚನಾ, ಸೋಮ (ಪಾಲ್ಕುರಿಕೆ), ನಾರಾಯಣಭಟ್ಟರುಗಳಿಗೆ ಕನ್ನಡದಲ್ಲಿ ಪಾಂಡಿತ್ಯವಿದ್ದುದು ಪ್ರಖ್ಯಾತವಿದೆ" ಎಂದು Telugu Literature ಮುನ್ನುಡಿಯಲ್ಲಿ ಶ್ರೀಮಾನ್ ಸಿ. ಆರ್. ರೆಡ್ಡಿಯವರು ಹೇಳಿದ್ದು ನೆನಪಿಡತಕ್ಕ ಸಂಗತಿಯಾಗಿದೆ. ಬಾದಾಮಿಯ ಚಾಲುಕ್ಯರ ಒಂದು ಶಾಖೆಯವರು ರಾಜಮಹೇಂದ್ರಿಯಲ್ಲಿ ರಾಜ್ಯವಾಳುತ್ತಿದ್ದರಷ್ಟೆ. ಆಗಲೇ ರಾಜಮಂದಿರದಲ್ಲಿ ತೆಲುಗು ಸರಸ್ವತಿಯು ಪುತ್ರರತ್ನವನ್ನು ಪಡೆದುದು. ಈ ರತ್ನವೆ, ನನ್ನಯ್ಯ ಭಟ್ಟನ ಭಾರತ. ತೆಲುಗು ಸಾಹಿತ್ಯವು ಚಾಲುಕ್ಯರ ರಾಜಮಂದಿರದಲ್ಲಿ ಬೆಳೆದು ಮುಂದೆ ವಿಜಯನಗರದ 'ಕರ್ಣಾಟ ರಾಜ್ಯ ರಮಾರಮಣ'ರ ಪೋಷಣೆಯಿಂದ ಅದಕ್ಕೆ ಪ್ರಾಯ ಬಂತು. ಮೈಸೂರಲ್ಲಿ ನಿಯೋಗಿಯಾಗಿದ್ದ ವೀರರಾಜುವು (೧೬೫೦-೧೭೧೦) ಬರೆದ ಭಾರತವು ತೆಲುಗರ ಮೊದಲನೆಯ ಗದ್ಯ ಕಾವ್ಯ! "ಹಳೆಯ ತೆಲುಗು ಶಾಸನಗಳಲ್ಲಿ ತೆಲುಗು ರಾಜರಿಗೂ ಸಾಮಂತರಿಗೂ ಕನ್ನಡ ಬಿರುದುಗಳು ಇದ್ದವು. ೯ನೆಯ ಶತಮಾನದ ಒಂದು ಶಾಸನದಲ್ಲಿ ಒಬ್ಬ ಸೇನಾಪತಿಗೆ 'ಮನುಜರ ದೇವನೆಂದು' ಇದೆ![೧೬] 'ಗುಣಕೆನಲ್ಲ' 'ಜಗದೊಬ್ಬಗಂಡ' 'ಜಗದ ಗೋಪಾಲ' ಎಂಬ ಇನ್ನೂ ಎಷ್ಟೋ ಇಂತಹ ದೃಷ್ಟಾಂತಗಳನ್ನು ಕೊಡಬಹುದು. ನಿಜಸ್ಥಿತಿಯು ಹೀಗಿರುವುದರಿಂದಲೆ,

ತೆಲುಗರಲ್ಲಿ ಸತ್ಯನಿಷ್ಠರಾದ ಕೆಲವು ವಿದ್ವಾಂಸರು ಆಂಧ್ರವೆಂದು ಬೇರೆಯಾಗಿ ಹೇಳದೆ 'ಪ್ರಾಚೀನ ಕಾಲದಲ್ಲಿ ಆಂಧ್ರ ಕರ್ಣಾಟಕ ಅಥವಾ ಕರ್ಣಾಟಕಾಂಧ್ರವೆಂಬ ಒಂದು ದೇಶವಿತ್ತು, ಎನ್ನುತ್ತಿದ್ದಾರೆ. ಪ್ರಾಚೀನ ಕಾಲದಲ್ಲಿಯೇ ತೆಲುಗು ನುಡಿಯೂ ಕನ್ನಡದಂತೆ ಪರಿಪಕ್ವದೆಸೆಯನ್ನು ಪಡೆದಿದ್ದರೆ ಆ ಕಾಲಕ್ಕೆ 'ಕರ್ಣಾಟಕ ಸಂಗೀತ ಪದ್ಧತಿ' ಎಂಬ ಒಂದೇ ಪ್ರಖ್ಯಾತ ನಾಮದಿಂದ ಮುಂದೆ ಬಂದು ಲೋಕದಲ್ಲಿ ಮೆರೆವ ಸಂಭವವೆ ಇದ್ದಿಲ್ಲ. 'ಕರ್ಣಾಟಕ ಸಂಗೀತದಲ್ಲಿ ತೆಲುಗರು ಈಗ ಮಾಡಿರುವ ಪರಿಶ್ರಮಗಳನ್ನು ನೋಡಿದರೆ, ಅದಕ್ಕೆ 'ತೆಲುಗು ಸಂಗೀತಪದ್ಧತಿ' ಎಂದು ನವೀನ ನಾಮಕರಣ ಮಾಡಬೇಕೇನೋ ಎಂದೆನಿಸುವುದು. ಈ ನೈಪುಣ್ಯವೇ ಆರಂಭಕ್ಕೆ ಇದ್ದರೆ! ಆ ಹೆಸರೇ ರೂಢವಾಗುವುದು ಸಹಜವಾಗಿತ್ತು. ಇದರಿಂದ ತೆಲುಗಿಗೆ ಆಗ ಇನ್ನೂ ಬಾಲ್ಯಾವಸ್ಥೆ ಎಂದೇ ಧ್ವನಿತವಾಗುವುದಿಲ್ಲವೆ? ದಕ್ಷಿಣದ ಸಂಗೀತ ಪದ್ಧತಿಗೆ ಕರ್ಣಾಟಕದ ಹೆಸರೆ ಪ್ರರೂಢವಾಗಬೇಕಾದರೆ ಅದು ಆ ಸಮಯದಲ್ಲಿ ತೆಲುಗಿಗಿಂತ ಎಷ್ಟೊಂದು ಪ್ರೌಢಾವಸ್ಥೆಯಲ್ಲಿರಬೇಕೆಂಬುದನ್ನು ಸಹಜವಾಗಿ ಕಲ್ಪಿಸಬಹುದು. 'ದಕ್ಷಿಣ (ಸಂಗೀತ) ಪದ್ಧತಿ' ಎಂದು ಕರ್ಣಾಟ ಸಂಗೀತಕ್ಕೇ ಒಂದು ಪರ್ಯಾಯ ನಾಮವಿದೆ. ಉತ್ತರದೇಶವು ಮುಗಿದೊಡನೆ ನರ್ಮದೆಯಿಂದ ದಕ್ಷಿಣ (ಅಂದರೆ ಕರ್ಣಾಟ) ಸಂಗೀತ ಪದ್ಧತಿಯು ಪ್ರಚಾರದಲ್ಲಿತ್ತು. ಈ ಮಾತು ದೂರದಿಂದಲೇ ಆಗಲೊಲ್ಲದೇಕೆ? ಕರ್ಣಾಟವು ಉತ್ತರದೇಶಕ್ಕೆ ಹತ್ತಿಕೊಂಡಿತ್ತು, ಉತ್ತರದೇಶವು ಮುಗಿದ ಕೂಡಲೆ ದಕ್ಷಿಣಕ್ಕೆ ಕರ್ಣಾಟವೆ ಆರಂಭವಾಗುತ್ತಿತ್ತು; ಎಂಬುದನ್ನೇ ಸೂಕ್ಷ್ಮವಾಗಿ ಹೇಳುತ್ತಿಲ್ಲವೇ? ಇದು ಆಂಧ್ರದ ವಿಚಾರವಾಯಿತು. ೧೦ನೆಯ ಶತಮಾನದಿಂದ ತೆಲುಗು ಕನ್ನಡತಾಯಿಯ ತೋಳ ತೊಟ್ಟಿಲಲ್ಲಿಯೇ ಬೆಳೆದು ದೊಡ್ಡದಾದುದು. ಇದು ಸೂರ್ಯಪ್ರಕಾಶದಷ್ಟು ಸ್ಪಷ್ಟವಾದ ಸಂಗತಿ. ಆದುದರಿಂದ ಗೋದಾವರಿಯ ತೆಂಕಣ ನಾಡಿನಲ್ಲಿ ಕರ್ಣಾಟಕವಿತ್ತು ಎಂದು ಕವಿರಾಜಮಾರ್ಗವು ಹೇಳಿದುದರಲ್ಲಿ ಎಳ್ಳಷ್ಟು ಅತಿಶಯೋಕ್ತಿಯಿಲ್ಲ. ಮೊದಲು ಆಂಧ್ರ ಶಬ್ದಕ್ಕೆ ದಕ್ಷಿಣದೇಶ, ದಕ್ಷಿಣದ ಜನರು ಎಂಬ ಸಾಮಾನ್ಯ ಅರ್ಥವೆ ಪ್ರಾಮುಖ್ಯವಾಗಿದ್ದಿತು. ಆಂಧ್ರ ಶಬ್ದಕ್ಕೆ ತೆಲುಗರು ಎಂಬ ವಿಶಿಷ್ಟಾರ್ಥವು ಬಂದುದು ಮುಂದೆ ಕಾಲಕ್ರಮದಿಂದ, ಎಂಬಲ್ಲಿ ಸಂದೇಹವೇ ಉಳಿಯುವುದಿಲ್ಲ.

ಇನ್ನು ದ್ರಾವಿಡ ವಿಚಾರ. ಕನ್ನಡದಂತೆ (ಕನ್+ನಡ) ದ್ರವಿಡ ಶಬ್ದದ ಮೂಲರೂಪವಾದ 'ತಮಿಳು' ಸಹ ಆರಂಭದಲ್ಲಿ ಕೇವಲ ದೇಶವಾಚಕವೆ ಆಗಿರಬೇಕು. ಕನ್ನಡರೂ ತಮಿಳರೂ ಆರ್ಯರು ಇಟ್ಟ ಆಂಧ್ರರೆಂಬ ಹೆಸರನ್ನು ಮನ್ನಿಸಲಿಲ್ಲ. ಆರ್ಯರು ದಕ್ಷಿಣಾಪಥಕ್ಕೆ ನೆಲೆಯಾಗಲು ಬಂದ ಕಾಲಕ್ಕೆ ಈ ರಾಷ್ಟ್ರಗಳು ಸ್ವಯಂಪ್ರಜ್ಞೆ (Self consciousness) ಯುಳ್ಳವುಗಳಾಗಿದ್ದವು. ಆರ್ಯರು ತಮ್ಮ ಮೂಲಸ್ಥಾನವು ಆರ್ಯಾವರ್ತವೆನ್ನುತ್ತಿದ್ದಂತೆ ಈ ಜನಾಂಗದವರು (ಕನ್+ನಾಡು) ಕನ್ನಡ, ಕರ್ಣಾಟ, (ತಮ್ಮ+ಬೀಡು, ತಮ್ ಬಿಡು, ತಂಬಿಡು, ತಂವಿಡು) ತ (ಂ) ಮಿಳು ಎಂದು ತಮ್ಮ ತಮ್ಮ ದೇಶಗಳನ್ನು ಹೇಳುತ್ತಿರಬೇಕು. ಈ ಶಬ್ದಗಳೆ ಕರ್ಣಾಟ ಮತ್ತು (ದ್ರಮಿಡ, ದ್ರವಿಳ) ದ್ರವಿಡ ಎಂಬ ರೂಪಿನಿಂದ ಸಂಸ್ಕೃತ ಸಾಹಿತ್ಯದಲ್ಲಿ ಸೇರಿಕೊಂಡಿವೆಯೆಂದು ಊಹಿಸಲು ಅವಕಾಶವಿದೆ. ತೆಲುಗಿಗೆ, ತೆಲುಗು ಧಾತುವಿನಿಂದಲೇ ಸಿದ್ಧವಾದ ಸ್ವದೇಶದರ್ಶಕ ಶಬ್ದವೇ ಇಲ್ಲ. ತ್ರಿಲಿಂಗ ಅಥವಾ ತ್ರಿಕಲಿಂಗವೆಂದು ಅವರೆ ಹೇಳುವ ತೆಲುಗು ಶಬ್ದದ ಯಾವ ರೂಪಸಿದ್ಧಿಯನ್ನು ಸ್ವೀಕರಿಸಿದರೂ ಅಷ್ಟೆ. ಈ ಸಂಗತಿಯು ಸಹ ತೆಲುಗರು ಕನ್ನಡ ತಮಿಳರಷ್ಟು ಪ್ರಾಚೀನ ಕಾಲದಲ್ಲಿ ಅಂದರೆ ಆರ್ಯರ ಪ್ರವೇಶವು ದಕ್ಷಿಣಕ್ಕೆ ಆಗುವ ಮೊದಲಿನಿಂದಲೆ ನಾಡನ್ನು ಕಟ್ಟಿಕೊಂಡು ನೆಲೆಯಾಗಿ ಬಾಳುತ್ತಿದ್ದ ಜನಾಂಗದವರಲ್ಲವೆಂಬುದನ್ನೇ ಸೂಚಿಸುತ್ತಲಿದೆ.

ಮಲಯ[೧೭] (ಮಾಳವಾ) ದಿಂದ ಆರಂಭವಾಗುವ ದಕ್ಷಿಣಾಪಥದಲ್ಲಿ ಪ್ರಾಚೀನ ಕಾಲಕ್ಕೆ ಅಂದರೆ ಆರ್ಯರು ಇಲ್ಲಿ ಕಾಲೂರಿ ನಿಲ್ಲಲು ಬರುವ ಮೊದಲು ನಾಡು ಕಟ್ಟಿಕೊಂಡು ಪ್ರಖ್ಯಾತರಾಗಿ ಬಾಳುತ್ತಿದ್ದವರು ಕನ್ನಡರು ಮತ್ತು ತಮಿಳರು ಇವರಿಬ್ಬರೇ. ಕ್ರಿ.ಶ. ಎರಡನೆಯ ಶತಮಾನದಲ್ಲಿ ಶೆಂಗುಟ್ಟವನ್ ಎಂಬ ಚೇರರಾಜನು ಉತ್ತರ ದಿಕ್ಕಿಗೆ ಹೋಗುವಾಗ ನೀಲಗಿರಿಯಲ್ಲಿ ತಂಗಿ ಕನ್ನಡರು ಆಡಿದ ಕುಣಿತವನ್ನು ನೋಡಿ ಸಂತೋಷಿಸಿದನು-ಎಂದು ಶಿಲಪ್ಪದಿಕಾರಂ ಎಂಬ ತಮಿಳು ಗ್ರಂಥದಲ್ಲಿದೆ.[೧೮] ಇದರಿಂದ ಕ್ರಿ.ಶ. ಎರಡನೆಯ ಶತಮಾನದಲ್ಲಿ

ಕನ್ನಡರು ನೀಲಗಿರಿಯ ವರೆಗೆ ಹಬ್ಬಿದ್ದರು. ಕರ್ನಾಟ ಮಹಾಮಂಡಳದ ದಕ್ಷಿಣ ತುದಿಯು ನೀಲಗಿರಿಯಾಗಿದ್ದಿತೆಂದು ಅನುಮಾನಿಸಲು ಅಡ್ಡಿ ತೋರುವುದಿಲ್ಲ. ಬನವಸೆಯ ಕದಂಬರೂ ತುಳನಾಡಿನ ಗಂಗರೂ ೫ನೆಯ ಶತಮಾನಗಳವರೆಗೆ ಕರ್ನಾಟ ಮಹಾಮಂಡಳದ ದಕ್ಷಿಣ ಮರ್ಯಾದೆಯನ್ನು ಕಾಯುವ ದಿಕ್ಪಾಲರಾಗಿದ್ದರು. ಇವರಿಗೆ ಕರ್ನಾಟದ ಹೊರಗಿನ ವಿರೋಧಿಗಳೆಂದರೆ ತಮಿಳರು. ಈ ಕಾಲದ ಗಂಗ ಮತ್ತು ಕದಂಬರ ಇತಿಹಾಸವೆಂದರೆ ತಮಿಳರೊಡನೆ ಆಗಾಗ್ಗೆ ನಡೆಯುತ್ತಿದ್ದ ಘೋರ ಸಂಗ್ರಾಮಗಳ ಕಥೆಯೇ ಆಗಿದೆ. ಗಂಗ ಮತ್ತು ಕದಂಬರ ಈ ದಕ್ಷಿಣದ ಮರ್ಯಾದೆಯನ್ನು ಸಂರಕ್ಷಿಸುವ ಕಾರ್ಯಭಾರವು ಮುಂದೆ ಚಲುಕ್ಯ ಮತ್ತು ರಾಷ್ಟ್ರಕೂಟರ ಕಡೆಗೆ ಹೋಯಿತು. ಅವರು ಸಹ ಅದನ್ನು ಕನ್ನಡದಲ್ಲಿ ಮೈಮೇಲೆ ಎಚ್ಚರಿರುವ ವರೆಗೂ ಇವರಿಗೆ ಕೃತಜ್ಞತೆಯಿಂದ ತಲೆವಾಗಬೇಕೆನ್ನುವಷ್ಟು ಚೆನ್ನಾಗಿ ನೆರವೇರಿಸಿದರು. ತಮಿಳರು ಬನವಾಸಿ ಬಾದಾಮಿಗಳ ತನಕ ಬಂದು ಅವನ್ನು ಸುಟ್ಟುಸೂರೆಮಾಡಿ ಹೋದುದು ನಿಜ. ಆದರೆ, ಚಾಲುಕ್ಯ ರಾಷ್ಟ್ರಕೂಟರು ಕಂಚಿ, ಮಧುರೆಗಳನ್ನು ಗೆದ್ದು ಮುಯ್ಯತೀರಿಸದೆ ಬಿಡಲಿಲ್ಲ. ಅಂತು, ತಮಿಳರು (ದ್ರವಿಡರು) ತಮ್ಮ ಬೀಡುಬಿಟ್ಟು ಮೇಲೇರಿ ಬಂದು ಉತ್ತರಕ್ಕೆ ಅತಿದೂರದಲ್ಲಿ ಗೆದ್ದ ನಾಡೆಂದರೆ ಬಾದಾಮಿ. ಆದರೆ, ಅಲ್ಲಿಯೂ ಸಹ ಅವರಿಗೆ ಬಹಳ ದಿನ ಕಾಲೂರಿ ನಿಲ್ಲಲು ದೊರೆಯಲಿಲ್ಲ. ಮಂಗಲೀಶನೂ (ಕ್ರಿ.ಶ. ೫೯೭) ಆತನ ತರುವಾಯ ಪಟ್ಟಕ್ಕೆ ಬಂದ ಗಂಡುಗಲಿಗಳಾದ ತಮಿಳರನ್ನು ಚೆನ್ನಾಗಿ ನುಗ್ಗುನುಸಿ ಮಾಡಿದುದನ್ನು ಇತಿಹಾಸವು ಹೇಳುತ್ತಿದೆ. ಕರ್ನಾಟದ ಸಾಮ್ರಾಟರು ತಮಿಳರನ್ನು ಯಾವಾಗಲೂ ಕಾವೇರಿಯಿಂದ ಆಚೆಗೆ, ನೀಲಗಿರಿಯಿಂದ ಅತ್ತ ದೂರದಲ್ಲಿ ಅಟ್ಟಿ ತಮ್ಮ ನಾಡನ್ನು ಕಾದುಕೊಂಡಿದ್ದರು. ನಿಜಸ್ಥಿತಿಯು ಹೀಗಿದ್ದರೂ ನರ್ಮದೆಯಿಂದ ದಕ್ಷಿಣಕ್ಕೆ ಆಂಧ್ರ-ದ್ರವಿಡ ದೇಶವೆಂದು ಹೇಳುವುದು ಎಷ್ಟು ವಿಚಿತ್ರ!

ನದಿಗಳ ಮೇರೆಗಳನ್ನಿಟ್ಟುಕೊಂಡೆ ಹೇಳುವುದಾದರೆ ಕರ್ನಾಟಕ ರಾಜರ ಶೌರ್ಯ ಪರಾಕ್ರಮಗಳ ಮುಂದೆ ಕಾವೇರಿಯಿಂದ ಮೇಗಡೆಗೆ ತಮಿಳರು ತಲೆಯೆತ್ತಿ ಮೆರೆವ ಹಾಗಿದ್ದಿಲ್ಲ. ೭-೮ನೆಯ ಶತಮಾನಗಳಿಗೆ ಮೊದಲು ಆಂಧ್ರ, (ತೆಲುಗು) ಅಥವಾ ಮರ್ಹಾಟಿಗಳು ಇನ್ನೂ ಹಸುಗೂಸುಗಳು. ಹಾಗಾದರೆ! ನರ್ಮದೆಯಿಂದ ಕಾವೇರಿಯವರೆಗಿನ ನಾಡಿಗೆಲ್ಲ ಕನ್ನಡರೆ ಒಡೆಯರಾಗಿದ್ದರೆಂದು ಹೇಳಿದರೆ ತಪ್ಪೇನು? ಆಗಿನ ರಾಜಾಧಿರಾಜರ ಒಡ್ಡೋಲಗಗಳಲ್ಲಿ ಮನ್ನಣೆಯನ್ನು ಹೊಂದಿ ಮೆರೆಯುತ್ತಿದ್ದ ಭಾಷೆಯೂ ಕನ್ನಡವೇ ಆಗಿದ್ದರೆ ಆಶ್ಚರ್ಯವೇನು?

ಇಲ್ಲಿ ಕನ್ನಡವಿದ್ದಿಲ್ಲವೆಂದು ತಿಳಿದರೆ ಜನಸಾಮಾನ್ಯರು-ಇಲ್ಲಿಯ ಮೂಲನಿವಾಸಿಗಳ ಭಾಷೆಯು ಆವುದಿರಬಹುದು? ಅಥವಾ ಏನು ಈ ಜನರಿಗೆ ಭಾಷೆಯ ಆವಶ್ಯಕತೆಯೇ ಇದ್ದಿಲ್ಲವೋ? ಸಂಸ್ಕೃತ ಇರಬಹುದೆ? ಅದು, ಲೌಕಿಕ ರಾಜ್ಯತಂತ್ರಗಳಲ್ಲಿ ಸೇರಹತ್ತಿದ ಬ್ರಾಹ್ಮಣರ ಮನೆಗಳನ್ನೇ ತೊರೆದು ಮಠ-ದೇಗುಲಗಳ ಆಶ್ರಯವನ್ನು ಆಪೇಕ್ಷಿಸಿದ್ದಿತು. ಉಳಿದವರ ಮಾತೇನು! ಪ್ರಾಕೃತವೇ? ಅದರ ಅವತಾರವು ೪-೫ನೆಯ ಶತಮಾನಕ್ಕೆ ಮುಗಿದುಹೋಯಿತು. ಅಲ್ಲದೆ, ಸಂಸ್ಕೃತ ಮತ್ತು ಪ್ರಾಕೃತಗಳು ದಕ್ಷಿಣಾಪಥದ ಜನರ ಮನೆಮಾತು ಅಲ್ಲವೆ ಅಲ್ಲ. ನರ್ಮದೆಯಿಂದ ಕೆಳಗೆ ವಾಸವಾಗಿದ್ದ ಜನರು ಮೂಕರಾಗಿದ್ದಂತೆ ಇತಿಹಾಸವು ಹೇಳುವುದಿಲ್ಲ. ಆದಕಾರಣ, ಕಾವೇರಿ ಕಡೆಗಂತೂ ಸರಿಯೆ. ನರ್ಮದಾ ತಟಾಕದಲ್ಲಿ ಮಲೆಯ(ಮಾಳವಾ) ನಾಡಿನಲ್ಲಿ ನೆಲೆಯಾಗಿದ್ದ ಜನರು ವಿಂಧ್ಯದ ಕಾಡಿನಲ್ಲಿ ಅಡಗಿದವರನ್ನು ಬಿಟ್ಟು ಕನ್ನಡವನ್ನೆ ಆಡುತ್ತಿದ್ದರೆಂದು ಒಪ್ಪಿಕೊಳ್ಳಬೇಕಾಗುತ್ತದೆ.[೧೯] ಇದಕ್ಕೆ ಜಬಲಪುರ ಮೊದಲಾದ ಕಡೆಗಳಲ್ಲಿ ಸಿಗುವ ಕನ್ನಡ ಶಾಸನಗಳೇ ಸಾಕ್ಷಿ. ಸಾಮಾನ್ಯವಾಗಿ ಶಾಸನಗಳನ್ನು ಬರೆಯಿಸುವುದು ಅಲ್ಲಿಯ ಜನಗಳಿಗೆಲ್ಲ ಆ ರಾಜನ ಮೇಲ್ಮೆ ಮಹಿಮೆಗಳು ತಿಳಿಯುವದಕ್ಕಾಗಿ. ಬಹುಜನ ಸಮಾಜವು ಅದನ್ನು ಅರಿತುಕೊಳ್ಳದಿದ್ದರೂ ಕನಿಷ್ಟ ಮಹಾಜನ ಸಮಾಜಕ್ಕಾದರೂ ಆ ಭಾಷೆಯು ಅಲ್ಲಿ ತಿಳಿಯುತ್ತಿರಬೇಕಷ್ಟೆ!

ಹಾಗಾದರೆ, ಇಲ್ಲಿ ಕನ್ನಡವು ಹೇಳಹೆಸರಿಲ್ಲದಂತಾಗಲು ಕಾರಣವೇನು ಎಂದು ಸಹಜವಾಗಿಯೆ ಪ್ರಶ್ನೆಯುಂಟಾಗುವುದು. ಇದರ ಉತ್ತರವನ್ನು ಹುಡುಕುವುದಕ್ಕೆ ಬಹಳ ದೂರ ಹೋಗಬೇಕಾಗಿಲ್ಲ. ಆರ್ಯರು

ದಕ್ಷಿಣಾ ಪಥಕ್ಕೆ ಅಡಿಯಿಟ್ಟೊಡನೆ ಅವರ ಮೊದಲ ತುತ್ತಿಗೆ ಸಿಕ್ಕವರು ಕನ್ನಡರು. ಆರ್ಯರ ವರ್ಣಾಭಿಮಾನವು ಎಷ್ಟು ಆಳವಾಗಿ ಅವರ ಅಂತರಾಳದಲ್ಲಿ ಬೇರೂರಿರುವುದೆಂಬುದು ಲೋಕವಿಖ್ಯಾತವಾದ ಸಂಗತಿಯು. ಅವರ ಗೀರ್ವಾಣ ಭಾಷೆಯ ಅಭಿಮಾನವು ಅನ್ಯಾದೃಶ. ಅದು ದೇವಭಾಷೆ. ಉಳಿದವೆಲ್ಲ ಹೀನಭಾಷೆಗಳೆಂದು ಅವರ ಶ್ರದ್ಧೆ. ಸಂಸ್ಕೃತದ ಅರ್ಥವು ತಿಳಿಯದಿದ್ದರೂ ಈಗ ಆ ಮಂತ್ರಸಾಮರ್ಥ್ಯವು ಗತಕಥಾವಿಷಯವೆ ಆಗಿದ್ದರೂ ಬ್ರಾಹ್ಮಣನು ಮಂತ್ರಗಳನ್ನು ಸಂಸ್ಕೃತದಿಂದಲೆ ಇಂದಿಗೂ ಪಠಿಸುತ್ತಿರುವ ಈ ಬಗೆಯ ಉದಾಹರಣವು ಜಗತ್ತಿನಲ್ಲಿ ಮತ್ತೊಂದು ಯಾವ ದೇಶದಲ್ಲಿಯೂ ಇಷ್ಟು ದೊಡ್ಡಪ್ರಮಾಣದಲ್ಲಿ ನೋಡಲಿಕ್ಕೆ ಸಿಗುವುದು ದುರ್ಲಭ. ಆರ್ಯನು ಜೀವದಲ್ಲಿ ಜೀವಿಸಿರುವ ವರೆಗೆ ಸಂಸ್ಕೃತ ಭಾಷೆಯನ್ನೇ ಆಡಬೇಕೆಂದು ಶಾಸ್ತ್ರವಚನಗಳು. ಕುಲಪರಂಪರೆಯು 'ನವದೇತ್ ಯಾವನೀಭಾಷಾಂ ಪ್ರಾಣ್ಯೈಃ ಕಂಠಗತ್ಯೈರಪಿ' ಎಂಬುದೂ 'ಪ್ರಾಕೃತಂ ಮ್ಲೇಂಛಭಾಷಿತಂ; ನ ಶ್ರೋತವ್ಯಂ ದ್ವಿಜೇನೈತದ್...... ಅಘೇ ನಯತಿ ತತ್ ದ್ವಿಜಂ' ಎಂದು ಗರುಡ ಪುರಾಣದೊಳಗಿನ ಕಟ್ಟಪ್ಪಣೆಯೂ ಆರ್ಯರ ಭಾಷಾಭಿಮಾನದ ತೀವ್ರತೆಯನ್ನೆ ಚೆನ್ನಾಗಿ ವ್ಯಕ್ತಪಡಿಸುತ್ತದೆ. ಆರ್ಯಾವರ್ತದಿಂದ ಮೊದಲಿಗೆ ಹಿಂಡುಗಟ್ಟಿಕೊಂಡು ದಕ್ಷಿಣಾಪಥಕ್ಕೆ ಹೊರಟ ತಂಡಗಳ ಸ್ವ-ವರ್ಣಾಭಿಮಾನ, ಸ್ವ-ಭಾಷಾಭಿಮಾನಗಳ ಉಗ್ರತೆಯನ್ನೂ ತೀಕ್ಷ್ಣತೆಯನ್ನೂ ತೀವ್ರತೆಯನ್ನೂ ಕಲ್ಪನೆಯಿಂದಲೆ ಊಹಿಸಿಕೊಳ್ಳಬೇಕು. ಶಬ್ದಗಳಿಂದ ಹೇಳುವುದು ಸಾಧ್ಯವಿಲ್ಲ. ಅದರಲ್ಲಿಯೂ ಮನುಷ್ಯನು ತಾನು ಮೊಟ್ಟ ಮೊದಲು ಕೈಕೊಂಡ ಕೆಲಸದಲ್ಲಿ ತೋರಿಸುವ ಆವೇಶ ಉತ್ಸಾಹಗಳಿಗೆ ಅಳತೆ ಕಟ್ಟೆ ಇರುವುದಿಲ್ಲ. ಆರ್ಯರ ತಂಡಗಳ ಇಂತಹ ಭಯಂಕರ ಆವೇಶದ ಆಘಾತಕ್ಕೆ ಮೊದಲು ಸಿಕ್ಕಿದುದು ಕನ್ನಡ! ಅಂದಬಳಿಕ ಅದರ ಪಾಡು ಏನಾಗಿದ್ದಿರಬಹುದು? ಯುರೋಪಿಯರು ಕೆಂದುಅಮೇರಿಕನರ ಬೇಟೆಯಾಡಿ ಅವರ ಹುಟ್ಟನ್ನು ಅಡಗಿಸಿ ತಾವು ನೆಲೆಸಿದರು. ಆದರೆ, ಆರ್ಯರು ದಕ್ಷಿಣಾಪಥದಲ್ಲಿ ಶಕ್ಯವಿದ್ದಷ್ಟು ಮಟ್ಟಿಗೂ ಹಾಗೆ ಮಾಡಿದಂತಿಲ್ಲ. ಸಾಧ್ಯವಿದ್ದಲ್ಲೆಲ್ಲ ಶಾಂತಿಯಿಂದಲೆ ನಡೆದುಕೊಂಡು ಇಲ್ಲಿಯ ಜನರನ್ನು ತಮ್ಮ ಕಡೆಗೆ ಒಲಿಸಿಕೊಂಡುದು ನಿಜ. ಆದರೂ ತಮ್ಮಿಂದ ಭಿನ್ನರಾದವರ ಬಗ್ಗೆ ಮನುಷ್ಯ ಮಾತ್ರರಲ್ಲಿ ಹುಟ್ಟಾ ಮನೆಮಾಡಿಕೊಂಡಿರುವ ತಿರಸ್ಕಾರ-ತಾತ್ಸಾರದ ಭಾವನೆಯ ಕೈಗೊಂಬೆಗಳಾಗಿ ಇವರು ನಡೆದುಕೊಂಡುದು ಮಾತ್ರ ಎಳ್ಳಷ್ಟೂ ಸುಳ್ಳಲ್ಲ.

ಆರ್ಯಾವರ್ತದ ತೆಂಕಣಕ್ಕೆ ಮಲಯ (ಮಾಳವಾ) ಪರ್ವತ, ಮಲಯ ಶಬ್ದವೆ (ಮಲೆ) ಸಂಸ್ಕೃತೇತರ. ಆರ್ಯರು, ಮಲಯದ 'ಭಿಲ್ಲ (ಬಿಲ್ಲವ) ಪುರಂಧ್ರಿಯರು. ದಿನಾಲು ತಮ್ಮ ಅಡುಗೆಗೆ ಸುಡುತ್ತಿರುವ ಚಂದನತರು ಕಾಷ್ಠಗಳ ನರುಗಂಪಿಗೆ' ಮನಸೋತು ಮಲೆನಾಡಿನಲ್ಲಿ (ಮಾಳವದಲ್ಲಿ) ಕಾಲೂರಿರಬೇಕು. ಮಲೆನಾಡು ಮಾಳವಾ ಆಯಿತು. ಆರ್ಯಾವರ್ತದ ದಕ್ಷಿಣದ ಮೇರೆಯು ನರ್ಮದೆಯೆಂದು ಒಂದು ಕಾಲದ ಗ್ರಹಿಕೆ. ಆರ್ಯರು ನರ್ಮದೆಯಿಂದ ಕೆಳಗೆ ಮರ್ಹಾಟಕ್ಕೆ (ಮರಹಟ್ಟಿಗೆ) ಇಳಿದರು. ಅದು ವಿದರ್ಭವೆಂಬ ರೂಪತಾಳಿತು. ತಾವು ಬಂದಲ್ಲಿ ನಿಂತಲ್ಲಿ ತಮ್ಮ ಮುದ್ರೆಯನ್ನೊತ್ತಿ ತಮ್ಮ ವರ್ಚಸ್ಸನ್ನು ಸ್ಥಾಪಿಸುತ್ತ ನಡೆದರು. ನರ್ಮದಾ ನದಿಯ ದಕ್ಷಿಣದ ಬ್ರಾಹ್ಮಣರು ಪಂಚದ್ರಾವಿಡರೆಂದು ಇಂದಿಗೂ ನಡೆದುಬಂದ ಸಂಪ್ರದಾಯ. ಆದಕಾರಣ ಬ್ರಾಹ್ಮಣರ ನಿತ್ಯಸಂಕಲ್ಪದಲ್ಲಿ ದೇಶ ಮರ್ಯಾದೆಗಳನ್ನು ಹೇಳುವಾಗ "ನರ್ಮದಾಯಾಃ ದಕ್ಷಿಣೇತೀರೆ" ಎಂದು ಪಾಠವಿರಬೇಕಾಗಿತ್ತು. ಆದರೆ "ಗೋದಾವರ್ಯಾಃ ದಕ್ಷಿಣೇತೀರೆ" ಎಂದು ಹೇಳುವುದೇ ರೂಢವಾಗಿದೆ! ಆರ್ಯಾವರ್ತ ದ್ರವಿಡಾವರ್ತಗಳ ಮಧ್ಯದ ನದಿಯು ನರ್ಮದೆ ಇತ್ತು ಮತ್ತು ಇರಬೇಕು. ದಂಡಕಾರಣ್ಯವು ಗೋದಾವರಿಯ ಮೇಲ್ಗಡೆಗೂ ಇತ್ತು. ದಕ್ಷಿಣಾಪಥದಲ್ಲಿ ಮುಖ್ಯವಾಗಿ ನಡೆಯುವ ಶಾಲಿವಾಹನ ಶಕವು ನರ್ಮದಾನದಿಯ ವರೆಗೆ ಮಾತ್ರ ಪ್ರಚಾರದಲ್ಲಿ. ಆದರೆ, ಈಗ ಸಂಕಲ್ಪವು ಮಾತ್ರ 'ಗೋದಾವರಿಯ ದಕ್ಷಿಣ ತಡಿ, ಗೋದಾವರಿಯ ಉತ್ತರ ತಡಿ' ಎಂದು! ಗೋದಾವರಿ ನದಿಯನ್ನೇ ಸೀಮಾರೇಖೆಯಂತೆ ಹೇಳುತ್ತಿರುವುದು ಏಕೆ? ಈ ಅಸಂಬದ್ಧತೆಗೆ ಕಾರಣವೇನು?

ಸ್ವಲ್ಪ ವಿಚಾರಿಸಿದರೆ ಇದರಲ್ಲಿ ಅಸಂಬದ್ಧತೆಯೇನೂ ಇಲ್ಲ. ಮೇಗಡೆಯಿಂದ ಬಂದವರು ನರ್ಮದಾ

ಗೋದಾವರಿಗಳ ನಡುವಿನ ಪ್ರದೇಶವನ್ನು ಆರ್ಯಾವರ್ತಕ್ಕೆ ಸೇರಿಸಿಕೊಂಡರು. ಅಲ್ಲಿ ಮೊದಲು ನಾಡು ಕಟ್ಟಿಕೊಂಡು ಇದ್ದವರನ್ನು ಕೆಳಗಟ್ಟಿದರು. ಆರ್ಯಾವರ್ತದ ದಕ್ಷಿಣಮೇರೆಯನ್ನು ಗೋದಾವರಿಗೆ ತಂದು ನಿಲ್ಲಿಸಿದರು. ಗೋದಾವರಿಯ 'ದಕ್ಷಿಣೇತೀರೇ' ಇಲ್ಲವೆ 'ಉತ್ತರೇ ತೀರೇ' ಎಂದು ಸಂಕಲ್ಪವನ್ನು ಮಾಡಲಾರಂಭಿಸಿದರು. ಇದಕ್ಕೂ ಬೇರೆ ಏನು? ನರ್ಮದಾ-ಗೋದಾವರಿಗಳ ನಡುವೆ ಆರ್ಯರ ಮೊದಲು ನೆಲಸಿದವರು ಯಾರು? ಅದು ಯಾರು ಇರಬಹುದು? ಡಾಕ್ಟರ ಸ್ಟೆನ್ ಕ್ನೋವ್ (Sten Knowe) ಹೀಗೆ ಹೇಳುತ್ತಾರೆ: The substratum over which Gujarati and Marathi have spread was Dravidian, (ಗುಜರಾತಿ ಮತ್ತು ಮರಾಟಿಯು ಕಾಲುಚಾಚಿರುವ ನಾಡು ಮೊದಲು ದ್ರಾವಿಡರದು)

ಇದು ಯುರೋಪಿಯ ಪಂಡಿತರ ಮತವಷ್ಟೆ ಅಲ್ಲ. ಮಹಾರಾಷ್ಟ್ರದ ವಿದ್ವಾಂಸರೂ ಇದನ್ನು ಅಲ್ಲಗಳೆಯುವುದಿಲ್ಲ. ಆಧುನಿಕ ಸರ್ವಜ್ಞ ಮಾಧವ, ಲೋಕಮಾನ್ಯ ತಿಲಕರಿಂದ ಹೊಗಳಿಸಿಕೊಂಡ ಶ್ರೀ ಮಾಧವರಾವ ರಾನಡೆಯವರು 'ಮರಾಠರ ಅಭ್ಯುದಯ'ವೆಂಬ ಗ್ರಂಥದಲ್ಲಿ ಅಭಿಪ್ರಾಯ ಪಡುವುದೇನೆಂದರೆ

> "The mixture of the two elements (Maratha and Dravid) is best illustrated by the peculiarities of the (Marathi) language, whose base is Dravidian, but whose structure have been entirely fashioned by Aryan influence........"

ದ್ರವಿಡ ಅಡಿಗಲ್ಲ ಮೇಲೆ ಸಂಸ್ಕೃತ ಪ್ರಾಕೃತಗಳ ಸಹಾಯವನ್ನು ಪಡೆದು ಮರ್‍ಹಾಟ ಭಾಷಾಮಂದಿರವು ಕಟ್ಟಲ್ಪಟ್ಟಿದೆ, ಇದನ್ನೆ ಇನ್ನೊಂದು ಬಗೆಯಿಂದ ಹೇಳುವುದೆಂದರೆ, ಮರ್‍ಹಾಟಿಯ ಮೈಯಲ್ಲಿ ದ್ರವಿಡ ನೆತ್ತರವು ಹರಿದಾಡುತ್ತಿದೆ. ಮರ್‍ಹಾಟೇತರನು ಹೀಗೆ ಹೇಳಿದರೆ ಅವರಿಗೆ ಇದರಿಂದ ತುಂಬಾ ಸಿಟ್ಟು ಬರಬಹುದು. ಆದರೆ ಇದು ನನ್ನ ಅಭಿಪ್ರಾಯವಲ್ಲ. ಮರ್‍ಹಾಟಿಯಲ್ಲಿ ವಿದ್ವಾಂಸರೂ ಅಗ್ರಗಣ್ಯರೂ ಆದ ಶ್ರೀ ಭಾಸ್ಕರರಾವ ಜಾಧವ ಇವರೆ ಇದನ್ನು ಚೆನ್ನಾಗಿ ವಿಶದಗೊಳಿಸಿದ್ದಾರೆ. ಮರ್‍ಹಾಟಿಯವರು 'ಆರ್ಯದ್ರಾವಿಡ; ವಂಶದವರೆಂದು ಸಿದ್ಧ ಮಾಡಿದ್ದಾರೆ.[೨೦] ಇಲ್ಲಿ ಒಂದು ಪ್ರಶ್ನೆಯಿದೆ. ಈ ಪಂಡಿತರುಗಳೆಲ್ಲ 'ದ್ರವಿಡ' 'ದ್ರವಿಡ' ಎಂದು ಉಪಯೋಗಿಸುವ ಮಾತಿಗೆ ಏನು ಅರ್ಥ? ನೀಲಗಿರಿಯಿಂದ ಅತ್ತ ಇರುವ ದ್ರವಿಡರೆತ್ತ? ಕ್ರಿಸ್ತಶಕದ ಆರಂಭದಿಂದ ಗರ್ಭಧಾರಣೆಗೆ ಆರಂಭವಾದ ಗುಜರಾತಿ ಮರ್‍ಹಾಟಿ ಭಾಷೆಗಳ ಮೂಲ ಪ್ರದೇಶಗಳೆತ್ತ? ಆದ್ದರಿಂದ ದ್ರವಿಡ ಶಬ್ದಕ್ಕೆ ತಮಿಳರು ಎಂಬರ್ಥವಲ್ಲವೆಂಬುದು ಸಿದ್ಧ. ದ್ರಾವಿಡರು ಎಂದರೆ ಬರಿ ಕೊಂಡರು ಗೊಂಡರೆ? ಇವರ ಭಾಷೆಯು ಆರ್ಯರ ಸಂಸ್ಕೃತ, ಪಾಕೃತ ಭಾಷೆಗಳಿಗೂ ಸಂಸ್ಕಾರ ಕೊಡುವಷ್ಟು, ಅನೇಕಾನೇಕ ಶಬ್ದಗಳನ್ನು ಕೈಗಡ ಕೊಡುವಷ್ಟು ಸಂಪನ್ನಸ್ಥಿತಿಯಲ್ಲಿ ಎಂದಾದರೂ ಇದ್ದಿತೆ?. ಅಲ್ಲದೆ ಮಹಾಭಾರತಾದಿಗಳಲ್ಲಿ ರಾಷ್ಟ್ರಗಳನ್ನು ಕಟ್ಟಿಕೊಂಡು ಬಾಳುತ್ತಿದ್ದ ಜನಾಂಗಗಳಂತೆ ಇವರ ಉಲ್ಲೇಖವು ಎಲ್ಲಿಯೂ ಇಲ್ಲ. ಹಾಗಾದರೆ ಗುಜರಾತ ವಿಂಧ್ಯ ಗೋದಾವರಿಗಳ ನಾಡಿನಲ್ಲಿ ನಾಡಿಗರಾಗಿ ಇದ್ದವರು ಯಾರು? ಗೋದಾವರಿಯಿಂದ ಕರ್ನಾಟಕವೆಂದು ಅಲ್ಲಿ ಅರಸನಾಗಿದ್ದ ನೃಪತುಂಗನೆ (ಕ್ರಿ. ಶ. ೮೧೫) ಹೇಳುತ್ತಾನೆ. ಆದಕಾರಣ (ನೃಪತುಂಗನ ಮೊದಲು ಕೆಲವು ಶತಮಾನ) ಆರ್ಯರು ಇಲ್ಲಿ ಪ್ರಬಲವಾಗುವ ವರೆಗೆ, ಹೊರಗಿನವರು ಬಂದು ತಳ್ಳಿಹಾಕುವ ವರೆಗೆ ಆನಾಡು ಕನ್ನಡರದೆ ಆಗಿರಬೇಕೆಂದು ಊಹಿಸಿದರೆ ಅದರಲ್ಲಿ ಅಸ್ವಾಭಾವಿಕವೇನು? ಗೋದಾವರಿಯಿಂದ ದಕ್ಷಿಣಕ್ಕೆ ಮೆರೆಯುತ್ತಿದ್ದವರು ಅದೇ ನದಿಯ ಮೇಗಡೆಯಲ್ಲಿ ನರ್ಮದೆಯವರೆಗೆ ಆರ್ಯರು ಬರುವ ಮೊದಲೇ ಅಲ್ಲಿಯ ವರೆಗೆ ವ್ಯಾಪಿಸಲು ಆತಂಕವೇನಿತ್ತು? ಆದುದರಿಂದ, ಡಾ. ಸ್ಟೆನ್, ರಾನಡೆ ಪ್ರಭೃತಿಗಳು ಹೇಳುವ (ಗುಜರಾತಿ, ಮರ್‍ಹಾಟಿಗಳ ಆಧಾರಸ್ತಂಭದಂತಿರುವ) ದ್ರವಿಡ ಶಬ್ದಕ್ಕೆ ಕನ್ನಡವೆಂದೇ ಅರ್ಥಮಾಡುವುದು ಉಚಿತವಲ್ಲವೆ?

ಆದುದರಿಂದ, ಈ ನಾಡಿನಲ್ಲಿ ದ್ರವಿಡರ (ತಮಿಳರ) ಗಾಳಿ ಸಹಾ ಸುಳಿಯದಾಗ ಆಂಧ್ರರು ಇನ್ನೂ ವೆಂಗಿಮಂಡಲದಲ್ಲಿ ತಮ್ಮ ಪಾಡಿಗೆ ತಾವು ಇದ್ದುಕೊಂಡಾಗ ಮರ್‍ಹಾಟ ಗುಜರಾತಿಗಳು ಇನ್ನೂ ಕಣ್ಣು ಸಹ

ತೆರೆಯದೆ ಇದ್ದಾಗ ಅಲ್ಲಿಯ ನಾಡಿಗರ ಪ್ರಮುಖ ಭಾಷೆಯು ಕನ್ನಡವೇ ಆಗಿದ್ದಿತೆಂದು ಹೇಳಿದರೆ ತಪ್ಪೇನು? ಸುಮ್ಮನೆ ನಮ್ಮ ತರ್ಕವಾದರೂ ಏಕೆ? ಮರ್‍ಹಾಟಿಗಳೇ ಏನು ಹೇಳುವರು ನೋಡುವಂತಿದೆ. "ಆಂಧ್ರಕಾಯ, ಕಿಂವಾ ತ್ಯಾಂಚ್ಯಾ ನಂತರಚೇ ಆಂಧ್ರಭೃತ್ಯ ಶಾತವಾಹನ ಕಾಯ ಹೇ ಧೋಘೇಹಿ ಕಾನಡೀಚೇ ಕಟ್ಟೇ ಕೈವಾರೀ ಹೋತೇ"[೨೧] ಶಾತವಾಹನರ ರಾಜಧಾನಿ ಪ್ರತಿಷ್ಠಾನ, ಪೈಠಣ. ಇದು ಗೋದಾವರಿ ಮೇಗಡೆಯ ನಾಡಿನ ಕೇಂದ್ರ. ಅಲ್ಲಿಯ ರಾಜಭಾಷೆಯು ಕನ್ನಡವೆಂದ ಬಳಿಕ ಆನಾಡು ಕನ್ನಡವಿದ್ದಿತೆಂದು ಬೇರೆ ಏತಕ್ಕೆ ಹೇಳಬೇಕು? ಆದಕಾರಣ, ಈ ಮೊದಲೆ ವಿಮರ್ಶಿಸಿ ನೋಡಿದಂತೆ ಕಾವೇರಿ-ಗೋದಾವರಿಗಳ ನಡುವೆ ಸಿಕ್ಕದೆ ಇರುವ ಬನವಾಸಿ ಮಹಿಷಮಂಡಳಾದಿಗಳಿಂದ ಭಿನ್ನವಾದ 'ಕರ್ಣಾಟ' ವೆಂಬ ಪ್ರದೇಶವು ಗೋದಾವರಿಯ ಮೇಗಡೆಯ ಈ ನಾಡೆ ಏಕೆ ಆಗಿರಬಾರದು?

ಉತ್ತರದಿಂದ ಬಂದು ಆರ್ಯರೂ, ಆಭೀರರೂ ಮೊದಲಾದವರ ಆಘಾತಗಳಿಂದ ಕ್ರಿ.ಶ. ೪-೫ನೆಯ ಶತಮಾನಗಳೊಳಗಾಗಿ ಇಲ್ಲಿ ಕನ್ನಡಕ್ಕಿದ್ದ ಪ್ರಾಶಸ್ತ್ಯವು ಅಳಿದುಹೋಗಿರಬೇಕು. ದೇವಗಿರಿ ಯಾದವರ ಕಾಲಕ್ಕೆ ೧೨೫೦-೬೦ರವರೆಗೆ ಆ ನಾಡಿನಲ್ಲಿ ಕನ್ನಡವು ಅಂತೂ ಇಂತೂ ಜೀವ ಹಿಡಿದುಕೊಂಡಿತ್ತು. ಆದರೂ ಕನ್ನಡರು ಬಾದಾಮಿ, ಬನವಾಸಿ, ಮಹಿಷಮಂಡಳ, ನೀಲಗಿರಿಗಳ ವರೆಗೂ ತಂಡತಂಡವಾಗಿ ಕಾಲಕಾಲಕ್ಕೆ ಊರಿಕೊಂಡು ನಿಲ್ಲಲು ಹೋಗುತ್ತಲೇ ಇರಬೇಕು. ೧೩-೧೪ ನೆಯ ಶತಮಾನಗಳ ವರೆಗೆ ಕನ್ನಡವು ಹಾಗೂ ಹೀಗೂ ಜೀವಂತವಾಗಿದ್ದರು ಕ್ರಿಸ್ತಶಕದ ಮೊದಲೇ ಕರ್ಣಾಟವೆಂಬ ದೇಶವಾಚಕ ಶಬ್ದವು ಮಾತ್ರ ಈ ನಾಡಿನಿಂದ ಎಂದೋ ಅದೃಶ್ಯವಾಗಿರಲಿಕ್ಕೆಬೇಕು. ಆ ಸ್ಥಳದಲ್ಲಿಯೆ ಕ್ರಮವಾಗಿ ತಲೆಯೆತ್ತುತ್ತಲಿದ್ದ 'ಮಹಾರಾಷ್ಟ್ರ ಶಬ್ದವು' ೬ನೆಯ ಶತಮಾನದಲ್ಲಿ ಬಂದು ಸೇರಿಕೊಂಡಿತೆಂದು ಹೇಳಬಹುದು. ಹೀಗೆ 'ಕರ್ಣಾಟ'ವೆಂಬ ಹೆಸರಿನ ನಾಡು (ನರ್ಮದಾ ಗೋದಾವರಿಗಳ ನಡುವಿನದು) ಹೇಳ ಹೆಸರಿಲ್ಲದಂತಾಗಿದ್ದುದರಿಂದಲೆ ಅಶೋಕನ ಶಾಸನ ಗಳಲ್ಲಿ, ಮತ್ತು ಬೇರೆ ಎಷ್ಟೋ ಬೌದ್ಧಗ್ರಂಥಗಳಲ್ಲಿ ವನವಾಸಿ, ಮಹಿಷಮಂಡಲಾದಿಗಳ ಉಲ್ಲೇಖಗಳಿದ್ದರೂ 'ಕರ್ಣಾಟ' ವೆಂಬ ಶಬ್ದವು ಮಾತ್ರ ಕಣ್ಣಿಗೆ ಬೀಳುವುದಿಲ್ಲ. 'ಕರ್ಣಾಟವೆಂಬ ದೇಶವು ದಕ್ಷಿಣದಲ್ಲಿತ್ತು' ಎಂದು ಪರಂಪರಾಗತವಾಗಿ ಗೊತ್ತಿದ್ದವರು ಮಾತ್ರ ತಮ್ಮ ಗ್ರಂಥಗಳಲ್ಲಿ ಇದರ ಹೆಸರನ್ನು ಹೇಳುತ್ತಿರಬೇಕು.

ನರ್ಮದಾ-ಗೋದಾವರಿ ತೀರದ ನಿಜ ಕರ್ನಾಟ, ಕನ್ನಡವೆ ಕಣ್ಮರೆಯಾದ ಬಳಿಕ ಆ ಕನ್ನಡರಿಗೆ ಸ್ವತಂತ್ರ ಅಸ್ತಿತ್ವವಾದರೂ ಎಲ್ಲಿ? ಮಲೆಯ (ಮಾಳವ)ದಿಂದ ಮರಹಟ್ಟಿ ನಾಡು (ಮರ್‍ಹಾಟವು) ಮೊಟ್ಟಮೊದಲು ಮಹಾರಾಷ್ಟ್ರವಾಯಿತು. ಪುಲಿಕೇಶಿಯ ಕಾಲಕ್ಕೆ ಬಾದಾಮಿಯು ಮಹಾರಾಷ್ಟ್ರದ ರಾಜಧಾನಿಯೆನಿಸಿತು! ಹ್ಯೂವೆನತ್ಸಾಂಗನು ಅತ್ಯಂತ ವಿಸ್ತಾರವಾದ 'ಮಹಾರಾಷ್ಟ್ರ'ದ ವೈಭವಶಾಲಿಯಾದ ರಾಜಧಾನಿಯು ಬಾದಾಮಿಯೆಂದೆ ಬರೆದಿದ್ದಾನೆ. ಶ್ರೀ ಚಿಂತಾಮಣರಾವ ವೈದ್ಯ ಪ್ರಭೃತಿ; ಮಹಾರಾಷ್ಟ್ರರು ಕಾವೇರಿ (ತಂಜಾವರದ)ವರೆಗೂ ಮಹಾರಾಷ್ಟ್ರದೇಶವೇ ಇದೆಯೆಂದು ಕನಸಿನಲ್ಲಿ ಬಡಬಡಿಸುವವರಂತೆ ಆಗಾಗ್ಗೆ ಕನವರಿಸುತ್ತಿರುವುದರಲ್ಲಿ ಅರ್ಥವಿದೆ. ಮಹಾರಾಷ್ಟ್ರ ಜನಾಂಗದ ಮನಸ್ಸಿನ ಅಂತರಾಳದಲ್ಲಿ (Subcousions mind) ಎಲ್ಲಿಯೊ ಹಾಗೆ ಎನಿಸುತ್ತಲಿದೆ. 'ಕರ್ನಾಟಕವು' ಒಮ್ಮೆ ನಾಮಾಶೇಷವಾದ ಬಳಿಕ ಇನ್ನೆಲ್ಲಿಯ ಕನ್ನಡ? ಎಲ್ಲಿಯ ಕರ್ಣಾಟ? ಎಲ್ಲವೂ ಮಹಾರಾಷ್ಟ್ರವೆ! ಇದು ಬರಿ ಮರ್‍ಹಾಟಿಗಳ ಭಾವನೆಯಷ್ಟೆ ಅಲ್ಲ. ನಮ್ಮ ನಾಡಿನವರಲ್ಲಿಯೂ ಕೆಲಮಟ್ಟಿಗೆ ಇದೆ. ಏಕೆಂದರೆ? 'ಕರ್ಣಾಟ'ವೆ ಮಹಾರಾಷ್ಟ್ರವಾಯ್ತಲ್ಲವೇ? ಆದ್ದರಿಂದ ಕನ್ನಡರೆಲ್ಲರೂ ಮಹಾರಾಷ್ಟ್ರರೆ. ಜನ್ನ ಮಹಾಕವಿಯು (ಕ್ರಿ. ಶ. ೧೨೦೯) ಹೊಯ್ಸಳರ ರಾಜಾಶ್ರಯದಲ್ಲಿದ್ದವನು, ಕರ್ನಾಟ ಪ್ರದೇಶದವನು. ಅನಂತನಾಥ ಪುರಾಣದಲ್ಲಿ ಜೈನಧರ್ಮವು ಹೇಗೆ ವಿಸ್ತಾರಹೊಂದಿತೆಂಬುದನ್ನು ಹೇಳುವಾಗ ಹೀಗೆ ಬರೆಯುತ್ತಾನೆ:

"(ಜೈನ) ಸದ್ಧರ್ಮಪೀಯೂಷ ಪ್ರವಾಹಂ ವಂಗಮಂಡಳದೊಳ್ ತರಂಗಗೊಂಡು, ಕಳಿಂಗ ಮಂಡಳದೊಳ್ ಮಡುಗಟ್ಟಿನಿಂದು ಮಹಾರಾಷ್ಟ್ರ ಮಂಡಳದೊಳ್ ಅಟ್ಟುಂಬರಿವರಿದು ಮಲಯಮಂಡಳದೊಳ್ ವೇಳೆ ಗೊಂಡು ನೆಲಸಿ ಗುಜ್ಜರ ಮಂಡಳದೊಳ್ ಜಜ್ಜರಂ ಬರಿದು ಮರುಮಂಡಳದೊಳ್ (ಮಾರವಾಡದೇಶ)

ಪರೆವುವಡೆದು....."[೨೨] ಜನ್ನನು ಸ್ವತಃ ಜೈನನು. ಇಲ್ಲಿಯೆ ನೆಲೆಸಿದವನು. ಈ ನಾಡು ಜೈನಧರ್ಮದ ಆಗರ. ಹೀಗಿದ್ದು ಇವನು ಕರ್ಣಾಟದ ಹೆಸರನ್ನೆ ಹೇಳದಿರುವುದು ಸೋಜಿಗವಲ್ಲವೆ? 'ಕನ್ನಡಮೆನಿಪ್ಪಾನಾಡು' ಎಂದು ಹೇಳುವ ಆಂಡಯ್ಯನೂ ಇದೇ ಶತಮಾನದವನು. ಮೂಲಕರ್ಣಾಟವೆ ಹಾಳಾದ ಬಳಿಕ ಉಳಿದುದೆಲ್ಲವೂ ಕನ್ನಡಮೆನಿಪ್ಪಾ ನಾಡೇ ಸರಿ. ೭ನೆಯ ಶತಮಾನದಲ್ಲಿ ಆಗಿಹೋದ, ವೈದಿಕಧರ್ಮದ ಪುನರುದ್ಧಾರಕ್ಕಾಗಿ ಭರತಖಂಡದಲ್ಲೆಲ್ಲ ಅಲೆದಾಡಿದ ಘನ ವಿದ್ವಾಂಸನಾದ ಕುಮಾರಿಲಭಟ್ಟನೂ 'ಆಂಧ್ರ ದ್ರಾವಿಡ' ವೆಂಬ ಸಾಮಾಜಿಕ ಪದವನ್ನು ಮಾತ್ರ ಉಪಯೋಗಿಸುವನು. ಇವನು ಸಹ ಕರ್ಣಾಟ ಹೆಸರನ್ನೆ ಎತ್ತುವುದಿಲ್ಲ! ಈ ಮೊದಲು ಹೇಳಿದ ಚೀನದ ಪ್ರವಾಸಿ ಹ್ಯೂವೆನ್‌ತ್ಸಾಂಗನ ಮಹತ್ವದ ಉದಾಹರಣವಂತೂ ಇದ್ದೇ ಇದೆ.

ಕರ್ಣಾಟವು ನಾಮಶೇಷವಾಯಿತೆಂದು ಭಾವಿಸಿ ಹಲವು ಕಾಲದವರೆಗೆ ಕನ್ನಡರನ್ನು ದುರ್ಲಕ್ಷಿಸಿದ್ದುದ್ದೇ ಇದಕ್ಕೆ ಮೂಲಕಾರಣ. ಉತ್ತರದವರು ಗೌರರು-ಗೌಡರು ಅಂದರೆ ಕೆಂಪನ್ನವರು. ದಕ್ಷಿಣದವರು ದ್ರಾವಿಡರು ಅಂದರೆ ಕಪ್ಪನ್ನವರು ಎಂದು ಬ್ರಾಹ್ಮಣರಲ್ಲಿಯೆ ಎರಡು ವರ್ಣಗಳಾದವು. ದಕ್ಷಿಣದ ಜನಗಳ ಯಾವುದೆ ಮಾತಿನ ಅಳತೆ, ಮಾಪು ಮಾಡುವಾಗ ಕನ್ನಡರು ಕಣ್ಮರೆಯಾಗಿ ದ್ರವಿಡರೊಬ್ಬರಿಗೇ ಪ್ರಾಮುಖ್ಯತೆಯು ಬಂದಿತು. ಮಹಾರಾಷ್ಟ್ರದೊಳಗಿನ (ನರ್ಮದೆಯಿಂದ ಕಾವೇರಿಯವರೆಗೆ) ಬ್ರಾಹ್ಮಣರಿಗೆ ದ್ರವಿಡರು ಎಂದುಕೊಳ್ಳುವ ಇಚ್ಛೆಯಿಲ್ಲ. ಗೌಡರಲ್ಲಿ ಸೇರುವ ಹಾಗಿಲ್ಲ! ವಿಚಿತ್ರವು ವಿಚಾರಣೀಯವಾಗಿದೆ. ಆದರೆ, ಕರ್ನಾಟಕವು ೪-೫ನೆಯ ಶತಮಾನದಲ್ಲಿ ಇಷ್ಟು ವಿಕಲಾಂಗವಾದರೂ ಅದು ನೆಲಹಿಡಿದು ಬೀಳಲಿಲ್ಲ. ನರ್ಮದಾತೀರದ ಒಂದು ಕರ್ಣಾಟವು ಹೋದರೂ ಹಿಂದೆ ಹೇಳಿದಂತೆ ಬನವಾಸಿ, ಬಾದಾಮಿ ನಾಡುಗಳಲ್ಲಿ ಎರಡು ಕನ್ನಡಗಳಾದವು. 'ನಾಲ್ಕು ಸಾವಿರದ ಕನ್ನಡ!' 'ಎರಡು ನೂರರ ಕನ್ನಡ !' ಒಂದು ಕನ್ನಡ ಹೋಗಿ ಚಿಲ್ಲರೆ ಕನ್ನಡಗಳೆ ಕನ್ನಡಗಳು! ಗೋದಾವರಿಯ ಕೆಳಗಡೆ ಯಲ್ಲಿ ಸ್ವಲ್ಪ ದಿನಗಳಲ್ಲಿಯೇ ಕರ್ಣಾಟ ವಿರೋಧಿಗಳಿಗೆ ಎಲ್ಲಿ ನೋಡಿದಲ್ಲಿ ಕರ್ನಾಟವೆ ಕಾಣಲಾರಂಭಿಸಿರಬೇಕು. 'ಕುಂತಲ ಕರ್ನಾಟ, ಮೈಸೂರ ಕರ್ಣಾಟ' ಎಂದು ನರ್ಮದಾತೀರದಲ್ಲಿ ಗುಪ್ತವಾದ ಕರ್ಣಾಟವು ನೃಪತುಂಗನ ಕಾಲಕ್ಕೆ ಗೋದಾತೀರದ ದಕ್ಷಿಣಕ್ಕೆ ಎಲ್ಲಿ ನೋಡಿದಲ್ಲಿ ಕರ್ಣಾಟವೆ ಕರ್ಣಾಟವಾಗಿ ಬಿಟ್ಟಿತು! ಮರ್‍ಹಾಟಿಯಲ್ಲಿ 'ಕನ್ನಡ' (ಕಾನಡಿ) ಶಬ್ದಕ್ಕೆ 'ಗೂಢ, ಅಗಮ್ಯ! ನೆಲೆನಿಲುಕದ್ದು' ಎಂಬ ಅರ್ಥವೂ ಇದಕ್ಕಾಗಿಯೆ ಬಂದಿತೇನೋ[೨೩] ವಿಂಧ್ಯ-ಗೋದಾವರಿಗಳ ನಾಡಿನಲ್ಲಿ ಒಂದಾನೊಂದು ಕಾಲಕ್ಕೆ ಕರ್ಣಾಟವು ಇದ್ದುದೇ ನಿಜವಾಗಿದ್ದರೆ ಅಲ್ಲಿ ಕೆಲವಾದರೂ ಕನ್ನಡ ಜನಾಂಗಗಳು ಇರಬೇಕಷ್ಟೇ? ಕರ್ನಾಟವು ಹೊರಗಿನವರ ಹೊಡೆತಕ್ಕೆ ಸಿಕ್ಕಿಕೊಳ್ಳಲು ಕನ್ನಡರ ಎಷ್ಟೋ ತಂಡಗಳು ಈ ನಾಡಿನಿಂದ ದಕ್ಷಿಣಕ್ಕೆ ಹೊರಟುಹೋಗಿರಬಹುದು. ಆದರೆ, ಮೊದಲು ನೆಲಸಿದ್ದವರಲ್ಲಿ ತೀರ ಒಬ್ಬನೂ ಉಳಿಯದಂತೆ ಎಲ್ಲರೂ ತಮ್ಮ ಬದುಕು ಬಾಳುವೆಗಳನೆಲ್ಲ ಕಿತ್ತುಕೊಂಡು ಹೋಗುವುದಂತೂ ಅಸಂಭವ. ಆದುದರಿಂದ, ಇಲ್ಲಿ ಅಲ್ಪ ಸ್ವಲ್ಪ ಪ್ರಮಾಣದಲ್ಲಾದರೂ ಇನ್ನೂ ಕನ್ನಡದ ಅವಶೇಷಗಳು ಉಳಿದಿರಲಿಕ್ಕೆ ಬೇಕಷ್ಟೇ? ಹಾಗೆ ಏನಾದರೂ ಉಂಟೊ ಎಂದು ಕೇಳಬಹುದು. ಉಂಟು. ಈ ಬಗೆಯ ಆಧಾರಗಳ ಆಧಾರವಿಲ್ಲದ ಊಹೆಯೆ? ಅದು ಊಹೆಯಲ್ಲ; ಬರಿ ಉಂ ಹುಂ

ಕುರುಬರೂ ಮಲೆಯರೂ

ಡಾ. ಗ್ರಿಯರಸನ್ನನು ಇವರಿಗೆ ಕುರ್ಖ (Kurkh) ಮತ್ತು ಮಾಲೇರ (Maler) ಎನ್ನುತ್ತಾನೆ. ಮಾಲೇರ ಎಂಬುದು ಮಲೆಯರು ಎಂಬುದರ ಸಂಕ್ಷಿಪ್ತ ರೂಪವೆಂದು ಮೇಲೆಯೆ ಕಾಣುತ್ತಿದೆ. ಕುರ್ಖರು ಕುರಿದನಗಳನ್ನು ಸಾಕಿಕೊಂಡು ಬದುಕಿರುವವರು. ಗ್ರಿಯರ್‌ಸನ್ನರೆ ಮುಂದೆ ಹೇಳಿದ ಕುರುಬರು ಮೊದಲಾದ ಮಧ್ಯಪ್ರಾಂತದಲ್ಲಿ ಇನ್ನೂ ಗುಂಪುಕಟ್ಟಿಕೊಂಡು ಹೇಗೂ ಜೀವನವನ್ನು ಸಾಗಿಸುತ್ತಿರುವ ಕನ್ನಡತಂಡಗಳ ವರ್ಣನೆಯ ಮೇಲಿಂದಲೂ ಈ ತಂಡದವರ ನಿಜವಾದ ಹೆಸರು ಕುರುಬರೆಂತಲೆ ಇರಬೇಕೆಂದು ತೋರುತ್ತದೆ. ಧಾರವಾಡವು 'ಡಾರವಾರ್' (Dharwar) ಆದಂತೆ ಕುರುಬ (Kurkh) ಆಗಿದೆಯೊ ತಿಳಿಯದು. ಜನಗಳ ಇಂದಿನ ಬಳಕೆಯ ಮಾತಿನಲ್ಲಿ

ಹಳೆಗನ್ನಡದ ಸರ್ವನಾಮಗಳು ಹಳೆಗನ್ನಡ ವಿಭಕ್ತಿಪ್ರತ್ಯಯಗಳ ಅವಶೇಷಗಳು! ಈ ಜನಗಳೆಷ್ಟು ಗೊತ್ತೆ? ೫ ಲಕ್ಷ ಕುರುಬರು (Kurkh) ೧೨ ಸಾವಿರ ಮಲೆಯರು. ಇವರು ಕರ್ನಾಟದವರೆಂದು ಯಾರೂ ಬಲವಂತಪಡಿಸಿ ತರ್ಕ ಪ್ರಮಾಣಗಳಿಂದ ಸಿದ್ಧಮಾಡಿತೋರಿಸುವ ಕಾರಣವೇ ಇಲ್ಲ. ಏಕೆಂದರೆ, ಜನಾಂಗದವರು 'ತಾವು ಕರ್ನಾಟದಿಂದ ಬಂದವರು,' ಎಂದು ತಾವಾಗಿಯೇ ಹೇಳುತ್ತಾರೆ. ಹೊರಗಿನವರು ಬಂದು ಕಾಲುಚಾಚಿ ಕರ್ನಾಟರನ್ನು ಹೇಗೆ ದೇಶಭ್ರಷ್ಟರನ್ನು ಮಾಡಿರಬಹುದೆಂಬ ಕಲ್ಪನೆಯು ಈ ತಂಡದ ಉಧ್ಧಾಹರಣದಿಂದ ಚೆನ್ನಾಗಿ ಗೊತ್ತಾಗುವಂತಿದೆ. ಇವರನ್ನು ಕುರಿತು ಡಾ. ಗ್ರಿಯರಸನ್ನರು ಬರೆದಿರುವುದೇನೆಂದರೆ:

> 'According to their own traditions the Kurkh tribe originally lived in carnatic, whence they went up the Narbada River and settled in Bihar on the banks of Sone. Driven out by mohomedans the tribe split into two divisions one followed the course of Ganges and finally settled in Rajamahal Hills; while the other went up to Sons. [೨೪]

ಮುಂದೆ ಅದೆ ಗ್ರಂಥದಲ್ಲಿಯೆ 'ಕುರುಬರೂ ಮಲೆಯರೂ ಬೇರೆ ಬೇರೆ ಅಲ್ಲ; ಒಂದೇ ತಂಡದವರೆಂದು' ಹೇಳಿದೆ.

> The Kurkh and Maler are one and the same tribe, and that they formerly lived together on the banks of Sone.

'ಕುರುಬರು ತಾವು ಮೊದಲು ಕರ್ನಾಟದಲ್ಲಿ ನೆಲಸಿದವರು' ಎಂದು ಹೇಳುತ್ತಾರಂತೆ. ಕರ್ನಾಟದ ನಿವಾಸಿಗಳಿಗೆ ಕನ್ನಡರೆಂದು ಹೇಳಲು ಹೆದರಿಕೆಯೇಕೆ? ಆದ್ದರಿಂದ ಕುರುಬರೂ ಮಲೆಯರೂ ಕನ್ನಡರು. ಇವರು ತಮ್ಮ ನಾಡಿಗೆ ಎರವಾಗಿ ಮನೆಮಾರುಗಳ ಅರಿವು ಇಲ್ಲದೆ ದೈವವು ಅಟ್ಟಿದತ್ತ ಅಲೆದಾಡುತ್ತ ನಡೆದು ಇಪ್ಪತ್ತುಸಾವಿರ ವರುಷಗಳು ಮೀರಿಹೋಗಿರಬೇಕು. ಕರ್ನಾಟದ ಮಹಾಜನಗಳಿಗೆ, ಕಾಡು ಸೇರಿ ಕಷ್ಟಪಡುತ್ತಿರುವ ತಮ್ಮ ಜನಗಳ ಪರಿವೆ ಇಲ್ಲದ್ದರಿಂದ ಪರದೇಶಿಗಳಾಗಿ ಪರಭಾಷೆಗಳ ಮಧ್ಯದಲ್ಲಿ ಸಿಕ್ಕು ಬಿದ್ದಿರುವರಾದರೂ ಆ ಜನರ ಭಾಷೆಯೊಳಗೆ ಇನ್ನೂ ಹಳೆಗನ್ನಡದ ಕುರುಹುಗಳು ಉಳಿದಿರಬೇಕಾದರೆ ಆ ಜನಾಂಗದಲ್ಲಿ ಬೇರೂರಿದ ಪೂರ್ವ ಸಂಸ್ಕಾರಗಳು ಎಷ್ಟು ದೃಢವಾದವುಗಳಿರಬೇಕು!

'ಈ ಜನಗಳು ಕರ್ನಾಟದಿಂದ ಹೊರಟು ನರ್ಮದೆಯನ್ನು ದಾಟಿ ಶೋಣ ನದಿ ತೀರಕ್ಕೆ' ಹೋದರಂತೆ; ಏಕೆ, ನಡುವೆ ಕೃಷ್ಣಾ, ಭೀಮಾ, ಗೋದಾವರಿ ನದಿಗಳು ಹತ್ತಲೆ ಇಲ್ಲವೆ? ಇವರಿಗೆ ನಡುವೆ ಸಹ್ಯ ಪರ್ವತದ ಶಾಖೆಗಳಾವವೂ ಆಶ್ರಯವನ್ನೀಯಲಿಲ್ಲವೇ? ಇವರು ವಾಸವಾಗಿದ್ದ ಕರ್ನಾಟವೆ ಗೋದಾವರಿಯ ಮೇಗಡೆಗೆ ಇದ್ದರೆ, ಗೋದಾವರಿಯನ್ನು ದಾಟುವ ಆವಶ್ಯಕತೆಯಾದರೂ ಏನು? ಈ ನಾಡಿನಿಂದ ಮೇಲಕ್ಕೆ ಎಂದರೆ ನರ್ಮದೆಯಿಂದ ಉತ್ತರಕ್ಕೆ, ಶೋಣ ಭದ್ರೆಯ ತೀರವೆ ಸಮೀಪದ ಆಶ್ರಯ ಸ್ಥಾನವೆನಿಸಿ ಅವರು ಅಲ್ಲಿ ನೆಲಸಿಬಿಟ್ಟಿರಬೇಕು. ಈ ಕುರುಬರು, ಮಲೆಯರು ಅಲ್ಲದೆ ಕೋಲ (ಕೋತ?)ರು, ನಾಯಿಕರು ಮೊದಲಾದ ಕೆಲವು ವರ್ಗಗಳೂ ಅಲ್ಲಿವೆ. ಅವರ ಬಳಕೆಯ ಮಾತಿನಲ್ಲಿಯೂ ಹಳೆಗನ್ನಡದ ಅವಶೇಷಗಳಿಗೆ ಕೊರತೆಯಿಲ್ಲ. ಇವರ ಭಾಷೆಗೂ ನೀಲಗಿರಿಯಲ್ಲಿ ನೆಲೆಯಾಗಿರುವ ತೋಡದ ಭಾಷೆಗೂ ಎಷ್ಟೋ ಮಾತುಗಳಲ್ಲಿ ಆಶ್ಚರ್ಯಕರವಾದ ಸಾಮ್ಯವಿದೆಯೆಂದು ಗ್ರಿಯರಸನ್ನ ಸಾಹೇಬರೇ ಹೇಳುತ್ತಾರೆ.

> There are also some interesting points of analogy with the Toda dialect of Nilgiries.[೨೫]

ನೀಲಗಿರಿ ಎಲ್ಲಿ? ಈ ಜನಗಳೆಲ್ಲಿ? ಇವರಲ್ಲಿ ಆದಾವ ಬಗೆಯ ಸಂಬಂಧವೂ ಇಲ್ಲದೆಯೆ ಭಾಷೆಗಳಲ್ಲಿ ಈ ತೆರನಾದ ಹೋಲಿಕೆಯಿರಬಹುದೇ? ಆದಕಾರಣ ನೃಪತುಂಗನ ಕಾಲಕ್ಕೆ (ನೀಲಗಿರಿಯಿಂದ) ಗೋದಾವರಿಯ

ವರೆಗೆ ಇದ್ದ ಕನ್ನಡವು (ಅದಕ್ಕೂ ಮೊದಲು ಒಂದು ಕಾಲಕ್ಕೆ ಆರ್ಯರೂ ಆಭೀರರೂ ಅಲ್ಲಿ ಪ್ರಬಲವಾಗುವ ಮೊದಲು) ನರ್ಮದೆ-ವಿಂಧ್ಯಗಳ ವರೆಗೂ ಹಬ್ಬಿಕೊಂಡಿದ್ದಿತೆಂದು ಹೇಳುವುದೆ ಉಚಿತವಲ್ಲವೆ?

ಗೊಲ್ಲರು ಹೊಲೆಯರು ಮತ್ತು ಕುರುಂಬರು

ಆವುದೊಂದು ಜನಾಂಗದ ಮಾತಿನಲ್ಲಿ ಒಂದು ಎರಡು ಹಳೆಕನ್ನಡದ ಅವಶೇಷಗಳು ದೊರೆತಕೂಡಲೆ ಹಿಗ್ಗಿ ಹಾರಾಡಿ 'ಕನ್ನಡನಾಡು ನರ್ಮದೆಯವರೆಗೆ ಇತ್ತು' ಎಂದು ಹೇಳುವುದು ಹುಚ್ಚುತನವೆ ಸರಿ. ಆದರೆ, ಇದಕ್ಕೂ ಹೆಚ್ಚಿನ ಆಧಾರಗಳು ದೊರೆತ ಮೇಲೂ ತಮ್ಮ ಮೊದಲಿನ ಅಭಿಪ್ರಾಯವನ್ನು ಮಾರ್ಪಡಿಸಿಕೊಳ್ಳುವ ಸಿದ್ಧತೆಯನ್ನು ತೋರಿಸದಿರುವುದು ಸಹ ದುರಾಗ್ರಹಕ್ಕಿಂತ ಬೇರೆ ಏನೂ ಅಲ್ಲ. ಹೊರಗಿನವರ ಮೊದಲನೆಯ ತೆರೆಯು ಬಂದು ಅಪ್ಪಳಿಸುತ್ತಲೇ ಚೆದುರಿ ಹೋದವರಲ್ಲಿ ಕುರುಬರೂ (Kurkh), ಮಲೆಯರೂ ಪ್ರಮುಖರಾಗಿರಬೇಕು. ಏಕೆಂದರೆ, ಇವರ ಮಾತಿನಲ್ಲಿ ದೊರೆವ ಕನ್ನಡದ ಅವಶೇಷಗಳು, ನೃಪತುಂಗನು ತನ್ನ ಹಿಂದೆ ಇದ್ದಿತೆಂದು ಹೇಳುವ 'ಪೊಲಗೆಡಿಸಿ ನುಡಿಯುತ್ತಿದ್ದ' ತೀರ ಹಳೆಕನ್ನಡದ ಅಂಶಗಳು. ಆದರೆ, ಗೊಲ್ಲರು (Golari) ಮತ್ತು ಹೊಲೆಯರು (ಮಹಾರರಲ್ಲ, ನಾಗಪುರದ ಕಡೆಗೆ ಇವರಿಗೆ ಇನ್ನೂ ಹೊಲೆಯರೆಂದೇ ಹೇಳುವರಂತೆ) ವರ್ಹಾಡ, ನಾಗಪೂರ, ಚಂದಾ, ಭಂಡಾರಗಳ ನಿವಾಸಿಗಳು. ಇವರ ಭಾಷೆಯು ೧೨ನೆಯ ಶತಮಾನದ ನಯಸೇನನ 'ಧರ್ಮಾಮೃತ'ದಲ್ಲಿ ಕಾಣಬರುವ ಸೊಗಸಾದ ತಿಳಿಗನ್ನಡಕ್ಕೆ ತೀರ ಹತ್ತಿರದಲ್ಲಿದೆ. ಅಷ್ಟೇ ಏಕೆ? ಗ್ರಿಯರಸನ್ ಸಾಹೇಬರು ಇದು ವಿಜಾಪುರ (ಪ್ರಾಚೀನ ಬಾದಾಮಿ) ನಾಡಿನ ಕನ್ನಡಕ್ಕೆ ಬಹಳ ಹೋಲುವುದೆಂದು ಅಸಂದಿಗ್ಧ ಶಬ್ದಗಳಿಂದ ಹೇಳುತ್ತಾರೆ.

> The Golari-Holiya is a dialect of Canarese and is especially closely related to the form which that language assumes in Bijapur.[೨೬]

ಇವರ ಮಾತುಗಳಲ್ಲಿ ೧೦೦ಕ್ಕೆ ೯೫ ಶಬ್ದಗಳೂ ಕನ್ನಡ; ಸಂಪೂರ್ಣ ಈಗಿನ ನಮ್ಮ ನಾಡಿನದೆನ್ನಬಹುದು. ಅಂತಹ ಕನ್ನಡ, ಇವರ ಮಾತು, ಇವರ ಮಾತುಗಳ ಸಂಬಂಧವೂ ನೀಲಗಿರಿಗೆ ಇರಬೇಕೆ! ನೀಲಗಿರಿಯ ಬಡಗರ ನುಡಿಗೂ ವರ್ಹಾಟ ನಾಗಪೂರ ಪ್ರಾಂತದಲ್ಲಿ ಹುದುಗಿಕೊಂಡಿರುವ ಗೊಲ್ಲರ ಹೊಲೆಯರ ಮಾತುಗಳಿಗೂ ಸಾಮ್ಯವಿದೆಯೆಂದು ತುಲನಾತ್ಮಕ ಭಾಷಾಭ್ಯಾಸಿಗಳು ಹೇಳುತ್ತಾರೆ.

In other cases it has preserved old forms like the dialect of Badagas.[೨೭] ನೀಲಗಿರಿಯಲ್ಲಿರುವ ಬಡಗರು (ಉತ್ತರದವರು) ಅವರ ಜಾತಿವಾಚಕ ನಾಮವೆ ಹೇಳುತ್ತಿರುವಂತೆ ಉತ್ತರದಿಂದ ಅಲ್ಲಿ ಬಂದರು ಎಂಬುದು ನಿರ್ವಿವಾದ. ಹಾಗಾದರೆ ಉತ್ತರದಿಂದ ಅಂದರೆ ಎಲ್ಲಿಂದ? ಮಧ್ಯಪ್ರಾಂತ ನಾಗಪೂರಗಳ 'ಗೊಲ್ಲರು' ಮೊದಲಾದವರೆ ನೀಲಗಿರಿಯಲ್ಲಿ ನಿಂತಬಳಿಕ (ಉತ್ತರದಿಂದ ಬಂದವರೆಂದು) ಬಡಗರೆನಿಸಿಕೊಂಡಿರುವುದೆ ಹೆಚ್ಚು ಸಂಭವನೀಯವಲ್ಲವೆ? ಇವರ ಭಾಷೆಯ ಮೇಲಿಂದ ಈ ಜನಗಳು ೧೧-೧೨ನೆಯ ಶತಮಾನಗಳ ಸುಮಾರಿಗೆ ಮಧ್ಯಪ್ರಾಂತವನ್ನು ಬಿಟ್ಟು ನೀಲಗಿರಿಯ ಕಡೆಗೆ ಹೋಗಿರಬೇಕೆಂದು ಊಹಿಸಲು ಅವಕಾಶವಿದೆ.

ನಾಗಾಪೂರ ಚಂದಾ ವಿಭಾಗದಲ್ಲಿಯೆ ಕುರುಬರೆಂಬ ಹೆಸರಿನ ಇನ್ನೂ ಒಂದು ತಂಡವಿದೆ. ಇವರಿಗೆ ಅಲ್ಲಿ 'ಕುರುಂವಾರ' (Kurumvar) ಎನ್ನುವರು. 'ಕುರುಂಬ' ಶಬ್ದದ ಬಹುವಚನಾಂತ ರೂಪವಿದು. ಇದಕ್ಕೆ ಇಂಗ್ಲಿಷ್‌ನಲ್ಲಿ ಬಹುವಚನಾಂತ ಪ್ರತ್ಯಯವನ್ನು Kurumvars ಸೇರಿಸಿ ಎಂದು ಹೇಳುವುದುಂಟು! ಇಂದಿಗೂ ಈ ಜನಗಳ ಉಪಜೀವನವು ಕುರಿಗಳಿಂದಲೇ. ಇವರ ಮಾತು ನಿಶ್ಚಿತನಾಗಿಯೂ ಕನ್ನಡವೆಂದು ಗ್ರಿಯರಸನ್ನರ ಅಭಿಪ್ರಾಯ.

Kurumvars wild pastoral tribe in Chanda who speak a dialect of Kanarese..... this dialect is as specimens clearly show a form of Kanarese.[೨೮]

ದಕ್ಷಿಣಕ್ಕೆ 'ಕುರುಂಬ'ರು (ಕುರುಬರಲ್ಲ) ಇರುವುದು ಮುಖ್ಯವಾಗಿ ನೀಲಗಿರಿ ಭಾಗಕ್ಕೆ ಮಾತ್ರ. ಈಗಿನ ಕರ್ಣಾಟದ ಉಳಿದ ಕಡೆಯಲ್ಲಿ ಇರುವವರು ಕುರುಬರು. ಒಂದು ಕಾಲಕ್ಕೆ ಕನ್ನಡದಲ್ಲಿ ಅನುನಾಸಿಕಗಳ ಪ್ರಾಬಲ್ಯವು ಬಹಳವಾಗಿತ್ತು. ಬೆಡಂಗು, ತುರುಂಬ, ದಾಂಟು ಇತ್ಯಾದಿ ನೂರಾರು ಶಬ್ದಗಳಿವೆ. ಇವೆಲ್ಲ ಒಂದು ಕಾಲಕ್ಕೆ ನಿತ್ಯಬಿಂದುಗಳು. ೧೩ನೆಯ ಶತಮಾನದ ಕೇಶಿರಾಜನು ಶಬ್ದಮಣಿದರ್ಪಣದಲ್ಲಿ ಕೆಲವು ನಿತ್ಯ ಬಿಂದುಗಳೆಂದೂ ಇನ್ನು ಕೆಲವು ಅನಿತ್ಯ ಬಿಂದುಗಳೆಂದೂ ವಿಂಗಡಿಸಿರುವನು. ಆತನು ಹೇಳಿದ ಅನಿತ್ಯಬಿಂದುಗಳಂತೂ ಸರಿಯೇ, ನಿತ್ಯಬಿಂದುಗಳೂ ಈಗ ತಮ್ಮ ಅನುಸ್ವಾರವನ್ನು ಕಳೆದುಕೊಂಡಿವೆ. ಸೆರಂಗು, ತೇಂಕು, ದಾಂಟು ಮೊದಲಾದವುಗಳೊಡನೆ 'ಕುರುಂಬ'ವನ್ನೂ ಅವನು ನಿತ್ಯಬಿಂದುಗಳ ಪಟ್ಟಿಯಲ್ಲಿಯೇ ಸೇರಿಸಿದ್ದಾನೆ.[೨೯] ಹದಿನಾಲ್ಕನೆಯ ಶತಮಾನದ ಮುಂದೆ ಮಧ್ಯ ಕರ್ಣಾಟಕದ ಶಬ್ದೋಚ್ಚಾರದ ರೀತಿಯಲ್ಲಿ ಹಲವು ಬದಲಾವಣೆಗಳಾದುವು. ಆಗ ಕುರುಂಬದ ಅನುಸ್ವಾರನಿತ್ಯತ್ವವು ಹೋಗಿ 'ಕುರುಬ'ವೆಂದು ಬಳಕೆಯಲ್ಲುಳಿಯಿತು. ಆದರೆ, ಮಧ್ಯಪ್ರಾಂತ (ನಾಗಾಪೂರ) ಮತ್ತು ನೀಲಗಿರಿ ಇವೆರಡೂ ತೀರ ತುತ್ತತುದಿಯ ಪ್ರದೇಶಗಳಿಗೆ ನಡುಗನ್ನಡದ ನಾಡಿನಲ್ಲಾದ ಬದಲಾವಣೆಗಳ ಗಾಳಿಯೂ ಸಹ ಸೋಂಕದೆ ಹಳೆಯ ರೂಪಗಳು ಹಾಗೆ ಉಳಿದುವು. ಆದುದರಿಂದಲೇ, ಆ ಎರಡೂ ತುದಿನಾಡುಗಳಲ್ಲಿ ಕುರುಂಬರು ಕುರುಬರಾಗಿರದೇ ಉಳಿದುದು. ಈ ಶಬ್ದಸಾಮ್ಯವೊಂದೇ ಅಲ್ಲದೆ ಗ್ರಿಯರಸನ್ ಸಾಹೇಬರು ಕಂಡುಹಿಡಿದಿರುವ ಇನ್ನೂ ಹಲವು ಭಾಷಾ ಪ್ರಕ್ರಿಯೆಯ ಸಾಮ್ಯಗಳು ಈಗಲೂ ಉಳಿದಿರುವುವು.

ಮಧ್ಯಹಿಂದುಸ್ಥಾನದ-ಅಂದರೆ ನಿಜ ಕರ್ಣಾಟಕದಲ್ಲಿದ್ದ ಕನ್ನಡರು ನಮ್ಮಲ್ಲಿ ಅಖಂಡಕರ್ಣಾಟದ ತೀವ್ರ ಭಾವನೆ ಇಲ್ಲದ್ದರಿಂದ ಕ್ರಮವಾಗಿ ಹೇಗೆ ಹೇಳ ಹೆಸರಿಲ್ಲದಂತಾಗಿರಬಹುದೆಂಬುದು ಕೆಳಗಿನ ಅಂಕಿಗಳಿಂದ ವ್ಯಕ್ತವಾಗುತ್ತದೆ:

ಕುರುಬರು (ಚಂದಾದಲ್ಲಿ)

ಕ್ರಿ.ಶ.	೧೮೯೧	೧೯೦೧
	೨೩.೨೦	೨೧೫೧

ಹೊಲೆಯರು ಮತ್ತು ಗೊಲ್ಲರು

(ಶಿವಣಿ, ನಾಗಪುರ, ಭಂಡಾರಾ ಬಾಲಘಟ್ಟಗಳಲ್ಲಿ)

೧೮೯೧	೧೯೦೩
೩೬೧೪	೩೪೬೪

ಹಳಬರು (ಹಳ ಪೈಕರು)

ವರ್ಹಾಡ-ಮಧ್ಯಪ್ರಾಂತಗಳಲ್ಲಿ ಒಂದು ಲಕ್ಷಕ್ಕೆ ಕಡಮೆ ಇಲ್ಲದಿರುವಷ್ಟು ಹಳಬರಿರಬೇಕಾದರೆ ಜನರು ತಮ್ಮ ಮೂಲಭಾಷೆಯನ್ನು ಕಳೆದುಕೊಂಡಿದ್ದರೂ ಹಳೆಯ ಹೆಸರನ್ನಾದರೂ ಕಾದು ಇಟ್ಟುಕೊಂಡಿರುವುದು; ಕನ್ನಡದ ದುರ್ದೈವದೊಳಗೆ ಸ್ವಲ್ಪ ಸುದೈವ. ಕುರುಬರು, ಕುರುಂಬರು ಪಟ್ಟಣಿಗರಲ್ಲ. ಹೊತ್ತು ಬಂದಂತೆ ಕೊಡೆಹಿಡಿಯುವುದನ್ನೂ ಗೆದ್ದೆತ್ತಿನ ಬಾಲಹಿಡಿದು ತಾವೂ ವಿಜಯಿಗಳೆಂದು ಮೆರೆವುದನ್ನೂ ಇವರು ಅರಿಯರು ತಮ್ಮ ಕನ್ನಡ ಮನೆಮಾತನ್ನು ಇಂದಿಗೂ ಬಿಟ್ಟಿಲ್ಲ. ಬ್ರಾಹ್ಮಣರೆ ಮೊದಲಾದ ಸುಧಾರಿಸಿದ ವರ್ಗದವರ ಮಾತೆ

ಬೇರೆ. ಕಾಲಕ್ಕನುಸರಿಸಿ ವೇಷ ಮಾಡುವುದರಲ್ಲಿ ಇವರು ಗಟ್ಟಿಗರು. ತಾವು ಮೊದಲು ಹಾಗೆ ಇದ್ದವೆಂದು ಒಪ್ಪಲಿಕ್ಕೂ ಇವರು ಸಿದ್ಧರಿರುವುದಿಲ್ಲ. ಹಳಬರು (ಹಳಪೈಕರು) ಆರ್ಯೇತರ ಜನಾಂಗದ ವರ್ಗಕ್ಕೆ ಸೇರಿದವರು-'ದ್ರಾವಿಡ'[೩೦] (?ಕನ್ನಡ)ರು ಎಂದು ಸಂಶೋಧಕರು ಅಭಿಪ್ರಾಯ ಪಟ್ಟರೂ ಅವರಿಗೆ (ಹಳಬರಿಗೆ) ಅದು ಸಮ್ಮತವಿಲ್ಲದಂತೆ! ರಜಪೂತಕುಲಕ್ಕೆ ಸೂರ್ಯಚಂದ್ರ ವಂಶಕ್ಕೆ ಎಲ್ಲಿಯೊ ಸಂಬಂಧವನ್ನು ಹಚ್ಚಿಕೊಳ್ಳುವ ಪ್ರೀತಿಯಿವರಿಗೆ. ಇಂತಹುದೆ ಇನ್ನೊಂದು ಸಣ್ಣದೃಷ್ಟಾಂತ. 'ಹಳಬೇ' ಕಾನಡೇ' ಎಂಬ ಮನೆತನದ ಹೆಸರಿನ ಬ್ರಾಹ್ಮಣರುಂಟು ಮಹಾರಾಷ್ಟ್ರದಲ್ಲಿ. ಆದರೆ, ಇವರಿಗೆ ಈ ಅಡ್ಡ ಹೆಸರಿನಿಂದ ಆನಂದ ಅಭಿಮಾನಗಳುಂಟಾಗದೆ ಅಪಮಾನವೆನಿಸುತ್ತಿದ್ದುದು ಮಾತ್ರ ಎಷ್ಟೋ ಕಡೆಗೆ ಅನುಭವಕ್ಕೆ ಬರುತ್ತಲಿದೆ! ಇಂತಹರ ಮನೆಯಲ್ಲಿ-ನಾಡಿನಲ್ಲಿ ಕನ್ನಡವು ಬಾಳಿ ಬದುಕುವ ಆಸೆಯೆಲ್ಲಿ?

ಮಧ್ಯಪ್ರಾಂತದ ಕಣಕೇರ, ಬಸ್ತರಾ ಸಂಸ್ಥಾನಗಳಲ್ಲಿ ಚೆನ್ನಾಗಿ ಪರಿಶೋಧಿಸಿದರೆ ಪ್ರಾಚೀನ ಕನ್ನಡದ ಕುರುಹುಗಳು ತುಂಬಾ ಸಿಕ್ಕುವಂತಿವೆಯಂತೆ. ಹಳಬರ ನೆಲೆವೀಡು ಇದು; ಚಂದಾ, ರಾಯಪೂರ ಭಂಡಾರ ಗಳಲ್ಲಿಯೂ ಇವರು ಕಡಿಮೆ ಇಲ್ಲ. ಮೂಲಭಾಷೆಯೆ ಬೇರೆ ಆಗಿದ್ದ ಇವರು ಆಡುವ ಮರ್ಹಾಟಿಯಾದರೂ ಹೇಗೆ ಪರಿಶುದ್ಧವಾಗಿರಬೇಕು? ಮರ್ಹಾಟಿಯಲ್ಲಿ 'ಹಳಬೀ ಭಾಷಾ' ಎಂಬ ಹಲವು ವೈಚಿತ್ರ್ಯಗಳುಳ್ಳ ಒಂದು ಮಿಶ್ರನುಡಿಯೆ ಇದೆ. ಈ ಜಾತಿಯ ದೈವದವರೆ ಇವರ ಜಗಳತೋಟಿಗಳನ್ನು ತೀರಿಸುವವರು. ಪಂಚಾಯತಿಯ ಹಿರಿಯನ ಹೆಸರು ಕೂರ್ಸೆ; ಕೋಟವಾರ, (ಕೊಮಾರ ಪೈಕರು?) ನಾಯಿಕ, ಚನ್ನಪ್ಪಾ ಎಂಬ ಒಳಬಣಗಳೊಳಗಿಂದ ಕೂರ್ಸೆಯನ್ನು ಆಯ್ದುಕೊಳ್ಳುವರು;[೩೧] ಕೂರ್ಸೆ ಎಂದರೆ ಅಗ್ರಗಣ್ಯ (ಕೂರ್-ತುದಿ ಗ್ರ).

ಹಳಬರು ಹೊರಗಣಿಂದ ಮಧ್ಯಪ್ರಾಂತಕ್ಕೆ ಹೋಗಿ ನೆಲೆಸಿರಬಹುದೆ? ಇವರು ಗುಳೆ ಕಟ್ಟಿಕೊಂಡು ತಿರುಗುವ ತಂಡದವರಲ್ಲವೇ ಅಲ್ಲ. ಹಾಗಾದರೆ ಹಳಬರು ಅಲ್ಲಿಯ ಹಳೆಯ ನಿವಾಸಿಗಳೆಂದು ಸಮ್ಮತಿಸಿದರೆ, ಅದು ಹಳೆಯ (ಕನ್ನಡ) ನಾಡು-ಪ್ರಾಚೀನ ಕರ್ಣಾಟ-ನಿಜಕರ್ಣಾಟವೆಂದು ಪರ್ಯಾಯದಿಂದ ಒಪ್ಪಿಕೊಂಡಂತೆಯೇ ಹಳಬರು ಮಧ್ಯಪ್ರಾಂತದ ಹಳೆಪೈಕಿ ಜನರು; ಮೂಲ ನಿವಾಸಿಗಳು ಎಂದು ಇನ್ನೂ ಒಂದು ಬಗೆಯಿಂದಲೂ ಹೇಳಬಹುದು. ಬನವಾಸಿ-ತುಳುನಾಡುಗಳಲ್ಲಿ ಹೊರಗಿನಿಂದ ಬಂದು ನೆಲೆಸಿದವರೆಂದು ಖ್ಯಾತಿಯಿರುವ ಬೇರೆ ಬೇರೆ ಗುಂಪುಗಳಲ್ಲಿ ಹಳಬರ ತಂಡವೂ ಒಂದು. ಇವರಿಗೆ ಇಲ್ಲಿ ಸಾಮಾನ್ಯವಾಗಿ ಹಳ ಪೈಕರು ಎಂಬ ಹೆಸರು ಇವರಲ್ಲಿ ಕೊಮಾರ (ಕೋಟವಾರವೆಂದು ಮಧ್ಯಪ್ರಾಂತದ ಹಳಬರಲ್ಲಿ) ಒಳಬಣವಿದೆ. ಈ ಜನಗಳು 'ತಾವು ಕಲಬುರ್ಗಿಯತ್ತಣಿಂದ ಬಂದುದಾಗಿ' ಹೇಳುವರು[೩೨] ಮಧ್ಯಪ್ರಾಂತದ ಹಳಬರೆ, ರಾಷ್ಟ್ರಕೂಟರು ಮತ್ತು ಚಾಲುಕ್ಯರ ಕಾಲಕ್ಕೆ ಕಲಬುರ್ಗಿ ನಾಡಿನಲ್ಲಿ ರಾಜಾಶ್ರಯವನ್ನು ಹೊಂದಿರಬೇಕು. ಆ ರಾಜ್ಯಗಳು ಹಾಳಾದ ಬಳಿಕ ಇವರು ಬನವಾಸಿ ತುಳುನಾಡಿಗೆ ಬಂದು ನಿಂತಿರಲಿಕ್ಕೆ ಸಾಕು. ಹಳಬರು ಬಹಳ ಶೂರರು. ಜೀವದ ಹಂಗು ತೊರೆದು ಕಾದುವ ಕಡುಗಲಿಗಳು. ಕರ್ಣಾಟ ಬಲದಲ್ಲಿ ಹಳಬರಿಗೆ ತುಂಬಾ ಮಹತ್ವವಿರಬೇಕೆಂದು ತೋರುತ್ತದೆ. ಇವರಿಗೆ ಈಗ ಕರ್ಣಾಟದ ಹೆಸರಿನಲ್ಲಿ ತಮ್ಮ ತೋಳ್ಬಲವನ್ನು ಮೆರೆಯಿಸುವುದಕ್ಕೆ ಸಹ ಅವಕಾಶವಿಲ್ಲ. ದಂಡಿನಲ್ಲಿ 'ಮರಾಠಾ ಇನ್‌ಫಂಟ್ರಿ' ಎಂಬ ವಿಭಾಗಕ್ಕೆ ಸೇರಿಸಲ್ಪಡುವರು. ಬ್ರಿಟಿಶರಿಗೆ ಹಳಬರು ತಮ್ಮ ಕೈಗುಣ ತೋರಿಸದೆ ಬಿಟ್ಟಿಲ್ಲ. ಬಂಡುಮಾಡಿ ತನ್ನ ಪರಾಕ್ರಮದಿಂದ ವಿಖ್ಯಾತನಾದ ಬೆಳಗಾಂವ ಜಿಲ್ಹೆಯ ಸಂಗೊಳ್ಳಿ ರಾಯಣ್ಣನು ಹಳಬನು. ಕಾರವಾರ ಗ್ಯಾಝಿಟಿಯರನಲ್ಲಿಯೂ ಹಳಬರು (ಕುಮಾರ ಪೈಕರು) ಬ್ರಿಟಿಶರಿಗೆ ತುಂಬಾ ಪೀಡಿಸಿದುದರ ಉಲ್ಲೇಖವಿದೆ. ಇದೇ ಸ್ವಭಾವವೆ ಮಧ್ಯಪ್ರಾಂತದ ಹಳಬರದು; ಹಳಪೈಕರು. ಈಗ ವಿಚಿತ್ರ. (Currupt) ವೆನಿಸುವ ಒಂದು ಬಗೆಯ (ಹಳೆ) ಕನ್ನಡವನ್ನೇ ಮಾತಾಡುವುದಾಗಿ ಅದೆ ಗ್ಯಾಝಿಟಿಯರು ಹೇಳುತ್ತದೆ. ಆ 'ಹಲಗೆಡಿಸಿ' ನುಡಿವ ಹಳಮಾತು[೩೩] ನರ್ಮದಾ ತೀರದ್ದೆ ಇರಬೇಕೆಂದು ಈ ಮೊದಲೆ ಬಂದ ಮಲೆಯರು, ಗೊಲ್ಲರು ಮೊದಲಾದವರ ಉದಾಹರಣಗಳಿಂದ ಸಹಜವಾಗಿ ಊಹಿಸಬಹುದಾಗಿದೆ.

ಕನ್ನಡರು (Kannadas)

ಈವರೆಗೆ ವಿವರಿಸಿದ ತಂಡಗಳ ಹೆಸರು ಮೊದಲು ಹೇಳಿ ಬಳಿಕ ಇವು ಕನ್ನಡಕ್ಕೆ ಸಂಬಂಧಿಸಿದವು ಎಂದು ಇನ್ನೊಂದು ವಾಕ್ಯದಲ್ಲಿ ಸೂಚಿಸಬೇಕಾಗುತ್ತಿತ್ತು. ಆದರೆ, ಈ ತಂಡದ ಹೆಸರೆ ಎಲ್ಲವನ್ನೂ ವ್ಯಕ್ತಗೊಳಿಸುತ್ತಿರುವುದರಿಂದ ಇಲ್ಲಿ ಎರಡು ಮಾತಿನ ಆವಶ್ಯಕತೆಯೆ ಇಲ್ಲ. ಹಳಬರು ವರ್‍ಹಾಟ ಮಧ್ಯಪ್ರಾಂತ ದವರಾದರೆ ಕನ್ನಡರು ಖಾನದೇಶ-ನಾಸಿಕಗಳ ನಿವಾಸಿಗಳು. ಕನ್ನಡರು ಇಲ್ಲಿ ಎಲ್ಲಿಂದ ಬರಬೇಕು? ಎಂಬ ಸಂಶಯದಿಂದ ಅಲ್ಲಿಯ ಗ್ಯಾಝಿಟೀಯರುಗಳ ಲೇಖಕರು ಇವರಿಗೆ ಹೊರಗಿನಿಂದ ಬಂದವರು (Immigrants) ಎನ್ನುತ್ತಾರೆ. ಆದರೆ, ಇದೇ ಬಗೆಯ 'ಕನ್ನಡ' ಜಾತಿಯ ಮೂಲ ನಿವಾಸಿಗಳೆಲ್ಲಿ ಅಲ್ಲಿಂದ ಇಲ್ಲಿಗೆ ಎಂದು ಮತ್ತು ಏಕೆ ಬಂದರು? ಈ ಸಂಗತಿಗಳ ವಿವೇಚನೆಯನ್ನೆ ಅಲ್ಲಿ ಮಾಡಿಲ್ಲ! ಈಗಿನ ಕರ್ಣಾಟದಲ್ಲಂತೂ ಈ ಹೆಸರಿನ ತಂಡಗಳಿಲ್ಲ. ಆದ್ದರಿಂದ, ಮೂಲಕರ್ಣಾಟದ ಜನಾಂಗಗಳಲ್ಲಿ ಕುರುಬ ಮತ್ತು ಮಲೆಯರಂತೆ ಹಲವು ತಂಡಗಳು ದಿಕ್ಕೆಟ್ಟು ಹೋದುವು. ಹಲವು ಮರ್‍ಹಾಟರಲ್ಲಿ ಐಕ್ಯವಾದುವು. ಇನ್ನು ಕೆಲವು ಹಳಬರೂ ಕನ್ನಡರಂತಹ ತಂಡದವರು ಎಂತೆಂತೊ ತಮ್ಮ ಜಾತಿನಾಮವನ್ನಷ್ಟು ಕಾಯ್ದುಕೊಂಡು ಅಲ್ಲಿ ಇನ್ನೂ ಉಳಿದಿರುವರೆಂದೆ ಹೇಳಬೇಕಾಗುತ್ತದೆ. ಮರ್‍ಹಾಟಿ ಬಾಯಿಗೆ, ಕನ್ನಡದಲ್ಲಿ ದ್ವಿತೀಯಾಕ್ಷರವು ದ್ವಿತ್ವವಾಗಿರುವ ಶಬ್ದಗಳನ್ನು ಸರಿಯಾಗಿ ಉಚ್ಚರಿಸಲಿಕ್ಕಾಗುವುದಿಲ್ಲ. ಕಕ್ಕ-ಕಾಕಾ; ಅಬ್ಬೆ (ಅವ್ವೆ)-ಆವಾ ಆಈ; (ಮರ) ಹಟ್ಟಿ-(ಮರ) ಹಾಟಿ ಇತ್ಯಾದಿಗಳೆ ಇದಕ್ಕೆ ಸಾಕ್ಷಿ. ಅದರಂತೆ ಕನ್ನಡವನ್ನು ಕಾನಡ-ಕಾನಡಿ ಎಂದು ಹೇಳುವರು. ಖಾನದೇಶ (ನಾಸೀಕ)ದಲ್ಲಿರುವ ಕಾನಡರು ಕನ್ನಡರೆಂಬುದು ನಿಸ್ಸಂಶಯ.

ಈ ಜನಾಂಗವನ್ನು ಕುರಿತು ಖಾನದೇಶ, ನಾಸೀಕ ಗ್ಯಾಝೀಟಿಯರುಗಳಲ್ಲಿ ಬಂದ ಅಲ್ಪವರ್ಣನೆಯಿಂದ ಸಹ ಕರ್ನಾಟಕ ಇತಿಹಾಸ, ಶಿಲಾಶಾಸನ ಪರಿಚಯವಿದ್ದವರಿಗೆ ಕ್ರಿ.ಶ. ೪-೬ನೆಯ ಶತಮಾನದ ನಮ್ಮ ನಾಡಿನ ಚಿತ್ರವು ಕಣ್ಣೆದುರಿಗೆ ಕಟ್ಟುತ್ತದೆ. ಕರ್ಣಾಟದಲ್ಲೆಲ್ಲ ಸಾಮಾನ್ಯವಾಗಿ ಹಳೆಯ ಊರೂರಿಗೂ ದೊರೆವ 'ತುರುಗಾಳಗದೊಳ್ ಸತ್ತು ಸಗ್ಗಮಂ ಏರಿದಾನ್' ಎಂದು ಸಚಿತ್ರವಾಗಿ ನಿಲ್ಲಿಸಿದ ವೀರಗಲ್ಲುಗಳೂ (ಆ ವೀರರ) ಮಹಾಸತಿಯರ ಸ್ಮಾರಕದ ಕಲ್ಲುಗಳೂ ಈ ಕನ್ನಡದ ವರ್ಣನೆಯೊಂದಿಗೆ ನೆನೆಪಿಗೆ ಬರುತ್ತವೆ. ಇಂದಿಗೂ ಖಾನದೇಶದ ಈ ಕನ್ನಡರ ಉಪಜೀವನದ ಮುಖ್ಯ ಸಾಧನವು ಆಕಳ ಹಿಂಡು! ತುರುಕರುಗಳೆ ಇವರ ಪಂಚಪ್ರಾಣ. ಈ ಜನರು ಉಳಿದ ಅಲೆದಾಡುವ ತಂಡಗಳಿಗಿಂತಲೂ ಸುಧಾರಿಸಿದವರೂ ಮಾನಮರ್ಯಾದೆಯುಳ್ಳವರೂ ಆಗಿರುವರೆಂದು ಗ್ಯಾಝಿಟಿಯರಿನ ಸಾಹೇಬರು ವರ್ಣಿಸಿದ್ದಾರೆ. 'ಕನ್ನಡ'ರು ಒಂದು ಕಾಲಕ್ಕೆ ಸಂಸ್ಕಾರವಂತಾಗಿದ್ದುದರ, ಸುಸ್ಥಿತಿಯಲ್ಲಿದ್ದುದರ ಕುರುಹಲ್ಲವೆ ಇದು? ಖಾನದೇಶದ ಗ್ಯಾಝೀಟಿಯರಿನಲ್ಲಿ ಇವರನ್ನು ಕುರಿತು ಬರೆದಿರುವದೇನೆಂದರೆ:

> 'Kanadas are a peculier race of drovers who some limes visit the western forests of Khandesh, though their proper pastures are in the north-west corner of Deccan. They appear to be decended from Dravidian immigrants but (to our misfortune-author) no tradition to the effect and special language. More civilized and respectable than most wandering herds-men they differ little from Maratha-husbandman, and in parts of Nasik they have taken entirely to agriculture. They have a peculier breed of black and white cattle. hatkar (ಹಟ್ಟಕಾರ) which though not large

are much prized for their strength and spirit. They worship Krishna, the divine herdsman and take good care of their cattle. (p. 106)

ಖಾನದೇಶದಲ್ಲಿ 'ಗೌಳಿ-ರಾಜರು' ಆಳಿದರೆಂದು ಊರೂರಿಗೂ ಪರಂಪರಾಗತವಾದ ಕಥೆಗಳುಂಟು! ಅವರು ಈ ತುರುಗಾಹಿಗಳು-ಗೋವಳರು ಆದ ಕನ್ನಡರೆ ಆಗಿರಲಿಕ್ಕಿಲ್ಲವೆಂದು ಹೇಗೆ ಹೇಳುವುದು? ಮರಾಠರು ಮಿಶ್ರದ್ರಾವಿಡ ರೆಂದು (ಇಲ್ಲಿ ದ್ರಾವಿಡ ಶಬ್ದಕ್ಕೆ ಕನ್ನಡವೆಂದೇ ಅರ್ಥವೆಂದು ಸಿದ್ಧವಾಗಿದೆ) ಶ್ರೀ ಜಾಧವರಾಯರೆ ಹೇಳಿದುದು ಹಿಂದೆ ಬಂದಿದೆ. ಗ್ಯಾಝಿಟೀಯರಿನ ಲೇಖಕ ಮಹಾಶಯರು ಕನ್ನಡರಿಗೂ ಮರಾಠರಿಗೂ ಬಹಳ ಹೋಲಿಕೆಯಿದೆ ಎನ್ನುತ್ತಾರೆ. ಆದುದರಿಂದ, ಗೋದಾವರಿ ಉತ್ತರ ತೀರದಲ್ಲಿ ಒಂದು ಕಾಲಕ್ಕೆ ಪ್ರಬಲರಾಗಿದ್ದ ಕನ್ನಡರ ಮಿಶ್ರಸಂತತಿಯವರೆ ಮರ್‍ಹಾಟಿಗಳು, ಎಂದು ಹೇಳಲು ಏನು ಆತಂಕ? ಮರ್‍ಹಾಟಿ ಭಾಷೆಯಲ್ಲಿ ಕನ್ನಡದ 'ತುಪ್ಪ' ಶಬ್ದವು ಹೇಗೆ ಸೇರಿತು ಎಂಬುದನ್ನು ವಿವೇಚಿಸುವಾಗ ಶ್ರೀ ಚಿಂತಾಮಣಿರಾವ ವೈದ್ಯರು ಒಂದೆಡೆಗೆ ಬರೆದಿರುವುದು ವಿಚಾರಣೀಯವಾಗಿದೆ. ವರ್‍ಹಾಟದ ಕಡೆಗೆ ಕನ್ನಡ ಗವಳಿಗಳು ಬರುತ್ತಿದ್ದರು. ಅವರಿಂದ ಈ ಶಬ್ದವು ಬಂದಿತು ಎಂದು ಅವರೂ ಒಪ್ಪುತ್ತಾರೆ. ಶ್ರೀ ವೈದ್ಯರಂತಹರು ಸಹ ವರ್‍ಹಾಟದ ಕಡೆಗೆ ಕನ್ನಡಗವಳಿಗಳು ಇದ್ದರೆಂಬುದನ್ನು ಅಲ್ಲಗಳೆಯಲಾರರು.

ನರ್ಮದಾ ತೀರದಲ್ಲಿ ಇದ್ದ ಕನ್ನಡಗವಳಿಗಳ ವರ್ಚಸ್ಸು ಅಷ್ಟು ಇಷ್ಟಲ್ಲ. ಗುಜರಾತ, ಮಾಳವಗಳಲ್ಲಿ ಹಬ್ಬಿ ಉತ್ತರಕ್ಕೆ ಈ ತಂಡಗಳು ಗಂಗಾ-ಯಮುನಾ ತೀರದಲ್ಲಿಯೂ ನೆಲಸಿದ್ದುವೆಂದು ವಿಮರ್ಶಿಸಿ ನೋಡಿದ ಹಾಗೆ ಹೆಚ್ಚುಹೆಚ್ಚು ಮನವರಿಕೆಯಾಗುತ್ತಿದೆ. ಹಾಲಿನ ಪದಾರ್ಥಗಳನ್ನು ಮಾಡಿ ಮಾರುವ ವರ್ತಕನಿಗೆ ಉತ್ತರ ಹಿಂದುಸ್ಥಾನ-ಖಾನದೇಶ ವರ್‍ಹಾಟಗಳಲ್ಲೆಲ್ಲ ಹಾಲಯ್ಯ (ಹಾಲುವಾಯಿ) ಎಂಬ ಹೆಸರಿದೆ! ಕನ್ನಡ ಗೌಳಿಗಳ ಒಂದು ಕಾಲದ ಕೀರ್ತಿಧ್ವಜದಂತೆ ಇರುವುದು ಗವಳಿಏರಿ-ಗ್ವಾಲೇರಿ ಇಂದಿಗೂ ಅದು ತನ್ನ ಹಳೆಯ ಕಥೆಯನ್ನು, ಕೇಳಬೇಕೆಂದಿಚ್ಛೆಯಿದ್ದವರಿಗೆ, ಹೇಳಲು ಸಿದ್ಧವಿದೆ. ಮರ್‍ಹಾಟರು 'ಗವಳಿಗಿರಿ'-ಗ್ವಾಲೇರಿ ಎಂದು ಅದರ ವ್ಯುತ್ಪತ್ತಿಯನ್ನು ಹೇಳುವರು. ಆದರೆ, ಗುಡ್ಡಕ್ಕೆ 'ಏರಿ' ಎಂದು ಒಂದು ಕಾಲಕ್ಕೆ ಕನ್ನಡದಲ್ಲಿ ಅರ್ಥವಿದ್ದುದು ಮಹಾರಾಷ್ಟ್ರದಲ್ಲಿರುವ ಕಾನ್ಹೇರಿ-ಕೃಷ್ಣಗಿರಿ; ಅಂಜನೇರಿ (ನಾಸಿಕದ ಹತ್ತರ); ಶಿವನೇರಿ (ಇಲ್ಲಿ ಶಿವನ + ಏರಿದ್ದನಂದಿರುವುದರಿಂದ ಕನ್ನಡ ಷಷ್ಠೀ ವಿಭಕ್ತಿಯ ಕೈಯೊಳಗಿಂದ ಯಾರಿಗೂ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ.) ಇವುಗಳಲ್ಲೆಲ್ಲ ಗೋಚರವಾಗುವ ಕನ್ನಡ 'ಏರಿ'ಯೆ ಗ್ವಾಲೇರಿಯಲ್ಲಿಯೂ ಉಂಟೆಂದು ಹೇಳುವುದು ತಪ್ಪಾದೀತೆ? ಉತ್ತರಕ್ಕೆ ಮಥುರೆಯ ವರೆಗೆ ಪ್ರಖ್ಯಾತರಾದ ಕನ್ನಡ ಗವಳಿಗಳ ಮೂಲಸ್ಥಾನವು ಖಾನದೇಶ ನಾಸಿಕಗಳಿಂದ ಹೊರಗೆ ದೂರ ಎಲ್ಲಿಯೂ ಇರಲಾರದು. ಗಂಗಾ ಯಮುನೆಗಳ ವರೆಗೆ ತಮ್ಮ ವರ್ಚಸ್ಸನ್ನು ಇಟ್ಟುಕೊಳ್ಳಬೇಕಾದರೆ ಅವರ ಮೂಲಸ್ಥಾನವು ನೀಲಗಿರಿ ಅಥವಾ ಅದರ ನೆರೆಹೊರೆಯ ಅಷ್ಟು ದೂರದ ಯಾವ ಸೀಮೆಯಲ್ಲಿಯೂ ಇರುವುದು ಅಶಕ್ಯ. ಈ ತರ್ಕಪ್ರಮಾಣಕ್ಕಿಂತಲೂ ನಾಸಿಕದ ಹತ್ತಿರ ಇರುವ ಪ್ರಖ್ಯಾತ 'ಗೋವರ್ಧನ ಗಿರಿಗಳು' ಇದನ್ನು ಇನ್ನಿಷ್ಟು ಪುಷ್ಟೀಕರಿಸುತ್ತವೆ. ೧೫೦೦-೧೮೦೦ ವರುಷಗಳ ಹಿಂದೆ ಈ ಗೋವರ್ಧನ ಗಿರಿಗಳಿಗೆ ಇದ್ದ ಮಹತ್ವವು ಅಲ್ಲಿರುವ ಸಾತವಾಹನರ ಕಾಲದ ಗವಿಗಳಿಂದಲೂ ಶಿಲಾಶಾಸನಗಳಿಂದಲೂ ಪ್ರತ್ಯಕ್ಷ ಆ ಪರ್ವತದ 'ಗೋವಧನ-ಗೋವರ್ಧನ' ಎಂಬ ಹೆಸರಿನಿಂದಲೂ ಚೆನ್ನಾಗಿ ವ್ಯಕ್ತವಾಗುತ್ತದೆ. ಈ ಗವಿಗಳಲ್ಲಿ ಕೊರೆದಿರುವ ಚಿತ್ರಗಳಲ್ಲಿ ಆವು, ಎತ್ತುಗಳಿಲ್ಲದ ಸ್ಥಳಗಳೆ ಇಲ್ಲವೆನ್ನಬಹುದು. ಹಿಂದಕ್ಕೆ ಈ ಗುಡ್ಡಗಳು ಕನ್ನಡ ಗೌಳಿಗಳ 'ಗವಾಸ್ಪದಗಳು'-ತುರುಮಂದೆಗಳು ಆಗಿದ್ದುವೆಂದು ಸಹಜವಾಗಿ ಹೇಳಬಹುದು. ಇದೇ ವಿಭಾಗದಲ್ಲಿರುವ ಇಗತಪುರಿ, ದಿಂಡೋರಿ ಮೊದಲಾದ ತಾಲೂಕುಗಳಲ್ಲಿ, ತುಂಬಾ ಕನ್ನಡರು ಹಳ್ಳಿಹಳ್ಳಿಗೂ ನೆಲಸಿದ್ದಾರೆ; ಸುಸ್ಥಿತಿಯಲ್ಲಿಯೂ ಇರುವರಂತೆ. ಇಂದಿಗೂ ಮೂರು-ನಾಲ್ಕು ಮನೆಯ ಕನ್ನಡರು ಕೂಡಿ ಐದೈದನೂರು ಆಕಳು ಎತ್ತುಗಳನ್ನೂ ಐದೈದನೂರು ಆಡುಕುರಿಗಳನ್ನೂ ಸಾಕಿಕೊಂಡಿರುವರು' ಎಂದು ನಾಸಿಕ ಗ್ಯಾಝಿಟಿಯರು ಹೇಳುತ್ತಿದೆ.[೩೪]

"The Cattle breeding tribes the Kanadas......who formed a fair proportion of the people......mainly depended on their herds and

flock.....the Kanadas were remarkbly well off. Some canada hamlets with not more than three or four houses had as many as 500 cattle and 500 goats

ಕನ್ನಡದಲ್ಲಿರುವ ಗೋವುಗಳು ಎಂಬರ್ಥದ 'ತುರು' ಶಬ್ದವು ಸಮೂಹಾರ್ಥಕ. ಆಕಳು, ಬಹುವಚನಾಂತವಿದ್ದರೂ ಏಕವಚನದಂತೆ ಉಪಯೋಗಿಸಲ್ಪಡುವುದು. ಇವೆರಡೂ ಶಬ್ದಗಳು ಸಹ ಕನ್ನಡರು ಒಂದು ಅವು ಎಂದೂ ಸಾಕುತ್ತಿದ್ದಿಲ್ಲ. ಇವರಲ್ಲಿರುವುದು ತುರು (ಹಿಂಡು)ಗಳು ಆಕಳು; ಎಂದು ಈ ಶಬ್ದಗಳು ಸಹ ತಮ್ಮ ಪ್ರಾಚೀನ ಕಥೆಯನ್ನು ಹೇಳುತ್ತಲಿವೆ. ಗೌತಮಿನದಿ (ಗೋದಾವರಿಯ ಇನ್ನೊಂದು ಹೆಸರು) ಗೋವರ್ಧನ ಪರ್ವತ ಹತ್ತರದಲ್ಲಿ; 'ಕನ್ನಡರು' ಎಂದು ಈಗಲೂ ದೇಶವಾಚಕ ಹೆಸರನ್ನು ಧರಿಸಿರುವ ಗೌಳಿಗಳು ಅದರ ನೆರೆಹೊರೆಯಲ್ಲಿ! ಅಲ್ಲದೆ, ಈ ನಾಡಿಗೆ ಗೋಪರಾಷ್ಟ್ರವೆಂದೂ ಹೆಸರಿದ್ದಿತಂತೆ! ಇದೆಲ್ಲವು ಕಾಕತಾಳನ್ಯಾಯವೆ? ಈ ನಾಲ್ಕು ಮಾತುಗಳನ್ನು ಒಮ್ಮೆಲೆ ಸಮಾಲೋಚಿಸಿದರೆ 'ಇದುವೇ ಕನ್ನಡ ನಾಡು' 'ಇದೆ ಇಕೊ ಕನ್ನಡತಾಯ ತವರ್ಮನೆ' ಎಂದು ಹಿಗ್ಗು ಹಿಡಿಸಲಾರದೆ ಉದ್ಘೋಷಿಸುವ ಹುಮ್ಮಸು ಉಂಟಾದರೆ ಸೋಜಿಗವೇನು? ನಮ್ಮಲ್ಲಿರುವಂತೆ 'ತರುವಂ ಕೊಂಡುಯ್ಯೆ ಬಿರುಮಗಾವುಂಡಂ ಹಗೆಯಂತೆ ತೆರಳ್ಚಿ ಸಗ್ಗಮಾನ್ ಏರಿದೋನ್' ಎಂದು ಕನ್ನಡ ಗೋವಳರ ಧೈರ್ಯ ಶೌರ್ಯಗಳನ್ನು ಯುಗಯುಗಕ್ಕೂ ಸಾರಿ ಹೇಳುವುದಕ್ಕೆ (ಕಿವಿಯಿದ್ದು ಕೇಳುವವರಿಗೆ, ಕಣ್ಣಿದ್ದು ನೋಡುವ ಇಚ್ಛೆಯಿದ್ದವರಿಗೆ ಮಾತ್ರ) ಚಳಿಮಳೆಗಳನ್ನು ಲೆಕ್ಕಿಸದೆ ನಿಂತಿರುವ ವೀರಗಲ್ಲುಗಳಿಗೆ ಈ ನಾಡಿಲ್ಲಿಯೂ ಕೊರತೆಯಿಲ್ಲ. ಆದರೆ, ಮರ್ಹಾಟಿಗಳಿಗೆ ಅದರ ಬೆಲೆ ಗೊತ್ತಿಲ್ಲದ್ದರಿಂದ ಮೂಲೆಗುಂಪಾಗುತ್ತ ನಡೆದಿವೆ. ಹೀಗಿದ್ದರೂ ಪರಂಪರಾಗತವಾದ ವೀರಪೂಜೆಯ ಸಾಂಪ್ರದಾಯದ ಮೂಲಕ ಆ ನಾಡಿನ ಅಜ್ಞಾನಿಗಳಲ್ಲಿ ಅವಕ್ಕೆ ಇನ್ನೂ ಅಲ್ಪಸ್ವಲ್ಪ ಮಹತ್ವವು ಇಲ್ಲದಿಲ್ಲ.

ನಾಸಿಕ ಜಿಲ್ಹೆಯ ಶಿವರಗ್ರಾಮದ ಹತ್ತರ ಇವುಗಳನ್ನು ಯಾರೂ ದುರ್ಲಕ್ಷಿಸದಷ್ಟು ವಿಶೇಷವಾಗಿಯಂತೆ[೩೫] 'Shivar has a remarkable group of memorial stones' ಇದರ ಮುಂದೆ ಅದೇ ಸಾಹೇಬರು ಬರೆದಿರುವ ಈ ಕಲ್ಲುಗಳ ವರ್ಣನೆಯು ಓದತಕ್ಕುದಾಗಿದೆ. ಆ ಸಾಹೇಬರಿಗೆ ಇದು 'ಕನ್ನಡನಾಡು' ಎಂದು ಗೊತ್ತಿಲ್ಲದ್ದರಿಂದ ಆ ವೀರಗಲ್ಲುಗಳ ಉಪಯೋಗವನ್ನು ಅವರು ಆ ಸ್ಥಳದ ಪೂರ್ವೇತಿಹಾಸವನ್ನು ಇನ್ನಿಷ್ಟು ಅರಿತುಕೊಳ್ಳಲಿಕ್ಕೆ ಮಾಡಿಕೊಂಡಿಲ್ಲ. ಅವಕ್ಕೆ 'ವೀರಗಲ್ಲು' ಎಂದು ಎಲ್ಲಿಯೂ ಹೇಳದಿದ್ದರೂ ಅವು 'ವೀರಗಲ್ಲು'ಗಳೆ ಎಂಬ ಬಗ್ಗೆ ಆ ವರ್ಣನೆಯಿಂದ ಸಂದೇಹವೇ ಉಳಿಯುವುದಿಲ್ಲ.

'Memorial stones are found all over the district and are specially numerous near the Sahyadris.'

ಈ ಕಲ್ಲುಗಳು ಈ ನಾಡಿನಲ್ಲೆಲ್ಲ ದೊರೆಯುತ್ತಿದ್ದು ಸಹ್ಯಾದ್ರಿಯ ಹತ್ತಿರದಲ್ಲಿ ವಿಶೇಷವಾಗಿವೆ ಎಂದು ಸಾಹೇಬರು ಹೇಳಿದ್ದು ಸರಿಯಿದೆ. ಏಕೆಂದರೆ ಗೋವಳ (ಕನ್ನಡ) ರು ವಾಸವಾಗಿರುವುದು ಹುಲ್ಲು ಮೇವು ಹೆಚ್ಚಾಗಿರುವಲ್ಲಿ ಅಲ್ಲವೇ? 'ಗೋವುಗಳಂ ಕದ್ದೊಯ್ಯಲು ಬಂದ' ಅಧಮರನ್ನು ಎದುರಿಸುವುದರಲ್ಲಿ ಮಡಿದ ವೀರರ ಕಲ್ಲುಗಳ ಸಂಖ್ಯೆಯು ಸಹ್ಯದ ಸಮೀಪದಲ್ಲಿ ಹೆಚ್ಚಿರುವುದು ಸ್ವಾಭಾವಿಕವಾಗಿದೆ. "One group of unusually large stones occur at Choueale!" ಕನ್ನಡದ ಅಭಿಮಾನಿಗಳು ಚೌಸಾಲೆಗೆ ಹೋಗಿ ಈಗ ಅವು ಉಳಿದಿದ್ದರೆ ಕಣ್ಣಾರೆ ಕಂಡು ಮನವನ್ನು ತಣಿಸಿಕೊಳ್ಳಬಹುದು. ಏಕೆಂದರೆ ಗ್ಯಾಝಿಟಿಯರು ಬರೆದುದು ೧೮೮೩ರಲ್ಲಿ. ಅವನ್ನು ಸುಸ್ಥಿತಿಯಲ್ಲಿ ಕಾಯುವವರಾರು? ಮರಾಟ ಇತಿಹಾಸ ಮಂಡಳದವರು ಅವಕ್ಕೆ ಸಾಕಷ್ಟು ಗಮನ ಕೊಟ್ಟಿಲ್ಲ. ಏಕೆಂದರೆ ಅವು ಮರಾಟ ಇತಿಹಾಸದ ಸಾಧನಗಳಲ್ಲ. ಅಲ್ಲದೆ, ಅವುಗಳ ಬೆನ್ನು ಹತ್ತಿ ಹುಡುಕುತ್ತ ಹೋದರೆ, ಬಾವಿ ತೋಡ ಹೋಗಿ ಬೇತಾಳ ಹೊರಟಂತೆ. ಅವರು ನಿಜ ಮಹಾರಾಷ್ಟ್ರವೆಂದು ಹೇಳುವ ದೇಶವೂ ಕರ್ನಾಟವಾಗಿತ್ತು, ಎಂದು ಬೆಳಕಿಗೆ ಬಂದು ಅವರ ಮೈಮೇಲೆ ಬರುವ ಆಟ!

The faces are carved with rude figures, some times of one or more men on horse back, some times armed with swords..... Some times rude inscriptions are carved under figures.

ಚಿತ್ರಗಳ ಬುಡದಲ್ಲಿ ಬರಹಗಳೂ ಹಲವೆಡೆಗೆ ಉಂಟಂತೆ! ಆದರೆ, ಅವು ಯಾವ ಭಾಷೆಯಲ್ಲಿ ಎಂಬ ಬಗ್ಗೆ ಮಾತ್ರ ಸಾಹೇಬರು ಮೂಕರು. ಹಾಗೆ ನೋಡಿದರೆ ಸಾಹೇಬರು ಹೇಳುವ ಆವಶ್ಯಕತೆಯೇ ಇಲ್ಲ. ಸೂರ್ಯನಿಗೆ ಸೂರ್ಯನೆಂದು ಹೇಳುವ ಆವಶ್ಯಕತೆಯೇನು? ವೀರಗಲ್ಲುಗಳು ಮರ್ಹಾಟಿಗಳಿಗೆ ಗೊತ್ತೇ ಇಲ್ಲ. ಮರ್ಹಾಟಿಯಲ್ಲಿ ಈ ಬಗೆಯ ವೀರಗಲ್ಲುಗಳು ಒಂದೂ ಈವರೆಗೆ ದೊರೆತಿಲ್ಲ. ಆದ್ದರಿಂದ ಅವು ಕನ್ನಡ ವೀರರ ಕಲ್ಲುಗಳೇ ಎಂಬುದು ಅಂಗೈನೆಲ್ಲಿ. ಇವು ವೀರಗಲ್ಲುಗಳೆಂದು ಅಲ್ಲಿಯ ಜನರೇ ಹೇಳುವರಂತೆ.

The people say that they were raised by villagers, the custom seems to have prevailed among all the cultivating-classes especially among Kunbis, Kolis and Vanjaris

ಇದನ್ನು ಮುಖ್ಯವಾಗಿ ಪೂಜಿಸುವವರು 'ಕುಣಬಿ' (ಕುರುಂಬರ?) 'ಕೋಳಿ' (ಕೋಲ, ಕೋತ?), ವಂಜಾರಿಗಳು (?). ಪೂಜಿಸುವವರಲ್ಲಿ ಮರಾಠಿಗಳು ಹೆಚ್ಚಾಗಿಲ್ಲ. ಆದ್ದರಿಂದ 'ಕುಣಬಿ, ಕೋಳಿ, ವಂಜಾರಿಗಳು' ಕನ್ನಡರ ಹತ್ತುಗೆಯವರು ಪ್ರತ್ಯಕ್ಷ ಕನ್ನಡರು ಎಂದು ಹೇಳಲು ಏನು ಬಾಧಕವು? ಈ ಕಲ್ಲುಗಳೊಂದಿಗೆ ಕಲ್ಲು ಕಂಬಗಳನ್ನು (post) ಹಲವೆಡೆಗಳಲ್ಲಿ ನಿಲಿಸಿದ್ದುಂಟಂತೆ. ಇವು ಮಾಸತಿಯ ಕಲ್ಲುಗಳಾಗಿರಬಹುದು. In no case stones or posts been found which are said to mark an old battle field

ಪ್ರಾಚೀನ ಕಾಲದಲ್ಲಿ ಆದ ಯುದ್ಧಗಳಲ್ಲಿ ಮಡಿದವರ ಸಂಬಂಧವಿಲ್ಲದ ವೀರಗಲ್ಲುಗಳಾಗಲಿ ಮಾಸತಿ ಕಂಬಗಳಾಗಲಿ ಇಲ್ಲವೇ ಇಲ್ಲ. ಎತ್ತು ರೊಚ್ಚಿಗೆದ್ದರೆ ನೇರವಾಗಿ ರಭಸದಿಂದ ಬಂದು ಇರಿಯುವುದೊಂದೆ ಅದಕ್ಕೆ ಗೊತ್ತು. ಆ ಇರಿತದಲ್ಲಿ ವಿರೋಧಿಯ ತಂತ್ರದ ಮೂಲಕ ತನ್ನ ಜೀವಕ್ಕೆ ಎರವಾಗಬೇಕಾದೀತೆಂಬ ಅರಿವೂ, ಸಹ ಅದಕ್ಕೆ ಇರುವದಿಲ್ಲ. ಇದೇ ಬಗೆಯ ಸರಳಸ್ವಭಾವದ, ಕವಡು ಅರಿಯದ ರಜಪೂತರು ಮುಸಲ್ಮಾನರ ಮಾಟ ಮೋಸಗಳನ್ನು ಅರಿಯದೆ ಆತ್ಮಘಾತವನ್ನು ಮಾಡಿಕೊಂಡರು. ಅದರಂತೆ ಎತ್ತುಗಳೇ ದೇವರಾದ ಕನ್ನಡರೂ ಕೂಡ ಎದುರಾಳಿಗಳ ಕವಡು ಗಂಟಕತನವನ್ನು ತಿಳಿದುಕೊಳ್ಳದೆ ಹೇಗೆ ಹಾಳಾದರೆಂಬುದನ್ನೇ ಈ ಕಲ್ಲುಗಳು ಸಾರುತ್ತಲಿವೆ. ಇನ್ನೊಂದು ಬಗೆಯಿಂದ, ನರ್ಮದಾ ಗೋದಾವರಿ ನಡುವಿನ ಪ್ರಾಚೀನ ಕರ್ನಾಟದ ಸ್ಮಾರಕ ಸ್ತಂಭಗಳಿವು ಎಂದು ಹೇಳಿದರೂ ತಪ್ಪಿಲ್ಲ. ತುರುಕಾರರಿಗೆ, ಗೋವಳರಿಗೆ ದೊಡ್ಡ ಹೆದರಿಕೆ ಹುಲಿಯಿಂದ. ಈ ಜನಗಳಿಗೆ ಹುಲಿರಾಯನಲ್ಲಿ ಭಯಮೂಲಕ ಭಕ್ತಿಭಾವವು ಎಂದೆಂದಿಗೂ ಇದ್ದುದೇ. ನಾಸಿಕ ಖಾನದೇಶದ ನಾಡಿನಲ್ಲಿ 'ವಾಘದೇವ' - ವ್ಯಾಘ್ರದೇವನ ಮಹಾತ್ಮ್ಯವು ಬಹಳ. ಈ ವ್ಯಾಘ್ರದೇವನು ವಗ್ಗಯ್ಯನಾಗಿ ಮಲ್ಹಾರಿ ದೇವನ ಅನುಯಾಯಿಯಾಗಿ, ಮಲ್ಹಾರಿ ಮಾರ್ತಾಂಡ, ಕಂಡೆರಾಯನ ಕುಲದೈವತವಿದ್ದವರಿಗೆಲ್ಲ ಚಿರಪರಿಚಿತ ನಾಗಿದ್ದಾನೆ. ಕನ್ನಡ ಜಿಲ್ಲೆಯಲ್ಲಿ ಹಳಪೈಕರು ಮೊದಲಾದವರಲ್ಲಿ ಹುಲಿದೇವರ ಆರಾಧನೆ ಇನ್ನೂ ಇದೆಯಂತೆ. ಕನ್ನಡ ಗೌಳಿಗಳ ಯುಗದಲ್ಲಿ ಪ್ರತಿಷ್ಠೆಯನ್ನು ಹೊಂದಿದ್ದ ಹುಲಿಯಯ್ಯನ ಆರಾಧನೆಯು, ಆ ಯುಗವು ಲುಪ್ತವಾದ ಬಳಿಕ ಸಹ ಅಲ್ಲಿ ಇಲ್ಲಿ ಹೀಗೆ ಇನ್ನೂ ಕಾಣಿಸಿಕೊಳ್ಳುತ್ತಿದೆ!

ಇನ್ನೂ ಕೆಲವು

ಗೋದಾವರಿಯ ಮೇಗಡೆಯ ನಾಡಿನಲ್ಲಿರುವ ಕುರುಬರು, ಮಲೆಯರು, ಹೊಲೆಯರು, ಹಳಬರು, ಕನ್ನಡರು (ಗೋವಳರು) ಇವಿಷ್ಟೆ ಅವಶಿಷ್ಟ ಜನಾಂಗಗಳಲ್ಲ. ಸ್ವಲ್ಪ ಆಳವಾಗಿ ನೋಡಿದರೆ ಕನ್ನಡಕ್ಕೆ ಹತ್ತಿರದವರೆನಿಸುವ ಇನ್ನೂ ಹಲವು ಜಾತಿಬಣಗಳು ಅಲ್ಲಿ ನೆಲೆಯಾಗಿವೆ.

ಬಿಲ್ಲವರು ಇವರಲ್ಲಿ ಪ್ರಮುಖರು; ಖಾನದೇಶ ಗುಜರಾತಗಳಲ್ಲಿ ಲಕ್ಷಾವಧಿ ಜನಗಳಿದ್ದಾರೆ. ಭಿಲ್ಲರೆಂದು ಅಲ್ಲಿ ಹೆಸರು. ಆದರೆ, ಇದು 'ಬಿಲ್ಲು' ಶಬ್ದದಿಂದ ಆದ 'ಬಿಲ್ಲವ' ಎಂಬುದರ ಸಂಸ್ಕೃತೀಕರಣವೆಂದು ಸಾಮಾನ್ಯವಾಗಿ ಎಲ್ಲರೂ ಒಪ್ಪುವರು. ಮದ್ದುಗುಂಡುಗಳು ಹುಟ್ಟುವ ಮೊದಲು ದಂಡಿನಲ್ಲಿ ಬಿಲ್ಲಾಳುಗಳಿಗಿದ್ದ ಮಹತ್ವವು ಅಷ್ಟಿಷ್ಟಲ್ಲ. ಬಿಲ್ಲವರ ಎದೆಗಾರಿಕೆಯು ಬ್ರಿಟಿಶ ದಳಪತಿಗಳನ್ನು ಬೆರಗುಗೊಳಿಸಿದೆ. ರಜಪೂತರಿಗೆ ಮುಸಲ್ಮಾನರು ಮೊಗಲರುಗಳ ವಿರುದ್ಧ ಹೋರಾಡುವುದರಲ್ಲಿ ತುಂಬಾ ನೆರವಾದವರು ಈ ಬಿಲ್ಲವರೇ. ರಜಪೂತರ ಶೌರ್ಯ ಪರಾಕ್ರಮಗಳ ಅಜರಾಮರ ಕೀರ್ತಿಗೆ ಈ ಬಿಲ್ಲವರ ಪಡೆಯೆ ಮೂಲಾಧಾರವು. 'ಗಂಗಾವಾರಿಧಿಯೊಳ್ ತುರಂಗಮಂ ಮೀಯಿಸಿದ' ಚಳುಕ್ಯ ರಾಷ್ಟ್ರಕೂಟಭೂಪತಿಗಳ 'ಕರ್ಣಾಟಬಲ'ದಲ್ಲಿ ಬಿಲ್ಲವರಿಗೆ ಪ್ರಾಧಾನ ವಿರಬೇಕೆಂದು ತೋರುತ್ತದೆ. ಆದರೆ, ತೋಫು ತುಬಾಕಿಗಳ ಅವತಾರವಾದ ಬಳಿಕ ಬಿಲ್ಲವರ ಕಾಲವಾಯಿತು. ಬಿಲ್ಲವರು ತಮ್ಮ ಹೊಟ್ಟೆಯ ಪಾಡಿಗಾಗಿ ನೆರೆಹೊರೆಯ ಜನಗಳಿಗೆ ಕಾಡಿಸುವ, ಪೀಡಿಸುವ ಹೋರೆಗೆ ಆರಂಭಿಸಿದ್ದರೆ. ಅದರಲ್ಲಿ ಅಸ್ವಾಭಾವಿಕವೇನೂ ಇಲ್ಲ. ಇವರ ಜಾತಿಯು ಜನಗಳಿಗೆ 'ಬೇಡ' ಆಯ್ತು. ಬೇಡ ಪಡೆಯು ತೋರಿದ ಧೈರ್ಯಶೌರ್ಯಗಳನ್ನು ಅರಿತುಕೊಳ್ಳಲಿಚ್ಛಿಸುವವರು 'ಸುರಪುರದ ನಾಯಕನ' ಚರಿತ್ರೆಯನ್ನು ಓದಬೇಕು. ಚಿತ್ರದುರ್ಗದ ಪಾಳೆಯಗಾರರ ಇತಿಹಾಸವನ್ನು ನೋಡಬಹುದು.

ಹಳಬರಂತೆ ಬಿಲ್ಲವರೂ ಕನ್ನಡ ಜಿಲ್ಹೆಗಳಿಗೆ ಬಂದು ನೆಲೆಯಾಗಿದ್ದಾರೆ. ದಕ್ಷಿಣ ಕನ್ನಡದಲ್ಲಿ 'ಬಿಲ್ಲವರು' ಎಂಬ ಹೆಸರಿನ ಸಮಾಜವೇ ಇದೆ. ಪಾಪ! ಇವರ ಕೈಗೆ ಬಿಲ್ಲು ಬಾಣಗಳ ಸ್ಥಳದಲ್ಲಿ ಹೆಂಡದ (ಸರಾಯಿ) ಕೊಡಗಳು ಬಂದಿವೆ! ವಿಪರೀತಕಾಲ! ಖಾನದೇಶದಲ್ಲಿ ಡಾಂಗ (ಗುಡ್ಡ) ನಾಡು, ಮೇವಾಸಿ ಎಂಬ ಎರಡು ಬಿಲ್ಲವರ ಸಂಸ್ಥಾನಗಳಿವೆ. ಕೋಳ (ಕೋತ?) ಜಾತಿಯ ಮನೆತನದವರು ಇತ್ತಕಡೆಗೆ ಇರುವ ಜವ್ಹಾರ ಎಂಬಲ್ಲಿ ಅರಸುಗೈಯುತ್ತಿರುವರು.

ಕುಣಬಿಯು ಕನ್ನಡ ಕುರುಂಬನ ಮರ್‍ಹಾಟಿ ಅವತಾರ. ಕುರಿಗಾರಿಯನ್ನು ಬಿಟ್ಟು ಕುಳನಾಗಿ ಒಕ್ಕಲನಾಗಿ ನಿಂತು ಹೊಲಮನೆ ಮಾಡಿಕೊಂಡಿರ ಹತ್ತಿದ ಮೇಲೆ ಕುರುಂಬನು ಮಹಾರಾಷ್ಟ್ರದಲ್ಲಿ ಕುಣಬಿಯಾದನು! ಕುಣಬಿ ಮಾಜಲಮರ್‍ಹಾಟಾ ಚಾಹಲಾ-ಕುಣಬಿಯು ಮಲೆತು ಮರ್‍ಹಾಟನಾದ ಎಂಬ ಗಾದೆಯು, ಇವರು ಮರ್‍ಹಾಟರಿಂದ ಭಿನ್ನರೆಂಬುದನ್ನು ಸೂಚಿಸುತ್ತದೆ. ಮರ್‍ಹಾಟರು ಇವರೊಡನೆ ಊಟ ಉಡಿಗೆಯನ್ನಂತೂ ಸರಿಯೆ. ಮದುವೆಗಳನ್ನು ಮಾಡಿಕೊಳ್ಳುವರು. ಮರ್‍ಹಾಟರು ಆರ್ಯದ್ರಾವಿಡರು-ಮಿಶ್ರದ್ರಾವಿಡರು- ಎಂದು ಆ ಜಾತಿಯವರೂ ವಿದ್ವಾಂಸರು ಸಂಶೋಧಕರೂ ಆದ ಶ್ರೀ ಭಾಸ್ಕರರಾವ ಜಾಧವ ಇವರೆ ಹೇಳುತ್ತಾರೆ.[೩೬] ಮದುವೆ ಕಾಲಕ್ಕೆ ಗಿಡಮರಗಳಿಂದ ಬಣಗಳನ್ನು (Aotem) ಹೇಳುವ - (ಕುರಿಗಾರರೆ ಮೊದಲಾದವರ ಹಾಗೆ)- ಮರ್‍ಹಾಟರಲ್ಲಿಯೂ ನಡತೆಯಿದೆಯೆಂದು ಜಾಧವರಾಯರು ಹೇಳುತ್ತಾರೆ. ಇದು ದ್ರಾವಿಡರಿಂದ ತಮ್ಮಲ್ಲಿ ಸೇರಿದ ನಡತೆಯೆಂದು ಅವರ ಅಭಿಪ್ರಾಯ. ಮರ್‍ಹಾಟರು ತಮ್ಮ ವರ್ಗದ ಹೊರತು ಹೊರಗಿನವರೊಡನೆ ಈಗಲೂ ಮದುವೆ ಮಾಡಿಕೊಳ್ಳುತ್ತಿರುವ ಸಂಪ್ರದಾಯವುಳ್ಳ ಜಾತಿಗಳು ಎರಡು. ಕುಣಬಿ ಮತ್ತು ಧನಗರರು. ಆದುದರಿಂದ ಮರ್‍ಹಾಟರು ದ್ರಾವಿಡರೊಡನೆ ಮಿಶ್ರರಾದರು ಎಂದು ಶ್ರೀ ಜಾಧವರಾಯರು ಕಂಡುಹಿಡಿದಿರುವ ಆ ದ್ರಾವಿಡವರ್ಗದವರು; ಕನ್ನಡ ಕುಣಬಿ ಮತ್ತು ಧನಗರರೆ ಇರಬೇಕೆಂದು ಊಹಿಸಲು ಶ್ರಮಪಡಬೇಕಾದುದಿಲ್ಲ.

ಧನಗರನೆಂಬುದು ಕನ್ನಡ ಕುರುಬನ ಮರ್‍ಹಾಟಿ ಹೆಸರು. ಕುರಿಗಾರಿಕೆಯನ್ನು ಬಿಟ್ಟು ದನಕರಗಳನ್ನು ಸಾಕಿಕೊಂಡಿರ ಲಾರಂಭಿಸಿದ ಮೇಲೆ ಆ ಕುರುಬನು 'ತುರುಕಾರ'ನಾದನು; (ಗೋಧನವುಳ್ಳ) 'ಧನಕರ'ನಾದನು. ಕನ್ನಡರಿಗೆ ದನಗಳೇ ಧನ.[೩೭] ನಮ್ಮ ಕುರುಬನೆ ಧನಗಾರನೆಂಬುದಕ್ಕೆ ಮರ್‍ಹಾಟಿ ಭಾಷೆಯೂ ಸಾಕ್ಷಿ. 'ಧನಗರ' ಶಬ್ದಕ್ಕೆ ಮರ್‍ಹಾಟಿಯಲ್ಲಿ ಕುರುಬನೆಂದೇ ಅರ್ಥವಿದೆ! ಮರ್‍ಹಾಟಿಗಳು ತಮ್ಮ ಹೆಣ್ಣು ಕೊಟ್ಟು ಕೊಂಡು 'ಕುಣಬಿ'ಗಳನ್ನೂ 'ಧನಗರ'ರನ್ನೂ ತಮ್ಮಲ್ಲಿ ಬೆರಿಸಿಕೊಂಡು ಬಿಟ್ಟರು. ಇವರಲ್ಲಿಯೂ ಕೆಲವು ಸಂಪ್ರದಾಯವಂತರು ಮರ್‍ಹಾಟಗಳೊಡನೆ ಸಮರಸವಾಗದೆ ಇದ್ದುದರಿಂದ 'ಮರ್‍ಹಾಟಾ ಕುಣಬಿ,' 'ಮರ್‍ಹಾಟಾ ಧನಗರ'ರೆಂದು ಹೇಳುವ ಆವಶ್ಯಕತೆಯುಂಟಾಗಿದೆ.

ಕೇಶಿರಾಜನು (೧೩ನೆಯ ಶತಕ) ಶಬ್ದ-ಮಣಿ-ದರ್ಪಣದಲ್ಲಿ (ಕನ್ನಡ ನಾಡಿನ) ಉದ್ಯೋಗದಿಂದ ಬಂದ ಹೆಸರುಗಳ ರೂಪಿಸಿದ್ಧಿಯನ್ನು ಹೇಳುವಾಗ ಗಂದಿಗಂ, ತಂಬುಲಿಗಂ ಎಂಬ ಎರಡು ಶಬ್ದಗಳನ್ನು ಇಗ ಪ್ರತ್ಯಯಾಂತಗಳಿಗೆ ಉದಾಹರಿಸಿದ್ದಾನೆ. ಈ ತಂಬುಲಿಗರು ಖಾನದೇಶ ಮೊದಲಾದ ಕಡೆಗೆ ಇರುವ ತಾಂಬೋಳಿಗಳು. ಇವರ ಉದ್ಯೋಗ ವೀಳ್ಯದ ಎಲೆಗಳನ್ನು ಮಾರುವುದು. ಮಧುರಕವಿಯು ತನ್ನ ಕಾವ್ಯವು 'ಗೋರವನ ಡುಂಡುಚಿಯೆ?' ಎಂದು ಪರಿಹಾರ ಮಾಡಿದ ಗೊರವನು ಮಹಾರಾಷ್ಟ್ರದಲ್ಲಿ ಗುರುವ. ಕೊಮ್ಮಟಿಗನು. ಕೋಮಟಿ! ಯಾವ ಮರ್‍ಹಾಟಿ ವ್ಯಾಕರಣವೂ ಕೊಮ್ಮಟಿಗ ಶಬ್ದದ ರೂಪಸಿದ್ಧಿಯನ್ನು ಹೇಳಲಾರದೆ 'ನೇತಿ, ನೇತಿ' ಎನ್ನುತ್ತಲಿದೆ.

ಮರಹಟ್ಟ ನಾಡು ಮತ್ತು ನುಡಿ

ನಾಡಿನಿಂದ ನುಡಿಗೆ ಹೆಸರು; ಇದು ಸಾಮಾನ್ಯ ನಿಯಮ. ಜರ್ಮನಿಯ ಭಾಷೆ ಜರ್ಮನ್, ಸಿಂಧೂದೇಶದ ಭಾಷೆ ಸಿಂಧಿ; ಈ ನಿಯಮಕ್ಕೆ, ಕೆಲವು ಅಪವಾದಗಳೂ ಉಂಟು. ಆದರು ಇದು ೧೦೦ಕ್ಕೆ ೯೫ ಪ್ರಸಂಗಗಳಲ್ಲಿ ಸರಿ ಹೋಗುವ ಸಾಮಾನ್ಯ ನಿಯಮ. ಆದುದರಿಂದ ಭಾಷೆಯ ಹೆಸರಿನಿಂದ ಆ ಭಾಷೆಯು ಆವ ನಾಡಿನಲ್ಲಿ ಮೊದಲು ಇರಬಹುದು ಎಂಬುದನ್ನು ಅರಿತುಕೊಳ್ಳಲಿಕ್ಕೂ ಅಡ್ಡಿಯಿಲ್ಲ. ಮರ್‍ಹಾಟಿಯು ಮೊಟ್ಟಮೊದಲು ಹುಟ್ಟಿದ್ದು ವರ್‍ಹಾಟದಲ್ಲಿ, ಎಂಬ ಬಗ್ಗೆ ಮತಬೇಧವಿಲ್ಲ. ಆದರೆ, ವರ್‍ಹಾಟವೆಂಬ ಆ ನಾಡಿನ ಹೆಸರು ಸರಿಯಾದುದೆ? ಎಂಬುದು ಮಾತ್ರ ವಿವಾದಾಸ್ಪದವಾಗಿದೆ. ಮರ್‍ಹಾಟಿ ಭಾಷೆಯು ಮರ್‍ಹಾಟಿ ನಾಡಿನದು, ಎಂಬುದು ಸ್ಪಷ್ಟ. ಮರ್‍ಹಾಟಿ ಶಬ್ದವು ಈಗ 'ಮರಾಠಿ' ಎಂದು ಬರೆಯಲ್ಪಡುತ್ತಿದೆ. ಆದರೆ ಶ್ರೀ ಜ್ಞಾನೇಶ್ವರಾದಿ ಆದಿಕವಿಗಳು ಅದನ್ನು 'ಮರಾಠಿ' ಎಂದು ಬರೆಯುವುದಿಲ್ಲ. ಅವರು ಬರೆದಿರುವುದು ಮರ್‍ಹಾಠಿ ಎಂದು. ಇದನ್ನೆ 'ಮರ್‍ಹಟ್ಟಿ' ಎಂದು ಕೆಲವರು ಹೇಳುವರು. ಕರ್‍ಹಾಟದಂತೆ ಮರ್‍ಹಾಟವು ಒಂದು ನಾಡಿನ ಹೆಸರೆಂದು ಅವುಗಳ ಹೋಲಿಕೆಯಿಂದಲೆ ಹೇಳಬಹುದು. 'ಮಹಾರಾಷ್ಟ್ರ' ಶಬ್ದದಿಂದ ಮರಾಠಿ ಆಯ್ತು, ಎಂದು ಕೆಲವರು ತರ್ಕ. ಆದರೆ, ಅದು ನಿರಾಧಾರವಾದ ಮಾತು. ಏಕೆಂದರೆ, ಆ ಊಹೆಗೆ ಭಾಷಾಶಾಸ್ತ್ರದ ಬೆಂಬಲವಿಲ್ಲ; ಮರ್‍ಹಾಟಿ ಭಾಷೆಯ ಇತಿಹಾಸದ ಆಧಾರವೂ ಇಲ್ಲ. ರಾಜಕೀಯ ಘಟನೆಗಳ ಐತಿಹ್ಯವೂ ಅದನ್ನು ಪುಷ್ಟೀಕರಿಸುವದಿಲ್ಲ.

'ಮಹಾರಾಷ್ಟ್ರ'ದಿಂದ ಮರ್‍ಹಾಟಿಯಾಗಿದ್ದರೆ ಜ್ಞಾನೇಶ್ವರಾದಿಗಳ ಪ್ರಾಚೀನ ಲೇಖನಗಳಲ್ಲಿ ಮಹ್ರಾಟಿ ಅಥವಾ ಮಹಾರಠಿ ಈ ಬಗೆಗೆ ಒಂದಿಲ್ಲೊಂದು ರೂಪವು ಕಾಣಿಸಿಕೊಳ್ಳಬೇಕಾಗಿತ್ತು. ಆದರೆ, ಪ್ರಾಚೀನ ಉಲ್ಲೇಖಗಳಲ್ಲಿ ಈ ಭಾಷೆಯ ಹೆಸರನ್ನು ಹೀಗೆ ಯಾರೂ ಬರೆದಿಲ್ಲ. ಆದುದರಿಂದ ಮರ್‍ಹಾಟಿ ಇದರ ಕೊನೆಯ ಅಲ್ಪಪ್ರಾಣಾಕ್ಷರವು ಮಹಾಪ್ರಾಣವಾಗಿ ಉಚ್ಚರಿಸುವ ರೂಢಿಯು ಆರಂಭವಾದ ಬಳಿಕ ರಕಾರಕ್ಕಿದ್ದ ಹಕಾರವು ಕೊನೆಯ ಟಕಾರದಲ್ಲಿ ಸೇರಿ 'ಮರಾಠಿ' ಎಂಬ ರೂಪವು ಬಳಕೆಯಲ್ಲಿ ಬಂದಿರಬೇಕು. ಮರ್‍ಹಾಟಿ ಭಾಷೆಯು ಮಹಾರಾಷ್ಟ್ರ ಪ್ರಾಕೃತಕ್ಕಿಂತಲೂ ಮೊದಲಿನ ಭಾಷೆಯಾಗಿರಬೇಕು. ಮಹಾರಾಷ್ಟ್ರೀ ಪ್ರಾಕೃತವು ವರ್‍ಹಾಟದಲ್ಲಿಯೇ ಮೊದಲು ಇದ್ದಿಲ್ಲ. "ಮಹಾರಾಷ್ಟ್ರೀ ಪ್ರಾಕೃತವು ಅಶೋಕ ಸಾಮ್ರಾಟನ ಕಾಲದಲ್ಲಿ (ವರ್‍ಹಾಟನಾಡಿಗಿಂತ) ಬಹಳ ಉತ್ತರದಲ್ಲಿದ್ದಿತು" ಎಂದು ಟರ್ನರನ ಅಭಿಪ್ರಾಯ.[೩೮] ಅಲ್ಲದೆ, ಮಹಾರಾಷ್ಟ್ರಿ ಪ್ರಾಕೃತಕ್ಕೂ ಮರ್‍ಹಾಟಿಗೂ ಜನ್ಯಜನಕ ಭಾವವು ಇಲ್ಲವೇ ಇಲ್ಲ. ಮಹಾರಾಷ್ಟ್ರೀ ಪ್ರಾಕೃತದಿಂದ ಮರ್‍ಹಾಟ ಭಾಷೆಯು ಹುಟ್ಟಿತೆಂದು ಹೇಳುವುದು ಶುದ್ಧ ದುರಭಿಮಾನ; ಅಥವಾ ಆ ಭಾಷೆಗಳ ಪರಸ್ಪರ ಸಂಬಂಧದ ತೀರ ಅಜ್ಞಾನ. 'ಮಹಾರಾಷ್ಟ್ರ' ವೆಂಬ ಹೆಸರಿಗೆ ಹೇಗಾದರೂ ಸಂಬಂಧ ವನ್ನು ಹಚ್ಚಿಕೊಂಡು ತಮ್ಮ ಮಹಾತ್ಮ್ಯವನ್ನು ಸ್ವಲ್ಪ ಹೆಚ್ಚಿಸಿಕೊಳ್ಳಬೇಕೆಂಬ ಚಪಲವೆ ಇದಕ್ಕೆಲ್ಲ ಮುಖ್ಯವಾದ ಮೂಲಕಾರಣ. 'ಮಹಾರಾಷ್ಟ್ರಿ ಪ್ರಾಕೃತವು' ಎಂಬುದು ಒಂದು ವಿಶಿಷ್ಟ ದೇಶದ ಭಾಷೆಯಲ್ಲವೆಂದೂ ಬೇರೆ ಬೇರೆ ಪ್ರಾಕೃತಗಳ ಸಮ್ಮಿಶ್ರಣದಿಂದಾದ ಒಳ್ಳೆಯ ಭಾಷೆಯಾಗಿದ್ದಿತೆಂದೂ ಬಲ್ಲವರು ಹೇಳುತ್ತಾರೆ.

ಪ್ರೊ. ಕುಲಕರ್ಣಿಯವರು ಇದನ್ನು ಕುರಿತು ಬರೆಯುವುದೇನೆಂದರೆ: (ಮಹಾರಾಷ್ಟ್ರಿಯಿಂದ ಮರಾಠಿ ಹುಟ್ಟಿತೆಂದು ಹೇಳುವುದು ನಿರಾಧಾರ.)

> ಎರಡೂ ಭಾಷೆಗಳ ರಚನೆ (ಘಟನೆ)ಯನ್ನು ನೋಡಿದರೆ ಈ ಮಾತಿನ ಮನವರಿಕೆಯಾಗುವುದು. ಈಗ ಮಹಾರಾಷ್ಟ್ರವೆಂದು ಹೇಳುವ ದೇಶದ ಭಾಷೆಯು ಪ್ರಾಚೀನ ಕಾಲದಲ್ಲಿ ಮಹಾರಾಷ್ಟ್ರಿಯಾಗಿರಲಾರದು. ಜನಾಂಗದ ಮೇಲಿಂದ ಅಥವಾ ದೇಶದ ಮೇಲಿಂದ ಭಾಷೆಗೆ ಹೆಸರು ಬರುವುದು. ಆದರೆ, ಮಹಾರಾಷ್ಟ್ರಿಯು ಈ ನಿಯಮಕ್ಕೆ ಬಾಹಿರವಾಗಿದೆ... ಮಹಾರಾಷ್ಟ್ರವೆಂದರೆ ದೊಡ್ಡ ರಾಷ್ಟ್ರವೆಂದಿಷ್ಟೇ ಅರ್ಥ; ಗ್ರಾಂಥಿಕ ಭಾಷೆ, ಮಧ್ಯವರ್ತಿಯಾದ (Standard) ಭಾಷೆಯೆ ಮಹಾರಾಷ್ಟ್ರಿಯೆಂದು ಹೇಳುತ್ತಿರಬೇಕು.[೩೯]

ಪ್ರೊ. ಕುಲಕರ್ಣಿಯವರ ವಿವೇಚನೆಯಲ್ಲಿ ಎರಡು ಮಾತುಗಳು ಸ್ಪಷ್ಟವಾಗುವವು. (೧) ಮಹಾರಾಷ್ಟ್ರಿ ಪ್ರಾಕೃತದಿಂದ ಮರಾಠಿ ಹುಟ್ಟಿತೆಂಬುದು ಸುಳ್ಳು. (೨) 'ಮಹಾರಾಷ್ಟ್ರ'ದ ಅರ್ಥವು 'ವಿಸ್ತೃತವಾದ ದೇಶ'ವೆಂದು ಮಾತ್ರ. ಈ ದೇಶಕ್ಕಾಗಲಿ, ಭಾಷೆಗಾಗಲಿ ಜನಾಂಗದಿಂದ ಈ ಹೆಸರು ಬಂದುದಲ್ಲ. ಹೀಗೆ ಹೇಳುವ ಪ್ರೊ. ಕುಲಕರ್ಣಿಯವರು ಮರಾಠಿ ಭಾಷೆಯ ಅಭಿಮಾನಿಗಳೂ ಸಂಶೋಧಕರೂ ಆಗಿರುವದರಿಂದ 'ಮರಾಠಿಯ ಮೇಲಿನ ಸಿಟ್ಟಿನಿಂದ ಹೀಗೆ ವಿಪರೀತವಾಗಿ ಬರೆದಿರುವರು' ಎಂಬ ಆರೋಪಕ್ಕೆ, ಆಕ್ಷೇಪಣೆಗೆ ಅವಕಾಶವೆ ಇಲ್ಲ.

'ಮರ್ಹಾಟಿಯು ಮಹಾರಾಷ್ಟ್ರಿಗೆ ಕೆಲವು ಮಾತುಗಳಲ್ಲಿ ಋಣಿಯಾಗಿರುವುದಂತೂ ನಿಜ. ಆದರೆ, ಮಹಾರಾಷ್ಟ್ರಿಗೂ ಮರ್ಹಾಟಿಗೂ ತಾಯಿ. ಮಕ್ಕಳ ಸಂಬಂಧವಿಲ್ಲ'ವೆಂದು ಪ್ರೊ. ಕುಲಕರ್ಣಿಯವರು ತಮ್ಮ ಗ್ರಂಥದಲ್ಲಿ ಸಪ್ರಮಾಣವಾಗಿ ಸಿದ್ಧಪಡಿಸಿದ್ದಾರೆ. ಅವರ ಅಭಿಪ್ರಾಯದಂತೆ:

> "ಮರ್ಹಾಟಿಯು ಇಂತಹ ಒಂದೇ ಪ್ರಾಕೃತ ಭಾಷೆಯಿಂದ ಹುಟ್ಟಿಲ್ಲ; ಎಲ್ಲ ಪ್ರಾಕೃತಗಳು, ಅಪಭ್ರಂಶ, ಮತ್ತು ಸಂಸ್ಕೃತ ಇವೆಲ್ಲ ಭಾಷೆಗಳೂ ಮರಾಠಿಯ ಜನ್ಮಕ್ಕೆ ಸಹಾಯಕವಾಗಿವೆ. ಇವೆಲ್ಲವುಗಳ ಸಮ್ಮಿಶ್ರಣದಿಂದ ಮರ್ಹಾಟಿಯಾಗಿದೆ.[೪೦]

ಪ್ರೊ. ಕುಲಕರ್ಣಿಯವರಿಗೆ ಕನ್ನಡವು ಚೆನ್ನಾಗಿ ಬರುತ್ತಿದ್ದರೆ ಈ ಭಾಷೆಯ ಪರಿಣಾಮವು ಮರ್ಹಾಟಿಯ ಮೇಲೆ ಎಷ್ಟೆಷ್ಟು ಆಗಿದೆಯೆಂಬುದನ್ನು ಶ್ರೀ ರಾನಡೆ, ಡಾ. ಸ್ಟೆನ್ ಕ್ಕೋ ಪ್ರಭೃತಿಗಳು ದ್ರವಿಡಭಾಷೆಯ ಮೂಲಾಧಾರದ ಮೇಲೆ ಮರ್ಹಾಟಿಯು ವಿಸ್ತಾರ ಹೊಂದಿತೆಂದು ಹೇಳುತ್ತಾರೆ. ಇಲ್ಲಿ ದ್ರವಿಡ ಶಬ್ದಕ್ಕೆ ಕನ್ನಡವೆಂದಲ್ಲದೆ ಬೇರೆ ಅರ್ಥವೆ ಸಂಭವಿಸುವದಿಲ್ಲವೆಂದು ಹಿಂದೆ 'ಆಂಧ್ರ ದ್ರವಿಡ' ವಿವೇಚನೆಯಲ್ಲಿ ವಿವರಿಸಿದ್ದಾಗಿದೆ. ಶ್ರೀಯುತ ವಿಠ್ಠಲ ರಾಮಜಿ ಸಿಂಧೆಯೆಂಬ ಸತ್ಯಾನ್ವೇಷಿಗಳಾದ ಸದ್ಗೃಹಸ್ಥರು ಮಾತ್ರ ಈ ವಿಚಾರದಲ್ಲಿ ಉಳಿದ ಮರ್ಹಾಟಿ ಗೃಹಸ್ಥರಿಗಿಂತ ನಿಃಸಂದಿಗ್ಧವಾದ ಶಬ್ದಗಳಿಂದ ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಅವರು ಎನ್ನುವುದೇನೆಂದರೆ "ಮರ್ಹಾಟಿಯು ಬೆಳೆದು ದೊಡ್ಡದಾದುದು ಕನ್ನಡ ಗರುಡಿಯಲ್ಲಿ ಅಥವಾ (ಹೀಗೆ ಹೇಳಿದರೆ ಹೆಚ್ಚು ಸಮರ್ಪಕವು:) ಮರ್ಹಾಟಿಯು ಕನ್ನಡ ಅತ್ತೆಯ ಕಾಟದಲ್ಲಿಯೆ ಬೆಳೆದುದರಿಂದ ಮರ್ಹಾಟಿಯ ಮೇಲಾದ ಆ ಭಾಷೆಯ ಪರಿಣಾಮಗಳು ಇಷ್ಟೇ ಎಂದು ಹೇಳುವುದು ಕಷ್ಟ."[೪೧]

ಮರ್ಹಾಟಿಯು ಕನ್ನಡಕ್ಕೆ ಭಾಷೆ, ಛಂದಸ್ಸು, ವ್ಯಾಕರಣ, ನಾಣ್ನುಡಿ, ಧರ್ಮ, ಆಚಾರ ಮೊದಲಾದ ಸಂಗತಿಗಳಲ್ಲಿ ಎಷ್ಟು ಉಪಕೃತವಾಗಿದೆಯೆಂಬುದನ್ನು ಕುರಿತು ಸ್ವತಂತ್ರವಾಗಿಯೇ ಬರೆಯಬೇಕಾಗಿರುವುದರಿಂದ ಇಲ್ಲಿ ಆ ವಿಷಯವು ಅಪ್ರಸ್ತುತ. ಅಲ್ಲದೆ, ಶ್ರೀ ರಾಜಪುರೋಹಿತರು ಜ್ಞಾನೇಶ್ವರಿಯಲ್ಲಿ ಬಂದ ಕನ್ನಡ ಶಬ್ದಗಳನ್ನು ಕುರಿತು ಈಗ ಎಷ್ಟೋ ವರುಷಗಳ ಹಿಂದೆಯೆ ಪುಣೆಯ ಕೇಸರೀ ಪತ್ರಿಕೆಯಲ್ಲಿ ಬಹಳ ಮಹತ್ವದ ಲೇಖನಗಳನ್ನು ಪ್ರಕಟಿಸಿರುವರು. ಅದು ಸ್ವತಂತ್ರ ಪುಸ್ತಕ ರೂಪದಿಂದ ಹೊರಬಿದ್ದರೆ ಚೆನ್ನಾಗುವುದು. ಪ್ರೊ. ಜಹಾಗೀರದಾರರು

ಮರ್ಹಾಟ ಜ್ಞಾನೇಶ್ವರಿಯ ಮೇಲೆ ಇರುವ ಹಳೇ ಕನ್ನಡದ ವರ್ಚಸ್ಸನ್ನು ಕುರಿತು ಇಂಗ್ಲೀಷಿನಲ್ಲಿ ಒಂದು ಒಳ್ಳೆಯ ಪ್ರಬಂಧವನ್ನು ಬರೆದಿದ್ದು ಅದು ವಿದ್ವಾಂಸರಿಗೆ ಮಾನ್ಯವಾಗಿದೆ. ಪುಣೆಯ ಭಾಂಡಾರಕರ-ಸಂಶೋಧನ-ಸಂಸ್ಥೆಯ ಪತ್ರಿಕೆಯಲ್ಲಿ ಪ್ರಸಿದ್ಧಿಯನ್ನೂ ಪಡೆದಿದೆ (೧೯೩೦ ಸೆಪ್ಟಂಬರ ಸಂಚಿಕೆ)

ಅಂತೂ ಮರ್ಹಾಟಿಯು ಬೆಳೆದುದು ಕನ್ನಡ ತಾಯ-ಅಲ್ಲ. ಅತ್ತೆಯ ತೊಡೆಯ ಮೇಲೆ, ಎಂದೇ ಶ್ರೀ ರಾನಡೆ, ಸ್ಟೆನ್ ಕ್ನೋ, ಸಿಂಧೇ ಪ್ರಭೃತಿಗಳ ಅಭಿಪ್ರಾಯಗಳಿಂದ ಸಿದ್ಧವಾಗುವಂತಿದೆ. ಶ್ರೀ ಸಿಂಧೆಯವರು ಕನ್ನಡಕ್ಕೆ 'ಅತ್ತೆ' ಎಂದು ಹೋಲಿಸಿದುದರಲ್ಲಿ ಅವರು ಎಣಿಸಿದುದಕ್ಕಿಂತಲೂ ಆಳವಾದ ಅರ್ಥವಿದೆ. ಕನ್ನಡವು ನರ್ಮದಾತೀರದ ತನ್ನ ಮನೆಗೆ ಎರವಾಗಿ ವನವಾಸಕ್ಕೆ ಹೇಗೆ ಬಂದು ಬಿದ್ದಿತೆಂದು ಶ್ರೀ ಸಿಂಧೆಯವರ 'ಅತ್ತೆ'ಯ ಉಪಮೆಯಿಂದ ಚೆನ್ನಾಗಿ ವ್ಯಕ್ತವಾಗುವುದು. ಮರ್ಹಾಟ ಸೊಸೆಯು ಪ್ರಾಯಕ್ಕೆ ಬಂದ ಹಾಗೆ ಮಕ್ಕಳು ಕನ್ನಡತಾಯನ್ನು ಮರೆತರು; ಬರಿ ಮರೆಯಲಿಲ್ಲ, ತೊತ್ತಿನಂತೆ ಎಣಿಸಿದರು; ಮನೆ ಬಿಟ್ಟು ಹೊರಕ್ಕೆ ತಳ್ಳಿದರು. ಅದರ ಪರಿಣಾಮವೇ ಕನ್ನಡವು ಕ್ರಮ ಕ್ರಮವಾಗಿ ಒಂದೊಂದೇ ನದಿಗಳನ್ನು ದಾಟುತ್ತ ನರ್ಮದೆಯಿಂದ ಗೋದಾವರಿ, ಭೀಮಾ ಈಗ ಕೃಷ್ಣೆಗೆ ಬಂದು ನಿಂತಿದೆ. ಅಲ್ಲಿಂದಲೂ ಮಕ್ಕಳು ತನ್ನನ್ನು ಎಂದು ತಳ್ಳಿ ಬಿಡುವರೊ ಎಂದು ಹೊತ್ತು ಕಾಯುತ್ತ ಕುಳಿತಿದೆ. ಶ್ರೀ ಸಿಂಧೆಯವರ ಮಾತು ನಿಜವಾಗಿಯೂ ತುಂಬಾ ಹುರುಳುಳ್ಳುದು! ಇವೆಲ್ಲ ಸಂಗತಿಗಳನ್ನು ನೋಡಿದರೆ ಈ ಮಹಾರಾಷ್ಟ್ರಿಗೂ ಮರ್ಹಾಟಿಗೂ ಕೆಲವರು ಗ್ರಹಿಸಿರುವಂತೆ ಜನ್ಯಜನಕ ಸಂಬಂಧವಿಲ್ಲವೆಂಬುದು ನಿಶ್ಚಿತ. ಆದಕಾರಣ 'ಮರಾಠಿ' ಎಂಬುದು ಇತ್ತೀಚಿನ ರೂಪ. ಜ್ಞಾನೇಶ್ವರಿ ಮೊದಲಾದ ಪ್ರಾಚೀನ ಗ್ರಂಥಗಳಲ್ಲಿ ಗೋಚರವಾಗುವ 'ಮರ್ಹಾಟಿ' ಇದೇ ಸರಿಯಾದುದು.

ಇದನ್ನು ಇನ್ನೂ ಒಂದು ರೀತಿಯಿಂದಲೂ ಮನಗಾಣಿಸಿಕೊಡಬಹುದು. ಮರ್ಹಾಟಿಯು ಮೊಟ್ಟಮೊದಲು ಅವತರಿಸಿದ್ದ ನಾಡು ವರ್ಹಾಟ. ವರ್ಹಾಟವು ಮರ್ಹಾಟಿ ಶಬ್ದದ ಸಂಸ್ಕೃತ ರೂಪವೆಂದು ಶಬ್ದ ಸಾದೃಶ್ಯದಿಂದಲೇ ಹೇಳಬಹುದು. ವರ್ಹಾಟರ ಭಾಷೆ ವರ್ಹಾಟ ಇರಬೇಕಾಗಿತ್ತು. ಆದರೆ, ಅದರ ಹೆಸರು ಮಾತ್ರ ಮರ್ಹಾಟಿ! ಆದಕಾರಣ ಭಾಷೆಯ ಹೆಸರಿನ ಮೇಲಿಂದಲೆ ಆ ದೇಶದ ಹೆಸರನ್ನೂ ನಿಶ್ಚಯಿಸುವುದಾದರೆ ವರ್ಹಾಟ ಶಬ್ದವು ಮೊದಲು ಮರ್ಹಾಟವೆಂದು ಇರುವುದೆ ಹೆಚ್ಚು ಸ್ವಾಭಾವಿಕವಾಗಿದೆ. ವರ್ಹಾಟ ಶಬ್ದವು ಹೇಗೆ ಹುಟ್ಟಿತೆಂಬ ಬಗ್ಗೆ ಮಹಾರಾಷ್ಟ್ರ ಪಂಡಿತರುಗಳಲ್ಲೆಲ್ಲ ತುಂಬಾ ಮತಭೇದವಿದ್ದುದೂ ವಿಚಾರಣೀಯವಾಗಿದೆ. ಸರ್ವಸಮ್ಮತವಾದ ಅಥವಾ ಬಹುಜನ ಸಮ್ಮತವಾದ ಒಂದೂ ವ್ಯುತ್ಪತ್ತಿಯು ಈ ವರೆಗೆ ಹೊರಗೆ ಬಂದಿಲ್ಲ! ಪ್ರೊ. ಕುಲಕರ್ಣಿಯವರು ತಮ್ಮ ಗ್ರಂಥದಲ್ಲಿ ಸಂಗ್ರಹಿಸಿದ ಬೇರೆ ಬೇರೆ ಅಭಿಪ್ರಾಯಗಳನ್ನೆ ಇಲ್ಲಿ ಕನ್ನಡಿಸಿ ಕೊಟ್ಟುಬಿಡುವುದು ಒಳಿತು.[೪೨] ವಿದರ್ಭನೆಂಬ ರಾಜನಿಂದ ಆತನ ಹೆಸರೇ ಆ ನಾಡಿಗೂ ಬಂದಿತೆಂಬದು ಕೆಲರು; ಆದರೆ ವಿದರ್ಭವು ಹೋಗಿ ವರ್ಹಾಟವಾಯಿತೆಂದು ಗ್ರಹಿಸುವುದೆ ಕಷ್ಟ. ಆದಕಾರಣ ಇನ್ನೂ ಕೆಲವು ವ್ಯುತ್ಪತ್ತಿಗಳ ವಿಚಾರ ಮಾಡುವುದು ಅವಶ್ಯ. ವರ್ಧಾತಟ, ವರ್ಹಾಟವೆಂದು ಐನೆ ಅಕಬರಿಯಲ್ಲಿ ಅಬುಲ್ ಫಜಲನು ಹೇಳುವನು. ವಾಚಸ್ಪತ್ಯವೆಂಬ ಗ್ರಂಥದಲ್ಲಿ "ವಿಗತಾಃ ದರ್ಭಾಃ ಕುಶಾಃ ಯತಃ" ಎಂದು ವಿಗ್ರಹಿಸಿದ್ದಾನೆ. ಶ್ರೀ ರಾಜವಾಡೆ ವಿಶ್ವನಾಥ ಪಂತರು ವಧಾ+ಆಹಾರ ಎನ್ನುವರು. ವಿರಾಟ (ಅಂದರೆ ವಿಸ್ತೃತದೇಶ)ದಿಂದ ವರ್ಹಾಟ ಎಂದೂ ಅರಬರು, ಆದರೆ, ಇವುಗಳಲ್ಲಿ ವಧಾ+ತಟ ಅಥವಾ ವರ್ಧಾ+ಆಹಾರ ಇವೆರಡು ಹೆಚ್ಚು ಸಮಂಜಸವಾಗಿವೆ.

ಪ್ರೊ. ಕುಲಕರ್ಣಿಯವರು ಇಂತು ಎರಡು ವ್ಯುತ್ಪತ್ತಿಗಳಿಗೆ ಸಮ್ಮತಿಯನ್ನಿತ್ತುದು ಈ ವಿಚಾರದಲ್ಲಿ ಅಲ್ಲಿಯ ಪಂಡಿತರೊಳಗೆ ಇನ್ನೂ ಮತೈಕ್ಯವಿಲ್ಲವೆಂಬುದನ್ನೇ ಸೂಚಿಸುತ್ತದೆ. ವರ್ಧಾನದಿಯು ಆ ನಾಡಿನ ಒಂದು ಉಪನದಿ. ಉಪನದಿಯಿದ್ದರೂ ತುಂಗಭದ್ರೆಯಂತೆ ದೊಡ್ಡದು ಸಹ ಅಲ್ಲ. ಅಲ್ಲದೆ, ಆ ನಾಡಿನ ನಟ್ಟ ನಡುವೆ ಹರಿದುದು ಆ ನಾಡಿನ ಕೃಷಿಗೆ ತುಂಬಾ ಸಹಾಯಕವಾದುದೂ ಅಲ್ಲ. ವರದಾ-ವರ್ಧಾ ಎಂಬುದು ಒಂದು ಸಣ್ಣ ಹೊಳೆ. ನರ್ಮದಾ, ತಾಪಿ, ಗೋದಾವರಿ, ಕೃಷ್ಣಾ, ಕಾವೇರಿ, ತುಂಗಭದ್ರಾ ಮೊದಲಾದ ಮಹಾ ಮಹಾ ನದಿಗಳು. 'ಗಂಗೇ ಚ ಗೋದೇ ಚೈವ' ಎಂದು ಮೊದಲಾದ ನಿತ್ಯಸಂಕಲ್ಪದಲ್ಲಿ ಬರುವ ಪಭುಣ್ಯತಮ ನದಿಗಳಿದ್ದು ಆ

ನದಿಗಳಿಂದಲೆ ನಾಡಿಗೂ ಹೆಸರು ಬಂದ ಉದಾಹರಣೆಗಳು ತೀರ ಕಡಿಮೆ. ಆದಕಾರಣ ವರ್ಧಾನದಿಯಿಂದ ವರ್ಹಾಟವಾಗಿರಲಾರದು. ಇದಕ್ಕೂ ಸಮರ್ಪಕವಾಗಿ ಸಹಜ ಮನೋಹರವಾಗಿ ಬೇರೆ ರೀತಿಯಿಂದ ಈ ಶಬ್ದದ ಹುಟ್ಟನ್ನು ಅರಿತುಕೊಳ್ಳಲಿಕ್ಕೆ ಬರುವಂತಿದ್ದರೆ ಹೀಗೆ ಬಾದರಾಯಣ ಸಂಬಂಧವೇತಕ್ಕೆ?

ವರ್ಹಾಟ, ಕರ್ಹಾಟ ಇವುಗಳೊಳಗಿನ ಕೊನೆಯ ಹಾಟ ಶಬ್ದವು ಸ್ಥಳ, ಸ್ಥಾನ, ಪ್ರದೇಶವೆಂಬರ್ಥದ 'ಹಟ್ಟಿ' ಶಬ್ದದ ಇನ್ನೊಂದು, ರೂಪದು, ಮರ್ಹಾಟಿಗಳು ದ್ವಿತ್ವಾಕ್ಷರದ ಹಿಂದಿನ ಹ್ರಸ್ವಸ್ವರವನ್ನು ದೀರ್ಘ ಮಾಡಿಕೊಂಡು ದ್ವಿತ್ವವನ್ನು ಲೋಪಮಾಡಿ ಕನ್ನಡ ಶಬ್ದಗಳನ್ನು ಉಚ್ಚರಿಸುವುದುಂಟು. ಕಕ್ಕಿಕಾಕೂ; ಬೆಟ್ಟ-ಬೇಟೆ; ಹೀಗೆಯೆ ಹಟ್ಟಿ-ಹಬಾಟಿ. ಕರೆಹಟ್ಟಿ (ಕರೆಯನಾಡು- ಅಲ್ಲಿಯ ಗುಡ್ಡ ಸಮನೆಲವೆಲ್ಲ ಕಡೆಗೂ ಕರಿಯ ಮಣ್ಣೇ ಮಣ್ಣು) ಕರ್ಹಾಟ; ಅದರಂತೆ ಮರಹಟ್ಟಿ ಅಂದರೆ ವಿಸ್ತೃತವಾದ ದೇಶ. 'ವಿರಾಟ್' ದಿಂದ ವರ್ಹಾಟವೆಂದು ಉಪಪತ್ತಿಯನ್ನು ಕೆಲರು ಹೇಳುವರಂತೆ. ಅದರಲ್ಲಿ ಸತ್ಯಾಂಶವಿದೆ. ಮರಶಬ್ದಕ್ಕೆ ದೊಡ್ಡ ಎಂಬ ಅರ್ಥವನ್ನು ಕನ್ನಡ ಅಚ್ಚಕೆಚ್ಚಿನ Idioms ಮಾತುಗಳಲ್ಲಿ ಈಗಲೂ ಕಾಣಬಹುದು. 'ಮರಮಳೆ', ಮರಕಿವಿ, ಮರಗೈ ಎಂಬಲ್ಲಿ ಮರಶಬ್ದಕ್ಕೆ ದೊಡ್ಡ ಎಂದಲ್ಲದೆ ಬೇರೆ ಅರ್ಥವೆ ಆಗಲಾರದು. ಗಿಡ ಅಂದರೆ ಗಿಡ್ಡ; ಗಿಡವಲ್ಲದ್ದು ಮರ, ಅಂದರೆ ದೊಡ್ಡದು. ಕನ್ನಡ ಜನಗಳು ಪೂಜಿಸುವ ದೇವತೆಯಲ್ಲಿ (ದುರ್ಗವ್ವ) ಮರಗವ್ವ-ಎಂಬವಳು ಒಬ್ಬಳುಂಟು. 'ಮರಗವ್ವ' ಎಂದರೆ ಬರಿ ಮರ (ಗಿಡ)ದ ಪೂಜೆ ಮಾಡುವುದೆಂದು ಕೆಲರ ಗ್ರಹಿಕೆ. ಆದರೆ, ಮರಗವ್ವ ಎಂದರೆ ದೊಡ್ಡವ್ವ ಮಹಾದೇವಿ ಎಂದೇ ಮೂಲಾರ್ಥವಿತ್ತು. ಈ ಅರ್ಥವು ಜನಗಳ ಕಣ್ಮರೆಯಾದ ಬಳಿಕ ಮರಗವ್ವನು ಆ ಅರ್ಥವೆ ಇರುವ ಎಲ್ಲವ್ವ- (ಜಗದಂಬೆ)ಯೆಂಬ ಹೊಸ ಹೆಸರನ್ನು ಧರಿಸಿರಬೇಕು. 'ಎಲ್ಲೂ ಆಯಿ 'ಎಲ್ಹಾಯಿ' ಎಂದು ಮರ್ಹಾಟಿಯ ಆದಿಕವಿಯಿತ್ರಿಯಾದ ಮಹದಂಬೆಯ ವಂಶಸ್ಥಳಾದ ಪ್ರಖ್ಯಾತ ಹೆಣ್ಣುಮಗಳು ಒಬ್ಬಳು ಆಗಿ ಹೋದಳು. ಎಲ್ಲು ಆಯಿ ವರ್ಹಾಟದವಳು ಮತ್ತೆ! 'ಮರಗಾಯಿ' 'ಮರಿ ಆಯಿ' 'ಮರಧಡೀ ಆಯಿ' ಪೂಜೆ ವರ್ಹಾಟದಲ್ಲಿ ಇನ್ನೂ ಇದೆ.

ಸಂಸ್ಕೃತ ಪಂಥಿಗಳು ತಾವು ನೆಲಸಿದ ನಾಡಿನ ಮೇಲೆ ತಮ್ಮ ಮುದ್ರೆಯನ್ನು ಹಾಕುವ ಕ್ರಮವನ್ನಿಟ್ಟಿದುದನ್ನು ಇತಿಹಾಸವು ಹೇಳುತ್ತದೆ. ಆರ್ಯರು ಮೊದಲು ಪೂಜಿಸದ ಅನೇಕ ದೇವದೇವತೆಗಳನ್ನು ಇಲ್ಲಿಯ ನಿವಾಸಿಗಳಿಂದ ಸ್ವೀಕರಿಸಿ ಅವಕ್ಕೆ ಸಂಸ್ಕೃತ ಸ್ವರೂಪವನ್ನು ಕೊಟ್ಟುದು ಪ್ರಖ್ಯಾತವಿವೆ. 'ಕರೆ ಅವ್ವಾ' ಕಾಳಿಕಾ (ಕಾಟ್-ಕಪ್ಪು) ದೇವಿಯಾಗಿ ಬಂಗಾಳಿಗಳ ರಾಷ್ಟ್ರದೇವಿಯಾದಳು. ಮರಗವ್ವನು (ಮಹಾದೇವಿ) 'ಬನಶಂಕರಿ' 'ಎಲ್ಲಮ್ಮ' 'ಜಗದಂಬೆ' 'ಅಂಬಾಭವಾನಿ'ಯಾಗಿ ದಕ್ಷಿಣದೇಶದ ಮನೆಮನೆಗಳ ಇಷ್ಟದೇವತೆ ಕುಲದೇವತೆಯಾದಳು. ಕನ್ನಡದೇವಿಯರ ಹೆಸರುಗಳು ಮಾರ್ಪಾಟುಹೊಂದಿ ಸಂಸ್ಕೃತರೂಪಗಳನ್ನು ತಾಳಿದಂತೆ ದೇಶದ ಹೆಸರುಗಳು ಸಹ ಬದಲಾದುದಕ್ಕೆ ಬೇಕಾದುದಷ್ಟು ಉದಾಹರಣೆಗಳನ್ನು ಕೊಡಬಹುದು. ಎರುಮೈ ನಾಡು-ಎಮ್ಮೆ ನಾಡು, ಮಹಿಷಮಂಡಲವಾಯಿತು. ಕರೆಹೊಳೆ ಕೃಷ್ಣಾನದಿಯೆನಿಸಿತು. ಕರಿದು ಎಂಬ ಮೂಲಾರ್ಥವುಳ್ಳ ಕನ್ನಡದ 'ಕಟ್' 'ಕನ್' ಕಜು್ ಎಂಬ ಶಬ್ದಕ್ಕೆ ತೀರ ಹತ್ತರಿರುವ ಕನ್ನಯ್ಯ, ಕನ್ನಯ್ಯ ಕೃಷ್ಣಯ್ಯನ ಹೆಸರು ಬಹಳ ಕೌತುಕಾಸ್ಪದವಾಗಿದೆ. ಆರ್ಯರಲ್ಲಿ ಸೇರಿದ ಕೃಷ್ಣನು-ಮಧುರೆಯ ಗೌಳಿಗಳ ಬಳಗದಲ್ಲಿ ಬೆಳೆದ ಕೃಷ್ಣನು-ಹಗೆಗಳಿಂದ ತಪ್ಪಿಸಿಕೊಂಡು ನಿಲ್ಲಲು (ಕನ್ನಡ ಗೌಳಿಗಳ-ತುರುಕಾರರ ನಾಡಿನಲ್ಲಿ) ಗುಜರಾತದಲ್ಲಿ[೪೩] ದ್ವಾರಕೆಗೆ ಬಂದು ನಿಂತ ಕೃಷ್ಣನು ಕನ್ನಡರಿಗೆ ತೀರ ಸಮೀಪದವನೆನಿಸುವನು.

ಆರ್ಯರಿಗೆ ಸಂಸ್ಕೃತೀಕರಣದ ಎಷ್ಟೊಂದು ಹಂಬಲವಿದ್ದಿತೆಂಬುದನ್ನು ವಿಶೇಷ ಉದಾಹರಣಗಳಿಂದ ಸಿದ್ಧಮಾಡಿಕೊಂಡುವ ಆವಶ್ಯಕತೆಯೆ ಉಳಿದಿಲ್ಲ. ಏಕೆಂದರೆ ಸಂಶೋಧಕರಲ್ಲಿ ಸರ್ವಸಮ್ಮತವಾದ ಮಾತಿದು. ಮರಹಟ್ಟಿ ಎಂಬ ಕನ್ನಡ ರೂಪವು ಸಂಸ್ಕೃತ ಪಂಥಿಗಳ ತಿರಸ್ಕಾರಕ್ಕೆ ಒಳಗಾಗಿರಬೇಕು. ಅದಕ್ಕೆ ಸಂಸ್ಕಾರ ಕೊಟ್ಟು ಪರಿಶುದ್ಧವಾಗಿ ಮಾಡಿದ ಪ್ರಯತ್ನಗಳ ಫಲಿತಾಂಶವೆ 'ಮಹಾರಾಷ್ಟ್ರ'ವೆಂಬ ಶಬ್ದ ಪ್ರಚಾರವು ಮರಹಟ್ಟಿ ಎಂದರೆ ಮನ ಒಪ್ಪದು. ಮಹಾದೇಶ, ಮಹಾ-ರಾಷ್ಟ್ರವೆಂದರೆ ಅಕ್ಕರೆ. ಎಲ್ಲಮ್ಮ ಎಂದರೆ ನಮಗೆ ರುಚಿಸದು.

ಜಗದಂಬೆ ಎಂದರೆ ಪ್ರೀತಿ, ಮರಗವ್ವ ಎಂದರೆ ಉಃ, ಮಹಾದೇವಿ ಎಂದರೆ ಭಯುಭಕ್ತಿ. ಎಮ್ಮೆ ನಾಡು ಎಂದರೆ ಕಗ್ಗ; ಮಹಿಷದೇಶವೆಂದರೆ ಕುಸುರಿ. ನಾಡವರು ಎಂದರೆ ಕೀಳು, ರಾಷ್ಟ್ರಿಕ, ರಠಿಕ, ರಾಷ್ಟ್ರಿಕ ಎಂದರೆ ಮೇಲು. ಅಂತೂ ಕ್ರಿ.ಶ.ಕ್ಕೆ ಮೊದಲು ಐದು-ಆರನೆಯ ಶತಮಾನದಲ್ಲಿ ಆರಂಭವಾಗಿ ಕ್ರಿ. ಶ. ಐದು-ಆರನೆಯ ಶತಮಾನದ ಸುಮಾರಿಗೆ ಕನ್ನಡಕ್ಕೆ ಅಡಿಯಿಂದ ಮುಡಿಯವರೆಗೆ (ಸು)ಸಂಸ್ಕೃತ ಸ್ವರೂಪವನ್ನು ಕೊಡುವ ಮಹಾಕಾರ್ಯವು ಕೊನೆಗಂಡಿತು. ಕರ್ಣಾಟಮಹಾಮಂಡಳದ ಉತ್ತರ ಮತ್ತು ದಕ್ಷಿಣದ ತುದಿಗಳು ಅಂದರೆ ಮರಹಟ್ಟಿ ಮತ್ತು ಎಮ್ಮೆನಾಡುಗಳು ತಮ್ಮ ರೂಪವನ್ನು ಬದಲಿಸಿ ಹೊಸ ಹೆಸರುಗಳಿಂದ ಮೆರೆಯತೊಡಗಿದವು. ಕರ್ಣಾಟವು ಮಹಾರಾಷ್ಟ್ರವಾಯಿತೆಂದು ಜನಗಳಲ್ಲಿ ದಿಗ್ಭ್ರಮೆಯುಂಟಾಯಿತು!

ಸಂಸ್ಕೃತ, ಕನ್ನಡ ಮತ್ತು ಮರ್‍ಹಾಟಗಳ ಈ ತೊಡಕು ತಿಳಿಯದೆ ಇದ್ದವರಿಗೆ ಮಹಾರಾಷ್ಟ್ರ ಶಬ್ದವು ಹೇಗೆ ಹುಟ್ಟಿತೆಂಬುದು ಗೊತ್ತಾಗುವುದೇ ಸಾಧ್ಯವಿಲ್ಲ. ಆದುದರಿಂದ, ಡಾ. ಭಾಂಡಾರಕರರಿಂದ ಶ್ರೀ ವೈದ್ಯರ ವರೆಗೆ ಎಲ್ಲರೂ, ಅವರ ಪಾಂಡಿತ್ಯದಲ್ಲಿ ತುಂಬಾ ಆದರವಿದ್ದರೂ ಕತ್ತಲೆಯಲ್ಲಿ, ಮುಗ್ಗರಿಸುತ್ತಲಿದ್ದಾರೆಂದು ಹೇಳಬೇಕಾಗುತ್ತದೆ. ಸಮರ್ಪಕವಾಗಿ ಆರ್ಯರ ಉಪಪತ್ತಿಯೂ ಇಲ್ಲದ್ದರಿಂದ ಎಲ್ಲರೂ ಒಬ್ಬರೊಬ್ಬರಿಗೆ ಹೆಸರಿಡುವುದರಲ್ಲಿ ತೊಡಗಿರುವರು; ರಥಿಕ-ರಠಿಕ-ಮಹಾರಥಿಕ-ಮಹಾರಾಷ್ಟ್ರವೆಂದು ಶೆಣ್ವೈಗೋಯಂಬಾಬರು; ರಾಷ್ಟ್ರಿಕ, ಮಹಾರಾಷ್ಟ್ರಿಕ ಅಂದರೆ ರಾಷ್ಟ್ರಕೂಟರೆ ಮರಾಠರು ಎಂದು ವೈದ್ಯ ಪ್ರಭೃತಿಗಳು.

ಆದರೆ, ಮಹಾರಾಷ್ಟ್ರ ಮತ್ತು ಕರ್ಣಾಟಗಳ ಪರಸ್ಪರ ಸಂಬಂಧಗಳನ್ನು ಕುರಿತು ಲೋಕಮಾನ್ಯ ತಿಲಕರು ತಮ್ಮ ಧೀರ ಗಂಭೀರವಾಣಿಯಿಂದ ಒಡನುಡಿದುದು ಮತ್ತೆ ಮತ್ತೆ ನೆನೆಯುವಷ್ಟು ಅರ್ಥಪೂರ್ಣವಾಗಿದೆ.

> "ಮಹಾರಾಷ್ಟ್ರ ಆಣಿ ಕರ್ನಾಟಕ ನಿರಾಳೇ ನನ್ಹೇತ ದೋಘಾಂಮಧ್ಯೇಹೀ ಏಕಚ ರಕ್ತ
> ಖೇಳತ ಆಹೇ. ದೋಘಾಂಚೀ ಭಾಷಾ ಏಕಚ ಮ್ಹಣಜೇ ಕಾನಡೀ ಹೀ ಹೋತಿ"[೪೪]

ಮಹಾರಾಷ್ಟ್ರವೂ ಕರ್ಣಾಟವೂ ಬೇರೆ ಬೇರೆ ಅಲ್ಲ. ಇಬ್ಬರಲ್ಲಿಯೂ ಒಂದೇ ನೆತ್ತರು ಹರಿದಾಡುತ್ತಲಿದೆ. ಇಬ್ಬರ ಭಾಷೆಯೂ ಒಂದೇ ಎಂದರೆ ಕನ್ನಡವೇ ಇತ್ತು.

ತುಂಬಾ ಪರಿಶ್ರಮಪಟ್ಟು ಹುಡುಕಿ ಕೊನೆಗೆ ಇದೇ ನಿರ್ಣಯಕ್ಕೆ ಬಂದರೂ ಯಾವ ಮಾತನ್ನು ಹೇಳುವುದಕ್ಕೆ ಸಂಶೋಧಕರು ಸಹ ತಡವರಿಸಬಹುದೊ ಆ ಸಂಗತಿಗಳನ್ನೇ ಲೋಕಮಾನ್ಯರು ತಮ್ಮ ಸೂಕ್ಷ್ಮಬುದ್ಧಿಯಿಂದ ಮೊದಲೆ ಅರಿತುಕೊಂಡು ನಿರ್ದಾಕ್ಷಿಣ್ಯವಾಗಿ ೧೯೦೬ರಲ್ಲಿಯೇ ಸಾರಿ ಹೇಳಿದ್ದಾರೆ. ತ್ರಿಕಾಲದರ್ಶಿಯ ಮಹಾವಾಕ್ಯದಂತಿವೆ ಈ ಮಾತುಗಳು. ಯಾವ ತೊಡಕಿಲ್ಲ! ಆಟಮಟವಿಲ್ಲ. ಎಂತಹ ನಿಸ್ಸಂದಿಗ್ಧ ನಿಶ್ಚಯೋಕ್ತಿ!

ಈ ನಾಡಿನ ಹೆಸರೂ ಕನ್ನಡ

ಈ ವರೆಗೆ ವಿವರಿಸಿದಂತೆ ತರ್ಕ, ಪರಂಪರೆ, ಜಾತಿ, ಜನಾಂಗ, ಭಾಷೆಗಳಲ್ಲಿ ಯಾವ ದೃಷ್ಟಿಯಿಂದ ವಿಚಾರಿಸಿ ವಿಮರ್ಶಿಸಿದರೂ ಗೋದಾವರಿಯ ಮೇಗಡೆಯಲ್ಲಿ ಕನ್ನಡವು ಇದ್ದೇ ಇತ್ತು ಎಂಬುದೇ ಧ್ವನಿತವಾಗುತ್ತಿದೆ. ನಿಜವಾಗಿ ನೋಡಿದರೆ ಗೋದಾವರಿಯ ಉತ್ತರಕ್ಕೆ ಈ ಮೊದಲೆ ಹೇಳಿದ 'ಕನ್ನಡರು' ನೆಲೆಸಿರುವ (ನಾಸಿಕ-ಖಾನದೇಶ) ನಾಡು, ಕನ್ನಡ ವೀರಗಲ್ಲುಗಳ ನಾಡು ಕನ್ನಡವೆ ಇರಲಿಕ್ಕೆಬೇಕು ಎಂದು ಬೇರೆ ಹೇಳುವ ಅಗತ್ಯವೆ ಇಲ್ಲ. ಆದರೆ, ಇಷ್ಟರಿಂದಲೇ ವಿಮರ್ಶಕ ಬುದ್ಧಿಗೆ ಸಮಾಧಾನವೆನಿಸಲಾರದು. ಆದುದರಿಂದ ದೇಶವಾಚಕ ಕನ್ನಡ ಹೆಸರುಗಳೇನಾದರೂ ಅಲ್ಲಿ ದೊರೆತರೆ ಮೇಲಣ ಮಾತಿಗೆ ಇನ್ನಿಷ್ಟು ಪುಷ್ಟಿದೊರೆಯುವಂತಿದೆ.

ಗೋದಾವರಿಯ ಮೇಗಡೆಗೆ (ಈಗಿನ ನಿಜಾಂ ರಾಜ್ಯದ) ಔರಂಗಾಬಾದ ಜಿಲ್ಹೆಯು, ಕರ್ಣಾಟಕ ಐತಿಹಾಸಿಕ ಸಂಸ್ಮರಣೀಯ ಸ್ಥಳಗಳ ಆಗರ. ಯಾದವರು ಆಳಿದ ದೇವಗಿರಿಯಂತೂ ಸರಿಯೆ. ಅಲ್ಲದೆ ಚಿತ್ರ ಮತ್ತು ಶಿಲ್ಪ ಕೌಶಲ್ಯದಲ್ಲಿ ಜಗತ್ತನ್ನೇ ಬೆರಗುಗೊಳಿಸಿದ ಅಂಜಂಟಾ ಹಾಗೂ ವೇರೂಳಗಳು ಇರುವುದು ಇಲ್ಲಿಯೆ. ಇದೇ ಸೀಮೆಯಲ್ಲಿ 'ಕನ್ನಡ' ಎಂಬ ಬರಿ ಒಂದೂರಲ್ಲ. ಸಣ್ಣ ದೇಶವಿಭಾಗಕ್ಕೂ (ತಾಲ್ಲೂಕು) ಕನ್ನಡ ಎಂಬ

ಹೆಸರಿದೆ. ಕರ್ನಾಟವು ಕ್ಷೀಣವಾಗಿದೆ. ಕನ್ನಡವು ತಾಲೂಕಾಗಿ ಉಳಿದಿದೆ. ಕನ್ನಡವು (ಕರ್ನಾಟಕವು) ವೈಭವದಲ್ಲಿದ್ದಾಗ ಈಗ ತಾಲೂಕಿಗೆ ಇರುವ ಹೆಸರೆ ಆ ಸುತ್ತಲಿನ ನಾಡಿನ ಹೆಸರೂ ಆಗಿದ್ದರೆ ಆಚ್ಚರಿಯೇನು? ಕನ್ನಡವು ನಿಜಾಮರ ಕೈಯಲ್ಲಿದೆ. ಅದರ ನೆರೆಯ ನಾಡು ಬ್ರಿಟಿಶರೊಬ್ಬರ ಕಡೆಗೆ ಇದ್ದುದು ನಿಜ. ಆದರೆ, ಕನ್ನಡದ ಪೂರ್ವಕ್ಕೆ ವರ್ಹಾಟ ಮಧ್ಯಪ್ರಾಂತಗಳು; ಪಶ್ಚಿಮಕ್ಕೆ ಮುಂಬೈಇಲಾಖೆಯಲ್ಲಿ ಸಮಾವಿಷ್ಟವಾದ ಖಾನದೇಶ. ಎಲ್ಲವೂ ಬೇರೆಬೇರೆ ಆಡಳಿತಕ್ಕೆ ಒಳಪಟ್ಟವು. ಈಗ ಬೇರೆಬೇರೆ ಸರಕಾರಗಳ ಕಡೆಗೆ ಇದ್ದರೂ ಪ್ರಾಚೀನ ಕಾಲಕ್ಕೆ ಈ ಎಲ್ಲ ನಾಡು ಸಾಮಾನ್ಯವಾಗಿ ಒಂದೇ ಆಡಳಿತದಲ್ಲಿರುತ್ತಿತ್ತು. ರಾಜಕೀಯ ವಿಭಾಗಗಳು ಯಾವಾಗಲೂ ಕೃತ್ರಿಮ. ಈ ಎಲ್ಲ ಪ್ರದೇಶವೂ ಪ್ರಾಕೃತಿಕ ದೃಷ್ಟಿಯಿಂದ ಒಂದೇ ನಾಡು ಎಂದು ಹೇಳಲು ಅಡ್ಡಿಯಿಲ್ಲ. ನಾಸಿಕದ ಬಹುಭಾಗ, ಖಾನದೇಶದಿಂದ ವರ್ಹಾಟ ನಾಗಪೂರಗಳ ವರೆಗೆ ಜನರು, ದೇಶಸ್ಥಿತಿ, ಜನರ ನಡೆನುಡಿ ಮೊದಲಾದವುಗಳಲ್ಲಿ ಬಹಳ ಸಾಮ್ಯವಿದೆ.

ವರ್ಹಾಟ ಮತ್ತು ಖಾನದೇಶ ದೇಶಗಳ ನಡುವೆ ಕನ್ನಡ (ತಾಲೂಕು) ಇರುವುದು ಕೇವಲ ಘುಣಾಕ್ಷರ ನ್ಯಾಯವಾಗಿರಬಹುದೇ? 'ಕನ್ನಡ'ವು ಖಾನದೇಶ ಮತ್ತು ವರ್ಹಾಟಗಳನ್ನು ಜೋಡಿಸುವ ಸರಪಳಿಯ ಕಳಿಗೆಯಂತಿದೆ. 'ಕನ್ನಡ'ದ ಈ ಬೆಳಕಿನಲ್ಲಿ ನೋಡಿದರೆ ವರ್ಹಾಟದ ಪ್ರಾಚೀನ ಹೆಸರು ಮರ್ಹಟ್ಟಿ-ಮರಹಟ್ಟಿಯೆಂದೇ ಇರಲಿಕ್ಕೆ ಬೇಕೆಂಬ ಮಾತು ಇನ್ನಿಷ್ಟು ದೃಢವಾಗುತ್ತದೆ. ಇನ್ನುಳಿಯಿತು ಖಾನದೇಶದ ವಿಚಾರ. ಖಾನದೇಶವು ಮಹಾರಾಷ್ಟ್ರದೊಳಗಿನ ಒಂದು ಜಿಲ್ಹೆ. ಜಿಲ್ಹೆಯೇನು, ದೇಶವೆ. ಇಷ್ಟು ದೊಡ್ಡದಿದ್ದುದರಿಂದಲೆ ಆಡಳಿತದ ಅನುಕೂಲತೆಗಾಗಿ ಇದನ್ನು ತುಂಡರಿಸಿ ಎರಡು ಜಿಲ್ಹೆಗಳನ್ನು ಮಾಡಿದ್ದಾರೆ. ಜಿಲ್ಹೆಗಳಿಗೆ ಹೆಸರು ಬರುವುದು ಅವುಗಳ ಮುಖ್ಯಸ್ಥಳಗಳಿಂದ. ನಗರ, ಪುಣೆ ಜಿಲ್ಹೆಗಳೆ ಇದಕ್ಕೆ ನಿದರ್ಶನ. ಇದರ ಹೆಸರು ನಿಜವಾಗಿ ಧುಳೆ, ಮತ್ತು ಜಳಗಾಂವ ಜಿಲ್ಹೆಗಳೆಂದು ಇರಬೇಕಾಗಿತ್ತು. ಆದರೆ ಇರುವ ಹೆಸರು ಖಾನದೇಶ.

ಖಾನದೇಶವೆಂದರೇನು ಅರ್ಥ?[೪೫] ಖಾನರದೇಶವೇ? ಇಲ್ಲಿ ಖಾನರು ಅಲ್ಪ ಸಂಖ್ಯಾಕರು. ೧೦೦ಕ್ಕೆ ೭ ರಷ್ಟು ಇಲ್ಲ. ಖಾನರ ದೇಶವಲ್ಲದಿದ್ದರೂ ಖಾನರು ಆಳಿದ ದೇಶವಾಗಿರಬಹುದು, ಹೀಗೆಂದು ಊಹಿಸಲಿಕ್ಕೆ ಬರುವಂತಿದೆ. ಅಬುಲ್‌ಫಜಲನು ಐನೆಅಕಬರಿಯಲ್ಲಿ ಇದೇ ಬಗೆಯಾಗಿ ಉಪಪತ್ತಿಯನ್ನು ಹೇಳಿರುವನು. ಆದರೆ, ದಿಲ್ಲಿಯಲ್ಲಿ ಕುಳಿತು ಕೇಳಿಕೆಯ ಮಾತಿನಿಂದ ತರ್ಕಿಸುವ ಅಬುಲ್ ಫಜಲನಿಗಿಂತ ಪ್ರತ್ಯಕ್ಷ ಇದೇ ನಾಡಿನಲ್ಲಿದ್ದು ಇಲ್ಲಿಯ ಸ್ಥಿತಿಗತಿಗಳನ್ನು ಅಭ್ಯಾಸಿಸಿದ ಫೆರಿಸ್ತನ ಅಭಿಪ್ರಾಯವು ಹೆಚ್ಚು ವಿಶ್ವಸನೀಯವಾಗಿದೆ. ಫೆರಿಸ್ತನು ವಿಜಾಪೂರ, ಅಹಮ್ಮದನಗರದ ಬಾದಶಹರಲ್ಲಿ ಮುಪ್ಪಾದವನು. ಈ ಅರಸರಿಗೆ ಖಾನದೇಶದ ಸಂಬಂಧವು ಬಿಟ್ಟೂ ಬಿಡದೆ ಇತ್ತು. ಆದುದರಿಂದ, ಫೆರಿಸ್ತನಿಗೆ ಅಬುಲ್‌ಫಜಲನಿಗಿಂತ ಇಲ್ಲಿಯ ಐತಿಹ್ಯವು ಹೆಚ್ಚು ಗೊತ್ತಿರುವುದು ಸಹಜ. ಅಲ್ಲದೆ, ಆ ಬಾದಶಹರು ಒಪ್ಪಿಸಿದ ಇತಿಹಾಸವನ್ನು ಬರೆಯುವ ಕೆಲಸವೂ ಇವನ ಕಡೆಗೆ. ಆದುದರಿಂದ ಈತನು ತಾನು ಹೇಳುವ ಮಾತುಗಳಿಗೆ ಶಕ್ಯವಿದ್ದಷ್ಟು ಆಧಾರಗಳಿಲ್ಲದೆ ಹೇಳಿರುವ ಸಂಭವವಿಲ್ಲ. ಫೆರಿಸ್ತನ ಅಭಿಪ್ರಾಯದಂತೆ ಮುಸಲ್ಮಾನರು ಬರುವ ಮೊದಲಿನಿಂದಲೆ ಈ ಹೆಸರು ಈ ನಾಡಿಗೆ ಇತ್ತು. ಇತ್ತೀಚಿನವರಲ್ಲಿ, ಕೃಷ್ಣನ ದೇಶ-ಕನ್ಹದೇಶ-ಖಾನದೇಶವೆಂದು ಸಿಂಕ್ಲೆಅರನು. ಖಂಡ ಖಿಂಡ (ಕಂಡಿ, ಕಣಿವೆ) ದೇಶ-ಖಾನದೇಶವೆಂದು ಕರ್ನಲ್‌ಸಾಯಿಕನು. ಆದರೆ, ಅಮ್ಮಳನೇರಿಯ ಸಬ್‌ಜಡ್ಜಿಗಳಾಗಿದ್ದ ಶ್ರೀ ಮರಾಠೆಯವರು ಅಲ್ಲಿಯ (ಹಳ್ಳಿಯ) ಹಾಡುಗಳನ್ನು ಸಂಗ್ರಹಿಸಿ ಅವುಗಳ ಅಭ್ಯಾಸದಿಂದ, ಈ ಪ್ರದೇಶವು ಭಾರತಕಾಲದ ಖಾಂಡವದೇಶವಾಗಿರಬೇಕೆಂದು ಊಹಿಸಿದ್ದಾರೆ. ವಿಲ್ಸನನು ಕನ್ಹರು ಅಥವಾ ಖಂಡರನ್ನು (ಭಾರತ ಕಾಲದ ಜನಾಂಗ ಮತ್ತು ದೇಶಗಳನ್ನು ನಿರ್ದೇಶಿಸುವಾಗ) ವಿದರ್ಭರೊಂದಿಗೆ ಹೇಳಿದ್ದಾನೆ.

ಇವೆಲ್ಲ ಅನುಮಾನಗಳಲ್ಲಿ ಸತ್ಯಕ್ಕೆ ಹೆಚ್ಚು ಹತ್ತಿರದಲ್ಲಿರುವಂತಹವು ಕೊನೆಯವೆರಡು ಮಾತ್ರ. ಶ್ರೀ ಮರ್ಹಾಟೆ ಮತ್ತು ವಿಲ್ಸನರು ಊಹಿಸುವಂತೆ ಈ ನಾಡಿನಲ್ಲಿ ಇನ್ನೂ ಅಲ್ಪಸ್ವಲ್ಪ ಉಳಿದಿರುವ ಕನ್ಹರು ಭಾರತ ಕಾಲದ ಖಾಂಡವರೆ ಆಗಿರಲಿಕ್ಕೆ ಸಾಕು. ಕನ್ಹರು ವಿಂಧ್ಯ-ಮಲಯಗಳ ಕಾಡುತೊರೆದು ನಾಡಿಗರಾದ ಬಳಿಕ ಅವರೆ

(ಕನ್+ನಾಡು) ಕನ್ನಾಡರಾದರು. ಕನ್ನಡವೆಂಬ ರೂಪಕ್ಕಿಂತಲೂ ಮೊದಲು ಕೆಲವು ಕಾಲ ಕನ್ನಾಡು ಶಬ್ದವು ಬಳಕೆಯಲ್ಲಿರಬೇಕು. 'ಕನ್ನಡ ಎಂಬುದರ ಆದಿರೂಪವು ಕನ್ನಾಡು ಎಂದು ಇದ್ದಿರಬೇಕಾಗಿ' ಶ್ರೀಮಾನ್ ಆರ್. ನರಸಿಂಹಾಚಾರ್ಯರೂ ಊಹಿಸುತ್ತಾರೆ.[೪೬] 'ಕನ್ನಾಡು ಮೊದಲು; ತರುವಾಯ ಕನ್ನಡು; ಕೊನೆಗೆ ಕನ್ನಡ;' ಎಂದು ಅವರು ಹೇಳಿದುದು ಆ ಶಬ್ದವು ಕಾಲಕ್ರಮದಲ್ಲಿ ಹೊಂದಿದ ವ್ಯತ್ಯಾಸಗಳನ್ನು ಬಹಳ ಚೆನ್ನಾಗಿ ವ್ಯಕ್ತಗೊಳಿಸುತ್ತದೆ. ಆದರೆ, ನಮ್ಮ ದುರ್ದೈವದಿಂದ ಕನ್ನಡವು 'ಕನ್ನಾಡು' ಮತ್ತು 'ಕನ್ನಡು' ಆಗಿದ್ದಾಗಿನ ಅದರ ಕತೆಯೆ ತಿಳಿದಿಲ್ಲ. ಮರ್‍ಹಾಟಿಯ ಆರಂಭದ ಭಾಷೆಯಲ್ಲಿ ಮಾತು ಮಾತಿಗೂ ಉಕಾರ ಸೇರಿಸಿ ಬರೆವ ರೂಢಿಯಿದ್ದುದು ಜ್ಞಾನೇಶ್ವರಿ ಮತ್ತು ಮಹಾನುಭಾವರ ಗ್ರಂಥಗಳಿಂದ ಚೆನ್ನಾಗಿ ನಿದರ್ಶನಕ್ಕೆ ಬರುತ್ತಿದೆ. 'ಗ್ರಂಥು' 'ಪುಸ್ತಕು' ಮೊದಲಾದ ಸಂಸ್ಕೃತ ಶಬ್ದಗಳಿಗೂ ಉಕಾರ ಸೇರಿಸಿದ್ದಾರೆ. ಇದು ಕನ್ನಡಭಾಷೆಯ ವರ್ಚಸ್ಸಿನ ಪರಿಣಾಮವು ಎಂದು ಸಂಶೋಧಕರು ಹೇಳುತ್ತಾರೆ. 'ಕನ್ನಾಡು' 'ಕನ್ನಡು' ಎಂಬೀ ಬಗೆಯಲ್ಲಿ ಉಕಾರದ ಪ್ರಾಬಲ್ಯವಿದ್ದಾಗ ಕನ್ನಡವು ಗೋದಾವರಿಯ ಮೇಲ್ಗಡೆಗೆ ನರ್ಮದಾ ತೀರದಲ್ಲಿರಬೇಕೆಂದು ಇಲ್ಲಿ ಊಹಿಸದೆ ಗತ್ಯಂತರವಿಲ್ಲ. ಕನ್ನರ ವಸತಿ ಭಾರತಕಾಲದಿಂದಲೂ ವಿಂಧ್ಯ ಮಲಯಗಳ ಹತ್ತಿರ. ಕನ್ನರು, ಕನ್ನಾಡಿಗರಾಗಲು ಆಗ ವಿಂಧ್ಯದ ನೆರೆಹೊರೆಯಲ್ಲಿಯೆ ಅವರ ನಾಡು ಇರಬೇಕು ತಾನೆ? ಈ ದೃಷ್ಟಿಯಿಂದಲೂ ಮೂಲ ಕರ್ಣಾಟಕವು, ಇದ್ದರೆ ನರ್ಮದಾತೀರದಲ್ಲಿಯೆ ಎಂದು ಹೇಳಬೇಕಾಗುತ್ತದೆ.

ಆದಕಾರಣ ಖಾನದೇಶ ಶಬ್ದದ ವ್ಯುತ್ಪತ್ತಿಯನ್ನು ಸರಿಯಾಗಿ ಅರಿತುಕೊಳ್ಳಬೇಕಾದರೆ ಇದಕ್ಕೂ 'ಕನ್ನಡ' ಶಬ್ದಕ್ಕೂ ಏನಾದರೂ ಸಂಬಂಧವುಂಟೆ, ಎಂಬುದನ್ನು ಸ್ವಲ್ಪ ಕುರಿತು ನೋಡುವುದು ಯೋಗ್ಯವಾಗಿದೆ. ಕನ್ನಡ ಶಬ್ದವನ್ನು ಮರ್‍ಹಾಟಿಗಳು ಕಾನಡವೆಂದು ಹೇಳುವ ಪರಿಪಾಠವುಂಟು. 'ಕನ್ನಡದೇಶ'ಕ್ಕೆ 'ಕಾನಡದೇಶ'ವೆಂದು ಹೇಳುತ್ತಿದ್ದುದು ಅವರ ಸಾಹಿತ್ಯದಿಂದಲೆ ಗೊತ್ತಾಗುತ್ತದೆ. ಮರ್‍ಹಾಟಿಯ ಆದಿ ಗ್ರಂಥಕಾರನೂ ಮಹಾನುಭಾವ ಪಂಥದ ಸಂಸ್ಥಾಪಕನೂ ಎನಿಸಿದ ಚಕ್ರಧರನ (೧೨೬೩) ಕಟ್ಟಪ್ಪಣೆಯಲ್ಲಿ ಕಾನಡದೇಶದ ಹೆಸರು ಬಂದಿದೆ. ಆ ಕಟ್ಟಪ್ಪಣೆಯಲ್ಲಿ ಆ ಕಾಲದ ಮರ್‍ಹಾಟಿಗಳ ಮನಸ್ಥಿತಿಯೂ ಚೆನ್ನಾಗಿ ಪ್ರತಿಬಿಂಬಿತವಾಗಿದೆ.

'ಕಾನಡ ದೇಸಾ ತೇಲಂಗ ದೇಸಾ ನ ವಚಾ (ಸಾ) ವೇ। ತೇ ವಿಷಯ ಬಹುಲ ದೇಸ।
ತೇಥ ಅವಧೂತ ಮಾನ್ಯ। ಮಹಾರಾಷ್ಟ್ರೀ ವಸಾವೇ।

ಶ್ರೀಚಕ್ರಧರನ ಉಳಿದ ವಚನಗಳೇನೆ ಇರಲಿ; ಮರ್‍ಹಾಟಿಗಳು ಕನ್ನಡದೇಶಕ್ಕೆ ಕಾನಡದೇಶವೆಂದು ಹೇಳುತ್ತಿದ್ದುದು ಇಲ್ಲಿ ಪ್ರಸ್ತುತವಾಗಿದೆ. ಮರ್‍ಹಾಟಿಗಳ ಬಾಯಲ್ಲಿ, 'ಕಾನಡದೇಶ'ವೆಂದು ರೂಪತಾಳಿದ ಶಬ್ದವೆ ಮುಸಲ್ಮಾನರ ಕಾಲಕ್ಕೆ ಅವರ ಬಾಯಿಗೆ ಸಿಕ್ಕು ಇನ್ನೂ ಸ್ವಲ್ಪ ವಿಕೃತಿಯನ್ನು ಹೊಂದಿರುವುದು ಶಕ್ಯವಿದೆ. ಮನುಷ್ಯನು ಪರಭಾಷೆಯ ಶಬ್ದಗಳನ್ನು ತನಗೆ ಅರ್ಥವಾಗುವಂತೆ ಅವನ್ನು ತಿರುವಿಕೊಳ್ಳುವ ರೀತಿಗಳು ಎರಡು. ಒಂದು ಭಾಷಾಂತರ; ಇನ್ನೊಂದು ರೂಪಾಂತರ. ಮರಹಟ್ಟಿಯು-ವರ್‍ಹಾಟವಾದುದು ರೂಪಾಂತರ; ಮಹಾರಾಷ್ಟ್ರವಾದುದು ಭಾಷಾಂತರ. ರೂಪಾಂತರದಲ್ಲಿ ತನ್ನ ಭಾಷೆಗೆ ಸರಿಹೋಗುವ ಹಾಗೆ ತನ್ನ ಮಾತಿನಲ್ಲಿ ಅರ್ಥವಾಗುವ ಹಾಗೆ ಆ ಶಬ್ದವನ್ನು ತಿದ್ದಿಕೊಳ್ಳುವುದುಂಟು. ಲೀಲೆ-Lily ಎಂಬುದು ಆಧುನಿಕ ಉದಾಹರಣೆ. ಈ ಬಗೆಯ ಮನುಷ್ಯ ಸ್ವಭಾವಕ್ಕನುಸರಿಸಿಯೆ ಕಾನಡದೇಶವು ಮುಸಲ್ಮಾನರ ಬಾಯಲ್ಲಿ ಖಾನಡದೇಶವೆಂದು ಮೊದಲು ಕೆಲದಿನ ವ್ಯವಹರಿಸಿರಬೇಕು. ಅಲ್ಲದೆ, ಇನ್ನೂ ಒಂದು ಕಾರಣದಿಂದಲೂ ಕಂನಾಡದೊಳಗಿನ ಆರಂಭದ ಕಕಾರವು ಮಹಾಪ್ರಾಣವಾಗಿರುವ ಸಂಭವವಿದೆ. ಮಹಮ್ಮದೀಯರಿಗೆ ನಮ್ಮ ನಾಡಿನ ಶುದ್ಧ ಕಕಾರವನ್ನು ಸರಿಯಾಗಿ ಉಚ್ಚರಿಸುವುದಕ್ಕೂ ಕಷ್ಟ. ಕಾಜಿ-ಖಾಜಿ, ಮಹಮ್ಮದೀಯರು ಕಾನಡದೊಳಗಿನ ಕಕಾರವನ್ನು ವಿಚಿತ್ರವಾಗಿ ಖಕಾರಕ್ಕೆ ಸಮೀಪ ಒಯ್ದು ಹೇಳುತ್ತಾರೆ. ಆಗ ಡಕಾರವನ್ನು ಉಚ್ಚರಿಸುವುದಕ್ಕೆ ಅಸಾಧ್ಯವಾಗುತ್ತದೆ. ಆರಂಭದ ಕಕಾರವನ್ನು ಆಘಾತಕೊಟ್ಟು ಹೇಳುವುದರಲ್ಲಿ ಮುಂದೆ ಡಕಾರವನ್ನು ಹೇಳಲು ಬೇಕಾದ ಶಕ್ತಿಯು ವೆಚ್ಚವಾಗಿ ಕಾನಡ ದೇಶವು ಖಾನ (ಡ) ದೇಶವಾಗಿರಲಿಕ್ಕೆ ಬೇಕು.

ಈ ವಿಷಯಕ್ಕೆ, ಇನ್ನೂ ಏನಾದರೂ ಅಲ್ಪಸ್ವಲ್ಪ ಸಂಶಯವು ಉಳಿದಿದ್ದರೆ ಇಲ್ಲಿಯ ಹಳೆಯ ಜನಾಂಗವಾದ ಕನ್ನಡರ ತಂಡವೂ ಖಾನ (ಡ) ದೇಶಕ್ಕೆ ಹತ್ತಿರದಲ್ಲಿಯೆ ಇರುವ ಕನ್ನಡ (ತಾಲೂಕ)ವೂ ಅದನ್ನು ಕಡಿಮೆ ಮಾಡುವವು. ಇನ್ನೂ ಅಲ್ಪಸ್ವಲ್ಪ ಉಳಿದುದನ್ನು ಶ್ರೀ ಮರಾಠೆ ಸಬಜಜ್‌ರೂ ವಿಲ್ಸನ್ ಸಾಹೇಬರೂ ಹೇಳುವ (ಕನ್ನಡರಿಗೆ ಪೂರ್ವ ಸಂಬಂಧಿಗಳಾದ) ಕಂಡರು, ಹೋಗಲಾಡಿಸುವರು. ಇದರಲ್ಲಿ ಇನ್ನು ಒಂದು ಸೊಗಸಿದೆ. ಕನ್ನಡ ಶಬ್ದದ ಮೂಲಸ್ವರೂಪವನ್ನು (ಶಬ್ದ ವ್ಯುತ್ಪತ್ತಿಯಿಂದ) ಅರಿತುಕೊಳ್ಳಲು ಈವರೆಗೆ ಆದ ಎಲ್ಲ ಪ್ರಯತ್ನಗಳಲ್ಲಿಯೂ ಸತ್ಯಾಂಶವಿದೆಯೆಂದು ಅನುಭವಕ್ಕೆ ಬರುತ್ತದೆ. ಬೇರೆ ಬೇರೆ ಸಂಶೋಧಕರಿಗೆ ಸ್ಫೂರ್ತಿಯ ಉತ್ಸಾಹದಲ್ಲಿ, ಪ್ರತಿಭೆಯ ತಿಳಿಬೆಳಕಿನಲ್ಲಿ ನವೋನವವಾಗಿ ಅವರವರಿಗೆ ಆದ 'ಕನ್ನಡ'ದ ದರ್ಶನವು ನಿಜವಿದೆ. ಅವರ ಕಾಣ್ಕೆಯಲ್ಲಿ ಕನ್ನಡದ ಒಂದೊಂದು ಅಂಗದ ಸೊಬಗು ಗೊತ್ತಾಗುತ್ತಿದೆ. ಕನ್ನಡನು 'ಕರುನಾಡುಗನ್' ಅಂದರೆ ಎತ್ತರದ ನಾಡಿನವನು, ಇದೂ ನಿಜ; ಏಕೆಂದರೆ ಮಲಯ (ಮಾಳವಾ)ದಿಂದ ಗೋದಾವರಿಯ ವರೆಗಿನ ನಾಡೆಲ್ಲವೂ ತಪ್ಪಲು, ಉನ್ನತ ಪ್ರದೇಶವೇ. ಕನ್ನಡವು 'ಕರಿನಾಡು' ಎಂಬುದೂ ಸುಳ್ಳಲ್ಲ. ಏಕೆಂದರೆ, ಆ ದೇಶದ ಮಲೆನಾಡು, ಸಮನಾಡುಗಳಲ್ಲಿ ಎಲ್ಲೆಡೆಗೂ ಕರಿ ನೆಲವೆ. ನಮ್ಮಲ್ಲಿಯಂತೆ ಕರಿ ಮತ್ತು ಕೆಮ್ಮಣ್ಣಿನ ಬೇರೆ ಬೇರೆ ಭೂಮಿಯೆ ಇಲ್ಲ. ಇದು ಕಮ್ಮಿತು ನಾಡು, ಸಿರಿಗಂಧದ ಕಟ್ಟಿಗೆಗಳ ನರುಗಂಪುವೊಗೆವ ನಾಡು, ಎಂಬುದಂತೂ ಸಂಸ್ಕೃತ ಸುಭಾಷಿತವೆ ಆಗಿದೆ. ಇಲ್ಲಿಯಷ್ಟು ಬಿಲ್ಲವರು (ಭಿಲ್ಲರು) ಇನ್ನಾವ ಭಾಗದಲ್ಲಿಯೂ ಇಲ್ಲ. ಮಲಯ (ಮಾಳ)ವೆಂದು ಇಲ್ಲಿಯ ಗುಡ್ಡಗಳಿಗೆ ಈಗಲೂ ಹೆಸರು.

ಹೀಗೆ ಯಾವ ದೃಷ್ಟಿಯಿಂದ ವಿಚಾರಿಸಿದರೂ ಇದೆ ನಿಜವಾದ ಕನ್ನಡವಿರಬೇಕೆಂಬ ಉತ್ತರವೆ ದೊರೆಯುವುದು. ಶ್ರೀಭಾಗವತದಲ್ಲಿ ಒಂದೆಡೆಗೆ ಬಂದ ಕರ್ಣಾಟದ ಉಲ್ಲೇಖವೂ ಇದಕ್ಕೆ ಪೋಷಕವಾಗಿದೆ. ಋಷಭಚರಿತ್ರೆಯನ್ನು ಹೇಳುವಾಗ ಅವನು ದಿಗಂಬರನಾಗಿ ಅಲೆದಾಡಿದ ನಾಡುಗಳ ಹೆಸರು ಬಂದಿವೆ.

> "ಏಕದಾತು ಕಾಂಕಟ ಕರ್ಣಾಟಕಾತ್ ದಕ್ಷಿಣ ಕರ್ಣಾಟಕಾನ್‌ದೇಶಾನ್
> ಯದೃಚ್ಛಯೋಪಗತಃ ಕುಟಚಾಚಲೋಪವನೇ........ ವಿಚಚಾರ"[೪೭]

ಇನ್ನೊಂದು ಪ್ರತಿಯಲ್ಲಿ 'ಕಾಂಕಟ ಕರ್ಣಾಟಕಾತ್' ಎಂಬುದರ ಬದಲು 'ಕೋಂಕವೇಂಕ ಕಟಕಾನ್ ದಕ್ಷಿಣ ಕರ್ಣಾಟಕಾನ್ ದೇಶಾನ್' ಎಂದು ಭಿನ್ನ ಪಾಠವಿದೆ. ಭಾಗವತಕ್ಕೆ 'ವಿಜಯಧ್ವಜೀ' ಎಂಬ ಒಂದು ಮಾಧ್ವಮತಾನುಸಾರಿಯಾದ ಟೀಕೆಯಿದೆ. ಉಳಿದ ಟೀಕಾಕಾರರು ಮೇಲ್ಕಾಣಿಸಿದ ಭಾಗಕ್ಕೆ ಶಬ್ದಾರ್ಥಕ್ಕಿಂತ ಹೆಚ್ಚಿಗೆ ಏನೂ ಹೇಳುವುದಿಲ್ಲ. ಆದರೆ, ವಿಜಯಧ್ವಜರು ದಕ್ಷಿಣ ಕರ್ಣಾಟವೆಂಬ ಶಬ್ದಕ್ಕೆ ಬರೆದ ಅರ್ಥವಿವರಣೆಯನ್ನು ಓದಿದರೆ ಅವರು ಆ ಪ್ರದೇಶವನ್ನೆಲ್ಲ ಅಲೆದಾಡಿ ಕಣ್ಣಾರೆ ಕಂಡು ಬರೆದಿರುವರೆಂಬ ಹಾಗೆ ಎನಿಸುತ್ತದೆ. ಶ್ರೀ ವಿಜಯಧ್ವಜರ ಚರಿತ್ರೆಯಲ್ಲಿ ಅವರು ತುಂಬಾ ಪ್ರವಾಸ ಮಾಡಿದುದಕ್ಕೆ ಆಧಾರಗಳು ದೊರೆಯುತ್ತವೆ.[೪೮] ಇವರು ಉಡುಪಿ ಪೇಜಾವರಮಠದ ಸ್ವಾಮಿಗಳು. ವ್ಯಾಸರಾಯರ ಸಮಕಾಲೀನರು (೧೬ನೆಯ ಶತಕ). ಇವರು ದೇಶಕಾಲಗಳ ಪ್ರತ್ಯಕ್ಷ, ಜ್ಞಾನವಿಲ್ಲದೆ ತಮ್ಮ ಮಠದ ಗುಹೆಯಲ್ಲಿ ಕುಳಿತುಕೊಂಡು ಗ್ರಂಥರಚನೆಯನ್ನು ಮಾಡಿದವರಲ್ಲ. ವಿಜಯಧ್ವಜರು ನೆಲ ನೀರುಗಳ ಮಾರ್ಗವಾಗಿ ಬಹಳ ದೂರಿನ ಪ್ರವಾಸ ಮಾಡಿದ್ದರು. ಈ ಪ್ರವಾಸಗಳಲ್ಲಿ ಆಶ್ರಮಧರ್ಮಕ್ಕನುಸರಿಸಿ ಇರುವುದು ಅಸಾಧ್ಯವಾಗಿದ್ದರಿಂದ ಕರ್ಮಹೀನತೆಯ ಪಾಪಪರಿಹಾರಕ್ಕಾಗಿ ಪ್ರಾಯಶ್ಚಿತ್ತವೆಂದು ಭಾಗವತ ಗ್ರಂಥಕ್ಕೆ ಟೀಕೆಯನ್ನು ಬರೆದರು. ಭಾಗವತದಲ್ಲಿ ಬಂದ ಈ ಪ್ರಾದೇಶಿಕ ವರ್ಣನೆಗಳಿಗೆ ಅರ್ಥ ಹೇಳುವಾಗ ಶಬ್ದಕ್ಕೆ ಪ್ರತಿಶಬ್ದವನ್ನಿಡದೆ ವಿಸ್ತರಿಸಿ ಬರೆದಿರುವಲ್ಲಿ ತಮ್ಮ ಪ್ರವಾಸದ ಅನುಭವಗಳನ್ನೂ ಬೆರೆಸಿರುವ ಹಾಗೆ ತೋರುತ್ತದೆ. ಈ ಭಾಗದ ಟೀಕೆಯಲ್ಲಿ ಶ್ರೀವಿಜಯಧ್ವಜರು ಬರೆದಿರುವುದೇನಂದರೆ:

> (ಋಷಭದೇವನು) ಕಾಂಕಟ ಕರ್ಣಾಟಕದಿಂದ ಅಂದರೆ ಭೀಮರಥಿಯ ನದಿಯ
> ನಾಡಿನಿಂದ ದಕ್ಷಿಣ ಕರ್ಣಾಟಕ್ಕೆ ಹೋದನು. ಅಲ್ಲಿ ಅಂದರೆ ದಕ್ಷಿಣ ಕರ್ಣಾಟದಲ್ಲಿ
> ನಾಗಪುರದ ಹತ್ತಿರದಲ್ಲಿದ್ದ...ಕುಟಚಾಚಲಪರ್ವತ....

ಎಂದು ಮುಂತಾಗಿ ಇದೆ.

ಶ್ರೀ ವಿಜಯಧ್ವಜರ ಅಭಿಪ್ರಾಯದಂತೆ ನಾಗರವು ದಕ್ಷಿಣ ಕರ್ಣಾಟದಲ್ಲಿದ್ದ ಹಾಗಾಯಿತು. ನಾಗಪುರವು ದಕ್ಷಿಣ ಕರ್ಣಾಟವಾದ ಬಳಿಕ ಉಜ್ಜಯಿನಿ (ಮಾಳವಾ) ಉತ್ತರ ಕರ್ಣಾಟದಲ್ಲಿ ಎಣಿಸಲ್ಪಡಬೇಕಾಯಿತು. 'ಕಾಂಕಟ ಕರ್ಣಾಟಕಾತ್' ಎಂಬ ಭಾಗಕ್ಕಿರುವ ಪಾಠಾಂತರವು ಮೊದಲಿಗಿಂತಲೂ ಈ ಮಾತನ್ನು ಇನ್ನೂ ಸುಸ್ಪಷ್ಟವಾಗಿ ಧ್ವನಿತಮಾಡುತ್ತಲಿದೆ. 'ಕೋಂಕ (ಕೊಂಕಣ), ವೇಂಕ (ವೆಂಗಿ), ಕಟಕ (ಒಡ್ಡಿಜಗನ್ನಾಥ, ಪುರಿ)ಗಳನ್ನು ಸುತ್ತಿಕೊಂಡು (ಋಷಭದೇವನು) ದಕ್ಷಿಣ ಕರ್ಣಾಟಕ್ಕೆ ಬಂದನು' ಎನ್ನುವಲ್ಲಿ ಕಟಕದಿಂದ ಒಮ್ಮೆಲೆ ದಕ್ಷಿಣ ಕರ್ಣಾಟ ಎಂದರೆ ಎಲ್ಲಿ? ಕಟಕ ಪ್ರಾಂತಕ್ಕೆ ಹತ್ತಿರದಲ್ಲಿರುವುದು ನಾಗಪುರಸೀಮೆ. ಆದುದರಿಂದ, ಶ್ರೀವಿಜಯ ಧ್ವಜರು, ಬೇರೆ ಪಾಠದಂತೆ ಸಹ ತಮ್ಮ ಟೀಕೆಯಲ್ಲಿ ಹೇಳಿದುದು ಇದಕ್ಕಿಂತ ಬೇರೆ ಏನೂ ಇಲ್ಲ. ಈ (ನಾಗಪುರ) ಪ್ರದೇಶವು ಒಂದಾನೊಂದು ಕಾಲಕ್ಕೆ ದಕ್ಷಿಣ ಕರ್ಣಾಟದಲ್ಲಿ ಎಣಿಸಲ್ಪಡುತ್ತಿದ್ದ ಪರಂಪರೆಯು ಭಾಗವತವನ್ನು ವಿರಚಿಸಿದವರಿಗೆ ಚೆನ್ನಾಗಿ ಗೊತ್ತಿರಲಿಕ್ಕೆ ಬೇಕೆಂಬುದು ಇದರಿಂದ ವ್ಯಕ್ತವಾಗುತ್ತದೆ. ಆ ಪರಂಪರೆಯನ್ನೆ ಪೂರ್ಣವಾಗಿ ಅರಿತುಕೊಂಡ ವಿಜಯಧ್ವಜರು ಆ ಮಾತನ್ನು ತಮ್ಮ ಟೀಕೆಯಲ್ಲಿ ಇನ್ನಷ್ಟು ವಿಶದೀಕರಿಸಿದ್ದಾರೆ.

ಮಾಧ್ವರಲ್ಲಿ ಹಿರಿಯರಿಂದ ಕೇಳಿ ಕೇಳಿ ಗೊತ್ತಿದ್ದ ಈ ಸಾಂಪ್ರದಾಯಿಕ ಕರ್ಣಾಟದ ಪರಿಚಯವು ಶಾಂಕರ ಪಂಥಿಗಳಿಗೂ ಇಲ್ಲದಿಲ್ಲ. ಇದು ಶ್ರೀ ರಾಜಪುರೋಹಿತರ ಕೇಸರಿ ಪತ್ರಿಕೆಯೊಳಗಿನ ಆರನೆಯ ಲೇಖದಲ್ಲಿ ಸ್ವಲ್ಪ ಬಂದಿದೆ. ಶ್ರೀ ಶಂಕರಾಚಾರ್ಯರು ಮಂಡನಮಿಶ್ರರ ಊರಿಗೆ ಹೋದರು ಎಂದು ಹೇಳುವಾಗ ಆನಂದಗಿರಿಯ ಶಂಕರವಿಜಯದಲ್ಲಿ ೫೭ನೆಯ ಪ್ರಕರಣದೊಳಗೆ ಹೀಗೆ ಹೇಳಿದೆ

'ವಿದ್ಯಾಲಯ ಮಿತಿ ಪ್ರಸಿದ್ಧಂ ತದ್ದೇಶವಾಸಿನಸ್ತು ಬಿಜ್ಜಳ ಬೀಡುರಿತಿವದಂತಿ।
ತತ್ಪುರಂ ಪ್ರಾಪುಃ।'

ಪುಂಡನ ಮಿಶ್ರನ ಊರು, 'ವಿದ್ಯಾಲಯ'ವೆಂದು ಪ್ರಸಿದ್ಧವಿದ್ದು ಆ ದೇಶದ ನಿವಾಸಿಗಳು (?) ಅದನ್ನು "ಬಿಜ್ಜಳ ಬೀಡು" ಎಂದು ಕರೆಯುತ್ತಾರೆ, ಎಂದು ಶ್ರೀ ಆನಂದಗಿರಿಗಳು ಬರೆಯುತ್ತಾರೆ. ಸಂಸ್ಕೃತ 'ವಿದ್ಯೆ' ತದ್ಭವ ಬಿಜ್ಜೆ ಆಯಿತು; ಆದರೆ ಬೀಡು ಏನು? ಬೀಡು ಅಚ್ಚಕನ್ನಡ ಶಬ್ದ. ಇದು ನರ್ಮದಾತೀರದ ಮಾಹಿಷ್ಮತೀ ನಗರಿಗೆ ಏಕೆ ಮತ್ತು ಹೇಗೆ? 'ತದ್ದೇಶವಾಸಿನಃ' 'ಬೀಡು' ಎಂದು ಹೇಳುತ್ತಾರಂತೆ! ತದ್ದೇಶವಾಸಿಗಳಲ್ಲದವರು ಹೊರಗಿನಿಂದ ಬಂದು ನಿಂತವರು ಆವೂರನ್ನು ಸಂಸ್ಕೃತ ಹೆಸರಿನಿಂದ ಕರೆಯುತ್ತಿರಬೇಕು. ತದ್ದೇಶವಾಸಿಗಳು ಮಾತ್ರ ಕನ್ನಡ ಹೆಸರಿನಿಂದ ಬಿಜ್ಜಳಬೀಡು ಎಂದು ಹೇಳುತ್ತಿರಬೇಕು. ಅಲ್ಲಿದ್ದ 'ಬೀಡು' ಕನ್ನಡದ ನೆಲೆವೀಡಿನ ಕುರುಹು ಆಗಿರಲಿಕ್ಕಿಲ್ಲವೆ?

ಶಾಂಕರ ಮತ್ತು ಮಾಧ್ವ ಎರಡೂ ಸಾಂಪ್ರದಾಯದವರಲ್ಲಿ ಆ ಭಾಗದ ಕರ್ಣಾಟದ ಸಂಬಂಧದಿಂದ ಇದ್ದ ಪರಂಪರಾಗತವಾದ ತಿಳುವಳಿಕೆಗೆ ಏನೂ ಬೆಲೆಯಿಲ್ಲವೆ? ಭಾಗವತದ ಆ ಉಲ್ಲೇಖದಿಂದ ಧ್ವನಿತವಾಗುತ್ತಿರುವುದಕ್ಕೆ ಏನೂ ಅರ್ಥವಿಲ್ಲವೆ? ಬೇರೆ ಪ್ರಮಾಣಗಳೊಂದಿಗೆ ಇವನ್ನೂ ಕೂಡಿಸಿ ವಿಚಾರಿಸಿದರೆ ಮೂಲ ಕರ್ಣಾಟವು ಇಲ್ಲಿಯೇ ಇರಬೇಕೆಂಬ ಮಾತು ದೃಢವಾಗುವುದು.

ಪುಂಡಾರಿ, ಕಂಡಾರಿ ಮತ್ತು ಮಲ್ಲಾರಿ

ಈ ಮೂವರೂ ವಿಂಧ್ಯದ ದಕ್ಷಿಣದಲ್ಲಿ ಆರ್ಯರಿಗೆ ನೆಲೆಯಾಗಲು ನೆರವಾದ ಮಹಾಪುರುಷರು, ಮಹೋಪಕಾರಿಗಳು. ಆದುದರಿಂದಲೆ ದೇವರಂತೆ ಪೂಜ್ಯರು. 'ಯದ್ಯತ್ ವಿಭೂತಿಮತ್ ಸತ್ವಂ' ಅದೆಲ್ಲವೂ ದೇವಾಂಶ; ಒಂದು ದೃಷ್ಟಿಯಿಂದ ಪ್ರತ್ಯಕ್ಷ ದೇವರು. ಆರ್ಯರ ಅಗ್ನಿ, ಇಂದ್ರ, ಮರುತರು ಮಾಯವಾಗಿ ಆ ಸ್ಥಳದಲ್ಲಿ ಪ್ರಕೃತ ಉಪಕಾರಿಗಳಾದ ಪಂಢರಿ, ಖಂಡೇರಾಯ, ಮಲ್ಲಾರಿಗಳು ಕುಲದೈವತಗಳಾದರು. ವಿಂಧ್ಯದ ಮೂಲನಿವಾಸಿಗಳು ಎಷ್ಟು ಪ್ರಬಲರಾಗಿದ್ದರೆಂಬುದನ್ನು ಈಗ ಸಹ ಊಹಿಸಬಹುದು. ಬಹಳ ಜಗಳಗಂಟರು, ಹೊಡದಾಟಕ್ಕೆ ಸದಾಸಿದ್ಧರು. ಏತಕ್ಕೂ ಹೆದರುವವರಲ್ಲ ಎಂಬರ್ಥದಲ್ಲಿ ಹಿಂದುಸ್ತಾನದ ಭಾಷೆಗಳಲ್ಲಿಯೆ ಏಕೆ

ಇಂಗ್ಲೀಷಿನಲ್ಲಿ ಸಹ ಸೇರಿರುವ ಗುಂಡ (ಗೊಂಡ), ಪುಂಡ (ಪುಂಢ್ರ), ಬೇಡ (ವ್ಯಾಧ) ಶಬ್ದಗಳೇ ಇದಕ್ಕೆ ನಿದರ್ಶನ. ಇಂತಹರನ್ನು ಹೊಡೆದಟ್ಟಿ ತಮ್ಮ ದಾರಿಯನ್ನು ಸುಖಕರವಾಗಿ ಮಾಡಿಕೊಳ್ಳಲು ಆರ್ಯರಿಗೆ ಎಷ್ಟು ತಾನೇ ಕಷ್ಟಗಳಾಗಿರಬಹುದು?

ಅಂಧಕಾಸುರ ವೈರಿ (ಅಂಧ್ರಧ್ವಂಸಿ), ಕರ್ಣಾಟ ರಾಕ್ಷಸ ಸಂಹಾರಕ, ದ್ರಾವಿಡಾರಿಗಳ ರೂಪದಲ್ಲಿ ದೇವರನ್ನು ಜಗುಲಿಯ ಮೇಲಿಟ್ಟು ಪೂಜಿಸುವುದು ಈಗ ಎಲ್ಲಯೂ ಕಾಣಬರುವುದಿಲ್ಲ. ಆದರೆ ಪುಂಡಾರಿ, ಕಂಡಾರಿ ಮತ್ತು ಮಲ್ಲಾರಿಗಳ ಪೂಜೆಯು ಮಾತ್ರ ಹಿಂದೆ ಬಿದ್ದಿಲ್ಲ. ಮೇಲಿನ ಮೂರು ದೇವತಾಸ್ವರೂಪರಾದ ಮಹಾಪುರುಷರಲ್ಲಿ ಪುಂಡಾರಿಯು ಎಲ್ಲಕ್ಕೂ ಪ್ರಾಚೀನನು. ಆದುದರಿಂದ ಆತನ ಹೆಸರು, ಆರಂಭದ ಗುರುತು ಸಹ ಸಿಕ್ಕದಷ್ಟು ಕಾಲಕಾಲಕ್ಕೆ ಮಾರ್ಪಾಟುಗಳನ್ನು ಹೊಂದಿದೆ. ಪುಂಡರೀಕ ಪಂಡರಿಯು ಕಂಡಾರಿ, ಮಲ್ಲಾರಿಗಳ ಮೇಲಿಂದ ಮೊದಲು ಪುಂಡಾರಿಯೆ ಆಗಿರಬೇಕೆಂದು ಒಡೆದು ಕಾಣುವುದು. ಪಂಢರಿಯ ಕ್ಷೇತ್ರವು ಅತಿ ಪ್ರಾಚೀನವೆಂದು ಖ್ಯಾತಿಯಿದೆ. ಪುಂಡಲೀಕನ ಪುಂಡತನವನ್ನು ತಗ್ಗಿಸಿ ದಾರಿಗೆ ತಂದವನೆಂದು ಈ ದೇವರಿಗೆ ಪುಂಡಲೀಕವರದನೆಂಬ ಹೆಸರೆಂದು ಪಂಢರಿಮಹಾತ್ಮ್ಯವು ಹೇಳುವುದು. ಇಲ್ಲಿ ವರ್ಣಿತನಾದ ಪುಂಡಲೀಕನು ಪುಂಢ್ರರು-ಪುಂಡರೆಂದು ಪ್ರಖ್ಯಾತಗೊಂಡ ತಂಡದವರ ಪ್ರತಿನಿಧಿಯಂತಿರಬೇಕು. ಈ ತಂಡದ ಪ್ರತಿನಿಧಿ ಸ್ವರೂಪದಲ್ಲಿ ಪುಂಢುಲೀಕ)ನ ತುಂಟತನವನ್ನು ಸೂಕ್ಷ್ಮವಾಗಿ ಹೇಳಿ 'ಪುಂಡಲೀಕವರದನು' ಆತನನ್ನು ಹೇಗೆ ದಾರಿಗೆ ತಂದನೆಂಬುದನ್ನು ಅಹಿಂಸಾತ್ಮಕ ರೀತಿಯಲ್ಲಿ ವರ್ಣಿಸಲ್ಪಟ್ಟಿರಬೇಕು. ಪುಂಡರು (ಪುಂಢರು) ಪ್ರಾಚೀನ ವಿಂಧ್ಯವಾಸಿಗಳಾದ ಕಾಡು ತಂಡಗಳಲ್ಲಿ ಒಬ್ಬರೆಂದು ಹೇಳುತ್ತಾರೆ. ವಿಂಧ್ಯದ ದಕ್ಷಿಣದಲ್ಲಿ ಒಂದು ಕಾಲಕ್ಕೆ ಪುಂಡರೆ ಪ್ರಬಲರಾಗಿರಬೇಕು. ಪ್ರಾಚೀನ ಪುನ್ನಾಟದೇಶವು ಈ ಜನಾಂಗದ ಕೊನೆಯ ಅವಶೇಷವೆಂದು ತೋರುತ್ತದೆ. ಪುನ್ನಾಡು-ಪುನ್ನಾಟ ಇದರೊಳಗಿನ ದೇಶವಾಚಕ ನಾಡು, ನಾಟ ಇವನ್ನು ತೆಗೆದರೆ 'ಪುಂ' ಎಂದು ಜನಾಂಗವಾಚಕ ಶಬ್ದ ಮೂಲವು ಉಳಿಯುವದು. ಆದರಿಂದ ಪುನ್ನಾಟವು ಪುಂಡರ ನಾಡು ಆಗಿರಬೇಕೆಂದು ಊಹಿಸಲು ಅವಕಾಶವಿದೆ.

ಪುಂಡಾರಿಯು ಈಗ ಪಾಂಡುರಂಗ, ವಿಠಲನೆಂದು ವಿಷ್ಣುಸ್ವರೂಪನಾದರೂ ಇವನಿಗೂ ಕಂಡಾರಿ ಮಲ್ಹಾರಿಗಳಂತೆ ಶಿವನ ಸಂಬಂಧವು ಇಲ್ಲದಿಲ್ಲ. ವಿಠ್ಠಲನ ತಲೆಯ ಮೇಲೆ ಶಿವಲಿಂಗವುಂಟೆಂದು ಜ್ಞಾನೇಶ್ವರ ರಾಮದಾಸಾದಿಗಳು ವರ್ಣಿಸಿದ್ದಾರೆ.[೪೯] ವಿಂಧ್ಯದ ಇನ್ನೊಂದು ತಂಡವೆಂದರೆ ಕನ್ದರು. ಇವರು ಕನ್ನಡ (ಕನ್+ ನಡ)ರ ಪೂರ್ವ ಸಂಬಂಧಿಗಳಾಗಬೇಕು. ಕನ್ದರನ್ನು ಅರಿದು ಹಣ್ಣುಮಾಡಿ ಹೊಸತಾಗಿ ಒಕ್ಕಲಾಗಲು ಮೇಲಿಂದ ಬಂದವರಿಗೆ ಅನುಕೂಲ ಮಾಡಿಕೊಟ್ಟ ಮಹಾಪರಾಕ್ರಮಶಾಲಿಯೇ ಕನ್ದಾರಿ, ಖಂಡೇರಾಯ; ಇವನು ಶಿವನ ಅವತಾರನೆಂದು ಆಗಿನ ಜನರು ಭಾವಿಸಿದ್ದರೆ ಸೋಜಿಗವಲ್ಲ; ಪರೋಪಕಾರಿಗಳಾದ ಮಹಾಪುರುಷರು ಶಿವ, ವಿಷ್ಣುಗಳ ಅವತಾರಗಳೇ. ಕಂಡಾರಿ ಎಂಬ ಹೆಸರಿನ, ಪ್ರಾಚೀನ ಕಟ್ಟಡಗಳುಳ್ಳ ದೇವಸ್ಥಾನಗಳು ಎರಡು ಕಡೆಗೆ ಇವೆ. ಒಂದು ಖಾನದೇಶ ಜಿಲ್ಹೆಯಲ್ಲಿ[೫೦] ಇನ್ನೊಂದು ಮಾಳವಾದ ನೆರೆಯ ಛತ್ರಪುರ ಸಂಸ್ಥಾನ ಖಜುರಾಹೋ ಎಂಬಲ್ಲಿ.[೫೧] ಇವೆ ಎರಡೂ ಶಿವಮಂದಿರಗಳೇ. ಇವೇ ಎರಡರ ಕಟ್ಟಡಗಳೂ ಸುಮಾರು ಹತ್ತನೆಯ ಶತಮಾನದವು. ಛತ್ರಪುರ ಕಡೆಯ ಕಂಡಾರಿಯ ದೇವಸ್ಥಾನದಲ್ಲಿ ಶಿವನು ಲಿಂಗರೂಪದಲ್ಲಿಯೂ ಉಂಟು. ಮನುಷ್ಯಾಕಾರದ ಮೂರ್ತಿಯಾಗಿಯೂ, ಉಂಟು ಕಂಡಾರಿಯೇ-ಕಾನ(ಡ) ದೇಶವು ಖಾನ(ಡ) ದೇಶವಾದಂತೆ ಖಂಡಾರಿ- ಖಂಡೇರಾಯ ಮತ್ತು ಖಂಡೋಬನಾಗಿ ಜನರಿಂದ ಪೂಜೆಗೊಳ್ಳುತ್ತಿದ್ದಾನೆ.

ವಿಂಧ್ಯದ ದಕ್ಷಿಣಕ್ಕೆ ಕಂಡರೂ ಗೊಂಡರೂ ಮೆರೆದ ಒಂದು ಕಾಲವುಂಟು. ಸಾವಿರಾರು ಊರುಗಳಿಗೆ ಮೊದಲು ಅಥವಾ ಕೊನೆಗೆ ಇರುವ ಕಂಡ, ಕಂದ, ಕುಂದ, ಕೊಂಡ, ಗುಂಡ, ಗೊಂಡ, ಗೊಂಡಿ ಎಂಬೀ ಬಗೆಯ ಶಬ್ದವು ವಿಂಧ್ಯದಿಂದ ನೀಲಗಿರಿಯ ವರೆಗೆ ಇವರು ಊರುಗಳನ್ನು ಕಟ್ಟಿಕೊಂಡು ಪ್ರಬಲರಾಗಿದ್ದುದನ್ನೇ ಸೂಚಿಸುತ್ತದೆ. ಕಂದಗಲ್ಲು, ಹುನಗುಂದ, ಕುಂದರಿಗಿ, ಕೊಂಡಗುಳಿ. ಕುಂದಾಪುರ, ನರಗುಂದ, ಕ್ಯಾಲಕೊಂಡ, ಬಲಕುಂದಿ, ಕಂಡವ (ಖಾಂಡವಾ), ಗೊಂಡಾಲ, ಕಂಡರಹಟ್ಟಿ (ಗೋಕಾಂವಿ ಹತ್ತರ)..... ಕಂಡರ ಇನ್ನೊಂದು ಅವತಾರವೆ ಕನ್ನಡರು. ಇವರ ವಿಕಾಸಕ್ರಮವನ್ನು ಸಾಧಾರಣವಾಗಿ ಹೀಗೆ ಹೇಳಬಹುದು: ಇವರು ಮೊದಲು

ಮಲೆಯರು; ಬಳಿಕ ಕುರುಂಬರು; ಆ ಮೇಲೆ ತುರುಕಾರರು. ತುರುಕಾರರ ಅವಸ್ಥೆಯ ವರೆಗೆ ವಿಕಾಸವಾದ ಸುಮಾರಿಗೆ ಉತ್ತರದ ನಾಡಿನವರಿಗೂ ಇವರಿಗೂ ಸಂಘರ್ಷಣ, ಸಂಬಂಧಗಳು ಉಂಟಾಗಿರಬೇಕು. ಏಕೆಂದರೆ ಕುರುಂಬ ಶಬ್ದದೊಳಗಿನ ಕೊನೆಯ 'ಬ' ಪ್ರತ್ಯಯವು ಆರ್ಯಭಾಷೆಯ ಸಂಪರ್ಕವು ಕನ್ನಡಕ್ಕೆ ಆಗುವ ಮೊದಲಿನದು. ಆರ್ಯರ ಗಾಳಿ ಸುಳಿಯುವ ಮೊದಲೆ ಆ ಶಬ್ದವು ರೂಢಿಯಲ್ಲಿ ಬಂದಿರಬೇಕು. ತುರುಕಾರ (ಗೋವಳ) ಇದರೊಳಗಿನ ಕೊನೆಯ ಕಾರದ ಮೋರೆಯ ಮೇಲೆ ಸಂಸ್ಕೃತದ ಗುರುತು (ಕೃ-ಕರ-ಕಾರ) ಇದೆ. ತುರುಕಾರರು ಗೋವಳರೆನಿಸಿದರು. ಗೋವಳರು ಯಾದವ ವಂಶದವರಾದರು. ಯಾದವರು ಸೂರ್ಯಚಂದ್ರರಿಂದ (ಮುಗಿಲಿ ನಿಂದ) ಇಳಿದು ಬಂದವರು. ಆಯಿತು; ಭೂಲೋಕದ ಸಂಬಂಧವು ತಪ್ಪಿತು. ದೇವಗಿರಿ, ಹಳೇಬೀಡುಗಳಲ್ಲಿ ಆಳಿ ಅದೃಶ್ಯರಾದರು. ಇಂದೂರ ಮಹಾರಾಜರು ನಿಜವಾಗಿ ಧನಗರ (ತುರುಕಾರ) ಕುಲದವರು. (ಕಂಡಾರಿ) ಖಂಡೇರಾಯನ ಹೆಸರು ಇವರ ಮನೆತನದಲ್ಲಿ ತಲೆ ತಲಾಂತರಗಳಿಂದ ನಡೆದು ಬಂದಿದೆ.

ಮಲೆ (ಮಾಳವಾ)ಗಳಲ್ಲಿ ವಾಸವಾಗಿ ತುಂಟತನ ಪುಂಡಾಟಿಕೆ ನಡೆಸಿದ ಮಲೆಯರನ್ನು-ಮಲ್ಲರನ್ನು ಬಗ್ಗಿಸಿದವನು ಮಲ್ಲಾರಿ. 'ಮಲೆವರ ಮಾರ್ತಾಂಡ.' ಮಲ್ಲಾರಿ ಇದನ್ನು ಸಂಸ್ಕೃತಕ್ಕೆ ಸಮೀಪವೆನಿಸುವಂತೆ ಮುಂದೆ ಮಲ್ಹಾರಿ ಮಾಡಿಕೊಂಡುದಾಯಿತು. ಮಲ್ಲಾರಿ ಹೆಂಡತಿ ಮಾಳವ್ವೆ. ಮಾಳವ್ವೆ ಸಂಸ್ಕೃತದಲ್ಲಿ ಮ್ಹಾಳಸಾದೇವಿ ಯಾದಳು. ಮ್ಹಾಳಸಾ-ಮಾರ್ತಾಂಡನು ಸಾವಿರಾರು ಬ್ರಾಹ್ಮಣ ಮನೆತನಗಳ ಕುಲದೈವತವು. ಈ ದೇವರು ಮಣಿಮಲ್ಲಾಸುರನನ್ನು ಸಂಹರಿಸಿದ ಕಥೆಯು ಆ ದೇವರ ಪುರಾಣದಲ್ಲಿದೆ. ಇವನಿಗೆ ಏಳುಕೋಟಿ ಭಕ್ತಗಣ. ಏಳುಕೋಟಿ ಎಂಬಲ್ಲಿ ಕೋಟಿ ಶಬ್ದಕ್ಕೆ ಅಸಂಖ್ಯವೆಂದಿಷ್ಟೆ ಅರ್ಥ. ಮಹಾರಾಷ್ಟ್ರದಲ್ಲಿರುವ ಈ ದೇವರ ಮುಖ್ಯ ದೇವಸ್ಥಾನಗಳಲ್ಲಿ ಸಹ 'ಏಳು ಕೋಟಿ' ಎಂಬುದನ್ನು ಮರ್ಹಾಟಿಗಳಿಗೆ ಅರ್ಥವಾಗಲಿ ಆಗದಿರಲಿ ಅವರು ಘನಗರ್ಜನೆಯಿಂದ ಉದ್ಘೋಷಿಸಲೇಬೇಕು! ಇದೇ ಬಗೆಯ ಇನ್ನೂ ಕೆಲವು ಪೂಜಾವಿಧಿಗಳೊಳಗಿನ ಕನ್ನಡ ಅವಶೇಷಗಳನ್ನು ನೋಡಿದರೆ ಈ ದೇವರ ಮೂಲ ಆರಾಧಕರು ಕನ್ನಡರಿರಲಿಕ್ಕೇಬೇಕೆಂದು ತನ್ನ ತಾನೆ ಸಿದ್ಧವಾಗುತ್ತಿದೆ.

ಮಲ್ಹಾರಿ ಮಾರ್ತಾಂಡನೂ ಶಿವನ ಅವತಾರವಂತೆ; ಕಂಡಾರಿ (ಖಂಡೇರಾಯನು) ಶಿವನ ಅವತಾರವೇ. ಆ ಮೇಲೆ ಎರಡೂ ದೇವರ ಸಮನ್ವಯವಾಗಲಿಕ್ಕೆ ಏನು ತಡ? ರಾಮ ಮತ್ತು ಪರಶುರಾಮರಂತೆ ಹಲವೆಡೆಗಳಲ್ಲಿ ಮಲ್ಹಾರಿ, ಖಂಡೋಬಗಳ ತಳಕು ಬಿದ್ದುದು ಕಂಡುಬರುವುದಕ್ಕೆ ಇದೆ ಕಾರಣ. ಈ ಮೂರು ದೇವರುಗಳ ಭಕ್ತಕೋಟಿಯಲ್ಲಿ ಕನ್ನಡರು ಪ್ರಮುಖರಾಗಿದ್ದಾರೆ. 'ವಿಠ್ಠಲ ಕರ್ಣಾಟಕು' 'ಕಾನಡಾ ಹೋ ವಿಠ್ಠಲ ಕಾನಡಾ' ಎಂದು ಮುಂತಾಗಿ ಜ್ಞಾನೇಶ್ವರ, ಏಕನಾಥ ಮೊದಲಾದ ಮರ್ಹಾಟಿ ಸಾಧುಸಂತರು ಹೇಳುವರು. ಕಂಡಾರಿ (ಖಂಡೇರಾಯ) ಮಲ್ಹಾರಿಗಳು ಕನ್ನಡ ವೀರದೇವರೆಂಬ ಬಗ್ಗೆ ಸಂಶಯವೇ ಇಲ್ಲ. ಮರ್ಹಾಟ ಮಹಾರಾಷ್ಟ್ರದ ಜನಗಳಿಗೂ ಇವು ಕುಲದೈವತಗಳು. ಜ್ಞಾನೇಶ್ವರರ ಮನೆತನದ ದೇವರು ಏಳುಕೋಟಿ ಭಕ್ತಗಣವುಳ್ಳ ಮ್ಹಾಳಸಾ ಮಾರ್ತಾಂಡನು ಜ್ಞಾನೇಶ್ವರರ ಇಷ್ಟದೈವತ ಪುಂಡರಿಯು-ಪಂಢರಿಯು.

ಕರ್ಣಾಟದಲ್ಲಿ ಆಗಿಹೋದ ಪ್ರಾಚೀನಕಾಲದ ಒಂದೊಂದು ಜನಾಂಗವು ಒಂದೊಂದು ಕುರುಹು ಬಿಟ್ಟು ಹೋಗಿದೆ. ಮಲೆಯರ ನೆನಹು ಮಲ್ಲವಿದ್ಯೆಯಲ್ಲುಳಿದಿದೆ. ಗರುಡರ ಗುರುತು ಗರುಡಿಗಳಲ್ಲಿ; ನಾಗರು ನಾಗಪುರ, ನಾಗಪಟ್ಟಣ, ನಾಗನೂರು, ನಾಗಲಾವಿ, ನಾಗರಾಳ ಮುಂತಾದ ಹೆಸರಿನ ಊರುಗಳನ್ನು ಬಿಟ್ಟಿರುವರು. ನಾಗರನ್ನು ಹೊಡೆಯಲು ಶಿವನ ಅವತಾರವಾಗಲಿಲ್ಲ. ಏಕೆಂದರೆ ಶಿವನ ಪ್ರೀತಿಯ ವಸ್ತು ಹಾವು. ಗರುಡರು ಬಂದು ನಾಗರನ್ನು ನಿರ್ಮೂಲ ಮಾಡಿದರು. ಇವೆರಡೂ ಜನಾಂಗಗಳು ಈಗ ಅಸ್ಪೃಶ್ಯರಲ್ಲಿ ಒಳಗೊಂಡಿರಬೇಕೆಂದು ಕೆಲವರು ತರ್ಕಿಸುತ್ತಾರೆ. ಕಂಡಾರಿಯ ದೇವಸ್ಥಾನಗಳಂತೂ ವಿಂಧ್ಯ ನರ್ಮದೆಗಳ ನಾಡಿನಲ್ಲಿ. ಮಲ್ಹಾರಿಮಾರ್ತಾಂಡ ಖಂಡೋಬಗಳ ಮೂಲ ದೇವಸ್ಥಾನಗಳು ಈಗ ಮಹಾರಾಷ್ಟ್ರವೆನಿಸುವ ಭಾಗದಲ್ಲಿಯೇ ಇವೆ. ಜೊಜೂರಿ ಮೊದಲಾದುವೆ ಇದಕ್ಕೆ ಸಾಕ್ಷಿ. ಏಳುಕೋಟಿ ಎಂದು ಹೊಗಳಿಸಿಕೊಳ್ಳುವ ಈ ದೇವರಂತೂ ಕನ್ನಡನು. ಕುರುಂಬರ ದೇವರು ಬೀರಣ್ಣ (ವೀರ); ಈ ವೀರಪುರುಷನು ಮಲ್ಲಾರಿ, ಕಂಡಾರಿಯಲ್ಲದೆ ಬೇರೆ ಯಾರೂ ಅಲ್ಲ. ವಗ್ಗಯ್ಯ (ವ್ಯಾಘ್ರಯ್ಯ)ರಾಗಿ ಕುರುಬರೆಷ್ಟೊ ಮಲ್ಲಾರಿ ದೇವರ ಅನುಯಾಯಿಗಳಾಗಿರುತ್ತಾರೆ. ಕಂಡರನ್ನೂ ಮಲೆಯರನ್ನೂ

ಹಿಡಿತದಲ್ಲಿ ತಂದು ಕನ್ನಡರಿಗೆ ನಾಡಿನಲ್ಲಿ ಬಾಳಿ ಬದುಕಲು ಅನುಕೂಲ ಮಾಡಿಕೊಟ್ಟ ವೀರ ಪುರುಷರನ್ನು-ಕಂಡಾರಿ ಮಲ್ಹಾರಿಗಳನ್ನು ಪೂಜಿಸುವ ಕನ್ನಡರು ಮೊದಲು, ಮೊಟ್ಟಮೊದಲು ಕಂಡರೂ ಮಲೆಯರೂ ಇದ್ದ ನಾಡಿನ ನೆರೆಹೊರೆಯಲ್ಲಿಯೇ ಇರಬೇಕಾಯಿತಷ್ಟೆ? ಆದುದರಿಂದ, ಈ ಬಗೆಯಾಗಿ ವಿಚಾರಿಸಿದರೂ ಮೂಲ ಕನ್ನಡವು ನರ್ಮದಾ ತೀರವೆಂದೇ ಗೊತ್ತಾಗುತ್ತದೆ.

ಆಳಿದ ಅರಸರು

ಈ ನಾಡಿನಲ್ಲಿ ಆಳಿದ ಅರಸರಿಗೂ ಕನ್ನಡಕ್ಕೂ ಯಾವ ಸಂಬಂಧವಿತ್ತೆಂಬುದನ್ನಷ್ಟು ಅರಿತುಕೊಳ್ಳುವುದು ಅವಶ್ಯವಿದೆ. ಇದೂ ಸಹ ಈ ವಿಚಾರದಲ್ಲಿ ಸ್ವಲ್ಪ ಬೆಳಕನ್ನು ಕೊಡದೆ ಇರಲಾರದು.

ಈ ನಾಡು ಕ್ರಿಸ್ತ ಪೂರ್ವ ನಾಲ್ಕನೆಯ ಶತಮಾನದಲ್ಲಿ ಆಳಿದ ಮೌರ್ಯ ಚಂದ್ರಗುಪ್ತನ ಸಾಮ್ರಾಜ್ಯದ ಒಂದು ಭಾಗವಾಗಿತ್ತು. ಈ ಮಹಾರಾಜನು ಕೊನೆಗೆ ಜೈನಧರ್ಮವನ್ನು ಸ್ವೀಕರಿಸಿ ಕರ್ಣಾಟ ಮಹಾಮಂಡಳದಲ್ಲಿ ಅತಿ ವಿಖ್ಯಾತ ಜೈನಕ್ಷೇತ್ರವಾದ ಶ್ರವಣಬೆಳಗೊಳಕ್ಕೆ ಬಂದು ಅಲ್ಲಿಯೇ ತನ್ನ ದೇಹವನ್ನು ಮುಡಿಪಿದ ಹಾಗೆ ಕಥೆಯಿದೆ. ಅಶೋಕನು ಈ ಕರ್ಣಾಟ ಮಹಾಮಂಡಳದ ಬೇರೆ ಬೇರೆ ದೇಶಗಳಿಗೆ ಬೌದ್ಧ ಧರ್ಮೋಪದೇಶಕರನ್ನು ಕಳುಹಿದ ಉಲ್ಲೇಖಗಳಿವೆ. ಆದರೆ, ಕರ್ಣಾಟದ ಹೆಸರು ಮಾತ್ರ ಇನ್ನೂ ದೊರೆತಿಲ್ಲ! ಶಹಾಬಾಜ ಗಡಿಯ ಅಶೋಕನ ಶಾಸನದಲ್ಲಿ 'ನನ್ನ ನೆರೆಹೊರೆಯಲ್ಲಿ ರಾಷ್ಟಿಕ, ಪಿಟಣಿಕರ ರಾಜ್ಯಗಳಿವೆ' ಎಂದಿದೆ. ರಾಷ್ಟಿಕರು (ಕನ್ನಡ) ನಾಡವರು; ಪಿಟಣಿಕ (ಪೈಠಣಿಕ)ರು ಕನ್ನಡರೆ ಇರಲಿಕ್ಕೆ ಬೇಕೆಂಬುದು ನಿಶ್ಚಿತ. ಏಕೆಂದರೆ ೧೩ನೆಯ ಶತಮಾನದ ಮರ್‍ಹಾಟಿ ಕವಿಗಳ-ಜ್ಞಾನೇಶ್ವರಾದಿಗಳ ಗ್ರಂಥಗಳು-ಪೈಠಣ ಭಾಷೆಯಲ್ಲಿ ಕನ್ನಡವು ಎಷ್ಟು ಇದ್ದಿತೆಂಬುದಕ್ಕೆ ಮೂರ್ತಿಮಂತ ದೃಷ್ಟಾಂತಗಳಾಗಿವೆ. ಇದೆಲ್ಲ ನಿಜವಿದ್ದರೂ ಕರ್ಣಾಟದ ಪ್ರತ್ಯಕ್ಷ ಹೆಸರು ಮಾತ್ರ ಇಲ್ಲ! ಮಹಾರಾಷ್ಟ್ರದ ಹೆಸರು ಸಹ ೬ನೆಯ ಶತಕದ ವರೆಗೆ ದೊರೆಯುವದಿಲ್ಲ. ಅದು ಕ್ರಿ. ಶ. ಕ್ಕೆ ಮೊದಲು ೩ನೆಯ ಶತಮಾನದಲ್ಲಿ ಎಲ್ಲಿಯದು? ಅಂತೂ ಈ ಸಂಧಿಕಾಲದಲ್ಲಿ ಉತ್ತರದ ವಸಾಹತುಗಾರರ ಪ್ರಾಬಲ್ಯದಿಂದ ಈ ನಾಡಿಗೆಲ್ಲವೂ ಯಾವ ಹೆಸರಿನಿಂದ ಕರೆಯಬೇಕು ಎಂಬ ತೊಡಕು ಬಿದ್ದಿರಬೇಕು; ಕನ್ನಡವೆಂದು ಕರೆವ ಇಚ್ಛೆ ಇರಲಿಕ್ಕಿಲ್ಲ; ಮತ್ತೊಂದು ಹೆಸರು ಇನ್ನೂ ಪ್ರರೂಢವಾಗಿದ್ದಿಲ್ಲವೆಂದೇ ಊಹಿಸಬೇಕಾಗುತ್ತದೆ.

ಕ್ರಿ.ಶ. ಕ್ಕೆ ಮುಂಚೆ ೨೦೦ ವರುಷಗಳಿಂದ ಕ್ರಿ. ಶ. ೨೨೫ ವರೆಗೆ ಈ ನಾಡಿನಲ್ಲಿ ಆಳಿದ ದೊಡ್ಡ ಅರಸು ಮನೆತನವೆಂದರೆ ಸಾತವಾಹನರದು. ನಾಸೀಕದ ಹತ್ತಿರ (ಗೋವರ್ಧನಗಿರಿಯಲ್ಲಿ) ಇವರ ಕಾಲಕ್ಕಾದ ಗವಿಗಳು, ಕಲ್ಬರೆಹಗಳು ಉಂಟು. ಅವುಗಳಲ್ಲಿ ವಾಸಿಷ್ಠಿ ಪುತ್ರ 'ಸಿರಿ ಪುಳುಮಯಿ' ಗೌತಮೀ ಪುತ್ರ 'ಸಾತಕರ್ಣಿ' ಮೊದಲಾದ ಅರಸರು ಪ್ರಾಕೃತದಲ್ಲಿ ಬರೆಯಿಸಿದ ಶಾಸನಗಳಿವೆ. ಈ ಶಾಸನಗಳಲ್ಲಿ ಒಂದರಲ್ಲಿ ಒಬ್ಬ ರಾಜನೂ ತನಗೆ ಆಂಧ್ರನೆಂದುಕೊಂಡಿಲ್ಲ. ಈ ಸಾತವಾಹನ ರಾಜರಿಗೆ ಆಂಧ್ರರು-ಆಂಧ್ರಭೃತ್ಯರು ಎಂದು ಹಲವರು ಹೇಳುವರು! ಈ ಬಗೆಯ ಭ್ರಮೆಯುಂಟಾಗಲಿಕ್ಕೆ ಪುರಾಣಗಳೆ ಮುಖ್ಯಕಾರಣ. ಪುರಾಣಗಳಲ್ಲಿ ಈ ರಾಜರ ಬಗ್ಗೆ ಬಂದ ಐತಿಹ್ಯದಲ್ಲಿಯೆ ಪರಸ್ಪರ ವಿರೋಧವಿದೆ. ಅಲ್ಲದೆ, ಈ ಮೊದಲೆ ವಿಶದಪಡಿಸಿದ ಮೇರೆಗೆ ಸಾಮಾನ್ಯವಾಗಿ ಆಂಧ್ರವೆಂಬ ಹೆಸರು ದಕ್ಷಿಣಾಪಥಕ್ಕೆ. ಸಾತವಾಹನರು ಆ ಕಾಲಕ್ಕೆ ದಕ್ಷಿಣಪಥದ ಅರಸರು. ಆದುದರಿಂದಲೆ ಇವರಿಗೆ ಆಂಧ್ರರಾಜರೆಂಬ ಹೆಸರು ಬಂದಿರಲಿಕ್ಕೆ ಸಾಕು. ಆದಕಾರಣ ಸಾತವಾಹನರು 'ಆಂಧ್ರರು' ಎಂದರೆ ತೆಲುಗು ನಾಡಿನವರು; ತೆಲಗು ಮಾತಿನವರು ಎಂದು ಯಾರಾದರೂ ಭಾವಿಸಿದ್ದರೆ ಅದು ನಿರಾಧಾರವಾದುದು.

ಶ್ರೀಮಾನ್ ಪಿ. ಟಿ. ಶ್ರೀನಿವಾಸ ಅಯ್ಯಂಗಾರ್ಯರು 'Misconception about the Andhras' ಎಂಬ ಲೇಖನದಲ್ಲಿ ಆಂಧ್ರರ ಭಾಷೆ ತೆಲಗು ಇದ್ದಿಲ್ಲ; ಪ್ರಾಕೃತವಿರಬೇಕು[೫೨] ಎಂದು ಪ್ರತಿಪಾದಿಸಿರುವರಂತೆ. ಶ್ರೀ ಅಯ್ಯಂಗಾರ್ಯರ ಅಭಿಪ್ರಾಯದಲ್ಲಿ ಅರ್ಧಮಾತ್ರ ಸರಿಯಿದೆ. ಸಾತವಾಹನರ ಮಾತು ತೆಲಗು ಇದ್ದಿಲ್ಲವೆಂಬುದು

ನಿಜ. ಆದರೆ ಪ್ರಾಕೃತವಿತ್ತೆಂದು ಅವರು ಹೇಳುವುದು ಮಾತ್ರ ಸಂಶಯಾಸ್ಪದ. ಸಾತವಾಹನರ ಮಾತು ಎಂದರೆ ಆ ಅರಸು ಮನೆತನದವರು ತಮ್ಮ ತಮ್ಮೊಳಗೆ ಮಾತಾಡುವ ಭಾಷೆ' ಎಂದಿಷ್ಟೇ ಅರ್ಥವಿದ್ದರೆ ಶ್ರೀ ಅಯ್ಯಂಗಾರ್‍ಯರ ಅಭಿಪ್ರಾಯವು ಸರಿಯಿದ್ದರೂ ಇರಬಹುದು. ಆದರೆ, ಸಾತವಾಹನರು ಆಳಿದ ನಾಡಿನ ಜನಸಾಮಾನ್ಯರ ನುಡಿಯು ಮಾತ್ರ ಪ್ರಾಕೃತವೆಂದೂ ಇದ್ದಿಲ್ಲ. ಇದಕ್ಕೆ ಹನ್ನೊಂದು-ಹನ್ನೆರಡನೆಯ ಶತಮಾನದಲ್ಲಿ ಆ ಭಾಗದಲ್ಲಿ ಆಳಿದ ದೇವಗಿರಿಯಾದವರ ಇತಿಹಾಸವೇ ಸಾಕ್ಷಿ. ಇಲ್ಲಿಯ ಜನಸಾಮಾನ್ಯರ ಭಾಷೆ ಪ್ರಾಕೃತವೆ ಆಗಿದ್ದರೆ ದೇವಗಿರಿ ಯಾದವರ ಕಾಲಕ್ಕೆ ಮಹಾದೇವ ಮತ್ತು ರಾಮದೇವನು ಪಟ್ಟಕ್ಕೆ ಬರುವ ವರೆಗೂ (೧೨೬೦-೧೨೭೧) ಅವರ ಓಲಗದಲ್ಲಿ ಕನ್ನಡವು ರಾಜಭಾಷೆಯಾಗಿರುವುದೆ ಸಾಧ್ಯವಿದ್ದಿಲ್ಲ. ಈ ಯಾದವರ ಎಲ್ಲ ಶಾಸನಗಳೂ ಕನ್ನಡದಲ್ಲಿ. ಸಂಸ್ಕೃತದೊಳಗೂ ಕೆಲವಿವೆ. ಆದರೆ, ಸಾಮಾನ್ಯವಾಗಿ ಕನ್ನಡದಲ್ಲಿಯೇ ಎಲ್ಲ. ಸಾತವಾಹನ ಕಾಲಕ್ಕೆ ಆ ನಾಡಿನ ಭಾಷೆ ಅಯ್ಯಂಗಾರ್‍ಯರು ಹೇಳುವಂತೆ ಪ್ರಾಕೃತವಿದ್ದರೆ ಆ ಪ್ರಾಕೃತ ಭಾಷೆಯು, ಮುಂದಿನ ಅರಸರ ಕಾಲದ ಶಾಸನಗಳಲ್ಲಿಯೂ (ಆಯಾ ಕಾಲಕ್ಕೆ ಮಾರ್ಪಾಟು ಹೊಂದಿದ ರೀತಿಯಲ್ಲಿಯೆ) ಇಳಿದು ಬರಬೇಕಾಗಿತ್ತು. ಆದರೆ, ನಿಜಸ್ಥಿತಿಯು ಹಾಗಿಲ್ಲ. ಎರಡನೆಯ ಪುಲಿಕೇಶಿಯು ಬಾದಾಮಿ ಐಹೊಳೆ ಶಾಸನವನ್ನು ಸಂಸ್ಕೃತದಲ್ಲಿ ಬರೆಯಿಸಿದನೆಂದು ಆತನ ಭಾಷೆ ಅಥವಾ ಆತನು ಆಳಿದ ನಾಡಿನ ಭಾಷೆ ಸಂಸ್ಕೃತವಿದ್ದಿತೆಂದು ಊಹಿಸುವುದು ಸರಿಯಾಗಲಾರದು. ಇಷ್ಟೆಲ್ಲ ಏತಕ್ಕೆ? ಪ್ರಾಕೃತಕ್ಕೂ ಮರ್‍ಹಾಟಿಗೂ ತಾಯಿಮಗಳ ಸಂಬಂಧ ವುಂಟೆಂದು ಹೇಳುವ ಮಹಾರಾಷ್ಟ್ರ ವಿದ್ವಾಂಸರಲ್ಲಿ ಸತ್ಯವನ್ನು ಸ್ಮರಿಸಿ ತಮ್ಮ ಅಭಿಪ್ರಾಯಗಳನ್ನು ಹೇಳಬೇಕೆಂದು ವಿವೇಕವನ್ನು ಇಟ್ಟುಕೊಂಡಿರುವ ಪ್ರೊ. ಕುಲಕರ್ಣಿ, ಶ್ರೀ ಸಿಂಧೇ ಪ್ರಭೃತಿಗಳಿಗೂ ಆ ನಾಡಿನ ಜನಸಾಮಾನ್ಯರ ಭಾಷೆಯು ಪ್ರಾಕೃತವಿದ್ದಿತೆಂದು ಎನಿಸುವದಿಲ್ಲ. ಪ್ರೊ. ಕುಲಕರ್ಣಿಯವರಂತೂ 'ಆಂಧ್ರರೇನು, ಆಂಧ್ರಭೃತ್ಯರೇನು ಕನ್ನಡದ ಕಡುಕೈವಾರಿಗಳೇ ಆಗಿದ್ದರು' ಎಂದು ನಿಶ್ಚಯಾತ್ಮಕವಾಗಿ ಹೇಳಿದುದು ಹಿಂದೊಮ್ಮೆ ಬಂದಿದೆ. ಆದುದರಿಂದ, ಸಾತವಾಹನರು ಕನ್ನಡರೇ ಆಗಿದ್ದರೆಂದು ಹೇಳಲು ಅಡ್ಡಿಯಿಲ್ಲ. ಆರ್ಯರ ವರ್ಚಸ್ಸಿನ ಮೂಲಕ ದಕ್ಷಿಣದಲ್ಲಿ ಸಂಸ್ಕೃತವು ಒಂದು ಕಾಲಕ್ಕೆ ಮನ್ನಣೆಯನ್ನು ಹೊಂದಿದಂತೆ ಸಾತವಾಹನರ ಕಾಲದಲ್ಲಿ, ಬೌದ್ಧಯುಗದಲ್ಲಿ (ಬೌದ್ಧರ ಪವಿತ್ರ ಭಾಷೆಯಾದ) ಪ್ರಾಕೃತಕ್ಕೆ ಎಲ್ಲೆಲ್ಲಿಯೂ ಮರ್ಯಾದೆ ಸಲ್ಲುತ್ತಿದ್ದುದು ಸ್ವಾಭಾವಿಕವೇ ಸರಿ. ಈ ಕಾರಣದಿಂದಲೇ ಸಾತವಾಹನರ ಶಾಸನಗಳು ಪ್ರಾಕೃತದಲ್ಲಿರಬಹುದೇ ಹೊರತು ಅವರ ನಿಜವಾದ ಭಾಷೆಯೂ ಪ್ರಾಕೃತವಿರಲಾರದು. ಸಾತವಾಹನರ ಹೆಸರುಗಳಲ್ಲಿ ಕೆಲವು, ಈ ಊಹೆಗೆ ಬೆಂಬಲವನ್ನೀಯುತ್ತವೆ. ಸಾತವಾಹನರಲ್ಲಿ ಪುಲಿಮಯಿ ಹೆಸರಿನ ನಾಲ್ವರು ಅರಸರಾದರು. ಹಾಲನೆಂಬವನೊಬ್ಬನು. ಸ್ವಲ್ಪ ದಿಟ್ಟಿಸಿ ನೋಡಿದರೆ ಈ ಹೆಸರುಗಳಲ್ಲಿ ಕನ್ನಡತನವು ಗೋಚರವಾಗುವುದು.

ಪುಲಿಮಯಿ ಎಂದರೇನು? ಇದೇನು ಸಂಸ್ಕೃತ ಶಬ್ದವಲ್ಲ. ಯಾವ ಭಾಷೆಯಿಂದಲೂ ಅರ್ಥವಾಗದ ನಿರರ್ಥಕ ಹೆಸರುಗಳನ್ನು ಮಹಾಸಾಮ್ರಾಟರೆನಿಸುವ ರಾಜರು ತಮ್ಮ ಮಕ್ಕಳಿಗೆ ಎಂದಾದರೂ ಇಡುವುದುಂಟೆ? ಪುಲಿಮಯಿಗಳು ಮತ್ತೆ ಒಬ್ಬಿಬ್ಬರಲ್ಲ, ನಾಲ್ವರು! ಇಷ್ಟು ಲೋಕಪ್ರಿಯವಾದ ಇಷ್ಟು ಸ್ಫೂರ್ತಿದಾಯಕವಾದ ಈ 'ಪುಲಿಮಯಿ' ಅರ್ಥವೇನು? ಸಾತವಾಹನರಿಗೆ ಬೇರೆ ಈ ಪುಲಿಮಯಿಗಳ ಪರಂಪರೆ ಕಟ್ಟಾಗಲಿಲ್ಲ. ಚಲುಕ್ಯರಲ್ಲಿ ಲೋಕವಿಖ್ಯಾತರಾದ ಪುಲಿಕೇಶಿಗಳು ಇಬ್ಬರು. ರಾಜರು ತಾವಿಟ್ಟುಕೊಳ್ಳುವ ಅಥವಾ ತಮ್ಮ ಮಕ್ಕಳಿಗೆ ಇಡುವ ಹೆಸರುಗಳಲ್ಲಿ ಆವ ವಿಶೇಷಾರ್ಥವಿರುವುದುಂಟು? ಅರಸನಿಗೆ ಏನು ಹೇಳಿದರೆ ಅಚ್ಚುಮೆಚ್ಚು? ದಾನಶೌಂಡ, ವೀರವಿಕ್ರಮ, ಸಿಂಹೋರುಸತ್ವನೆಂದೇ ಅಲ್ಲವೆ! ಹಿಂದಕ್ಕೆ ಇವೇ ಅರ್ಥಗಳುಳ್ಳ ಅಚ್ಚಗನ್ನಡ ಹೆಸರುಗಳು ನಮ್ಮ ನಾಡಿನ ಅರಸರಿಗೆ ಇದ್ದುವು. ಎರೆಗ, ಇರಿವ, ಬೆಡಂಗ, ಹುಲಿಮೆಯ್ಯ (ಪುಲಿಮಯಿ-ಪುಲಮಾಯಿ) ಗಳಿಗೆ ಬೇರೆ ಆವ ಅರ್ಥವಿದೆ? ಧೈರ್ಯ, ಶೌರ್ಯ, ಸಾಹಸಾದಿಗುಣಗಳಿಗೆ ಸಿಂಹವು ಪ್ರತಿನಿಧಿ ಆರ್ಯರಿಗೆ. ಆದರೆ ಕನ್ನಡಿಗರಿಗೆ ಅವೇ ಗುಣಗಳು ಅವರ ಚಿರಪರಿಚಿತ ಹುಲಿಯಯ್ಯನಲ್ಲಿ ಕಾಣುತ್ತವೆ. ಆದುದರಿಂದಲೆ, ಅಚ್ಚಕನ್ನಡ ಮಾತಿನಲ್ಲಿ ಹುಲಿಗಿರುವ ಸ್ಥಾನವು ಸಿಂಹಕ್ಕಿಲ್ಲ. ಸಂಸ್ಕೃತದಲ್ಲಿ 'ಸಿಂಹ' ಶಬ್ದಕ್ಕೆ ಇರುವ ವಿಶೇಷಾರ್ಥಗಳೆಲ್ಲವೂ

ಹುಲಿಗೆ ಕನ್ನಡದಲ್ಲಿ 'ಈ(೦)ದ ಪುಲಿಯಾವ್ರೋಲಿರ್ದಳ್' ಎಂದು ಕನ್ನಡದಲ್ಲಿ ನಾಣ್ಣುಡಿ ಸಾವಿರಾರು ವರುಷಗಳಿಂದ ವ್ಯಾಘ್ರದೇವನ ಪೂಜೆಯು ಕನ್ನಡ (ಗೋವಳ) ರಲ್ಲಿ, ಮಲ್ಲಾರಿ ಭಕ್ತರಲ್ಲಿ ವಂಶಪರಂಪರೆಯಿಂದ ನಡೆಯುತ್ತ ಬಂದಿದೆ. ಇವೆಲ್ಲ ಅಂಶಗಳನ್ನು ನೆನಪಿನಲ್ಲಿಟ್ಟು ಪುಲಿಮಯಿ ಪುಲಿಕೇಶಿಗಳನ್ನು ವಿಚಾರಿಸಿದರೆ ಅವರು ತಾವು ಕನ್ನಡರು ಎಂದು ಇಂದಿಗೂ ಸಾರಿಸಾರಿ ಹೇಳುತ್ತಲಿರುವರು. ಆದರೆ, ಕೇಳುವವರೆ ಇಲ್ಲ!

ಸಾತವಾಹನ 'ಹಾಲ' ರಾಜನಿಗಂತೂ ಹೆಚ್ಚಿಗೆ ಕೇಳುವ ಕಾರಣವಿಲ್ಲ. ಆ ಗೋವಳರ ಯುಗದ ಅರಸನು ಹಾಲ (ದುಗ್ಧ) ರಾಜನಲ್ಲದೆ ಮತ್ತಾರು? ಗೋವಳರ ಯುಗದ ರಾಜರು (ಗೋವುಗಳನ್ನು ವ್ಯಾಘ್ರದ ಬಾಯಿಂದ ಉಳಿಸುವ) ಪುಲಿಮಯಿಗಳಲ್ಲದೆ ಉಳಿದವರ ಆವಶ್ಯಕತೆಯೇನು? ಹಾಲನು ಮಹಾರಾಷ್ಟ್ರೀ ಪ್ರಾಕೃತದಲ್ಲಿ ಗಾಥಾಸಪ್ತಶತಿಯನ್ನು ವಿರಚಿಸಿದ್ದಾನೆ. ಅದರಲ್ಲಿ ಪೊಟ್ಟ (ಹೊಟ್ಟೆ), ತುಪ್ಪ, ಪೊಡೆ (ಹೊಡೆ), ತೀರ್ (ಸಮರ್ಥನಾಗು) ಎಂಬೀ ಬಗೆಯ ಕನ್ನಡ ಶಬ್ದಗಳು![೫೩] ಇವೆ. ಇವು ದಿನಾಲು ಮಾತಾಡುವ, ಕಿವಿಯಿಂದ ಕೇಳುವ ಭಾಷೆಯ ಪರಿಣಾಮವಿದು! 'ಇಂಡಿಯನ್ ಇಂಗ್ಲಿಷ್' ಇದ್ದ ಹಾಗೆ; ಹಾಲರಾಜನ ಈ ಗ್ರಂಥಕ್ಕೆ ಕನ್ನಡ-ಪ್ರಾಕೃತವೆಂದೆ ಹೇಳಬೇಕಲ್ಲವೆ? ಆಯಿತು. ಅದರ ಮುಯ್ಯ ಈಗ ತೀರಿತೆನ್ನಬಹುದು. ಕನ್ನಡ-ಪ್ರಾಕೃತವು ಆಗ ಇದ್ದರೆ ಈಗ ಪ್ರಾಕೃತ-ಕನ್ನಡವಾಗಿದೆ. ಜಗತ್ತು ತನ್ನ ತೂಕವನ್ನು ತಪ್ಪಿಗೊಡುವದಿಲ್ಲವೆಂಬುದು ನಿಜ. ಸಾತವಾಹನರ ರಾಜಧಾನಿ ಪೈಠಣ; ಪೈಠಣವು ಆ ಕಾಲಕ್ಕೆ ಖಾನದೇಶ ವರ್ಹಾಟಗಳ ಕೇಂದ್ರಸ್ಥಾನ. ಸಾತವಾಹನ ಪುಲಿಮಯಿ ಹಾಲರು-ಆಳಿದುದು ಅಲ್ಲಿ. ಸಾತವಾಹನರು ಆಭೀರರೆಂಬ ಹೆಸರಿನ ಹೊರಗಿನಿಂದ ಬಂದ ತಂಡದವರ ಹೊಡೆತದಿಂದ ನೆಲಕ್ಕುರುಳಿಧರು ಸಿಂಧದ ಕಡೆಯಿಂದ ಈ ನಾಡಿಗೆ ಬಂದವರು ಇವರು. ಭಾರತಕಾಲದಿಂದಲೂ ಯುದ್ಧಪ್ರಿಯ ಜನಾಂಗದವರೆಂದು ಹೆಸರಾದವರು. ದ್ರೋಣಾಚಾರ್ಯರು ಚಕ್ರವ್ಯೂಹ ರಚನೆಯಲ್ಲಿ ಆಭೀರರಿಗೆ ಪ್ರಮುಖ ಸ್ಥಾನವನ್ನು ಕೊಟ್ಟಿದ್ದರೆಂದು ವರ್ಣನೆಯಿದೆ. ಇಂತಹ ತುಂಟರೂ ಯುದ್ಧಪ್ರಿಯರೂ ಆದ ಜನಾಂಗದವರ ಕಾಲ್ತುಳಿತಕ್ಕೆ ಈಡಾದ ನಾಡಿನ ಗತಿಯೇನಾಗಿರಬಹುದು! ಚಲುಕ್ಯ ಮಂಗಲೀಶನು ಗೆಲ್ಲುವ ವರೆಗೂ ಇಲ್ಲಿ ಆಭೀರರ ಪ್ರಾಬಲ್ಯವೇ ಇತ್ತು. ಸ್ವಭಾಷೆ, ಸ್ವವರ್ಣಾಭಿಮಾನಿಗಳಾದ ಆರ್ಯರ ಹೆಚ್ಚಳದಿಂದ ಮೊದಲೆ ಕಳೆಗುಂದುತ್ತ ನಡೆದ ಕನ್ನಡವು ಆಭೀರರ ಆಘಾತದಿಂದಂತೂ ಮರಣೋನ್ಮುಖವಾಗಿ ಬಿಟ್ಟಿದ್ದರೆ ಸೋಜಿಗವಿಲ್ಲ.

ಆಭೀರರ ತರುವಾಯ ಕೆಲಕಾಲ ವಾಕಾಟಕರು ಈ ನಾಡಿಗೆ ಒಡೆಯರಾಗಿದ್ದಂತೆ ತಿಳಿಯುತ್ತದೆ. ಆದರೆ, ಇವರ ಬಗ್ಗೆ ಸಾಕಷ್ಟು ಸಂಗತಿಗಳು ಇನ್ನೂ ಬೆಳಕಿಗೆ ಬಂದಿಲ್ಲ. ವಾಕಾಟಕರಲ್ಲಿ ವಿಂಧ್ಯಶಕ್ತಿಯು ಮೊದಲನೆಯವನು (ಕ್ರಿ. ಶ. ೨೪೮), ಹರಿಸೇನನು ಕೊನೆಯವನು (ಕ್ರಿ. ಶ. ೫೨೦). ಮೊದಲನೆಯವನನ್ನು ಬಿಟ್ಟರೆ ಉಳಿದೆಲ್ಲ ಅರಸರ ಕೊನೆಗೂ ಸೇನವೆಂಬ ಉಪಪದವಿದೆ. ಬಂಗಾಳಿನಲ್ಲಿ ಒಂದು ಸೇನ ಮನೆತನವು ಸುಮಾರು ಕ್ರಿ. ಶ. ೧೦೭೦ರಿಂದ ೧೧೧೯ ವರೆಗೆ ಆಳಿತು. ಇವರಿಗೂ ವಾಕಾಟಕರಿಗೂ ಸೇನವೆಂಬ ಸಾಧಾರಣ (Common) ಹೆಸರಿಗಿಂತಲೂ ಹೆಚ್ಚಿನ ಸಂಬಂಧವು ಏನಿದೆಯೊ ತಿಳಿಯದು. ಬಂಗಾಳಿನ ಸೇನರಲ್ಲಿ ಬಲ್ಲಾಳ (ಬಲ್-(ದೊಡ್ಡ) ಆಳು, ಅಂದರೆ ಮಹಾವೀರ)ನು ಅತಿ ವಿಖ್ಯಾತನಾದನು. ಈ ಸೇನರಾಜರು ತಮ್ಮ ಕುಲವೃತ್ತಾಂತವನ್ನು ಹೇಳಿಕೊಳ್ಳುವಾಗ ತಮಗೆ 'ಕರ್ಣಾಟ ಕ್ಷತ್ರಿಯರು'[೫೪] ಎಂದು ಅಭಿಮಾನದಿಂದ ಗೌರವಿಸಿಕೊಂಡಿದ್ದಾರೆ. ಉತ್ತರದಲ್ಲಿ ವಿಖ್ಯಾತವಾದುದು ಇದೊಂದೇ ಕನ್ನಡ ಅರಸು ಮನೆತನವಲ್ಲ. ಮಿಥಿಲೆ (ಬಿಹಾರ) ಯಲ್ಲಿ ಆಳಿದ ನಾನ್ಯದೇವನು ನಿಶ್ಚಿತವಾಗಿಯೂ ಕರ್ನಾಟ ಕ್ಷತ್ರಿಯನೇ.

Nanya certainly was a Karnatak king of Mithila contemporary with Vijayasena[೫೫]

ಇಷ್ಟೆ ಅಲ್ಲ. ಈ ನಾನ್ಯದೇವನು ನೇಪಾಳಿನಲ್ಲಿ ಕರ್ಣಾಟ ಸಿಂಹಾಸನವನ್ನು (The Karnata dynasty) ಸ್ಥಾಪಿಸಿದಂತೆ ಪರಂಪರೆಯು ಹೇಳುತ್ತದೆ.

ನರಹರಿ ತೀರ್ಥರು (ಕ್ರಿ. ಶ. ೧೨೮೧) ಸನ್ಯಾಸಿಗಳಾಗಿ ಮಾಧ್ವಪೀಠವನ್ನು ಅಲಂಕರಿಸುವ ಮೊದಲು ಗಂಜಾಂ ಪ್ರಾಂತದಲ್ಲಿ ಅಧಿಕಾರಿಗಳಾಗಿದ್ದರು. ಇವರು, ಅಲ್ಲಿಯ ರಾಜನಲ್ಲಿ ಪ್ರಧಾನಮಂತ್ರಿಗಳಾಗಿದ್ದರೆಂದು ವೈಷ್ಣವ ಸಂಪ್ರದಾಯದವರಲ್ಲಿ ಐತಿಹ್ಯ. ಅಂತೂ ಒರಿಸ್ಸಾ ಮುಂತಾದ ಉತ್ತರ ಪ್ರಾಂತಗಳಲ್ಲಿ ಕನ್ನಡರು

ಹದಿಮೂರನೆಯ ಶತಮಾನದವರೆಗೂ ಮಹಾರಾಜಾಧಿರಾಜರೂ ಮಹಾಮಂತ್ರಿಗಳೂ ಆಗಿರುತ್ತಿದ್ದುದು ಕೇವಲ ತರ್ಕ, ಊಹೆ, ಅನುಮಾನವೆಂದು ಹೇಳಲು ಯಾರ ನಾಲಗೆಯೂ ಚಿಗುರದಂತೆ ಮಾಡುವ ವಿಶ್ವಾಸನೀಯವಾದ ಐತಿಹಾಸಿಕ ಆಧಾರಗಳಿಂದಲೆ ಸಿದ್ಧವಾಗುತ್ತಿದೆ. ಉತ್ತರ ದೇಶದಲ್ಲಿ ಇಂತಿವೆಲ್ಲ ಬಗೆಗಳಿಂದ ತಮ್ಮ ವರ್ಚಸ್ಸನ್ನು ಕೂಡಿಸುವ ಕನ್ನಡರ ಮೂಲಸ್ಥಾನವು ಉತ್ತರ ದೇಶದಿಂದ ಅತಿದೂರದಲ್ಲಿರುವುದು ಸಾಧ್ಯವಿಲ್ಲವಷ್ಟೆ? ಮೇಲಿಂದ ಮೇಲೆ ಹೋಗಿ ಬಂದು ಅಲ್ಲಿಯ ಇಂಗಿತ ಭೇದಗಳನ್ನು ಗೊತ್ತಿಲ್ಲದವರು ಫಕ್ಕನೆ ಹೋಗಿ ಥಟ್ಟನೆ ರಾಜ್ಯವನ್ನು ಸ್ಥಾಪಿಸುವುದು ಎಂದೂ ಸಾಧ್ಯವಿಲ್ಲ. ಈ ಕಾರಣದಿಂದಲೂ ಉತ್ತರಕ್ಕೆ ಹೋಗಿ ಬಂಗಾಳ, ಮಿಥಿಲೆ, ನೇಪಾಳಗಳಲ್ಲಿ ರಾಜ್ಯ ಸ್ಥಾಪಿಸಿದ ಕರ್ಣಾಟ ಕ್ಷತ್ರಿಯರ ಮೂಲನಿವಾಸ ಸ್ಥಾನವು ಉತ್ತರ ದೇಶಕ್ಕೆ ತೀರ ಹತ್ತಿರದಲ್ಲಿ-ಉತ್ತರ ದೇಶವು ತೀರುತ್ತಲೆ ಅದಕ್ಕೆ ಹೊಂದಿಕೊಂಡೆ ಇರಬೇಕೆಂದು ಹೇಳುವುದು ಹೆಚ್ಚು ಸಯುಕ್ತಿಕವಾಗಲಿಕ್ಕಿಲ್ಲವೆ?

ಹತ್ತು ಮತ್ತು ಹನ್ನೆಡರನೆಯ ಶತಮಾನದಲ್ಲಿ ಬಂಗಾಳ ಬಿಹಾರ ಒರಿಸ್ಸಾ ಪ್ರಾಂತಗಳಲ್ಲಿ ಹೋಗಿ 'ಕರ್ಣಾಟ ಕ್ಷತ್ರಿಯರೂ' ಕನ್ನಡ ಜಾಣರೂ ತಮ್ಮ ಬಾಹುಬಲ, ಬುದ್ಧಿಬಲಗಳಿಂದ ಅಜರಾಮರರಾಗಿರುವರು. ಈ ತೋಳ್ಬಲವು ಅಥವಾ ಬುದ್ಧಿಬಲವು ಭೋಂಕನೆ ೧೧-೧೨ನೆಯ ಶತಮಾನದಲ್ಲಿಯೇ ಜಗದ್ರಂಗದ ಮೇಲೆ ಬಂದುದಲ್ಲ. ಆರು ಮತ್ತು ಏಳನೆಯ ಶತಮಾನಗಳಿಂದಲೆ ಉತ್ತರದ ರಾಜಾಧಿರಾಜರನ್ನು ಗಡಗಡನೆ ನಡುಗಿಸಿದ ಚಲುಕ್ಯರೂ ರಾಷ್ಟ್ರಕೂಟರೂ ಈ ವಿಷಯದಲ್ಲಿ ಲೋಕವಿಖ್ಯಾತರಾಗಿದ್ದಾರೆ. 'ಚಲುಕ್ಯರೂ ರಾಷ್ಟ್ರಕೂಟರೂ ಮರ್ಹಾಟರು' ಎಂದು ಶ್ರೀ ಚಿ. ವಿ. ವೈದ್ಯ ಪ್ರಭೃತಿಗಳು ಹೇಳಿಕೊಳ್ಳುತ್ತಿರುವರು! ಆದರೆ, ದುರ್ದೈವ ಶ್ರೀ ವೈದ್ಯರದು. ಒಂದು ಶಿಲಾಶಾಸನವು ಸಹ ಪ್ರತ್ಯಕ್ಷ ಮರ್ಹಾಟಿಯಲ್ಲಿ ಅಥವಾ ಮರ್ಹಾಟಿಗೆ ಸಮೀಪವಾದ ಯಾವುದೆ ಭಾಷೆಯಲ್ಲಿ ಇಲ್ಲ! ಚಲುಕ್ಯರಾಷ್ಟ್ರಕೂಟರ ರಾಜಾಶ್ರಯವು ಕನ್ನಡ ಕವಿಗಳಿಗೆ ಬಿಲ್ಹಣನಂತಹ ಕಾಶ್ಮೀರ ಪಂಡಿತನು ಚಲುಕ್ಯ ವಿಕ್ರಮನ ಪ್ರಶಸ್ತಿಯನ್ನು ಬರೆಯುವಾಗ (ಇದಂ ಕಾವ್ಯಂ) 'ಕರ್ಣಾಟೇಂದೋಗತಿ ವಿದುಷಾಂ ಕಂಠ ಭೂಷಾತ್ವಮೇತು'[೫೬] ಎಂದು ಘಂಟಾಘೋಷದಿಂದ ಹೇಳುತ್ತಿದ್ದರೂ ಶ್ರೀ ವೈದ್ಯ ಜಾಧವರಾವ ಮೊದಲಾದ ಪ್ರಾಂತಾಭಿಮಾನದಿಂದ ಕಿವುಡರಾದವರಿಗೆ ಅದು ಕೇಳಿಸಲೊಲ್ಲದು! ಚಲುಕ್ಯರು ಗುಜರಾಥದಿಂದ ಬಂದವರು; ಆದುದರಿಂದ ಅವರು ಕರ್ಣಾಟರಾಗಿರಲಾರರು, ಇಂದು ಇನ್ನು ಕೆಲವರು. ಇವರಿಗೆ ಡಾ. ಸ್ಟೆನ್ ಕ್ನೊ ಇವರು ಹೇಳುವುದನ್ನಷ್ಟು ಪುನರುಕ್ತಿದೋಷವನ್ನು ಸ್ವೀಕರಿಸಿ ಇನ್ನೂ ಒಮ್ಮೆ ಕೇಳಿಸುವುದು ಅಗತ್ಯವಿದೆ "ಗುಜರಾತ ಮಹಾರಾಷ್ಟ್ರಗಳು ಈಗ ಹಬ್ಬಿರುವ ನಾಡಿನಲ್ಲಿ ಮೊದಲು ದ್ರಾವಿಡರು ತುಂಬಿಕೊಂಡಿದ್ದರು." ಡಾ. ಸ್ಟೆನ್‌ರ ಈ ಮಾತನ್ನು ಸ್ವಲ್ಪ ನೆನಪಿನಲ್ಲಿಟ್ಟರೆ ಚಲುಕ್ಯರು ಕರ್ಣಾಟರಲ್ಲದೆ ಬೇರಿನ್ನಾರೂ ಅಲ್ಲವೆಂದು ಮನವರಿಕೆಯಾಗದೆ ಇರಲಾರದು.

ಕಾವೇರಿಯ ಉತ್ತರಕ್ಕೆ ಇರುವ ಜನಗಳಿಗೆಲ್ಲ 'ದ್ರವಿಡರು' ಎಂದು ಸ್ಥೂಲವಾಗಿ ಹೇಳಿಬಿಡುವ ಪದ್ಧತಿಯಿಂದ ಎಷ್ಟು ಭ್ರಾಂತಿ ತಪ್ಪುಕಲ್ಪನೆಗಳಿಗೆ ಇಂಬು ದೊರೆತಿದೆ! ಹೀಗೆ, ಇವರಿಗೆಲ್ಲ ದ್ರವಿಡರೆಂದು ಹೇಳುವ ತಿಳಿಗೇಡಿತನವನ್ನು ಮೊದಲು ಮಾಡಿದವನು ಸರ್ ಹರಬರ್ಟ ರಿಸ್ಲೆ ಏನೂ ವಿಶೇಷ ಉದ್ದೇಶವಿಲ್ಲದೆ ಈ ಶಬ್ದವನ್ನು ಸಾಮಾನ್ಯ ಜನಾಂಗವಾಚಕ ಅರ್ಥದಲ್ಲಿ ಉಪಯೋಗಿಸಿರಬಹುದು. ಆದರೆ, ಆತನು ಉಪಯೋಗಿಸಿದ ಆ ಶಬ್ದವು ಕರ್ಣಾಟದ ಕೀರ್ತಿಚಂದ್ರನನ್ನು ರಾಹುವಿನಂತೆ ನುಂಗಿಬಿಟ್ಟಿದೆ. ಕರ್ಣಾಟದ ಸ್ವತಂತ್ರ ಅಸ್ತಿತ್ವನ್ನೆ ಹಾಳುಮಾಡಿದೆ. ಬಾಲ್ಯದಲ್ಲಿ ಮರ್ಹಾಟಿ ಭಾಷೆಯು ಯಾವ ಭಾಷೆಯ ಸಹಾಯದಿಂದ ಮುಂದೆ ಬಂದಿತು? ದ್ರಾವಿಡ! ಗುಜರಾತಿ ಭಾಷೆಯು ಹಬ್ಬಿಕೊಂಡಿರುವ ನಾಡು ಮೊದಲು ಯಾರದು? ದ್ರಾವಿಡರದು! ಬಂಗಾಳ ಬಿಹಾರಗಳಲ್ಲಿ ಹಿಂದಕ್ಕೆ ಯಾರ ವರ್ಚಸ್ಸು ಇತ್ತು? ದ್ರಾವಿಡರದು! ಹೀಗೆಲ್ಲವೂ ದ್ರಾವಿಡ! ಕರ್ಣಾಟದ ದುರ್ದೈವವೆ ಅಂತಹುದು! 'ಕರ್ಣಾಟೇಂದುವಿಗೆ' (ಪೌರಾಣಿಕರಿಂದ) ಆಂಧ್ರ ಶಬ್ದವು ಗಂಟುಬಿದ್ದು ಸಾತವಾಹನಾದಿಗಳ ಕೀರ್ತಿಯನ್ನು ಕಸಿದುಕೊಂಡಿತು. (ರಿಸ್ಲೆ ಪ್ರಭೃತಿಗಳಿಂದ) 'ದ್ರವಿಡ' ಶಬ್ದವು ತಲೆಯೆತ್ತಿ ಈಗ ಚಲುಕ್ಯ ರಾಷ್ಟ್ರಕೂಟಾದಿಗಳ ಮಹದ್ಯಶಸ್ಸನ್ನು ಅಪಹರಿಸುತ್ತಲಿರುವುದು. ಇದರಲ್ಲಿಯೆ ಮಧ್ಯೆ ಮಹಾರಾಷ್ಟ್ರದ ಬೃಹತ್-ಪ್ರಕರಣವೂ ಒಂದು!

ಇಲ್ಲಿ ಇವು ಮೂರು ಶಬ್ದಗಳೂ ಉಪಯೋಗಿಸಲ್ಪಡುವುದು ಸಾಮಾನ್ಯಾರ್ಥದಲ್ಲಿ; ವಿಶೇಷ ಜನಾಂಗ, ದೇಶವಾಚಕಾರ್ಥದಲ್ಲಿ ಅಲ್ಲ. 'ಯುರೋಪಿಯನ್' ಎಂಬುದರಿಂದ ಒಂದು ರಾಷ್ಟ್ರದ ಯಶಸ್ಸಿನ ಶ್ರೇಯವು ಇನ್ನೊಂದು ರಾಷ್ಟ್ರಕ್ಕೆ ಹೋಗಿ ಆಗುವ ಗೊಂದಲವೆ ಇಲ್ಲಿಯೂ ಕಂಡು ಬರುವುದು. ಎಡಿಸನ್‌ನು ಫೋನೋಗ್ರಾಫ ಮೊದಲಾದವುಗಳ ಸಂಶೋಧಕನು ನಮ್ಮಲ್ಲಿ 'ಯುರೋಪಿಯನ್'ರೆಂಬ ಹೆಸರಿಗೆ ಆದರದೆಲ್ಲ ಲಭ್ಯಾಂಶ!

ದ್ರವಿಡ ಶಬ್ದವನ್ನು ಹೀಗೆ ತಪ್ಪುರೀತಿಯಲ್ಲಿ ಉಪಯೋಗಿಸುವದು ವಿನ್‌ಸೆಂಟ್ ಸಾಹೇಬನಿಗೆ ಸಹ ಸರಿದೋರಲಿಲ್ಲ. ವಿನ್ಸೆಂಟನು ರಿಸ್ಲೆ ಸಾಹೇಬನನ್ನು ಇದರ ಬಗ್ಗೆ ಸ್ವಲ್ಪ ಅಲ್ಲಗಳೆದಿದ್ದಾನೆ.[೫೭] ಅಲ್ಲದೆ, ಈ ಮೊದಲೆ ವಿವರಿಸಿದಂತೆ ಈ ಸಂದರ್ಭಗಳಲ್ಲೆಲ್ಲ ಉಪಯೋಗಿಸಿದ ದ್ರವಿಡ ಶಬ್ದಕ್ಕೆ ಕನ್ನಡವೆಂದಲ್ಲದೆ ಬೇರೆ ಅರ್ಥವೆ ಸಂಭವಿಸದು. ಆದಕಾರಣ ಡಾ. ಸ್ಟೆನ್‌ಕ್ನೋನು ಹೇಳುವ ಹಾಗೆ ಗುಜರಾತದಲ್ಲಿ ದ್ರವಿಡರಿದ್ದರು ಎಂಬುದಕ್ಕೆ ಅಲ್ಲಿ ಕನ್ನಡರು ಎಂದೆ ಅರ್ಥವು ಸರಿಯಾದುದು ಗುಜರಾತದಲ್ಲಿ ಹೊರಗಿನ ಸಿಥಿಯನರೆ ಮೊದಲಾದ ಹೊರಗಿನ ತುಂಟರು ಸೇರಿಕೊಂಡ ಬಳಿಕ ಅಲ್ಲಿಯ ಸ್ವಾಭಿಮಾನಿಗಳಾದ ಕನ್ನಡರು ದಕ್ಷಿಣಕ್ಕೆ ನೆಮ್ಮದಿಯಾದ ನಾಡಿ ನೆಡೆಗೆ ಬಂದು ನಿಂತರು. ಅಂತಹರಲ್ಲಿ ಚಲುಕ್ಯರು ಮೊದಲಿಗರು. ಉತ್ತರದಿಂದ ಕನ್ನಡರು ಈ ಭಾಗಕ್ಕೆ ನೆಲೆಯಾಗಲು ಬಂದುದು ನಿದರ್ಶನಕ್ಕೆ ಬರುತ್ತದೆ. ಚಲುಕ್ಯ ಶಬ್ದವು 'ಚುಳುಕ' ದಿಂದ ಬಂದಿತೆಂದು ಎಲ್ಲರೂ ಹೇಳುವುದುಂಟು. ಚುಳುಕು-ಚುಣುಕು[೫೮] ಚೂಣಿ ಅಂದರೆ ತುದಿ, ಅಗ್ರ ಚಳುಕ್ಯರು ಅಂದರೆ ಚೂಣಿಯವರು. ಗುಜರಾಥದಿಂದ ಈ ನಾಡಿಗೆ ಒಕ್ಕಲಾಗಲು ಬಂದವರಲ್ಲಿ ಚುಣಿಯವರು ಚಾಳುಕ್ಯರು ಎಂದು ಶಬ್ದಾರ್ಥವು ಸೂಚಿಸುತ್ತಿದೆ.

ರಾಷ್ಟ್ರಕೂಟರಿಗೆ ವಿನ್ಸೆಂಟಸ್ಮಿತನು "The indigenous tribes of the Deccan." ಎನ್ನುತ್ತಾನೆ.[೫೯] ಇವನು ಕನ್ನಡವು ಗೊತ್ತಿಲ್ಲದೆಯೆ ತನ್ನ ಸ್ವತಂತ್ರ ಸಂಶೋಧನದಿಂದ ಹೀಗೆ ಹೇಳಿರುವುದು. ಕನ್ನಡದಲ್ಲಿ ಸ್ಮಿಥ್‌ನು ಹೇಳುವಂತೆ Indigenous ಎಂದೇ ಅರ್ಥವುಳ್ಳ ಹೆಸರಿದೆ ಒಂದು ಜನಾಂಗಕ್ಕೆ. ಅವರೆ ನಾಡವರು; ನಾಡಿನವರು. ಅವರು ಹೊರಗಣರಲ್ಲ; ಆ ನಾಡು ಈ ನಾಡು ಅಡಿ ಓಡಾಡಿ ಬಂದ ನಾಡಾಡಿಗಳಲ್ಲ; ಇವರು ನಾಡವರು. ಅಶೋಕನ ಶಾಸನಗಳಲ್ಲಿ ಇವರಿಗೆ ರಾಷ್ಟಿಕರು, ರಾಷ್ಟೀಕರು ಎಂದು ಹೇಳಿದೆ. ಈ ಶಬ್ದಗಳು ಮೂಲ 'ನಾಡವ' ಶಬ್ದದ ಭಾಷಾಂತರಗಳೆಂದು ಸ್ಪಷ್ಟವಿದೆ. ಆದರೆ, ರಾಷ್ಟಿಕ-ರಾಷ್ಟಿಕ ಶಬ್ದವು 'ಮಹಾರಾಷ್ಟ್ರ' ಎಂಬುದಕ್ಕೆ ಸ್ವಲ್ಪ ಹತ್ತಿರದ್ದೆನಿಸಿದ್ದರಿಂದ ಮರ್ಹಾಟಿಗಳು ರಾಷ್ಟ್ರಕೂಟರೂ ತಮ್ಮವರು ಎಂದು ಬಾಯಿ ಮಾಡುತ್ತಲಿದ್ದಾರೆ. ನಾಡವ ಶಬ್ದವು ಭಾಷಾಂತರಿತವಾಗಿ ಅಶೋಕನ ಕಾಲದಿಂದ ರಾಷ್ಟಿಕ, ರಠಿಕವಾಗಿ ಮುಂದೆ ಬಂದಿತು. ಸೂರ್ಯಚಂದ್ರ ವಂಶಗಳಿಗೂ, ದೇವಭಾಷೆಗೂ ಸಂಬಂಧವನ್ನು ಹಚ್ಚಿಕೊಳ್ಳುವುದರಲ್ಲಿ ಹೆಮ್ಮೆಪಡುವ ಆ ಕಾಲದಲ್ಲಿ ಕನ್ನಡ ಹೆಸರು ಮೂಲೆಗೆ ಬಿದ್ದುವು. ರಾಷ್ಟಿಕ, ರಠಿಕ, ರಾಷ್ಟ್ರಕೂಟ, ರಟ್ಟ, ರೆಡ್ಡಿ ಎಂಬ ಕಾಲಕ್ರಮದಲ್ಲಾದ ರೂಪಭೇದಗಳಿಂದ ಮುಂದೆ ವ್ಯವಹರಿಸಿತು. ಧಾರ್ಮಿಕ ಸಾಮಾಜಿಕ ನಡೆನುಡಿಗಳಲ್ಲಿ ನಾಡವರಿಗೂ ರೆಡ್ಡಿಗಳಿಗೂ ಈಗಲೂ ಇರುವ ಸಾಮ್ಯವು ಕೌತುಕಾಸ್ಪದವಾಗಿದೆ. ಇವರೆಡು ಜನಾಂಗಗಳಲ್ಲಿ ಇಂದಿಗೂ ಗೋಚರವಾಗುವ ಬುದ್ಧಿವಂತಿಕೆ, ಉದ್ಯೋಗಪ್ರೀತಿ, ಧೈರ್ಯ, ವ್ಯವಹಾರ ಕೌಶಲ್ಯ, ಮೊದಲಾದ ಗುಣಗಳನ್ನು ನೋಡಿದರೆ, ಇವರು ಹಲವು ಕಾಲದಿಂದಲೂ ನಾಡಿನ ಒಡೆಯರಾಗಿ, ಅಧಿಕಾರಿಗಳಾಗಿ, ಅರಸರಾಗಿ ಬಾಳಿ ಬದುಕಿದವರೆ ಹೊರತು ಯಾರಿಗೆ ಜೀಯೆಂದು, ದಮ್ಮಯ್ಯ ಹೇಳಿ ಕಾಲಕಳೆದವರಲ್ಲ, ಎಂದು ಮನವರಿಕೆ ಯಾಗದೆ ಇರದು.

ಶ್ರೀ ಗೋಯಂಬಾಬ ಶೆಣೈಗಳು ಹೇಳುವುದೇನೆಂದರೆ ರಠಿಕ ಎಂಬುದು ರಥಿಕ ಶಬ್ದದ ಒಂದು ರೂಪ. ರಥಿಕರೆಂದರೆ ಶೂರರು; ಭಾರತ ಕಾಲದಲ್ಲಿ ಅತಿರಥರು, ಮಹಾರಥರು ಎಂದರೆ ಮಹಾಪರಾಕ್ರಮಶಾಲಿಗಳು ಎಂಬ ಅರ್ಥವಿಲ್ಲವೆ? ಹಾಗೆ ಹಳೆಶಾಸನಗಳಲ್ಲಿ ಬರುವ ರಠಿ, ರಾಷ್ಟಿಕ ಶಬ್ದಗಳಿಗೆ ವೀರರು ಎಂಬರ್ಥ. ಇದರಿಂದಲೇ, ಮುಂದೆ ಮಹಾರಠಿಕ, ಮಹಾರಾಷ್ಟಿಕ, ಮಹಾರಾಷ್ಟ್ರ ಎಂಬ ಶಬ್ದವು ಸಿದ್ಧವಾಗಿರಬೇಕು. ಮಹಾರಾಷ್ಟ್ರರು ಅಂದರೆ ಕಡುಗಲಿಗಳು! ಶ್ರೀ ಶೆಣೈಗಳು ಹೇಳುವ ಈ ದೂರಾನ್ವಯವೂ ಅನಾವಶ್ಯಕ. ಆದರೆ

ಅವರು ಹೇಳುವ ರಠಿಕ ಶಬ್ದಕ್ಕೆ ಪರಾಕ್ರಮ ಎಂಬ ಅರ್ಥವನ್ನು ಮಾತ್ರ ನಾಡವ ಶಬ್ದಕ್ಕಿರುವ ಬಂಟರು ಎಂಬ ಇನ್ನೊಂದು ಪರ್ಯಾಯನಾಮದಲ್ಲಿ ಇಂದಿಗೂ ನೋಡಿ ಮನವರಿಕೆ ಮಾಡಿಕೊಳ್ಳಬಹುದು.

ರಾಷ್ಟ್ರಿಕರು-ರಾಠರು(ನಾಡವರೂ ರೆಡ್ಡಿಗಳೂ) ಶ್ರೀ ವೈದ್ಯ ಪ್ರಭೃತಿಗಳು ಹೇಳುವಂತೆ ಮಹಾರಾಠಿ ಅಂದರೆ ಮಹಾರಾಷ್ಟ್ರಿಗಳಾಗಿದ್ದರೆ ಮರಾಠಿಯಲ್ಲಿ 'ರಾಠ' ಶಬ್ದಕ್ಕೆ ಸ್ವಲ್ಪವಾದರೂ ಗೌರವದ ಅರ್ಥವು ಇರಬೇಕಾಗಿತ್ತು. ಆದರೇನು? 'ರಾಠ'ನೆಂದರೆ ಮರಾಠಿಯಲ್ಲಿ ಸುಳಿವು ಸೂಕ್ಷ್ಮವನ್ನರಿಯದ ಗಾಂಪ; ಹುಂಬ; ಸಂಸ್ಕಾರವಿಹೀನ ಶುದ್ಧ ಪಶು ಎಂದರ್ಥ. 'ರಾಠ'ನೆ ಹೀಗೆ ಎಂದಮೇಲೆ 'ಮಹಾರಾಠ'ನ ಮಾತಂತೂ ಎಷ್ಟು ಭಯಂಕರ! ತನ್ನನ್ನು ತಾನೆ ಬಯ್ದುಕೊಳ್ಳುವ ಅರ್ಥವುಳ್ಳ ಭಾಷಾವಾಚಕ ಶಬ್ದವು ಜಗತ್ತಿನಲ್ಲಿ ಯಾವ ದೇಶದಲ್ಲಿಯೂ ಯಾವ ಭಾಷೆಯಲ್ಲಿಯೂ ದೊರೆಯಲಾರದು. ಯಾರ ನುಡಿಕಂಪು; ಯಾರ ನುಡಿ ಇನಿದು, ಯಾರ ನುಡಿ ಕೈಗನ್ನಡಿ ಹೀಗೆ ಗೌರವದಿಂದಲೆ ಹೇಳಿಕೊಳ್ಳುವವರು ಎಲ್ಲರೂ. ಹೀಯಾಳಿಸಿಕೊಳ್ಳುವವರು ಒಬ್ಬರೂ ಇಲ್ಲ. ಆದರೆ 'ಮಹಾರಾಠರ' ಮಾತೆ ಒಂದು ಬೇರೆ ಇದ್ದರೆ ಯಾರಿಗೆ ಗೊತ್ತು! ಮಹಾರಾಷ್ಟ್ರರು ತಮ್ಮ ನುಡಿಗೆ ಮಹಾರಾಠ ಭಾಷೆ ಅಂದರೆ ಅತಿ ಒರಟುನುಡಿಯೆಂದು ವ್ಯರ್ಥವಾಗಿ ತಾವೇ ಒಪ್ಪಿಕೊಳ್ಳುವರಲಾರಿ, ಎಂದು ವಿಷಾದವಾಗುತ್ತಿದೆ!

ಚಲುಕ್ಯರು ರಾಷ್ಟ್ರಕೂಟರು ಕರ್ಣಾಟರೆಂಬುದು ನಿಶ್ಚಿತ. ಒಂದು ವೇಳೆ 'ಅಲ್ಲ, ಹೊರಗಣಿಂದ ಬಂದು ಇಲ್ಲಿ ರಾಜ್ಯವನ್ನು ಸ್ಥಾಪಿಸಿದವರು' ಎಂದು ಸಿದ್ಧವಾಯಿತೆಂದು ಇಟ್ಟುಕೊಂಡರೂ ಆಗಬೇಕಾದುದೇನು? ಚಲುಕ್ಯರೂ ರಾಷ್ಟ್ರಕೂಟರೂ ಹೊರಗಿನವರೇ ಆಗಲಿ; ಇಲ್ಲಿ ನೆಲೆಸಿದ ಬಳಿಕ ಕನ್ನಡದ ಉಂಡ ಉಪ್ಪಿಗೆ ಎರಡು ಬಗೆಯದೆ ಕನ್ನಡ ಕವಿಗಳಿಗೆ ಓಲಗದಲ್ಲಿ ಮನ್ನಣೆ ಕೊಟ್ಟರೆ ಇಲ್ಲವೆ? ರಾಜಭಾಷೆಯನ್ನು (ಶಿಲಾಶಾಸನಾದಿಗಳನ್ನು) ಕನ್ನಡದಲ್ಲಿಯೆ ಬರೆಸಿದರೆ ಇಲ್ಲವೆ? 'ತಾವು ಕರ್ಣಾಟರಾಜರು' ಎಂದುಕೊಳ್ಳುವುದರಲ್ಲಿಯೆ ಅಭಿಮಾನ ಪಟ್ಟರೆ ಇಲ್ಲವೆ? ಆಯಿತು. ಬಗೆಹರಿಯಿತು. ಕರ್ಣಾಟಕಕ್ಕೆ ಬೇಕಾದುದು ಇಷ್ಟೆ. ಉಂಡ ಮನೆಗೆ ಕೇಡು ಬಗೆಯದಿದ್ದರಾಯಿತು. ಅವರು ಯಾರಾದರೇನು? ಕನ್ನಡಕ್ಕೆ ಕಲ್ಯಾಣ ಮಾಡುವವನು ಕನ್ನಡನು. 'ಇಂಗ್ಲೆಂಡಿನ ಈಗಿನ ಅರಸರು ಜರ್ಮನ್ ವಂಶದವರು' ಎಂದು ಹಿಟ್ಲರನು ಇಂಗ್ಲೆಂಡಿನ ಮೇಲೆ ಹಕ್ಕು ಹೇಳಿದರೆ ಅಥವಾ ಇಂಗ್ಲಿಷರನ್ನು ಹೀಯಾಳಿಸಿದರೆ ಅದು ಮೂರ್ಖತನವೆನಿಸಲಾರದೆ? ಅಭಿಮಾನದಿಂದ ತಮಗೆ ಕರ್ಣಾಟರಾಜ್ಯರಮಾರಮಣರೆಂದುಕೊಳ್ಳುವವರನ್ನು ತಮ್ಮವರೆಂದು ಸೆಳೆದುಕೊಳ್ಳಲು ಹವಣಿಸುವವರಿಗೂ ಇದಕ್ಕಿಂತ ಬೇರೆ ಏನು ಹೇಳುವುದು? ಆರು-ಏಳನೆಯ ಶತಮಾನದಿಂದ ಮುಂದೆ ಒಮ್ಮೆಲೆ ಉತ್ತರದಲ್ಲಿಯೂ, ದಕ್ಷಿಣದಲ್ಲಿಯೂ ವಿಖ್ಯಾತವಾದ ರಾಜವಂಶಗಳು ಎಲ್ಲಿಂದ ಬಂದವು, ಹೇಗೆ ಹುಟ್ಟಿದವು ಎಂಬ ಬಗ್ಗೆ ವಿನ್ಸೆಂಟ್ ಸ್ಮಿಥನಿಗೆ ತುಂಬಾ ವಿಸ್ಮಯ. ಈ ರಜಪೂತವೆಂದೂ (ರಾಜಪುತ್ರರೆಂದು) ಹೇಳಿಕೊಳ್ಳುವ ಅರಸು ಮನೆತನದವರು ಅಗ್ನಿವಂಶ, ಸೋಮವಂಶ ಎಂದು ಮುಂತಾಗಿ ಇಲ್ಲದ ಸಂಬಂಧ ಬಾದರಾಯಣ ಸಂಬಂಧಗಳನ್ನು ಹಚ್ಚಿಕೊಳ್ಳುವುದು ಅನೈತಿಹಾಸಿಕ. ಅಶಾಸ್ತ್ರೀಯ. ಆದಕಾರಣ ಇವರು ನಡುವೆ ಎಲ್ಲಿಯೋ ಒಂದು ಮಿಶ್ರಜನಾಂಗದಿಂದ ಹುಟ್ಟಿರಬೇಕು ಎಂದು ಸ್ಮಿತ್‌ನ ಅನುಮಾನ. ಆದನ್ನು ಕುರಿತ ಅವನು ಅಂದದ್ದೇನೆಂದರೆ-

> The Kshatriya or Rajaput group of castes is essentially an occupational group composed of all clases follwing the Hindu ritual who actually undertook the work of Government;....... People of most diverse races were and are lumped together as the Rajaputs;......... most of the great clans now in existence are deccnded either from foreign immigrants of the fifth or sixth century of Chirstian era or from indigenous races such as Gouyds. Bhars (431)

ಮೂಲಕ ಕನ್ನಡರ (ಕನ್+ನಡ) ಪೂರ್ವೇತಿಹಾಸವನ್ನು ಕೇಳಿ ವಿನ್ಸೆಂಟ್ ಸ್ಮಿತ್‌ನಿಗೆ ಸಮಾಧಾನವಾಗಬಹುದು. ತಾನು ಬರಿಯ ತರ್ಕದಿಂದ ಕಲ್ಪಿಸಿದುದು ಸಂಪೂರ್ಣವಲ್ಲದಿದ್ದರೂ ಸಾರಭೂತವಾಗಿ ಸತ್ಯವಾಗಿದ್ದುದನ್ನು ನೋಡಿ ಹಿಗ್ಗ ಬಹುದಾಗಿತ್ತು. ವಿನ್‌ಸೆಂಟ್ ಸ್ಮಿತ್‌ನು ರಜಪೂತ ಕ್ಷತ್ರಿಯರು ಗೊಂಡರಿಂದ ಭಾರರಿಂದ ಅಥವಾ ಹಿಂದೂದೇಶಕ್ಕೆ ಹೊರಗಿನಿಂದ ಬಂದ ಹೂಣರಿಂದ ಜನಿಸಿದವರಾಗಿರಬೇಕೆಂದು ಅಷ್ಟು ದೂರಿನ ಸಂಬಂಧಗಳನ್ನು ಎಳೆದು ತಂದು ಹಚ್ಚಿಕೊಳ್ಳುವ ಕಾರಣವೆ ಇಲ್ಲ. 'ಕನ್ನಡ (ಕನ್+ನಡ) ಶಬ್ದವು ವಿನ್ಸೆಂಟನ ಮಾತನ್ನೆ ಆದರೂ ಒಂದು ಭಿನ್ನ ರೀತಿಯಲ್ಲಿ ಎತ್ತಿ ಹಿಡಿಯುತ್ತದೆ. ಕನ್ದರು ಕನ್ನಡರು ಪೂರ್ವ ಸಂಬಂಧಿಗಳು. ಕಂಡರು ವಿಂಧ್ಯದಲ್ಲಿ ನೆಲೆಸಿದ ಪುರಾಣ ಪುರುಷರು.

> Some of the principal clans appercantly are desecended from the so called aboriginal tribes Gonds, Bhars, Kols and the like whom Sir Herhert Risley designated by the singularly in appropriate generic name of 'Dravidioans' one of the most misleading terms ever introduced.[೫೯]

ಹೀಗೆ ಸ್ಮಿಥ್‌ನಿಗೂ ರಜಪೂತರ ಪೂರ್ವಸಂಬಂಧಗಳನ್ನು ವಿಂಧ್ಯ ನಿವಾಸಿಗಳಿಗೆ (ಗೊಂಡ, ಭಾರ ಮೊದಲಾದವರಿಗೆ) ಒಯ್ದು ಹಚ್ಚಬೇಕಾಗಿದೆ. ಕನ್ದರಿಗೂ ಕನ್ನಡರಿಗೂ ಹತ್ತಿರ ಅಂದರೆ ತೀರ ಹತ್ತಿರ. ಆರು-ಏಳನೆಯ ಶತಮಾನದಿಂದ ಹದಿಮೂರನೆಯ ಶತಮಾನದ ವರೆಗೆ ದಕ್ಷಿಣದಲ್ಲಿ ಅತುಲ ಶೌರ್ಯ ಪರಾಕ್ರಮಾದಿಗಳಿಂದ ಲೋಕವಿಖ್ಯಾತರಾದವರೆಂದರೆ 'ಕರ್ಣಾಟಕ ಕ್ಷತ್ರಿಯ'ರಲ್ಲದೆ ಬೇರಿನ್ನಾದರೂ ಅಲ್ಲ. ಹೀಗಿರುವಾಗ ರಜಪೂತರ ಉಗಮವನ್ನು ಹುಡುಕುವುದಕ್ಕೆ ಸುಮ್ಮನೆ ಇಷ್ಟೇಕೆ ಪರಿಶ್ರಮ? ಬೇಕಾದ ಬಳ್ಳಿ ಕಾಲಿಗೆ ತೊಡಕಿರುವಾಗ ನಾಡನೆಲ್ಲ ಅಲೆಯುವುದೇಕೆ? ಉತ್ತರದಲ್ಲಿ ಆಳಿದ ರಾಠೋರರೂ ರಟ್ಟರ (ನಾಡವರ) ಸಂಬಂಧಿಗಳೇ ಏಕೆ ಇರಬಾರದು? ಹಿಂದುಸ್ತಾನದ ಉತ್ತರ ದಕ್ಷಿಣಗಳೆರಡರಲ್ಲಿಯೂ ಸಾಧಾರಣವಾಗಿ ಆರರಿಂದ ಹದಿಮೂರನೆಯ ಶತಮಾನದ ವರೆಗೆ ತಳತಳನೆ ತೊಳಗಿ ಬೆಳಗಿದ ಗಂಡುಗಲಿಗಳ ಮಹಾಪ್ರವಾಹದ ಮೂಲವು ವಿಂಧ್ಯ ಗಿರಿಯಲ್ಲಿ. ಭಾರತದ ಇತಿಹಾಸದಲ್ಲಿ ಸಿಂಧು ನದಿಯ ಯುಗವು ಒಂದಾಯಿತು. ಗಂಗಾ-ಯಮುನೆಗಳಿಗೆ ಮಹಾತ್ಮ್ಯವಿದ್ದ ಒಂದು ಕಾಲವಾಯಿತು. ಆದರೆ, ಕ್ರಿಸ್ತಶಕದ ಆರಂಭವಾಗುವುದಕ್ಕೆ ಮೊದಲೆ ೨೫೦ ವರುಷಗಳಿಂದ ನರ್ಮದಾ ನದಿಗೆ ಪಟ್ಟವು ಬಂದಿತು. ಅದು ದಕ್ಷಿಣದ ವರಿಗೆ ಗ್ರಹಬಲವಿದ್ದ ಕಾಲ. ಐತಿಹಾಸಿಕ ಸಂಗತಿಗಳೂ ಇದನ್ನೇ ಸೂಚಿಸುತ್ತವೆ.

ರಟ್ಟರು (ನಾಡವರು) ಉತ್ತರದಲ್ಲಿ ರಾಠೋರರೆನಿಸಿರಬೇಕು; ಪುಲಿಮಾಯಿ, ಪುಲಿಕೇಶಿಗಳ-ಕನ್ನಡ ಗೋವಳರ ವ್ಯಾಘ್ರಪೂಜಕ ವಂಶಜರೆ ಉತ್ತರದಲ್ಲಿ 'ವಾಘೇಲರು' 'ವ್ಯಾಘ್ರಮುಖರು' ಎಂಬ ಮನೆತನದ ರಾಜಪುತ್ರರಾಗಿರುವ ಸಂಭವವಿಲ್ಲವೆ? ಚಲುಕ್ಯರು (ಅಂದರೆ ಅಗ್ರಗಣ್ಯರು) ಉತ್ತರದಲ್ಲಿ ಸಾಳುಂಕಿ ಮನೆತನದವರೆ ಏಕೆ ಆಗಿರಬಾರದು? 'ಉತ್ತರದವರು ದಕ್ಷಿಣಕ್ಕೆ ಬಂದು ರಾಜ್ಯ ಸ್ಥಾಪಿಸಿದರು' 'ಉತ್ತರದವರೆ ಶೂರರು' 'ದಕ್ಷಿಣದವರು ಕೈಲಾಗದವರು' ಎಂದು ತ್ರಿಕಾಲಾಬಾಧಿತ ಸಿದ್ಧಾಂತವನ್ನೆ ಮಾಡಿಟ್ಟುಕೊಂಡವರೊಡನೆ ಮಾತನಾಡುವುದೆ ಸಾಧ್ಯವಿಲ್ಲ. ಪೂರ್ವಗ್ರಹಗಳನ್ನು ಬದಿಗಿರಿಸಿ ಸತ್ಯವನ್ನು ಅರಿತುಕೊಳ್ಳಬೇಕೆಂದಿಚ್ಛೆಯಿದ್ದವರು ಇಲ್ಲಿ ಸ್ವಲ್ಪ ಶಾಂತರೀತಿಯಿಂದ ವಿಚಾರಿಸುವ ಹಾಗಿದೆ. 'ಆರಂಭಶೂರಾಃ ಖಲುದಾಕ್ಷಿಣಾತ್ಯಾಃ' ಎಂದು ತಮ್ಮ ನಿತ್ಯಸ್ಮರಣಮಂತ್ರ ಮಾಡಿಟ್ಟು ಕೊಂಡಿದ್ದವರು ಶ್ರೀ ವ್ಯಾಸರು ಭಾರತದಲ್ಲಿಯೆ ವರ್ಣಿಸಿರುವ ಉತ್ತರಕುಮಾರರ ಅಜರಾಮರ ಚಿತ್ರವನ್ನು ಕಣ್ಣೆದುರಿಗೆ ತಂದುಕೊಳ್ಳಬೇಕು. ಅದಕ್ಕೆ ಇದನ್ನು, ಇದಕ್ಕೆ ಅದನ್ನು ಸಾಟಿ ಮಾಡಿ ಮುಂದೆ ವಿವೇಕದಿಂದ ವಿಚಾರಿಸಬೇಕು. ಬಂಗಾಳಿ, ಮಿಥಿಲೆ, ನೇಪಾಳಗಳಲ್ಲಿ ಹೋಗಿ ರಾಜ್ಯಸ್ಥಾಪನೆ ಮಾಡಿದವರು ಯಾರು? ಕರ್ಣಾಟ ಕ್ಷತ್ರಿಯರೇ ಅಲ್ಲವೆ? ಗುಜರಾತ, ಕಲಿಂಗ ದೇಶಗಳನ್ನು ಗೆದ್ದು ಮಾಳವಾ ದೇಶವನ್ನು ಸೂರೆಗೆಯ್ದು ಮೇಲಿಂದ ಮೇಲೆ ತಮ್ಮ ವಿಜಯಧ್ವಜಗಳನ್ನು ಅಲ್ಲಿ ನಿಲ್ಲಿಸಿದ ಚಲುಕ್ಯ ರಾಷ್ಟ್ರಕೂಟರು ದಕ್ಷಿಣದವರು ತಾನೆ?

ಆರ್ಯ ಧರ್ಮವು ಮುಸಲ್ಮಾನರ ಆಘಾತಕ್ಕೆ ನೆಲಕ್ಕುರುಳಿ ಹೊರಳಾಡುತ್ತಿರುವಾಗ ಅದನ್ನೆತ್ತಿ ಪುನರುದ್ಧಾರ ಮಾಡಿದ ಮಹಾಮಾಹಿಮರು ಸಾಯಣಮಾಧವರು, ಹುಕ್ಕಬುಕ್ಕರು ಯಾವ ನಾಡಿನವರು? ಸುಮ್ಮನೆ ಉತ್ತರದ ಒಣ ಹೆಮ್ಮೆಯಿಂದ ಬಂದುದೇನು?

ಆದುದರಿಂದ, ಕ್ರಿಸ್ತಿಶಕದ ಆರಂಭಕ್ಕಿಂತ ಸ್ವಲ್ಪ ಮೊದಲಿನಿಂದಲೆ ಕರ್ಣಾಟಕದಲ್ಲಿ ಬಂದ ಶೌರ್ಯ ಸಾಹಸಾದಿಗಳ ಹಿರಿನೆರೆಯು-ಮಹಾಪ್ರವಾಹವು ಉತ್ತರ ದಿಕ್ಕಿಗೂ ಹರಿದು ಅಲ್ಲಿಯೂ ತನ್ನ ತೇಜೋವಿಶೇಷದಿಂದ ಹೊಳೆ ಹೊಳೆದು ಮಾಯವಾಗಿದ್ದರೆ ಸೋಜಿಗವೇಕೆ? ಕೇವಲ ಉತ್ತರದ ಪಕ್ಷಪಾತದಿಂದ ಕರ್ಣಾಟದ ಕೀರ್ತಿಸೂರ್ಯನನ್ನು ಕಲಂಕಿತ ಮಾಡುವುದು ಅದಾವ ಜಾಣ್ಮೆ? ಅಂತೂ ಕನ್ನಡರ-ರಾಷ್ಟ್ರಕೂಟಾದಿಗಳ ಏಳಿಗೆಯ ಮೂಲವನ್ನು ಅರಿತುಕೊಳ್ಳಬೇಕಾದರೆ ವಿನ್ಸೆಂಟ ಸ್ಮಿಥ್‌ನ ಅಭಿಪ್ರಾಯದಂತೆ ಸಹ ವಿಂಧ್ಯದ ಹತ್ತರಕ್ಕೆ ಹೋಗುವುದು ಅವಶ್ಯಕವಾಗಿದೆ. ಈ ಬಗೆಯಾಗಿಯೂ ಮೂಲ ಕರ್ಣಾಟದ ಸ್ಥಾನವನ್ನು ಕುರಿತು ಬೇರೆ ಹಲವು ಬಗೆಗಳಿಂದ ಊಹಿಸಿದಂತೆ ಮತ್ತೆ ನರ್ಮದಾ ತೀರಕ್ಕೆ ಬಂದು ನಿಲ್ಲಬೇಕಾಗುವುದು ಅನಿವಾರ್ಯ. ಗೋದಾವರಿಯ ಉತ್ತರದಲ್ಲಿ ದೇವಗಿರಿ ರಾಜಧಾನಿಯನ್ನು ಮಾಡಿಕೊಂಡು ೧೨೦೦-೧೩೦೦ರಲ್ಲಿ ಆಳಿದವರು ಯಾದವರು. 'Yadawas are Brahminised Kurumbas' ಎಂದು ಟೇಲರನ ಅಭಿಪ್ರಾಯ.[೬೦]

ದೇವಗಿರಿ ನಾಡಿನಲ್ಲಿ ಕುರುಂಬರು ಬಂದರೆಲ್ಲಿಂದ? ನಾಗಪೂರ ಚಂದಾಗಳ ಕಡೆಗೆ ಇನ್ನೂ ಕುರುಂಬರುಂಟು. ಆ ನಾಡಿಗೆ ಕುರುಂಬರೇನು ಹೊಸಬರಲ್ಲ. ಗುಜರಾತಿನ ಕಡೆಗೂ ಕನ್ನಡ ಗೋವಳರು ಒಂದು ಕಾಲಕ್ಕಿದ್ದರು. ಅಲ್ಲದೆ, ಹಳೇಬೀಡಿನ ಹೊಯಿಸಳರೂ ದೇವಗಿರಿ ಯಾದವರೂ ಪೂರ್ವಾನುಬಂಧಿಗಳು. ದೇವಗಿರಿಯಲ್ಲಿ ಆಳಿದ ಅರಸರ ಹೆಸರುಗಳನ್ನು ನೋಡಿದರೂ ಅವರ ಮನೆತನದಲ್ಲಿ ಬೇರೂರಿದ್ದ ಕನ್ನಡವು ಚೆನ್ನಾಗಿ ಗೋಚರವಾಗದೆ ಇರದು. ಧಾಡಿಯಪ್ಪಾ, ಅಮ್ಮಣ (ಅಮಣ), ಮಲ್ಲುಗಿ, ವೇಸುಗಿ, ಈರಮ್ಮದೇವ ಇವು ಅರಸು ಮನೆತನದವರ ಹೆಸರು. ಲಸ್ಥಿಯವ್ವಾ, ಅವ್ವಲದೇವಿಯರು ಪಟ್ಟಮಹಿಷಿಯರು.[೬೧] ಹೆಮ್ಮಾಡಿ, ಪಿಪ್ಪರಸ, ವಿತ್ತರಸ, ಬೀಚಣ್ಣನ ಮಗ ಚೌಂಡರಸ, ಮಲ್ಲಿಶೆಟ್ಟಿ, ಚೌಂಡಿಶೆಟ್ಟಿ, ಕಾಮಯ್ಯನಾಯಿಕ ಮೊದಲಾದವರು ಈ ಯಾದವರಾಯರ ಮಂತ್ರಿವರೇಣ್ಯರು; ಹೆಗ್ಗಡೆಗಳು! ಇವರ ಶಿಲಾಶಾಸನಗಳೆಲ್ಲ (೮-೧೦ ಬಿಟ್ಟು) ಚೊಕ್ಕ ಕನ್ನಡದಲ್ಲಿ! ಮರ್ರಾಟಿಗಳು ಏನು ಹೇಳುವರು ಗೊತ್ತೆ? 'ಮಹದೇವರಾಯನ (೧೨೬೦) ಕಾಲದಲ್ಲಿ, ರಾಮದೇವನ (೧೨೭೧) ಕಾಲದಲ್ಲಿ ಮರ್ರಾಟಿಗೆ ಒಡ್ಡೋಲಗದಲ್ಲಿ ಮನ್ನಣೆ ದೊರೆತಿತು.' ಹೇಮಾಡ ಪಂಡಿತನು ರಾಮದೇವನ ಕಾಲದಲ್ಲಿ ಮರ್ರಾಟಿಗೆ ತುಂಬಾ ಆಶ್ರಯವನ್ನಿತ್ತುದಕ್ಕಾಗಿ ಕೃತಜ್ಞತಾಭಾವಭರಿತರಾಗಿ ಆತನನ್ನು ಕೊಂಡಾಡಿದ ಮರ್ರಾಟಿಗನೆ ಇಲ್ಲ. ಅದಂತಿರಲಿ, ಮಹಾದೇವರಾಯನ ಕಾಲದವರೆಗೆ ಅಂದರೆ ಕ್ರಿ. ಶ. ೧೨೬೦ರ ತನಕ ಯಾದವರ ಒಡ್ಡೋಲಗದಲ್ಲಿ ನಡೆಯುತ್ತಿದ್ದ ಭಾಷೆಯು ಆವುದು? ಸಂಸ್ಕೃತವು ಮೊದಲೆ ಅಲ್ಲ, ಪ್ರಾಕೃತವಂತೂ ಆಗ ಇರಲೇ ಇಲ್ಲ. ಮರ್ರಾಟಿ ತಲೆಯೆತ್ತಿರಲಿಲ್ಲ (ಮರ್ರಾಟಿಗಳೆ ಒಪ್ಪುವರು). ಹಾಗಾದರೆ ಅಲ್ಲಿಯ ರಾಜಮಾನ್ಯ ಭಾಷೆಯು ಆವುದು? ಸರ್ ರಿಸ್ಲೇ ಸಾಹೇಬನ ಭಾಷೆಯಲ್ಲಿ ಹೇಳುವುದಾದರೆ ದ್ರವಿಡಿಯನ್; ಪೌರಾಣಿಕರ ಮಾತಿನಲ್ಲಿ ಉಸಿರಬೇಕಾದರೆ ಆಂಧ್ರ; ಹ್ಯೂಯನ್ ತ್ಸಾಂಗ (ಶ್ರೀ ವೈದ್ಯ) ಪ್ರಭೃತಿಗಳ ನುಡಿಯಲ್ಲಿ ನುಡಿಯಬೇಕಾದರೆ 'ಮಹಾರಾಷ್ಟ್ರ ಭಾಷಾ'! ಆದರೆ ನಿಶ್ಚಯವಾಗಿಯೂ ಅಲ್ಲಿದ್ದುದು ಕನ್ನಡ.

'ಯಾದವರು ಮರ್ರಾಟರು' ಎಂದು ಹೇಳುವುದಕ್ಕೆ ಸಾಧಾರಣವಾದ ಐತಿಹಾಸಿಕ ಪ್ರಮಾಣಗಳೇನೂ ದೊರೆಯದ್ದರಿಂದ ಮರ್ರಾಟಿಗಳು ಶಬ್ದ ಶ್ಲೇಷಗಳಿಂದ ತಮ್ಮ ಈ ಕೆಲಸವನ್ನು ಪೂರೈಸಿಕೊಳ್ಳುತ್ತಲಿದ್ದಾರೆ. ಯ=ಜ; ಯಮುನಾ, ಜಮುನಾ; ಹಾಗೆ ಯಾದವ=ಜಾಧವ. ಜಾಧವರು ಈಗ ಮರ್ರಾಟಿ ದೇಶದಲ್ಲಿದ್ದಾರೆ. ಮರ್ರಾಟಿ ಮಾತನಾಡುತ್ತಾರೆ. ಆದಕಾರಣ, ಯಾದವರು ಅಂದರೆ ಜಾಧವರು ಮರ್ರಾಟರು! ರೆಡ್ಡಿಗಳು ತೆಲುಗು ನಾಡಿನಲ್ಲಿ ರುವುದರಿಂದ, ತೆಲುಗು ಮಾತಾಡುವದರಿಂದ ಅವರು ಆಂಧ್ರರು, ತೆಲುಗರು ಎಂದು ಹೇಳುವುದಕ್ಕೆ ಎಷ್ಟು ಬೆಲೆಯೊ ಅಷ್ಟೆ ಯಾದವರು-ಜಾಧವರೆಲ್ಲ ಮರ್ರಾಟರು ಎನ್ನುವುದಕ್ಕೂ, ಅಡ್ಡಹೆಸರುಗಳ ಮೇಲಿಂದ

ಸಾಮ್ಯವನ್ನು ಹುಡುಕುವುದಕ್ಕೂ ಒಂದು ಸ್ಥಾನವಿದೆ. ಆದರೆ, ಅದೊಂದೇ ಆಧಾರದ ಮೇಲಿಂದ ಒಮ್ಮೆಲೆ ಕೊನೆಯ ನಿರ್ಣಯಕ್ಕೆ ಹಾರುವುದು ಅಷ್ಟು ಸರಿಯಾದುದಲ್ಲ. ಉಳಿದ ಹಲಕೆಲವು ಪ್ರಮಾಣಗಳೊಡನೆ ಅದೂ ಒಂದನ್ನು ಹೇಳಬಹುದು. ಟಕ್ಕರ ಠಾಕುರನು 'ಥ್ಯಾಕರೆ' ಆಗಿ ಇಂಗ್ಲೆಂಡಿನೊಳಗಿನ ತನ್ನ ಒಬ್ಬ ವಂಶಜನೆ ಆ ಪ್ರಖ್ಯಾತನಾದ ಸಾಹಿತಿ; ಎಂದು ಕೊನೆಯಕೊಬ್ಬಿ ಹೇಳುವುದು ಕೇವಲ ಹಾಸ್ಯಾಸ್ಪದವಾಗಲಿಕ್ಕಿಲ್ಲವೆ? ಮುಂಬೈ ಹತ್ತಿರದ ಕಲ್ಯಾಣವು ಈಗ ಪ್ರಸಿದ್ಧಿಗೆ ಬಂದಿದೆಯೆಂದು ಪ್ರಾಚೀನ ವೈಭವಶಾಲಿಯಾದ ಕಲ್ಯಾಣವೂ (ಕಲಬುರ್ಗಿ ಕಡೆಯದು) ತಾನೆ ಎಂದ ಹಾಗೆ! ಇತಿಹಾಸವು, ಚಲುಕ್ಯರು ರಾಷ್ಟ್ರಕೂಟರು ಯಾದವರೆಲ್ಲ ಕನ್ನಡಕ್ಕೆ ಮನ್ನಣೆಯನಿತ್ತ ಮನೆತನದರೆಂದೆ ಸಾರುತ್ತಿದೆ. ಬಂಗಾಳಿನ ಸುವಿಖ್ಯಾತ ಇತಿಹಾಸ ಸಂಶೋಧಕರಾದ ಶ್ರೀ ರಾಖಲದಾಸ ಬ್ಯಾನರ್ಜಿಯವರು ತಮ್ಮ ಇತಿಹಾಸದಲ್ಲಿ ಇವರನ್ನು ಕರ್ಣಾಟ ವಿಭಾಗದಲ್ಲಿಯೆ ಸೇರಿಸಿದ್ದಾರೆ.

ಮಹಾದೇವರಾಯನ ಓಲಗದಲ್ಲಿ (೧೨೬೦-೭೧) ಆದೆ ಉದಯ ಹೊಂದಿದ್ದ ಮಹಾನುಭಾವಪಂಥದ ಶರಣರಿಗೂ ಶರಣೆಮ್ಮನವರಿಗೂ ಮರ್ಯಾದೆಯು ಸಲ್ಲಲಾರಂಭವಾಗಿ ಅವರೊಡನೆ ಅಲ್ಲಿ ಮರ್ಹಾಟಿಯ ಪ್ರವೇಶವೂ ಆಯಿತು. ಮರ್ಹಾಟಿಯ ಆದ್ಯ ಲೇಖಕರೆ ಮಹಾನುಭಾವರು. ಮರ್ಹಾಟಿಯ ಹೊರತು ಉಳಿದ ಭಾಷೆಯಲ್ಲಿ ಗ್ರಂಥರಚನೆಯನ್ನು ಎಂದೆಂದೂ ಮಾಡುವ ಹಾಗಿಲ್ಲವೆಂದು ಇವರಿಗೆ ಗುರ್ವಾಜ್ಞೆ. ಆದುದರಿಂದ ಮಹಾನುಭಾವರ ಏಳಿಗೆಯೆಂದರೆ ಮರ್ಹಾಟಿಯ ಬೆಳಗೆ. ಮಹಾದೇವನ ನಂತರ ರಾಮದೇವನಂತೂ ಮಹಾನುಭಾವರನ್ನು ತನ್ನ ಅರಮನೆಯಲ್ಲಿಯೆ ತಂದಿರಿಸಿಕೊಂಡನು. ರಾಮದೇವನ ಚಿಕ್ಕ ಹೆಂಡತಿಯ ಪುರಾಣಿಕನು, ಗುರೂಪದೇಶ ಕೊಟ್ಟವನು ಮಹಾನುಭಾವನು.[೬೨] ರಾಮದೇವನ ಹೇಮಾಡಮಂತ್ರಿಯ ಪರಿಶ್ರಮಗಳಿಂದ ಮರ್ಹಾಟಿಗೆ ಇನ್ನಿಷ್ಟು ಬಣ್ಣ ಬಂದಿತು. ಈತನು ದಕ್ಷಿಣಕ್ಕೆ (ಲಂಕೆಗೆ) ಹೋಗಿ ಮೋಡಿಲಿಪಿಯನ್ನು ತಂದು ಮರ್ಹಾಟಿಯ ಮೇಲೆ ಅನಂತ ಉಪಕಾರಗಳನ್ನು ಮಾಡಿದನೆಂದು ಆ ಭಾಷೆಯಲ್ಲಿ ಉಲ್ಲೇಖಗಳಿವೆ. ಶ್ರೀ ಸಿಂಧೆಯವರು ಈ ವಿಷಯಕ್ಕೆ ಬರೆಯುವಾಗ ಹೇಮಾಡನಿಗೆ ಮೋಡಿಲಿಪಿಯನ್ನು ಕಲಿತುಕೊಂಡು ಬರುವುದಕ್ಕೆ ಲಂಕೆಯ ವರೆಗೆ ಹುಡುಕುತ್ತ ಹೋಗುವ ಕಾರಣವೆ ಇದ್ದಿಲ್ಲ![೬೩] ಲಂಕೆಯೆಂಬುದು ಅತಿಶಯೋಕ್ತಿ. ಲಂಕೆಯೆಂದು ಹೇಳಿ ಕನ್ನಡದಿಂದ ಈ ಲಿಪಿಯನ್ನು ಕಲಿತುಕೊಂಡೆವೆಂದು ಒಪ್ಪಿಕೊಳ್ಳಲಿಕ್ಕೆ ಮರ್ಹಾಟಿಗಳು ಮೊಟ್ಟ ಮೊದಲಿನಿಂದಲೂ ಎಷ್ಟು ಹಿಂಜರಿಯುತ್ತಿರುವರು ನಾಚಿಕೊಳ್ಳುತ್ತಿರುವರೆಂಬುದೆ ಇಲ್ಲಿ ವ್ಯಕ್ತವಾಗುತ್ತದೆ. ಮೋಡಿ ಈ ಶಬ್ದವೆ ಮುರಿ ಎಂಬ ಕನ್ನಡ ಧಾತುವಿನಿಂದ. ಶ್ರೀ ಸಿಂಧೆಯವರು 'ಮೋಡಿ' ಲಿಪಿಯನ್ನು ಹೇಮಾಡನು ಕನ್ನಡದಿಂದ ಕಲಿತುಕೊಂಡನೆಂದು' ಇಷ್ಟೆ ಹೇಳಿ ಬಿಟ್ಟಿಲ್ಲ. ಮರ್ಹಾಟಿ ಮೋಡಿಗಳೊಳಗಿನ ಚ,ಠ,ಥ,ದ,ಪ,ರ,ಸ ಅಕ್ಷರಗಳನ್ನು ವಿಮರ್ಶಿಸಿದರೆ ಈ ಕನ್ನಡ ಅಕ್ಷರಗಳಿಗೂ ಅವುಗಳಿಗೂ ಇರುವ ಬಾಂಧವ್ಯವು ಚೆನ್ನಾಗಿ ಅನುಭವಕ್ಕೆ ಬರುವುದೆಂದು ಅಭಿಪ್ರಾಯಪಟ್ಟಿದ್ದಾರೆ.

ಹೇಮಾಡನು ಪ್ರಯತ್ನಪಟ್ಟು ಮೋಡಿಯನ್ನು ಸಿದ್ಧಪಡಿಸುವವರೆಗೆ (ದೇವನಾಗರಿಯಲ್ಲದೆ) ಸ್ವಂತದ ಬೇರೆ ಲಿಪಿ ಇಲ್ಲದ ೧೯ನೆಯ ಶತಮಾನದ ವರೆಗೆ ವ್ಯಾಕರಣ ನಿಯಮನಿರ್ಬಂಧಗಳೇನೆಂಬುದೆ ಗೊತ್ತಿಲ್ಲದೆ ತುಂಬಣೆ, ನಡಣೆ, ಪಿಳಣೆ ಎಂದು ಮುಂತಾಗಿ ಕನ್ನಡ ಧಾತುಗಳನ್ನೆತ್ತಿ ಕೊನೆಗೆ ಪ್ರಾಕೃತ ಪ್ರತ್ಯಯಗಳನ್ನು ಅಂಟಿಸಿ ವಾಕ್ಯರಚನೆ ಯನ್ನು ಮಾಡುತ್ತಿದ್ದ ಅರೆಭಾಷೆಯು ೧೩ನೆಯ ಶತಮಾನದಲ್ಲಿ ಸಮೃದ್ಧ ಸಾಹಿತ್ಯವುಳ್ಳ ವಂಶಾನುವಂಶಗಳಿಂದ ನಡೆದು ಬಂದ ಕನ್ನಡವನ್ನು ಹೇಗೆ ಹೊರದೂಡಿರಬಹುದೆಂಬುದು ಇಂದಿಗೂ ನಮಗೆಲ್ಲ ಬೋಧ ಪ್ರದಾಯಕವಾಗಿದೆ. ಮರಹಟ್ಟೆ ನಾಡಿನಲ್ಲಿ (ವರ್ಹಾಟದಲ್ಲಿ) ಬಂದು ನೆಲೆಸಿದ ತ್ರೈವರ್ಣಿಕರಲ್ಲಿ ಬ್ರಾಹ್ಮಣರಿಗಂತೂ ಸಂಸ್ಕೃತಭಾಷೆ ಯಾಯಿತು. ಉಳಿದವರು ಏನು ಹೇಗೆ ಮಾತನಾಡುತ್ತಿರಬಹುದೆಂಬುದರ ಸರಿಯಾದ ಕಲ್ಪನೆಯು ಬರಬೇಕಾಗಿದ್ದರೆ ನಮ್ಮ ಊರುಗಳಲ್ಲಿ ಬಂದು ಜನಸಾಮಾನ್ಯರೊಡನೆ ವ್ಯವಹರಿಸುವಾಗ ಮಾರವಾಡಿಯನ್ನು ನೋಡಬೇಕು. ಅವನು ಒಂದು ಹೊಸತಾದ ಮಿಶ್ರಭಾಷೆಯನ್ನೆ ನಿರ್ಮಿಸುವನು. ಹಾಗೆ ಆಗಿನ ಉಳಿದ ಎರಡು ವರ್ಣದವರ ಹಾಡು ಆಗಿರಬೇಕು.

ಆದರೆ, ಬ್ರಾಹ್ಮಣರಿಗೆ ಬರುಬರುತ್ತ ವೈದಿಕಮಾರ್ಗವು ತಪ್ಪಿತು; ಸಂಸ್ಕೃತದ ಸಂಪರ್ಕವು ಕಡಿಮೆಯಾಯಿತು.

ಲೌಕಿಕವೃತ್ತಿಗಳ ಬೆನ್ನು ಹತ್ತಿದರು. ಆಗ ಅವರಿಗೆ ತಾವು ನಿಂತ ನಾಡಿನ ಭಾಷೆಯನ್ನು ಅರಿತುಕೊಳ್ಳುವ ಅಗತ್ಯ ವುಂಟಾಯಿತು. ಬ್ರಾಹ್ಮಣರೂ ನಾಡವರಾದರು. ಆದರೂ ಅಂತರಾಳದೊಳಗಿನ ಸಂಸ್ಕೃತ ಭಾಷೆಯ ಅಭಿಮಾನ ಪ್ರೀತಿಗಳು ಮಾತ್ರ ಎಳ್ಳಷ್ಟೂ ಕಡಿಮೆಯಾಗಲಿಲ್ಲ. ಒಟ್ಟು ಪ್ರಾಕೃತ ಭಾಷೆಗಳೆಲ್ಲವನ್ನೂ ಹೀಯಾಳಿಸಿ ನುಡಿವ ಒಂದು ಕಾಲವಿದ್ದಿತು. ಆದರೆ ಅದರ ಬದಲು ಸಂಸ್ಕೃತ, ಸಂಸ್ಕೃತವಿಲ್ಲದಿದ್ದರೆ ಕೊನೆಗೆ ಸಂಸ್ಕೃತಕ್ಕೆ ಸಮಿಸಮೀಪವೆಂದು ಭಾಸವಾಗುವ ಭಾಷೆಯನ್ನಾದರೂ ಆಡಬೇಕು, ಎಂಬ ಆತ್ಮೀಯ ಭಾವನೆಯು ಬ್ರಾಹ್ಮಣ ವರ್ಗದಲ್ಲೆಲ್ಲ ಪ್ರಬಲವಾಗಿದ್ದುದು ಸ್ವಾಭಾವಿಕವಾಗಿದೆ. Blood is thicker than water. ಕನ್ನಡವು ಆರ್ಯಭಾಷೆಯಿಂದ ದೂರಿನದು. ಇದನ್ನು ಕಡೆಗಣ್ಣಿನಿಂದ ನೋಡುತ್ತಿದ್ದರೆ ಸೋಜಿಗವಲ್ಲ. ಕನ್ನಡಕ್ಕೆ ("Greek and Latin") ಗೂಢವೆಂಬ ಅರ್ಥ ಮರಾಠಿಯಲ್ಲಿ. ನಿರ್ವಾಹವಿಲ್ಲದಿದ್ದರೆ ಆ ವ್ಯವಹಾರದ ಮಟ್ಟಿಗೆ ಕನ್ನಡ ಕಲಿಯುವುದು. ಈ ವೃತ್ತಿಯಿಂದಲೆ ವಿಶೇಷವಾಗಿ ಬ್ರಾಹ್ಮಣರು ನಡೆದುಕೊಂಡರು. ಇಂತಹ ಕಾಲದಲ್ಲಿಯೆ ಕನ್ನಡ ಶಬ್ದಗಳ ಅರ್ಥ ಸ್ಪಷ್ಟೀಕರಣಕ್ಕಾಗಿ ಆ ಕನ್ನಡ ನುಡಿಗಳೊಡನೆಯೆ ಸಮಾನಾರ್ಥಕ ಸಂಸ್ಕೃತ ಪದಗಳನ್ನು ಸೇರಿಸಿ ಹೇಳುವ ರೂಢಿಯು ತಲೆದೋರಿರಬೇಕು. ಕೂಡಲಸಂಗಮ, ಮರಹಟ್ಟೆ ಮಹಾರಾಷ್ಟ್ರ (ವರ್‍ಹಾಡ ಮಹಾರಾಷ್ಟ್ರ) ಎಂಬಿವೆ ಇವಕ್ಕೆ ದೃಷ್ಟಾಂತ. ಬ್ರಾಹ್ಮಣರು ಕನ್ನಡದಲ್ಲಿ ಸಾಹಿತ್ಯ ನಿರ್ಮಾಣಕ್ಕೆ ಆರಂಭಮಾಡಿದುದು ತೀರ ಕೊನೆಕೊನೆಗೆ! ರಾಮದೇವನ ಮಂತ್ರಿ ಹೇಮಾಡನು ಹೆಸರಿನಿಂದಲೆ ಆತನು ಕನ್ನಡನೆಂದು ಗೊತ್ತಾಗುವಂತಿದೆ. ಆದರೆ, ಆತನು ಯಾದವರ ಒಡ್ಡೋಲಗದಿಂದ ಕನ್ನಡವನ್ನು ಬೇರುಸಹಿತ ಕಿತ್ತೊಗೆದುದನ್ನು ವಿಚಾರಿಸಿದರೆ ಬ್ರಾಹ್ಮಣರಿಗೆ ಮನಸ್ಸಿನ ಮೂಲೆಯೊಳಗೆ ಎಲ್ಲಿಯೊ ಕನ್ನಡದ ಬಗ್ಗೆ ತಿರಸ್ಕಾರ, ಸಂಸ್ಕೃತಿ ಅಥವಾ ತತ್‌ಸಮಾನ ವೆನಿಸುವ ಭಾಷೆಯ ವಿಷಯಕ್ಕಿದ್ದ ಎಳೆತವು ಎಷ್ಟು ಕಸುವುಳ್ಳದ್ದಿತ್ತು ಎಂಬುದನ್ನು ಚೆನ್ನಾಗಿ ಮನಗಾಣಬಹುದು. ಬ್ರಾಹ್ಮಣರಿಗೆ ಸಂಸ್ಕೃತವು ಕೈಬಿಟ್ಟಿತು; ಕನ್ನಡವನ್ನು ಅಭ್ಯಾಸಮಾಡುವ ಇಚ್ಛೆಯಿಲ್ಲ. ಅದು ಜೈನರ ಲಿಂಗವಂತರ ಭಾಷೆ. ಹಾಗಾದರೆ ಇನ್ನೇನು ಗತಿ? ಮರಹಟ್ಟೆ ನಾಡಿನಲ್ಲಿ ಈ ಇರುಕಿನಲ್ಲಿ ಸಿಕ್ಕ ಬ್ರಾಹ್ಮಣವರ್ಗವು ಮರ್‍ಹಾಟಿಯನ್ನು ಕೈಕೊಂಡಿತು. 'ಮರ್‍ಹಾಟಿಯೇನು ಕಳ್ಳರ ಭಾಷೆಯೆ? ಇದು ಅಮೃತವನ್ನೂ ಸಹ ತನ್ನ ಮಾಧುರ್ಯದಲ್ಲಿ ಹಿಂದಿಕ್ಕಬಹುದು' ಎಂದು ಜ್ಞಾನದೇವನಂತಹ ಸಾಧುಪುರುಷನು ಮರ್‍ಹಾಟಿ ಕೈವಾರಿಯಾದನು.

ಜ್ಞಾನದೇವನು ಮರ್‍ಹಾಟಿಗೆ ಓಲಗದಲ್ಲಿ ರಾಜಾಶ್ರಯವನ್ನಿತ್ತ ರಾಮದೇವನನ್ನು ಹೊಗಳಿರುವುದನ್ನು ನೋಡಿದರೆ ಆತನಲ್ಲಿ ಸಾಧುತ್ವದ ಸಮತೂಕಕ್ಕಿಂತಲೂ ವ್ಯವಹಾರೋಪಯುಕ್ತತಾವಾದವೆ ಹೆಚ್ಚಾಗಿದ್ದಿತೆಂದು ಹೇಳಬೇಕಾಗುತ್ತದೆ. ಏಕೆಂದರೆ ರಾಮದೇವನನ್ನು ಶ್ರೀ ಜ್ಞಾನೇಶ್ವರರು ದೇವರ ಸಮಾನನೆಂಬುವಂತೆ ಮುಕ್ತ ಕಂಠದಿಂದ ಹೊಗಳಿದ್ದಾರೆ. ಆದರೆ, ಇತಿಹಾಸವು ಹೇಳುವ ರಾಮದೇವನ ಕಥೆಗಳನ್ನು ಓದಿದರೆ ಜ್ಞಾನೇಶ್ವರರ ಆ ಬಗೆಯ ವರ್ಣನೆಯು ರಾಮದೇವನಲ್ಲಿದ್ದ ಮರ್‍ಹಾಟಿ ಪಕ್ಷಪಾತದ ಸಲುವಾಗಿಯೆ ಇರಬೇಕೇನೊ ಎಂದು ಸಂದೇಹವುಂಟಾಗುತ್ತದೆ. ತನ್ನ ಕಕ್ಕದ ಮಗ ಅಮಣನ ಕಣ್ಣುಗಳನ್ನು ಕಿತ್ತಿಸಿ ಆತನನ್ನು ಅಮಾನುಷ ರೀತಿಯಿಂದ ಕೊಂದು ಪಟ್ಟವೇರಿದ ರಾಮದೇವನನ್ನು ಜ್ಞಾನೇಶ್ವರರಂತಹ ಸಾಧುಗಳೆನಿಸುವವರು ನ್ಯಾಯಮಾರ್ಗಿಯಾದ ರಾಜನೆಂದು ಹೊಗಳುವುದು ಸೋಜಿಗವನ್ನುಂಟುಮಾಡುತ್ತದೆ! ಇದೆ ರಾಮದೇವನೆ ಅಲ್ಲಾವುದ್ದೀನನೊಡನೆ ತೀರ ಕೀಳುತರದ ಒಪ್ಪಂದ ಮಾಡಿಕೊಂಡು ಬರಿ ಜೀವಗಳ್ಳನ ಹಾಗೆ ವರ್ತಿಸಿದ್ದುದನ್ನು ನೋಡಿ ಯಾವ ಸ್ವಾಭಿಮಾನಿಗೂ ತಲೆ ತಗ್ಗಿಸ ಬೇಕಾಗುವುದು. (ಇವೆಲ್ಲ ಸಂಗತಿಗಳಿಗಾಗಿ ಮರ್‍ಹಾಟಿಯಲ್ಲಿ ಬರೆದ ಹೇಮಾಡಪಂತನ ಚರಿತ್ರೆಯನ್ನೋದುವದು ಅವಶ್ಯ.)

ಶ್ರೀ ಜ್ಞಾನೇಶ್ವರರಂತಹರು ಮರ್‍ಹಾಟಿಯ ಬೆನ್ನು ಕಟ್ಟಿದ ಬಳಿಕ ಅದರ ಉನ್ನತಿಗೆ ತಡವಾಗಲಿಲ್ಲ. ಕೇವಲ ಭೋ, ಜೀ ಎಂದು ಊಳಿಗದವರಾಗಿದ್ದವರ ಭಾಷೆಯಾಗಿದ್ದ ಮರ್‍ಹಾಟಿಗೆ ಬ್ರಾಹ್ಮಣನ ಬುದ್ಧಿ ಕೌಶಲದ ಸಹಾಯವು ದೊರೆತ ಬಳಿಕ ಕೇಳುವುದೇನು? ಸಂಸ್ಕೃತದ ಬದಲು ಬ್ರಾಹ್ಮಣರು, ಮರ್‍ಹಾಟಿಯೆ ತಮ್ಮ ಮೂಲಭಾಷೆಯೆನ್ನುವ ಮೋಹನಾಸ್ತ್ರವನ್ನು ಧರಿಸಿದರು. ಕನ್ನಡವನ್ನು ನಿರ್ವಾಹವಿಲ್ಲ ಅಪದ್ಧರ್ಮವೆಂಬುವಂತೆ ನುಡಿಯುತ್ತಿದ್ದ ಬ್ರಾಹ್ಮಣವರ್ಗವೆಲ್ಲ ಈ ಮೋಹಪಾಶದಲ್ಲಿ ಸಿಲುಕಿ ಕನ್ನಡಕ್ಕೆ ಕೇಡು ಬಗೆದರು! ಹೇಮಾಡಿಯೆ

ಇಂತಹ ಬ್ರಾಹ್ಮಣರ ಮಹಾ-ಪ್ರತಿನಿಧಿ. "ಜೈನಮತದ ವಿಚಾರಗಳಿಂದ ಜನರ ಮನಸ್ಸನ್ನು ವೈದಿಕಧರ್ಮದ ಕಡೆಗೆ ಒಲಿಸಿಕೊಳ್ಳುವುದಕ್ಕಾಗಿ ನಾರಾಯಣಭಟ್ಟ ಮೊದಲಾದವರು ತೆಲುಗಿನಲ್ಲಿ ಗ್ರಂಥರಚನೆಗೆ ಆರಂಭಿಸಿದರು," ಎಂದು ಶ್ರೀ ಸಿ. ಆರ್. ರೆಡ್ಡಿಯವರು Telugu Literature ಗೆ ಬರೆದು ಮುನ್ನುಡಿಯಲ್ಲಿ ಹೇಳಿದುದು ಬಹಳ ಹುರುಳುಳ್ಳ ಮಾತು. ಕನ್ನಡಭಾಷೆಯಲ್ಲಿ ಜೈನರು ಲಿಂಗವಂತರೂ ಅಮೋಘ ಸಾಹಿತ್ಯವನ್ನು ನಿರ್ಮಿಸಿದರು. ಅದರ ಪರಿಣಾಮದಿಂದ ಜನಸಾಮಾನ್ಯರು ಜೈನ-ಲಿಂಗವಂತಮತಗಳ ಕಡೆಗೆ ಹೆಚ್ಚು ಒಲವುಳ್ಳವರಾಗಿದ್ದರು. ಇದನ್ನು ಹೊಡೆದುಹಾಕುವುದಕ್ಕಾಗಿ ಬ್ರಾಹ್ಮಣರು ಕನ್ನಡದಲ್ಲಿಯೂ ಸಾಧ್ಯವಿದ್ದಷ್ಟು ಪ್ರಯತ್ನಪಟ್ಟುದು ನಿಜ. ಆದರು ಬ್ರಾಹ್ಮಣರಲ್ಲಿ ಇನ್ನೂ ಕೆಲವರು ಕನ್ನಡವು ಜೈನ-ಲಿಂಗವಂತರ ಭಾಷೆಯೆಂದು ಭಾವಿಸಿ ಇದರ ಹುಟ್ಟನ್ನೆ ಅಡಗಿಸುವುದಕ್ಕೆ ಪ್ರತಿಜ್ಞಾಬದ್ಧರಾದವರಂತೆ ಕನ್ನಡದ ಒಡಲೊಳಗೆ ಹುದುಗಿಕೊಂಡಿದ್ದ ತೆಲುಗು ಮತ್ತು ಮರ್ಹಾಟಿಗಳಿಗೆ ಧೂಪಹಾಕಿ ಮೇಲೆಬ್ಬಿಸಿದರು. ಶ್ರೀಮಾನ್ ಸಿ. ಆರ್. ರೆಡ್ಡಿಯವರು ಆ ಕಾಲದಲ್ಲಿ ತೆಲುಗಿನ ಸಾಹಿತ್ಯ ನಿರ್ಮಾಣಕ್ಕೆ ಪ್ರಚೋದಕವಾದ ಮೂಲಕಾರಣವನ್ನು ಬಹಳ ಸರಿಯಾಗಿ ಕಂಡುಹಿಡಿದಿರುವರು. ಅವರು ಕಂಡುಹಿಡಿದ ಮೂಲ ಕಾರಣವೇ ಮರ್ಹಾಟಿ ಸಾಹಿತ್ಯವಿಚಾರದಲ್ಲಿ ಅಕ್ಷರಶಃ ನಿಜವಿದೆ. ಮರ್ಹಾಟಿಯವರು ಬರಿ ಜೈನರ ವಿರೋಧಿಗಳಾಗಿ ಅಷ್ಟೆ ಅಲ್ಲ, ಕರ್ಣಾಟಕದಲ್ಲಿ ಉದಯಹೊಂದಿ ಅದೇ ಪ್ರವರ್ಧಮಾನವಾಗುತ್ತಲಿದ್ದ ಲಿಂಗವಂತ, ಮತ್ತು ಮಾಧ್ವಪಂಥಕ್ಕೂ ಚೆನ್ನಾಗಿ ಏಟುಕೊಟ್ಟುದನ್ನು ಆಗಿನ ಮರ್ಹಾಟಿ ಸಾಹಿತ್ಯದಲ್ಲಿ ಧಾರಾಳವಾಗಿ ಕಾಣಬಹುದು. "ನೂತನ ಪಾಖಂಡಿ ವೈಷ್ಣವಾ ದೇಖತಾಚಿ ಸಂತಾಪ ಉಪಜೇ ಜೀವಾ!" ಎಂದು ಮುಕ್ತೇಶ್ವರ ಕವಿಯು ಸಾರಿ ದೂರಿ ಹೇಳಿದ್ದಾರೆ.[೬೪] ಮರ್ಹಾಟಿಸಂತರು ವಿಷ್ಣುಭಕ್ತಿಯ ಪ್ರಸಾರ ಮಾಡಿದರು. ಆದರೆ, ಮಾಧ್ವಮತವನ್ನು ಮಾತ್ರ ತುಂಡರಿಸಿದರು. ಮಹಾರಾಷ್ಟ್ರದಲ್ಲಿ ಅದು ತಲೆಯೆತ್ತದಂತೆ ಮಾಡಿದರು. 'ಮಧ್ವಮುನೀಶ್ವರ'ನೆಂದು ಕವಿಯ ಹೆಸರು. ಆದರೆ ಆತನು ಬರೆದುದು ಅದ್ವೈತ ವಿಚಾರಗಳನ್ನು. ಇದರಂತೆ 'ಆಚಾರ್ಯ'ವೆಂಬ ಉಪಪದವಿದ್ದ ಹಲವು ಬ್ರಾಹ್ಮಣರು ಮಹಾನುಭಾವಪಂಥದಲ್ಲಿ ಸೇರಿಕೊಂಡುದೂ ಬೆಳಕಿಗೆ ಬಂದಿದೆ. ಜ್ಞಾನದೇವ ತುಕಾರಾಮಾದಿಗಳು ಜಂಗಮಾದಿಗಳಿಗೆ ಅಧರ್ಮಿಗಳು ಎಂದು ಹೇಳದೆ ಬಿಟ್ಟಿಲ್ಲ.

ಅಂತೂ ಕನ್ನಡ ಭಾಷೆಯ ವಿರುದ್ಧವಾಗಿ ಬಂಡು ಎಬ್ಬಿಸಿ ಮುಖ್ಯವಾಗಿ ಬ್ರಾಹ್ಮಣರು, ಮರ್ಹಾಟಿ ಮತ್ತು ತೆಲುಗುಗಳ ಬೆನ್ನುಕಟ್ಟಿದರು. ಮರ್ಹಾಟಿ ಮತ್ತು ತೆಲುಗು ಭಾಷೆಯಲ್ಲಿ ಪ್ರಾಕೃತ ಸಂಸ್ಕೃತ ಶಬ್ದಗಳು ವಿಶೇಷವಾಗಿ ಸೇರಿಕೊಂಡಿರುವುದು ಆ ಸಾಹಿತ್ಯದ ಪ್ರಾಣಪ್ರತಿಷ್ಠೆಯು ಬ್ರಾಹ್ಮಣರ ಹಸ್ತದಿಂದಲೆ ಆದುದರ ಕುರುಹು. 'ಮರ್ಹಾಟರು' ಎಂಬುವರ ಭಾಷೆಯು ಬ್ರಾಹ್ಮಣರಿಗಿಂತ ಬೇರೆ. ಕನ್ನಡಕ್ಕೆ ಹೆಚ್ಚು ಸಮೀಪ. ಮರ್ಹಾಟಿ ಹೆಂಗಸರು 'ನಾನು ಹೊಗುತ್ತೇನೆ' ಎನ್ನಲು 'ಮೀ ಜಾತೇ' ಎನ್ನುತ್ತಾರೆ. ಇದು ಕನ್ನಡದಿಂದ ಬಂದುದು ಎಂದು ಬಲ್ಲವರ ಅಭಿಪ್ರಾಯ.[೬೫] ತನ್ನ ಗಂಡನಿಗೆ ಮರ್ಹಾಟಳು ದಾಲ್ಲಾ (ನಲ್ಲ) ಎನ್ನುವಳು. ಬ್ರಾಹ್ಮಣರು ಸಂಸ್ಕೃತ ಮಿಶ್ರಮಾಡಿ ಅದರ ಬಣ್ಣ ಬದಲಿಸದಿದ್ದರೆ ಈಗ ಸಹ ಮರ್ಹಾಟಿಯು ಕನ್ನಡದಿಂದ ಅಷ್ಟು ದೂರವೆನಿಸುತ್ತಿದ್ದಿಲ್ಲ. ಮೊದಲೆ ಸಂಸ್ಕೃತವು, ಕನ್ನಡ ನುಡಿ ಬಳ್ಳಿಯ ಬೇರು ಸಡಿಲಿಸಿತ್ತು. ಮುಂದೆ ಮರ್ಹಾಟಿ ಮತ್ತು ತೆಲುಗು ಸೇರಿ ವಿಂಧ್ಯದ ಕರುನಾಡಿನಿಂದ ಕರ್ಣಾಟವನ್ನು ಬೇರು ಸಹಿತ ಕಿತ್ತೆಸೆದುವು. ನರ್ಮದಾ ತೀರದ ಕನ್ನಡವು ಕೃಷ್ಣಾ ತಟಾಕಕ್ಕೆ ಬಂದು ಬಿತ್ತು. ಯಾದವರು ಜಾಧವರಾದರು. ಪೆರ್ಮಾಡಿಗಳು-ಪರಮಾದ್ರಿ-ಹೇಮಾದ್ರಿ, ಹೇಮಾಡಪಂತಗಳಾದರು. ಕನ್ನಡ ನಾಡವರು-ರಾಷ್ಟ್ರಿಕರು-ರಟ್ಟರು, ಯಾರು ಕನ್ನಡ ಕವಿಗಳಿಗೆ ರಾಜಮಾರ್ಗವನ್ನು ಮಾಡಿಕೊಟ್ಟರೊ ಅವರು ಸಂಬಂಧಿಕರೆ, ತೆಲುಗಿಗೆ ತಿರುಗಿದರು. ಗೂಳಿಬಿದ್ದರೆ ಆಳಿಗೊಂದು ಕಲ್ಲು!

ಇವೆಲ್ಲ ಸಂಗತಿಗಳನ್ನು ಅವಲೋಕಿಸಿದರೆ ಕುಲಗೆಟ್ಟ-ಇದಕ್ಕೂ ಸರಿಯಾಗಿ ಹೇಳುವುದಾದರೆ-ಮನೆಮುರುಕ ಕನ್ನಡರೆ ಮರ್ಹಾಟರಾದರು. ಮನೆಮುರುಕ ಕನ್ನಡರೆ ತೆಲುಗರಾದರು, ಇಂದು ಸ್ವಲ್ಪ ನಿಷ್ಠುರ-ಸತ್ಯವನ್ನು ಆಡದೆ ಗತಿಯಿಲ್ಲ. ಕಾಯಲು ಹಾಕಿದ ಬೇಲಿಯೆ, ಎದ್ದು ಹೊಲವನ್ನು ಮೇಯದಿದ್ದರೆ ಕರ್ಣಾಟವು, ನರ್ಮದೆಯಿಂದ ಹೋಗಲಿ, ನೃಪತುಂಗನು ಹೇಳುವಂತೆ ಗೋದಾವರಿಯಿಂದಲಾದರೂ ನೀಲಗಿರಿಯ ವರೆಗೆ ಅಖಂಡವಾಗಿ ಅವ್ಯಾಹತವಾಗಿ ಉಳಿಯಬೇಕಾಗಿದ್ದಿತಲ್ಲವೆ?[೬೬]

ಕರ್ನಾಟಕ-ಮೂಲೋತ್ಪಾಟನ

ಹುಲುಸಾಗಿ ಬೆಳೆಯುತ್ತಿರುವ ಗಿಡವನ್ನು ಫಕ್ಕನೆ ನಡುವೆ ತುಂಡರಿಸಿದರೆ ಅದು ಮತ್ತೆ ತುಸು ದಿನಗಳಲ್ಲಿಯೇ ಕೊನರಿ ಕವಲು ಒಡೆದು ಬೆಳೆಯಲಾರಂಭಿಸುವುದು. ಅದನ್ನು ಮತ್ತೆ ಮತ್ತೆ, ಕತ್ತರಿಸಿದರೆ ಅಥವಾ ಬೇರು ಸಹಿತ ಅಗಿದು ಚೆಲ್ಲಿದರೆ ಸಮೂಲ ನಾಶವಾಗುವುದು. ನರ್ಮದಾತೀರದ ಕರ್ನಾಟ-ಅಶ್ವತ್ಥವೃಕ್ಷಕ್ಕೆ ಉತ್ತರದಿಂದ ಆ ನಾಡಿನಲ್ಲಿ ಒಕ್ಕಲಾಗಲು ಬಂದವರೆಲ್ಲರೂ ಒಂದೊಂದು ಪೆಟ್ಟುಹಾಕುವುದು ತಮ್ಮ ಕರ್ತವ್ಯವೆಂದೇ ಭಾವಿಸಿ ಕೊಂಡಿರಬೇಕು. ಕನೋಜದ ಕಡೆಯ 'ಭೋ'-'ಜ'ಗಳು ಬಂದರು. ಮಾಳವವು ಕೈ ಬಿಟ್ಟಿತು. ಮುಂದೆ ಒಂದು ಭೋಜ ಮನೆತನವು ಮರ್ಹಟ್ಟಿ ನಾಡನ್ನೂ ಆಳಿತು. ಕನ್ನಡವು ಅಲ್ಲಿಂದಲೂ ಕಾಲುಕಿತ್ತಿತು. ಎಷ್ಟೆಂದರೂ ಕನ್ನಡದ ಮೂಲಸ್ಥಾನ. ಎಷ್ಟೆ ಆಘಾತಗಳು ಬಂದು ಅಪ್ಪಳಿಸಿದರೂ ೧೩ನೆಯ ಶತಮಾನದವರೆಗೆ ಕನ್ನಡವು ಪೂರ್ಣವಾಗಿ ಅಳಿದು ಹೋಗಲಿಲ್ಲ. ಇಂದಿಗೆ ಸಹ ಗ್ರಿಯರಸನ್‌ನು ಹೇಳುವಂತೆ ಕನ್ನಡವನ್ನಾಡುವ ಕುರುಂಬರೂ ಹೊಲೆಯರೂ ಆ ನಾಡಿನಲ್ಲಿ ಉಳಿದೇ ಉಳಿದಿರುವರು.

'ಗೋದಾವರಿಯಿಂದ ಕೆಳಗೆ ಕನ್ನಡ' ಎಂದು ನೃಪತುಂಗನು (ಕ್ರಿ. ಶ. ೮೧೫) ಹೇಳಿರುವುದು ನಿಜ, ಆದರೆ ಈಗ ಅದಾದರೂ ಎಲ್ಲಿ ಉಳಿದಿದೆ? ಹಾಗೆಯೆ, ನೃಪತುಂಗನ ಮೊದಲೆ ಕೆಲವು ಶತಮಾನ ನರ್ಮದಾ ತೀರದ 'ಕನ್ನಡ' ಕೈ ಬಿಟ್ಟರಬೇಕು. ಆರನೆಯ ಶತಮಾನದಲ್ಲಿ ಮರಹಟ್ಟನಾಡಿಗೆ (ಮಾಳವಾಸೇರಿ) ಮಹಾರಾಷ್ಟ್ರವೆಂಬ ಹೆಸರು ಪ್ರರೂಢವಾಯಿತು. ಆ ಮೊದಲೆ, ಆ ನಾಡಿಗಿದ್ದ ಕನ್ನಡ ಹೆಸರು ಹೋಗಿರಲಿಕ್ಕೆಬೇಕು. ಮಳೆ ಬಿಟ್ಟರೂ ಮರದ ಹನಿ ಬಿಡದು. ನಾಡಿಗೆ ಇದ್ದ ಕನ್ನಡವೆಂಬ ಹೆಸರು ಹಿಂದೆ ಬಿದ್ದರೂ ಜನರ ಭಾಷೆಯು ಹೇಗೆ ಸಂಪೂರ್ಣವಾಗಿ ಒಮ್ಮೆಲೆ ಬದಲಾಗಬೇಕು? ಅದು ಹೇಳಹೆಸರಿಲ್ಲದಂತಾಗಲೂ ಹದಿಮೂರನೆಯ ಶತಮಾನದ ವರೆಗೆ ಕಾಲಹಿಡಿಯಿತು. ಕನ್ನಡದಲ್ಲಿ 'ದೇಸಿಗ' ಶಬ್ದಕ್ಕೆ ಬಂದಿರುವ 'ಅನಾಥನು' ಎಂಬ ಅರ್ಥವು ಕನ್ನಡರ ಆಗಿನ ಅವಸ್ಥೆಯ ಇತಿಹಾಸವನ್ನು ಚೆನ್ನಾಗಿ ವಿಶದಪಡಿಸುತ್ತದೆ. ಕನ್ನಡನು ತನ್ನ ದೇಶದಲ್ಲಿ ತಾನು ದೇಸಿಗನು ಅಂದರೆ ಪರದೇಶಿ! ಅನಾಥ! ದಿಕ್ಕಿಲ್ಲದವನು! ಎಷ್ಟು ವಿಪರೀತ! ಪರದೇಶಿಯು (ಹೊರಗಿನಿಂದ ಬಂದವನು) ಮನೆಯವನು; ದೇಶಿಕನು (ಮನೆಯವನು) ಪರದೇಶಿ, ದೇಸಿಗ! ಇದಕ್ಕೂ ಕ್ರೂರತರವಾದ ದುರ್ದೈವವಿನ್ನಾವುದು! ಪರದೇಶಿಗಳು ಮರ್ಯಾದೆ ಮೀರಿದ್ದರಿಂದ ಕನ್ನಡರು 'ದೇಸಿಗರು' (ದಿಕ್ಕಿಲ್ಲದವರು) ಆದರು. ಎಷ್ಟೋ ಜನರು ಮನೆಮಾರುಗಳನ್ನು ತೊರೆದು ದಾರಿ ದೊರೆತತ್ತ ಹೊರಟರು. ಕನ್ನಡಜನಗಳ ಆಗಿನ ಆ ಗೋಳಾಟವನ್ನು ಸಹೃದಯರು ಬಗೆದು ಭಾವಿಸಿಕೊಳ್ಳಬೇಕು. ಆಗ ಹರಿದ ಕಣ್ಣೀರ ಕಾಲುವೆಯೆಷ್ಟು! ಕರುಳು ಕತ್ತರಿಸುವ ಹೊಟ್ಟೆಯೊಳಗಿನ ಬೇಗುದಿಯೆಷ್ಟು! ಆಹಾ ನೆನೆಸುವುದಕ್ಕೂ ಆಗುವುದಿಲ್ಲ. ಅಂದು ಆ ಎದೆಗಿಚ್ಚಿನಿಂದ ಹೊತ್ತಿದ ಜ್ವಾಲೆಯು ಗೋದಾವರೀ ತೀರದಲ್ಲಿ ಪ್ರತಿವರುಷವೂ ಈಗ ಸಹ ಕಾಣಿಸಿಕೊಳ್ಳುತ್ತಿದೆ. ನೃಪತುಂಗನ ಆಳಿಕೆಯಲ್ಲಿ ಗೋದಾವರಿ ನದಿಯ ದಕ್ಷಿಣದಿಂದ ಕನ್ನಡ. ಮೇಲಿನಿಂದ ಬಂದ ಕನ್ನಡರಿಗೆ ಗೋದಾವರಿಯ ದಕ್ಷಿಣ ತಡಿಯಲ್ಲಿ ಆಶ್ರಯದೊರೆತಿರಲಿಕ್ಕೆ ಸಾಕು. ಈ ಜನಗಳು ಇಲ್ಲಿ ಬಂದು ನೆಲೆಸಿದ ಮೇಲೆ ಸಹ ಮೊದಲಿನ ಮನೆಮಾರುಗಳ ನೆನಪು ಆಗಿ ಆವೇಶವುಂಟಾಗುತ್ತಿದ್ದರೆ ವಿಶೇಷವಲ್ಲ.

ನಾಸಿಕ ಮತ್ತು ನಗರ ಜಿಲ್ಹೆಗಳಲ್ಲಿ ಗೋದಾವರಿ ನದಿಗುಂಟ ಎರಡೂ ದಂಡೆಯ ಮೇಲಿನ ಜನರು ನಾಗ ಪಂಚಮಿಯ ದಿನ ಎರಡು ತಡಿಗಳ ಮೇಲೆ ನಿಂತು ಬೈಯ್ದಾಡುವರು; ಹೊಡೆದಾಡುವರು.[೬೨] ಇದು ಈಗ ಬರಿ ಸಾಂಪ್ರದಾಯಿಕ. ಪ್ರತಿವರುಷ ಹೀಗೆ ಮಾಡದಿದ್ದರೆ ಮಳೆಬೆಳೆ ಚೆನ್ನಾಗಿ ಆಗುವುದಿಲ್ಲವೆಂದು ಆ ಜನರ ಗ್ರಹಿಕೆಯಂತೆ. ನಾಗರಪಂಚಮಿಗೆ ಇದು ಆಗುತ್ತಿರುವುದಕ್ಕೆ ಒಂದು ಕಾರಣವಿರಬೇಕು. ಕ್ರಿ.ಶ. ಮೂರನೆಯ ಶತಮಾನದಲ್ಲಿ ಆ ನಾಡಿಗೆ ಆಹಿರರು (ಆಭೀರರು) ಬಂದು ಕೊಳ್ಳೆಹೊಡೆದರು. ಅಹಿರರು (ಅಹಿ=ಹಾವು) ನಾಗರೆಂದು ಒಂದು ಗ್ರಹಿಕೆ. ಅಹಿರರ ಪ್ರಾಬಲ್ಯವಾಗಿ ತಮ್ಮ ಮನೆಮಾರುಗಳಿಗೆ ಎರವಾಗಬೇಕಾಯಿತೆಂದು ತಿಳಿದು ನಾಗರಪಂಚಮಿಯ ದಿನ ಅದರ ನೆನಪಿಗಾಗಿ ಈ ಹುಸಿಕಾಳಗವು ನಡೆಯುತ್ತಿರಲಿಕ್ಕಿಲ್ಲವಷ್ಟೆ?

ಕನ್ನಡ ಜಿಲ್ಲೆಯ (ಕಾರವಾರ ಮತ್ತು ಮಂಗಳೂರು) ಮಹತ್ವದ ಜನಾಂಗವಾದ ಹವಿಕರು ಅಹಿಛತ್ರದಿಂದ ಬಂದವರೆಂದು ಐತಿಹ್ಯವಿದೆ. ಉತ್ತರದಲ್ಲಿ ಛತ್ರಪುರ ಸಂಸ್ಥಾನವುಂಟು. ಅಹಿರರ ಪ್ರಾಬಲ್ಯವಾದಾಗ ಅದೆಲ್ಲ ಸೀಮೆಯು ಅಹಿ+ಛತ್ರವೆನಿಸುತ್ತಿರುವ ಸಂಭವವೂ ಇದೆ. ಈ ಸೀಮೆಯಿಂದಲೆ ಹವಿಕರು ಬನವಾಸಿದೇಶದಲ್ಲಿ ರಾಜಾಶ್ರಯಕ್ಕಾಗಿ ಬಂದಿರಬೇಕು. ಆದರೆ, ಇವರು ಗುಜರಾತದಿಂದ ವಲ್ಲಭೀಪುರ (ಅನಹಿಲವಾಡ) ದತ್ತಣಿಂದ ಸಮುದ್ರಮಾರ್ಗವಾಗಿ ಬನವಾಸಿ ದೇಶಕ್ಕೆ ಬಂದಿರಬಹುದು ಎಂದು ವಿಲ್ಸನ್‌ನ ಊಹೆ.[೬೮] ಇವರ ಮನೆಮಾತು ನೃಪತುಂಗನ ಕಾಲಕ್ಕೂ ಹಿಂದೆ ಇದ್ದ ಪಳಗನ್ನಡ. ಪ್ರಾಚೀನ ಕಾಲದ ತಮ್ಮ ಭಾಷೆಯನ್ನು ಕಾದುಕೊಂಡು ಬಂದಿದ್ದಾರೆ. ಇದು ಈ ಜನರು ಮೊದಲು ನೆಲಸಿದ್ದ ನಾಡಿನ ಭಾಷೆಯಾಗಿರಲಿಕ್ಕೆಬೇಕು. ಗೌಡರು, ಸಾರಸ್ವತರು, ಹೇಗೆ ತಮ್ಮ ಪ್ರಾಚೀನ ಮನೆಮಾತುಗಳನ್ನು ಕಾದುಕೊಂಡು ಬಂದಿರುವರೊ ಹಾಗೆಯೆ ಹವಿಕರೂ ಆ ಹಳಗನ್ನಡವನ್ನು ರಕ್ಷಿಸಿದ್ದಾರೆ. ಇವರು ಗುಜರಾತಿನಿಂದ ಬಂದರೆಂದು ಸಿದ್ಧವಾಗಲಿ, ಅಥವಾ ಮಾಳವಾದಿಂದ ಬಂದರೆಂದು ನಿಶ್ಚಿತವಾಗಲಿ ಅಂತೂ ಆ ಕಾಲಕ್ಕೆ ಆ ಪ್ರದೇಶದಲ್ಲಿ, ಈಗ ಹವಿಕರಲ್ಲಿ ಉಳಿದಿರುವ ಮಾದರಿಯ (ಹಳೆ) ಕನ್ನಡವು ಜನರ ಬಳಕೆಯ ಮಾತು ಆಗಿತ್ತೆಂಬುದು ಮಾತ್ರ ನಿಶ್ಚಿತ. ಏಕೆಂದರೆ ಹವಿಕರ ಹೊರತು ಬೇರೆ ಯಾವ ಜನಾಂಗದವರೂ ತತ್ಸದೃಶವಾದ ಭಾಷೆಯನ್ನಾಡುವುದಿಲ್ಲ. ಹವಿಕ ಭಾಷೆಯಲ್ಲಿ ಕೆಲವು ಕಥೆಗಳನ್ನು ಬರೆದು, ಅದರ ಶಬ್ದಕೋಶವನ್ನು ಸಿದ್ಧಪಡಿಸಿ ಹೇಗಾದರೂ ಮಾಡಿ ಅದನ್ನು ಮೇಲೆತ್ತಿ ಕನ್ನಡದ ತುಲನಾತ್ಮಕ ಅಭ್ಯಾಸಕ್ಕೆ ದೊರೆಯುವಂತೆ ಮಾಡಿದರೆ ಪಂಡಿತ ಮು. ತಿಮ್ಮಪ್ಪಯ್ಯ, ಕ. ಶಂಕರಭಟ್ಟರುಗಳು. ಕನ್ನಡದ ಮೇಲೆ ದೊಡ್ಡ ಉಪಕಾರ ಮಾಡಿದಂತೆ ಆಗುವ ಹಾಗಿದೆ. ಆ ಭಾಷೆಯ ಅವಸ್ಥಾ ವಿಶೇಷಗಳಿಂದಲೂ ಕನ್ನಡದ ಮೂಲಸ್ಥಾನವನ್ನು ಅರಿತುಕೊಳ್ಳಲು ಇನ್ನಿಷ್ಟು ನೆರವು ಸಿಕ್ಕಬಹುದೇನೊ ಎಂಬ ಆಸೆ.

ಬನವಾಸಿ ನಾಡಿನಲ್ಲಿ ಮಾಳವಾ-ಮರಹಟ್ಟ ನಾಡಿನಿಂದ ಹವ್ಯಕರಲ್ಲದೆ ಬೇರೆ ಹಲವು ಜನಾಂಗಗಳೂ ಬಂದು ನೆಲೆಸಿರಬೇಕು. ಸಿರಸಿಯ ಮಾರೆಮ್ಮನು ವರ್‍ಹಾಟದ 'ಮರಿ ಆಯಿ', 'ಮರಗಾಯಿ'ಯೆ ಆಗಿರಬೇಕು. ಹಳಬರು-ಹಳಪೈಕರು; ರಾಷ್ಟ್ರಿಕರು-ರಾಠರು-ನಾಡವರು ಬಂಡರು; ಹಾಲು ಕುರುಂಬರು-ಹಾಲು ಒಕ್ಕಲರು; ಬಿಲ್ಲರು-ಬಿಲ್ಲವರು. ಹೀಗೆ ಹೊಸಜನಗಳ ಹೆಚ್ಚಳದಿಂದ ಬನವಾಸಿನಾಡಿಗೆ ಬೇರೆ ಹೆಸರು ಬಂದಿದ್ದರೆ ಸೋಜಿಗವೇನು? ಹೊಸತಾಗಿ ಬಂದ ಹೆಸರಾವುದು? ಕನ್ನಡ ಅಥವಾ ಕನ್ನಡಮೆನಿಪ್ಪಾನಾಡು. ಬಂದ ಜನಾಂಗದ ಮೇಲಿಂದ ಈ ಹೆಸರು ಬಂದಿರಬೇಕಾದರೆ ಈ ಜನಗಳು ಬಂದ ದೇಶವು ಆವುದಿರಬೇಕು? ಕನ್ನಡ; ಕನ್ನಡ ಮಾಳವಾ (ಮಲೆ) ನಾಡಿನಿಂದ ಬಂದವರು ಇಲ್ಲಿಯೂ ಮಲೆನಾಡಿನ ಹತ್ತಿರಹತ್ತಿರವೆ ಊರಿಕೊಂಡಿರಬೇಕು. ಮಾಳವಾದ ರಾಜಧಾನಿ ಕೆಲಕಾಲ ಅವಂತಿ-ಅಮರಪುರಿ; ಧಾರಾನಗರ; ನಮ್ಮ ನಾಡಿನಲ್ಲಿಯೂ ಧಾರವಾಡ ಒಂದು ಇದ್ದರೆ ಅಮರಗೊಳ್ಳ ಮೂರುನಾಲ್ಕು! ವರ್‍ಹಾಟ ನಾಡಿನಲ್ಲಿ ಪಾವಗಡ; ನಮ್ಮ ಕಡೆಗೆ ಮೈಸೂರ ಸೀಮೆಯಲ್ಲಿ ಪಾವುಗಡ; ಧಾರವಾಡದ ಹತ್ತಿರ ಹಾವೇರಿ. ನೀಲಗಿರಿ ಮತ್ತು ನಾಗಪುರ-ಚಂದಾಗಳಲ್ಲಿರುವ ಕುರುಂಬರು, ಬಡಗರು ಮೊದಲಾದವರನ್ನು ಕುರಿತು ಈ ಮೊದಲೆ ಹೇಳಿದೆ. ಗೋಕರ್ಣ ಮತ್ತು ಹಂಪಿಗಳು ಹರಿದು ಬಂದು ನೆಲೆಯಾದವರಿಂದ ಸ್ಥಾಪಿತವಾದ ಕ್ಷೇತ್ರಗಳು. ಇವೆರೆಡೂ ಕ್ಷೇತ್ರಗಳಿಗೆ ಇರುವ ಮಹಾತ್ಮ್ಯವನ್ನು ನೆನೆಸಿದರೆ ಇವು ಜ್ಯೋತಿರ್ಲಿಂಗಗಳಾಗಿರಬೇಕೆಂದೆನಿಸುತ್ತದೆ. ಆದರೆ, ಹನ್ನೆರಡು ಜ್ಯೋತಿರ್ಲಿಂಗಗಳ ನಾಮಾವಳಿಯಲ್ಲಿ ಇವುಗಳ ಹೆಸರೆ ಇಲ್ಲ! ಇವೆರಡೂ ದಕ್ಷಿಣ ಕಾಶಿ; ಉಜ್ಜಯಿನಿ ಮಹಾಕಾಲನೂ ಕಡಿಮೆಯವನಲ್ಲ. ಇವೆರಡರಲ್ಲಿ ಒಂದು ಉಜ್ಜಯಿನಿ ಮಹಾಂಕಾಲನ ಪ್ರತಿಬಿಂಬ, ಇನ್ನೊಂದು ತ್ರ್ಯಂಬಕೇಶ್ವರದ ಪಡಿಯಚ್ಚು ಆಗಿರಬೇಕು. ಸೌರಾಷ್ಟ್ರದ ಸೋಮನಾಥನು ಅಲ್ಲಿಯ ಕನ್ನಡರೊಡನೆ ಮೈಸೂರ ನಾಡಿಗೆ ಬಂದು ಸೋಮನಾಥಪುರವನ್ನು ಕಟ್ಟಿಕೊಂಡು ನಿಂತಿರಬೇಕು. ನಾಸೀಕದ ಹತ್ತರ ಅಂಜನೇರಿ ಇದೆ. ಶ್ರೀರಾಮನ ಸಂಬಂಧವೂ ಅಲ್ಲಿಯೆ ಮುಖ್ಯವಾಗಿ ಹಂಪಿಯಲ್ಲಿ ರಾಮನ ಸಂಬಂಧಗಳನ್ನು ಹೇಳುವ ಸ್ಥಳಗಳ ಎಲ್ಲಿ ನೋಡಿದಲ್ಲಿ. ಯಾವುದೇ ಜನಾಂಗವು ಗುಳೆಕಟ್ಟಿಕೊಂಡು ಎದ್ದಾಗ ಮೊದಲು ನೆಲೆಯಾಗಿದ್ದ ನಾಡಿನ ದೇವದೇವತೆಗಳ ನೆನಹುಗಳನ್ನೂ ಸ್ಥಳ ಪುರಾಣಗಳನ್ನೂ ಕಟ್ಟಿಕೊಂಡೆ ಹೊರಡುವುದುಂಟು. ಅದಕ್ಕೆ ಕನ್ನಡರೂ ಹೊರತಾದವರಲ್ಲ.

ಇದರಂತೆಯೆ ಬಾದಾಮಿ ನಾಡು (ನಾಲ್ಕು ಸಾವಿರದ ಕನ್ನಡ) ಮತ್ತು ಖಾನ (ಡ) ದೇಶ-ನಾಸಿಕಗಳಲ್ಲಿಯೂ ಸಂಬಂಧವುಂಟು.

> 'The legends agree in description being these places as in the great Ramayan Dandaka forest a name of which according to some authorities a trace remains in the Nasik and Khandesh (Dangs).[೬೯]

ಬದಾಮಿ-ವಿಜಾಪೂರನಾಡು ಎರೆನಾಡು; 'ಸೇರಿ ನಿಲ್ಲುವರೆ ನೆರಳಿಲ್ಲದ ನಾಡು;' ಬೆಟ್ಟ ಹಳವುಗಳಿಲ್ಲದ ದೇಶ. ಆದರೆ, ಇಲ್ಲಿಯ ಸ್ಥಳಪುರಾಣಗಳಲ್ಲಿ ಮಹಾರಣ್ಯಗಳಿದ್ದ ವರ್ಣನೆ! ದಂಡಕಾರಣ್ಯದ ಸಂಬಂಧ! ವಾತಾಪಿ ಇಲ್ವಾದಿಗಳು ವಾಸವಾಗಿದ್ದ ಕಥೆಗಳು! ನಿಜವಾಗಿ ಅಗಸ್ತ್ಯನಿಗೆ ಈ ಇಬ್ಬರೂ ಅಣ್ಣ ತಮ್ಮಂದಿರು ಗಂಟುಬಿದ್ದುದು ವಿಂಧ್ಯದಲ್ಲಿ. ಇಬ್ಬರಿಂದ ಹಣ ಸಂಪಾದಿಸಿ ಅಲ್ಲಿಯೆ, ವಿದರ್ಭದೇಶದ ಅರಸನ ಮನೆಯಲ್ಲಿ ಬೆಳೆದ ಹುಡುಗಿಯನ್ನು ಅಗಸ್ತ್ಯನು ಮದುವೆಯಾದ ಹಾಗೆ ಕಥೆಯಿದೆ. ಆದರೆ, ವಾತಾಪಿಪುರವು ವಿಜಾಪೂರ ಜಿಲ್ಲೆಯಲ್ಲಿ! ಈ ನಾಡಿನ ಅಧಿದೇವತೆ ವನಶಂಕರಿ! ಇವಳು ಮೊದಲು ವಿಂಧ್ಯವಾಸಿನಿ ದೇವಿಯೇ ಆಗಿರಬೇಕು. ಶಾಕಾಂಬರಿ ಮಹಾತ್ಮೆಯಲ್ಲಿ ಬನಶಂಕರಿಯ ಮೂರ್ತಿಯ ಗದ್ದುಗೆಯ ಮೇಲೆ ಶಕೆ ೬೧೨ ಎಂದಿರುವುದಾಗಿ ಬರೆದಿದೆ. ಇದು ಸರಿಯಿರಬೇಕು. ಚಲುಕ್ಯರ ಏಳಿಗೆಯ ಕಾಲದಲ್ಲಿ ಮಲಯ (ಮಾಳವಾ), ಮರಹಟ್ಟನಾಡುಗಳಿಂದ ಕಿತ್ತುಕೊಂಡು ಬಂದ ಜನಗಳು ತಮ್ಮೊಡನೆ ತಮ್ಮ ಕುಲದೈವತಗಳನ್ನೂ ತಂದಿರುವುದು ಸಹಜ. ಬಾದಾಮಿಗೆ ಬನಶಂಕರಿ ನಿಂತಳು. ಹಿಪ್ಪರಿಗೆಗೆ ಮಲ್ಲಯ್ಯನು (ಕಾಂಡಾರಿ) ಊರಿಕೊಂಡನು ಭಕ್ತರಿದ್ದಲ್ಲಿ ಭಕ್ತೋದ್ಧಾರಿ ದೇವದೇವನು.

ಮುಖ್ಯವಾಗಿ ಕಾನ (ಡ) ದೇಶ ಮತ್ತು ಬಾದಾಮಿನಾಡಿನ ಊರುಗಳ ಹೆಸರುಗಳಲ್ಲಿರುವ ಸಾಮ್ಯವು ಆಶ್ಚರ್ಯಕರವಾಗಿದೆ. ಖೇಟ, ಖೇಡಗಳು ಇವೆರಡು ನಾಡಿನಲ್ಲಿಯೆ ಹೆಚ್ಚು. ಧುಳೆ-ಧೂಳಕೇಡ; ಮಾಲೆಗಾಂವ-ಗುಡ್ಡಾಪುರ, ಅಂಕೈ-ಅಂಕಲಿ; ಬಾಗಲಾಣ-ಬಾಗಲಕೋಟೆ; ಪಿ (೦)ಪರಿ-ಹಿಪ್ಪರಿಗಿ; ಚಾಳಿಸಗಾಂವ-ನಾಲ್ವತ್ತವಾಡ; ಐನಪೂರ-ಐನಾಪೂರ ಮತ್ತು ಐಹೊಳೆ, ಶಿರೂರು-ಶಿರೂರು; ಪುಣತಾಂಬೆ-ತಾಂಬೆ; ಸಿಂಧಕೇಡ - ಸಿಂದಗಿ; ಮಾಹುಲಿ-ಮಾಹುಲಿ; ಕೋರೂರ-ಕೊಟ್ಟಲಿಗಿ ಮತ್ತು ಕೋಟೂರು; ಯಾವಲ-ಯಾವಗಲ್ಲು; ನಿಂಬ-ನಿಂಬರಿಗಿ; ಅಹಿರಗಾಂವ-ಅಹಿರಸಂಗ; ಮರಹಟ್ಟಿ (ವರ್ಹಾಟ) ನಾಡಿನಿಂದ ಹರಿದು ಬಂದವರು ಕೃಷ್ಣಾನದಿಯ ಹತ್ತಿರದಲ್ಲಿ ಹಟ್ಟಿ, ಪಟ್ಟಿ, ವಾಟ, ವಾಡ, ವಾಡಿಗಳನ್ನು ಕಟ್ಟಿಕೊಂಡು ಕಾಲೂರಿದ ಹಳ್ಳಿ. ಪಳ್ಳಿಗಳಿಗೆ ಕೊರತೆಯಿಲ್ಲ. ಹಟ್ಟಿ ಊರುಗಳು ಈ ಭಾಗದಲ್ಲಿಯೆ ವಿಶೇಷ ಇದೆಲ್ಲ. ಸಾಮ್ಯವು ಅರ್ಥವಿಹೀನವೆಂದು ತಿಳಿಯಲಾದೀತೆ?

ಮೈಸೂರಸೀಮೆಯಲ್ಲಿ ಬಡಗನಾಡಿನವರುಂಟು. ಹೊಯಿಸಳ ಕರ್ಣಾಟರುಂಟು. ಬಡಗರು ಉತ್ತರದಿಂದ ಬಂದವರೆಂದು ಹೇಳುವ ಆವಶ್ಯಕತೆ ಇಲ್ಲ. ಆದರೆ, ಹೊಯಿಸಳ-ಕರ್ಣಾಟ (ಬ್ರಾಹ್ಮಣ) ರೆಂದರೇನು? ಕರ್ಣಾಟ ಬ್ರಾಹ್ಮಣರು ಎಂದಿಷ್ಟೆ ನಿಜವಾಗಿ ಸಾಕಾಗಿತ್ತು. ಅರಸುಮನೆತನದ ಹೆಸರೂ ಇದರೊಡನೆ ಏಕೆ ಸೇರಬೇಕು? ಆಶ್ರಯದಾತನ ಅನಂತ ಉಪಕಾರಗಳನ್ನು ಸ್ಮರಿಸುವುದಕ್ಕಾಗಿ, ತಮ್ಮ ಕೃತಜ್ಞತೆಯನ್ನು ವ್ಯಕ್ತಗೊಳಿಸುವುದಕ್ಕಾಗಿ ಹೊಯಿಸಳ-ಕರ್ಣಾಟರೆಂದು ಹೇಳಿಕೊಂಡಿರುವ ಸಂಭವವಿಲ್ಲವೆ? ದೇವಗಿರಿಯ ಯಾದವರು ಕರ್ಣಾಟರನ್ನು ದುರ್ಲಕ್ಷಿಸಿದ ಬಳಿಕ ಮರ್ಹಾಟಿಗೆ ಮನಸೋತು ಕನ್ನಡವನ್ನು ಅರಮನೆಯಿಂದ ತಳ್ಳಿಬಿಟ್ಟ ಬಳಿಕ, ಸ್ವಾಭಿಮಾನಿಗಳಾದ ಕರ್ಣಾಟರು ಗೋದಾವರಿ ಉತ್ತರ ನಾಡಿನಿಂದ ಹೊರಟು ದಕ್ಷಿಣದ ದ್ವಾರಾವತೀ ಪುರವರಾಧೀಶ್ವರರಾದ ಹೊಯಿಸಳ ಯಾದವರ ಆಶ್ರಯಕ್ಕೆ ಬಂದಿರುವುದು ಶಕ್ಯವಿದೆ. ನೆಲೆತಪ್ಪಿ ಅಲೆಯುತ್ತಿರುವಾಗ ಆಧಾರಕೊಟ್ಟು ಕಾಪಾಡಿದವರ ಉಪಕಾರದ ಭಾರವನ್ನು ಕೆಲವು ಅಂಶದಿಂದಾದರೂ ಕಡಿಮೆ ಮಾಡಿಕೊಳ್ಳಬೇಕೆಂದು ಕರ್ಣಾಟ ಬ್ರಾಹ್ಮಣರು 'ಹೊಯಿಸಳ ಕರ್ಣಾಟರೆಂದು' ಹೇಳಿಕೊಳ್ಳಲಾರಂಭಿಸಿರಬೇಕು.

ಅಂತೂ ಒಂದು ಕಾಲಕ್ಕೆ ನರ್ಮದಾತೀರದ-ನಿಜಕರ್ಣಾಟದ ಕನ್ನಡರಿಗೆ ಅಲ್ಲಿ ಕನ್ನಡವನ್ನು ಬದುಕಿಸಿಕೊಂಡು

ನೆಮ್ಮದಿಯಿಂದ ಬಾಳುವೆ ಮಾಡುವುದೆ ಅಸಾಧ್ಯವೆನಿಸಿರಬೇಕು. ಶಕ್ಯವಿದ್ದವರು ಅಲ್ಲಿಯ ಮನೆಮಾರುಗಳನ್ನು ಕಿತ್ತುಕೊಂಡು ತೆಂಕಣಕ್ಕೆ ನೆಲೆಯನ್ನು ಅರಸುತ್ತ ಹೊರಟರು. ಆಗ ಕಿತ್ತ ಊರು (ಕಿತ್ತೂರು) ಗಳೆಷ್ಟೋ! ಕಟ್ಟಿದ ಹೊಸ ಊರು (ಹೊಸೂರು) ಹೊಸಪೇಟೆಗಳೆಷ್ಟೊ! ಕೆಲವು ಗುಳೆಕಾರರಿಗೆ ಇರಲು ಒಂದು ಗುಡ್ಡದ ಬದಿಯೆ ಒಳ್ಳಿತು ಎನಿಸಿತು; ಅಲ್ಲಿಯೆ ಗುಳೇದಗುಡ್ಡ (The Immigration Hill) ಆಯಿತು. ತಾವು ಇಳಿದುಕೊಂಡ ಕಲ್ಲೆ ಚೆನ್ನು ಎನಿಸಿ ನಿಂತರು; ಅದೆ ಇಳಕಲ್ಲು. ಇದು ಕಡೆಪಟ್ಟಿ; ಅದು ಕಡೆ ಊರು (ಕಡೂರು); ಅತ್ತ ಕಡೆಹಳ್ಳಿ; ಇತ್ತ ಕಡೆಗಾಂವಿ; ಅಲ್ಲಿ ತಳೆಗಾಂವಿ; ಇಲ್ಲಿ ತಲದ ಊರು (ತಲ್ಲೂರು); ಇಂತಹ ಊರುಗಳ ಹೆಸರುಗಳು ತಾವು ಎಂದು ಏಕೆ ಹುಟ್ಟಿದವೆಂಬುದನ್ನು ಹೇಳುತ್ತಿವೆ. ಇವೆಲ್ಲ ಆ ಕಾಲದಲ್ಲಿ ಕನ್ನಡರು ಹರಿದಾಡಿರಬಹುದಾದ ಪ್ರದೇಶಗಳ ಕುರುಹುಗಳಾಗಿವೆ. ಇದೆ ಕೊನೆ; ಇಲ್ಲಿ ತಳಸೇರಿದೆವು (ತಲಸೇರಿ-ತಲಚೇರಿ) ಎಂದು ನಿಂತಲ್ಲಿಂದ ಸಹ ಒಬ್ಬರಿಲ್ಲ ಒಬ್ಬ ಪರಪ್ರಾಂತೀಯರ ಕಾಟತಪ್ಪಲಿಲ್ಲ; ತಪ್ಪಿಲ್ಲ. ಇದು ಹೀಗೆಯ ಕನ್ನಡವು ಕ್ಷೀಣವಾಗುವುದು ಎಲ್ಲಿಯ ವರೆಗೆ?

ಗೊನೆ

'ಹಿರಿಯರ ಹೆಗ್ಗಳಿಕೆಯನು ಹೇಳುವವನೊಬ್ಬ ಶತಮೂರ್ಖ' ಎಂಬುದೊಂದು ಗಾದೆ. ಆದುದರಿಂದ ನಮ್ಮ ಪೂರ್ವಜರು ಹಾಗಿದ್ದರು, ನಮ್ಮನಾಡು ಹಿಂದಕ್ಕೆ ಅಷ್ಟಿತ್ತು; ಎಂದು ಮೊದಲಾಗಿ ದೊಡ್ಡಿತ್ತೆಯ ನಗಾರೆಯನ್ನು ಎಷ್ಟು ಬಾಜಿಸಿದರೇನು? ಹಾಗೆ ಹೇಳಿಕೊಳ್ಳುವವರ ಈಗಿನ ಕರುಣಾಸ್ಪದ ಸ್ಥಿತಿಯು ಮಾತ್ರ ಇನ್ನಿಷ್ಟು ಬೈಲಿಗೆ ಬರುವುದು. ಕನ್ನಡವು ನರ್ಮದಾ ತೀರದಲ್ಲಿದ್ದರೇನು ಅಥವಾ ಕೃಷ್ಣೆಯ ದಂಡೆಯಲ್ಲುಳಿದರೇನು? ಈಗ ಎಷ್ಟಿದೆಯೊ ಅಷ್ಟೆ ನಿಜ. ಅಷ್ಟೆ ನಮ್ಮದು. ಆದಕಾರಣ ಹಳೆಯ ಕತೆಗಳನ್ನು ವ್ಯರ್ಥವಾಗಿ ಕೆದರಿ ತೆಗೆಯುವುದರಿಂದೇನು ಫಲ? ಎಂದು ನಮ್ಮ ಎಷ್ಟೋ ಜನರು ಆಡಿಕೊಳ್ಳುವುದು ತೀರ ಸುಳ್ಳಲ್ಲ. ಈ ಬಗೆಯ ವೃತ್ತಿಯಿರುವುದು ಒಂದು ಸಂಭಾವಿತತನದ ಲಕ್ಷಣ. ದಕ್ಷಿಣದವರ ಸ್ವಭಾವದಲ್ಲಿ ದಾಕ್ಷಿಣ್ಯವು ಮನೆಮಾಡಿಕೊಂಡಿದೆ. ದಾಕ್ಷಿಣ್ಯ, ಸೌಜನ್ಯವೃತ್ತಿ, ನಮ್ರತೆ, ವಿರೋಧಿಯಿದ್ದರೂ ಅಂತಃಕರಣಪೂರ್ವಕವಾಗಿ ಆತನಲ್ಲಿರುವ ಗುಣಪ್ರಶಂಸೆಯನ್ನು ಮಾಡುವುದು, ತನ್ನದಿರಲಿ ಮಂದಿಯದಿರಲಿ ನಿಜವಿದ್ದುದನ್ನು ನಿಜವೆಂದು ಹೇಳುವುದಕ್ಕೆ ಸದಾಸಿದ್ಧತೆ. ಇಂತಿವೆಲ್ಲ ಗುಣಗಳು ದಕ್ಷಿಣದವರು ಅಂದರೆ ಕನ್ನಡರ ಹುಟ್ಟುಗುಣಗಳು. ದಕ್ಷಿಣದವನು ಅಂದರೆ ಕನ್ನಡನು ಉತ್ ವೃತ್ತನಲ್ಲ; ಉತ್ ಹಟನೂ ಅಲ್ಲ. 'ಮಾತು ಬಂದಾಗ ಸೋತು ಹೋದವನೆ 'ಜಾಣ' ಎಂಬುದು ಕನ್ನಡರ ಆದರ್ಶ. ಆದಕ್ಕಾಗಿಯೆ ಅವರು ಸೋತುದು; ಹಿಂಜರಿದುದು. ತಮ್ಮ ಮನೆಮಾರುಗಳನ್ನು ಬಂದವರಿಗೆ ಕೊಟ್ಟು, ತಾವು ದೇಸಿಗರಾಗಿ ಇನ್ನಾದರೂ ನಾವು ಕೂಡಿಕೊಂಡು ಬಾಳುವ, ನೆಮ್ಮದಿಯಿಂದ ಇರುವ ಎಂದು, ಹಾಗೆ ಆಚರಿಸಿ ಅರಿಕೆ ಮಾಡಿಕೊಂಡುದು. ಆದರೆ ಹೊರಗಿನವರು, ಕನ್ನಡರ ಈ ಸ್ವಭಾವಕ್ಕೆ ತಿರುವುಮುರುವು ಅರ್ಥ ಮಾಡಿಕೊಂಡರು. 'ಮಾತು ಬಂದಾಗ ಸೋತು ಹೋಗುವುದು ಜಾಣತನ'ವೆಂದು ಕನ್ನಡರ ತಿಳುವಳಿಕೆ. ಸೋಲುವವರು ಕೈಲಾಗದವರು ಹೇಡಿಗಳು ಎಂದು ಉತ್ತರದವರ ಗ್ರಹಿಕೆ. ಕನ್ನಡರ ಸೋಲಿನ ರಹಸ್ಯವನ್ನು ಯಾರೂ ಅರಿತು ಕೊಳ್ಳಲಿಲ್ಲ. ಸೋಲುವುದರಿಂದ ಸಮೂಲ ನಾಶಕ್ಕೆ ಒಳಗಾಗುವ ಹೊತ್ತು ಮಾತ್ರ ಬಂದೊದಗಿದೆ ಕನ್ನಡಿಗರಿಗೆ. ತಾವು ಏನಿದ್ದೆವು, ಈಗ ಏನಾಗಿರುವೆವು ಎಂಬುದನ್ನು ಸರಿಯಾಗಿ ಅರಿತುಕೊಳ್ಳುವುದಕ್ಕೆ ಐತಿಹಾಸಿಕ ಸತ್ಯದ ವಿದ್ಯುದ್ದೀಪದ ಆವಶ್ಯಕತೆಯಿದೆ. ಇದು ಕೈಯಲ್ಲಿ ಇರದಿದ್ದರೆ ಭವಿಷ್ಯತ್ಕಾಲದ ಕಗ್ಗತ್ತಲಿನಲ್ಲಿ ಮುಂದುಗಾಣದೆ ಮುಗ್ಗರಿಸಿ ಬೀಳಬೇಕಾಗುವುದು. ದಾರಿತೋರದೆ ಬಳಲಬೇಕಾಗುವುದು. ಕರ್ಣಾಟಕದ ಸಂಪೂರ್ಣ ಇತಿಹಾಸವು ಬೆಳಕಿಗೆ ಇನ್ನೂ ಬಾರದೆ ಇದ್ದುದೆ ಕನ್ನಡರು ಹಿಂದುಳಿಯುವುದಕ್ಕೆ ಮುಖ್ಯ ಕಾರಣವು.

ಕರ್ಣಾಟ ಇತಿಹಾಸವು ಆದರ್ಶ ಸ್ಫೂರ್ತಿ ಉತ್ಸಾಹಗಳ ಆಗರವಾಗಿದ್ದರೂ ಕನ್ನಡ ತರುಣರ ಕಿವಿಯಲ್ಲಿ ಅದರ ಕಹಳೆಯನ್ನು ಮೊಳಗಿಸಲು ಯಾವ ಟಾಡ್ ಸಾಹೇಬನು ಹುಟ್ಟಲಿಲ್ಲ. ಟಾಡ್‌ನ ಇತಿಹಾಸವನ್ನು ಓದಿ

ರಜಪೂತ ಕಥಾಪ್ರಸಂಗಗಳ ಮೇಲೆ ನಮ್ಮಲ್ಲಿ ಕಥೆ ಕಾದಂಬರಿಗಳು. ಆದರೆ, ನಮ್ಮ ಕಥೆ ನಮಗೆ ಗೊತ್ತಿಲ್ಲ. ಕನ್ನಡ ನುಡಿಯ ಪ್ರಾಚೀನತೆಯನ್ನು ಸಿದ್ಧಪಡಿಸಲು ನಮಗೆ ಯಾವ ಕಾಲ್ದವೆಲ್ಲನೂ ದೊರೆಯಲಿಲ್ಲ. ಆದುದರಿಂದ ಸಂಸ್ಕೃತದವರ ನಂತರ ಹಿಂದುಸ್ತಾನದಲ್ಲಿ ಗಣ್ಯರು ಯಾರು? ದ್ರವಿಡರು! ಗುಜರಾತಿನಲ್ಲಿ ಹನ್ನೆರಡನೆಯ ಶತಮಾನದಲ್ಲಿ ಆದ ಹೇಮಚಂದ್ರನು ಬರೆದಿರುವರು 'ದೇಶೀಯ ನಾಮಮಾಲೆ'ಯಲ್ಲಿ ಬಂದಿರುವ ದೇಶೀಯ ಅಂದರೆ ಸಂಸ್ಕೃತೇತರ ಶಬ್ದಗಳು ಯಾವ ಭಾಷೆಯೊಳಗಿನವು? ದ್ರವಿಡ! ಗುಜರಾತಕ್ಕೂ ದ್ರವಿಡರಿಗೂ ಕನ್ನಡರಿಗಿಂತ ಹೆಚ್ಚು ಸಂಬಂಧ ಇರಬಹುದೆ?

ಐತಿಹಾಸಿಕ ಸತ್ಯದ ಬೆಳಕು ಇಲ್ಲದೆ ಕನ್ನಡರು ದಿಗ್‌ಭ್ರಾಂತರಾಗಿದ್ದಾರೆ. 'ಆಂಧ್ರ', 'ದ್ರವಿಡ' 'ಮಹಾರಾಷ್ಟ್ರ' ಇಂತಹ ಬೆದರು ನುಡಿಗಳಿಗೆ ಕನ್ನಡರು ಸುಮ್ಮನೆ ಮೋಸಹೋಗಿದ್ದಾರೆ. ತಮ್ಮ ಅರಿವು ತಮಗೆ ಇಲ್ಲದೆ ಒದ್ದಾಡುತ್ತಿರುವ ಈಗಿನ ಸ್ಥಿತಿಯು ಹೃದಯಭೇದಕವಾಗಿದೆ. ಧಾರವಾಡ, ಮೈಸೂರು, ಮಂಗಳೂರುಗಳ ಭಾಗಗಳೆಲ್ಲ, ಮೂಲ ಒಂದು ಜನಾಂಗ, ಒಂದು ಭಾಷೆ ಒಂದು ಇತಿಹಾಸದ ಅವಿಚ್ಛಿನ್ನ ಪರಂಪರೆಯಲ್ಲಿ ಹೇಗೆ ಬೆಳೆದು ಬಂದಿವೆ ಎಂಬುದರ ಎಚ್ಚರವಿಲ್ಲದವರು. 'ನಮ್ಮಷ್ಟಕ್ಕೆ ನಾವು ನಿಮ್ಮಷ್ಟಕ್ಕೆ ನೀವು' ಎಂದು ಕಿರಿಚಿಕೊಳ್ಳುವುದು ನಿಜ. ಕನ್ನಡವು ಕಣ್ಮರೆಯಾದ ಬಳಿಕ ಅಲ್ಲಿಯವರೆ ಇಲ್ಲಿ ಎಲ್ಲೆಡೆಗೆ ಬಂದು ನೆಲೆಸಿದ್ದಾಯಿತು. ಇಲ್ಲಿ ಮೊದಲು ಇದ್ದ ಕನ್ನಡರು ಅಂದರೆ ಬನವಾಸಿ, ಕುಂತಳ, ಎಮ್ಮೆನಾಡಿನವರು ಮತ್ತೆ ಹಿಂದುಗಡೆ ಸಂಕಟಗ್ರಸ್ತರಾಗಿ ನೆಲೆಯನ್ನು ಹುಡುಕುತ್ತ ಬಂದ ಕನ್ನಡರಿಗೆ ತಮ್ಮಲ್ಲಿರಿಸಿಕೊಂಡು ಆದರಿಸಿದರು. ಇದರಿಂದ ಮೊದಲು ಇದ್ದ ಕುಂತಳಾದಿ ಭೇದಗಳೆಲ್ಲ ಅಳಿದು ಈಗ ಆಗಿರುವುದು ಅಖಂಡ ಅವಿಭಾಜ್ಯ ಅಚ್ಛೇದ್ಯ ಒಂದು ಕನ್ನಡ. ಇದನ್ನು ನಮ್ಮ ತಿಳಿಗೇಡಿತನದಿಂದ ಮತ್ತೆ ತುಂಡರಿಸುವುದುಂಟೆ? ಹೀಗೆ ಭೇದಗಳನ್ನು ಎಣಿಸುವವನಿಗೂ ತಾಯಿಯ ಕೊಲೆಗೆ ಹೇಸದ ಖೂಳನಿಗೂ ಏನು ಭೇದ? ಕನ್ನಡದ ಭವಿಷ್ಯತ್ಕಾಲವು ಉಜ್ವಲವಾಗಿದೆ. ಕನ್ನಡರು ಆತ್ಮವಿಶ್ವಾಸವುಳ್ಳವರಾದರೆ ಏನನ್ನೂ ಮಾಡಬಲ್ಲರೆಂಬುದನ್ನು ಜಗತ್ತಿಗೆ ಮನಗಾಣಿಸಿಕೊಡಲು ಇತಿಹಾಸವು ಸಿದ್ಧವಿದೆ. ಈಗ ಕೊರತೆಯಿರುವುದೇನು? ಶ್ರದ್ಧೆಬೇಕು. ಆತ್ಮವಿಶ್ವಾಸಬೇಕು. ಅಹಂಕಾರವಲ್ಲ. ಉನ್ಮಾದ ಮದೋನ್ಮತ್ತ ವೃತ್ತಿಯಲ್ಲ; ಬೇಕಾಗಿರುವುದು ಜ್ಞಾನಸಹಿತ ಸನ್ನಿಷ್ಠೆ ಕೃತಜ್ಞತೆ. ಕೃತಘ್ನರಿಂದ ಕನ್ನಡವು ಹಾಳಾಯಿತು. ತಾವು ಕೊಂಕಣಸ್ಥರು, ಅಯ್ಯರರು, ಅಯ್ಯಂಗಾರ‍್ಯರು, ಸಾರಸ್ವತರು, ಮರ್‍ಹಾಟರು, ಮುಸಲ್ಮಾನರು ಎಂದು ಕನ್ನಡದ ಉಪ್ಪುಂಡವರಲ್ಲಿಯೆ ಕನ್ನಡಕ್ಕೆ ತಿರುಗಿಬಿದ್ದವರುಂಟು. ಧಾರ್ಮಿಕಾನು ಆಗ್ರಹಗಳಿಂದಲೂ ಕನ್ನಡಕ್ಕೆ ಆದ ಹಾನಿಯು ಎಣಿಸಲಾರದಷ್ಟು. ಕನ್ನಡದಲ್ಲಿ ಶ್ರದ್ಧೆಯನ್ನು ವಹಿಸುವವನಿಗೆ ಮತವಿಚಾರಗಳೂ ಅಡ್ಡಬರಲಾಗದು.

ಆರ್ಯನು ಸಂಸ್ಕಾರವಂತನು. ಸಂಸ್ಕೃತನು. ಆದುದರಿಂದ ಕೃತಘ್ನತನದ ಮಹಾಪಾತಕವು ತನ್ನಿಂದ ಜ್ಞಾತಾಜ್ಞಾತವಾಗಿ ಎಂದೂ ಒದಗದಂತೆ ಎಚ್ಚರಾಗಿರುವುದು ಕರ್ತವ್ಯ. 'ದಕ್ಷಿಣಾಪಥಕ್ಕೆ ಹೊರಟ ಆರ್ಯರಿಗೆ ಮೊದಲು ಆಶ್ರಯಕೊಟ್ಟ ನಾಡು ಕರ್ಣಾಟ. ಇಳಿದುಕೊಳ್ಳಲಿಕ್ಕೆ ಎಡೆಕೊಟ್ಟವನ ಮನೆಯನ್ನೆ ತಾನು ಸೆಳೆದುಕೊಂಡು ಆತನನ್ನು ಹೊರಕ್ಕೆ ತಳ್ಳಿಬಿಡುವುದು ನಿಜ. ಆರ್ಯನ ಆರ್ಯತೆಗೆ ಶೋಭಿಸುವಂತಹದಲ್ಲ. ಎಂದೊ ಒಂದು ಕಾಲದಲ್ಲಿ ಇದು ಸಂಭವಿಸಿತು. ಆದುದಾಗಿ ಹೋಯಿತೆಂದುಕೊಳ್ಳುವ. ಇನ್ನು ಮೇಲಾದರೂ ಸತ್ಯವನ್ನು ಸ್ಮರಿಸಿ ಕನ್ನಡದ ಒಂದು ಅಂಗುಲದಷ್ಟು ನಾಡನ್ನು ಸಹ ಅಪಹರಿಸುವುದಕ್ಕೆ ನಿಜವಾದ ಯಾವ ಆರ್ಯವಂಶಾಭಿಮಾನಿಯೂ ನೆರವಾಗಕೂಡದಲ್ಲವೆ? ಕನ್ನಡರಿಗೆ ಈಗ ಸಂಘಟನೆಗೆ- ಏಕೀಕರಣಕ್ಕೆ ಅನಾನುಕಾಲತೆಯ ಕಾಲ; ರಾಜಕೀಯ ದೃಷ್ಟಿಯಿಂದ ಈಗ ಕರ್ಣಾಟಕಕ್ಕೆ ಕುತ್ತಿನ ಕಾಲ. ಆದುದರಿಂದ ತಮ್ಮ ಪ್ರಾಂತವನ್ನು ಶಕ್ಯವಿದ್ದಷ್ಟು ಬೆಳೆಸಿಕೊಳ್ಳಬೇಕೆಂದು ಯಾರಾದರೂ ಪ್ರಯತ್ನಿಸುತ್ತಿದ್ದರೆ ಅದು ಅನ್ಯಾಯ; ಅನೀತಿಯ ಪರಮಾವಧಿಯಾಗಲಿಕ್ಕಿಲ್ಲವೆ? ಸುಡುವ ಮನೆಯಗಳ ಹಿರಿದುಕೊಂಡು ತನ್ನ ಮಹಾಲಯವನ್ನು ಕಟ್ಟುವುದು ಮನುಷ್ಯತ್ವಕ್ಕೆ ಕಲಂಕವನ್ನು ತರುವಂತಹದು. ಈ ಬಗೆಯ ಮಹಾಲಯದ ಭೂರಿ ಆನಂದವು ಮನುಷ್ಯರೆನಿಸುವವರಿಗೆ ಒಪ್ಪುವುದಲ್ಲ.

ಮಹಾರಾಷ್ಟ್ರರೂ ತೆಲುಗರೂ ತಾವು ನಿಜವಾದ ಕರ್ಣಾಟರು, ಎಂಬ ಅಭಿಮಾನದಿಂದ ಎಲ್ಲಿ ಇದ್ದಲ್ಲಿಂದ

ಕನ್ನಡದ ಏಳ್ಗೆಗೆ ನೆರವಾದರೆ ಈ ನಾಡಿಗೆ ಬಂಗಾರದ ದಿನಗಳು ಬರುವುದಕ್ಕೆ ಅದೆಷ್ಟು ಹೊತ್ತು? ಕೊಂಕಣ, ಕರೆಹಟ್ಟಿಗಳು ಕರ್ಣಾಟದ ಅಂಗಗಳು. ಅವುಗಳ ಹೆಸರೆ ಕನ್ನಡ. ಅಲ್ಲಿ ಆಳಿದ ಅರಸರು ಕನ್ನಡರು. ಕನ್ನಡನಾಡಿನ ಉಪ್ಪುಂಡ ಕರ್ಹಾಟರೂ ಕೊಂಕಣಸ್ಥರೂ ದೇಶಸ್ಥರೂ ಕನ್ನಡದ ಹಿಂತಚಿಂತಕರಾಗಿ ನಿಲ್ಲುವುದು ಕರ್ತವ್ಯವಲ್ಲವೆ? ಮಹಾರಾಷ್ಟ್ರದ ಬೇಕಾದ ದೇಶಸ್ಥರನ್ನು ನೋಡಬಹುದು. ಅವರ ಮೋರೆಯ ಮೇಲೆ ಕನ್ನಡ ಕಳೆಯಿದೆ. ಇವರ ಮರ್‍ಹಾಟಿ ಮಾತೆ ಬೇರೆ ಕನ್ನಡ ಸಂಸ್ಕಾರವು ಇವರ ಭಾಷೆಯ ಮೇಲೆ. ಮರ್‍ಹಾಟಿಯಲ್ಲಿ ವಿಚಿತ್ರ ಪ್ರಯೋಗವುಳ್ಳ 'ದೇಶಸ್ಥೀ ಮರ್‍ಹಾಟಿ' ಎಂಬುದೊಂದು ಪ್ರಕಾರವೇ ಇದೆ! ಇವರೆಲ್ಲ ಕನ್ನಡದ ಹಿತಚಿಂತಕರಾದರೆ ಎಷ್ಟು ಸೊಗಸಾದೀತು? ಹಿಂದೂದೇಶದಲ್ಲೆಲ್ಲ ತಮ್ಮ ಬುದ್ಧಿವಂತಿಕೆ, ಉದ್ಯೋಗ ಪ್ರೀತಿ ವ್ಯವಹಾರ ಚಾತುರ್ಯಗಳಿಂದ ಖ್ಯಾತಿಪಡೆದ ಸಾರಸ್ವತರು ಗೌಡರು ಕರ್ಣಾಟದ ಒಂದು ನಿಕ್ಷಿಪ್ತಧನವಿದ್ದ ಹಾಗೆ ಇವರು. ಸಾಮಾನ್ಯವಾಗಿ ಈ ಜನಾಂಗವು ವಹಿಸಿದುದು ಕರ್ಣಾಟಕದ ಹೆಸರನ್ನೇ. ಆದರು ಕನ್ನಡನುಡಿಯನ್ನು ಮಾತ್ರ ಅಷ್ಟು ಅಳವಡಿಸಿಕೊಂಡಿಲ್ಲ. ಇವರು ಕನ್ನಡವನ್ನು ಸೊಗಸಾಗಿ ಬರೆವವರೂ, ಬಹಳ ಪರಿಶುದ್ಧವಾಗಿ ಮಾತನಾಡುವವರೂ ಆಗಿದ್ದರೂ ಇದಕ್ಕೆ ತಮ್ಮ ಅಂತಃಪುರದಲ್ಲಿ ಆಸ್ಪದ ಕೊಟ್ಟಿಲ್ಲ. ಇದು ಒಂದು ಸಣ್ಣಕೊರತೆಯಿದ್ದರೂ ಆಗಿರುವ ಹಾನಿ ಮಾತ್ರ ಕಲ್ಪನಾತೀತ. ಕರ್ಣಾಟದ ಹೊರಗೆ ಇದ್ದಾಗ ಸಹ 'ಕ್ಯಾನರಾದವರು' ಎಂಬ ಹೆಸರು ಉಳಿದರೂ ಅದು ಬರಿ ಅಡ್ಡ ಹೆಸರೇ. ಅವರು ಹೋದಲ್ಲಿಯ ಭಾಷೆಯನ್ನೆ ಎತ್ತಿಡುವರು. ವಿಶೇಷವಾಗಿ ಮರ್‍ಹಾಟಿಯ ಕಡೆಗೆ ಇರುವ ಇವರ ಒಲವು ಕನ್ನಡಕ್ಕೆ ಬಹಳ ಹಾನಿಯನ್ನುಂಟುಮಾಡಿದೆ.

"ಬನವಸೆಯ ಗುಹಲ್ಲದೇವ ಕದಂಬನ ಮಂತ್ರಿ ಮಂಡಲದಲ್ಲಿ ದಾಮಪ್ಪೈ, ಮಾವಪ್ಪೈ, ಮಹಲ್ಲಪ್ಪೈ ಖಲ್ಲಪ್ಪೈ, ಸಲ್ಲಪ್ಪೈಗಳು" ತಮ್ಮ ಬುದ್ಧಿವಂತಿಕೆಯಿಂದ ವಿರಾಜಿಸುತ್ತಿದ್ದುದಾಗಿ ಶ್ರೀ ಶೆಣೈಗೋಯಂಬಾಬರು ತಮ್ಮಲ್ಲಿ ಇರುವ ಒಂದು ಅಪ್ರಕಾಶಿತ ಶಾಸನದಿಂದ ಎತ್ತಿ ಬರೆದಿರುತ್ತಾರೆ. (ವಿವಿಧ ಜ್ಞಾನವಿಸ್ತಾರ ಸಂಪುಟ ೧೯೩೦, ಪುಟ ೧೩೦). ಚಳುಕ್ಯ ವಿಕ್ರಮನು ಕಾಶ್ಮೀರಿನ ಬಿಲ್ಹಣನಿಗೆ ಆಶ್ರಯವಿತ್ತುದು ಪ್ರಖ್ಯಾತವಿದೆ. ವಿಜಯನಗರದ ಬುಕ್ಕರಾಜನಿಗೆ ಮಂತ್ರಿಯಾದ ಒಬ್ಬ ಮಾಧವನು (ವಿದ್ಯಾರಣ್ಯರಲ್ಲ) ಸಾರಸ್ವತಕುಲಭೂಷಣನಾಗಿದ್ದುದಾಗಿ ಸಂಶೋಧಕರು ಹೇಳುತ್ತಾರೆ. (ವಿವಿಧ ಜ್ಞಾನವಿಸ್ತಾರದ ೧೯೩೦ ಸಂಪುಟ; ಮೂವರು ಮಾಧವರು ಎಂಬ ಲೇಖ). ಕೆಳದಿ ನೃಪವಿಜಯದಲ್ಲಿ ಸಬ್ಬುನೀಸರು ಆ ರಾಜರ ಮಂತ್ರಿವರ್ಗದಲ್ಲಿದ್ದುದರ ವರ್ಣನೆಯು ಬಂದಿದೆ. ಗೌಡದೇಶದಿಂದಲೂ ಸರಸ್ವತೀತೀರದಿಂದಲೂ ಬಂದ ವಿದ್ವನ್ಮಣಿಗಳಿಗೂ, ಕರ್ತೃತ್ವಶಾಲಿಗಳಿಗೂ ಒಕ್ಕಲಾಗಿರಲು ಇಂಬುಗೊಟ್ಟು ಅವರ ಕರ್ತೃತ್ವಕ್ಕೆ ರಾಜ್ಯವ್ಯವಹಾರಗಳಲ್ಲಿ ಆಸ್ಪದ ಕೊಟ್ಟು ಸಾಕಿ ಸಲುಹಿದ ಕರ್ಣಾಟ ಮಾತೆಯ ಉಪಕಾರಗಳನ್ನು ಎಷ್ಟೆಂದು ಹೇಳಬೇಕು? ನಾಡತಾಯಿಯ ಹೆಸರನ್ನೆ ತಮ್ಮ ಜನಾಂಗಕ್ಕೆ ಪರ್ಯಾಯ ನಾಮದಂತೆ ಇಟ್ಟುಕೊಂಡುದು ಇವರಲ್ಲಿ ಜಾಗೃತವಾಗಿರುವ ಕೃತಜ್ಞತಾ ಬುದ್ಧಿಯ ದ್ಯೋತಕವಾಗಿದೆ. ಆದರೂ ಕನ್ನಡದೊಡನೆ ಇನ್ನೂ ಒಂದಿಷ್ಟು ಹೆಚ್ಚು ಸಾಮರಸ್ಯವನ್ನು ಹೊಂದಿ ಕನ್ನಡದ ಹಿತವೇ ತಮ್ಮ ಹೆಗ್ಗುರಿಯೆಂದು ನಡೆದುಕೊಂಡರೆ ಎಷ್ಟು ಸೊಗಸಾದೀತು! ಇಲ್ಲಿ ನೆಲೆಸಿದ ಜನಾಂಗದವರು-ಬ್ರಾಹ್ಮಣರಿಂದ ಕ್ರಿಸ್ತರ ವರೆಗೆ ಎಲ್ಲರೂ, ಪಾರ್ಸಿಗಳು ತಮಗೆ ಆಶ್ರಯವನ್ನಿತ್ತ ಗುಜರಾತಕ್ಕೆ ಹೇಗೆ ಕೃತಜ್ಞರಾಗಿರುವರೆಂಬುದನ್ನು ಮೇಲುಪಂಕ್ತಿಯಾಗಿ ಇಟ್ಟುಕೊಳ್ಳುವಂತಿದೆ. ಆಶ್ರಯಕೊಟ್ಟು ವಂಶಾನುವಂಶಗಳನ್ನೂ ಸಾಕಿ ಸಲುಹಿದ ನಾಡಿನ ಇದಿಷ್ಟು ಉಪಕಾರಗಳನ್ನು ನೆನಿಸುವಷ್ಟು ಮನುಷ್ಯತ್ವವನ್ನು ತೋರಿಸುವುದು ಸುಧಾರಿಸಿದವರ ಸುಸಂಸ್ಕೃತರಾದವರ ಕರ್ತವ್ಯವಾಗಿಲ್ಲವೆ?

ಕರ್ಣಾಟದ ಮೇಲೆ ಮೂರು ಕುತ್ತುಗಳು ಬಂದುವು. ಮೊದಲನೆಯದರಲ್ಲಿ ಉತ್ತರದ ವಸಾಹತುಗಾರರ ಕಾಲ್ತುಳಿತಕ್ಕೆ ಸಿಕ್ಕು ಮೂಲಕರ್ಣಾಟವು ಹಾಳಾಯಿತು. ಎರಡನೆಯದು ಬಹಮನಿ ರಾಜ್ಯ ಸ್ಥಾಪನೆಯಿಂದ ಕರ್ಣಾಟದ ಉತ್ತರ ಮರ್ಯಾದೆ ಸಂಕುಚಿತವಾಗಿ ಕೃಷ್ಣೆಗೆ ಬಂದು ನಿಂತಿತು. ವಿಜಯನಗರವು ಕನ್ನಡರ ರಾಜ್ಯ. ಬಹಮನಿಯವರೂ ವಿಜಯನಗರದ ರಾಯರೂ ಹಾವು-ಮುಂಗಲಿ. ಬಹಮನಿಗಳು ಸ್ವಾಭಾವಿಕವಾಗಿಯೇ

ಕನ್ನಡರಿಗೆ ಇಂಬುಗೊಡಲಿಲ್ಲ. ಮರ್ಹಾಟದಿಂದ ಜನಗಳನ್ನು ತಂದು ಅವರಿಗೆ ಆಡಳಿತದ ಅಧಿಕಾರಗಳನ್ನು ಕೊಡುತ್ತಿದ್ದರು. ದಾಮಾಜಿಪಂತ, ದಾಸೋಪಂತರು ಮೊದಲಾದ ಪಂತರ ಪ್ರತಿಷ್ಠೆ ಅಲ್ಲಿ. ಬರಗಾಲದಲ್ಲಿ ಅಧಿಕಮಾಸ. ಹಾಗೆ ದುರ್ಗಾದೇವಿಯ ಭೀಕರ ಬರಗಾಲವು ಕೃಷ್ಣಾ ಗೋದಾವರೀ ನಡುವಿನ ನಾಡಿನಲ್ಲಿ ಸುಮಾರು ಹನ್ನೆರಡು ವರುಷ ಇತ್ತು. ಎಲುಬಿನ ಪುಡಿಯನ್ನು ಹಿಟ್ಟಿನಂತೆ ತಿಂದುದರ ವರ್ಣನೆಗಳಿವೆ. ಊರುಗಳೆಲ್ಲ ಹಾಳಾದುವು. ಇದ್ದ ಬಿದ್ದ ಕನ್ನಡರು ಮನೆಮಾರುಗಳನ್ನು ಬಿಟ್ಟು ಹೋದರು. ಮುಂದೆ ಪುನರ್ವಸತಿಯ ಕಾಲಕ್ಕೆ ಬಹಮನೀ ಅರಸರ ಕಾಲದಲ್ಲಿ ಮರ್ಹಾಟರಿಗೆ ಪ್ರಾಧಾನ್ಯವು ದೊರೆತಿದ್ದರೆ ವಿಶೇಷವಲ್ಲ. ಬಹಮನಿ ರಾಜ್ಯವು ಹಾಳಾದ ಮೇಲೆ ವಿಜಾಪುರ-ಗೋವಳಕೊಂಡಗಳಲ್ಲಿ ಸಹ ಮರ್ಹಾಟರಿಗೆ ಪ್ರಾಶಸ್ತ್ಯವಿತ್ತು. ವಿಜಾಪುರದ ಆದಿಲಶಹನು ಒಬ್ಬ ಮರ್ಹಾಟಿ ಸರದಾರನ ಹೆಂಡತಿಯನ್ನು ತನ್ನ ಅಂತಃಪುರಕ್ಕೆ ಸೇರಿಸಿದ್ದನು. ಅವಳ ಮಾತು ಕೇಳಿ ದರಬಾರಿನಲ್ಲಿ ಮರ್ಹಾಟಿ ಭಾಷೆಯನ್ನು ಮುಂದೆ ಆರಂಭ ಮಾಡಿದನು! ವಿಜಯನಗರದ ವಿರುದ್ಧವಾಗಿ ಹೋರಾಡಲು ಕನ್ನಡರಲ್ಲದವರಿಗೆ, ಕನ್ನಡವನ್ನು ಬಿಟ್ಟು ಮರ್ಹಾಟರಾದವರಿಗೆ ಸ್ಥಾನವಿತ್ತು. ತಾಳೀಕೋಟೆಯ ಕಾಳಗದಲ್ಲಿ ಮುಸಲ್ಮಾನರ ಪಕ್ಷದಿಂದ ಕಾದಿ ಮಡಿದವರ ಪಟ್ಟಿಯಲ್ಲಿ ಮರ್ಹಾಟಿಗಳು ಎಷ್ಟಿರುವರೆಂಬುದನ್ನು ರಾಮರಾಯನ ಬಖೈರಿನಲ್ಲಿ ನೋಡಬಹುದು. ಮರ್ಹಾಟರು ಈಗ 'ಹಿಂದೂಪದ ಪಾದಶಾಹಿ'ಯ ದೊಡ್ಡದೊಡ್ಡ ಮಾತುಗಳನ್ನಾಡುತ್ತಿದ್ದರೂ ವಿಜಯನಗರದ ಹಿಂದೂ ಸಿಂಹಾಸನವನ್ನು ಹಾಳುಮಾಡಲು ನೆರವಾದವರು ಮರ್ಹಾಟರೆ! ಆಗ ಹಾಗೆ! ಈಗ ಹೀಗೆ! ಯಾವುದನ್ನು ಆಡುವುದರಿಂದ ಯಾವುದನ್ನು ಮಾಡುವುದರಿಂದ ಹಿರಿತನಬರುವುದೊ ಅದನ್ನು ಆಡುವುದು ಅದನ್ನು ಮಾಡುವುದು! 'ಗನಿಮಿ ಆಮುಚಾ ಕಾವಾ' ಎಂದು ಅವರು ಹೇಳುವರು, ಸರಿ.

ಈಗಿನ ಕುತ್ತು, ಕನ್ನಡವು ಒಂದೇ ಆಡಳಿತದಲ್ಲಿರದೆ ಸಂಸ್ಥಾನ, ಬ್ರಿಟಿಶರ ಬೇರೆ ಬೇರೆ ಇಲಾಖೆಗಳಲ್ಲಿ ಹರಿದು ಹಂಚಿಹೋದುದು. ಇದನ್ನು ಕುರಿತು ಹೆಚ್ಚಿಗೆ ಬರೆವ ಕಾರಣವಿಲ್ಲ. ಕರ್ಣಾಟವು ಮೊದಲಿನ ಎರಡೂ ಕುತ್ತುಗಳೊಳಗಿಂದ ಅಂತೂ ಬದುಕಿ ಉಳಿದಿದೆ. ಮೂಲ ಆ ಕರ್ಣಾಟದ ನೆನೆಪು ಎಂದೋ ಹಾರಿಹೋಯಿತು. ಆಮೇಲೆ ಸಹ ಎಂಥ ವೈಭವ ಕಾಲವದು! ಆದಿಶಂಕರಾಚಾರ್ಯರು ಮಾಹಿಷ್ಮತಿಯ ಮಂಡನಮಿಶ್ರನನ್ನು ಮಧ್ಯ ಕರ್ಣಾಟಕಕ್ಕೆ ತಂದು ಶೃಂಗೇರಿಯ ಪೀಠವನ್ನೇ ಅವರಿಗೆ ಒಪ್ಪಿಸುವರು. ಬಾದಾಮಿ ಪುಲಿಕೇಶಿಯು ತನ್ನ ನಾಡಿನ ಮೇಲೆ ಏರಿಬರುವ ಹರ್ಷನನ್ನು ಹಿಂದಟ್ಟಿ ಕರ್ಣಾಟದ ಉತ್ತರ ಮರ್ಯಾದೆಯನ್ನು ಉಳಿಸಿಕೊಳ್ಳುತ್ತಾನೆ. ಮಾಳವದ ಮುಂಜನಿಗೆ ದೇಹಾಂತ ಪ್ರಾಯಶ್ಚಿತ್ತವನ್ನು ಕೊಟ್ಟು, ಅಲ್ಲಿಯ ಕರ್ಣಾಟವನ್ನು ಹಾಳುಗೆಡವಿದ್ದುದಕ್ಕಾಗಿ ಚಲುಕ್ಯರ ಎರಡನೆಯ ತೈಲಪನು (೯೯೫) ಮುಯ್ಯ ತೀರಿಸುವನು. ಹನ್ನೆರಡನೆಯ ಶತಮಾನದಲ್ಲಿ ಬಸವನ ಧಾರ್ಮಿಕ ಚಳವಳದ ಬೆಳಕು ಮರ್ಹಾಟ ಉಜ್ಜಯಿನಿಗಳ ವರೆಗೂ ಬಿದ್ದಿತ್ತು. ಹದಿಮೂರನೆಯ ಶತಮಾನದಲ್ಲಿ ಮಹಾನುಭಾವ ಪಂಥವು ಬಸವನ ತತ್ತ್ವಗಳಿಂದಲೆ ಸ್ಫೂರ್ತಿಗೊಂಡು ಹೊರಟುದೆಂದು ಬಲ್ಲವರ ಅಭಿಪ್ರಾಯ. ಜಾತಿಭೇದಗಳನ್ನು ಮುರಿದು ಹಾಕುವುದು, ಹೆಣ್ಣು ಮಕ್ಕಳಿಗೂ ಸನ್ಯಾಸಿಗಳನ್ನಾಗಿ ಸ್ವೀಕರಿಸುವುದು ಮೊದಲಾದವು ವೀರಶೈವಧರ್ಮದ ಅನುಕರಣ. ಬಸವನು ಶಿವನನ್ನು ಹೇಳಿದರೆ; ಮಹಾನುಭಾವರು ಕೃಷ್ಣನನ್ನು ಆರಾಧ್ಯ ದೈವತವೆಂದು ಭಾವಿಸುವರು. ಹದಿನಾರನೆಯ ಶತಮಾನದಲ್ಲಿ ಮರ್ಹಾಟದಲ್ಲಿ ಇಮಾದಶಾಹಿಯನ್ನು ಸ್ಥಾಪಿಸಿದವನು ಕನ್ನಡನು. ಇವನು ವಿಜಯನಗರದ ಯುದ್ಧಗಳಲ್ಲಿ ಸೆರೆಸಿಕ್ಕ ಒಬ್ಬ ಕರ್ಣಾಟಬ್ರಾಹ್ಮಣನಂತೆ. ಮುಸಲ್ಮಾನನಾದ ಮೇಲೆ ಅಲ್ಲಿ ಸ್ವತಂತ್ರ ಸಿಂಹಾಸನವನ್ನು ಸ್ಥಾಪಿಸುತ್ತಾನೆ.

ಈಗ ಸಹ ಕನ್ನಡರು ಪರಪ್ರಾಂತಗಳಲ್ಲಿ ಹೋಗಿ ಪ್ರಖ್ಯಾತರಾದವರು ಕಡಿಮೆ ಇಲ್ಲ. ಕಡಿಮೆ ಇರುವುದು ಒಂದೇ ಮಾತು. ಅದು: ತಾವು ಕನ್ನಡರು ಎಂದು ಹೇಳುವುದನ್ನಷ್ಟು ನಮ್ಮವರು ಮರೆಯುತ್ತಿದ್ದಾರೆ. ಹೊರಗಿನ ನಾಡಿಗೆ ಹೋದಾಗ ಯಾರು, ತಾವು ಮೈಸೂರದವರು ಎನ್ನುವರು; ಯಾರು ಮಂಗಳೂರು ಎಂದು ಹೇಳುವರು, ಯಾರು ತಾವು ದಕ್ಷಿಣ ಮಹಾರಾಷ್ಟ್ರ ಅಂದರೆ ಧಾರವಾಡ, ವಿಜಾಪುರ, ಬೆಳಗಾವಿ ಮತ್ತು ಈ ಭಾಗದ

ಸಂಸ್ಥಾನಗಳ ನಿವಾಸಿಗಳು! ಯಾರು ತಾವು ತುಳುವರು, ಯಾರು ಕೊಡಗರು! ಹೀಗೆಲ್ಲ ಅನವಸ್ಥೆ! ಅವ್ಯವಸ್ಥೆ! ತಾಳಗೆಟ್ಟ ಮಾತು! ಮೇಳಗೆಟ್ಟ ನಡತೆ! ಅಖಂಡ ಕರ್ಣಾಟದ ದೃಷ್ಟಿಯಿಲ್ಲ! ಈ ಕೀಳುನಡತೆಯು ಸಮ್ಮಲ್ಲಿಂದ ಪೂರ್ಣವಾಗಿ ಹೋಗದಿದ್ದರೆ ಕನ್ನಡವು ಬದುಕುವ ಆಸೆಯಿಲ್ಲ. ನಾವು ಕರ್ಣಾಟದಲ್ಲಿರುವಾಗ ಒಳಭಾಗಗಳನ್ನು ಹೇಳಿಕೊಳ್ಳಬಹುದು. ಆದರೆ, ಹೊರಗೆ ಹೋದಾಗ ಕನ್ನಡ ಎಂಬ ಅಖಂಡ, ಅದ್ವಯ, ಅವಿಭಾಜ್ಯ ನಾಮವನ್ನು ಹೇಳಬೇಕು. ಈ ಹೆಸರಿನಲ್ಲಿಯೇ ಹಿಗ್ಗಬೇಕು. ಈ ಹೆಸರಿನಲ್ಲಿಯೆ ನಲಿಯಬೇಕು. ಕನ್ನಡವೆಂಬುದೆ ನಮ್ಮ ಸಂಜೀವಿನೀ ಮಂತ್ರ; ಮೃತ್ಯುಂಜಯ ಜಪ. ಅಲ್ಲದೆ, ಬೇರೆ ಚಿಲ್ಲರೆಗಳ ಆರಾಧನೆಯು ನಮಗೆ ಚೆಲ್ಲಾಪಿಲ್ಲಿ ಮಾಡಲು ಮಾತ್ರ ಕಾರಣ; ಬುದ್ಧಿಭೇದಕ್ಕೆ ಔತಣ. ಆದುದರಿಂದ, ನಮ್ಮ ಏಳಿಗೆಯಾಗಬೇಕಾಗಿದ್ದರೆ 'ಕನ್ನಡ'ದ ಅಖಂಡ ನಾಮಸ್ಮರಣೆಯೊಂದೆ ದಾರಿಯಲ್ಲವೆ?

ಹಿಗ್ಗು (ಹಿರಿಗು) ಹೊಳೆಯಲಿ! ನಾಡು ನಲಿಯಲಿ!

ಟಿಪ್ಪಣಿ

೧. ಮಹರ್ಷಿವ್ಯಾಸ ***ವ್ಯಾಸಭಾರತ*** ಸಭಾಪರ್ವ ೭೮-೯೮; ಭೀಷ್ಮಪರ್ವ ೯-೫೯

೨. ಮಾರ್ಕಂಡೇಯ ***ಪ್ರಾಕೃತ ಸರ್ವಸ್ವ ಟೀಕಾ*** **ಪು.** ೩

೩. ಶೇಷಯ್ಯಂಗಾರ್ ಎಚ್., ***ಕವಿರಾಜಮಾರ್ಗಂ,*** ೧.೪೬; ೫೭

೪. Vinsent Smith's Epigrophia Indica, P. 446

೫. ಶೇಷಯ್ಯಂಗಾರ್ ಎಚ್., ಕವಿರಾಜಮಾರ್ಗಂ ೧. ೪೨; ೪೬; ೪೭; ೪೮; ೫೭

೬. ಅದೇ, ೧.೧೨೦

೭. ಅದೇ, ೧.೩೬

೮. ***ಮನುಸ್ಮತಿ*** ೨, ೨೩, ಪಾತಂಜಲಿ, ***ಯೋಗಸೂತ್ರ,*** ೨,೪,೧೦

೯. ***ಬೃಹದಾರಣ್ಯಕೋಪನಿಷತ್ತು,*** ೪-೪-೨೨.

೧೦. ಅಂಧಂ ತಮಃ ಪ್ರವಿಶಂತಿ ಯೇ ವಿದ್ಯಾಮುಪಾಸತೇ
ತತೋ ಭೂಯ ಇವ ತೇ ತಮೋ ಯ ವಿದ್ಯಾಯಾಂ ರತಾಃ ॥ ೯॥
ಅನ್ಯ ದೇವಾಹುರ್ವಿದ್ಯಯಾ ಅನ್ಯದಾಹುರವಿದ್ಯಯಾ
ಇತಿ ಶುಶ್ರುತಾ ಧೀರಾಣಾಂ ಯೇ ನಸ್ತದ್ ವಿಚಚಕ್ಷಿರೇ ॥ ೧೦॥
ವಿದ್ಯಾ ಚಾವಿದ್ಯಾಂ ಚ ಯಸ್ತದ್ ವೇದೋಭಯಂ ಸಹ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ ॥ ೧೧॥
ಅಂಧಂ ತಮಃ ಪ್ರವಿಶಂತಿ ಯೇ ಸಂಭೂತಿಮುಪಾಸತೇ।
ತತೋ ಭೂಯ ಇವ ತೇ ತಮೋ ಯ ಉ ಸಂಭೂತ್ಯಾಂ ರತಾಃ ॥ ೧೨॥
ಅನ್ಯದೇವಾಹುಃ ಸಂಭವಾತ್ ಅನ್ಯದಾಹುರಸಂಭವಾತ್।
ಇತಿ ಶುಶ್ರುಮ ಧೀರಾಣಾಂ ಯೇ ನಸ್ತದ್ ವಿಚಚಕ್ಷಿರೇ ॥ ೧೩॥
ಸಂಭೂತಿಂ ಚ ವಿನಾಶಂ ಚ ಯಸ್ತದ್ ವೇದೋಭಯಂ ಸಹ
ವಿನಾಶನೇ ಮೃತ್ಯುಂ ತೀರ್ತ್ವಾ ಸಂಭೂತ್ಯಾಮೃತಮಶ್ನುತೇ ॥ ೧೪॥
(ಈಶಾವಾಸ್ಯೋಪನಿಷತ್- ೮ರಿಂದ ೧೪)

೧೧. ***ಈಶಾವಾಸ್ಯೋಪನಿಷತ್ತು,*** ೩

೧೨. ಕಲ್ಯಾಣ ಹಿಂದಿ ಮಾಸಪತ್ರಿಕೆಯ ***ಶಿವಾಂಕ*** ಸಂಪುಟ, ಗೋರಖಪುರ

೧೩. ನರಸಿಂಹಾಚಾರ್ಯ ರಾ., ***ಕವಿಚರಿತೆ,*** ಭಾಗ ೧ **ಪು.** ೩೦, ೫೪, ೭೪, ೨೯೧

೧೪. Heritage of India series, Telugu Litrature. P. 44

೧೫. Telugu Literature P. 44

೧೬. ನರಸಿಂಹಾಚಾರ್ಯ ರಾ., ***ಕವಿಚರಿತೆ,*** ೩ನೆಯ ಭಾಗ ಮುನ್ನುಡಿ ಪುಟ ೨೧

೧೭. 'ಮಲಯ' ಶಬ್ದವು ಕನ್ನಡದ 'ಮಲೆ (ಪರ್ವತ) ಎಂಬುದರ ಇನ್ನೊಂದು ರೂಪ. ಇದೆ ಮಾಳವಾ ಎಂದು ಹೆಸರಾಗಿದೆ. ಮರಾಠಿಯಲ್ಲಿ ಮಲೆ ಶಬ್ದವನ್ನೆ 'ಮಾಳ' ಎಂಬ ರೂಪವನ್ನು ತಾಳಿದೆ. ಮಲಯವೆನ್ನುತ್ತಲೆ ಮಲೆಬಾರಿನ ಕಲ್ಪನೆ ಯಾಗುವುದುಂಟು. ಆದರೆ, ಪ್ರಾಚೀನ ಕಾಲದಲ್ಲಿ ಈಗಿನ ಮಾಳವದೇಶಕ್ಕೆ ಮಲಯವೆಂಬ ಹೆಸರಿತ್ತು. ನೋಡಿ Nasik Gazetteer p.631

೧೮. ನರಸಿಂಹಾಚಾರ್ಯ ರಾ., ***ಕವಿಚರಿತೆ*** ಭಾಗ ೨ ಮುನ್ನುಡಿ **ಪು.** ೫

೧೯. ಈ ಊಹೆಗೆ ಹೆಚ್ಚಿನ ಆಧಾರಗಳನ್ನು ಮುಂದಿನ ಪರಿಚ್ಛೇದಗಳಲ್ಲಿ ಕಾಣಬಹುದು.

೨೦. ***ವಿವಿಧಜ್ಞಾನ ವಿಸ್ತಾರ,*** ೧೯೩೧ರ ಸಂಪುಟ **ಪು.** ೧೨೬

೨೧. ಕುಲಕರ್ಣಿ. ಕೃ. ಪ., ***ಮರಾಠಿ ಭಾಷಾ ಉದ್ಗಮ ವ ವಿಕಾಸ*** **ಪು.** ೧೮೯

೨೨. ಜನ್ನ, ***ಅನಂತನಾಥ ಪುರಾಣಂ,*** ೧೪-೪೭ ವಚನ

೨೩. ಆಪ್ಟೆ ವಾ. ಗೊ., ***ಮರಾಠೀಕೋಶ***
೨೪. ***Linguistic survey of India,*** Vol. IV P. 566
೨೫. Ibid, Vol. IV P. 396
೨೬. Ibid, Vol. IV P. 386
೨೭. Ibid, Vol. IV P. 386
೨೮. Ibid, Vol. IV P. 396
೨೯. ***ಶಬ್ದಮಣಿದರ್ಪಣಂ*** (ಕರ್ಣಾಟಕ ಸಾಹಿತ್ಯ ಪರಿಷತ್ತು) ಪು. ೨೯
೩೦. ***Kanara Gazetteer,*** Vol. I, P. 285
೩೧. ***ಮಹಾರಾಷ್ಟ್ರ ಜ್ಞಾನಕೋಶ*** 'ಹಳಬ' ಶಬ್ದವನ್ನು ನೋಡಿ
೩೨. ***Kanara Gazetteer***, I. P. 289
೩೩. "Both men and women talk konkani but their home tongue is corrupt? (or old, Kanarease)" ***Kanara Gazetteer,*** Vol. I. P. 289
೩೪. ***Nasik Gazetteer,*** P. 231
೩೫. Ibid, P. 647
೩೬. ಶ್ರೀ ಭಾಸ್ಕರರಾವ್ ಜಾಧವ 'ಮರಾಠರೂ ಅವರ ನುಡಿಯೂ' ಎಂಬ ಉಪನ್ಯಾಸ, ***ವಿವಿಧಜ್ಞಾನ ವಿಸ್ತಾರ*** ಆಗಸ್ಟ್ ಸಂಚಿಕೆ ೧೯೩೧ ರ ಸಂಪುಟ
೩೭. ಧನ ತದ್ಭವ ದನ, ***ಶಬ್ದಮಣಿದರ್ಪಣಂ*** (ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟನೆ) ಪು. ೨೫೪
೩೮. ಕುಲಕರ್ಣಿ ಕೃ. ಪ, ***ಮರಾಠಿ ಭಾಷಾ ಉದ್ಗಮ ವ ವಿಕಾಸ,*** ಪು. ೯೬
೩೯. ಅದೇ. ಪು. ೯೬
೪೦. ಅದೇ. ಪು. ೧೩೮
೪೧. ಜೋಷಿ ಆರ್. ಬಿ., ***'ಮರ್ಹಾಟ ಭಾಷೇಚೀ ಘಟನಾ'*** ಪು. ೫೬೨
೪೨. ಕುಲಕರ್ಣಿ ಕೃ. ಪ., ***ಮರಾಠಿ ಭಾಷಾ ಉದ್ಗಮ ವ ವಿಕಾಸ,*** ಪು. ೧೫೭; ೧೫೮
೪೩. The Substratum over which gujarathi and Marathi have spread was Dravidian - Dr. Sten Know.
೪೪. ***'ಕರ್ನಾಟಕ ಗತವೈಭವ'***ದಲ್ಲಿ ಲೋಕಮಾನ್ಯರ ಶಿಷ್ಯರಾದ ಶ್ರೀ ಆಲೂರವರು ಉದ್ಧೃತ ಮಾಡಿದ ಗುರ್ಲಹೊಸೂರಿನ ಸುಪ್ರಸಿದ್ಧ ಉಪನ್ಯಾಸ.
೪೫. ***Khandesh Gazetteer,*** P. I, See foot Note 1
೪೬. ನರಸಿಂಹಾಚಾರ್ಯ ರಾ., ***ಕವಿಚರಿತ್ರೆ*** ಭಾಗ ೩. ಪು. ೧೫
೪೭. ***ಶ್ರೀಮದ್ಭಾಗವತಮ್*** ೫-೬-೮ ಗದ್ಯ
೪೮. ಶ್ರೀ ಕಾಮಲಾಪೂರ ಭೀಮರಾಯರು ಬರೆದ ***'ವೈಷ್ಣವ ಮಹಾಪುರುಷ ಸತ್ಕಥಾ'*** ೨ನೆಯ ಆವೃತ್ತಿ ನೋಡಿರಿ
೪೯. Ranade. R. G., ***Mysticism in Maharastra***, p. 41
೫೦. ***Khandesh Gazetteer,*** p. 453
೫೧. ಹಿಂದೀ ಮಾಸಪತ್ರಿಕೆ ಕಲ್ಯಾಣ ***ಶಿವಾಂಕ*** ೧೯೩೩ ಪು. ೫೭೨
೫೨. Vincent, Smith, ***Epigrophia Indica,*** p. 218
೫೩. ಮಂ. ಗೋವಿಂದ ಪೈಗಳು ಬರೆದ ***'ಕನ್ನಡ ಸಾಹಿತ್ಯದ ಪ್ರಾಚೀನತೆ'*** ಉದಯಭಾರತದ ಸಂಚಿಕೆ ಆಗಸ್ಟ್ ೧೯೨೮
೫೪. Vincent Smith, ***Epigrophia Indica,*** p. 434-435
೫೫. Ibid p. 435
೫೬. ಬಿಲ್ಹಣ ***ವಿಕ್ರಮಾಂಕ ದೇವಚರಿತಂ,*** ೧೮-೧೦೨

೫೭. Vincent Smith, ***Epigrophia Indica,*** P. 429

೫೮. ಳ=ಣ. ಉದಾ: ಮೊಳಕೈ=ಮೊಣಕೈ; ಮುಳುಗು=ಮುಣುಗು; ಕಳ=ಕಣ ಮುಂ. ‘ಚಣಾಕ’ ಎಂಬುದು ಮರ್ಹಾಟಿಯಲ್ಲಿಯೂ ತುದಿ ಮುಂಭಾಗವೆಂದೇ ಅರ್ಥ.

೫೯. Vincent Smith, ***Epigrophia Indica,*** P. 430

೬೦. Taylor ***Kanara Gazetteer,*** Vol. I. p. 294

೬೧. ಪಾಧ್ಯೆ, ***ಹೇಮಾಡಪಂತಾಂಚೆ ಚರಿತ್ರ***

೬೨. ಆದೇ.

೬೩. ಜೋಷಿ ಆರ್. ಬಿ., ***ಮರಾಠೀ ಭಾಷೇಚೀ ಘಟನಾ*** ಪ್ರ. ೫೬೩

೬೪. ***ಮಹಾರಾಷ್ಟ್ರ ಕವೀಂಚೆ ಚರಿತ್ರ***

೬೫. *ವಿವಿಧಜ್ಞಾನ ವಿಸ್ತಾರ* ೧೯೨೭ರ ಸಂಪುಟ ‘ವರ್ಹಾಟಿ-ಮರಾಠಿ’ ಎಂಬ ಲೇಖನ ನೋಡಿರಿ

೬೬. ‘ಕನ್ನಡ ಕ್ಷೀಣದೆಸೆಯ ಕಾರಣ ಮೀಮಾಂಸೆ’ ಎಂಬ ಮುಂದಿನ ಪುಸ್ತಕದಲ್ಲಿ ಇನ್ನೂ ಹಲವು ಕಾರಣಗಳ ವಿಶೇಷ ವಿವರವು ಬರುವುದು.

೬೭. ಶ್ರೀ ಭಾಸ್ಕರ್ ರಾವ್ ಜಾಧವರಾಯರ ಉಪನ್ಯಾಸ-***ವಿವಿಧಜ್ಞಾನ ವಿಸ್ತಾರ,*** ಆಗಸ್ಟ್ ಸಂಚಿಕೆ ೧೯೩೧


೬೮. ***Kanara Gazetteer,*** Vol. I 117

೬೯. ***Bijapur Gazetteer,*** P. 379

ಮಹಾರಾಷ್ಟ್ರದ ಮೂಲ

ಅಥವಾ

ಮೂಲ-ಮಹಾರಾಷ್ಟ್ರ



ಆರ್ಯ-ಪೂರ್ವ ಭಾರತ

ಅರಿಕೆ

(ಮೊದಲ ಮುದ್ರಣಕ್ಕೆ)

ಹೊನ್ನ ಮುಸುಕನ್ನು ಓಸರಿಸಿ ತಾಯ್‌ನನ್ನಿಯೇ ನಿನ್ನ ಮೊಗವನ್ನು ತೋರೆ।
ಬನ್ನ ಬಡುತಿಹೆ ನಾನು ನಿನ್ನ ದರುಶನಕಾಗಿ ಹಡೆದಮ್ಮ ವರವ ನೀಡೆ

'ಕಣ್ಮರೆಯಾದ ಕನ್ನಡ'ದೊಡನೆಯೆ 'ಮಹಾರಾಷ್ಟ್ರದ ಮೂಲ'ವೂ ನನಗೆ ಹೊಳೆದುದು. ಮಹಾರಾಷ್ಟ್ರದ ಮೂಲವನ್ನು ಕುರಿತು ಆಗ ನನಗೆ ಹೊಳೆದುದನ್ನು ವಿಚಾರದ ವಿರ್ಮಶೆಯ ಅರ(ಅರ್ನ)ದಿಂದ ಅರೆದು ಒರೆದು, ನೋಡಿ ನೋಡಿದ ಹಾಗೆ ಅದರ ಹೊಳಪು ಹೆಚ್ಚಾಗುತ್ತಿರುವುದೆಂದು ನನ್ನ ಭಾವನೆ. ಆದರೆ, ಇದು ನನ್ನ ಭ್ರಮೆಯಾಗಿದ್ದರೂ ಇರಬಹುದು. ಆದುದರಿಂದ ವಿದ್ವಾಂಸರ ಎದುರಿಗಿರಿಸಿ ಇದು ಹೊನ್ನೊ ಹಿತ್ತಾಳೆಯೊ ಎಂಬುದನ್ನು ನಿರ್ಣಯಿಸಿಕೊಳ್ಳುವುದು ಅವಶ್ಯಕವೆನಿಸಿತು.

ಅಥಣಿಯ ಗಜಾನನೋತ್ಸವ ಕಾಲದ ಉಪನ್ಯಾಸ ಮತ್ತು ಮಹಾರಾಷ್ಟ್ರದ ವಿದ್ವಾಂಸರೂ ಸಂಶೋಧಕರೂ ಆದ ಶ್ರೀ ಕೃ. ಪಾ. ಕುಲಕರ್ಣಿ ಎಂ.ಎ. ಅವರೊಡನೆ ಆದ ಚರ್ಚೆಗಳಿಂದ ಈ ವಿಷಯವು ಇನ್ನಿಷ್ಟು ಮೈಗೊಂಡು ಬರೆವುದಕ್ಕೆ ಒತ್ತಾಯಪಡಿಸಿತು; ಬರೆದಿರುವೆನು. ಬರೆವ ರೀತಿಯಲ್ಲಿ ಕುಂದುಕೊರತೆಗಳೆನಿಸಬಹುದು ಕೆಲವರಿಗೆ. ಆದರೆ, ಅದು ಪ್ರಧಾನ ವಿಷಯವಲ್ಲ ಇಲ್ಲಿ. ಇದರಲ್ಲಿ ವಿವರಿಸಿದ ವಿಚಾರಕ್ರಮದಲ್ಲಿ ಏನಾದರೂ ದೋಷಗಳಿದ್ದರೆ, ಬಲ್ಲಿದರು ದಯವಿಟ್ಟು, ಅವನ್ನು ಪರಾಮರ್ಶಿಸಿ ತಿದ್ದುಪಡಿಗಳನ್ನು ಸೂಚಿಸಬೇಕಾಗಿ ಬಿನ್ನಹ.

ಮಹಾರಾಷ್ಟ್ರದ ಮೂಲವು ಎಲ್ಲಿರಬಹುದೆಂಬುದನ್ನು ನನಗೆ ಶಕ್ಯವಿದ್ದಷ್ಟು ಆಧಾರಗಳನ್ನು ಕೊಟ್ಟು ವಿವರಿಸಲು ಯತ್ನಿಸಿದ್ದೇನೆ. ಇಂದಿಗೂ ಸಂದಿಗ್ಧವಾಗಿರುವ ಪ್ರಶ್ನೆಯಿದು. ಇದು ಎಷ್ಟೋ ಸಂಶೋಧಕರ ತಲೆ ತಿನ್ನುತ್ತಿದೆ. ಈ ಪ್ರಬಂಧದಿಂದ ಆ ತೊಡಕು ಬಿಟ್ಟರೆ ಬಿಡಲಿ; ಇಲ್ಲವಾದರೆ ಈವರೆಗೆ ಹಲವು ಊಹೆ ವಿಚಾರಗಳ ಸಾಲಿನಲ್ಲಿ ಇದೂ ಒಂದು ಸೇರಿಕೊಂಡಿರಲಿ. ಕನ್ನಡ ತಾಯಿಯ ಮುಖಾಂತರವಾಗಿ ಮಹಾರಾಷ್ಟ್ರಕ್ಕೆ ಸಲ್ಲಿಸಿದ ನನ್ನ ಅಳಿಲುಸೇವೆ ಇದು.

ಒಳ್ಳೆಯ ಗ್ರಂಥಸಂಗ್ರಹಾಲಯದ ಸಹಾಯವಿಲ್ಲದೆ ಈ ಬಗೆಯ ಪ್ರಬಂಧಗಳನ್ನು ಪೂರ್ತಿಗೊಳಿಸುವುದೇ ಅಸಾಧ್ಯ. ಆದರೆ, ಧಾರವಾಡದಲ್ಲಿ ಅದರದೆ ಅಭಾವ. ಆದರೂ ಪ್ರೊ. ಸಾಸನೂರರು, ಇತಿಹಾಸ ಮಂಡಲದ ಕಾರ್ಯದರ್ಶಿಗಳಾದ ಶ್ರೀ ಕಮಲಾಪುರರು, ತರುಣಮಿತ್ರರಾದ ಕಡಲಬಾಳು ಪ್ರಲ್ಹಾದರಾಯರು, ಶ್ರೀ ಕರಂದೀಕರ ರಾಮರಾಯರು ನನಗೆ ಆವಶ್ಯಕ ಗ್ರಂಥಗಳನ್ನು ಒದಗಿಸಿಕೊಂಡಿದ್ದರೆ ಇದು ಮನಸ್ಸಿನೊಳಗಿನ ಮಂಡಿಗೆಯಾಗುತ್ತಿತ್ತು. ಆದುದರಿಂದ, ಇದರಲ್ಲಿ ಸವಿಯಾದುದೇನಾದರೂ ಇದ್ದರೆ ಅದರ ಶ್ರೇಯಸ್ಸು ಈ ಮಿತ್ರರಿಗೆ, ತಪ್ಪು ತಡೆಗಳಿದ್ದರೆ ಅದರ ದೋಷ ನನಗೆ.

ಮಹಾನವಮಿ —ಶಂ. ಬಾ. ಜೋಶಿ

ಭಾವನಾಮ : ೧೮೫೬

ಮುನ್ನುಡಿ

(ಎರಡನೆಯ ಮುದ್ರಣಕ್ಕೆ)

"ಗೋದಾವರಿ ತೀರದ ಕನ್ನಡವು ಕಣ್ಮರೆಯಾಯಿತು ಎಂದರೆ ಏನು?"

೧೯೩೩ರ ಸುಮಾರಿಗೆ 'ಕಣ್ಮರೆಯಾದ ಕನ್ನಡ' ಪುಸ್ತಕವು ಮೊದಲ ಬಾರಿ ಪ್ರಕಟವಾಯಿತು. ನನ್ನ ಅಭಿಪ್ರಾಯವು ಬಲ್ಲಿದರಿಂದ ವಿಮರ್ಶಿಸಿಕೊಳ್ಳಲು ಈ ಪುಸ್ತಿಕೆಯನ್ನು ಪ್ರಕಟಿಸಿದ್ದಾಯಿತು.

ನೃಪತುಂಗ ದೇವಾನುಮತಮಪ್ಪ 'ಕವಿರಾಜಮಾರ್ಗ'ದಲ್ಲಿ ಕನ್ನಡ ದೇಶದ ವ್ಯಾಪ್ತಿಯನ್ನು ಹೇಳಿದ್ದಾಗಿದೆ. "ಕಾವೇರಿಯಿಂದಂ ಆ ಗೋದಾವರಿವರಂ ಇರ್ದ ನಾಡು" ಈ ಉಕ್ತಿಯಂತೆ ಕನ್ನಡನಾಡು ಉತ್ತರದ ಗೋದೆ, 'ಗೋದಾವರಿ' ಆಗುತ್ತದೆ. ದಕ್ಷಿಣಕ್ಕೆ 'ಕಾವೇರಿ'ನದಿ ಉಂಟು. ಆದರೆ, ವಸ್ತುಸ್ಥಿತಿ ಹೀಗಲ್ಲ; ೧. ಗೋದಾವರೀ ತೀರದ ನಾಸಿಕವು ಇಂದು ಮಹಾರಾಷ್ಟ್ರದ ಅಂಗವಾಗಿದೆ. ೨. ಗೋದಾವರೀ ತೀರದ 'ನಾಂದೇಡ' ಜಿಲ್ಲೆಯಲ್ಲಿ ಕನ್ನಡ ಶಾಸನಗಳು ದೊರಕಿವೆ. ಕರ್ನಾಟಕ ವಿಶ್ವವಿದ್ಯಾಲಯದ ಡಾ|| ಶ್ರೀನಿವಾಸ ರಿತ್ತಿ ಅವರು ಪ್ರಕಟಿಸಿದ್ದಾರೆ. ೩. ಗೋದಾವರೀ ತೀರದಲ್ಲಿ 'ಕನ್ನಡ' ಹೆಸರಿನ ಒಂದು ತಾಲ್ಲೂಕು ಉಂಟು; ಇಲ್ಲಿ ಮರಾಠಿ ಇಲ್ಲ, ಇದು ಆದಿಮಪೂರ್ವ ತಾಲ್ಲೂಕು! ಈ ಬಗೆಯಲ್ಲಿ 'ಗೋದಾವರಿವರಂ ಇರ್ದ' ಕನ್ನಡ ಭಾಷೆಯು ಕಣ್ಮರೆಯಾಗಿರುವುದಾಗಿ ನಿಸ್ಸಂದಿಗ್ಧವಾಗಿ ಹೊರಡುತ್ತಿದೆ. 'ಗೋದಾವರೀ ತೀರದ ಕನ್ನಡವು ಕಣ್ಮರೆಯಾಗುತ್ತದೆ.' ಇದರ ಅರ್ಥವೇನು? ಮೊದಲು ಕನ್ನಡವನ್ನು ಆಡುತ್ತಿದ್ದ ಜನವು ಮರಾಠೀ ಮಾತನ್ನು ಸ್ವೀಕರಿಸುತ್ತದೆ. ಈ ಬಗೆಯ ಪಲ್ಲಟಕ್ಕೆ ಪ್ರಮಾಣಗಳು ಉಂಟೆ? ಭಾಷೆಯೊಳಗಿನ ಸಮಾನಾರ್ಥಕ ದ್ವಿರುಕ್ತಿಗಳು ಇವನ್ನು ನಿದರ್ಶನಕ್ಕೆ ತಂದುಕೊಡುತ್ತವೆ. ಉದಾ : ಖೇಳ-ಆಡು; ಕೋಲ-ಕಾಠೀ ಈ ಬಗೆಯ ದ್ವಿರುಕ್ತಿಗಳು ಜ್ಞಾನೇಶ್ವರೀ ಹಾಗೂ ಆಸುಪಾಸಿನ ಮಹಾನುಭಾವರ ಸಾಹಿತ್ಯದಲ್ಲಿ ಹಲವಾರು ದೊರೆಯುತ್ತವೆ.

ಇಂದು ಮಹಾರಾಷ್ಟ್ರದಲ್ಲಿ ಎಣಿಸಲ್ಪಡುವ ಪಂಢರಪುರವೂ ವಿಠಲನೂ ಕನ್ನಡರೇ ಆಗಿದ್ದರು. 'ಕಾನಡಾ ಹೋ ವಿಠ್ಠಲು ಕಾನಡಾ ಹೋ' ಎಂಬ ಅಭಂಗವು ವಾಡಿಕೆಯಲ್ಲಿ ಉಂಟು. ಕರ್ನಾಟಕದ ಪುರಂದರದಾಸರ ವಿಠ್ಠಲನು ಹಿಂದೊಮ್ಮೆ 'ಕಾನಡಾ ಹೋ ವಿಠಲ' ಎನಿಸುತ್ತಿದ್ದುದನ್ನು ಮರಾಠಿಗರೂ ಒಪ್ಪುತ್ತಾರೆ. ಆದರೆ, ಕಾನಡಾ ಕನ್ನಡ ಪದಕ್ಕೆ ಅರ್ಥವಾಗದ ಅಗಮ್ಯ ದೇವರು ಎಂದು ಪ್ರತಿಪಾದಿಸುತ್ತಾರೆ. ಡಾ|| ಎ. ವೆಂಕಟಸುಬ್ಬಯ್ಯ ನವರು ಈ ಪುಸ್ತಕವನ್ನು ಕರ್ನಾಟಕ ಸಾಹಿತ್ಯಪರಿಷತ್ ಪತ್ರಿಕೆಯಲ್ಲಿ ವಿಮರ್ಶಿಸಿದ್ದಾರೆ; "ಲೇಖಕರು ಹೇಳುವ ಆಂತರಿಕ ಪ್ರಮಾಣಗಳನ್ನು ಲೆಕ್ಕಿಸಿದರೆ 'ಕನ್ನಡವು ಗೋದಾವರೀ ತೀರದಿಂದ ಕಣ್ಮರೆ ಆಗಿದೆ' ಎಂಬ ನಿಷ್ಕರ್ಷವು ಸಾಧುವಾಗಿದೆ ಎನ್ನಬೇಕಾಗುತ್ತದೆ."

ಮಹಾನವಮಿ — **-ಶಂ. ಬಾ. ಜೋಶಿ**

೧೯.೧೦.೮೮

ತೊಡಕು

ಇತಿಹಾಸ ಸಂಶೋಧಕರ ಕಣ್ಣಿಗೆಲ್ಲ ಇಂಗುಹಚ್ಚಿ ಇಂದಿನ ವರೆಗೆ ತಮ್ಮ ನೆಲೆಯನ್ನು ನಿಲುಕಗೊಡದ ಕೆಲವು ಐತಿಹಾಸಿಕ ವಿಷಯಗಳಲ್ಲಿ 'ವರ್ಹಾಟ-ಮಹಾರಾಷ್ಟ್ರ'ವೂ ಒಂದಾಗಿದೆ. ಮಹಾರಾಷ್ಟ್ರದ ಮೂಲವು ಆವುದು? ಮೂಲ ಮಹಾರಾಷ್ಟ್ರವೆಲ್ಲಿ? ಎಂಬುದನ್ನು ಅರಿತುಕೊಳ್ಳಲು ದೇಶೀಯ ಹಾಗೂ ವಿದೇಶೀಯ ಸಂಶೋಧಕರು ತುಂಬಾ ಪರಿಶ್ರಮಪಟ್ಟಿದ್ದಾರೆ. ಪಡುತ್ತಲೂ ಇದ್ದಾರೆ. ಆದರೇನು? ಒಬ್ಬರಿಗೂ ಅದರ ಆಳವು ತಿಳಿದಿಲ್ಲ. ಮಿ. ಮೋಲ್ಸವರ್ಥ್, ಕಿಂಕೇಡ್, ವಿಲ್ಸನ್ ಮೊದಲಾದ ಸಾಹೇಬರು ಹೇಳಿದ ವ್ಯುತ್ಪತ್ತಿಯು ಡಾ. ಗೋಪಾಲಕೃಷ್ಣ ಭಂಡಾರಕರರ ಮನಸ್ಸಿಗೆ ಬರಲಿಲ್ಲ. ಡಾ. ಭಂಡಾರಕರರ ಅಭಿಪ್ರಾಯವು ಶ್ರೀ ಬಾ. ಅ. ಭಿಡೆ, ಮನಮೋಹನ ಘೋಷ್ ಮೊದಲಾದವರಿಗೆ ಸರಿದೋರಲಿಲ್ಲ. ಡಾ. ಭಂಡಾರಕರ, ಫ್ಲೀಟ್, ಪಂ. ಭಗವಾನಲಾಲ ಇಂದ್ರಾಜಿ ಪ್ರಭೃತಿಗಳ ಹಿಂದಿನ ಪ್ರಯತ್ನಗಳಂತೂ ಸರಿಯೇ. ಇಂದು ಡಾ. ಕೇತಕರ, ಕುಲಕರ್ಣಿ, ವರ್ದೇ ಮೊದಲಾದ ವಿದ್ವಾಂಸರೂ ಸ್ವತಂತ್ರವಾಗಿ ಅಭ್ಯಾಸನಡೆಸಿ ತಮತಮಗೆ ಸರಿದೋರಿದುದನ್ನು ಜನರೆದುರಿಗೆ ಇಡುತ್ತಲಿದ್ದಾರೆ. ಇಷ್ಟಾದರೂ ಸಂಶೋಧಕರ ಚಿಕಿತ್ಸಕ ಬುದ್ಧಿಗೆ ತೃಪ್ತಿಕರವಾದ ಉಪಪತ್ತಿಯು ಒಬ್ಬರಿಂದಾದರೂ ಮುಂದೆಬಂದಿಲ್ಲವೆಂಬುದು, ಇನ್ನೂ ಆ ವಿಷಯಕ್ಕೆ ವಿದ್ವಾಂಸರಲ್ಲಿ ನಡೆದ ವಾದವಿವಾದ, ಚರ್ಚೆ, ಸಂಶೋಧನಾದಿಗಳಿಂದಲೆ ವ್ಯಕ್ತವಾಗುತ್ತಲಿದೆ.

ಮೊದಮೊದಲು ಕೆಲದಿನ ಮಹಾರಾಷ್ಟ್ರವೆಂದರೆ ಮಹಾರರ+ರಾಷ್ಟ್ರವೆಂದು ಪ್ರತಿಪಾದಿಸಿದರು.[1] ಕೆಲವರು ಮಹಾರ (ಹೊಲೆಯ)ರು ಈ ನಾಡಿನ ಮೊದಲಿಗರು; ಆರ್ಯರು ಬಂದವರು', ಆದುದರಿಂದ ಮಹಾರ (ಹೊಲೆಯ)ರಿಂದಲೆ ಈ ನಾಡಿಗೆಲ್ಲ ಮಹಾರರ ರಾಷ್ಟ್ರ-ಮಹಾರಾಷ್ಟ್ರವೆಂಬುದಾಗಿ ಹೆಸರು ರೂಢವಾಗಿರಬೇಕು! ಈ ನಾಡಿನಲ್ಲಿ ಹೊಲಗೇರಿಯಿಲ್ಲದ ಊರು ಇಲ್ಲ. ಇದು ಮಹಾರರಿಗಿರುವ ಪ್ರಾಶಸ್ತ್ಯದ ದ್ಯೋತಕವಾಗಿದೆ. ಈ ನಾಡಿನ ಹಿರಿಯರು ಇವರೇ. ಇವರದೆ ಈ ನಾಡು; ಎಂದು ಮೋಲ್ಸವರ್ಥ್ ಮೊದಲಾದ ಈ ವರ್ಗದವರ ಅಭಿಪ್ರಾಯ. 'ಮಹಾರರ ನಾಡು ನಿಮ್ಮದು' ಎಂದು ಹೇಳಿದರೆ ಅದಾವ ವರ್ಣಾಭಿಮಾನಿಗೆ ಸರಿಬೀಳ ಬೇಕು? ಅದರಲ್ಲಿಯೂ ಮಹಾರಾಷ್ಟ್ರರಂತಹ ಆತ್ಮಗೌರವಸ್ಥರಿಗೆ! ಅಲ್ಲಿ ಎಷ್ಟೋ ವಿದ್ವಾಂಸರ ಲೆಕ್ಕಣಿಗಳು ಮಿಂಚಿದವು; ಸಾಹೇಬರ ಮೇಲೆ ಟೀಕೆಯ ಮಳೆಗರೆಯಿತು. ಡಾ. ಭಂಡಾರಕರರಂತಹ ಧೀಮಂತರಾದ ಮಹಾರಾಷ್ಟ್ರಾಭಿಮಾನಿಗಳು ಸಂಶೋಧನ ಕಾರ್ಯದೊಳಗಿನ ತಮ್ಮ ತಪೋಬಲದಿಂದ ಹೊಸದೊಂದು ವ್ಯುತ್ಪತ್ತಿಯನ್ನು ಕಂಡು ಹಿಡಿದರು. ಕಿಂಕೇಡ್ ಪ್ರಭೃತಿಗಳ ಬಾಯಿ ಕಟ್ಟಿತು. ಆದರೆ, ಡಾ. ಗೋಪಾಲಕೃಷ್ಣ ಭಂಡಾರಕರರ ತಪಸ್ಸಿನ ಪುಣ್ಯವು ಆ ವ್ಯುತ್ಪತ್ತಿಯ ಬೆಂಬಲಕ್ಕೆ ಇಲ್ಲದಿದ್ದರೆ, ಅಥವಾ ಆ ವ್ಯುತ್ಪತ್ತಿಯನ್ನು ಬೇರೆ ಯಾರಾದರೂ ಸಾಮಾನ್ಯರು ಹೇಳಿದ್ದರೆ ಅದು ಇಷ್ಟು ದಿನಗಳ ವರೆಗೆ ತಲೆಯೆತ್ತಿ ಮೆರೆವ ಸಂಭವವೆ ಇರುತ್ತಿರಲಿಲ್ಲ.

ಅದು ಏನೆ ಇರಲಿ, ಡಾ. ಭಂಡಾರಕರ ಮೊದಲಾದ ಮಹಾರಾಷ್ಟ್ರಾಭಿಮಾನಿಗಳ ಆಗಿನ ಪ್ರಯತ್ನಗಳಿಂದ ಮಹಾರರರಾಷ್ಟ್ರ (ಮಹಾರಾಷ್ಟ್ರ) ವೆಂಬ ಅಭಿಪ್ರಾಯವು ಮಾತ್ರ ಮೂಲೆ ಹಿಡಿಯಿತು.

ಇಂದು ಮತ್ತೆ ಯಾರಾದರೂ ಮೋಲ್ಸವರ್ಥ್ ಸಾಹೇಬರ ಹಳೆಯ ಮಾತನ್ನೇ ಎತ್ತಿ 'ಮಹಾರಾಷ್ಟ್ರವು ಮಹಾರರ ರಾಷ್ಟ್ರ'ವೆಂದು ಹೇಳಿದ್ದಾದರೆ ಮಹಾರಾಷ್ಟ್ರದ ದ್ವೇಷಿಗಳೆಂಬ ಆರೋಪವು ಅವರಿಗೆ ಬಾರದೆ ಇರದು. ಆದರೆ, ಮೇಲ್ಕಾಣಿಸಿದ ವ್ಯುತ್ಪತ್ತಿಯು ನಿಜವಾಗಿ ನಿಜವಿದ್ದುದೇ ಆದರೆ, ಮರಾಠರು ತಮಗೆ 'ದ್ವೇಷಿ', 'ದ್ರೋಹಿ' ಎಂದೆಂಬರೆಂದು ಹೆದರಿ ಅದನ್ನು ಬಿಟ್ಟುಬಿಡುವ ಕಾರಣವಿಲ್ಲ. ಇತಿಹಾಸವು ಯಾರ ಮನೆಯ ತೊತ್ತಲ್ಲ. ನಿಜವಿದ್ದುದನ್ನು ನಿಜವೆಂದು ಹೇಳಲು ಅಂಜಿ ಅಳುಕಿ ನಡೆಯುವವನು ಇತಿಹಾಸಭಕ್ತ-ಸತ್ಯದೇವನ ಉಪಾಸಕನೆಂದೆನಿಸಲಾರ, ಆದರೆ, ಮೋಲ್ಸವರ್ಥ್ ಮತ್ತು ಮಿ. ಮನಮೋಹನ ಘೋಷ್ ಇವರು ಹೇಳುವ ಮಹಾರರ ರಾಷ್ಟ್ರವೆಂಬ ವ್ಯುತ್ಪತ್ತಿಯಲ್ಲಿ ಸತ್ಯದ ಅಭಾಸವಿದೆಯೆ ಹೊರತು ಸತ್ಯದ ಆಧಾರವಿಲ್ಲ.[೨] ಆರ್ಯರು 'ಈ ನಾಡಿಗೆ (ವಿಂಧ್ಯದ ದಕ್ಷಿಣಕ್ಕೆ) ಬರುವ ಮೊದಲು ಇಲ್ಲಿ ನೆಲೆಸಿದ್ದವರಾರು? ಆರ್ಯೇತರರು; ಅಂದರೆ ಅನಾರ್ಯರು. ಆದುದರಿಂದ, ಇದು ಅನಾರ್ಯರ ನಾಡು. ಮಹಾರ (ಹೊಲೆಯ)ರು ಅನಾರ್ಯರು. ಆದಕಾರಣ ಇದೆಲ್ಲ ಮಹಾರರ ರಾಷ್ಟ್ರ ಎಂಬ ವಿಚಾರಕ್ರಮದಲ್ಲಿ ಆರಂಭವು ಸರಿಯಾಗಿ ಆಗಿದ್ದರೂ ಕೊನೆಗೆ ಮಾತ್ರ ತೂಕತಪ್ಪಿದೆ. ಇದರಲ್ಲಿ ಎರಡು ದೋಷಗಳಿವೆ. ಅನಾರ್ಯರೆಂದರೆ ಬರಿ ಹೊಲೆಯರಷ್ಟೇ ಅಲ್ಲ; ಕನ್ನಡರೂ, ತಮಿಳರೂ, ಇನ್ನು ಎಷ್ಟೊ ತಂಡದವರೂ ಅನಾರ್ಯರಾಗಿದ್ದಾರೆ. ಇವರೊಳಗೆ, ಅಲ್ಲಿ ಕೇವಲ ಮಹಾರರೆ ನೆಲೆಯಾಗಿದ್ದರೆಂಬುದಕ್ಕೆ ಆಧಾರವೇನು? ಇನ್ನೂ ಒಂದು: ಅನಾರ್ಯರಾದ ಮಹಾರರೆ ಇಲ್ಲಿ ಪ್ರಬಲರಾಗಿದ್ದರೆಂದು ಗ್ರಹಿಸಿದರೂ ಅವರ ಮೂಲಭಾಷೆಯು ಸಂಸ್ಕೃತ ಅಥವಾ ಪ್ರಾಕೃತವಾಗಿರಲಾರದು. ಆವುದೊಂದು ಜನಾಂಗವು ತನ್ನ ನಾಡಿಗೆ ಇಡುವ ಹೆಸರು, ಅದರ ಮೂಲ ಭಾಷೆಯೊಳಗಿನದೆ ಇರುವ ಸಂಭವವಿಲ್ಲವೆ? ಪರಭಾಷೆಯಲ್ಲಿ ಇದ್ದರೆ, ಅದು ಆ ನಾಡಿಗರು ತಾವೇ ಇಟ್ಟುಕೊಂಡ ಹೆಸರು ಆಗಿರಲಾರದು. 'ಮಹಾರಾಷ್ಟ್ರ'ವೆಂಬ ಹೆಸರು ಸಂಸ್ಕೃತ. ಇದು ಅನಾರ್ಯರಾದ ಮಹಾರ (ಹೊಲೆಯ)ರ ಭಾಷೆಯೊಳಗಿನ ಹೆಸರಲ್ಲ. 'ಆರ್ಯರು ಈ ನಾಡಿಗೆ ಬಂದಾಗ ಅಲ್ಲಿ ಮಹಾರ (ಹೊಲೆಯ) ರು ವಿಶೇಷವಾಗಿದ್ದುದನ್ನು ನೋಡಿ ಅವರು ಇದಕ್ಕೆ 'ಮಹಾರರ ರಾಷ್ಟ್ರ' ಮಹಾರಾಷ್ಟ್ರವೆಂಬ ಹೆಸರನ್ನು ಏಕೆ ಇಟ್ಟಿರಲಿಕ್ಕಿಲ್ಲ?' ಎಂದು ಕೇಳಬಹುದು. ಆದರೆ, ಯಾರ ಹೆಸರನ್ನು ಕೇಳಿದ ಮಾತ್ರಕ್ಕೆ ತಮ್ಮ ಪಾವಿತ್ರ್ಯವು ಹಾಳಾಗುವುದೆಂದು ದೃಢವಾದ ನಂಬುಗೆಯೋ ಆ ಮಹಾರ (ಹೊಲೆಯ)ರ ಹೆಸರನ್ನೆ ಇಡಿ ನಾಡಿಗೆಲ್ಲ ಇಡಲಿಕ್ಕೆ, ವರ್ಣಾಭಿಮಾನಿಗಳಾದ ಆರ್ಯರು ಆ ಕಾಲಕ್ಕೆ, ಮನಸ್ಸುಮಾಡಿದರೆಂದು ಭಾವಿಸುವುದು ಹೇಗೆ ತಾನೆ ಸಾಧ್ಯ? ಆದುದರಿಂದ ಸ್ವಾಭಿಮಾನಿಗಳಾದ ಮಹಾರಾಷ್ಟ್ರೀಯರಿಗಷ್ಟೆ ಅಲ್ಲ, ಸತ್ಯ ಸಂಶೋಧಕರಾದ ಇತಿಹಾಸಜ್ಞರಿಗೂ ಅದು ಸಮ್ಮತವಾಗುವಹಾಗಿದ್ದಿಲ್ಲ.

ಡಾ. ಭಂಡಾರಕರು ಮಹಾರಾಷ್ಟ್ರದ ಮೂಲವನ್ನು ಊಹಿಸಿದುದು ಎರಡು ಬಗೆಯ ಶಬ್ದಸಮುಚ್ಚಯಗಳ ಸಹಾಯದಿಂದ. ಇವುಗಳಲ್ಲಿ ಒಂದು ಭಾಜ, ಬೆಡ್ಸಾ ಮತ್ತು ಕಾರ್ಲಿಯ ಶಾಸನಗಳಲ್ಲಿ ದೊರೆವ 'ಮಹಾರಠಿ', 'ಮಹಾರಠಿನಿ' ಎಂಬುದು. ಈ ಶಬ್ದಗಳು ಈಗಿನ ಮರಾಠಾಜಾತಿಯ ಪುರುಷ ಮತ್ತು ಸ್ತ್ರೀವಾಚಕ ಪದಗಳೆಂದು ಡಾ. ಭಂಡಾರಕರ ಅಭಿಪ್ರಾಯ.[೩] ಆದರೆ ಪಂ. ಭಗವಾನಲಾಲ ಇಂದ್ರಾಜಿಯವರು ಈ ವಿಷಯದಲ್ಲಿ ಭಿನ್ನಾಭಿಪ್ರಾಯವುಳ್ಳವರಾಗಿದ್ದಾರೆ.[೪] ಮೇಲ್ಕಾಣಿಸಿದ ಶಾಸನಗಳಲ್ಲಿ ದೊರೆವ 'ಮಹಾರಠಿ' ಶಬ್ದವು ಸಂಸ್ಕೃತದ 'ಮಹಾರಥಿ' ಎಂಬುದರ ಪ್ರಾಕೃತ ರೂಪವೆಂದು ಅವರ ಮತ. 'ಮಹಾರಥಿ' ಎಂದರೆ ಬಂಟ, ಬಲ್ಬಂಟನೆಂಬ ಅರ್ಥ. ಅದು ಒಂದು ಜಾತಿವಾಚಕವಾಗಿರಲಾರದು ಎಂದು ಪಂ. ಭಗವಾನಲಾಲರು ಸೂಚಿಸಿದ್ದಾರೆ. ಶ್ರೀಮಾನ್ ವರ್ದೇ ಎಂಬವರು ಪಂ. ಭಗವಾನಲಾಲರ ಈ ಅಭಿಪ್ರಾಯದ ಮೇರೆಗೆ ಡಾ. ಭಂಡಾರಕರರ ಊಹೆಗೆ ಏನೂ ಬಾಧೆ ಬರುವುದಿಲ್ಲವೆಂದು ಪ್ರತಿಪಾದಿಸಿದ್ದಾರೆ.[೫] ಚೀನದ ಪ್ರವಾಸಿಯಾದ ಹ್ಯೂಯನ್‌ತ್ಸಾಂಗ್

"ಮಹಾರಾಷ್ಟ್ರಿಕರು ಕಡುಗಲಿ" ಗಳೆಂದು ವರ್ಣಿಸಿದುದು ಈ ಉಪಪತ್ತಿಗೆ ತುಂಬ ಸರಿಹೋಗುತ್ತದೆಂದು ಇವರು ಸ್ಪಷ್ಟೀಕರಿಸಿದ್ದಾರೆ.

ಆದರೆ, ಡಾ. ಭಂಡಾರಕರರು ಹೇಳುವುದೇನೆಂದರೆ: ಪಂ. ಭಗವಾನಲಾಲರು ಮರಾಠಿ ಎಂಬ ಪದವನ್ನು ಮಹಾರಥಿ ಶಬ್ದದ ಪರ್ಯಾಯವೆಂದು ಹೇಳುವಲ್ಲಿ ತೀರ ತಪ್ಪು (clearly wrong) ಮಾಡಿದ್ದಾರೆ.[೬] 'ಮಹಾರಥಿ' ಎಂಬುದು ಈಗಿನ ನಮ್ಮ ಮರಾಠಾ ಎಂಬ ಶಬ್ದದಂತೆ ಜಾತಿ-ಜನಾಂಗ ವಾಚಕವೆಂಬುದು ನಿಃಸ್ಸಂದಿಗ್ಧ. ಆದರೆ, ಡಾ. ಭಂಡಾರಕರರು ಹೇಳುವ ರಠಿ, ಮಹಾರಠಿ ಜನಾಂಗವು ಕೇವಲ ಈಗಿನ ಮಹಾರಾಷ್ಟ್ರದಲ್ಲಿ ಮಾತ್ರವಲ್ಲ ಅದರ ಹೊರಗೂ ಹಲವೆಡೆಗಳಲ್ಲಿ ಇದ್ದುದು ಶಾಸನಾದಿಗಳಿಂದ ವ್ಯಕ್ತವಾಗುತ್ತದೆ, ಎಂದು ಬನಾರಸದ ಹಿಂದೂ ಯುನಿವ್ಹರ್ಸಿಟಿಯ ಡಾ. ಅಳತೇಕರರು ರಾಷ್ಟ್ರಕೂಟರ ಇತಿಹಾಸದಲ್ಲಿ ಬೇರೆಬೇರೆ ಆಧಾರಗಳಿಂದ ತೋರಿಸಿಕೊಟ್ಟಿದ್ದಾರೆ.[೭] ಆದುದರಿಂದ ರಠಿ, ಮಹಾರಠಿಗಳಿಂದ ಮಹಾರಠ ಮಹಾರಾಷ್ಟ್ರವಾಯಿತೆಂದು ತರ್ಕಿಸುವುದು ಅಯುಕ್ತವೆಂದು ಬೇರೆ ಹೇಳಬೇಕಾಗಿಲ್ಲ. ಡಾ. ಭಂಡಾರಕರರ ಊಹೆಗೆ ಅಡಿಗಲ್ಲಿನಂತಿರುವ ಇನ್ನೊಂದು ಶಬ್ದಸಮುಚ್ಚಯವು ಅಶೋಕನ ಶಾಸನಗಳಲ್ಲಿ ದೊರೆಯುತ್ತದೆ. "ಈ ಶಾಸನಗಳಲ್ಲಿ ಸಿಕ್ಕುವ ರಾಷ್ಟ್ರಿಕ ಇಲ್ಲವೆ ರಾಷ್ಟ್ರಕವೆಂಬ ಶಬ್ದವು ಸಂಸ್ಕೃತ ರಾಷ್ಟ್ರಿಕದ ಪ್ರಾಕೃತರೂಪ. ರಾಷ್ಟ್ರಿಕರು ಮಹಾರಾಷ್ಟ್ರೀಯರು; (ನರ್ಮದೆಯ) ದಕ್ಷಿಣಕ್ಕೆ ರಟ್ಟರೆಂಬ ಕುಲದವರು ಬಹಳ ಪ್ರಾಚೀನ ಕಾಲದಿಂದಲೂ ಅರಸುಗೈಯುತ್ತಿದ್ದುದು ಕಂಡುಬರುತ್ತದೆ. ಇವರಲ್ಲಿ ಒಂದು ಪಂಗಡದವರು ರಾಷ್ಟ್ರಕೂಟರೆಂಬ ನಾಮಾಭಿದಾನದಿಂದ ಚಳುಕ್ಯರಿಗಿಂತಲೂ ಮೊದಲು ಈ ನಾಡಿಗೆ ಒಡೆಯರಾಗಿದ್ದರು.[೮]

ಅಶೋಕನ ಶಾಸನಗಳಲ್ಲಿ ಉಲ್ಲೇಖಿತರಾದ ರಾಷ್ಟ್ರಿಕರೂ, ಕಾರ್ಲಿ, ಬೆಡ್ಸಾ, ಭಾಜ ಶಾಸನಗಳಲ್ಲಿ ಹೆಸರುಗೊಂಡ ರಠಿಕರೂ ಬೇರೆ ಬೇರೆ ಅಲ್ಲ. ಇದೆಲ್ಲವೂ ರಟ್ಟಕುಲ; ರಠಿಕರು. ರಟ್ಟರು, ರಾಷ್ಟ್ರಿಕರು, ರಾಷ್ಟ್ರಕೂಟರು ಎಲ್ಲ ಒಂದೇ ಬಣದವರು. 'ಭೋಜರು ಮಹಾಭೋಜರಾದಂತೆ ರಾಷ್ಟ್ರಿಕರು ಮಹಾರಾಷ್ಟ್ರಿಕರಾಗಿರಬೇಕೆಂದು ಡಾ. ಭಂಡಾರಕರರು ಮತ್ತೆ ಮತ್ತೆ ಹೇಳಿದ್ದಾರೆ.[೯]

> Raths who gave their name to the country of Maharashtra and
> we found in it even in the times of Ashoka the Mourya.[೧೦]

ಡಾ. ಭಂಡಾರಕರರ ಈ ಸಿದ್ಧಾಂತಕ್ಕೆ ಪ್ರತಿಯಾಗಿ ಹೇಳುವವರು ಬಹಳ ಕಡಮೆ. ಮಹಾರಾಷ್ಟ್ರದಲ್ಲಿ ಶ್ರೀಯುತರುಗಳಾದ ವೈದ್ಯ ಸಿ. ವಿ.[೧೧] ಪಾಂಗಾರಕರ[೧೨] ರಾ. ಭಿ. ಜೋಶಿ[೧೩] ಭಾವೆ ವಿ. ಲ. [೧೪] ಮೊದಲಾದ ವಿದ್ವಾಂಸರೂ ಕೂಡ ಡಾ. ಭಂಡಾರಕರರೊಡನೆಯೆ ದನಿಗೂಡಿಸಿದ್ದಾರೆ. ಇವರೆಲ್ಲರೂ ಒತ್ತೊತ್ತಿ ಹೇಳುತ್ತಿರುವ ಈ ಧ್ವನಿಯಲ್ಲಿ ಒಂದು ಬಗೆಯ ಗಡಿಬಿಡಿಯು ಕಾಣಬರುತ್ತಿದೆಯೇ ಹೊರತು ಆತ್ಮವಿಶ್ವಾಸ ವಿದ್ದಂತೆ ತೋರುವುದಿಲ್ಲ. ಏಕೆಂದರೆ : 'ರಟ್ಟರು ಕ್ಷತ್ರಿಯರು, ಮರಾಠರ ಮೂಲ ಪುರುಷರೆಂ'ದು ಸಾಧಿಸುವ ಈ ಸಂಶೋಧಕರಲ್ಲಿ ಹಲವರು ಭೋಸಲೆ, ಜಾಧವ ಮೊದಲಾದ ಮರಾಠರನ್ನು ಉಚ್ಚಕುಲೀನರೆಂದು ಸಿದ್ಧಪಡಿಸುವುದಕ್ಕೆ ರಜಪೂತರಿಗೆ ಶರಣುಹೋಗುವ ಇವಶ್ಯಕತೆಯೆನಿಸುತ್ತದೆ. ರಾಷ್ಟ್ರಿಕರು ಕುರುಪಾಂಚಾಲ ದತ್ತಣಿಂದ ಬಂದವರೆಂದು ಕೆಲವರ ಅಭಿಪ್ರಾಯವಿದ್ದರೆ, ಮಹಾರಾಷ್ಟ್ರಿಕರು ಮಗಧದಿಂದ ಬಂದರೆಂದು ಇನ್ನೂ ಕೆಲವರು[೧೫] 'ರಾಷ್ಟ್ರಿಕರ ದೊಡ್ಡದೊಂದು ಪಂಗಡವಿದ್ದು ಅದರಲ್ಲಿ ಮರಹಟ್ಟರು ಪ್ರಬಲರಾಗಿರಬೇಕು' ಎಂದು ಡಾ. ಕೃಷ್ಣಸ್ವಾಮಿ ಅಯ್ಯಂಗಾರ್ಯರ ಊಹೆಯಾಗಿದೆ.[೧೬]

ಶ್ರೀ ಬಾ. ಅ. ಭಿಡೆಯವರು 'ಮರಾಠಿಭಾಷೇಚಾ ವ ವಾಙ್ಮಯಾಚಾ ಇತಿಹಾಸ'ವೆಂಬ ತಮ್ಮ ಗ್ರಂಥದಲ್ಲಿ ಮಹಾರಾಷ್ಟ್ರ ಶಬ್ದವು ಹೇಗೆ ಅಸ್ತಿತ್ವದಲ್ಲಿ ಬಂದಿರಬೇಕೆಂಬ ಬಗ್ಗೆ ಈವರೆಗೆ ಮುಂದೆ ಬಂದ ಏಳೆಂಟು ವಿಚಾರಗಳನ್ನು ಒತ್ತಟ್ಟಿಗೆ ಕೊಟ್ಟಿರುವರು. ಅದರಲ್ಲಿ 'ನೆಲ್ಸನ್ಸ್ ಎನ್‌ಸೈಕ್ಲೋಪಿಡಿಯಾದೊಳಗಿನ' ಒಂದು ಅವತರಣಿಕೆಯೂ ಇದೆ. "Maratha a word meaning robber or rebel" ಎಂದು ಮುಂತಾಗಿ ಮೊಗಲಸೈನಿಕರು 'ಮರಾಠ'

ಶಬ್ದದ ವಾಖ್ಯೆಯನ್ನು ಹೇಳುತ್ತಿದ್ದುದರ ಉಲ್ಲೇಖವಿದೆ. ಸರಿ, ಮೊಗಲರಿಗೆ ಮರಾಠನೆಂದ ಕೂಡಲೆ ಇದೇ ಬಗೆಯ ಚಿತ್ರವು ಕಣ್ಣೆದುರು ನಿಲ್ಲುತ್ತಿರಬೇಕೆಂದೆ ಅವರು 'ಮರಾಠ' ಶಬ್ದಕ್ಕೆ ಈ ಅರ್ಥವನ್ನು ಕಲ್ಪಿಸಿರಬೇಕಲ್ಲವೆ? 'ತೇಲಂಗಿ ಬ್ರಾಹ್ಮಣ'ನೆಂಬುದಕ್ಕೆ ಮರಾಠಿ ಭಾಷೆಯಲ್ಲಿ ಏನು ಅರ್ಥವಿದೆ ಗೊತ್ತೆ? ದೈನ್ಯದಿಂದ ಕಾಡಿ ಬೇಡುವ ಭಿಕ್ಷುಕ, ಬ್ರಾಹ್ಮಣ! ಹೀಗೆ ಒಂದು ಬಗೆಯವರು ಮತ್ತೊಂದು ಬಣದವರಿಗೆ - ಆ ಬಣದ ಹೆಸರಿಗೆ ತಿರಸ್ಕಾರಯುಕ್ತವಾದ ಅರ್ಥವನ್ನು ಹಚ್ಚಿರುವುದು ಜಗತ್ತಿನ ಎಲ್ಲ ನಾಡುಗಳಲ್ಲಿಯೂ ಅನುಭವಕ್ಕೆ ಬಂದಿರುವ ರೀತಿಯಾಗಿದೆ. ಮರಾಠಿಯಲ್ಲಿ 'ರಾಠ'ನೆಂದರೆ ಹುಂಬ, ಗಾಂಪ, ಸಂಸ್ಕೃತಿ-ಸಂಸ್ಕಾರವಿಹೀನ (Rough, uncultured) ಮನುಷ್ಯ. 'ಕರ್ನಾಟಕಾಂತೀಲ ರಾಠ ವ ಧಿಪ್ಪಾಡ ಶೇತಕರೀ'[೧೭] ಎಂದು ಶ್ರೀ ರಾಜವಾಡೆಯವರು ಬರೆದಿರುವಲ್ಲಿ 'ರಾಠ' ಶಬ್ದಕ್ಕೆ ಇದಕ್ಕಿಂತ ಬೇರೆ ಅದಾವ ಅರ್ಥವೂ ಇಲ್ಲ. ಆದುದರಿಂದ ರಠ-ರಾಠನು, ಮಹಾರಠ-ಮರಾಠನಾದನೆಂದು ಹೇಳುವುದೇ ನಿಜವಾಗಿದ್ದರೆ, ಅವನು ಅದೆಷ್ಟು ಅಸಂಸ್ಕೃತನಾಗಿರಬೇಕೆಂಬುದನ್ನು ಹೇಳಲಳವಲ್ಲ!

ಮೊಗಲರು ಮರಾಠರಿಗೆ ನಿಂದಾವ್ಯಂಜಕ ನುಡಿಗಳಿಂದ ಕರೆದಿರಬಹುದು. ಆದರೆ, ಯಾವುದಾದರೊಂದು ಜನಾಂಗದವರು ತಮಗೆ ತಾವೆ ಹೀಗೆ ಅಸಂಸ್ಕೃತರು, ಗಾಂಪರು ಎಂದು ಹಳಿದುಕೊಳ್ಳುವ ತಿರಸ್ಕಾರಾರ್ಥಕ ಹೆಸರುಗಳನ್ನು ಇಟ್ಟುಕೊಳ್ಳುವ ಸಂಭವವಿದೆಯೆ? ಎಂದಿಗೂ ಇಲ್ಲ. ಆದುದರಿಂದ ರಠ-ರಾಠರು ಮರಾಠರಿಂದ ತೀರ ಬೇರೆ ಬಣದವರಾಗಿರಬೇಕೆಂದು ನಿಶ್ಚಿತವಾಗಿ ಹೇಳಬಹುದು. ಆದಕಾರಣ ರಾಠ, ರಾಷ್ಟ್ರಿಕ, ರಾಷ್ಟ್ರಕೂಟವೆಂಬ ಶಬ್ದಗಳನ್ನು ಅವುಗಳ ಉಚ್ಚಾರ ಸಾದೃಶ್ಯದ ಮೂಲಕ ಅವನ್ನು ಎಳೆದೊಯ್ದು ಮರಾಠ ಶಬ್ದಕ್ಕೆ ಸಂಬಂಧ ಜೋಡಿಸುವುದು ಸಮಂಜಸವಾಗಲಾರದು. ರಠ-ರಾಠವು ಮರಾಠದ ಮೂಲವಲ್ಲ. 'ಮರಾಠ'ದ ಮೂಲಶಬ್ದವು ಬೇರೊಂದಿದೆ. ಹಿಂದುಸ್ತಾನ, ದಕ್ಷಿಣ ಆಫ್ರಿಕೆಗಳಲ್ಲಿ 'Native' ಶಬ್ದಕ್ಕೆ ಹೇಗೆ ಹೀನಾರ್ಥವು ಅಂಟಿಕೊಂಡಿದೆ ಯೆಂಬುದನ್ನು ವೃತ್ತಪತ್ರಿಕೆಗಳನ್ನೋದುವವರೆಲ್ಲರೂ ಬಲ್ಲರು. ಸಂಸ್ಕೃತಿ ಸಂಸ್ಕಾರಹೀನನು ನೇಟಿವ್ (Native) ಯುರೋಪೀಯರು ಸಂಸ್ಕೃತಿ ಸುಧಾರಣೆಗಳ ಆದರ್ಶ. ಈ ಬಗೆಯ ಅಪಾರ್ಥವಿದ್ದುದರಿಂದಲೆ ಧಾರವಾಡ, ಪುಣೆ ಮೊದಲಾದ ಕಡೆಯ 'Native' General Library' ಎಂದು ಮೊಟ್ಟಮೊದಲಿನಿಂದ ನಡೆಯುತ್ತ ಬಂದ ಹೆಸರಿನ ವಾಚನ ಮಂದಿರಗಳಿಗೆಲ್ಲ ಇತ್ತೀಚೆಗೆ ನವೀನ ನಾಮಕರಣವಿಧಿಯನ್ನು ನೆರವೇರಿಸಬೇಕಾಯಿತು ಒಕ್ಕಲಾಗಲು ಬಂದ, ಏರಿಕೆಯಲ್ಲಿರುವ ಹೊರಗಣರು ಅಲ್ಲಿ ನೆಲೆಸಿದ ಮೊದಲಿಗರನ್ನು ಹೀಯಾಳಿಸಿ ಕೀಳುಬಗೆ ರೀತಿಯು ಇಂದು ನಿನ್ನೆಯದಲ್ಲ; ಬಹು ಪುರಾತನ ಕಾಲದಿಂದಲೂ ನಡೆಯುತ್ತ ಬಂದ ಲೋಕರೂಢಿ. ರಾಠ-ರಟ್ಟ, ರಠಿಕ, ರಾಷ್ಟ್ರಿಕನಿಗೆ ಗಾಂಪ, ಅಸಂಸ್ಕೃತನೆಂಬುವ ಜನಾಂಗವು ರಠಿಕ-ರಟ್ಟರಿಂದ ಬೇರೆಯಾದುದಿರಬೇಕಲ್ಲವೆ? ರಾಠ (ರಟ್ಟ) ಶಬ್ದಕ್ಕೆ ಅಪಾರ್ಥವಿರುವ ಭಾಷೆಯು-ಮರಾಠಿ ಭಾಷೆಯು ರಾಠ. ರಾಷ್ಟ್ರಿಕನ ಭಾಷೆಯಾಗಿರಲಾರದಷ್ಟೆ? ಆದುದರಿಂದ, ರಠಿಕ-ರಾಷ್ಟ್ರಿಕನು ಆರ್ಯನೆಂದು ಹೇಳಿಕೊಳ್ಳುವ ಮರಾಠನಲ್ಲವೆಂದು ಹೇಳದೆ ಗತಿಯಿಲ್ಲ. ಯುರೋಪಿಯನ್ನರು ಇಲ್ಲಿಯ ಜನಕ್ಕೆ 'ನೇಟಿವ್' ಎಂದಂತೆ ಆರ್ಯರು ತಮ್ಮ ಭಾಷೆಯಲ್ಲಿ ಈ ನಾಡಿನ ನಾಡವರಿಗೆ ರಾಷ್ಟ್ರಿಕ, ರಾಷ್ಟ್ರಿಕ, ರಠಿಕ, ರಾಠ, ರಟ್ಟನೆಂದು ಹೆಸರನ್ನು ಇಟ್ಟಿರುವುದು ಶಕ್ಯವಿದೆ. 'ನಾಡವರು' ಎಂಬ ಹೆಸರಿನ ಜನಾಂಗವೂ ಉಂಟು. ಇದು ಅತಿಪ್ರಾಚೀನ ಜನಾಂಗವಿದ್ದು ಇಂದಿಗೂ ಕನ್ನಡ ಜಿಲ್ಲೆಯಲ್ಲಿ ಬಹಳ ಪ್ರಬಲವಾದುದಾಗಿದೆ. ಇವರು ಒಂದು ಕಾಲಕ್ಕೆ ಶೂರರೂ ವೀರರೂ ಆಗಿದ್ದರೆಂಬುದಕ್ಕೆ ಅವರಿಗಿರುವ 'ಬಂಟ'ರೆಂಬ ಪರ್ಯಾಯನಾಮವೇ ಸಾಕ್ಷಿ. ರಾಷ್ಟ್ರಿಕರು-ರಾಷ್ಟ್ರಕೂಟರು 'Indigenous tribe' ಎಂದರೆ ಮೂಲ ಈ ನಾಡಿನವರು ಎಂದು ವಿನ್ಸೆಂಟ್ ಸ್ಮಿಥ್‌ನು ಪ್ರತಿಪಾದಿಸುತ್ತಾನೆ.[೧೮] ಈ ಅಭಿಪ್ರಾಯವೂ ರಟ್ಟರು ಈ ನಾಡವರು ಎಂಬುದನ್ನೆ ಪುಷ್ಟೀಕರಿಸುವುದಿಲ್ಲವೆ? ಕವಿರಾಜಮಾರ್ಗದಲ್ಲಿ 'ನಾಡವರ' ವರ್ಣನೆಯು ಎರಡು ಕಡೆಗಳಲ್ಲಿ ಬಂದಿದೆ. ಅದರಲ್ಲಿ ಮೊದಲನೆಯದು (೧. ೩೮) ಕನ್ನಡ ಜನಾಂಗವನ್ನೆಲ್ಲ ಕುರಿತು 'ನಾಡವರು' ಎಂಬ ಪದವನ್ನು ಉಪಯೋಗಿಸಿದಂತೆ ಭಾಸವಾಗುವ ಹಾಗಿದೆ. ಆದರೆ, ಎರಡನೆಯ ಸಾರೆ ಬಂದ ನಾಡವರ ವರ್ಣನೆಯು ಮಾತ್ರ ಆ ಜನಾಂಗದ ಗುಣಪ್ರಶಂಸೆಯಿದ್ದಂತೆಯೆ ಇದೆ.

"ಸುಭಟರ್ಕಳ್, ಕವಿಗಳ್, ಸುಪ್ರಭುಗಳ್, ಚೆಲ್ವರ್ಕಳ್, ಅಭಿಜನರ್ಕಳ್, ಗುಣಿಗಳ್,
ಅಭಿಮಾನಿಗಳ್, ಅತ್ಯುಗ್ರರ್, ಗಂಭೀರಚಿತ್ತರ್, ವಿವೇಕಿಗಳ್ ನಾಡವರ್ಗಳ್"[೧೯]

ಎಂದು ಹೇಳಿರುವುದರ ನಿಜತ್ವವನ್ನು ಕನ್ನಡಜಿಲ್ಲೆಯ ಬಂಟರ-ನಾಡವರ ಅರಸುಬಾಳು ನೋಡಿ ಈಗಲೂ ಅರಿತುಕೊಳ್ಳಬಹುದು. ರಾಷ್ಟ್ರಕೂಟ ರಾಜನಾದ ನೃಪತುಂಗನ ಆಸ್ಥಾನಕವಿಯಿಂದ ಬರೆಯಲ್ಪಟ್ಟ ಈ ಗ್ರಂಥದಲ್ಲಿ ರಾಷ್ಟ್ರಿಕರು ನಾಡವರು ವರ್ಣನೆಯು ಇಲ್ಲದಿದ್ದರೆ ಹೇಗೆ? ಅಲ್ಲಿರುವ 'ನಾಡವರ' ವರ್ಣನೆಯಲ್ಲಿ ಕವಿಯ ಪೋಷಕನ ಕುಲಪ್ರಶಂಸೆಯೇ ಧ್ವನಿತವಾಗುತ್ತಿಲ್ಲವೆ? ರಾಷ್ಟ್ರಿಕರು ಅತಿ ಪ್ರಾಚೀನ ಕಾಲದಿಂದಲೂ ಈ ನಾಡವರು. ಈ ನಾಡಿನಲ್ಲಿ ಪ್ರಬಲರಾಗಿದ್ದರೆಂಬುದು ಡಾ. ಭಂಡಾರಕರರಿಗೂ ಪರ್ಯಾಯದಿಂದ ಮಾನ್ಯವಿದೆ![೨೦]

'ರಾಷ್ಟ್ರೀಕರು ಕುರುಪಾಂಚಾಲದಿಂದಲೂ ಮಗಧದತ್ತಣಿಂದಲೂ ದಕ್ಷಿಣಕ್ಕೆ ಸರಿದು ಬಂದುದನ್ನು' ಇತಿಹಾಸಜ್ಞರು ಹೇಳುತ್ತಾರಷ್ಟೆ. ಒಂದು ಕಾಲಕ್ಕೆ ಕುರು ಪಾಂಚಾಲ ಮಗಧಗಳಲ್ಲಿ ಇದ್ದವರು ಇವರು. ಅಲ್ಲಿ ರಾಷ್ಟ್ರಿಕರು! ದಕ್ಷಿಣಕ್ಕೆ ಸರಿದ ಬಳಿಕ ದಕ್ಷಿಣಾಪಥದ ಭಾಗಕ್ಕೆ ಪ್ರಾಚೀನ ಕಾಲದಲ್ಲಿ 'ರಟ್ಟಪಾಡಿ' ಎಂಬ ಹೆಸರೇ ರೂಢವಾಗಿದ್ದಿತು. ದಕ್ಷಿಣದಲ್ಲಿ ಸಹ ಮುಂದೆ ರಟ್ಟಪಾಡಿ ಎಂಬ ಹೆಸರು ಎತ್ತಲೊ ಮಾಯವಾಯಿತು! ಉತ್ತರದಿಂದ ದಕ್ಷಿಣಕ್ಕೆ ಸರಿದುದಕ್ಕೂ, ದಕ್ಷಿಣದಲ್ಲಿ ನಾಡವರೂ, ರಟ್ಟ-ರಡ್ಡಿಗಳೂ ಮೂಲೆಗುಂಪಾಗಲಿಕ್ಕೂ ಕಾರಣವೇನಿರಬಹುದು? ಆರ್ಯರ ಒತ್ತುವಿಕೆಯು ಹೆಚ್ಚು ಹೆಚ್ಚಾದಂತೆ ಅವರು ಹಿಂದೆ ಹಿಂದೆ ಸರಿಯುತ್ತ ನಡೆದುದೆ ಇದಕ್ಕೆ ಕಾರಣವಿರಲಿಕ್ಕಿಲ್ಲವೆ? ಇಂತಹ ತಿಕ್ಕಾಟದಲ್ಲಿಯೆ ರಠಿಕರು 'ರಾಠ'ರು 'Rough' ಎನಿಸಿಕೊಂಡಿರಬಹುದಲ್ಲವೆ?

ರಾಷ್ಟ್ರಕೂಟರ ಇತಿಹಾಸ ಲೇಖಕರಾದ ಡಾ. ಅಳತೇಕರರ ಅಭಿಪ್ರಾಯದಂತೆ[೨೧] ರಟ್ಟರು, ರಾಷ್ಟ್ರಿಕರು ಅಚ್ಚಕನ್ನಡ ಕುಲದವರು; (Canarese stock). ಇವರ ಮಾತೃಭಾಷೆ ಕನ್ನಡ. ರಾಷ್ಟ್ರಕೂಟರ ಕಾಲದ ಶಾಸನಗಳಲ್ಲಿ ಒಂದು ಸಹ ಮರ್ಹಾಟಿಯಲ್ಲಿ ಇಲ್ಲದುದೂ ಇವರು ತಮ್ಮ ಶಾಸನಗಳಲ್ಲಿ ಹಳಗನ್ನಡಲಿಪಿಯನ್ನು ಪ್ರಾಮುಖ್ಯದಿಂದ ಉಪಯೋಗಿಸಿದುದೂ ಇದಕ್ಕೆ ಪೋಷಕವಾಗಿದೆ. ಇಂತಿವೆಲ್ಲ ಪ್ರತಿಕೂಲ ಸಂಗತಿಗಳಿದ್ದು ಮತ್ತೆ ರಾಷ್ಟ್ರಿಕರು-ರಾಠಿಗಳು ಮರಾಠರ ಪೂರ್ವಜರೆಂದು ಸಾಧಿಸುವುದು ಸಾಹಸವೇ ಸರಿ. ರಾಷ್ಟ್ರಕೂಟರ ಕುಲಮೂಲಗಳನ್ನು ಪರಿಶೋಧಿಸಿದಂತೆ ಈ ಮಾತು ಇನ್ನಷ್ಟು ದೃಢಪಡುತ್ತದೆ. ತಮ್ಮ ವಂಶಪರಂಪರೆಯನ್ನು ಹೇಳಿಕೊಳ್ಳುವಾಗ ಪ್ರಾಚೀನ ಕಾಲದ ಆವುದೊಂದು ಗೋತ್ರ ಸೂತ್ರದಿಂದ ಆರಂಭಿಸುವುದು ಆರ್ಯಜನಾಂಗದ ರೀತಿಯಷ್ಟೆ. ಕ್ಷತ್ರಿಯರಲ್ಲಿ ಇನ್ನೂ ಒಂದು ವಿಶೇಷ: ಅವರು ಸೂರ್ಯಚಂದ್ರಾದಿಗಳಿಂದಲು ವಂಶಾವಳಿಯನ್ನು ಆರಂಭಿಸುವರು. ಈ ಪದ್ಧತಿಯು ಈ ನಾಡಿನವರಿಗೆ ಅರಿದು. ಆದರೆ, ತಾವು ಆರ್ಯೇತರರಲ್ಲ; ಆರ್ಯರು, ಕ್ಷತ್ರಿಯ ಕುಲದವರು ಎಂದು ತೋರಿಸಿಕೊಳ್ಳುವ ಮೋಹವು ತಲೆದೋರಿದ ಕಾಲಕ್ಕೆ ಮಾತ್ರ ಈ ದೇಶದ ಮೂಲ ಜನಾಂಗಗಳಲ್ಲಿ (ರಾಷ್ಟ್ರಿಕರಲ್ಲಿ ಸಹ) ಮುಂದೆ ಈ ರೂಢಿಯು ಕ್ರಮವಾಗಿ ಸೇರಿಕೊಂಡಿತೆಂದು ಬಲ್ಲಿದರು ಹೇಳುತ್ತಾರೆ. ರಾಜ್ಯ ಸಂಸ್ಥಾಪಕರೂ, ಊರ್ಜಿತ ಸ್ಥಿತಿಗೆ ತಂದವರೂ ಆದ ಆರಂಭದ ರಾಷ್ಟ್ರಕೂಟರ ಶಾಸನಗಳಲ್ಲಿ ತಾವು ಇಂತಹ ಅಂತಹ ವಂಶದವರೆಂದು ಹೇಳಿಕೊಂಡ ಉಲ್ಲೇಖವೇ ಇಲ್ಲ! ನೂರಾರು ವರ್ಷಗಳ ತರುವಾಯ ತಾವು "ಯದುವಂಶದುಗ್ಧ ಸಿಂಧುವಿನಲ್ಲಿ ಜನಿಸಿದವರು," "ಸಾತ್ಯಕೀ ವರ್ಗಭಾಜರು," "ಯದುವಂಶ ಕುಮುದೇಂದು"ಗಳು ಎಂದು ಹೇಳಿಕೊಳ್ಳುವ ಪದ್ಧತಿಯು ಆರಂಭವಾಯಿತು. ಆದರೆ, ಇದನ್ನು ಕುರಿತು ಡಾ. ಭಂಡಾರಕರರು "The seare clearly imaginary persons"[೨೨] ಎಂದು ಅಭಿಪ್ರಾಯಪಟ್ಟಿದ್ದಾರೆ. ಡಾ. ಫ್ಲೀಟರಿಗೂ ಇದು ಬಾದರಾಯಣ ಸಂಬಂಧವೆನಿಸುತ್ತದೆ.[೨೩] ಪಂ. ಭಗವಾನಲಾಲರ ಅಭಿಪ್ರಾಯದಂತೆ ಈ ಪದ್ಧತಿಯು ಕ್ರಿ. ಶ. ೯೩೦ರಲ್ಲಿ ಆರಂಭವಾಯಿತು. ಈವರೆಗೆ ದೊರೆತ ರಾಷ್ಟ್ರಕೂಟರ ಶಾಸನಗಳಲ್ಲಿ ಅತ್ಯಂತ ಪ್ರಾಚೀನವೆಂದು ಶ್ರೀ ಎನ್. ಲಕ್ಷ್ಮೀನಾರಾಯಣರು ಹೇಳುವ ಗೋಕಾಂವಿಯ ಶಾಸನದಲ್ಲಿ 'ಯದುವಂಶದ' ಮಾತೆ ಕಣ್ಣಿಗೆ ಬೀಳುವದಿಲ್ಲ.[೨೪] ಹತ್ತು-ಹನ್ನೆರಡು ವರ್ಷಗಳಿಂದ ಸತತವಾಗಿ ಅಭ್ಯಾಸಮಾಡಿ ರಾಷ್ಟ್ರಕೂಟ

ಮನೆತನದ ವಿಸ್ತೃತವಾದ ಇತಿಹಾಸವನ್ನು ಬರೆದ ಡಾ. ಅಳತೇಕರರು ಈ ವಿಷಯಕ್ಕೆ ನಿಸ್ಸಂದಿಗ್ಧವಾಗಿ ಹೇಳುವುದೇನೆಂದರೆ:

> "The earliest date, now known, when the Rashtrakutas are seen claiming descent from Yadu is 871 A. D., when Sanjana plates were issued. 63 years earlier, howeever, the Rashtrakutas had not even dreampt of claiming this descent. [೨೫]

ನೃಪತುಂಗನ ಮೊದಲು ರಾಷ್ಟ್ರಕೂಟರಿಗೆ ತಾವು ಯದುವಂಶೀಯರೆಂದು ಹೇಳಿಕೊಳ್ಳುವ ವಿಚಾರವು ಕನಸುಮನಸಿನಲ್ಲಿ ಸಹ ಬಂದಿದ್ದಿಲ್ಲ. ಈ ಪದ್ಧತಿಯು ಹೇಗೆ ತಲೆದೋರಿರಬೇಕೆಂಬುದು ವಿಚಾರಣೀಯವಾಗಿದೆ. ಈ ಮನೆತನದ ವಿಖ್ಯಾತ ರಾಜನಾದ ಮೂರನೆಯ ಗೋವಿಂದನನ್ನು (ಕ್ರಿ. ಶ. ೮೦೮) ಕವಿಗಳು ಯಾದವ ವಂಶಸಂಭೂತನಾದ ಕೃಷ್ಣನಿಗೆ ಸರಿದೊರೆಯೆಂದು ಹೋಲಿಸಿದ್ದುಂಟು. ಮುಂದೆ ಈ ಉಪಮೆಯನ್ನು ಇನ್ನೊಂದಿಷ್ಟು ಹಿಗ್ಗಿಸಿ ಹೋಲಿಕೆಯೇಕೆ, 'ಪ್ರತ್ಯಕ್ಷ ಯದುವಂಶೀಯರೆ' ಎಂದು ಮುಂದಿನ ಕವಿಗಳು ವರ್ಣಿಸುವ ಮೋಹವುಳ್ಳವರಾಗಿರಬೇಕೆಂದು ಡಾ. ಅಳತೇಕರರ ಮತ. ಆದುದರಿಂದ, ಗೋತ್ರಸೂತ್ರಗಳನ್ನು ಹೇಳಿಕೊಳ್ಳುವ ಆರ್ಯಜನಾಂಗದಿಂದ ಭಿನ್ನವಾದ ಪದ್ಧತಿಯುಳ್ಳ-ರಾಷ್ಟ್ರಿಕರು ರಾಷ್ಟ್ರಕೂಟರು ಆರೇರಿಂದ (ಮರಾಠರಿಂದ) ಬೇರೆಯೆಂಬುದಕ್ಕೆ ಇನ್ನೂ ಪ್ರಮಾಣಗಳು ಬೇಕೆ? ಭಾಷೆ, ಇತಿಹಾಸ ಮತ್ತು ಪರಂಪರೆಗಳಲ್ಲಿ ಆವ ದೃಷ್ಟಿಯಿಂದ ವಿಚಾರಿಸಿದರೂ ರಠಿಕ, ರಾಷ್ಟ್ರಿಕ, ಅಥವಾ ರಾಷ್ಟ್ರಕೂಟರು ಮರಾಠ, ಮಹಾರಾಷ್ಟ್ರರಿಂದ ಭಿನ್ನವಾದ ಮತ್ತೊಂದು ಜನಾಂಗದವರೆಂಬುದೇ ಹೆಚ್ಚು ಹೆಚ್ಚು ಬಯಲಿಗೆ ಬರುತ್ತಲಿದೆ. ಆದುದರಿಂದ ಡಾ. ಭಂಡಾರಕರ, ಡಾ. ಸಿ. ವಿ. ವೈದ್ಯ ಮೊದಲಾದವರ ಅಗಾಧಪಾಂಡಿತ್ಯದ ಬಗ್ಗೆ ಎಷ್ಟೆ ಆದರವುಳ್ಳವರಾಗಿದ್ದರೂ ಅವರು ಪ್ರತಿಪಾದಿಸಿದ ಸಿದ್ಧಾಂತವು ಮಾತ್ರ ಸರಿಯಾದುದುಲ್ಲವೆಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ.

ಇದನ್ನು ಮುಂಗುಡೊ ಏನೊ, ಸಣ್ಣ ಸಣ್ಣ ಹಲವು ರಾಷ್ಟ್ರಗಳ ಗುಂಪು, ಸಮುದಾಯಕ್ಕೆ ಮಹಾರಾಷ್ಟ್ರವೆಂಬ ಹೆಸರು ಬಂದಿತೆಂದು ಹೇಳುವವರೂ ಕೆಲವರುಂಟು.[೨೬] ನರ್ಮದೆಯ ದಕ್ಷಿಣಕ್ಕೆ ದೇವರಾಷ್ಟ್ರ, ಗೋಪರಾಷ್ಟ್ರ, ಮಲ್ಲರಾಷ್ಟ್ರ, ಅಶ್ಮಕ ಮೊದಲಾದ ಸಣ್ಣಪುಟ್ಟ ನಾಡುಗಳಿದ್ದುವು; ಅವೆಲ್ಲ ೫ನೆಯ ಶತಮಾನದ ಸುಮಾರಿಗೆ ಒಂದುಗೂಡಿದವು. ಆ ರಾಷ್ಟ್ರಸಂಘಕ್ಕೇ ಮಹಾರಾಷ್ಟ್ರವೆಂಬ ಹೆಸರು ಬಂದಿರಬೇಕೆಂದು ಈ ವರ್ಗದವರ ಊಹೆ. ಆದರೆ, ಈ ಬಗೆಯ ರಾಜಕೀಯ ಪರಿವರ್ತನವಾದ ಬಗ್ಗೆ ಇತಿಹಾಸದಲ್ಲಿ ಎಲ್ಲಿಯು ಆಧಾರವೆ ಸಿಕ್ಕುವುದಿಲ್ಲ. ಆ ಭಾಗವನ್ನು ಗೆದ್ದು ತನ್ನ ಸಾಮ್ರಾಜ್ಯಕ್ಕೆ ಸೇರಿಸಿದ ಸಮುದ್ರಗುಪ್ತನಾಗಲಿ (ಕ್ರಿ. ಶ. ೪೦೦), ಅಥವಾ ಆ ಕಾಲಕ್ಕೆ ಆಳಿದ ವಾಕಾಟಕರಾಗಲಿ ಇಲ್ಲಿಯ ರಾಷ್ಟ್ರಗಳನ್ನೆಲ್ಲ ಒಂದು ಸಾಮಾನ್ಯ (common) ಹೆಸರಿನ ಕೆಳಗೆ ಒಂದುಗೂಡಿಸಿದ ಉಲ್ಲೇಖವಿಲ್ಲ. ಇಂತಹ ಸಂಘಟನಾಶಕ್ತಿಯುಳ್ಳ ಅದಾವ ಬಿಸ್ಮಾರ್ಕನು ಆ ಕಾಲದಲ್ಲಿ ಹುಟ್ಟಿದುದನ್ನು, ಇತಿಹಾಸವು ಹೇಳುವುದಿಲ್ಲ. ಅಲ್ಲದೆ, ಆ ಯುಗದ ಮನೋಭೂಮಿಕೆ (Psychology) ಯನ್ನು ಆ ಯುಗಕ್ಕೆ ಅರಿದು ಸ್ವಲ್ಪ ವಿಚಾರಿಸಿದರೆ ಈ ಮಾತು ಇನ್ನಿಷ್ಟು ಈ ಮನದಟ್ಟಾಗುವುದು. ತೋಳ್ಬಲವಿದ್ದವರು ನೆರೆಹೊರೆಯ ನಾಡುಗಳನ್ನು ಗೆದ್ದು ಅದನ್ನು ತಮ್ಮ ಅಂಕೆಯಲ್ಲಿ ಇಟ್ಟುಕೊಳ್ಳುವ ಪದ್ಧತಿಯು ಆಗಿನದು. ಗೆದ್ದ ನಾಡನ್ನು ತನ್ನ ಸಾಮ್ರಾಜ್ಯದ ವಿಭಾಗವೆಂದು ಬಿರುದೆತ್ತಿಕೊಂಡು ಮೆರೆದ ಯುಗವದು. ಇಂದಿಗೂ ಕ್ಷಿತಿಜವನ್ನು ಬಿಟ್ಟು ಮೇಲಕ್ಕೇಳದ, ಇನ್ನೂ ಬೆಳಗಿನ ನಸುಗತ್ತಲೆಯಲ್ಲಿಯೇ ಸಿಲುಕಿಕೊಂಡಿರುವ 'ರಾಷ್ಟ್ರ-ಸಂಘದ' ಕಲ್ಪನೆಯು ಆಗ ಎಲ್ಲಿಯದು? ಜಾತಿ, ವರ್ಣ, ಮತ, ಪಂಗಡಗಳ ಅಭಿಮಾನವು ಆ ಯುಗದ ಪ್ರವರ್ತಕಶಕ್ತಿ. ರಾಷ್ಟ್ರೀಯತ್ವ (Nationalism) ಇಂದಿನ ಯುಗದ ಪ್ರೇರೇಪಕ ಶಕ್ತಿ. ಆಗಿನವರು ವರ್ಣರಕ್ಷಣೆಗಾಗಿ ಒಕ್ಕಟ್ಟಾಗಿರಬಹುದು; ಧರ್ಮಸಂರಕ್ಷಣೆಗಾಗಿ ಒಂದುಗೂಡಿರಬಹುದು; ತನ್ನ ರಾಜ್ಯವನ್ನು ಬೆಳೆಸಿಕೊಳ್ಳುವುದಕ್ಕಾಗಿ ಒಬ್ಬಿಬ್ಬರೊಡನೆ ಕೂಡಿ ನಡೆದಿರಬಹುದು- ಅದೂ ಹೊಳೆದಾಟುವ ವರೆಗೆ. ಆದರೆ, ಕೇವಲ 'ರಾಷ್ಟ್ರ'ದ ಅಭಿಮಾನದಿಂದ

ಮಹಾ-ರಾಷ್ಟ್ರವಾಯಿತೆಂದು ಊಹಿಸುವುದೇ ಕಷ್ಟ. ಯಾರ ಆಗ್ರಹ, ಒತ್ತಾಯ, ಬಲುಮೆ ಇಲ್ಲದೆ ಈ ಬಗೆಯ ಸಂಘಟನೆಯನ್ನು ಮಾಡಿಕೊಂಡು ತಮ್ಮೆಲ್ಲರ ಮೊದಲಿನ ಹೆಸರುಗಳನ್ನು ಬಿಟ್ಟುಕೊಟ್ಟು ಎಲ್ಲರಿಗೂ ಸಾಮಾನ್ಯವಾದ (Common) ಹೊಸತೊಂದು ಹೆಸರನ್ನು ಧರಿಸಿದ ಉದಾಹರಣೆಗಳು ಆ ಹಿಂದಿನ ಯುಗದ ಭಾರತದ ಇತಿಹಾಸದಲ್ಲಿಯೇ-ಏಕೆ, ಜಗತ್ತಿನ ಇತಿಹಾಸದಲ್ಲಿಯೇ ಕಾಣಬರದಿರುವಾಗ ದೇವರಾಷ್ಟ್ರ ಮೊದಲಾದ ಸಣ್ಣ ಪುಟ್ಟ ರಾಷ್ಟ್ರಗಳ ಸಂಘವು ಮಹಾರಾಷ್ಟ್ರವಾಯಿತೆಂದು ನಂಬುವುದಾದರೂ ಎಂತು? ಅಥವಾ ಅದನ್ನೆ ಇವರು ಹೀಗೆ ಹೇಳಿದರೆ ನಂಬಬಹುದು.

> (೧) ಮಹಾರಾಷ್ಟ್ರವೆಂಬ ಹೆಸರಿನ ಒಂದು ನಾಡು ಇತ್ತು. ಆ ನಾಡಿನ ರಾಜನು ದೇವರಾಷ್ಟ್ರಕ ಮೊದಲಾದ ಸಣ್ಣ ಪುಟ್ಟ ರಾಷ್ಟ್ರಗಳನ್ನು ಗೆದ್ದು ತನ್ನ ಸಾಮ್ರಾಜ್ಯಕ್ಕೆ ಸೇರಿಸಿದನು. ಮುಂದೆ ಆ ಪ್ರದೇಶಕ್ಕೆ ಇದ್ದ ಮೊದಲಿನ ಹೆಸರುಗಳೆಲ್ಲ ಹೇಳ ಹೆಸರಿಲ್ಲದಂತಾಗಿ ಮಹಾರಾಷ್ಟ್ರವೆಂಬ ಪ್ರಖ್ಯಾತ ನಾಮವೊಂದೇ ಉಳಿಯಿತು. (೨) ಮೊದಲು ಮಹಾರಾಷ್ಟ್ರವೆಂಬ ಹೆಸರಿನಿಂದ ಇದ್ದ ನಾಡಿನ ಜನಾಂಗದವರು ಬೇರೆ ಬೇರೆ ಕಡೆಗೆ ಹೋಗಿ ಒಕ್ಕಲಾದರು. ಅವರು ಹೊಸತಾಗಿ ನೆಲಸಿದ ನಾಡಿಗೂ ಅವರ ಮೊದಲಿನ ನಾಡಿನ ಹೆಸರೇ ಅಂಟಿಕೊಂಡಿತು."

ಈ ಹೇಳಿಕೆಯೊಳಗಿನ ಮೊದಲನೆಯ ಭಾಗಕ್ಕೆ ಐತಿಹಾಸಿಕ ಆಧಾರವೆ ಇಲ್ಲ. ಎರಡನೆಯದು ಐತಿಹಾಸಿಕ ದೃಷ್ಟಿಯಿಂದ ಸರಿಯಾಗಿದ್ದರೂ ನಮಗೆ ಅದಾವ ವಿಷಯದ ಮೂಲವನ್ನು ಅರಿತುಕೊಳ್ಳಬೇಕಾಗಿದೆಯೊ ಅದು ಸಿದ್ಧವೇ ಇದೆಯೆಂದು ಗ್ರಹಿಸಿ ಮುಂದೆ ಹೊರಟಂತಾಗುವುದು. 'ಮಹಾರಾಷ್ಟ್ರದ ಮೂಲವು ಏನು? ಮೂಲ ಮಹಾರಾಷ್ಟ್ರವು ಆವುದು?' ಎಂಬುದೆ ಇಲ್ಲಿ ಜಿಜ್ಞಾಸೆಯ ಮುಖ್ಯ ವಿಷಯು. ಅದನ್ನೇ 'ಇತ್ತು' ಎಂದು ಆರಂಭ ಮಾಡುವ ಮೊದಲು ಎಲ್ಲಿ ಮತ್ತು ಹೇಗೆ ಎಂಬುದನ್ನು ವಿವರಿಸುವುದು ಕರ್ತವ್ಯವಾಗಿಲ್ಲವೆ?

ಮರಾಠನೆಂದರೆ 'ಮರೇಂಗಾ ಪಣ ಹರೇಂಗಾ ನಾ ಹಿ' ಎಂಬ ವಿನೋದಕರವಾದ ಉಪಪತ್ತಿಯನ್ನೂ ಹೇಳಿ ಶ್ರೀ ಭಿಡೆಯವರು ನಕ್ಕು ನಗಿಸಿಬಿಟ್ಟಿರುವರು. ಶ್ರೀ ಭಿಡೆಯವರಿಗೆ ಸಹ ಮೇಲ್ಕಾಣಿಸಿದ ವ್ಯುತ್ಪತ್ತಿಗಳಲ್ಲಿ ಒಂದೂ ಹುರುಳುಳ್ಳುದೆಂದು ಎನಿಸಿಲ್ಲ. ಆದುದರಿಂದ, ಅವನ್ನೆಲ್ಲ ತಮ್ಮ ಕೆಲವು ಬೇರೆ ಕಾರಣಗಳನ್ನು ಹೇಳಿ ಒಂದೊಂದನ್ನು ಒಂದೊಂದು ಮಾತಿನಲ್ಲಿ ಹೊಡೆದು ಹಾಕಿದ್ದಾರೆ.[೨೭] ಮಹಾರಾಷ್ಟ್ರದ ಮೂಲವು ಇನ್ನೂ ಸರಿಯಾಗಿ ಸಮರ್ಪಕವಾಗಿ ತಿಳಿದಿಲ್ಲವೆಂಬುದು ಇದರಿಂದ ಚೆನ್ನಾಗಿ ವ್ಯಕ್ತವಾಗುತ್ತಲಿದೆ. ಆದುದರಿಂದ, ಮಹಾರಾಷ್ಟ್ರದ ವ್ಯುತ್ಪತ್ತಿಯ ವಿಷಯಕ್ಕೆ ಈವರೆಗೆ ಮುಂದೆ ಬಂದವುಗಳೆಲ್ಲ ತೊದಳ್ನುಡಿಗಳೆಂದು ಬೇರೆ ಹೇಳಬೇಕಾಗಿಲ್ಲ.

ತೊಡಕಿನ ಮೂಲಕಾರಣ

ಮೊದಲ ಎಳೆಯು ಸಿಕ್ಕದಿದ್ದರೆ ತೊಡಕು ಬಿಡುವುದಿಲ್ಲ. ತೊಡಕು ಬಿಡಬೇಕೆಂದು ಇಲ್ಲದ ಎಳೆದಾಟ ನಡೆಸಿದರೆ ಕಗ್ಗಂಟು ಬೀಳುವುದುಂಟು. ಮಹಾರಾಷ್ಟ್ರ ಶಬ್ದದ ತೊಡಕು ಬಿಡದಿರುವುದಕ್ಕೆ ಒಗಟು ಒಡೆಯದಿದ್ದುದಕ್ಕೆ ಕಾರಣವಾದರೂ ಇದೆ. ತಪ್ಪುದಾರಿಯಲ್ಲಿ ನಡೆದ ಪ್ರಯತ್ನಗಳು ಕೊನೆಮುಟ್ಟುವ ಆಸೆಯೆಲ್ಲಿ! ಈ ದೇಶದ ಒಳನಾಡು, ನದಿ, ಪರ್ವತಗಳ ಇಂದಿನ ಹೆಸರುಗಳಂತೂ ಸರಿಯೆ. ಅದಕ್ಕೂ ಹಿಂದಿನ ಹೆಸರುಗಳು ಸಹ ಸಂಸ್ಕೃತ ಭಾಷೆಯವೇ ಇರಬೇಕೆಂದು ಎಷ್ಟೋ ವಿದ್ವಾಂಸರ ದೃಢವಾದ ಗ್ರಹಿಕೆ! ಈ ಬಗೆಯ ಗ್ರಹಿಕೆಯೆ ಮುಂದಿನ ಎಲ್ಲ ತಪ್ಪುಗಳ ತವರು ಮನೆ. ಆರ್ಯರು ಭರತಖಂಡದಲ್ಲೆಲ್ಲ ನೆಲೆಯಾಗುವ ಮೊದಲೆ ಎಷ್ಟೋ ಶತಮಾನಗಳಿಂದ ಈ ದೇಶದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಜನಾಂಗಗಳು ವಾಸವಾಗಿದ್ದುವೆಂದು ದೃಗ್ಗೋಚರವಾಗುತ್ತದೆ. ಆರ್ಯರಿಗಿಂತ ಮುಂಚೆ ಈ ದೇಶದಲ್ಲಿ ದ್ರವಿಡರು (ಕನ್ನಡ-ತಮಿಳು) ಪ್ರಬಲರಾದ

ಜನಾಂಗದವರಾಗಿದ್ದರೂ ಅವರಿಗಿಂತ ಮೊದಲು ಭರತಖಂಡದ ಬಹುಭಾಗವನ್ನು ವ್ಯಾಪಿಸಿಕೊಂಡಿದ್ದವರು ಆಸ್ಟ್ರೋ ಏಶಿಯಾಟಿಕ್ (Astro-Asiatic) ಜನಾಂಗದವರೆಂದು ಸಂಶೋಧಕರು ಕಂಡುಹಿಡಿದಿದ್ದಾರೆ. ಅಸ್ಸಾಮ್, ಬಂಗಾಳದಿಂದ ಯಮುನಾ ತೀರದ ವರೆಗೆ ಸುಮಾರು ಕಾಶ್ಮೀರದವರೆಗೂ ಆಸ್ಟ್ರೋ-ಏಶಿಯಾಟಿಕ್ ಜನಾಂಗಗಳಿದ್ದ ಕುರುಹುಗಳು ದೊರೆಯತ್ತವೆಂದು Przyluski ಮುಂತಾದ ಫ್ರೆಂಚ್ ಸಂಶೋಧಕರೂ ಡಾ. ಚಟರ್ಜಿ, ಡಾ. ಬಾಗಚಿ ಮುಂತಾದ ದೇಶೀಯರೂ ಹೇಳುತ್ತಿದ್ದಾರೆ. ಆವಂಶಕ್ಕೆ ಸೇರಿದ ಕೋಲರೂ (ಮುಂಡಾ ಜನಾಂಗ), ಸಂತಾಳರು, ಬಂಗಾಳ ಬಿಹಾರದ ಕಾಡುಗಳಲ್ಲಿ ಇನ್ನೂ ಹುದುಗಿಕೊಂಡಿರುವುದು ಅನುಭವಕ್ಕೆ ಬರುತ್ತಿದೆ. ಸಾಧಾರಣವಾಗಿ ಹಿಂದೂ ದೇಶದ ಪೂರ್ವಭಾಗದಲ್ಲಿ ಈ ಜನಾಂಗವು ನೆಲೆಯಾಗಿದ್ದರೆ ಪಶ್ಚಿಮಭಾಗದಲ್ಲಿ ದ್ರಾವಿಡರು (ಕನ್ನಡ-ತಮಿಳರು) ಕಾಲೂರಿಕೊಂಡಿದ್ದರೆಂದು ತಿಳಿದು ಬರುತ್ತದೆ. ಬಲೂಚಿಸ್ಥಾನದ ಮಧ್ಯಪ್ರದೇಶದಲ್ಲಿ ಈಗಲೂ ನಡೆಯುತ್ತಿರುವ ದ್ರವಿಡ ವರ್ಗಕ್ಕೆ ಸೇರಿದ ಬ್ರಾಹೂಯೀ ಭಾಷೆಯು ಈ ಮಾತಿಗೆ ಸಾಕ್ಷಿಯಾಗಿದೆ.

ಈ ಜನಾಂಗಗಳಿಗೂ ಒಂದು ಬಗೆಯ ಸಂಸ್ಕೃತಿಯಿತ್ತು. ಇವರಾದರೂ ತಮ್ಮ ಬುದ್ಧಿಯ ಬೆಳಕಿಗೆ ತಕ್ಕ ಬೇರೆ ಬೇರೆ ನಾಡುಗಳನ್ನು ಕಟ್ಟಿಕೊಂಡು ಬಾಳುವೆ ನಡೆಸಿದ್ದರೆಂದು ಡಾ. ಸ್ಲೇಟ್ ಮತ್ತು ಕೀಥ್ ಮೊದಲಾದ ಸಂಶೋಧಕರ ಅಭಿಪ್ರಾಯವಿದೆ. ಮುಂದೆ ಆರ್ಯರ ಏರಾಟದ ಎದುರು ಇವರಿಗೆ ತಡೆದು ನಿಲ್ಲಲಿಕ್ಕಾಗಲಿಲ್ಲ; ಆ ಮಾತು ಬೇರೆ. ಅಂತೂ ಆರ್ಯರ ಮೊದಲು ಇಲ್ಲಿ ಒಕ್ಕಲಾಗಿದ್ದ ಜನಾಂಗಗಳು ತಮ್ಮ ನಾಡುಗಳಿಗೆ ಏನೊಂದೂ ಹೆಸರನ್ನಿಡದೆ ನಿತ್ಯ ವ್ಯವಹಾರಗಳನ್ನು ಸಾಗಿಸಿದ್ದರೆಂದು ತಿಳಿಯುವುದು ಅವ್ಯವಹಾರ್ಯವಾಗುತ್ತದೆ. ಆದುದರಿಂದ ಆರ್ಯರು ಬರುವ ಮೊದಲು ಈ ದೇಶದ ಬೇರೆ ಬೇರೆ ಭಾಗಗಳಿಗೆ ಅಲ್ಲಿ ನೆಲೆಸಿದ ಜನಾಂಗಗಳು ಆಯಾ ದೇಶ ವಿಭಾಗಗಳಿಗೆ ತಮ್ಮ ತಮ್ಮ (ಭಾಷೆಯಲ್ಲಿ) ಹೆಸರುಗಳನ್ನು ಇಟ್ಟುಕೊಂಡಿದ್ದರೆಂದು ಎಣಿಸದೆ ಗತ್ಯಂತರವಿಲ್ಲ. ಬರಿಯ ಊಹೆಯೆ ಆಗಿರದೆ ಇದು ನಿಜವಾದ ಸಂಗತಿಯಾಗಿದೆಯೆಂದು ಇತ್ತೀಚಿನ ಸಂಶೋಧನಗಳಿಂದ ಸಿದ್ಧವಾಗಿದೆ.

> "Prof. Levi, in a fundamental article on 'Pre-Aryen et Pre-Dravidien dans l 'Inde' tried to show that some geographical names of ancient India like Kosal-Tosal, Ang-Vang, Kaling-Trikaling, Utkal-Mekal and Pulind-Kulind, ethnic names which go by pairs. can be explained by the morphologycal system of the Astro-Asiatic languages'[೨೮]

ಪ್ರೊ. ಸಿಲ್ವೆನ್ ಲೆವಿಯವರು ಕೋಸಲ-ತೋಸಲ, ಅಂಗ-ವಂಗ ಕಲಿಂಗ-ತ್ರಿಕಲಿಂಗ, ಉತ್ಕಲ-ಮೇಕಲ ಮತ್ತು ಪುಳಿಂದ-ಕುಳಿಂದ ಎಂಬ ಜೋಡುನುಡಿಗಳಿಂದ ಆ ಪ್ರಾಚೀನ ದೇಶವಿಭಾಗದ ಹೆಸರುಗಳನ್ನು ಆಸ್ಟ್ರೋ-ಏಶಿಯಾಟಿಕ್ ಭಾಷೆಯ ಸಹಾಯದಿಂದ ವಿವರಿಸಿ ಹೇಳಿದ್ದಾರೆ. ಆಸ್ಟ್ರೋ-ಏಶಿಯಾಟಿಕ್ ಜನಾಂಗವು ಪ್ರಬಲವಿದ್ದ ದೇಶವಿಭಾಗಗಳಿಗೆ ಆಸ್ಟ್ರೋ-ಏಶಿಯಾಟಿಕ್ ಭಾಷೆಗೆ ಸಂಬಂಧಿಸಿದ ಹೆಸರುಗಳಿರುವಂತೆ ದ್ರಾವಿಡ (ಕನ್ನಡ-ತಮಿಳು) ಜನಾಂಗವು ತಲೆಯೆತ್ತಿ ಮೆರೆದ ನಾಡುಗಳ ಹಳೆಯ ಹೆಸರುಗಳೂ ಆ ಭಾಷೆಗೆ ಸಂಬಂಧಿಸಿದವುಗಳಿರುವುದು ಹೆಚ್ಚು ಸ್ವಾಭಾವಿಕವಷ್ಟೆ? ಆ ಹಳೆಯ ಹೆಸರುಗಳಲ್ಲಿ ಹಲಕೆಲವು ಸಾವಿರಾರು ವರುಷಗಳ ಜೀವನಕಲಹದಲ್ಲಿ ತೀರ ಬದಲಾಗಿರಬಹುದು. ಆದರು, ಈಗಲೂ ರೂಢಿಯಲ್ಲಿರುವ ಮಾಳವಾ, ಕರ್ನಾಟ, ಕರ್ಹಾಡ, ಕೊಂಕಣ ಈ ಮೊದಲಾದ ಶಬ್ದಗಳು, ಕೆಲವೊಂದು ಮಾರ್ಪಾಟನ್ನು ಹೊಂದಿರುವಾದರೂ ಅವು ತಮ್ಮ ಪ್ರಾಚೀನ ಮುಖಲಕ್ಷಣವನ್ನು ಪೂರ್ಣವಾಗಿ ಕಳೆದುಕೊಂಡಿಲ್ಲ. ಮಹಾರಾಷ್ಟ್ರದ ಮೇಲ್ಗಡೆಗೆ, ಆ ಹಳೆಯ ಜನಾಂಗದ ಭಾಷೆಯ ಕುರುಹುಳ್ಳ ಮಾಳವಾ, ಕೆಳಗೆ ಕರ್ನಾಟ, ಕರ್ಹಾಟಗಳು ಬದಿಗೆ (ಪಶ್ಚಿಮಕ್ಕೆ) ಕೊಂಕಣಗಳಿವೆ; ಆದುದರಿಂದ ಸುತ್ತಲೂ ಈ ಬಗೆಯ ಹೆಸರಿನ ನಾಡುಗಳಿರುವ ಮಹಾರಾಷ್ಟ್ರದ ಮೂಲವೂ

ಕರ್ಣಾಟಾದಿಗಳಂತೆ ಆ ಹಳೆಯ ಜನಾಂಗದ ಭಾಷೆಯಲ್ಲಿಯೆ ಏಕೆ ಇರಲಿಕ್ಕಿಲ್ಲ? "The substratum over which the Marathi and Gujarathi have spread was Dravidian." ಎಂದು ಸ್ಟೆನ್ ಕೊನೊ (Sten Konow) ಅವರು ಹೇಳುವರು.

> "The mixture of the two elements (Marathi and Dravidian) is best illustrated by the peculiarities of the (Marathi) language whose base is Dravidian, but whose structure have been entirely fashioned by Aryan influence"

ಎಂದು ನ್ಯಾಯಮೂರ್ತಿ ಮಹಾದೇವ ಗೋವಿಂದ ರಾನಡೆಯವರು ಅಭಿಪ್ರಾಯಪಟ್ಟಿದ್ದಾರೆ.[೨೯] ಸರ್ ರಿಸ್ಲೆ, ಮಿ. ಎಂಥೊವೆನ್ ಸಾಹೇಬರು ಮರಾಠಿಗೆ ಸಿಥಿಯೊ ದ್ರವಿಡಿಯನ್‌ರೆಂದು ಹೇಳುವರು. ಆದರೆ, ಇದು ಮಹಾರಾಷ್ಟ್ರದಲ್ಲಿ ಯಾರಿಗೂ ಸಮ್ಮತವಿಲ್ಲ. ಮರಾಠರ ಮುಂದಾಳುಗಳಾದ ಶ್ರೀ ಜಾಧವರಾವ[೩೦] ಸಾಹಿತ್ಯಾ ಚಾರ್ಯರೆನಿಸಿದ ಶ್ರೀ ಕೃ. ಕೋಲ್ಹಟಕರು[೩೧] ಪ್ರಭೃತಿಗಳೆಲ್ಲ ಮರಾಠರು, ಶ್ರೀ ರಾನಡೆಯವರಂತೆ, ಆರ್ಯದ್ರಾವಿಡರೆಂಬ ಮತದವರೇ ಆಗಿದ್ದಾರೆ.

ಒಟ್ಟಿನಲ್ಲಿ ಈ ಅಭಿಪ್ರಾಯಗಳನ್ನೆಲ್ಲ ವಿಚಾರಿಸಿದರೆ ಮಹಾರಾಷ್ಟ್ರವು, ಅಲ್ಲಿಗೆ ಮರಾಠರು ಬರುವುದಕ್ಕಿಂತ ಮೊದಲು-ಎಂದರೆ ಆರ್ಯರ ವಸತಿಗಿಂತ ಮುಂಚೆ ದ್ರವಿಡರ ಬೀಡು ಆಗಿದ್ದಿತೆನ್ನಲು ಯಾರ ವಿರೋಧವೂ ಇದ್ದಂತೆ ತೋರುವುದಿಲ್ಲ. ಆದುದರಿಂದ, ಸಂಸ್ಕೃತ ಭಾಷೆಯ ಮಹಾರಾಷ್ಟ್ರವೆಂಬ ಹೆಸರಾಗಲಿ, ದೇವರಾಷ್ಟ್ರ, ಗೋಪರಾಷ್ಟ್ರ ಮೊದಲಾದ ಹೆಸರುಗಳಾಗಲಿ ಆರ್ಯರು ಬಂದ ಬಳಿಕ ತಲೆದೋರಿರಬೇಕಲ್ಲದೆ ಅವು ಮೊಟ್ಟ ಮೊದಲಿನ ಹೆಸರುಗಳಾಗಿರುವುದು ಅಸಂಭವ. ಹಳೆಯ ಹೆಸರು ಯಾವುದಾದರೂ ಇದ್ದರೆ ಅದು ದ್ರಾವಿಡ (ಕನ್ನಡ-ತಮಿಳು) ಭಾಷೆಗೆ ಸಂಬಂಧಿಸಿದ್ದೇ ಇರಲಿಕ್ಕೆ ಬೇಕೆಂಬುದು ಸ್ಪಷ್ಟ. ಹಾಗಾದರೆ ಆ ಹೆಸರು ಆವುದಿರಬಹುದು? ಯುರೋಪೀಯ ಸಂಶೋಧಕರೂ ಅವರ ಪರಿಭಾಷೆಯನ್ನೆ ಎತ್ತಿಬರೆವ ನಮ್ಮವರೂ ಆಗಾಗ್ಗೆ ಉಪಯೋಗಿಸುವ ದ್ರಾವಿಡಶಬ್ದವು ಬಹಳ ಸಂದಿಗ್ಧಾರ್ಥವುಳ್ಳುದಾಗಿದೆ. ತಮಿಳರೆ ದ್ರಾವಿಡರೆಂದು ರೂಢಾರ್ಥ ವಿರುವುದರಿಂದ ಸಂಶೋಧಕರು ಅಪೇಕ್ಷಿಸುವ ಆ ವರ್ಗದ ಎಲ್ಲ ಜನಾಂಗವಾಚಕ ವಿಶಾಲಾರ್ಥವನ್ನು ವ್ಯಕ್ತಗೊಳಿಸಲು ದ್ರವಿಡಶಬ್ದವು ಅನರ್ಹವಾಗಿದೆ. ವಿನ್ಸೆಂಟಸ್ಮಿತನು ಈ ದ್ರವಿಡ ಶಬ್ದವನ್ನು ಬಳಕೆಯಲ್ಲಿ ತರಲು ಕಾರಣನಾದ ರಿಸ್ಲೆ ಸಾಹೇಬನನ್ನು ಅಲ್ಲಗಳೆದು ಈ ದ್ರವಿಡಶಬ್ದವು "The singularly inappropriate" "one of the most misleading terms"[೩೨] ಎಂದು ದೂಷಿಸಿದ್ದಾನೆ. ನೀಲಗಿರಿ, ಕಾವೇರಿನದಿಗಳ ಮೇಗಡೆಗಂತೂ ಪ್ರಾಚೀನಕಾಲದಲ್ಲಿ ಕನ್ನಡರೆ ಪ್ರಬಲರಾದ ಜನಾಂಗದವರಾಗಿದ್ದರು. ಆದುದರಿಂದ ಸ್ಟೆನ್ ಕೋನೊ, ರಾನಡೆ ಮೊದಲಾದ ವಿದ್ವಾಂಸರು, ಮೊದಲು ಮಹಾರಾಷ್ಟ್ರದಲ್ಲಿ 'ದ್ರವಿಡರ ವಸತಿಯಿತ್ತು' ಎಂದು ಹೇಳುವಾಗ ಪ್ರಯೋಗಿಸಿದ ದ್ರಾವಿಡ ಪದಕ್ಕೆ ಪ್ರಾಮುಖ್ಯದಿಂದ ಕನ್ನಡರೆಂದಲ್ಲದೆ ಬೇರೆ ಅರ್ಥವೇ ಸಾಧ್ಯವಿಲ್ಲ. ಮುಖ್ಯವಾಗಿ ಕನ್ನಡ, ತಮಿಳು, ಜನಾಂಗವಾಚಕ ಅನಿಶ್ಚಿತಾರ್ಥವುಳ್ಳ ದ್ರವಿಡ ಶಬ್ದಕ್ಕಿಂತಲೂ 'ಕನ್ನಡ-ತಮಿಳ' 'ಕಂದಮಿಳ' ಎಂಬ ಪದವು ಹೆಚ್ಚು ಉಚಿತವಾಗಿದೆ. ಫ್ರಾನ್ಸ್‌ದೇಶದ ಪ್ರಖ್ಯಾತ ಸಂಶೋಧಕರಾದ ಜುಲೆಸ್ ಬ್ಲೊಚ್ (Jules Bloch) ರು 'ಸಂಸ್ಕೃತ ಮತ್ತು ದ್ರವಿಡ' ಎಂಬ ತಮ್ಮ ಲೇಖನದಲ್ಲಿ ಒಂದೆಡೆಗೆ .... in Dravidian Brahui is connected with Canara. Kurkh, Malto ಎಂದೂ ಇನ್ನೊಂದೆಡೆಗೆ Canara-Kurukh-Brahui group. ಎಂದೂ ಹೇಳಿದ್ದಾರೆ.[೩೩] ಇದರಿಂದ ನೀಲಗಿರಿಯಿಂದ ವಿಂಧ್ಯದ ವರೆಗೆ ಅಷ್ಟೆ ಅಲ್ಲ, ಬಲೂಚಿಸ್ತಾನದ ಮಧ್ಯಪ್ರದೇಶದಲ್ಲಿ ಮಾತನಾಡುವ ಬ್ರಾಹೂಯಿ ಭಾಷೆಯೂ ಕನ್ನಡಕ್ಕೆ ಹತ್ತಿರದ್ದು, ಕನ್ನಡರಿಗೆ ಸಂಬಂಧಪಟ್ಟುದು ಎಂದು ಧ್ವನಿತವಾಗುತ್ತದೆ. ಆದುದರಿಂದ, ಮಾಳವಾ, ಕರ್ಣಾಟ, ಕರ್ಹಾಟ, ಕೊಂಕಣಗಳು ಕನ್ನಡವರ್ಗದ ಭಾಷೆಗೆ ಸಂಬಂಧಪಟ್ಟಿದ್ದರೆ ಸೋಜಿಗವಿಲ್ಲ. ಪ್ರೊ. ಲೆವಿಯವರು ಕೋಸಲ-ತೋಸಲ, ಅಂಗ-ವಂಗಗಳ ಜೋಡುನುಡಿಯನ್ನು ತೋರಿಸಿದಂತೆ,

ಸ್ವಲ್ಪ ಅಗಿದು ನೋಡಿದರೆ, ಮೇಲ್ಕಾಣಿಸಿದ ನಾಡುಗಳ ಹೆಸರಿನ ಒಂದೊಂದು ಜೋಡಿಯೂ ಸಿದ್ಧವಾಗಿ ಕಣ್ಣೆದುರೆಗೆ ನಿಲ್ಲುವುದು. ಇವುಗಳನ್ನು ಕುರಿತು ಮೊದಲು ಸ್ವಲ್ಪ ಪರ್ಯಾಲೋಚಿಸಿದರೆ ಅದರಿಂದ ಮಹಾರಾಷ್ಟ್ರ ಶಬ್ದವೂ ಹೇಗೆ ಹೇಗೆ ಪರಿವರ್ತನೆಗಳನ್ನು ಹೊಂದಿರಬಹುದೆಂಬುದು ಚೆನ್ನಾಗಿ ಗೊತ್ತಾಗುತ್ತದೆ.

ಕನ್ನಡ-ಕರ್ಣಾಟ

ಕನ್ನಡವು ಮೂಲಶಬ್ದ; ಅದರ ಸಂಸ್ಕೃತೀಕರಣವೆ 'ಕರ್ಣಾಟ', 'ಕರ್ಣಾಟಕ' ಎಂಬ ಬಗ್ಗೆ ಈ ಭಿನ್ನಾಭಿಪ್ರಾಯಗಳು ಉಳಿದಿಲ್ಲ. ಕರಿನಾಡು, (ಕರಿದೇಶ) ಅಥವಾ ಕರುನಾಡು (ಎತ್ತರವಾದ ದೇಶ) ಇಲ್ಲವೆ ಕಮ್ಮಿತ್ತುನಾಡು (ಸುಗಂಧಯುಕ್ತವಾದ ದೇಶ) ಎಂದು ಒಂದಿಲ್ಲೊಂದು ಬಗೆಯಾಗಿ ಅಚ್ಚಕನ್ನಡದಿಂದಲೆ ಗುಂಡರ್ಟ-ಕಾಲ್ಡವೆಲ್, ಹತ್ತಂಗಡಿ ನಾರಾಯಣರಾವ ಅಥವಾ ಆರ್. ನರಸಿಂಹಾಚಾರ್ಯ ಪ್ರಭೃತಿ ವಿದ್ವಾಂಸರು ಈ ಶಬ್ದಕ್ಕೆ ಅರ್ಥವನ್ನು ಹೇಳುತ್ತಾರೆ. 'ಕನ್ನಡ' ಶಬ್ದವು (ಕನ್+ನಾಡು) ದೇಶ ವಾಚಕವೆಂಬುದನ್ನು ರಾ. ನರಸಿಂಹಾಚಾರ್ಯರು ಸಿದ್ಧಪಡಿಸಿದ್ದಾರೆ.[೩೪] ಇದಕ್ಕೆ ಪ್ರತಿಯಾಗಿ ಹೇಳಿದ ಸಂಶೋಧಕರೂ ಇಲ್ಲ. ಕರಿದುನಾಡು, ಕರುನಾಡು ಮತ್ತು ಕಮ್ಮಿತ್ತುನಾಡು ಎಂಬ ಈ ಮೂರರಲ್ಲಿ ಕರ್ಣಾಟವೆಂಬ ಸಂಸ್ಕೃತ ರೂಪವನ್ನು ತಾಳಿದುದು ಆವುದಿರಬಹುದು? ಇದರಲ್ಲಿ ಕರುನಾಡು ಆರ್ಯರ ಬಾಯಲ್ಲಿ ಕರ್ಣಾಟವಾಗಿರುವುದೆಂದು ತಿಳಿದುಕೊಳ್ಳುವುದಕ್ಕೆ ವಿಶೇಷ ಶ್ರಮಪಡಬೇಕಾಗಿಲ್ಲ. ಅಲ್ಲದೆ ಕ್ರಿ. ಶ. ೭೦೦ರ ವೆಳ್ವಿಕುಡಿ ಶಾಸನದಲ್ಲಿ ಕರುನಾಡುಗನ್ ಎಂಬ ಪದವು ದೊರೆಯುತ್ತದೆಂದು ಶ್ರೀ ಆಚಾರ್ಯರು ಹೇಳುತ್ತಾರೆ.[೩೫] ಮುಂದೆ ಕರುನಾಡಿಗಿಂತ ಕನ್ನಡವೆ ಹೆಚ್ಚಾಗಿ ಬಳಕೆಯಲ್ಲಿ ಬಂದುದರಿಂದ ಬಹಳ ಹಿಂದಿನ ಕಾಲದಿಂದಲೂ ನೋಡಲಿಕ್ಕೆ ಸಿಕ್ಕುವುದು ಕನ್ನಡ-ಕರ್ನಾಟಕವೆಂಬ ಪದಗಳೇ. ಇಂತಿದು ಕನ್ನಡ-ಕರ್ನಾಟ(ಕ)ದ ಜೋಡಿ.

ಪ್ರಾಚೀನ ಕರ್ರಾಟಪ್ರಾಂತವೆಲ್ಲ ಇದ್ದುದು ಕೃಷ್ಣಾತೀರದಲ್ಲಿ. ಕೃಷ್ಣಾನದಿಗೆ ಹಿಂದಕ್ಕೆ 'ಕಣ್ಣವಣ್ಣಾ'[೩೬] ಎಂದು ಪ್ರಾಕೃತದಲ್ಲಿಯೂ, 'ಕೃಷ್ಣವೇಣಿ'[೩೭] ಎಂದು ಸಂಸ್ಕೃತದಲ್ಲಿಯೂ ಹೇಳುತ್ತಿರಬೇಕು. ಆ ನಾಡಿನಲ್ಲಿ ಇದಕ್ಕೆ ಹಿರಿಹೊಳೆ (ಪೆರ್ದೊರೆ) ಮತ್ತು ಕರೆಹೊಳೆ ಎಂದು ಈಗಲೂ ಕರೆವುದುಂಟು. ಕನ್ನಡದ 'ಕರೆಹೊಳೆ' ಎಂಬುದರ ಭಾಷಾಂತರವೇ 'ಕೃಷ್ಣಾವರ್ಣಾ'-ಕಣ್ಣವಣ್ಣಾ ಆಗಿರಬೇಕೆಂದು ಹೇಳಲು ಇಲ್ಲಿ ಬೇಕಾದಷ್ಟು ಅವಕಾಶವಿದೆ. ಕಣ್ಣವಣ್ಣಾ (ಕೃಷ್ಣವರ್ಣಾ) ಇದೆ ಮುಂದೆ ಕೃಷ್ಣವೇಣಾ ಆಗಿರಲಿಕ್ಕೆ ಸಾಕು. ಕೃಷ್ಣಾ ತಟಾಕವೆಲ್ಲ ಕರಿನೆಲದ ಭೂಮಿ ಎಂದು ಹೇಳುವುದೂ ಬೆಳ್ದಿಂಗಳು ಬಿಳಿದು ಎಂದು ನುಡಿಯುವುದೂ ಎರಡೂ ಒಂದೇ. ಈ ಭಾಗದ ಕರೆ (ನೆಲದ) ಪಟ್ಟಿ-ಕರೆಹಟ್ಟಿಯೆ ಕರ್ರಾಟವಾಗಿ ಪರಿಣಮಿಸಿರುವ ಸಂಭವವಿದೆ. ಹೀಗೆ, ಇದು ಕರೆಹಟ್ಟಿ-ಕರ್ರಾಟಗಳ ಕೂಟ. ಮಾಳವಾದೇಶವು ಪರ್ವತಪ್ರದೇಶವೆಂದೆನ್ನುವುದು ಪಿಷ್ಟಪೇಷಣನ್ಯಾಯ! ಏಕೆಂದರೆ 'ಮೇಲೆ' ಎಂದರೆ ಗುಡ್ಡ, ಬೆಟ್ಟ, ಕನ್ನಡನುಡಿಯಲ್ಲಿ. ನಾಸಿಕದ ಹತ್ತರಿನ ಗವಿಶಾಸನಗಳಲ್ಲಿ ಒಂದರೊಳಗೆ ಇದಕ್ಕೆ 'ಮಲಯ'ವೆಂದು ಹೇಳಿದ್ದಾಗಿದೆ.[೩೮] ಮಲೆಗಳ (ಗುಡ್ಡ ಬೆಟ್ಟಗಳ) ನಾಡಿಗೆ 'ಮಲೆನಾಡ' 'ಮಲ್ಲಾಡ' ಎಂಬುದಾಗಿ ಈಗಲೂ ಪ್ರಯೋಗಿಸುವುದುಂಟು. ಮರಾಠಿ ಭಾಷೆಯಲ್ಲಿ ಎತ್ತರವಾದ ಪ್ರದೇಶಕ್ಕೆ ತಪ್ಪಲುಭೂಮಿಗೆ 'ಮಾಳ' ಎನ್ನುವರು. ಮಲೆಯದೇಶವು ಮಾಳವದೇಶವೆಂದು ನಾಮಾಭಿದಾನವನ್ನು ಹೊಂದುವುದು ಅಶಕ್ಯವೆ? ಇಂತಿದು 'ಮಲಯ-ಮಾಳವ'.

ಕೊಂಕಣಕ್ಕೆ ಸಂಸ್ಕೃತದಲ್ಲಿರುವ ಪರ್ಯಾಯ ನಾಮ ಅಪರಾಂತ ಅಥವಾ ಅಪರಾಂತಕ. ಕೊಂಕಣದ ವ್ಯುತ್ಪತ್ತಿಯನ್ನು ಡಾ. ಚವ್ಹಾಣ, ಶ್ರೀ ಕಾಣೆ ಮೊದಲಾದವರು ಹಲವು ಬಗೆಗಳಿಂದ ಹೇಳಿದ್ದಾರೆ. ಆದರೆ, ಅವುಗಳಲ್ಲಿ ಆವುದೂ ಸಮಾಧಾನಕರವಾಗಿಲ್ಲವೆಂದು ಡಾ. ಕೇತಕರರ ಅಭಿಪ್ರಾಯ (ಅವರಿಂದ ಸಂಪಾದಿತವಾದ ಮಹಾರಾಷ್ಟ್ರ ಜ್ಞಾನಕೋಶ ನೋಡಿರಿ). ಕೊಂಕಾದ ಅಂದರೆ ವಕ್ರವಕ್ರವಾಗಿರುವ, ಸಮನಾದ ಭೂಮಿಯಿಲ್ಲದ ದೇಶವೆಂದು ಕನ್ನಡಭಾಷೆಯಿಂದಲೇ ಇದರ ವ್ಯುತ್ಪತ್ತಿಯನ್ನು ಕೆಲವರು ಹೇಳುವುದುಂಟು.

ಆದರೆ, ಡಾ. ಕೇತಕರರು ಹೇಳುವಂತೆ ಇವಾವುವೂ ಅಷ್ಟು ತೃಪ್ತಿಕರವಾಗಿಲ್ಲ. ಅಪರಾಂತಕ ಶಬ್ದದಿಂದ ಹಿಂದೆ ಹೊರಟರೆ ಏನೊ ಸ್ವಲ್ಪ ಎಳೆಸಿಕ್ಕುವ ಹಾಗೆ ತೋರುತ್ತದೆ. ಆರ್ಯರು ಈ ನಾಡಿಗೆ ಅಪರಾಂತಕವೆಂದಿಟ್ಟ ಹೆಸರು 'ಕೃಷ್ಣಾ' ನದಿಯ ಹೆಸರಿನಂತೆ ಆವುದೊಂದು ದೇಶೀಯ ಶಬ್ದದ ಭಾಷಾಂತರವಿರಲಿಕ್ಕಿಲ್ಲವಷ್ಟೆ? ಅಪರಾಂತಕ ಶಬ್ದದ ಅರ್ಥವಾದರೂ ಏನು? 'ಪಶ್ಚಿಮದ ಕೊನೆಯ ತುದಿ' ಎಂದು ಹೇಳುವವರು ಕೆಲರು. ಉತ್ತರಭಾರತದಲ್ಲಿದ್ದ ಆರ್ಯರಿಗೆ ಅಪರಾಂತಕವೆಂದರೆ 'ಪಶ್ಚಿಮದ ಕೊನೆಯ ತುದಿ'ಯಾಗುವ ಬಗೆ ಹೇಗೆ? ಆದುದರಿಂದ, ಇದು ಮುಂದೆ ಕಾಲಾಂತರದಿಂದ ಆರ್ಯರು ದಕ್ಷಿಣದಲ್ಲಿ, ಗೋದಾವರಿ ಕೃಷ್ಣಾತೀರದಲ್ಲಿ ನೆಲೆಸಿದ ಬಳಿಕ ಬದಲಾವಣೆ ಹೊಂದಿದ ಹೊಸತಾಗಿ ಸೇರಿಕೊಂಡ ಅರ್ಥವಾಗಿರಬೇಕು. ಅದಕ್ಕೂ ಮೊದಲಿನ ಅರ್ಥವೆನಿಸಬಹುದು ಹಾಗಾದರೆ? ಕೊಂಕಣವು ಸಪ್ತಪಾತಾಲಗಳಲ್ಲಿ ಒಂದು ಎಂದು ಅತಿ ಪ್ರಾಚೀನಕಾಲದಿಂದಲೂ ರೂಢವಾಗಿರುವ ಕಲ್ಪನೆ. ಸಪ್ತಕೊಂಕಣದ ಉಲ್ಲೇಖವು ಶಾಸನಗಳಲ್ಲಿ, ಬಂದಿದೆ. ಕೊಂಕಣವು ನಾಗರರ ಆಗರ. ನಾಗರರು ಪಾತಾಲ ನಿವಾಸಿಗಳು. 'ಪಾತಾಲ' ಶಬ್ದಕ್ಕೆ ಅಧೋಲೋಕವೆಂದು ಸಂಸ್ಕೃತಕೋಶಗಳಲ್ಲಿ ಅರ್ಥವು ದೊರೆಯುತ್ತದೆ. ಉತ್ತರದವರಿಗೆ ಅಧೋಭಾಗ-ಕೆಳಗಿನ ಪ್ರದೇಶವೆಂದರೆ ದಕ್ಷಿಣ; ತೆಂಕಣ. ದಕ್ಷಿಣ-ತೆಂಕಣವು ಅಂತಕನ ಲೋಕ. ಆದುದರಿಂದ, ತೆಂಕಣಕ್ಕೆ (ಅಪರ+ಅಂತಕ) ಅಪರಾಂತಕವೆಂಬ ಭಾಷಾಂತರವು ಸಂಸ್ಕೃತದಲ್ಲಿ ರೂಢವಾಗಿರ ಬೇಕೆಂದು ತೋರುತ್ತದೆ. ಒಂದು ಅಂತಕ ದಿಕ್ಕು-ದಕ್ಷಿಣದೇಶವು- 'ದಕ್ಷಿಣಾಪದ'ವು ಈ ಮೊದಲೆ ಗೊತ್ತಿರಬೇಕು. ಗುಡ್ಡ, ಕಾಡಿನಲ್ಲಿ ಸಿಕ್ಕಿಕೊಂಡಿರುವ ಅಪರ-ಇನ್ನೊಂದು ಅಂತಕವು ತಿಳಿದ ಬಳಿಕ ಅದಕ್ಕೆ ಅಪರಾಂತಕವೆಂಬ ಹೆಸರು ಬಂದಿರಬೇಕು. ಮೋಲಿಯರು ವಿಲಿಯಮ್ಸ್, ಆಪ್ಟೆಯವರ ಕೋಶದಲ್ಲಿ ಈ ಬಗೆಯ ಅರ್ಥಕ್ಕೂ ಬೇಕಾದ ಹಾಗೆ ಅವಕಾಶವಿದೆ. ಆದಕಾರಣ 'ಅಪರಾಂತ'ವೆಂಬ ಸಂಸ್ಕೃತ ಶಬ್ದಕ್ಕೆ ಮೂಲಕಾರಣವಾದ 'ತೆಂಕಣ' (ದಕ್ಷಿಣ) ವೆಂಬುದು ಈ ನಾಡಿನ ಮೊದಲ ಹೆಸರಿರಬೇಕು. ಪ್ರೊ. ಲೆವಿಯವರು ಹೇಳುವ ತೋಸಲವೆಂಬ ಪ್ರಾಚೀನ ಶಬ್ದವು ಕೋಸಲವಾದಂತೆ[೩೯] ತೆಂಕಣವು ಕೊಂಕಣವಾಗಿ ಮಾರ್ಪಟ್ಟಿರಬೇಕು. ಈ ಬಗೆಯಾಗಿ ಆದುದು ತೆಂಕಣ-ಕೊಂಕಣ.

ಈ ಪ್ರಕಾರವಾಗಿ, ಮಹಾರಾಷ್ಟ್ರದ ಕೆಲಬಲದ ನಾಡುಗಳ ಹೆಸರಿನ ಕನ್ನಡ-ಕರ್ಣಾಟ, ಕರೆಹಟ್ಟಿ-ಕರ್ಹಾಟ, ಮಲೆಯ-ಮಾಳವ, ತೆಂಕಣ-ಕೊಂಕಣವೆಂಬ ಜೋಡಿಯು ಸಿದ್ಧವಾಯಿತು. ಇದರಂತೆ, ಮಹಾರಾಷ್ಟ್ರದ ಮೂಲವು ಏನಿರಬಹುದು? ದೇಶಕ್ಕೂ ಭಾಷೆಗೂ ಏನೊ ಒಂದು ಬಗೆಯ ಅಭೇದ್ಯ ಸಂಬಂಧವು ಪ್ರಪಂಚದ ಎಲ್ಲ ನಾಡುಗಳಲ್ಲಿಯೂ ಕಾಣಬರುತ್ತದೆ. ಸಂಸ್ಕೃತ, ಪಾಲಿ, ಪ್ರಾಕೃತ, ಮುಸಲ್ಮಾನಿ ಈ ಬಗೆಯ ಕೆಲವು ಭಾಷೆಗಳು ಈ ನಿಯಮಕ್ಕೆ ಹೊರತಾಗಿರುವವಾದರೂ ಇಂತಹ ಅಪವಾದಗಳಿಂದ ಮೂಲ ನಿಯಮವೆ ಇನ್ನಿಷ್ಟು ದೃಢಪಡಿಸುತ್ತಲಿದೆ. ಬಂಗಾಳದೇಶದ ಭಾಷೆ ಬಂಗಾಳಿ; ಸಿಂಧ ದೇಶದ ಭಾಷೆ ಸಿಂಧಿ; ಆದರೆ, ಮಹಾರಾಷ್ಟ್ರ ದೇಶದ ಭಾಷೆಯ ಹೆಸರು ಮಾತ್ರ ಮರಾಠಿ!

ಮರ್ಹಾಟಿ-ಮರಾಠಿ

'ಮರಾಠಿ' ಎಂಬ ವಿಕೃತರೂಪವೆ ಈವರೆಗಿನ 'ಮಹಾರಾಷ್ಟ್ರ ಶಬ್ದದ ವ್ಯುತ್ಪತ್ತಿಗಳನ್ನೆಲ್ಲ ಬುಡಮೇಲು ಮಾಡಲು ಮೂಲಕಾರಣ. 'ಮರಾಠಿ'ಯಿಂದ ಮಹಾರಾಷ್ಟ್ರ ಶಬ್ದವು ಸಿದ್ಧವಾಯ್ತೆಂದು ಕೆಲರು ಗ್ರಹಿಸಿದರು.[೪೦] 'ಮರಾಠಿ' ಎಂಬ ಶಬ್ದವು ಪ್ರಾಚೀನ ರೂಪವೆಂದು ಭಾವಿಸಿ ಅದನ್ನು ವಿಗ್ರಹಿಸಿ, ಅರ್ಥವನ್ನು ಅರೆದು ಅರೆದು ನೋಡಲಾರಂಭಿಸಿದರು! ಮಹಾ+ರಠಿ, ಮಹಾ+ರಠ ಎಂದು ಮುಂತಾಗಿ ಕಡಿದು ಕತ್ತರಿಸಿ ಅರಿದು ಕೊರೆದು ನೋಡಿದ್ದಾಯಿತು! ಆದರೇನು ರಠ-ರಾಠ, ರಟ್ಟ ಯಾರೊಡನೆಯೂ ತಾಳಮೇಳ ಬೀಳಲಿಲ್ಲ! 'ಮರಾಠಿ' ಎಂಬ ಶಬ್ದವೆ ಮೊದಲು ತೀರ ಅರ್ವಾಚೀನ. ಜ್ಞಾನೇಶ್ವರೀ ಹಾಗೂ ಅದಕ್ಕೂ ಹಿಂದಿನ ಲೇಖಕರಾದ ಮಹಾನುಭಾವಪಂಥದವರ ಗ್ರಂಥಗಳು ಬೆಳಕಿಗೆ ಬಂದ ಬಳಿಕ ಇದರ ನಿಜಸ್ವರೂಪವು ವ್ಯಕ್ತವಾಯಿತು.

ಆದಿಕವಿಯೆನಿಸಿದ ಜ್ಞಾನೇಶ್ವರನಾಗಲಿ, ಅವನಿಗಿಂತ ಮುಂಚಿನ ಮಹಾನುಭಾವ ಪಂಥದವರಾಗಲಿ ಅಪ್ಪಿತಪ್ಪಿ ಒಮ್ಮೆಯಾದರೂ 'ಮರಾಠಿ' ಎಂಬ ಪದವನ್ನು ಪ್ರಯೋಗಿಸಿಲ್ಲ; ಅವರೆಲ್ಲ ಬರೆದಿರುವುದು ಮರ್ಹಾಟಿ (ಮಹಾಟೀ) ಎಂದು! ಸುಮಾರು ೧೩ನೆಯ ಶತಮಾನದ ಹಿಂದೆ 'ಮರಾಠಿ' ಎಂಬ ಪದವು ದೊರೆಯುವುದು ಅಸಾಧ್ಯ. ಅವರ ಪ್ರಾಚೀನ ಸಾಹಿತ್ಯದಲ್ಲೆಲ್ಲ ಇದ್ದುದು ಮರ್ಹಾಟಿ ಎಂದು ಮಾತ್ರ. ಹದಿಮೂರನೆಯ ಶತಮಾನದ ಮುಂದೆ ಮರ್ಹಾಟಿಯು ಮುಸಲ್ಮಾನರ ಸಂಪರ್ಕದಲ್ಲಿಯೇ ಬೆಳೆಯಿತು. ಈ ಭಾಗದಲ್ಲಿ ಮುಸಲ್ಮಾನರು ಕಾಲೂರಿ ನಿಂತರು. ಅವರ ಉಚ್ಚಾರ (accent) ಪದ್ಧತಿಯ ಪರಿಣಾಮವಾಗಿ ಮರ್ಹಾಟಿಯು ಮರಾಠಿ ಆಗಿರುವ ಸಂಭವವಿದೆ. ಆದುದರಿಂದ 'ಮರಾಠಿ' ಎಂಬ ವಿಕೃತರೂಪವನ್ನು ನಂಬಿ ಮರಾಠಿಯಿಂದ ಮಹಾರಾಷ್ಟ್ರವಾಯಿತೆಂದು ಗ್ರಹಿಸಿದ್ದು ತೀರ ತಪ್ಪು; ಮಹಾರಾಷ್ಟ್ರ ಶಬ್ದದೊಡನೆ ಸಂಬಂಧ ಸೂತ್ರಗಳನ್ನು ಜೋಡಿಸುವುದೇ ಆದರೆ ಅವನ್ನು ಪ್ರಾಚೀನ ಶಬ್ದವಾದ ಮರ್ಹಾಟಿಯೊಡನೆ ಸರಿಹೊಂದಿಸಿಕೊಳ್ಳುವುದೆ ಉಚಿತವಲ್ಲವೆ?

ಈ ಭಾಷೆಯ ಮೊಟ್ಟಮೊದಲಿನ ಹೆಸರು ಮರ್ಹಾಟಿ; ಮುಂದೆ ಉಚ್ಚಾರ ಸೌಲಭ್ಯಕ್ಕಾಗಿ ಜನಗಳ ಬಾಯಲ್ಲಿ ಮರಾಠಿಯೆಂದಾಗಿರಬೇಕು. ಭಾಷಾಶಾಸ್ತ್ರದೊಳಗಿನ ಈ ನಿಯಮದ ಮನವರಿಕೆಗಾಗಿ ಬೇಕಾದ ಒಂದು Philologyಯ ಪುಸ್ತಕವನ್ನು ನೋಡಿಕೊಳ್ಳಬಹುದು[೪೧] ಮಹಾರಾಷ್ಟ್ರವೆಂಬ ಶಬ್ದಕ್ಕಿಂತ ಮರ್ಹಾಟವೆಂಬ ಪದಕ್ಕೆ ಮರಾಠವು ಹೆಚ್ಚು ಹತ್ತಿರದ್ದಾಗಿದೆ. ರಕಾರಕ್ಕಿದ್ದ ಹಕಾರವು ಕೊನೆಯ ಟಕಾರಕ್ಕೆ ಸೇರಿ ಅದು ಮಹಾಪ್ರಾಣವಾಯ್ತು; ಇದಿಷ್ಟೆ ಬದಲಾವಣೆ. ಆದರೆ, ಮಹಾರಾಷ್ಟ್ರವು ಮರಾಠವಾಯಿತೆಂದು ಕಲ್ಪಿಸಿದರೆ ಅದೆಷ್ಟು ವ್ಯತ್ಯಾಸ! ಹಿಂದೆ, ಒಂದು ಕಾಲಕ್ಕೆ, ನಡುವಿನ (ರಕಾರ) ಅಕ್ಷರದ ಮೇಲಿದ್ದ ಆಘಾತವು (accent) ಬದಲಾಗಿ ಕೊನೆಯಕ್ಷರದ ಮೇಲೆ ಬೀಳಲಾರಂಭಿಸುತ್ತಲೆ ಈ ಬಗೆಯಾಗಿ ಶಬ್ದದೇಹದಲ್ಲಿ ಬದಲಾವಣೆಯಾಗಿರಬೇಕು. ನಡುವಿನ ಅಕ್ಷರದ ಮೇಲಿದ್ದ ಆಘಾತವು ಮೊದಲಕ್ಷರದ ಮೇಲೆ ಬಿದ್ದಾಗ ಸಹ ಶಬ್ದದೇಹದಲ್ಲಿ ವ್ಯತ್ಯಾಸವಾಗುವುದುಂಟು. ಕವಡಿ ಹೋಗಿ ಕೌಡಿ ಆದದು ಇದೇ ಬಗೆಯಿಂದ. 'ಮರ್ಹಾಟಿ' ಶಬ್ದಕ್ಕೆ ಸಹ ಒಂದು ಕಾಲದಲ್ಲಿ ಆರಂಭಾಕ್ಷರದ ಮೇಲೆಯೆ ಆಗಾತವಿರಬೇಕೆಂದು ಎನಿಸುತ್ತದೆ ಮತ್ತು ಅದಕ್ಕನುಸರಿಸಿ ಮರ್ಹಾಟ ಶಬ್ದವನ್ನು ಉಚ್ಚರಿಸಿದ್ದಾದರೆ "ಮರಹಟ್ಟ" ಎಂದು ಹೇಳದೆ ಗತ್ಯಂತರವಿಲ್ಲ. ಶ್ರೀಮಾನ್ ಭಾಗವತ ಮೊದಲಾದ ಸಂಶೋಧಕರು ಇದಾವ ವಿಚಾರವು ಇನ್ನೂ ತಲೆದೋರದ ಕಾಲದಲ್ಲಿ ಹಿಂದಕ್ಕೆ ತಮ್ಮ ಲೇಖನಗಳಲ್ಲಿ ಕೆಲವೆಡೆಗೆ 'ಮರಹಟ್ಟ' ಎಂಬುದಾಗಿ ಬರೆದುದು ವಿಚಾರಾರ್ಹವಾಗಿದೆ.[೪೨]

ಭಾಷೆಯ ನಿಜವಾದ ಹೆಸರು 'ಮರ್ಹಾಟಿ'ಯೆಂದಿರಬೇಕಲ್ಲವೆ. ಮರ್ಹಾಟಿ ಭಾಷೆಯ ಮಾತೃಭೂಮಿಯು ವರ್ಹಾಟವೆಂಬ ಬಗ್ಗೆ ಮಹಾರಾಷ್ಟ್ರದಲ್ಲಿ ಮತಭೇದವೇ ಇಲ್ಲ. ಆದುದರಿಂದ, ವರ್ಹಾಟದ ಹೆಸರು ಒಂದು ಕಾಲಕ್ಕೆ ಮರ್ಹಾಟವೆಂಬುದಾಗಿಯೂ ಇರಬೇಕೆಂದು ಊಹಿಸಿದರೆ ತಪ್ಪೇನು? ಇದನ್ನು ಸಪ್ರಮಾಣವಾಗಿ ಸಿದ್ಧಪಡಿಸುವುದು ಅವರಿಂದ ಆಗದಿದ್ದರೂ ಶ್ರೀ ಜೋಶಿ ಮತ್ತು ಶ್ರೀ ಭಿಡೆಯವರು ತಮ್ಮ ಗ್ರಂಥಗಳಲ್ಲಿ 'ವರ್ಹಾಡ-ವಿದರ್ಭದಲ್ಲಿಯೆ ಮರಾಠಿಯ ಮೂಲವು ದೊರೆಯುತ್ತದೆ.' ಎಂದು ಸೂಚ್ಯವಾಗಿ ಹೇಳಿದ್ದಾರೆ[೪೩] ಅದು ಏನೆ ಇರಲಿ, ವರ್ಹಾಟದ ಹೆಸರು ಒಂದು ಕಾಲಕ್ಕೆ ಮರ್ಹಾಟವೆಂದೂ ಇದ್ದಿತೆಂದು ಗ್ರಹಿಸಲು ಏನೂ ಅಡ್ಡಿ ತೋರುವುದಿಲ್ಲ. ಈ ಪ್ರಕಾರವಾಗಿ ಮರ್ಹಾಟ-ವರ್ಹಾಟವು ಕನ್ನಡ ಕರ್ಣಾಟ, ಕರೆಹಟ್ಟ-ಕರ್ಹಾಟಗಳ ಸಾಲಿಗೆ ಬಂದು ನಿಂತಿತು. ಈ ಬಗೆಯ ಜೋಡಿ ನುಡಿಗಳು ಭಾಷೆಯಲ್ಲಿ ಕಾರಣವಿಲ್ಲದೆ ಕಾಣಸಿಕೊಳ್ಳುವುದಿಲ್ಲ. 'ಧಾರವಾಡ'ವು 'ಡಾರವಾರ್', 'ಧಾರವಾರ್' ಆಗಿ ಎಷ್ಟೋ ಜನಗಳ ಬಾಯಲ್ಲಿರುವುದಕ್ಕೆ ಯಾವ ಕಾರಣವೊ ಅದೇ ಕಾರಣವೆ ಮೇಲ್ಕಾಣಿಸಿದಂತಹ ಜೋಡಿಗಳು ಬಳಕೆಯಲ್ಲಿ ಬರುವುದಕ್ಕೂ ಪರಭಾಷೆಯೊಳಗಿನ ಶಬ್ದಗಳನ್ನು ತನ್ನ ನುಡಿಯ ಸೊಲ್ಲಿನಂತೆ ಉಚ್ಚರಿಸಲು ಯತ್ನಿಸುವುದು ಮನುಷ್ಯ ತನ್ನ ನುಡಿಯ ಸೊಲ್ಲಿನಂತೆ ಉಚ್ಚರಿಸಲು ಯತ್ನಿಸುವುದು ಮನುಷ್ಯಸ್ವಭಾವ. ಮೊದಮೊದಲು ಪರಭಾಷೆಯೊಳಗಿನ ಶಬ್ದಗಳನ್ನು ಆ ಮೂಲ ಉಚ್ಚಾರವನ್ನು ಅನುಸರಿಸಿ ಹೇಳುವುದಕ್ಕೆ ಪರಿಶ್ರಮಪೂರ್ವಕವಾಗಿ ಪ್ರಯತ್ನಗಳು ನಡೆಯುವುದುಂಟು. ಆದರೆ, ಅಷ್ಟು ಎಚ್ಚರಿಕೆ ಮುಂದೆ ಉಳಿಯುವುದಿಲ್ಲ.

ಹೀಗೆ ಮಾತನಾಡುವವನಿಗೆ ತನ್ನ ಭಾಷೆಯ ಚಂದ (ಛಂದ) ಕ್ಕೆ ಅದರಿಂದ ಕುಂದು ಬರುತ್ತದೆಯೆಂದು ಕಿವಿಯು ಅಡಿಗಡಿಗೆ ಹೇಳಲಾರಂಭಿಸುತ್ತಲೆ, ಮನುಷ್ಯನು ಅದನ್ನು ತನ್ನ ಮಾತಿಗೆ ಬಗೆಹರಿವಂತೆ ಮಾರ್ಪಡಿಸಿಕೊಂಡು ಬಿಡುವನು ಅಥವಾ ತನ್ನ ತಾನೆ ಅದು ಹಾಗೆ ಮಾರ್ಪಡುವುದೆಂದು ಹೇಳುವುದೇ ಹೆಚ್ಚು ಸರಿಯಾದುದು. ಭಾಷಾಶಾಸ್ತ್ರ ವಿಶಾರದರ ಅಭಿಪ್ರಾಯವಾದರೂ ಇದರಿಂದ ಬೇರೆಯಿಲ್ಲ. ಎಚ್. ಸಿ. ವಾಯಿಲ್ದರು ಏನು ಹೇಳುತ್ತಾರೆ.

> "Words borrowed in this direct way usually have the nearest approximate pronounciation to the original which borrowers can manage, the subsiquent history of the prononciation of these words is identical with that which the sounds which they contain undergo in native words in the language into which they have passed"[೪೪]

ಈಗಿನ ಮರಾಠಿ ಭಾಷೆಯ ಉಚ್ಚಾರಗಳನ್ನು ನೋಡಿದರೆ ಅದರಲ್ಲಿ ಆರಂಭಾಕ್ಷರದ ಮೇಲೆ ಆಘಾತವಿರುವ ಶಬ್ದಗಳು ಬಹಳ ಕಡಿಮೆಯೆಂದು ಹೇಳಬೇಕಾಗುತ್ತದೆ. ಕನ್ನಡದಲ್ಲಿ ಮುಖ್ಯವಾಗಿರುವುದು ಆರಂಭಾಕ್ಷರದ ಮೇಲಿನ ಆಘಾತ. ವಿಷಯ ದಿವಸ, ಪುಸ್ತಕ ಈ ಶಬ್ದಗಳ ಎರಡೂ ಭಾಷೆಯ ಸೊಲ್ಲಿನ ರೀತಿಯನ್ನು ನೋಡಿದರೆ ಇದರ ಮನವರಿಕೆಯಾಗಬಹುದು. ಆದುದರಿಂದ, ಮೊಟ್ಟಮೊದಲಿಗೆ ಇರಬಹುದೆಂದು ಮರಾಠಿ ಸಂಶೋಧಕರು ಊಹಿಸುವ 'ಮರಹಟ್ಟ' ಶಬ್ದವು ಪ್ರಥಮಾಕ್ಷರದ ಮೇಲೆ ಆಘಾತವಿಲ್ಲದ ಮರಾಠಿಗಳ ಬಾಯೊಳಗೆ 'ಮರ್ಹಾಟ' 'ಮರ್ಹಾಟಿ' ಎಂದು ಆಗಿರುವುದು ಸ್ವಾಭಾವಿಕವಾಗಿದೆ. ಕರೆಹಟ್ಟ-ಕರ್ಹಾಟ, ತೋಸಲ-ಕೋಸಲಗಳ ಬದಲಾವಣೆಯ ಗುಟ್ಟಾದರೂ ಇದೆ. ಈ ಬದಲಾವಣೆ ನಡೆದುದು ಘುಣಾಕ್ಷರನ್ಯಾಯದಿಂದ. ಘುಣಾಕ್ಷರನ್ಯಾಯದಲ್ಲಿ ಒಂದು ಬಗೆಯ ಅರ್ಥವಿದೆಯೆಂದರೆ ಇದೆ, ಇಲ್ಲವೆಂದರೆ ಇಲ್ಲ. ಕಟ್ಟಿಗೆಯನ್ನು ಕೊರೆದು ತೂತು ಕೆಡುಹುವುದು ಗುಂಗೀಹುಳದ ಸ್ವಭಾವವಷ್ಟೆ, ಅದರಲ್ಲಿ ಅದಾವ ಬಗೆಯ ಉದ್ದೇಶವಿಲ್ಲದಿದ್ದರೂ ಸಹಜವಾಗಿಯೆ ಕೆಲವು ಸಾರೆ ಆಕೃತಿಗಳು, ಅಕ್ಷರಗಳು ತನ್ನ ತಾನೆ ನಿರ್ಮಿತವಾಗುವುದುಂಟು! ಹಾಗೆ ಮನುಷ್ಯನು ಪರಭಾಷೆಯಿಂದೆತ್ತಿಕೊಂಡು ಆಡಬೇಕಾದ ಮಾತುಗಳು ಅವನ ಸೊಲ್ಲಿಗೆ ಸರಿಹೋಗುವಂತೆ ಅವು ಮಾರ್ಪಡುವಾಗ ಎಷ್ಟೋಸಾರೆ ಅದರಲ್ಲಿ ಕೆಲವೊಂದು ಅರ್ಥವು ಹೊಳೆಯುವಂತೆ ಬದಲು ಆದುದು ಗೋಚರವಾಗುತ್ತದೆ. ಕರುನಾಡು-ಕನ್ನಡವೆಂದರೇನು ಅರ್ಥವಾಗ ಬೇಕು. ಸಂಸ್ಕೃತದವರಿಗೆ? ಅದೆ ಶಬ್ದವು ಕರ್ಣಾಟವೆಂದು ಮಾತನಾಡುತ್ತಲೆ ನೋಡಿ! ಕರ್ಣದಿಂದ ಕರ್ಣಕ್ಕೆ ಅಲೆಯುವ ನುಡಿ ಎಂದು ಅರ್ಥ ಪ್ರತೀತಿಯಾಯ್ತು! "ಕರ್ಣಾಟನೇನ ತೂರ್ಣಂ" ಎಂದು ಭಟ್ಟಾಕಲಂಕನು ಹೇಳುತ್ತಾನೆ. ಸಂಸ್ಕೃತರು ದೇಶೀಯ ಶಬ್ದಗಳನ್ನು ಎತ್ತಿಕೊಂಡು ಅವಕ್ಕೆ ಸಂಸ್ಕೃತಭಾಷೆಯಿಂದ ಅರ್ಥಹೇಳುತ್ತಿರುವುದು ಅತಿ ಪ್ರಾಚೀನ ಕಾಲದಿಂದಲೂ ನಡೆದು ಬಂದ ರೂಢಿ. ಕುಮಾರಿಲಭಟ್ಟನ ತಂತ್ರವಾರ್ತಿಕದಲ್ಲಿ ಈ ರೂಢಿಗೆ ಇನ್ನೂ ಹಲವು ನಿದರ್ಶನಗಳು ದೊರೆಯುವುವು. ದ್ರಾವಿಡಾದಿ ಭಾಷೆಗಳಿಂದ 'ಪಾವು' ಎಂಬ ಮುಂತಾದ ಶಬ್ದಗಳನ್ನು ಎತ್ತಿಕೊಳ್ಳುವುದು; "ಸತ್ಯಮ್ ಪಾಪವಿವ ಅಸೌ"-ಸರಿ, ಪಾಪಮಯವಾದ ಪ್ರಾಣಿ ಆದುದರಿಂದ ಅದು ಪಾವು, ಪಾವ ಎಂದು ಅರ್ಥ ಹೇಳುವುದು![೪೫] 'ಸುಲ್ತಾನ'ದ ಸಂಸ್ಕೃತೀಕರಣವಾಗಿ 'ಸುರತ್ರಾಣ' ಶಬ್ದವಾಯಿತೆಂದು ಬಲ್ಲವರು ಹೇಳುತ್ತಾರೆ. 'ಅಂಡರಸನ್' ಎಂಬ ಹೆಸರನ್ನು 'ಇಂದ್ರಸೇನ'ವೆಂದು ಪರಿವರ್ತಿಸಿ ಕೊಂಡುದು ಪೇಶ್ವೆ ದರಬಾರಿನ ಕಾಗದ-ಪತ್ರಗಳಲ್ಲಿ ದೊರೆಯುತ್ತದೆ. 'ಪ್ರಾಮಿಸರಿ' ನೋಟು 'ಪರಮೇಶ್ವರಿ' ನೋಟು ಆದುದು ಹಳ್ಳಿಗರ ಮಾತಿನಲ್ಲಿ ಕಂಡುಬರುತ್ತದೆ. ಇವೆಲ್ಲ ಉದಾಹರಣೆಗಳಿಂದ ತಿಳಿದುಬರುವುದೇನೆಂದರೆ, ಪರಭಾಷೆಯಿಂದ ಬಂದ ಶಬ್ದಗಳ ವ್ಯತ್ಯಾಸವು ಆ ಶಬ್ದಗಳನ್ನು ಎತ್ತಿಕೊಂಡು, ಆಡತಕ್ಕವನ ಸೊಲ್ಲಿಗೆ ತಕ್ಕಂತೆ ಆಗುವುದಲ್ಲದೆ ಕೆಲವು ಸಾರೆ ಅದರಲ್ಲಿ ಒಂದು ಅರ್ಥವು ಗೋಚರವಾಗುವಂತೆಯೂ ಮಾರ್ಪಡುವುದುಂಟು.

ಈ ತೆರನಾಗಿಯೆ ಮರ್ಹಾಟವು ವರ್ಹಾಟವಾಗಿರಬೇಕು. ಮರ್ಹಾಟವೆಂದರೆ ಪ್ರಾಕೃತರಿಗೆ ಅರ್ಥಶೂನ್ಯ! ವರ (ಶ್ರೇಷ್ಠವಾದ) ಹಾಟ (ಪ್ರದೇಶ)ವೆಂದರೆ ಎಷ್ಟು ಸೊಗಸಾದ ಅರ್ಥ!

ವರ್ಹಾಟ ಶಬ್ದದ ವ್ಯುತ್ಪತ್ತಿಯನ್ನು ಕುರಿತು ಮಹಾರಾಷ್ಟ್ರ ವಿದ್ವಾಂಸರಲ್ಲಿರುವ ಭಿನ್ನಭಿಪ್ರಾಯಗಳನ್ನು ನೆನೆದರೆ ಆ ಶಬ್ದದ ಸಮಾಧಾನಕರವಾದ ನಿರ್ಣಯವು ಇನ್ನೂ ಆಗಿಲ್ಲವೆಂಬ ಮಾತು ಅನುಭವಕ್ಕೆ ಬರುತ್ತದೆ. ಕೃ. ಪಾ. ಕುಲಕರ್ಣಿಯವರು ವರ್ಧಾ+ತಟ ಅಥವಾ ವಧಾ+ಆಹಾರವೆಂದು ಎರಡು ಬಗೆಯಿಂದ ಇದರ ವ್ಯುತ್ಪತ್ತಿಯನ್ನು ಸೂಚಿಸುತ್ತಾರೆ.[೪೬] ಆದರೆ, ಡಾ. ಕೇತಕರರು "ವರ್ಹಾಡ ಯಾ ನಾವಾಚಿ ವ್ಯುತ್ಪತ್ತಿ ನಿಶ್ಚಿತ ನಾಹಿ" ಎಂದು ಮಹಾರಾಷ್ಟ್ರ ಜ್ಞಾನಕೋಶದಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ. ಶ್ರೀ ರಾಜವಾಡೆ, ಡಾ. ಕುಲಕರ್ಣಿ ಮೊದಲಾದವರು 'ವರ್ಧಾ' ನದಿಯ ಮೇಲಿಂದ ಈ ನಾಡಿಗೆ ವರ್ಹಾಟವೆಂಬ ಹೆಸರು ಬಂದಿತೆಂದು ಹೇಳುವರು. ನದಿಯಿಂದ ನಾಡಿಗೆ ಹೆಸರು ಬಂದ ಉದಾಹರಣೆಗಳುಂಟು; ಇಲ್ಲವೆಂದಲ್ಲ. ಆದರೆ, ಅವು ಆ ನಾಡಿನ ಮಹಾನದಿಗಳಾಗಿದ್ದಲ್ಲಿ ಮಾತ್ರ. ಸಿಂಧುನದಿಯಿಂದ ಸಿಂಧ, ಗೋದಾವರಿನದಿಯಿಂದ ಗೋದಾವರಿ ಜಿಲ್ಲೆಗಳು ಆದುದುಂಟು. ಅಲ್ಲಿಯ ನದಿಗಳು ಆ ನಾಡಿನ ಜೀವಾಳದಂತಿವೆ. ಆದುದರಿಂದ ಅದು ಅಲ್ಲಿ ಸರಿ. ಆದರೆ, 'ವರ್ಧಾ' ಇದು ವರ್ಹಾಟದ ಮುಖ್ಯ ನದಿಯಲ್ಲ. ಮಹಾರಾಷ್ಟ್ರ ಜ್ಞಾನಕೋಶದಲ್ಲಿ ವರ್ಹಾಡದ ಭೌಗೋಲಿಕ ವಿವರಣೆಯಲ್ಲಿ "ತಾಪಿ, ಪೂರ್ಣಾ, ಮೈನಗಂಗಾ, ಇವು ಇಲ್ಲಿಯ ಮುಖ್ಯನದಿಗಳು" ಎಂದು ಬರೆದಿದೆ. ಆದುದರಿಂದ ವರ್ಧಾದಂತಹ ಒಂದು ಕೀಳುಹೊಳೆಯಿಂದ ಆ ನಾಡಿಗೆಲ್ಲ ವರ್ಹಾಟವೆಂಬ ಹೆಸರು ಬಂದಿತೆಂದು ಸಾಧಿಸುವುದಕ್ಕಿಂತಲೂ ಮರ್ಹಾಟವೆಂಬ ಮುಂಚಿನ ಹೆಸರು ಮಾರ್ಪಟ್ಟು ವರ್ಹಾಟವಾಯಿತೆಂದು ಹೇಳುವುದೇ ಹೆಚ್ಚು ಸಮಂಜಸವಲ್ಲವೆ? ಪ್ರಾಕೃತಭಾಷೆಗಳಲ್ಲಿ ಮಕಾರವು ವಕಾರವಾಗುವ ರೂಢಿಯುಂಟೆಂದು ಆಮಾವಾಸ್ಯಾ-ಅವಸ, ಆಮಲಕ-ಆವಳಾ ಇತ್ಯಾದಿ ಉದಾಹರಣಗಳಿಂದ ಕಂಡುಬರುತ್ತದೆ. ಅದರಂತೆ ಮಕಾರವು ವಕಾರವಾಗಿ ಮರ್ಹಾಟವು ವರ್ಹಾಟವಾಗಿರುವುದು ಶಕ್ಯವಿದೆ.

ಹಾಗಾದರೆ ಮರಹಟ್ಟ-ಮರ್ಹಾಟವೆಂಬ ನುಡಿಗೆ ಅರ್ಥವೇನಾದರೂ ಉಂಟೆ? ಅರ್ಥವಿಲ್ಲದಿದ್ದರೆ ಈ ಶಬ್ದವು ಅಸ್ತಿತ್ವದಲ್ಲಿ ಬರುವ ಸಂಭವವೆ ಇದ್ದಿಲ್ಲ. ಮರಹಟ್ಟ ಶಬ್ದದೊಳಗಿನ ಕೊನೆಯ ಹಟ್ಟ ಶಬ್ದಕ್ಕೆ ದೇಶ, ಪ್ರದೇಶವೆಂದಿರುವ ಅರ್ಥವು ಪ್ರಸಿದ್ಧವಿದೆಯಷ್ಟೆ. ಹಟ್ಟ, ಹಟ್ಟಿ ಶಬ್ದವು ಸಂಸ್ಕೃತದಿಂದ ಬಂದಿತೆಂದು ಕೆಲವರು ಹೇಳುವರು; ಆಗಬಹುದು. ಆದರೆ, ಆ ಶಬ್ದವು ಸಂಸ್ಕೃತದಲ್ಲಿ ಏಕಾಕಿ ಅಲ್ಲದೆ ಅದರ ಧಾತ್ವರ್ಥವು ನಿಶ್ಚಿತವಿಲ್ಲ. ಇದು ಕನ್ನಡದ ಪಡುಧಾತುವಿನ ಒಂದು ರೂಪವಿರಬೇಕೆಂಬುದು ತೋರುತ್ತದೆ. ಪಾಡು, ಪಾಟ ಎಂಬ ಪದಕ್ಕೆ "ಅವರ ಪಾಡು (ಪಾಟ) ಅವರಿಗೆ" ಎಂಬೀ ಬಗೆಯ ಮಾತಿನಲ್ಲಿ 'ಬಾಳು' 'ಬದುಕು' 'ಇರುವು' ಎಂಬರ್ಥವು ಗೋಚರವಾಗುತ್ತದೆ. ಈ ಪಾಟವೆ ಹಾಟವಾಗಿ ಪರಿಣಮಿಸಿ, ಬಾಳು ಬದುಕು ಮಾಡಿಕೊಂಡು-ಪಟ್ಟುಕೊಂಡಿರುವ ಸ್ಥಳ-ಪ್ರದೇಶವೆಂಬ ಅರ್ಥವು ಕಾಲಕ್ರಮದಲ್ಲಿ ಉಂಟಾಗಿರುವ ಸಂಭವವಿದೆ. ರಟ್ಟಪಾಡಿ, ಗಂಗವಾಡಿ (ಪಾಡಿ) ಎಂಬಲ್ಲಿ ರಟ್ಟರು, ಗಂಗರು ಬಾಳಿಕೊಂಡಿರುವ ನಾಡು ಎಂಬ ಅರ್ಥವು, ಅತಿ ಪ್ರಾಚೀನಕಾಲದಿಂದಲೂ ಗೋಚರವಾಗುತ್ತಿದೆ. ಈ ಪಾಡು ಶಬ್ದವೆ ಬಾಡು, ಬಾಳು ಇಲ್ಲವೆ ಬಾಳ ಎಂಬ ಕೊನೆ ಅಥವಾ ಮೊದಲುಳ್ಳ ಎಷ್ಟೋ ಗ್ರಾಮಗಳು ಈಗಲೂ ಕಂಡುಬರುತ್ತವೆ. ಹಾಟ ಶಬ್ದಕ್ಕೆ ಪ್ರದೇಶವೆಂಬರ್ಥವಾದ ಬಳಿಕ ಇನ್ನುಳಿದುದು 'ಮರ' ಶಬ್ದ. ಮರ ಶಬ್ದಕ್ಕೆ ಕನ್ನಡದಲ್ಲಿ ದೊಡ್ಡದೆಂಬ ಅರ್ಥವು ಎಂದಿನಿಂದಲೂ ರೂಢವಾಗಿದೆ. ಗಿಡ್ಡವಾಗಿದ್ದುದು ಗಿಡವು; ದೊಡ್ಡದಾದುದು ಮರ. 'ಮರ ಮಳೆ' ಎಂಬಲ್ಲಿ ಜನಪದ ಭಾಷೆಯೊಳಗೆ ದೊಡ್ಡ ಮಳೆಯೆಂಬರ್ಥವೆ ಇದೆ. ಆದುದರಿಂದ, ಮರಾಹಟ ಶಬ್ದದಲ್ಲಿ ದೊಡ್ಡದೇಶವೆಂಬ ಅರ್ಥವು ಹುದುಗಿಕೊಂಡಿರುವುದೆಂಬಲ್ಲಿ ಸಂದೇಹವಿಲ್ಲ. ಈ ನಾಡಿಗೆಲ್ಲ ಕನ್ನಡ ಹೆಸರೆ ಪ್ರಾಪ್ತವಾಗುವಷ್ಟು ಆ ಭಾಷೆಯು ಇಲ್ಲಿ ಎಲ್ಲಿಂದ ಬರಬೇಕು? ಎಂಬ ಸಂಶಯವೊಂದು ಕೆಲವರಲ್ಲಿ ತಲೆದೋರಬಹುದು. ಈ ಪ್ರದೇಶವಷ್ಟೆ ಏಕೆ? ಬಲೂಚಿಸ್ತಾನದವರೆಗೂ ಕನ್ನಡವರ್ಗದ (Canara-Kurukh-Brahui) ಭಾಷೆಗಳು ಹಬ್ಬಿಕೊಂಡಿದ್ದುವೆಂಬುದನ್ನು ಈ ಮೊದಲೆ ಒಮ್ಮೆ ಹೇಳಿದೆ. ಅಷ್ಟರಿಂದಲೆ ಸಾಕಷ್ಟು ಮನವರಿಕೆಯಾಗದಿದ್ದವರಿಗಾಗಿ ಇಲ್ಲಿ ಇನ್ನೂ ಒಂದೆರಡು ಪ್ರಮಾಣಗಳನ್ನು

ಕೊಟ್ಟು ಅದನ್ನು ಮನಗಾಣಿಸಿಕೊಡಬಹುದು. ತನ್ನ ನುಡಿಯ ವೈಚಿತ್ರ್ಯ-ವೈಶಿಷ್ಟ್ಯವೇನೆಂಬುದು ತನಗೆ ಗೊತ್ತಾಗುವುದಿಲ್ಲ. ಅದು ತಟ್ಟನೆ ತಿಳಿಯುವುದು ಪರಭಾಷೆಯವರಿಗೆ. ಗಡಕರಿಯು ತನ್ನ ನಾಟಕದಲ್ಲಿ ಕನ್ನಡಭಾಷೆಯ ವೈಚಿತ್ರ್ಯವನ್ನು ತೋರಿಸುವುದಕ್ಕಾಗಿ ಕೊಟ್ಟ 'ರುಂಡು, ಗುಂಡು, ಕುಂಡು' ಎಂಬ ಶಬ್ದಗಳಲ್ಲಿ ಅದು ಅಡಕವಾಗಿದೆ. 'ಡಕಾರ ಬಹುಲಾ ಕೌಂತಲೀ' ಎಂದು ಪ್ರಾಕೃತ ವ್ಯಾಕರಣಕಾರರು ಹೇಳಿದ ಡಕಾರಗಳನ್ನೂ, ಕನ್ನಡದಲ್ಲಿ ಪರಕೀಯರಿಗೆ ವಿಶೇಷವೆನಿಸುವ ಉಕಾರ ವೈಪುಲ್ಯಗಳನ್ನೂ ಗಡಕರಿಯು ಅದರಲ್ಲಿ ಧ್ವನಿತಮಾಡಿದ್ದಾನೆ. ಮರ್‍ಹಾಟಿ ಭಾಷೆಯ ಆದಿಗ್ರಂಥಗಳಲ್ಲಿ ಪ್ರತಿಯೊಂದು ಶಬ್ದದಕೊನೆಗೂ ಅಂಟಿಕೊಂಡ ಉಕಾರವು ಕನ್ನಡಭಾಷಾಕ್ಷೇತ್ರದಲ್ಲಿ ಅದು ಬೇರುಹಿಡಿದು ಬೆಳೆದುದರ ಪರಿಣಾಮವೆಂದು ಕಂಡುಬಂದಿದೆ. ಕನ್ನಡ 'ಉದು' ಮೈಸೂರ ಕಡೆಗೆ ಈಗಲೂ ಉಳಿದಿದ್ದು ಮರ್‍ಹಾಟಿಗಳ ಸಂಸರ್ಗದಿಂದ ಉತ್ತರಕರ್ನಾಟದಲ್ಲಿ ಅದು ಕಾಣೆಯಾಗಿದೆ! ಮರ್‍ಹಾಟಿಗಳು ಕನ್ನಡದ ಈ ವೈಶಿಷ್ಟ್ಯವನ್ನು ಆರಂಭಕ್ಕೆ ಎತ್ತಿಕೊಂಡರೂ ಮುಂದೆ ನೂರಿನ್ನೂರು ವರುಷಗಳಲ್ಲಿ, ಆ ಪರಕೀಯ ರೂಢಿಯು ಮೈಗೂಡದೆ ಇದ್ದುದರಿಂದ ಮೆಲ್ಲಮೆಲ್ಲನೆ ಬಿಟ್ಟುಬಿಟ್ಟರು.

ಇದಕ್ಕಿಂತಲೂ ಒಂದು ನಿಶ್ಚಯಾತ್ಮಕವಾದ ಕುರುಹನ್ನು ತೋರಬಹುದು. ವಿದ್ಯಾವಿನೋದಿಗಳಾದ ಶ್ರೀಮಾನ್ ಗೋವಿಂದ ಪೈಗಳವರು ತಮ್ಮ ಒಂದು ಲೇಖನದಲ್ಲಿ 'ಮರಾಠಿಯೊಳಗೆ ಹಲವು ಕನ್ನಡ ಧಾತು'ಗಳಿದ್ದುದನ್ನು ಒಳ್ಳೆ ಕೌತೂಹಲಿಗಳಾಗಿ ಬರೆದಂತೆ ನೆನಪಿದೆ. ಎರಡೂ ಭಾಷೆಗಳ ಸಂಬಂಧವನ್ನು ನಿರ್ಣಯಿಸುವುದಕ್ಕೆ ನಿಜವಾಗಿಯೂ ಇದು ಅತ್ಯಂತ ಮಹತ್ವದ ಸಂಗತಿಯಾಗಿದೆ. ಬಂದು ಭಾಷೆಯವರು ತಮ್ಮೊಡನೆ ಸಂಬಂಧ ವುಂಟಾಗಿರುವ ಪರಭಾಷೆಯೊಳಗಿಂದ ತಮಗೆ ಅಪರಿಚಿತವಾದ ವಸ್ತು-ವಿಷಯವನ್ನು ಕುರಿತು ಇರುವ ಹಲಕೆಲವು ಶಬ್ದಗಳನ್ನು-ಎಂದರೆ ನಾಮಗಳನ್ನು ಮಾತ್ರ ಎತ್ತಿಕೊಳ್ಳುವ ಪದ್ಧತಿಯು ಎಲ್ಲ ಕಡೆಗೂ ಕಣ್ಣಿಗೆ ಬೀಳುತ್ತದೆ. ಪರಕೀಯ ಶಬ್ದಗಳಿಂದ ಧಾತುಗಳನ್ನು ಸಿದ್ಧಮಾಡಿಕೊಳ್ಳುವುದೆ ಆದರೆ, ಅವಕ್ಕೆ ತಮ್ಮ ಭಾಷೆಯ ಸಂಸ್ಕಾರವನ್ನು ಕೊಡದೆ ಪರಕೀಯ ಮೂಲರೂಪಗಳನ್ನೇ ಬಳಸಿದುದನ್ನು ಯಾವ ಸುಧಾರಿಸಿದ ಭಾಷೆಯಲ್ಲಿಯೂ ನೋಡಲು ಸಿಕ್ಕದು. ಆದರೆ, ಮರ್‍ಹಾಟಿಯಲ್ಲಿ ಈ ಬಗೆಯ ಉದಾಹರಣಗಳು ಬೇಕಾದಷ್ಟು! ಬೇಕಾದಷ್ಟಿರುವ ಈ ಉದಾಹರಣಗಳು ಬೇಕಾದ ಭಾಷೆಯವಲ್ಲ ಕೇವಲ ಕನ್ನಡದವು; ಕನ್ನಡಧಾತುಗಳು ಮಾತ್ರ. 'ವರ್ಕ (Work) ನಡೆದಿದೆ' ಡ್ರಾಯಿವ್ಹ (drive) ಮಾಡುತ್ತಿದ್ದಾನೆ'; ಸುಖಪಟ್ಟನು. ಈ ಬಗೆಯಿಂದ ಪರಕೀಯ ಶಬ್ದಗಳೊಡನೆ ಸ್ವಭಾಷೆಯ ಒಂದು ಪದವನ್ನು ಸೇರಿಸಿ ಕ್ರಿಯಾಪದಗಳನ್ನು ಸಿದ್ಧಪಡಿಸಿಕೊಳ್ಳುವ ಪದ್ಧತಿಯಂತೂ ಮರ್‍ಹಾಟಿಯಲ್ಲಿ ಇದ್ದೇ ಇದೆ. ಓಪ್ ದೇಣೇ (ಒಪ್ಪಹಾಕು), ಗುದ್ದಾ ದೇಣೇ (ಗುದ್ದು), ಕೀಸ ಕಾಡಣೆ (ಕೀಸು-ಸಣ್ಣಗೆ ಮಾಡು' ಶ.ಮ. ದರ್ಪಣ), ಥಂಡ ಹೋಣೆ (ತಣಿ), ಚವಪಾಹಣೆ (ಸವಿ), ಬಿಕಟ ಕರಣೆ (ಬಿಗಿಕಟ್ಟು) ಇವೆ ಮೊದಲಾದುವು ಇದಕ್ಕೆ ದೃಷ್ಟಾಂತ. ಇದರಂತೆ ಪ್ರತ್ಯಕ್ಷ ಕನ್ನಡ ಧಾತುಗಳನ್ನೇ ಇದ್ದಕ್ಕಿದ್ದ ಹಾಗೆಯೆ ಎತ್ತಿ ಬಳಿಸಿಕೊಂಡ ಹಾಗೂ ಬಳಸಿಕೊಳ್ಳುತ್ತಿರುವ ಶಬ್ದಗಳ ಒಂದು ಪಟ್ಟಿಯನ್ನೆ ಕೊಡಬಹುದು. ಆದರೆ, ಅಷ್ಟು ವಿಸ್ತಾರಕ್ಕೆ ಇದು ಸ್ಥಳವಲ್ಲ. ಶಬ್ದಮಣಿದರ್ಪಣದ (೧೨೬೦) ಪಟ್ಟಿಯಲ್ಲಿರುವ ಕನ್ನಡಧಾತುಗಳೊಳಗಿನ ಕೆಲವು ಉದಾಹರಣಗಳನ್ನು ಮಾತ್ರ ಇಲ್ಲಿ ಕೊಟ್ಟರೂ ಸಾಕು. ಕೊರೆ-ಕೊರಣೇ, ಕೀಸು-ಖಿಸಣೆ, ಮಲೆ-ಮಾಜಣೆ, ಹೀರ್-ಹೆರಣೆ ತುಂಬು-ತುಂಬಣೆ ಒಪ್ಪು-ಓಪಣೆ, ಈನ್-ವೀಣೆ, ಹರದು-ಹರಡಣೇ ಮುದುಡು-ದುಮಡಣೇ ಬಡಿ-ಬಡವಣೇ ಕುಟ್ಟು-ಕುಟಣೆ, ಪಿಂಜು-ಪಿಂಜಣೇ ಹುಡುಕು-ಹುಡುಕಣೆ. ಮರ್‍ಹಾಟಿಯಲ್ಲಿ ಒಳ್ಳೆ idiometic ಭಾಷೆಯಲ್ಲಿ ಕಂಪು ಬರುವಂತೆ ಮಾತನಾಡಬೇಕಾದರೆ ಕನ್ನಡದ ಈ ಧಾತುಗಳೆ ಆಗಾಗ್ಗೆ ಬೇಕಾಗುವುವು. 'ಪಾಣಿ ತುಂಬಲೇ' ತಿ ಗೋಷ್ಟ ಫಾರ ನಡಲೀ' ಈ ಬಗೆಯ ನಿದರ್ಶನಗಳು ಮರ್‍ಹಾಟಿಸಾಹಿತ್ಯದಲ್ಲಿ ಅಡಿಗಡಿಗೂ ಸಿಕ್ಕುತ್ತವೆ. 'ಮಹಾರಾಷ್ಟ್ರ ಶಬ್ದಕೋಶ'ದ ಖಕಾರದ ವರೆಗಿನ ಎರಡು ದೊಡ್ಡ ಸಂಪುಟಗಳು ಈಗ ಹೊರಬಿದ್ದಿವೆ. ಅದರಲ್ಲಿ ಮೇಲಿನ ಧಾತುಗಳನ್ನು ಸರಿಹೋಲಿಸಿ ನೋಡಿಕೊಂಡು ಮೇಲಿನ ಸಂಗತಿಯನ್ನು ಇನ್ನಿಷ್ಟು ಮನಗಾಣಿಸಿಕೊಳ್ಳಬಹುದು.

ಮೇಲ್ಕಾಣಿಸಿದ ಎರಡೇ ಸಂಗತಿಗಳು ಸಾಕು, ಶೈಶವಾವಸ್ಥೆಯಲ್ಲಿ ಮರ್ಹಾಟಿಯು ಬೆಳೆದುದು ಕನ್ನಡದಿಂದ, ಎಂಬುದನ್ನು ಸಿದ್ಧಪಡಿಸುವುದಕ್ಕೆ. ಮರ್ಹಾಟಿಯು ಮೈಯ್ಗೊಂಡು ಸಂಪುಷ್ಟವಾಗಿದ್ದರೆ ಅದಕ್ಕೆ ಕನ್ನಡ ಧಾತುಗಳನ್ನು ಇದ್ದಕ್ಕಿದಂತೆ ಸ್ವೀಕರಿಸುವ ಪ್ರಸಂಗವೇ ಬರುತ್ತಿದ್ದಿಲ್ಲ. ಕನ್ನಡ ಧಾತುಗಳನ್ನು ಮೂಲರೂಪದಲ್ಲಿಯೇ ಮರ್ಹಾಟಿಯಲ್ಲಿ ಉಪಯೋಗಿಸುತ್ತಿರುವವುದರಿಂದ, ಅದು ರೂಪ-ಆಕಾರ ಹೊಂದಿ ಭಾಷೆಯ ಸ್ವರೂಪಕ್ಕೆ ಬರುವ ಮೊದನಿಂದಲೂ ಕನ್ನಡದೊಡನೆ ಅದರ ಬಳಕೆಯಿದ್ದಿತೆಂದು ಊಹಿಸಲು ಅದಾವ ಬಾಧಕವೂ ಇಲ್ಲ. ಮರ್ಹಾಟಿಯು ಕನ್ನಡತಿಯ ಹೊಟ್ಟೆಯ ಮಗುವಲ್ಲದಿದ್ದರೂ ಸಾಕುಮಗುವೆಂದು ನಿಃಸ್ಸಂದೇಹವಾಗಿ ಹೇಳಬಹುದು. ಮುಲಗಾ-ಹುಡುಗನ ಮೇಲೆಯೆ ಗಕಾರದ ಕನ್ನಡ ಮುದ್ರೆಯಿದ. ಮಗುವನ್ನು ಕಾಪಾಡುವುದಕ್ಕಾಗಿ ಒಲವಿನಿಂದ ತಾಯಿ ಹೇಳುವುದು ಓ-ವಿ ಹಾಡು. ಆ ಮಗು ಹಾಕಿಕೊಳ್ಳುವುದು ಮಣಿಕಟ್ಟು-ಮನಗಟೀ; ತೊಡವು-ತೊಡರ; ಮರಾಠಿ ತರುಣನು ದೊಡ್ಡವನಾದ ಬಳಿಕ ಗಡಗನೀರು-ಗಡಗನೆರ ಮಾಡಿಸಿಕೊಂಡು ದಂಡೆ ಬಾಸಿಂಗ ಕಟ್ಟಿಸಿಕೊಳ್ಳುವಾಗ ಕನ್ನಡದ ಬಾಸಿಂಗಬಲ್ಹ ಬೇಕಾಗುತ್ತದೆ. ಇವನ ಲೌಕಿಕ ವ್ಯವಹಾರಕ್ಕೆ ಮುದಲ ('ಮೊದಲು'- ಬಂಡವಾಳ) ಬೇಕು; ಅದು ಕನ್ನಡವೆ! ಹೀಗೆ ಹುಟ್ಟುವಾಗಿನಿಂದ ಬೆಳೆದು ದೊಡ್ಡದಾಗುವ ವರೆಗೂ ನೆರವನ್ನಿತ್ತ ಕನ್ನಡವು ಆ ಕಾಲಕ್ಕೆ ಮರ್ಹಾಟಿಯ ಮೂಲಸ್ಥಾನದಲ್ಲಿ, ಮೂಲಸ್ಥಾನದ ನೆರೆಹೊರೆಯಲ್ಲಿ ಜೀವಂತವಾಗಿ-ಜನರಾಡುವ ಭಾಷೆಯಾಗಿ ಇರಲೇಬೇಕೆಂದು ಒಪ್ಪಿಕೊಳ್ಳದೆ ಬೇರೆಗತಿಯಿಲ್ಲ. 'ಮಹಾರಾಷ್ಟ್ರ ಚೂಡಾಮಣಿ' ಗಳ ವಂಶಸ್ಥನಾದ ರಾಜಶೇಖರನು ಒಂಬತ್ತನೆಯ ಶತಮಾನದಲ್ಲಿ ಕನ್ನಡ ನುಡಿಯನ್ನು-ಕನ್ನಡ ಕವಿಗಳ ಗಮಕಿತ್ವವನ್ನು ಪ್ರತ್ಯಕ್ಷವಾಗಿ ಕೇಳಿದನವನಂತೆ 'ಸಗರ್ವಂ ಸರ್ವಕರ್ಣಾಟಾಃ ಟಂಕಾರೋತ್ತರ ಪಾಠಿನಃ ಎಂದು ಕಾವ್ಯಮೀಮಾಂಸೆಯಲ್ಲಿ ವರ್ಣಿಸುತ್ತಾನೆ.[೪೭] ವರ್ಹಾಟದ ಕಡೆಯ ರಾಜಶೇಖರನು ಕನ್ನಡವನ್ನು ಕಿವಿಯಿಂದ ಕೇಳದೆಯೆ ಹೀಗೆ ಬರೆದಿರಬಹುದೆ? ಇವೆಲ್ಲ ಸಂಗತಿಗಳನ್ನು ಸಮಾಲೋಚಿಸಲು ಮರ್ಹಾಟಿಯ ಹುಟ್ಟಿನ ಕಾಲದಿಂದಲೂ ಕನ್ನಡಕ್ಕೂ ಅದಕ್ಕೂ ಸಂಬಂಧವಿದ್ದಿತೆಂಬ ಬಗ್ಗೆ ಸಂದೇಹವೇ ಉಳಿಯುವುದಿಲ್ಲ.

ವರ್ಹಾಟ-ಮರ್ಹಾಟ

'ಮರ್ಹಾಟಿಯು ಜನ್ಮ ತಾಳಿದುದು ವರ್ಹಾಟದಲ್ಲಿ' ಎಂದು ಎಲ್ಲ ಮಹಾರಾಷ್ಟ್ರೀಯ ವಿದ್ವಾಂಸರೂ ಒಪ್ಪುತ್ತಾರೆ. ಮರ್ಹಾಟಿಯು ಸಂಸ್ಕೃತ ಪ್ರಾಕೃತಗಳ ಬಳಗದಲ್ಲಿ ಹುಟ್ಟಿದುದಾದರೂ ಅಕಾಲದಲ್ಲಿಯೆ ಅನಾಥವಾದ ಕೂಸು. ಬಳಗವು ಕೈಬಿಟ್ಟುದರಿಂದ ಇದು ಕನ್ನಡದಿಂದಲೆ ಪರಿಪೋಷಿತವಾಯಿತೆಂಬುದು ಎರಡೂ ಭಾಷೆಗಳ ತುಲನಾತ್ಮಕ ಅಭ್ಯಾಸದಿಂದ ಸಿದ್ಧವಾಗುತ್ತಿದೆ. ಮರ್ಹಾಟಿಯು ಹುಟ್ಟುವಾಗಲೇ ಅದರ ಹತ್ತಿರ ಕನ್ನಡವಿದ್ದಿತೆಂದ ಬಳಿಕ ಮರ್ಹಾಟಿಯು ಮಾತೃಭೂಮಿಯಾದ ವರ್ಹಾಟದಲ್ಲಿ ಆ ಕಾಲಕ್ಕೆ ಕನ್ನಡ ಭೂಮಿಕೆಯ ಇದ್ದಿತೆಂದು ಸಿದ್ಧವಾದ ಹಾಗಾಗಲಿಲ್ಲವೆ? ಆದುದರಿಂದ ಮೊದಲು ಕನ್ನಡವು ನೆಲೆಸಿದ್ದ ಆ ನಾಡಿಗೆ, ಕನ್ನಡಭಾಷೆಯಿಂದ ಅರ್ಥವಾಗುವ ಮರಹಟ್ಟ ಅಥವಾ ಮರ್ಹಾಟ ಎಂದು ಪ್ರಾಚೀನ ಹೆಸರಿರಬೇಕೆಂದು ಊಹಿಸಿದರೆ ತಪ್ಪೇನು? ಅಲ್ಲದೆ ದೇಶದಿಂದ ಭಾಷೆಗೆ ಹೆಸರು ಎಂಬ ನಿಯಮದಂತೆ ಮರ್ಹಾಟಿ ಭಾಷೆಯ ಹುಟ್ಟನಾಡಿಗೆ (ಎಂದರೆ ವರ್ಹಾಟಕ್ಕೆ) ಪ್ರಾಚೀನಕಾಲದಲ್ಲಿ ಮರ್ಹಾಟವೆಂಬ ನಾಮಾಭಿಧಾನವಿರುವ ಸಂಭವವೆ ಹೆಚ್ಚಾಗಿಲ್ಲವೆ? ಮರ್ಹಾಟವು ವರ್ಹಾಟವಾದುದನ್ನೂ ವರ್ಹಾಟದ ಪ್ರಾಚೀನಕಾಲದ ಹೆಸರು ಮರ್ಹಾಟವೆಂದಿರುವುದೇ ಹೇಗೆ ಶಕ್ಯವಿದೆಯೆಂಬುದನ್ನೂ ವಿವರಿಸಿದ್ದಾಯಿತು. ಈಗ ವರ್ಹಾಟ (ಮರ್ಹಾಟ) ವು ಮಹಾರಾಷ್ಟ್ರದ ಬಗೆಯನ್ನು ಅರಿತುಕೊಳ್ಳುವುದಷ್ಟು ಉಳಿಯಿತು. ಇದು ಸರಿಯಾಗಿ ಗೊತ್ತಾಗಬೇಕಾದರೆ ಭಾಷಾಶಾಸ್ತ್ರದ ಇನ್ನೊಂದು ಮೂಲತತ್ವವನ್ನು ತಿಳಿದುಕೊಳ್ಳುವುದು ಅಗತ್ಯವಿದೆ. ಭಿನ್ನಭಾಷೆಯ ಎರಡು ಜನಾಂಗಗಳು ಬೆರೆತು ಬಳಕೆಗೆ ಆರಂಭವಾದಾಗ ವ್ಯವಹಾರದಲ್ಲಿ ತಲೆದೋರುವ ಶಬ್ದಗಳಲ್ಲಿ ಸಹ, ಆ ಸಮಾಜದಲ್ಲಿ ನಡೆದ ಸಂಮಿಶ್ರಣದ ಪಡಿನೆಳಲು ಕಾಣದೆ ಇರುವುದಿಲ್ಲ. 'ಕಾಗದ-ಪತ್ರ' ಎಂಬುದು ಪಾರ್ಶಿ

ಜನಗಳ ಕೂಡ ಆದ ನಮ್ಮ ಬಳಕೆಯನ್ನು ಸೂಚಿಸುತ್ತಿದ್ದರೆ 'ಖೇಳಾಡು', 'ಇಡಲಿಂಬು' ಎಂಬಿವು ಕನ್ನಡ ಮತ್ತು ಪ್ರಾಕೃತಜನಾಂಗಗಳ ಬೆರಕೆಯನ್ನು ತೋರಿಸುತ್ತಿವೆ.

> .....Many of these (loan-words) will remain as permanent elements, used sometimes, instead of native words which they have outsed, sometimes by the side of these, to express an identical object or idea, with a slight differentation of meaning.[೪೮]

ಎಂದು ಭಾಷಾಶಾಸ್ತ್ರಜ್ಞರು ಹೇಳುವ ಈ ಮಾತಿನ ಸತ್ಯತೆಯನ್ನು ಮೇಲ್ಕಾಣಿಸಿದ ಉದಾಹರಣಗಳಲ್ಲಿ ಮನಗಾಣಬಹುದು. ಧಾರವಾಡ-ಧಾರವಾರ್, ಅಥವಾ ಕನ್ನಡ-ಕರ್ಣಾಟದಂತೆ ಪರಭಾಷೆಯ ಶಬ್ದಗಳನ್ನು ಒಂದು ಜನಾಂಗದವರು ಸ್ವಭಾಷೆಯ ಉಚ್ಚಾರಕ್ಕೆ ಸರಿಹೋಗುವಂತೆಯೂ ಅಥವಾ ಆ ಶಬ್ದಕ್ಕೆ ಸಾಧ್ಯವಿದ್ದಲ್ಲಿ ಹೊಸ ಏನೊಂದು ಅರ್ಥವು ಹೊಳೆಯುವಂತೆಯೂ ಮಾರ್ಪಡಿಸಿಕೊಳ್ಳುವುದಂತೂ ಸರಿಯೆ. ಅದರ ಹೊರತಾಗಿ ಪರಕೀಯ ಶಬ್ದವನ್ನು ಸ್ವೀಕರಿಸುವಾಗ ತತ್‌ಸಮಾನ ಅರ್ಥದ (ಭಾಷಾಂತರದ) ತಮ್ಮ ಶಬ್ದವನ್ನೊಂದು ಅದರ ಬದಿಯಲ್ಲಿಯೆ ಇರಿಸಿ ಜೋಡಿನುಡಿಯನ್ನು ಏರ್ಪಡಿಸಿಕೊಳ್ಳುವುದೂ ರೂಢವಾಗಿದೆ. ಕಾಗದ-ಪತ್ರ, ಛಪ್ಪನ್ನೈವತ್ತಾರು, ಕೂಡಲ-ಸಂಗಮ ಈ ಶಬ್ದಗಳು ಇದಕ್ಕೆ ಒಳ್ಳೆ ನಿದರ್ಶನಗಳಾಗಿವೆ.

ಜನಸಾಮಾನ್ಯರ ಬಾಯಲ್ಲಿ ಮರ್ಹಾಟವು ವರ್ಹಾಟವಾಗಿರಬೇಕು. ಆದರೆ, ನಿಜವಾದ ಮರ್ಮಜ್ಞರಿಗೆ ವರ್ಹಾಟ (ಶ್ರೇಷ್ಠವಾದ ದೇಶ) ವೆಂಬುದರಿಂದ ಸಮಾಧಾನವಾಗಲಾರದು. ಪ್ರಾಮಿಸರಿ ನೋಟು (Promisery note) ಪರಮೇಸೂರೆ ನೋಟು ಅಥವಾ ವ್ಹೋಟು (Vote). ಓಟ ಆಗಿ ಕೆಲವೊಂದು ಅರ್ಥಪ್ರತೀತಿ ಯಾಗುತ್ತಿರಬಹುದು. ಆದರೆ, ಮೂಲಾರ್ಥವು ಮಾತ್ರ ಅದರಿಂದ ಏನೂ ವ್ಯಕ್ತವಾಗುವುದಿಲ್ಲ. ಆದುದರಿಂದ, ನಿಜವಾದ ಅರ್ಥವು ಸ್ಫುರಿಸುವಂತೆ ಆಶ್ವಾಸನ ಪತ್ರ, ಮತ ಎಂಬುದಾಗಿ ಏನೊಂದು ಪ್ರತಿಶಬ್ದವನ್ನೂ ವ್ಯವಹಾರದಲ್ಲಿ ಕಲ್ಪಿಸಿಕೊಳ್ಳಬೇಕಾಗುವುದು. ಇಂತಹ ಸಂದರ್ಭಗಳಲ್ಲಿ ಒಂದು ಮೂಲಶಬ್ದಕ್ಕೆ ಅದರ ವಿಕೃತರೂಪವೊಂದು, ಭಾಷಾಂತರದ ಶಬ್ದವಿನ್ನೊಂದು ಹೀಗೆ ಎರಡೆರಡು ಸಮಾನಾರ್ಥಕ ಶಬ್ದಗಳು ಬಳಕೆಯಲ್ಲಿ ಬರುವುದುಂಟು. ಮೂಲಾರ್ಥದಿಂದ ದೂರವಿರುವ ಪ್ರತಿಶಬ್ದವು ಬಲ್ಲವರಿಗೆ ಮಾನ್ಯವಾಗುವುದು ಕಷ್ಟ. ರಸಿಕರೂ ಮರ್ಮಜ್ಞರೂ ಆದ ಸಂಸ್ಕೃತಜರು ಮರ್ಹಾಟದ, ದೊಡ್ಡದೇಶವೆಂಬ, ಸಂಪೂರ್ಣ ಅರ್ಥವನ್ನು ಒಳಗೊಂಡ ಮಹಾರಾಷ್ಟ್ರ ಶಬ್ದವನ್ನು ಪ್ರಯೋಗಿಸುವರೆ ಹೊರತು; ವರ್ಹಾಟಕ್ಕೆ ಅವರ ಸಾಹಿತ್ಯದಲ್ಲಿ ಅವಕಾಶವೇ ಇಲ್ಲ. ವರಾಹಮಿಹಿರ, ರವಿಕೀರ್ತಿ, ದಂಡಿ, ರಾಜಶೇಖರಾದಿ ಸಂಸ್ಕೃತ ಸಾಹಿತಿಗಳು ಉಪಯೋಗಿಸಿದುದು ಮಹಾರಾಷ್ಟ್ರವೆಂಬ ಶಬ್ದವನ್ನೇ. ಕೆಲವರು ಕೇಳಬಹುದು. 'ಇದೆಲ್ಲ ಸರಿ; ಆದರೆ, ದೇಶನಾಮಗಳನ್ನು ಹೀಗೆ ಮಹಾರಾಷ್ಟ್ರದಂತೆ ಭಾಷಾಂತರಿಸಿಕೊಂಡ ಬೇರೆ ಉದಾಹರಣಗಳುಂಟೆ?' ಉಂಟು. ಈ ಮೊದಲು ತೆಂಕಣ ಕೊಂಕಣಗಳ ವಿಚಾರವಾಗಿ ಬರೆವಾಗ ಸೂಚಿಸಿದಂತೆ ಅಪರಾಂತವು ತೆಂಕಣ ಶಬ್ದದ ಭಾಷಾಂತರವಾಗಿರಬೇಕು; 'ಇದು ಬರಿ ಊಹೆ' ಎಂದು ಅಭಿಪ್ರಾಯವಿದ್ದರೆ ಇನ್ನೂ ಒಂದು ನಿದರ್ಶನವನ್ನು ಕೊಡಬಹುದು. ಎರಡನೆಯ ಶತಮಾನದ 'ಮಾಮೂಲನಾರ್' ಎಂಬ ಕವಿಯು 'ಎರುಮೈನಾಡು'[೪೯] ಎಂದು ಹೇಳುವ ದೇಶಕ್ಕೆ 'ಮಹಿಷ ಮಂಡಲ' ವೆಂದಿರುವ ಸಂಸ್ಕೃತ ಹೆಸರು ಏನು ಹೇಳುತ್ತದೆ? ದೇಶನಾಮಗಳನ್ನು ಭಾಷಾಂತರಿಸಿಕೊಳ್ಳುತ್ತಿದ್ದರೆಂಬುದಕ್ಕೆ ಇದಕ್ಕಿಂತ ಬಲವಾದ ಪ್ರಮಾಣ ಇನ್ನೇನು ಬೇಕು?

ಸಂಗೀತ ವಿಚಾರದಲ್ಲಿ ಒಮ್ಮೆ ಮಾತು ನಡೆದಾಗ ಶ್ರೀಮಾನ್ ಬೆಟ್ಟಗೆರೆ ಕೃಷ್ಣಶರ್ಮರು ವರಾಳಿ ಎಂಬುದೊಂದು ರಾಗವಿದ್ದು ಅದು ವರ್ಹಾಡದ್ದಾಗಿರಬೇಕು, ಎಂದು ಸೂಚಿಸಿದರು. ಸಂಗೀತಶಾಸ್ತ್ರದಲ್ಲಿ ಹಲವು ನಾಡುಗಳ ಹೆಸರಿನ ಒಂದೊಂದು ರಾಗಗಳಿವೆ. ಕನ್ನಡ, ಗುರ್ಜರ, ಕಲಿಂಗ, ಗೌಡ, ಕಾಂಭೋಜಗಳಂತೆ ವರಾಡದ ಹೆಸರಿನ ಒಂದು ರಾಗವಿರಬೇಕೆಂದೂ ಅದೆ 'ವರಾಳಿ' ರಾಗವೆಂದೂ ನಿರ್ಧರಿಸಲು ವಿಶೇಷಶ್ರಮ

ಪಡಬೇಕಾಗಿಲ್ಲ. ಗೌಡ ದೇಶದ ರಾಗಕ್ಕೆ (ಡಕಾರವು ಳಕಾರವಾಗಿ) ಗೌಳವೆಂಬ ಹೆಸರಿರುವಂತೆ ವರಾಡದ ರಾಗವು ವರಾಳಿ ಎಂದಿರುವುದು ಸ್ವಾಭಾವಿಕ. ಸಂಗೀತದಲ್ಲಿ ಅನೇಕ ದೇಶಗಳ ಒಂದೊಂದು ರಾಗವಿದ್ದು 'ಮಹಾರಾಷ್ಟ್ರ'ದ ಹೆಸರಿನ ರಾಗವೇ ಏಕೆ ಇರಬಾರದು? ಸಂಗೀತಗಾರರಲ್ಲಿಯೂ ಪ್ರಾಂತಾಭಿಮಾನದ ಗಾಳಿತುಂಬಿದೆಯೆ? ಒಂದು ವೇಳೆ ಕರ್ಣಾಟ ಸಂಗೀತದಲ್ಲಿ ಇರಲಿಕ್ಕಿಲ್ಲ. ಆದರೆ, ಮಹಾರಾಷ್ಟ್ರ ರಾಗವು ಹಿಂದೂಸ್ತಾನಿಯಲ್ಲೂ ಇಲ್ಲವಲ್ಲ! ರಸಿಕರಲ್ಲಿ ಸಂಕುಚಿತ ವಿಚಾರಗಳಿಗೆ ಆಸ್ಪದವೆ ಇಲ್ಲ. ಸತ್ಯ-ಸೌಂದರ್ಯಗಳ ಉಪಾಸಕರಿಗೆ ಯಾವ ನಾಡು ಆದರೇನು! ಗುಲಾಬಿ ಹೂವು ಪರ್ಶಿಯನರದಂತೆ. ಆದರೆ, ಕಡುಧರ್ಮಾಭಿಮಾನಿಗಳಾದ ನಮ್ಮ ಮಡಿವಂತ ಆಚಾರ್ಯರ ಸಾಲಿಗ್ರಾಮ ಪೂಜೆಗೆ ಗುಲಾಬಿ ಹೂವುಗಳಿಲ್ಲದಿದ್ದರೆ ಹೇಗೊ ಹೇಗೊ ಎನಿಸುತ್ತದೆ. ಸಂಗೀತಗಾರನು ಆಕಾಶತತ್ವದ ಆರಾಧಕ. ಅವನಿಗೆ ದಿಕ್ಕಾಲಗಳ ಬಂಧನವಿಲ್ಲ. ನಾದಬ್ರಹ್ಮವು ಅವನ ಅಧಿದೈವತ. ಯಾವ ನಾಡಿನ ರಾಗವೇನು? ಅದು ಸೊಗಸಾಗಿದ್ದರಾಯಿತು. ಹಾಗಾದರೆ, 'ಮಹಾರಾಷ್ಟ್ರ ರಾಗವು ಇಲ್ಲದಿರುವುದಕ್ಕೆ ಕಾರಣವೇನು? ಅದು ಇಲ್ಲದಿಲ್ಲ. ಇಲ್ಲವೆಂದು ಭಾವಿಸಿರುವುದೇ ಭ್ರಮೆ. ಮೊದಲು ಮಹಾರಾಷ್ಟ್ರವು ವರ್‍ಹಾಡವನ್ನು ಬಿಟ್ಟು ಹೊರಗೆ ಇನ್ನೂ ಹಬ್ಬಿಕೊಂಡಿದ್ದಿಲ್ಲ. ಆ ಕಾಲದಲ್ಲಿ ವರ್‍ಹಾಡವೂ ಮಹಾರಾಷ್ಟ್ರವೂ ಬೇರೆ ಬೇರೆಯಿದ್ದಿಲ್ಲ. ರತ್ನಕೋಶದಲ್ಲಿ 'Maharashtra Vaidarbha, Tapitata-desh and the Narmada-tata desh (i. e., the countries on either side of those rivers) ಎಂದು ಹೇಳಿರುವುದಾಗಿ ಡಾ. ಭಂಡಾರಕರರು ತಮ್ಮ ದಕ್ಷಿಣದ ಪ್ರಾಚೀನ ಇತಿಹಾಸದಲ್ಲಿ ಕೊಟ್ಟಿದ್ದಾರೆ (ಪು. ೬). ಮಹಾರಾಷ್ಟ್ರರೆಂಬು ಮುಂದೆ ಹೆಸರುಗೊಂಡ ಜನಾಂಗದವರು ಮೊಟ್ಟಮೊದಲಿಗೆ ನೆಲೆಸಿದುದು ವರ್‍ಹಾಡದಲ್ಲಿಯೇ. ಡಾ. ಭಂಡಾರಕರರು ಮಹಾರಾಷ್ಟ್ರದ ಸ್ಥಾನನಿರ್ಣಯದ ವಿಚಾರದಲ್ಲಿ ಬಹಳ ತೊಡಕಿನಲ್ಲಿ ಬಿದ್ದಿರುವರಾದರೂ ಇವರ ಮೊಟ್ಟಮೊದಲಿನ ವಸತಿಯು ವಿದರ್ಭ ಅಥವಾ ವರ್‍ಹಾಡದಲ್ಲಿಯೆ ಎಂಬುದನ್ನು ಸ್ಪಷ್ಟವಾಗಿ ಒಪ್ಪಿ ಕೊಂಡಿದ್ದಾರೆ.[೫೦] (They first settled in Vidarbha or Berar) ವರ್‍ಹಾಟವೆ ಪ್ರಥಮ ಮಹಾರಾಷ್ಟ್ರವೆಂದು ಡಾ. ಕೇತಕರರ ಅಭಿಪ್ರಾಯ.[೫೧] ಮರ್‍ಹಾಟಿಗಳು ತಮ್ಮ ಮೂಲಸ್ಥಾನವಾದ ವರ್‍ಹಾಟದಿಂದ ಹೊರಟು, ಗೋದಾವರಿ, ಕೃಷ್ಣಾತೀರಗಳ ಕಡೆಗೆ ಹೋಗಿ ನಿಂತು ಒಕ್ಕಲಾಗುವ ಮೊದಲು, ಆಗಿನ ಮಹಾರಾಷ್ಟ್ರವೆಂದರೆ ವರ್‍ಹಾಟವೆಂಬುದು ಮೇಲೆಯೆ ಎದ್ದು ಕಾಣುತ್ತದೆ. ಹೀಗೆ, ಮಹಾರಾಷ್ಟ್ರದ ವರ್‍ಹಾಟದಿಂದ ಬೇರೆ ಇಲ್ಲದ ಕಾಲಕ್ಕೆ 'ಮಹಾರಾಷ್ಟ್ರ'ವೆಂಬ ಸ್ವತಂತ್ರರಾಗದ ಆವಶ್ಯಕತೆಯಾದರೂ ಏನು? ವರ್‍ಹಾಟವೆ ಮಹಾರಾಷ್ಟ್ರ.[೫೨] ಆದುದರಿಂದ, ವರಾಡಿ (ಳಿ) ರಾಗವೆ ಮಹಾರಾಷ್ಟ್ರರಾಗ! ಹಿಂದಕ್ಕೆ ಒಂದು ಕಾಲದಲ್ಲಿ ವಿದರ್ಭ (ವರ್‍ಹಾಟ) ಶಬ್ದದ ಹೊರತು ಮಹಾರಾಷ್ಟ್ರ ಶಬ್ದವು ಕಣ್ಣಿಗೆಬೀಳದೆ ಇರುವುದಕ್ಕೂ ಇದೆ ಕಾರಣವಿರಬೇಕೆಂದು ತೋರುತ್ತದೆ.

ಮಹಾರಾಷ್ಟ್ರರು ಡಾ. ಭಂಡಾರಕರರು ಊಹಿಸಿರುವಂತೆ ಮೊಟ್ಟಮೊದಲು ವರ್‍ಹಾಟದಲ್ಲಿ ಒಕ್ಕಲಾದುದು ನಿಜ. ಆದರೆ, ಅವರು ಅದನ್ನು ವ್ಯಾಪಿಸಿಕೊಂಡ ಬಳಿಕ ಮತ್ತೆ ಮುಂದೆಯೂ ಸಾಗಿದರು. ನೆರೆಹೊರೆಯ ಜನಾಂಗಗಳನ್ನು ತಮ್ಮೊಳಗೆ ಅಳವಡಿಸಿಕೊಂಡರೂ. ತಾವು ಕಾಲಿಡುತ್ತ ನಡೆದ ನಾಡಿಗೂ ತಮ್ಮ ಹೆಸರಿನ ಮುದ್ರೆಯನ್ನೆ ಒತ್ತಿದರು. ಇದರಿಂದ ವರ್‍ಹಾಟವಂತೂ ಮಹಾರಾಷ್ಟ್ರವಾಯಿತು. ಅಲ್ಲದೆ, ಗೋದಾವರಿ, ಭೀಮರಥಿ (ಪಂಢಪುರ), ಕೃಷ್ಣಾ, ತುಂಗಭದ್ರಾ ನದಿಗಳ ವರೆಗೂ ಕ್ರಮಕ್ರಮವಾಗಿ ಮಹಾರಾಷ್ಟ್ರವೆಂಬ ಹೆಸರನ್ನು ಚಾಚಿದ್ದು ಕಂಡುಬರುತ್ತದೆ.[೫೩] 'ಎರುಮೈಯೂರು' (ಎಮ್ಮೆಯೂರು) ಮೈಸೂರು ಆದುದು ಮರಾಠಿಗಳಿಂದಲೇ, ಏಕೆಂದರೆ ಮೈಸ ಎಂದು ಎಮ್ಮೆಗೆ ಹೆಸರು ಮರಾಠಿಯಲ್ಲಿ, ಎಂದು ಹೇಳುವವರೂ ಇಲ್ಲದಿಲ್ಲ! ನಮ್ಮ ಜನ್ನ ಮಹಾಕವಿಯು (೧೨ನೆಯ ಶತಮಾನ) ಡಾ. ಭಂಡಾಕರರ ವೈದ್ಯರನ್ನೂ ಮೀರಿಸಿ ನರ್ಮದೆಯಿಂದ ಕಾವೇರಿಯ ವರೆಗಿನ ನಾಡಿಗೆಲ್ಲ ಮಹಾರಾಷ್ಟ್ರವೆಂದು ಧ್ವನಿತ ಮಾಡಿದ್ದಾನೆ.![೫೪] ಈಗಿನ

'ಬೃಹನ್ಮಹಾರಾಷ್ಟ್ರ; ಚಳವಳಿಯ ನೇತಾರರು 'ತಂಜಾವೂರ ವರೆಗೂ ಮಹಾರಾಷ್ಟ್ರ; - ಏಕೆಂದರೆ ಅಲ್ಲಿ ಶಿವಾಜಿಯ ತಮ್ಮ ವೆಂಕೋಜಿಯು ಆಳಿದ. ಅಲ್ಲಿ ಮರಾಠಿ ಮಾತನಾಡುವ ಜನಗಳು ಈಗಲೂ ಇದ್ದಾರೆ' ಎಂದು ಸಾಧಿಸುತ್ತಲಿದ್ದಾರೆ.

ಮಾತಿನಲ್ಲಿ ಸಮಾನಾರ್ಥಕ ಶಬ್ದಗಳು ಒಂದಕ್ಕಿಂತ ಹೆಚ್ಚಾದ ಕೂಡಲೇ ಅವುಗಳಲ್ಲಿ ಒಂದೊಂದು ವಿಶಿಷ್ಟಾರ್ಥವು ಬರುವುದುಂಟು ಅಥವಾ ಅವು ಸ್ಥೂಲವಾಗಿ ಒಂದೇ ಅರ್ಥವನ್ನು ಕೊಡುತ್ತಿದ್ದರೂ ಪ್ರತಿಯೊಂದಕ್ಕೂ ಒಂದೊಂದು ಸೂಕ್ಷ್ಮಾರ್ಥವು ಪ್ರಾಪ್ತವಾಗುವುದು. ಕಾಗದ ಮತ್ತು ಪತ್ರ ಒಂದೇ ಆದರು ಕಾಗದವೆ ಬೇರೆ, ಪತ್ರವೆ ಬೇರೆ. ಗೆಳೆಯ ಶಬ್ದವೆ ಗೆಣೆಯ ಆಗಿದೆ. ಆದರೆ ಗೆಳೆಯನಿಗೆ ಗೆಣೆಯನೆಂದರೆ ಜಗಳಕ್ಕೆ ಔತಣ! ಕನ್ನಡ ಮತ್ತು ಕರ್ನಾಟಗಳಲ್ಲಿ ಭೇದವಿಲ್ಲೆಂದು ಪಂಡಿತರುಗಳೆಲ್ಲ ಒಪ್ಪುತ್ತಾರೆ. ಆದರೆ, 'ಕನ್ನಡ' ಶಬ್ದಕ್ಕೆ ಇದ್ದ (ಕನ್) ನಾಡು ಎಂಬ ಮೂಲಾರ್ಥವು ಜನರಿಗೆ ನೆನೆಪು ಸಹ ಇಲ್ಲ! ಈಗ ಕನ್ನಡವೆಂದರೆ ಭಾಷೆ! ಕರ್ನಾಟವೆಂದರೆ ದೇಶ! ನೃಪತುಂಗನ ಕವಿರಾಜಮಾರ್ಗದಲ್ಲಿ ದೇಶ ಮತ್ತು ಭಾಷೆಗಳೆಂಬ ಎರಡು ಅರ್ಥದಲ್ಲಿಯೂ 'ಕನ್ನಡ' ಶಬ್ದವನ್ನು ಪ್ರಯೋಗಿಸಿದುದನ್ನು ಕಾಣಬಹುದು.[೫೫] ಆದರೆ, ಇಂದು ದೇಶವಾಚಕವಾಗಿ ಉಪಯೋಗಿಸುವುದಿದ್ದರೆ ಕನ್ನಡನಾಡು ಎಂದು ದ್ವಿರುಕ್ತಿದೋಷವನ್ನು ಸ್ವೀಕರಿಸದೆ ಗತಿಯಿಲ್ಲ. ಅಪರಾಂತ-ಕೊಂಕಣಗಳ ಹಾಡು ಹೀಗೆ. ಇವು ಸಮಾನಾರ್ಥಕವೆಂದು ಸಂಸ್ಕೃತ ಕೋಶದೊಳಗೂ ನೋಡಿಕೊಳ್ಳಬಹುದು. ಆದರು ಮಹಾಭಾರತದೊಳಗೆ ಭೀಷ್ಮಪರ್ವದ ಒಂಬತ್ತನೆಯ ಅಧ್ಯಾಯದಲ್ಲಿ ಇವೆರಡನ್ನೂ ಬೇರೆ ಬೇರೆಯಾಗಿ ಹೇಳಿದೆ. ಈ ಮೊದಲೆ ತೆಂಕಣ-ಕೊಂಕಣಗಳ ಜೋಡಿಯನ್ನು ಕುರಿತು ಬರೆಯುವಾಗ ಸೂಚಿಸಿದುದಕ್ಕೆ ಬೃಹತ್‌ಸಂಹಿತೆಯು ಇನ್ನೊಂದು ಬಗೆಯಿಂದ ಬೆಂಬಲವನ್ನೀಯುತ್ತಿದೆ. ಆ ಗ್ರಂಥದಲ್ಲಿ ಕೊಂಕಣವು ತೆಂಕಣ ದೇಶಗಳ ಪಟ್ಟಿಯಲ್ಲಿದ್ದು ಅಪರಾಂತವು ಪಶ್ಚಿಮ ದೇಶಗಳ ಸಾಲಿನಲ್ಲಿ ಬರುತ್ತದೆ! ಅಪರಾಂತ-ಕೊಂಕಣಗಳು ಒಂದೇ ಇದ್ದರೂ ಬೇರೆ ಬೇರೆ! ಈ ದ್ವೈತಾದ್ವೈತಗಳ ತೊಡಕು, ತತ್ವಜ್ಞಾನಕ್ಕೂ ಬೆಳಕನ್ನು ಕೊಡುವಂತಿದೆ! ಅದಂತಿರಲಿ, ಮೊಟ್ಟ ಮೊದಲಿಗೆ ವರ್ಹಾಟ-ಮಹಾರಾಷ್ಟ್ರಗಳ ಒಂದೆ ಇದ್ದರೂ ಮುಂದೆ ಅವು (ಮಹಾರಾಷ್ಟ್ರವು, ವರ್ಹಾಟದಿಂದ ಹೊರಗೆ ಹಬ್ಬುತ್ತ ನಡೆದಂತೆ) ಹೇಗೆ ಭಿನ್ನಭಿನ್ನಾರ್ಥಕ ಶಬ್ದಗಳಾಗಿರಬಹುದೆಂಬುದು ಮೇಲಣ ದೃಷ್ಟಾಂತಗಳಿಂದ ಚೆನ್ನಾಗಿ ಗೊತ್ತಾಗುವಂತಿದೆ. ಮೊದಲಿನ ಪ್ರಾಂತಕ್ಕೆ ವರ್ಹಾಟ (ವಿದರ್ಭ) ಎಂಬ ಹಳೆಯ ಹೆಸರೇ ಉಳಿದು ಹೊಸ ಪ್ರದೇಶಕ್ಕೆ ಮಹಾರಾಷ್ಟ್ರವೆಂಬ ವರ್ಹಾಟ (ಮರ್ಹಾಟ)ದ ಇನ್ನೊಂದು ಪರ್ಯಾಯ ಶಬ್ದವು ರೂಢಿಯಲ್ಲಿ ಬಂದಿರುವುದು ಸಹಜ ಸ್ವಾಭಾವಿಕವಾಗಿದೆ. 'ತಂಜಾವರದ ವರೆಗೆ ಅಥವಾ ರಾಮೇಶ್ವರದ ವರೆಗೂ ಮಹಾರಾಷ್ಟ್ರ' ವೆಂದು ಹೇಳುವವರು ಹೇಳಲಿ. ಆದರೆ, ಅದರ ಗುಟ್ಟು ಈಗ ಗೊತ್ತಾದಂತಾಯಿತು. ಇಂದಿನ ನಿಜಸ್ಥಿತಿಯನ್ನು ಲೆಕ್ಕಕ್ಕೆ ಹಿಡಿದು ಸ್ವಲ್ಪ ಹಿಂದು ಹಿಂದಕ್ಕೆ ಅಗಿಯುತ್ತ ಹೋದರೆ 'ಮಹಾರಾಷ್ಟ್ರ' ದ ಮೂಲವು ಇನ್ನೂ ಚೆನ್ನಾಗಿ ಬೈಲಿಗೆ ಬರುವುದು. ಈಗ ಮಹಾರಾಷ್ಟ್ರದ ದಕ್ಷಿಣ ಮರ್ಯಾದೆ ಸಾಂಗಲಿ ಮಿರಜ್; ಕೃಷ್ಣಾನದಿ; ಮುಗಿಯಿತು. ಮುಂದೆ ಕನ್ನಡ, ಜ್ಞಾನೇಶ್ವರನೆಂಬ ಮಹಾರಾಷ್ಟ್ರದ ಮಹಾಪುರುಷನ ಕಾಲವು ಸುಮಾರು ಕ್ರಿ. ಶ. ೧೨೯೦. ಇವನು ತನ್ನ ಅಭಂಗಗಳಲ್ಲಿ "ಕಾನಡಾ ಹೋ ವಿಠ್ಠಲು ಕರ್ನಾಟಕೂ"[೫೬] ಎಂದು ಹಾಡಿ ಹಾಡಿ ಪಂಢರಿನಾಥನನ್ನು ಒಲಿಸಿಕೊಂಡಿದ್ದಾನೆ. ಆದುದರಿಂದ, ಹದಿಮೂರನೆಯ ಶತಮಾನದಲ್ಲಿ ಭೀಮರಥಿ ನದಿಯ ವರೆಗೂ ಕನ್ನಡವಿದ್ದಿತೆಂದು ಧೈರ್ಯವಾಗಿ ಹೇಳಬಹುದು. ಕ್ರಿ.ಶ. ೧೧೬೦ರಲ್ಲಿ ಆಗಿ ಹೋದ ಸೊನ್ನಲಿಗೆ (ಸೊಲ್ಲಾಪುರ) ಸಿದ್ಧರಾಮನೂ[೫೭] ಕ್ರಿ. ಶ. ೧೩೦೦ರಲ್ಲಿ ಆದ ಪಂಡರಿಗೆಯ (ಪಂಢರಿಪುರದ) ಚೌಂಡರಸನೂ[೫೮] ಆ ನಾಡಿನಲ್ಲಾದ ಪ್ರಖ್ಯಾತ ಕನ್ನಡ ಮಹಾಪುರುಷರು, ಕವಿಗಳು; ಅಷ್ಟೆ ಏಕೆ ೧೬-೧೮ನೆಯ ಶತಮಾನದ ವರೆಗೂ ಪುಣೆ ಪ್ರಾಂತದಲ್ಲಿ (ಪುರಂದರಗಡ) ಸಹ ಕನ್ನಡಕವಿಗಳು ಅಪ್ಪಿತಪ್ಪಿ ಹುಟ್ಟುತ್ತಿದ್ದುದಕ್ಕೆ ಭಗವದ್ಭಕ್ತ ಪುರಂದರದಾಸರು[೫೯] ಲಾವಣಿಕಾರ ರಾಮಜೋಶಿಗಳೂ ಸಾಕ್ಷಿ.[೬೦] ಅಲ್ಲದೆ, ಸಾತಾರಾ, ಸೊಲ್ಲಾಪುರ ಜಿಲ್ಹೆಗಳಲ್ಲಿ ಕನ್ನಡ ಮಾತಾಡುವ ಜನರಿರುವ ತಾಲೂಕುಗಳು ಈಗ ಸಹ ಎಷ್ಟೊ ಇವೆ. ಹದಿಮೂರನೆಯ ಶತಮಾನಕ್ಕೂ ಹಿಂದೆ ಹೋದರೆ ಕನ್ನಡವು ಗೋದಾವರಿಯವರೆಗೂ ಇದ್ದಿತೆಂದು ಕಂಡು ಬರುತ್ತದೆ. ಕ್ರಿ. ಶ. ೮೧೫-೭೭ ವರೆಗೆ

ಆಳಿದ ನೃಪತುಂಗನ ಅಮೋಘವಾಣಿಯು "ಕಾವೇರಿಯಿಂದ ಮಾ ಗೋದಾವರಿವರಂ ಇರ್ದ ನಾಡದಾ ಕನ್ನಡ ದೊಳ್"ವೆಂದು ಸಾರುತ್ತಲಿದೆ, ಕವಿರಾಜಮಾರ್ಗದಲ್ಲಿ. ಇವನು ('ರಠ' 'ರಾಠ' 'ರಟ್ಟ' 'ರಾಷ್ಟ್ರಿಕ') ರಾಷ್ಟ್ರಕೂಟನು, ವೈದ್ಯಪ್ರಭೃತಿಗಳ ಅಭಿಪ್ರಾಯದಂತೆ, ಮರಾಠನು. ಆದುದರಿಂದ, ಇವರು ನೃಪತುಂಗನ ಈ ಮಾತನ್ನು ದುರ್ಲಕ್ಷಿಸ ಬಾರದಾಗಿತ್ತು. ಏನೂ ಸಂದಿಗ್ಧತೆಯಿಲ್ಲದ 'ಅತಿಶಯಧವಲ'ವಾದ 'ಅಮೋಘ'ವಾದ ನೃಪತುಂಗನ ಈ ಮಾತು ಹಲವರಿಗೆ ಒಣಹೆಮ್ಮೆಯ ಹುರುಳಿಲ್ಲದ ನುಡಿಯೆನಿಸಬಹುದು. ಆಗಲಿ, ಮರಾಠಿ ಸಾಹಿತ್ಯದೊಳಗಿನ ಉಲ್ಲೇಖಗಳೇನಾದರೂ ಅಲ್ಲಗಳೆಯಲಿಕ್ಕೆ ಬರುವುದಿಲ್ಲವಷ್ಟೆ?

ಜ್ಞಾನೇಶ್ವರನಿಗಿಂತಲು ಮುಂಚೆ ಕೆಲವು ವರುಷ ಮಹಾರಾಷ್ಟ್ರದಲ್ಲಿ 'ಮಹಾನುಭಾವ'ವೆಂಬ ಪಂಥವು ತಲೆದೋರಿ, ಮರ್ಹಾಟಿ ಸಾಹಿತ್ಯಕ್ಕೆ ಅನಂತ ಉಪಕಾರಗಳನ್ನು ಮಾಡಿತು. ಮರ್ಹಾಟಿ-ಮಹಾರಾಷ್ಟ್ರಗಳ ಉಜ್ವಲ ಅಭಿಮಾನವು ಮಹಾನುಭಾವರಲ್ಲಿ ಅನ್ಯಾದೃಶವಾದುದು. ಲೀಲಾಚರಿತ್ರವೆಂಬ ಗ್ರಂಥದೊಳಗಿನ ಮಹಾರಾಷ್ಟ್ರ ವರ್ಣನೆಯ ಒಂದು ಅವತರಣಿಕೆಯನ್ನು ಶ್ರೀ ಕುಲಕರ್ಣಿಯವರ ಪುಸ್ತಕದೊಳಗಿಂದ ಇಲ್ಲಿ ಕೊಟ್ಟಿದೆ. ಈ ಉಲ್ಲೇಖವು ನಾಲ್ಕೈದು ಕಾರಣಗಳ ಸಲುವಾಗಿ ಅತ್ಯಂತ ಮಹತ್ವದ್ದಾಗಿದೆ. ಆದುದರಿಂದ, ಇದನ್ನು ಚೆನ್ನಾಗಿ ಓದಿ ಅರಿತುಕೊಳ್ಳುವುದು-ತಿಳಿದುಕೊಳ್ಳುವುದು ಆವಶ್ಯಕ. ಇದು ಕ್ರಿ. ಶ. ೧೧೯೦ರಲ್ಲಿ ಬರೆಯಲ್ಪಟ್ಟದ್ದು.

ಸಾಠಿ ಲಕ್ಷ ದೇಶ ಮಹಾರಾಷ್ಟ್ರ। ತೇಥಿಂಚೆ ಶಿಹಾಣೆ।
ಸುಭಟೂ ವೇದಶಾಸ್ತ್ರ ಚಾತುರ್ಯಾಚೀ ಪೇಠೂ। ಭರ್ಲೀ ತಿಯೇ ದೇಶೀ।
ಐಸೆ ತೆ ಮಹಾರಾಷ್ಟ್ರ ರಾಯೇ ಸುಂದರೂ। ವರೀ ಮಹಾರಾಷ್ಟ್ರ ಭಾಷಾ ಚತು ರೂ।
ತೇಹಿ ವಸವಿಲೇರೂ ಗಂಗಾ ತೀಂ। ಕ್ಷೇತ್ರ ತ್ರ್ಯಂಬಕು ವೇಂಹೀ॥
ಪಶ್ಚಿಮೆ ತ್ರ್ಯಂಬಕೂ ಪೂರ್ವೇ ಸಾಗರ ವೇಂಹೀಂ।
ದ್ವಾದಶ ಯೋಜನೇಂ ಉಭಯ ಗಂಗಾತೀರೀಂ ಐಸೆ ತೋಂ ಗಂಗಾತಟ
ಮಹಾರಾಷ್ಟ್ರೀ ದೇಶ ಮ್ಹಣಿಜೆ ಖಂಡಮಂಡಳಃ ಜೈಸೇಃ। (೧)
ಫಲೇ ಠಾಣಾ ಪಾಸೌನಿ ದಕ್ಷಿಣೇಸಿ ಮರ್ಹಾಠೀ ಭಾಷಾ
ಜೇತುಲಾ ಠಾಯಿ ವರ್ತೇ ತೇಂ ಏಕ ಮಂಡಲ।
ತಯಾಸಿ ಉತ್ತರೆ ಬಾಲೇಟಾಘಾಟಾ ಸೇವಠ ಅಸೆ। ಐಸೆ ಏಕ ಮಂಡಳ (೨)
ಮಗ ಉಭಯ ಗಂಗಾತೀರ ತೇಹಿ ಏಕ ಖಂಡಮಂಡಳ। (೩)
ಆನ ತಯಾಪಾಸೌನಿ ಮೆಘಕರ ಘಾಟ ತೇ ಏಕ ಮಂಡಳ।
ತಯಾ ಪಾಸೌನಿ ಅವಧೆ ವರಾಡಃ ತೇಹಿ ಏಕ ಮಂಡಳ ಪರ
ಆಘವೀಚಿ ಮಿಶೌನಿ ಮಹಾರಾಷ್ಟ್ರಚಿ ಬೋಲಿಜೆ।
ಕಿಂಚಿತ್ ಕಿಂಚಿತ್ ಭಾಷೇಚಾ ಪಾಲಟ ಐಸೆ ಮಣ್ಹೌನಿ
ಖಂಡಮಂಡಳ್ಹೆ ಮ್ಹಣಾವೀಂ.[೬೧]

ಇದರಲ್ಲಿ ಬಂದಿರುವ ಮುಖ್ಯ ಸಂಗತಿಗಳಿಷ್ಟು; ಅರುವತ್ತು ಲಕ್ಷ ಮಹಾರಾಷ್ಟ್ರ. ಗಂಗಾ (ಗೋದಾವರಿ) ತೀರದಲ್ಲಿ ತ್ರ್ಯಂಬಕ (ನಾಸಿಕದ) ವರೆಗೆ ಮಹಾರಾಷ್ಟ್ರದ ರಾಯರು (ಮಹಾರಾಷ್ಟ್ರರನ್ನು) ಒಕ್ಕಲಾಗಿಸಿದ್ದಾರೆ. (ಮಹಾರಾಷ್ಟ್ರದ) ಪಶ್ಚಿಮಕ್ಕೆ ತ್ರ್ಯಂಬಕ (ನಾಸಿಕ); ಪಶ್ಚಿಮಕ್ಕೆ ಸಾಗರ ಉಭಯ ಗಂಗಾತೀರದ ವರೆಗೆ (ದಕ್ಷಿಣೋತ್ತರ) ಹನ್ನೆರಡು ಯೋಜನ ವಿಸ್ತೀರ್ಣ. ಹೀಗಿದು ಗಂಗಾತಟಾಕವು ಮಹಾರಾಷ್ಟ್ರದಲ್ಲಿ;

(೧) ಫಲೆ ಠಾಣೆ (ಪೈಠಣ)ದಿಂದ ದಕ್ಷಿಣಕ್ಕೆ ಎಲ್ಲಯ ವರೆಗೆ ಮರ್ಹಾಟಿ ಮಾತು ಇರುವುದೊ ಅಲ್ಲಿಯ ವರೆಗೆ (ಮಹಾರಾಷ್ಟ್ರ) ಒಂದು ವಿಭಾಗ; ಇದರ ಉತ್ತರದ ತುದಿ ಬಾಲೇಘಟ್ಟ; (೨) ಇನ್ನು ಉಭಯ ಗಂಗಾತೀರವೂ ಒಂದು ವಿಭಾಗ. (೩) ಮತ್ತು ಅಲ್ಲಿಂದ ಮೇಘಕರ ಘಟ್ಟ ಹಾಗೂ ವರ್ಹಾಡ ಸೇರಿ ಒಂದು ವಿಭಾಗ: ಹೀಗಿವು ಮಹಾರಾಷ್ಟ್ರದೊಳಗಿನ ಖಂಡಮಂಡಲಗಳು. ಕಿಂಚಿತ್ ಕಿಂಚಿತ್ ಭಾಷಾಭೇದಗಳು ಇರುವುದರಿಂದ ಇವುಗಳಿಗೆ ಖಂಡಮಂಡಲಗಳೆನ್ನಬೇಕು. ಮಹಾನುಭಾವರ ಈ ಲೇಖದೊಳಗಿನ ಪ್ರತಿಯೊಂದು

ಸಂಗತಿಯೂ ವಿಚಾರಾರ್ಹವಾಗಿದೆ. ಈ ಉಲ್ಲೇಖದಿಂದ ಒಂಬತ್ತನೆಯ ಶತಮಾನದ ನೃಪತುಂಗನು ಗೋದಾವರಿಯ ವರೆಗೆ ಕನ್ನಡವೆಂದು ಹೇಳಿದ್ದುದರಲ್ಲಿ ಎಳ್ಳಷ್ಟೂ ಸುಳ್ಳಿಲ್ಲವೆಂದು ಸಿದ್ಧವಾಗುತ್ತಲಿದೆ. ಇಷ್ಟೆ ಅಲ್ಲ, ನೃಪತುಂಗನೆ ಸೌಜನ್ಯದಿಂದ ಗೋದಾವರಿ ಮೇಗಡೆ ನೆಲಹಿಡಿದಿದ್ದ ಕನ್ನಡವನ್ನು 'ಜೀವನ್ಮೃತ' ವೆಂದು ಭಾವಿಸಿ ಆ ಭಾಗವನ್ನು ಕರ್ಣಾಟದಲ್ಲಿ ಸೇರಿಸಿಕೊಳ್ಳದೆ ಉದಾರತನವನ್ನು ತೋರಿಸಿದ್ದಾನೆಂದು ಹೇಳಬೇಕಾಗುತ್ತದೆ. ಏಕೆಂದರೆ, ವರ್ಹಾಟ ನಾಗಪುರಗಳ ಕಡೆಗೆ ಕನ್ನಡ ಕುರುಂಬರೂ, ಹೊಲೆಯರೂ, ಗೊಲ್ಲರೂ ಈಗಲು ಉಂಟೆಂದು ಗ್ರಿಯರಸನ್ ಸಾಹೇಬರು ಹೇಳುತ್ತಾರೆ.[೬೨] ಅಲ್ಲದೆ, ಮಹಾನುಭಾವರ ಲೀಲಾಚರಿತ್ರೆಯೊಳಗಿನ ಮೇಲಣ ಉಲ್ಲೇಖವು ಕ್ರಿ. ಶ. ೧೧೯೦ರಲ್ಲಿಯದು. ಹನ್ನೆರಡನೆಯ ಶತಮಾನದಲ್ಲಿಯೂ 'ಮಹಾರಾಷ್ಟ್ರ' ತ್ರ್ಯಂಬಕೂ ವೇರ್ಥಿ' ಎಂದು ಈ ಲೇಖನದಿಂದ ಗೊತ್ತಾಗುತ್ತದೆ. ಪ್ರತಿನೂರಿನ್ನೂರು ವರುಷಗಳೊಳಗೆ ಒಂದು ನದಿಯಿಂದ ಮತ್ತೊಂದು ನದಿಯ ವರೆಗೆ ಗೋದಾ-ಭೀಮಾ-ಕೃಷ್ಣಾ ಹೀಗೆ ಕನ್ನಡವು ಕೆಳಕೆಳಗೆ ಸರಿದುದನ್ನು -ಸರಿಸಲ್ಪಟ್ಟುದನ್ನು ಇತಿಹಾಸವು ಹೇಳುತ್ತದೆ. ಆದುದರಿಂದ, ೧೨ನೆಯ ಶತಮಾನದಲ್ಲಿ 'ತ್ರ್ಯಂಬಕೂ ವೇರ್ಥಿ' ಬೇರೂರಿ ಸ್ಥಿರವಾಗಿ ನಿಂತುಕೊಂಡಿದ್ದ ಮರ್ಹಾಟಿಯು ಒಂಬತ್ತನೆಯ ಶತಮಾನದಲ್ಲಿ ಅದಕ್ಕೂ ಮೇಲ್ಗಡೆಗೆ ಇರಬೇಕೆಂದು ಹೇಳ ಬೇಕಾಗುತ್ತದೆ ಅಥವಾ ನೃಪತುಂಗನ ಕಾಲಕ್ಕೆ ಮರ್ಹಾಟಿಯು ತ್ರ್ಯಂಬಕದಲ್ಲಿ ಕಾಲಿಟ್ಟಿದ್ದರೂ ಚೆನ್ನಾಗಿ ತಳವೂರಿದ್ದಿಲ್ಲ ವೆನ್ನಬೇಕಾಗುತ್ತದೆ. ಮೇಲಣ ಅವತರಣಿಕೆಯೊಳಗಿನ "ಮಸವಿಲೇ" ಎಂಬ ಶಬ್ದವು, ಈ ಮಸತಿಯು ಹೊಸತಾಗಿಯೆ ಆಯ್ತೆಂಬುದನ್ನೂ ಸೂಚಿಸುತ್ತಲಿದೆ. "ಪೈಠಣದಿಂದ ದಕ್ಷಿಣಕ್ಕೆ ಎಲ್ಲಿಯವರೆಗೆ ಮರ್ಹಾಟಿ ಮಾತು ಅಲ್ಲಿಯ ವರೆಗೆ ಮಹಾರಾಷ್ಟ್ರ" ಎಂಬ ವಾಕ್ಯವು ಪ್ರಾಚೀನ ಕಾಲದಿಂದಲೂ ಮಹಾರಾಷ್ಟ್ರದ ದಕ್ಷಿಣ ಮೇರೆಯು ಎಷ್ಟು ಅನಿಶ್ಚಿತ ಮತ್ತು ಅಸ್ಥಿರವಾಗಿದ್ದಿತೆಂಬುದನ್ನು ಸ್ಪಷ್ಟಪಡಿಸುತ್ತಿದೆ. ಮನುಷ್ಯನ ನೆರಳು ಅವನು ನಿಂತಲ್ಲಿಂದ ದೂರದ ವರೆಗೆ ಬೀಳುವಂತೆ ಮರ್ಹಾಟರ ನೆರಳು ಅವರು ನಿಜವಾಗಿ ಇದ್ದ ಸ್ಥಳದಿಂದ ಮುಂದೆ ಎಷ್ಟೋ ಯೋಜನ ದೂರ ಬೀಳುತ್ತಿತ್ತು. ವರ್ಹಾಟದಲ್ಲಿದ್ದಾಗಲೇ ತ್ರ್ಯಂಬಕದ ವರೆಗೆ : ತ್ರ್ಯಂಬಕಕ್ಕೆ ಬರುತ್ತಲೆ ಪಂಢರಪುರದ ವರೆಗೆ: ಪಂಢರಪುರದಲ್ಲಿ ಕಾಲಿಡುತ್ತಲೆ ಕೃಷ್ಣೆಯ ವರೆಗೆ, ಕೃಷ್ಣೆಗೆ ಬಂದು ನಿಂತೊಡನೆ ತುಂಗಾ- ಕಾವೇರಿಗಳವರೆಗೆ ಅವರ ನೆರಳು ಬಿದ್ದುದನ್ನು ನೋಡಬಹುದು. ಆದುದರಿಂದ, ನೆರಳಿನಿಂದ ಮನುಷ್ಯನು ಬರಲಿದ್ದಾನೆಂದು ಊಹಿಸಬಹುದೇ ಹೊರತು ಬಂದೇಬಿಟ್ಟನೆಂದು ಮಾತ್ರ ಎಣಿಸಲಾಗದು. ಒಂಬತ್ತನೆಯ ಶತಮಾನದಲ್ಲಿಯೆ ಅಲ್ಲ ಹನ್ನೆರಡನೆಯ ಶತಮಾನ ಹಾಗೂ ಹದಿಮೂರನೆಯ ಶತಮಾನದಲ್ಲಿಯ ಮಹಾರಾಷ್ಟ್ರವು ತ್ರ್ಯಂಬಕ, ಪೈಠಣಗಳನ್ನು ಬಿಟ್ಟು ಮುಂದೆ ಸರಿದಿದ್ದಿಲ್ಲವೆಂಬುದು ಮಹಾರಾಷ್ಟ್ರದ ಪ್ರಾಚೀನ ಲೇಖಕರ ಪ್ರಮಾಣಗಳಿಂದಲೆ ಸಿದ್ಧವಾಗುತ್ತದೆ. ಆದುದರಿಂದ, ಅದಕ್ಕೂ ಹಿಂದೆ ಅಂದರೆ ಏಳನೆಯ ಶತಮಾನದೊಳಗಂತೂ ಗೋದಾವರಿಯ ದಕ್ಷಿಣಕ್ಕೆ ಮಹಾರಾಷ್ಟ್ರವು ವ್ಯಾಪಿಸಿಕೊಂಡಿರುವ ಸಂಭವವೇ ಇಲ್ಲ.

ಐಹೊಳೆಯ ಶಾಸನದಲ್ಲಿ ರವಿಕೀರ್ತಿ ಎಂಬ ಕವಿಯು ಎರಡನೆಯ ಪುಲಿಕೇಶಿಯ ದಿಗ್ವಿಜಯವನ್ನು ಬಹಳ ಚೆನ್ನಾಗಿ ವರ್ಣಿಸಿದ್ದಾನೆ. ಅದರಲ್ಲಿ, ಪುಲಿಕೇಶಿ ಮಹಾರಾಜನು ದಕ್ಷಿಣ ಭಾರತವನ್ನು ಪ್ರದಕ್ಷಿಣೆ ಮಾಡಿ, ಅಲ್ಲಲ್ಲಿಯ ನಾಡುಗಳನ್ನು ಗೆದ್ದು ವಿಜಯಧ್ವಜವನ್ನು ಮೆರೆಯಿಸುತ್ತ ಮರಳಿ ವಾತಾಪಿಪುರ (ಬಾದಾಮಿ) ಪ್ರವೇಶಮಾಡಿದುದನ್ನು ಭೌಗೋಲಿಕ ದೃಷ್ಟಿಯಿಂದ ಬಹಳ ಸರಿಯಾಗಿ ವಿವರಿಸಿದ್ದಾನೆ. ಪುಲಿಕೇಶಿಯು ಮೊದಲು ದಂಡೆತ್ತಿ ಹೋದುದು ವನವಾಸಿ ದೇಶಕ್ಕೆ. ಅಲ್ಲಿಂದ ಗಂಗ, ಅಳುಪ, ಕೊಂಕಣರನ್ನು ಸೋಲಿಸಿ ಲಾಟ, ಮಾಳವ ಘೂರ್ಜರರನ್ನು ಗೆದ್ದನು. ಆಮೇಲೆ, ನರ್ಮದಾ-ವಿಂಧ್ಯ ಪ್ರದೇಶವನ್ನು ಪಾದಾಕ್ರಾಂತ ಮಾಡಿದನು. ತರುವಾಯ ಮೂರು ಮಹಾರಾಷ್ಟ್ರಕಗಳನ್ನು ಆಡಳಿತಕ್ಕೆ ಒಳಪಡಿಸಿಕೊಂಡನು; ಮುಂದೆ ಕೋಸಲ, ಕಲಿಂಗಗಳ ರಾಜರನ್ನು ಮಾಂಡಲಿಕರನ್ನಾಗಿಸಿ, ಪಿಷ್ಟಪುರವನ್ನು ಹಿಟ್ಟು ಮಾಡಿ, ಕಾಂಚೀಪುರವನ್ನು ಸೂರೆಗೊಂಡು ಪಲ್ಲವರನ್ನು ಸೋಲಿಸಿದನು. ಚೋಳ, ಕೇರಳ, ಪಾಂಡ್ಯರನ್ನು ಅಂಕೆಯಲ್ಲಿ ತಂದು, ಸಮಸ್ತದಿಕ್ಕುಗಳನ್ನು ಗೆದ್ದು, ವಾತಾಪೀಪುರಕ್ಕೆ ಬಿಜಯಂಗೈದನೆಂದು ಕ್ರಮಬದ್ಧವಾದ ವರ್ಣನೆಯಿದೆ. ಇದರಲ್ಲಿ ಮೂರು ಮಹಾರಾಷ್ಟ್ರಕಗಳೂ ಪುಲಿಕೇಶಿಯು ಗೆದ್ದನಾಡುಗಳೆಂಬುದು ಸ್ಪಷ್ಟವಿದೆ. ಆದರು 'ಪುಲಿಕೇಶಿಯು ಮಹಾರಾಷ್ಟ್ರವನ್ನು ಗೆದ್ದು ಆಳಿದವನಲ್ಲ, ಮೂಲ

ಮಹಾರಾಷ್ಟ್ರ ರಾಜನೆ' ಎಂಬಂತೆ ಎಷ್ಟೊ ವಿದ್ವಾಂಸರ ಬರೆವಣಿಗೆಗಳಿಂದ ಭ್ರಮೆಯುಂಟಾಗುವಂತಿದೆ. 'ಮಹಾರಾಷ್ಟ್ರಕಾಣಾಂ, ತ್ರಯಾಣಾಂ' ಎಂಬ ವಾಕ್ಯಕ್ಕೆ ಎಳೆದಾಡಿ ಅರ್ಥವನ್ನು ಹಿಂಡುತ್ತಲಿರುವುದನ್ನು ನೋಡಿದರೆ 'ಮಹಾರಾಷ್ಟ್ರ' ಶಬ್ದದ ವಿಷಯದಲ್ಲಿರುವ ಅಜ್ಞಾನವು ವ್ಯಕ್ತವಾಗುತ್ತಲಿದೆ. ಕವಿರಾಜಮಾರ್ಗ, ಲೀಲಾಚರಿತ್ರ ಮತ್ತು ಜ್ಞಾನೇಶ್ವರರ ಅಭಂಗಗಳ ಉಲ್ಲೇಖಗಳಿಂದ ಮಹಾರಾಷ್ಟ್ರವು ೧೦-೧೨ ನೆಯ ಶತಮಾನದ ವರೆಗೂ ಗೋದಾವರಿಯ ದಕ್ಷಿಣಕ್ಕೆ ಇರಲೇ ಇಲ್ಲವೆಂಬುದು ನಿಸ್ಸಂದಿಗ್ಧವಾಗಿ ಸಿದ್ಧವಾಗಿದೆ. ಹೀಗಿದ್ದರೂ 'ಮಹಾರಾಷ್ಟ್ರಕಾಣಾಂ ತ್ರಯಾಣಾಂ' ಎಂದು ಹೇಳಿದುದರೊಳಗೆ ಕುಂತಲ (ಕರ್ಣಾಟ)ವೂ ಸೇರುತ್ತಿದೆಯೆಂದು ಹಠಾತ್ತಾಗಿ ಹೇಳುವವರೂ ಉಂಟು! ಆದರೆ, ಇಂತಹ ಅಪಲಾಪಗಳಿಗೆ ಇತಿಹಾಸದಲ್ಲಿ ಮಾತ್ರ ಆಧಾರವಿಲ್ಲ. ಪುಲಿಕೇಶಿಯ ಕಾಲಕ್ಕೆ ಗೋದಾವರಿಯ ಕೆಳಗಡೆಗೆ ಮಹಾರಾಷ್ಟ್ರವೇ ಇದ್ದಿಲ್ಲ. ಅಲ್ಲದೆ, ಈ ಮೊದಲೆ ಕೊಟ್ಟಿರುವ ಲೀಲಾಚರಿತ್ರೆಯೊಳಗಿನ ಮರ್‍ಹಾಟಿ ಅವತರಣಿಕೆಯಿಂದ ಸುಮಾರಾಗಿ ಮೂರು ಮಹಾರಾಷ್ಟ್ರಕಗಳಾಗುವುವೆಂಬುದು ಗೊತ್ತಾಗುವಂತಿದೆ. ಆ ಲೇಖದೊಳಗೆ ಪ್ರತಿಸಾಲಿಗಿರುವ 'ಮಂಡಳ' 'ಖಂಡಮಂಡಳಗಳು' ಸ್ವಲ್ಪ ಅರ್ಥಕ್ಕೆ ತೊಂದರೆಯನ್ನುಂಟು ಮಾಡುವುದು ನಿಜ. ಆದರು 'ಮಃಗ', 'ಆನ' ಎಂಬ ವಾಕ್ಯ ಸಮುಚ್ಚಯಕಾವ್ಯಯಗಳಿಂದ ಮಹಾರಾಷ್ಟ್ರದ ಮೂರು ವಿಭಾಗಗಳಾವುವೆಂಬುದನ್ನು ಅರಿತುಕೊಳ್ಳಲಿಕ್ಕೆ ಬಹಳ ಸಹಾಯವಾಗುವಂತಿದೆ. ಸಂಸ್ಕೃತದಲ್ಲಿ ಪ್ರತ್ಯಯಕ್ಕೆ ಅಲ್ಪಾರ್ಥವಿದೆ. ಆ ಶಾಸನದಲ್ಲಿ ಮಹಾರಾಷ್ಟ್ರಕವೆಂದು ಹೇಳಿರುವುದರಿಂದ ಅವು ಮಹಾರಾಷ್ಟ್ರದ ಸಣ್ಣ ಒಳಭಾಗಗಳೆಂದು ಸ್ಪಷ್ಟವಿದೆ.

ಎರಡನೆಯ ಪುಲಕೇಶಿ ಮಹಾರಾಜನ ಕಾಲಕ್ಕೆ ಹ್ಯೂಯನ್‌ತ್ಸಾಂಗ್ ಎಂಬ ಚೀನದೇಶದ ಪ್ರವಾಸಿಯು ಹಿಂದೂದೇಶಕ್ಕೆ ಬಂದಿದ್ದ. ಅವನು ತಾನು ಕಂಡು ಕೇಳಿದ ಸಂಗತಿಗಳನ್ನೆಲ್ಲ ಬರೆದಿಟ್ಟಿದ್ದಾನೆ. ಅದರಲ್ಲಿ 'ಮಹೋಲೋಚ' (ಮಹಾರಾಷ್ಟ್ರ) ದ ವರ್ಣನೆಯೂ ಉಂಟು. ಇವನು ಬರೆದಿಟ್ಟ ಪುಲಿಕೇಶಿವಲ್ಲಭನ ರಾಜಧಾನಿಯ ವರ್ಣನೆಯನ್ನು ಓದಿ ಎಷ್ಟೊ ವಿದ್ವಾಂಸರು ಇವನು ಪುಲಿಕೇಶಿಯ ರಾಜ್ಯಕ್ಕೆ ಬಂದಿದ್ದನೆ ಇಲ್ಲವೆ ಎಂಬ ಬಗ್ಗೆ ಸಂದೇಹವುಳ್ಳವರಾಗಿದ್ದಾರೆ. ಬಾದಾಮಿಗೂ ಆತನ ರಾಜಧಾನಿಯ ವರ್ಣನಕ್ಕೂ ಸರಿಹೋಗುವುದೇ ಇಲ್ಲ. ಆದುದರಿಂದ ಹ್ಯೂಯನ್‌ತ್ಸಾಂಗ್‌ಗನು ದೂರದಿಂದಲೆ ಪುಲಿಕೇಶಿವಲ್ಲಭನ ಕೀರ್ತಿಯನ್ನು ಕೇಳಿ ಅದೆಲ್ಲವನ್ನು ಬರೆದಿಟ್ಟಿರಲೂ ಬಹುದೆಂದು ಊಹಿಸುತ್ತಾರೆ. ಅದು ಹೇಗೆ ಇರಲಿ; ಅವನು ಇಲ್ಲಿ ಬಂದು ಮಹೋಲೋಚ (ಮಹಾರಾಷ್ಟ್ರ) ವನ್ನು ನೋಡಿ ವರ್ಣಿಸಿದನೆಂದು ಗ್ರಹಿಸಿದರೂ ಅಡ್ಡಿಯಿಲ್ಲ. ಮೇಲ್ಕಾಣಿಸಿದ ವಿವರಣೆಯಲ್ಲಿ ಮಹಾರಾಷ್ಟ್ರದ ಸೀಮಾಪ್ರದೇಶವು ನಿಶ್ಚಿತವಾಗಿದೆ. ಮಹಾರಾಷ್ಟ್ರದ ದಕ್ಷಿಣಗಡಿಯು ಗೋದಾವರಿ. ಡಾ. ಫ್ಲೀಟರು ಆ ಹ್ಯೂಯನ್‌ತ್ಸಾಂಗನು ವರ್ಣಿಸಿದ ಪುಲಿಕೇಶಿಯ ರಾಜಧಾನಿಯು ಬಾದಾಮಿಯಲ್ಲ; ನಾಸಿಕವೆಂದು ಹೇಳುವುದೂ ಇದಕ್ಕೆ ಸರಿಹೋಗುತ್ತದೆ. ನಾಸಿಕವಲ್ಲ, ಪೈಠಣವೆಂದು ಇನ್ನೊಂದು ಅಭಿಪ್ರಾಯವಿದೆ. ಅಂತೂ ಆಗಿನ ಕಾಲದ ಮಹಾರಾಷ್ಟ್ರವು ಗೋದಾವರಿಯ ಉತ್ತರತೀರದ ವರೆಗೂ ತನ್ನ ವರ್ಚಸ್ಸನ್ನು ಸ್ಥಾಪಿಸಲಾರಂಭಿಸಿದ್ದಿತು. ನಾಸಿಕ ಅಥವಾ ಪೈಠಣ ಎಂಬುದು ಮುಖ್ಯ ಪಟ್ಟಣವಾಗಿದ್ದಿತು ಎಂದು ಬೇರೆ ಬೇರೆ ಹಲವು ಪ್ರಮಾಣಗಳಿಂದಲೂ ಸಿದ್ಧವಾಗುತ್ತಲಿದೆ.

ಪ್ರಥಮ ಮಹಾರಾಷ್ಟ್ರ

ಒಂಬತ್ತನೆಯ ಶತಮಾನದಲ್ಲಿ ನೃಪತುಂಗನು ಧ್ವನಿತಮಾಡಿರುವಂತೆ ಗೋದಾವರಿಯ ವರೆಗೆ ಮಹಾರಾಷ್ಟ್ರವು ಸಂಪೂರ್ಣವಾಗಿ ಇನ್ನೂ ವ್ಯಾಪಿಸಿಕೊಂಡಿರುವುದು ಸಾಧ್ಯವಿಲ್ಲವೆಂದು ಈ ಮೊದಲೆ ಒಮ್ಮೆ ಸೂಚಿಸಿದ್ದಾಗಿದೆ. ಪ್ರತಿ ನೂರಿನ್ನೂರು ವರ್ಷಗಳಲ್ಲಿ ಕನ್ನಡರನ್ನು ಒಂದೊಂದು ಹೊಳೆ ಹಿಂದಕ್ಕೆ ನೂಕಿದ ಮರ್‍ಹಾಟಿಯು ಮುಂದೆ ಕ್ರಿ. ಶ. ೧೧೯೦ರ ವರೆಗೂ ಗೋದಾತೀರದ ವರೆಗೆ ಸ್ವಸ್ಥವಾಗಿರುವುದು ಸಾಧ್ಯವಿಲ್ಲ. ಲೀಳಾಚರಿತ್ರೆಯ

ಮಹಾನುಭಾವನೆ ಇನ್ನೂ 'ತ್ರ್ಯಂಬಕೂ ವೇರ್ಧಿ' ಅಷ್ಟೆ ಮಹಾರಾಷ್ಟ್ರವೆಂದು ಒಪ್ಪಿಕೊಂಡಿರುವುದರಿಂದ ನೃಪತುಂಗನ ಕಾಲಕ್ಕೆ ಗೋದಾವರಿಯ ವರೆಗೆ ಮಹಾರಾಷ್ಟ್ರದ ಛಾಯೆ ಬಿದ್ದಿರಬೇಕು. ಇನ್ನೂ ವರ್ಹಾಟವೆ ನಿಜಮಹಾರಾಷ್ಟ್ರವಿರಲಿಕ್ಕೆ ಬೇಕು. ಒಂಬತ್ತು-ಹತ್ತ ನೆಯ ಶತಮಾನದ ರಾಜಶೇಖರನು ವರ್ಹಾಟ (ವಿದರ್ಭ) ವನ್ನು ಮಹಾರಾಷ್ಟ್ರವೆಂದು ವರ್ಣಿಸಿದುದೂ ಇದಕ್ಕೆ ಪ್ರಮುಖ ಸಾಕ್ಷಿ.

ಆದುದರಿಂದ, ವರ್ಹಾಟವೇ ಪ್ರಥಮ ಮಹಾರಾಷ್ಟ್ರ. ಮಹಾರಾಷ್ಟ್ರವೆಂಬುದು ಮರ್ಹಾಟ ಶಬ್ದದ ಭಾಷಾಂತರ. ಮಹಾರಾಷ್ಟ್ರದ ಮೂಲವು ವರ್ಹಾಟ, ವರ್ಹಾಟವೆ ಮೂಲ ಮಹಾರಾಷ್ಟ್ರ. ಇವೆರಡರ ಮೂಲ: ಮರ್ಹಾಟ ಅಥವಾ ಮರಹಟ್ಟವೆಂಬ ಪ್ರಾಚೀನ ನಾಮಾಭಿಧಾನ. ಇದೇ ಈ ಪ್ರಬಂಧದ ಹುರುಳು ಹಾಗೂ ತಿರುಳು.

ನೆರಯೋಲೆ (Appendix)

೧

'ಮಹಾರಾಷ್ಟ್ರ' ಶಬ್ದದ ಪ್ರಾಚೀನ ಉಲ್ಲೇಖಗಳು

(ಮಹತ್ವದ ಕೆಲವು ಮಾತ್ರ)

ಜನರು

೧. **ವಾತ್ಸ್ಯಾಯನನ ಕಾಮಸೂತ್ರ** (ಸುಮಾರು ೪ನೆಯ ಶತಮಾನ)
ಸಕಲ ಚತುಃಷಷ್ಟಿ ಪ್ರಯೋಗರಾಗಿರಾಣ್ಯೋ ಅಶ್ಲೀಲ ಪರುಷವಾಕ್ಯ ಪ್ರಿಯಾಃ
ಶಯನೇ ಚ ಸರಭಸೋಪಕ್ರಮಾ ಮಹಾರಾಷ್ಟ್ರಿಕ್ಯಃ॥

೨. **ವರಾಹಮಿಹಿರನ ಭೃಗುಸಂಹಿತೆ** (೬ನೆಯ ಶತಮಾನ)
ಭಾಗ್ಯೇ ರಸವಿಕ್ರಯಿಣಃ ಪಣ್ಯಸ್ತ್ರೀ ಕನ್ಯಕಾ ಮಹಾರಾಷ್ಟ್ರಾಃ ॥ ೧೦. ೮॥

ದೇಶ

೩. **೨ನೆಯ ಪುಲಿಕೇಶಿ ಮಹಾರಾಜನ ಐಹೊಳೆಶಾಸನ** (೭ನೆಯ ಶತಮಾನ)
ಅಗಮತ್ ಅಧಿಪತಿತ್ವಂ ಯೋ ಮಹಾರಾಷ್ಟ್ರಕಾಣಾಂ
ನವನವತಿ ಸಹಸ್ರ ಗ್ರಾಮಭಾಜಾಂ ತ್ರಯಾಣಾಂ (೧೨ನೆಯ ಸಾಲಿನಲ್ಲಿ)

೪. **ಹ್ಯೂಯನ್‌ತ್ಸಾಂಗ ಚೀನದೇಶದ ಯಾತ್ರಿಕನ** (೭ನೆಯ ಶತಮಾನ)
'ಮಹೊಲೋಚ'ದ ರಾಜಧಾನಿ ಫ್ಲೀಟರ ಅಭಿಪ್ರಾಯದಂತೆ ನಾಸಿಕವೆ ಸರಿಯಾಗಿ ಕಾಣುತ್ತದೆ; ಆ ಕಾಲದಲ್ಲಿ ನಾಸಿಕದ ವರೆಗೆ ಮಹಾರಾಷ್ಟ್ರವೆಂದು ಇದರಿಂದ ಧ್ವನಿತವಾಗುತ್ತದೆ.

೫. **ನೃಪತುಂಗ-ದೇವಾನುಮತಮಪ್ಪ ಕವಿರಾಜಮಾರ್ಗಂ** (೯ನೆಯ ಶತಮಾನ

ಕಾವೇರಿಯಿಂದಂ ಆ ಗೋದಾವರಿವರಂ ಇರ್ದನಾಡದಾ ಕನ್ನಡದೊಳ್ (೧. ೩೬) ಆ ನದಿಯ ಮೇಗಡೆ ವರೆಗೆ ಮಹಾರಾಷ್ಟ್ರದ ಅಂಚುಗಳು ಬಂದು ಮುಟ್ಟುತ್ತಿರಬೇಕೆಂದು ಊಹಿಸಲು ಅಡಿಯಿಲ್ಲ.

೬. **ರಾಜಶೇಖರನ ಬಾಲರಾಮಾಯಣ** (೧೦ನೆಯ ಶತಮಾನ)
ಸುಗ್ರೀವ : ಭರತಾಗ್ರಜ, ಅಯಂ ಅಗ್ರೇ ಮಹಾರಾಷ್ಟ್ರ ವಿಷಯಃ
ರಾಮ : ಸೋಽಯಂ ಸುಭ್ರು ಪರೋವಿದರ್ಭವಿಷಯಃ ಸರಸ್ವತೀ ಜನ್ಮಭೂಃ । ೧೦.೭೪.

೭. **ಮುರಾರಿಕವಿ** (ಕಾಲ?)
ಇದಮಗ್ರೇ ಮಹಾರಾಷ್ಟ್ರ ಮಂಡಲೈಕ ಮಂಡನಂ ಕುಂಡಿನನಾಮ ನಗರಮ್। (ಅನರ್ಘ ರಾಘವ ನಾಟಕ)

೮. **ಆಲ್ಬೆರೂನಿ** (೧೦ನೆಯ ಶತಮಾನ)
ನೇಮಾವರದ ದಕ್ಷಿಣಕ್ಕೆ, (ನರ್ಮದಾ ತೀರದ ನೇಮಾಡ?) ಮರಾಠ ದೇಶ.

೯. **ಮಹಾನುಭಾವ ಪಂಥದ ಲೀಳಾಚರಿತ್ರೆ** (ಕ್ರಿ. ಶ. ೧೧೯೦)
ಸಾಠಿ ಲಕ್ಷ ಮಹಾರಾಷ್ಟ್ರ- ।...... ತೇಹಿ ವಸವಿಲೆ ಗಂಗಾತೀರೂ। ತ್ರ್ಯಂಬಕೂ ವೇರ್ಥಿ।

೧೦. **ಜ್ಞಾನೇಶ್ವರರ ಗೀತಾಭಾವಾರ್ಥದೀಪಿಕೆ** (ಕ್ರಿ. ಶ. ೧೨೯೦)
ಐಸೇ ಯುಗೀ ಪರಿಕಳಿ। ಆಣಿ ಮಹಾರಾಷ್ಟ್ರ ಮಂಡಳಿ।
ಶ್ರೀ ಗೋದಾವರಿಚ್ಯಾ ಕೂಲಿಂ। ದಕ್ಷಿಣಲಿಂ ॥ ೧೮. ೧೮೦೩॥
(ಜ್ಞಾನೇಶ್ವರರ ಕಾಲಕ್ಕೆ ಮಹಾರಾಷ್ಟ್ರವು ಗೋದಾವರಿಯ ದಕ್ಷಿಣಕ್ಕೆ ಅಡಿಯಿಡಲಾರಂಭಿಸಿದ ಸೂಚನೆ ಇದರಲ್ಲಿದೆ. ಆದರೆ ಪಂಡರಿಗೆ-ಪಂಢರಪುರವು ಕರ್ನಾಟಕದಲ್ಲಿ ಎಂದು ಇವರೇ ಹೇಳಿರುವುದರಿಂದಲೂ ಸುಮಾರು ಇದೇ ಕಾಲಕ್ಕೆ ಪಂಡರಿಗೆಯಲ್ಲಿ ಚೌಂಡರಸನೆಂಬ ವಿಖ್ಯಾತ ಕವಿಯು ಆಗಿ ಹೋದುದರಿಂದಲೂ ೧೩ನೆಯ ಶತಮಾನದಲ್ಲಿ ಮಹಾರಾಷ್ಟ್ರವು ಭೀಮಾತೀರದ ವರೆಗೆ ಬಂದು ತಾಕಿದ್ದಿಲ್ಲವೆಂದು ನಿಃಸಂದೇಹವಾಗಿ ಹೇಳಬಹುದು.)

೧೧. **ಬಹಮನಿಗಳ ಕಾಲ** (೧೪-೧೫ ನೆಯ ಶತಮಾನ)
ವರ್ಹಾಡಿ (ಮರ್ಹಾಟಿ) ಗಳನ್ನೆ ಹೆಚ್ಚಾಗಿ ತಮ್ಮ ನಿಯೋಗದಲ್ಲಿ ಇಟ್ಟುಕೊಳ್ಳುತ್ತಿದ್ದುದರಿಂದ ಕಲಬುರ್ಗಿಯ ವರೆಗೆ ಮಹಾರಾಷ್ಟ್ರವು ಬಂದಿತು. ಮರಾಠಿ ಜ್ಞಾನಕೋಶ ವರ್ಹಾಡ ನೋಡಿರಿ ಮತ್ತು ಮಹಾರಾಷ್ಟ್ರ ಸಾರಸ್ವತ, ಮರಾಠಿ ಕವಿಚರಿತ್ರೆಗಳಲ್ಲಿಯೂ ಇದನ್ನು ಅರಿತು ಕೊಳ್ಳಬಹುದು.

೧೨. **ಆರ್ಕಾಡ ಸಂಸ್ಥಾನದ ಕೈಫಿಯತ್ತು** (ಕಾಲ? ೧೬ನೆಯ ಶತಮಾನದ ಇತಿಹಾಸ)
ಪೆನುಗೊಂಡ ಕರ್ನಾಟರಾಜ್ಯ; ವಿಜಾಪೂರು ಮಹಾರಾಷ್ಟ್ರ ರಾಜ್ಯ! (ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ ಸಂಪುಟ ix. ಪು. ೧೩೩. ೧೩೭.)

ವಿಜಾಪುರದ ಆದಿಲ್‌ಶಾಹಿಗಳ ಓಲಗದಲ್ಲಿ ಮರ್ಹಾಟಿಯ ಪ್ರವೇಶವು ಹೇಗಾಯಿತೆಂಬ ಬಗ್ಗೆ ಬಹಳ ಮಹತ್ವದ ಸಂಗತಿಯನ್ನು ಶ್ರೀ ಪಾಂಗಾರಕರರು ಹೇಳಿದ್ದಾರೆ!

ಅದಿಲ್‌ಶಹನು (೧೫ನೆಯ ಶತಮಾನ) ಮುಕುಂದರಾಯನೆಂಬ ಮರ್ಹಾಟಾ ಸರದಾರನ ತಂಗಿಯನ್ನು ತನ್ನ ಬಂಗಾರದವಳನ್ನಾಗಿ ಮಾಡಿಕೊಂಡನು. ಅವಳು ಮರ್ಹಾಟರಿಗೂ ಮರ್ಹಾಟಿ ಭಾಷೆಗೂ ಓಲಗದಲ್ಲಿ ಪ್ರಾಶಸ್ತ್ಯವನ್ನು ಕೊಡಿಸಿದಳು. ವಿಜಾಪುರವು ಮಹಾರಾಷ್ಟ್ರ ರಾಜ್ಯವಾಯಿತು! ವಿಜಾಪುರದ ಒಬ್ಬ ಆದಿಲಶಹನಿಗೆ ಕನ್ನಡಜಾಣನೆಂದು ಬಿರುದು ಮತ್ತೆ!

ಹೀಗೆಲ್ಲ ಆದುದರಿಂದಲೆ, ಪೆನುಗೊಂಡೆಗೆ ಕರ್ನಾಟವು ಹೋಯಿತು, ವಿಜಾಪುರ ನಾಡು ಮಹಾರಾಷ್ಟ್ರ ವಾಯಿತು! ಕನ್ನಡ ಜಾಣರು ವರ್ಹಾಟಿಗೆ ಮನಸೋತುದರಿಂದಲೆ ಕರ್ನಾಟವು ಕ್ಷೀಣವಾಗಿರಬೇಕಲ್ಲವೆ?

ಮೇಲ್ಕಾಣಿಸಿದ ಉಲ್ಲೇಖಗಳಲ್ಲದೆ ವರರುಚಿ, ದಂಡಿ, ಪಂಪ ಮೊದಲಾದ ಪ್ರಾಚೀನರ ಹಾಗೂ ಪುರುಷೋತ್ತಮ ದೇವ, ರಾಮತರ್ಕವಾಗೀಶ, ಕ್ರಮದೀಶ್ವರ, ಮಾರ್ಕಂಡೇಯ, ವಿಶ್ವನಾಥ ಕವಿರಾಜ ಇವರೇ ಮುಂತಾದ ಅರ್ವಾಚೀನರ ಗ್ರಂಥಗಳಲ್ಲಿಯೂ 'ಮಹಾರಾಷ್ಟ್ರೀ' (ಪ್ರಾಕೃತ), ಮಹಾರಾಷ್ಟ್ರ ಶಬ್ದಗಳು ಸಿಕ್ಕುತ್ತವೆ. ಆದರೆ, ಅವು ಸ್ಥಾನ-ನಿರ್ಣಯದ ದೃಷ್ಟಿಯಿಂದ ವಿಶೇಷ ಉಪಯುಕ್ತವಿಲ್ಲ; ಆದುದರಿಂದ ಅವನ್ನಿಲ್ಲಿ ಕೊಟ್ಟಿಲ್ಲ.

೨

ಮರ್ಹಾಟನು ಮತ್ತು ಮಹಾರಾಷ್ಟ್ರನು

ಮರ್ಹಾಟನು ಮತ್ತು ಮಹಾರಾಷ್ಟ್ರನು ಒಂದು ಕಾಲಕ್ಕೆ ತೀರ ಬೇರೆಬೇರೆ. ಇದರ ಗುಟ್ಟು ಸರಿಯಾಗಿ ತಿಳಿಯದಿದ್ದರೆ ಹಿಂದಿನ ಕಾಲದ ಪರಿಸ್ಥಿತಿಯ ಕಲ್ಪನೆಯು ಚೆನ್ನಾಗಿ ಆಗಲಾರದು. ಆದುದರಿಂದ ಅದನ್ನು ಕುರಿತು ಇಲ್ಲಿ ಸಂಕ್ಷಿಪ್ತವಾಗಿ ನಾಲ್ಕು ಮಾತುಗಳನ್ನು ಹೇಳುವುದು ಆವಶ್ಯಕವಾಗಿದೆ. ಆರ್ಯರು ದಕ್ಷಿಣಾಪಥಕ್ಕೆ ಒಕ್ಕಲಾಗಲು ಬಂದುದು ಕ್ರಿಸ್ತಶಕಕ್ಕೆ ಮುಂಚೆ ಏಳನೆಯ ಶತಮಾನದ ತರುವಾಯ.[೬೩] ಅವರಲ್ಲಿ ಬ್ರಾಹ್ಮಣರನ್ನುಳಿದು ಮಿಕ್ಕವರಿಗೆ ಈ ನಾಡಿನೊಡೆಯನೆ ಒಂದುಗೂಡಲು ಬಹಳ ಕಾಲ ಹಿಡಿಯಲಿಲ್ಲ. ಆದರೆ, ಬ್ರಾಹ್ಮಣರಿಗೆ ತಮ್ಮ ಮೊದಲಿನ ದೇಶ, ಭಾಷೆಗಳ ಅಭಿಮಾನವನ್ನು ಬಿಟ್ಟು, ಈ ನಾಡಿನವರಾಗುವುದಕ್ಕೆ ಸಾವಿರಾರು ವರುಷಗಳು ಬೇಕಾದುವು. ಸಂಸ್ಕೃತದಷ್ಟೆ ಪ್ರಾಕೃತಕ್ಕೂ ಮರ್ಯಾದೆಯನ್ನು ಕೊಡುವುದಕ್ಕೆ ಶಾಲಿವಾಹನ ಶಕದ ಉದಯವಾಗಬೇಕಾಯಿತು. ಸಂಸ್ಕೃತ ಪ್ರಾಕೃತಗಳ ಸಾಲಿನಲ್ಲಿ ದೇಶಭಾಷೆಯನ್ನೂ ಸೇರಿಸಿಕೊಳ್ಳುವುದಕ್ಕೂ ೧೦೦೦-೧೨೦೦ ವರುಷಗಳು ಗತಿಸಿದವು. ಮರ್ಹಾಟಿಭಾಷೆಗೆ ಪಂಡಿತರಿಂದ ಮನ್ನಣೆ ದೊರೆತುದು ಕ್ರಿ. ಶ. ೧೨-೧೩ನೆಯ ಶತಮಾನ.

ಸ್ವಲ್ಪ ಹೆಚ್ಚು ಕಡಿಮೆ ಇದೇ ಸ್ಥಿತಿ ದೇಶದ ವಿಚಾರದಲ್ಲಿ. ಪ್ರವಾಹಪತಿತರಾಗಿ ದಕ್ಷಿಣಾಪಥದಲ್ಲಿ ಮನೆಮಾಡಿ ಕೊಂಡಿರಬೇಕಾಗಿದ್ದರೂ ಇವರ ಮನಸ್ಸು, ಬುದ್ಧಿಗಳು ಆರ್ಯಾವರ್ತದಲ್ಲಿ. ಆದರೆ, ಪರಿಸ್ಥಿತಿಯು ಇವರಿಗೆ ಈ ನಾಡಿನೊಡನೆ ಒಂದುಗೂಡುವುದಕ್ಕೆ, ನಾಡಿನ ಅಭಿಮಾನ ತಾಳುವುದಕ್ಕೆ ಒತ್ತಾಯಪಡಿಸುತ್ತಲಿದ್ದಿತು. ವೇದ, ಸೂತ್ರ-ಗೋತ್ರಗಳಿಂದ ಮೊದಲು ಬ್ರಾಹಣರಲ್ಲಿದ್ದ ವರ್ಗಗಳು ಹಿಂದೆ ಬಿದ್ದುವು. ನೆಲಸಿದ ನಾಡಿನ ಎಷ್ಟೋ ಆಚಾರವಿಚಾರಗಳು ಸೇರಿಕೊಂಡವು. ಎಲ್ಲರಿಗೂ ಸಾಮಾನ್ಯವಾದ ಮೊದಲಿನ ವೈದಿಕ ನಡೆವಳಿಗಳೊಡನೆ ಪ್ರಾಂತೀಯ ವಿಶಿಷ್ಟ ಆಚಾರಗಳು ಸೇರುತ್ತಲೆ ಬ್ರಾಹ್ಮಣರಲ್ಲಿ 'ತಾವು ಹೆಚ್ಚು' 'ಅವರು ಕಡಮೆ' ಎಂಬೀ ಬಗೆಯ ಬಿಂಕವು ತಲೆದೋರಿತು. ಋಗ್ವೇದಿ, ಯಜುರ್ವೇದಿ ಅಥವಾ ಆಪಸ್ತಂಬ, ಆಶ್ವಲಾಯನ, ಕಾಣ್ವ ಈ ತೆರನ ಮೊದಲಿನ ಪಂಗಡಗಳ ಬಹದಲು ಹೊಸ ಗುಂಪುಗಳು ತಲೆಯೆತ್ತಿದುವು. ಬ್ರಾಹ್ಮಣರು ದೇಶಸ್ಥರಾದರು; ಕೊಂಕಣಸ್ಥರಾದರು; ಕರ್ಹಾಟ (ಡೇ)ರಾದರು. ಬಡಗುನಾಡು, ಮುಲುಕನಾಡಿಗರಾದರು. ನಿಜವಾಗಿ ಬ್ರಾಹ್ಮಣರೆಲ್ಲರು ಉತ್ತರದವರು; ಎಂದರೆ ಗೌಡರು; ಅಥವಾ ಇನ್ನೊಂದು ತೆರನಾಗಿ ಹೇಳುವುದಾದರೆ ಆ ಪುಣ್ಯತಮ ಸರಸ್ವತೀ ತೀರದಿಂದ ದಿಕ್ಕು ದಿಕ್ಕಿಗೂ ಹೊರಟವರು. ಆದರೆ, ತಾವು ನೆಲೆಸಿದ ನಾಡಿನ ಅಭಿಮಾನವು ಅಂಟಿಕೊಂಡಕೂಡಲೇ ಇವರು ಗೌಡರು, ಇವರು ಸಾರಸ್ವತರು, ಇವರು ದೇಶಸ್ಥರು, ಇವರು ಕೊಂಕಣಸ್ಥರು ಎಂದು ತಮ್ಮೊಳಗೆ ಭೇದಗಳನ್ನು ಕಲ್ಪಿಸಿದರು!

ಕೊಲ್ಹಾಪುರದ ದೇವಿಯ ಗುಡಿಯಲ್ಲಿರುವ ಒಂದು ಶಾಸನದಲ್ಲಿ 'ಕರಹಾಟಕ'ನೆಂದು ಒಬ್ಬ ಬ್ರಾಹ್ಮಣನಿಗೆ ಅಡ್ಡಹೆಸರಿದೆಯಂತೆ. ಅದು ಹನ್ನೆರಡನೆಯ ಶತಮಾನದ ಶಾಸನವೆಂದು ಹೇಳುತ್ತಾರೆ. ಎರಡನೆಯ ಪುಲಿಕೇಶಿಯ ಒಂದು ತಾಮ್ರಪಟದಲ್ಲಿ 'ಅಂಬರಖೇಡ ಕುಲನಾಮಧೇಯಾಯ' ಎಂದು ಉಲ್ಲೇಖವಿದೆ. ಈ ಬಗೆಯ ಊರಿನ ಅಡ್ಡಹೆಸರಿನ ಪದ್ಧತಿಯು ಏಳನೆಯ ಶತಮಾನದಿಂದ ಕಂಡುಬರುತ್ತಿದೆಯೆಂದು ಪ್ರೊ. ದೇವದತ್ತ ಭಂಡಾರಕರರ ಅಭಿಪ್ರಾಯವಿದೆ.[೬೪] ಅಂತೂ ಬ್ರಾಹ್ಮಣರು ೭ರಿಂದ ೧೨ನೆಯ ಶತಮಾನದೊಳಗಾಗಿ ಈ ನಾಡಿನೊಡನೆ

ಒಂದುಗೂಡಲು ಮನಸ್ಸುಳ್ಳವರಾದರು. ದಕ್ಷಿಣಗಂಗಾ, ದಕ್ಷಿಣಕಾಶಿಗಳು ಆ ಕಾಲದಿಂದಲೇ ಪ್ರಾಮುಖ್ಯವನ್ನು ಪಡೆದಿರಬೇಕೆಂದು ತೋರುತ್ತದೆ.*

ಪರಿಸ್ಥಿತಿಯ ಒತ್ತಾಯದಿಂದ ಬ್ರಾಹ್ಮಣರಿಗೆ ಈ ನಾಡಿನವರೆಂದು ಕರೆದುಕೊಳ್ಳಲೇಬೇಕಾಯಿತು. ಆದರೆ, ಈ ನಾಡಿನ ಜನಸಾಮಾನ್ಯರಿಂದಲೂ ತಾವು 'ವಿಶಿಷ್ಟರು', ಎಂಬುದನ್ನು ತೋರಿಸಿಕೊಳ್ಳಲು ಆಗ ಸಹಪ್ರಯತ್ನಪಟ್ಟುದುಂಟು. ಮರ್ಹಾಟನು ಮತ್ತು ಮಹಾರಾಷ್ಟ್ರನು ಎಂಬ ಶಬ್ದಗಳಲ್ಲಿರುವ ಸೂಕ್ಷ್ಮ ಭೇದವೆ ಇದಕ್ಕೆ ನಿದರ್ಶನ. ಪಾಶ್ಚಿಮಾತ್ಯರ ಸಂಸರ್ಗದಿಂದ ನವೀನ ರಾಷ್ಟ್ರೀಯ ಭಾವನೆಯ ಉದಯವಾಗುವವರೆಗೂ ಮಹಾರಾಷ್ಟ್ರದಲ್ಲಿ ಬ್ರಾಹ್ಮಣರು ತಮಗೆ 'ಮರಾಠ'ರೆಂದುಕೊಳ್ಳುವುದನ್ನು ನೋಡಲಿಕ್ಕೆ ಸಿಕ್ಕಲಾರರು. 'ಮರಾಠ'ನೆಂದರೆ ಅದೊಂದು ಜಾತಿ. ಅದರಲ್ಲಿ ಬ್ರಾಹ್ಮಣನ ಸಮಾವೇಶವಾಗುವುದಿಲ್ಲ. ಏಳನೆಯ ಶತಮಾನಕ್ಕೆ ಮುಂಚೆ ಬ್ರಾಹ್ಮಣರು ಇನ್ನೂ ತಮಗೆ ಮಹಾರಾಷ್ಟ್ರೀಯರೆಂದು ಕರೆದುಕೊಳ್ಳುವುದಕ್ಕೂ ಸಿದ್ಧರಿಲ್ಲವೆಂದು ಈ ಮೊದಲಿನ ವಿವೇಚನೆಯಿಂದ ಗೊತ್ತಾಗುವಂತಿದೆ. ಅದರಂತೆ ಕಾಮಸೂತ್ರ ಮತ್ತು ಭೃಗುಸಂಹಿತೆಗಳಲ್ಲಿ ಬಂದ ಉಲ್ಲೇಖಗಳಿಂದಲೂ ಇದೇ ಮಾತು ಧ್ವನಿತವಾಗುತ್ತದೆ. ಆದರೆ, ಈ ನಾಡಿನವರೆಂದುಕೊಳ್ಳುವುದು ಅನಿವಾರ್ಯವಾದಾಗ ಮರ್ಹಾಟ (ಮರಾಠ)ರೆಂದು ದೇಶಿಕರಿಗೂ 'ಮಹಾರಾಷ್ಟ್ರ'ರೆಂದು ಬ್ರಾಹ್ಮಣರಿಗೂ ಕರೆವ ಪರಿಪಾಠವುಂಟಾಗಿರಬೇಕೆಂದು ತೋರುತ್ತದೆ. ಶಿವಾಜಿಯ ಕಾಲದಲ್ಲಿಯೂ ಈ ಬಗೆಯ ಭಿನ್ನಭೇದಗಳಿದ್ದುವು. ಸರ್ ಜದುನಾಥ ಸರಕಾರರಿಂದ ರಚಿತವಾದ ಶಿವಾಜಿ ಚರಿತ್ರೆಯ ಮರಾಠಿ ಭಾಷಾಂತರದ ಪ್ರತಿಯಲ್ಲಿ ಇದನ್ನು ಕುರಿತು ಹೀಗೆ ಬರೆದಿದೆ: "ಹತ್ತೊಂಬತ್ತನೆಯ ಶತಮಾನದ ಕೊನೆಯ ವರೆಗೂ- ಎಂದರೆ ದಕ್ಷಿಣದಲ್ಲಿ ರಾಷ್ಟ್ರೀಯ ಭಾವನೆಯು ಉದಯವಾಗುವ ವರೆಗೆ ಮಹಾರಾಷ್ಟ್ರೀಯ ಬ್ರಾಹ್ಮಣನಿಗೆ ಮರಾಠನೆಂದರೆ ಅವನಿಗೆ ತುಂಬಾ ಅಪಮಾನವಾಯಿತೆಂದೆನಿಸುತ್ತಿತ್ತು. ಕೂಡಲೆ ಸಿಟ್ಟಿನಿಂದ ಆತನು 'ಚಿಃ! ಚಿಃ! ನಾನು ಮರಾಠನಲ್ಲ, ದಕ್ಷಿಣಬ್ರಾಹ್ಮಣನು' ಎಂದು ಉಸುರುತ್ತಿದ್ದನು.[೬೫]

---

* ಇದನ್ನು ಸಪ್ರಮಾಣವಾಗಿ ಸಿದ್ಧಪಡಿಸಿದ ಶ್ರೇಯಸ್ಸು ಡಾ. ಭಂಡಾರಕರರಿಗೇ ಸಲ್ಲುತ್ತದೆ 'The Early History of the Deccan' P. ೧೫ ಇದರಲ್ಲಿರುವ ವಿವರಗಳನ್ನು ಆಸಕ್ತರು ಗಮನಿಸಬಹುದು. (ಸಂ)

ಟಿಪ್ಪಣಿ

೧. Molsworth, ***Marathi English Dictionary,*** P. xxiii
೨. Journal of the Department of Letters, University of Calcutta, Vol. xxiii
೩. Bhandarkar, ***The Early History of the Deccan,*** Pp. 19, 23
೪. ***ಅದೇ,*** ೧೯ನೆಯ ಪುಟದ ಅಡಿಟಿಪ್ಪಣಿ
೫. ***ವಿವಿಧ ಜ್ಞಾನವಿಸ್ತಾರ*** ೧೯೩೦ರ ಸಂಪುಟ
೬. Bhandarkar R. G., ***The Early History of the Deccan,*** Pp. f.
೭. Althekar, ***The Rashtrakutas and their times,*** Pp. 21
೮. Bhandarkar R. G., ***The Early History of the Deccan,*** P. 18
೯. ***Ibid,*** P. 18, 19
೧೦. ***ಅದೇ,*** ಪು. ೧೫
೧೧. Vaidya, C. V., ***The History of Maharastra,*** Vol I. P. 262
೧೨. ಪಾಂಗಾರಕರ, ***ಮರಾಠಿ ವಾಙ್ಮಯಾಚಾ ಇತಿಹಾಸ,*** ಪುಟ. ೩೦೯
೧೩. ಜೋಶಿ ರಾ. ಬಿ., ***ಮರಾಠಿ ಭಾಷೇಚ ಘಟನಾ,*** ಪುಟ ೬೬
೧೪. ಭಾವೆ. ವಿ. ಲ., ***ಮಹಾರಾಷ್ಟ್ರ ಸಾರಸ್ವತ,*** ಪು. ೬-೭
೧೫. ***ಮಹಾರಾಷ್ಟ್ರ ಸಂಸ್ಕೃತೀಚಾ ಇತಿಹಾಸ,*** ಅಭಿನವ ಗ್ರಂಥಮಾಲಾ, ನಾಗಪುರ, ಪು. ೬೯
೧೬. Krishnaswamy Iyngar, ***Beginnigns of South Indian History,*** p. 72
೧೭. ರಾಜವಾಡೆ, ***ಐತಿಹಾಸಿಕ ಪ್ರಸ್ತಾವನಾ ಸಂಗ್ರಹ.*** ಪುಟ ೯೧
೧೮. Vincent Smith, ***Early History of India,*** P. 430
೧೯. ಶೇಷಯ್ಯಂಗಾರ್ ಎಚ್., ಕವಿರಾಜಮಾರ್ಗಂ, ೨-೨೮
೨೦. Bhandarkar, ... atribe of the name of Rattas has from the remotest times held political supremacy in the Deccan ***The Early History of the Deccan,*** P. 18
೨೧. Althekar, ***Rashtrakutas and Their Times,*** p. 18
೨೨. Bahandarkar R. G., ***The early History of the Deccan,*** p.15
೨೩. ***Indian Antiquiery,*** Vol XII p. 220
೨೪. ***Karnataka Historical Journal,*** Vol. No. 2 ; Epigraphia Indica April, 1932
೨೫. Althekar, ***Rastrakutas and Their Times,*** p. 16
೨೬. ಭಿಡೇ ಬಾ. ಅ., ***ಮರಾಠಿ ಭಾಷಾ ವ ವಾಙ್ಮಯಾಚಾ ಇತಿಹಾಸ*** ಪು. ೧೮-೧೯
೨೭. ***ಅದೇ,*** ಪುಟ : ೧೮-೧೯
೨೮. Chattarji S. K., ***Pre-Aryan and Pre-Dravidian,*** Introduction, P. XII
೨೯. Mahadeva govinda Ranade, ***The Rise of Maratha Power***
೩೦. ಜಾಧವರಾವ್, ***ವಿವಿಧಜ್ಞಾನ ವಿಸ್ತಾರ*** ೧೯೩೧ ಸಂಪುಟ. ಪು. ೧೨೬
೩೧. ***ಕೋಲ್ಹಟಕರಾಂಚಾ ಲೇಖಸಂಗ್ರಹ,*** ಪು. ೫೮೬-೭
೩೨. Vincent Smith, ***Early History of India,*** p. 429
೩೩. Jules Bloch, ***Pre-Aryan and Pre-Dravidion,*** p. 37 and 58
೩೪. Narasimhachar R., ***History of Kannada Language,*** p. 355
೩೫. ನರಸಿಂಹಾಚಾರ್ಯ ರಾ., ***ಕವಿಚರಿತೆ*** ಭಾಗ- ೧, ಮುನ್ನುಡಿ ಪು. ೬

೩೬. ರಾಷ್ಟ್ರಕೂಟ ೩ನೆಯ ಕೃಷ್ಣನ ಕರ್ಹಾಟದ ಶಾಸನ (೧೦ನೆಯ ಶತಮಾನ) ದ ೬೩ನೆಯ ಸಾಲು. ***Epigraphia Indica*** Vol. IX. ನೋಡಿರಿ

೩೭. ಬಿಲ್ಹಣ ***ವಿಕ್ರಮಾಂಕದೇವ ಚರಿತಂ,*** ಅ. ೧೪, ಶ್ಲೋ. ೧೩.

೩೮. ***Naslik Gazeteer,*** p. 631

೩೯. Levi, ***Pre-Aryan and Pre-Dravidian,*** p. 72

೪೦. Joshi. R. B., ***ಮರಾಠಿ ಭಾಷೇಚೆ ಘಟನಾ,*** ಪು. ೬೮

೪೧. Otto Jespersen's ***Language,*** p. 169, 701, 271

೪೨. ***ಪ್ರಾಕೃತ ಚಿಕಿತ್ಸಾ*** (ನ್ಯಾಯಮೂರ್ತಿ೦ಬ್ಯಾಪಾಯಿ ವಾಹಿಲೇಲಿ ಮಾಳ) ಪು. ೪೭-೪೮

೪೩. ***ಮರಾಠಿ ಭಾಷೇಚೆ ಘಟನಾ*** ಪು. ೭೪; Bhide ***ಮರಾಠಿ ಭಾಷಾ ವ ವಾಙ್ಮಯಾಚಾ ಇತಿಹಾಸ,*** ಪು. ೨೦.

೪೪. Wyld H.C., ***A Short History of English,*** p. 569

೪೫. ಜೈಮಿನಿ, ***ಮೀಮಾಂಸಾ ಸೂತ್ರ,*** ೧. ೩. ೯

೪೬. ಕುಲಕರ್ಣಿ ಕೃ. ಪಾ., ***ಮರಾಠಿ ಭಾಷಾ ಉದ್ಗಮ ವ ವಿಕಾಸ,*** ಪು. ೧೫೭-೮

೪೭. ರಾಜಶೇಖರ, ***ಕಾವ್ಯಮೀಮಾಂಸಾ***

೪೮. Wyld - H. C., ***A Short History of English,*** p. 59

೪೯. ನರಸಿಂಹಾಚಾರ್ಯ ರಾ., ***ಕವಿಚರಿತೆ*** ಸಂಪುಟ ೨. ಮುನ್ನುಡಿ ಪು. ೫

೫೦. Bhandarkar ***The Early History of the Deccan,*** p. 7,, 15

೫೧. ಕೇತಕರ್, ***ಮಹಾರಾಷ್ಟ್ರ ಸಂಸ್ಕೃತೀಚಾ ಇತಿಹಾಸ*** ಪು. ೬೯

೫೨. ರಾಜಶೇಖರ, ***'ಬಾಲರಾಮಾಯಣ'*** ಮುರಾರಿ ಕವಿಯ ***'ಅನರ್ಘರಾಘವ'*** ನಾಟಕ

೫೩. "......Maharashtra or the Deccan, the limits of which were the Narmada in the North and Tungabhadra in the South"- Dr Bhandarkar, Epigraphia Indica vol, V, p. 188 , ಮತ್ತು ಶ್ರೀ ಪಾಂಗಾರಕರ, ***ಮಹಾರಾಷ್ಟ್ರ ವಾಙ್ಮಯಾಚಾ ಇತಿಹಾಸ,*** ಪು. ೩೦೭.

೫೪. ***ಕಣ್ಮರೆಯಾದ ಕನ್ನಡ,*** ಪು. ೩೧ ಜನ್ನನ ***ಅನಂತನಾಥ ಪುರಾಣಂ*** ಆಶ್ವಾಸ ೧೪, ೫೭ರ ವಚನ

೫೫. ಶೇಷಯ್ಯಂಗಾರ್ ಎಚ್., ***ಕವಿರಾಜಮಾರ್ಗಂ*** ದೇಶವಾಚಕ ೧, ೩೬; ೩೭; ಅದೇ, ಭಾಷಾವಾಚಕ ೧. ೩೨. ೪೨. ೪೬.

೫೬. ***ಜ್ಞಾನೇಶ್ವರ ದರ್ಶನ*** ಭಾಗ II ಪು. ೩೭೯

೫೭. ನರಸಿಂಹಾಚಾರ್ಯ ರಾ., ***ಕವಿಚರಿತೆ*** ಭಾಗ I ಪು. ೧೮೩

೫೮. ***ಅದೇ,*** ಪು. ೪೦೩

೫೯. ***ಅದೇ,*** ಭಾಗ-ಎರಡು ಪು. ೨೩೨

೬೦. ಲಾವಣಿಕಾರ ರಾಮಜೋಶಿ, ***ಮಹಾರಾಷ್ಟ್ರ ಸಾರಸ್ವತ*** II ನೇ ಭಾಗ ನೋಡಿರಿ

೬೧. ಕುಲಕರ್ಣಿ ಕೃ. ಪಾ., ***ಮರ್‍ಹಾಟ ಭಾಷಾ-ಉದ್ಗಮ ವ ವಿಕಾಸ,*** ಪು. ೧೯೧-೨

೬೨. Grierson, ***Linguistic Survey of India,*** Vol. VI p. 386, 96

೬೩. Bhandarkar, ***The Early History of the Deccan,*** P. 15

೬೪. ***Indian antiquery,*** vol. 41; p. 72

೬೫. ಜದುನಾಥ ಸರಕಾರ, ***ಶಿವಾಜಿ,*** ಭಾಷಾಂತರಕಾರ ವಿ. ಸ. ವಾಕಸಕರ, ಪು. ೨೮೫

ಮರ್‍ಹಾಟೀ ಸಂಸ್ಕೃತಿ :
ಕೆಲವು ಸಮಸ್ಯೆಗಳು

ಮರ್‍ಹಾಟೀ ಸಂಸ್ಕೃತಿ : ಕಾಂಹೀ ಸಮಸ್ಯಾ

ಅನು : **ಕೀರ್ತಿನಾಥ ಕುರ್ತಕೋಟಿ**

ಅನುವಾದಕರ ಮುನ್ನುಡಿ

ಕನ್ನಡದ ಹಿರಿಯ ಸಂಶೋಧಕರೂ, ವಿಚಾರವೇತ್ತರೂ ಆದ ಶ್ರೀ ಶಂ. ಬಾ. ಜೋಶಿಯವರ ಈ ಗ್ರಂಥ ೧೯೫೨ರಷ್ಟು ಹಿಂದೆಯೇ ಪ್ರಕಟವಾಗಿತ್ತು. ಪ್ರಕಟವಾದೊಡನೆ ಮಹಾರಾಷ್ಟ್ರದಲ್ಲಿ ಈ ಗ್ರಂಥ ಸಾಕಷ್ಟು ಕ್ಷೋಭೆಯನ್ನು ಹುಟ್ಟಿಸಿತು. ಪುಸ್ತಕವನ್ನು ಸಾರ್ವಜನಿಕವಾಗಿ ಸುಟ್ಟುಹಾಕಬೇಕೆನ್ನುವ ವರೆಗೆ ಮಹಾರಾಷ್ಟ್ರೀಯರಲ್ಲಿ ಇದು ತಳಮಳವನ್ನು ಎಬ್ಬಿಸಿತಂತೆ. ಗ್ರಂಥ ಮರಾಠಿಯಲ್ಲಿದ್ದದ್ದರಿಂದ ಕರ್ನಾಟಕದಲ್ಲಿ ಇದರ ಪ್ರಭಾವ ಬೀಳಲಿಲ್ಲ. 'ಮಹಾರಾಷ್ಟ್ರದ ಮೂಲ' ಎಂಬ ಗ್ರಂಥವನ್ನು ಜೋಶಿಯವರು ೧೯೩೪ರಲ್ಲಿಯೇ ಕನ್ನಡದಲ್ಲಿ ಬರೆದು ಪ್ರಕಟಿಸಿದ್ದರು. ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಸಾಂಸ್ಕೃತಿಕ ಸಂಬಂಧ ಒಂದು ದಾಯಾದಿಸಂಬಂಧ ವೆಂಬುದು ಎಂದೋ ಅವರಿಗೆ ಮನವರಿಕೆಯಾಗಿತ್ತು. ಮುಂದೆ ಅವರು ಬರೆದದ್ದೆಲ್ಲ ಈ ಸಂಬಂಧದ ಅರ್ಥಪೂರ್ಣತೆಯನ್ನು ಕುರಿತದ್ದಾಗಿದೆ. ದಾಯಾದಿ ಸಂಬಂಧದ ಸ್ವರೂಪವೇ ದ್ವಂದ್ವಾತ್ಮಕವಾದದ್ದು. ಅಣ್ಣತಮ್ಮಂದಿರ ರಕ್ತಸಂಬಂಧ, ಅಂತೆಯೇ ತೀರ ನಿಕಟವಾದದ್ದು. ಆದರೆ, ಅಣ್ಣತಮ್ಮಂದಿರಂಥ ವೈರಿಗಳೂ ಯಾರೂ ಇಲ್ಲ. ಕರ್ನಾಟಕ ಮತ್ತು ಮಹಾರಾಷ್ಟ್ರಗಳು ಸಾಂಸ್ಕೃತಿಕವಾಗಿ ಒಂದೇ ಪ್ರದೇಶವಾಗಿದ್ದೂ ಈ ಪ್ರದೇಶ ಒಡೆದದ್ದು ಎರಡು ಭಾಷೆಗಳ ಮೂಲಕವಾಗಿ. ಈ ಎರಡೂ ಭಾಷೆಗಳನ್ನು ಬಲ್ಲ ಜೋಶಿಯವರು ಈ ಸಾಂಸ್ಕೃತಿಕ ನಂಟಿನ ರಹಸ್ಯವನ್ನು ಭೇದಿಸಿದರು. ಅವರ ಮನೆಮಾತು ಮರಾಠಿ. ಆದರೆ, ಅವರು ಕನ್ನಡದಲ್ಲಿ ಅಪ್ರತಿಮ ವಿದ್ವಾಂಸರು. ಇದೂ ಒಂದು ಯೋಗಾಯೋಗ. ಇದರ ಹಿಂದೆ ನಡೆದ ಆಟವನ್ನು ನೋಡುವ ಕಣ್ಣು ಅವರೊಬ್ಬರಿಗೇ ಇದೆ ಎಂದರೂ ತಪ್ಪಿಲ್ಲ.

ಮೂಲಗ್ರಂಥಕ್ಕೆ ಬರೆದ ಮುನ್ನುಡಿಯಲ್ಲಿ ಜೋಶಿಯವರು ಈ ವಿಷಯವನ್ನು ಕುರಿತು ಬರೆಯಲು ತಮಗೆ ಶಾಸ್ತ್ರೀಯ ಪದ್ಧತಿಗಳ ಪರಿಚಯವಿಲ್ಲವೆಂದು ಹೇಳಿಕೊಂಡಿದ್ದಾರೆ. ೧೯೫೨ರಲ್ಲಿ ಅವರು ಹೇಳಿದ ಮಾತನ್ನು ಈಗಲೂ ಕೂಡ ಎಷ್ಟೋ ಪಂಡಿತಂಮನ್ಯರ ಬಗ್ಗೆ ಹೇಳಬಹುದಾಗಿದೆ. ಆದರೆ, ಶಾಸ್ತ್ರೀಯ ತಿಳುವಳಿಕೆ ಯಿಂದ ವಿಷಯವನ್ನು ಆಕಲನಮಾಡಿ ಬರೆದರೆ ಬಹಳವಾದರೆ ಒಂದು ಪಿಎಚ್.ಡಿ. ಪ್ರಬಂಧವನ್ನು ಬರೆಯ ಬಹುದು. ಆದರೆ, ಕೈಗೆ ತೆಗೆದುಕೊಂಡ ವಿಷಯ ಗಹನವಾಗಿದ್ದು ಅಭ್ಯಾಸ ಮಾಡುವವನಲ್ಲಿ ಏಕಾಗ್ರತೆ ಇದ್ದರೆ ಶಾಸ್ತ್ರ ತಾನಾಗಿ ಹುಟ್ಟಿಕೊಳ್ಳುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಕನ್ನಡ ಮತ್ತು ಮರ್ಹಾಠಿ ಭಾಷೆಗಳ ಬಾಂಧವ್ಯ ಅನನ್ಯವಾದದ್ದು. ಕನ್ನಡ-ತಮಿಳು, ಕನ್ನಡ-ತೆಲುಗು ಈ ಸಂಬಂಧಗಳು ಬೇರೆ ಬಗೆಯವು. ಜನ್ಯ-ಜನಕ ಸಂಬಂಧದ ನೆನಪು ಬಹಳ ಕಾಲದವರೆಗೆ ಉಳಿಯಬಹುದಾದರೂ ಅದು ಸಮಸ್ಯೆಯನ್ನು ಹುಟ್ಟಿಸುವುದಿಲ್ಲ. ಆದರೆ, ಕನ್ನಡ ಮತ್ತು ಮರ್ಹಾಠಿ ಭಾಷೆಗಳು ಪರಸ್ಪರ ಪ್ರಭಾವದಿಂದ ಒಂದು ಸಂಸ್ಕೃತಿಯನ್ನು ಹುಟ್ಟಿಸಿದ್ದು ಒಂದು ಅನನ್ಯವಾದ ಐತಿಹಾಸಿಕ ಸತ್ಯವಾಗಿದೆ. ಈ ಎರಡು ಭಾಷೆಗಳ ನಡುವಿನ ಆಕರ್ಷಣೆ-ವಿಕರ್ಷಣೆಗಳ

ಇತಿಹಾಸವು ಸಾಕಷ್ಟು ಉದ್ಬೋಧಕವಾಗಿದೆ. ಭಾಷಾಶಾಸ್ತ್ರ, ಮಾನವವಂಶಶಾಸ್ತ್ರ ಮತ್ತು ದೈವತಶಾಸ್ತ್ರಗಳಿಂದ ನೆರವು ಪಡೆದು ಜೋಶಿಯವರು ಈ ಪರಿಸ್ಥಿತಿಯನ್ನು ನಿರೂಪಿಸಿದ್ದಾರೆ.

ಜೋಶಿಯವರ ಈ ಇತಿಹಾಸ ನಿರೂಪಣೆಯಲ್ಲಿ ಕೆಲವು ಬೆರಗುಗೊಳಿಸುವಂಥ ಒಳನೋಟಗಳಿವೆ. ಕರ್ನಾಟಕ ಮತ್ತು ಮಹಾರಾಷ್ಟ್ರಗಳಿಗೆ ಸಾಮಾನ್ಯವಾಗಿರುವ ಸೋದರಮಾವನ ಮಗಳ ಜೊತೆಗೆ ಮದುವೆ ಮಾಡಿಕೊಳ್ಳುವ ಪದ್ಧತಿಯ ಬಗ್ಗೆ ಬರೆಯುವಾಗ ಇಂಥ ಒಳನೋಟಗಳ ಮೂಲಕವೇ ಅವರು ಸತ್ಯಸಂಗತಿಯನ್ನು ಹೊರಗೆಡವಿದ್ದಾರೆ. ಮುಖ್ಯವಾಗಿ ಭಾಷೆಗೂ ಮತ್ತು ಮನುಷ್ಯ ಸಂಬಂಧಗಳಿಗೂ ಇರುವ ಸಮಾನತೆಯನ್ನು ಅವರು ಅರಿತುಕೊಂಡಿದ್ದು ಬಹಳ ಮಹತ್ವದ್ದಾಗಿದೆ. Claude Levi-Strauss ನಂಥ ವಿಖ್ಯಾತ ವಂಶಶಾಸ್ತ್ರಜ್ಞ ತನ್ನ Structure of Kinship ಎಂಬ ಪುಸ್ತಕದಲ್ಲಿ ಇದೇ ಜಾಡನ್ನು ಅನುಸರಿಸುತ್ತಾನೆ. ಭಾಷೆಯಂತೆ ಸಾಮಾಜಿಕ ಸಂಬಂಧಗಳು ವಿನಿಮಯದ ಸಾಧನಗಳಾಗಿವೆ. ಭಾಷೆ, ಸಾಮಾಜಿಕ ಸಂಬಂಧಗಳು ಮತ್ತು ಆರ್ಥಿಕ ವ್ಯವಹಾರ ಇವು ಮೂರನ್ನೂ ಒಟ್ಟಿನಲ್ಲಿ ಅಭ್ಯಾಸಮಾಡದಿದ್ದರೆ ಒಂದು ಸಂಸ್ಕೃತಿಯ ಅಭ್ಯಾಸ ಪೂರ್ಣವಾಗುವುದಿಲ್ಲ. 'ಮಾವ' ಅಥವಾ 'ಮಾಮ' ಎಂಬ ಅಚ್ಚ ದ್ರಾವಿಡ ಶಬ್ದವು ಭಾರತದ ಎಲ್ಲ ಭಾಷೆಗಳಲ್ಲಿಯೂ ಹೊಕ್ಕಿರುವುದು ಆಕಸ್ಮಿಕವಾದ ಸಂಗತಿಯೇನಲ್ಲ.

ಮಹಾರಾಷ್ಟ್ರೀ ಪ್ರಾಕೃತವನ್ನು ಪೋಷಿಸಿ ಬೆಳೆಸಿದ ಕರ್ನಾಟಕವು ಕ್ರಮೇಣ ಅದರಿಂದ ದೂರವಾಗಿರುವ ಇತಿಹಾಸವನ್ನು ಜೋಶಿಯವರು ಈ ಗ್ರಂಥದಲ್ಲಿ ಪುನಃಸೃಷ್ಟಿಸಿದ್ದಾರೆ. ಎರಡು ಭಾಷೆಗಳ ಮತ್ತು ಎರಡು ಸಂಸ್ಕೃತಿಗಳ ನಡುವಿನ ಕೊಡುಕೊಳೆ ನಿರಂತರವಾಗಿ ನಡೆಯತಕ್ಕದ್ದೇ. ಆದರೆ, ಮರ್ಹಾಠಿ ಭಾಷೆ ಕೇವಲ ನಾಮಪದ, ವಿಶೇಷಣಗಳಷ್ಟನ್ನೇ ಅಲ್ಲದೆ ಆಖ್ಯಾತಗಳನ್ನೂ ಕನ್ನಡದಿಂದ ಎರವಲು ಪಡೆದಿರುವದನ್ನು ಜೋಶಿಯವರು ಉಲ್ಲೇಖಿಸಿ ಈ ಅಪರೂಪದ ಕೊಡುಕೊಳೆಯ ಹಿಂದೆ ಇರುವ ಅತ್ಯಂತ ನಿಕಟವಾದ ಸಂಬಂಧವನ್ನು ಬಯಲಿಗೆ ತಂದಿದ್ದಾರೆ. ತೀರ ಆಳವಾದ ಅಭ್ಯಾಸದಿಂದ ಶಾಸ್ತ್ರ ಹುಟ್ಟಿಕೊಳ್ಳುವ ಕ್ರಮಕ್ಕೆ ಇದೊಂದು ಉತ್ಕೃಷ್ಟವಾದ ಉದಾಹರಣೆಯಾಗಿದೆ. ದ್ವೈಭಾಷಿಕತೆಯ ಅನುಕೂಲತೆಗಳನ್ನಲ್ಲದೆ ಅದರ ಸಮಸ್ಯೆಗಳನ್ನು ಕುರಿತು ಕೂಡ ಈ ಗ್ರಂಥದಲ್ಲಿ ಬಹಳ ಉಪಯುಕ್ತವಾದ ಚರ್ಚೆಯಿದೆ. ವೇದಕಾಲದಿಂದ ಪ್ರಾರಂಭಿಸಿ ಇಂದಿನವರೆಗೆ ನಮ್ಮ ದೇಶದ ಭಾಷೆಗಳು ಸಂಸ್ಕೃತ, ಅರಬೀ ಮತ್ತು ಇಂಗ್ಲಿಷ್‌ದಂಥ ಭಾಷೆಗಳ ಪ್ರಭಾವಕ್ಕೆ ಈಡಾಗಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದೆ. ಈ ಸಂಪರ್ಕದಿಂದ ಭಾಷೆ. ಭಾಷೆಗಳಲ್ಲಿ ತರ-ತಮ ಭಾವಗಳೂ ಹುಟ್ಟಿಕೊಂಡಿವೆ. ಭಾಷೆಗಳು ಎಷ್ಟೇ ಭಿನ್ನವಾಗಿದ್ದರೂ ಅವುಗಳಲ್ಲಿ ಒಂದು ಭಾಷೆ ಶ್ರೇಷ್ಠ ಮತ್ತೊಂದು ಕನಿಷ್ಠ, ಒಂದು ಮುಂದುವರಿದದ್ದು ಇನ್ನೊಂದು ಹಿಂದುಳಿದದ್ದು-ಎನ್ನುವ ವರ್ಗೀಕರಣ ಶಾಸ್ತ್ರೀಯವಲ್ಲ ಎಂಬ ಸತ್ಯ ನಮಗಿನ್ನೂ ತಿಳಿಯಬೇಕಾಗಿದೆ. ಶ್ರೇಷ್ಠ ಮತ್ತು ಕನಿಷ್ಠ ಭಾವನೆಗಳು ಹುಟ್ಟುವುದು ರಾಜಕೀಯ ಕಾರಣಗಳಿಗಾಗಿ. ಅದೇನೇ ಇದ್ದರೂ ಜೋಶಿಯವರು ಭಾಷೆಗಳ ಆಳವಾದ ಅಭ್ಯಾಸದ ಮೂಲಕವಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಸಾಂಸ್ಕೃತಿಕ ಸಂಬಂಧದ ಎಲ್ಲ ಪದರುಗಳನ್ನು ಸಮರ್ಥವಾಗಿ ಬಿಚ್ಚಿತೋರಿಸಿದ್ದು ಬಹಳ ಮಹತ್ವದ ಮಾತಾಗಿದೆ.

ಭಾಷೆಯಂತೆಯೇ ಈ ಎರಡು ಪ್ರದೇಶಗಳಲ್ಲಿ ರೂಢವಾಗಿರುವ ದೇವತೆಗಳು ಮತ್ತು ಧರ್ಮಪಂಥಗಳ ಬಗ್ಗೆ ಜೋಶಿಯವರು ವಿಸ್ತಾರವಾಗಿಯೇ ಬರೆದಿದ್ದಾರೆ. ಸಾಮಾಜಿಕ ಸಂಬಂಧಗಳನ್ನು ಅಭ್ಯಾಸ ಮಾಡುವವರು ಹೆಚ್ಚಾಗಿ ಈ ವಿಷಯದಲ್ಲಿ ತಲೆಹಾಕುವುದಿಲ್ಲ. ನಮ್ಮ ಇತಿಹಾಸಕಾರರಿಗೆ ಪುರಾಣ ಮತ್ತು ಕಾವ್ಯಗಳು ವರ್ಜ್ಯವಾಗಿರುವಂತೆ ಸಮಾಜಶಾಸ್ತ್ರಜ್ಞರಿಗೆ ಧರ್ಮ ಮತ್ತು ದೈವತಶಾಸ್ತ್ರಗಳು ವರ್ಜ್ಯವಾಗುತ್ತವೆ. ಆದರೆ, ಧಾರ್ಮಿಕತೆ ನಮ್ಮ ಸಮಾಜ ರಚನೆಯ ಬಹಳ ಮಹತ್ವದ ತತ್ತ್ವವಾಗಿರುವದನ್ನು ಮರೆತರೆ ಅಭ್ಯಾಸದಲ್ಲಿ ಕೊರತೆಯುಂಟಾಗುತ್ತದೆ. ಸಂಸ್ಕೃತಿಯೆಂದರೆ ಧರ್ಮವಲ್ಲ ಎನ್ನುವದೇನೋ ನಿಜ. ಅದಕ್ಕಾಗಿ ಅವೆರಡರ ನಡುವೆ ವಿರೋಧವನ್ನು ಹುಟ್ಟಿಸಿ ಒಂದಕ್ಕಿಂತ ಇನ್ನೊಂದು ಶ್ರೇಷ್ಠ ಎಂಬಂತೆ ಮಾತಾಡಿದರೆ ಅವಿವೇಕದ ಮಾತಾಗುತ್ತದೆ ಸತ್ಯದರ್ಶನಕ್ಕಾಗಿ ಮನುಷ್ಯ

ನಿರ್ಮಿಸಿಕೊಂಡಿರುವ ಹಲವಾರು ಸಾಧನಗಳಲ್ಲಿ ಧರ್ಮ ಬಹಳ ಮಹತ್ತ್ವದ್ದಾಗಿದೆ, ಮತ್ತು ಈ ಎಲ್ಲ ಮನುಷ್ಯ ಪ್ರಯತ್ನಗಳಿಗೆ ನಾವು ಸಾಂಸ್ಕೃತಿಕ ವ್ಯಾಪಾರವೆಂದು ಕರೆಯಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಜೋಶಿಯವರು ಧರ್ಮಪಂಥಗಳು ಮತ್ತು ದೇವತೆಗಳನ್ನು ಕುರಿತು ಈ ಗ್ರಂಥದಲ್ಲಿ ಚರ್ಚಿಸಿದ್ದು ಪ್ರಸ್ತುತ ವಾಗಿದೆಯೆಂದೇ ಹೇಳಬೇಕು.

ದೇವತೆಗಳ ಮತ್ತು ಧರ್ಮಪಂಥಗಳ ಚರ್ಚೆ, ಈ ಗ್ರಂಥದ ಉದ್ದೇಶದ ಮಟ್ಟಿಗೆ ಹೇಳುವದಾದರೆ ಸಾಕಷ್ಟು ಉಪಯುಕ್ತವಾಗಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಸೋದರ ಸಂಬಂಧ ದೇವತೆಗಳ ಇತಿಹಾಸದಲ್ಲಿ ಮತ್ತು ಧರ್ಮಪಂಥಗಳ ಬೆಳವಣಿಗೆಗೆ ಬಂದ ತಿರುವಿನಲ್ಲಿ ಪ್ರತಿಬಿಂಬಿತವಾಗಿದೆ. ಮಲ್ಲಾರಿಯಂಥ ದೇವತಾಪ್ರತಿಮೆಯಲ್ಲಿ ಹಲವಾರು ದೇವತೆಗಳು ಸಂಯೋಜನೆಗೊಂಡು ಮುಂದೆ ಅದೇ ಸಂಯುಕ್ತದೇವತೆ ಮಲ್ಲಯ್ಯ ಮತ್ತು ಖಂಡೋಬನೆಂದು ವಿಭಕ್ತವಾದದ್ದರ ಇತಿಹಾಸ ಈ ಎರಡು ಪ್ರದೇಶಗಳ ಸಾಂಸ್ಕೃತಿಕ ಇತಿಹಾಸದ ಪ್ರತಿಮೆಯಾಗಿ ಉದ್ಬೋಧಕವಾಗಿದೆ. ಅಷ್ಟೇ ಉದ್ಬೋಧಕವಾಗಿರುವದು 'ಕಾನಡಾ ವಿಠ್ಠಲ'ನ ವಿಲಕ್ಷಣವಾದ ಆಗುಹೋಗಿನ ಕಥೆ. ಈ ದೇವತೆಗಳ ಬಗ್ಗೆ ಜನಸಾಮಾನ್ಯರಲ್ಲಿರುವ ಭಕ್ತಿ ಪ್ರಾದೇಶಿಕ ಗಡಿಗಳನ್ನು ಮೀರಿ ಬೆಳೆದು ಬಂದಿರುವದರಿಂದ ಈ ಎರಡು ಪ್ರದೇಶಗಳ ನಿಕಟವಾದ ಸಂಬಂಧವನ್ನು ಈ ದೇವತೆಗಳು ಇನ್ನಷ್ಟು ದೃಢವಾಗಿಸುತ್ತವೆಂಬ ಮಾತು ಒಪ್ಪತಕ್ಕದ್ದಾಗಿದೆ. ಹದಿಮೂರನೆಯ ಶತಮಾನದ ವರೆಗೆ ಕರ್ನಾಟಕದಿಂದ ಪೋಷಿತವಾದ ಮಹಾರಾಷ್ಟ್ರ ಮುಂದಿನ ಶತಕಗಳಲ್ಲಿ ತನ್ನ ಸಾಂಸ್ಕೃತಿಕಋಣವನ್ನು ಬಡ್ಡಿಸಹಿತ ಮುಟ್ಟಿಸಿದ ಕಥೆಯೂ ಅಷ್ಟೇ ರೋಚಕವಾಗಿದೆ.

ಇದಲ್ಲದೆ, ಕೊನೆಯ ಎರಡು ಅಧ್ಯಾಯಗಳಲ್ಲಿರುವ ಸಾಮಗ್ರಿಯೂ ಬಹಳ ಬೆಲೆಯುಳ್ಳದ್ದಾಗಿದೆ. ಈ ಗ್ರಂಥ ತನಗೆ ಉಪಯುಕ್ತವಾಗಿರುವದನ್ನು ಈ ಸಾಮಗ್ರಿಯಿಂದ ತೆಗೆದುಕೊಂಡು ಉಳಿದದ್ದನ್ನು ಬಿಟ್ಟಂತಾಗಿದೆ. ಈ ಗ್ರಂಥದ ಉದ್ದೇಶದ ದೃಷ್ಟಿಯಿಂದ ಇದು ಅನಿವಾರ್ಯವಾಗಿದೆ ಎಂಬ ಮಾತೂ ಸುಳ್ಳಲ್ಲ. ಆದರೆ, ಇಂಥದೇ ಸಾಮಗ್ರಿಯನ್ನು ಉಪಯೋಗಿಸಿಕೊಂಡು ಜೋಶಿಯವರು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. 'ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ' 'ಕನ್ನಡದ ನೆಲೆ' ಮೊದಲಾದ ಗ್ರಂಥಗಳಲ್ಲಿ ಪೌರಾಣಿಕ ಪ್ರತಿಮೆಗಳನ್ನು ವಿಶ್ಲೇಷಿಸಿ ಕೆಲವು ನಿರ್ಣಯಗಳಿಗೆ ಬಂದುಮುಟ್ಟಿದ್ದಾರೆ. ಪುರಾಣಗಳನ್ನು ಅರ್ಥವಿಸುವ ರೀತಿಯನ್ನು ಅಲ್ಲಿ ಕಂಡುಹಿಡಿದಿದ್ದಾರೆ. ಈ ಗ್ರಂಥದಲ್ಲಿ ಅಂಥ ಪ್ರಯತ್ನವೇನೂ ಇಲ್ಲ. ಅರ್ಥವಿಸುವ ರೀತಿ ಕೂಡ ಗ್ರಂಥದ ಉದ್ದೇಶಕ್ಕೆ ಮಾತ್ರ ಸೀಮಿತವಾಗಿದೆ. ಆದರೆ, ಅದೇ ಕಾರಣಕ್ಕಾಗಿ ಮುಂದಿನ ಗ್ರಂಥಗಳಲ್ಲಿ ಕಂಡುಬರುವ ಕೆಲವು ಸಮಸ್ಯೆಗಳೂ ಇಲ್ಲಿ ಇಲ್ಲ. ಒಂದು ದೇಶದ ಸಂಸ್ಕೃತಿಯ ಅಧ್ಯಯನ ಎಷ್ಟು ನೆಲೆಗಳಿಂದ ನಡೆಯಬಹುದೆಂಬುದನ್ನು ಇಲ್ಲಿ ತೋರಿಸಿಕೊಟ್ಟಂತಾಗಿದೆ. ಅದಕ್ಕಿಂತ ಹೆಚ್ಚು ಮಹತ್ವದ ಮಾತೆಂದರೆ ಕೈಗೆ ದೊರೆತ ಸಾಮಗ್ರಿಯನ್ನು ವಿಂಗಡಿಸಿಕೊಂಡು, ಅದರ ಅಭ್ಯಾಸದ ಮೂಲಕವಾಗಿ ಒಂದು ಶಾಸ್ತ್ರನಿರ್ಮಾಣಕ್ಕಾಗಿ ಇಲ್ಲಿ ದಾರಿಮಾಡಿಕೊಟ್ಟಂತಾಗಿದೆ.

ಸಾಮಾಜಿಕ ಅಧ್ಯಯನ ಕಲೆಯೆಂದರೆ ಕಲೆ, ಶಾಸ್ತ್ರವೆಂದರೆ ಶಾಸ್ತ್ರ. ಭೌತಶಾಸ್ತ್ರದಂತೆ ಅದು ಕೇವಲ ಶಾಸ್ತ್ರೀಯ ನಿಯಮಗಳನ್ನು ಅನುಸರಿಸಿ ಬೆಳೆಯಲಾರದು. ಸಾಮಾಜಿಕ ಅಧ್ಯಯನದ ಕೇಂದ್ರವಸ್ತು ಮನುಷ್ಯನೇ ಹೊರತು ಜಡವಸ್ತುವಲ್ಲ. ಜಡವಸ್ತುವಿನ ಪ್ರಾಮಾಣಿಕ ಸ್ವರೂಪ ಮನುಷ್ಯನಿಗಿಲ್ಲ. ಅದೇ ರೀತಿ ಮನುಷ್ಯ ತೋರಿಸುವ ಪ್ರತಿಕ್ರಿಯೆಯನ್ನು ಜಡವಸ್ತು ತೋರಿಸಲಾರದು. ಆದ್ದರಿಂದ ಸಾಮಾಜಿಕ ಅಧ್ಯಯನದಲ್ಲಿ ಸಜೀವತೆ ಮತ್ತು ವಸ್ತುನಿಷ್ಠತೆಗಳು ಕೂಡಿಯೇ ಇರಬೇಕಾದದ್ದು ಅನಿವಾರ್ಯವಾಗಿದೆ. ಜೋಶಿಯವರ ಈ ಗ್ರಂಥದಲ್ಲಿ ಅಂಥ ಅಪರೂಪದ ಹೊಂದಾಣಿಕೆ ಇದೆ.

ಶ್ರೀ ಶಂ. ಬಾ. ಜೋಶಿಯವರು ಈ ಕಾಲದ ಅತ್ಯಂತ ಧೀಮಂತ ಲೇಖಕರಲ್ಲಿ ಒಬ್ಬರಾಗಿದ್ದಾರೆ. ಕನ್ನಡ ದಲ್ಲಿ ಈಗಾಗಲೇ ಅವರು ಸಾಕಷ್ಟು ಪುಸ್ತಕಗಳನ್ನು ಬರೆದಿದ್ದಾರೆ. ಅವೆಲ್ಲ ಗ್ರಂಥಗಳ ವಸ್ತು ಒಂದೇ, ಅದು

ಸಾಂಸ್ಕೃತಿಕ ಅಧ್ಯಯನ. ಅವರ ಸಾಂಸ್ಕೃತಿಕ ಚಿಂತನ ಹೆಚ್ಚಾಗುತ್ತ, ವಿಸ್ತಾರ ಪಡೆಯುತ್ತ ಹೋದಂತೆ ಅವರ ಗ್ರಂಥಗಳ ಸಂಖ್ಯೆಯೂ ಹೆಚ್ಚಾಯಿತು. ಈ ಗ್ರಂಥಗಳ ಅಧ್ಯಯನವು ಶಾಸ್ತ್ರೀಯ ದೃಷ್ಟಿಯಿಂದ ಇನ್ನೂ ಆಗಬೇಕಾಗಿದೆ. ಈಗ ಅನುವಾದಗೊಂಡಿರುವ ಈ ಗ್ರಂಥ ಇನ್ನೂವರೆಗೆ ಮರಾಠಿಯಲ್ಲಿತ್ತು, ಈಗ ಕನ್ನಡಕ್ಕೆ ಬಂದಿದೆ. ಈ ಗ್ರಂಥದ ಅನುವಾದದ ಕೆಲಸ ಅನಿರೀಕ್ಷಿತವಾದ ರೀತಿಯಲ್ಲಿ ನನ್ನ ಕಡೆಗೆ ಬಂದದ್ದು ನನ್ನ ಸುದೈವವೆಂದೇ ನಾನು ಭಾವಿಸಿದ್ದೇನೆ. ಅನುವಾದದ ಕೆಲಸ ನನಗೆ ಬಹಳ ಸಂತೋಷವನ್ನು ಕೊಟ್ಟಿತು. ನಾನು ಈ ಕ್ಷೇತ್ರದಲ್ಲಿ ಏನೂ ಕೆಲಸ ಮಾಡಿರದಿದ್ದರೂ ಇದರ ಬಗ್ಗೆ ನನಗೆ ಆಸಕ್ತಿ ಇದೆ. ನನ್ನ ಸಂತೋಷ ಆ ಕಾರಣಕ್ಕಾಗಿ. ಜೋಶಿಯವರು ನನಗಿಂತ ಬಹಳ ಹಿರಿಯರು, ಅಲ್ಲದೆ ಪ್ರಾಜ್ಞರು. ಅಂಥವರ ಗ್ರಂಥವನ್ನು ಅನುವಾದದ ಮಾಡುವ ಕೆಲಸ ಒಂದು ಪುಣ್ಯದ ಕೆಲಸವೆಂದು ನಾನು ತಿಳಿದಿದ್ದೇನೆ.

–ಕೀರ್ತಿನಾಥ ಕುರ್ತಕೋಟಿ

ಯೋಗಾಯೋಗ

(ಮರ್ಹಾಟೀ ಸಂಸ್ಕೃತಿ : ಕಾಂಹೀ ಸಮಸ್ಯಾ ಪುಸ್ತಕಕ್ಕೆ ಬರೆದ ಮುನ್ನುಡಿ)

ಸುಮಾರು ಹದಿನೆಂಟು ವರ್ಷಗಳ ಹಿಂದಿನ ಮಾತು; ಪುಣೆಯ 'ಕೇಸರಿ' ಪತ್ರಿಕೆಯಲ್ಲಿ ಒಂದು ಚರ್ಚೆಯ ವರದಿ ಪ್ರಕಟವಾಗಿತ್ತು. ಭಾರತ ಇತಿಹಾಸ ಸಂಶೋಧಕ ಮಂಡಲದಲ್ಲಿ ನಡೆದಿದ್ದ ಒಂದು ಖಾಸಗಿ ಚರ್ಚೆ ಅದಾಗಿತ್ತು. ಭಾರತ ಇತಿಹಾಸ ಮಂಡಲದ ಅಧ್ಯಕ್ಷರು ನನ್ನ ಮಿತ್ರರಾದ ಶ್ರೀ ಗ.ಹ. ಖರೆ ಅವರು ಅದಕ್ಕೆ ಕಾರಣೀಭೂತರಾಗಿದ್ದರು. ಆ ಚರ್ಚೆಯ ಅಧ್ಯಕ್ಷರು ಶ್ರೀ ದ. ವಿ. ಆಪ್ಟೆಯವರಂಥ ಕನ್ನಡವನ್ನು ಬಲ್ಲ ವಿದ್ವಾಂಸರು. 'ಈ ದಿಕ್ಕಿನಲ್ಲಿ ಮರಾಠಿಯ ಅನೇಕ ಪ್ರಶ್ನೆಗಳಿಗೆ ಪರಿಹಾರ ಸಿಗಬಲ್ಲದು' ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಇನ್ನು ಕೆಲವರಿಗೆ ನನ್ನ ವಿಚಾರಗಳಲ್ಲಿ ಏನೂ ತಥ್ಯ ಕಾಣಲಿಲ್ಲ.

ಮಹಾರಾಷ್ಟ್ರದಲ್ಲಿಯ ವಿಚಾರವೇತ್ತರ ಪ್ರತಿಕ್ರಿಯೆಯನ್ನು ತಿಳಿಯಬೇಕೆಂದು 'ಕೇಸರಿ'ಯಲ್ಲಿಯ ಆ ಲೇಖನವನ್ನು ಕಳಿಸಲಾಯಿತು. ಪ್ರೊ. ವಾ. ಮ. ಜೋಶಿಯವರು ತಾವು ಆ ವಿಷಯದಲ್ಲಿ ತಜ್ಞರಲ್ಲವೆಂದು ತಿಳಿಸಿದರು. ಆದರೆ 'ನಿಮ್ಮ ಲೇಖ ಬರುವದಕ್ಕಿಂತ ಮೊದಲೇ 'ಕೇಸರಿ'ಯಲ್ಲಿ ಪ್ರಕಟವಾದ ಈ ಲೇಖನವನ್ನು ಕತ್ತರಿಸಿ ಇಟ್ಟುಕೊಂಡಿದ್ದೇ. ನಮ್ಮಲ್ಲಿ ಸ್ವತಂತ್ರವಾಗಿ ವಿಚಾರ ಮಾಡಬಲ್ಲವರು ಬಹಳ ಅಪರೂಪ. ಈ ದೃಷ್ಟಿಯಿಂದ ನಿಮ್ಮ ಲೇಖನ ನನಗೆ ಉದ್ಬೋಧಕವೆನಿಸಿತು' ಎಂದು ಕೂಡ ಅವರು ತಿಳಿಸಿದರು. ಶ್ರೀ ವಾಗ್ಭಟ ನಾರಾಯಣ ದೇಶಪಾಂಡೆ, ಪ್ರೊ. ಕೃ.ನಾ. ಕುಲಕರ್ಣಿ, ಪ್ರೊ. ಬನಹಟ್ಟಿ, ಶ್ರೀ ನಾ. ಗೋ. ಚಾಪೇಕರ ಇವರೆಲ್ಲ ತಮ್ಮ ಅನುಕೂಲವಾದ ಅಭಿಪ್ರಾಯವನ್ನು ಕಳಿಸಿದರು. ಮಹಾಮಹೋಪಾಧ್ಯಾಯ ಡಾ॥ ಪಿ. ವಿ. ಕಾಣೆ ಮತ್ತು ಶ್ರೀ ಯಾ. ಮಾ. ಕಾಳೆ ಇವರು ತಮ್ಮ ಪ್ರತಿಕೂಲ ಅಭಿಪ್ರಾಯಗಳನ್ನು ಕಳುಹಿಸಿದರು. ಆ ಹೊತ್ತಿಗೆ ಪ್ರಸಿದ್ಧವಾದ ಮಹಾರಾಷ್ಟ್ರ ಶಬ್ದಕೋಶದ ಪ್ರಸ್ತಾವನೆಯಲ್ಲಿ (ಭಾಗ ೩) 'ಕೇಸರಿ' ಯೊಳಗಿನ ಈ ಲೇಖನದ ಉಲ್ಲೇಖವಿದೆ. ಮುಂದೆ ಆಚಾರ್ಯ ಸ.ಜ. ಭಾಗವತರ ಸ್ನೇಹಯೋಗ ಕೂಡಿಬಂದಿತು. ಅದು ಆಗಿರದಿದ್ದರೆ ನನ್ನ ವಿಚಾರಗಳನ್ನು ಇಷ್ಟು ವಿಸ್ತೃತವಾಗಿ ಮಹಾರಾಷ್ಟ್ರದ ಮುಂದಿಡುವದು ನನಗೆ ಶಕ್ಯವಾಗುತ್ತಿರಲಿಲ್ಲ. ಅವರ ಪ್ರೀತಿಯ ಆಗ್ರಹಕ್ಕೆ ಮಣಿದು ಪುಣೆಯ 'ನವಭಾರತ' ಪತ್ರಿಕೆಯಲ್ಲಿ ಈ ವಿಷಯದ ಬಗ್ಗೆ ಬರೆಯುವ ಸಾಹಸಮಾಡಿದೆ. ಜಿಜ್ಞಾಸೆಯನ್ನು ತಣಿಸಲು ಏನೇನೋ ಓದಿಕೊಂಡಾಗ ಮನಸ್ಸಿನಲ್ಲಿ ಅನೇಕ ಸಂಶಯಗಳು ಹುಟ್ಟಿಕೊಂಡವು. ಸ್ವಂತದ ಸಮಾಧಾನಕ್ಕಾಗಿ, ಸಂಶಯ ನಿವಾರಣೆಗಾಗಿ ಮಾಡಿದ ಪ್ರಯತ್ನ ಇದು. ಈ ರೀತಿಯ ಅಭ್ಯಾಸಕ್ಕೆ ಆವಶ್ಯಕವಾದ ಪಾಂಡಿತ್ಯ ನನ್ನಲ್ಲಿಲ್ಲ. ಶಾಸ್ತ್ರೀಯ ಪದ್ಧತಿಗಳು ಗೊತ್ತಿಲ್ಲ. ಸ್ವಂತದ ಗ್ರಂಥಸಂಗ್ರಹವೂ ಇಲ್ಲ. ಸಾರ್ವಜನಿಕ ಗ್ರಂಥಾಲಯದ

ಅನುಕೂಲತೆಯೂ ನನಗೆ ಇಲ್ಲ. ಇಂಥ ಅನನುಕೂಲ ಪರಿಸ್ಥಿತಿಯಲ್ಲಿಯ ಈ ಅದೀಕ್ಷಿತನ ಪ್ರಯತ್ನದಲ್ಲಿ ಕೊರತೆಗಳಿದ್ದರೆ ಆಶ್ಚರ್ಯವೇನಿಲ್ಲ.

ಡಾ|| ಧನಂಜಯರಾವ ಗಾಡಗೀಳ ಅವರು ತಮ್ಮ ಇತಿಹಾಸದಲ್ಲಿಯ ಆಸ್ಥೆ ಮತ್ತು ಮೂಲಗಾಮಿಯಾದ ಪ್ರಖರಬುದ್ಧಿ, ಸೂಕ್ಷ್ಮವಾದ ವಿಚಾರಪದ್ಧತಿಗಳಿಂದ ಮಹಾರಾಷ್ಟ್ರದಲ್ಲೆಲ್ಲ ಪ್ರಸಿದ್ಧರಾಗಿದ್ದಾರೆ. ನನ್ನ ವಿಚಾರಗಳನ್ನು ಅವರ ಮರುಪರಿಶೀಲನೆಗೆ ಒಡ್ಡಿಕೊಂಡಿದ್ದೇನೆ. ಅವರ ವಿಮರ್ಶೆ ಮತ್ತು ಸಲಹೆ ಸೂಚನೆಗಳಿಂದ ಸಾಕಷ್ಟು ಲಾಭ ಪಡೆದುಕೊಂಡಿದ್ದೇನೆ. ಅವರು ಕೂಡ, ಇದಕ್ಕೆ ಮೊದಲು ನನ್ನ ವಿಚಾರಗಳನ್ನು ಸಂಕ್ಷಿಪ್ತವಾಗಿಯಾದರೂ ಬರೆಯಲು ಹೇಳಿದ್ದರು. ಅಂಥ ಎರಡು ಮೂರು ಟಿಪ್ಪಣೆಗಳನ್ನು ನಾನು ಅವರಿಗೆ ಕಳಿಸಿದ್ದೆ. ಕೆಲದಿನಗಳಾದ ಮೇಲೆ 'ಅಡಕಾ' ಎಂಬ ಒಂದು ಟಿಪ್ಪಣೆ 'ಸಾಹಿತ್ಯ ಪತ್ರಿಕೆ'ಯಲ್ಲಿ ಪ್ರಕಟವಾಯಿತು. ಅದರ ಬಗ್ಗೆ ಒಬ್ಬರು ಬಹಳ ತೀಕ್ಷ್ಣವಾಗಿ ವಿಮರ್ಶೆಯನ್ನು ಬರೆದರು. 'ಅಡಕಾ' (ಅಡಕೆ) ಒಂದು ಕಾಲಕ್ಕೆ ಕವಡೆಯಂತೆ 'ಕಿಂಚಿತ್ ವ್ಯಾವಹಾರಿಕ ದ್ರವ್ಯ'ವೆಂದು ಉಪಯೋಗವಾಗುತ್ತಿತ್ತು. ಈ ನನ್ನ ಹೇಳಿಕೆ ಪೂರ್ಣ ಸುಳ್ಳೆಂದು ಆ ವಿಮರ್ಶೆ ಪ್ರತಿಪಾದಿಸಿತ್ತು. ಆಗ 'ಮಹಾನುಭಾವ ಸಾಹಿತ್ಯ' ಪೂರ್ಣವಾಗಿ ಉಪಲಬ್ಧವಾಗಿರಲಿಲ್ಲ. ಇತ್ತೀಚಿಗೆ ಪ್ರೊ. ತುಳಪುಳೆ ಇವರು ಮಹಾನುಭಾವಕಾಲೀನ ಸಾಮಾಜಿಕ ಪರಿಸ್ಥಿತಿಯ ಬಗ್ಗೆ ಪರಿಶ್ರಮಪಟ್ಟು ಅಭ್ಯಾಸಮಾಡಿ ಕೆಲವು ಲೇಖನಗಳನ್ನು 'ನವಭಾರತ'ದಲ್ಲಿ ಪ್ರಕಟಿಸಿದ್ದಾರೆ. ಅಲ್ಲಿ ಅಡಿಕೆಯನ್ನು ನಾಣ್ಯದಂತೆ ವ್ಯವಹಾರದಲ್ಲಿ ಉಪಯೋಗಿಸುತ್ತಿದ್ದರೆಂದು ಸಾಧಾರವಾಗಿ ಹೇಳಲಾಗಿದೆ. ಈ ರೀತಿಯಲ್ಲಿ ಮರಾಠಿ ಮತ್ತು ಕನ್ನಡ ಭಾಷೆಗಳಲ್ಲಿಯ ಕೆಲವು ಆಧಾರಗಳ ಮೇಲೆ ನಾನು ಮಂಡಿಸಿದ ಅಂದಾಜಿಗೆ ಬೇರೆ ಪುರಾವೆಗಳೂ ದೊರೆತು ಅದು ಪ್ರಾಮಾಣಿಕವಾಯಿತು.

ಆದರೆ, ಆ ಬಳಿಕ ನನ್ನ ಟಿಪ್ಪಣಿಗಳು ಪ್ರಕಟವಾಗುವದು ನಿಂತುಹೋಯಿತು. ಆಚಾರ್ಯ ಭಾಗವತರ ಪ್ರೇರಣೆಯಿಲ್ಲದಿದ್ದರೆ ನನ್ನ ಎಲ್ಲ ವಿಚಾರಗಳೂ ನನ್ನ ಮನಸ್ಸಿನಲ್ಲಿಯೇ ಇಂಗಿಹೋಗುತ್ತಿದ್ದುವು. ಈ ನನ್ನ ಟಿಪ್ಪಣಿಗಳು ಪುಸ್ತಕರೂಪದಲ್ಲಿ ಪ್ರಕಟಗೊಳ್ಳಬಹುದೆಂಬ ಕಲ್ಪನೆಯೂ ನನಗಿರಲಿಲ್ಲ. ಇದರಿಂದಾಗಿ ಕೆಲವು ಕಡೆ ಪುನರುಕ್ತಿಯ ದೋಷಗಳಿವೆ. ಇದರಲ್ಲಿಯ ಕೆಲವು ಲೇಖನಗಳು 'ನವಭಾರತ'ದಲ್ಲಿ ಮೊದಲೇ ಪ್ರಕಟವಾಗಿವೆ. ಮುಂಬಯಿಯ 'ಧನುರ್ಧಾರಿ'ಯ ದೀಪಾವಳಿ ಸಂಚಿಕೆಯಲ್ಲಿ ಒಂದು ಲೇಖನ ಪ್ರಕಟವಾಗಿದೆ. ಈ ಟಿಪ್ಪಣಿಗಳಿಗೇ ಇನ್ನೊಂದಿಷ್ಟು ಹುದುವು ಸೇರಿಸಿ ಅವುಗಳ ಸಂಕಲನ ಈಗ ಪುಸ್ತಕವಾಗಿ ಬಂದಿದೆ. ಮುತ್ತುಗಳಿಗಾಗಿ ಸಮುದ್ರದ ತಳಕ್ಕಿಳಿಯುವ 'ಕುಂಗನ' ನೆನಪು ಮತ್ತೆ ಮತ್ತೆ ನನಗಾಗುತ್ತದೆ. ಸಮುದ್ರದ ಹೊಟ್ಟೆಯಲ್ಲಿ ಹೊಕ್ಕು ಕೈಗೆ ದೊರೆತ ಚಿಪ್ಪು ಮೊದಲಾದವುಗಳನ್ನು ಅವನು ಮೇಲೆ ತರುತ್ತಾನೆ. ತನಗೆ ತಿಳಿದಂತೆ ವಿಂಗಡಿಸಿಕೊಂಡು ಒಳ್ಳೆಯ ಮುತ್ತುಗಳನ್ನು ಜನರೆದುರಿಗೆ ಇಡುತ್ತಾನೆ. ಅವೆಲ್ಲ ಒಂದೇ ರೀತಿಯಲ್ಲಿ ತೇಜಸ್ವಿಯಾಗಿರುವದಿಲ್ಲ; ಅಮೂಲ್ಯವಾದವುಗಳೂ ಇರುವದಿಲ್ಲ. ಇಷ್ಟಾಗಿಯೂ ಅವುಗಳಲ್ಲಿ ಒಂದಾದರೂ ಮುತ್ತು ಅಮೂಲ್ಯವಾದದ್ದೆಂದು ರತ್ನಪರೀಕ್ಷಕರು ಹೇಳಿದರೆ ಅವನ ಶ್ರಮ ಸಾರ್ಥಕವಾದಂತಾಗುತ್ತದೆ. ಹಾಗೆ ಆಗದಿರುವ ಹೆದರಿಕೆಯೂ ನನಗಿದೆ. ಇದೆಲ್ಲ 'ಯೋಗಾಯೋಗ', ಪ್ರಯತ್ನ ಮಾಡುವದು ನಮ್ಮ ಕರ್ತವ್ಯ. ಯೋಗ್ಯತೆಯನ್ನು ನಿರ್ಣಯಿಸುವವರು ಸತ್ಯಾನ್ವೇಷಿಯಾದ ಪರೀಕ್ಷಕರು.

ಅಖಿಲ ಭಾರತೀಯ ಸಮಸ್ಯೆಯೊಂದನ್ನು ಚರ್ಚಿಸುವ ಈ ಪುಸ್ತಕವು ಪೂಜ್ಯ ಸಾನೇ ಗುರೂಜಿಯವರ 'ಅಂತರ ಭಾರತೀ ಪ್ರಕಾಶನ'ದಲ್ಲಿ ಸ್ಥಾನಗಳಿಸಿರುವದರಿಂದ ಸಮಾಧಾನವಾಗಿದೆ. ಪೂರ್ವಸೂರಿಗಳ ಸಹಾಯ ದೊರೆತಿರದಿದ್ದರೆ ನನಗೆ ಬರೆಯಲು ಸಾಧ್ಯವಾಗುತ್ತಿರಲಿಲ್ಲ. ಹಸ್ತಲಿಖಿತ ಪ್ರತಿಯನ್ನು ತಯಾರಿಸಲು ನನ್ನ ತರುಣ ಮಿತ್ರರಾದ ಮಾಧವರಾವ ಪಂಚನದೀಕರ ಬಿ.ಎ., ವಸಂತರಾವ ನಿಗವೇಕರ ಬಿ.ಎಸ್‌ಸಿ. ಮತ್ತು ಶ್ರೀ ಮಾ. ದ. ಖಾಡಿಲಕರ ಇವರು ಸಹಾಯಮಾಡಿದ್ದಾರೆ. ಭಾಷಾಶುದ್ಧಿಯ ದೃಷ್ಟಿಯಿಂದ ಶ್ರೀ ಶ್ರೀಪಾದರಾವ ಜೋಶಿಯವರು ಅನೇಕ ಸೂಚನೆಗಳನ್ನು ಕೊಟ್ಟಿದ್ದಾರೆ. ಡಾ|| ರಾ. ನಾ. ದಾಂಡೇಕರರು ಇಡೀ ಹಸ್ತಪ್ರತಿಯನ್ನು ಓದಿ ಮುಗಿಸಿ ಬೆಲೆಯುಳ್ಳ ಸೂಚನೆಗಳನ್ನು ಕೊಟ್ಟಿದ್ದಾರೆ. ಕವಿವರ್ಯ ಶ್ರೀ ವಸಂತ ಬಾಪಟ ಇವರು ಮನಸ್ಸು ಹಾಕದಿದ್ದರೆ

ಇದು ಕನ್ನಡಿಗನ ಶೈಲಿ ಆಗುತ್ತಿತ್ತು; ಮರಾಠಿ ಶೈಲಿ ಆಗುತ್ತಿರಲಿಲ್ಲ. ಪ್ರಾ. ವಿ. ಮ. ಬೇಡೇಕರರು 'ನವಭಾರತ' ಪತ್ರಿಕೆಗೆ ಬರೆಯಲು ಉತ್ತೇಜನವಿತ್ತರು. ಸಾಧನಾ ಪ್ರೆಸ್ಸಿನವರು ಮುದ್ರಿಸುವಾಗ ವಹಿಸಿದ ಶ್ರಮ ನನಗೇ ಗೊತ್ತು. ಯೋಜನೆಯಲ್ಲಿ ಅಹಂ- ಕರ್ತೃತ್ವದ ಅನುಭವ ಬರುತ್ತದೆ; ಯೋಗಾಯೋಗದಲ್ಲಿ 'ಅಹಂ' ನಿಮಿತ್ತ ಮಾತ್ರವಾಗಿದ್ದದ್ದು ತಿಳಿದುಬರುತ್ತದೆ. ಈ ಪುಸ್ತಕವು ಪ್ರಕಟವಾದೊಡನೆ ಓದಿ, ಮೆಚ್ಚಿಕೊಂಡು ಕಾಗದ ಬರೆದ ಪ್ರೊ. ದಿ. ಕೆ. ಬೇಡೇಕರರನ್ನು ನಾನೆಂದೂ ಮರೆಯಲಾರೆ. ಈ ಪುಸ್ತಕವನ್ನು ಸೂಕ್ಷ್ಮವಾಗಿ ಪರೀಕ್ಷಿಸಿದ ಪ್ರೊ. ನ.ರ. ಫಾಟಕ್, ಶ್ರೀಮತಿ ದುರ್ಗಾತಾಯಿ ಭಾಗವತ ಹಾಗೂ ವಿಖ್ಯಾತ ವಿಮರ್ಶಕ ಶ್ರೀ ಕುಲಕರ್ಣಿ, ಪ್ರೊ. ಅ.ಕೆ. ಭಾಗವತರಿಗೂ ನಾನು ಕೃತಜ್ಞ. ಇವರು ಈ ಪುಸ್ತಕವು ಆ ವರ್ಷದ ಪ್ರಕಟನೆಗಳಲ್ಲಿ ಮೇಲ್ಮಟ್ಟದ್ದು ಎಂದು ನಿರ್ಣಯಿಸಿದರು. ನನಗೆ ೨೫೦ ರೂ.ಗಳ ಸಂಭಾವನೆ ದೊರಕಿತು. ಅಂತರಭಾರತಿ ಸಂಸ್ಥೆಯು, ಈ ಗ್ರಂಥ ಪ್ರಕಟಿಸಿ ಬಳಿಕ, 'ಭಾಷಾ ಬಾಂಧವ್ಯದ ಪ್ರತೀಕ'ವೆಂದು ಪೂಜ್ಯ ಮಾಸ್ತಿಯವರನ್ನು ಕರೆಯಿಸಿ ಸತ್ಕರಿಸಿದ್ದೂ ಆಯಿತು.

ಸಾಧನಕೆರೆ
ಧಾರವಾಡ

-ಶಂಕರ ಬಾಳದೀಕ್ಷಿತ ಜೋಶಿ

ಪೀಠಿಕೆ

ಮರ್‍ಹಾಟಿ ಸಂಸ್ಕೃತಿಯ ಸಾಂಗೋಪಾಂಗವಾದ ಮತ್ತು ಆಮೂಲಾಗ್ರವಾದ ಅಭ್ಯಾಸ ಇಂದಿಗೂ ಆಗಿಲ್ಲ. ಹಲವು ವಿದ್ವಾಂಸರು ಶ್ರಮವಹಿಸಿ ಸಂಶೋಧನೆಯನ್ನು ಮಾಡಿದ್ದರೂ ಬಹಳಷ್ಟು ಪ್ರಶ್ನೆಗಳು ಇನ್ನೂ ಅನಿರ್ಣೀತವಾಗಿ ಉಳಿದಿವೆ. ಈ ಪ್ರಬಂಧದಲ್ಲಿ ಅಂಥ ಕೆಲವು ಪ್ರಶ್ನೆಗಳ ಬಗ್ಗೆ ವಿಚಾರ ಮಾಡಲಾಗಿದೆ; ಈ ಚರ್ಚೆ ಕೂಡ ನಿರ್ಣಯಾತ್ಮಕವಾದದ್ದಲ್ಲ. ಅನಿರ್ಣೀತ ಪ್ರಶ್ನೆಗಳ ಬಗ್ಗೆ ಹೆಚ್ಚಿನ ಸಂಶೋಧನವಾಗಬೇಕೆಂಬ ಉದ್ದೇಶದಿಂದ ಕೆಲವೊಂದು ವಿಚಾರಗಳನ್ನು ಇಲ್ಲಿ ಪೋಣಿಸಲಾಗಿದೆ, ಅಷ್ಟೇ. ಪ್ರಬಂಧದ ತಲೆಬರೆಹದಲ್ಲಿ 'ಮರಾಠಿ' ಎಂಬ ಸಂಜ್ಞೆಯು ಬದಲಾಗಿ 'ಮರ್‍ಹಾಟಿ'ಯನ್ನು ಉದ್ದೇಶಪೂರ್ವಕವಾಗಿ ಉಪಯೋಗಿಸಲಾಗಿದೆ. ಅದಕ್ಕೆ ಕಾರಣ ಇಷ್ಟೇ. ಇಲ್ಲಿಯ ಸಮಸ್ಯೆಗಳ ಚರ್ಚೆ 'ಮರ್‍ಹಾಟಿ' ಎಂಬ ಪದ 'ಮರಾಠಿ'ಯಲ್ಲಿ ರೂಪಾಂತರವನ್ನು ಪಡೆಯುವ ಕಾಲಕ್ಕಿಂತ ಮೊದಲಿನವು. ಹಳೆಬೀಡು ಮತ್ತು ದೇವಗಿರಿಯ ಯಾದವರ ಕಾಲದ ಸಂದರ್ಭ ದಲ್ಲಿನವು. ಮುಸಲ್ಮಾನರೊಡನೆ ನಡೆದ ಸಂಘರ್ಷದಿಂದಾದ ಪರಿಣಾಮದ ಸಮಸ್ಯೆಯ ಅಂತರ್ಭಾವ 'ಮರಾಠಿ' ಶಬ್ದದಲ್ಲಿದೆ. ಇದೆಲ್ಲವೂ ವಿವೇಚನೆಯ ಅನುಕೂಲತೆಗಾಗಿ ಮಾತ್ರ.

ಮರ್‍ಹಾಟೀ ಸಂಸ್ಕೃತಿಯ ಅಭ್ಯಾಸದಲ್ಲಿ ಅನೇಕ ಪ್ರಶ್ನೆಗಳ ಉತ್ತರ ಇನ್ನೂ ಸಿಕ್ಕಿಲ್ಲ. ಈ ಪ್ರದೇಶದ ಹೆಸರು, ಇಲ್ಲಿಯ ನೂರಾರು ಹಳ್ಳಿಗಳ ಹೆಸರುಗಳು, ಇಲ್ಲಿಯ ಭಿನ್ನಭಿನ್ನ ಜಾತಿಯ ಜನರ ವಾಂಶಿಕ ಸಂಬಂಧಗಳು, ಅವರು ಪೂಜಿಸುವ ದೇವತೆಗಳು ಮತ್ತು ರೀತಿ ನಡೆವಳಿಗಳು-ಹೀಗೆ ಅನೇಕ ವಿಧದ ಪ್ರಶ್ನೆಗಳಿವೆ. ಆದರೆ ವಾಸ್ತವಿಕವಾಗಿ ಈ ಎಲ್ಲ ಪ್ರಶ್ನೆಗಳು ಒಂದೇ ಸಮಸ್ಯೆಯ ಉಪಾಂಗಗಳಾಗಿವೆ. ಈ ಸಮಸ್ಯೆ ಕೇವಲ ಮರ್‍ಹಾಟೀ ಸಂಸ್ಕೃತಿಗೆ ಸಂಬಂಧಿಸಿದ್ದಾಗಿರದೆ ಭಾರತೀಯಸಂಸ್ಕೃತಿಯ ಅತ್ಯಂತ ಪ್ರಾಚೀನ ತಳಹದಿಯನ್ನು ಸ್ಪರ್ಶಿಸು ವಂಥದಾಗಿದೆ. 'ದ್ರಾವಿಡ ಪ್ರಭಾವ' ಎಂಬ ಹೆಸರಿನಲ್ಲಿ ಈ ಸಮಸ್ಯೆಯನ್ನು ಪಂಡಿತರು ಗುರುತಿಸಿದ್ದಾರೆ. ಭಾರತೀಯ ಸಂಸ್ಕೃತಿ-ಸಂಗಮವೆಂದರೆ ಆರ್ಯ ಮತ್ತು ದ್ರವಿಡರ ನಡುವಿನ ಕೊಡುಕೊಳೆ ಎಂಬ ಮಾತು ಈಗ ಸರ್ವಮಾನ್ಯವಾಗಿದೆ. ಆದರೆ, ಈ ದ್ರವಿಡರೆಂದರೆ ಯಾರು, ವೇದಕಾಲದಲ್ಲಿ ಇವರ ಹೆಸರು ಏನಿತ್ತು. ಆರ್ಯರೊಡನೆ ಇವರ ಸಂಬಂಧ ಯಾವ ಬಗೆಯದಾಗಿತ್ತು. ಈ ವಿಷಯಗಳ ಬಗ್ಗೆ ನಿಶ್ಚಿತವಾದ ವಿವೇಚನೆ ಮಾತ್ರ ಅಪರೂಪ ವಾಗಿದೆ. ಈ ದೃಷ್ಟಿಯಿಂದ ಈ ಪ್ರಬಂಧದಲ್ಲಿ ಈ ಸಮಸ್ಯೆಯ ಬಗ್ಗೆ ಸ್ಥೂಲವಾದ ಕೆಲವು ಸಂಭಾವ್ಯವಾದ ಉತ್ತರಗಳನ್ನು ಸೂಚಿಸಲಾಗಿದೆ.

ಆರ್ಯಾವರ್ತದಲ್ಲಿಯ ಪ್ರತಿಯೊಂದು ಭಾಷೆಯಲ್ಲಿಯೂ ಕೆಲವೊಂದು ಪ್ರಮಾಣದಲ್ಲಿ ದ್ರಾವಿಡ ಅಂಶವಿರುತ್ತದೆಂಬ ಸಂಗತಿಯನ್ನು ಸಂಶೋಧಕರು ಕಂಡುಹಿಡಿದಿದ್ದಾರೆ. ಪ್ರಾಂತಗಳಲ್ಲಿಯ ಹಳ್ಳಿಗಳ ಹೆಸರುಗಳ ಮೇಲೆ ದ್ರಾವಿಡ ಪ್ರಭಾವವಿರುವ ಸಂಗತಿ ನಿದರ್ಶನಕ್ಕೆ ಬಂದಿದೆ. ಇಂದು ಕನ್ನಡ, ತೆಲುಗು, ತಮಿಳು

ಮೊದಲಾದ ಭಾಷೆಗಳ ಜನರಿಗೆ 'ದ್ರವಿಡ' ಸಂಜ್ಞೆಯನ್ನು ಸಾಮಾನ್ಯವಾಗಿ ಅಂಟಿಸಲಾಗುತ್ತಿದೆ ಮತ್ತು ದ್ರವಿಡ ಸಂಸ್ಕೃತಿಯ ವ್ಯಾಪ್ತಿಯನ್ನು ತಮಿಳು ಪ್ರದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ. ಆರ್ಯಾವರ್ತದ ಉತ್ತರಾಪಥದಲ್ಲಿಯ ಹಳ್ಳಿಗಳ ಹೆಸರುಗಳ ಮೇಲೆ ದ್ರಾವಿಡವರ್ಗದ ಭಾಷೆಯ ಪ್ರಭಾವವಿದೆಯೆಂದು ಹೇಳಿದರೆ ಅದು ಪಂಡಿತರಿಗೆ ಒಪ್ಪಿಗೆಯಾಗುವುದಿಲ್ಲ. ದ್ರವಿಡ ದೇಶದ ವ್ಯಾಪ್ತಿ ದಕ್ಷಿಣಭಾರತಕ್ಕೆ ಮಾತ್ರ ಸೀಮಿತವಾದದ್ದೆಂದು ಅವರ ಪೂರ್ವಗ್ರಹವಾಗಿರುತ್ತದೆ. ಎರಡನೆಯದಾಗಿ ದ್ರವಿಡವೆಂದರೆ ಅಸಂಸ್ಕೃತ, ಆದ್ದರಿಂದ ಆರ್ಯಕ್ಕಿಂತ ಅದು ಹೀನವಾದದ್ದೆಂಬ ಭಾವನೆಯೂ ಪ್ರಚಲಿತವಿದೆ. ಇಂಥ ಪೂರ್ವಗ್ರಹಗಳು ಸಂಶೋಧನೆಗೆ ಅಡ್ಡಿಯಾಗುತ್ತವೆ. ಮೊಹೆಂಜೊದಾರೋ ಮತ್ತು ಹರಪ್ಪಾ ಪ್ರದೇಶಗಳಲ್ಲಿ ನಡೆದ ಉತ್ಖನನದ ನಂತರ ಇದಕ್ಕೆ ತೀರ ವಿರುದ್ಧವಾಗಿ ಆರ್ಯಸಂಸ್ಕೃತಿಯಲ್ಲಿಯ ಬಂಗಾರವೆಲ್ಲ ದ್ರಾವಿಡರಿಂದ ಕದ್ದದ್ದು ಎಂಬ ಅತ್ಯಾಗ್ರಹ ಮೂಡಿಬಂದಿತು. ಎರಡೂ ರೀತಿಯ ಈ ಭ್ರಮೆಗಳು ಅಳಿದರೆ ಮಾತ್ರ ಈ ಸಮಸ್ಯೆಯ ಬಗ್ಗೆ ಬೆಳಕು ದೊರೆಯಬಹುದು.

ವೇದಕಾಲಕ್ಕಿಂತ ಮೊದಲು ದ್ರವಿಡರ ಶ್ರೇಷ್ಠವಾದ ನಾಗರಸಂಸ್ಕೃತಿ ಅಸ್ತಿತ್ವದಲ್ಲಿತ್ತೆಂದು ಹೇಳಿದರೆ ಆ ಕಾಲದ ಸಾಹಿತ್ಯ ಕೂಡ ಯಾಕೆ ಲಭ್ಯವಾಗುವದಿಲ್ಲ ಎಂಬ ಸಂಶಯ ವಿದ್ವಾಂಸರನ್ನು ಕಾಡಿದೆ. ಆ ಕಾಲದ ಲಿಖಿತಸಾಹಿತ್ಯ ಉಪಲಬ್ಧವಾಗಿಲ್ಲವೆಂಬ ಮಾತು ನಿಜ. ಆಕಾಲಕ್ಕೆ ಸಾಹಿತ್ಯದ ನಿರ್ಮಾಣ ಆಗಲಿಲ್ಲವೆಂದೇ ತಿಳಿಯೋಣ. ಅಷ್ಟರಿಂದಲೇ ಆ ಕಾಲದವರ ನಾಗರೀಕರಣ ಮತ್ತು ಸಂಸ್ಕೃತಿ ಊನವಾಗುತ್ತದೆಂದು ತಿಳಿಯುವ ಕಾರಣವಿಲ್ಲ. ಇದಕ್ಕೆ ವಿರುದ್ಧವಾಗಿ ಆರ್ಯರ ಸಾಹಿತ್ಯ ಸಮೃದ್ಧವಾಗಿದ್ದರೂ ಕೂಡ ನಾಗರಿಕ ಸಂಸ್ಕೃತಿಯೊಡನೆ ಅವರಿಗೆ ಪರಿಚಯವಿರಲಿಲ್ಲವೆಂದು ಕೆಲವು ಸಂಶೋಧಕರ ಅಭಿಪ್ರಾಯವಿದೆ. 'ಪುರ' ಅಥವಾ 'ಪೂರ' ಇದು ಆರ್ಯೇತರರ ವಸತಿಸ್ಥಾನವಾಗಿತ್ತು. ಆರ್ಯರ ವಿಜುಗೀಷು ನಾಯಕ ಇಂದ್ರನಿಗೆ 'ಪುರಂದರ', 'ಪುರಘ್ನ' ಎಂಬ ಹೆಸರುಗಳಿವೆ. ಇದರಿಂದಾಗಿ 'ಪೂರುಜನ'ರು (ಯದು-ತುರ್ವಸುಗಳ ಸಂಬಂಧಿಕರು) ಆರ್ಯವಿರೋಧಿ ಅಂದರೆ ತಥಾಕಥಿತ ದ್ರಾವಿಡ ವರ್ಗದವರೆಂಬ ತರ್ಕಕ್ಕೆ ಎಡೆಯಿದೆ. ಯದು ತುರ್ವಸುಗಳ ಸಂಬಂಧದ ಎಳೆಗಳು ಹೀಗಿವೆ : ಯದು ತುರ್ವಸುಗಳು ಆರ್ಯೇತರ ಇಲ್ಲವೆ ಪತ್ತಿಜನರಾಗಿರಬೇಕು ಎಂಬ ಊಹೆಗೆ ಕಾರಣ ಪರಂಪರೆ ಹೀಗಿದೆ:

೧. ಪ್ರಾಚೀನಕಾಲದ ಸಾಹಿತ್ಯದಲ್ಲಿ ಅನ್ವರ್ಥವಾದ ಅಥವಾ ಪ್ರತೀಕಾತ್ಮಕವಾದ ಹೆಸರುಗಳ ಉಪಯೋಗ ಬೇಕಾದಷ್ಟಿದೆ. ವಿಶೇಷವಾಗಿ ವೇದವ್ಯಾಸರಲ್ಲಿ ಇದು ಹೆಚ್ಚಾಗಿ ದೊರೆಯುತ್ತದೆ. ವೇದಗಳಲ್ಲಿ ಕೂಡ 'ಅಜಃ' (ಆಡು ಕುರಿಗಳನ್ನು ಸಾಕುವವರು) 'ಶಿಗ್ರುಃ' (ಅಶ್ವಪಾಲರು) ಮೊದಲಾದ ಉದಾಹರಣೆಗಳಿವೆ. ಇದೇ ರೀತಿಯಲ್ಲಿ ಯದು. ತುರ್ವಸು. ಪೂರು ಈ ಹೆಸರುಗಳು ಅರ್ಥಯುಕ್ತವಾಗಿರಬಹುದು. ಈ ಹೆಸರುಗಳ ಧ್ವನ್ಯರ್ಥದ ಸಹಾಯದಿಂದ ಈ ಜನರ ಪೂರ್ವಚರಿತ್ರೆಯನ್ನು ಅರಿಯಬಹುದಾಗಿದೆ.

೨. ಯದು-ತುರ್ವಸುಗಳ ಹೆಸರು ಋಗ್ವೇದದಲ್ಲಿ ಮತ್ತೆ ಮತ್ತೆ ಬರುತ್ತದೆ. ಅವರ ವಂಶಾವಳಿಯ ಮೇಲಿಂದ ಈ ಜನರು ಈ ದೇಶದಲ್ಲಿ ವೇದಕಾಲಕ್ಕಿಂತ ಪೂರ್ವದಲ್ಲಿ ವಾಸಿಸುತ್ತಿದ್ದರೆಂದು ಹೇಳಬಹುದಾಗಿದೆ. ಇದರಿಂದಾಗಿ ಆರ್ಯರೊಡನೆ ಈ ಜನರ ಸಂಬಂಧ ಋಗ್ವೇದಕ್ಕಿಂತ ಮೊದಲು, ಅಂದರೆ ಮೊಹೆಂಜೊದಾರೊ - ಹರಪ್ಪಾ ಸಂಸ್ಕೃತಿಯ ಕಾಲಕ್ಕೆ ಆಗಿರಬಹುದೆಂದು ಊಹಿಸಬಹುದಾಗಿದೆ. ಯದು-ತುರ್ವಸು ಮತ್ತು ಆರ್ಯರ ನಡುವಿನ ಸಂಘರ್ಷ ಕಾಲಾಂತರದಲ್ಲಿ ಕಡಿಮೆಯಾಗಿರಬೇಕು. ಋಗ್ವೇದದ ಕಾಲಕ್ಕೆ ಅವರ ಒಂದು ಗುಂಪು ಆರ್ಯ ಪಕ್ಷದಲ್ಲಿ ಕೂಡಿರಬೇಕೆಂದು ತಿಳಿಯುತ್ತದೆ. ಇದು ಸಂಸ್ಕೃತಿ-ಸಂಗಮದ ತತ್ವಕ್ಕೆ ಅನುಸಾರವಾಗಿಯೇ ಇದೆ. ಋಗ್ವೇದದಲ್ಲಿ ಕೆಲವು ಯದು-ತುರ್ವಸರು ಮತ್ತು ಪೂರುಗಳು ಇಂದ್ರನ ಮಿತ್ರರಾಗಿದ್ದಾರೆ. ಇನ್ನು ಕೆಲವರು ಅವನ ಶತ್ರುವಾದ ಶಂಬರನ ಪಕ್ಷದವರಾಗಿದ್ದಾರೆ.

೩. ಋಗ್ವೇದದಲ್ಲಿ ಆರ್ಯಶತ್ರುಗಳನ್ನು 'ಮೃಧ್ರವಾಚಾ' ಎಂಬ ವಿಶೇಷಣದಿಂದ ವರ್ಣಿಸಲಾಗಿದೆ. ಕೆಲವು ಕಡೆಗಳಲ್ಲಿ 'ಪೂರು'ಗಳನ್ನೂ ಹಾಗೆಯೇ ಕರೆಯಲಾಗಿದೆ (VII. 18.13) ಶತಪಥ ಬ್ರಾಹ್ಮಣದಲ್ಲಿ(VII 8.1.14.) ಪೂರುಗಳನ್ನು ಅಸುರರು, ರಾಕ್ಷಸರು ಎಂದು ಕರೆಯಲಾಗಿದೆ. ಋಗ್ವೇದದಲ್ಲಿ ಪೂರುಗಳ ಒಂದು ಉಲ್ಲೇಖದ ವಿವರಣೆಗಾಗಿ ಈ ಶಬ್ದಗಳನ್ನು ಉಪಯೋಗಿಸಿದ್ದು ವಿಶೇಷವಾದ ಮಾತಾಗಿದೆ.

೪. 'ಋಷಿ' ಮತ್ತು 'ಮುನಿ' ಈ ಶಬ್ದಗಳನ್ನು ನಾವು ಸಮಾನಾರ್ಥದಲ್ಲಿ ಉಪಯೋಗಿಸುತ್ತೇವೆ. ಆದರೆ, ಸಂಶೋಧನೆಯ ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಈ ಶಬ್ದಗಳ ಅರ್ಥದಲ್ಲಿ ಭೇದವಿರುವದಾಗಿ ಕಂಡು ಬರುತ್ತದೆ. ವೇದಗಳಲ್ಲಿ ಪ್ರಮುಖವಾಗಿರುವದು ಋಷಿಗಳ ಹೆಸರುಗಳೇ ಹೊರತು ಮುನಿಗಳದಲ್ಲ. ಈ ಎರಡು ಶಬ್ದಗಳ ಅರ್ಥ ಸಮಾನವಾಗುವ ದೆಂದರೆ ಎರಡು ಭಿನ್ನ ಪರಂಪರೆಗಳ ನಡುವಿನ ಭಿನ್ನತೆ ಕಾಲಾಂತರದಲ್ಲಿ ಅಳಿದು ಹೋಯಿತೆಂದು ಹೇಳಬೇಕಾಗುತ್ತದೆ. ಮೂಲದಲ್ಲಿ ಋಷಿಗಳು ಮತ್ತು ಮುನಿಗಳು ಭಿನ್ನವರ್ಗದವರಾಗಿರಬೇಕು. ಋಷಿಗಳು ವಿವಾಹಿತರಾದ ಗೃಹಸ್ಥಾಶ್ರಮಿಗಳು. ಯಜ್ಞ ಸಂಸ್ಥೆಯ ಅಧ್ವರ್ಯುಗಳು ಗೃಹಸಂಸ್ಥೆಯನ್ನು ಎತ್ತಿ ಹಿಡಿಯುವರೆಂಬುದು ಸ್ವಾಭಾವಿಕವಾಗಿದೆ. ಆದರೆ, ಮುನಿಗಳೂ, ವಿರಾಗಿಗಳೂ, ಸನ್ಯಾಸಮಾರ್ಗದ ಪುರಸ್ಕರ್ತರು. ಋಗ್ವೇದದಲ್ಲಿ ಮುನಿಗಳ ಉಲ್ಲೇಖ ಎರಡು ಸಲ ಮಾತ್ರ ಆಗಿದೆ. ಅವರು ಜಟಾಧಾರಿಗಳಾಗಿದ್ದರು. ಶ್ರಮಣರ ಉಲ್ಲೇಖ ವೇದಗಳಲ್ಲಿ ಇಲ್ಲದಿದ್ದರೂ 'ಬೃಹದಾರಣ್ಯಕ' ದಲ್ಲಿದೆ. ಮುಂದಿನ ಕಾಲದಲ್ಲಿ ಶ್ರಮಣರು (ಸನ್ಯಾಸಿಗಳು) ಪ್ರಾಮುಖ್ಯವಾಗಿ ಅವೈದಿಕರಲ್ಲಿ ದೊರೆಯುತ್ತಾರೆ. ಜೈನರಲ್ಲಿ ಸನ್ಯಾಸಿ ಮುನಿಗಳ ಪರಂಪರೆ ಅಖಂಡವಾಗಿ ನಡೆದು ಬಂದಿದೆ. ನಿರೀಶ್ವರ ಸಾಂಖ್ಯರ ಕಪಿಲಮುನಿ ('ಸಿದ್ಧಾನಾಂ ಕಪಿಲೋ ಮುನಿಃ') ಯೋಗಮಾರ್ಗಿಯಾದ ಸನ್ಯಾಸಿಯಾಗಿ ಕಾಣುತ್ತಾನೆ. ಸಾಂಖ್ಯ ಮತ್ತು ಯೋಗದಲ್ಲಿ ಭಿನ್ನತೆಯಿಲ್ಲ ಎಂದು ಗೀತೆ ಹೇಳುತ್ತದೆ. ಮೂಲದಲ್ಲಿ ಸನ್ಯಾಸಮಾರ್ಗದ ಯತಿಪಂಥವು ವೈದಿಕ ಪರಂಪರೆಯದಲ್ಲ ಎಂಬ ಮಾತಿಗೆ ಗೀತೆಯ ಹೇಳಿಕೆಯಿಂದ ಪುಷ್ಟಿ ದೊರಕಿದಂತಾಗಿದೆ. ಗೀತೆಯ ಈ ವಾಕ್ಯದಿಂದ ಇನ್ನೊಂದು ಮಾತು ಧ್ವನಿತವಾಗುತ್ತಿದೆ. ಸಿದ್ಧಪಂಥದ ಅರ್ಹಂತನಿಗೆ 'ಮುನಿ' ಎಂಬ ಹೆಸರು ಇರಬೇಕು. ಸಿದ್ಧಪಂಥದಲ್ಲಿ ಹಟಯೋಗಿಗಳು ಮತ್ತು ರಾಜಯೋಗಿಗಳು ಸಮಾವಿಷ್ಟರಾಗುತ್ತಾರೆ. ಜೈನ ಮತ್ತು ಬೌದ್ಧರಲ್ಲಿ ಅನೇಕ ಪ್ರಖ್ಯಾತ ಸಿದ್ಧರು ಆಗಿ ಹೋಗಿದ್ದಾರೆ. ಮಹಾರಾಷ್ಟ್ರದಲ್ಲಿ ೮೪ ಸಿದ್ಧರು ಮತ್ತು ೬೪ ಯೋಗಿನಿಯರ ಪಂಥ ಜೀವಂತವಾಗಿತ್ತೆಂದು 'ತತ್ತ್ವಸಾರ' ಮೊದಲಾದ ಗ್ರಂಥಗಳಿಂದ ತಿಳಿದುಬರುತ್ತದೆ. ಈ ವರ್ಗದವರ ನಡುವಳಿಕೆ, ಲೋಕವಿಲಕ್ಷಣ ಮತ್ತು ವಿಕ್ಷಿಪ್ತವಾಗಿತ್ತೆಂದು ಪ್ರಾಚೀನ ಕಾಲದಿಂದ ಪ್ರಸಿದ್ಧವಿದೆ. ಇತರ ಮುನಿಯ ಪ್ರವಾಸದ ವರ್ಣನೆ 'ಐತರೇಯ ಬ್ರಾಹ್ಮಣ'ದಲ್ಲಿ ದೊರೆಯುತ್ತದೆ. ವಜ್ರಯಾನ ಪಂಥದಿಂದ ಉಗಮ ಹೊಂದಿದ ಸಿದ್ಧಪರಂಪರೆಯ ಪ್ರವಾಹವು ಮಹಾರಾಷ್ಟ್ರ-ಕರ್ನಾಟಕಗಳ ವರೆಗೆ ಹರಿದು ಬಂದಿದೆ. ದಕ್ಷಿಣದಲ್ಲಿ ಈ ಪಂಥದ ಪರ್ಯಾಯವೆಂದರೆ ವೀರಶೈವ, ಮಹಾನುಭಾವ ಮತ್ತು ವಾರಕರಿಪಂಥಗಳು. ವೀರಶೈವರಂತೆ ಜೈನರಲ್ಲಿಯೂ-ಪುರಾತನರಾದ ೬೩ ಶಲಾಕಾ ಪುರುಷರಿದ್ದಾರೆ. ಕರ್ನಾಟ-ಮರ್‍ಹಾಟದಲ್ಲಿ 'ತಿರಸಷ್ಟಿ' ಪದವು ಹೀಗೆ ರೂಢವಾದ ಪ್ರಯೋಗದ ಸಂಬಂಧ ಈ ವಿಲಕ್ಷಣ ತ್ರಿಷಷ್ಟಿ ಮುನಿಗಳ ಜೊತೆಗೆ ಇರಲಿಕ್ಕಿಲ್ಲವೇ? ವೇದಕಾಲದ ಮುನಿಗಳ

ಮಲಿನ ಪ್ರಾವರ್ಣಗಳು ಜೈನರಲ್ಲಿ ರೂಢವಾಗಿರುವ ಮಲಧಾರಣ ವ್ರತವು ನೆನಪಿಗೆ ಬರುತ್ತದೆ.

ಮುನಿ ಮತ್ತು ಸಿದ್ಧರು ಮೂಲದಲ್ಲಿ ಅವೈದಿಕ ಪರಂಪರೆಯವರು. ಮುಂದೆ ಇವರು ಜೈನ-ಬೌದ್ಧರಲ್ಲಿ ಹೆಚ್ಚಾಗಿ ಕಾಣಸುತ್ತಾರೆ. ಆದರೆ, ಕೆಲವು ಸಮನ್ವಯ ದೃಷ್ಟಿಯ ಗುಣಗ್ರಾಹಿ ವೈದಿಕ ಋಷಿಗಳು ಸಂನ್ಯಾಸಮಾರ್ಗದಲ್ಲಿ ಗ್ರಾಹ್ಯವಾದದ್ದನ್ನು ಒಪ್ಪಿಕೊಂಡು ಅನುಸರಿಸಲು ಪ್ರಯತ್ನಿಸಿರಬೇಕು. ಇದಕ್ಕೆ ಉದಾಹರಣೆಯೆಂದರೆ ಯಾಜ್ಞವಲ್ಕ್ಯ. ಆದರ್ಶ ಜೀವನದ ಬಗ್ಗೆ ಕಾಳಿದಾಸನ ಹೇಳಿಕೆ: "ವಾರ್ಧಕೇ ಮುನಿವೃತ್ತೀನಾಂ ಯೋಗೇನಾಂತೇ ತನುತ್ಯಜಾಂ" ಎಂದು ಇದೆ. ಜೀವನದ ಕೊನೆಭಾಗದಲ್ಲಿ ಸಂಸಾರದ ಮೋಹವನ್ನು ಬಿಟ್ಟು ಪರಿವ್ರಾಜಕ ವೃತ್ತಿಯನ್ನು ಅವಲಂಬಿಸಬೇಕೆಂಬುದು ಈ ಪರಂಪರೆಯ ಪ್ರತಿಧ್ವನಿಯಾಗಿದೆ. ಕೊನೆಗಾಲದಲ್ಲಿಯಾದರೂ ಮುಕ್ತಿಯ ಸಲುವಾಗಿ ಆತುರ ಸಂನ್ಯಾಸವನ್ನು ಸ್ವೀಕರಿಸುವ ರೂಢಿ ಸ್ಮಾರ್ತಪರಂಪರೆಯಲ್ಲಿ ಇತ್ತು. ಹಿಂದಿನ ತಲೆಮಾರಿನಲ್ಲೆ ರೂಢಿಯಿತ್ತು.

ಪ್ರಾರಂಭದಲ್ಲಿ ವೈದಿಕರಿಗೆ ಮುನಿಪಂಥ ಅಥವಾ ಸಂನ್ಯಾಸಮಾರ್ಗ ಅಷ್ಟೊಂದು ಹಿಡಿಸಿರಲಿಲ್ಲ. ಇಂದ್ರ, ಯತಿಯನ್ನು ಸಂಹಾರ ಮಾಡಿದ ಸಂಗತಿ ಪ್ರಸಿದ್ಧವಾಗಿದೆ. 'ಯತಿ', ಯಯಾತಿಯ ಹಿರಿಯ ಅಣ್ಣನಾಗಿದ್ದ ಶಂತನುವಿನ ಹಿರಿಯ ಅಣ್ಣ ದೇವಾಪಿ, ಯತಿಯಾಗಿದ್ದ. ಶಂತನುವಿನ ಹಿರಿಯ ಮಗ ಭೀಷ್ಮ, ಬ್ರಹ್ಮಚರ್ಯದ ನಿಷ್ಠುರವಾದ ಪ್ರತಿಜ್ಞೆಯನ್ನು ಕೈಕೊಂಡು ದೇವನೆಂದು ಪ್ರಸಿದ್ಧನಾದ. ಈ ರೀತಿಯ ಅವೈದಿಕ ಪರಂಪರೆ ಯದುಗಳಲ್ಲಿ ಇತ್ತು. ಈ ಯದುವಂಶದಲ್ಲಿಯ ಯತಿ, ದೇವಾಪಿ, ದೇವವ್ರತ ಮೊದಲಾದ ವ್ಯಕ್ತಿಗಳ ಉದಾಹರಣೆಗಳಿಂದ ಆರ್ಯೇತರ ಸಮಾಜದಲ್ಲಿಯ ಭೀಷ್ಮ ಸಂನ್ಯಾಸದ ಪರಂಪರೆ ಸೂಚಿತವಾಗುತ್ತದೆ. ಇಂದಿಗೂ ಕೆಲವು (ಸಮಾಜದ) ಮನೆಗಳಲ್ಲಿ ಕುಲವ್ರತ ಮತ್ತು ಕುಲಧರ್ಮಗಳನ್ನು ಪಾಲಿಸುವ ಹೊಣೆಯನ್ನು ಹಿರಿಯ ಮಗನಿಗೆ ವಹಿಸಿಕೊಡುವ ರೂಢಿ ಇದೆ. ಕರ್ನಾಟಕದಲ್ಲಿಯ ಕುರುಬ ಮತ್ತು ಕುಣಬಿ ಮನೆಗಳಲ್ಲಿ ಒಬ್ಬ ವ್ಯಕ್ತಿಯನ್ನು -ಹಿರಿಯ ಮಗ ಅಥವಾ ಬೇರೆ ಯಾರಾದರೂ- ವ್ರತಸ್ಥನನ್ನಾಗಿಸುವ ಮತ್ತು ದೇವರಿಗೆ ಅರ್ಪಿಸುವ ರೂಢಿ ಇತ್ತು.

೫. ಮಹಾಭಾರತದಲ್ಲಿಯ ಯದು-ತುರ್ವಸುಗಳು (ಅಂಧಕ - ವೃಷ್ಣಿ ಸಮಾಜ) ಇವರು ಪ್ರಿಲಸ್ಕಿಯ ಅಭಿಪ್ರಾಯದಂತೆ ಅವೈದಿಕರು ಹಾಗು ದ್ರಾವಿಡ ವರ್ಗದವರಾಗಿದ್ದಾರೆ. ಮಹಾಭಾರತದಲ್ಲಿಯ ಯದು-ತುರ್ವಸುಗಳು ಮತ್ತು ವೇದದಲ್ಲಿಯ ಯದು-ತುರ್ವಶರು ಇವರು ಒಂದು ವೇಳೆ ಅಭಿನ್ನರಾಗಿದ್ದರೆ ವೇದಕಾಲದ ಈ ಸಮಾಜಕ್ಕೆ ದ್ರಾವಿಡ ವರ್ಗವೆಂದೇ ಕರೆಯಬೇಕಾಗುತ್ತದೆ.

೬. ಚಂದ್ರವಂಶದ ಕ್ಷತ್ರಿಯರೆಂದು ಹೆಸರಾಗಿರುವ ಯದು-ತುರ್ವಸುಗಳ ಐಲವಂಶ ಒಂದು ವರ್ಣದ್ದಾಗಿದ್ದರೆ; ಋಷಿಸಮುದಾಯ ಮತ್ತು ಮಾನವವಂಶ ಇನ್ನೊಂದು ವರ್ಣದ್ದಾಗಿರಬೇಕೆಂದು ಪಾರ್ಜಿಟರ ಎಂಬುವರ ಅಭಿಪ್ರಾಯವಿದೆ. ಪ್ರಾಚೀನ ಪೌರಾಣಿಕ ಪರಂಪರೆಯ ಆಮೂಲಾಗ್ರ ಅಭ್ಯಾಸಮಾಡಿ ಕೈಗೊಂಡ ನಿರ್ಣಯ ಇದಾಗಿದ್ದರೂ ಈ ವಿಷಯದ ಬಗ್ಗೆ ಪಾರ್ಜಿಟರು ಗೊಂದಲದಲ್ಲಿರುವಂತೆ ತೋರುತ್ತದೆ. ಈ ಎರಡೂ ವರ್ಗಗಳು ಭಿನ್ನವಂಶೀಯರೆಂದು ಪುರಾಣದ ಪುರಾವೆಗಳಿಂದ ಸ್ಪಷ್ಟವಾಗಿಯೇ ಇದೆ. ಯದು-ತುರ್ವಸುಗಳನ್ನು ಆರ್ಯಕ್ಷತ್ರಿಯರೆಂದು ಎಣಿಸಿದರೆ ಋಷಿಗಳ ಗುಂಪು

ಆರ್ಯೇತರವಾಗಬೇಕು. ಪಾರ್ಜಿಟರನಿಗೆ ಈ ಸಮಸ್ಯೆ ಇಷ್ಟಾಪತ್ತಿಯಾಗಿ ಒಂದು ಕಲ್ಲಿನಿಂದ ಎರಡು ಹಕ್ಕಿಗಳನ್ನು ಕೊಲ್ಲುವ ಕೆಲಸವನ್ನು ಮಾಡಿದ. ಆದರೆ, ಅವನ ಈ ನಿರ್ಣಯ ಭಾರತೀಯ ಪರಂಪರೆಗೆ ಪೂರ್ಣ ವಿರುದ್ಧವಾಗಿದೆ. ಅವನ ಪರಿಶ್ರಮದ ಸಂಶೋಧನೆಯ ಬಗ್ಗೆ ಆದರವನ್ನಿಟ್ಟುಕೊಂಡರೂ ಸಂಶೋಧಕನಲ್ಲಿ ಇರಬೇಕಾದ ಸಮತ್ವಬುದ್ಧಿ ಅವನಲ್ಲಿ ಇಲ್ಲ ಎಂದು ಹೇಳಬೇಕಾಗುತ್ತದೆ. ಬ್ರಾಹ್ಮಣ ಬ್ರಾಹ್ಮಣೇತರ ವಾದದ ಸುಳಿಯಲ್ಲಿ ಅವನು ಸಿಕ್ಕಂತೆ ಕಾಣುತ್ತದೆ. ಬ್ರಾಹ್ಮಣರೇ ಭಂಡರಾಗಿದ್ದರೆಂದು ಅವನ ಅಭಿಪ್ರಾಯ. ಬ್ರಾಹ್ಮಣವರ್ಗ ಅನಾರ್ಯವಾಗಿದ್ದು, ಯದು-ತುರ್ವಸುಗಳು ಮಾತ್ರ ಆರ್ಯರು ಎಂಬ ಅವನ ಈ ವಿಧಾನ ಬ್ರಿಟಿಷ್‌ರ ಆಳಿಕೆಯಲ್ಲಿ ಹುಟ್ಟಿಕೊಂಡ ಜಾತೀಯ ದ್ವೇಷದ ಬೆಳವಣಿಗೆಗೆ ಮಾತ್ರ ಸಹಾಯಕಾರಿಯಾಗಿರಬೇಕು. ಆದರೆ, ಈ ವಾದದಲ್ಲಿ ಎಳ್ಳಷ್ಟೂ ಐತಿಹಾಸಿಕಸತ್ಯ ಇಲ್ಲ. ಮೂಲದಲ್ಲಿ ಬ್ರಾಹ್ಮಣರು ಅನಾರ್ಯರಾಗಿದ್ದರೆ ಅವರ ಸಂಸ್ಕೃತಪ್ರೇಮ, ಗೋತ್ರಪರಂಪರೆ ಮತ್ತು ವೈದಿಕನಿಷ್ಠೆಗಳಿಗೆ ಅರ್ಥವೇ ಉಳಿಯಲಾರದು. ಪಾರ್ಜಿಟರ ಆರ್ಯಕ್ಷತ್ರಿಯರೆಂದು ಕರೆಯುವ ಯದು-ತುರ್ವಸುಗಳು ಮಾತ್ರ ಸಂಸ್ಕೃತ ಭಾಷೆಯ ಬಗ್ಗೆ ಏನೂ ಕಾಳಜಿ ತೋರಿಸದ ಭಿನ್ನವಾದ ಪರಂಪರೆಯನ್ನು ಬೆಳೆಸಿದ್ದು ಕಾಣುತ್ತೇವೆ. ಗಂಗಾಯಮುನಾ ತೀರಗಳಲ್ಲಿ ಯದು-ತುರ್ವಸುಗಳ ವಂಶದವರು ಕಾಪಾಡಿಕೊಂಡು ಬಂದಿದ್ದ ಪ್ರಾಕೃತದಲ್ಲಿ ಹ್ರಸ್ವವಾದ ಎ ಮತ್ತು ಹ್ರಸ್ವವಾದ ಒ ಮೊದಲಾದ ಆರ್ಯೇತರ ಉಚ್ಚಾರಗಳು ಯದು-ತುರ್ವಸುಗಳ ಮಾತೃಭಾಷೆ ಸಂಸ್ಕೃತವಲ್ಲವೆಂದು ಸಿದ್ಧಪಡಿಸುತ್ತವೆ. ಯದು-ತುರ್ವಸುಗಳು ಸಂಸ್ಕೃತವನ್ನು ಸ್ವೀಕರಿಸಲು ಪ್ರಯತ್ನ ನಡೆಸಿದರೂ ಅವರಿಗೆ ಯಶಸ್ಸು ದೊರೆಯಲಿಲ್ಲ. ಈ ಪ್ರಯತ್ನದಿಂದ ಆದದ್ದೆಂದರೆ ಇನ್ನೊಂದು ಪ್ರಾಕೃತದ ನಿರ್ಮಾಣ. ಇಂಥ ಅನೇಕ ಆಧಾರಗಳ ಮೇಲೆ ಯದು-ತುರ್ವಸುಗಳು ಮೂಲದಲ್ಲಿ ಆರ್ಯೇತರಾಗಿದ್ದು, ಮುಂದೆ ಆರ್ಯೀಕರಣದ ಹೊತ್ತಿಗೆ 'ಆರಿಯ' ರೆಂದು ಹೇಳಬೇಕಾದದ್ದು ಕ್ರಮಪ್ರಾಪ್ತವಾಗಿದೆ.

ನಮ್ಮ ಮನಸ್ಸು ಒಂದು ರೂಢಿಗೆ ಅಂಟಿಕೊಂಡರೆ ಅದನ್ನು ಬಿಡುವದು ಕಠಿಣವಾಗುತ್ತದೆ. ಪೂರ್ವಗ್ರಹ ಮತ್ತು ಅಭಿಮಾನ ಇವು ಕೂಡ ವಿಘ್ನವನ್ನು ಒಡ್ಡುತ್ತವೆ. ಇದರಿಂದಾಗಿ ನಮ್ಮ ಸಾಂಸ್ಕೃತಿಕ ಇತಿಹಾಸ ಗೋಜಲಾಗಿ ಸತ್ಯ ಕಣ್ಣು ತಪ್ಪಿಹೋಗುತ್ತದೆ. ಉದಾಹರಣೆಗೆ ಶಾತವಾಹನರ ಮೂಲಮನೆತನ ಪೈಠಣದ್ದು ಮತ್ತು ಕರ್ನಾಟಕದಲ್ಲಿಯ ಬಳ್ಳಾರಿ ಜಿಲ್ಲೆ ಅವರ ಮಾತೃಭೂಮಿಯಾಗಿತ್ತು ಎಂಬುದರ ಬಗ್ಗೆ ನಿಶ್ಚಿತ ಪುರಾವೆಗಳಿವೆ. ಶಾತವಾಹನರು ತಮ್ಮನ್ನೆಂದೂ ಆಂಧ್ರ ಇಲ್ಲವೆ ಆಂಧ್ರಭೃತ್ಯ ಎಂದು ಕರೆದುಕೊಳ್ಳಲಿಲ್ಲ. ಆದರೆ, ಪುರಾಣಿಕರು ಅವರಿಗೆ ಅಂಟಿಸಿದ ಆಂಧ್ರಭೃತ್ಯರೆಂಬ ಬಿರುದು ಇಂದು ನಮ್ಮ ನಾಲಗೆಗೆ ಅಂಟಿಕೊಂಡಿದೆ. ಯದು-ತುರ್ವಸುಗಳ ಬಗ್ಗೆ ಇದೇ ರೀತಿ ಆಗಿರಬೇಕೆಂದು ನನಗೆ ಅನಿಸುತ್ತದೆ.

ಪ್ರಾಚೀನ ಸಂಸ್ಕೃತಿಯ ಆಳವಾದ ಅಭ್ಯಾಸವಿಲ್ಲದೇ ಈ ಗಂಟುಗಳು ಬಿಚ್ಚುವದಿಲ್ಲ. "To understand the present age, therefore, it is necessary to go back to a considerably early time". ಸುಪ್ರಸಿದ್ಧ ತತ್ವಜ್ಞ ಮತ್ತು ಸಾಹಿತಿಯಾಗಿದ್ದ ಬರ್ಟ್ರಂಡ್ ರಸೆಲ್‌ನ ಈ ಹೇಳಿಕೆ ಸಂಪೂರ್ಣ ಸತ್ಯವಾಗಿದೆ. ಭಾಷೆ, ವೇಷ, ನಡೆವಳಿಕೆಗಳು, ದೇವತೆಗಳು ಇವೆಲ್ಲ ಮನುಷ್ಯನ ಅವ್ಯಕ್ತ ಮನಸ್ಸಿನ ವ್ಯಕ್ತಪ್ರತೀಕಗಳಾಗಿವೆ. ಇವುಗಳ ತಿಳುವಳಿಕೆಯಾಗಬೇಕಾದರೆ ಪ್ರಾಚೀನ ಸಂಸ್ಕೃತಿಯನ್ನು ತಟಸ್ಥ ರೀತಿಯಲ್ಲಿ ಅಭ್ಯಾಸ ಮಾಡುವದು ಅವಶ್ಯವಾಗಿದೆ.

ಮಹಾರಾಷ್ಟ್ರದ ಮೂಲ ಹೆಸರು : ಮರ್ಹಾಟವೋ ಮಹಾರಾಷ್ಟ್ರವೋ?

ಅಧ್ಯಾತ್ಮಜ್ಞಾನದಿಂದ ಆತ್ಮಸ್ವರೂಪದ ಅರಿವಾಗುತ್ತದೆಂಬುದು ಇಂದಿನವರೆಗೆ ನಡೆದುಬಂದ ಶ್ರದ್ಧೆಯಾಗಿದೆ. ಆದರೆ, ಇತಿಹಾಸದ ತಿಳುವಳಿಕೆಯಿಂದ ಉಂಟಾಗುವ ಆತ್ಮಸ್ವರೂಪದ ಜ್ಞಾನ ಹೆಚ್ಚು ನಿಶ್ಚಿತ ಮತ್ತು ವಾಸ್ತವಿಕವೆಂದು ನನಗನಿಸುತ್ತದೆ. ಅಧ್ಯಾತ್ಮಜ್ಞಾನದಿಂದ ಉಂಟಾಗುವ ಆತ್ಮಸ್ವರೂಪದ ಅರಿವು ಅವ್ಯಕ್ತ ಸ್ವರೂಪದ್ದಾಗಿರುತ್ತದೆ. ಇತಿಹಾಸದಿಂದ ಉಂಟಾಗುವ ಆತ್ಮಸ್ವರೂಪದ ಸಾಕ್ಷಾತ್ಕಾರ ಸಾಕಾರವಾಗಿದ್ದು ಸಗುಣವಾಗಿರುತ್ತದೆ. ಅಧ್ಯಾತ್ಮ ವ್ಯಷ್ಟಿರೂಪದ ಆತ್ಮದರ್ಶನವನ್ನು ಮಾಡಿಸಿದರೆ ಇತಿಹಾಸ ಸಮಷ್ಟಿರೂಪದ ಸಾಕ್ಷಾತ್ಕಾರಕ್ಕೆ ನೆರವಾಗುತ್ತದೆ. ನಾಮಸ್ಮರಣೆಯಿಂದ ಆತ್ಮದರ್ಶನವಾಗುತ್ತದೆಂದು ಅಧ್ಯಾತ್ಮದಲ್ಲಿಯ ಅನುಭೂತಿ ಮಾರ್ಗ (Mysticism) ದಲ್ಲಿ ಹೇಳಲಾಗುತ್ತಿದೆ.* ಅಧ್ಯಾತ್ಮದಲ್ಲಿ ನಾಮದ ಮಹಿಮೆ ಮಹತ್ವದ್ದಾಗಿದೆ. ಅದರಂತೆ ಇತಿಹಾಸದಲ್ಲೂ ಆಯಾದೇಶದ ಹೆಸರು ಕೂಡ ಆಯಾ ಜನರ ಆತ್ಮಸ್ವರೂಪವನ್ನು ತಿಳಿದುಕೊಳ್ಳಲು ಅತ್ಯಂತ ಮಹತ್ವದ ಸಾಧನವಾಗಿದೆ. ಆದ್ದರಿಂದಲೇ ದೇಶದ ಹೆಸರಿನ ರಹಸ್ಯವನ್ನು ತಿಳಿದುಕೊಳ್ಳುವದು ಬಹಳ ಅಗತ್ಯದ್ದಾಗಿದೆ. ಜಗತ್ತಿನ ಪ್ರತಿಯೊಂದು ರಾಷ್ಟ್ರದ ಐತಿಹಾಸಿಕ ಒಗಟುಗಳು ಆ ರಾಷ್ಟ್ರದ ಹೆಸರಿನ ಮೂಲಕ ತಮ್ಮ ಅರ್ಥವನ್ನು ಬಯಲು ಮಾಡುತ್ತವೆಂಬ ಸಂಗತಿ ನಮಗೆ ಕಾಣುತ್ತದೆ. ಅದೇ ರೀತಿಯಲ್ಲಿ ಮಹಾರಾಷ್ಟ್ರದ ಇತಿಹಾಸದಲ್ಲಿಯ ಬಹಳಷ್ಟು ಸಮಸ್ಯೆಗಳು ಆ ಹೆಸರಿನ ನಿಜವಾದ ರಹಸ್ಯ ಬಯಲಾದರೆ ಮಾತ್ರ ಪರಿಹಾರವನ್ನು ಪಡೆಯುತ್ತವೆ. ಆದರೆ, ದುರ್ದೈವದಿಂದ ಮಹಾರಾಷ್ಟ್ರ ಅಥವಾ ಮರ್ಹಾಟ ಈ ಪದಗಳ ಉಪಪತ್ತಿ ಸರಿಯಾಗಿ ಆಗದಿರುವದರಿಂದ ಮಹಾರಾಷ್ಟ್ರದ ಸಾಂಸ್ಕೃತಿಕ ಇತಿಹಾಸದಲ್ಲಿಯ ಅನೇಕ ತೊಡಕುಗಳನ್ನು ಬಿಡಿಸುವದು ಕಷ್ಟದ ಕೆಲಸವಾಗಿದೆ.●

---

* ಅಧ್ಯಾತ್ಮದಲ್ಲಿ ಹಲವು ದಾರಿಗಳುಂಟು. ಅವುಗಳಲ್ಲಿ ಅನುಭೂತಿಮಾರ್ಗವೂ ಒಂದು. ಇದನ್ನು 'ಅನುಭಾವ ಪಂಥ' ಎಂದು ಕರೆಯುತ್ತಾರೆ. ಶಂಬಾ ಅವರು ರಾನಡೆ ಪಂಥದವರು. ಅವರು ಮೊದಲಿಗೆ ರಾನಡೆಯವರ 'ಉಪನಿಷತ್ ರಹಸ್ಯ' (ಬೇಂದ್ರೆ, ದಿವಾಕರರ ಜತೆ) ವನ್ನು ಅನುವಾದಿಸಿದರು. (ಸಂ)

● ದೇಶನಾಮದ ಪ್ರಶ್ನೆ ಸಾಂಸ್ಕೃತಿಕ ತಳಹದಿಯ ಪ್ರಶ್ನೆಯೂ ಹೌದು : ಈ ನೆಲೆಗಳಿಂದ ಶಂಬಾ ಹೊರಡುತ್ತಾರೆ. ಅವರ ಮೊದಲಪುಸ್ತಕ 'ಕಣ್ಮರೆಯಾದ ಕನ್ನಡ'ದಲ್ಲಿ ಆ ಬಗೆಯ ಮೊದಲ ಕುರುಹುಗಳಿವೆ. ಅವರು ಅನಂತರ ತಮ್ಮ ಸಂಶೋಧನ ಪದ್ಧತಿಯ ಮುಖ್ಯ ಸೂತ್ರಗಳಲ್ಲಿ ಇದು ಪ್ರಮುಖ ನೆಲೆಯಾಯಿತು. (ಸಂ)

ಇಂದಿನ ತಿಳುವಳಿಕೆಯಂತೆ 'ಮಹಾರಾಷ್ಟ್ರ' ಶಬ್ದ ಪ್ರಾಚೀನವಿದ್ದು 'ಮರ್ಹಾಟ' ಅಥವಾ 'ಮರಹಟ್ಟ' ಈ ಶಬ್ದಗಳು ನಂತರ ಬಂದವುಗಳಾಗಿವೆ. ಇಂಥ ಸಾರ್ವತ್ರಿಕ ತಿಳುವಳಿಕೆಗೆ ಆಧಾರವಿಲ್ಲದೆ ಇಲ್ಲ. ಈಗಿನ ಆಡುಮಾತಿನಲ್ಲಿ ಮತ್ತು ಬರೆವಣಿಗೆಯಲ್ಲಿ 'ಮರಾಠಾ' (ದೇಶ) ಮತ್ತು 'ಮರಾಠೀ' (ಭಾಷೆ) ಈ ಶಬ್ದಗಳು ರೂಢಿಯಲ್ಲಿವೆ. ಆದರೆ, ಪ್ರಾಚೀನವಾದ ಮಹಾನುಭಾವ ಸಾಹಿತ್ಯದಲ್ಲಿ ಮತ್ತು 'ಜ್ಞಾನೇಶ್ವರಿ'ಯಂಥ ಗ್ರಂಥಗಳಲ್ಲಿ 'ಮರ್ಹಾಟ' ಅಥವಾ 'ಮರಹಟ್ಟ'ವೆಂಬ ಪ್ರಯೋಗಗಳು ಕಾಣುತ್ತವೆ. ಇದರಿಂದಾಗಿ 'ಮರಾಠ'ದ ಪೂರ್ವರೂಪ 'ಮರ್ಹಾಟ' ಅಥವಾ 'ಮರಹಾಟ' ಇಲ್ಲವೆ 'ಮರಹಟ್ಟ'ವಿರಬೇಕೆಂಬುದು ಸ್ಪಷ್ಟವಾಗುತ್ತದೆ. ಈ ರೀತಿಯಲ್ಲಿ 'ಮರಾಠ'ಕ್ಕಿಂತ 'ಮರ್ಹಾಟ' ಇಲ್ಲವೆ 'ಮರಹಟ್ಟ' ಈ ಪ್ರಯೋಗಗಳು ಪ್ರಾಚೀನ ಹಾಗೂ ಶುದ್ಧವಾಗಿವೆಯೆಂಬುದು ನಿರ್ವಿವಾದವಾಗಿದೆ. ಆದರೆ, 'ಮಹಾರಾಷ್ಟ್ರ' ವೆಂಬ ಶಬ್ದ ಇದಕ್ಕಿಂತ ಹೆಚ್ಚು ಪ್ರಾಚೀನವಾದ ಸಾಹಿತ್ಯದಲ್ಲಿ ದೊರೆಯುತ್ತದೆ. ಅಪಭ್ರಂಶ ಕಾವ್ಯತ್ರಯದಲ್ಲಿ (ಕ್ರಿ. ಶ. ೯ನೆಯ ಶತಮಾನ) 'ಮರಹಟ್ಟೇ' ಶಬ್ದದ ಉಲ್ಲೇಖ ದೊರೆಯುತ್ತದೆ. ಕೋವೂಹಲ ಕವಿಯಂತೂ (ಕಾಲ ಸುಮಾರು ಇ.ಸ. ೮೦೦) ತನ್ನ ಕಾವ್ಯವನ್ನು ಮರಹಟ್ಟ ದೇಸಿಯಲ್ಲಿ ರಚಿಸಿದ್ದಾಗಿ ಹೇಳುತ್ತಾನೆ. ಆದರೆ, ಇದಕ್ಕೂ ಪೂರ್ವದಲ್ಲಿ ಕೂಡ 'ಮಹಾರಾಷ್ಟ್ರ' ಶಬ್ದದ ಉಪಯೋಗ ಕಾಣುತ್ತದೆ. ಆದರಿಂದಾಗಿ 'ಮಹಾರಾಷ್ಟ್ರ' ಶಬ್ದದಿಂದ 'ಮರಹಟ್ಟ' ಮತ್ತು 'ಮರ್ಹಾಟ' ಶಬ್ದಗಳು ನಿಷ್ಪನ್ನವಾಗಿರಬೇಕೆಂಬ ವಿಷಯ ಈಗ ಗೃಹೀತವಿದೆ.

'ಮಹಾರಾಷ್ಟ್ರ' ಶಬ್ದದಿಂದ 'ಮರಹಾಟ' ಶಬ್ದ ಹೇಗೆ ಹುಟ್ಟಿರಬೇಕೆಂಬುದನ್ನು ಪ್ರಾಕೃತ ವೈಯಾಕರಣಿಗಳು ತರ್ಕವನ್ನಲ್ಲದೆ ನಿಯಮಗಳನ್ನು ಕೂಡ ಹೇಳಿಟ್ಟಿದ್ದಾರೆ. ಹೇಮಚಂದ್ರನ ಪ್ರಾಕೃತ ವ್ಯಾಕರಣದಲ್ಲಿ ಈ ಬಗ್ಗೆ ಎರಡು ಸೂತ್ರಗಳನ್ನು ಕೊಡಲಾಗಿದೆ.

ಮಹಾರಾಷ್ಟ್ರ ಶಬ್ದೇ ಆದೇಕಾರಸ್ಯ ಅದ್‌ಭವತಿ । ಮರಹಟ್ಟಮ್।
ಮರಹಟ್ಠೋ॥ ೮-೧-೬೭
ಮಹಾರಾಷ್ಟ್ರೇ ಹ-ರೋಃ ॥ ೮-೨-೧೧೭ ॥
ಮಹಾರಾಷ್ಟ್ರ ಶಬ್ದೇ ಹರೋರ್ವ್ಯತ್ಯಯೋ ಭವತಿ ಮರಹಟ್ಟಮ್॥

ಈ ಸೂತ್ರದ ಆಧಾರದಿಂದ 'ಮಹಾರಾಷ್ಟ್ರ' ಶಬ್ದದಿಂದ 'ಮರಹಟ್ಟ' ರೂಪ ಹೇಗೆ ಹುಟ್ಟಿರಬೇಕೆಂಬುದು ಅರಿಕೆಗೆ ಬರುತ್ತದೆ. ಆದರೆ, 'ಮಹಾರಾಷ್ಟ್ರ' ಶಬ್ದ ಪ್ರಾಚೀನ ಮತ್ತು 'ಮರಹಟ್ಟ' ಅರ್ವಾಚೀನವೆಂದು ನಂಬುವದಕ್ಕೆ ಕೆಲವು ಆತಂಕಗಳಿವೆ. ಆ ಅಡ್ಡಿಗಳು ದೂರವಾಗದ ಹೊರತು 'ಮಹಾರಾಷ್ಟ್ರ' ಶಬ್ದ 'ಮರಹಾಟ'ಕ್ಕಿಂತ ಪ್ರಾಚೀನವೆಂದು ನಂಬುವದು ಸಮಂಜಸವಾಗಲಾರದು. 'ಮಹಾರಾಷ್ಟ್ರ' ಈ ಶಬ್ದ ಪ್ರಾಚೀನವೆಂದು ನಂಬಿ ಹೊರಟರೆ ಉಂಟಾಗುವ ಅಡಚಣೆಗಳು ಈ ಬಗೆಯವಾಗಿವೆ

೧) ಪ್ರಾಚೀನ ಕಾಲದಲ್ಲಿ ಪ್ರದೇಶಗಳಿಗೆ ಹೆಸರು ಬಂದದ್ದು ಅಲ್ಲಿ ಮೊಟ್ಟ ಮೊದಲು ಬಂದು ನೆಲೆಸಿದ್ದ ಜನರಿಂದ ಎಂಬ ಬಗೆಗೆ ಈಗ ಸಂಶಯ ಉಳಿದಿಲ್ಲ. ಮೊದಲು ಜನ ಆಮೇಲೆ ಜನಪದ. ಇದಕ್ಕೆ ವಿಪರೀತವಾಗಿ ಮೊದಲು ದೇಶಕ್ಕೆ ಹೆಸರು ಬಂದು ಆಮೇಲೆ ಅಲ್ಲಿ ವಾಸಿಸುವ ಜನರಿಗೆ ಎಂಬ ಮಾತು ಸಮಂಜಸವೆನಿಸಲಾರದು. ಪ್ರಾಚೀನ ದೇಶಗಳಿಗೆಲ್ಲ ಅಲ್ಲಿ ಮೂಲವಾಗಿ ವಾಸಿಸುತ್ತಿದ್ದ ಜನರಿಂದಲೇ ಹೆಸರು ಬಂದಿವೆ. ಈ ಕ್ರಮ ಜಗತ್ತಿನ ಎಲ್ಲೆಡೆಗೂ ಕಾಣಸಿಗುತ್ತದೆ. 'ಮಹಾರಾಷ್ಟ್ರ' ಪ್ರಾಚೀನ ದೇಶವಾಗಿದ್ದರೆ ಆ ದೇಶದ ಮೂಲ ಹೆಸರು ಜನವಾಚಕವಾಗಿರಲೇಬೇಕಾಗುತ್ತದೆ. ಆದರೆ 'ಮಹಾರಾಷ್ಟ್ರ'ವೆಂಬ ಶಬ್ದವೇ ದೇಶವಾಚಕವಾಗಿದೆ. ಕೆಲವೊಂದು ಅಪವಾದಗಳನ್ನು ಬಿಟ್ಟರೆ ಪಂಡಿತರೆಲ್ಲ 'ಮಹಾರಾಷ್ಟ್ರ' ವೆಂದರೆ 'ದೊಡ್ಡ ದೇಶ' ಎಂದೇ ಅರ್ಥ ಮಾಡಿದ್ದಾರೆ. 'ಮಹಾರಾಷ್ಟ್ರ' ವೆಂಬ ಶಬ್ದ ದೇಶವಾಚಕವಾಗಿದ್ದರೆ ಮತ್ತು ಅದು ಕ್ರಿಸ್ತಶತಕಕ್ಕಿಂತ ಪುರಾತನವಾಗಿದ್ದರೆ ಈ ದೇಶದ ಮೂಲ ಹೆಸರು ಪ್ರದೇಶವಾಚಕವಾಗುವುದು ಶಕ್ಯವೇ ಇಲ್ಲ. ಅದನ್ನು ಬಿಟ್ಟು ಈ ದೇಶದ ಮೂಲ ಹೆಸರು 'ಮಹಾರಾಷ್ಟ್ರ'ವೆಂಬ ಪ್ರದೇಶವಾಚಕ ಹೆಸರಾಗಿತ್ತು ಎಂದು ನಂಬುವದು ಸಮಂಜಸವಲ್ಲ.

೨) ದೇಶಗಳ ಹೆಸರು ಜನವಾಚಕವಾಗಿರಬಹುದು ಅಥವಾ ಭಿನ್ನರೀತಿಯಲ್ಲಿಯೂ ಇರಬಹುದು. ದೇಶದ ಹೆಸರು ಅಲ್ಲಿಯ ಭೌಗೋಲಿಕ ಪರಿಸ್ಥಿತಿಯನ್ನು ಅವಲಂಬಿಸಿರಬಹುದು ಅಥವಾ ಅಲ್ಲಿಯ ಅರಣ್ಯ ಇಲ್ಲವೆ ಸಸ್ಯ ವಿಶೇಷಗಳಿಂದಲೂ ಬರಬಹುದಾಗಿದೆ. ಒಂದು ದೇಶದ ನಾಮಕರಣದ ಹಿಂದೆ ವಿಶೇಷವಾದ ಚರ್ಚೆ ವಿಚಾರಗಳಿಗಿಂತ ಲೋಕದ ಜನರ ನಿತ್ಯವ್ಯವಹಾರದ ಅನುಭವದ ಪ್ರೇರಣೆಯೇ ಹೆಚ್ಚಾಗಿರುತ್ತದೆ. 'ಮಹಾರಾಷ್ಟ್ರ' ಈ ಶಬ್ದದ ಬಗ್ಗೆ ವಿಚಾರ ಮಾಡಿದರೆ ಪ್ರದೇಶದ ವಿಸ್ತಾರದ ಕಲ್ಪನೆಗಿಂತ ಹೆಚ್ಚಾಗಿ ಜನರು ಬರುವದಕ್ಕಿಂತ ಮೊದಲೇ ಈ ಪ್ರದೇಶದ ಸರ್ವೆಯಾಗಿ ಮೋಜಣಿ ಕೂಡ ನಡೆದಿರಬೇಕೆಂದು ನಂಬಬೇಕಾಗುತ್ತದೆ. ಆದರೆ, ಈ ಮಾತು ಪ್ರಾಚೀನ ಕಾಲದಲ್ಲಿ ನಡೆದಿರುವದು ಅಶಕ್ಯವೆಂದೇ ಹೇಳಬೇಕು. ಪ್ರದೇಶದ ಸಮೀಕ್ಷೆ ಮಾಡಿ ಅದನ್ನು ಅಳೆದು ವಿಸ್ತಾರವನ್ನು ನಿಶ್ಚಯಿಸಿ ಹೆಸರು ಕೊಡುವ ಮೊದಲು ಬೇರೊಂದು ಹೆಸರು ಅದಕ್ಕೆ ಇದ್ದಿರಲೇಬೇಕು. 'ಮಹಾರಾಷ್ಟ್ರ' ಎಂಬ ಹೆಸರು ಬರುವದಕ್ಕಿಂತ ಮೊದಲು ಅದಕ್ಕೆ ಬೇರೆ ಹೆಸರೇ ಇರಲಿಲ್ಲ ಎಂಬ ಮಾತು ಸಯುಕ್ತಿಕವಲ್ಲ. ಈ ದೃಷ್ಟಿಯಿಂದ ಕೂಡ 'ಮಹಾರಾಷ್ಟ್ರ' ಮೊದಲಿನ ಹೆಸರಾಗಲಾರದು.*

೩) ಇದಲ್ಲದೆ 'ಮಹಾರಾಷ್ಟ್ರ' ರಾಷ್ಟ್ರದ ಸ್ವರೂಪದಲ್ಲಿ ಬಹಳ ಪ್ರಾಚೀನ ಕಾಲದಿಂದ ಇತ್ತು ಎಂದು ಹೇಳುವದಕ್ಕೆ ಯಾವ ಆಧಾರವೂ ಇಲ್ಲ.

ಮೊಟ್ಟಮೊದಲು, 'ಮಹಾರಾಷ್ಟ್ರ' ಶಬ್ದವು ವರರುಚಿಯ ವ್ಯಾಕರಣ ಗ್ರಂಥದಲ್ಲಿ ದೊರೆಯುತ್ತದೆ. ವರರುಚಿಯು ಕ್ರಿಸ್ತಶಕದ ಪ್ರಾರಂಭದಲ್ಲಿದ್ದನೆಂದು ನಂಬಿಕೆಯಿದೆ. ಆಮೇಲೆ 'ಮಹಾವಂಸೋ' ಎಂಬ ಬೌದ್ಧಗ್ರಂಥದಲ್ಲಿ ಮಹಾರಾಷ್ಟ್ರದ ಉಲ್ಲೇಖವಿದೆ. ಈ ಗ್ರಂಥದ ರಚನೆ ಕ್ರಿಸ್ತಶಕ ೫ನೆಯ ಶತಮಾನದಲ್ಲಿ ಆಗಿರಬೇಕು. ಆರನೆಯ ಶತಮಾನದ ವರಾಹಮಿಹಿರನ 'ಬೃಹತ್ ಸಂಹಿತೆ'ಯಲ್ಲಿ ಮಹಾರಾಷ್ಟ್ರದ ಹೆಸರು ಇದೆ. ಮುಂದೆ ಏಳನೆಯ ಶತಮಾನದಲ್ಲಿ ಬಾದಾಮಿ ಚಾಲುಕ್ಯರ ಎರಡನೆಯ ಪುಲಿಕೇಶಿಯ ದಿಗ್ವಿಜಯವನ್ನು ವರ್ಣಿಸುವ ಐಹೊಳೆಯ ಶಿಲಾಲೇಖದಲ್ಲಿ 'ಮಹಾರಾಷ್ಟ್ರ'ದ ಹೆಸರನ್ನು ಕೆತ್ತಲಾಗಿದೆ. ವರರುಚಿಯ ಕಾಲದಿಂದ ತನ್ನ ಭವ್ಯವಿಸ್ತಾರದಿಂದ ಮಹಾರಾಷ್ಟ್ರವೆಂದು ಖ್ಯಾತಿಪಡೆದ ದೇಶ ಈ ಕಾಲಕ್ಕಿಂತ ಶತಮಾನಗಳಷ್ಟು ಮೊದಲೇ ಅಸ್ತಿತ್ವದಲ್ಲಿರಬೇಕು ಮತ್ತು ಈ ದೇಶದ ಕೀರ್ತಿ ಮತ್ತು ಮಹತ್ವ ತಿಳಿದಿರಬೇಕೆಂಬುದು ಸ್ಪಷ್ಟವಾಗಿದೆ. ಆದರೆ, ದುರ್ದೈವವೆಂದರೆ ಆ ಕಾಲದ ಯಾವುದೇ ಮಹತ್ವದ ಗ್ರಂಥದಲ್ಲಿ ಐತಿಹಾಸಿಕ ಸಂದರ್ಭದಲ್ಲಿ ಈ ಹೆಸರಿನ ಉಲ್ಲೇಖ ದೊರೆಯುವದಿಲ್ಲ. ಮಹಾಭಾರತದ ಪ್ರಾಚೀನ ಹಸ್ತ ಪ್ರತಿಯಲ್ಲಿ ಈ ಹೆಸರಿಲ್ಲ. ಅಶೋಕನ ಶಾಸನಗಳಲ್ಲಿಯೂ ದೊರೆಯುವದಿಲ್ಲ. ಗುಪ್ತ ಚಕ್ರವರ್ತಿಗಳ ಕಾಲಕ್ಕೆ ಮಹಾರಾಷ್ಟ್ರವೆಂಬ ದೇಶ ಅಸ್ತಿತ್ವದಲ್ಲಿತ್ತೆಂಬುದಕ್ಕೆ ಆ ಕಾಲದ ಐತಿಹಾಸಿಕ ಲೇಖಗಳಲ್ಲಿ ದಾಖಲೆ ದೊರೆಯುವದಿಲ್ಲ.

ಆದರೆ, ರಾಷ್ಟ್ರವೆಂದು ಈ ದೇಶ ಅಸ್ತಿತ್ವದಲ್ಲಿಲ್ಲದಿದ್ದರೂ ಭಾಷೆಯ ದೃಷ್ಟಿಯಿಂದ ಇದಕ್ಕೆ ಗೌರವದ ಸ್ಥಾನವಿತ್ತೆಂಬುದಕ್ಕೆ ವರರುಚಿಯ ವ್ಯಾಕರಣಗ್ರಂಥವೇ ಸಾಕ್ಷಿಯಾಗುತ್ತದೆ. 'ಶೇಷಂ ಮಹಾರಾಷ್ಟ್ರೀವತ್' ಈ ಸೂತ್ರದಿಂದ ಮಹಾರಾಷ್ಟ್ರೀ ಎಂಬ ಸುಪ್ರಸಿದ್ಧವಾದ ಭಾಷೆ ಇತ್ತೆಂಬುದು ಸ್ಪಷ್ಟವಾಗುತ್ತದೆ. ರಾಷ್ಟ್ರದ ದೃಷ್ಟಿಯಿಂದ ಮಹಾರಾಷ್ಟ್ರೀಯರು ವಿಖ್ಯಾತರಾಗಿರದಿದ್ದರೂ ಅವರ ಭಾಷೆ ಸುಪ್ರಸಿದ್ಧವಾಗಿತ್ತು. ಎಲ್ಲ ಪ್ರಾಕೃತಗಳಿಗೂ ಈ ಭಾಷೆ ಪ್ರಮಾಣವೆನಿಸಿತ್ತು. ಆದ್ದರಿಂದ, ಪ್ರಸಿದ್ಧಿಯ ಬಗ್ಗೆ ಎರಡು ಮಾತಿಲ್ಲ. ಈ ಪ್ರಸಿದ್ಧವಾದ ಭಾಷೆಯನ್ನಾಡುವ ಜನರಿದ್ದರೆಂಬ ಮಾತು ಕೂಡ ನಿರ್ವಿವಾದವಾಗಿದೆ. ಸಂಸ್ಕೃತದಲ್ಲಿ ಈ ಜನರನ್ನು ಕುರಿತು ಇರುವ ಮಹಾರಾಷ್ಟ್ರವೆಂಬ ಶಬ್ದ ಎಷ್ಟರಮಟ್ಟಿಗೆ ಯಥಾರ್ಥವಾಗಿ ಅವರಿಗೆ ಅನ್ವಯಿಸುತ್ತದೆಂಬುದು ಸಂಶಯಾಸ್ಪದವಾಗಿದೆ. 'ಮಹಾರಾಷ್ಟ್ರ'

---

* ಈ ಸಮಸ್ಯೆ ಪ್ರಾರಂಭದ ಬೀಜ 'ಮಹಾರಾಷ್ಟ್ರದ ಮೂಲ' ೧೯೩೩ ಎಂಬ ಗ್ರಂಥಗಳಲ್ಲಿಯೇ ಪ್ರಾರಂಭವಾಯಿತು. ಪ್ರಶ್ನೆ ಮತ್ತು ಸಮಸ್ಯೆಗಳೇ ಕಾರ್ಯಕ್ಕೆ ಕಾರಣವನ್ನು ಹುಡುಕಲು ಒತ್ತಾಯಿಸುತ್ತವೆ. ಸಾಂಸ್ಕೃತಿಕ ಕಾರಣಮೀಮಾಂಸೆಯು ಮೂಲಗಾಮಿ ವಿಚಾರಗಳತ್ತ ಅವರನ್ನು ಕರೆದೊಯ್ಯಿತು. (ಸಂ)

ಶಬ್ದದಿಂದ ಅರಿವಾಗುವಂತೆ ಈ ಜನರು ಅತಿ ವಿಖ್ಯಾತ ರಾಷ್ಟ್ರದವರೇ ಆಗಿದ್ದರೆ ಈ ಹೆಸರಿನ ಐತಿಹಾಸಿಕ ಉಲ್ಲೇಖ ಯಾಕಿಲ್ಲವೆಂಬುದು ಇನ್ನೊಂದು ಸಮಸ್ಯೆಯಾಗುತ್ತದೆ. 'ರಾಷ್ಟ್ರಿಕ'ವೆಂಬ ಹೆಸರಿನ ಒಂದು ಜನಸಮುದಾಯ ವಿದ್ದು ಮುಂದೆ ಅವರ ಮಹಾಸಂಘವಾಗಿ 'ಮಹಾರಾಷ್ಟ್ರ'ವೆಂದಾಯಿತು ಎಂಬ ಉತ್ತರವನ್ನು ಹೇಳಬಹುದೇನೋ! ಆದರೆ, ಈ ಉತ್ತರ ಕೂಡ ತೃಪ್ತಿಕರವಾಗಿಲ್ಲ. ಯಾಕೆಂದರೆ 'ರಾಷ್ಟ್ರಿಕ'ವೆಂಬುದು ಜನವಾಚಕವಾಗಿದ್ದರೂ 'ಆರ್ಯ'ರೆಂದೆನಿಸಿಕೊಂಡಿದ್ದ ಮಹಾರಾಷ್ಟ್ರೀಯರಿಗೆ ಅದು ಅನ್ವಯಿಸುವುದಿಲ್ಲ. 'ರಾಷ್ಟ್ರಿಕ' ಶಬ್ದದ ಅರ್ಥವಾದರೂ ಏನು? ದೇಶದಲ್ಲಿಯ ಮೂಲನಿವಾಸಿಗಳು ಎಂದು ಅರ್ಥವಾಗುತ್ತದೆ. ವಿನ್ಸೆಂಟ್ ಸ್ಮಿಥ್ ಮೊದಲಾದವರು ಇದೇ ಅರ್ಥವನ್ನು ಹೇಳಿದ್ದಾರೆ. 'ರಾಷ್ಟ್ರಿಕ'ರು ಮೂಲನಿವಾಸಿಗಳೇ ಆಗಿದ್ದರೆ ಅವರನ್ನು ಆರ್ಯೇತರರಲ್ಲಿ ಎಣಿಸಬೇಕಾಗುತ್ತದೆ. ಅದಕ್ಕಾಗಿಯೇ ವಿನ್ಸೆಂಟ್ ಸ್ಮಿಥ್, ಡಾ. ಅಳತೇಕರ ಮೊದಲಾದ ವಿದ್ವಾಂಸರು 'ರಾಷ್ಟ್ರಿಕ-ರಾಷ್ಟ್ರಕೂಟ'ರು ಆರ್ಯೇತರರಾಗಿದ್ದ (native) ಕರ್ನಾಟಕ ಜನರೇ ಇರಬೇಕೆಂದು ತಮ್ಮ ಗ್ರಂಥಗಳಲ್ಲಿ ಅಭಿಪ್ರಾಯವನ್ನು ಹೇಳಿದ್ದಾರೆ.

ಐತಿಹಾಸಿಕ ಪುರಾವೆಗಳಿಂದ ರಾಷ್ಟ್ರಿಕ ಮತ್ತು ರಾಷ್ಟ್ರಕೂಟ ಸಂಬಂಧ ಸಮೀಪದ್ದಾಗಿ ತೋರುವಂತೆ ಮಹಾರಾಷ್ಟ್ರಿಕರ ಜೊತೆಗೆ ಅಷ್ಟು ಸಮೀಪದ್ದೆಂದು ತೋರುವುದಿಲ್ಲ. ಇತಿಹಾಸದಲ್ಲಿ ರಾಷ್ಟ್ರಕೂಟರ ಅನೇಕ ಮನೆತನಗಳಿರುವುದು ಕಂಡುಬರುತ್ತದೆ. ಅವರ ಬಗ್ಗೆ ಅನೇಕ ತಾಮ್ರಪಟಗಳು ದೊರೆಯುತ್ತವೆ. ಅದರಂತೆ 'ಮಹಾರಾಠ್ಠಿಕ' ಅಥವಾ 'ಮಹಾರಾಷ್ಟ್ರಿಕ'ವೆಂಬ ಹೆಸರಿನ ಒಂದಾದರೂ ರಾಜಮನೆತನ ಅಸ್ತಿತ್ವದಲ್ಲಿದ್ದಂತೆ ಕಾಣುವದಿಲ್ಲ.

ಒಂದು ಭಾಷೆಯಲ್ಲಿಯ ವಾಕ್ಪ್ರಯೋಗ ಮತ್ತು ಗಾದೆಮಾತುಗಳಲ್ಲಿ ತತ್ಕಾಲೀನ ಜನತೆಯ ಮನೋವೃತ್ತಿ ಸೂಕ್ಷ್ಮವಾಗಿ ಧ್ವನಿತವಾಗುತ್ತಿರುತ್ತದೆ. 'ಮಾರವಾಡೀ ವೃತ್ತಿ'. 'ತೆಲಂಗೀ ಬ್ರಾಹ್ಮಣ' ಈ ವಾಕ್ಪ್ರಯೋಗಗಳಲ್ಲಿಯ ವ್ಯಂಗ್ಯ ವಿಚಾರಕ್ಕೀಡುಮಾಡುತ್ತದೆ. ಒಂದು ಪ್ರಾಂತದ ಬಗ್ಗೆ ಇನ್ನೊಂದು ಪ್ರಾಂತದವರಿಗೆ ಏನನ್ನಿಸುತ್ತದೆಂಬುದು ಈ ಪ್ರಯೋಗಗಳಿಂದ ತಿಳಿದುಬರುತ್ತದೆ. 'ಗೌಡಬಂಗಾಲ'-ಇಂಥ ವಾಕ್ಪ್ರಯೋಗದಲ್ಲಿ ಜಾದು, ಮಾಟ ಮತ್ತು ತಂತ್ರವಿದ್ಯೆಗಳ ಬಗ್ಗೆ ಮಹಾರಾಷ್ಟ್ರದ ಭಾವನೆಗಳು ಸರಿಯಾಗಿ ವ್ಯಕ್ತವಾಗುತ್ತವೆ. ಇತಿಹಾಸಾಚಾರ್ಯ ದಿ॥ ರಾಜವಾಡೆಯವರ ಒಂದು ಲೇಖನದಲ್ಲಿ ಈ ವಾಕ್ಯ ದೊರೆಯುತ್ತದೆ. 'ಕಡವಾ ಮುಸಲ್ಮಾನ, ಧಿಪ್ಪಾಡ, ರಾಜಪೂತ, ರಾಠ ಕಾನಡೀ....' ಇಲ್ಲಿ ಪ್ರಯುಕ್ತವಾಗಿರುವ ವಿಶೇಷಣಗಳು ಅಭ್ಯಾಸಯೋಗ್ಯವಾಗಿವೆ. ಅವುಗಳಲ್ಲಿ 'ರಾಠ' ಶಬ್ದ ಬಹಳ ಮಹತ್ವದ್ದಾಗಿದೆ. 'ರಾಠ' ಶಬ್ದ 'ರಾಷ್ಟ್ರ' ಶಬ್ದದಿಂದ ನಿಷ್ಪನ್ನವಾಗಿರಬೇಕು. ಇದನ್ನು ಬಿಟ್ಟರೆ ಬೇರೆ ವ್ಯುತ್ಪತ್ತಿಯನ್ನು ಹೇಳುವುದು ಅಶಕ್ಯವಾಗಿದೆ. ಇದು ನಿಜವಾಗಿದ್ದರೆ, ಮರಾಠಿ ಶಬ್ದದಲ್ಲಿಯ 'ರಾಠ' ಶಬ್ದದಿಂದ ಸೂಚಿತವಾಗುವ ಜನಸಮುದಾಯ ಮಹಾರಾಷ್ಟ್ರಿಕರಿಂದ ಭಿನ್ನವಾಗಿರಬೇಕೆಂಬುದು ಅವಶ್ಯವಲ್ಲವೇ? ರಾಷ್ಟ್ರಿಕರು ಮಹಾರಾಷ್ಟ್ರೀಯರಿಗಿಂತ ಭಿನ್ನವಾದ ಜನಪದ ಎಂದು ಇದರಿಂದ ಸ್ಪಷ್ಟವಾಗುತ್ತದೆ. ರಾಷ್ಟ್ರಿಕರು ಈ ಪ್ರದೇಶದ ಮೂಲನಿವಾಸಿಗಳಾಗಿದ್ದರೆ ಈ ಜನರು ಸಂಸ್ಕೃತವಲ್ಲದ ಬೇರೆ ಭಾಷೆಯನ್ನೂ ಆಡುತ್ತಿದ್ದಿರಬೇಕೆಂಬ ತರ್ಕ ಸಹಜವಾಗಿದೆ. ಈ ರಾಷ್ಟ್ರಿಕರು ಕನ್ನಡಿಗರಾಗಿದ್ದರೆಂದು ಡಾ॥ ಅಳತೇಕರರು ಸಾಧಾರ ಅಭಿಪ್ರಾಯಪಟ್ಟಿದ್ದಾರೆ.

ದಕ್ಷಿಣಾಪಥದ ದೇಶದ ಹೆಸರುಗಳು ಅಲ್ಲಿಯ ಜನರಿಂದ ಬಂದವುಗಳೆಂಬುದು ಈ ವರೆಗಿನ ಸಂಶೋಧನೆಯಿಂದ ಸಿದ್ಧವಾಗಿದೆ. ಸಂಸ್ಕೃತ ಸಾಹಿತ್ಯದಲ್ಲಿ 'ದ್ರಾವಿಡ' ಶಬ್ದದಿಂದ ಸೂಚಿತವಾಗುವ ಜನರ ದೇಶದ ಮೂಲಹೆಸರು 'ತಮಿಳು' ಇರಬೇಕೆಂದು ಈಗ ಸರ್ವಮಾನ್ಯವಾಗಿದೆ. 'ತಮಿಳು' ಎಂಬ ಶಬ್ದವೇ ಸಂಸ್ಕೃತೀಕರಣವನ್ನು ಹೊಂದಿ (ದಮಿಳ, ದ್ರಾಮಿಳ, ದ್ರಮಿಡ, ದ್ರವಿಡ) ದ್ರವಿಡ ಮತ್ತು ದ್ರಾವಿಡ ಎಂಬ ಎರಡು ರೂಪಗಳು ರೂಢವಾಗಿರುವದು ಕಾಣುತ್ತದೆ. ಇಷ್ಟು ಸಾಲದೆಂಬಂತೆ 'ದ್ರವಿಡ' ಇದೇ ಮೂಲ ಶಬ್ದ ವಿರಬೇಕೆಂದುಕೊಂಡು ಪಂಡಿತರು ಆ ಶಬ್ದದ ದ್ರವಿಡೀಕರಣಕ್ಕೆ ಕೈಹಾಕಿದರು! ಇದೇ ರೀತಿಯಲ್ಲಿ 'ದ್ರಾವಿಡ' ಶಬ್ದದಿಂದ ಹುಟ್ಟಿದ 'ತಿರಮಿಡ'ವೆಂಬ ಇನ್ನೊಂದು ಶಬ್ದ ತಮಿಳು ಸಾಹಿತ್ಯದಲ್ಲಿಯೇ ದೃಷ್ಟಿಗೋಚರವಾಗುತ್ತದೆ.

> Tamil was adopted into Sanskrit in early times as Dravida which occurs for example, in the Mahabharat, in Atharvaveda Parishista and in the Code of Manu. Not only has the word thus transliterated Survived to us in Sanskrit literature, it even imposed itself on Tamil men of letters who retransliterated it into their own characters as "Tiramida".
>
> (Indian Antiquery, 1919 p.194)

ದ್ರಾವಿಡ ಶಬ್ದದಿಂದ ತಿರಮಿಡ ಹುಟ್ಟಿದ್ದು ಒಂದೇ ಉದಾಹರಣೆಯಲ್ಲ. 'ಕರ್ಣಾಟ' ಶಬ್ದದಿಂದ 'ಕರುನಾಡು' ಎಂಬ ಶಬ್ದ ಎಲ್ಲೆಲ್ಲಿ ಕಂಡುಬರುತ್ತದೋ ಅಲ್ಲೆಲ್ಲ ಈ ಪ್ರಕ್ರಿಯೆ ಇನ್ನೊಂದು ಪ್ರತ್ಯಂತರವಾಗಿದೆ. 'ದ್ರವಿಡ' ಶಬ್ದವೇ ಮೂಲವೆಂಬ ನಂಬಿಕೆಗೆ ಇರುವ ಕಾರಣವೆಂದರೆ ಲಿಖಿತಸಾಹಿತ್ಯ ನಮಗೆ ಸಂಸ್ಕೃತದಲ್ಲಿಯೇ ಮೊದಲು ಸಿಗುವದೆಂಬ ಸಂಗತಿ. ಆದ್ದರಿಂದ, ನಮ್ಮ ದೇಶದ ಪ್ರಾಚೀನ ಜನರ ಇತಿಹಾಸವನ್ನು ಅರಿಯುವದಕ್ಕೆ ಸಂಸ್ಕೃತ ಗ್ರಂಥಗಳೇ ಏಕಮೇವ ಸಾಮಗ್ರಿಯಾಗಿಬಿಟ್ಟಿವೆ. ಸಂಸ್ಕೃತ ಗ್ರಂಥಗಳಲ್ಲಿಯ ಪ್ರಾಚೀನತಮ ಉಲ್ಲೇಖವನ್ನೇ ಆಧಾರವಾಗಿಟ್ಟುಕೊಂಡು ನಮ್ಮ ದೇಶದ ಇತಿಹಾಸ ಮತ್ತು ಸಂಸ್ಕೃತಿಗಳನ್ನು ಅರಿಯುವ ಪ್ರಯತ್ನ ಪ್ರಾರಂಭವಾಯಿತು. ಆದರೆ, ಈ ಪ್ರಯತ್ನದಲ್ಲಿ ಎಲ್ಲೋ ತಪ್ಪುತ್ತಿದೆಯೆಂಬ ಅರಿವು ಮುಂದೆ ಅನೇಕ ಸಂಗತಿಗಳಿಂದ ಸ್ಪಷ್ಟವಾಗತೊಡಗಿತು. ವೇದ ಮೊದಲಾದ ಹಳೆಯ ಗ್ರಂಥಗಳಲ್ಲಿ ಉಪಯೋಗಗೊಂಡು ಶಬ್ದಗಳೆಲ್ಲ ಸಂಸ್ಕೃತ ಭಾಷೆಯವೇ ಎಂಬ ಸಂಶಯ ಪಂಡಿತರಿಗೆ ತಟ್ಟಿತು. ತೌಲನಿಕ ಭಾಷಾಶಾಸ್ತ್ರ ಈ ಸಮಸ್ಯೆಯ ಮೇಲೆ ಬೆಳಕನ್ನು ಬೀರಿ ಸಂಸ್ಕೃತೇತರ ಶಬ್ದಗಳು ವೇದಗಳಲ್ಲಿವೆಯೆಂಬ ಸಂಗತಿಯನ್ನೂ ಸ್ಪಷ್ಟಗೊಳಿಸಿತು. ಈ ದೇಶದಲ್ಲಿಯ ಜನರ ಭಿನ್ನವರ್ಣಗಳು, ರೂಪ ಆಕಾರಗಳು ಮತ್ತು ಅವರಾಡುವ ಭಾಷೆಗಳ ಅಭ್ಯಾಸ ನಡೆದಂತೆ ಹೊಸ ಹೊಸ ಸಂಗತಿಗಳು ಬೆಳಕಿಗೆ ಬರತೊಡಗಿದವು. ಆರ್ಯರಿಗಿಂತ ಪ್ರಾಚೀನರಾದ ಜನರು ಈ ಪ್ರದೇಶದಲ್ಲಿದ್ದರೆಂಬುದು ಗೊತ್ತಾಯಿತು. ಆದರೆ ಅವರ ಸಾಹಿತ್ಯವಾವುದೂ ಈ ವರೆಗೆ ಸಿಕ್ಕಿಲ್ಲ. ಶ್ರೀರಾಮಚಂದ್ರನಿಗೆ ನೆರವು ನೀಡಿದ್ದ 'ಮರ್ಕಟ'ರು ನಿಜವಾಗಿಯೂ ಮಂಗಗಳಾಗಿದ್ದರೇ ಎಂಬ ಸಂಶಯ ಬಂದು 'ಮರ್ಕಟ' ಶಬ್ದದ ವ್ಯುತ್ಪತ್ತಿಯನ್ನು ಪರೀಕ್ಷಿಸಲು ಕೆಲವರು ಮುಂದೆ ಬಂದರು. 'ಮರ್ಕಟ' ಶಬ್ದದಲ್ಲಿ 'ಗಿಡ' ಎಂಬ ಅರ್ಥದ ಪ್ರಾಚೀನ ದ್ರಾವಿಡ ವರ್ಗದ 'ಮರ'ವೆಂಬ ಶಬ್ದವಿದೆ. ಆದರಿಂದಾಗಿ ಗಿಡಗಳ ಗುಂಪಿನಲ್ಲಿ ವಾಸವಾಗಿದ್ದ ಜನರೇ ವಾನರರು ಆಗಿರಬೇಕೆಂದು ಕೆಲವರು ತರ್ಕಿಸಿದ್ದಾರೆ.

ಪ್ರಾಚೀನ ಕಾಲದಲ್ಲಿ ಸಂಸ್ಕೃತವನ್ನೂ ಬಿಟ್ಟು ಬೇರೆ ಭಾಷೆಗಳನ್ನಾಡುವ ಜನರಿದ್ದರೆಂಬುದಕ್ಕೆ ಸಂಸ್ಕೃತ ಗ್ರಂಥಗಳಲ್ಲಿಯೇ ಆಧಾರ ದೊರೆಯುತ್ತದೆ. ವೇದಗಳಲ್ಲಿ 'ದಾಸ' ಮತ್ತು 'ಫಣಿ' ಇವರ ಉಲ್ಲೇಖ ಸಿಗುತ್ತದೆ. ಬ್ರಾಹ್ಮಣ ಗ್ರಂಥಗಳಲ್ಲಿ ಜನರ ಬಗ್ಗೆ 'ವಂಗಾಃ ಪಕ್ಷಿಣಃ' ಎಂಬ ವಾಕ್ಯಗಳಿವೆ. ಪಕ್ಷಿ, ಗರುಡ, ಮರ್ಕಟ, ಜಾಂಬುವಂತ ಹೀಗೆ ಪ್ರಾಣಿಗಳ ಹೆಸರು ಜನವಾಚಕಗಳಾಗಿರುವದನ್ನು ನೋಡಬಹುದು. ಇಂಥ ಜನಸಮೂಹ ಗಳಿದ್ದದ್ದು ನಿಜವಾದರೆ ಅವರ ಭಾಷೆಗಳೂ ಇರಬೇಕು.

ನಾನಾ ಚರ್ಮಭಿರಾಚ್ಛನ್ನಾ ನಾನಾಭಾಷಾಶ್ಚ ಭಾರತ
ಕುಶಲಾ ದೇಶಭಾಷಾಸು ಜಲ್ಪಂತೋಽನ್ಯೋನ್ಯಮೀಶ್ವರಾಃ ॥

ಮಹಾಭಾರತದಲ್ಲಿ (ಶಲ್ಯಪರ್ವ)ಯ ಈ ಪದ್ಯದ ಆಧಾರದಿಂದ ಅಲ್ಲಿ ನೆರೆದಿದ್ದ ರಾಜರು ಯಾವ ಭಾಷೆಗಳಲ್ಲಿ ಮಾತನಾಡುತ್ತಿದ್ದರೆಂಬುದು ಗೊತ್ತಾಗುವದಿಲ್ಲ. ಭಾರತದ ರಾಜಧಾನಿಯಲ್ಲಿ, ಕೇಂದ್ರೀಯ ಲೋಕಸಭೆಯಲ್ಲಿ ನೆರೆದ ಲೋಕಪ್ರತಿನಿಧಿಗಳು ತಂತಮ್ಮ ದೇಶಭಾಷೆಗಳಲ್ಲಿ ಮಾತಾಡಬಲ್ಲವರಾಗಿದ್ದರೂ ಅಲ್ಲಿ ಮಾತಾಡಿದ್ದೆಲ್ಲ ಇಂಗ್ಲಿಷಿನಲ್ಲಿ ವರದಿಯಾಗುತ್ತಿರುವದು ನಾವು ನೋಡುತ್ತಿರುವ ಸಂಗತಿಯಾಗಿದೆ. ಉಳಿದ ಭಾಷೆಗಳೆಲ್ಲ ಹಾಳಾಗಿಹೋದರೂ ಇಂಗ್ಲಿಷಿನಲ್ಲಿ ದಾಖಲೆಗಳು ಉಳಿದರೆ ಇಂದಿನ ಇತಿಹಾಸವನ್ನು ಭವಿಷ್ಯದಲ್ಲಿ

ಬರೆಯಬಹುದಾಗಿದೆ. ಇಂಥ ಪರಿಸ್ಥಿತಿಯಲ್ಲಿ ತಪ್ಪು ತಿಳುವಳಿಕೆಯಿಂದ ಏನೇನು ತಪ್ಪುಗಳಾಗಬಹುದೋ ಅದೇ ಬಗೆಯ ತಪ್ಪುಗಳು ಸಂಸ್ಕೃತದ ಪ್ರಾಚೀನ ಸಾಹಿತ್ಯವನ್ನಷ್ಟೇ ಅವಲಂಬಿಸಿದರೆ ಆಗುತ್ತವೆ.

ಕರ್ನಾಟಕವೇ ಮೂಲ ಹೆಸರಿರಬೇಕೆಂದುಕೊಂಡು 'ಕರ್ನಾಟದೇಶೀಯಃ ಕರ್ಣದೇಶಂ ಆಭೂಷಯತ್' (೧೪. ೧೬೫) ಮತ್ತು 'ಕರ್ಣೇ ಅಟತಿ-ಇತಿ-ಕರ್ಣಾಟಃ'-ಎಂಬಂಥ ವ್ಯುತ್ಪತ್ತಿಗಳನ್ನು ವೆಂಕಟಾಧ್ವರಿ ಮತ್ತು ಭಟ್ಟಾಕಳಂಕದೇವ ಇವರು ಕೊಟ್ಟಿದ್ದಾರೆ. ಕನ್ನಡವೇ ಮೂಲ ಹೆಸರೆಂಬುದು ಈಗ ನಿಶ್ಚಿತವಾಗಿದೆ. ಮೂರು ಲಿಂಗಗಳಿದ್ದವೆಂದು ತೆಲಂಗಾಣ ಎಂಬ ಹೆಸರು ಬಂದಿರಬೇಕೆಂದು ಒಂದು ಹಳೆಯ ನಂಬಿಕೆಯಿತ್ತು. ಆದರೆ, ಡಾ. ಲೆವ್ಹಿ ಇವರು 'ತ್ರಿ-ಕಲಿಂಗ' ಶಬ್ದದಿಂದ ತಿ-ಲಂಗ ಮತ್ತು ತೆಲಂಗ ಶಬ್ದಗಳಾದವೆಂದು ಸಿದ್ಧಪಡಿಸಿದ್ದಾರೆ. ಇದೇ ಪ್ರಾಂತಕ್ಕೆ ಆಂಧ್ರವೆಂಬ ಹೆಸರೂ ಇದೆ. ಈ ಶಬ್ದ ಕೂಡ ಜನವಾಚಕವಾದದ್ದು. ಕಲಿಂಗರು ಆ್ಯಸ್ಟ್ರೋ ಏಶಿಯಾಟಿಕ್ ವರ್ಗದವರಾಗಿದ್ದರೆ ಆಂಧ್ರರು ಪತ್ತಿಜನರಿಗೆ ಸಂಬಂಧಿಸಿದವರಾಗಿದ್ದಾರೆ. ದಕ್ಷಿಣಾಪಥದಲ್ಲಿಯ ಗುರ್ಜರ ಮತ್ತು ಮಹಾರಾಷ್ಟ್ರಗಳ ಮೂಲ ಹೆಸರುಗಳು ಕೂಡ ತಮಿಳು, ಕನ್ನಡ, ಆಂಧ್ರಗಳಂತೆ ಮೂಲನಿವಾಸಿಗಳ ಮೇಲಿಂದ ಭಿನ್ನವಾಗಿರುವ ಸಾಧ್ಯತೆ ಇದೆ. ಗುರ್ಜರರ ರಾಷ್ಟ್ರ ಗುರ್ಜರವೆಂದಾಯಿತು. ಆದರೆ, ಗುರ್ಜರರು ಇತ್ತೀಚೆಗೆ ವಲಸೆ ಬಂದ ಜನಾಂಗವಾಗಿದ್ದಾರೆ. ಅದಕ್ಕೂ ಮೊದಲು ಈ ಭಾಗಕ್ಕೆ ಸುರಾಷ್ಟ್ರ ಮತ್ತು ಲಾಟ ಎಂಬ ಹೆಸರುಗಳಿದ್ದವು. ಲಾಟವೆಂದರೆ ನಾಟ ಜನರ ವಸತಿ-ಸ್ಥಾನ. ನಾಟರ ಉಲ್ಲೇಖ 'ನಟಶ್ಚ ಕರಣಶ್ಚೈವ' ಎಂದು ಮನುಸ್ಮೃತಿಯಲ್ಲಿ ಬಂದಿದೆ. ಈ ನಟ-ನಾಟರು ರಾಷ್ಟ್ರಿಕರ ಪೂರ್ವಸಂಬಂಧಿಗಳಾಗಿದ್ದರು. ನಟ ಮತ್ತು ರಾಷ್ಟ್ರಿಕರಿಂದ 'ಸಂರಾಷ್ಟ್ರ' ಮತ್ತು 'ಲಾಟ' ಶಬ್ದಗಳು ಹುಟ್ಟಿದವು. ನಟರು ಮತ್ತು ರಾಷ್ಟ್ರಿಕರ ಏತದ್ದೇಶೀಯರಾಗಿದ್ದರೆಂಬ ಸಂಗತಿ ಈ ಮೊದಲೇ ಬಂದಿದೆ. ದಕ್ಷಿಣಾಪಥದಲ್ಲಿಯೇ ಒಳಗೊಳ್ಳುವ ಮಹಾರಾಷ್ಟ್ರ, ಆಂಧ್ರ, ಕನ್ನಡ ಮತ್ತು ತಮಿಳರಂತೆ ಮೂಲನಿವಾಸಿಗಳ ಪ್ರದೇಶವೇ ಆಗಿದ್ದು ಅದರ ಹೆಸರು ಕೂಡ ಅವರ ಭಾಷೆಯಲ್ಲಿ ಇರಬೇಕಲ್ಲವೇ? ಆರ್ಯಾವರ್ತದ ಹೊರಗಿನ ದೇಶದ ಹೆಸರು 'ಮಹಾರಾಷ್ಟ್ರ' ಎಂದು ಸಂಸ್ಕೃತದಲ್ಲಿರುವದು ಸಾಧ್ಯವೇ? ಆದರಿಂದಾಗಿಯೇ ಈ ಪ್ರದೇಶದ ಮೂಲಹೆಸರು 'ಮಹಾರಾಷ್ಟ್ರ' ವಾಗಿರದೆ 'ಮರಹಟ್ಟ'ವಾಗಿರಬೇಕೆಂಬುದು ಹೆಚ್ಚು ಸಮಂಜಸವಾಗಿದೆ.

ಭೌಗೋಲಿಕ ದೃಷ್ಟಿಯಿಂದ ನಿರ್ವಿವಾದವೆನ್ನಬಹುದಾದ ಪುರಾವೆ ಏಳನೆಯ ಶತಮಾನದ ವರೆಗೆ ನಮಗೆ ದೊರೆಯುವದಿಲ್ಲ. ಹಿಂದೆ ಹೇಳಿರುವ ಐಹೊಳೆಯ ಶಿಲಾಲೇಖದಲ್ಲಿ 'ತ್ರಯಾಣಾಂ ಮಹಾರಾಷ್ಟ್ರಕಾಣಾಂ' ಎಂಬ ವಾಕ್ಯವಿದೆ. ಆದರೆ, ಈ ಮೂರು ಮಹಾರಾಷ್ಟ್ರಗಳು ಯಾವವೆಂಬುದರ ಬಗ್ಗೆ ತಜ್ಞರಲ್ಲಿ ಒಮ್ಮತವಿಲ್ಲ. ಆದರೂ ಮಹಾರಾಷ್ಟ್ರೀಯರ ಮೊದಲ ವಸಾಹತು ವರ್ಹಾಡದಲ್ಲಿ ಆಯಿತೆಂಬುದರ ಬಗ್ಗೆ ಎಲ್ಲ ಪಂಡಿತರೂ ಏಕಮತದಿಂದ ಒಪ್ಪಿಕೊಂಡಿದ್ದಾರೆ. ವರ್ಹಾಡದ ಹೆಸರು ಅತಿ ಪ್ರಾಚೀನ ಕಾಲದಿಂದಲೇ ಸಂಸ್ಕೃತ ಸಾಹಿತ್ಯದಲ್ಲಿ ಕಾಣಸಿಗುತ್ತದೆ. ಅಗಸ್ತ್ಯ ವಿದರ್ಭಕನ್ಯೆಯಾದ ಲೋಪಾಮುದ್ರೆಯನ್ನು ಮದುವೆಯಾಗಿದ್ದ ಮತ್ತು ಅವನಿಂದಲೇ ದಕ್ಷಿಣಾಪಥದಲ್ಲಿ ಆರ್ಯೀಕರಣದ ಪ್ರಕ್ರಿಯೆ ಸುರುವಾಯಿತೆಂದು ಒಂದು ಆಖ್ಯಾಯಿಕೆಯಿದೆ. ವೇದಕಾಲದ ವರೆಗೆ ಹೋಗಿ ಮುಟ್ಟಿಸುವ ಈ ದಂತಕಥೆಯನ್ನು ಮರೆತರೂ ಕೂಡ ಮಹಾಭಾರತದಲ್ಲಿ ವಿದರ್ಭ ದೇಶದ ಹೆಸರು ಇದೆ. ಈ ವಿದರ್ಭವೇ ಇಂದಿನ ವರ್ಹಾಡ ಎಂಬ ನಿರ್ಣಯ ನಿರ್ವಿವಾದವಾಗಿದೆ. ಪುಲಿಕೇಶಿ ಗೆದ್ದುಕೊಂಡಿದ್ದ ಮೂರು ಮಹಾರಾಷ್ಟ್ರಗಳಲ್ಲಿ ಉಳಿದ ಎರಡರ ಬಗ್ಗೆ ಸಂಶಯಕ್ಕೆ ಎಡೆಯಿದ್ದರೂ ಮೊದಲ ಮಹಾರಾಷ್ಟ್ರದ ಬಗ್ಗೆ ಅನುಮಾನವೇ ಇಲ್ಲ. ಸಂಸ್ಕೃತದಲ್ಲಿ ಈ ಹೆಸರು ವಿದರ್ಭವೆಂದಿದ್ದರೂ ಎಲ್ಲ ಕಡೆಗೂ ವರ್ಹಾಡ ಎಂಬ ಹೆಸರು ಹೆಚ್ಚು ಪ್ರಚಲಿತವಿದೆ. ಮಹಾಭಾರತ ಮೊದಲಾದ ಗ್ರಂಥಗಳಲ್ಲಿ 'ವಿದರ್ಭ'ವೆಂದು ಕರೆಸಿಕೊಂಡು ಪುಲಿಕೇಶಿಯ ಶಿಲಾಲೇಖದಲ್ಲಿಯ ಮೂರು ಮಹಾರಾಷ್ಟ್ರಗಳಲ್ಲಿಯ ಮೊದಲನೆಯದು, ಇದೇ ವರ್ಹಾಡ. ಆದರು ಜಾನಪದ ಭಾಷೆಯಲ್ಲಿ ಮಾತ್ರ ಇದನ್ನು 'ವರ್ಹಾಟ'ವೆನ್ನುತ್ತಾರೆ.

ಒಟ್ಟಿನಲ್ಲಿ ಈ ಭಾಗಕ್ಕೆ ಮೂರು ಹೆಸರುಗಳು 'ವಿದರ್ಭ', 'ವರ್ಹಾಟ' ಮತ್ತು 'ಮಹಾರಾಷ್ಟ್ರ' ಇವುಗಳಲ್ಲಿಯ, ಸಾಂಗತ್ಯದ ಸೂತ್ರ ಯಾವುದು?

ಮರ್ಹಾಡಕ್ಕಿರುವದು ಬೇರೆ ಬೇರೆ ಹೆಸರುಗಳಲ್ಲಿ ಮೂಲ ಹೆಸರು ಮಹಾರಾಷ್ಟ್ರವಲ್ಲ ಎಂಬುದಕ್ಕೆ ಮೂರು ನಾಲ್ಕು ಕಾರಣಗಳನ್ನು ಈಗಾಗಲೇ ಮೇಲೆ ಕೊಟ್ಟಿದೆ. ವಿದರ್ಭವೆಂಬ ಹೆಸರು ಹೇಗೆ ಬಂದಿತೆಂಬುದರ ಕಾರಣ ಇನ್ನೂ ಗೂಢವಾಗಿಯೇ ಇದೆ. 'ಹರಿವಂಶ'ದಲ್ಲಿ (೨-೬೦-೧೦), ಯಾದವಕುಲದಲ್ಲಿ ವಿದರ್ಭನೆಂಬ ರಾಜನಾಗಿದ್ದು ಅವನಿಂದ ಈ ಹೆಸರು ದೇಶಕ್ಕೆ ಬಂದಿರಬೇಕೆಂದು ಹೇಳಿಕೆ ಇದೆ. "ವಿಂಧ್ಯಸ್ಯ ದಕ್ಷಿಣೇ ಪಾರ್ಶ್ವೇ ವಿದರ್ಭಾನ್ ಯೋ ನ್ಯವೇಶಯತ್!" ವಿದರ್ಭ ರಾಜನಿಂದ ಪ್ರತಿಷ್ಠಿತವಾದ ದೇಶವೆಂದು ವಿದರ್ಭವೆಂದು ಹೆಸರು ಬಂದಿತೆಂಬುದು ಒಂದು ಪೌರಾಣಿಕ ಪರಂಪರೆ. ಇದನ್ನು ಬಿಟ್ಟರೆ ಸಮರ್ಪಕವಾದ ಯಾವ ವ್ಯುತ್ಪತ್ತಿಯೂ ಇನ್ನೂ ಸಿಕ್ಕಿಲ್ಲ. ಈ ವಿಷಯದ ಬಗ್ಗೆ ಸಂಶೋಧನೆಯ ಅಗತ್ಯವಿದೆ. ಡಾ. ಕೇತಕರರು ಒಂದು ಹುಂಬ ಧೈರ್ಯದಿಂದ ವಿದರ್ಭದ ವ್ಯುತ್ಪತ್ತಿಯ ಬಗ್ಗೆ ತಮ್ಮ ಊಹೆಯನ್ನು ಹರಿಬಿಟ್ಟಿದ್ದಾರೆ. ವಿದರ್ಭದ ಮೂಲನಿವಾಸಿಗಳು ಬಹುಶಃ ಬೇಡರ ಜಾತಿಯವರಿರಲಿಕ್ಕಿಲ್ಲವೇ ಎಂಬ ಸಂಶಯವನ್ನು ವ್ಯಕ್ತಪಡಿಸಿದ್ದಾರೆ.[೧] ವಿದರ್ಭ-ವಿದರ-ಬೇದರ-ಬೇಡರ- ಈ ನಾಮಸಾದೃಶ್ಯದ ಮೂಲಕ ಬೇಡರ ಸಂಬಂಧವನ್ನು ವಿದರ್ಭದೊಡನೆ ಜೋಡಿಸುವ ಮೋಹ ಸಹಜವಾಗಿದೆ. ಆದರೆ, ಪ್ರಾಚೀನ ಕಾಲದಲ್ಲಿ ಬೇಡರು ಎಂದೂ ಕ್ಷತ್ರಿಯ ರಾಜ್ಯಕರ್ತರೆಂದು ಹೆಸರಾಗಲಿಲ್ಲ. ಬೇಡರು ಆರ್ಯ ಮತ್ತು ದ್ರಾವಿಡರಿಗಿಂತ ಭಿನ್ನವಾದ 'ಕೋಲ' (ಕೋಲಮುಂಡಾ) ವರ್ಗದವರು. ವಿದರ್ಭದ ಹಳೆಯ ರಾಜಮನೆತನದ ಸಂಬಂಧ ಯಾದವಕುಲದವರೊಂದಿಗಿತ್ತೆಂದು ಲಕ್ಷ್ಯದಲ್ಲಿಟ್ಟುಕೊಂಡರೆ ಬೇಡರ ವಸಾಹತಿನಿಂದ ಈ ಪ್ರದೇಶಕ್ಕೆ ವಿದರ್ಭವೆಂಬ ಹೆಸರು ಬಂದಿತೆನ್ನುವದು ಸಾಹಸದ ಮಾತಾಗುತ್ತದೆ.

ಈ ದೃಷ್ಟಿಯಿಂದ ಈ ಪ್ರದೇಶಕ್ಕಿರುವ ಮೂರು ಹೆಸರುಗಳಲ್ಲಿ ಉಳಿಯುವದು 'ವರ್ಹಾಟ'ವೊಂದೇ. ಈ ವರ್ಹಾಟ ಶಬ್ದದ ಅರ್ಥಸಂಗತಿಯಾದರೂ ಸರಿಯಾಗಿದೆಯೇ ಎಂಬ ಪ್ರಶ್ನೆಯನ್ನು ಕೇಳಬಹುದು. 'ವರ್ಹಾಟ' ಶಬ್ದದ ಎರಡು ವ್ಯುತ್ಪತ್ತಿಗಳು ಸಾಧಾರಣವಾಗಿ ಹೀಗಿವೆ:

೧. ಶ್ರೀಕೃಷ್ಣನ ವರ್ಹಾಡರು (ಬೀಗರು) ದ್ವಾರಕಿಯಿಂದ ಬಂದವರು ಇಲ್ಲಿಯೇ ಉಳಿದುಬಿಟ್ಟರು. ಅವರಿಂದ ಈ ಪ್ರದೇಶಕ್ಕೆ ವರ್ಹಾಡ ಎಂಬ ಹೆಸರು ಬಂದಿರಬೇಕು. ಇದು ಕಥೆಯಾಯಿತು, ಶಾಸ್ತ್ರೀಯ ನಿರ್ವಚನವಲ್ಲ. ಸಂಶೋಧಕರು ಈ ವ್ಯುತ್ಪತ್ತಿಯನ್ನು ಮನ್ನಿಸುವದಿಲ್ಲ.

೨. ಎರಡನೆಯ ವ್ಯುತ್ಪತ್ತಿ ಹೀಗಿದೆ: ವರ್ಧಾ+ತಟ=ವರ್ಹಾಟ. ವರ್ಹಾಡದ ಇತಿಹಾಸಕಾರರಾದ ಯಾದವರಾವ ಕಾಳೆ ಮತ್ತು ಇತರೆ ಕೆಲಸಂಶೋಧಕರು ಈ ಮತವನ್ನು ಎತ್ತಿಹಿಡಿದಿದ್ದಾರೆ. ಆದರೆ, ಈ ವ್ಯುತ್ಪತ್ತಿಯಲ್ಲಿ ಏನೂ ಹುರುಳಿಲ್ಲವೆಂದು ಅನೇಕ ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. Imperial Gazetteer (Vol. VII, p. 361) ದಲ್ಲಿ ವರ್ಹಾಡದ ಈ ವ್ಯುತ್ಪತ್ತಿಯ ಬಗ್ಗೆ ಸಂಶಯವನ್ನು ವ್ಯಕ್ತಪಡಿಸಲಾಗಿದೆ. ವರ್ಹಾಡದಲ್ಲಿ ತಾಪೀ ಮತ್ತು ವೈನಗಂಗಾದಂಥ ದೊಡ್ಡ ನದಿಗಳು ಹರಿಯುತ್ತವೆ. ಅಷ್ಟಿದ್ದರೂ ಚಿಕ್ಕ ಹಳ್ಳದಂತಿರುವ ವರ್ಧಾ ನದಿಯ ಹೆಸರು ಇಡೀ ಪ್ರದೇಶಕ್ಕೆ ಹೆಸರು ಬಂದಿರುವದು ಅಶಕ್ಯವಾಗಿದೆ. ಕಾರಣವೆಂದರೆ 'ವರ್ಧಾತಟ' ಎಂಬ ಹೆಸರು ಮುಂದೆ ಯಾವ ಗ್ರಂಥದಲ್ಲಿಯೂ ಕಾಣಬರುವದಿಲ್ಲ. ಬೇರೆ ಸಮರ್ಪಕವಾದ ವ್ಯುತ್ಪತ್ತಿ ಸಿಗುವದಿಲ್ಲವೆಂದು ಈ ರೀತಿ ಬಲುಮೆಯಿಂದ, ಇಂಥ ವ್ಯುತ್ಪತ್ತಿಯಿಂದ ಸಮಾಧಾನ ಪಡೆಯುವದು ವಿಚಾರಶಕ್ತಿಗೆ ಮಾರಕವಾಗಿದೆ.

ವಿದರ್ಭ - ವರ್ಹಾಟವೆಂದು ಹೆಸರು ಮಹಾಭಾರತದ ಕಾಲಕ್ಕಿಂತಲೂ ಹಳೆಯದೆಂಬ ಮಾತು ನಿಜವಾಗಿದ್ದರೆ ಆ ಪ್ರದೇಶದ ಜನರಿಂದಲೇ ಹೆಸರು ಬಂದಿರುವದೆಂಬುದು ಅಷ್ಟೇ ನಿಜವಾಗಿದೆ. ಆದ್ದರಿಂದ, ಇದೇ ದಿಕ್ಕಿನಲ್ಲಿ ವಿಚಾರ, ವಿಮರ್ಶೆ ನಡೆದರೆ ಹೆಚ್ಚು ಫಲಪ್ರದವಾಗಬಲ್ಲದು. ವರ್ಹಾಟದ ಜನರ ಭಾಷೆ ಮರಾಠಿ ಎಂಬ ವಿಷಯದ ಬಗ್ಗೆ ವಾದವಿಲ್ಲ. ಭಾಷೆಯ ಮೇಲಿಂದ ದೇಶಕ್ಕೆ ಮತ್ತು ಜನರಿಗೆ ಹೆಸರು ಬಂದಿದೆಯೆಂಬ ವಿಪರೀತವಾದ ಕೋಟಿಕ್ರಮವನ್ನು ಯಾರೂ ಮಾಡಲಾರರು. ಭಾಷೆಗೆ ಹೆಸರು ದೇಶದಿಂದ ಅಥವಾ ಅಲ್ಲಿಯ ಜನರಿಂದ ಬರುತ್ತದೆ. ಇಲ್ಲಿಯ ಮೂಲಭಾಷೆ ಮರ್ಹಾಟಿಯಾಗಿದ್ದರೆ ಆ ಭಾಷೆಯನ್ನಾಡುವ ಜನರ ಹೆಸರು 'ಮರ್ಹಾಟ' ಎಂದು ಇರಬೇಕು. ಈ ಪ್ರದೇಶದ ಹೆಸರು 'ಮರ್ಹಾಟ' ಅಥವಾ 'ಮರಹಟ್ಟ' ಎಂದು ನಿರ್ಣಯ ತೆಗೆದುಕೊಂಡರೆ

'ವರ್ಹಾಟ' ಶಬ್ದದ ನಿರ್ವಚನ ಸುಗಮವಾದೀತು. ಮಕಾರ ವಕಾರದಲ್ಲಿ ಬದಲಾಗುವುದು ಕನ್ನಡ ಭಾಷೆಯ ಸ್ವಭಾವ. ಇದೇ ರೀತಿಯಲ್ಲಿ ಮೂಲ 'ಮರ್ಹಾಟ'ವೆಂಬ ಶಬ್ದ 'ವರ್ಹಾಟ'ವೆಂದು ಹೇಗೆ ಬದಲಾಗಿರಬೇಕೆಂಬುದರ ಅರಿವಾಗಬಹುದು. ಹೇಮಚಂದ್ರ ಮೊದಲಾದ ಪ್ರಾಕೃತದ ವೈಯಾಕರಣಿಗಳು ಮಕಾರ ವಕಾರವಾಗುತ್ತದೆಂದು ಹೇಳಿದ್ದಾರೆ. ಈ ರೂಪಾಂತರದ ಅನೇಕ ಉದಾಹರಣೆಗಳೂ ಇವೆ. ಮೀಮಾಂಸಾ=ವಿವಾಂಸ (ಪಾಲಿ), ಮನ್ಮಥ=ವಮ್ಮಹ (ಪ್ರಾಕೃತ), ಮಗಧ=ವಗಧ; 'ವಂಗಾವಗಧಾಶ್ಚೇರಪಾದಾಃ'. ಐತರೇಯ ಅರಣ್ಯಕದಲ್ಲಿಯ ಈ ಸಂಸ್ಕೃತ ವಾಕ್ಯದಲ್ಲಿ ಕೂಡ ಮಕಾರವು ವಕಾರವಾಗಿದ್ದನ್ನು ನೋಡಬಹುದು. ಹೀಗೆ 'ಮರ್ಹಾಟ' 'ವರ್ಹಾಟ'ವಾಗಿರುವುದು ಅಶಕ್ಯವೇನಲ್ಲ.

ಈ ಪ್ರದೇಶದ ಜನರಿಗೆ 'ಮರಹಟ್ಟೆ' ಎಂಬ ಹೆಸರಿತ್ತೆಂಬುದು 'ಅಪಭ್ರಂಶ ಕಾವ್ಯತ್ರಯೀ' ಮೊದಲಾದ ಗ್ರಂಥಗಳಿಂದ ತಿಳಿಯುತ್ತದೆ. ಜನರಿಂದ ದೇಶಕ್ಕೆ ಹೆಸರು ಬರುತ್ತದೆಂಬ ಸೂತ್ರವನ್ನು ಅನುಸರಿಸಿದರೆ ವರ್ಹಾಡದಿಂದ ಮೂಲ ಹೆಸರು 'ಮರ್ಹಾಟ' ಇಲ್ಲವೆ 'ಮರಹಟ್ಟ' ಎಂಬುದು ಸಿದ್ಧವಾಗುತ್ತದೆ. ವರ್ಹಾಡದಲ್ಲಿ 'ಹಟಗಾರ' ಹೆಸರಿನ ಜನರಿದ್ದಾರೆ. "Hatgars are of considerable importance in Berar". ಇಲ್ಲಿಯ ಜಾತಿ ಜನಾಂಗಗಳನ್ನು ಅಭ್ಯಾಸ ಮಾಡಿದ ತಜ್ಞರ ಹೇಳಿಕೆ ಇದಾಗಿದೆ. (Tribes and Castes in Central Provineces, Vol. IV pp. 205, 206) ವರ್ಹಾಡದಲ್ಲಿಯ ಎಷ್ಟೋ ದೇಶಮುಖರ - ದೇಶದ ಪ್ರಮುಖರ - ಮನೆತನಗಳು 'ಹಟಗಾರ' (ಧವಗರ) ಕುಲದವರೆಂದು ತಿಳಿದುಬಂದಿದೆ, ಹಟಗಾರರನ್ನು 'ಹಟಗಾರ', 'ಧನಗರ' ಅಥವಾ 'ಧನವಡೆ' (ಮರಾಠೆ) ಎಂದು ಕರೆಯುವ ರೂಢಿ ವರ್ಹಾಡದಲ್ಲಿದೆ. ಮೂಲದಲ್ಲಿ ಇವರು ಪಶುಪಾಲನ ವೃತ್ತಿಯವರು. (ಗೋ)ಧನವನ್ನು ಪಾಲಿಸುವವರೆಂದು ಇವರಿಗೆ ಧನಗರ ಹೆಸರು ಬಂದಿತು. 'ಹಟಗಾರ' ಶಬ್ದದ ಅರ್ಥ ಕೂಡ ಕನ್ನಡದಲ್ಲಿ ಗೋಪಾಲ ಎಂದೇ ಇದೆ. ಹಟಗಾರರ ಪ್ರಾಮುಖ್ಯತೆ ಇರುವ ದೇಶಕ್ಕೆ ಹಟ್ಟದೇಶವೆಂದು ಹೆಸರು ಬಂದಿದ್ದರೆ ಅದರಲ್ಲಿ ಆಶ್ಚರ್ಯವೇನಿದೆ?

ಈ ಪ್ರದೇಶಕ್ಕೆ ಹಟಗಾರ ಜನರಿಂದ ಹಟ್ಟದೇಶವೆಂಬ ಹೆಸರು ಪ್ರಾಪ್ತವಾಗಿರಬಹುದು. ಆದರೂ 'ಮರಹಾಟ', 'ಮರ' ಶಬ್ದದ ಔಚಿತ್ಯವೇನು ಎಂಬ ಸಮಸ್ಯೆ ಇನ್ನೂ ಪರಿಹಾರವಾಗಿಲ್ಲ. 'ಹಟ್ಟಿ' ಎಂದರೆ ಪಟ್ಟಿ, ಗೌಳವಾಡ, ಘೋಷ, ಪ್ರದೇಶ ಹೀಗೆ ಅರ್ಥಗಳಿವೆ. 'ಮರ' ಶಬ್ದದ ಸ್ಪಷ್ಟೀಕರಣವಾಗಬೇಕಾದರೆ ಈ ಭಾಗದ ಇನ್ನೊಂದು ರೂಢ ಹೆಸರಿನ ಸಹಾಯ ತೆಗೆದುಕೊಳ್ಳಬೇಕಾಗುತ್ತದೆ. ಈ ಭಾಗಕ್ಕೆ 'ಝಾಡಮಂಡಲ' ಇಲ್ಲವೆ 'ಝಾಡೀ ಮಂಡಲ' ಎಂಬ ಹೆಸರೂ ಪ್ರಚಾರದಲ್ಲಿದೆ. ನಾಗಪುರ, ವರ್ಹಾಡದ ಕಡೆಯ ಸಾಹಿತಿಗಳು ಪ್ರಾಂತಾಭಿಮಾನದಿಂದ ಪ್ರೇರಿತರಾಗಿ ತಮ್ಮ ಹೆಸರಿನ ಮುಂದೆ 'ಝಾಡೀ ಮಂಡಳಸ್ಥ' ಎಂಬ ವಿಶೇಷಣವನ್ನು ಬಳಸುತ್ತಾರೆ. 'ಝಾಡೀ ಮಂಡಳ' ಎಂಬ ಶಬ್ದವು ಯಾದವರ ಕಾಲದ ಒಂದು ತಾಮ್ರಪಟದಲ್ಲಿ ದೊರೆಯುತ್ತದೆ. ಹೇಮಾದ್ರಿಯು ಝಾಡೀಮಂಡಳವನ್ನು ಗೆದ್ದುದರ ವರ್ಣನೆ ಅಲ್ಲಿದೆ.* ಮಹಾನುಭಾವ ಪಂಥದ ಚಕ್ರಧರನ 'ಲೀಳಾ ಚರಿತ್ರೆ'ಯಲ್ಲಿ 'ಝಾಡಿ ಮಂಡಳ' ಎಂಬ ಶಬ್ದ ಮೇಲಿಂದ ಮೇಲೆ ಉಪಯೋಗವಾಗಿದೆ. ನರೇಂದ್ರನ 'ರುಕ್ಮಿಣೀ ಸ್ವಯಂವರ' ಗ್ರಂಥದಲ್ಲಿ (ಕ್ರಿ. ಶ. ಸು. ೧೧೮೫))'ಝಾಡ ಮಂಡಳ' ಶಬ್ದವಿದೆ. ಹಳೆಯ ಮರಾಠಿಯ ವಿಖ್ಯಾತ ಸಂಶೋಧಕರಾದ ಮತ್ತು ಝಾಡಮಂಡಳದ ನಿವಾಸಿ ಪ್ರೊ. ಕೋಲತೆಯವರು ಸಂಪಾದಿಸಿದ 'ರುಕ್ಮಿಣೀ ಸ್ವಯಂವರ' ಗ್ರಂಥದಲ್ಲಿ 'ಝಾಡಮಂಡಳ'ದ ಅರ್ಥ 'ಗೊಂಡವನ' ಮತ್ತು 'ಇಂದಿನ ಮಧ್ಯಪ್ರಾಂತ' ಎಂದು ಹೇಳಲಾಗಿದೆ. ಆದ್ದರಿಂದ ವರ್ಹಾಡ ದೇಶಕ್ಕೆ 'ಝಾಡಮಂಡಳ'ವೆಂಬ ಹಳೆಯ ಹೆಸರು ಇದ್ದು ಸುಮಾರು ೧೨ನೆಯ ಶತಮಾನದಲ್ಲಿ ಅದು ಪ್ರಚಲಿತವಿದ್ದಿತೆಂಬ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ಇದರಿಂದಾಗಿ 'ಝಾಡಮಂಡಳ' ಮತ್ತು 'ಮರ್ಹಾಟ'

---

* ಈ ಅಂಶವು 'ಮಹಾರಾಷ್ಟ್ರದ ಮೂಲ' ಗ್ರಂಥದಲ್ಲಿ ಪ್ರಸ್ತಾವಿತವಾಗಿದೆ. ಆ ವಿಚಾರಗಳು ಇಲ್ಲಿ ಹಲವು ಮೂಲಗಳಿಂದ ಬೆಳೆದು ಬಂದಿದೆ (ಸಂ)

ಇವೆರಡೂ ಸಮಾನಾರ್ಥಕವಾದ ಶಬ್ದಗಳಾಗುತ್ತವೆ. ಇಲ್ಲಿ 'ಮರ' ಶಬ್ದದ ತೊಡಕು ಆಶ್ಚರ್ಯಕರವಾದ ರೀತಿಯಲ್ಲಿ ಬಿಟ್ಟುಹೋಗುತ್ತದೆ. 'ಹಟ್ಟ' ಅಥವಾ 'ಹಟ್ಟಿ' ಎಂಬ ಕನ್ನಡ ಶಬ್ದಗಳ ಅರ್ಥ 'ಪ್ರದೇಶ' 'ಮಂಡಲ' ಎಂದಾಗುತ್ತದೆಂಬುದನ್ನು ಹಿಂದೆ ಹೇಳಲಾಗಿದೆ. ಕನ್ನಡದಲ್ಲಿ 'ಮರ' ಎಂಬ ಶಬ್ದವೇ ಮರಾಠಿಯಲ್ಲಿ 'ಝಾಡ' ಎಂದು ಆಗುತ್ತದೆ. ಒಟ್ಟಿನಲ್ಲಿ 'ಮರ್ಹಾಟ' ಶಬ್ದದ ಭಾಷಾಂತರ 'ಝಾಡಮಂಡಳ' ಎಂದೇ ಆಗುತ್ತದೆ.

ಆದರೆ, ಈ ರೀತಿಯ ಭಾಷಾಂತರ ಯಾಕೆ ಆಗಬೇಕು ಎಂಬ ಪ್ರಶ್ನೆ ಏಳುವದು ಸಹಜವಾಗಿದೆ. ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳಲು ಭಾಷಾಂತರವನ್ನು ಅವಲಂಬಿಸುವ ಪ್ರಕ್ರಿಯೆ ಎಲ್ಲ ಕಡೆಗೂ ಕಾಣುತ್ತದೆ. 'ಮರಹಾಟ' ಈ ಶಬ್ದಯೋಜನೆಯ ಅರ್ಥ ಮಸುಕಾದಾಗ ಭಾಷಾಂತರದ ಆವಶ್ಯಕತೆಯಾಗಿರುವದು ಸ್ವಾಭಾವಿಕವಾಗಿದೆ. ಯಾವಾಗ 'ಮರಹಾಟ' ಇಲ್ಲಿಯ ಜನರಿಗೆ 'ಹೇ ಅಮ್ಹಾಸೀ ಕಾನಡೇ' (ಇದು ನಮಗೆ ಕನ್ನಡ) ಆಯಿತೋ ಆಗ ಝಾಡಮಂಡಳವೆಂದು ಅದರ ಸ್ಪಷ್ಟೀಕರಣ ಹುಟ್ಟಿರಬೇಕು. ಇದನ್ನು ಬಿಟ್ಟರೆ 'ಝಾಡಮಂಡಳ'ದ ಔಚಿತ್ಯ ವಾಗಲಿ. ಆವಶ್ಯಕತೆಯಾಗಲಿ ಗೊತ್ತಾಗುವದಿಲ್ಲ. 'ಪೋಲಿ-ಶೇಲಾ'. ಚೂಲ-ವೈಲ, ಕೋಲ-ಕಾಠೀ ಮೊದಲಾದ ಭಾಷಾಂತರಿತ ಜೋಡುಶಬ್ದಗಳು ಇಂಥ ಸಂಕ್ರಮಣಾವಸ್ಥೆಯಲ್ಲಿ ಪ್ರಚಾರಕ್ಕೆ ಬಂದಿರಬೇಕು. ಇದೇ ದಿಕ್ಕಿನಲ್ಲಿ ವಿಚಾರ ಮಾಡಿದರೆ 'ಮರಹಾಟ' ಶಬ್ದದ ಸಂಸ್ಕೃತೀಕರಣ 'ಮಹಾರಾಷ್ಟ್ರ'ದಲ್ಲಿ ಹೇಗೆ ಆಯಿತೆಂಬುದರ ರಹಸ್ಯ ತಿಳಿಯಬಹುದಾಗಿದೆ.

ಎರಡು ಭಾಷೆಗಳ ಜನರ ಸಂಪರ್ಕ ಹೆಚ್ಚುತ್ತ ಹೋದಂತೆ ಆ ಭಾಷೆಗಳಲ್ಲಿಯ ಶಬ್ದಗಳ ಕೊಡುಕೊಳೆ ಶುರುವಾಗುತ್ತದೆ. ಇಂಥ ಹೊತ್ತಿನಲ್ಲಿ ಕೆಲವು ವಿಶಿಷ್ಟ ಸಂಗತಿಗಳಾಗುತ್ತವೆ. ಒಂದನೆಯದಾಗಿ ಬೇರೆ ಭಾಷೆಯಲ್ಲಿಯ ಶಬ್ದಗಳನ್ನು ಉಚ್ಚಾರಕ್ಕೆ ಮತ್ತು ನಮ್ಮ ಭಾಷೆಯ ಪ್ರಕೃತಿಗೆ ಅನುಕೂಲವಾಗುವಂತೆ ಅವುಗಳನ್ನು ಬದಲು ಮಾಡಿ ಸ್ವೀಕರಿಸುವ ರೂಢಿಯೊಂದಿದೆ. ಉದಾಹರಣೆಗೆ ಆ್ಯಂಡರಸನ್' ಮರಾಠಿಯಲ್ಲಿ 'ಇಂದ್ರಸೇನ' ಎಂದಾಗಿದೆ. 'ಸ್ಟುಅರ್ಟ' ಇದು 'ಇಷ್ಟರ-ಫಾಕಡಾ' ಎಂದು ಆಗುತ್ತದೆ. ಇಂಥ ಹಳೆಯ ಪೇಶವಾಯೀ ಉದಾಹರಣೆಗಳನ್ನು ಬಿಟ್ಟುಕೊಟ್ಟರೂ ಋಗ್ವೇದದ ಮುದ್ರಿತ ಪ್ರತಿಯ ಮೇಲೆ ಮ್ಯಾಕ್ಸಮುಲರ್ ತನ್ನ ಹೆಸರನ್ನು 'ಮೋಕ್ಷಮುಲ್ಲರ ಭಟ್ಟ'ನೆಂದು ಬರೆಯುತ್ತಾನೆ. ಪರಭಾಷೆಯಿಂದ ಶಬ್ದಗಳನ್ನು ಸ್ವೀಕರಿಸುವ ಇನ್ನೊಂದು ಪ್ರಕಾರವೆಂದರೆ ಆ ಶಬ್ದದ ಅರ್ಥವನ್ನು ಭಾಷಾಂತರಿಸಿ ಹೊಸ ಶಬ್ದಗಳನ್ನು ನಿರ್ಮಿಸುವದಾಗಿದೆ. ಉದಾಹರಣೆಗೆ Red Sea ಇದು 'ಕೆಂಪು ಸಮುದ್ರ' ಎಂದಾಗುತ್ತದೆ. ಶಿಲಾಲೇಖನಗಳಲ್ಲಿ ಈ ರೀತಿಯ ಅನೇಕ ಉದಾಹರಣೆಗಳಿವೆ. 'ಕಿಸುವೊಳಲ್' ಭಾಷಾಂತರಗೊಂಡು ರಕ್ತಪುರಿಯಾಗಿರುವದು ಈ ಮಾತಿಗೆ ನಿದರ್ಶನವಾಗಿದೆ. ಈ ಎರಡು ಪ್ರಕಾರಗಳ ಭಾಷಾಂತರಗಳಲ್ಲಿ ಮೊದಲಿನದು ಆರಂಭದಲ್ಲಿಯೇ ಇದ್ದಿತು. ಎಷ್ಟೋ ದೇಶಗಳ ಹೆಸರುಗಳು ಸಂಸ್ಕೃತ ಭಾಷೆಯಲ್ಲಿ ಸೇರಿಕೊಂಡವು. ಕನ್ನಕ-ನಾಡು (ಕನ್ನ ಜನರ ನಾಡು) ಈ ಶಬ್ದದ ಸಂಸ್ಕೃತೀ ಕಾರಣವಾಗುತ್ತ ಕಣ್ಣವಾಡ-ಕಣ್ಣಾಡ-ಕಣ್ಣಾಟ-ಕರ್ಣಾಟವೆಂದಾಯಿತು. ಇದೇ ರೀತಿಯಲ್ಲಿ ಮರಹಟ್ಟ-ಮರಹಾಟ-ಮರ್ಹಾಟ-ಮಹಾರಾಷ್ಟ್ರ ಎಂದು ಸಂಸ್ಕೃತದಲ್ಲಿ ರೂಪಾಂತರಗಳಾಗಿರುವ ಸಾಧ್ಯತೆ ಇದೆ. ಇದರ ಸಲುವಾಗಿಯೇ ಸಂಸ್ಕೃತದಲ್ಲಿ ಮಹಾರಾಷ್ಟ್ರವೆಂದು ರಾಷ್ಟ್ರವಾಚಕವಾದ ಹೆಸರನ್ನು. ಪಡೆದರೂ ಮಹಾಭಾರತದಂಥ ಗ್ರಂಥಗಳಲ್ಲಿ ಪ್ರಮುಖ ದೇಶಗಳ ಯಾದಿಯಲ್ಲಿ ಈ ಹೆಸರು ಸಿಗುವದಿಲ್ಲ. ಮೊದಲ ಪ್ರಕಾರದ ಭಾಷಾಂತರದಲ್ಲಿ 'ಮರಹಟ್ಟಿ' ಮಹಾರಾಷ್ಟ್ರವಾದಂತೆ, 'ಮರಹಾಟ' ದಿಂದ 'ಝಾಡೀಮಂಡಳ'ವಾದದ್ದು ಎರಡನೆಯ ಪ್ರಕಾರದ ಭಾಷಾಂತರದ ಸುಂದರವಾದ ಉದಾಹರಣೆಯಾಗಿದೆ.

ನಮ್ಮ ಕಡೆಯ ಪ್ರಾಕೃತ ಗ್ರಂಥಗಳಲ್ಲಿ 'ಮರಹಟ್ಟ'ವೆಂಬ ರೂಪವೇ ವಿಶೇಷವಾಗಿ ಪ್ರಚಲಿತವಾಗಿದೆ. ಆದರೆ ಸಿಂಹಳ ದ್ವೀಪದ ಪಂಡಿತರಿಂದ ರಚಿತವಾದ 'ಮಹಾವಂಸೋ' ಎಂಬ ಬೌದ್ಧಗ್ರಂಥದಲ್ಲಿ ಮಾತ್ರ 'ಮಹರಠ್ಠ'ವೆಂಬ ಪ್ರಯೋಗವಿದೆ. 'ದ್ರವಿಡ' ಶಬ್ದ ಮೂಲವೆಂದು ತಿಳಿದು ತಮಿಳಿನಲ್ಲಿ 'ತಿರಮಿಡ' ಶಬ್ದ ಬಂದಂತೆ 'ಮಹಾರಾಷ್ಟ್ರ' ಶಬ್ದದಿಂದ 'ಮಹರಠ್ಠ'ವೆಂಬ ತದ್ಭವ ರೂಪವಾಗಿರಬೇಕು. ಕಾರಣವೆಂದರೆ 'ರಾಠ-ರಾಷ್ಟ್ರಿಕ'ರು ಮಹಾರಾಷ್ಟ್ರೀಯರಿಗಿಂತ ಭಿನ್ನರಾದವರು ಎಂಬ ಧ್ವನಿ ಇಲ್ಲಿ ಕಾಣುತ್ತದೆ.

ಮಹಾರಾಷ್ಟ್ರ ಶಬ್ದದ ವ್ಯುತ್ಪತ್ತಿಯನ್ನು ಹುಡುಕವಾಗ ಮೂಲದಲ್ಲಿಯೇ ತಪ್ಪು ತಿಳುವಳಿಕೆಯಾಗಿದ್ದರಿಂದ ಇಂದಿನ ವರೆಗೆ ಒಂದಾದರೂ ಸರಿಯಾದ ವ್ಯುತ್ಪತ್ತಿ ದೊರೆಯುವದಿಲ್ಲ. ವಿಲ್ಸನ್, ಮೊಲ್‌ಸ್ವರ್ಥ್‌ರಂಥವರು ಜನರಿಂದ ಪ್ರದೇಶಕ್ಕೆ ಹೆಸರು ಬರುವದೆಂಬ ತತ್ವವನ್ನು ಸ್ವೀಕರಿಸಿದರು. ಆದರೆ, ಮೂಲಹೆಸರು ಮಹಾರಾಷ್ಟ್ರವೆಂದು ನಂಬಿದ್ದರಿಂದ ಅವರ ದಾರಿ ತಪ್ಪಿತು. 'ಮಹಾರಾಷ್ಟ್ರ' ಶಬ್ದವನ್ನು ಅವಲಂಬಿಸಿ ಅದು 'ಮಹಾರರ (ಹೊಲೆಯರ) ರಾಷ್ಟ್ರ' ಎಂದು ಊಹೆಯನ್ನು ಓಡಿಸಿದರು. ಅದು ಬರಿಯ ಊಹೆಯೆಂದೇ ಸಿದ್ಧವಾಗಿರುವದರಿಂದ ಆ ವಿಷಯದಲ್ಲಿ ಚರ್ಚೆ ಬೇಡ. ಇನ್ನೂ ಕೆಲವು ವಿದ್ವಾಂಸರು, 'ಮಹಾರಥಿ', 'ಮಹಾರಠಿ', 'ರಾಷ್ಟ್ರಿಕ-ಮಹಾರಾಷ್ಟ್ರಿಕ' ಮೊದಲಾದ ಶಬ್ದಗಳನ್ನು ಅವಲಂಬಿಸಿ ವ್ಯುತ್ಪತ್ತಿಯನ್ನು ಹೇಳಲು ಪ್ರಯತ್ನಪಟ್ಟಿದ್ದಾರೆ. ಆದರೆ, ಡಾ. ಭಂಡಾರಕರರಿಂದ ಹಿಡಿದು ಡಾ. ಪಿ. ವಿ. ಕಾಣೆಯವರೆಗೆ ಪಂಡಿತರಲ್ಲಿ ನಡೆದಿರುವ ವಾದವಿವಾದಗಳಲ್ಲಿ ಒಬ್ಬರ ವ್ಯುತ್ಪತ್ತಿ ಇನ್ನೊಬ್ಬರಿಗೆ ಒಪ್ಪಿಗೆಯಾಗಿಲ್ಲ. ಡಾ. ಭಂಡಾರಾಕರ, ಶ್ರೀರಾಜವಾಡೆ, ಡಾ. ಕಾಣೆ ಮೊದಲಾದವರ ಪರಸ್ಪರ ವಿರೋಧಿಯಾದ ಅಭಿಪ್ರಾಯಗಳನ್ನು ನೋಡಿದರೆ 'ಮಹಾರಾಷ್ಟ್ರ'ದ ಸಮರ್ಪಕವಾದ ವ್ಯುತ್ಪತ್ತಿ ಕೈಗೆ ದೊರೆತಿಲ್ಲವೆಂದೇ ಹೇಳಬೇಕಾಗುತ್ತದೆ. 'ರಥಿಕ'ನೆಂದರೆ ವೀರನೆಂದು ನಂಬಿ ಅದರಿಂದ ದೇಶಕ್ಕೆ ಅಂಥ ಹೆಸರು ಬಂದಿತೆಂದು ಹೇಳುವದು ಕ್ರಮಪ್ರಾಪ್ತವಲ್ಲ. ವೀರದ ಅವಸ್ಥೆ ದೇಶದ ರಾಜಕೀಯದ ಗೊಂದಲದಲ್ಲಿ ಬೆಳಕಿಗೆ ಬರುತ್ತದೆ. 'ಹಟ್ಟಿ' ಈ ಶಬ್ದವು ಪಶುಪಾಲನವೃತ್ತಿಯನ್ನು ಸೂಚಿಸುತ್ತದೆ. ಆದ್ದರಿಂದ, ಈ ಶಬ್ದದ ಮೇಲಿಂದ ಹಟ್ಟದೇಶವೆಂಬ ಹೆಸರು ಬಂದಿರುವದು ಐತಿಹಾಸಿಕ ಮತ್ತು ಸಾಮಾಜಿಕ ವಿಕಾಸಕ್ಕೆ ಅನುರೂಪವಾಗಿದೆ.

ಮೇಲಿನ ವಿವೇಚನೆಯ ಫಲಿತಾಂಶವೆಂದರೆ ಇದು. ನನ್ನ ಅಭಿಪ್ರಾಯದ ಮೇರೆಗೆ ದೇಶದ ಮೂಲ ಹೆಸರು ಮಹಾರಾಷ್ಟ್ರವಲ್ಲ, ಮೂಲ ಹೆಸರು 'ಮರಹಟ್ಟ'ವೇ ಆಗಿದೆ. ಅದರ ಸಂಸ್ಕೃತೀಕರಣವಾಗಿ ಮಹಾರಾಷ್ಟ್ರ ವಾಯಿತು. ಅದು ಮುಂದೆ ಭಾಷಾಂತರದಲ್ಲಿ 'ಝಾಡೀಮಂಡಳ'ವಾಯಿತು. ಮಕಾರ ವಕಾರವಾಗಿ ಮರ್ಹಾಟದಿಂದ ವರ್ಹಾಟವೆಂಬ ರೂಪ ಪ್ರಚಲಿತವಾಯಿತು.* ಎಷ್ಟೋ ದೇಶಗಳ ಹೆಸರುಗಳ ಸಂಗೀತದಲ್ಲಿಯ ರಾಗ-ರಾಗಿಣಿಗಳು ಪಡೆದುಕೊಂಡಿವೆ. ಕಾನಡಾ, ತಿಲಂಗ ಇವು ಕೆಲವು ಉದಾಹರಣೆಗಳಾಗಿವೆ. ಆದರೆ, 'ಮಹಾರಾಷ್ಟ್ರ' ಹೆಸರಿನ ರಾಗ ಇಲ್ಲದ್ದು ವಿಚಿತ್ರವಾಗಿದೆ. ಆದರೆ, ಸ್ವಲ್ಪ ಆಳಕ್ಕಿಳಿದರೆ ಈ ಪಕ್ಷಪಾತ ನಡೆದಿಲ್ಲವೆಂದು ಕಾಣುತ್ತದೆ. 'ವರಾಳಿ' ರಾಗ ಮಹಾರಾಷ್ಟ್ರದ ಹೆಸರಿನ ರಾಗವಾಗಿದೆ. ವರಾಳಿ ಅಂದರೆ ವರಾಡಿ. ಇದೇ ಮರಾಠಿಗರ ರಾಗವಿಶೇಷವಾಗಿದೆ. ಇದರ ಮೇಲಿಂದ ಕೂಡ ಮಹಾರಾಷ್ಟ್ರ ಮೊದಲು ರಾಷ್ಟ್ರವಾಚಕವಲ್ಲ ಎಂದು ಸಿದ್ಧವಾಗುತ್ತದೆ. ವರ್ಹಾಟ=ಮರ್ಹಾಟ ಇದೇ ಹೆಸರು ಪ್ರಾರಂಭದಲ್ಲಿರಬೇಕೆಂಬ ಅಭಿಪ್ರಾಯಕ್ಕೆ ಇನ್ನಷ್ಟು ಬಲಬರುತ್ತದೆ.

---

* ಈ ಸಂಗತಿಯ ಮೂಲ ಅಂಶಗಳು 'ಮಹಾರಾಷ್ಟ್ರದ ಮೂಲ ಅಥವಾ 'ಮೂಲ ಮಹಾರಾಷ್ಟ್ರ' ೧೯೩೪ ಎಂಬ ಕೃತಿಯಲ್ಲೇ ಬಂದಿವೆ. ವರ್ಹಾಟವೆ ಪ್ರಥಮ ಮಹಾರಾಷ್ಟ್ರ ಎಂಬುದು ಮರ್ಹಾಟ ಶಬ್ದದ ಭಾಷಾಂತರ ಎಂಬ ನಿಲುಮೆ ಶಂಬಾ ಅವರದಾಗಿತ್ತು. ಆದರ ಮುಂದಿನ ಬೆಳವಣಿಗೆಯನ್ನು ಈಗ್ರಂಥದಲ್ಲಿ ನಾವು ಕಾಣುತ್ತೇವೆ. (ಸಂ).

ಸ್ಥಳನಾಮಗಳು ಮತ್ತು ಸಾಮಾಜಿಕ ಇತಿಹಾಸ

ಮನುಷ್ಯನ ಇತಿಹಾಸವನ್ನು ತಿಳಿಯಲು ಅನೇಕ ಸಾಧನಗಳು ಇವೆ. ಸ್ಥಳನಾಮಗಳ ಅಭ್ಯಾಸ ಅವುಗಳಲ್ಲಿ ಒಂದಾಗಿದೆ. ಯಾವುದೇ ಸಾಧನವಿರಲಿ ಅದರ ಪ್ರಯೋಜನಕ್ಕೆ ಒಂದು ಪರಿಮಿತಿ ಇದೆ. ಪರಿಮಿತಿಯ ಆಚೆಗೆ ಹೋದರೆ ಆ ಸಾಧನ ನಿಷ್ಪ್ರಯೋಜಕವಾಗುತ್ತದೆ. ಅಷ್ಟೇ ಅಲ್ಲದೆ, ಅದರಿಂದಾಗಿ ನಾವು ತಿಳಿಯಬೇಕೆಂದಿರುವ ಸತ್ಯ ನಮ್ಮಿಂದ ದೂರವಾಗಿ ನಾವು ಅಡ್ಡದಾರಿ ಹಿಡಿಯುವ ಹೆದರಿಕೆ ಇದೆ. ಸ್ಥಳನಾಮಗಳ ಅಭ್ಯಾಸದಲ್ಲಿ ಈ ಹೆದರಿಕೆ ಇನ್ನೂ ಹೆಚ್ಚಾಗಬಹುದು. ಈ ಸಾಧನವನ್ನು ಉಪಯೋಗಿಸುವಾಗ ದಿಗ್ಭ್ರಮೆಯಾಗಬಾರದೆಂದು ಎಷ್ಟು ಎಚ್ಚರಿಕೆ ವಹಿಸಿದರೂ ಸಾಲದಾಗುತ್ತದೆ. ಎಷ್ಟು ಲಕ್ಷ್ಯವನ್ನಿಟ್ಟು ಕೆಲಸ ಮಾಡಿದರೂ ಕೆಲವೊಂದು ಕೊರತೆಗಳು ಉಳಿದೇ ತೀರುತ್ತವೆ. ಕೈಗೆ ದೊರೆತ ಸತ್ಯದ ಚೂರುಗಳನ್ನು ಮತ್ತೆ ಮತ್ತೆ ಪರೀಕ್ಷಿಸಿ ನೋಡಬೇಕು ಮತ್ತು ಹೆಚ್ಚಿನ ಪ್ರಮಾಣದಲ್ಲಿ ಸತ್ಯ ದೊರೆಯಬೇಕೆಂಬ ಉದ್ದೇಶದಿಂದ ಈ ಪ್ರಕರಣದಲ್ಲಿ ಈ ಅಭ್ಯಾಸದ ಬಗ್ಗೆ ಕೆಲವೊಂದು ವಿಚಾರಗಳನ್ನು ಮಂಡಿಸಲಾಗಿದೆ.

ಅತಿಪರಿಚಯದಿಂದ ಅನೇಕ ವಸ್ತುಗಳ ಅರ್ಥ ಸ್ವಾರಸ್ಯ ಕಡಿಮೆಯಾಗುತ್ತದೆಂಬ ಮಾತು ಸುಳ್ಳಲ್ಲ. ಇದಕ್ಕೆ ತೀರ ಹತ್ತಿರದ ಉದಾಹರಣೆಯೆಂದರೆ ನಮ್ಮ ಊರ ಹೆಸರು. ನಾವು ವಾಸಿಸುತ್ತಿರುವ ಊರಿಗೆ ಆ ವಿಶಿಷ್ಟವಾದ ಹೆಸರು ಹೇಗೆ ಬಂದಿತೆಂಬುದನ್ನು ನಿರ್ಣಯಾತ್ಮಕವಾಗಿ ಹೇಳುವದು ಸಾಧ್ಯವಾಗುವದಿಲ್ಲ. ಕಾರಣವೆಂದರೆ ತಲೆತಲಾಂತರದಿಂದ ನಡೆದು ಬಂದ ನಮ್ಮ ಉದಾಸೀನತೆಯೆಂದೇ ಹೇಳಬಹುದು. ಸ್ಥಳನಾಮದ ನಿಮಿತ್ತವಾಗಿ ಸಾಕಷ್ಟು ಪ್ರಮಾಣದಲ್ಲಿ ಹಳೆಯ ಇತಿಹಾಸ ದೊರೆಯುತ್ತದೆಂಬ ಅರಿವು ಬಹಳ ಜನಕ್ಕೆ ಇಲ್ಲ. ನಮ್ಮ ದೇಶದ ವಿದ್ಯಾವಂತರ ಲಕ್ಷ್ಯ ಇನ್ನೂ ಈ ಕಡೆಗೆ ಹೋಗಿಲ್ಲವೆಂಬ ಸಂಗತಿ ಇದರಿಂದ ಸಿದ್ಧವಾಗುತ್ತದೆ. ಒಂದೊಂದು ಸ್ಥಳನಾಮವನ್ನು ತೆಗೆದುಕೊಂಡು ಆ ಹೆಸರು ಹೇಗೆ ರೂಢವಾಗಿರಬೇಕೆಂದು ಸಂಶೋಧನೆ ನಡೆಸುವದೊಂದು ಪ್ರಕಾರದ ಅಭ್ಯಾಸ. ಆದರೆ, ತೌಲನಿಕ ಅಭ್ಯಾಸ ಇದಕ್ಕಿಂತ ಸ್ವಲ್ಪ ಭಿನ್ನವಾಗಿದೆ. ಒಂದು ವಿಶಿಷ್ಟ ಪ್ರದೇಶದಲ್ಲಿಯ ಸ್ಥಳನಾಮಗಳನ್ನು ಕಲೆಹಾಕಿ ಒಂದು ಪಟ್ಟಿಯನ್ನು ಸಿದ್ಧಗೊಳಿಸಬೇಕು. ಆ ಹೆಸರುಗಳ ಹಳೆ- ಹೊಸ ರೂಪಾಂತರಗಳನ್ನು ಅರಿಯಬೇಕು. ಹೀಗೆ, ಹೆಸರುಗಳನ್ನು ಸಂಗ್ರಹ ಮಾಡುತ್ತ ಹೋದಂತೆ ತಾನಾಗಿಯೇ ಅವುಗಳ ಗುಂಪು ನಿರ್ಮಾಣವಾಗುತ್ತದೆ. ಉದಾಹರಣೆಗೆ ಸ್ಥಳನಾಮಗಳ ಪೂರ್ವಭಾಗದಿಂದ ಇಪ್ಪತ್ತು ಇಪ್ಪತ್ತೈದು ಗುಂಪುಗಳು ಆಗಬಹುದು. ಪೌರಾಣಿಕ ಪ್ರಸಂಗಗಳು, ದೇವಾನುದೇವತೆಗಳು, ಐತಿಹಾಸಿಕ ಸಂಗತಿಗಳು, ವ್ಯಕ್ತಿಗಳು, ಗ್ರಹ ನಕ್ಷತ್ರಗಳು, ವಾರಗಳು, ಸಂಖ್ಯೆಗಳು, ದಿಕ್ಕುಗಳು, ವೃಕ್ಷವನಸ್ಪತಿಗಳು, ಕ್ರಿಮಿಕೀಟಗಳು, ದನಕರುಗಳು, ಪಶುಪಕ್ಷಿಗಳು, ತಗ್ಗು ದಿನ್ನೆ ಮೊದಲಾದ ಭೌಗೋಲಿಕ ಪರಿಸ್ಥಿತಿಗಳು, ಜಾತಿಜನಾಂಗ ಮತ್ತು ವ್ಯವಹಾರ ಉದ್ಯೋಗಗಳು-ಇವುಗಳ ಮೇಲಿಂದ ಸ್ಥಳನಾಮಗಳಲ್ಲಿ ಗುಂಪು ಕಾಣಿಸಿಕೊಳ್ಳುತ್ತವೆ.

ಈ ಒಂದೊಂದು ಗುಂಪಿಗೆ ಸೇರುವ ಸ್ಥಳನಾಮಗಳಲ್ಲಿ ಸೂಕ್ಷ್ಮವಾದ ಹೊಸ ಮಾಹಿತಿ ದೊರೆಯುವ ಸಾಧ್ಯತೆ ಇದೆ. ಒಂದೇ ಸ್ಥಳನಾಮದ ಪ್ರತ್ಯೇಕ ಅಭ್ಯಾಸದಿಂದ ಏನೂ ಅರ್ಥಬೋಧವಾಗಲಿಕ್ಕಿಲ್ಲ. ಆದರೆ, ಗುಂಪಿನ ಸಂದರ್ಭದಲ್ಲಿ ಆ ಹೆಸರಿನ ಅರ್ಥ ತಟ್ಟನೆ ಹೊಳೆಯಬಹುದಾಗಿದೆ. ಶಬ್ದಗಳ ಹಳೆಯ ರೂಪಗಳೂ ಕಾಣಸಿಗಬಹುದು. ಭಿನ್ನ ಪ್ರಕಾರದ ಗಿಡಗಂಟಿಗಳ ಬಗ್ಗೆ ಹೊಸ ಮಾಹಿತಿ ದೊರೆಯಬಹುದಾಗಿದೆ. ಒಂದು ಕಾಲಕ್ಕೆ ಆ ಭಾಗದಲ್ಲಿ ಯಾವ ದೇವತೆ ಲೋಕಪ್ರಿಯವಾಗಿದ್ದಿರಬಹುದೆಂದು ತಿಳಿಯುತ್ತದೆ. ಹಳೆಯ ಕಾಲದ ಪ್ರಭಾವೀ ವ್ಯಕ್ತಿಗಳು, ಋಷಿಗಳು, ಮುನಿಗಳು, ಸಂತಮಹಂತರು, ಸಿದ್ಧ ಸತ್ಪುರುಷರು ಅಥವಾ ರಾಜಕಾರಣಿಗಳು ಇವರ ಅಜರಾಮರ ಸ್ಮಾರಕಗಳಾದ ಈ ಸ್ಥಳನಾಮಗಳು ಕಾಲಪ್ರವಾಹವನ್ನು ಲೆಕ್ಕಿಸದೆ ತಲೆಯೆತ್ತಿ ನಿಂತಿರುವದು ಕಾಣುತ್ತದೆ. ಕೆಲವೊಂದು ಹೆಸರುಗಳ ಸಹಾಯದಿಂದ ಆ ಊರಿನ ಸುತ್ತಮುತ್ತ ಇರಬಹುದಾದ ಖನಿಜ ಸಂಪತ್ತಿನ ಅರಿವು ಮೂಡುತ್ತದೆ. ಇಂಥದೇ ಸೂಚನೆಯ ಲಾಭ ಪಡೆದು ಮೈಸೂರಿನ ಭದ್ರಾವತಿಯಲ್ಲಿ ಕಬ್ಬಿಣದ ಕಾರಖಾನೆಯನ್ನು ಆರಂಭಿಸಲಾಯಿತು. ಈ ಪ್ರಕರಣದಲ್ಲಿ ಸ್ಥಳನಾಮಗಳ ಪೂರ್ವಭಾಗ ಪ್ರಸುತವಿಲ್ಲ.

ಯಾವದೇ ಊರಿನ ಹೆಸರಿರಲಿ ಅದರಲ್ಲಿ ಎರಡು ಶಬ್ದಗಳು ಕೂಡಿರುತ್ತವೆ. ಆದರೆ, ಕೆಲವು ಕಡೆಗೆ ಪೂರ್ವಭಾಗದಷ್ಟು ಉತ್ತರ ಭಾಗ ಸ್ಪಷ್ಟವಾಗಿರುವದಿಲ್ಲ. ಆಡುಮಾತಿನಲ್ಲಿ ಅವು ಸಂಕ್ಷಿಪ್ತರೂಪವನ್ನು ಪಡೆಯುತ್ತವೆ. ನಾಗ+ಪೂರ, ಸಿಂದ+ಖೇಡ, ಕಂದ+ಊರ ಇಂಥ ಹೆಸರುಗಳಲ್ಲಿಯ ಸ್ಪಷ್ಟತೆ ಜುನ್ನರ, ಖೋಪವಲಿ ಇಂಥ ಹೆಸರುಗಳಲ್ಲಿ ಇಲ್ಲ. ಅಂಥ ಹೊತ್ತಿನಲ್ಲಿ ಜುನೆ+ನಗರ, ಖೋಪ+ಪಲ್ಲಿ-ಇಂಥ ಸ್ಪಷ್ಟೀಕರಣ ಆವಶ್ಯಕವಾಗುತ್ತದೆ. ನಾಶಿಕ, ನಗರ, ಪಾಟಣ ಮುಂತಾದ ಊರ ಹೆಸರುಗಳಲ್ಲಿ ಉತ್ತರಭಾಗ ರೂಢವಾಗಿರುವದಿಲ್ಲ. ಆದರು, ಅಂಥ ಹೆಸರುಗಳ ಮುಂದೆ ಶಹರ, ಗಾಂವ, ಖೇಡೆ ಎಂಬಂಥ ಗ್ರಾಮವಾಚಕ ಪದಗಳನ್ನು ಜೋಡಿಸಲಾಗುತ್ತದೆ. ಹೆಸರುಗಳ ಪೂರ್ವಭಾಗ ವಿವರಣಾತ್ಮಕವಾಗಿದ್ದು ಉತ್ತರಭಾಗ ಮಾತ್ರ ಸ್ಥಾನ, ತೀರ ಅಥವಾ ಪ್ರದೇಶದ ವಾಚಕವಾಗಿರುತ್ತದೆ. ಮಂಗಳವಾಡ, ಗಣೇಶವಾಡಿ, ಉದಯಗಿರಿ, ಸಿಂಹಗಡ, ವಿಂಚೂರ, ಚಾಳಿಸಗಾಂವ, ನಾಗಪಾಡಾ, ಘೋಡನದೀ ಇತ್ಯಾದಿ ಹೆಸರುಗಳಲ್ಲಿಯ ಉತ್ತರ ಭಾಗದ ಗಡ, ಗಿರಿ, ನದಿ, ಖೋರೇ, ಘಳ ಮೊದಲಾದ ವಿಶಿಷ್ಟತೆಗಳನ್ನು ಬಿಟ್ಟರೆ ಉಳಿದ ಕಡೆಗಳಲ್ಲಿ ಪೂರ, ಗಾಂವ, ವಾಡ, ವಾಡೀ, ಹಾಟ ಮೊದಲಾದ ಸ್ಥಾನ ಅಥವಾ ಪ್ರದೇಶದ ನಿರ್ದೇಶಕಗಳೇ ಇರುತ್ತವೆ. ಹೆಸರಿನ ಉತ್ತರಭಾಗದ ಮೇಲಿಂದ ವಸತಿ-ಸ್ಥಾನದ ವಿಶಿಷ್ಟತೆಯನ್ನು ಅರಿಯಬಹುದಾಗಿದೆ. ತಳೇ, ನದೀ, ಖೋರೆ, ಗಡ ಇಂಥ ಶಬ್ದಗಳು ಆ ಊರಿನ ಭೌಗೋಲಿಕ ಪರಿಸ್ಥಿತಿಯ ಅರಿವನ್ನು ತಂದುಕೊಡುತ್ತವೆ. ಖೇಡೇ, ಖೋಪ, ನಗರ, ವಾಡೀ, ಪೂರದಂಥ ಶಬ್ದಗಳಿಂದ ಆ ಊರು ಸಣ್ಣದೋ ದೊಡ್ಡದೋ ಎಂಬುದರ ಕಲ್ಪನೆ ಬರಬಹುದಾಗಿದೆ. ಇದಲ್ಲದೆ, ಒಂದು ವಸತಿಸ್ಥಾನದ ಆರಂಭ ಹೇಗೆ ಆಯಿತು ಮತ್ತು ಅದರ ಬೆಳವಣಿಗೆ ಹೇಗೆ ಆಯಿತೆಂಬುದರ ಬಗ್ಗೆ, ಪಾಡಾ, ಪಾಡಿ, ವಾಡಾ, ವಾಡಿ..... ಹಾಟ ಎಂಬಂಥ ಗ್ರಾಮವಾಚಕ ಶಬ್ದಗಳಿಂದ ಸಾಕಷ್ಟು ತಿಳಿದು ಬರುತ್ತದೆ. ಪಾಡಾ, ವಾಡಾ, ಹಾಟ ಈ ವರ್ಗದ ಗ್ರಾಮನಾಮಗಳ ಅಭ್ಯಾಸ ಇನ್ನೂ ಆಗಬೇಕಾಗಿದೆ. ಅದರ ಮೊಟ್ಟಮೊದಲನೆಯ ಪ್ರಾರಂಭವೇ ಇಲ್ಲಿದೆ. ಈ ಅಭ್ಯಾಸದಲ್ಲಿ ಏನಾದರೂ ತಥ್ಯಾಂಶ ಹೊರಟರೆ ನಮ್ಮ ಪ್ರಾಗೈತಿಹಾಸಿಕ ಮಹತ್ವದ ಅನೇಕ ರಹಸ್ಯಗಳ ಮೇಲೆ ಬೆಳಕು ಬೀಳುವ ಶಕ್ಯತೆ ಇದೆ.

'ಪಟ್ಟಿ, ಪಾಡಿ, ಪಾಡಾ.... ವಾಡಿ, ವಾಡಾ... ಹಟ್ಟಿ, ಹಾಟ, ಹಾಡಿ' ಇವು ಈ ವರ್ಗದ ಮುಖ್ಯ ಸಂಕೇತಗಳಾಗಿವೆ. ಇವುಗಳ ಸಾಮಾನ್ಯ ಕೋಷ್ಟಕವನ್ನು ಮುಂದೆ ಕೊಡಲಾಗಿದೆ. ಮೊದಲು ಈ ಶಬ್ದಗಳು ಸ್ವತಂತ್ರವಾಗಿದೆಯೋ ಅಥವಾ ಒಂದು ಮೂಲ ಶಬ್ದದ ವಿವಿಧ ರೂಪಗಳೋ ಎಂಬುದನ್ನು ಸ್ಪಷ್ಟಗೊಳಿಸಿ ನೋಡಿಕೊಳ್ಳುವ ಅಗತ್ಯವಿದೆ. 'ಪಾಡಗಾಂವ' ಇಂಥ ಕೆಲ ಅಪವಾದಗಳನ್ನು ಬಿಟ್ಟರೆ 'ಪಟ್ಟಿ, ಪಾಡಿ, ಪಾಡಾ..... ವಾಡಿ, ವಾಡಾ...... ಹಟ್ಟಿ ಹಾಟ' ಈ ಶಬ್ದಗಳು ಗ್ರಾಮನಾಮದ ಕೊನೆಯಲ್ಲಿ ಬರುತ್ತವೆ. ಅಲ್ಲೆಲ್ಲ ಸ್ಥಳ, ಪ್ರದೇಶ ಇಂಥ ಮುಖ್ಯಾರ್ಥವೇ ಇರುತ್ತದೆ. ಉದಾಹರಣೆಗೆ 'ಕಡಪಟ್ಟಿ' (ಜಮಖಂಡಿಯ ಹತ್ತಿರದ ಹಳ್ಳಿ),

ಕೊಂಕಣ ಪಟ್ಟಿ (ಪ್ರದೇಶ) ಗೋಪಾಡಿ (ಮಂಗಳೂರು ಕಡೆಯ ಒಂದು ಊರು), ತಾಳಿಪಾಡಿ, ನಾಗಪಾಡಾ, ಕುರುಡುವಾಡಿ, ಮರ್ಾಟವಾಡಾ, ಹಾಟವಟಿ, ಶಿರಹಟ್ಟಿ, ಹಾಡಿ (ಗ್ರಾಮ) ಮೊದಲಾದ ಉದಾಹರಣೆಗಳಲ್ಲಿ ಪಟ್ಟಿ, ಪಾಡಿ, ಪಾಡಾ' ಇವುಗಳಿಗೆ ಒಂದು ಅರ್ಥ, 'ವಾಡಿ ವಾಡ'ಗಳಿಗೆ ಇನ್ನೊಂದು ಅರ್ಥ ಮತ್ತು 'ಹಟ್ಟಿ, ಹಾಟ' ಇವುಗಳಿಗೆ ಮೂರನೆಯ ಅರ್ಥ ಹೀಗಾಗುವದು ಶಕ್ಯವಿಲ್ಲ. ಎಲ್ಲೆಡೆಗೂ ಸ್ಥಲವಾಚಕ ಅರ್ಥವೇ ತುಂಬಿಕೊಂಡಿದೆ. ಆದ್ದರಿಂದ, ಈ ಎಲ್ಲ ಶಬ್ದಗಳು ಸಾಮಾನ್ಯವಾಗಿ ಸಮಾನಾರ್ಥವುಳ್ಳವೆಂದು ಹೇಳಬೇಕಾಗುತ್ತದೆ. 'ಪಟ್ಟಿ ಪಾಡಿ, ಪಾಡಾ........ ವಾಡಿ, ವಾಡಾ...ಹಟ್ಟಿ, ಹಾಟ' ಇವುಗಳಲ್ಲಿ ಅರ್ಥ ಸಾದೃಶ್ಯವಿರುವಂತೆ ರೂಪಸಾದೃಶ್ಯವೂ ಇದೆ. 'ಪಾಡಿ;' ಮತ್ತು 'ಪಾಡಾ' ಇವುಗಳು ಭಿನ್ನವೆಂದು ತಿಳಿಯುವ ಅಗತ್ಯವಿಲ್ಲ. 'ವಾಡಿ, ವಾಡಾ', ವಾಡಾ ಮತ್ತು ವಡ ಇವು ಕೂಡ ಭಿನ್ನ ಶಬ್ದಗಳಲ್ಲ. ನಿತ್ಯ ವ್ಯವಹಾರದಲ್ಲಿಯ ಉಚ್ಚಾರಣೆಯಲ್ಲಿ ಹೆಚ್ಚು ಕಡಮೆಯಾಗಿ ಕೊನೆಯಲ್ಲಿ ಇಕಾರ ಬದಲಾಗುತ್ತ ವಾಡಿಯಿಂದ ವಾಡಾ, ವಡ ಹೀಗೆ ರೂಪಾಂತರವಾಗುತ್ತ ಹೋದಂತೆ ಕಾಣುತ್ತದೆ. ಕರ್ಣಾಟಕ, ತೆಲಂಗಣ, ತಮಿಳುನಾಡುಗಳಲ್ಲಿ ಪಟ್ಟಿ, ಪಾಡಿ ಮತ್ತು ಪಾಡು ಈ ಶಬ್ದಗಳು ಯಾವ ಪ್ರಮಾಣದಲ್ಲಿ ದೊರೆಯುತ್ತವೋ ಪ್ರಮಾಣ ಉತ್ತರದ ಕಡೆಗೆ ಸಾಗಿದಂತೆ ಕಡಿಮೆಯಾಗತೊಡಗುತ್ತದೆ. ಸಂಸ್ಕೃತದಿಂದ ಹುಟ್ಟಿರುವ ಭಾಷೆಗಳಲ್ಲಿ ಶಬ್ದದ ಕೊನೆಯಲ್ಲಿ ಉಕಾರ, ಇಕಾರಕ್ಕಿಂತ ಅಕಾರದತ್ತ ಒಲವು ಹೆಚ್ಚಾಗಿರುತ್ತದೆ. 'ಹಾಲು' ಶಬ್ದ 'ಹಾಲಾ' ಇಲ್ಲವೆ 'ಹಾಲ' ಎಂಬ ಸ್ವರೂಪದಲ್ಲಿ ಸಿಗಬಹುದು. 'ಊರು' 'ಊರ' ಇಲ್ಲವೆ 'ಊರಾ' ಎಂದಾಗುತ್ತದೆ. (ಉದಾ : ಕೆಂದೂರ, ಬಂಕೂರಾ) ಇದೇ ರೀತಿಯಲ್ಲಿ ಪಾಡಿ ಮತ್ತು ಪಾಡಾ ಇವು 'ಪಾಡು' ಶಬ್ದದ ಭಿನ್ನರೂಪಗಳೆಂದು ತಿಳಿಯಬೇಕಾಗುತ್ತದೆ. ಆದರಂತೆ ವಾಡಾ ಮತ್ತು ವಡ ಇವು 'ವಾಡಿ' ಶಬ್ದದ ಭಿನ್ನರೂಪಗಳಾಗಿವೆ. 'ಪಟ್ಟಿ' ಮತ್ತು 'ಪಾಡಿ'ಗಳು ಇವು 'ಪಡು' ಧಾತುವಿನ ಸಾಧಿತ ರೂಪಗಳಾಗಿವೆ. ಇದು ದ್ರಾವಿಡ ಭಾಷಾಕೋವಿದರ ಅಭಿಪ್ರಾಯವಿದೆ.*

ಇನ್ನು ಉಳಿದಿರುವ ಮುಖ್ಯ ಪ್ರಶ್ನೆಯೆಂದರೆ ಇದು. 'ವಾಡಿ' ಎಂಬ ಶಬ್ದ ಸ್ವತಂತ್ರವಾಗಿದೆಯೇ ಅಥವಾ ಇದು 'ಪಾಡಿ' ಶಬ್ದದಿಂದ ನಿಷ್ಪನ್ನವಾಗಿದೆಯೆ? ಸಂಸ್ಕೃತ ಮತ್ತು ಪ್ರಾಕೃತ ಪರಂಪರೆಯ ಮೇರೆಗೆ 'ವಾಟಿಕಾ' ಶಬ್ದದಿಂದ 'ವಾಟಿ, ವಾಡಿ' ಗಳು ನಿಷ್ಪನ್ನವಾಗಿವೆ. 'ವಾಟ' ಶಬ್ದದಿಂದ 'ವಾಡ' ಹುಟ್ಟಿ ಬಂದಿದೆ. ಕಾರಣವಿಲ್ಲದಿದ್ದರೂ 'ವಾಟಿ' ಮತ್ತು 'ವಾಟ' ಈ ಶಬ್ದಗಳು ಭಿನ್ನಭಿನ್ನವೆಂದು ನಂಬಲಾಗಿದೆ. ಈ ಶಬ್ದಗಳ ವ್ಯುತ್ಪತ್ತಿಯ ಬಗ್ಗೆ ಸಂಸ್ಕೃತ ಪಂಡಿತರಲ್ಲಿಯೇ ಮತೈಕ್ಯವಿಲ್ಲ. ವೃತ್ತ-ವಟ್ಟ-ವಾಟ-ವಾಡ ಹೀಗೆ ಕೆಲವರು ವ್ಯುತ್ಪತ್ತಿಯನ್ನು ಸೂಚಿಸಿದ್ದಾರೆ. ಇನ್ನು ಕೆಲವರು ವರ್ತಿ-ವಟ್ಟಿ-ವಾಟಿ-ವಾಡಿ ಎಂದು ಹೇಳುತ್ತಾರೆ. ಇನ್ನೂ ಕೆಲವರು ವಟವೃಕ್ಷದ ಜೊತೆಗೆ ವಾಟಿ-ವಾಡಗಳ ಸಂಬಂಧವನ್ನು ಜೋಡಿಸುತ್ತಾರೆ. ವಾಡದ ಸಲುವಾಗಿ ವೃತ್ತದ ಆವಶ್ಯಕತೆಯ ಅರಿವಾಯಿತು, ವಾಡಿಯನ್ನು ನೋಡಿದೊಡನೆ 'ವರ್ತಿ'ಯ ಕಡೆಗೆ ಎಳೆತ ಪ್ರಾರಂಭವಾಯಿತು, ಇದೆಲ್ಲ ಸ್ಪಷ್ಟವಾಗಿ ಕಾಣುತ್ತದೆ. ಮೂಲದಲ್ಲಿ 'ವಾಡ' ಮತ್ತು 'ವಾಡಿ'ಗಳು ಭಿನ್ನವೆಂದು ತಿಳಿದಿರುವದೆ ಈ ಎಲ್ಲ ಗೊಂದಲಕ್ಕೆ ಕಾರಣವಾಗಿದೆ. 'ಪಾಡಿ'ಯಿಂದ 'ವಾಡಿ' ಶಬ್ದವು ನಿಷ್ಪನ್ನವಾಯಿತು ಎಂದು ತಿಳಿದರೆ ಮೇಲೆ ಹೇಳಿದ ಎಲ್ಲ ಗೊಂದಲ ದೂರವಾಗಿ ಪರಿಸ್ಥಿತಿ ತಿಳಿಯಾಗಬಹುದು. ಪಕಾರ ವಕಾರವಾಗಿ ಪಾಡಿಯಿಂದ ವಾಡಿ, ಪಾಡಾದಿಂದ ವಾಡಾ ಶಬ್ದಗಳು ಬಂದಿವೆ. ಇಂಥ ಹಲವಾರು ಹಳೆಯ ಪ್ರಯೋಗಗಳನ್ನು ನೋಡಿದ ಮೇಲೆ ಸಂಶಯಕ್ಕೆ ಆಸ್ಪದ ಉಳಿಯುವದಿಲ್ಲ. 'ಸಪ್ತಾರ್ಧಲಕ್ಷ ರಟ್ಟಪಾಡಿ' ಈ ಉಲ್ಲೇಖ ಹಳೆಯ ತಾಮ್ರಪಟಗಳಲ್ಲಿ ದೊರೆಯುತ್ತದೆ.[೨] ರಟ್ಟಪಾಡಿ ಎಂದರೆ ರಟ್ಟರ ದೇಶ. 'ಪಾಡಿ' ಶಬ್ದಕ್ಕೆ ದೇಶಪ್ರದೇಶ ಎಂಬರ್ಥವಿರುವದು ಸ್ಪಷ್ಟವಾಗಿದೆ. ರಟ್ಟಪಾಡಿಯಂತೆ ಗಂಗವಾಡಿ,

* ಶಂಬಾ ಅವರು 'ಭಾಷಾಶಾಸ್ತ್ರ'ದ ನೆಲೆಗಿಂತ 'ಸಾಂಸ್ಕೃತಿಕ ಭಾಷಾಶಾಸ್ತ್ರ'ದ ನೆಲೆಯಿಂದ ಪಟ್ಟಿ, ಪಾಡಿ, ವಾಡಿ, ವಾಟಿ, ವಾಟ ಈ ಬಗೆಯ ಸಾಂಸ್ಕೃತಿಕ ಸಂಕೇತವನ್ನುಳ್ಳ ಶಬ್ದಗಳ ಚರ್ಚೆಯನ್ನು ನಡೆಸಿದ್ದಾರೆ. ಈ ಬಗೆಯ ಅರ್ಥ ಪದ್ಧತಿಯ ಮೂಲವನ್ನು ತಿಳಿಯುವವರು ಎಡೆಗಳು ಹೇಳುವ 'ಕಂನಾಡಕತೆ' ಎಂಬ ಗ್ರಂಥದಲ್ಲಿ ಹರಡಿಕೊಂಡಿದೆ (ಸಂ).

ಸಿಂದವಾಡಿ, ನೊಳಂಬವಾಡಿ, ಕನ್ನವಾಡ ಮೊದಲಾದ ಪ್ರಯೋಗಗಳು ಶಿಲಾಲೇಖನಗಳಲ್ಲಿ, ತಾಮ್ರಪಟಗಳಲ್ಲಿ ಬೇಕಾದಷ್ಟಿವೆ. ಇವುಗಳಲ್ಲಿ ರಟ್ಟಪಾಡಿಯಂತೆಯೇ ಗಂಗಪಾಡಿ, ಸಿಂದಪಾಡಿ ಇಂಥ ಮೂಲರೂಪಗಳು ಇರಬೇಕು. ಸಂಧಿಯಾದರೆ ಪಾಡಿಯಿಂದ ವಾಡಿಯಾಗಿರುವ ಬಗ್ಗೆ ಸಂಶಯವಿಲ್ಲ. ಕರ್ಣಾಟಕದಲ್ಲಿಯ ತಾಮ್ರಪಟ ಮತ್ತು ಶಿಲಾಲೇಖಗಳಲ್ಲಿ ನೊಳಂಬವಾಡಿ, ಕನ್ನಡವಾಡಿಯಂಥ ಸಮಸ್ತಪದಗಳು ದೊರೆಯುತ್ತವೆ. ಆದರೆ, ತಮಿಳುನಾಡಿನ ತಾಮ್ರಪಟಗಳಲ್ಲಿ 'ವಾಡಿ'ಯ ಬದಲಾಗಿ ಪಾಡಿ ಶಬ್ದವನ್ನೇ ಉಪಯೋಗಿಸಲಾಗಿದೆ. ಕರ್ಣಾಟಕ ದಲ್ಲಿಯ ರಟ್ಟಪಾಡಿಯಂತೆ ಅಲ್ಲಿ ಗಂಗಪಾಡಿ, ನೊಳಂಬಪಾಡಿ, ತಡಿಗೆಪಾಡಿ ಮೊದಲಾದ ಉದಾಹರಣೆಗಳು ಫ್ಲೀಟರ ಕಣ್ಣಿಗೆ ಬಿದ್ದಿವೆ.[೩] ಈ ಆಧಾರಗಳಿಂದ ವಾಡಿಯ ಪೂರ್ವರೂಪ ಪಾಡಿ ಇರಬೇಕೆಂಬುದರ ಬಗ್ಗೆ ಸಂಶಯ ಉಳಿಯುವದಿಲ್ಲ.

ಹೇಮಚಂದ್ರನ ಪ್ರಾಕೃತ ವ್ಯಾಕರಣದಲ್ಲಿ ಈ ಮಾತಿಗೆ ಆಧಾರವೂ ಇದೆ. "ಪೋವಃ" (೮-೨-೨೩೧) ಈ ಸೂತ್ರದ ಮೇರೆಗೆ ಪಾಡಿಯೊಳಗಿನ ಪಕಾರ ವಕಾರವಾಗಬಹುದು. "ಸ್ವರಾತ್ ಪರಸ್ಯ ಅಸಂಯುಕ್ತಸ್ಯ ಅನಾದೇಃ ಪರಸ್ಯಪ್ರಾಯೋ ವೋ ಭವತಿ" ಎಂದು ಈ ಸೂತ್ರದ ವಿವರಣೆ ಇದೆ. ಇದರ ಮೇಲಿನ ನೊಳಂಬವಾಡಿ, ಗಂಗವಾಡಿ ಈ ಉದಾಹರಣೆಗಳಲ್ಲಿ ವಾಡಿಯ ಮೂಲರೂಪ ಪಾಡಿ ಇರಲೇಬೇಕೆಂದು ನಿಃಸ್ಸಂದಿಗ್ಧವಾಗಿ ಸಿದ್ಧವಾಗುತ್ತದೆ. ಪಾಡಿಯಿಂದ ವಾಡಿಯಾಗುವಂತೆ ಪಲ್ಲಿ (ಳ್ಳಿ)ಯಿಂದ ವಲ್ಲಿ (ಳ್ಳಿ) ಯಾದ ಉದಾಹರಣೆಗಳೂ ಇವೆ. ಉದಾಹರಣೆಗೆ ತಿಳವಳ್ಳಿ, ಕಾಸವಲಿ ಇತ್ಯಾದಿ.

ಪ್ರಾಕೃತ ವ್ಯಾಕರಣದಂತೆ ಕನ್ನಡ ವ್ಯಾಕರಣ ಕೂಡ ಈ ಒಲವನ್ನು ಸಮರ್ಥಿಸುತ್ತದೆ. ನಾಗವರ್ಮನ 'ಕರ್ಣಾಟಕ ಭಾಷಾಭೂಷಣ'ವೆಂಬ ಗ್ರಂಥದಲ್ಲಿ ಕನ್ನಡ ವ್ಯಾಕರಣಸೂತ್ರಗಳು ಸಂಸ್ಕೃತದಲ್ಲಿ ರಚಿತವಾಗಿವೆ. (ಇ. ಸ. ೧೧೪೫) ಅವನ 'ಕಾವ್ಯಾವಲೋಕನ'ವೆಂಬುದು ಇನ್ನೊಂದು ಗ್ರಂಥವಾಗಿದೆ. ಅದರಲ್ಲಿಯು 'ಶಬ್ದ ಸ್ಮೃತಿ' ವಿಭಾಗದಲ್ಲಿ ವ್ಯಾಕರಣದ ವಿಚಾರವಿದೆ. ಅಲ್ಲಿ ೩೧ ಮತ್ತು ೩೨ನೆಯ ಸೂತ್ರಗಳಲ್ಲಿ ಅನುಕ್ರಮವಾಗಿ 'ಪ' ದಿಂದ 'ಬ' ಮತ್ತು 'ಮ' ದಿಂದ 'ವ' ಎಲ್ಲೆಲ್ಲಿ ಆಗುತ್ತದೆಂದು ಹೇಳಲಾಗಿದೆ. 'ಶಬ್ದಮಣಿದರ್ಪಣ' ಕೇಶಿರಾಜನ ವ್ಯಾಕರಣ ಗ್ರಂಥವಾಗಿದೆ. (ಇ. ಸ. ೧೨೬೦). ಅವನು ತನ್ನ ಗ್ರಂಥದ ೬೭ನೆಯ ಸೂತ್ರದಲ್ಲಿ ಇದೇ ನಿಯಮವನ್ನು, ಹೇಳಿದ್ದಾನೆ. ಸಮಾಸಗಳಲ್ಲಿ 'ಪ' 'ಬ' ಮತ್ತು 'ಮ'ಗಳು ವಕಾರವಾಗುತ್ತವೆಯೆಂಬ ರೂಢಿ ಕನ್ನಡದಲ್ಲಿ ಬಹಳ ಪ್ರಾಚೀನ ಕಾಲದ್ದಾಗಿದೆ. ಪ್ರಾಕೃತದಲ್ಲಿಯೂ ಇದೇ ನಿಯಮವಿದ್ದಿರಬೇಕು. ಕನ್ನಡ ಮತ್ತು ಪ್ರಾಕೃತಗಳಲ್ಲಿಯ ಈ ಒಲವು ಲಕ್ಷ್ಯದಲ್ಲಿ ಬಾರದ್ದರಿಂದ ಮರಾಠಿಯಲ್ಲಿ ಎಷ್ಟೋ ಸಮಸ್ಯೆಗಳಿಗೆ ಪರಿಹಾರ ಇನ್ನೂ ದೊರೆತಿಲ್ಲ. 'ವಾಡಿ' ಮತ್ತು 'ವಾಡ'ಗಳ ವ್ಯುತ್ಪತ್ತಿ ಒಂದೇ ಅಲ್ಲ 'ವರ್ಹಾಡ' ಶಬ್ದದ ಸಮಸ್ಯೆಯ ಉತ್ತರ ದೊರೆಯದೆ ಅದರ ಬಗೆಗಿನ ತರ್ಕ ವಿತರ್ಕಗಳೆಲ್ಲ ಅಡ್ಡದಾರಿ ಎಳೆಯುತ್ತಿರುವದನ್ನು ಈಗಾಗಲೇ ನೋಡಲಾಗಿದೆ. ಒಟ್ಟಿನಲ್ಲಿ 'ಪಟ್ಟಿ', 'ಪಾಡಿ', 'ಪಾಡಾ', 'ವಾಡಿ ವಾಡಾ', 'ಹಟ್ಟಿ, ಹಾಟ, ಹಾಡಿ' ಇವುಗಳಲ್ಲಿ 'ಪಟ್ಟಿ ಪಾಡಿ' ಪಾಡಾ ಮತ್ತು ವಾಡಿ ಇವು ಸ್ವತಂತ್ರ ಶಬ್ದಗಳಲ್ಲ. 'ಪಟ್ಟಿ ಪಾಡಿ'ಗಳ ಭಿನ್ನರೂಪಗಳಾಗಿವೆಯೆಂಬುದು ಸಿದ್ಧವಾಗುತ್ತದೆ. ಈಗ 'ಹಟ್ಟಿ, ಹಾಟ' ಇವುಗಳ ಪ್ರಶ್ನೆಯೊಂದು ಉಳಿಯಿತು. 'ಹಟ್ಟಿ' ಮತ್ತು 'ಹಟ್ಟ' ಇವು ಭಿನ್ನಶಬ್ದಗಳೆಂದು ತಿಳಿಯುವ ಕಾರಣವಿಲ್ಲ. 'ವಾಡಿ, ವಾಡಾ, ವಾಡ'ಗಳಂತೆ ಉಚ್ಚಾರದಲ್ಲಿಯ ಅಸ್ಪಷ್ಟತೆಯ ಮೂಲಕ ಈ ರೀತಿಯ ಶಬ್ದಗಳು ಹುಟ್ಟಿಕೊಂಡಿವೆ. 'ಹಟ್ಟಿ' ಮತ್ತು 'ಹಟ್ಟ'ಗಳು ಸಂಸ್ಕೃತ ಭಾಷೆಯಿಂದ ಬಂದವುಗಳೆಂದು ಅನೇಕ ಪಂಡಿತರ ತಿಳುವಳಿಕೆಯಾಗಿದೆ. ಸಂಸ್ಕೃತದ 'ಹಟ್' (ಪ್ರಕಾಶಿಸು) ಎಂಬ ಮೂಲ ರೂಪದಿಂದ ಈ ಶಬ್ದಗಳ ವ್ಯುತ್ಪತ್ತಿಯನ್ನು ಹೇಳುತ್ತಾರೆ. ಆದರೆ, 'ಹಟ್ಟಿ' ಈ ಶಬ್ದ ಸಂಸ್ಕೃತವಲ್ಲವೆಂದು ತೋರುತ್ತದೆ. ಹೇಮಚಂದ್ರಾಚಾರ್ಯನ 'ದೇಶೀನಾಮಮಾಲೆ'ಯಲ್ಲಿ 'ಹಟ್ಟಿ ಗೃಹಭೇದೇ ಚ', 'ಗ್ರಾಮೇ ಊರುಃ' ಎಂದು ಹೇಳಲಾಗಿದೆ. 'ಊರು' (ಗ್ರಾಮ)ದಂತೆ 'ಹಟ್ಟಿ' ಕೂಡ ದೇಶೀ ಶಬ್ದವೇ ಹೊರತು ಸಂಸ್ಕೃತವಲ್ಲ. ಇದು ಹೇಮಚಂದ್ರನಂಥ ಸಂಸ್ಕೃತ ಮತ್ತು ಪ್ರಾಕೃತ ಉಭಯ ಭಾಷಾವಿಶಾರದನ ಅಭಿಪ್ರಾಯವಿದೆ.

ಹಟ್ಟಿ ಇದು ದೇಶೀಶಬ್ದವಾಗಿದ್ದರೆ ಅದರ ವ್ಯುತ್ಪತ್ತಿ ಸುಲಭವಾಗಿ ಸಿಗುವಂಥದಿದೆ. ಹಳೆಗನ್ನಡದಲ್ಲಿ ಹಕಾರವಿಲ್ಲ. ಕನ್ನಡದ ಮೇಲೆ ಸಂಸ್ಕೃತದ ಮೂಲಗಾಮಿಯಾದ ಪ್ರಭಾವದ ಒಂದು ಪರಿಣಾಮವೆಂದರೆ ಪಕಾರವಿದ್ದದ್ದು ಹಕಾರವಾದದ್ದು. ಅದರಿಂದಾಗಿ ಪಾಲು-ಹಾಲು, ಪುಲಿ-ಹುಲಿ, ಪಿಠ್ಠ-ಹಿಟ್ಟು, ಪರ್ವ-ಹಬ್ಬದಂಥ ಶಬ್ದಗಳು ಹೊಸದಾಗಿ ಕನ್ನಡದಲ್ಲಿ ಬಂದವು. ಇದೇ ನಿಯಮದ ಅನುಸಾರವಾಗಿ ಪಟ್ಟಿ-ಹಟ್ಟಿ, ಪಾಡಿ-ಹಾಡಿಯಂಥ ಶಬ್ದಗಳು ಸಿದ್ಧವಾದವು. ಹಳೆ-ಹೊಸಗನ್ನಡಗಳ ಎಲ್ಲ ಪಂಡಿತರ ಅಭಿಪ್ರಾಯವೂ ಇದೇ ಆಗಿದೆ. ಇದರ ಮೇಲಿಂದ (೧) ಪಟ್ಟಿ, ಪಾಡಿ, ಪಾಡಾ.... (೨) ವಾಡಿ, ವಾಡಾ.... (೩) ಹಟ್ಟಿ, ಹಾಟ, ಹಾಡಿ ಇವೆಲ್ಲ ಭಿನ್ನಭಿನ್ನ ಶಬ್ದಗಳಾಗಿರದೆ ಉಚ್ಚಾರ ಭೇದಗಳಿಂದ ಒಂದೇ ಶಬ್ದದ ಭಿನ್ನಭಿನ್ನ ಸ್ವರೂಪಗಳಾಗಿವೆಯೆಂದು ಹೇಳಬೇಕಾಗುತ್ತದೆ. 'ಪಟ್ಟಿ-ಪಾಡಿ'ಗಳ ವ್ಯುತ್ಪತ್ತಿಯನ್ನು ನಿಶ್ಚಿತಗೊಳಿಸದ ಹೊರತು ಈ ವಿಚಾರಕ್ಕೆ ಸತ್ವಶಕ್ತಿಗಳು ಬರುವದಿಲ್ಲ. ಇದಕ್ಕಾಗಿ ಈ ಎಲ್ಲ ಶುಷ್ಕ ಚರ್ಚೆಗೆ ತೊಡಗದೆ ವಿಧಿ ಇರಲಿಲ್ಲ. 'ಪಟ್ಟಿ-ಪಾಡಿ' ವರ್ಗದ ಪಾಡಿ, ವಾಡಿ, ಹಟ್ಟಿ ಮೊದಲಾದ ಶಬ್ದಗಳು ಹಳೆಗನ್ನಡ ಮತ್ತು ತಮಿಳು ವರ್ಗದ ಎಲ್ಲ ಭಾಷೆಗಳಲ್ಲಿ ದೊರೆಯುವ 'ಪಡು ಧಾತುವಿನಿಂದ ಹುಟ್ಟಿದವುಗಳೆಂದು ಸಿದ್ಧವಾದರೆ ಈ ಗೊಂದಲದ ಪರಿಹಾರವಾಗಬಹುದು.

ಪಂಡಿತರಿಗೆ ಮರಾಠಿಭಾಷೆಯಲ್ಲಿ 'ಪಾಡಿ' ಶಬ್ದದ ಆಳ ತಿಳಿದಂತೆ ಕಾಣುವದಿಲ್ಲ. ಮಹಾರಾಷ್ಟ್ರ ಶಬ್ದಕೋಶದಲ್ಲಿ ಈ ಶಬ್ದದ ಸಂಬಂಧವನ್ನು 'ಪಹಾಡಾ' ಶಬ್ದದೊಂದಿಗೆ ಜೋಡಿಸಲಾಗಿದೆ! ಇತ್ತೀಚಿನ ಪ್ರೊ. ಕುಲಕರ್ಣಿಯವರ ವ್ಯುತ್ಪತ್ತಿಕೋಶದಲ್ಲಿ ಕೂಡ ಇದೇ ರೀತಿ ಕಾಣುತ್ತದೆ. ಮಹಾನುಭಾವ ಭಾಸ್ಕರಕವಿ ಮತ್ತು ಜ್ಞಾನೇಶ್ವರರಿಬ್ಬರೂ ಈ 'ಪಾಡಿ' ಶಬ್ದವನ್ನು ಉಪಯೋಗಿಸಿದ್ದಾರೆ. ಮಹಾನುಭಾವ ಭಾಸ್ಕರ ಕವಿ 'ಕೈವಲ್ಯಾಚೀ ಪಾಡೀ' ಎಂದು ಉಪಯೋಗಿಸಿದ್ದಾನೆ; 'ಸದ್ವಾಸನೇಚಿಯಾ ಪಾಡಿ ಆಲಾ' ಎಂದು ಜ್ಞಾನೇಶ್ವರರು ಹೇಳುತ್ತಾರೆ. (೭.೧೨೬). ಮೊದಲ ಉದಾಹರಣೆಯಲ್ಲಿ ಕೈವಲ್ಯವೆಂದರೆ ಪರ್ವತ (ಕೈಲಾಸ) ಎಂದು ಭ್ರಮೆ ಹುಟ್ಟಿರಬೇಕು. ಆದರೆ, ಎರಡನೆ ಉದಾಹರಣೆಯಲ್ಲಿ ಅಂಥ ಸಂಶಯಕ್ಕೆ ಯಾವ ಆಸ್ಪದವೂ ಇಲ್ಲ. ಅಲ್ಲದೆ, 'ರಟ್ಟಿಪಾಡಿ' ಮೊದಲಾದ ಶಬ್ದಗಳಲ್ಲಿ ಪಾಡಿಯ ಅರ್ಥ ಪ್ರದೇಶ ಮತ್ತು ಸ್ಥಾನವಾಗುತ್ತದೆಂದು ಅನೇಕ ಉದಾಹರಣೆಗಳಲ್ಲಿ ನೋಡಲಾಗಿದೆ. ಆದ್ದರಿಂದ, 'ಪಾಡಿ' ಶಬ್ದದ ಸಂಬಂಧವನ್ನು 'ಪಹಾಡ'ಕ್ಕೆ ಒಯ್ದು ಮುಟ್ಟಿಸುವ ಆವಶ್ಯಕತೆ ಕಾಣುವದಿಲ್ಲ. ಖೇಡಿ-ಪಾಡಿ ಎಂಬ ಜೋಡುನುಡಿಯಲ್ಲಿ ಪಾಡಿಯ ಅರ್ಥವನ್ನು ಹೇಳುವ ಖೇಡ ಶಬ್ದವಿರುವಾಗ ಅದರ ಅರ್ಥವನ್ನು ತಿಳಿಯಲು ಈ ಪರ್ವತ ಪ್ರದಕ್ಷಿಣೆ ಬೇಕಾಗಿಲ್ಲ. ಇದರಂತೆಯೇ 'ಪಾಡಿ' ಶಬ್ದದ ಸಿದ್ಧಿಕ್ರಮದ ಬಗ್ಗೆಯೂ ತಪ್ಪು ತಿಳುವಳಿಕೆ ಇದೆ. ಸಂಸ್ಕೃತದಲ್ಲಿಯ 'ಪದ್ರ' (ಕ) ಶಬ್ದದಿಂದ 'ಪಾಡಾ' ಶಬ್ದ ಹುಟ್ಟಿರಬೇಕೆಂಬ ನಂಬಿಕೆಯಿದೆ. ಆದರೆ, ಮೊದಲು 'ಪದ್ರ' ಶಬ್ದದ ಬಡುವೇ ಸಂಸ್ಕೃತದಲ್ಲಿ ಸ್ಥಿರವಾಗಿಲ್ಲ. 'ಪದ್ರ=a village' ಎಂದು ಅರ್ಥ ಹೇಳುತ್ತ ಮೋನಿಯರ್ ವಿಲಿಯಮ್ಸ್ 'L' ಎಂಬ ಗುರುತು ಮಾಡಿದ್ದಾನೆ. 'L' ಗುರುತಿನ ಅರ್ಥವನ್ನು ಅವನು ಹೀಗೆ ಕೊಟ್ಟಿದ್ದಾನೆ. "L-Lexicographers, (i.e.) a word or meaning which although given in native lexicons, has not yet been met with in any published texts." ಮ್ಯಾಕ್ಸಮುಲ್ಲರನಿಂದ ಸಂಪಾದಿತವಾದ ಬೇನ್‌ಫೆಯ ಕೋಶದಲ್ಲಿ ಈ ಶಬ್ದವಿಲ್ಲ. ಸಂಸ್ಕೃತದಲ್ಲಿ ಆಧಾರಭೂತವೆಂದು ಎಣಿಸಲಾದ 'ಪದ್ರ' ಶಬ್ದಕ್ಕೇ ಸ್ಥಾನವಿಲ್ಲವೆಂದ ಮೇಲೆ 'ಪಾಡಾ'ದ ಪಾಡು ಏನು? ಯಾವ ಶಬ್ದಕ್ಕೆ ಸಂಸ್ಕೃತ ಸಾಹಿತ್ಯದಲ್ಲಿ ಸ್ಥಾನವಿಲ್ಲವೋ ಅದಕ್ಕೆ ಸಂಸ್ಕೃತವೆನ್ನುವದಕ್ಕಿಂತ ದೇಶೀ ಶಬ್ದವೆಂದರೆ ಹೆಚ್ಚು ಸಮಂಜಸವಾಗಬಹುದು. ಇದರಿಂದಾಗಿ, 'ಪಾಡಾ' ಶಬ್ದ ಸಂಸ್ಕೃತ ಜನ್ಯವಲ್ಲವೆಂದಾದರೆ ಅದು ಪಟ್ಟಿ- ಪಾಡಿ, ವಾಡಿ-ಹಟ್ಟಿಗಳ ವರ್ಗಕ್ಕೆ ಸೇರಿದ ಒಂದು ಶಬ್ದವೆಂದು ಎನಿಸುತ್ತದೆ.

'ಪಟ್ಟಿ-ಪಾಡಿ'ಗಳು 'ಪಡು' ಎಂಬ ಮೂಲರೂಪದಿಂದ ಉತ್ಪನ್ನವಾಗಿವೆ. 'ಪಡು' ರೂಪಕ್ಕೆ ಕಿಟ್ಟೆಲ್‌ನ ಅರ್ಥ ಹೀಗಿದೆ :- to lie down, to repose. ತಮಿಳುಕೋಶದಲ್ಲಿ to spread out as bedding, to lay horizontally, to lie down, to sleep ಎಂದು ಅನೇಕ ಅರ್ಥಗಳನ್ನು ಕೊಡಲಾಗಿದೆ. ತೆಲುಗು ಮತ್ತು

ಮಲಯಾಳಂಗಳಲ್ಲಿಯೂ ಇದೇ ಅರ್ಥವಿದೆ. ಕಿಟ್ಟೆಲ್ 'ಪಡು' ನಾಮಪದಕ್ಕೆ a place (hollow or hole) of refuge (for wild animals) between stones or rocks ಎಂದು ಅರ್ಥ ಕೊಟ್ಟಿದ್ದಾನೆ. 'ಪಡು' ಧಾತುವಿನ 'ಮಲಗು' ಎಂಬ ಅರ್ಥದ ಅನುಸಂಧಾನದಲ್ಲಿ 'ಪಹುಡನೇ' ಎಂಬ ಮರಾಠಿಧಾತುವಿನ ಔಚಿತ್ಯ ಚೆನ್ನಾಗಿ ತಿಳಿಯಬಹುದು. ಪಡುವ ಸ್ಥಳವೇ ಪಟ್ಟಿ ಇಲ್ಲವೆ ಪಾಡಿ. ಇದೇ ಈ ಶಬ್ದಗಳ ಮೂಲ ಅರ್ಥವಾಗಿದೆ. 'ಪಾಳೀಮುಳೀ' ಎಂಬ ಮರಾಠಿಯ ಜೋಡುನುಡಿಯಲ್ಲಿಯ 'ಪಾಳಿ' ಕೂಡ 'ಪಾಡಿ'ಯ ಇನ್ನೊಂದು ರೂಪವಾಗಿದೆ. ಪಾಳಿಯ ಅರ್ಥ ಕೂಡ ವಸತಿ-ಸ್ಥಾನವೆಂದೇ ಆಗುತ್ತದೆ. ಮುಂದೆ ಲಕ್ಷಣಾವೃತ್ತಿಯ ಮೇರೆಗೆ ಈ ಶಬ್ದ ಅನೇಕ ಅರ್ಥಗಳನ್ನು ಪಡೆಯಿತು. ಕಾಲಾನುಕ್ರಮವನ್ನು ಸೂಚಿಸುವ ಶಬ್ದಕೋಶ ಸಿದ್ಧವಾದೊಡನೆ ಈ ಶಬ್ದದ ಅರ್ಥದ ಬದಲಾವಣೆಯ ಹಿಂದೆ ಅಡಗಿರುವ ಇತಿ-ಹಾಸದ ಮೇಲೆ ಸಾಕಷ್ಟು ಬೆಳಕು ಬೀಳಬಹುದಾಗಿದೆ. ಲಕ್ಷಣಾವೃತ್ತಿಯಿಂದ ಪ್ರತೀತವಾಗುವ ಹೊಸ ಹೊಸ ಅರ್ಥಗಳು ಎಂದಿಗೂ ನಿಷ್ಕಾರಣವಾಗಿರುವದಿಲ್ಲ. ಕಾಲ ಪರಿಸ್ಥಿತಿಯ ಓಘದಲ್ಲಿ ಶಬ್ದಗಳಿಗೆ ಅರ್ಥ ಹುಟ್ಟಿಕೊಳ್ಳುತ್ತದೆ. ಸಾಮಾಜಿಕ ಹಿನ್ನೆಲೆಯಲ್ಲಿ ನಡೆದಿರಬಹುದಾದ ಅನೇಕ ಬಣ್ಣ ಬಣ್ಣದ ಸಂಗತಿಗಳ ಪ್ರಭಾವ ತತ್ಕಾಲೀನ ಆಡುಮಾತಿನಲ್ಲಿಯ ಶಬ್ದಗಳ ಅರ್ಥದಲ್ಲಿ ಸೇರಿಹೋಗಿರುತ್ತದೆ.

ಈ ದೃಷ್ಟಿಯಿಂದ ನೋಡಿದಾಗ 'ಪಟ್ಟಿ, ಪಾಡಿ, ಪಾಡಾ'..... 'ವಾಡಿ ವಾಡಾ'..... 'ಹಟ್ಟಿ ಹಾಟ' ಈ ಶಬ್ದಗಳಿಂದ ವ್ಯಕ್ತವಾಗುವ ಭಿನ್ನ ಭಿನ್ನ ಅರ್ಥಗಳನ್ನು ಕೊಡುವಾಗ ಕೋಶಕಾರರು ಒಂದು ವಿಶಿಷ್ಟ ಕ್ರಮವನ್ನು ಅನುಸರಿಸುವ ತೊಂದರೆಯನ್ನು ತೆಗೆದುಕೊಂಡಿಲ್ಲ. ಕಾಲಾನುಕ್ರಮದ ವಿಚಾರ ಒತ್ತಟ್ಟಿಗಿರಲಿ, ಮೊದಲು ಮೂಲ ಅರ್ಥ ಆಮೇಲೆ ಲಕ್ಷಣಾವೃತ್ತಿಯಿಂದ ಹುಟ್ಟುವ ಉಳಿದ ಅರ್ಥಗಳು -ಈ ಕ್ರಮವನ್ನೂ ಅವರು ಅನುಸರಿಸಿದಂತೆ ಕಾಣುವದಿಲ್ಲ. 'ಪಟ್ಟಿ, ಪಾಡಿ, ಪಾಡಾ' ..... 'ವಾಡಿ, ವಾಡಾ' .... 'ಹಟ್ಟಿ, ಹಾಟ' ಇವುಗಳಲ್ಲಿ ಪ್ರತಿಯೊಂದಕ್ಕೂ ಒಂದಕ್ಕಿಂತ ಹೆಚ್ಚು ಅರ್ಥಗಳಿವೆ. ಅವುಗಳಲ್ಲಿ ಯಾವದು ಮೊದಲನೆಯದು, ಯಾವದು ಆಮೇಲೆ ಬಂದದ್ದು ಎಂಬುದರ ನಿರ್ಣಯ ಕಾಲಾನುಕ್ರಮದರ್ಶಕ ಶಬ್ದಕೋಶದ ಸಿದ್ಧತೆಯಾಗದೆ ಹೇಳುವದು ಬಿಗಿಯಾದ ಮಾತಾಗಿದೆ. ಆದರೂ ಈ ವಿಷಯದಲ್ಲಿ ಸಮಾಜಶಾಸ್ತ್ರದಿಂದ ನಾವು ನೆರವು ಪಡೆಯಬಹುದಾಗಿದೆ. ಅಂಥ ನೆರವಿನಿಂದ 'ಪಟ್ಟಿ, ಪಾಡಿ, ಪಾಡಾ'.... 'ಹಟ್ಟಿ, ಹಾಟ' ಇವುಗಳ ಬೇರೆ ಬೇರೆ ಅರ್ಥಗಳನ್ನು ಅರ್ಥವಿಸಿ ಹೇಳಬಹುದಾಗಿದೆ. 'ಪಟ್ಟಿ' ಶಬ್ದಕ್ಕೆ ಕಿಟ್ಟೆಲ್ ಈ ಮುಂದಿನ ಅರ್ಥಗಳನ್ನು ಕೊಡುತ್ತಾನೆ. 'A place of lying down, a pen or fold, an abode, a hamlet'. ಹಳೆಗನ್ನಡ ಶಬ್ದಕೋಶದಲ್ಲಿ ಈ ಶಬ್ದದ ಅರ್ಥ 'ಆಭೀರಪಲ್ಲಿ', 'ಘೋಷ' ಎಂದಿದೆ. ತಮಿಳು ಕೋಶದಲ್ಲಿ Cow stall, sheepfold, a measure of land sufficient for a sheepfold, cattle pound, a hamlet, a village, a place' ಎಂಬ ಅರ್ಥಗಳಿವೆ. 'ಹಟ್ಟಿ' ಎಂದರೆ ಗೋಸ್ಥಾವಕ. ದನಕರುಗಳನ್ನು ಕಟ್ಟುವ ಸ್ಥಳ ಎಂಬ ಅರ್ಥ ನಾಚಿರಾಜೀಯ ಅಮರಕೋಶದ ಹಳೆಗನ್ನಡ ಟೀಕೆಯಲ್ಲಿರುವದನ್ನು ಕಿಟ್ಟೆಲ್ ನಮೂದಿಸಿದ್ದಾನೆ. 'ಹಟ್ಟಿ'ಯೆಂದರೆ ಗುಡಿಸಲು, ಕೊಟ್ಟಿಗೆ ಮತ್ತು ಸಣ್ಣ ಹಳ್ಳಿ ಎಂಬ ಅರ್ಥ ಇಂದು ಪ್ರಚಲಿತವಾಗಿರುವ ಕನ್ನಡದ ಆಡುಮಾತಿನಲ್ಲಿದೆ. ವಸುದ್ವಾದಶಿಯಿಂದ ಆರಂಭವಾಗುವ ಹಬ್ಬಕ್ಕೆ (ದೀಪಾವಳಿ) 'ಹಟ್ಟಿಹಬ್ಬ'ವೆಂದು ಕರೆಯುತ್ತಾರೆ. ಈ ಸಂದರ್ಭದಲ್ಲಿ ಎತ್ತು ಅವುಗಳ ಪೂಜೆ ನಡೆಯುತ್ತದೆ. ಗೌಳವಾಡಿಯ ಅಂದರೆ ಹಟ್ಟಿಯ ಹಬ್ಬ ಇದಾಗಿದೆ. ವರ್ಹಾಡದಲ್ಲಿಯ ಹಟಗಾರ-ಧನಗರರಲ್ಲಿಯೂ ಬಹಳ ಉತ್ಸಾಹದಿಂದ ಈ ಹಬ್ಬವನ್ನು ಆಚರಿಸಲಾಗುತ್ತದೆ.[೪] ಇದರಿಂದ ಪಟ್ಟಿ ಮತ್ತು ಹಟ್ಟಿ ಈ ಶಬ್ದಗಳ ಅರ್ಥಗಳಲ್ಲಿಯ ಸಾಮ್ಯ ವ್ಯಕ್ತವಾಗುತ್ತದೆ.

ಪಡುವ ಸ್ಥಳವೆಂದರೆ ಪಾಡಿ, ಪಾಡಾ ಇಲ್ಲವೆ ಪಟ್ಟಿ (ಹಟ್ಟಿ). ಇವುಗಳ ಮೂಲ ಅರ್ಥವೆಂದರೆ ವಸತಿಸ್ಥಾನ. ಈ ಮೂಲ ಅರ್ಥದ ಜೊತೆಗೆ ಗೌಳವಾಡಿ, ಧನಗರರ ವಸತಿ ಎಂಬ ಇನ್ನೊಂದು ಅರ್ಥ ಯಾಕೆ ಬಂದಿರಬೇಕು?

ಮಾನವ ವಿಕಾಸಕ್ರಮದಲ್ಲಿ ಸಾಮಾನ್ಯವಾಗಿ ನಾಲ್ಕು ಅವಸ್ಥೆಗಳನ್ನು ಗುರುತಿಸಲಾಗುತ್ತಿತ್ತು. (೧) ಆಹಾರದ ಸಲುವಾಗಿ ಅಲೆದಾಡುವ ಬೇಡರದು (೨) ಪಶುಗಳನ್ನು ಸಾಕುವ ಅರಿವಾದ ಧನಗರರದು (೩) ವೃಕ್ಷ ವನಸ್ಪತಿಗಳ

ತಿಳುವಳಿಕೆಯಿಂದ ಅವುಗಳನ್ನು ಬೆಳೆಸುವ ಒಕ್ಕಲಿಗ ಕುಟುಂಬಗಳದು (೪) ಒಕ್ಕಲುತನವಾದ ಮೇಲಿನ ವ್ಯಾಪಾರ, ಉದ್ಯೋಗ ಮತ್ತು ರಾಜಕಾರಣದ ಕೆಲಸಗಾರರದು. ಈ ನಾಲ್ಕು ಅವಸ್ಥೆಗಳಲ್ಲಿ ಎರಡನೆಯ ಅವಸ್ಥೆಯ ಸೂಚನೆ 'ಪಟ್ಟಿ-ಹಟ್ಟಿ' ಶಬ್ದಗಳಲ್ಲಿ ಇದೆ, ಅಲ್ಲದೆ ಪಾಡಾ, ಪಾಡಿಗಳಿಂದಲೂ ಅದು ಧ್ವನಿತವಾಗುತ್ತದೆ. 'ಪಾಡು' ಶಬ್ದಕ್ಕೆ ತಮಿಳಿನಲ್ಲಿ street, street of herdsmen, 'ಇಡ್ಯೈರ್ ಚೇರಿ' (ಗೌಳಿಗಳ ಓಣಿ) ಎಂಬ ಅರ್ಥವಿದೆ. 'ಪಾಡಿ ಶಬ್ದಕ್ಕೆ Town, City, Hamlet, Quarters, Pastoral village, District ಎಂದು ಅರ್ಥಗಳಿವೆ. ಕನ್ನಡದ 'ರಟ್ಟಪಾಡಿ', 'ಗಂಗವಾಡಿ' ಮೊದಲಾದ ಶಬ್ದಗಳಿಗೆ 'ಪಾಡಿ'ಯ ಅರ್ಥ ದೇಶವೆಂದಾಗುತ್ತದೆ. 'ಪಾಡಿ' ಮತ್ತು 'ಹಾಡಿ' ಶಬ್ದಗಳು ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ದೊರೆಯುತ್ತವೆ. ಆದರೆ, ಮರಾಠಿಯಲ್ಲಿ ಮಾತ್ರ 'ಪಾಡಾ' ಶಬ್ದದಲ್ಲಿ ಪಟ್ಟಿ (ಹಟ್ಟಿ) ಶಬ್ದದ ಅರ್ಥ ಸಂಪೂರ್ಣವಾಗಿ ಕಾಣಸಿಗುತ್ತದೆ. 'ಪಾಡಾ' ಎಂದರೆ ಒಕ್ಕಲುತನದ ಅನುಕೂಲತೆಗಾಗಿ ಒಕ್ಕಲಿಗರು ತಮ್ಮ ಹಳ್ಳಿಯಿಂದ ಸ್ವಲ್ಪ ದೂರದಲ್ಲಿ, ಆದರೆ ಹೊಲದ ಹತ್ತಿರ ನಿರ್ಮಿಸಿದ ಗುಡಿಸಲುಗಳ ಒಂದು ಸಮೂಹ. ಸಣ್ಣ ಹಳ್ಳಿ ಎಂದು 'ಮಹಾರಾಷ್ಟ್ರ ಶಬ್ದಕೋಶ'ದಲ್ಲಿ ಅರ್ಥವನ್ನು ಕೊಡಲಾಗಿದೆ. ಹಳೆಯ ಕಾಲದ ಜೀವನದ ಉಪಯುಕ್ತವಾದ ಮಾಹಿತಿಯಿಂದ ತುಂಬಿಕೊಂಡು, ಅದಕ್ಕಾಗಿಯೇ ಮಹತ್ವದ ಆಧಾರಗ್ರಂಥವಾಗಿರುವ ಶ್ರೀ ತ್ರ್ಯಂ. ನಾ. ಆತ್ರೆಯವರ 'ಗಾಂವಗಾಡಾ' ಗ್ರಂಥದಲ್ಲಿ 'ಪಾಡಾ'ದ ಅರ್ಥ ವಿವರಣೆಯನ್ನು ಕೊಡಲಾಗಿದೆ. 'ಹೊಲಗಳಲ್ಲಿ ಒಂದೆರಡು ಮನೆಗಳಿದ್ದರೆ ಅದಕ್ಕೆ ಝೂಂಪ, ಅವಸಾಕೋಠಾ-ಗೋಠಾ ಅಥವಾ ಪಡಾಳ ಎನ್ನುತ್ತಾರೆ. ಅದೇ ಐದಾರು ಮನೆಗಳಿದ್ದು ಅದೂ ಒಂದು ಚಿಕ್ಕ ಹಳ್ಳಿಯೇ ಆಗಿದ್ದರೆ ಅದಕ್ಕೆ ವಾಡಾ, ವಾಡಿ, ಮಜರೇ, ಪಾಡಾ ಎಂಬ ಹೆಸರುಗಳು ಪ್ರಾಪ್ತವಾಗುತ್ತವೆ."

ಮೇಲಿನ ಎರಡೂ ಅವತರಣಿಕೆಗಳ ಮೇಲಿಂದ ಪಾಡಾ, ವಾಡಾ ಮತ್ತು ವಾಡಿ ಇವು ಸಮಾನಾರ್ಥದ ಶಬ್ದಗಳೆಂಬುದರಲ್ಲಿ ಯಾವ ಸಂಶಯವೂ ಉಳಿಯುವದಿಲ್ಲ. ಪಾಡಾ ಸಣ್ಣದಾಗಿದ್ದರೆ ಅದನ್ನು ಪಾಡಳ ಎಂದು ಕರೆಯುತ್ತಾರೆಂದು ಶ್ರೀ ಆತ್ರೆ ಹೇಳುತ್ತಾರೆ. ಒಟ್ಟಿನಲ್ಲಿ ಪಟ್ಟಿ (ಹಟ್ಟಿ), ಪಾಡಾ ಇವುಗಳಲ್ಲಿ ಪಶುಪಾಲನ ವೃತ್ತಿಯಿಂದ ಒಕ್ಕಲುತನದ ಜೀವನಕ್ರಮದ ವರೆಗಿನ ವಿಕಾಸಸ್ಥಿತಿಯ ಅರ್ಥಸೂಚನೆ ಇದೆಯೆಂದು ಸಿದ್ಧವಾಗುತ್ತದೆ. ವಾಟ, ವಾಟಿ (ಕಾ) ಶಬ್ದಗಳಿಗೆ ಸಂಸ್ಕೃತದಲ್ಲಿ ದೊರೆಯುವ ಅರ್ಥ ಕೂಡ ಇದಕ್ಕೆ ಪೋಷಕವಾಗಿದೆ. A site of a house, an enclosure, a park, an orchard. 'ವಾಟ' ಶಬ್ದಕ್ಕಿರುವ ಈ ಅರ್ಥದೊಡನೆ 'ಹರಿವಂಶ,' Translation Compunds (೩.೩.೯೭) ದಲ್ಲಿಯ 'ಗೋವಾಟ' ಶಬ್ದ ಪ್ರಯೋಗವನ್ನು ಹೋಲಿಸಿ ನೋಡಿದರೆ 'ವಾಟ' ಶಬ್ದಕ್ಕೆ 'ಪಟ್ಟಿ-ಪಾಡಿ'ಗಳ ಸಂಪೂರ್ಣ ಅರ್ಥವಿರುವದು ಗೊತ್ತಾಗುತ್ತದೆ.*

ಕ್ರಿಸ್ತಪೂರ್ವದ ಮೊದಲ ಶತಮಾನದಲ್ಲಿ ರಚಿತವಾದ 'ಉತ್ತರಾಧ್ಯಯನ ಸೂತ್ರ'ದಲ್ಲಿ 'ವಾಡ' ಶಬ್ದ ದೊರೆಯುತ್ತದೆ. ಈ ಪ್ರಾಕೃತ ಗ್ರಂಥದಲ್ಲಿಯ 'ವಾಡ' ಶಬ್ದಕ್ಕೆ ಕೊಟ್ಟಿಗೆ ಎಂಬ ಅರ್ಥವಿರುವದು ಕಾಣುತ್ತದೆ. ಒಂಬತ್ತು-ಹತ್ತನೆಯ ಶತಮಾನಗಳಲ್ಲಿ ದೇವೇಂದ್ರ ಮೊದಲಾದ ಟೀಕಾಕಾರರು ಅದೇ ಅರ್ಥವನ್ನು ಹೇಳುತ್ತಾರೆ. "ವಾಡೇ ಹಿ ಪಜ್ಜರೇಹಿ ಸನ್ನಿರುದ್ಧಾ"-ವಿವಾಹದ ಸಮಯದಲ್ಲಿ ವಾಡ ಮತ್ತು ಪಂಜರಗಳಲ್ಲಿ ಹಿಡಿದು ಹಾಕಿದ ಪಶುಗಳನ್ನು ನೋಡಿ ಅರಿಷ್ಟನೇಮಿಗೆ ವೈರಾಗ್ಯ ಬಂದು ಅವನು ಪರಿವ್ರಾಜಕತನಕ್ಕೆ ಪ್ರವೃತ್ತನಾದನೆಂದು ವರ್ಣನೆಯಿದೆ. ಮರಾಠಿಯಲ್ಲಿಯ 'ಕೋಂಡವಾಡಾ' ಶಬ್ದದಲ್ಲಿಯ 'ವಾಡಾ' ಎಂಬ ಶಬ್ದದ ರಹಸ್ಯ ಇಲ್ಲಿ ಸ್ಪಷ್ಟವಾಗುತ್ತದೆ.

'ಪಟ್ಟಿ-ಹಟ್ಟಿ' ಶಬ್ದಗಳ ಅರ್ಥದ ಮರ್ಮವನ್ನು ಮರೆತು ಬಿಟ್ಟದ್ದರಿಂದ ಮರಾಠಿಯಲ್ಲಿಯ 'ಹಟ್ಟಿಕಾರ-ಧನಗರ' ಅಥವಾ 'ಹಟಗಾರ-ಧನಗರ' ಇಂಥ ಜೋಡು ಶಬ್ದಗಳ ವ್ಯುತ್ಪತ್ತಿಯ ಕಡೆಗೆ ಯಾರೂ ಲಕ್ಷ್ಯ ಕೊಟ್ಟಂತಿಲ್ಲ.

* 'ಹರಿವಂಶ'ದಲ್ಲಿ ಗೋವಳಿಗರ ವರ್ತನೆ, ಆಚಾರ, ಅನೇಕ ವಸ್ತುಗಳ ಸಮಗ್ರ ವಿವರಣೆ ದೊರಕುತ್ತದೆ. ಹರಿವಂಶವು ಆರ್ಯೇತರ ವಿವರಣೆಗಳಿಂದ ಕೂಡಿದೆ. ಈ ಅಂಶವು 'ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ' ಗ್ರಂಥದಲ್ಲಿ ವಿವರವಾದ ವ್ಯಾಖ್ಯಾನಕ್ಕೆ ಒಳಗಾಗಿದೆ (ಸಂ).

'ಹಟಗಾರ' ಶಬ್ದಕ್ಕೆ 'ಹಟಮಾರಿ' ಎಂದು ಅರ್ಥ ಹಚ್ಚುವ ಪ್ರಯತ್ನವನ್ನು ಕೆಲವರು ಮಾಡಿದ್ದಾರೆ. 'ಧನಗರ' ಎಂದರೆ 'ಧೇನುಕರ' ಎಂದು ತರ್ಕ ಹೂಡಿರುವ ಪ್ರಸಂಗಗಳು ಕಾಣಸಿಗುತ್ತವೆ. ವಿಲ್ಸನ್‌ನ ಈ ಊಹೆಯನ್ನು ಯಾರೂ ಒಪ್ಪಿಕೊಂಡಿಲ್ಲ. ಆದರೆ 'ಧನಕರ' ಈ ಶಬ್ದದ ನಿರ್ವಚನವನ್ನು ಬೇರೆ ರೀತಿಯಿಂದ ಸೂಚಿಸಲೂ ಪ್ರಯತ್ನವಾಗಿಲ್ಲ. ಈ ವೈಚಾರಿಕ ಗೊಂದಲ ಪ್ರಾ. ಕುಲಕರ್ಣಿಯವರ ವ್ಯುತ್ಪತ್ತಿಕೋಶದಲ್ಲಿ ನಮೂದಾಗಿದೆ. ಇದನ್ನು 'ಹಟ್ಟಿಹಬ್ಬ'ವೆಂದರೆ ಹಟ್ಟಿಯ ಅಂದರೆ ದನಕರುಗಳ ಹಬ್ಬವೆಂದು ಈ ಮೊದಲೇ ಹೇಳಲಾಗಿದೆ. ಖಾನದೇಶದ ಗೆಜೆಟಿಯರದಲ್ಲಿಯ ಈ ದಾಖಲೆಯನ್ನು ನೋಡಬೇಕು:

> "Kanadas (gavalis) are a peculiar race of drovers... they have a peculiar breed or black and white cattle, HATKAR which, though not large, are much prized for their strength and spirit."[೨೫]
> (p. 106)

ಇಲ್ಲಿ 'ಹಟಕಾರ' ಎಂದರೆ 'ದನ' ಎಂಬ ಅರ್ಥ ಸ್ಪಷ್ಟವಾಗಿದೆ. ಕನ್ನಡದಲ್ಲಿ ನಾಚಿರಾಜೀಯ, ಮಂಗರಾಜ ನಿಘಂಟು ಮೊದಲಾದ ಹಳೆಯ ಕೋಶಗಳಲ್ಲಿ 'ಹಟ್ಟಿಕಾರ' ಎಂದರೆ ಗವಳಿಗರು ಎಂದು ಅರ್ಥ ಕೊಡಲಾಗಿದೆ. ಹಟ್ಟಿಕಾರ-ಧನಗರ' ಇಲ್ಲವೆ 'ಹಟಕಾರ-ಧನಗರ' ಈ ಶಬ್ದಗಳು ಒಂದೇ ಅರ್ಥದ ಎರಡು ಶಬ್ದಗಳು ಕೂಡಿ ಆಗಿವೆ. 'ತಾಂಬಡಾ-ಲಾಲ', 'ಕಾಗದಪತ್ರ', 'ಈಡಲಿಂಬು', 'ಖೇಳ-ಆಡು' ಇವು ಇಂಥ ಜೋಡಿಶಬ್ದಗಳು. ಇವುಗಳನ್ನು ಎಂದು ಡಾ|| ಸುನೀತಿಕುಮಾರ ಚಟರ್ಜಿಯವರು ಕರೆದಿದ್ದಾರೆ. ಕನ್ನಡದಲ್ಲಿ 'ದನ' ಎಂದರೆ ಆಕಳು ಮತ್ತು ಎತ್ತುಗಳು (ಎಮ್ಮೆಗಳು ಈ ವರ್ಗದಲ್ಲಿಲ್ಲ) 'ದನ' ಇದು 'ಧನ'ದ ತದ್ಭವವಾಗಿದೆಯೆಂದು ೧೨ನೆಯ ಶತಮಾನಕ್ಕಿಂತ ಮೊದಲೇ ಕನ್ನಡದಲ್ಲಿ ಮಾನ್ಯತೆ ಇದೆ. ಆದ್ದರಿಂದ (ಗೋ)ಧನವನ್ನು ಪಾಲಿಸುವವರು ಧನಗರ ಅರ್ಥಾತ್ 'ಹಟ್ಟಿಕಾರ' ಎಂದರೆ 'ದನಗಾರ'. ದನಗಾರವೆಂಬ ಶಬ್ದ ಇನ್ನೂ ಕನ್ನಡದಲ್ಲಿ ಪ್ರಚಾರದಲ್ಲಿದೆ.

ಪಶುಪಾಲನ ವೃತ್ತಿಯ ಮುಂದಿನ ಹೆಜ್ಜೆಯೆಂದರೆ ಒಕ್ಕಲುತನ. 'ಶೇತಿವಾಡಿ' ಎಂಬ ಜೋಡು ಶಬ್ದ ವಿಚಾರಾರ್ಹವಾಗಿದೆ. ಇದರಲ್ಲಿ 'ಶೇತೀ' ಶಬ್ದದಿಂದಾಗುವ ಅರ್ಥಬೋಧ ಸ್ವಲ್ಪ ಭಿನ್ನವಾಗಿದೆ. ಮಳೆಯ ನೀರಿನಿಂದ ಬೆಳೆಯನ್ನು ತೆಗೆದುಕೊಳ್ಳುವವರೇ 'ಶೇತಕರಿ' ಎಂದು ತಿಳಿಯಲಾಗಿದೆ. 'ವಾಡೀ' ಎಂದರೆ ತೋಟ, ಬಾವಿ ಇಲ್ಲವೆ ನದಿಗಳಿಂದ ನೀರು ಹಾಯಿಸಿ ಕಾಯಿ ಪಲ್ಲೆ ಬೆಳೆಯುವ ಸ್ಥಳವೆಂದರೆ ತೋಟ. ಒಕ್ಕಲುತನದ ವಿಕಾಸಕ್ರಮದಲ್ಲಿ ಮೊದಲು 'ವಾಡೀ', ನಂತರ 'ಶೇತೀ'. ತೋಟಗಾರಿಕೆಯ ಕೆಲಸ ಸ್ತ್ರೀಯರಿಂದ ಆರಂಭವಾಯಿತೆಂದು ಸಂಶೋಧಕರ ಅಭಿಪ್ರಾಯವಾಗಿದೆ. ಪಶುಪಾಲನದ ಅವಸ್ಥೆಯಲ್ಲಿ ದನಗಳನ್ನು ಮೇಯಿಸಲು ಗಂಡಸರು ಹಗಲೆಲ್ಲ ತಿರುಗಾಡಬೇಕಾಗುತ್ತದೆ. ಪಟ್ಟಿಯಲ್ಲಿ ಇರುವ ಸ್ತ್ರೀಯರು ತಮ್ಮ ಬಿಡುವಿನ ವೇಳೆಯಲ್ಲಿ ತಮ್ಮ ನಿರೀಕ್ಷಣದ ಅನುಭವದ ಮೇರೆಗೆ ಸರಿಕಂಡಂತೆ ಗಿಡಬಳ್ಳಿಗಳನ್ನು ಬೆಳೆಸತೊಡಗಿದರು. ಈ ಉದ್ಯೋಗ ಲಾಭಪ್ರದವಾಗಿ ಉಪಜೀವಿಕೆಯ ಸಾಧನವಾದೊಡನೆ ಗಂಡಸರೂ ಈ ಕೆಲಸದತ್ತ ಲಕ್ಷ್ಯ ಕೊಡತೊಡಗಿದರು. ಈ ರೀತಿಯಲ್ಲಿ ದನಕರುಗಳ ವಾಡಿ-ಗೌಳವಾಡಿ ಮುಂದೆ ತೋಟಗದ್ದೆಗಳ ಸ್ವರೂಪವನ್ನು ತಳೆಯಿತು. 'ಶೇತೀವಾಡಿ', 'ವತನವಾಡಿ' ಇವುಗಳಲ್ಲಿಯ 'ವಾಡಿ' ಶಬ್ದಕ್ಕೆ ಗೌಳವಾಡಿ ಎಂಬ ಅರ್ಥದ ಬದಲಾಗಿ ತೋಟವೆನ್ನುವ ಬೇರೆ ಅರ್ಥಪ್ರಾಪ್ತ ವಾಯಿತು. ಕನ್ನಡದಲ್ಲಿ 'ತೋಟಪಟ್ಟಿ' ಎಂಬ ಜೋಡುಶಬ್ದದಲ್ಲಿ 'ಪಟ್ಟಿ' ಶಬ್ದಕ್ಕೆ ತೋಟವೆಂದೇ ಅರ್ಥವಿದೆ. 'ಪಟ್ಟಿ' ಎಂಬ ಪ್ರಾಚೀನ ಶಬ್ದದ ಅರ್ಥವನ್ನು ಸ್ಪಷ್ಟಗೊಳಿಸಲು 'ತೋಟ'ವೆಂಬ ಆಧುನಿಕ ಶಬ್ದವನ್ನು ಬಳಸತೊಡಗಿದರು. ತಮಿಳಿನಲ್ಲಿ 'ಷಡಪ್ಪೈ' ಶಬ್ದಕ್ಕೆ ತೋಟವೆಂದೇ ಅರ್ಥವಿದೆ. ಸಂಸ್ಕೃತದ 'ವಾಟ' ಮತ್ತು 'ವಾಟೀ' ಈ ಶಬ್ದಗಳಿಗೆ ತೋಟವೆಂದು ಅರ್ಥವಿರುವದು ಸರ್ವಶ್ರುತವಾಗಿದೆ.

ಮೇಲಿನ ಎಲ್ಲ ಮಾತುಗಳಿಂದ 'ಪಟ್ಟಿ-ಹಟ್ಟಿ' ಶಬ್ದಗಳು ಪಶುಪಾಲನ ವೃತ್ತಿಯಿಂದ ಒಕ್ಕಲುತನದ ವರೆಗಿನ ವಿಕಾಸದ ಅವಸ್ಥೆಗಳನ್ನು ಪ್ರತಿಬಿಂಬಿಸುತ್ತವೆ. ಸಂಸ್ಕೃತ ಮತ್ತು ಮರಾಠಿಗಳಲ್ಲಿ 'ಹಾಟ' ಶಬ್ದಕ್ಕೆ ಪೇಟೆ ಎಂದು

ಅರ್ಥವಿದೆ. ಈ ಅರ್ಥ ಒಕ್ಕಲುತನದ ಮುಂದಿನ ಅವಸ್ಥೆಯನ್ನು ಸೂಚಿಸುತ್ತದೆ. ಪಟ್ಟಿ-ಪಾಟ-ಪಾಟಕ, ಪೇಠ ಇವುಗಳಲ್ಲಿಯ ಅರ್ಥ ಪರಿವರ್ತನದ ಇತಿಹಾಸ ವಿಚಾರಾರ್ಹವಾಗಿದೆ. ಸಂಸ್ಕೃತದ 'ಗೋಪ' ಶಬ್ದದ ಅರ್ಥವಿಕಾಸದ ರೀತಿಯನ್ನು ನೋಡಿದರೆ ಮರಾಠಿಯ (ಗೌಳ) ವಾಡಿಗೆ ವಿಸ್ತಾರವಾದ (ರಾಜ) ವಾಡೆ, ವೈಭವಶಾಲಿಯಾದ ಭವ್ಯ ಅರಮನೆಯಂಥ ಅರ್ಥ ಹೇಗೆ ಪ್ರಾಪ್ತವಾಯಿತೆಂಬುದು ಗೊತ್ತಾಗುತ್ತದೆ. ಇದು ಹಟಗಾರರ ಬೆಳೆದು ಬಂದ ವೈಭವವನ್ನು ನಿರ್ದೇಶಿಸುತ್ತದೆ. ಪಟ್ಟಿ, ಪಾಡಿ, ಪಾಡಾ ಮತ್ತು ವಾಡಾ ಇವುಗಳಿಗೆ ವಿಸ್ತಾರವಾದ ಪ್ರದೇಶ, ದೇಶ, ರಾಜ್ಯ ಎಂಬ ಅರ್ಥಗಳು ಹೀಗೆ ಬಂದವು. ಚಿಕ್ಕದಾದ ಪಟ್ಟಿ ಪಟ್ಟಣವಾಗಿ ರಾಜಧಾನಿಯೆಂಬ ಅರ್ಥವನ್ನು ಪಡೆಯಿತು, ಕಾಲಗತಿಯಿಂದ ಹಟ್ಟಿ, ಪಾಡಿ ಇವುಗಳಿಗೆ ಹಾಳಾದ ಹಳ್ಳಿ ಎಂಬ ಅರ್ಥವೂ ಬಂದಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ.

ಸಾವಿರವರ್ಷಗಳ ಕಾಲಾವಧಿಯಲ್ಲಿ 'ಪಟ್ಟಿ', 'ಹಟ್ಟಿ'ಗಳ ವಿವಿಧರೂಪಗಳು ಲೋಕವ್ಯವಹಾರದಲ್ಲಿ ರೂಢವಾಗಿರುವದು ಸಹಜವಾಗಿದೆ. ದಕ್ಷಿಣಾಪಥದಲ್ಲಿ (ನರ್ಮದೆಯಿಂದ ಕಾವೇರಿಯ ವರೆಗೆ) ಊರ ಹೆಸರುಗಳ ಯಾದಿಯನ್ನು ನೋಡಿದರೆ 'ಪಟ್ಟಿ-ಹಟ್ಟಿ' ವರ್ಗದ ವಿವಿಧರೂಪಗಳು ಸ್ವರೂಪ ಮತ್ತು ಉಚ್ಚಾರಭೇದದಿಂದ ಕಾಣಸಿಗುತ್ತವೆ. ಪಾಡೇಗಾಂವ, ಪಾಟಗಾಂವ, ಪಾರಗಾಂವದಂಥ ಕೆಲವು ಹೆಸರುಗಳಲ್ಲಿ ಈ ರೂಪಗಳು ಸ್ಥಳನಾಮದ ಪೂರ್ವಭಾಗದಲ್ಲಿದ್ದರೆ ಬಹುತೇಕ ಎಲ್ಲ ಕಡೆಗೂ ಉತ್ತರ ಭಾಗದಲ್ಲಿ ಗೋಚರವಾಗುತ್ತವೆ. ಉಚ್ಚಾರಭೇದವನ್ನು ಅನುಸರಿಸಿ ಆದ ಅಂತರಕ್ಕೆ ತಕ್ಕಂತೆ ಗುಂಪು ಮಾಡಿ ಆ ಕೋಷ್ಟಕವನ್ನು ಕೆಳಗೆ ಕೊಟ್ಟಿದೆ.

ಪಾಡು-ಪಾಡಿ, ಪಟ್ಟಿ; ಪಟ್ಟಣ-ಪಾಟಣ-ಪಾಟಣಾ;
ಪಟ್ಟ-ಪಾಟ-ಪಾಟಕ; ಪಟ್ಟಾರ....ಪೇಠ; ಪೇಠಾ;
ಪಾಡು-ಪಾಡಾ-ಪಾರಾ......
ಪಾರಾ-ಹಾರಾ, ಹಾರ-ಹರ...ಆರ.....;
ಪಾಡು.... ಆಡು; ಪಾಡಿ......ಆಡಿ;
ಬಾಡು-ಬಾಳು-ಬಾಳ...
ಭಾಳು-ವಾಳು-ವಾಳ-ವಳ-ವಲ
ಪಾಡಾ-ವಾಡಾ-ವಾಡಿ; ವಡ, ವಾಡೆ; ವಡಿಗೆ
ಪಟ್ಟಿ-ಪಾಟಿ...
ಪಾಟಿ-ವಾಟಿ; ವಾಟಿಕಾ
ಪಟ್ಟಿ-ಪಾಟ
ಪಾಟ-ವಾಟ; ವಾಟಕ.... ವಾಥಾರ (ಪಾಠಾರ); ವಠಾರ; ವಠಾಣ
ಪಟ್ಟಿ-ಪಾಡಿ-ಪ್ಯಾಟಿ... ಪೇಟೆ, ಪೇಠ, ಪೇಠಾ, ಪೇಠಾ... ಪಾಠಾರ; ಪಾಟಕ
ಪಟ್ಟಿ-ಹಟ್ಟಿ; ಪಟ್ಟ-ಹಟ್ಟ; ಪಾಟ-ಹಾಟ
ಪಾಟಕ-ಹಾಟಕ; ಪಾಡಿ-ಹಾಡಿ....;
ಪಾಡು-ಪಾಳು-ಹಾಳು-ಹಾಳ...ಆಳ; ಆಲ...ಆಣ
ಪಾಳಿ-ಪಳ್ಳಿ-ಹಳ್ಳಿ
ಪಳ್ಳಿ-ವಳ್ಳಿ-ವಳಿ...ವಲಿ....ಓಲಿ....ಳಿ;
ಪಾಡಿ-ಪಾಳಿ-ಹಾಳಿ-ಹಾಳ
ಪಾಲಿ-ಪಾಳ್ಯ, ಪಲ್ಯ.

'ಪಟ್ಟಿ-ಹಟ್ಟಿ' ವರ್ಗದ ಈ ಹಬ್ಬುಗೆಯನ್ನು ನೋಡಿದಾಗ ಬಹಳಷ್ಟು ಸಮಸ್ಯೆಗಳ ಮೇಲೆ ಬೆಳಕು ಬೀಳಬಹುದಾಗಿದೆ. ಇದಲ್ಲದೆ, ಈ ಪ್ರಕಾರದ ಇನ್ನೊಂದು ಉದಾಹರಣೆಯೆಂದರೆ 'ಅಗ್ರಹಾರ'. ಈ ಶಬ್ದದ ವ್ಯುತ್ಪತ್ತಿ ಇನ್ನೂ ನಿಶ್ಚಿತವಾಗಿಲ್ಲ. ಕೆಳಗಿನ ಅವತರಣಿಕೆಗಳಿಂದ ಇದನ್ನು ಮನಗಾಣಬಹುದು.

> ೧) 'ಅಗ್ರಂ ಬ್ರಾಹ್ಮಣಭೋಜನಂ, ತದರ್ಥಂ ಹ್ರಿಯಂತೇ ರಾಜಧನಾತ್ ಪೃಥಕ್ ಕ್ರಿಯಂತೇ ತೇ ಕ್ಷೇತ್ರಾದಯಃ'. ೨) 'ಅಗ್ರಂ ಪ್ರಥಮಂ ಹ್ರಿಯತೇ ಉತ್ಪನ್ನಶಸ್ಯಾನ್ ಉದ್ಧೃತ್ಯ ಸ್ಥಾಪ್ಯತೇ' ೩) ಅಗ್ರಂ ಹರತಿ ೪) 'ಕ್ಷೇತ್ರೋತ್ಪನ್ನಸ್ಯಾತ್ ಉದ್ಧೃತ್ಯ ಬ್ರಾಹ್ಮಣೋದ್ದೇಶೇನ ಸ್ಥಾಪ್ಯ ಧಾನ್ಯಾದಿ ಗುರುಕುಲಾದಾವೃತ್ತಬ್ರಹ್ಮಚಾರಿಣೇ ದೇಯಂ ಕ್ಷೇತ್ರಾದಿ ಗ್ರಾಮ್ಯೇಭ್ಯಶ್ಚ!'

ಮೇಲಿನ ಅವತರಣಿಕೆಗಳಲ್ಲಿ 'ಅಗ್ರ' ಮತ್ತು 'ಹಾರ' ಈ ಎರಡೂ ಶಬ್ದಗಳ ಅರ್ಥದ ಬಗ್ಗೆ ಏಕಮತವಿಲ್ಲ. 'ಅಗ್ರ'ವೆನ್ನುವುದು ಬ್ರಾಹ್ಮಣ ವಾಚಕ ಶಬ್ದವೆಂದು ಒಪ್ಪಿಕೊಂಡರೂ 'ಹಾರ' ಶಬ್ದದ ಅರ್ಥ ಸಂಸ್ಕೃತದಲ್ಲಿ ಸರಳವಾಗಿಲ್ಲ. ಗ್ರಾಮವಾಚಕ ಅರ್ಥ ಈ ಶಬ್ದದಿಂದ ಸುಲಭವಾಗುವದಿಲ್ಲ. ಆದ್ದರಿಂದಲೇ ಪಂಡಿತರು 'ಹಾರ' ಶಬ್ದಕ್ಕೆ 'ಹ್ರಿಯತೇ' 'ಹ್ರಿಯಂತೇ' ಮತ್ತು 'ಹರತಿ' ಎಂದು ಅರ್ಥಮಾಡಿದ್ದಾರೆ.

ಹಾರ ಮತ್ತು ಹಾರಾ ಈ ಶಬ್ದಗಳು ಹಳೆಯ ತಾಮ್ರಪಟಗಳಲ್ಲಿ ದೊರೆಯುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿ ಸಿಕ್ಕ ಶಿಲಾಲೇಖದಲ್ಲಿ 'ಸಾತವಾಹನೀ ಹರಾ' ಎಂಬ ಪದ ದೊರೆಯುತ್ತದೆ. ಅಲ್ಲಿ 'ಹರಾ' ಶಬ್ದದ ಅರ್ಥವನ್ನು abode home ಡಾ॥ ಸುಖಟಣಕರರಂಥ ತಜ್ಞರು ಕೊಟ್ಟಿದ್ದಾರೆ.[೫] ಈ ಶಬ್ದ ಪ್ರೇಹಾರ, ಶಿಲಾಹಾರ ಲೇಖಗಳಲ್ಲಿಯೂ ಇದೆ.[೬] ಹಾರ, ಹರಾ, ಇಲ್ಲವೆ ಹರ ಇವು ಭಿನ್ನ ಶಬ್ದಗಳಾಗಿರದೆ ವಾಡ, ವಾಡಾ, ವಡಗಳಂತೆ ಒಂದೇ ಶಬ್ದದ ಭಿನ್ನ ಸ್ವರೂಪಗಳಾಗಿವೆ. ಹಾರಾ ಇಲ್ಲವೆ ಹಾರ ಇವುಗಳ ಪ್ರಾಚೀನ ರೂಪ 'ಪಾರಾ' ಅಥವಾ 'ಪಾರಾ' ಎಂದಿರಬೇಕು. ಪಾಡಾ, ವಾಡಾಗಳ ಬೇರೆ ರೂಪಗಳು ಇವು ಆಗಿವೆ. 'ಪಾರಗಾಂವ'ದಂಥ ಹೆಸರುಗಳಲ್ಲಿ ಪಾರ ಶಬ್ದವಿದೆ. ಉತ್ತರದಲ್ಲಿ ಆಸಾಮ, ಬಂಗಾಲ, ಬಿಹಾರಗಳಲ್ಲಿ ತೆಲ್ಲಪಾರಾ, ಉತ್ತರಪಾರಾ ಮೊದಲಾದ ಗ್ರಾಮನಾಮಗಳಲ್ಲಿ ಕೊನೆಯಲ್ಲಿ. ಈ ಶಬ್ದವಿದೆ ಈ ವಿಷಯದಲ್ಲಿ ಒಂದು ಪ್ರಶ್ನೆ ಏಳುತ್ತದೆ. ಪಟ್ಟಿ, ಪಾಡಿ, ಹಟ್ಟಿ ಈ ಶಬ್ದಗಳು ದೇಶ್ಯವಾಗಿದ್ದು ದ್ರಾವಿಡ ವರ್ಗದ ಸಂಸ್ಕೃತೇತರ ಭಾಷೆಗಳಲ್ಲಿ ಇದ್ದರೆ ಭಾರತದಲ್ಲಿಯ ಆರ್ಯಾವರ್ತದಲ್ಲಿಯ ಗ್ರಾಮನಾಮಗಳು ಹೇಗೆ ಆರ್ಯೇತರವಾದವು? ವಾಲ್ಡೆ ಮತ್ತು ಪೋಕರ್ನಿ ಇವರ ಆರ್ಯಭಾಷಾ ವರ್ಗೀಯ ಜರ್ಮನ್ ಶಬ್ದಕೋಶದಲ್ಲಿ ಪಟ್ಟಿ, ಹಟ್ಟಿ, ಹಟ್ಟಿ ಶಬ್ದಗಳ ಸುಳಿವು ಇಲ್ಲದಿರುವ ಬಗ್ಗೆ ಡಾ॥ ಆರ್. ಎನ್. ದಾಂಡೇಕರರಿಂದ ತಿಳಿಯಿತು. 'ಪಟ್ಟಿ-ಹಟ್ಟಿ'ಗಳು ಮೇಲೆ ಹೇಳಿರುವಂತೆ ಸಂಸ್ಕೃತೇತರ ಭಾಷೆಯವೇ ಎಂಬುದು ನಿಶ್ಚಿತವಾದರೆ ಇಂದಿನ ವರೆಗೆ ಬಿಡಿಸಲಾಗದ ಒಂದು ಸಮಸ್ಯೆಗೆ ಪರಿಹಾರ ಸಿಕ್ಕಂತಾಗುತ್ತದೆ.

'ದ್ರಾವಿಡ' ಶಬ್ದ ವೇದಕಾಲದಷ್ಟು ಪ್ರಾಚೀನವಾಗಿಲ್ಲ. ಆಮೇಲೆ ಆ ಶಬ್ದ ಬಳಕೆಗೆ ಬಂದಿತು. ದ್ರವಿಡ ಜನ ಆರ್ಯರಿಗಿಂತ ಮೊದಲೇ ಇಲ್ಲಿದ್ದದ್ದು ನಿಜವಾಗಿದ್ದರೆ ವೇದಕಾಲದಲ್ಲಿ ಅವರನ್ನು ಯಾವ ಹೆಸರಿನಿಂದ ಗುರುತಿಸುತ್ತಿದ್ದರು. ನನ್ನ ಅಬಿಪ್ರಾಯದ ಮೇಲೆಗೆ ಆ ಕಾಲದಲ್ಲಿ 'ಪತ್ತಿ' ಎಂಬ ಹೆಸರಿರಬೇಕು. ವರಾಹಮಿಹಿರ ಹೆಸರಿಸುವ ಈ 'ಪತ್ತಿ' ಜನರು ಯಾರು? ಮಧ್ಯಕಾಲದ ಹಟ್ಟಿಕಾರರ ಪೂರ್ವಜರ ಹೆಸರು ಪಟ್ಟಿ ಇಲ್ಲವೆ ಪತ್ತಿ ಎಂದು ಇರುವದು ಸಾಧ್ಯವಿಲ್ಲವೇ? ಯಜುರ್ವೇದೀಯ ರುದ್ರಾಧ್ಯಾಯದಲ್ಲಿ ಅನೇಕ ಆರ್ಯೇತರ (ಅನಾರ್ಯರೆಂದರೆ ಕಾಡು ಜನರಲ್ಲ) ಜನರ ಉಲ್ಲೇಖ ಕಂಡು ಬರುತ್ತದೆ. ಅವರಲ್ಲಿಯೇ ಪತ್ತಿಗಳ ಹೆಸರೂ ಇದೆ. 'ನಮಃ ಉಚ್ಚೈರ್ಘೋಷಾಯಾऽ ಕ್ರಂದಯತೇ ಪತ್ತೀನಾಂ ಪತಯೇ ನಮಃ'. ಈ ಪತ್ತಿಗಳು ಯಾರಿರಬಹುದು? ಪಟ್ಟಿಗಳಲ್ಲಿ ವಾಸಮಾಡುವವರು ಪಟ್ಟಿ (ಪತ್ತಿ)ಗಳು. ಪಟ್ಟಣ-ಪತ್ತನದಂತೆ ಟವರ್ಗ ಸಂಸ್ಕೃತ ಭಾಷೆಯಲ್ಲಿ ತವರ್ಗವಾಗುತ್ತದೆ. ಪಟ್ಟಿ ಮತ್ತು ಪತ್ತಿ ಇವುಗಳ ಸಂಬಂಧವಿದ್ದದ್ದು ಸಿದ್ಧವಾದರೆ ಇನ್ನು ಮುಂದೆ ದ್ರಾವಿಡದಂಥ ಸಂದಿಗ್ಧ ಮತ್ತು ಅನುಚಿತಾರ್ಥದ ಶಬ್ದಕ್ಕಿಂತ 'ಪತ್ತಿಜನ'ವೆಂಬ ಪ್ರತಿ ಶಬ್ದವನ್ನು ರೂಢಗೊಳಿಸುವದು ಹೆಚ್ಚು ಯೋಗ್ಯವಾಗಿದೆ.

ತಮಿಳರಿಗೆ ದ್ರವಿಡರೆಂಬ ಸಂಜ್ಞೆ ಇರುವದರಿಂದ ಆ ಶಬ್ದದಲ್ಲಿ ಆ ವರ್ಗದ ಎಲ್ಲರೂ ಸಮಾವೇಶ ಹೊಂದುವದು ಸಾಧ್ಯವಿಲ್ಲ. ಈ ಪದಪ್ರಯೋಗದಿಂದ ಕನ್ನಡ, ತಮಿಳು ಮತ್ತು ಆಂಧ್ರರಂಥ ಜನರ ಪೂರ್ವಪರಂಪರೆ ವೇದಕಾಲದ ವರೆಗೆ ಹೋಗಿ ಮುಟ್ಟಿರುವ ಸಂಗತಿ ಸ್ಪಷ್ಟವಾಗುತ್ತದೆ.

'ಪಟ್ಟ ಇಲ್ಲ'-ಪಟ್ಟಿಲ ಇಂಥ ಪ್ರಯೋಗ ಪ್ರಾಕೃತದ 'ಸುಪಾಸನಾಹ ಚರಿಯ' ಮೊದಲಾದ ಗ್ರಂಥಗಳಲ್ಲಿ ಸಿಗುತ್ತದೆ. ('ಪಾಇಅ-ಸದ್ದ-ಮಹಾಣ್ಣವೋ' ಕೋಶ ನೋಡಬೇಕು) 'ಇಲ್ಲ-ಇಲ' ಈ ತದ್ಧಿತ ಪ್ರತ್ಯಯದ ಅರ್ಥ 'ಅದರಲ್ಲಿದ್ದವನು' ಎಂದಾಗುತ್ತದೆ. ಪಟ್ಟಿಲನೆಂದರೆ ಪಟ್ಟಿಯಲ್ಲಿ ಇರುವವನೆಂದೇ ಅರ್ಥ. ಪಟ್ಟಿಲ-ಹಟ್ಟಿಕಾರರ ಸಂಬಂಧವಿರುವದು ಅಶಕ್ಯವೇನಲ್ಲ. ಪಟ್ಟಿಲ ಶಬ್ದದ ಮುಂದಿನ ರೂಪ ಪಾಟಿಲ ಮತ್ತು ಪಾಟೀಲ ಎಂದಾಗುತ್ತದೆ. 'ಪಾಟೀಲ'ರು ಬ್ರಾಹ್ಮಣರಲ್ಲ. ಕುಣಬಿ ಮತ್ತು ಧನಗರರಿಗೆ 'ಪಾಟೀಲರೇ' ಎಂದು ಸಂಬೋಧಿಸುವ ರಿವಾಜು ಇದೆ. ಪಾಟೀಲನೆಂದರೆ ಗ್ರಾಮಾಧಿಕಾರಿ ಎನ್ನುವ ಅರ್ಥ ಮೂಲದಲ್ಲಿ ಇಲ್ಲ. ಲಕ್ಷಣಾವೃತ್ತಿಯಿಂದ ಮುಂದೆ ಆ ಅರ್ಥ ಬಂದಿರಬೇಕು. ಇಲ್ಲದಿದ್ದರೆ ಇಡೀ ಪಟೇಲ ಜಾತಿಯೇ ಗ್ರಾಮಾಧಿಕಾರಿಯಾಗಿರುವದು ಶಕ್ಯವಿಲ್ಲ. ಪಾಟೀಲಕಿಯೊಡನೆ ಸಂಬಂಧವಿಲ್ಲದ ಜಾತಿಗಳಿವೆ; ಪಾಟೀಲರ ಮನೆತನಗಳೂ ಇವೆ. ಉತ್ತರ ಕನ್ನಡ ಜಿಲ್ಲೆ ಮತ್ತು ಗುಜರಾತದ ಗೆಜೆಟಿಯರಗಳಲ್ಲಿ Patti ಮತ್ತು Patelia (ಪಟ್ಟಿ ಮತ್ತು ಪಟೇಲಿಯಾ) ದಂಥ ಲೋಕಜಾತಿಗಳಿರುವ ಉಲ್ಲೇಖವಿದೆ. ಪಟೇಲಿಯಾ ಜಾತಿಯವರು ಒಕ್ಕಲಿಗರೆಂದೂ ಅಲ್ಲಿ ಹೇಳಲಾಗಿದೆ.

ಕರ್ನಾಟಕದಲ್ಲಿ ಪಾಟೀಲ ಮತ್ತು ಗೌಡ ಈ ಶಬ್ದಗಳನ್ನು ಸಮಾನಾರ್ಥದಲ್ಲಿ ಉಪಯೋಗಿಸಲಾಗುತ್ತದೆ. ಗೌಡರೆಂದರೇ ಪಾಟೀಲರು. ಗೌಡ ಶಬ್ದದ ಸಂಬಂಧ ಗೌಳ-ಗೋವಳ-ಗೋಪಾಲ ಇವುಗಳಿಗೆ ಹೋಗಿ ತಲುಪುತ್ತದೆ. ಇದರ ಮೇಲಿಂದ ಪಟ್ಟಿಲ-ಪಾಡಿಲ-ಹಟ್ಟಿಕಾರ (ಗೌಳ)ರ ಸಂಬಂಧ ಒಂದು ರೀತಿಯಲ್ಲಿ ಸಿದ್ಧವಾಗುತ್ತದೆ. ಹಟಗಾರ-ಧನಗರ, ಪಟೇಲಿಯಾ ಮತ್ತು ಪಟ್ಟಿ ಈ ಲೋಕಜಾತಿಯಿಂದ ಪತ್ತಿಗಳು ಆರ್ಯೇತರ ಜನವಾಗಿರಬೇಕೆಂಬ ಊಹೆಯನ್ನು ಮಾಡಲು ಏನೂ ಅಡ್ಡಿಯಿಲ್ಲ. ಈ ಪತ್ತಿಗಳು ರುದ್ರನ ಉಪಾಸಕರು; ಅದರಂತೆ ಇಂದಿನ ಹಟಗಾರ-ಧನಗಾರರು ಕೂಡ ಶಿವಭಕ್ತರಾಗಿದ್ದಾರೆ. (ವಿಷ್ಣು-ಕೃಷ್ಣನ ಉಪಾಸನೆ ಆಮೇಲಿನದು) ಯಜುರ್ವೇದದ ಪತ್ತಿಗಳು ಆರ್ಯೇತರ ಜನಾಂಗವಾಗಿದ್ದರೆ ಆರ್ಯೇತರ ಭಾಷೆಗಳಲ್ಲಿಯ ಪಾಡಾ, ಪಾಟಕ, ಪಾರಾ, ಊರಾ, ಹಟ್ಟಿ, ಪಟ್ಟಣ ಮೊದಲಾದ ಗ್ರಾಮವಾಚಕ ಶಬ್ದಗಳು ಉತ್ತರಭಾರತದಲ್ಲಿ (ಆರ್ಯಾವರ್ತ) ಹೇಗೆ ಹೊಕ್ಕವೆಂಬ ಸಮಸ್ಯೆಗೆ ತಾನಾಗಿ ಪರಿಹಾರ ಒದಗುತ್ತದೆ.

ಛಾಂದೋಗ್ಯದಲ್ಲಿ ಮಿಡತೆಗಳ ಹಾವಳಿಯಿಂದ ಕುರುದೇಶದಲ್ಲಿ ದುರ್ಭಿಕ್ಷವಾದ ಸಂಗತಿಯ ಉಲ್ಲೇಖವಿದೆ. 'ಮಟಚಿಹತೇಷು ಕುರುಷು'...ಕುರುದೇಶದ ಮೇಲೆ ಮಿಡತೆಗಳು ದಾಳಿ ಮಾಡಿದ್ದರಿಂದ ಬೆಳೆಗಳು ಹಾಳಾದವು (೧-೧೦-೧) ಈ ವರ್ಣನೆಯಲ್ಲಿಯ 'ಮಟಚಿ' ಎನ್ನುವದು ಯಾವ ಪ್ರಾಣಿ ಎಂಬುದರ ಬಗ್ಗೆ ಸಂಶೋಧಕರು ಸಾಕಷ್ಟು ತಲೆಕೆಡಿಸಿಕೊಂಡು ಕೊನೆಯಲ್ಲಿ ಸರ್ವಾನುಮತದಿಂದ ಅದು ಮಿಡತೆ ಇರಬೇಕೆಂಬ ನಿರ್ಣಯಕ್ಕೆ ಬಂದಿದ್ದಾರೆ. ಈ ಶಬ್ದ ದ್ರಾವಿಡ ವರ್ಗದ ಭಾಷೆಯೊಳಗಿನದು. ಕನ್ನಡದಲ್ಲಿ ಇದಕ್ಕೆ 'ಮಿಡಿಚೆ' ಎಂದೇ ಕರೆಯುತ್ತಾರೆ. ಸಂಸ್ಕೃತದ 'ಮಟಚಿ' ಕನ್ನಡದ 'ಮಿಡಿಚೆ' ಇವೆರಡೂ ಹತ್ತಿರದ ಶಬ್ದಗಳಾಗಿವೆ.

ಡಾ|| ಬಾಗಚಿಯವರು 'ಮಟಚಿ' ಶಬ್ದ ಇರಾಣಿ ಭಾಷೆಯದಿರಬೇಕೆಂದು ಸೂಚಿಸಿದ್ದಾರೆ.[2] ಆದರೆ ಕಂದಮಿಳು ಭಾಷಾವರ್ಗದಲ್ಲಿ 'ಮಿಡಿ' ಎಂಬ ಧಾತುವಿಗೆ 'ಹಾರು' ಎಂಬ ಅರ್ಥವಿದೆ. ಅದರಿಂದ 'ಮಿಡಿಚೆ' ಎಂಬ ಶಬ್ದ ಸಿದ್ಧವಾಗಿದೆ. ಸಂಸ್ಕೃತದಲ್ಲಿ 'ಮಟಚಿ'ಯಂಥ ಈ ವರ್ಗದ ಒಂದೇ ಶಬ್ದವಿದ್ದಿದ್ದರೆ ಬೇರೆ ಮಾತಾಗುತ್ತಿತ್ತು. ಆದರೆ ಚಂದ್ರ, ಅರಣೀ, ಮರ್ಕಟದಂಥ ಅನೇಕ ಶಬ್ದಗಳು ಸಂಸ್ಕೃತದಲ್ಲಿ ಪ್ರವೇಶಮಾಡಿವೆ. ಡಾ|| ಸುನೀತಿಕುಮಾರ ಚಟರ್ಜಿ, ರೆ ಕಿಟ್ಟೆಲ್ ಮೊದಲಾದವರು ಈ ಬಗೆಯ ಶಬ್ದಗಳ ಒಂದು ಯಾದಿಯನ್ನೇ ತಯಾರು ಮಾಡಿದ್ದಾರೆ. ಅದರಿಂದಾಗಿ 'ಮಟಚಿ'ಯಂಥ ಒಂದು ಶಬ್ದಕ್ಕಾಗಿ ಇರಾಣಿ ಭಾಷೆಯ ಶರಣು ಹೋಗುವ ಆವಶ್ಯಕತೆ ಕಾಣುವದಿಲ್ಲ.

ಒಂದು ಕಾಲಕ್ಕೆ ಪತ್ತಿಗಳು ಉತ್ತರ ಭಾರತದಲ್ಲೆಲ್ಲ ತುಂಬಿದ್ದರು. ಸಂಶೋಧಕರೇ ಈ ನಿರ್ಣಯಕ್ಕೆ ಬಂದಿದ್ದಾರೆ. ಸಿಂಧ-ಬಲೂಚಿ-ಸ್ಥಾನದಲ್ಲಿ ಇಂದಿಗೂ ಜೀವಂತವಾಗಿರುವ ಬ್ರಾಹೂಯಿ ಭಾಷೆ ದ್ರಾವಿಡ ವರ್ಗದ್ದೆಂದು ನಿರ್ಣಯವಾಗಿದೆ. ಸಿಂಧುನದಿಯ ತೀರದಗುಂಟ ಒಂದು ಕಾಲಕ್ಕೆ ಆರ್ಯರಿಗಿಂತ ಮೊದಲು ದ್ರಾವಿಡ ವರ್ಗದ ಜನರ ವಸಾಹತುಗಳಿದ್ದವೆಂದು ರೆ. ಶರ್ಟ ಅದರ ಅಭಿಪ್ರಾಯವಿದೆ. Traces of Dravidian element in Sindhi ಎಂಬ ಲೇಖನದಲ್ಲಿ ಕೊನೆಗೆ ಅವರು ಈ ನಿರ್ಣಯಕ್ಕೆ ಬಂದು ಮುಟ್ಟಿದ್ದಾರೆ:-

> I believe they (all these things) point to the fact that the indus valley was a home to some part of the Dravidian race, before the Aryan immigration.[೮]

ಪ್ರಾಕೃತದ ವ್ರಜಭಾಷೆ ಮೊದಲು ನಿರ್ಮಾಣಗೊಂಡ ಗಂಗಾ ಯಮುನಾ ತೀರದಲ್ಲಿ ಆ ಕಾಲಕ್ಕೆ ದ್ರಾವಿಡ ವರ್ಗದವರ ವಸತಿ ಇತ್ತೆಂಬ ಡಾ॥ ರಾಮಕೃಷ್ಣ ಪಂತ ಭಾಂಡಾರಕರರ ನಿರ್ಣಯ ಒಪ್ಪಲೇಬೇಕಾಗಿದೆ.[೯] ಬಂಗಾಲ ಮೊದಲಾದ ಉತ್ತರದ ಪ್ರದೇಶಗಳಲ್ಲಿ ದ್ರಾವಿಡರ ವಸತಿ ಇತ್ತೆಂದು ಡಾ॥ ಸುನೀತಿ ಕುಮಾರ ಚಟರ್ಜಿಯವರು ಖಂಡಿತವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆರ್ಯೀಕರಣದ ಮೂಲಕವಾಗಿ ಈ ವರ್ಗ ಸಂಪೂರ್ಣವಾಗಿ ಅದೃಶ್ಯವಾಗಿದ್ದರೂ ಊರುಗಳ ಹೆಸರುಗಳು, ಭಾಷೆಯ ಒಲವುಗಳು, ನಡೆವಳಿಕೆಯಲ್ಲಿಯ ಕೆಲಪ್ರಕಾರಗಳು ಇವುಗಳ ಮೇಲಿಂದ ಈ ಸಂಗತಿಯ ಬಗ್ಗೆ ಯಾವದೇ ಸಂಶಯವಿಲ್ಲವೆಂದು ಅವರು ಹೇಳುತ್ತಾರೆ.

> The languages which were replaced by Magadhi Apabhransha in Bengal were Dravidian, Kol and Monkhmer, Tibeto-Barman... There are, again, some unmistakably Dravidian affinities in Bengali phonetics, Morphology, Syntax and vocabulary; but these agreements with Dravidian languages are not confined to Bangali alone, but are found in other North-indo-Aryan Languages also.[೧೦]

ಮಧ್ಯಯುಗದಲ್ಲಿ ನರ್ಮದೆಯ ದಕ್ಷಿಣಕ್ಕೆ ಪಟ್ಟಿ ಅಥವಾ ಪತ್ತಿ ಜನರು ಬೇರುಬಿಟ್ಟರು. ಇಂದಿಗೂ ವರ್ಹಾಡದಲ್ಲಿ ಹಟ್ಟಿಕಾರರು ಕಡಿಮೆ ಪ್ರಮಾಣದಲ್ಲಿಲ್ಲ. Hatakar-Dhangars seem to have been of considerable importance in Berar. ಹೀಗೆಂದು ಎಂಥೋವೆನ್ ಬರೆದಿದ್ದಾನೆ. ಪಟ್ಟಿ (ಹಟ್ಟಿ) ಅಥವಾ ಪಾಡಿ ಜನರ ವಸಾಹತಿನ ಪ್ರದೇಶಕ್ಕೆ ಪಟ್ಟಿ, ಹಟ್ಟಿ ಇಲ್ಲವೆ ಪಾಡಿ ಎಂದು ಹೆಸರು ಬರುವದು ಸಹಜವಾಗಿದೆ. ಮಹಾರಾಷ್ಟ್ರವೆಂದು ಸಂಸ್ಕೃತದಲ್ಲಿ ಹೆಸರು ಪಡೆದ ಪ್ರದೇಶದ ದೇಶೀಯ ಮೂಲ ಹೆಸರು ಮರ್ಹಾಟ ಎಂದು ಇದೆ. ಮರ್ಹಾಟ ಇಲ್ಲವೆ ಮರಹಟ್ಟಿದಲ್ಲಿಯ 'ಹಟ್ಟ' ಶಬ್ದ ವಿಚಾರಣೀಯವಾಗಿದೆ. ಇದರಿಂದಾಗಿ ಈ ಪ್ರದೇಶದ ಹೆಸರು 'ಹಟ್ಟ' ಎಂದು ಹೇಳದೆ ವಿಧಿಯಿಲ್ಲ. ನಾಶಿಕದ ತ್ರ್ಯಂಬಕೇಶ್ವರನಿಗೆ 'ಹಾಟಕೇಶ್ವರಿ' ಎಂಬ ಹೆಸರು ಇದೆಯೆಂದು ತಿಳಿದುಬಂದಿದೆ. 'ದ್ರಷ್ಟುಂ ತ್ರೈಲೋಕ್ಯ ಭರ್ತಾರಂ ತ್ರ್ಯಂಬಕಂ ಹಾಟಕೇಶ್ವರಂ' ಎಂದು 'ವಾಚಸ್ಪತ್ಯಕೋಶ'ದಲ್ಲಿ ಉಲ್ಲೇಖವಿದೆ. ಬಸವಪುರಾಣದಲ್ಲಿ ಶ್ರೀಶೈಲೇಶ್ವರನಿಗೆ ಹಾಟಕೇಶ್ವರನೆಂದು ಸಂಬೋಧಿಸಲಾಗಿದೆ. ಹಾಟ (ಕ) ದೇಶದ ಈಶ್ವರನಾದವನು ಹಾಟಕೇಶ್ವರ ಎಂದು ಸರಳವಾಗಿ ಅರ್ಥ ಹಚ್ಚಬಹುದಾಗಿದೆ. ಹಟ್ಟಿ ಅಥವಾ ಹಾಟಕ ಜನರ ಈಶ್ವರನೆಂದು ಬೇರೆ ರೀತಿಯಲ್ಲಿಯೂ ಅರ್ಥವಿಸಬಹುದಾಗಿದೆ. ಶ್ರೀ ರಾಮದಾಸರು ರಚಿಸಿದ ಒಂದು ಆರತಿ-ಪದದಲ್ಲಿ

'ಜಯ ದೇವಿ ಜಯ ದೇವಿ ಜಯ ವೇದಮಾತೆ...
ಹಾಟಕ ಕರನಾಟಕ ಕರುಣಾ ಕಲ್ಲೋಳಿ'

ಎಂಬ ಉಲ್ಲೇಖವಿದೆ. ಇದರಲ್ಲಿಯ ಹಾಟಕವೆನ್ನುವದು ಮಹಾರಾಷ್ಟ್ರದ ಪ್ರತಿಶಬ್ದವೇ ಹೌದು. ಶಿವ ವೆಂಕಟೇಶ್ವರನಾದರೆ ಪಾರ್ವತಿ ಹಾಟಕೇಶ್ವರಿಯಾಗುತ್ತಾಳೆ. ರಾಮದಾಸರು ಈ ಹಾಟಕೇಶ್ವರಿಯ ಕರುಣೆಯನ್ನು ಯಾಚಿಸಿದ್ದಾರೆ. 'ಹೇ ದೇವಿ ನಿನ್ನ ದೇಶಗಳ (ಹಾಟಕ-ಕರ್ನಾಟಕ) ಜನರನ್ನು ರಕ್ಷಿಸು' ಇದು ಮೇಲೆ ಉದ್ಧೃತವಾದ ಸಾಲಿನ ಅರ್ಥವಾಗಿದೆ. ಅದೇನೇ ಇದ್ದರೂ ನಾಸಿಕದಿಂದ ಶ್ರೀಶೈಲದವರೆಗೆ ಇರುವ ಪ್ರದೇಶಕ್ಕೆಲ್ಲ ಹಾಟಕ ದೇಶವೆಂದು ಕರೆಯಲು ಯಾವ ಅಭ್ಯಂತರವೂ ಇಲ್ಲ. ನರ್ಮದೆಯಿಂದ ಕಾವೇರಿಯ ವರೆಗೆ ರಾಷ್ಟ್ರಕೂಟರ ರಾಜ್ಯವಿತ್ತು. ಅವರ ರಾಜ್ಯಕ್ಕೆ 'ರಟ್ಟಪಾಡಿ' ಎಂದು ಹೆಸರಿತ್ತು. ಈ ಪಾಡಿ - ಹಾಡಿ (ಹಾಟಕ) ದೇಶದಲ್ಲಿ ಹಾಟಕೇಶ್ವರನ ತ್ರ್ಯಂಬಕ ಮತ್ತು ಶ್ರೀಶೈಲ ಕ್ಷೇತ್ರಗಳ ಸಮಾವೇಶವಾಗುತ್ತದೆ. ಯಜುರ್ವೇದದಲ್ಲಿಯ 'ಪತ್ತೀನಾಂಪತಿ'ಯೇ ಮುಂದೆ ಮಧ್ಯಯುಗದಲ್ಲಿ ಹಟ್ಟಿಯ ಹಾಟಕೇಶ್ವರನಾದನೆಂದು ಹೇಳಲು ಏನೂ ಅಡ್ಡಿಯಿಲ್ಲ.

ಈ ಹಾಟಕದೇಶವನ್ನು ಸುವರ್ಣಭೂಮಿ ಎಂದು ಕರೆಯುವದು ಸಾರ್ಥಕವಾಗಿದೆ. ಸಂಸ್ಕೃತದಲ್ಲಿ ಬಂಗಾರಕ್ಕೆ ಹಾಟಕ ಎಂಬ ಒಂದು ಪರ್ಯಾಯ ಶಬ್ದವಿದೆ. ಹಟ್ಟಿ ಅಥವಾ ಹಾಟದಲ್ಲಿ ಸಿಗುವದಕ್ಕೆ 'ಹಟಕ'ವೆಂದು ಹೆಸರು. ಹಾಟ ದೇಶದಲ್ಲಿ ನಿರ್ಮಾಣಗೊಳ್ಳುವ ವಿಶೇಷವಸ್ತುವೆಂದು ಬಂಗಾರಕ್ಕೆ ಹಾಟಕವೆಂದು ಹೆಸರು ಬಂದಿತು. ನಿಜಾಮ ಕರ್ನಾಟಕದಲ್ಲಿ ಹಟ್ಟಿ ಎಂಬ ಹೆಸರಿನ ಊರಲ್ಲಿ ಹಳೆಯದಾದ ಬಂಗಾರದ ಗಣಿ ಇದೆ. ಭಾರತದಲ್ಲಿಯ ಅತ್ಯಂತ ಆಳವಾದ ಗಣಿ ಎಂದರೆ ಇದೇ ಎಂದು ಸರ್ ಮಾರ್ಶಲರು ಮೆಹೆಂಜೊದಾರೋದ ಬಗ್ಗೆ ಬರೆದ ತಮ್ಮ ವಿಖ್ಯಾತ ಗ್ರಂಥದಲ್ಲಿ ಹೇಳಿದ್ದಾರೆ. ಕೊಡಗು (ಕರ್ನಾಟಕ) ಪ್ರಾಂತದಲ್ಲಿ ಹರಿಂಗಿ (ಹಿರಣ್ಯಾಂಗಿ) ಹೆಸರಿನ ಒಂದು ನದಿ ಇದೆ. ಈ ನದಿಗೆ ಕೆಲವು ಕಡೆಗೆ ಹಟ್ಟಿ ಹೊಳೆ, ಸುವರ್ಣಾವತಿ ಎಂಬ ಹೆಸರುಗಳಿವೆ. ಪೊನ್ನಗುಂದ (ಹುನಗುಂದ) ಮೊದಲಾದ ಸುವರ್ಣವಾಚಕ ಹೆಸರುಗಳು ಈ ಹಟ್ಟಿ ನಾಡಿನಲ್ಲಿ ಬೇಕಾದಷ್ಟಿವೆ. ಶ್ರೀಪುರ, ಶಿರೋಳ, ಶಿರೂರು ಮೊದಲಾದ ಶ್ರೀ ವಾಚಕ ಹೆಸರುಳ್ಳ ಊರುಗಳಂತೂ ಎಲ್ಲೆಡೆಗೆ ಹಬ್ಬಿಕೊಂಡಿವೆ. ಭಾರತದಲ್ಲಿಯ ಎಲ್ಲ ಬಂಗಾರದ ಗಣಿಗಳು ಈ ಹಾಟಕ ದೇಶದಲ್ಲಿಯೇ ದೊರೆಯುತ್ತವೆ.

ಕ್ರಿಸ್ತಶಕಕ್ಕಿಂತ ಮೊದಲೇ ಸಾತವಾಹನ, ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟರಂಥ ಪ್ರತಾಪಶಾಲಿಯಾಗಿದ್ದ ರಾಜರ ಆಳಿಕೆಯಲ್ಲಿ ಹಟ್ಟದೇಶದ ಇಡೀ ಭಾರತದ ಜನರ ಮನಸ್ಸನ್ನು ಆಕರ್ಷಿಸಿತು. ಹಟ್ಟದೇಶ ಭಾರತದ ಕೇಂದ್ರವಾಗಿ ಪರಿಣಮಿಸಿತ್ತು. ಮೇಲೆ ಹೇಳಿದ ರಾಜರ ಆಳಿಕೆಯ ಕಾಲದಲ್ಲಿ ಈ ಕೇಂದ್ರದತ್ತ ಐಶ್ವರ್ಯದ ಹೊಳೆ ಹರಿದು ಬಂದಿರಬೇಕೆಂಬ ಸಂಗತಿ ಸ್ಪಷ್ಟವಾಗಿದೆ. ಈ ಆಧಾರದ ಮೇಲಿಂದ ಕೂಡ ಹಾಟ ದೇಶಕ್ಕೆ ಸುವರ್ಣ ಭೂಮಿ ಎಂದು ಕರೆದಿರುವುದು ಸಾರ್ಥಕವಾಗಿದೆ. ಆದರೆ, ಮುಂದೆ ಹನ್ನೆರಡನೆಯ ಶತಮಾನದಲ್ಲಿ ಸೇವುಣರು ಮತ್ತು ಹೊಯ್ಸಳ ಯಾದವರ ಯಾದವೀ ಕಲಹದಲ್ಲಿ ಹಾಟದೇಶ ಎರಡು ತುಂಡಾಗಿ ಒಡೆದು ಹೋಯಿತು. ಮರ್‍ಹಾಟ, ಕನ್ನಡ ಎಂದು ಈ ದೇಶ ಇಬ್ಭಾಗವಾಯಿತು. ಮುಂದೆ ಇದೇ ಕಾರಣಕ್ಕಾಗಿ ಈ ದೇಶದ ವೈಭವಕ್ಕೆ ಅವನತಿ ಬಂದಿತು. ಸಾತವಾಹನ, ಚಾಲುಕ್ಯ, ರಾಷ್ಟ್ರಕೂಟರ ಕಾಲದ ವೈಭವ, ಕನಸಿನಂತಾಯಿತು. ಆಮೇಲೆ ಅಂಥ ಊರ್ಜಿತ ಸ್ಥಿತಿ ಈ ದೇಶಕ್ಕೆ ಎಂದೂ ಬರಲಿಲ್ಲ. ಇಂದು ಈ ಹಳೆಯ ಪಟ್ಟಿ-ಹಟ್ಟಿಗಳ ಸ್ಮೃತಿ ಪೂರ್ಣವಾಗಿ ಅಳಿದು ಹೋಗಿದೆ ಎಂದೆನಿಸುತ್ತದೆ. ಆದರೂ ಪಟ್ಟಿ-ಪಾಡಿ-ಹಟ್ಟಿ ಮೊದಲಾದ ಗ್ರಾಮನಾಮಗಳಿಂದ ಈ ನೆನಪು ಮಸುಕಾಗಿದ್ದರೂ ಸ್ವಲ್ಪ ಉಳಿದಿದೆ. ಇದೇ ನಮ್ಮ ಬಾಗ್ಯವೆಂದು ತಿಳಿಯಬೇಕಾಗುತ್ತದೆ.

ಈ 'ಮರಹಟ್ಟೆ'ಯರು ಯಾರು?

ಅರ್ಥ ಮತ್ತು ಭಾವಗಳು ಅವ್ಯಕ್ತವಾಗಿರುತ್ತವೆ. ಅವ್ಯಕ್ತ ಅರ್ಥದ ಅಭಿವ್ಯಕ್ತಿಗಾಗಿ ವ್ಯವಹಾರದಲ್ಲಿ ಬೇರೆ ಬೇರೆ ಪ್ರತೀಕಗಳನ್ನು ಉಪಯೋಗಿಸಲಾಗುತ್ತಿದೆ. ಚಿತ್ರ, ಆಕೃತಿ ಮೂರ್ತಿಗಳಂತೆ ಶಬ್ದ (ಧ್ವನಿ) ಕೂಡ ಇದೇ ಪ್ರಕಾರದ ಒಂದು ಸಂಕೇತವಾಗಿದೆ. ಚಿತ್ರ, ಮೂರ್ತಿಗಳಂಥ ಸಂಕೇತಗಳು ಬೇರೆ ಬೇರೆ ರೂಪಗಳಲ್ಲಿ ನಮ್ಮ ಕಣ್ಣಿಗೆ ಬೀಳುತ್ತವೆ. ಹರಪ್ಪಾ, ಮೊಹೆಂಜೊದಾರೋಗಳಲ್ಲಿ ದೊರೆತಿರುವ ಇಟ್ಟಿಗೆಯ ಮೇಲಿನ ಚಿತ್ರಗಳು ಕೂಡ ಒಂದು ಬಗೆಯ ಲಿಪಿ ಎಂದು ತಿಳಿದುಬಂದಿದೆ. ಆದರೆ, ಚಿತ್ರ ಅಥವಾ ಆಕಾರದಲ್ಲಿ ಅಡಗಿರುವ ಅರ್ಥ ಪರಂಪರೆಯ ವಿಚ್ಛೇದದಿಂದ ನಷ್ಟವಾದರೆ ಅವುಗಳಿಂದ ಅರ್ಥಬೋಧ ಆಗುವದೇ ಇಲ್ಲ. ಆದ್ದರಿಂದ ಮೊಹೆಂಜೊದಾರೋದಲ್ಲಿ ದೊರೆತಿರುವ ಚಿತ್ರಲಿಪಿಯ ಅರ್ಥವೇನೆಂಬುದು ತಜ್ಞರಿಗೆ ಇನ್ನೂ ಒಗಟಾಗಿ ಉಳಿದಿದೆ. ಲಕ್ಷ್ಮೀ, ಸರಸ್ವತಿ, ಶಿವ, ಅನಂತ (ಶೇಷಶಾಯಿ) ಮೊದಲಾದ ಮೂರ್ತಿಗಳ ಹಿಂದಿನ ಅಭಿಪ್ರೇತವಾದ ಅರ್ಥ ಇಂದು ಹೆಚ್ಚು ಕಡಿಮೆ ಮರವೆಗೆ ಬಿದ್ದಿದೆ. ಇಂಥಲ್ಲಿ ಮನುಷ್ಯನಿಗೆ ತನ್ನ ಅಜ್ಞಾನದ ಅರಿವಾಗಲು ತಡವಾಗುವದಿಲ್ಲ.

ಆದರೆ, ಭಾಷೆಯಲ್ಲಿಯ ಶಬ್ದ ಸಂಕೇತಗಳ ಮಾತು ಹಾಗಲ್ಲ. ನಮ್ಮ ಆಡುಮಾತಿನಲ್ಲಿಯ ಶಬ್ದಗಳು ಕಿವಿಗೆ ಬಿದ್ದೊಡನೆ ಅವುಗಳಿಂದ ಅರ್ಥಬೋಧವಾಗುವಂತೆ ಅನಿಸುತ್ತದೇನೋ ನಿಜ. ಮತ್ತು ಈ ಅರ್ಥಬೋಧ ಸಂಪೂರ್ಣವಾಗಿ ಸುಳ್ಳೆಂದು ಹೇಳುವದೂ ಸಾಧ್ಯವಿಲ್ಲ. ಏಕೆಂದರೆ ಒಂದು ವಿಶಿಷ್ಟ ಕಾಲಕ್ಕೆ ಅದಕ್ಕೊಂದು ವಿಶಿಷ್ಟ ಅರ್ಥವಿರುತ್ತದೆ. ಆದರೆ, ಆ ವಿಶಿಷ್ಟ ಪದ ಸಮುಚ್ಚಯಕ್ಕೆ ಎಲ್ಲ ಕಾಲಕ್ಕೂ, ಎಲ್ಲೆಡೆಗೂ ಅದೇ ಅರ್ಥವಿರುತ್ತದೆಂದು ತಿಳಿಯುವದು ಅತ್ಯಂತ ಅಪಾಯಕಾರಿಯಾಗಿದೆ. ಶಬ್ದದ ಅರ್ಥ ಯುಗಮಾನಕ್ಕೆ ತಕ್ಕ ಹಾಗೆ ಬದಲಾಗುತ್ತದೆ ಎಂಬ ಮಾತು ಬಹಳಷ್ಟು ಜನರಿಗೆ ತಿಳಿಯದ ಕಾರಣ ಎಷ್ಟೋ ಸಾರೆ ವೈಚಾರಿಕ ಗೊಂದಲ ಉಂಟಾಗುತ್ತದೆ.

ಉದಾಹರಣೆಗೆ ಪ್ರಸ್ತುತ 'ಮರಾಠಾ' ಶಬ್ದವನ್ನೇ ನೋಡಬಹುದು. ಇಂದು ಮಹಾರಾಷ್ಟ್ರದಲ್ಲಿ ನೆಲೆಯಾಗಿರುವ ಪ್ರತಿಯೊಬ್ಬನೂ ತನ್ನನ್ನು 'ಮರಾಠಾ' ಎಂದು ತಿಳಿದುಕೊಳ್ಳುತ್ತಾನೆ. ಹೀಗೆ ತಿಳಿದುಕೊಳ್ಳುವದು ಯೋಗ್ಯವೂ ಆಗಿದೆ. ಆದರೆ, ಪ್ರಾಚೀನ ಕಾಲದಲ್ಲೂ ಇದೇ ಅರ್ಥವಿದ್ದಿತು ಎಂಬ ತಿಳುವಳಿಕೆ ಮಾತ್ರ ಭ್ರಾಮಕವಾಗಬಹುದು. ಮಹಾರಾಷ್ಟ್ರದೊಳಗಿನ ಪ್ರತ್ಯೇಕ ನಾಗರಿಕ ಹಿರಿದಾದ ಅಭಿಮಾನದಿಂದ ತಾನು 'ಮರಾಠಾ' ಎಂದು ಹೇಳಿಕೊಳ್ಳಲು ಪ್ರಾರಂಭಿಸಿದ್ದರೂ ಸುಮಾರು ಐವತ್ತು ಅಥವಾ ಎಪ್ಪತ್ತೈದು ವರ್ಷಗಳ ಹಿಂದೆ ಈ ಪರಿಸ್ಥಿತಿ ಇರಲಿಲ್ಲವೆಂಬುದು ಎಷ್ಟೋ ಜನರಿಗೆ ಗೊತ್ತು ಕೂಡ ಇರಲಿಕ್ಕಿಲ್ಲ. ಆ ಕಾಲಕ್ಕೆ 'ಮರಾಠಾ' ಶಬ್ದದಿಂದ ಧ್ವನಿತವಾಗುತ್ತಿದ್ದ ಅರ್ಥ ಈಗ ಇರುವ ಅರ್ಥಕ್ಕಿಂತ ನಿಶ್ಚಿತವಾಗಿ ಭಿನ್ನವಾಗಿತ್ತು. ಆ ಕಾಲದಲ್ಲಿ ಬ್ರಾಹ್ಮಣರು 'ಮರಾಠಾ' ವರ್ಗದಲ್ಲಿ ಸಮಾವೇಶವನ್ನು

ಪಡೆದಿರಲಿಲ್ಲ. ಬಹುಶಃ ಆಗ ಬ್ರಾಹ್ಮಣರು ತಮ್ಮನ್ನು ಮಹಾರಾಷ್ಟ್ರೀಯರೆಂದು ಕರೆದುಕೊಳ್ಳುತ್ತಿದ್ದಿರಬೇಕು. ಯಾಕಂದರೆ 'ಮರಾಠಾ' ಎನ್ನುವದು ಒಂದು ವಿಶಿಷ್ಟ ಜಾತಿಯ ಹೆಸರಾಗಿತ್ತು, ಈಗಲೂ ಇದೆ.[೧೧]

ಇಂದಿನ ಮರಾಠಾ ಜನರ ಪೂರ್ವಜರನ್ನು ಪ್ರಾಕೃತ ಗ್ರಂಥಗಳಲ್ಲಿ ಮರಹಟ್ಟೆ ಎಂದು ಕರೆಯಲಾಗಿದೆ. ಅದೇ ಸಂಸ್ಕೃತ ಗ್ರಂಥಗಳಲ್ಲಿ ಇವರನ್ನು ಮಹಾರಾಷ್ಟ್ರಿಕರೆಂದು ಕರೆಯಲಾಗಿದೆ. ಮಧ್ಯದಲ್ಲಿ ಮಹಾರಾಷ್ಟ್ರೀಯರಲ್ಲಿ ಬ್ರಾಹ್ಮಣರ ಸಮಾವೇಶವಾಗುತ್ತಿದ್ದರೂ ಪ್ರಾಚೀನ ಕಾಲದಲ್ಲಿ ಮಹಾರಾಷ್ಟ್ರಿಕ ಶಬ್ದಕೂಡ ಮರಹಟ್ಟೆ ಅಥವಾ ಮರಾಠ ಇವರ ಸಲುವಾಗಿಯೇ ಬಳಸಲಾಗುತ್ತಿತ್ತು. ಹತ್ತನೆಯ ಶತಮಾನದ ಕವಿ ರಾಜಶೇಖರ ತಾನು ಮಹಾರಾಷ್ಟ್ರೀಯ ಕುಲವಧುವನ್ನು ಮದುವೆಯಾಗಿದ್ದೆನೆಂದು ಹೇಳುತ್ತಾನೆ. ಆ ಮಹಾರಾಷ್ಟ್ರೀಯ ಸುಂದರಿ ಚಾಹುಆಣ (ಚವ್ಹಾಣ) ಕುಲದವಳೆಂದು ತಿಳಿಸುತ್ತಾನೆ.

"ಚಾಹು ಆನ ಕುಲ ಮೌಲಿಮಾಲಿಕಾ ರಾಜಶೇಖರ ಕವೀಂದ್ರ ಗೇಹಿನೀ" (ಕರ್ಪೂರ ಮಂಜರೀ)

ಇದರ ಮೇಲಿಂದ ಮರಾಠೆ ಅಥವಾ ಮಹಾರಾಷ್ಟ್ರೀಯ ಶಬ್ದಕ್ಕಿರುವ ವ್ಯಾಪಕಾರ್ಥ ಆಗ ಇರಲಿಲ್ಲ. "ದೃಢ ಲಘು ಶ್ಯಾಮಾಂಗಾನ್ ಸಹ ಮಾನಾನ್ ಅಭಿಮಾನಾನ್...... ಕಲಹಶೀಲಾಂಶ್ಚ" ಎಂದು ಒಬ್ಬ ಅಪಭ್ರಂಶ ಕವಯಿತ್ರಿಯು ವರ್ಣಿಸಿದ ಪ್ರಾಚೀನ 'ಮರಹಟ್ಟೆ' ಅಥವಾ 'ಮಹಾರಾಷ್ಟ್ರಿಕ' ಈಗಿನ ಉಪಯೋಗದಲ್ಲಿ ಇಲ್ಲವೆಂದು ಹೇಳಬೇಕಾಗುತ್ತದೆ.

'ಮಹಾರಾಷ್ಟ್ರ' ಶಬ್ದದಿಂದ ವಿಶಿಷ್ಟ ಜನರ ಅರ್ಥ ಬೋಧವಾಗುವದಿಲ್ಲ, ಈ ಶಬ್ದ ಪ್ರದೇಶವಾಚಕವಾಗಿದೆ. ಆದ್ದರಿಂದ, ಈ ಜನರ ಪ್ರಾಚೀನ ಜನವಾಚಕ ಶಬ್ದ 'ಮಹಾರಾಷ್ಟ್ರಿಕ'ವಲ್ಲ. ಇದರ ವಿವೇಚನೆ ಮೊದಲ ಪ್ರಕರಣದಲ್ಲಿ ಬಂದಿದೆ. 'ಮಹಾರಾಷ್ಟ್ರ' ಶಬ್ದವನ್ನು ಹುಟ್ಟಿಸಿದ ಇನ್ನೊಂದು ಶಬ್ದವಿರಬೇಕು, ಅದು 'ಮರಹಟ್ಟ' ಇಲ್ಲವೆ 'ಮರ್ಹಾಟ'ವಿರಬೇಕೆಂದು ಈ ಮೊದಲು ಸ್ಪಷ್ಟಗೊಳಿಸಿದೆ. ಈಗ ಮರಹಟ್ಟೆ ಜನರ ಪೂರ್ವಪರಂಪರೆ ಏನಿರಬೇಕೆಂಬ ಶೋಧ ಆಗಬೇಕು. 'ಮರಹಟ್ಟ'ದಲ್ಲಿ 'ಹಟ್ಟ'ವೆನ್ನುವದು ಪ್ರದೇಶವಾಚಕ. ಇದು ನಿಶ್ಚಿತವಾದ ಅರ್ಥ. 'ಝಾಡ ಮಂಡಳ'ದಲ್ಲಿಯ ಮಂಡಳವೆಂದರೆ 'ಹಟ್ಟ' ಮತ್ತು 'ಝಾಡ' ಎಂದರೆ 'ಮರ' ಎಂದು ಇದರ ಅನುವಾದ. ವರ್ಹಾಡ ಪ್ರದೇಶದಲ್ಲಿ ಝಾಡೇ ಎಂಬ ಹೆಸರಿನ ಅನೇಕ ಜಾತಿಯ ಜನರಿದ್ದಾರೆ.[೧೨] 'ಝಾಡಿ' ಅಥವಾ 'ಝಾಡೇ' ಈ ಶಬ್ದಗಳ ಅರ್ಥ ರಸೆಲ್ ಮತ್ತು ಹೀರಾಲಾಲರ ಪ್ರಕಾರ ಹೀಗಿದೆ.

"A name often applied to the oldest residents of a caste in any locality of the Central Provinces".

ಇದರಿಂದ 'ಝಾಡೇ' ಅಂದರೆ ಮೂಲ ನಿವಾಸಿಗಳು ಎಂಬ ಅರ್ಥ ಸ್ಪಷ್ಟವಾಗಿದೆ. 'ಮರಹಟ್ಟೆ', 'ಮರ' (ಝಾಡೇ) ಈ ಜನರು ವರ್ಹಾಡದ ಮೂಲ ನಿವಾಸಿಗಳೆಂದು ಇದರ ಅರ್ಥವಾಗಿದೆ. ಶ್ರೀ ಸಮರ್ಥ ರಾಮದಾಸರ ದೇವಿಯ ಒಂದು ಆರತಿ ಹಾಡಿನಲ್ಲಿ 'ಹಾಟಕ'ವೆಂದು ಮಹಾರಾಷ್ಟ್ರವನ್ನು ಕರೆಯಲಾಗಿದೆ. 'ಹಟ್ಟ' ದೇಶದ ಈ ಜನರನ್ನು 'ಹಟ್ಟೆ' ಎಂದು ಕರೆದರೆ ಏನೂ ತಪ್ಪಾಗುವದಿಲ್ಲ. 'ಹಟ್ಟೆ' ಎಂಬ ಹೆಸರು ಕೆಲವರಿಗೆ ಕಾಲ್ಪನಿಕವೆಂದು ಕಾಣಬಹುದು. ಆದರೆ, ಸುದೈವದಿಂದ ಹಟಗಾರ ಜನರು ಈ ಪ್ರದೇಶದಲ್ಲಿ ಇನ್ನೂ ಪ್ರಮುಖರಾಗಿದ್ದಾರೆ. ಇಂದು 'ಹಟಗಾರ' ಶಬ್ದ ಹಿಂದಾಗುತ್ತಿದ್ದರೂ ಈ ಭಾಗದ ದೇಶಮುಖ ಮತ್ತು ಪಾಟೀಲರು ಹಟಗಾರ ವಂಶೀಯರೇ ಆಗಿರುವದು ಈ ಭಾಗದ ಜನಜಾತಿಯ ವಾಸ್ತವ ವರ್ಣನೆ ಮಾಡುವ ಗ್ರಂಥಗಳಿಂದ ತಿಳಿಯುತ್ತದೆ.[೧೩] ಈ ರೀತಿಯಲ್ಲಿ ಹಟಗಾರ ವಂಶೀಯರೆಂದು ಗುರುತಿಸಲಾಗುವ ಅನೇಕ ಮನೆತನಗಳಿವೆ. 'ಹಟಗಾರ' ಶಬ್ದದಲ್ಲಿಯ ವೃತ್ತಿವಾಚಕವಾದ 'ಕಾರ' ಅಥವಾ 'ಗಾರ' ದಂಥ ತದ್ಧಿತ ಪ್ರತ್ಯಯವನ್ನು ಬಿಟ್ಟರೆ ಉಳಿಯುವದು. 'ಹಟ' (ಹಟ್ಟ) ಶಬ್ದ ಮಾತ್ರ. ಹಟ್ಟವೆಂದರೆ ಗೌಳವಾಡಿ; ಹಟ್ಟೆ ಅಂದರೆ ಗವಳಿಗಳು, ಧನಗರ, ಧನವಡೆ, ಈ ಹೆಸರುಗಳು 'ಹಟಗಾರ' ಶಬ್ದದ ಪರ್ಯಾಯಗಳಾಗಿವೆ.

ಕರ್ನಾಟಕದಲ್ಲಿಯೂ ಹಟ್ಟಿಕಾರ ಜನರಿದ್ದಾರೆ. ಈ ಭಾಗದಲ್ಲಿ ಹಟ್ಟಿಕಾರ-ದನ (ಧನ)ಗಾರರಿಗೆ ಇನ್ನೊಂದು ಪರ್ಯಾಯ ಶಬ್ದ ರೂಢವಾಗಿದೆ. ಇವರನ್ನು 'ಹಾಲುಮತ'ದವರೆಂದು ಕರೆಯುವ ರೂಢಿ ಇದೆ. ಹಾಲಿನ

ವೃತ್ತಿಯನ್ನು ಮಾಡುವ ಧನಗರ-ಗವಳಿಗಳೆಂದು ಇದರ ಅರ್ಥವಾಗುತ್ತದೆ. ಇದರಿಂದ ಈ ಹಾಲುಮತದವರ, ಹಟಗಾರ, ಧನಗರರ ಪೂರ್ವಪರಂಪರೆಯ ಕಲ್ಪನೆ ಮಾಡಿಕೊಳ್ಳುವದು ಸಾಧ್ಯವಾಗಿದೆ.

'ಮರಹಟ್ಟ' ಶಬ್ದ ಕನ್ನಡದ್ದು ಎಂದು ಹಿಂದೆ ಹೇಳಲಾಗಿದೆ. ಕನ್ನಡದಲ್ಲಿ 'ಹ' ಕಾರ ವರ್ಜ್ಯವಾಗಿದ್ದು ಸಂಸ್ಕೃತ ಭಾಷೀಯರ ಸಂಪರ್ಕದಿಂದ 'ಹ' ಕಾರದ ಹೊಸ ಉಚ್ಚಾರ ರೂಢವಾಯಿತು. ಆದ್ದರಿಂದ ಹಿಂದಕ್ಕೆ ಹೋದಂತೆ 'ಹಟ್ಟಿ' ಶಬ್ದದಲ್ಲಿಯ 'ಹ'ಕಾರದ ಬದಲು 'ಪ' ಕಾರವಿರುವದು ಸ್ವಾಭಾವಿಕವಾಗಿದೆ. ಯಜುರ್ವೇದದಲ್ಲಿಯ 'ಪತ್ತಿ' ಜನರ ಸಂಬಂಧ ಈ 'ಹಟ್ಟಿ' ಜನರೊಡನೆ ಇರುವದೆಂಬುದು ಕೆಳಗಿನ ಪ್ರಮಾಣಗಳಿಂದ ಗೊತ್ತಾಗುವಂತಿದೆ. ಮಹಾಭಾರತ ಮತ್ತು ಭಾಗವತದಲ್ಲಿಯ ವರ್ಣನೆಯ ಮೇರೆಗೆ ಯಾದವರು ಗೋವಳರಾಗಿದ್ದರೆಂಬ ವಿಷಯ ಸರ್ವಮಾನ್ಯವಾಗಿದೆ. 'ಯಾದವಂ ಗೋಮಹಿಷಾದಿಕೇ ಧನೇ'. ಕೋಶದಲ್ಲಿಯ ಈ ವಿವರಣೆಯಿಂದ ಈ ಹೆಸರು ಸಾರ್ಥಕವಾಗಿದೆಯೆಂಬುದರ ಅರಿವಾಗುತ್ತದೆ. ಯಾದವರಿಗೆ ಅಂಧಕ-ವೃಷ್ಣಿಕುಲವೆಂಬ ಇನ್ನೊಂದು ಹೆಸರಿದ್ದಂತೆ ಪುರಾಣಗಳು ಮತ್ತು ಪಾಲೀ ಗ್ರಂಥಗಳಿಂದ ಗೊತ್ತಾಗುತ್ತದೆ. 'ಅಂಧನ್ ಶಬ್ದಕ್ಕೆ ಯಾಸ್ಕನು ತನ್ನ ನಿರುಕ್ತದಲ್ಲಿ ರಸ, ಅನ್ನ ಹೀಗೆ ಅರ್ಥ ಹೇಳಲಾಗಿದೆ. ಅನ್ನದಂಥ ರಸವೆಂದರೆ ಹಾಲು ಎಂದೇ ಅರ್ಥ ಇಲ್ಲಿ ಅಭಿಪ್ರೇತವಾಗುತ್ತದೆ. ಪ್ರಾಚೀನ ಸಂಸ್ಕೃತದಲ್ಲಿ ಈ ಶಬ್ದವು ಪರಭಾಷೆಯಿಂದ ಬಂದಿರಬೇಕೆಂದು ತೋರುತ್ತದೆ. ಇದೇ ರೀತಿ ರಸಾರ್ಥಕವಾದ ಕನ್ನಡದ ಹಾಲು ಕೂಡ ದುಗ್ಧವಾಚಕವಾಗಿದೆ. ಅಂಧ, ಅಂಧಕವೆಂದು ಕರೆಯುತ್ತಿದ್ದ ಅಂಧಕ-ವೃಷ್ಣಿಗಳು ಯಾದವ ವಂಶೀಯ ಧನಗರರಾಗಿದ್ದರು. ತಮಿಳು ಪ್ರಾಚೀನ ಗ್ರಂಥಗಳಲ್ಲಿ ಅಂದರು ಜನರ ಉಲ್ಲೇಖವಿದೆ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರರ ಅಭಿಪ್ರಾಯದ ಮೇರೆಗೆ ಅಂಡರ್ ಮತ್ತು ಅಂಧಕರು ಒಬ್ಬರೇ ಆಗಿದ್ದರು.[೧೪] ಇವರೇ ಆಂಧ್ರರಾಗಿದ್ದಿರಬಹುದೆಂದು ಅವರು ಸೂಚಿಸಿದ್ದಾರೆ. ಕರ್ನಾಟಕದ ಧನಗರರಲ್ಲಿ ಅಂಡೆ (ಕುರುಬ) ರೆಂಬ ಒಂದು ಉಪಜಾತಿಯಿದೆ. ಗವಳಿಗಳನ್ನು ಇಡೈಯರ್ ಎಂದು ತಮಿಳಿನಲ್ಲಿ ಕರೆಯುತ್ತಾರೆ. ಇಡಾ-ಇಳಾ-ಇರಾ (ರಸ, ಹಾಲು) ಇದರ ವ್ಯಾಪಾರ ಮಾಡುವವರು ಇಡೈಯರ್ ತಮಿಳಿನ ಇಡೈಯರ್ ಮತ್ತು ಕನ್ನಡದ ಹಾಲು ಮತದವರು ಈ ಹೆಸರುಗಳು ಹಟಗಾರ-ಧನಗರರ ಪರ್ಯಾಯ ಶಬ್ದಗಳಾಗಿವೆ. ಅಂಡೆ ಇದು ಹಟಗಾರ-ಧನಗರವೇ ಆಗಿದ್ದರೆ ಆಂಧ್ರರೂ ಮೂಲದಲ್ಲಿ ಇದೇ ವೃತ್ತಿಯವರಾಗಿರಬೇಕು. ಅಂಡರ್ ಮತ್ತು ಅಂಡೆ ಈ ಜಾತಿಯ ಜನರು ತಮಿಳುನಾಡು ಮತ್ತು ಕರ್ನಾಟಕದಲ್ಲಿರುವದರಿಂದ ಆಂಧ್ರ ಶಬ್ದದ ಮೇಲಿಂದ ಇವರ ತವರು ತೆಲುಗು ದೇಶದಲ್ಲಿರಬೇಕೆಂದು ಗೊತ್ತಾಗುತ್ತದೆ. ಅಂಧಕವೃಷ್ಣಿಗಳ ಪೂರ್ವಪರಂಪರೆ ಹೀಗೆ ಗೋಪಾಲನ ವೃತ್ತಿಗೆ ಹೋಗಿ ಮುಟ್ಟುತ್ತದೆ. ವೃಷ್ಣಿ ಶಬ್ದಕ್ಕೆ ಆಡು ಎಂಬ ಅರ್ಥವಿದ್ದು ಅವರ ಪೂರ್ವಜರ ಧನಗರ ವೃತ್ತಿಗೆ ಅದು ಸೂಚಕವಾಗಿರುವ ಸಾಧ್ಯತೆ ಇದೆ.

ಈಗಿನ ಮರಾಠರ ಅನೇಕ ಕುಲಗಳ ಸಂಬಂಧ ಯಾದವ ವಂಶಕ್ಕೆ ಹೋಗಿ ಮುಟ್ಟುತ್ತದೆ. 'ಜಾಧವ' ಎಂಬ ಹೆಸರು ಯಾದವ ಶಬ್ದದ ಒಂದು ರೂಪವಾಗಿದೆ. ಮರಾಠಾ ಧನಗರರಲ್ಲಿ ಹಂಡೇವಜೀರ ಎಂಬ ಒಂದು ಉಪಜಾತಿಯಿದೆ. ಮರಾಠರಲ್ಲಿ 'ಭೋಜೆ'ಗಳೂ ಇದ್ದಾರೆ. ಭೋಜಕವಂಶ ಯಾದವವಂಶದ ಒಂದು ಶಾಖೆಯಾಗಿದೆ. ಹೊರಗಿನ ಹಲವಾರು ಜಾತಿಗಳು ಯಾದವರಲ್ಲಿ ಮತ್ತು ಮರಾಠರಲ್ಲಿ ಸೇರಿಕೊಂಡಿದ್ದರೂ ಅವರ ಮೂಲಪಿಂಡವಾದ ಅತಿ ಪ್ರಾಚೀನ ಗುಂಪು, ಆರ್ಯ ಪೂರ್ವಕಾಲದ ಪತ್ತಿ ಜನರ ಪೈಕಿ ಹಟಗಾರ-ಧನಗರರ ಶಾಖೆಯಾಗಿತ್ತೆಂದು ತೋರುತ್ತದೆ. ಡಾ|| ಪ್ರಿಲ್‌ಸ್ಕಿಯವರು (Dr. Jean przyluski) ತಮ್ಮ Name of the God Vishnu & Krishna Legend ಎಂಬ ಲೇಖನದಲ್ಲಿ ಅಂಧಕ ದೃಷ್ಣಿಗಳ ಯಾದವವಂಶ ಇದು ಆರ್ಯೇತರ (ದ್ರಾವಿಡ ವರ್ಗ) ವಾಗಿತ್ತೆಂದು ಸಂಸ್ಕೃತ ಮತ್ತು ಪಾಲೀ ಭಾಷೆಗಳಲ್ಲಿಯ ಪುರಾಣ ಮತ್ತು ಜಾತಕ ಕಥೆಗಳ ಅನೇಕ ಆಧಾರಗಳಿಂದ ಸಿದ್ಧಪಡಿಸಿದ್ದಾರೆ.[೧೫] ವಿಷ್ಣು-ಕೃಷ್ಣರ ಸಂಬಂಧದಲ್ಲಿ ಬೇರೆ ದಿಕ್ಕಿನಿಂದ ಸಂಶೋಧನೆ ಮಾಡಿದಾಗ ಗಂಗಾ-ಯಮುನಾ ತೀರದಲ್ಲಿ (ಮಥುರಾ) ವಸಾಹತು ಮಾಡಿಕೊಂಡಿದ್ದ ಯಾದವ ಮನೆತನಗಳು ಆರ್ಯೇತರ (ದ್ರಾವಿಡ) ವರ್ಗದವರಾಗಿದ್ದರೆಂಬ ನಿರ್ಣಯಕ್ಕೆ ಅವರು ಬಂದು ಮುಟ್ಟಿದ್ದಾರೆ. ಪ್ರೊ|| ಪ್ರಿಲ್‌ಸ್ಕಿಯವರ

ಈ ನಿರ್ಣಯ ಪತ್ತಿಜನರ ಬಗ್ಗೆ ಈ ಮೊದಲು ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ ಪೋಷಕವಾಗಿದೆ. ಇದರಿಂದಾಗಿ ಪತ್ತಿ (ಪಟ್ಟಿ) ಈ ಆರ್ಯೇತರ ವರ್ಗದ ಶಬ್ದದಿಂದ ನಿರ್ದಿಷ್ಟರಾಗುವ ಜನ ಮತ್ತು ಪ್ರೊ॥ ಪ್ರಿಲ್‌ಸ್ಕಿಯವರ ಸಂಶೋಧನೆಯ ಪ್ರಕಾರ ಆರ್ಯೋತರರಾಗಿರುವ ಅಂಧಕ-ವೃಷ್ಣೀಯ ಯಾದವಕುಲ, ಈ ಗೋಪಾಲಕರು ಒಂದೇ ಎಂದು ತಿಳಿಯಲು ಯಾವ ಅಡ್ಡಿಯೂ ಇಲ್ಲ.

ಯಜುರ್ವೇದ (ರುದ್ರಾಧ್ಯಾಯ)ದಲ್ಲಿ ಪತ್ತಿಗಳ ಹೆಸರು ಇದೆ. ಯಜುರ್ವೇದದ ಈ ಪತ್ತಿಗಳನ್ನು ಋಗ್ವೇದ ಯಾವ ಹೆಸರಿನಿಂದ ಕರೆಯುತ್ತದೆ? ಋಗ್ವೇದದಲ್ಲಿ ಯದುಗಳ ಹೆಸರನ್ನು ಹದಿನಾಲ್ಕು ಸಾರೆ ಉಲ್ಲೇಖಿಸಲಾಗಿದೆ. ಋಗ್ವೇದದಲ್ಲಿಯ ಯದುಗಳೇ ಮುಂದೆ ಮಹಾಭಾರತದ ಯಾದವರು ಎಂಬುದರ ಬಗ್ಗೆ ಅನೇಕ ತಜ್ಞರ ಒಪ್ಪಿಗೆಯಿದೆ. ಮಹಾಭಾರತದ ಯಾದವರು ಆರ್ಯೇತರ ಪತ್ತಿಗಳಾಗಿದ್ದರೆ ಋಗ್ವೇದದ ಯದುಗಳು ಕೂಡ ಆರ್ಯೇತರರಾಗಿರಲಿಕ್ಕೆ ಸಾಕು. ಅಲ್ಲದೆ, ಋಗ್ವೇದದ ಯದುಜನರು ಆರ್ಯೇತರ (ದ್ರಾವಿಡ ವರ್ಗ) ರಾಗಿದ್ದರೆಂದು ಕೆಲವು ವಿದ್ವಾಂಸರ ಅಭಿಪ್ರಾಯವಿದೆ. "ನಿ ತುರ್ವಶಂ ನಿ ಯಾದ್ವಂ ಶಿಶೀಯ್ಯತಿಥಿ ಗ್ವಾಮ ಶಂ ಸ್ಯಂ ಕರಿಷ್ಯತ್" (೭-೧೬,೮) 'ಇಂದ್ರನೇ ನೀನು ತುರ್ವಶ ಮತ್ತು ಯಾದವರನ್ನು ನಿಗ್ರಹಿಸು' ಎಂಬ ಪ್ರಾರ್ಥನೆ ಈ ಮಂತ್ರದಲ್ಲಿದೆ. ಅಲ್ಲದೆ "ದಾಸಾ..... ಯದುಃ ತುರ್ವಃ" (೧೦-೬೨-೧೦) ಈ ಉಲ್ಲೇಖಗಳಲ್ಲಿ ಮತ್ತು ೯ನೆಯ ಮಂಡಲದಲ್ಲಿ (೬೨-೨) ಯದು. ತುರ್ವಶುಗಳು ಆರ್ಯರ ಶತ್ರುವಾಗಿದ್ದ ಶಂಬರಾಸುರನ ಪಕ್ಷದಲ್ಲಿದ್ದಾರೆ. ಇದರ ಮೇಲಿಂದ ಯದು (ತುರ್ವಶ) ವಂಶ ಮೂಲದಲ್ಲಿ ಆರ್ಯೇತರವೆಂಬ ಊಹೆ ಬಲವತ್ತರವಾಗುತ್ತದೆ. ಯದು ತುರ್ವಶುಗಳ ಜೊತೆಗೆ ಇನ್ನೂ ಮೂರು ಹೆಸರುಗಳು ಕೆಲವು ಕಡೆಗೆ ಪ್ರಮುಖವಾಗಿ ಬರುತ್ತವೆ. ಅನು, ದ್ರುಹ್ಯು, ಪೂರು ಈ ಮೂರು ಹೆಸರುಗಳು ಕೂಡಿಕೊಂಡು ಇವರನ್ನು 'ಪಂಚಜನ'ರೆಂದು ಗುರುತಿಸುವ ರೂಢಿಯಿದೆ. ಮಹಾಭಾರತದ ಉಲ್ಲೇಖದ ಪ್ರಕಾರ ಈ ಜನ ಒಂದೇ ಮನೆತನಕ್ಕೆ ಸೇರಿದ್ದ ದಾಯಾದಿಗಳೆಂದು ತೋರುತ್ತದೆ. ಇವರು, ಯಯಾತಿಯ ಐದು ಮಕ್ಕಳೆಂದು ಮಹಾಭಾರತ ಹೇಳುತ್ತದೆ. ಇವರಲ್ಲಿ ಹಿರಿಯನೆಂದರೆ ಪೂರು. 'ಮರಹಟ್ಟ'ರಿಂದ ಹಿಂದೆ ಹೋಗುತ್ತ 'ಹಟ್ಟಿಕಾರ' ಪತ್ತಿಜನರ ವರೆಗೆ ನಾವು ಬಂದು ಮುಟ್ಟುತ್ತೇವೆ. ಮರಾಠರಲ್ಲಿಯ ಭೋಜ ಜಾಧವ-ಯಾದವರ ಕುಲಪರಂಪರೆ ಮಹಾಭಾರತದ ಯಾದವಕುಲದ ವರೆಗೆ ಹೋಗಿ ತಲುಪುತ್ತದೆ. ಮರಹಟ್ಟರ ಮೂಲಸ್ಥಾನ ವರ್‍ಹಾಡ. ಇದು ಭೋಜ ಕುಲದವರ ತವರು ಮನೆಯೂ ಹೌದು; ಇದರ ಮೇಲಿಂದ ಮರಹಟ್ಟೆ ಹಾಗೂ ಯಾದವರ ನಡುವೆ ಹತ್ತಿರದ ಸಂಬಂಧವಿತ್ತೆಂದು ತಿಳಿದುಬರುತ್ತದೆ. ಮರಹಟ್ಟೆ ಹಟ್ಟೆ-ಪತ್ತಿಜನರು ಆರ್ಯೇತರರಾಗಿದ್ದರೆ ಅವರ ಪೂರ್ವಜರಾಗಿದ್ದ ಯಾದವರೂ ಆರ್ಯೇತರರಾಗಿರುವದು ಕ್ರಮ ಪ್ರಾಪ್ತವಾಗುತ್ತದೆ. ಮೇಲೆ ನಮೂದಿಸಿದ್ದ ಋಗ್ವೇದದ ಕೆಲ ಉಲ್ಲೇಖಗಳು ಈ ತರ್ಕಕ್ಕೆ ಪೋಷಕವಾಗಿವೆ. ಪ್ರಿಲ್‌ಸ್ಕಿಯವರು ಸ್ವತಂತ್ರವಾಗಿ ನಡೆಸಿದ ಸಂಶೋಧನ ಕೂಡ ಅಂಧಕ-ವೃಷ್ಣಿ-ಯಾದವರು ಆರ್ಯೇತರ ದ್ರವಿಡ ವರ್ಗೀಯರೆಂದು ಸಿದ್ಧಪಡಿಸುತ್ತದೆ.

ಯದು-ಯಾದವರು ಆರ್ಯೇತರ ದ್ರವಿಡ ವರ್ಗೀಯರಾಗಿದ್ದರೆ ಅವರ ಉಳಿದ ಮೂರು ಬಂಧು-ಜನರು ದ್ರಾವಿಡ ಶಾಖೆಯವರಾಗಿರುವದು ಸಂಭವನೀಯವೆನಿಸುತ್ತದೆ. ವೇದದಲ್ಲಿ ಯದು, ತುರ್ವಶ ಈ ಹೆಸರುಗಳು ವ್ಯಕ್ತಿವಾಚಕವಾಗಿರದೆ ಅವು ಜನವಾಚಕ ವಿಶಿಷ್ಟ ಹೆಸರುಗಳಾಗಿವೆ. ಮುಂದೆ ಮಹಾಭಾರತದಲ್ಲಿ ಈ ವೇದಕಾಲೀನ ಪರಂಪರೆಯನ್ನು ಕಥೆಯ ರೂಪದಲ್ಲಿ ಹೇಳುವಾಗ ಈ ಹೆಸರು ವ್ಯಕ್ತಿವಾಚಕಗಳಾಗುತ್ತವೆ. ವೇದಗಳಲ್ಲಿ ಈ ಹೆಸರುಗಳು ವಿಶೇಷಾರ್ಥವನ್ನು ಸೂಚಿಸುವಂಥವುಗಳಾಗಿವೆ. ಮಹಾಭಾರತದಲ್ಲಿ ಧರ್ಮ, ಭೀಮ, ಧೃತರಾಷ್ಟ್ರ ಇಂಥ ಹೆಸರುಗಳು ಶೀಲಗುಣದರ್ಶಕಗಳಾಗಿ ವ್ಯಕ್ತಿತ್ವದ ವಿಶಿಷ್ಟ ಮಾದರಿ (Type) ಗಳನ್ನು ನಿರ್ದೇಶಿಸುತ್ತವೆ. ಅವು ತೊಟ್ಟಿಲಲ್ಲಿಟ್ಟ ಹೆಸರುಗಳಲ್ಲ. ಯದು ಎಂಬ ಹೆಸರು ಗೋಪಾಲಕ ಎಂಬ ಅರ್ಥದ ಹೆಸರಾಗಿದೆ. ತುರ್ವಶ ಹೆಸರಿಗೂ ಕೂಡ ಇದೇ ರೀತಿಯ ಅರ್ಥವಿರಬೇಕು. ಅದೇ ರೀತಿಯಲ್ಲಿ ಪೂರು ಶಬ್ದವೂ ಸಾಕಷ್ಟು ಉದ್ಬೋಧಕವೆಂದೆನಿಸುತ್ತದೆ. ಪಂಚಜನರಲ್ಲಿ ಎಲ್ಲರಿಗಿಂತ ಹಿರಿಯನಾದವನು ಪೂರು ಎಂಬುದು ಮಹಾಭಾರತ

ದಿಂದ ತಿಳಿಯುತ್ತದೆ. ಪೂರು ಶಬ್ದದಲ್ಲಿ ನಗರ ಎಂಬ ಅರ್ಥದ ದ್ರಾವಿಡವರ್ಗೀಯ 'ಊರು' ಶಬ್ದದ ಪ್ರತಿಧ್ವನಿ ಕೇಳಿಸುತ್ತದೆ. ಪೂರ ಇಲ್ಲವೆ ಪುರ ಈ ಹೆಸರುಗಳು ದೇವತೆಗಳ ಶತ್ರುಗಳಾದ ಅಸುರರಿಗೆ ಸಂಬಂಧಿಸಿಯೇ ಬರುತ್ತವೆ. ತ್ರಿಪುರಾಸುರರ ಪ್ರಾಚೀನ ಕಥೆ ಸುಪ್ರಸಿದ್ಧವಾಗಿದೆ. ಇಂದ್ರನಿಗಿರುವ ಪುರಂದರ, ಪುರಘ್ನ ಮೊದಲಾದ ಬಿರುದುಗಳು ಈ ಮಾತಿಗೆ ಪುಷ್ಟಿಯನ್ನೀಯುತ್ತವೆ. ಇಂದ್ರ ವಿರೋಧಿಯಾಗಿದ್ದ ಪೂರು ಯದು-ತುರ್ವಶರಂತೆ ಇಂದ್ರನ ಪಕ್ಷಕ್ಕೆ ಸೇರಿದ್ದರೆ ಆಶ್ಚರ್ಯವೇನಿಲ್ಲ. ನೂರಾರು ಚೂರು ಮಾಡಿ ತೋಳಗಳಿಗೆ ತಿನ್ನಿಸಿದ ಯತಿಯ ಅನುಯಾಯಿಗಳಲ್ಲಿ ಕೆಲವರು ಇಂದ್ರನ ಕರುಣೆಯನ್ನು ಯಾಚಿಸಿ, ಅವನನ್ನು ಪ್ರಸನ್ನಗೊಳಿಸಿ ಇಂದ್ರಭಕ್ತರಾದರು. ಅಂಥದೇ ಇನ್ನೊಂದು ಉದಾಹರಣೆ ಇದಾಗಿದೆ. ಪೂರು ಜನರು ದೊಡ್ಡ ನಗರಗಳನ್ನು ಸ್ಥಾಪಿಸಿ ನಾಗರಿಕತೆಯ ಉಚ್ಚ ಶ್ರೇಣಿಯಲ್ಲಿದ್ದ ಜನರಾಗಿರಬೇಕು. ಇಂದ್ರ ತೊಂಬತ್ತು ಪುರಗಳನ್ನು ನಾಶಮಾಡಿದನೆಂದು ವರ್ಣನೆಗಳಿವೆ. ಸುದಾಸರಾಜನ ಜೊತೆಗೆ ಹೋರಾಡುತ್ತಿದ್ದ ಪೂರು ಮೊದಲಾದವರನ್ನು ಇಂದ್ರಸಂಹಾರ ಮಾಡಿದನೆಂದು ದಾಶರಾಜ್ಞದ ಕತೆಯಿಂದ ತಿಳಿಯುತ್ತದೆ. ಹರಪ್ಪಾ, ಮೊಹೆಂಜೊದಾರೋದಂಥ ದೊಡ್ಡ ನಗರಗಳನ್ನು ನಿರ್ಮಿಸಿ ವೈಭವದಿಂದ ವಸಾಹತು ಮಾಡಿದ್ದ ವೇದ ಪೂರ್ವಕಾಲದ ಜನರ ಅನೇಕ ಸಮಸ್ಯೆಗಳಿಗೆ ಇಲ್ಲಿ ಅರ್ಥ ಬರುವಂತೆ ಕಾಣುತ್ತದೆ.

ನಗರದ ಸುತ್ತಲೂ ಕೋಟೆ-ಕೊತ್ತಳಗಳನ್ನು ಕಟ್ಟಿ ಭದ್ರತೆಯಲ್ಲಿ ಜೀವಿಸುತ್ತಿದ್ದ ಜನರಿಗೆ ವೇದಕಾಲದ ಋಷಿಗಳು ಪೂರು ಎಂದು ಹೆಸರು ಕೊಟ್ಟಿರುವ ಸಾಧ್ಯತೆ ಇದೆ. ಆರ್ಯರಿಗಿಂತ ಮೊದಲೇ ಇದ್ದ ಹರಪ್ಪಾ. ಮೊಹೆಂಜೊದಾರೋದಂಥ ಪುರಾತನ ನಗರಗಳನ್ನು ನೋಡಿದಾಗ 'ಪೂರು' ಹೆಸರಿನ ಔಚಿತ್ಯ ಸ್ಪಷ್ಟವಾಗುತ್ತದೆ. ಪೂರುವಿನ ಉಳಿದ ತಮ್ಮಂದಿರು ಇನ್ನೂ ಪಶುಪಾಲನ ವೃತ್ತಿಯಲ್ಲಿದ್ದರೆಂದು ಅವರ ಹೆಸರುಗಳ ಮೇಲಿಂದ ವ್ಯಕ್ತವಾಗುತ್ತದೆ.

ಭಾರತಕ್ಕೆ ಬಂದಿದ್ದ ಆರ್ಯರಿಗೆ ನಗರಗಳ ಮಾತಂತೂ ಹೋಗಲಿ, ಒಳ್ಳೆಯ ಮನೆಗಳ ಬಗ್ಗೆ ಕೂಡ ತಿಳುವಳಿಕೆ ಇರಲಿಲ್ಲವೆಂದು ಕೆಲ ಸಂಶೋಧಕರ ಅಭಿಪ್ರಾಯವಿದೆ.[೧೬] ಇದರ ಮೇಲಿಂದ ಪೂರು ವೇದಪೂರ್ವಕಾಲೀನ ನಾಗರಿಕ ಸಂಸ್ಕೃತಿಯ ಪ್ರತಿನಿಧಿಯಾಗಿದ್ದನೆಂದು ಊಹಿಸುವದು ಅನುಚಿತವಾಗಲಾರದು. ಪೂರು ಒಂದು ವೇಳೆ ಆರ್ಯಪೂರ್ವ ಜನವಾಗಿದ್ದರೆ, ಅವನ ಜೊತೆಗಿದ್ದ ಯದು-ತುರ್ವಶರು ಕೂಡ ಆರ್ಯೇತರರೆಂಬುದು ಖಚಿತ ವಾಗುತ್ತದೆ. ಹರಪ್ಪಾದ ಉಚ್ಚಾರ ಪಂಜಾಬಿಯಲ್ಲಿ ಹಡಪ್ಪಾ ಎಂದಾಗುತ್ತದೆ. ಹರಪ್ಪಾ-ಹಡಪ್ಪಾ ಇವುಗಳ ಜೊತೆಗೆ ಪಡು ಧಾತುಸಾಧಿತ ಪಾಡಾ-ಪಾರಾ ಗ್ರಾಮನಾಮಗಳನ್ನು ಹೋಲಿಸಿದರೆ ಸಾಮ್ಯ ಕಾಣುತ್ತದೆ. ಈ ಗ್ರಾಮನಾಮ ಎಷ್ಟು ಪ್ರಾಚೀನವೆಂಬುದು ಮಾತ್ರ ಇನ್ನೂ ಗೊತ್ತಿಲ್ಲ. ಈ ಭಾಗದಲ್ಲಿ ಹರಿಯುವ ಚಿನಾಬ ನದಿಯ ಪೂರ್ವದ ಹೆಸರು ಚಂದ್ರಭಾಗಾ ಎಂದಿದೆ. ಇವುಗಳಲ್ಲಿಯ 'ಚಂದ್ರ' ಶಬ್ದ ಆರ್ಯೇತರರಾಗಿದ್ದ ಪತ್ತಿಜನರ ಭಾಷೆಯೊಳಗಿನದು. ಹರಪ್ಪಾ-ಹಡಪ್ಪಾದ ಹತ್ತಿರ ದೊರೆತ ಚಿತ್ರಗಳಲ್ಲಿ ವೃಷಭದ ಚಿತ್ರಗಳು ಲಕ್ಷಣೀಯವಾಗಿವೆ. ಈ ಸಂಸ್ಕೃತಿ ಪತ್ತಿಜನರಿಗೆ ಸಂಬಂಧಿಸಿದ ಪೂರುವಿನದೇ ಇರುವ ಸಾಧ್ಯತೆ ಇದೆ. 'ದ್ರುಹ್ಯೋಃ ಸುತಾ ವೈ ಭೋಜಾಃ' ಈ ಆಧಾರದ ಮೇಲೆ ದ್ರುಹ್ಯುಗಳು ಯಾದವರ ಪೈಕಿಯೇ ಇರಬೇಕೆಂದು ತೋರುತ್ತದೆ. ಭೋಜರಾಜರು ಯಯಾತಿಯ ವಂಶದವರೆಂದು ಸಭಾಪರ್ವದಲ್ಲಿ ಶ್ರೀಕೃಷ್ಣ ಹೇಳುತ್ತಾನೆ. ಅನುವಿನ ಬಗ್ಗೆ ವಿಶೇಷ ಮಾಹಿತಿ ದೊರೆಯುವದಿಲ್ಲ. ಆದರೆ, ಅವರು ಕೂಡ ಉಳಿದವರೊಂದಿಗೆ ಸೇರಿಕೊಂಡರೆಂದು ಮಹಾಭಾರತ ಹೇಳುತ್ತದೆ. ತುರ್ವಶರೂ ಯಾದವರಲ್ಲಿ ವಿಲೀನರಾದರೆಂದು ಉಲ್ಲೇಖವಿದೆ. ಮುಖ್ಯಶಾಖೆ ಪೂರುಗಳದು. ಆಶಾಖೆ ಕೂಡ ಕಾಲಕಳೆದಂತೆ ಯಾದವರನ್ನು ಕೂಡಿಕೊಂಡಿರಬೇಕು. ಶ್ರೀಕೃಷ್ಣನಂಥ ತೇಜಸ್ವಿ ಮಹಾಪುರುಷನ ಜನ್ಮದ ನಂತರ ಯಾದವರ ಮಹತ್ವ ಹೆಚ್ಚಾಗಿ ಉಳಿದವರು ಯಾದವರಲ್ಲಿ ಸೇರಿಹೋಗಿರಬೇಕು.

ಮೂಲದಲ್ಲಿ ಯದುವಂಶ (ಪತ್ತಿಜನ ಗೋಪಾಲಕ) ಆರ್ಯೇತರರಾಗಿದ್ದರೂ ಆರ್ಯರ ಜೊತೆಗೆ ಸಂಪರ್ಕ ಹೆಚ್ಚಾದಂತೆ ಅವರ ನಡುವಿನ ವಿರೋಧ ಕಡಿಮೆಯಾಗಿರಬೇಕೆಂಬುದಕ್ಕೆ ಮುಂದೆ ನಡೆದ ಅನೇಕ ಘಟನೆಗಳು

ಸಾಕ್ಷಿಯಾಗಿವೆ. ಋಗ್ವೇದಪೂರ್ವ ಕಾಲದಲ್ಲಿಯೇ ಯದುವಂಶೀಯ ಪತ್ತಿ ಜನರ ಆರ್ಯೀಕರಣ ಸುರುವಾಗಿರ ಬೇಕೆಂಬುದನ್ನು ತಿಳಿಯಲು ಬೇಕಾದಷ್ಟು ಆಸ್ಪದವಿದೆ. ಇದಕ್ಕೆ 'ಚಂದ್ರಮಸ್' ದಂಥ ಭಾಷಿಕ ಪ್ರಮಾಣಗಳು ದೊರೆಯುತ್ತವೆ. ವೇದಕಾಲೀನ 'ಪತ್ತಿ' ಶಬ್ದಕ್ಕೆ, 'ಹಟ್ಟಿ' ಎಂದು (ಹಟಗಾರ) ಹಕಾರ ಯುಕ್ತವಾದ ರೂಪಾಂತರ ಮುಂದೆ ಆದದ್ದು ಆರ್ಯರ ಜೊತೆಗೆ ಗಾಢವಾದ ಸಂಪರ್ಕ ಬಂದ ಮೇಲೆ ಇರಬೇಕು. 'ಮರ್ಹಾಟೆ'ಯರು ಆರ್ಯ-ದ್ರಾವಿಡ ವಂಶೀಯರೆಂದು ಶ್ರೀ ಜಾಧವರಾವರಂಥ ಆಧುನಿಕ ವಿಚಾರಕರು ಹೇಳುವ ಮಾತಿಗೆ ಸಾಕ್ಷಿಗಳು ಈ ಪರಂಪರೆಯಲ್ಲಿ ದೊರೆಯುತ್ತವೆ. ಗಂಗಾ-ಯಮುನಾ ತೀರದಲ್ಲಿ ಶೌರಸೇನಿ ಪ್ರಾಕೃತ ಹುಟ್ಟುವದಕ್ಕೆ ಕಾರಣವಾದ ಯಾದವ ವಂಶಮೂಲದಲ್ಲಿ ಆರ್ಯವಲ್ಲವೆಂದೇ ಹೇಳಬೇಕಾಗುತ್ತದೆ. ಕಾರಣವೆಂದರೆ ಪ್ರಾಕೃತದಲ್ಲಿಯ ಹ್ರಸ್ವ ಎಕಾರ ಒಕಾರಗಳು, ಳಕಾರದಂಥ ವ್ಯಂಜನಗಳು ಸಂಸ್ಕೃತ ಭಾಷೆಗೆ ಪರಕೀಯವಾದವುಗಳಾಗಿವೆ. ಪ್ರಾಕೃತದಲ್ಲಿ ಇವುಗಳ ಪ್ರಾಚುರ್ಯಕ್ಕೆ ಕಾರಣ ಪರಕೀಯರಾಗಿದ್ದ ದ್ರಾವಿಡ ಜನರೆಂದು ಹೇಳುವದು ಈಗ ಸಮಾನ್ಯವಾಗಿದೆ. ಆದರೆ, ಪ್ರಾಕೃತಕ್ಕೆ ಕಾರಣರಾದ ಶೌರಸೇನಿ ಯಾದವರು ಮೂಲದಲ್ಲಿ ಆರ್ಯೀಕೃತ ಪತ್ತಿಜನ (ಹಟಗಾರ-ಗೋಪಾಲಕ) ರಾಗಿದ್ದರು ಮತ್ತು ಅವರೇ ಈ ಉಚ್ಚಾರಭೇದಕ್ಕೆ ಕಾರಣರೆಂದು ಹೇಳುವದು ಹೆಚ್ಚು ಸಯುಕ್ತಿಕವಾದದ್ದು. ಈ ಯೋಗದಿಂದ ಶೌರಸೇನಿ ಪ್ರಾಕೃತದ ಸಂಬಂಧ ಮಹಾರಾಷ್ಟ್ರಿಯೊಡನೆ ಆಯಿತೆಂಬುದು ಸ್ಪಷ್ಟವಾಗಿದೆ ಮತ್ತು ವರರುಚಿಯ ವ್ಯಾಕರಣದಲ್ಲಿ ಬಂದಿರುವ 'ಶೇಷಂ ಮಹಾರಾಷ್ಟ್ರೀವತ್' ಎಂಬ ಸೂತ್ರದ ಅರ್ಥಸಾಂಗತ್ಯ ಸುಗಮವಾಗುತ್ತದೆ.

ಮಹಾಭಾರತದ ಅನೇಕ ಕಥೆಗಳ ಆಧಾರದಿಂದ ಕೂಡ ಈ ಮಾತು ಸ್ಪಷ್ಟವಾಗುತ್ತದೆ. ಋಗ್ವೇದ ಕಾಲದಲ್ಲಿಯೇ ಯದುಗಳು ಇಂದ್ರಭಕ್ತರಾಗಿದ್ದರೆಂಬುದು ಕೆಲವು ಋಚೆಗಳಿಂದ ತಿಳಿಯುತ್ತದೆ. ಮಹಾಭಾರತದ ಕೃಷ್ಣ, ಋಷಿಮುನಿಗಳ ರಕ್ಷಕನಾಗಿದ್ದ, ಇದಕ್ಕೆ ವಿರುದ್ಧವಾಗಿ ಅವನ ಮಾವಂದಿರಾಗಿದ್ದ ಕಂಸ ಮತ್ತು ಜರಾಸಂಧರು ರಾಕ್ಷಸೀ ವೃತ್ತಿಯವ ರಾಗಿದ್ದರೆಂದು ವರ್ಣನೆ ಇದೆ. ಪ್ರಾಚೀನ ರೀತಿ-ನಡೆವಳಿಗಳಲ್ಲಿ ಕೆಲವು ಯದುಜನರಲ್ಲಿ ಇದ್ದವು. ಇವು ಪುರಾಣ ಕಥೆಗಳಲ್ಲಿ ಇಣಿಕಿ ಹಾಕುತ್ತವೆ. ಮಾವ ಮತ್ತು ಅಳಿಯಂದಿರ ನಡುವಿನ ವೈರಕ್ಕೆ ಕಾರಣವಾದರೂ ಏನೆಂಬುದು ವಿಚಾರಾರ್ಹವಾದ ಪ್ರಶ್ನೆಯಾಗಿದೆ. ಮಗನ ಮಗನ ಬದಲಾಗಿ ಮಗಳ ಮಗ ಆಸ್ತಿಗೆ ವಾರಸು ದಾರನಾಗುವ ಸಮಾಜದಲ್ಲಿ ಮಾವ ಅಳಿಯಂದಿರ ವಿರೋಧ ಪಿತೃಪ್ರಧಾನ ಕುಟುಂಬದಲ್ಲಿಯ ವಿರೋಧಕ್ಕಿಂತ ಹೆಚ್ಚು ತೀಕ್ಷ್ಣವಾಗಿರುತ್ತದೆ. ಕೃಷ್ಣನ ಪೂರ್ವದಲ್ಲಿಯೇ ಕಂಸನಿಗೆ ಅವನ ಮೇಲೆ ದ್ವೇಷವಿತ್ತು ಎಂಬ ಸಂಗತಿಯ ರಹಸ್ಯ ಪಿತೃಪ್ರಧಾನ ಕುಟುಂಬ ಪದ್ಧತಿಯು ನಮಗೆ ತಿಳಿಯುವದು ಕಠಿಣವಾಗುತ್ತದೆ. ಮುಂದೆ ತಂಗಿಯ ಮಗ ಅಭಿಮನ್ಯುವಿನ ಮರಣಕ್ಕೆ ಪರ್ಯಾಯವಾಗಿ ಶ್ರೀಕೃಷ್ಣನೇ ಕಾರಣವೆಂದು ಹೇಳುವ ಒಂದು ಕಥೆ ಸ್ತ್ರೀಗೀತೆಗಳಲ್ಲಿ ಕೇಳಲು ದೊರೆಯುತ್ತದೆ. ಯಾದವರಲ್ಲಿಯ ಈ ರೂಢಿ ಅವರು ಆರ್ಯೀಕೃತರಾಗುವ ಮೊದಲು ಇದ್ದ ಮಾತೃಪ್ರಧಾನ ಕುಟುಂಬ ಪದ್ಧತಿಯ ಅವಶೇಷವಿರಲಿಕ್ಕಿಲ್ಲವೇ ಎಂದು ಸಂಶಯ ಮೂಡುತ್ತದೆ.

ಈ ಊಹೆಗೆ ಪುಷ್ಟಿಯನ್ನು ಕೊಡುವ ಒಂದು ಪುರಾವೆ ಪುರಾಣಾಂತರದಲ್ಲಿ ದೊರೆಯುತ್ತದೆ. ಯಯಾತಿರಾಜನ ಭೋಗವಿಲಾಸದ ವಿವಿಧ ಕತೆಗಳಿವೆ. ಅವುಗಳಲ್ಲಿ ಪದ್ಮಪುರಾಣದ ಭೂಮಿಖಂಡದಲ್ಲಿ ಬಂದ ಒಂದು ಕತೆ ಇಲ್ಲಿ ವಿಚಾರಕ್ಕೆ ಯೋಗ್ಯವಾಗಿದೆ. ಯಯಾತಿ ತನ್ನ ಮುಪ್ಪನ್ನು ಕೊಟ್ಟು ಪುರುವಿನಿಂದ ಅವನ ತಾರುಣ್ಯವನ್ನು ತೆಗೆದುಕೊಂಡ ಮತ್ತು ಅಶ್ರುಬಿಂದುಮತಿ ಎಂಬ ಸುಂದರಿಯನ್ನು ಮದುವೆಯಾದ. ಅಶ್ರುಬಿಂದುಮತಿ ಯಯಾತಿಯನ್ನು ಸಂಪೂರ್ಣವಾಗಿ ತನ್ನ ಆಧೀನದಲ್ಲಿಟ್ಟುಕೊಳ್ಳಲು ಪ್ರಯತ್ನ ಮಾಡಿದಳು ಮತ್ತು ಅದರಲ್ಲಿ ಯಶಸ್ವಿಯಾದಳು. ಯಯಾತಿ ಅಶ್ರುಬಿಂದುಮತಿಯೊಡನೆ ಸದಾಕಾಲ ರಮಮಾಣನಾಗಿದ್ದದ್ದು ಶರ್ಮಿಷ್ಠೆ-ದೇವಯಾನಿಯರಿಗೆ ಹೇಗೆ ಸಹನವಾಗಬೇಕು? ಹೊಸ ಸವತಿಯಿಂದ ಅವರಿಗೆ ಸೋಲು ಉಂಟಾಗಿ ಅದರಿಂದ ದುಃಖವೂ ಆಯಿತು. ಶರ್ಮಿಷ್ಠೆ-ದೇವಯಾನಿಯರಿಬ್ಬರೂ ತಮ್ಮ ಸಂಬಂಧವನ್ನು ತೊರೆಯಬಾರದೆಂದು ಯಯಾತಿಗೆ ಬಿನ್ನವಿಸಿಕೊಂಡರೂ ಅದರಿಂದೇನೂ ಉಪಯೋಗವಾಗಲಿಲ್ಲ. ತಮ್ಮ ಬಿನ್ನಹವನ್ನು ಯಯಾತಿ ನಿರಾಕರಿಸಿದನೆಂದು

ಅವರಿಗೆ ಸಿಟ್ಟು ಬಂದಿತು. ಅವರು ಅವನಿಗೆ "ನಿನ್ನ ವಂಶದಲ್ಲಿಯ ಗಂಡಸರು ಇನ್ನು ಮುಂದೆ ಸೋದರಮಾವನ ಮಗಳನ್ನು ಮದುವೆಯಾಗುತ್ತಾರೆ ಮತ್ತು ಮಾತೃದ್ರವ್ಯಕ್ಕೆ ಹಕ್ಕುದಾರರಾಗುತ್ತಾರೆ" ಎಂದು ಶಾಪವಿತ್ತರು. (೬೪೮೩, ಪ್ರಾಚೀನ ಚರಿತ್ರಕೋಶ: ಯಯಾತಿ ನೋಡಿ.)

ಮರಾಠರಲ್ಲಿ ಸೋದರಮಾವನ ಮಗಳನ್ನು ಮದುವೆಯಾಗುವ ಸಂಪ್ರದಾಯ ಇಂದಿಗೂ ರೂಢವಾಗಿದೆ. ಆದರೆ, ಮಹಾಭಾರತ ಕಾಲದಲ್ಲಿ ಯಾದವರಲ್ಲಿ ಈ ಸಂಪ್ರದಾಯವಿತ್ತೆಂಬುದು ಸುಭದ್ರೆ ಮೊದಲಾದವರ ವೈವಾಹಿಕ ಸಂಬಂಧಗಳಿಂದ ನಿಶ್ಚಿತವಾಗಿ ಕಾಣುತ್ತದೆ. ಇಲ್ಲಿ ಒಂದು ವಿಚಾರ ತಲೆಯೆತ್ತುತ್ತದೆ. ಆರ್ಯರಿಗೆ ಕೆಲ ರೂಢಿಗಳು ವಿಚಿತ್ರವಾಗಿ ಕಂಡರೂ ಅವುಗಳನ್ನು ಅಳಿಸಿಹಾಕುವದು ಸಾಧ್ಯವಿರಲಿಲ್ಲ. ಅಂಥ ಪ್ರಸಂಗಗಳಲ್ಲಿ ಈ ರೂಢಿಗಳನ್ನು ಶಾಪವಾಗಿ ಪರಿವರ್ತಿಸಿ ಅವುಗಳ ಸಂಬಂಧದಿಂದ ದೂರವಿರುವ ಒಂದು ನುಸುಳು-ದಾರಿ ಅವರಿಗೆ ಕಂಡಿತು. ಪ್ರಚಲಿತವಾಗಬಾರದೆಂದಿದ್ದ ರೂಢಿಗಳನ್ನು ಶಾಪದ ನೆಪದಿಂದ ಅವುಗಳಿಂದ ಬಿಡುಗಡೆಯ ಸಮಾಧಾನ (Rationalization) ಪಡೆದುಕೊಳ್ಳದೆ ಬೇರೆ ಮಾರ್ಗವಿರಲಿಲ್ಲ. ಪದ್ಮಪುರಾಣದಲ್ಲಿಯ ಉಲ್ಲೇಖ ಇದನ್ನು ಸೂಚಿಸುತ್ತದೆ. ದ್ರವಿಡ ಹೆಸರಿನ ಹೊರಗಿನ ಯಾವದೇ ಪಂಗಡದ ಸಂಪರ್ಕದಿಂದ ಯಾದವರಲ್ಲಿ ಈ ರೂಢಿ ಬಂದದ್ದಾಗಿದ್ದರೆ, ಬ್ರಾಹ್ಮಣರಲ್ಲಿಯಂತೆ ಈ ರೂಢಿ ಕೆಲವು ಶಾಖೆಗಳಿಗೆ ಮಾತ್ರ ಸೀಮಿತವಾಗಬೇಕಾಗಿತ್ತು. ಆದರೆ, ಮರಾಠರಲ್ಲಿ ಈ ರೂಢಿ ವ್ಯಾಪಕವಾಗಿ ದೊರೆಯುತ್ತದೆ. ಈ ಕಾರಣದಿಂದ ಮೂಲದಲ್ಲಿಯೇ ಯದು, ತುರ್ವಸು ಜನರಲ್ಲಿ ಮಾವನ ಮಗಳನ್ನು ಮದುವೆಯಾಗುವ ರೂಢಿ-ಮಾತೃಪ್ರಧಾನ ಕುಟುಂಬ ಪದ್ಧತಿ-ಪ್ರಚಾರದಲ್ಲಿತ್ತೆಂದು ತಿಳಿಯುವದು ಕ್ರಮಪ್ರಾಪ್ತವಾಗುತ್ತದೆ. ಕೆಲವು ಮರಾಠರಲ್ಲಿ ಸೋದರತ್ತೆಯ ಮಗಳೊಡನೆ (ಮಾವನ ಮಗಳಂತೆ) ಮದುವೆಯಾಗುವ ರೂಢಿಯಿದೆ. ಆದರೂ ಮಾವನ ಮಗಳನ್ನು ಮದುವೆಯಾಗುವ ರೂಢಿಯೇ ಹೆಚ್ಚು ಪ್ರಚಾರದಲ್ಲಿದ್ದು ಎರಡನೆಯದು ಕೆಲವು ಕಾಲಗಳಿಗೆ ಮಾತ್ರ ಸೀಮಿತವಾಗಿದೆ. ಈ ಸಂಪ್ರದಾಯ ದ್ರವಿಡರ ಪ್ರಭಾವದಿಂದ ರೂಢವಾಗಿರಬೇಕೆಂದು ಕೆಲವರ ತಿಳುವಳಿಕೆಯಾಗಿದೆ. ಆದರೆ, ಇದು ಸರಿಯಲ್ಲ. ದ್ರವಿಡರ ಭಾಷೆ ಮತ್ತು ಅವರ ರೂಢಿ ನಿಯಮಗಳ ಪ್ರಭಾವ ಆರ್ಯಸಂಸ್ಕೃತಿಯನ್ನು ಬದಲಿಸುವಷ್ಟು ಅವರ ರೂಢಿನಿಯಮಗಳು ಪ್ರಭಾವಶಾಲಿಯಾಗಿದ್ದವೇ ಎಂಬುದೊಂದು ಮಹತ್ವದ ಪ್ರಶ್ನೆಯಾಗಿದೆ.

ಆರ್ಯರ ಪ್ರಭಾವದಿಂದ ದ್ರಾವಿಡರ ರೂಢಿನಿಯಮಗಳು ಬಹಳಷ್ಟು ಬದಲಾವಣೆಯನ್ನು ಹೊಂದಿದವು. ದ್ರಾವಿಡರೂ ಆರ್ಯರ ಮೇಲೆ ಪ್ರಭಾವ ಬೀರಲಿಲ್ಲವೆಂದು ಅನ್ನುವಂತಿಲ್ಲ. ಆದರೆ, ಈ ಬದಲಾವಣೆಗಳು ದ್ರವಿಡ- ಪ್ರಭಾವದ ದ್ಯೋತಕವಾಗಿರದೆ ಅಪರಿಹಾರ್ಯವಾದ ರೂಢಿಗಳಾಗಿದ್ದವು. ಇಂಗ್ಲಿಷ್ ಭಾಷೆಯಲ್ಲಿ Bangle, Monkey, Saree ಇಂಥ ಶಬ್ದಗಳು ಬಂದಿದ್ದರೆ ಅವು ನಮ್ಮ ದೇಶೀಭಾಷೆಗಳ ಪ್ರಭಾವದಿಂದ ಅಲ್ಲ. ಪ್ರಭಾವ ಶಾಲಿಯಾದ ಭಾಷೆ ಆಯಾ ಭಾಷಿಕರ ಸಾಮಾಜಿಕ, ರಾಜಕೀಯ ಇಲ್ಲವೆ ಧಾರ್ಮಿಕ ಶ್ರೇಷ್ಠತೆಯನ್ನು ನಿರ್ದೇಶಿಸುತ್ತದೆ. ಇಂಥ ಯಾವ ಕಾರಣಕ್ಕಾಗಿಯೂ ನಮ್ಮ ದೇಶಭಾಷೆಗಳ ಪ್ರಭಾವ ಇಂಗ್ಲೀಷಿನ ಮೇಲೆ ಆಗಲಿಲ್ಲ. ಕೇವಲ ಲೌಕಿಕ ವ್ಯವಹಾರದ ಅನುಕೂಲತೆಗಾಗಿ ಇಂಗ್ಲಿಷ್ ನಮ್ಮಿಂದ ಕೆಲವು ಶಬ್ದಗಳನ್ನು ಎತ್ತಿಕೊಂಡಿತು ಅಷ್ಟೇ. ಇದಕ್ಕೆ ವಿಪರೀತವಾಗಿ ನಮ್ಮ ಭಾಷೆಗಳ ಮೇಲೆ ಇಂಗ್ಲಿಷಿನ ಪ್ರಭಾವ ಸ್ಪಷ್ಟವಾಗಿದೆ. ದೇಶಭಾಷೆಗಳ ಶಬ್ದರಚನೆ, ವಾಕ್ಯಪದ್ಧತಿ, ಸಾಹಿತ್ಯದ ಪ್ರಕಾರಗಳು ಮೊದಲಾದ ವಿವಿಧ ಬದಲಾವಣೆಗಳು ಇಂಗ್ಲಿಷ್ ಭಾಷೆಯ ವರ್ಚಸ್ಸಿಗೆ ಸಾಕ್ಷಿಯಾಗಿವೆ. ಆರ್ಯರಲ್ಲಾದ ಬದಲಾವಣೆ ಕೂಡ ತೀವ್ರವಾದ ವಿರೋಧದ ಕೊನೆಯಲ್ಲಿ ಅಪರಿಹಾರ್ಯವೆಂದು ಬಂದದ್ದು. ದ್ರಾವಿಡ ವರ್ಗದಲ್ಲಿ ಪ್ರಾರಂಭಕ್ಕೆ ಸ್ವಲ್ಪ ವಿರೋಧ ಕಂಡುಬಂದರೂ ಮುಂದೆ ಸ್ವಸಂತೋಷದಿಂದ ಆರ್ಯತಂತ್ರ ರೂಢವಾಯಿತು ಮತ್ತು ಅದರಲ್ಲಿಯೇ ಅಭಿಮಾನ ಪಡುವಂತಾಯಿತು. ಇದಕ್ಕೆ ವಿರುದ್ಧವಾಗಿ ಆರ್ಯರು ದ್ರವಿಡರಿಂದ ಪಡೆದುಕೊಂಡ ವಿಷಯಗಳನ್ನು ಕೂಡ, ಅವು ತಮ್ಮವೇ ಎಂಬಂತೆ, ತಮ್ಮ ಪೂರ್ವಪರಂಪರೆಯವೇ ಎಂಬಂತೆ ಅವುಗಳಿಗೆ ತಮ್ಮ ವೇಷ ತೊಡಿಸಿದರು. (ರುದ್ರ) ಶಿವ ಯಾವ ಜನರ ದೇವರು ಎಂಬುದರ ಬಗ್ಗೆ ಅನೇಕ ವಾದ ವಿವಾದಗಳಿವೆ. 'ಅಗ್ನಿಮೀಳೇ'ದಲ್ಲಿಯ ಳ ಕಾರದ

ಉಚ್ಚಾರ ಸಂಸ್ಕೃತದ್ದೇ ಎಂದು ಹಟ ಹಿಡಿಯುವರ ಸಂಖ್ಯೆ ಕಡಿಮೆಯೇನಲ್ಲ. ಇದಕ್ಕೆ ವಿಪರೀತವಾಗಿ ಕನ್ನಡ ಸಂಸ್ಕೃತಜನ್ಯ ಭಾಷೆ ಎಂಬ ತಿಳುವಳಿಕೆ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿಯೂ ಕಾಣುತ್ತದೆ.

ಮಾವನ ಮಗಳನ್ನು ಮದುವೆಯಾಗುವದು ನಿಷಿದ್ಧವೆಂದು ನಂಬಿದ್ದರೂ ದಕ್ಷಿಣಾಪಥದಲ್ಲಿ ಈ ನಿಯಮಕ್ಕೆ ಇರುವ ಅಪವಾದವನ್ನು ಎತ್ತಿ ಹಿಡಿಯುವ ಸೂತ್ರಗಳು ಮುಂದೆ ಬಂದವು. ಆದರೂ ಎಲ್ಲ ಬ್ರಾಹ್ಮಣಶಾಖೆಯವರು ಈ ರೂಢಿಯನ್ನು ಮಾನ್ಯ ಮಾಡಲೇ ಇಲ್ಲ. ಮರಾಠರಲ್ಲಿ ಮಾತ್ರ ಈ ರೂಢಿಯಿಲ್ಲದ ಒಂದಾದರೂ ಕುಲವಿಲ್ಲ. ಇಷ್ಟಕ್ಕೆ ನಿಲ್ಲದೆ ಸೋದರತ್ತೆಯ ಮಗಳು ಸೋದರ ಮಾವನ ಮಗ ಇವರ ಸೋದರ ಸಂಬಂಧವನ್ನು ಕಡೆಗಣಿಸಿ ಮದುವೆಯಾಗುತ್ತವೆ. ಇದನ್ನು ಸಮರ್ಥಿಸುವದು ಹೇಗೆ? ಯಾದವರ ಪುರಾತನವಾದ ರೂಢಿಯಲ್ಲಿ ಇದು ಒಂದಾಗಿರಬೇಕು ಮತ್ತು ಕೆಲ ತೀಕ್ಷ್ಣಜನರು ಇದನ್ನು ಮುಂದುವರಿಸಿರಬೇಕೆಂದು ತಿಳಿಯುವದು ಹೆಚ್ಚು ತರ್ಕಶುದ್ಧವಾಗುತ್ತದೆ. ಮರಹಟ್ಟೀಯರ ಮೂಲ ದ್ರಾವಿಡ ಅಂಶವನ್ನು ನಿರ್ದೇಶಿಸುವ ಕುರುಹು ಆಗಿ ಈ ರೂಢಿ ಉಳಿದಿದೆ. ಕೆಲವು ಕುಲಗಳು ಆರ್ಯರ ಅನುಕರಣೆಯಲ್ಲಿ ಪೂರ್ವಪರಂಪರೆಯನ್ನು ಸ್ವಲ್ಪಮಟ್ಟಿಗೆ ಬದಲಿಸಿ ಶ್ರೇಷ್ಠ-ಕನಿಷ್ಠ ಭಾವನೆಯನ್ನು ನಿರ್ದೇಶಿಸಿ ಮಾವನ ಮಗಳನ್ನು ತೆಗೆದುಕೊಳ್ಳುವ ರೂಢಿಯನ್ನಷ್ಟೇ ಮುಂದುವರಿಸಿದವು. ಆದರೆ, ಹಳೆಯ ನಡೆವಳಿಕೆಯಲ್ಲಿ ಬದಲಾವಣೆಯನ್ನು ಸಹಿಸದ ಕೆಲವು ಪರಂಪರಾಪ್ರಿಯ ಮನೆತನಗಳು ಹಳೆಯ ರೂಢಿಯನ್ನು ಹಾಗೆಯೇ ಮುಂದೂ ನಡೆಸಿಕೊಂಡು ಬಂದವು. ಪ್ರಭಾವಶಾಲಿಯಾದ ವರ್ಚಸ್ಸಿನ ಪರಿಣಾಮವಾಗಿ ಶಿಷ್ಟಾಚಾರವಾಗಿ ಪರಿಣಮಿಸಿದ ಹೊಸರೂಢಿಗಳು ಬಹುಸಂಖ್ಯಾಕರಲ್ಲಿ ದೊರೆಯುತ್ತವೆ ಮತ್ತು ಹಳೆಯ ಸಂಪ್ರದಾಯಗಳು ಬದಲಾವಣೆಯನ್ನು ಸಹಿಸದ ಕೆಲವರಲ್ಲಿ ಮಾತ್ರ ಉಳಿಯುತ್ತವೆ. ಡಾ|| ಸೌ|| ಇರಾವತೀಬಾಯಿ ಕರ್ವೆಯವರ ಅಭಿಪ್ರಾಯದಂತೆ 'ಇದು ದ್ರಾವಿಡ ಪ್ರಭಾವವೇ ಆಗಿದ್ದರೆ 'ಬಳ್ಳಿಯನ್ನು ಹಿಂದಿರುಗಿಸುವ' ಈ ರೂಢಿ ಮರಾಠರಲ್ಲಿ ಹೆಚ್ಚಾಗಿ ಇರಬೇಕಾಗಿತ್ತು.[೧೮] ಈ ಮರಾಠರು ರೂಢಿಯನ್ನು ದ್ರಾವಿಡರಿಂದ ಎತ್ತಿಕೊಂಡರು ಎಂದು ಅವರು ಹೇಳಿದ್ದರೂ ಸಂಬಂಧವಾಚಕಗಳ ಆಳವಾದ ಅಭ್ಯಾಸ ಮಾಡಿರುವ ಸೌ. ಕರ್ವೆಯವರ ಈ ವಾಕ್ಯವನ್ನು ನೋಡಬೇಕು. "ಮರಾಠೀ ಪ್ರದೇಶದಲ್ಲಿ ಮಾವನ ಮಗಳನ್ನು ಲಗ್ನವಾಗುವ ರೂಢಿ ಇದೆ. (ಆದರೆ) ಸಂಬಂಧವಾಚಕಗಳು ಮಾವನ ಇಲ್ಲವೆ ಸೋದರತ್ತೆಯ ಮಗಳನ್ನು ಲಗ್ನವಾಗುವದಕ್ಕೆ ಉಚಿತವಾಗಿವೆ." ಭಾಷೆಯಲ್ಲಿ ಮೂಲದಲ್ಲಿಯೇ ಸಂಬಂಧವಾಚಕಗಳ ಅರ್ಥವೇ ಇಷ್ಟು ವ್ಯಾಪಕವಾಗಿದ್ದರೆ ಅದರ ಮೇಲಿಂದ ಮರಾಠರಲ್ಲಿ ಪ್ರಾರಂಭದಿಂದಲೇ ಈ ರೂಢಿ ಇತ್ತೆಂಬುದು ಧ್ವನಿತವಾಗುವದಿಲ್ಲವೇ? ಈ ರೂಢಿ ಆರ್ಯರದಲ್ಲ ಎಂಬ ಮಾತು ಸ್ಪಷ್ಟವಾಗಿದೆ. ಇದರ ಮೇಲಿಂದ ಕೂಡ ಮರಾಠಾ-ಯಾದವರ ಪೂರ್ವಜರು ಆರ್ಯೇತರ ಪತ್ತಿ ಜನರಿದ್ದರೆಂದು ಖಚಿತವಾಗುವದಿಲ್ಲವೇ?

ಪತ್ತಿಜನರು ಮೂಲದಲ್ಲಿ ಆರ್ಯೇತರರಾಗಿದ್ದು ಆಮೇಲೆ ವೈದಿಕ ಪರಂಪರೆಯನ್ನು ಸ್ವೀಕರಿಸಿದ್ದರಿಂದ ಅವರ ಭಾಷೆ ಮತ್ತು ನಡೆವಳಿಗಳಲ್ಲಿ ಬದಲಾವಣೆಯಾಯಿತು. ಹೀಗಾಗಿ, ಮೂಲದ ಪತ್ತಿಜನರಲ್ಲಿ ಎರಡು ಗುಂಪುಗಳಾಗುವದು ಅನಿವಾರ್ಯವಾಯಿತು. ಹಳೆಯ ಸಂಪ್ರದಾಯವನ್ನು ಎತ್ತಿ ಹಿಡಿಯುವವರದೊಂದು ಗುಂಪು, ತಾವು ಸಂಪೂರ್ಣವಾಗಿ ಆರ್ಯರೇ ಎಂಬ ಅಭಿನಿವೇಶದಲ್ಲಿರುವ ಸುಧಾರಕರದು ಇನ್ನೊಂದು ಗುಂಪು. ಈ ಎರಡು ಅತಿವಾದಿಗಳನ್ನು ಜೋಡಿಸುವ ನಡುವಿನವರು ಕ್ರಮೇಣ ಮುಂದೆ ಬರಹತ್ತಿದರು. ಮಹಾಭಾರತದ ನಂತರದ ಸಾಮಾಜಿಕ ಮತ್ತು ಐತಿಹಾಸಿಕ ಘಟನೆಗಳ ಪ್ರವಾಹದಲ್ಲಿ ಸಾಕಷ್ಟು ಪಕ್ಷ-ಉಪಪಕ್ಷಗಳಾಗಿರುವದು ಕಂಡುಬರುತ್ತದೆ. ಈ ಯದುವಂಶ (ಪತ್ತಿಜನ) ಕಾಲಕಾಲಕ್ಕೆ ಬೇರೆ ಬೇರೆ ಪರಿಸ್ಥಿತಿಗಳಿಗೆ ತಕ್ಕಂತೆ ತಲೆಯೆತ್ತುವ ಪ್ರಯತ್ನವನ್ನು ಮಾಡುತ್ತಿರುವದು ಗೋಚರವಾಗುತ್ತದೆ. ಮಧ್ಯಪ್ರಾಂತ್ಯದ ರಾಜರು ಭೋಜವಂಶೀಯರಾಗಿದ್ದರೆಂದು ಪುರಾಣಾಂತರದಲ್ಲಿ ಪುರಾವೆಗಳು ದೊರೆಯುತ್ತವೆ. ಭೋಜಕುಲ ಯಾದವವಂಶದ್ದೆಂದು ಪರಂಪರೆ ಹೇಳುತ್ತದೆ. ಯಾದವರಿಗೆ ಸಂಬಂಧಿಸಿದ ಸಾತ್ಯಕಿ ಮೊದಲಾದ ಶಾಖೆಗಳ ಹೆಸರಿನಿಂದ ರಾಷ್ಟ್ರಕೂಟ ಮೊದಲಾದವರ ಕೆಲವು ರಾಜಮನೆತನಗಳು ಕರ್ನಾಟ-ಮಹಾರಾಷ್ಟ್ರದಲ್ಲಿ ಆಗಿಹೋದವು. ರಿಷ್ಟಿಕ-ಭೋಜಕರ ಉಲ್ಲೇಖ ಅಶೋಕನ

ಶಿಲಾಲೇಖದಲ್ಲಿದೆ. ದಕ್ಷಿಣಾಪಥದಲ್ಲಿ ದೊಡ್ಡ ಪ್ರಮಾಣದಲ್ಲಿ ಆರ್ಯೀಕರಣವಾಗುತ್ತ ನಡೆದಂತೆ ಮರಹಟ್ಟರ ವಂಶವಿಸ್ತಾರ, ಪ್ರದೇಶದ ವಿಸ್ತಾರದಂತೆ ವೇಗವಾಗಿ ಬೆಳೆಯುತ್ತ ಹೋಯಿತು.

ಸುಮಾರು ಹತ್ತನೆಯ ಶತಮಾನದ ವರೆಗೆ ನಡೆದ ಪರಿವರ್ತನಕ್ಕೆ ಆರ್ಯೀಕರಣವೆನ್ನಬಹುದು. ಮುಂದೆ ಸುಮಾರು ೧೦-೧೨ನೆಯ ಶತಮಾನದ ನಂತರದ ಈ ರೀತಿಯ ಪರಿವರ್ತನೆಗೆ ಆರ್ಯೀಕರಣವೆನ್ನುವದಕ್ಕಿಂತ ಮಹಾರಾಷ್ಟ್ರೀಕರಣವೆನ್ನುವದು ಹೆಚ್ಚು ಸರಿ. ಕನ್ನಡ ಮತ್ತು ತಮಿಳು ಜನಾಂಗದವರು ಮರಾಠರನ್ನು 'ಆರಿಯರು', 'ಆರೇರು' ಎಂಬ ಹೆಸರಿನಿಂದ ಗುರುತಿಸುತ್ತಾರೆ. ಈ ಆರಿಯರ (ಮರಾಠರ) ಉಲ್ಲೇಖ ಎರಡನೆಯ ಶತಮಾನದ ತಮಿಳು ಸಾಹಿತ್ಯದಲ್ಲಿದೆ. ಕನ್ನಡ ಮತ್ತು ತಮಿಳರು ಮರಾಠದಲ್ಲಿ 'ಆರಿಯರು' ಎಂದು ಕರೆಯುತ್ತಿದ್ದರೂ ಮರಾಠರು ತಮ್ಮನ್ನು 'ಮರಹಟ್ಟೆ' ಇಲ್ಲವೆ 'ಮರಾಠೆ' ಎಂಬ ಹೆಸರಿನಿಂದ ಕರೆದುಕೊಳ್ಳುತ್ತಿದ್ದರು. ಶ್ರೀ ಸಮರ್ಥರಾಮದಾಸರ "ಮರಾಠಾ ತಿತುಕಾ ಮೇಳವಾವಾ" ಎಂಬ ವಾಕ್ಯದಲ್ಲಿ ಮರಾಠಾ ಶಬ್ದ ಬಹಳ ವಿಸ್ತೃತವಾದ ಅರ್ಥದಲ್ಲಿ ಉಪಯುಕ್ತವಾಗಿದೆ. ಇಷ್ಟು ವಿಸ್ತೃತವಾದ ಅರ್ಥದಲ್ಲಿ ಉಪಯೋಗಿಸಿದ ಮೊದಲ ಪ್ರಯೋಗ ಇದಾಗಿದೆ. ಈ ಅರ್ಥವಿಸ್ತಾರದ ಹಿಂದೆ ಒಂದಿಷ್ಟು ಇತಿಹಾಸವಿದೆ. ಏಳು-ಎಂಟನೆಯ ಶತಮಾನಗಳ ವರೆಗೆ ಬ್ರಾಹ್ಮಣರು ದಕ್ಷಿಣಾಪಥದಲ್ಲಿ ಎಲ್ಲಿಯೂ ಸ್ಥಾಯಿಕರಾಗಿ - 'ದೇಶಸ್ಥ'ರಾಗಿ ಇದ್ದಿಲ್ಲ. ಈ ಕಾಲದವರೆಗೆ ಬ್ರಾಹ್ಮಣರ ಅಡ್ಡಹೆಸರುಗಳು ಊರುಗಳ ಮೇಲಿನ ಅಥವಾ ಸ್ಥಳದಿಂದ ಬಂದಿರಲಿಲ್ಲವೆಂದು ಡಾ|| ದೇವದತ್ತ ಭಾಂಡಾರಕರರು ಅಭಿಪ್ರಾಯ ಪಟ್ಟಿದ್ದಾರೆ. (Indian Antiquary, P. 73-74). ದೀರ್ಘಕಾಲದ ವರೆಗೆ ವೇದಶಾಖೆಗಳ ಮೇಲಿಂದ ಬ್ರಾಹ್ಮಣರಲ್ಲಿ ಗುಂಪುಗಳಾಗಿದ್ದದ್ದು ಕಾಣುತ್ತದೆ. ಹಳೆಯ ತಾಮ್ರಪಟಗಳಲ್ಲಿ ದೊರೆಯುವ ಆಧಾರಗಳ ಮೇಲಿಂದ ಒಂಬತ್ತು-ಹತ್ತನೆಯ ಶತಮಾನಗಳ ಹೊತ್ತಿಗೆ ಬ್ರಾಹ್ಮಣರು ಸಂಪೂರ್ಣ ವಾಗಿ 'ದೇಶಸ್ಥ'ರಾದರು. ಕಲ್ಯಾಣ ಚಾಲುಕ್ಯರ ಶಿಲಾಲೇಖ-ತಾಮ್ರಪಟಗಳಲ್ಲಿ 'ಮಲೆಯಾಳ' ಪಂಡಿತ, 'ಕಾಶ್ಮೀರ' ಬ್ರಾಹ್ಮಣ, 'ದ್ರಾವಿಡ' (ತಮಿಳು) ಬ್ರಾಹ್ಮಣ-ಇಂಥ ಉಲ್ಲೇಖಗಳಿವೆ. ಕಲ್ಯಾಣದ ದೊರೆ ಆರನೆಯ ವಿಕ್ರಮಾದಿತ್ಯನ ಓಲಗಕ್ಕೆ ಬಂದಿದ್ದ ಬಿಲ್ಹಣನಿಗೆ 'ಕಾಶ್ಮೀರ' ಪಂಡಿತನೆಂಬ ಹೆಸರಿನಿಂದಲೇ ಗುರುತಿಸುತ್ತಿದ್ದರು. ಹತ್ತು ಮತ್ತು ಹನ್ನೆರಡು ಈ ಶತಮಾನಗಳ ಸುಮಾರಿಗೆ ಬ್ರಾಹ್ಮಣರು ಪೂರ್ಣವಾಗಿ ದೇಶಸ್ಥರಾಗತೊಡಗಿದರು. ಗೌಡ ಬ್ರಾಹ್ಮಣ, ಕರ್ಹಾಡ ಬ್ರಾಹ್ಮಣ ಮೊದಲಾದ ಹೆಸರುಗಳು ನಂತರದ ಕಾಲದಲ್ಲಿಯೇ ನಮಗೆ ದೊರೆಯುತ್ತವೆ. 'ಹೊಯ್‌ಸಳ' ಕರ್ನಾಟಕ ಇಲ್ಲವೆ ಕರ್ಣಾಟಕ ಬ್ರಾಹ್ಮಣರು ಯಾದವರ ಕಾಲಕ್ಕೆ ಅಂದರೆ ೧೬ನೆಯ ಶತಮಾನದ ನಂತರ ಅಸ್ತಿತ್ವದಲ್ಲಿ ಬಂದರೆಂಬುದು 'ಹೊಯ್‌ಸಳ' ಶಬ್ದದಿಂದ ಸ್ಪಷ್ಟವಾಗುತ್ತದೆ. ದೇವಗಿರಿ ಮತ್ತು ಹಳೆಬೀಡು ಯಾದವರ ಯಾದವೀ ಕಲಹದಲ್ಲಿ ಬ್ರಾಹ್ಮಣ ಶಾಖೆಯವರು ಪ್ರಾಂತಾಭಿಮಾನವನ್ನು ಪಡೆದು ಕರ್ನಾಟಕ ಮತ್ತು ಮಹಾರಾಷ್ಟ್ರೀಯ (ಮರಾಠಾ) ಬ್ರಾಹ್ಮಣರೆಂದು ಕರೆದುಕೊಳ್ಳಲು ಸುರು ಮಾಡಿದರು. ಈ ಅಭಿಪ್ರಾಯಕ್ಕೆ ಇಲ್ಲಿ ಬೇಕಾದಷ್ಟು ಎಡೆಯಿದೆ.

ಬ್ರಾಹ್ಮಣರು ದೇಶಸ್ಥರಾಗುವದಕ್ಕಿಂತ ಮೊದಲು ಅವರಿಗೆ ಯಾವದೇ ದೇಶೀಯ ಭಾಷೆಯ ಬಗ್ಗೆ ಅಭಿಮಾನವಿರಲಿಲ್ಲ. ವೈದಿಕ ಪರಂಪರೆ ಮತ್ತು ಗೀರ್ವಾಣಭಾಷೆಗಳನ್ನೇ ಅವರು ಪುರಸ್ಕರಿಸುತ್ತಿದ್ದರು. ಅವುಗಳ ಸೇವೆಯಲ್ಲಿ ಬಾಳನ್ನು ಸವೆಸುವದು ಅವರಿಗೆ ಅಭಿಮಾನದ ಮಾತಾಗಿತ್ತು. ಪ್ರಾಣ ಹೋದರೂ ಅಡ್ಡಿಯಿಲ್ಲ ಆದರೆ ಪ್ರಾಕೃತ ಭಾಷೆಯನ್ನು ಉಪಯೋಗಿಸಬಾರದೆಂಬ ನಿಷ್ಠುರ ಪ್ರವೃತ್ತಿ ಒಂದು ಕಾಲಕ್ಕೆ ಬ್ರಾಹ್ಮಣರಲ್ಲಿತ್ತು. 'ಪ್ರಾಕೃತಂ ಮ್ಲೇಚ್ಛಭಾಷಿಕಂ। ನ ಶ್ರೋತವ್ಯಂ ದ್ವಿಜೇನೈತದ್..... ಅಧೋ ನಯತಿ ತದ್ ದ್ವಿಜಂ।" ಗರುಡ ಪುರಾಣದಲ್ಲಿಯ ಈ ವಿಧಾನ, ಪ್ರಾಕೃತದಂಥ ಸಂಸ್ಕೃತೇತರ ಭಾಷೆಗಳ ಬಗ್ಗೆ ಬ್ರಾಹ್ಮಣರ ಮನೋಭಾವ ಯಾವ ಬಗೆಯದಿತ್ತೆಂಬುದನ್ನು ತಿಳಿಯಪಡಿಸುತ್ತದೆ. ಪ್ರಾಕೃತ ಭಾಷೆಗಳತ್ತ ತಿರುಗಿಯೂ ನೋಡದ ಬ್ರಾಹ್ಮಣರು ಮುಂದಿನ ಕಾಲದಲ್ಲಿ, ಒಂದೆರಡು ಅಪವಾದಗಳನ್ನು ಬಿಟ್ಟರೆ ಅದೇ ಪ್ರಾಕೃತಭಾಷೆಯ ಕೈವಾರಿಗಳಾಗಿ, ಸ್ತುತಿ ಪಾಠಕರಾಗಿ ಪರಿಣಮಿಸಿದ್ದು ಇತಿಹಾಸದಲ್ಲಿ ಕಾಣುತ್ತದೆ. ಕೇವಲ ಗೀರ್ವಾಣ ಭಾಷೆಯ ಸೇವೆಯಲ್ಲಿ

ಮಗ್ನರಾದರೆ ಜೀವನ ಅಶಕ್ಯವಾದೀತೆಂದು ಪರಿಸ್ಥಿತಿಯ ಒತ್ತಡದಿಂದ ತಿಳಿದ ಚಾಣಾಕ್ಷ, ದೂರದರ್ಶಿಗಳಾದ ವಿಚಾರವಂತರಿಗೆ ಅರ್ಥವಾಗಿರಬೇಕು. ಆದರೂ ಬಹುಸಂಖ್ಯ ಬ್ರಾಹ್ಮಣರ ಮನಃಪರಿವರ್ತನೆಯಾಗಲು ಸಾಕಷ್ಟು ಸಮಯ ಹಿಡಿಯಿತು. ವ್ಯವಹಾರದಲ್ಲಿ ಪ್ರಾಕೃತ ಅಥವಾ ದೇಶೀ ಭಾಷೆಗಳನ್ನುಪಯೋಗಿಸಬಹುದೆಂದು ಕೆಲವು ಶಾಸ್ತ್ರಸ್ಮೃತಿಗೆ ಗ್ರಂಥಗಳು ಅಪ್ಪಣೆ ಕೊಟ್ಟವು. ಜೈನರು, ಬೌದ್ಧರು ಬಹುಜನ ಸಮಾಜಕ್ಕೆ ಅವರ ಭಾಷೆಯಲ್ಲೇ ಉಪದೇಶ ಕೊಟ್ಟು ತಮ್ಮ ಪಕ್ಷಕ್ಕೆ ಅವರನ್ನು ಎಳೆದುಕೊಂಡರು. ಅಂಥ ಹೊತ್ತಿನಲ್ಲಿ ಬಹುಜನ ಸಮಾಜದಿಂದ ದೂರವಾಗಿ ನಿಲ್ಲುವದು ಬ್ರಾಹ್ಮಣರಿಗೆ ಭಯಾವಹವಾಗಿ ಕಂಡಿತು. ಅಂಥ ಪರಿಸ್ಥಿತಿಯಲ್ಲಿ ಬ್ರಾಹ್ಮಣರು ಪ್ರಾಕೃತದ ಕಡೆಗೆ ತಿರುಗದೆ ಗತ್ಯಂತರವಿರಲಿಲ್ಲ.

ಪ್ರಾಕೃತ ಭಾಷೆಯನ್ನು ಬ್ರಾಹ್ಮಣರು ಸ್ವೀಕರಿಸಿದ ನಂತರದ ದೃಶ್ಯ ಬಹಳ ಮೋಜಿನದಾಗಿದೆ. ಭಾಷೆಯ ಸ್ವರೂಪ ಎಂದಿಗೂ ಸ್ಥಿರವಾಗಿರುವದಿಲ್ಲ. ಪ್ರತಿಯೊಂದು ತಲೆಮಾರಿಗೆ ಅದು ಸ್ವಲ್ಪ ಬದಲಾವಣೆಯನ್ನು ಪಡೆದೇ ತೀರುತ್ತದೆ. ಎರಡು ಮೂರು ತಲೆಮಾರುಗಳ ನಂತರ ಅದರಲ್ಲಿ ಬಹಳಷ್ಟು ಬದಲಾವಣೆ ಬಂದು ಭಾಷೆಯಲ್ಲಿಯ ಅಂತರವು ಸಹಜವಾಗಿ ಕಾಣುತ್ತದೆ. ಹಳೆಯ ತಲೆಮಾರಿನವರು ಬದಲಾದ ಭಾಷೆಯನ್ನು ಕಂಡು ಮೂಗು ಮುರಿಯುತ್ತಾರೆ. ಭಾಷೆ ಅವನತಿಗಿಳಿಯಿತೆಂದು ಹೇಳುವ ತನಕ ಅವರ ತಿರಸ್ಕಾರ ಮುಟ್ಟುತ್ತದೆ. ಪ್ರಾಕೃತದ ಮುಂದಿನ ಅವಸ್ಥೆಗೆ 'ಅಪಭ್ರಂಶ'ವೆಂದು ಕರೆದಿದ್ದು ಈ ಮನಃಸ್ಥಿತಿಯ ದ್ಯೋತಕವಾಗಿದೆ. 'ಅಪಭ್ರಂಶ'ವೆಂದರೆ ಪತನವ ಹೊಂದಿದ ಭಾಷೆ ಎಂದು ಬೇರೆ ಹೇಳುವ ಕಾರಣವಿಲ್ಲ. ಸಂಸ್ಕೃತನಿಷ್ಠರಾಗಿದ್ದ ಸುಶಿಕ್ಷಿತ ಬ್ರಾಹ್ಮಣರು ಈ ಭಾಷೆಯನ್ನು ತಿರಸ್ಕಾರದಿಂದ ಕಂಡು ಹೆಸರಿಡತೊಡಗಿದ್ದರು. ಹತ್ತು-ಹನ್ನೆರಡನೆಯ ಶತಮಾನಗಳ ಅವಧಿಯಲ್ಲಿ ಈ 'ಅಪಭ್ರಂಶ'ದ ಹೊಟ್ಟೆಯಲ್ಲಿ ಮರಾಠಿಯ ಜನ್ಮವಾಯಿತು. ಮೊದಲು ಅಪಭ್ರಂಶವೆಂದರೆ ಪತಿತವಾದ ಭಾಷೆ. ಅದರಿಂದ ಹುಟ್ಟಿದ ಮರಾಠಿಯ ಬಗ್ಗೆ ಈ ಸಂಸ್ಕೃತಪ್ರಿಯರಿಗೆ ಎಷ್ಟು ಪ್ರೇಮವಿರಬಹುದೆಂದು ತಿಳಿಯುವದು ಊಹೆಗೆ ಬಿಟ್ಟ ವಿಷಯವಾಗಿದೆ. ಮಹಾನುಭಾವ ಪಂಥದ ಶ್ರೀಚಕ್ರಧರನು ದೇಶಭಾಷೆಯಲ್ಲಿ ಬರೆಯಲು ಮನಸ್ಸಿಲ್ಲದ ತನ್ನ ಹಿರಿಯ ಪಂಡಿತ ಶಿಷ್ಯನಿಂದ ಪ್ರಾಕೃತ ಜನರ ಉದ್ಧಾರಕ್ಕಾಗಿ ಮರಾಠಿಯಲ್ಲಿಯೇ ಗ್ರಂಥರಚನೆಯನ್ನು ಮಾಡಿಸಿದ. ನರೇಂದ್ರನಂಥ ಕವಿವರ್ಯನಿಗೆ ಮರಾಠಿಯ ಬಗ್ಗೆ ಅಭಿಜಾತವಾದ ಆತ್ಮೀಯತೆ ಹುಟ್ಟಿದ್ದು ಅವನ ಈ ಉದ್ಗಾರದಿಂದ ತಿಳಿಯುತ್ತದೆ.

"ಜಿಯೇ ಭಾಷೇಚಿಯೇ ರಸವೃತ್ತೀಃ ಸಾ ಭಾಷಾಂಚೇ ಕುಪೇ ಕೀಜೇತಿ ನಿಗುತೀ।
ತೇ ಮರ್ಹಾಟೀ ಕವಣ ಜಾಣೇ ನಿರುತೀಃ ಜೇ ರಸಾಂಚೇ ಜೀವನ।" ಪುಟ ೪೬

ನರೇಂದ್ರನದು ಒಂದೇ ಉದಾಹರಣೆಯಲ್ಲ. ಜ್ಞಾನೇಶ್ವರರು ಕೂಡ 'ಅಮೃತಾತೇಹಿ ಪೈಜೇ ಜಿಂಕೇ' ಎಂಬಂಥ ಆತ್ಮೀಯತೆಯ ಉದ್ಗಾರ ತೆಗೆದಿದ್ದಾರೆ. ಇದೆಲ್ಲ ನಿಜವಾಗಿದ್ದರೂ ಸುಶಿಕ್ಷಿತರಲ್ಲಿ ಬಹುಜನರು ಮರಾಠಿಗೆ ಅನುಕೂಲರಾಗಿರಲಿಲ್ಲವೆಂದು ಕಾಣುತ್ತದೆ. ಇಲ್ಲದಿದ್ದರೆ ಏಕನಾಥನು "ಸಂಸ್ಕೃತ ವಾಣೀ ದೇವೇ ಕೇಲೀ। ತರೀ ಪ್ರಾಕೃತ ಕಾಯ ಚೋರಾಪಾಸೋನಿ ಝಾಲೀ।" ಎಂದು ಖಂಡಿತವಾಗಿ ಸವಾಲನ್ನು ಎಸೆಯುತ್ತಿರಲಿಲ್ಲ. (ಸಂಸ್ಕೃತ ಭಾಷೆ ದೇವನಿರ್ಮಿತ, ಆದರೆ ಪ್ರಾಕೃತ ಕಳ್ಳರಿಂದ ಬಂದದ್ದಲ್ಲ). ಅದರಂತೆಯೇ ಏಕನಾಥನ ಸಮಕಾಲೀನ ದಾಸೋಪಂತನಿಗೆ ಮರಾಠಿಯೆಂದರೆ ಹೀನ ತರಗತಿಯ ಭಾಷೆಯಲ್ಲವೆಂದು ಅನೇಕ ಉದಾಹರಣೆಗಳನ್ನು ಕೊಟ್ಟು ತಿಳಿಸುವ ಪ್ರಸಂಗ ಬೀಳುತ್ತಿರಲಿಲ್ಲ. ಅದೇನೇ ಇರಲಿ 'ಅನಿಚ್ಛನ್ನಪಿ.... ಬಲಾದಿವ ನಿಯೋಜಿತಃ' ಎನ್ನುವಂತೆ ಮರಾಠಿಯ ಬಗ್ಗೆ ಅಭಿಮಾನ ತಾಳದೆ ಯಾವದೇ ವ್ಯವಹಾರಕುಶಲ ವಿಚಾರವಂತನಿಗೆ ಗತ್ಯಂತರವಿರಲಿಲ್ಲ. ಮರಾಠಿಯ ಈ ಅಭಿಮಾನದ ಜೊತೆಗೆ ಮೆಲ್ಲ ಮೆಲ್ಲಗೆ ಬ್ರಾಹ್ಮಣರು ತಮ್ಮನ್ನು ಮರಾಠೆ ಎಂದು ಕರೆದುಕೊಳ್ಳತೊಡಗಿದರು. ಅಲ್ಲದೆ, ಒಂದು ಕಾಲಕ್ಕೆ ತಾವು 'ಮರಾಠೆ' ಎಂದು ಗುರುತಿಸಲ್ಪಡುವದು ಅಪಮಾನವೆಂದು ತಿಳಿದು, ಮರಾಠಿಯ ಬಗ್ಗೆ ತಿರಸ್ಕಾರವನ್ನಿಟ್ಟುಕೊಂಡಿದ್ದ ಬ್ರಾಹ್ಮಣರಿಗೆ ಅದೆಲ್ಲ ಈಗ ಮರೆತು ಹೋದಂತಾಗಿದೆ. ಹನ್ನೆರಡನೆಯ ಶತಮಾನದ ನಂತರ ಮರಾಠಿಗೆ ಬ್ರಾಹ್ಮಣರ ಬೆಂಬ ದೊರೆಯುತ್ತ ಹೋದಂತೆ

ಮಹಾರಾಷ್ಟ್ರದ ವಿಸ್ತಾರ ಗೋದಾವರಿಯ ದಕ್ಷಿಣಕ್ಕೆ ವೇಗದಿಂದ ಬೆಳೆಯತೊಡಗಿತು. 'ಮರಹಟ್ಟೆ' ಎನ್ನುವದು ಒಂದು ವಿಶಿಷ್ಟ ಜಾತಿಯ ಹೆಸರಾಗಿ ಉಳಿಯದೆ, ಮರಾಠೆ ಅನ್ನಿಸಿಕೊಳ್ಳಲಿಕ್ಕೆ ಎಲ್ಲರೂ ಅಹಮಹಮಿಕೆಯಿಂದ ಉತ್ಸಾಹ ತಾಳಿದ್ದಾರೆ. ಕೇವಲ ಮರಾಠೆ ಅನ್ನಿಸಿಕೊಳ್ಳುವದರಿಂದ ಕೆಲಸವಾಗದೆ ಬಹುಜನ ಸಮಾಜವೆಲ್ಲ ಕೂಡಿಕೊಂಡು ಏಕರೂಪವಾಗಿ 'ಮರಾಠೆ' ಆಗುವ ಅವಶ್ಯವಿದೆ ಎಂಬ ಉಪದೇಶವನ್ನು (ಕೆಲ ಬ್ರಾಹ್ಮಣರ ರೋಷವನ್ನು ಕಟ್ಟಿಕೊಂಡು) ಬಹಿರಂಗವಾಗಿ ಸಾರುವ ಬ್ರಾಹ್ಮಣ ಪಂಡಿತರು ಇಂದು ಮುಂದೆ ಬರುತ್ತಿದ್ದಾರೆ. ಇದು 'ಮರಹಟ್ಟ'ದಲ್ಲಿಯ ವಿಶೇಷತೆಯಾಗಿದೆ.

ಅವಳಿ ಮಕ್ಕಳು : ಮರಹಟ್ಟೆ ಮತ್ತು ಕಾನಡೇ

ಕರ್ನಾಟ ಮತ್ತು ಮಹಾರಾಷ್ಟ್ರದ ನಿರ್ಮಾಣಕ್ಕೆ ಕಾರಣರಾದವರು ಒಂದೇ ಜನ ಎಂದು ಈಗ ಹೇಳಿದರೆ ಕೆಲವರಿಗೆ ಆಶ್ಚರ್ಯದ ಆಘಾತವಾಗಬಹುದು! ಬಹಳವೇನು, ಇದೊಂದು ನಂಬಲಿಕ್ಕಾಗದ ವಿಚಾರವೆಂದು ಅನ್ನಿಸಿ ಅವರಿಗೆ ಭಯವೂ ಆಗಬಹುದು. ಕನ್ನಡಿಗರು ಮತ್ತು ಮರಾಠಿಗರಲ್ಲಿ ಇತ್ತೀಚೆಗೆ ಬಂದ ದ್ವೇಷದ ನೆನಪಾದರೆ ಈ ಎರಡೂ ಪ್ರಾಂತಗಳು ಅವಳಿಗಳೆಂದು ಹೇಳಿದರೆ ವಿಚಿತ್ರವೆನಿಸಬಹುದೇನೋ ನಿಜ. ಆದರೆ, ದ್ವೇಷ ಪ್ರೀತಿಯ ವಿಕೃತ ಸ್ವರೂಪವಾಗಿದೆ. ಸೇಡು ಹೇಗೆ ಅನ್ಯಾಯದ ಪ್ರತಿಕಾರದ ಆಸುರೀ ಸ್ವರೂಪವಾಗಿದೆಯೋ ಹಾಗೇ ವೈರ ಪ್ರೀತಿಯ ವಿಕೃತರೂಪವಾಗಿದೆ. ಕರ್ನಾಟ-ಮಹಾರಾಷ್ಟ್ರಗಳಲ್ಲಿಯ ಇಂದಿನ ವಿರೋಧದ ಉಗಮ ಅವರ ಪ್ರಾರಂಭದ ಬಂಧುಪ್ರೇಮದಲ್ಲಿದೆಯೆಂಬ ಮಾತು ಐತಿಹಾಸಿಕ ಸಿಂಹಾವಲೋಕನದಿಂದ ತಿಳಿದು ಬರುವಂಥದಾಗಿದೆ.

ಮರಹಟ್ಟೆಯರ ಪೂರ್ವಪರಂಪರೆ ವೇದಕಾಲದ ಯದು ಜನರವರೆಗೆ ಹೋಗಿ ಮುಟ್ಟುತ್ತದೆಂದು ಹಿಂದಿನ ಪ್ರಕರಣದಲ್ಲಿ ನೋಡಲಾಗಿದೆಯಷ್ಟೆ. ಋಗ್ವೇದದಲ್ಲಿ ಯದುಗಳ ಜೊತೆಗೆ, ಅಷ್ಟೇ ಸಲ, ತುರ್ವಸುಗಳ ಉಲ್ಲೇಖವನ್ನು ಮಾಡಲಾಗಿದೆ. ಯದು ಮತ್ತು ತುರ್ವಸುಗಳು ಭಿನ್ನ ಮನೆತನದವರಾಗಿದ್ದರೂ ಮೂಲದಲ್ಲಿ ಅವರು ಒಂದೇ ಆಗಿರಬೇಕೆಂದು ಅನೇಕ ವಿದ್ವಾಂಸರ ಅಭಿಪ್ರಾಯವಿದೆ. ಕೀಥ ಮತ್ತು ಮ್ಯಾಕ್‌ಡೊನೆಲ್ ಇವರು ಯದು ಮತ್ತು ತುರ್ವಸು ಇವು ವ್ಯಕ್ತಿಗಳ ಹೆಸರಾಗಿರದೆ ಕ್ಲಿಷ್ಟಜನರೆಂದು ಅಭಿಪ್ರಾಯಪಟ್ಟಿದ್ದಾರೆ.[12] ಯದುಜನರಿಂದ ಮರಹಟ್ಟೆಯರ ವಿಸ್ತಾರವಾಯಿತೆಂಬುದು ನಿಜವಾಗಿದೆ. ಆದರೆ, ಕರ್ನಾಟಕ ಮತ್ತು ಯದುವಂಶಗಳ ಸಂಬಂಧವಿಲ್ಲವೆಂದು ಹೇಳಲಾಗುವದಿಲ್ಲ. ಚಾಲುಕ್ಯ ಮತ್ತು ರಾಷ್ಟ್ರಕೂಟರ ವಂಶಪರಂಪರೆಯನ್ನು ಯಾದವ ಜನರ ವರೆಗೆ ಒಯ್ಯಲಾಗುತ್ತಿದೆ. ಡಾ|| ಅಳತೇಕರರು ಅಭಿಜಾತ ಕರ್ನಾಟಕೀಯವೆಂದು ಹೆಸರಾದ ರಾಷ್ಟ್ರಕೂಟರ ವಂಶ ಯಾದವವಂಶದ ಸಾತ್ಯಕಿಯ ಶಾಖೆಯಿಂದ ಹುಟ್ಟಿತೆಂದು ಆ ಮನೆತನದ ತಾಮ್ರಪಟ ಮತ್ತು ಶಿಲಾಲೇಖಗಳಿಂದ ಸಿದ್ಧಪಡಿಸಿದ್ದಾರೆ. ಮೈಸೂರಿನ ಇಂದಿನ ರಾಜಮನೆತನ ಯದುವಂಶೀಯವೆಂಬ ಮಾತು ಈಗಾಗಲೇ ಪ್ರಸಿದ್ಧವಾಗಿವೆ.

ಮರಾಠಿಗರ ಸಂಬಂಧ ಯದುವಂಶದವರೊಡನೆ ಇರುವಂತೆ ಹಳೆಯ ಪರಂಪರೆಯನ್ನು ನೋಡಿದರೆ ಕರ್ನಾಟಕದ ಸಂಬಂಧ ತುರ್ವಸುವಿನೊಡನೆ ಘನಿಷ್ಠವಾಗಿರುವಂತೆ ತೋರುತ್ತದೆ. ಯಯಾತಿಯ ಶಾಪದಿಂದ ಪತಿತರಾಗಿದ್ದ ತುರ್ವಸು ವಂಶೀಯರು ದಕ್ಷಿಣಕ್ಕೆ ಬಂದು ರಾಜ್ಯವಾಳತೊಡಗಿದರು ಎಂದು ಹೇಳಲಾಗುತ್ತಿದೆ. ಮಹಾಭಾರತ, ಆದಿಪರ್ವ, ಅಧ್ಯಾಯ ೮೫ರಲ್ಲಿ ಉಲ್ಲೇಖಗಳಿವೆ. ಮತ್ಸ್ಯ ಪುರಾಣದಲ್ಲಿ ತುರ್ವಸುವಂಶದ ದಕ್ಷಿಣಾಪಥದಲ್ಲಿಯ ಮನೆತನಗಳ ಬಗ್ಗೆ ಉಲ್ಲೇಖಉಂಟು.

ತುರ್ವಸೋಽಸ್ತು ಸುತೋ ಗರ್ಭೋ ಗೋಭಾನುಸ್ತಸ್ಯಚಾತ್ಮಜಃ।
ಗೋಭಾನೋಽಸ್ತು ಸುತೋ ವೀರಃ ತ್ರಿಸಾರಿಶ್ಚಾಪರಾಜಿತಃ॥
ಪಾಂಡ್ಯಶ್ಚ ಕೇರಲಶ್ಚೈವ ಚೋಲಃ ಕರ್ಣಸ್ತಥೈವ ಚ।
ತೇಷಾಂ ಜನಪದಾಃ ಸ್ಫೀತಾಃ ಪಾಂಡ್ಯಾಶ್ಚೋಲಾಸ್ಸಕೇರಲಾಃ ॥ ೪೮.೫

ಈ ಶ್ಲೋಕಗಳಲ್ಲಿ ಪಾಂಡ್ಯ, ಕೇರಳ, ಚೋಳಗಳ ಜೊತೆಗೆ ಹೆಸರಿಸಿದ ಕರ್ಣ (ಜನ)ರು ಕನ್ನಡಿಗರೇ ಇರಬೇಕು. ಯಾಕಂದರೆ ದಕ್ಷಿಣಾಪಥದಲ್ಲಿ ಪಾಂಡ್ಯ, ಕೇರಳ, ಚೋಳರ ಹತ್ತಿರ ನಾಮಸಾದೃಶ್ಯದ ಪ್ರದೇಶವೆಂದರೆ ಕರ್ಣಾಟಕವಲ್ಲದೆ ಬೇರೆ ಯಾವದೂ ಅಲ್ಲ. ಮನುಸ್ಮೃತಿಯಲ್ಲಿ 'ಝುಲ್ಲೋಮಲ್ಲ'ರ ಜೊತೆಗೆ 'ನಟ' ಮತ್ತು 'ಕರಣ'ರು ಇವರ ಹೆಸರುಗಳು ವ್ರಾತ್ಯಕ್ಷತ್ರಿಯರ ಯಾದಿಯಲ್ಲಿವೆ. (೧೦-೨೩) ರಾಜವಾಡೆ ಮೊದಲಾದ ವಿದ್ವಾಂಸರು ನಟರು ಮತ್ತು ಕರಣರು ಇಂದಿನ ಕರ್ಣಾಟದ ಮೂಲಪುರುಷರೆಂದು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ, ಮನುಸ್ಮೃತಿಯಲ್ಲಿಯ 'ಕರಣ'ರು ಮತ್ಸ್ಯಪುರಾಣದಲ್ಲಿಯ 'ಕರ್ಣ' ಇವು ಭಿನ್ನ ಭಿನ್ನವಾದ ಹೆಸರುಗಳಾಗಿರದೆ ಒಂದೇ ಎಂಬುದರಲ್ಲಿ ಸಂಶಯವಿಲ್ಲ. ಕಣ್ಣ ಜನರು ಪ್ರಾಚೀನ ಕಾಲದಲ್ಲಿ ಕರ್ನಾಟಕದಲ್ಲಿದ್ದರೆಂಬುದಕ್ಕೆ ಅಲ್ಲಿಯ ಗ್ರಾಮನಾಮಗಳು ಸಾಕ್ಷಿಯಾಗಿವೆ. 'ಕಣ್ಣ-ವಾಡ', 'ಕಣ್ಣ-ದೇಶ', 'ಕಣ್ಣ-ನಾಡ', 'ಕಣ್ಣ-ಪಾಡಿ', (ಕಣ್ಣಂಬಾಡಿ) ಮೊದಲಾದ ಸ್ಥಳನಾಮಗಳು ಜನವಾಚಕವಾಗಿವೆ. ಸಂಸ್ಕೃತದಲ್ಲಿಯ 'ಕರ್ಣ' ಪ್ರಾಕೃತದಲ್ಲಿ 'ಕಣ್ಣ'ವೆಂದಾಗುತ್ತದೆ. ಕಣ್ಣ ಜನರು ತುರ್ವಸು ವಂಶೀಯರೆಂದು ಮತ್ಸ್ಯಪುರಾಣದಿಂದ ನಮಗೆ ತಿಳಿಯುತ್ತದೆ.

ಕರ್ನಾಟಕದಲ್ಲಿಯ ಪ್ರಾಚೀನ ಗಂಗರಾಜರು ತುರ್ವಸು ವಂಶೀಯರಾಗಿದ್ದರು. ಗಂಗಾತೀರದಿಂದ ಅವರು ದಕ್ಷಿಣಕ್ಕೆ ಬಂದರೆಂದು ಅವರ ವಂಶಾವಳಿಗಳಿಂದ ಗೊತ್ತಾಗುತ್ತದೆ. ಆರ್. ನರಸಿಂಹಾಚಾರ್ಯರು ಗಂಗರ ರಾಜಮನೆತನಗಳ ಬಗ್ಗೆ, ಅವರ ವಂಶಪರಂಪರೆಯ ಬಗ್ಗೆ ತಮ್ಮ ಲೇಖನದಲ್ಲಿ ಈ ಸಂಗತಿಯನ್ನು ನಮೂದಿಸಿದ್ದಾರೆ. (ಕರ್ಣಾಟಕ ಸಾಹಿತ್ಯ ಪರಿಷತ್ ಪತ್ರಿಕೆ, ೧೯೨೪). ತುರ್ವಸು ವಂಶದ ರಾಜರು ಚೋಳ, ಪಾಂಡ್ಯ, ಕೇರಳಾದಿ ರಾಜ್ಯಗಳನ್ನು ಸ್ಥಾಪಿಸಿದರೆಂದು ಪದ್ಮಪುರಾಣದಲ್ಲಿ ಆಧಾರವಿದೆ. ಇದು ಅಸಂಭಾವ್ಯವೆಲ್ಲವೆಂದು "Ancient Indian Historical Traditions" ಎಂಬ ಗ್ರಂಥದಲ್ಲಿ ಪಾರ್ಜಿಟರ್ ಹೇಳಿದ್ದಾರೆ. ಗಂಗರಂತೆ ವಿಜಯನಗರದ ಕೊನೆಯ ರಾಜವಂಶ ತುರ್ವಸು ವಂಶೀಯವೆಂದು ಕೆಲ ಶಿಲಾಲೇಖಗಳಿಂದ ತಿಳಿಯುತ್ತದೆ.[೧೮]

ಈ ರೀತಿಯಲ್ಲಿ ಕರ್ಣಾಟ ಮತ್ತು ಮರ್ಹಾಟಗಳ ಜೊತೆಗೆ ಯದು ತುರ್ವಸುಗಳ-ಜೊತೆಗೆ ನಿಕಟವಾದ ಸಂಬಂಧವಿತ್ತೆಂದು ಸಿದ್ಧವಾಗುತ್ತದೆ. ಋಗ್ವೇದದಲ್ಲಿ ಇವರಿಬ್ಬರ ಉಲ್ಲೇಖ ಅವಳಿ ಅಣ್ಣತಮ್ಮಂದಿರಂತೆ ಬಹುಶಃ ಎಲ್ಲೆಡೆಗೂ ಬಂದಿದೆ. ಎಲ್ಲೆಲ್ಲಿ ಯದುವಿನ ಹೆಸರು ಬರುತ್ತದೋ ಅಲ್ಲಲ್ಲಿ ತುರ್ವಸುವಿನಿಂದ ಹೆಸರು ಬಂದೇ ಬರುತ್ತದೆ. ಒಂದೆರಡು ಕಡೆಯಲ್ಲಿ ಮಾತ್ರ 'ತುರ್ವ' (೧೦-೬೨-೧೦) ಮತ್ತು ವಶ (೧೦-೪೦-೭) ಹೀಗೆ ಪದಚ್ಛೇದ ಮಾಡಿದ ಶಬ್ದಗಳು ಸಿಗುತ್ತವೆ. ಈ ಪದಚ್ಛೇದ ಕೂಡ ಒಂದು ದೃಷ್ಟಿಯಿಂದ ಸಾಕಷ್ಟು ಉದ್ಬೋಧಕವಾಗಿದೆ. 'ತುರ್ವಶ' ಇದು ಒಂದೇ ಅಖಂಡವೆಂಬ ಹೆಸರೆಂದು ತಿಳಿಯುವ ಕಾರಣವಿಲ್ಲ. ತುರ್ವ ಮತ್ತು ವಶ ಕೂಡಿಕೊಂಡು ಈ ಸಾಮಾಜಿಕ ಶಬ್ದವಾಗಿರಬೇಕೆಂಬುದು ನಿಶ್ಚಿತವಾಗಿದೆ. ವಶ ಜನರ ಉಲ್ಲೇಖ ಬ್ರಾಹ್ಮಣ ಗ್ರಂಥಗಳಲ್ಲಿದೆ.[೧೯] ವಶಾ ಇದರ ಅರ್ಥ ಆಕಳು ಎಂದಾಗುತ್ತದೆ. ಇದರಿಂದಾಗಿ ವಶರೆಂದರೆ ಪಶುಪಾಲಕ-ಗವಳಿಗಳಾಗಿದ್ದರೆಂದು ತಿಳಿದರೆ ಅನುಚಿತವಾಗುವದಿಲ್ಲ. ಯದುಗಳು ಗವಳಿಗಳಿದ್ದರೆಂಬುದು ವಿಖ್ಯಾತವಾದ ಸಂಗತಿಯಾಗಿದೆ. ಯದುವಿನ ಜೊತೆಯಲ್ಲಿ ಉಲ್ಲೇಖಿತರಾದ ತುರ್ವಶರೂ ಗೋಪಾಲಕವೃತ್ತಿಯವರಾಗಿದ್ದರೆಂಬುದು ಹೇಳುವ ಕಾರಣವಿಲ್ಲ. ಮತ್ತು ತುರ್ವಶದಲ್ಲಿ ವಶ ಶಬ್ದ ಪಶುವಸು ಅಂದರೆ ಅವುಗಳನ್ನೇ ನಿರ್ದೇಶಿಸುತ್ತದೆ. ವೇದದಲ್ಲಿಯ ತುರ್ವಶರು, ಮಹಾಭಾರತದಲ್ಲಿಯ ತುರ್ವಸು ಎಂಬ ಹೆಸರಿನಿಂದ ಗುರುತಿಸಲ್ಪಡುತ್ತಾರೆಂದು ವಿದ್ಯಾನಿಧಿ ಶ್ರೀ ಚಿತ್ರಾವ ಶಾಸ್ತ್ರಿಗಳು ತಮ್ಮ ಪ್ರಾಚೀನ ಕೋಶದಲ್ಲಿ ಬರೆದಿದ್ದಾರೆ.

"ಯಾದವಂ ಗೋ(ಮಹಿಷಾದಿಕೇ) ಧನೇ" ಈ ವಾಕ್ಯದೊಡನೆ ಅದರಲ್ಲಿಯ 'ಯಾದಃ' ಶಬ್ದದ ಅರ್ಥ ಕೂಡ ವಿಚಾರಣೀಯವಾಗಿದೆ. 'ಯಾದಃ' ಇದು ರಸಾರ್ಥಕ ಶಬ್ದವಾಗಿದೆ. 'ಅಂಧಸ್' 'ಹಾಲು'ಗಳಂತೆ ಈ ರಸಾರ್ಥಕ ಶಬ್ದಕ್ಕೂ ಹಾಲು ಎಂಬ ಅರ್ಥವಿರುವದು ಶಕ್ಯವಿದೆ. ಗೋಪಾಲಕ ವೃತ್ತಿಯ ಯಾದವರ ಹೆಸರಿನ ರಹಸ್ಯ ಹೆಚ್ಚು ಎದ್ದು ಕಾಣುವಂತಾಗುತ್ತದೆ. ಯಾದವರ ಆಪ್ತಬಾಂಧವರೆಂದು ನಿಶ್ಚಿತವಾದ ತುರ್ವಶರ ಹೆಸರೂ ಕೂಡ ಸಾರ್ಥವಾಗಿರುವದು ಅಶಕ್ಯವೇನಲ್ಲ. ತುರ್ವಶ ಅಥವಾ ತುರ್ವಸು ಇದು ಜೋಡುಶಬ್ದವೆಂದು ಮೇಲೆ ಹೇಳಿದ್ದಾಗಿದೆ. ಇದರೊಳಗಿನ ವಶ ಇಲ್ಲವೆ ವಸು ಶಬ್ದದ ವ್ಯುತ್ಪತ್ತಿ ವಿಚಾರಾರ್ಹವಾಗಿದೆ. ಸಮಾಜ ವಿಕಾಸಕ್ರಮದ ಇತಿಹಾಸದ ನೆರವನ್ನು ಪಡೆದುಕೊಂಡರೆ ಈ ಶಬ್ದದ ಒಡಪು ಸುಲಭವಾಗಿ ಒಡೆಯಬಹುದು. ಮನುಷ್ಯನ ಪ್ರಾರಂಭಿಕ ಅವಸ್ಥೆಯಲ್ಲಿ ಅವನು ಸಾಕಿದ್ದ ಪ್ರಾಣಿಗಳೇ ಅವನ ಸಂಪತ್ತು ಎಂದು ತಿಳುವಳಿಕೆ ಇತ್ತು. ಬೆಳ್ಳಿ-ಬಂಗಾರಗಳಿಗೆ ಮಹತ್ವ ಬಂದದ್ದು ಆಮೇಲಿನ ಕಾಲದಲ್ಲಿ. ಜಗತ್ತಿನ ಸಾಮಾಜಿಕ ವಿಕಾಸಕ್ರಮದ ಇತಿಹಾಸದ ಪ್ರತಿಬಿಂಬ ಸ್ಪಷ್ಟವಾಗಿ ಇಲ್ಲವೆ ಅಸ್ಪಷ್ಟವಾಗಿ ಆಯಾ ಜನರ ಭಾಷೆಯ ಶಬ್ದಗಳಲ್ಲಿ ಮೂಡಿದ್ದು ಕಾಣುತ್ತದೆ. Cattle ಮತ್ತು Capital ಈ ಶಬ್ದಗಳ ಮೂಲದಲ್ಲಿಯ ನಿಕಟ ಸಂಬಂಧ ಇದಕ್ಕೊಂದು ಉದಾಹರಣೆಯಾಗಿದೆ. ಗೋಧನ ಎಂಬ ಶಬ್ದದಿಂದ ಕನ್ನಡದ 'ದನ' ಶಬ್ದ ರೂಢವಾಗಿದೆ. ಇದೇ ಕ್ರಮ ವಶಾವಸು (ಸಂಪತ್ತು), ಪಶು-ವಸು ಈ ಶಬ್ದಗಳ ನಿರ್ಮಾಣಕ್ಕೆ ಕಾರಣವಾಗಿರಬೇಕೆಂದು ತಿಳಿದರೆ ತಪ್ಪಿಲ್ಲ. ಋಗ್ವೇದದಲ್ಲಿಯ 'ಅಜಾಃ' 'ಶಿಗ್ರುಃ' ಈ ಬಗೆಯ ಜನವಾಚಕ ಸಾರ್ಥ ಹೆಸರುಗಳು ನೆನಪಾದರೆ ಯದುವಿನಂತೆ ತುರ್‌ವಶ-ತುರ್‌ವಸು ಈ ಹೆಸರುಗಳೂ ಅರ್ಥಪೂರ್ಣವಾಗಿವೆಯೆಂದು ಗೊತ್ತಾಗುತ್ತದೆ.

ಈಗ 'ತುರ್ವ' ಶಬ್ದದ ಅರ್ಥ ಏನಿರಬಹುದೆಂದು ಪ್ರಶ್ನೆ ಹುಟ್ಟಬಹುದು. ಹಳೆಯ ದ್ರಾವಿಡವರ್ಗೀಯ ಭಾಷೆಗಳಲ್ಲಿ 'ತುರು' ಎಂದರೆ ಗೋಸಮುದಾಯ. ಕನ್ನಡದಲ್ಲಿ ಈ ಶಬ್ದ ಇದೇ ಅರ್ಥದಲ್ಲಿ ಇಂದಿಗೂ ಬಳಕೆಯಲ್ಲಿದೆ. ಗವಳಿ ಎಂಬ ಅರ್ಥದಲ್ಲಿ 'ತುರುಕಾರ' ಶಬ್ದ 'ಹಟ್ಟಿಕಾರ' ಶಬ್ದದ ಪರ್ಯಾಯ ರೂಪವಾಗಿ ಕನ್ನಡದಲ್ಲಿ ಉಪಯುಕ್ತವಾಗುತ್ತದೆ. ಬೆಳಗಾವಿ ಜಿಲ್ಲೆಯಲ್ಲಿ ಸಾಕಷ್ಟು ದೇಸಾಯಿ ಮನೆತನಗಳು ತುರುಕಾರರ ವಂಶದವಾಗಿವೆ. ಇದರಿಂದ ತುರುಜನರ ಅಸ್ತಿತ್ವ ಸಿದ್ಧವಾಗುತ್ತಿದ್ದು ಅವರು ಗೋಪಾಲಕ ವೃತ್ತಿಯವರಿದ್ದರೆಂದು ಸ್ಪಷ್ಟವಾಗುತ್ತದೆ. ವೇದಕಾಲದ ತುರ್ವ (ತುರ್ವಶ) ಜನರು ಇಂದಿಗೂ ಕರ್ನಾಟಕದಲ್ಲಿರುವ ತುರುಕಾರ (ಹಟ್ಟಿಕಾರ) ಜನರ ಪೂರ್ವಜರಾಗಿದ್ದರೆಂದು ಹೇಳಲು ಯಾವ ಅಡ್ಡಿಯೂ ಇಲ್ಲ. ತುರು (ಕಾರ) ಈ ಶಬ್ದದ ಆಧಾರದಿಂದ ತುರ್ವಶರನ್ನು ಯವನ (ತುರ್ಕಿ)ರೆಂದು ಊಹಿಸುವ ಮಟ್ಟಿಗೆ ಪರಂಪರಾವಿಚ್ಛೇದವಾಗಿದೆ (ಯದೋಽಸ್ತು ಯಾದವಾ ಜಾತಾಃ ತುರ್ವಸೋರ್ಯವನಾಃ ಸ್ಮೃತಾಃ)

ತುವರ್ಸಗಳು ತುರ್ಕರಾಗಿದ್ದರೆಂಬ ತರ್ಕ ನಾಮಸಾದೃಶ್ಯದಿಂದ ಹುಟ್ಟಿರಬೇಕೆಂದು ತೋರುತ್ತದೆ. ಕರ್ನಾಟಕದಲ್ಲಿಯ ತುರುಕಾರರನ್ನೂ ಹೀಗೆಯೇ ತುರುಕರೆಂದು ಭಾವಿಸಿದ್ದರೆ ಆಶ್ಚರ್ಯವೇನಿಲ್ಲ. ಯಾಕೆಂದರೆ 'ತುರ್ವಸು'ವಿಗಿಂತ 'ತುರುಕಾರ' ಶಬ್ದವೇ ತುರುಕರಿಗೆ ಹತ್ತಿರವಾಗಿದೆ. ತುರುಕಾರರು ಮುಸಲ್ಮಾನರಿದ್ದವರು ಹಿಂದೂಗಳಾದರೆಂಬ ತಿಳುವಳಿಕೆಯಿಂದ ಕೆಲ ಲಿಂಗಾಯತ ಉಪಜಾತಿಗಳ (ಪಂಚಮಸಾಲಿ) ಅವರಿಂದ ದೂರವಿರಲಿಕ್ಕೆ ಪ್ರಯತ್ನಿಸಿದರು. ತುರುಕಾರರೂ ಈಗ ಲಿಂಗಾಯತರಾಗಿದ್ದಾರೆ. ವೀರಶೈವ ಲಿಂಗಾಯತ ಪಂಥ ಒಂದು ಪ್ರಸಾರಕ ಧರ್ಮವಾದ್ದರಿಂದ ಕುರುಬ, ರೆಡ್ಡಿ, ಒಕ್ಕಲಿಗರಂಥ ಅನೇಕ ಉಪಜಾತಿಗಳು ಆ ಧರ್ಮದಲ್ಲಿ ಸೇರಿಹೋದವು. ಆದರು ಅವರು ತಮ್ಮ ಪೂರ್ವದ ಶಾಖೆಯ ಹೆಸರನ್ನು ಬಿಟ್ಟುಕೊಡಲಿಲ್ಲ. ಇದರಿಂದಾಗಿ ಲಿಂಗಾಯತ ಪಂಥದಲ್ಲಿ ಸೇರ್ಪಡೆಯಾದ ಪ್ರಾಚೀನ ಜಾತಿಗಳು, ಜನರ ಹೆಸರು ಇಂದಿಗೂ ಅಸ್ಪಷ್ಟ ಕೇಳಿಬರುತ್ತಿವೆ. ಅವುಗಳಲ್ಲಿ ಈ ತುರುಕಾರರದೂ ಒಂದು ಉಪಜಾತಿಯಾಗಿದೆ. ಶಿವಾಜಿಯು ದಕ್ಷಿಣಕ್ಕೆ ದಾಳಿ ಮಾಡಿದಾಗ ಬೆಳಗಾವಿಯ ಹತ್ತಿರ ಸಾಮರ್ಥ್ಯದಿಂದ ಅವನನ್ನು ವಿರೋಧಿಸಿ ಅವನ ಸೈನ್ಯವನ್ನು ತಡೆದು ನಿಲ್ಲಿಸಿದ್ದ ಮತ್ತು ಧೈರ್ಯ ಮತ್ತು ಪರಾಕ್ರಮಗಳಿಗೆ ಶಿವಾಜಿಯಿಂದ ಮೆಚ್ಚುಗೆಯನ್ನು ಪಡೆದ 'ಬೆಳವಡಿಯ ದೇಸಾಯಿಣಿ ಮಲ್ಲಮ್ಮ'

ವೀರ ತುರುಕಾರರ ಮನೆತನದವಳಾಗಿದ್ದಳು; ಇದು ಅಲ್ಲಿಯ ಹಳೆಯ ದಪ್ತರಗಳಲ್ಲಿ ನಮೂದಾಗಿದೆ. ಈ ತುರುಕಾರರು ಜಹಗೀರದಾರ, ದೇಸಾಯಿ ಇವೆರೆಲ್ಲ ಪಾಟೀಲ-ಗೌಡರ ಮನೆತನದವರು. ಒಕ್ಕಲಿಗ, ರೆಡ್ಡಿ, ಪಾಟೀಲರ ಮನೆತನಗಳ ದೇಸಾಯಿಗಳು ಈ ಭಾಗದಲ್ಲಿದ್ದಾರೆ. ತುರುಕಾರರು ತುರುಕ ಮುಸಲ್ಮಾನರ ಕಡೆಯವರೆಂಬ ತಿಳುವಳಿಕೆಯಿಂದ ಉಳಿದವರು ಇವರನ್ನು ದೂರವಿಡುತ್ತಿದ್ದರು. ಕೊನೆಗೊಬ್ಬ ಲಿಂಗಾಯತ ಮಠಾಧಿಕಾರಿ ಈ ತಪ್ಪು ತಿಳುವಳಿಕೆಯನ್ನು ದೂರಮಾಡಲು ಮುಂದಾಳಾಗಬೇಕಾಯಿತು. ಅವರು, ಒಂದು ಸಣ್ಣ ಪುಸ್ತಕವನ್ನು ಪ್ರಕಟಿಸಿ, "ತುರುಕಾರರು ತುರ್ಕಿ ಮುಸಲ್ಮಾನರಾಗಿರದೆ ತುರ್ಕರ ಅರಿ ಅಂದರೆ ವೈರಿಗಳಾಗಿದ್ದರು. ಆದ್ದರಿಂದ ಅವರಿಗೆ ತುರುಕಾರ ಎಂಬ ಹೆಸರು ಪ್ರಾಪ್ತವಾಯಿತು. ಅಂಥ ಯವನ ವಿರೋಧಿಗಳನ್ನು ಮುಸಲ್ಮಾನರೆಂದು ತಿಳಿಯುವದು ಹುಚ್ಚುತನ" ಎಂದು ಬಹಿರಂಗವಾಗಿ ಸಾರಿದರು!

ಸಂಸ್ಕೃತ ಗ್ರಂಥಕರ್ತರೇ ತುರ್ವಸುಗಳನ್ನು ಯವನರೆಂದು ತಿಳಿದುಕೊಂಡಿದ್ದಾಗ ತುರುಕಾರರ ಬಗ್ಗೆ ಈ ತಪ್ಪು ತಿಳುವಳಿಕೆ ಸಾಮಾನ್ಯ ಮನುಷ್ಯರಲ್ಲಿರುವದು ಸಹಜವೇ ಆಗಿದೆ. ಆದರೆ, ಜಗತ್ತಿನ ಅತ್ಯಂತ ಪ್ರಾಚೀನ ಗ್ರಂಥವಾದ ಋಗ್ವೇದದಲ್ಲಿಯೇ ಯದು-ತುರ್ವಸುಗಳ ಉಲ್ಲೇಖವಿದ್ದಾಗ ಈ ತಿಳುವಳಿಕೆ ಪೂರ್ಣ ಸುಳ್ಳಾಗಿದೆಯೆಂದು ಸಿದ್ಧವಾಗುತ್ತದೆ. ಪೂರ್ವಪರಂಪರೆ ಕಡಿದು ಹೋದಾಗ ನಾವು ಹೇಗೆ ಅಜ್ಞಾನದಲ್ಲಿ ತೊಳಲಾಡುತ್ತಿರುವವೆಂಬ ಕಲ್ಪನೆ ಇದರಿಂದ ಬರುವಂತಿದೆ. ಮೊಹೆಂಜೊದಾರೋಗಳಂಥ ದೊಡ್ಡ ನಗರಗಳು ಮತ್ತು ವೇದಗಳಲ್ಲಿಯ ಐತಿಹಾಸಿಕ ಮಾಹಿತಿ ದೊರಕಿರುವದರಿಂದ ಆ ಕಾಲದ ಚಿತ್ರದ ಗೆರೆಗಳು ಮಸುಕಾಗಿ ಕಾಣತೊಡಗಿವೆ. ಕಗ್ಗತ್ತಲೆಯ ರಾತ್ರಿಯಲ್ಲಿ ಮಿಂಚುಹೊಳೆದಾಗ ಸುತ್ತಲಿನ ಕತ್ತಲೆ ಎಷ್ಟು ಗಾಢವಾಗಿರುತ್ತದೆಂಬ ಕಲ್ಪನೆ ಬರುವಂತೆ ನಮ್ಮ ಪೂರ್ವಪರಂಪರೆಯ ಬಗ್ಗೆ ನಮ್ಮ ಸ್ಥಿತಿಯಾಗಿದೆ.

ವೇದಕಾಲದ ಯದು-ತುರ್ವಸುಗಳಂಥ ಅವಳಿ ಹೆಸರುಗಳಂತೆ ಅಶೋಕನ ಖಾರವೇಲ ಮೊದಲಾದ ಶಾಸನಗಳಲ್ಲಿ ರಿಸ್ಥಿಕ-ಭೋಜಕದಂಥ ಜೋಡಿ ಹೆಸರುಗಳು ದೊರೆಯುತ್ತವೆ. ಪ್ರಾಚೀನ ರಿಸ್ಥಿಕ-ಭೋಜಕರ ವಸಾಹತುಗಳು ಹತ್ತಿರವಿರಬೇಕೆಂದು ಡಾ. ಬಿ. ಸಿ. ಲಾ. ಇವರು ಊಹಿಸಿದ್ದಾರೆ.[೨೦] ಭೋಜಕರು ವರ್‍ಹಾಡದವರೆಂಬುದು ನಿಶ್ಚಿತವಾಗಿದೆ. ಅಂದಮೇಲೆ ರಿಸ್ಥಿಕರ ವಸಾಹತು ಕೂಡ ಅದರ ಹತ್ತಿರವೇ ಇರಬೇಕೆಂಬುದು ತರ್ಕ ಸಮ್ಮತವಾಗಿದೆ. ರಿಷ್ಟಿಕರು ರಾಷ್ಟ್ರಕೂಟ ಪೂರ್ವಜರಾಗಿದ್ದರೆಂದು ಕೆಲವರ ಅಭಿಪ್ರಾಯವಿದೆ. ಈ ಅಭಿಪ್ರಾಯ ನಿಜವಾಗಿದ್ದರೆ ರಾಷ್ಟ್ರಕೂಟರ ಇತಿಹಾಸದಲ್ಲಿಯ ಒಂದು ಸಮಸ್ಯೆಗೆ ಪರಿಹಾರ ಸಿಕ್ಕಂತಾಗುತ್ತದೆ. ರಾಷ್ಟ್ರಕೂಟರ ರಾಜಧಾನಿ ಮಳಖೇಡದಲ್ಲಿತ್ತು ಮತ್ತು ರಾಷ್ಟ್ರಕೂಟರ ಮುಖ್ಯಕೇಂದ್ರ ಕರ್ನಾಟಕದ ಭಾಗದಲ್ಲಿತ್ತು ಮತ್ತು ರಾಷ್ಟ್ರಕೂಟರ ಮನೆತನ ಕರ್ನಾಟಕದ್ದು ಎಂಬುದು ಡಾ. ಅಳತೇಕರರ ನಿಶ್ಚಿತ ಅಭಿಪ್ರಾಯವಾಗಿದೆ. ರಾಷ್ಟ್ರಕೂಟರು ಕರ್ನಾಟಕದವರಾಗಿದ್ದರೆ ಅವರ ಮೂಲಮನೆತನಗಳು ಕರ್ನಾಟಕದಲ್ಲಿರದೆ ವರ್‍ಹಾಡದಲ್ಲಿ ಹೇಗೆ? ಇದಕ್ಕೆ ಉತ್ತರವೆಂದು ಕರ್ನಾಟಕದ ಕೆಲವು ಮನೆತನಗಳು ವಸಾಹತು ಮಾಡಲು ವರ್‍ಹಾಡಕ್ಕೆ ಬಂದರೆಂದು ಗೃಹೀತ ಹಿಡಿಯಬೇಕಾಗುತ್ತದೆ. (Rashtrakutas and their Times, p. 4.) ಆದರೆ, ಭೋಜಕರ ಜೊತೆಯಲ್ಲಿ ವರ್‍ಹಾಡದ ಸುತ್ತಮುತ್ತಿನಲ್ಲಿ ರಿಷ್ಟಿಕರು ಮೊದಲಿನಿಂದಲೂ ಬೇರುಬಿಟ್ಟಿದ್ದ ಸಂಗತಿಯನ್ನು ಅಲಕ್ಷಿಸಿದರೆ ಈ ಸಮಸ್ಯೆಗೆ ಸರಿ ಉತ್ತರ ಸಿಗಲಾರದು.

'ರಾಷ್ಟಿಕ' ಈ ಶಬ್ದದ ಅರ್ಥ ರಾಷ್ಟ್ರದವನು ದೇಶದವನು, (Indigenours, native) ಎಂದಾಗುತ್ತದೆ. ರಾಷ್ಟಿಕರು ರಾಷ್ಟ್ರಕೂಟದ ಪೂರ್ವಜರಾಗಿದ್ದರೆಂಬ ಸಂಗತಿ ಈಗ ನಿಶ್ಚಿತವಾಗಿದೆ. ರಾಷ್ಟಿಕರೆಂದರೆ ದೇಶದ ಮೂಲ ನಿವಾಸಿಗಳು ಎಂಬ ಅರ್ಥ ನಿಜವಾಗಿದ್ದರೆ, 'ರಾಷ್ಟಿಕ'ವೆಂಬ ಶಬ್ದ ಇನ್ನೊಂದು ದೇಶ್ಯ ಶಬ್ದದ ಭಾಷಾಂತರ ವಿರಲಿಕ್ಕೇ ಬೇಕು. ಯಾಕಂದರೆ ಈ ದೇಶದ ಮೂಲನಿವಾಸಿಗಳು ಆರ್ಯರಿಗಿಂತ ಮೊದಲು ಸಂಸ್ಕೃತವನ್ನರಿಯದ ವರ್ಗದ ಜನರಾಗಿದ್ದರು. ಈ ದೃಷ್ಟಿಯಿಂದ ನೋಡಿದಾಗ 'ರಾಷ್ಟಿಕ' ಶಬ್ದ, ಈ ದೇಶದ, ಈ ಮೂಲದ ಎಂಬ ಅರ್ಥದ ಸಂಸ್ಕೃತ ಶಬ್ದವಾಗಿರಬೇಕು. ಅದು ಭಾಷಾಂತರಿತವಾಗಿರುವ ಶಕ್ಯತೆ ಇದೆ.

ಕರ್ನಾಟಕದಲ್ಲಿ 'ನಾಡವ' ಎಂಬ ಜಾತಿಯ ಜನರಿದ್ದಾರೆ. ಇವರನ್ನು ಜಾತಿ ಎಂದು ಕರೆಯದೆ ಜನವೆಂದು ಕರೆಯುವದು ಹೆಚ್ಚು ಯೋಗ್ಯವಾಗಬಹುದು. 'ನಾಡವ' ಎಂದರೆ ಈ ನಾಡಿನ, ಈ ದೇಶದ ಎಂದು ಅರ್ಥವಿದೆ. 'ರಾಷ್ಟ್ರಿಕ' ಶಬ್ದ 'ನಾಡವ'ದ ಭಾಷಾಂತರಿತ ರೂಪವಾಗಿರಬೇಕು. ರಾಷ್ಟ್ರಕೂಟ ದೊರೆ ನೃಪತುಂಗ (ಕ್ರಿ. ಶ. ೮೦೫)ನ ಹೆಸರಿನಿಂದ ಪ್ರಸಿದ್ಧವಾಗಿರುವ 'ಕವಿರಾಜಮಾರ್ಗ'ವೆಂಬ ಅಲಂಕಾರ ಗ್ರಂಥವಿದೆ. ಅದರಲ್ಲಿ ಮೂರು ನಾಲ್ಕು ಕಡೆಗೆ ನಾಡವರ ವರ್ಣನೆ ಇದೆ. ವಾಸ್ತವಿಕವಾಗಿ ಅದು ಸಾಹಿತ್ಯಶಾಸ್ತ್ರದ ಗ್ರಂಥ. ಹೀಗಿದ್ದರೂ ನಾಡವರ ಬಗ್ಗೆ ಗೌರವದಿಂದ, ಅಭಿಮಾನದಿಂದ ಆ ಕವಿ ಹೇಳುವ ಮಾತುಗಳು ವಿಚಾರಾರ್ಹವಲ್ಲವೇ? ನಾಡವರು ಅಭಿಜಾತ ರಸಿಕರಾಗಿದ್ದರು, ವಿಶೇಷ ಶಿಕ್ಷಣವಿಲ್ಲದಿದ್ದರೂ 'ಕಾವ್ಯಪ್ರಯೋಗ ಪರಿಣತಮತಿ' ಗಳಾಗಿದ್ದರು ಎಂದು ನಾಡವರನ್ನು ಪ್ರಾರಂಭದಲ್ಲಿಯೇ ಬಣ್ಣಿಸಲಾಗಿದೆ. ಮುಂದೆ ಒಂದು ಕಡೆಗೆ ಈ ವರ್ಣನೆಯಿದೆ:

> ಸುಭಟರ್ಕಳ್ ಕವಿಗಳ್ ಸು-
> ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್॥
> ಅಭಿಮಾನಿಗಳತ್ಯುಗ್ರರ್
> ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್ ॥೨.೨೮

ಮೇಲಿನ ವರ್ಣನೆಯಲ್ಲಿ ಕಳ್ ಇಲ್ಲವೆ ಗಳ್ ಎಂಬ ಪ್ರತ್ಯಯಗಳು, 'ಚೆಲ್ವರ್' ಎಂಬ ಶಬ್ದ ಇಷ್ಟನ್ನು ಬಿಟ್ಟರೆ ಉಳಿದದ್ದೆಲ್ಲ ಸಂಸ್ಕೃತ ಮತ್ತು ಮರಾಠಿಯನ್ನು ತಿಳಿದವರಿಗೆ ಅರ್ಥವಾಗುವಂತಿದೆ. ನಾಡವರು ಶೂರರು, ಕವಿಗಳು, ಪ್ರಭುಗಳು, ಚೆಲುವರು, ಕುಲೀನರು, ಗುಣಿಗಳು, ಅಭಿಮಾನಿಗಳು, ಉಗ್ರರು, ಗಂಭೀರರು ಮತ್ತು ವಿವೇಕಿಗಳೆಂದು ಈ ಪದ್ಯ ಹೇಳುತ್ತದೆ. ಇದಲ್ಲದೆ, "ಉತ್ಕಟದರ್ಪಾನ್, ಪ್ರಿಯ ಮೋಹನಾನ್, ಪದಕಾದ್ರಾನ್, ಪತಂಗವೃತ್ತೀಂಶ್ಚ" ಎಂದು ಕನ್ನಡಿಗರ ವರ್ಣನೆಯನ್ನು ೯ನೆಯ ಶತಮಾನದ ಒಬ್ಬ ಕವಿ ಮಾಡಿದ್ದಾನೆ.[೨೧]

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ನಾಡವರಿಗೆ 'ಬಂಟ'ರೆಂದು ಇನ್ನೊಂದು ಹೆಸರಿದೆ. ಬಂಟರೆಂದರೆ ಭಟರು, ವೀರರು. ಬಂಟರು ಅಥವಾ ನಾಡವರ ವರ್ಣನೆ ಥರ್ಸ್ಟನ್ ಎಂಬವರು 'ದಕ್ಷಿಣದಲ್ಲಿಯ ಜಾತಿ ಮತ್ತು ಜನಾಂಗ' ಎಂಬ ಗ್ರಂಥದಲ್ಲಿ ಹೀಗೆ ಮಾಡಿದ್ದಾರೆ:[೨೨]

೧೧೦೦ ವರ್ಷಗಳ ಹಿಂದಿನ ನೃಪತುಂಗನ ವರ್ಣನೆ, ೯-೧೦ನೆಯ ಶತಮಾನದ 'ಅಪಭ್ರಂಶ ಕಾವ್ಯತ್ರಯೀ'ದಲ್ಲಿ ಸಿಗುವ ವರ್ಣನೆ ಮತ್ತು ಮೇಲೆ ಉದ್ಧರಿಸಿದ ಆಧುನಿಕ ಸಂಶೋಧಕನ ನಿರೀಕ್ಷಣೆಯಲ್ಲಿಯ ಸಾಮ್ಯ ಬೆರಗುಗೊಳಿಸುವಂಥದಿದೆ. ಕನ್ನಡ ಮತ್ತು ಸಂಸ್ಕೃತ ಪದ್ಯಗಳ ಭಾಷಾಂತರವೇ ಇಂಗ್ಲಿಷಿನಲ್ಲಿ ಬಂದಂತಿದೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ತುಳು ಎಂಬ ಕನ್ನಡದ ಉಪಭಾಷೆಯೊಂದಿದೆ. ತುಳುವಿನಲ್ಲಿ 'ವಕ್ಕಲ್‌ಮೆ' (ಒಕ್ಕಲಿಗರು) ಎಂಬ ಅರ್ಥದಲ್ಲಿ 'ಬಂಟ' ಶಬ್ದವನ್ನು ಉಪಯೋಗಿಸಲಾಗುತ್ತದೆ. ರಾಷ್ಟ್ರಿಕ-ರಾಷ್ಟ್ರಕೂಟರು "Indegenous Tribes" ಎಂದು ವಿನ್ಸೆಂಟ್ ಸ್ಮಿಥ್ ತನ್ನ ಅಭಿಪ್ರಾಯವನ್ನು ಹೇಳಿದ್ದಾನೆ.[೨೩] 'ರಠಿಕ' ಶಬ್ದಕ್ಕೆ Native ಎಂಬ ಅರ್ಥವನ್ನು ಪಾಲೀಕೋಶದಲ್ಲಿ ಕೊಡಲಾಗಿದೆ. ರಾಷ್ಟ್ರಕೂಟರಿಗೆ 'ಕುಟುಂಬಿ' ಎಂಬ ವಿಶೇಷಣ ಕೆಲವು ಕಡೆಗೆ ಉಪಯುಕ್ತವಾಗಿದೆ. ಅವರ ಕೆಲ ಶಿಲಾಲೇಖಗಳಲ್ಲಿ ಆರಂಭದಲ್ಲಿ ನೇಗಿಲಿನ ಚಿತ್ರವನ್ನು ಕಾಣಬಹುದು. ಭಾರತ ಸರಕಾರದ ಶಿಲಾಲೇಖ ಸಂಗ್ರಹದ ಮುಖ್ಯಾಧಿಕಾರಿಗಳಾಗಿದ್ದ ಶ್ರೀ ಎಚ್. ಕೃಷ್ಣರಾವ್ ಅವರು 'ರಾಷ್ಟ್ರಕೂಟ ಪ್ರಮುಖಾನ್ ಕುಟುಂಬಿನಃ' ಎಂಬ ವಾಕ್ಯದ ಮೇಲೆ ಹೀಗೆ ಟಿಪ್ಪಣಿ ಬರೆದಿದ್ದಾರೆ:[೨೪]

'ಕುಟುಂಬಿನ್' ಎಂಬ ಶಬ್ದ ದ್ರಾವಿಡ ಭಾಷಾವರ್ಗದ ಮೂಲ ಭಾಷೆಯಿಂದ ಆದದ್ದೆಂದು ಕೆಲವು ಪಂಡಿತರ ಅಭಿಪ್ರಾಯವಿದೆ. ಇದರೊಳಗಿನ ಮೂಲ ಶಬ್ದ 'ಕುಡು' ಅಂದರೆ ಕುಡು (ಒಕ್ಕಲಿಗ) ಎಂದಾಗುತ್ತದೆ. 'ಕುಡು-ವೊಕ್ಕಲಿಗ' ಈ ಜೋಡು ಶಬ್ದದೊಳಗಿನ ಎರಡೂ ಸಮಾನಾರ್ಥದವಾಗಿವೆ. 'ಕುಡು' ಶಬ್ದದಲ್ಲಿ ಮೇಲಿನ ಅರ್ಥ ಅಭಿಪ್ರೇತವಾಗಿದೆ. 'ಕುಡು' ಶಬ್ದದಿಂದಲೇ 'ಕುಣಬಿ' ಶಬ್ದ ಹುಟ್ಟಿರಬೇಕೆಂದು ನನ್ನ ಅನಿಸಿಕೆಯಾಗಿದೆ. 'ಕುಣಬಿ' ಎಂಬ ಶಬ್ದಕುಲದಿಂದ ನಿಷ್ಪನ್ನವಾಗಿದೆಯೆಂದು ರಾ. ಅತ್ರೆ ಅವರು ತಮ್ಮ ಗ್ರಂಥ 'ಗಾಂವಗಾಡಾ'ದಲ್ಲಿ

ಹೇಳಿದ್ದಾರೆ. ಈ ಎಲ್ಲ ಆನುಷಂಗಿಕ ಪುರಾವೆಗಳ ಆಧಾರದಿಂದ ಶ್ರೀ ಎಚ್. ಕೃಷ್ಣರಾವ್ ಇವರು ಸ್ವತಂತ್ರವಾಗಿ ಶಿಲಾಲೇಖದ ಅಭ್ಯಾಸದ ಸಂದರ್ಭದಲ್ಲಿ ಹೇಳಿದ್ದು ಯಥೋಚಿತವಾಗಿಯೆಂದು ನನಗನಿಸುತ್ತದೆ. ರಾಷ್ಟ್ರಿಕ-ರಟ್ಟ-ರೆಡ್ಡಿ; ರಡ್ಡಿ ಶಬ್ದದ ವ್ಯುತ್ಪತ್ತಿ ಇದೇ ಇರಬೇಕೆಂದು ಈಗ ಮಾನ್ಯವಾಗಿದೆ. ಪಾಟೀಲರಿಗೆ ತೆಲುಗು ದೇಶದಲ್ಲಿ ರೆಡ್ಡಿ ಎಂಬ ಪರ್ಯಾಯ ನಾಮವಿದೆ. ಪಾಟೀಲ ಅಥವಾ ಗೌಡ ಅಲ್ಲಿ ಪ್ರಚಾರದಲ್ಲಿಲ್ಲ. ರೆಡ್ಡಿ-ರಾಷ್ಟ್ರಿಕ ಈ ಅವಸ್ಥೆ ಗೋಪಾಲಕ ವೃತ್ತಿಯ ಮುಂದಿನ ಹಂತವಾಗಿದೆಯೆಂದು ಸಮಾಜ ವಿಕಾಸಕ್ರಮದ ತಿಳುವಳಿಕೆ ಇದ್ದವರಿಗೆ ಹೇಳುವ ಅಗತ್ಯವಿಲ್ಲ. ಪಾಟೀಲ ಅಥವಾ ಗೌಡ ಶಬ್ದಗಳಲ್ಲಿ ಗೋಪಾಲಕ ವೃತ್ತಿಯ ಧ್ವನಿ ಇರುವಂತೆ ರೆಡ್ಡಿ ಶಬ್ದದಲ್ಲಿಲ್ಲ. ರಾಷ್ಟ್ರಿಕ- ನಾಡವರದು ವಸಾಹತು ಮಾಡಿಕೊಂಡು ಸ್ಥಿರವಾಗಿ ನೆಲೆಯೂರಿದ ಅವಸ್ಥೆಯಾಗಿದೆ. ಸಂಸ್ಕೃತದಲ್ಲಿ ನಾಡವ ಶಬ್ದ ರಾಷ್ಟ್ರಿಕವೆಂದು ಭಾಷಾಂತರವನ್ನು ಪಡೆಯಿತು. ಅದರದೇ ಸಂಸ್ಕೃತೀಕರಣ 'ನಾಟ' ಶಬ್ದದಲ್ಲಿ ಆಗಿರುವದು ಕಾಣುತ್ತದೆ. ಮನುಸ್ಮೃತಿ-ಮೊದಲಾದ ಗ್ರಂಥಗಳಲ್ಲಿ ಕರಣರೊಡನೆ ನಟರೂ ಉಲ್ಲೇಖಿತರಾಗಿದ್ದಾರೆ. ಈ ನಟರು ವ್ರಾತ್ಯ ಕ್ಷತ್ರಿಯ ವರ್ಗದವರಿದ್ದರೆಂದು ಸ್ಮೃತಿಗ್ರಂಥಗಳಲ್ಲಿ ಸ್ಪಷ್ಟವಾಗಿ ನಿರ್ವಚನವಿರುವಾಗ ನಟರು ನೃತ್ಯ ನಾಟಕಗಳಲ್ಲಿ ನಿರತರಾದ ನಟವರ್ಗದವರೆಂದು ಹೇಳುವ ಸ್ಸಾಹಸವನ್ನು ಯಾರೂ ಮಾಡಲಿಕ್ಕಿಲ್ಲ. ನಾಡರ್ ಎಂಬ ಅಡ್ಡ ಹೆಸರು ಮತ್ತು ಆ ಹೆಸರಿನ ಕುಲಗಳು ತಮಿಳುನಾಡಿನಲ್ಲಿಯೂ ಇವೆ. 'ನಾಟ್ಟರ್' (People of the Country, Indigenous Tribes) ಅಂದರೆ ಸಂಸ್ಕೃತದಲ್ಲಿ ರಾಷ್ಟ್ರಿಕ ಎಂದು ಅರ್ಥವಾಗುತ್ತದೆ.[೨೫] ಕನ್ನಡ ಜಿಲ್ಲೆಯಂತೆ ಸೇಲಂ, ಕೊಯಿಮತ್ತೂರು ಜಿಲ್ಲೆಗಳಲ್ಲಿಯೂ ನಾಡವರಿದ್ದರೆಂದು ಹಳೆಯ ಖಾನೇಸುಮಾರಿಯಿಂದ ಗೊತ್ತಾಗುತ್ತದೆ.

ಭೋಜರ ಜೊತೆಗೆ ಪ್ರಾಚೀನ ಕಾಲಕ್ಕೆ ಉಲ್ಲೇಖ ಪಡೆದ ರಿಷ್ಟಿಕ-ರಾಷ್ಟ್ರಿಕರು ನಾಡವರಿರಬೇಕೆಂದು ಮೇಲಿನ ಸಂಗತಿಗಳ ಮೇಲಿಂದ ಗೋಚರವಾಗುತ್ತದೆ. ಭೋಜರ ಉತ್ತರಕಾಲೀನ ವಸಾಹತು ವಿದರ್ಭವಾಗಿದ್ದು ಅದಕ್ಕೆ ಅಂಟಿಕೊಂಡೇ ಅವರ ಬಂಧುಗಳಾದ ರಿಷ್ಟಿಕರ ವಸಾಹತು ಇರಬೇಕೆಂಬುದು ಸಹಜವಾದ ಮಾತಾಗಿದೆ. ಇಂದು ಖಾನದೇಶವೆಂದು ಗುರುತಿಸಲಾಗುವ ಪ್ರದೇಶದ ಹತ್ತಿರವೇ ರಿಷ್ಟಿಕರ ದೇಶವಿರಬೇಕೆಂದು ನಮ್ಮ ತರ್ಕವಾಗಿದೆ. 'ಖಾನದೇಶ' ಈ ಪ್ರಯೋಗದ ವ್ಯುತ್ಪತ್ತಿ ಇನ್ನೂ ಸಮರ್ಪಕವಾಗಿ ಆಗಿಲ್ಲ. ಖಾನರಿಂದ ಈ ದೇಶಕ್ಕೆ ಈ ಹೆಸರು ಬಂದಿತೆಂಬ ಸಂಗತಿ ಯಾರಿಗೂ ಮಾನ್ಯವಾಗಿಲ್ಲ. ಯಾಕೆಂದರೆ ಮುಸಲ್ಮಾನರು ಬರುವದಕ್ಕಿಂತ ಮೊದಲೇ ಈ ಹೆಸರು ಈ ಪ್ರದೇಶಕ್ಕಿತ್ತು ಎಂಬುದರ ಬಗ್ಗೆ ಪುರಾವೆಗಳಿವೆ. 'ಕನ್ನದೇಶ'ವೆಂಬ ವ್ಯುತ್ಪತ್ತಿ ಈಗ ಸರ್ವಮಾನ್ಯವಾಗಿದೆ. ಮತಭೇದವಿರುವದು 'ಕನ್ನ' ಶಬ್ದದ ಅರ್ಥದ ಬಗ್ಗೆ ಮಾತ್ರ. ಕನ್ನ ಎಂದರೆ ಕಣ್ಣ-ಕೃಷ್ಣ, ಕನ್ಹ ಎಂದರೆ ಕೃಷ್ಣನ ದೇಶ ಅಥವಾ ಕೃಷ್ಣವರ್ಣದ ದೇಶ ಎಂದು ಎರಡು ಅರ್ಥಗಳು ಸಂಭವಿಸುತ್ತವೆ. ಕೃಷ್ಣನ ದೇಶ ಎಂದು ಹೇಳುವದು ಅಷ್ಟೊಂದು ಸಯುಕ್ತಿಕವಾಗಿಲ್ಲ. ಕೃಷ್ಣನು ಜನ್ಮ ತಳೆದ ಮಥುರೆ ವೃಂದಾವನಗಳಿಗೆ ಅಥವಾ ಅವನು ವೈಭವದಿಂದ ಮೆರೆದ ದ್ವಾರಕೆಯ ಸುತ್ತು ಮುತ್ತಲಿನ ಪ್ರದೇಶಕ್ಕೆ ಈ ಹೆಸರು ಬರಬೇಕಾಗಿತ್ತು. ಖಾನದೇಶದ ಜೊತೆಗೆ ಕೃಷ್ಣಚರಿತ್ರೆಯ ಸಂಬಂಧವೇ ಬರುವದಿಲ್ಲ. ಕೃಷ್ಣನ ಸಂಬಂಧವಿಲ್ಲದ ಪ್ರದೇಶಕ್ಕೆ ಈ ಹೆಸರು ಬರುವದು ತರ್ಕಸಮ್ಮತವಾಗುವದಿಲ್ಲ.

ಭೂಮಿಯ ಬಣ್ಣದ ಮೇಲಿನ ಈ ಪ್ರದೇಶಕ್ಕೆ ಕಣ್ಹ-ಕೃಷ್ಣ-ಕಪ್ಪು ನೆಲವಿರುವ ಪ್ರದೇಶವಾದ್ದರಿಂದ ಈ ಹೆಸರು ಬಂದಿದೆ ಎಂದು ಕೆಲವರ ಅಭಿಪ್ರಾಯವಿದೆ. ಭೂಪ್ರದೇಶದ ನಿರೀಕ್ಷಣೆಯಾದ ನಂತರ ಅದಕ್ಕೆ ಹೆಸರು ಬಂದಿರುವದು ಅಸಂಭಾವ್ಯವಲ್ಲದಿದ್ದರೂ ದೇಶಕ್ಕೆ ಈ ರೀತಿ ಹೆಸರು ಬರುವದು ಸಾಮಾನ್ಯವಾಗಿ ಖಚಿತ ವಾಗಿರುವದಿಲ್ಲ. ಕನ್ನ, ಕಾನ್ನ: ಈ ಶಬ್ದವನ್ನು ಕೃಷ್ಣನಿಗೆ ಜೋಡಿಸುವದು ಎಷ್ಟರ ಮಟ್ಟಿಗೆ ಸರಿ ಎಂಬುದರ ಬಗ್ಗೆ ಸಂಶಯ ಉಳಿಯುತ್ತದೆ. ಖಾನಾಪುರ (ಬೆಳಗಾವಿ ಜಿಲ್ಲೆ)ದಲ್ಲಿಯ ಭೂಮಿಯ ಬಣ್ಣ ಸುಂದರವಾದ ಕೆಂಪು ಬಣ್ಣ. ಈ ಸಂದರ್ಭದಲ್ಲಿ 'ಕೃಷ್ಣ'ದ (ಬಣ್ಣ) ಮತ್ತು 'ಕನ್ನ'ದ (ಖನ್ನ-ಖಾನದ) ಹೊಂದಿಕೆ ಹೇಗೆ ಆಗಬೇಕು? ಕನ್ನ ಮತ್ತು ಕನ್ಹಗಳ ಬೆರಕೆಯಿಂದ ಈ ಗೊಂದಲ ಹುಟ್ಟಿಕೊಂಡಿದೆ. ಕನ್ನದಿಂದ ಕೃಷ್ಣವೆಂಬ ರೂಪ ಹುಟ್ಟುವದು

ಸಾಧ್ಯವಿಲ್ಲ. ಕೃಷ್ಣದ ಪ್ರಾಕೃತ ರೂಪ ಕನ್ಹ ಎಂದಿದೆ. 'ಖಾನ' ಇದು 'ಖನ್ನ' 'ಕನ್ನ' ಎಂದೇ ಆಗಬೇಕು, ಕನ್ಹವಾಗುವದಿಲ್ಲ. ಕನ್ನಡ ಮತ್ತು ಮರಾಠಿಗಳಲ್ಲಿಯ ಉಚ್ಚಾರ ವೈಶಿಷ್ಟ್ಯವನ್ನು ಇಲ್ಲಿ ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕು. ಕನ್ನಡದ ಶಬ್ದಗಳಲ್ಲಿಯ ಅಲ್ಪಪ್ರಾಣಗಳು ಮರಾಠಿಯಲ್ಲಿ ಮಹಾಪ್ರಾಣವಾಗುತ್ತವೆ. ಮುಂದೆ ಕೊಟ್ಟಿರುವ ಶಬ್ದಗಳು ಅಭ್ಯಾಸ ಯೋಗ್ಯವಾಗಿವೆ.

ಕನ್ನಡ	ಮರಾಠಿ
ಕಿಂಡಿ	ಖಿಂಡಿ, ಖಿಂಡ
ಕೊಬ್ಬರಿ	ಖೊಬರೇ
ಕಳ	ಖಳೇ
ಕಾಹಿಲೆ	ಖಾಯೀ
ಕಣಿ	ಖಾಣಿ, ಖಾಣ

ಈ ಶಬ್ದಗಳಲ್ಲಿ 'ಕ' 'ಖ' ಆಗಿರುವದು ಸ್ಪಷ್ಟವಾಗಿದೆ. ಇದೇ ರೀತಿ ಕನ್ನದೇಶ ಖಾನದೇಶವಾಗಿರುವದು ಸಾಧ್ಯವಿದೆ.

'ಕನ್ನಜನ'ರಿಂದ ಅನೇಕ ಪ್ರದೇಶಗಳಿಗೆ ಹೆಸರು ಪ್ರಾಪ್ತವಾಗಿವೆ. ಇದನ್ನು ಮೊದಲೇ ಹೇಳಿದ್ದಾಗಿದೆ. ಅವುಗಳಲ್ಲಿ 'ಖಾನದೇಶ'ವೂ ಒಂದಾಗಿದೆ. ಕನ್ನ (ಕರ್ಣ ಅಥವಾ ನಟ)ರು ಈ ಪ್ರದೇಶದಲ್ಲಿ ವಸಾಹತು ಮಾಡಿಕೊಂಡಿದ್ದರೆಂಬುದಕ್ಕೆ ಖಾನದೇಶದ ವಿಸ್ತಾರದಲ್ಲಿಯ ಗ್ರಾಮನಾಮಗಳು ಸಾಕ್ಷಿಯಾಗಿವೆ.* ಔರಂಗಾಬಾದ ಜಿಲ್ಲೆಯಲ್ಲಿ 'ಕನ್ನಡ'ವೆಂಬ ಊರು ತಾಲೂಕಿನ ಕೇಂದ್ರವಾಗಿದೆ. ಅಲ್ಲದೆ ಇಂದೂರ, ಸಂಸ್ಥಾನದಲ್ಲಿ ಕನ್ನಡ ಹೆಸರಿನ ಅನೇಕ ಊರ ಹೆಸರುಗಳಿವೆ. ಕನ್ನಡಗಾಂವ (ನಾಗಲವಾಡಿ ಮಹಾಲ), ಕನ್ನಡಪುರಾ (ನೇಮಾಡ ಜಿಲ್ಲೆ, ಖರಗೋನ ಮಹಾಲ), ಕಾನಡಗಾಂವ (ಕಾಸರಾವದ ಮಹಾಲ). ಕಾನ್ಯಖೇಡೀ (ಮಹೇಶ್ವರ ಮಹಾಲ), ಕಾನಡೀ (ಕಾಳಾಧೋಂಡ ಮಹಾಲ), ಕಾನಾಡ್ಯಾ (ಇಂದೋರ ಮಹಾಲ) ಮೊದಲಾದ ಊರುಗಳು ಪುರಾತನದ ಆರ್ಯೇತರ ಕನ್ನಡ ಭಾಷೆಯ ಜನರ ವಸತಿಗಳನ್ನು ಸೂಚಿಸುತ್ತದೆ, ಎಂದು ಹೇಳಿದರೆ ತಪ್ಪಾಗಬಹುದೇ? ಖಾನದೇಶದ ಗೆಝೆಟಿಯರದಲ್ಲಿ ಈ ಭಾಗದ ಕಾನಡೀ ಗವಳಿಗಳು ವಾಸವಾಗಿರುವರೆಂದು ಹೇಳುವ ಉಲ್ಲೇಖವಿದೆ:[೨೬] ಗೆಜೆಟಿಯರದಲ್ಲಿಯೂ ಈ ಕಾನಡ ಗವಳಿಗಳ ಉಲ್ಲೇಖವಿದೆ:[೨೭] ಖಾನದೇಶ, ನಾಶಿಕ, ಅಹಮದನಗರ ಈ ಭಾಗದ ಗೆಜೆಟಿಯರದ ಮೇಲಿಂದ ಈ ಪ್ರದೇಶದಲ್ಲಿ ಕಾನಡ ಗವಳಿಗಳು ನಿನ್ನೆ ಮೊನ್ನೆಯವರೆಗೆ ವಾಸಮಾಡುತ್ತ ಬಂದಿದ್ದರೆಂದು ಸಿದ್ಧವಾಗುತ್ತದೆ. ನಾಸಿಕ ಜಿಲ್ಲೆಯಲ್ಲಿ ಎಷ್ಟೋ ಕಡೆಗೆ ವೀರಗಲ್ಲುಗಳು-ಮರಾಠಿಯಲ್ಲಿ ಇವನ್ನು 'ವೀರಗಳ' ಎಂದು ಕರೆಯುತ್ತಾರೆ-ವೀರರ ಸ್ಮಾರಕ ಶಿಲೆಗಳು ದೊರೆಯುತ್ತವೆ:[೨೮]

ವೀರರ ಸ್ಮಾರಕಕ್ಕಾಗಿ ಈ ರೀತಿ ಚಿತ್ರ ಕೊರೆದು ಕಲ್ಲುನಿಲ್ಲಿಸುವ ಈ ಪದ್ಧತಿ ಇಡೀ ಹಿಂದುಸ್ತಾನದಲ್ಲಿ ಕನ್ನಡಿಗರ ವೈಶಿಷ್ಟ್ಯವೆಂದು ಹೆಸರಾಗಿದೆ. 'ವೀರಗಳ'ದಲ್ಲಿಯ 'ಗಳ' ಶಬ್ದ ಕನ್ನಡದ ಕಲ್ಲು ಶಬ್ದದ ಮರಾಠೀಕರಣವಾಗಿದೆ. ಕರ್ನಾಟಕದ ವೈಶಿಷ್ಟ್ಯವನ್ನು ತೋರಿಸುವ ಈ ವೀರಗಲ್ಲು, ಈ ಪ್ರದೇಶದಲ್ಲಿ ಒಂದು ಕಾಲಕ್ಕೆ ಕನ್ನಡಿಗರು ವಾಸವಾಗಿದ್ದರೆಂಬುದಕ್ಕೆ ನಿಃಸಂದಿಗ್ಧವಾದ ಪುರಾವೆಯಾಗಿದೆ. ಗೆಜೆಟಿಯರದಲ್ಲಿ ವರ್ಣಿತವಾದ ಈ ಭಾಗದಲ್ಲಿ ಕಾನಡ ಗೌಳಿಗಳು ವಾಸವಾಗಿದ್ದ ಉಲ್ಲೇಖ ಮೇಲಿನ ವಿಧಾನವನ್ನು ಪುಷ್ಟೀಕರಿಸುತ್ತದೆ. ಭೋಜಕರ ಹತ್ತಿರವೇ ರಿಷ್ಟಿಕರ ವಸಾಹತು ಇತ್ತು ಎಂದ ಬಿ. ಸಿ. ಲಾ ಇವರ ಸಂಶೋಧನದಲ್ಲಿ ದೊರೆತ ಸಂಗತಿ

* ಶಂಬಾ ಅವರು ಮೊದಲು ಗ್ರಾಮನಾಮಗಳ ಅಧ್ಯಯನ ಮಾಡಿದ ಫಲವಿದು. ಗ್ರಾಮನಾಮಶಾಸ್ತ್ರದ ಮೊದಲ ಪುಸ್ತಕ ಬರೆದವರು ಇವರೇ. 'ಎಡೆಗಳು ಹೇಳುವ ಕಂನಾಡ ಕತೆ' ಎಂಬ ಕೃತಿಯನ್ನು ಆಸಕ್ತರು ಇದರೊಂದಿಗಿಟ್ಟು ನೋಡಬೇಕು. (ಸಂ)

ಸತ್ಯವಾಗಿಯೇ ಇದೆ. ಭೋಜಕರ ಹತ್ತಿರ ರಿಷ್ಟಿಕರ ವಸಾಹತು ಎಂದರೆ ಹತ್ತಿರದ ಕನ್ನದೇಶ-ಖಾನದೇಶವೇ ಹೌದು. ಹತ್ತಿರದ ಗ್ರಾಮನಾಮಗಳ ಮೇಲಿಂದ ಮತ್ತು ಅಲ್ಲಿ ಇನ್ನೂ ಜೀವಂತವಾಗಿರುವ ಕಾನಡ ಗೌಳಿಗಳ ಶಾಖೆಗಳ ಮೇಲಿಂದ ಮತ್ತು ನಾಸಿಕ ಪ್ರದೇಶದ ವೀರಗಲ್ಲುಗಳಿಂದ ಕನ್ನದೇಶ-ಖಾನದೇಶ ಇದು ಕನ್ನಡ ದೇಶವಾಗಿತ್ತೆಂದು ಅನ್ನಿಸುತ್ತದೆ.

ಪತ್ತಿಜನ-ಯದು ತುರ್ವಸುಗಳ ಆರ್ಯೀಕರಣ ಪ್ರಾಚೀನ ಕಾಲದಿಂದ (ಋಗ್ವೇದ ಕಾಲಕ್ಕಿಂತ ಮೊದಲೇ) ಆರಂಭವಾಗಿತ್ತು. ಈ ಆರ್ಯೀಕರಣದಿಂದ ಯದು-ತುರ್ವಸುಗಳು ಒಂದಾದರು. ಮಹಾಭಾರತದಲ್ಲಿ ಒಂದು ಕಡೆಗೆ, ತುರ್ವಸುವಿನ ಸ್ವತಂತ್ರ ಅಸ್ತಿತ್ವ ನಷ್ಟವಾಗಿ ಅವನು ಯದುವಂಶಕ್ಕೆ ಸೇರಿಹೋದನೆಂದು ಹೇಳಲಾಗಿದೆ. ಕರ್ನಾಟಕದ ರಾಷ್ಟ್ರಕೂಟರು ಯದುವಂಶದೊಡನೆ ತಮ್ಮ ಸಂಬಂಧ ಹಚ್ಚಿಕೊಂಡರು. ತುರ್ವಸು ಯದುವಂಶದಲ್ಲಿ ವಿಲೀನವಾದದ್ದರ ನಿದರ್ಶನ ಇಲ್ಲಿದೆ. ಪತ್ತಿಜನರಿಗೆ ಹಟ್ಟಿಜನ ಅಥವಾ ಹಟಗಾರ ಎಂದು ಹೆಸರು ಪ್ರಚಾರದಲ್ಲಿ ಬಂದದ್ದು ಯದು-ತುರ್ವಸುಗಳು ಸಂಪೂರ್ಣವಾಗಿ ಆರ್ಯ ಪ್ರಭಾವಕ್ಕೆ ಒಳಗಾದ ನಂತರ. ಪತ್ತಿಜನರ ಭಾಷೆಯಲ್ಲಿಯ ಪಕಾರ ಹಕಾರದಲ್ಲಿ ಬದಲಾದದ್ದು ಆರ್ಯರೊಡನೆ ನಿಕಟ ಸಂಬಂಧ ಬಂದದ್ದರ ಫಲವಾಗಿದೆ. ಇದರ ಬಗ್ಗೆ ಈ ಮೊದಲು ವಿವೇಚನೆಯಾಗಿದೆ. ಪತ್ತಿಜನರಲ್ಲಿಯ ತಮಿಳು ಮತ್ತು ತೆಲುಗು ಜನರು ಹಳೆಯ ಪಕಾರವನ್ನು ಇದ್ದಕ್ಕಿದ್ದ ಹಾಗೆಯೇ ಇಟ್ಟುಕೊಂಡಿದ್ದಾರೆ. ಆ ಭಾಷೆಗಳಲ್ಲಿ 'ಹಾಲು', 'ಹುಲಿ'ಗಳಂತೆ ಪ್ರಾರಂಭದಲ್ಲಿ ಹಕಾರಯುಕ್ತ ಶಬ್ದಗಳು ಇನ್ನೂ ಹುಟ್ಟಿಕೊಂಡಿಲ್ಲ. ಪಾಲ್', 'ಪುಲಿ' ಹೀಗೆ ಹಳೆಯ ಪಕಾರ ಇಂದಿನವರೆಗೂ ರೂಢಿಯಲ್ಲಿದೆ. ಆದರೆ ಕನ್ನಡದಲ್ಲಿ ಮಾತ್ರ ಪಕಾರದ ಬದಲಾಗಿ 'ಹಕಾರ' ಎಲ್ಲ ಕಡೆಗೂ ಪ್ರಚಾರದಲ್ಲಿದೆ. ಪರಂಪರಾಪ್ರಿಯ ಕನ್ನಡಿಗರು ಹನ್ನೆರಡನೆಯ ಶತಮಾನದವರೆಗೆ ಅದು ಬಾರದಂತೆ ಭಗೀರಥ ಪ್ರಯತ್ನವನ್ನು ನಡೆಸಿದ್ದರೂ ಅದಕ್ಕಿಂತ ನೂರಾರು ವರ್ಷ ಮೊದಲೇ ಪಕಾರ ಹಕಾರದಲ್ಲಿ ಬದಲಾಗುವ ಎತ್ತುಗಡೆ ನಡೆಸಿದ್ದಂತೆ ಕಾಣುತ್ತದೆ.

'ಮೇಘದೂತ'ದಲ್ಲಿಯ 'ಹಿತ್ವಾ ಹಾಲಾಂ ಅಭಿಮತರಸಾಂ' ಎಂಬ ಪಂಕ್ತಿಯಲ್ಲಿಯ 'ಹಾಲಾ' ಶಬ್ದ ದೇಶ್ಯವೆಂದು ಮಲ್ಲಿನಾಥ ತನ್ನ ಟೀಕೆಯಲ್ಲಿ ಹೇಳಿದ್ದಾನೆ. 'ಹಾಲು' ಈ ರಸಸೂಚಕ ಶಬ್ದ 'ಪಾಲ' ರೂಪದಲ್ಲಿ ಕನ್ನಡ ವರ್ಗದ ಭಾಷೆಗಳಲ್ಲಿ ಮೊದಲಿನಿಂದಲೂ ಇದೆ. ಈ 'ಪಾಲ' ಶಬ್ದದಿಂದ 'ಹಾಲಾ' ಶಬ್ದ ಸಂಸ್ಕೃತಕ್ಕೆ ಹೋಗಿರಬೇಕೆಂದು ಕಿಟ್ಟೆಲ್‌ನಂಥ ಪಂಡಿತರು ಸರಿಯಾಗಿ ತರ್ಕ ಕಟ್ಟಿದ್ದಾರೆ. 'ಪಾರಾ', 'ಹಾರಾ' ಇಂಥ ಬದಲಾವಣೆ 'ಪಾಲಾ' 'ಹಾಲಾ'ದಷ್ಟೇ ಪ್ರಾಚೀನವಾಗಿದೆ. 'ಅಗ್ರಹಾರ' ಶಬ್ದದ ಮೇಲಿಂದ ಹೇಳುವದಾದರೆ ಪ್ರಾಚೀನ ಕಾಲದಲ್ಲಿಯೇ ಈ ಶಬ್ದ ಸಂಸ್ಕೃತದಲ್ಲಿ ಹೊಕ್ಕಿರಬೇಕು. 'ಜಿತ್ವಾ ಹಾಟಕಂ ನಾಮ ದೇಶಂ ಗುಹ್ಯಕ ರಕ್ಷಿತಂ' ಎಂದು ಮಹಾಭಾರತದ ಸಭಾಪರ್ವದಲ್ಲಿ ರಾಜಸೂಯ ಯಜ್ಞಕ್ಕಾಗಿ ಗೆದ್ದುಕೊಂಡ ದೇಶಗಳ ಯಾದಿಯಲ್ಲಿ ಒಂದು ಹೆಸರಿದೆ. 'ಪಾಟಕ'ದಲ್ಲಿಯ ಪಕಾರ ಹಕಾರವಾಗಿರವುದನ್ನು ಇಲ್ಲಿ ನೋಡಬಹುದಾಗಿದೆ. ನಮ್ಮಲ್ಲಿ ಒಂದು ಕಾಲಕ್ಕೆ ರೂಢವಾಗಿದ್ದ ಪೇಠಾ ಶಬ್ದ (ಹಟ-ಹಾಟಕ್ಕಿಂತ ಮೊಲಿನ) ಪಾಟ (ಕ)ದ್ದೇ ಇನ್ನೊಂದು ರೂಪವಾಗಿದೆ. ಪಕಾರ ಹಕಾರವಾಗುವುದು ತೆಲುಗು ಮತ್ತು ತಮಿಳಿನಲ್ಲಿಲ್ಲ. ಕನ್ನಡದಲ್ಲಿ ಮಾತ್ರ ಅದು ಸಾರ್ವತ್ರಿಕವಾಗಿದೆ. ಅನುಷಂಗಿಕವಾಗಿ ಅದು ಮರಾಠಿಯಲ್ಲಿಯೂ ದೊರೆಯುತ್ತದೆ. 'ಮರಹಟ್ಟಿ'ದಲ್ಲಿಯ 'ಹಟ್ಟ' ಶಬ್ದ ಇದಕ್ಕೆ ಉದಹಾರಣೆಯಾಗಿದೆ. 'ಹಟಗಾರ', 'ಹಟ್ಟಿಕಾರ' ಶಬ್ದಗಳು ಮರಾಠಿಯಂತೆ ಕನ್ನಡದಲ್ಲಿಯೂ ಇವೆ. ಮರಾಠಿಯ 'ಧನಗರ' ಕನ್ನಡದಲ್ಲಿ 'ದನಗಾರ' ಎಂದಾಗುತ್ತದೆ. ಇಂಥ ಅನೇಕ ಕಾರಣಗಳಿಂದಾಗಿ ಕನ್ನಡ ಮತ್ತು ಮರಾಠಿಗಳಲ್ಲಿಯ ಭೌಗೋಲಿಕ ಸಾಮೀಪ್ಯ ಮತ್ತು ಜನರ ಸಂಬಂಧಗಳು ಎಷ್ಟು ನಿಕಟವಾಗಿವೆಯೋ ಅಷ್ಟು ತಮಿಳಿನೊಡನೆ ಇಲ್ಲವೆಂದು ಸಾಧಾರಣವಾಗಿ ಸಿದ್ಧಪಡಿಸಬಹುದು. ಅಲ್ಲದೆ, ತಮಿಳುನಾಡು ಮಹಾರಾಷ್ಟ್ರದಿಂದ ಬಹಳ ದೂರದಲ್ಲಿದೆ. ಇಷ್ಟೇ ಅಲ್ಲ. ತೆಲುಗಿನೊಡನೆ ಕೂಡ ಮಹಾರಾಷ್ಟ್ರದ ಸಂಬಂಧ ಗಾಢವಾಗಿಲ್ಲ. ಪಕಾರ ಹಕಾರವಾಗುವ ಪ್ರಕ್ರಿಯೆ ತೆಲುಗಿನಲ್ಲಿ ಇನ್ನೂ ನಡೆದಿಲ್ಲ.

ಯದು. ತುರ್ವಸು ಮನೆತನಗಳು ಮಹಾಭಾರತದ ಕಾಲಕ್ಕೆ ಒಂದಾದವು. ಆದರೆ, ಆರ್ಯೀಕರಣದ ಮೂಲಕವಾಗಿ ಅವರಲ್ಲಿ ಮತ್ತೆ ಎರಡು ಗುಂಪುಗಳಾದವು. ಅವರಲ್ಲಿ ಪ್ರಗತಿಶೀಲರಾದವರು ಹೆಚ್ಚು ಉತ್ಸಾಹದಿಂದ ಮುನ್ನಡೆದರು. ಅಂತೆಯೇ ಪರಂಪರಾಪ್ರಿಯರು ಹಳೆಯದಕ್ಕೆ ಅಂಟಿಕೊಂಡು ಅನಿವಾರ್ಯವಿದ್ದಷ್ಟೇ ಬದಲಾವಣೆಯನ್ನು ಸ್ವೀಕರಿಸಿರುವದು ಸಾಧ್ಯವಿದೆ. ಈ ಎರಡೂ ಗುಂಪುಗಳು ಮುಂದಿನ ಕಾಲಮಾನದಲ್ಲಿ ಕಣ್ಣಿಗೆ ಬೀಳುತ್ತವೆ ಮಹಾಭಾರತದ ಕಾಲಾನಂತರ ರಿಸ್ಟಿಕ-ಭೋಜಕದಂಥ ಅವಳಿ ಹೆಸರುಗಳು ಗೋಚರ ವಾಗುತ್ತವೆಂದು ಹಿಂದೆಯೇ ಹೇಳಲಾಗಿದೆ. ಕ್ರಿಸ್ತಶಕದ ಎರಡನೆಯ ಶತಮಾನದ ಸುಮಾರಿಗೆ ಕರ್ಣಾಟ- ಮಹಾರಾಷ್ಟ್ರೀಯರ ಉಲ್ಲೇಖ ಸ್ವತಂತ್ರವಾಗಿ, ನಿಸ್ಸಂಶಯವಾಗಿ ದೊರೆಯುವದಿಲ್ಲ. ಶಾತವಾಹನರು ಕುಂತಲದೇಶದ ರಾಜರಾಗಿದ್ದರು. ಚಾಲುಕ್ಯರೂ ಕುಂತಲಾಧಿಪತಿಗಳಾಗಿದ್ದರೆಂದು ವರ್ಣನೆ ಇದೆ. ಕುಂತಲದೇಶವೆಂಬ ಒಂದು ಮೋಘಮ ಹೆಸರಿನಲ್ಲಿ, ಮರ್ಹಾಟ-ಕರ್ಣಾಟಕ ಈ ಎರಡು ದೇಶಗಳ ಉಲ್ಲೇಖ ಪರ್ಯಾಯವಾಗಿ ಆಗುತ್ತಿತ್ತೇನೋ ನಿಜ. ವಿದರ್ಭದಿಂದ ಕರ್ಣಾಟಕದವರೆಗೆ ಒಟ್ಟು ಪ್ರದೇಶ ಕುಂತಲವೆಂಬ ಹೆಸರು ಪ್ರಚಾರದಲ್ಲಿತ್ತೆಂದು ಶಿಲಾಲೇಖಗಳಿಂದ ಗೊತ್ತಾಗುತ್ತದೆ. ಈ ರಾಜ್ಯದಾಡಳಿತದಲ್ಲಿ ಕರ್ಣಾಟ - ಮಹಾರಾಷ್ಟ್ರಗಳ ಸೀಮೆಗಳು ನಿರ್ದಿಷ್ಟವಾಗಿರಲಿಲ್ಲವಾದದ್ದರಿಂದ ಎರಡೂ ದೇಶಗಳಿಗೆ ಅನ್ವಯಿಸುವಂತೆ ಕುಂತಲವೆಂಬ ಹೆಸರನ್ನು ಉಪಯೋಗಿಸಿರಲಿಕ್ಕಿಲ್ಲವಷ್ಟೇ? ಮಹಾರಾಷ್ಟ್ರದ ವಿಸ್ತಾರ ಮರಾಠೀಕರಣದ ರೂಪದಲ್ಲಿ ಇನ್ನೂ ನಡೆದೇ ಇತ್ತು. ಹೊರಗಿನ ಪ್ರವಾಸಿಗಳಿಗೆ ಮಹಾರಾಷ್ಟ್ರ ಕರ್ಣಾಟಕ ಈ ಅವಳಿ ಬಂಧುಗಳನ್ನು ಗುರುತಿಸುವದು ಕಷ್ಟದ ಕೆಲಸವಾಗಿರಬೇಕು. ಬಾದಾಮಿಯ ಚಾಲುಕ್ಯರ ಬಗ್ಗೆ ಬರೆಯುವಾಗ ಹ್ಯುಯನ್‌ತ್ಸಾಂಗ್ 'ಮಹೋಲೋಚ್'-ಮಹಾರಾಷ್ಟ್ರವೆಂದು ವರ್ಣನೆ ಮಾಡಿದ್ದಾನೆ. ಬಾದಾಮಿ ಇಂದಿಗೂ ಸಂಪೂರ್ಣವಾಗಿ ಕರ್ಣಾಟಕದಲ್ಲಿಯ ನಗರವಾಗಿದೆ. ಚಾಲುಕ್ಯರ ಸೈನ್ಯಕ್ಕೆ 'ಕರ್ಣಾಟಕಬಲಂ' ಎಂಬ ಅಭಿಧಾನವಿರುವುದು ಶಿಲಾಲೇಖ ಮತ್ತು ತಾಮ್ರಪಟಗಳಿಂದ ತಿಳಿಯುತ್ತದೆ. ಹೀಗಿದ್ದರೂ ಹ್ಯುಯನ್‌ತ್ಸಾಂಗನಿಗೆ ಕರ್ಣಾಟಕ ಮಹಾರಾಷ್ಟ್ರದಂತೆ ಏಕೆ ಕಂಡಿರಬೇಕು? ಹಳೆಯ ತಮಿಳು ಸಾಹಿತ್ಯದಲ್ಲಿ ತಮಿಳುನಾಡಿನ ಉತ್ತರದಲ್ಲಿ 'ಅರಿಯರು' ಇದ್ದರೆಂದು ವರ್ಣನೆಯಿದೆ. ಯಾವ ಭಾಷೆಯಲ್ಲಿ ಪಕಾರ ಹಕಾರಕ್ಕೆ ಬದಲಾಗುವದು ಅಂಥ ಭಾಷೆಯವರು ತಮ್ಮ ದೇಶದ ಉತ್ತರಕ್ಕಿರುವ (ವಡುಗರ್) ಜನರು 'ಅರಿಯರು' ಎಂಬುದು ಪರಂಪರಾಪ್ರಿಯ ತಮಿಳರ ಆಗ್ರಹವಾಗಿರಬೇಕು! ಕನ್ನಡಿಗರನ್ನೇ ಅರಿಯರೆಂದು ಕರೆಯುವ ಮಜಲನ್ನು ಅವರು ಮುಟ್ಟಿದರು.

ಆ ಅವಳಿ ಬಂಧುಗಳು ದೀರ್ಘಕಾಲದ ವರೆಗೆ ಬಹಳ ಗದ್ದಲವಿಲ್ಲದೆ, ಸ್ವತಂತ್ರವಾಗಿ ಆದರೆ ಒಂದೇ ಕಡೆಗೆ, ಹನ್ನೆರಡು-ಹದಿಮೂರನೆಯ ಶತಮಾನಗಳ ವರೆಗೆ ಬಾಳಿದರು. ಪೈಠಣದ ಶಾತವಾಹನರು, ಬಾದಾಮಿಯ ಚಾಲುಕ್ಯರು, ಮಳಖೇಡದ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಲುಕ್ಯರು ಈ ನಾಲ್ಕು ಸಾಮ್ರಾಜ್ಯಗಳ ಆಡಳಿತದಲ್ಲಿ ಮರಾಠಿ ತನ್ನ ಸ್ವತಂತ್ರವಾದ ಸಂಸಾರವನ್ನು ಹೂಡಿರಲಿಲ್ಲ. ಕರ್ಣಾಟಕೀಯ ಆಡಳಿತದಲ್ಲಿಯ ಮರಾಠಿ ಕನ್ನಡದ ಕಡೆಗೇ ಹೆಚ್ಚು ವಾಲುತ್ತಿತ್ತು. ಮೇಲಿನ ನಾಲ್ಕು ರಾಜಧಾನಿಗಳಲ್ಲಿ ಮೂರು ರಾಜಧಾನಿಗಳು ನಿಃಸಂಶಯವಾಗಿ ಕರ್ಣಾಟಕದಲ್ಲಿವೆ. ಮುಂದೆ ದೇವಗಿರಿ-ಯಾದವರ ಉತ್ತರಾರ್ಧದಲ್ಲಿ ಮರಾಠಿಗೆ ಸ್ಥಿರವಾದ ಸ್ಥಾವರತೆ ದೊರೆತು ಮರಾಠೀಯರ ಸ್ವತಂತ್ರವಾದ ರಾಜಕಾರಣದ ಪ್ರಾರಂಭವಾಯಿತು. ಹದಿಮೂರನೆಯ ಶತಮಾನದ ನಂತರ ಮರಾಠಿ ಕನ್ನಡದಿಂದ ಸಂಪೂರ್ಣವಾಗಿ ಬೇರೆಯಾಗಿ ಸ್ವತಂತ್ರವಾದ ಸಂಸಾರವನ್ನು ಹೂಡಿತು. ಮುಂದೆ ಈ ಅವಳಿ ಬಂಧುಗಳ ಅತಿ ಪ್ರಾಚೀನವಾದ ಮನೆತನ ಒಂದಿದ್ದದ್ದು ಎರಡಾಯಿತು. ಒಂದು ಕಾಲಕ್ಕೆ ಇವರಲ್ಲಿ ನಿಕಟ ಸಂಬಂಧ ಇತ್ತೋ ಇಲ್ಲವೋ ಎನ್ನುವದು ಮರೆತು ಹೋಗುವಷ್ಟು ಇವು ಬೇರೆ ಬೇರೆಯಾಗಿ ಮುನ್ನಡೆಯುತ್ತ ಬಂದಿವೆ.

ಭಾಷಿಕ ಪ್ರಮಾಣಗಳು

ಪತ್ತಿಜನರು-ಯದು ತುರ್ವಸು-ಆರ್ಯೇತರರಾಗಿದ್ದರೆ ಅವರಿಗೆ ಸಂಸ್ಕೃತಕ್ಕಿಂತ ಭಿನ್ನವಾದ ಭಾಷೆಯೊಂದಿರಬೇಕು ಎಂಬ ಮಾತಿನಲ್ಲಿ ಸಂಶಯವಿಲ್ಲ. ವೇದಗಳಲ್ಲಿಯ ಸಂಸ್ಕೃತ ಮತ್ತು ಕೋಲ-ಮುಂಡಾ ವರ್ಗದ ಭಾಷೆಯ ಶಬ್ದಗಳು ಇವುಗಳನ್ನು ಬಿಟ್ಟರೆ ಬೇರೆ ಪ್ರಕಾರದ ಶಬ್ದಗಳಿರುತ್ತವೆಂದು ಭಾಷಾಶಾಸ್ತ್ರಜ್ಞರು ಒಂದು ನಿರ್ಣಯಕ್ಕೆ ಬಂದಿದ್ದಾರೆ. ಇವನ್ನು ದ್ರಾವಿಡವರ್ಗೀಯ ಶಬ್ದಗಳೆಂದು ಕರೆಯುವದು ರೂಢಿಯಾಗಿದೆ. ಆದರೆ, ದ್ರವಿಡರೆಂದರೆ ಯಾರು ಮತ್ತು ವೇದಕಾಲದಲ್ಲಿ ಅವರಿಗೆ ಯಾವ ಹೆಸರಿತ್ತು. ಈ ಪ್ರಶ್ನೆಗಳಿಗೆ ನಿಶ್ಚಯಾತ್ಮಕವಾದ ಉತ್ತರವನ್ನು ಇನ್ನೂ ಯಾವ ಸಂಶೋಧಕನೂ ಕೊಟ್ಟಿಲ್ಲ. ಆದರೆ, ಇಂದು ಪತ್ತಿಜನ ಯದು ತುರ್ವಸುಗಳ ಅಭ್ಯಾಸದಲ್ಲಿ ಈ ಪ್ರಶ್ನೆಗೆ ಉತ್ತರ ಅಡಗಿದೆ ಎಂದು ನನಗನಿಸುತ್ತದೆ. ದ್ರವಿಡ ಈ ಶಬ್ದದ ಅರ್ಥ ತಮಿಳು ಎಂದಿಷ್ಟೇ ಇದ್ದರೆ ಮತ್ತು ವೇದದಲ್ಲಿ ದ್ರವಿಡ ಶಬ್ದ ದೊರೆಯುವುದಿಲ್ಲವಾದ್ದರಿಂದ ನಿಶ್ಚಿತ ಅರ್ಥವನ್ನು ವ್ಯಕ್ತಪಡಿಸುವ ದೃಷ್ಟಿಯಿಂದ; ಕೇವಲ ತಮಿಳು ಜನವಾಚಕವಾದ, ಸಂದಿಗ್ಧಾರ್ಥದ, ಅನುಚಿತವಾದ 'ದ್ರವಿಡ' ಶಬ್ದವನ್ನು ಅದಷ್ಟು ಬೇಗನೆ ಉಪಯೋಗದಿಂದ ತೆಗೆದುಹಾಕುವುದು ಅಗತ್ಯವಾಗಿದೆ. ದ್ರಾವಿಡ ವರ್ಗದಲ್ಲಿ ತಮಿಳು, ತೆಲುಗು, ಕನ್ನಡ ಮತ್ತು ಮಲೆಯಾಳಮ್ ಮುಂತಾದ ಎಲ್ಲ ಭಾಷೆಗಳು ಸಮಾವೇಶಗೊಳ್ಳುತ್ತವೆ. ಈ ಗುಂಪಿನ ಮೂಲಭಾಷೆ ಯಾವುದಿರಬಹುದು, ಆ ಜನ ಯಾರು? ಎಂಬ ಪ್ರಶ್ನೆಗೆ ಇನ್ನೂ ನಿಶ್ಚಿತವಾದ ಉತ್ತರ ಸಿಕ್ಕಿಲ್ಲ. ವೇದಕಾಲದಲ್ಲಿ ಆ ಮೂಲಭಾಷೆಯನ್ನಾಡುವ ಜನರು ಇದ್ದಿರಬಹುದು ಎಂಬ ತರ್ಕದಲ್ಲಿ ಮಾತ್ರ ಸಮಾಧಾನ ಪಡೆಯಬೇಕಾಗಿದೆ. ಈ ಜನರ ಖಚಿತವಾದ ಹೆಸರು ಮತ್ತು ಅವರ ಪರಂಪರೆ ಇವುಗಳ ಬಗ್ಗೆ ಏನೂ ತಿಳಿದಿಲ್ಲ. ಆದರೆ, ಈ ಮೊದಲು ಮಾಡಿರುವ ವಿವೇಚನೆಯ ಬೆಳಕಿನಲ್ಲಿ ಯದು ತುರ್ವಸು-ಪತ್ತಿಜನರು ಇವರೇ ತಥಾಕಥಿತ ದ್ರವಿಡವರ್ಗೀಯ ಜನರಾಗಿದ್ದರೆಂದು ಹೇಳಬೇಕಾಗುತ್ತದೆ ಮತ್ತು ಈ ಜನರ ಭಾಷೆ ಇಂದಿನ ಕನ್ನಡ, ತಮಿಳು, ತೆಲುಗು ಮೊದಲಾದ ಎಲ್ಲ ಭಾಷೆಗಳ ಮೂಲಭಾಷೆಯಾಗಿತ್ತೆಂದು ಅನಿಸುತ್ತದೆ.

ವೇದ ಕಾಲದಲ್ಲಿ ಆರ್ಯರ ಸಂಪರ್ಕ ಮತ್ತು ಸಂಬಂಧಗಳು ಬೆಳೆಯುತ್ತ ಹೋದಂತೆ ಈ ಭಾಷೆಯಲ್ಲಿ ಬದಲಾವಣೆಯಾಗುತ್ತ ಹೋಯಿತು. ಎರಡು ಭಾಷೆಗಳ ಸಂಬಂಧ ಒಂದರೊಂದರ ಮೇಲೆ ಪರಿಣಾಮ ಬೀರದೆ ಹೋಗುವದಿಲ್ಲ. ಅದರಂತೆ ಪತ್ತಿ ಜನರ ಭಾಷೆಯ ಪರಿಣಾಮ ಸಂಸ್ಕೃತದ ಮೇಲೆ ಆಗದೆ ಹೋಗಲಿಲ್ಲ. 'ಚಂದ್ರಮಸ್' ಎಂಬ ಜೋಡು ಶಬ್ದ ಇವರಿಬ್ಬರ ಘನಿಷ್ಠವಾದ ಸಂಬಂಧದ ದ್ಯೋತಕವಾಗಿ ಉಳಿದಿದೆ. ಚಂದ್ರ+ಮಸ್ ಇದರಲ್ಲಿ ಒಂದೇ ಅರ್ಥದ ಎರಡು ಶಬ್ದಗಳು ಕೂಡಿಕೊಂಡಿವೆ. ಮಸ್-ಮಾಸ, Month, mehn, moon ಮೊದಲಾದ ಶಬ್ದಗಳು ಆರ್ಯವರ್ಗದ ಭಾಷೆಯೊಳಗಿನವು. 'ಚಂದ್ರ' ಶಬ್ದ ಆರ್ಯೇತರರಾಗಿದ್ದ ಪತ್ತಿಜನರ ಭಾಷೆಯೊಳಗಿನದೆಂದು ನಿಶ್ಚಿತವಾಗಿ ತೋರುತ್ತದೆ. ಯದು ತುರ್ವಸುಗಳ ಮನೆತನ ಚಂದ್ರವಂಶದ್ದೆಂಬ

ಪ್ರತೀತಿ ಇದೆ. ಈ ಪ್ರತೀತಿಯ ಸಂಬಂಧ ಇಲ್ಲಿ ಏನೂ ಇಲ್ಲದಿದ್ದರೂ ಇದರಿಂದ ಚಂದ್ರಪೂಜೆಗೆ ಅವರ ನಿಕಟವಾದ ಸಂಬಂಧವಿತ್ತೆಂದು ಗೊತ್ತಾಗುತ್ತದೆ. ಚಂದ್ರನ ಪೂಜೆ ಈ ಮನೆತನದಲ್ಲಿ ಬಹಳ ಮೊದಲಿನಿಂದ ನಡೆದು ಬಂದಿತ್ತು. ಹುಣ್ಣಿಮೆಯ ಪೂಜೆ, ದೇವಿಯ ಉತ್ಸವ ಇವು ಇಂದಿಗೂ ಮಹಾರಾಷ್ಟ್ರ ಕರ್ನಾಟಕದ ಜನರ ವೈಶಿಷ್ಟ್ಯವನ್ನು ಸೂಚಿಸುತ್ತವೆ. 'ಚಂದ್ರ' ಶಬ್ದವು ಮೂಲದಲ್ಲಿ ಸಂಸ್ಕೃತವಲ್ಲ. ಇಂಡೋ-ಜರ್ಮ್ಯಾನಿಕ್ ಭಾಷೆಗಳಲ್ಲಿ ಈ ಶಬ್ದದ ಸಂಬಂಧಿ ಶಬ್ದಗಳು (Cognales) ಸಿಗುವದಿಲ್ಲ. ಋಗ್ವೇದದಲ್ಲಿ ಚಂದ್ರ ಎಂಬ ಅರ್ಥದಲ್ಲಿ ಈ ಶಬ್ದದ ಉಪಯೋಗವಿಲ್ಲ. ತಾಮ್ರವರ್ಣದ ಅಥವಾ ಬಂಗಾರದ ಬಣ್ಣದ ಎಂದು ವರ್ಣನಾತ್ಮಕವಾದ ವಿಶೇಷಣದ ರೂಪದಲ್ಲಿ ಈ ಶಬ್ದ ದೊರೆಯುತ್ತದೆ. ಪ್ರೊ|| ವೈಜನಾಥ ಕಾಶೀನಾಥ ರಾಜವಾಡೆಯವರ ಪ್ರಕಾರ ಚಂದ್ರ ಶಬ್ದದ ಉಚ್ಚಾರ ಋಗ್ವೇದ ಕಾಲದಲ್ಲಿ ಇಂದಿಗಿಂತ ಬೇರೆಯಾಗಿತ್ತು. ಅಗ್ನಿಶ್ಚಂದ್ರ, ವಸುಶ್ಚಂದ್ರ ಇತ್ಯಾದಿ ಪ್ರಯೋಗಗಳಲ್ಲಿಯ ಚಂದ್ರಶಬ್ದದಲ್ಲಿಯ 'ಚ'ಕಾರದ ಉಚ್ಚಾರ 'ಚ' ಮತ್ತು 'ಶ'ಗಳ ನಡುವಿನ ಉಚ್ಚಾರವಾಗಿತ್ತೆಂದು ಅವರ ಅಭಿಪ್ರಾಯವಾಗಿದೆ. ಇಂಗ್ಲಿಷಿನಲ್ಲಿ 'C' ಅಕ್ಷರದ ಉಚ್ಚಾರ ಇದರೊಂದಿಗೆ ಹೋಲಿಸಿ ನೋಡಲು ಅರ್ಹವಾಗಿದೆ. 'C' ಯೊಳಗೆ ಕ, ಚ, ಶ ಈ ಮೂರೂ ರೀತಿಯ ಉಚ್ಚಾರಗಳು ಬೇರೆ ಬೇರೆ ಶಬ್ದಗಳಲ್ಲಿ ದೊರೆಯುತ್ತವೆ. ಪತ್ತಿ ಜನರ ಮೂಲಭಾಷೆಯಲ್ಲಿ 'ಚಂದ್ರ' ಶಬ್ದದಲ್ಲಿಯ 'ಚ'ಕಾರದ ಉಚ್ಚಾರ ಕೂಡ ಇದರಂತೆಯೇ ಇರಬೇಕೆಂದು ತೋರುತ್ತದೆ. ತಮಿಳಿನಲ್ಲಿ 'ಚೆನ್' ಶಬ್ದದ ಉಚ್ಚಾರ 'ಶಿನ್' ಎಂದಾಗುತ್ತದೆ. ಕನ್ನಡದಲ್ಲಿ 'ಚೆನ್', 'ಕೆನ್' ಈ ಎರಡೂ ರೂಪಗಳಿವೆ. ಶಿನ್, ಚೆನ್, ಕೆನ್ ಇವುಗಳ ಮೂಲ ಅರ್ಥ ಕೆಂಪು ಎಂದೇ ಆಗುತ್ತದೆ. ಋಗ್ವೇದದಲ್ಲಿಯ 'ಚಂದ್ರ' ಶಬ್ದಕ್ಕೂ ಇದೇ ಅರ್ಥವಿದೆ. ಆದ್ದರಿಂದ, ಚಂದ್ರ ಶಬ್ದವು ಮೂಲದಲ್ಲಿ ಶಿನ್-ಚೆನ್-ಕೆನ್ ಈ ವರ್ಗದಿಂದ ನಿಷ್ಪನ್ನವಾಗಿರಬೇಕೆಂದು ತೋರುತ್ತದೆ. ಹರಿಶ್ಚಂದ್ರ ವಸುಶ್ಚಂದ್ರ ಇವುಗಳಲ್ಲಿ 'ಶ' ಕಾರದ ಕಡೆಗೆ ವಾಲುತ್ತ ಹೋಗುವ ಉಚ್ಚಾರ ಮುಂದೆ ಚಕಾರದ ಕಡೆಗೆ ಒಲಿದದ್ದಕ್ಕೆ ಕಾರಣ ಆರ್ಯವರ್ಗೀಯರ ಸಂಪರ್ಕವೇ ಇರಬೇಕು. ಮೃಧ್ರವ ಅಂದರೆ ಅಸ್ಪಷ್ಟ ಉಚ್ಚಾರ ಎಂಬ ಟೀಕೆಗೆ ಪುರು ಮೊದಲಾದವರು ಬಲಿಯಾಗಿದ್ದಾರೆ. ದಾಕ್ಷಿಣಾತ್ಯರ ಉಚ್ಚಾರ ಅಸ್ಪಷ್ಟ ಮತ್ತು ಅನಿಶ್ಚಿತವಾಗಿರುತ್ತವೆಂದು ಸಂಸ್ಕೃತದಲ್ಲಿ ಪ್ರಾಚೀನ ಕಾಲದಿಂದ ಒಂದು ಮಾತಿದೆ. 'ಮೃಚ್ಛಕಟಿಕ' ನಾಟಕದಲ್ಲಿ ಇದರ ಪ್ರತಿಧ್ವನಿ ಕೇಳುತ್ತದೆ. ಆರ್ಯವರ್ಗೀಯ ಭಾಷೆಗಳ ಪ್ರಭಾವಕ್ಕೆ ಈಡಾದ ಕನ್ನಡದಲ್ಲಿ 'ಶ' ಕಾರಯುಕ್ತ 'ಚ'ಕಾರದ ಅನಿಶ್ಚಿತವಾದ ಉಚ್ಚಾರ ನಷ್ಟವಾಗಿ ಕೇವಲ 'ಚ'ಕಾರವಷ್ಟೇ ಉಳಿದುಕೊಂಡಿದೆ. ತಮಿಳಿನಲ್ಲಿ ಮಾತ್ರ ಕನ್ನಡದ 'ಚೆನ್'ದ ಉಚ್ಚಾರ ಇಂದಿಗೂ ಎರಡು ರೀತಿಗಳಲ್ಲಿ ಮಾಡಲಾಗುತ್ತಿದೆ. ಆರ್ಯರ ಸಂಪರ್ಕದಿಂದ ಪತ್ತಿಜನರ ಭಾಷೆಯಲ್ಲಿ ಬದಲಾವಣೆಯಾದಂತೆ ಅದರಂತೆ ಆರ್ಯರ ಭಾಷೆಯಲ್ಲಿ ಕೂಡ ಅದೇ ರೀತಿಯ ಪರಿಣಾಮವಾಗದೆ ಇರಲಿಲ್ಲ. ಸಂಸ್ಕೃತೀಕರಣದ ಮೂಲಕವಾಗಿ 'ಚಂದ್ರ' 'ಅರಣಿ'ಯಂಥ ಶಬ್ದಗಳು ಸಂಸ್ಕೃತದಲ್ಲಿ ಹೊಕ್ಕವು. ಹಳೆಗನ್ನಡದ 'ಪ'ಕಾರ 'ಹ'ಕಾರವಾದದ್ದು ಆರ್ಯರ ಸಂಪರ್ಕದ ಪರಿಣಾಮದಿಂದ ಎಂದು ಈ ಮೊದಲೇ ಹೇಳಲಾಗಿದೆ. ಈ ರೀತಿಯಲ್ಲಿ ಆರ್ಯರ ಸಂಪರ್ಕದಿಂದ ಪತ್ತಿ ಜನರ ಮೂಲಭಾಷೆಯಲ್ಲಿ ಬದಲಾವಣೆಯಾಗಿ ಅದರ ಸ್ವರೂಪವೂ ಬದಲಾಯಿತು.

ಎರಡು ಭಿನ್ನ ಭಾಷೆಗಳ ನಡುವೆ ವ್ಯಾಪಾರ ವ್ಯವಹಾರಗಳ ಮೂಲಕವಾಗಿ ಸಂಬಂಧ ಹೆಚ್ಚಾಗುತ್ತ ಹೋದಂತೆ ಈ ಎರಡೂ ಭಾಷೆಗಳ ಜನರ ನಡುವೆ ಮಧ್ಯಸ್ಥವಾದ ಒಂದು ದ್ವೈಭಾಷಿಕ ಜನರ ವರ್ಗ ನಿರ್ಮಾಣವಾಗುತ್ತದೆ. ಪರಿಚಿತವಾಗಿರುವ ಎರಡು ಭಾಷೆಗಳ ರಾಜಕೀಯ ಸಾಮಾಜಿಕ ಇಲ್ಲವೆ ಧಾರ್ಮಿಕ ವರ್ಚಸ್ಸವಿರುವ ಭಾಷೆ ಮೇಲೆ ಒಂದು ಇನ್ನೊಂದು ಭಾಷೆಯನ್ನು ಕೆಳಗೆ ಒತ್ತಲಾಗುತ್ತದೆ. ಪರಕೀಯ ಭಾಷೆಯನ್ನು ಕಲಿತು ಅರಗಿಸಿಕೊಳ್ಳುವಾಗ ಮೂಲ ಭಾಷೆಯಲ್ಲಿಯ ಕೆಲವು ಶಬ್ದಗಳು, ವ್ಯಾಕರಣ ದೃಷ್ಟಿಯಿಂದ ವಿಕೃತವಾಗಿ, ಬರುತ್ತವೆ. ಒಂದು ಅರ್ಥದಲ್ಲಿ ಇವನ್ನು ವಿಕೃತವೆನ್ನಲು ಬರುವದಿಲ್ಲ. ಏಕೆಂದರೆ ಅವುಗಳ ಉದ್ದೇಶ ಅಣಗಿಸುವದಾಗಿರುವದಿಲ್ಲ. ಪತ್ತಿಜನರು ವೇದಕಾಲದ ನಂತರ 'ಹಟ್ಟಿಜನ'ರಾದರು. ಈ 'ಹಟ್ಟಿಕಾರ', 'ಹಟಗಾರ'ರ

ಮಧ್ಯದಿಂದಲೇ ಮರಹಟ್ಟೆಯರ ಒಂದು ಗುಂಪು ಮೇಲೆದ್ದಿತು. ಈ ಮರಹಟ್ಟೆಯರ ಭಾಷೆಯೇ 'ಮಹಾರಾಷ್ಟ್ರೀ' (ಪ್ರಾಕೃತ) ಆಯಿತು. ಪತ್ತಿಜನರ ಆರ್ಯೀಕರಣದ ಜೊತೆಗೆ ಅವರ ಭಾಷೆಯ ಆರ್ಯೀಕರಣಕ್ಕೂ ಆರಂಭವಾಯಿತು. ಪತ್ತಿಜನರ ಭಾಷೆಯಲ್ಲಿ ಸಂಸ್ಕೃತ ಶಬ್ದಗಳು ಇಣುಕತೊಡಗಿದವು. ಆದರೆ, ಸಂಸ್ಕೃತದ ಸಂಯುಕ್ತಾಕ್ಷರಗಳು 'ಶ, ಷ, ಸ' ಇವುಗಳ ಉಚ್ಚಾರ ಆ ಭಾಷೆಗೆ ಒಗ್ಗಲಿಲ್ಲ. ಆದ್ದರಿಂದ ಸಂಸ್ಕೃತ ಶಬ್ದಗಳು ತಮ್ಮ ರೂಪ ಬದಲಿಸಿ, ಪತ್ತಿ ಜನರ ಉಚ್ಚಾರ ಪದ್ಧತಿಗೆ ಅನುಗುಣವಾಗಿ ಹೊಸ ಸ್ವರೂಪವನ್ನು ತಳೆದವು: ಅವರ ಭಾಷೆಯಲ್ಲಿ ಅದೇ ಸ್ವರೂಪದಲ್ಲಿ ಸ್ಥಾನವನ್ನು ಪಡೆದವು. ಕನ್ನಡದಲ್ಲಿಯ ತದ್ಭವ ಪ್ರಕರಣದ ಅಭ್ಯಾಸ ಮಾಡಿದರೆ ಈ ವಿಧಾನದ ಸತ್ಯ ಗೋಚರವಾಗುತ್ತದೆ.

ಪತ್ತಿಜನರ ಮೂಲಭಾಷೆಯಲ್ಲಿ ಯಾವ ಸ್ವರ-ವ್ಯಂಜನಗಳಿದ್ದವು, ಅವರ ವರ್ಣಮಾಲೆ ಯಾವ ಬಗೆಯದಾಗಿತ್ತು ಎಂಬದರ ಕಲ್ಪನೆ ತಮಿಳು ವರ್ಣಮಾಲೆಯಿಂದ ತಿಳಿಯಬಹುದಾಗಿದೆ, ತಮಿಳಿನಲ್ಲಿ, ವರ್ಗೀಯಾಕ್ಷರಗಳ ಮೊದಲನೆಯ ಮತ್ತು ಕೊನೆಯ ಅಕ್ಷರಗಳಷ್ಟೇ ಇರುತ್ತವೆ ಕ ಙ,ಚ ಞ, ಟ ಣ, ತ, ನ, ಪ ಮ ಇವು ಆ ಅಕ್ಷರಗಳು. ಸಂಸ್ಕೃತದೊಡನೆ ಸಂಪರ್ಕ ಬಂದ ಮೇಲೆ ಪತ್ತಿಜನರ ಭಾಷೆಯಲ್ಲಿ ಸಂಸ್ಕೃತ ವರ್ಣಮಾಲೆಯಲ್ಲಿಯ ಎಲ್ಲ ಉಚ್ಚಾರಗಳು ಕ್ರಮೇಣ ರೂಢವಾದವು ಮತ್ತು ಸಂಸ್ಕೃತ ಶಬ್ದಗಳ ಉಚ್ಚಾರ ಇದ್ದಕ್ಕಿದ್ದಂತೆ ಮಾಡುವದು ಹಗುರಾಯಿತು. ಈ ಎಲ್ಲ ಬದಲಾವಣೆಗೆ ಸಾವಿರಾರು ವರ್ಷಗಳ ಕಾಲ ಹಿಡಿದಿರಬೇಕು. ಈ ನಡುವಿನ ಅವಸ್ಥೆಯಲ್ಲಿ ಭಾಷಾ-ಮಿಶ್ರಣದ ಅನೇಕ ಪ್ರಕಾರಗಳ ಪ್ರಯೋಗಗಳಾಗಿ ಹೋಗಿರಬೇಕು. ಇಂಥ ಪ್ರಯೋಗಗಳಿಂದ ಇಂದು ಉಪಲಬ್ಧವಾಗಿರುವ ಪ್ರಾಕೃತ ಭಾಷೆಗಳ ನಿರ್ಮಾಣವಾಗಿದೆ. ಎರಡು ಭಿನ್ನಭಾಷೆಗಳ ಸಂಪರ್ಕದಲ್ಲಿ ಧಾರ್ಮಿಕ, ಸಾಮಾಜಿಕ, ಮತ್ತು ರಾಜಕೀಯ ಮಹತ್ವವುಳ್ಳ ಭಾಷೆಯನ್ನು ಅನ್ಯಭಾಷೆಯವರು ಆಸ್ಥೆಯಿಂದ ಕಲಿಯುತ್ತಾರೆ. ಸಾಧ್ಯವಿದ್ದಷ್ಟು ಶ್ರೇಷ್ಠಭಾಷೆಯ ಶಬ್ದಗಳನ್ನು ಅಲ್ಲಿಯ ಉಚ್ಚಾರ ಪದ್ಧತಿಯನ್ನು ಅನುಸರಿಸಿಯೇ ಉಚ್ಚರಿಸಲಾಗುತ್ತದೆ. ಪ್ರಾರಂಭದಲ್ಲಿ ಈ ಪ್ರಯತ್ನ ಯಶಸ್ವಿಯಾಗುವುದಿಲ್ಲ. ಆದರೂ ಕಾಲಕ್ರಮೇಣ ಉಚ್ಚಾರದ ಅನುಕರಣ ಸಾಧ್ಯವಾಗುತ್ತದೆ. ಕನ್ನಡದಲ್ಲಿ 'ಕಾರ್ಯ' ಶಬ್ದಕ್ಕೆ 'ಕಾರಿಯ' ಮತ್ತು 'ಕಜ್ಜ' ಎಂದು ಎರಡು ತದ್ಭವಗಳಿವೆ. 'ಆರ್ಯ' ಶಬ್ದಕ್ಕೂ 'ಅರಿಯ' ಮತ್ತು 'ಅಜ್ಜ' ಎಂಬೆರಡು ರೂಪಗಳಿವೆ. 'ಕಾರಿಯ' ಮತ್ತು 'ಅರಿಯ' ಈ ಮೊದಲ ಪ್ರಕಾರದ ಉಚ್ಚಾರಗಳಲ್ಲಿ 'ಕಾರ್ಯ' ಮತ್ತು 'ಆರ್ಯ'ಗಳ ಉಚ್ಚಾರ ಕಠಿಣವಾಗಿದ್ದರಿಂದ ಅದರ ಸುಲಭೀಕರಣದ ಉಪಾಯ ಸ್ಪಷ್ಟವಾಗಿ ಕಾಣುತ್ತದೆ. ಆದರೆ, 'ಕಜ್ಜ' ಮತ್ತು 'ಅಜ್ಜ'ಗಳಲ್ಲಿ ಸುಲಭೀಕರಣಕ್ಕಿಂತ ಪ್ರೌಢೀಕರಣದ ಕಡೆಗಿನ ಪ್ರವೃತ್ತಿ ಕಾಣುತ್ತದೆ. ತಮಿಳಿನಲ್ಲಿ ಹೊಕ್ಕ ಸಂಸ್ಕೃತ ಶಬ್ದಗಳಿಗೆ ಸುಲಭರೂಪವನ್ನು ಕೊಡುವ ಕಡೆಗೆ ಆ ಜನರ ಪ್ರವೃತ್ತಿ ಹೆಚ್ಚಾಗಿರುವುದು ಕಾಣುತ್ತದೆ. 'ಅಗ್ನಿ' ಶಬ್ದದ ತದ್ಭವ ತಮಿಳಿನಲ್ಲಿ 'ಅಕ್ಕಿನಿ' ಎಂದಾಗುತ್ತದೆ, ಅದೇ ಪ್ರಾಕೃತದಲ್ಲಿ 'ಅಗ್ಗಿ' ಆಗುತ್ತದೆ. 'ಅಗಿನಿ' ಎಂಬ ಶಬ್ದ ಬಹಳ ಅಪರೂಪವಾಗಿದೆ. ಆದರೆ, 'ಅಗ್ಗಿ' ಶಬ್ದಕ್ಕೆ ಸಾಹಿತ್ಯ ಮತ್ತು ವ್ಯವಹಾರಗಳಲ್ಲಿ ಹೆಚ್ಚು ಮಹತ್ವ ಬಂದಿದೆ.

ಎಲ್ಲಿಯ ವರೆಗೆ ಕನ್ನಡದಲ್ಲಿ ಸಂಸ್ಕೃತದಂಥ ವರ್ಣಮಾಲೆ ಸಿದ್ಧವಾಗಿರಲಿಲ್ಲವೋ ಅಲ್ಲಿಯವರೆಗೆ ಸಂಸ್ಕೃತ ಶಬ್ದಗಳು ಮೂಲರೂಪದಲ್ಲಿ ಬರುವುದು ಅಶಕ್ಯವಾಗಿತ್ತು. ಪ್ರಾರಂಭದಲ್ಲಿ 'ಅಗಿನಿ'. 'ಅರಿಯ'ದಂಥ ಸುಲಭವಾದ ರೂಪಗಳು. ತಮಿಳಿನಲ್ಲಿಯಂತೆ, ರೂಢವಾಗಿರಬೇಕು. ಆದರೆ, ಆ ಕಾಲ ಬೇಗನೆ ಹಿಂದೆ ಸರಿದು, ಸಂಸ್ಕೃತದ ಪ್ರಾಕೃತ ರೂಪಗಳೇ ಕನ್ನಡದಲ್ಲಿ ಹೆಚ್ಚು ರೂಢವಾದವು. ಕನ್ನಡದ ತದ್ಭವಪ್ರಕರಣವೆಂದರೆ ಪ್ರಾಕೃತದ ಒಂದು ಚಿಕ್ಕ ವ್ಯಾಕರಣವೇ ಆಗಿದೆ. ಸಂಸ್ಕೃತದ ರೀತಿಯಲ್ಲಿ ಕನ್ನಡದ ವರ್ಣಮಾಲೆ ಸಿದ್ಧವಾದ ಮೇಲೆ ಈ ತದ್ಭವಗಳ ಆವಶ್ಯಕತೆಯೂ ಕ್ರಮೇಣ ಕಡಿಮೆಯಾಗಿ ಸಂಸ್ಕೃತದ ಶಬ್ದಗಳು ಇದ್ದಕ್ಕಿದ್ದಂತೆ ರೂಢವಾಗತೊಡಗಿದವು. 'ಅಗ್ಗಿ', 'ಕಜ್ಜ', 'ದಿಟ್ಟಿ' 'ಗಬ್ಬ' ಮೊದಲಾದ ತದ್ಭವಗಳು ಹಿಂದೆ ಬಿದ್ದು ಅಗ್ನಿ, ಕಾರ್ಯ, ದೃಷ್ಟಿ, ಗರ್ಭ ಮೊದಲಾದ ಶುದ್ಧರೂಪಗಳೇ ಪ್ರಚಾರದಲ್ಲಿ ಬಂದವು. ಪರಕೀಯ ಭಾಷೆಗಳ ಶಬ್ದಗಳನ್ನು ಇದ್ದಕ್ಕಿದ್ದಂತೆ ಉಚ್ಚರಿಸುವ ವಿಷಯದಲ್ಲಿ ಕನ್ನಡಿಗರು ಭಾರತದಲ್ಲೆಲ್ಲ ಪ್ರಸಿದ್ಧರಾಗಿದ್ದಾರೆ. ಸಂಸ್ಕೃತ ಶಬ್ದಗಳ

ಶುದ್ಧವಾದ ಉಚ್ಚಾರದ ವಿಷಯದಲ್ಲಿ ಮಹಾರಾಷ್ಟ್ರೀಯ-ಕರ್ಣಾಟಕೀಯರು ಸೋಲುವದಿಲ್ಲವೆಂಬ ಮಾತು ನಿಜವಾಗಿದ್ದರೂ ಇಂಗ್ಲಿಷ್ ಮೊದಲಾದ ಪರಕೀಯ ಭಾಷೆಗಳ ಉಚ್ಚಾರದ ಬಗ್ಗೆ ಮಹಾರಾಷ್ಟ್ರೀಯರು ಅಷ್ಟೊಂದು ಅಸ್ಥೆ ವಹಿಸುವದಿಲ್ಲವೆಂಬ ತಿಳುವಳಿಕೆ ವ್ಯಾಪಕವಾಗಿದೆ. ಸ್ವದೇಶ ಅಥವಾ ಸ್ವಜನರ ಬಗ್ಗೆ ಸಾಮೂಹಿಕ ಅಭಿಮಾನ ಹೆಚ್ಚಾಗಿರುವ ಜನರು ಪರಭಾಷೆಯ ಬಗ್ಗೆ ಆಸ್ಥೆವಹಿಸಲಾರರು. ಸಾಮೂಹಿಕ ಅಭಿಮಾನಕ್ಕಿಂತ ವೈಯಕ್ತಿಕ ಪ್ರತಿಷ್ಠೆಯ ದೃಷ್ಟಿಯಲ್ಲಿ ಎಲ್ಲಿ ಮಹತ್ವದ್ದಾಗುತ್ತದೋ ಅಲ್ಲಿ ಪರಕೀಯ ಭಾಷೆಯ ಅಭ್ಯಾಸ ಜೋರಾಗಿ ನಡೆಯುತ್ತದೆಂದು ಭಾಷೆ ಮತ್ತು ಸಂಸ್ಕೃತಿಗಳನ್ನು ಅಭ್ಯಾಸ ಮಾಡಿದ ವಿಖ್ಯಾತ ಲೇಖಕ ಹ್ವೋಸ್ಲೆರನ ಅಭಿಪ್ರಾಯವಿದೆ. ಈ ಅಭಿಪ್ರಾಯದಲ್ಲಿ ಸಾಕಷ್ಟು ಸತ್ಯವೂ ಇದೆ. ಹಟ್ಟಿಕಾರರಲ್ಲಿ ಈ ರೀತಿಯ ವ್ಯಕ್ತಿನಿಷ್ಠ ಪ್ರವೃತ್ತಿಯಿದ್ದ ಗುಂಪಿನವರ ಭಾಷೆಯಲ್ಲಿ ಪ್ರಾಕೃತ ಮತ್ತು ಸಂಸ್ಕೃತ ಶಬ್ದಗಳು ಹೆಚ್ಚು ಹೆಚ್ಚಾಗಿ ಬರತೊಡಗಿದವು. ಇದರ ಮುಂದಿನ ಆರ್ಯೀಕರಣದಲ್ಲಿ ತಮ್ಮ ಹೊಸ ಪ್ರಾಕೃತಮಯ ಭಾಷೆಯ ಬಗ್ಗೆ ಸಾಮೂಹಿಕ ಅಭಿಮಾನವುಳ್ಳವರ ಒಂದು ಹೊಸ ಗುಂಪು ನಿರ್ಮಿತವಾಯಿತು ಮತ್ತು ಇವರೇ ಮಹಾರಾಷ್ಟ್ರೀ ಪ್ರಾಕೃತದ ನಿರ್ಮಾಣಕ್ಕೆ ಕಾರಣರಾದರು. ಇನ್ನು ಉಳಿದವರು, ಎಂದರೆ ಕನ್ನಡ ಹಟ್ಟಿಕಾರರು ಬೇರೆಯಾಗಿ, ಕನ್ನಡ ಭಾಷೆಯ ಪ್ರಾರಂಭದ ಸ್ಥಿತಿ ಅಸ್ತಿತ್ವದಲ್ಲಿ ಬಂದಿತು. ಕನ್ನಡದಲ್ಲಿ ಸಂಸ್ಕೃತ ಮತ್ತು ಪ್ರಾಕೃತ ಶಬ್ದಗಳು ನೂರಕ್ಕೆ ೫೦-೬೦ಕ್ಕಿಂತ ಸ್ವಲ್ಪ ಹೆಚ್ಚಾಗಿರುವದು ಹೇಗೆಂಬುದರ ಸಮಸ್ಯೆಯ ಪರಿಹಾರ ಇದಕ್ಕಿಂತ ಬೇರೆ ರೀತಿಯಲ್ಲಿ ಆಗುವದು ಸಾಧ್ಯವಿಲ್ಲ. ಸಾಮಾಜಿಕ ಮತ್ತು ರಾಜಕೀಯ ಪ್ರತಿಷ್ಠೆಗೆ ಕಾರಣವಾದ ಪರಕೀಯ ಭಾಷೆಯನ್ನು ಇದ್ದಕ್ಕಿದ್ದಂತೆ ಸ್ವೀಕರಿಸುವ ಪ್ರವೃತ್ತಿ ಉಳಿದ ಪ್ರಾಂತದವರಿಗಿಂತ ಹೆಚ್ಚಾಗಿ ಕನ್ನಡ ನಾಡಿನಲ್ಲಿದೆ. ತಮ್ಮ ಭಾಷೆಯಲ್ಲಿಲ್ಲದ ಇಂಗ್ಲಿಷ್ ಶಬ್ದಗಳ ಉಚ್ಚಾರ ಕನ್ನಡದಲ್ಲಿಯೂ ಆಗಬೇಕೆಂದು ಕೆಲಹೊಸ ಅಕ್ಷರಗಳನ್ನು ನಿರ್ಮಿಸುವ ಪ್ರಯತ್ನ ಬೆಂಗಳೂರಿನ ಕೆಲ ವಿದ್ವಾಂಸರು ಮಾಡಿದ್ದಾರೆ. ಹಿಂದಿಯಲ್ಲಿ ಉರ್ದುವಿನ 'ಕ' ಅಕ್ಷರಕ್ಕೆ ಒಂದಕ್ಕಿಂತ ಹೆಚ್ಚು ಉಚ್ಚಾರಗಳಿದ್ದು ಕನ್ನಡದಲ್ಲಿ ಅವನ್ನು ಇದ್ದಕ್ಕಿದ್ದಂತೆ ಬರೆಯಲು ಬರಬೇಕೆಂದು ಕನ್ನಡದ ಕೆಲವರು ಆಸೆ ಪಡುತ್ತಾರೆ. ಈ ಎಲ್ಲ ಉದಾಹರಣೆಗಳಿಂದ ಕನ್ನಡದ ಸುಶಿಕ್ಷಿತರಲ್ಲಿ ಪರಭಾಷೆಯ ಬಗ್ಗೆ ಇರುವ ಆಸಕ್ತಿ ಎಷ್ಟೆಂಬುದು ಗೊತ್ತಾಗುತ್ತದೆ.

ಪರಭಾಷೆಯ ಬಗ್ಗೆ ಆಸಕ್ತಿ ಮತ್ತು ಆತ್ಮೀಯತೆ ಹೆಚ್ಚಾದಂತೆ ಸ್ವಭಾಷೆಯ ಬಗ್ಗೆ ಅಭಿಮಾನ ಕಡಿಮೆಯಾಗಿ ತಮ್ಮ ಭಾಷೆಯ ಬಗ್ಗೆ ತಿರಸ್ಕಾರ ಹುಟ್ಟುತ್ತದೆ. ಸ್ವಭಾಷೆಯಲ್ಲಿಯ ಉಚ್ಚಾರದ ರೀತಿಗಳನ್ನು ಕಲಿಯುವವರು ಹೊಸಭಾಷೆಯ ರೀತಿಗಳಿಗೆ ಮನಸೋಲುತ್ತಾರೆ. ಉತ್ತರ ಕರ್ನಾಟಕದ ಕನ್ನಡದ ಉಚ್ಚಾರ ಪದ್ಧತಿ ಮತ್ತು ಭಾಷಾಶೈಲಿ ಉಳಿದ ಭಾಗಗಳ ರೀತಿಗಳಿಗಿಂತ ಭಿನ್ನವಾಗಿರುವದಕ್ಕೆ ಇದೇ ಕಾರಣವಾಗಿದೆ. ಸಾಂಗಲಿ ಮತ್ತು ಸೊಲ್ಲಾಪುರದ ಕನ್ನಡದಲ್ಲಿ ಹಾಲಾ (ಹಾಲು), ಮಸರಾ (ಮೊಸರು), ಯಾಕಾ (ಏಕೆ), ಯಾನಾ (ಏನು) ಮೊದಲಾದ ಶಬ್ದರೂಪಗಳು ಉಪಯೋಗದಲ್ಲಿವೆ. ಈ ಅವಸ್ಥೆಯ ಮುಂದಿನ ಹಂತವೆಂದರೆ ಇನ್ನೊಂದು ಭಾಷೆಯನ್ನು ತಮ್ಮದಾಗಿಸಿಕೊಳ್ಳುವುದು.

ಪ್ರಾಕೃತದ ಭಾಷೆಗಳಲ್ಲಿ ಬಹಳಷ್ಟು 'ದೇಶ್ಯ' ಶಬ್ದಗಳಿವೆಯೆಂದು ಹೇಮಚಂದ್ರ ಮೊದಲಾದ ತಜ್ಞರು ನಿರ್ಣಯಿಸಿಬಿಟ್ಟಿದ್ದಾರೆ. 'ದೇಶಿ' ಇದರ ಅರ್ಥ ಸಂಸ್ಕೃತದ ಜೊತೆಗೆ ಸಂಬಂಧವಿಲ್ಲದ ಈ ದೇಶದ ಇನ್ನೊಂದು ಭಾಷೆ ಎಂದು ಅರ್ಥವಿಸುವ ಅಗತ್ಯವಿದೆ. ಯಾಕೆಂದರೆ 'ದೇಶೀ' ಶಬ್ದಗಳ ವ್ಯುತ್ಪತ್ತಿಯನ್ನು ಸಂಸ್ಕೃತಶಬ್ದಗಳಿಂದ ತೋರಿಸುವದು ಶಕ್ಯವಾಗುವದಿಲ್ಲ. 'ಮೇಘದೂತ' ಕಾವ್ಯದಲ್ಲಿಯ 'ಹಾಲಾ' ಎಂಬ ಶಬ್ದದ ಬಗ್ಗೆ ಹಿಂದೆ ಹೇಳಲಾಗಿದೆ. 'ಅಭಿಪ್ರಯುಕ್ತ ದೇಶಭಾಷಾಪದಮಿತ್ಯತ್ರಸೂತ್ರೇ ಹಾಲೇತಿ ದೇಶಭಾಷಾಪದಮಪ್ಯತೀವ ಕವಿಪ್ರಯೋಗಾತ್ಸಾಧು' ಎಂಬ ವಾಮನಪಂಡಿತನ ಹೇಳಿಕೆಯನ್ನು ಮಲ್ಲಿನಾಥ ತನ್ನ ಮೇಘದೂತದ ಟೀಕೆಯಲ್ಲಿ ಉದ್ಧರಿಸುತ್ತಾನೆ. 'ಹಾಲಾ' ಶಬ್ದದ ವ್ಯುತ್ಪತ್ತಿ ದೇಶೀಯ ಪಾಲ್ (ಹಳೆಗನ್ನಡ) ಶಬ್ದದಿಂದ ಆಗುತ್ತದೆ. ಪ್ರಾಚೀನ ಪತ್ತಿ ಭಾಷೆಯಲ್ಲಿಯ 'ಪಾಲ್' ಈ ಶಬ್ದವು ಸಂಸ್ಕೃತ ಭಾಷಿಕರ ಸಂಪರ್ಕದಿಂದ 'ಹಾಲು' ಎಂದಾಗಿ ಇಂದು ಕನ್ನಡದಲ್ಲಿ ರೂಢವಾಗಿದೆ. ಆ 'ಹಾಲು' ಶಬ್ದವೇ 'ಹಾಲಾ' ರೂಪದಲ್ಲಿ ಸಂಸ್ಕೃತದಲ್ಲಿ ಹೊಕ್ಕಿತೆಂದು

ಹೇಳಬೇಕಾಗುತ್ತದೆ. 'ಹಾಲು' ಎಂಬ ಶಬ್ದ ಕನ್ನಡದಲ್ಲಿ ಮಾತ್ರ ಇದ್ದು ತಮಿಳು ಮತ್ತು ತೆಲುಗುಗಳಲ್ಲಿ 'ಪ'ಕಾರ 'ಹ'ಕಾರದಲ್ಲಿ ಬದಲಾಗಿಲ್ಲ. 'ಪಾಲ್' ಎಂಬ ಶಬ್ದ ಈ ಭಾಷೆಗಳಲ್ಲಿ ರೂಢವಾಗಿದೆ. ಆದ್ದರಿಂದ, ಸಂಸ್ಕೃತದಲ್ಲಿ ಸೇರಿದ 'ಹಾಲಾ' ಶಬ್ದಕ್ಕೆ, ಪತ್ತಿಗಳಿಂದ ಆರ್ಯೀಕೃತರಾದ 'ಹಟ್ಟಿಕಾರ' ವರ್ಗವೇ ಕಾರಣವೆಂದು ಹೇಳಬೇಕಾಗುತ್ತದೆ. ಇದರಂತೆ ಪ್ರಾಚೀನ ಕಾಲದಲ್ಲಿ ಸಂಸ್ಕೃತದಲ್ಲಿ ಸೇರಿದ್ದ ಬಹಳಷ್ಟು ದೇಶೀ ಶಬ್ದಗಳಿಗೆ ಮೊದಲು ಹಟ್ಟಿಕಾರ (ಕನ್ನಡಿಗರು) ರೇ ಕಾರಣರೆಂದು ತಿಳಿಯಲು ಏನೂ ಅಡ್ಡಿ ಕಾಣುವದಿಲ್ಲ.

ಗಂಗಾಯಮುನಾ ತೀರದಲ್ಲಿ ಸೃಷ್ಟಿಯಾದ ಪ್ರಾಕೃತದ ಉಗಮ ಹೇಗೆ ಆಗಿರಬೇಕೆಂಬುದರ ಕಲ್ಪನೆ ಸ್ವಲ್ಪಸ್ವಲ್ಪವಾಗಿ ಈ ವಿವೇಚನೆಯಿಂದ ತಿಳಿದು ಬರುವಂತಿದೆ. ಪ್ರಾಕೃತಕ್ಕೆ 'ಮಹಾರಾಷ್ಟ್ರೀ' ಎಂಬ ಒಂದು ಹೆಸರು ಬಂದಿರುವದು ರಾಷ್ಟ್ರದಿಂದಲ್ಲ ಈ 'ಮರಹಟ್ಟ' ಜನರಿಂದ. ಮೊದಲು ರಾಷ್ಟ್ರ ನಿರ್ಮಾಣವಾಗಿ ನಂತರ ಭಾಷೆ ಅಸ್ತಿತ್ವದಲ್ಲಿ ಬಂದಿತೆಂದು ಹೇಳುವದಕ್ಕೆ ಯಾವದೇ ಆಧಾರವಿಲ್ಲ. ಆ ಭಾಷೆಯನ್ನಾಡುವ ಜನರಿಂದಲೇ ದೇಶಕ್ಕೆ ಹೆಸರು ಬಂದಿರಬೇಕು. 'ಮಹಾರಾಷ್ಟ್ರೀ' ಪ್ರಾಕೃತವೆಂಬ ಹೆಸರು ವರರುಚಿಯ ಕಾಲದಷ್ಟು ಹಳೆಯದಾಗಿದ್ದರೂ ಆ ಹೆಸರಿನ ರಾಷ್ಟ್ರವೊಂದೂ ಇಲ್ಲದಿರುವದು ಆಶ್ಚರ್ಯವಲ್ಲದೆ ಮತ್ತೇನು? 'ಮಹಾರಾಷ್ಟ್ರಿ' ಪ್ರಾಕೃತಕ್ಕೆ 'ಮರಹಟ್ಟೆ' ಜನರು ಕಾರಣರೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಇದರಿಂದಾಗಿ ಈ ಭಾಷೆಗೆ ಮೊದಲಿನಿಂದಲೂ ಕನ್ನಡದ ನಿಕಟವಾದ ಸಂಬಂಧವಿತ್ತೆಂದು ಸಿದ್ಧಮಾಡಿ ತೋರಿಸುವ ಅಗತ್ಯವಿಲ್ಲ. ಸಂಸ್ಕೃತದ ಪ್ರಭಾವದಿಂದ ಪತ್ತಿಜನರ ಭಾಷೆ ಬದಲಾಗತೊಡಗಿತ್ತು ಮತ್ತು ಅದೇ ಕಾಲಕ್ಕೆ ಕನ್ನಡದ ಪ್ರಾರಂಭಿಕ ಅವಸ್ಥೆಯೂ ಆಗಿತ್ತು. 'ಶೇಂದ್ರ' (ಶ್ವಂದ್ರ). 'ಪತ್ತಿ' (ಹಟ್ಟಿ) ಮುಂತಾದ ಶಬ್ದಗಳ ಉಚ್ಚಾರದಲ್ಲಿ ಪರಿವರ್ತನವಾಗಿ ಹೊಸ ಭಾಷೆ ನಿರ್ಮಾಣವಾಗತೊಡಗಿತು. ಅದಕ್ಕೆ ಸಂಪೂರ್ಣವಾದ ಭಾಷೆಯ ಸ್ವರೂಪ ಬರಲು ಬಹಳ ದೀರ್ಘವಾದ ಕಾಲಾವಧಿ ಬೇಕಾಗಿರಬಹುದು; ಮತ್ತು ಈ ನಡುವಿನ ಅವಧಿಯಲ್ಲಿ ಸಂಸ್ಕೃತದಲ್ಲಿಯ ಬಹಳಷ್ಟು ಶಬ್ದಗಳು ಪತ್ತಿಜನರ ಭಾಷೆಯಲ್ಲಿ ಸೇರುತ್ತ, ಅವುಗಳ ಸಂಖ್ಯೆ ಹೆಚ್ಚಾಗಿ ಅವೆಲ್ಲ ಕೂಡಿಕೊಂಡು ಒಂದು ಹೊಸಭಾಷೆಯು ನಿರ್ಮಾಣಕ್ಕೆ ಕಾರಣವಾಗಿರಬೇಕು.

ಯಾದವರ ವಸತಿಸ್ಥಾನದ ಬಗ್ಗೆ ಸ್ಪಷ್ಟ ಕಲ್ಪನೆ ಇಲ್ಲದೆ 'ಮಹಾರಾಷ್ಟ್ರೀ' ಪ್ರಾಕೃತದ ನಿರ್ಮಾಣ ಮತ್ತು ಬೆಳವಣಿಗೆಯ ಬಗ್ಗೆ ಸರಿಯಾದ ಅರಿವು ಮೂಡುವುದು ಸಾಧ್ಯವಿಲ್ಲ. ಗಂಗಾಯಮುನಾ ತೀರದಲ್ಲಿ ಯಾದವರ ವಸತಿಸ್ಥಾನವಿತ್ತು. ಅಲ್ಲಿ ಅವರ ಹಾಟಗಳಲ್ಲಿ (ಘೋಷ-ಪಲ್ಲೀ) ಪ್ರಾಕೃತ ಭಾಷೆ ಹುಟ್ಟಿತೆಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಆದರೆ, ಮಹಾಭಾರತದ ಕಾಲದಲ್ಲಿಯೇ ಯಾದವರ ಬೇರೆಬೇರೆ ಶಾಖೆಗಳು ದ್ವಾರಕಾ, ವಿದರ್ಭಗಳ ವರೆಗೆ ಹಬ್ಬಿಕೊಂಡು ನೆಲೆಯೂರಿದವು ಎಂದು ಅನೇಕ ಪುರಾವೆಗಳಿಂದ ತಿಳಿದುಬರುತ್ತದೆ. ಕಾಲಯವನ ಮೊದಲಾದವರ ತೊಂದರೆಯಿಂದ ತಪ್ಪಿಸಿಕೊಳ್ಳಲು ಶ್ರೀಕೃಷ್ಣನು ದ್ವಾರಕೆಗೆ ಬಂದು ನೆಲೆ ಯೂರುತ್ತಾನೆ. ಸುರಕ್ಷಿತತೆಗಾಗಿ ಆಶ್ರಯವನ್ನು ಹುಡುಕಿಕೊಂಡು ಹೋಗುವವರು ತೀರ ಅಪರಿಚಿತವಾದ ಸ್ಥಳಕ್ಕೆ ಹೋಗುವದು ಶಕ್ಯವಿಲ್ಲ. ಹೊತ್ತಿಗೆ ಆಗುವ ಆಪ್ತರು-ಇಷ್ಟರು ಬೆಂಬಲವಾಗುತ್ತಾರೆಂಬ ಉದ್ದೇಶದಿಂದ ಎಲ್ಲ ರೀತಿಯಿಂದಲೂ ಸುರಕ್ಷಿತವಾಗಿರುವ, ಅಥವಾ ಎಲ್ಲಿ ನಿಶ್ಚಿಂತೆಯಿಂದ ಬದುಕಬಹುದೋ ಅಲ್ಲಿ, ಶತ್ರುಗಳ ಕಾಟವನ್ನು ತಪ್ಪಿಸಿ ಕೊಳ್ಳಲು ಯಾರಾದರೂ ಹೋಗಬಹುದು. ಈ ದೃಷ್ಟಿಯಿಂದ ವಿಚಾರ ಮಾಡಿದಾಗ ಶ್ರೀಕೃಷ್ಣ ಸೌರಾಷ್ಟ್ರ- ದ್ವಾರಕೆಗಳನ್ನು ಆಯ್ದುಕೊಂಡದ್ದೇಕೆಂಬುದು ಸ್ಪಷ್ಟವಾಗುತ್ತದೆ. ಲಾಟ, ಸೌರಾಷ್ಟ್ರ ದೇಶವೆಂದರೆ ನಾಟರ (ನಾಡವರ), ರಾಷ್ಟ್ರಿಕರ ತವರುಮನೆಯಾಗಿದ್ದು ಅವರಿಂದಲೇ ದೇಶಕ್ಕೆ ಹೆಸರು ಬಂದದ್ದು. ನಾಟ ರಾಷ್ಟ್ರಿಕರು ಭೋಜಕ-ಯಾದವರ ಸಂಬಂಧಿಗಳಾಗಿದ್ದರೆಂದು ಇತಿಹಾಸ ಕಾಲದಲ್ಲಿ ರಿಸ್ಟಿಕ-ಭೋಜಕದಂಥ ಉಲ್ಲೇಖದ ಮೇರೆಗೆ ಸಿದ್ಧವಾಗುತ್ತದೆ. ಭೋಜಕರು ವಿದರ್ಭದ ಜನರು. ಇದರಿಂದ ಗಂಗಾ-ಯಮುನಾ ತೀರದಿಂದ ದ್ವಾರಕೆ ವಿದರ್ಭದ ವರೆಗೆ ಈ ಹಟ್ಟೆ ಜನರು ವ್ಯಾಪಿಸಿಕೊಂಡಿದ್ದರೆಂದು ಹೇಳಬೇಕಾಗುತ್ತದೆ. ಹೀಗೆ ಈ ಪ್ರಮುಖಜನರ ಭಾಷೆ (ಪ್ರಾಕೃತ) ಅವರ ವರ್ಚಸ್ಸಿನಿಂದ ಕೂಡಲೆ ದೇಶದಲ್ಲಿ ಪ್ರಸಾರಗೊಂಡಿತು.

ಹಿಮಾಲಯದ ಪ್ರದೇಶದಲ್ಲಿ 'ಹಾಟಕ'ವೆಂಬ ದೇಶವಿತ್ತು ಎಂದು ಹೇಳುವ ಮಹಾಭಾರತದ ಉಲ್ಲೇಖದ ಬಗ್ಗೆ ಹಿಂದೆ ಹೇಳಲಾಗಿದೆ. ಬಂಗಾಲದ ಒಂದು ಭಾಗಕ್ಕೆ ಗೌಡದೇಶವೆಂಬ ಹೆಸರಿದೆ. ಈ ಹೆಸರಿನ ಬಗ್ಗೆ ವಿಚಾರಮಾಡುವ ಅಗತ್ಯವಿದೆ. ಸಂಗೀತದಲ್ಲಿ 'ಗೌಳ' ಹೆಸರಿನ ಒಂದು ರಾಗವೂ ಇದೆ. ದೇಶಗಳ ಹೆಸರುಗಳು ಮೇಲಿಂದ 'ಕಾನಡಾ', 'ಸೌರಾಷ್ಟ್ರ', 'ಆರಭೀ' ಮೊದಲಾದ ರಾಗಗಳಿರುವಂತೆ 'ಗೌಳ' ವಾದರೂ ದೇಶವಾಚಕ ಹೆಸರಾಗಿದೆ. ಗೌಡ, ಗೌಳ ಎಂಬ ಎರಡೂ ಹೆಸರುಗಳು ಈ ರಾಗಕ್ಕಿವೆ. ಪ್ರಾಚೀನಕಾಲದಲ್ಲಿ ಗೌಳಜನರು ವಾಸಿಸುವ ಸ್ಥಳವೆಂದು ಈ ಹೆಸರು ಬಂದಿರಬಹುದು. ಗೋಪಾಲ-ಗೋವಳ-ಗೌಳ ಈ ಶಬ್ದ ಹಟ್ಟಿ-ಹಟ್ಟಿಕಾರ ಇದರ ಸಂಸ್ಕೃತಜನ್ಯ ಪರ್ಯಾಯ ಶಬ್ದವಾಗಿದೆ. ಬಂಗಾಲದಲ್ಲಿ ವಸತಿಮಾಡಿದ್ದ ಈ ಗೌಳಜನರು ಪತ್ತಿಜನರ ಒಂದು ಶಾಖೆಯಾಗಿರಬೇಕೆಂದು ತೋರುತ್ತದೆ. ಇದಕ್ಕೆ ಬಂಗಾಲದ ಭಾಷೆ ಮತ್ತು ಇತಿಹಾಸಗಳಲ್ಲಿ ಸಾಕಷ್ಟು ಪುರಾವೆಗಳಿವೆ. "ಬಂಗಾಲದಲ್ಲಿ ಮಾಗಧೀ ಮತ್ತು ಅಪಭ್ರಂಶಭಾಷೆಗಳು, ಅದಕ್ಕೂ ಪೂರ್ವದಲ್ಲಿ ಇದ್ದ ದ್ರಾವಿಡೀ, ಕೋಲ ಮತ್ತು ಮಾಖಮೇರ, ಟಿಬೇತೋ-ಜರ್ಮನ್ ಭಾಷೆಗಳನ್ನು ಹಿಂದೆ ಸರಿಸಿ ತಮ್ಮ ವರ್ಚಸ್ಸನ್ನು ಹೆಚ್ಚಿಸಿದವು. ಬಂಗಾಲಿ ಭಾಷೆಯ ಉಚ್ಚಾರಪದ್ಧತಿ, ಶಬ್ದರಚನೆ, ವಾಕ್ಯರಚನೆ, ಶಬ್ದಸಂಗ್ರಹಗಳ ಜೊತೆಗೆ ದ್ರಾವಿಡಭಾಷೆಗಳ ಸಂಬಂಧ ಇನ್ನೂ ಗಾಢವಾಗಿರುವ ಲಕ್ಷಣಗಳು ಕಾಣುತ್ತವೆ. ಈ ಸಾಮ್ಯವು ಕೇವಲ ಬಂಗಾಲಿಗಷ್ಟೇ ಸೀಮಿತವಾಗಿರದೆ ಉತ್ತರದಲ್ಲಿಯ ಇತರ ಆರ್ಯ-ಹಿಂದೀ ಭಾಷೆಗಳಿಗೂ ಅನ್ವಯಿಸುತ್ತದೆಂದು" ಡಾ॥ ಸುನೀತಿಕುಮಾರ ಚಟರ್ಜಿಯವರು ತಮ್ಮ 'ಬಂಗಾಲಿ ಭಾಷೆಯ ಉದ್ಗಮ ಮತ್ತು ವಿಕಾಸ' ಎಂಬ ಗ್ರಂಥದಲ್ಲಿ ಬರೆದಿದ್ದಾರೆ.

ಗೌಡದೇಶವೆಂದು ಹೆಸರಿದ್ದ ಬಂಗಾಲದ ಈ ಭಾಗದಲ್ಲಿಯ ಬಂಗಾಲಿ ಭಾಷೆ ಮತ್ತು ರೀತಿಗಳ ಮೇಲೆ ದೂರಗಾಮಿಯಾದ ಪರಿಣಾಮ ಬೀರಿದ ದ್ರವಿಡರೆಂದರೆ ಯಾರಿರಬೇಕು? ಇವರು ತಮಿಳರೇ, ತೆಲುಗರೇ, ಕನ್ನಡಿಗರೇ ಅಥವಾ ಈ ಶಾಖೆಗೆ ಸೇರಿದ್ದ ಇನ್ನೊಂದು ವರ್ಗವೇ? ಈ ಪ್ರಶ್ನೆಗೆ ಉತ್ತರ ಯಾವ ಸಂಶೋಧನದಲ್ಲಿಯೂ ಇಲ್ಲ. ಆದರೆ, ಈ ಸಂದಿಗ್ಧತೆ ಇನ್ನೂ ಎಷ್ಟು ದಿನ ಹಾಗೆಯೇ ಉಳಿಯಬೇಕು? ಗೌಹಟ್ಟಿ, ಬಾರಹಟ್ಟ, ಮುಂತಾಗಿ ಈ ಭಾಗದಲ್ಲಿಯ ಹಟ್ಟಿಗಳನ್ನು ನೋಡಿದರೆ-ಗ್ರಾಮನಾಮಗಳನ್ನು ಲಕ್ಷ್ಯಕ್ಕೆ ತೆಗೆದುಕೊಂಡರೆ-ಈ ದ್ರವಿಡರು ಯಾರಿರಬಹುದೆಂದು ಅರಿವಿಗೆ ಬರುವಂತಿದೆ. ಈ ಭಾಗದಲ್ಲಿಯ ಗ್ರಾಮನಾಮಗಳ ಕೊನೆಗೆ ಬರುವ 'ಪಾರಾ' ಈ ಶಬ್ದವನ್ನು ನೋಡಿದರೆ 'ಪಕಾರ' 'ಹ'ಕಾರವಾಗುವ ಪೂರ್ವದಲ್ಲಿ ಪತ್ತಿಜನರ ವಸಾಹತು ಈ ಭಾಗಗಳಲ್ಲಿ ಆರಂಭವಾಗಿರಬೇಕೆಂದು ಹೇಳಬೇಕಾಗುತ್ತದೆ. 'ಹ'ಕಾರದಿಂದ ಕೂಡಿದ ಹಟ್ಟಿ ಮೊದಲಾದ ರೂಪಾಂತರಗಳು ಮುಂದಿನ ಕಾಲದ ಹಟ್ಟಿಕಾರರ ಪ್ರಭಾವದಿಂದ ಆಗಿರಬೇಕು. ಈ ಹಟ್ಟಿಕಾರರು ಕರ್ಣಾಟ-ಮಹಾರಾಷ್ಟ್ರೀಯರ ಪೂರ್ವಜರಾಗಿದ್ದರು. ಬಂಗಾಲದಲ್ಲಿ ೧೦೭೦ರಿಂದ ೧೧೧೯ರ ವರೆಗೆ ಸೇನ ಮನೆತನದವರು ರಾಜ್ಯವಾಳುತ್ತಿದ್ದರು. ಈ ಮನೆತನದ ತಾಮ್ರಪಟದ ಮೇಲಿಂದ ಇವರು ತಮ್ಮನ್ನು 'ಬ್ರಹ್ಮ-ಕ್ಷತ್ರಿಯ', 'ಕರ್ಣಾಟಕ-ಕ್ಷತ್ರಿಯ'ರೆಂದು ಕರೆದುಕೊಳ್ಳುತ್ತಿದ್ದರೆಂದು ತಿಳಿದುಬಂದಿದೆ.[೨೯] ಈ ವಂಶದಲ್ಲಿ ಬಲ್ಲಾಳರೆಂಬ ಹೆಸರಿನ ರಾಜರಾಗಿ ಹೋದರು. ಬಲ್ಲಾಳಪುರವೆಂಬ ಹೆಸರಿನ ಒಂದು ಊರು ಬಂಗಾಲದ ಈ ಭಾಗದಲ್ಲಿತ್ತು. ಇದು ಮುಂದೆ 'ವಿಕ್ರಮಪುರ'ವೆಂದು ಬದಲಾದದ್ದು ಐತಿಹಾಸಿಕ ಕಾಗದ ಪತ್ರಗಳಿಂದ ತಿಳಿಯುತ್ತದೆ. ಬಲ್ಲಾಳಪುರದ ಭಾಷಾಂತರ ವಿಕ್ರಮಪುರವಾಗಿರುವದು ಸ್ಪಷ್ಟವಾಗಿದೆ. ಈ ಭಾಗದಲ್ಲಿ 'ಊರಾ', 'ಪಲ್ಲಿ' ಶಬ್ದಗಳಿರುವ ಗ್ರಾಮನಾಮಗಳು ದೊರೆಯುತ್ತವೆ. ಮಿಥಿಲಾ ಪ್ರದೇಶದಲ್ಲಿ ಆಗಿಹೋದ ನಾನ್ಯದೇವ ತನ್ನನ್ನು ಕರ್ಣಾಟಕ-ಕುಲಕ್ಷತ್ರಿಯನೆಂದು ಕರೆದುಕೊಳ್ಳುತ್ತಾನೆ. ('ನಾನ್ಯ was certainly a Karnatak King of Mithila and contemporary with Vijaysen, ಎಂದು ವಿನ್ಸೆಂಟ್ ಸ್ಮಿಥ್ ಹೇಳಿದ್ದಾನೆ.) ಈ ನಾನ್ಯದೇವನ ವಂಶಜರು ನೇಪಾಳದಲ್ಲಿ ಕೆಲಕಾಲ ರಾಜ್ಯವಾಳುತ್ತಿದ್ದರೆಂದು ಈ ದೇಶದ ಇತಿಹಾಸದಿಂದ ತಿಳಿಯುತ್ತದೆ. ಈ ಎಲ್ಲ ಸಂಗತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡರೆ, ಈ ಗೌಡದೇಶದಲ್ಲಿ ತಮ್ಮ ಭಾಷೆ ಮತ್ತು ನಡೆವಳಿಕೆಗಳನ್ನು

ಪ್ರಚಾರದಲ್ಲಿ ತಂದವರು ಹಟ್ಟಿಕಾರರಲ್ಲದೆ ಬೇರೆ ಯಾರು ಅಲ್ಲ ಎಂದು ಗೊತ್ತಾಗುತ್ತದೆ. 'ಗೌಳ' ಶಬ್ದದಿಂದ ಗೌಡ ಶಬ್ದ ಹುಟ್ಟಿತು ಎಂದು ಗೃಹೀತ ಹಿಡಿದರೆ 'ಳ'ಕಾರ 'ಡ'ಕಾರವಾಯಿತೆಂದು ಹೇಳಿದಂತಾಯಿತು 'ಡ'ಕಾರದಿಂದ 'ಳ'ಕಾರ ಹುಟ್ಟುವದು ಸರ್ವಸಾಮಾನ್ಯವಾಗಿದೆ. ಆದರೆ 'ಳ'ಕಾರ 'ಡ'ಕಾರವಾಗುವ ವ್ಯಾಪಾರ ಬಹಳ ಅಪರೂಪದ್ದಾಗಿದೆ. ಆದರೆ, ಇಂಥ ಉದಾಹರಣೆಗಳಿಲ್ಲವೆಂದಲ್ಲ. 'ತಮಿಳ' ಶಬ್ದದಿಂದ 'ದ್ರವಿಡ' ಹುಟ್ಟಿರಬೇಕೆಂಬುದು ಈಗ ಗೃಹೀತ ಸತ್ಯವಾಗಿದೆ ತಮಿಳ-ದಮಿಳ-ದ್ರಮಿಡ, ದ್ರವಿಡ: ಇಲ್ಲಿ 'ಳ'ಕಾರದಿಂದಲೇ 'ಡ'ಕಾರ ಹುಟ್ಟಿತೆಂದು ಹೇಳಬೇಕಾಗುತ್ತದೆ. ಗೌಡ ಮತ್ತು ಗೌಳ ಹೀಗೆ ಎರಡೂ ಪ್ರಕಾರದಲ್ಲಿ ಒಂದೇ ಹೆಸರನ್ನು ಉಚ್ಚರಿಸುವದನ್ನು ನಾವು ಈಗಲೂ ಕೇಳುತ್ತವೆ. ಚಂದ್ರ, ಅರಣಿ, ಮಟಚಿ ಈ ಶಬ್ದಗಳು ಯಾವ ಭಾಷೆಯಿಂದ ವೈದಿಕ ಸಾಹಿತ್ಯದಲ್ಲಿ ಬಂದವೋ ಆ ಭಾಷೆಯನ್ನಾಡುವ ಜನ ಉತ್ತರಾಪಥದ ಪಂಚನದ ದೇಶದಲ್ಲಿದ್ದರು. ಯಜುರ್ವೇದದಲ್ಲಿಯ ಪತ್ತಿಗಳು, ಋಗ್ವೇದದಲ್ಲಿಯ ಯದು-ತುರ್ವಸುಗಳು ಇವರು ಆರ್ಯೇತರರಾಗಿದ್ದು ಮೇಲೆ ಕಾಣಿಸಿದ ಚಂದ್ರವರ್ಗದ ಸಂಸ್ಕೃತೇತರ ಪದಗಳಿಗೆ ಅವರೇ ಕಾರಣರಾಗಿದ್ದರು.

ಉತ್ತರ ಭಾರತದಲ್ಲಿ ಒಂದು ಕಾಲದಲ್ಲಿ ಹಟ್ಟಿಕಾರರು ವಾಸವಾಗಿದ್ದದ್ದು ನಿಜವಾದರೂ ಅವರು ಆರ್ಯೀಕರಣದ ಪ್ರಕ್ರಿಯೆಯಲ್ಲಿ ಪೂರ್ಣವಾಗಿ ಹತಪ್ರಭರಾದರು, ಆದರೆ ನರ್ಮದೆಯ ದಕ್ಷಿಣಕ್ಕೆ ಮಾತ್ರ ಅವರು ತಮ್ಮ ವೈಶಿಷ್ಟ್ಯವನ್ನು ಕಾಯ್ದುಕೊಂಡು ತಮ್ಮ ಪ್ರಭಾವವನ್ನು ಉಳಿಸಿಕೊಂಡರು. ಇದೇ ಕಾರಣಕ್ಕಾಗಿ ಈ ಪ್ರದೇಶವನ್ನು ಪಂಚದ್ರಾವಿಡವೆಂದು ಕರೆಯುವ ರೂಢಿ ಇದೆ. ಮರಹಟ್ಟೆ ಈ ಹಟ್ಟಿಕಾರರಲ್ಲಿಯ ಒಂದು ಸಣ್ಣಭಾಗವಾಗಿದೆ. ನರ್ಮದೆಯಿಂದ ಕಾವೇರಿಯ ವರೆಗೆ ಇರುವ ಪ್ರದೇಶದಲ್ಲಿ ಹಟ್ಟಿಕಾರರ ವಸಾಹತನ್ನು ಸೂಚಿಸುವ ಅನೇಕ ಗ್ರಾಮನಾಮಗಳಿವೆ. ನೀಲಗಿರಿಯ ಆಚೆಗೆ ಕೋಯಿಮತ್ತೂರ-ಸೇಲಮ್ (ಶಾಲ್ಯಂ) ಜಿಲ್ಲೆಯ ವರೆಗೆ ಹಟ್ಟಿಗಳು (ಗ್ರಾಮ) ಸಿಗುತ್ತವೆ. 'ಹಟ್ಟಿ' ಎಂಬ ಶಬ್ದವು ತಮಿಳಿನಲ್ಲಿ ಇಲ್ಲ. ದಕ್ಷಿಣದಲ್ಲಿ ಹಟ್ಟಿಗಳು ದೊರೆಯುವ ವರೆಗೆ ಹಟ್ಟಿಗಳ ವರ್ಚಸ್ಸು ಇತ್ತು ಅಥವಾ ಆ ಪ್ರದೇಶ ಅವರ ವಶದಲ್ಲಿತ್ತೆಂದು ನಿಶ್ಚಿತವಾಗುತ್ತದೆ. ದಕ್ಷಿಣದಲ್ಲಿ ಹಟ್ಟಿಗ್ರಾಮಗಳಿದ್ದ ಕಡೆಗೆ ಈಗ ತಮಿಳರು ಇರುತ್ತಿದ್ದರೂ ಪ್ರಾಚೀನ ಕಾಲದಲ್ಲಿ ತಮಿಳರು ಅಲ್ಲಿರಲಿಲ್ಲ. ನರ್ಮದೆಯ ದಕ್ಷಿಣಕ್ಕೆ ಮತ್ತು ಪೂರ್ವಕ್ಕೆ ಕೂಡ ಹಟ್ಟಿಗ್ರಾಮಗಳು ಇರುವ ವರೆಗೆ ಆ ಪ್ರದೇಶ ಹಟ್ಟಿಕಾರರ ವಶದಲ್ಲಿತ್ತೆಂಬುದು ನಿಶ್ಚಿತವಾಗಿದೆ. ಇಂದು ಕರ್ನೂಲ ಎಂದು ಕರೆಯುವ ಊರು-ಕಣ್ಣಾನೂರು ಜಿಲ್ಲೆ-ಪೂರ್ತಿಯಾಗಿ ಹಟ್ಟಿಕಾರರ ಪ್ರಭಾವದಲ್ಲಿತ್ತು. ಶ್ರೀಶೈಲದ ಸುತ್ತಮುತ್ತಲಿನ ಪ್ರದೇಶಕ್ಕೆ 'ಕಣ್ಣ ವಿಜಯ', 'ಕರ್ಣಾಟ-ವಿಜಯ'ವೆಂಬ ಹೆಸರಿತ್ತೆಂದು ತಾಮ್ರಪಟಗಳಿಂದ ತಿಳಿಯುತ್ತದೆ. ಈ ಭಾಗಕ್ಕೆ 'ಕರ್ಣಾಟ ಸೀಮೆ' ಎಂದು ಹೆಸರಿದ್ದದ್ದನ್ನು ಡಾ. ಎನ್. ವೆಂಕಟರಮಣಯ್ಯನವರು ತಮ್ಮ ಲೇಖನದಲ್ಲಿ ಹೇಳಿದ್ದಾರೆ.[೩೦]

ಪ್ರಾಕೃತ ಭಾಷೆಯು ಪತ್ತಿಜನರ ಕೊಟ್ಟಿಗೆಯಲ್ಲಿ ಹುಟ್ಟಿದ್ದರೂ ಮುಂದೆ ಸಂಸ್ಕೃತ ಸಹಾಯದಿಂದಲೇ ಅದು ಶೈಶವವನ್ನು ಕಳೆದು ಒಳ್ಳೆಯ ರೀತಿಯಲ್ಲಿ ಬೆಳೆದು ಬಂದಿತು. ಜೈನ ಮತ್ತು ಬೌದ್ಧ ಮತ ಪ್ರಸಾರಕರು ಪ್ರಾಕೃತವನ್ನು ತಮ್ಮದಾಗಿಸಿಕೊಂಡರು. ಸಂಸ್ಕೃತ ಭಾಷೆ ಮತ್ತು ಸಾಹಿತ್ಯದ ಹೊರಗೆ ನೋಡಲು ನಿರಾಕರಿಸಿದ ಬ್ರಾಹ್ಮಣರು ದಿನದಿನಕ್ಕೆ ಸುತ್ತಲಿನ ಸಮಾಜದಿಂದ ದೂರವಾಗತೊಡಗಿದರು. ಇದರಿಂದ ಸಮಾಜದಲ್ಲಿಯ ತಮ್ಮ ಸ್ಥಾನಮಾನಕ್ಕೆ ಧಕ್ಕೆ ತಗಲಿದ ಅನುಭವ ಬಂದೊಡನೆ ಕೂಡಲೆ ಎಚ್ಚರಾಗಿ ಪ್ರಾಕೃತವನ್ನು ಪ್ರೀತಿಯಿಂದ ನೋಡತೊಡಗಿದರು. ಪ್ರಾಕೃತದಲ್ಲಿ ಹೀಗೆ ಎರಡು ಸ್ಥೂಲ ಪ್ರವಾಹಗಳು ಕಾಣುತ್ತವೆ. ಜೈನ ಬೌದ್ಧರು ಪೋಷಿಸಿದ ಭಾಷೆ ಒಂದು ಪ್ರಕಾರದ್ದಾಗಿದ್ದರೆ; ವೈದಿಕ ಅಥವಾ ಹಿಂದೂ ಮತಾನುಯಾಯಿಗಳು ಪೋಷಿಸಿದ ಪ್ರಾಕೃತ ಇನ್ನೊಂದು ಬಗೆಯದಾಗಿತ್ತು. ಜೈನ-ಬೌದ್ಧರ ಸಾಹಿತ್ಯ ಅರ್ಧಮಾಗಧೀ ಮತ್ತು ಪಾಲಿಯಲ್ಲಿದ್ದರೆ ವೈದಿಕ ಪರಂಪರೆಯ ವಿದ್ವಾಂಸರು ರಚಿಸಿದ ಗ್ರಂಥಗಳು ಮಹಾರಾಷ್ಟ್ರೀ ಪ್ರಾಕೃತದಲ್ಲಿ ವಿಪುಲವಾಗಿವೆ.

ವೈದಿಕ ಸಂಸ್ಕೃತಿಯ ಕೇಂದ್ರವು ಪಂಚನದ ದೇಶದಿಂದ ದೂರವಾದ ನಂತರ ಅದು ವಿದರ್ಭದಲ್ಲಿ ಬಹಳ ಕಾಲ ವೈಭವದಿಂದ ಸ್ಥಿರವಾದಂತೆ ತೋರುತ್ತದೆ. ಆಮೇಲೆ ಆ ಕೇಂದ್ರ ಕಾಂಚೀ (ಸ್ವಲ್ಪ ಕಾಲ ಕಲ್ಯಾಣದಲ್ಲಿ)

ನಂತರ ವಿಜಯನಗರದ ಕಡೆಗೆ ಹೊರಳಿತು. ಹಿಂದೂ ಸಂಸ್ಕೃತಿಯನ್ನು ರಕ್ಷಿಸಿದ ಶ್ರೇಯಸ್ಸು ವಿಜಯನಗರಕ್ಕಿದ್ದರೆ ದಕ್ಷಿಣಾಪಥದಲ್ಲಿ ಜೈನ ಮತ ಪ್ರಸಾರವನ್ನು ತಡೆಹಿಡಿದ ಕಾರ್ಯವನ್ನು ವಿದರ್ಭ-ಮಹಾರಾಷ್ಟ್ರ ಮಾಡಿತು. ವಿದರ್ಭೀಯ ಪಂಡಿತರು ಮೊದಲು ಮಹಾರಾಷ್ಟ್ರಿಯನ್ನು ನಂತರ ಮರಾಠಿಯನ್ನು ಎತ್ತಿಹಿಡಿದು ವೈದಿಕ-ಹಿಂದೂಧರ್ಮದ ಅಸ್ತಿತ್ವವನ್ನು ಚಿರಸ್ಥಾಯಿಯನ್ನಾಗಿ ಮಾಡಿದರು. ಮರಹಟ್ಟದಿಂದ ವಿದರ್ಭ-ಮಹಾರಾಷ್ಟ್ರ-ಮರಾಠಿ ಆದರು. ಈ ಇತಿಹಾಸವು ಸ್ಥಿತ್ಯಂತರದಲ್ಲಿ ಸಮಾವಿಷ್ಟವಾಗಿದೆ. ಮರಹಟ್ಟಿಯ ಆರ್ಯೀಕರಣ ಪ್ರಾರಂಭವಾದೊಡನೆ ದೇಶದ ಹೆಸರು ವಿದರ್ಭವೆಂದು ರೂಪಾಂತರಗೊಂಡಿತು. ವಿದರ್ಭ ಒಬ್ಬ ರಾಜನ ಹೆಸರೆಂದು 'ಹರಿವಂಶ'ದಲ್ಲಿ ಉಲ್ಲೇಖವಿದೆ. ಆದರೆ, ಇದು ಮರಹಟ್ಟದ ಸಂಸ್ಕೃತೀಕರಣವಾಗಿ ಮಹಾರಾಷ್ಟ್ರವಾಗುವ ಮೊದಲು, ಮಧ್ಯಂತರ ಕಾಲದ ಒಂದು ರೂಪವಾಗಿದೆ. ವರ್ಹಾಟವೇ ವಿದರ್ಭವೆಂದು ರೂಪಾಂತರವಾಗಿದ್ದರೆ ಅಸಂಭವನೀಯವೇನಲ್ಲ. ಮಹಾಭಾರತ ಮೊದಲಾದ ಪ್ರಾಚೀನ ಗ್ರಂಥಗಳಲ್ಲಿ ವರ್ಹಾಟಕ್ಕೆ ವಿದರ್ಭವೆಂಬ ಹೆಸರಿದೆ. ಈ ಪ್ರದೇಶದ ಹೆಸರು ವಿದರ್ಭವೆಂದಿದ್ದರೂ ಇಲ್ಲಿಯ ಜನರು ಮಹಾರಾಷ್ಟ್ರೀಯರೆಂದು ಮೊದಲೇ ರೂಢವಾಗಿರಬೇಕು. ಆದರೆ, ಮೊದಲಿನ ರೂಢಿಯನ್ನು ಹಿಂದೆ ಸರಿಸಿ ಇನ್ನೊಂದು ದೇಶವಾಚಕ ಸಾಹಿತ್ಯದಲ್ಲಿ ಪ್ರಚಲಿತವಾಗಲು ಬಹಳ ಕಾಲ ಹಿಡಿದಿರಬೇಕು. ವರ್ಹಾಟ-ವಿದರ್ಭವನ್ನು ಬಿಟ್ಟರೆ ಬೇರೆ ಯಾವ ಕಡೆಗೂ ಮಹಾರಾಷ್ಟ್ರೀಯರ ನೆಲೆ ಸಾಧ್ಯವಿಲ್ಲ. 'ಮಹಾರಾಷ್ಟ್ರೀಯ' ಮರಹಟ್ಟಿಯರು ಸಂಪೂರ್ಣವಾಗಿ ವೈದಿಕ ಇಲ್ಲವೆ ಹಿಂದೂ ಸಂಸ್ಕೃತಿಯ ಪರಿಸರದಲ್ಲಿ ಬಂದಿದ್ದರು. ಅದರ ಬೆಂಬಲದಿಂದ ಬ್ರಾಹ್ಮಣರು ಕರ್ಣಾಟದಿಂದ ಜೈನಧರ್ಮವನ್ನು ಓಡಿಸಿ ಮಹಾರಾಷ್ಟ್ರದ ಗೌರವವನ್ನು ಹೆಚ್ಚಿಸಿದರು. ಭಾರತದಲ್ಲೆಲ್ಲ ಪಂಡಿತರು ಇದೇ ಆತ್ಮೀಯತೆಯಿಂದ ಮಹಾರಾಷ್ಟ್ರೀ ಪ್ರಾಕೃತವನ್ನು ಕಾಪಾಡಿಕೊಂಡು ಬಂದರು. ಮುಂದೆ ಮರಾಠಿ ಕೂಡ, ಕರ್ನಾಟಕದಲ್ಲಿ ಈ ಭಾವನೆಯ ಹಿನ್ನೆಲೆಯಲ್ಲಿ ವೇಗದಿಂದ ಬೆಳೆದು ಬಂದಿತು. ಮರಹಟ್ಟಿಯರ ಮೂಲಸ್ಥಾನ ವರ್ಹಾಟ (ಪ್ರಥಮ ಮಹಾರಾಷ್ಟ್ರ)ವಾಗಿತ್ತು. ಮರಹಟ್ಟಿಯರು ಆರ್ಯರ ಪ್ರಭಾವಕ್ಕೆ ಪೂರ್ಣವಾಗಿ ಸೋತರು, 'ಅರಿಯ'ರಾದರು. ಆರ್ಯರ ಪ್ರಭಾವ ಮರಹಟ್ಟದ ಹೊರಗೆ (ವರ್ಹಾಟ) ಹೆಚ್ಚು ಹೆಚ್ಚಾಗಿ ಬೆಳೆದು ಬಂದಂತೆ ಅರಿಯ ಜನರ ವಿಸ್ತಾರವೂ ಹೆಚ್ಚಾಗುತ್ತ ಹೋಯಿತು. ಮರಹಟ್ಟಿಯು ಸಂಸ್ಕೃತೀಕರಣವಾಗಿ ಮಹಾರಾಷ್ಟ್ರವೆಂಬ ಹೆಸರು ಘುಣಾಕ್ಷರ ನ್ಯಾಯದಿಂದ ಮುಂದೆ ಬಂದರೂ ಕ್ರಮವಾಗಿ ಆ ಹೆಸರು ಸಾರ್ಥಕವಾಯಿತು. ಕರ್ಣಾಟವೆಂಬ ಹೆಸರು ಕಣ್ಣಜನರಿಂದ ಬಂದದ್ದಾದರೂ ಒಬ್ಬ ಅರ್ವಾಚೀನ ಕವಿ ಅಮಾಯಕವಾಗಿ ಸೂಚಿಸಿದ ವ್ಯುತ್ಪತ್ತಿ ಬಹಳಮಟ್ಟಿಗೆ ನಿಜವೆನಿಸಿತು. 'ಕರ್ಣೇ ಅಟತಿ'- ಕಿವಿಗೆ ಕೇಳಿಸುತ್ತದೆ ಅಂದರೆ ಸುಪ್ರಸಿದ್ಧವಾಗಿದೆ ಎಂದು ಅರ್ಥ. (ಅಂದರೆ ಕಣ್ಣಿಗೆ ಪ್ರತ್ಯಕ್ಷವಾಗಿ ಕಾಣಸದಿದ್ದರೂ ಎಂದು ಅರ್ಥ) ಈ ವ್ಯುತ್ಪತ್ತಿ ಬೇರೊಂದು ಅರ್ಥದಲ್ಲಿ (ಕರ್ಣಾಟ ಕ್ಷೀಣವಾಗಿ) ನಿಜವಾಗಬೇಕಾದದ್ದು ಆಶ್ಚರ್ಯಕರವಾಗಿದೆ.

ಹನ್ನೆಡನೆಯ ಶತಮಾನದ ವರೆಗೆ ಕರ್ಣಾಟ-ಮಹಾರಾಷ್ಟ್ರಗಳ ಸಂಬಂಧ ಸರಿಯಾಗಿ ಲಕ್ಷ್ಯದಲ್ಲಿ ಬರಲು ಈ ಎರಡು ಪ್ರಾಂತಗಳ ನಡುವಿನ ಈಗಿನ ದ್ವೇಷ ಅಡ್ಡಿಯಾಗುತ್ತದೆ. ಹನ್ನೆರಡನೆಯ ಶತಮಾನಕ್ಕಿಂತ ಮೊದಲು, ಸಂಸ್ಕೃತ ಭಾಷೆಯ ವಿಷಯದಲ್ಲಂತೂ ಹೋಗಲಿ, ಪ್ರಾಕೃತ ಅಥವಾ ಮರಾಠಿಯ ಬಗ್ಗೆ ಕೂಡ ಕರ್ನಾಟಕದಲ್ಲಿ ಯಾವದೇ ಬಗೆಯ ದ್ವೇಷವಿರಲಿಲ್ಲ. ಇಷ್ಟೇ ಅಲ್ಲ ಈ ಭಾಷೆಗಳನ್ನು ಕಲಿಯುವದು ಆವಶ್ಯಕವೆಂಬ ತಿಳುವಳಿಕೆಯೂ ಇತ್ತು. ಹಳೆಗನ್ನಡ ಕವಿಗಳು ತಮ್ಮನ್ನು 'ಉಭಯ ಭಾಷಾವಿಶಾರದ'ರೆಂದು ಬಹಳ ಅಭಿಮಾನದಿಂದ ಹೇಳಿಕೊಳ್ಳುತ್ತಿದ್ದರು. ಕನ್ನಡ ಆರ್ಯವರ್ಗದ್ದೇ ಒಂದು ಭಾಷೆಯೆಂದು ಹಳೆಯ ಗ್ರಂಥಕಾರರ ತಿಳುವಳಿಕೆ ಇತ್ತು. 'ಸಂಸ್ಕೃತಂ ಪ್ರಾಕೃತಂ ಅಪಭ್ರಂಶಂ ಪೈಶಾಚಿಕಂ ಎಂಬ ಮೂರುವರೆ ಭಾಷೆಗಳೊಳಪಟ್ಟುವು'. ಕನ್ನಡವೆಂದರೆ ಮೇಲಿನ ಮೂರುವರೆ ಭಾಷೆಗಳಿಂದ ಹುಟ್ಟಿದ ಭಾಷೆ ಎಂದು ಹತ್ತನೆಯ ಶತಮಾನದ ಛಂದಃಶಾಸ್ತ್ರಜ್ಞ ನಾಗವರ್ಮ ಬರೆಯುತ್ತಾನೆ. ನಾಗವರ್ಮನ ಈ ತಿಳುವಳಿಕೆ ಅವನ ಕಾಲಕ್ಕಿಂತ ಮೊದಲೇ ಪ್ರಚಲಿತವಾಗಿರಬೇಕು. ಬಾದಾಮಿಯ ಚಾಲುಕ್ಯರ ವಿಜಯಾದಿತ್ಯನ ಒಂದು ತಾಮ್ರಪಟದಲ್ಲಿ (ಕ್ರಿ. ಶ. ೬೯೯) ಕನ್ನಡವನ್ನು ಪ್ರಾಕೃತ

ಭಾಷೆಯೆಂದು ಕರೆಯಲಾಗಿದೆ. "ಅತಃಪರಂ ಪ್ರಾಕೃತ ಭಾಷಾಯಾಂ ವರ್ಣಾನ್ಯೇತಾನಿ ದತ್ತಾನಿ." ಎಂದು ಹೇಳಿ ಮುಂದೆ ದಾನಕೊಟ್ಟ ಪ್ರದೇಶದ ಸೀಮೆಗಳನ್ನು ಕನ್ನಡದಲ್ಲಿ ಹೇಳಲಾಗಿದೆ. ಕನ್ನಡವನ್ನು ಪ್ರಾಕೃತಭಾಷೆಯೆಂದು ಕರೆಯುವ ರೂಢಿ ೧೬ ಮತ್ತು ೧೭ನೆಯ ಶತಮಾನದ ವರೆಗೆ ಕರ್ಣಾಟಕದಲ್ಲಿತ್ತು. ಹದಿಮೂರನೆಯ ಶತಮಾನದ ಆಂಡಯ್ಯ (ತಾನು ಶುದ್ಧ ಕನ್ನಡದಲ್ಲಿಯೇ ಕಾವ್ಯ ಬರೆಯುತ್ತೇನೆಂದು ವೀಳ್ಯವೆತ್ತಿದವ) 'ಕಬ್ಬಿಗರ ಕಾವ'ವನ್ನು ಬರೆದಿದ್ದಾನೆ. ಆದರೆ, ಕಾವ್ಯ ಪ್ರಾಕೃತ ಪದಭೂಯಿಷ್ಠವಾದ ಕೃತಿ. ಈ ಪ್ರಕಾರ ಪ್ರಾಕೃತವೆಂದರೆ ಪರಭಾಷೆಯೇ ಅಲ್ಲವೆನ್ನುವಷ್ಟು ಕನ್ನಡಿಗರಿಗೆ ಈ ಭಾಷೆಯ ಬಗ್ಗೆ ಮಮತೆಯಿತ್ತು. ಪ್ರಾಕೃತದ ಬಗ್ಗೆ ಇದ್ದ ಮಮತ್ವವೇ ಮುಂದೆ ಮರಾಠಿಯ ಬಗ್ಗೆಯೂ ಇತ್ತು. ಏಕೆಂದರೆ ಭಾಷೆ ಆಗ ಇನ್ನೂ ರಾಜಕಾರಣದ, ಪ್ರಾಂತೀಯತೆಯ ವಿಷಯವಾಗಿರಲಿಲ್ಲ. ಭಾಷೆ ಧಾರ್ಮಿಕ ಇಲ್ಲವೆ ಸಾಹಿತ್ಯಕ ಆನಂದದ ಒಂದು ಸಾಧನವಾಗಿತ್ತು. ವಿಚಾರಗಳ ಮಾಧ್ಯಮ ಎಂಬ ಒಂದೇ ದೃಷ್ಟಿಯಿಂದ ಕನ್ನಡಿಗರು ಸಂಸ್ಕೃತ ಮತ್ತು ಪ್ರಾಕೃತಗಳ ಬಗ್ಗೆ ಮಮತೆಯನ್ನು ಇಟ್ಟುಕೊಂಡಿದ್ದರು.

ಕನ್ನಡವೆಂದರೆ ಪ್ರಾಕೃತಜನ್ಯ ಭಾಷೆ ಎಂಬ ತಿಳುವಳಿಕೆ ಇದ್ದದ್ದರಿಂದ ಕನ್ನಡದಲ್ಲಿ ಸಂಸ್ಕೃತ ಮತ್ತು ಪ್ರಾಕೃತ ಪದಗಳ ಹೊಕ್ಕು ಬಳಕೆಗೆ ಯಾವ ಅಡ್ಡಿಯೂ ಇರಲಿಲ್ಲ. ಕನ್ನಡದ ವ್ಯಾಕರಣ ಪ್ರಕ್ರಿಯೆ ಸಂಸ್ಕೃತ ಭಾಷೆಯನ್ನು ಅನುಸರಿಸಿತ್ತು. ಕಾರ, ಗಾರ, ವಂತ, ವಳ (ಪಾಲ, ವಾಲ, ವಾಳ, ವಳ) ಮೊದಲಾದ ಪ್ರತ್ಯಯಗಳನ್ನು ಕನ್ನಡ ಸಂಸ್ಕೃತದಿಂದ ಕಡ ತೆಗೆದುಕೊಂಡಿತು. ಮಾರಾಮಾರಿ, ಹಾಣಾಹಾಣಿಯಂಥ ಸಮಾಸಗಳನ್ನು ಕನ್ನಡದಲ್ಲಿ ರೂಢಗೊಳಿಸುವ ಪ್ರಯತ್ನ ಮೊನ್ನೆಮೊನ್ನೆಯ ವರೆಗೆ ನಡೆಯಿತು. ಆದರೆ ಅದು ಕನ್ನಡದ ಜಾಯಮಾನಕ್ಕೆ ವಿಸಂಗತವೆನಿಸಿದ್ದರಿಂದ ಈಗ ಕೈಬಿಡಲಾಗಿದೆ. ಕ್ರಿಯಾಪ್ರತ್ಯಯ ಮತ್ತು ನಾಮವಿಭಕ್ತಿ ಪ್ರತ್ಯಯಗಳನ್ನು ಹೊರತುಪಡಿಸಿದರೆ ಸಂಸ್ಕೃತ ಪ್ರಾಕೃತ ಶಬ್ದಗಳಿಂದ ತುಂಬಿದ ಇಡೀ ವಾಕ್ಯಗಳನ್ನು ಕನ್ನಡದ ಪ್ರೌಢಕವಿಗಳ ಕೃತಿಗಳಲ್ಲಿ ಕಾಣಬಹುದಾಗಿದೆ.

ಇದರಿಂದಾಗಿ ಕನ್ನಡದಲ್ಲಿ ೧೨-೧೩ನೆಯ ಶತಮಾನದ ವರೆಗೆ ಪ್ರಾಕೃತವೆಂಬ ತಿಳುವಳಿಕೆಯ ಮೇರೆಗೆ ರೂಢಗೊಳಿಸಿದ ಶಬ್ದಗಳು ಪರ್ಯಾಯವಾಗಿ ಮರಾಠಿಯ ಪೂರ್ವಸಿದ್ಧತೆಗೆ ಕಾರಣವಾದವು. ಆಧುನಿಕ ಮರಾಠಿಯ ಪ್ರಾಥಮಿಕ ರೂಪಗಳು ಮರಾಠಿ ಸಾಹಿತ್ಯದಲ್ಲಿ ಸಿಗಬೇಕು. ಆದರೆ, ಅವು ಕನ್ನಡದ ಆಡುಮಾತಿನಲ್ಲಿ ಮತ್ತು ಸಾಹಿತ್ಯದಲ್ಲಿ ಚೆದರಿ ಹೋಗಿವೆ. ಮರಾಠಿಯಲ್ಲಿಯ ತೇಲ, ಪೀಠ, ಗಾಭ (ಣ) ಮೊದಲಾದ ಶಬ್ದಗಳು ಮೂಲ ಸಂಸ್ಕೃತದಲ್ಲಿದ್ದು ಮರಾಠಿಯಲ್ಲಿ ಬರುವ ಮೊದಲು ಅವುಗಳ ಪ್ರಾಕೃತದೊಳಗಿನ ಮಧ್ಯಮ ಅವಸ್ಥೆ ಉಚ್ಚಾರ ಶಾಸ್ತ್ರದ ದೃಷ್ಟಿಯಿಂದ ಆವಶ್ಯಕವೆನಿಸಿದೆ.

ಸಂಸ್ಕೃತ	ಪ್ರಾಕೃತ	ಮರ್‍ಹಾಟೀ
ತೈಲ	ತೆಲ್ಲ	ತೇಲ
ಪಿಷ್ಠ	ಪಿಠ್ಠ	ಪೀಠ
ಗರ್ಭ	ಗಬ್ಬ	ಗಾಭ
ಕರ್ಪಟ	ಕಪ್ಪಡ	ಕಾಪಡ

ಈ ಕೋಷ್ಟಕದಲ್ಲಿಯ ಮೂರನೆಯ ಪ್ರಕಾರದ ಶಬ್ದಗಳು ಆಧುನಿಕ ಮರಾಠಿಯಲ್ಲಿ ರೂಢವಾಗಿದೆ. ಆದರೆ ನಡುವಿನ ಶಬ್ದರೂಪಗಳು ಹಳೆಯ ಮರಾಠೀ ಸಾಹಿತ್ಯದಲ್ಲಿ ದೊರೆಯುವದಿಲ್ಲ. ಆದರೆ ಈ ರೂಪಗಳು ಕನ್ನಡದ ಆಡುಮಾತಿನಲ್ಲಿ ಇಂದಿಗೂ ಪ್ರಚಾರದಲ್ಲಿವೆ. ಜ್ಞಾನೇಶ್ವರಿ ಮೊದಲಾದ ಹಳೆಯ ಗ್ರಂಥಗಳಲ್ಲಿ ಕಾಣುವ ನೀಚ, ಚೋಖ, ಆಗಳ, ಸಾನ, ದಿಠೀ, ಜೇಠೀ. ಸಾದ ವಗೈರೆ ಶಬ್ದಗಳ ಪೂರ್ವರೂಪಗಳು ಕನ್ನಡ ಮಾತಿನಲ್ಲಿ ಜೀವಂತವಾಗಿವೆ.

ಮರ್‍ಹಾಟೀ	ಕನ್ನಡ	ಸಂಸ್ಕೃತ
ನೀಚ	ನಿಚ್ಚ	ನಿತ್ಯ
ಚೋಖ	ಚೊಕ್ಕ	-
ಆಗಳಾ	ಅಗ್ಗಳ	ಅರ್ಘ
ಜೇಠಿ	ಜಟ್ಟಿ	-
ಸಾನ	ಸಣ್ಣ	-
ದಿಠೀ	ದಿಟ್ಟಿ	ದೃಷ್ಟಿ
ಸಾದ	ಸದ್ದ(ಸದ್ದು)	ಶಬ್ದ.

ಮರಾಠಿಯ ಈ ಶಬ್ದಗಳು ಇಂದಿನ ಸ್ವರೂಪದಲ್ಲಿ ಒಮ್ಮೆಲೆ ವ್ಯವಹಾರದಲ್ಲಿ ಬರಲಿಲ್ಲ. ಉಚ್ಚಾರ ಶಾಸ್ತ್ರದ ದೃಷ್ಟಿಯಿಂದ ಅವುಗಳ ಮಧ್ಯಂತರ ಅವಸ್ಥೆಯನ್ನು ಗೃಹೀತ ಹಿಡಿಯಬೇಕಾಗುತ್ತದೆ. ಆ ಅವಸ್ಥೆ ಕಾಲ್ಪನಿಕವಾಗಿರುವುದಿಲ್ಲ. ಅವು ಇಂದು ಕನ್ನಡದಲ್ಲಿ ರೂಢವಾಗಿವೆ. ಮರಾಠೀ ಪ್ರತ್ಯಯಗಳಿಂದ ಕೂಡಿದ ದಿಟ್ಟಿ, ಜಟ್ಟಿ ಎಂಬ ರೂಪಗಳು ಮರಾಠಿಯಲ್ಲಿ ಎಲ್ಲೂ ಸಿಗುವದಿಲ್ಲ. ಈ ಪ್ರಾಕೃತ ರೂಪಗಳ ಮರಾಠೀಕರಣದ ಪ್ರಯೋಗ ಸಂಬಂಧ ಕರ್ನಾಟಕದಲ್ಲಿ ನಡೆಯುತ್ತಿತ್ತು ಮತ್ತು ಆ ಆಯೋಗದಿಂದ ನಿಷ್ಪನ್ನವಾದ ವಾಕ್ಯಗಳು ಕನ್ನಡ ಸಾಹಿತ್ಯದಲ್ಲಿ ಮತ್ತು ಶಿಲಾಲೇಖಗಳಲ್ಲಿ ಕಾಣುತ್ತವೆ.

ಮರ್‍ಹಾಟಿಯಲ್ಲಿ ಕನ್ನಡದ ಹಳೆಯ ರೂಪಗಳು ಮತ್ತು ಕನ್ನಡದಲ್ಲಿ ಮರ್‍ಹಾಟಿಯ ಪ್ರಾಥಮಿಕ ರೂಪಗಳು ನಿಶ್ಚಯವಾಗಿ ದೊರೆಯುತ್ತವೆ. ಇದರಿಂದ ಈ ಎರಡು ಪ್ರಾಂತಗಳ ಜನರ ನಡುವೆ ನಿಕಟವಾದ ಸಂಬಂಧವಿತ್ತು ಮತ್ತು ಈ ಎರಡು ಭಾಷೆಗಳಲ್ಲಿ ಸಾಮಾನ್ಯವಾದ ಪದಪ್ರಯೋಗ ಇರಬೇಕೆಂದು ಒಪ್ಪಬೇಕಾಗುತ್ತದೆ. ಮರಾಠಿ ಭಾಷೆ ಒಂದು ಮೂರ್ತರೂಪಕ್ಕೆ ಬರುವ ಮೊದಲೇ ಈ ಎರಡು ಜನಾಂಗಗಳಲ್ಲಿ ಗಾಢವಾದ ಸಂಬಂಧವಿತ್ತೆಂಬುದು ನಿಶ್ಚಿತವಾದ ಸಂಗತಿಯಾಗಿದೆ. ಕ್ರಿಸ್ತಶಕದ ಪ್ರಾರಂಭದಲ್ಲಿ ರಚಿತವಾದ 'ಗಾಥಾ ಸಪ್ತಶತಿ'ಯಲ್ಲಿಯ ಗಲ್ಲ, ಪೊಟ್ಟ, ತುಪ್ಪದಂಥ ಕನ್ನಡದಲ್ಲಿ ರೂಢವಾಗಿದ್ದ ಬೇಕಾದಷ್ಟು ಶಬ್ದಗಳಿವೆ. ಮರಾಠಿಯಲ್ಲಿ 'ಸೇಂದಣೀ' ಎಂಬ ಶಬ್ದ ಅನುಸ್ವಾರಯುಕ್ತವಾಗಿದೆ. ಕನ್ನಡದಲ್ಲಿ, ಹನ್ನೆರಡನೆಯ ಶತಮಾನದಲ್ಲಿ ಅದು ಅನುಸ್ವಾರಯುಕ್ತವಾಗಿತ್ತೆಂದು ಕೇಶಿರಾಜನ 'ಶಬ್ದಮಣಿದರ್ಪಣ'ದಿಂದ ತಿಳಿಯುತ್ತದೆ. ಇಂದಿನ ಕನ್ನಡದಲ್ಲಿ ಈ ಶಬ್ದವು ಅನುಸ್ವಾರವನ್ನು ಕಳೆದುಕೊಂಡಿದೆ. (ಸೇದು). ಇದೇ ರೀತಿಯ ಇನ್ನೊಂದು ಉದಾಹರಣೆಯೆಂದರೆ 'ಕುರುಂಬ' ಎಂಬ ಶಬ್ದ, ಚಾಂದಾ-ಭಂಡಾರಾದ ಕನ್ನಡ ಜಾತಿಯವರ ಹೆಸರು 'ಕುರುಬರ' ಎಂದು ಗ್ರಿಯರ್‌ಸನ್ ಹೇಳುತ್ತಾನೆ. 'ಸೇಂದಣೀ'ದಂತೆ ಈ ಶಬ್ದ ಹನ್ನೆರಡನೆಯ ಶತಮಾನದ ವರೆಗೆ ಅನುಸ್ವಾರಯುಕ್ತವಾಗಿತ್ತು. ಮುಂದೆ ಅದು ಅಬಿಂದುಕವಾಯಿತು. ಈ ರೀತಿ ಅನೇಕ ಉದಾಹರಣೆಗಳನ್ನು ಕೊಡಬಹುದಾಗಿದೆ. ಇವುಗಳ ಮೇಲಿಂದ ೧೨ನೆಯ ಶತಮಾನದ ನಂತರ ಈ ಎರಡು ಪ್ರಾಂತಗಳ ನಡುವಿನ ಸಂಘಟನೆ ಕಡಿಮೆಯಾಗುತ್ತ ಬಂದು ಅದು ಇಲ್ಲವೆನಿಸುವಷ್ಟರ ಮಟ್ಟಿಗೆ ಹೊಸ ಇತಿಹಾಸವಿದೆ. ಪಂಪ ಮಹಾಕವಿ (ಇ. ಸ. ೯೩೨) 'ಆದಿಪುರಾಣ'ವೆಂಬ ಸುಂದರವಾದ ಕಾವ್ಯಕೃತಿಯನ್ನು ರಚಿಸಿದ್ದಾನೆ. ಅದರಲ್ಲಿಯ ಸಂಸ್ಕೃತ ಮತ್ತು ಪ್ರಾಕೃತದ ಪ್ರಾಚುರ್ಯವನ್ನು ನೋಡಿದರೆ ಮರಾಠಿ ಭಾಷೆಯ ಪೂರ್ವ-ಭೂಮಿಕೆ ಸ್ಪಷ್ಟವಾಗುತ್ತದೆ. ಅವನ ಇನ್ನೊಂದು ಕೃತಿ 'ವಿಕ್ರಮಾರ್ಜುನ ವಿಜಯ'ದಲ್ಲಿ ಪಂಪ ಕನ್ನಡದ ಮೇಲಿನ ತನ್ನ ಪ್ರಭುತ್ವವನ್ನು ಚೆನ್ನಾಗಿ ವ್ಯಕ್ತಪಡಿಸಿದ್ದಾನೆ. ಆ ಕೃತಿ ಚೊಕ್ಕವಾದ ಕನ್ನಡಭಾಷೆ ಮತ್ತು ಶೈಲಿ (ತಿರುಳ್‌ಗನ್ನಡ)ಯ ವಿಧಾನವಾಗಿದೆ. ಈ ಕೃತಿಯಲ್ಲಿ ದ್ರೋಣನ ಬಾಯಿಂದ 'ಅರೇ ಹೋಯ ಜಬಾಪ್ಪಾ' ಎಂಬ ಉದ್ಗಾರ ಬಂದಿದೆ. ಕಲ್ಯಾಣದ ಚಾಲುಕ್ಯದೊರೆ ಸೋಮೇಶ್ವರನ 'ಮಾನಸೋಲ್ಲಾಸ' ಅಥವಾ 'ಅಭಿಲಷಿತಾರ್ಥಚಿಂತಾಮಣಿ'ಯೆಂಬ ಮಹತ್ವದ ಗ್ರಂಥವೊಂದಿದೆ. ಆ ಕಾಲದ ಸಾಮಾಜಿಕ ಸ್ಥಿತಿಯನ್ನು ತಿಳಿಯಲು ಬಯಸುವವರಿಗೆ ಇದು ಮಹತ್ವದ ಗ್ರಂಥವಾಗಿದೆ. ಸಂಧಿವಿಗ್ರಹಿಯಾದವನು ಹೇಗಿರ

ಬೇಕೆಂದು ಬಣ್ಣಿಸುತ್ತ: "ಪ್ರಗಲ್ಭೋ ಮತಿಮಾನ್ ದಕ್ಷ: ಸರ್ವಭಾಷಾವಿಶಾರದಃ" ಎಂದು ಅವನು ಬರೆಯುತ್ತಾನೆ. ಸಂಧಿವಿಗ್ರಹಿಯಾದವನಿಗೆ ಎಲ್ಲ ಭಾಷೆಗಳ ಜ್ಞಾನವಿರುವ ಅಗತ್ಯವಿತ್ತು. ಈ ಕಾರಣಕ್ಕಾಗಿಯೂ ಕರ್ನಾಟಕದಲ್ಲಿ ಪ್ರಾಕೃತ ಮರಾಠೀ ಭಾಷೆಗಳನ್ನು ಅಭ್ಯಾಸ ಮಾಡುತ್ತಿದ್ದರು. ಹಸ್ತಿ-ಶಿಕ್ಷಕನು ಆನೆಗಳಿಗೆ ಹೇಗೆ ಶಿಕ್ಷಣ ನೀಡಬೇಕೆಂಬುದರ ಬಗ್ಗೆ ಇದೇ ಗ್ರಂಥದಲ್ಲಿ ವಿವರಣೆ ಇದೆ: ಆನೆಗೆ ಹಿಂದೆ ಹೋಗು ಎಂದು ಹೇಳುವಾಗ 'ಹೇಡ ಹೇಡೇತಿ ವಕ್ತವ್ಯಂ' ಎಂದಿದೆ. ಹಡ, ಹಟ್, ಈ ಶಬ್ದ ಇಂದಿಗೂ ಮರಾಠಿಯಲ್ಲಿ ಉಪಯೋಗದಲ್ಲಿದೆ. "ಯಾಚನಾರ್ಥಂ ಮಹಾಮಾತ್ರೋ ದೇ ದೇ ಶಬ್ದ ಉದೀರಯೇತ್", "ಕಸ್ಯಾಪಿ ಗ್ರಹಣೇ ಘೇ ಘೇ ಶಬ್ದಂ ಮತಂಗಜಃ" "ಈದೃಶೀ ಪ್ರತಿಮಾ ಭಾಷಾ ಶಿಕ್ಷಯೇತ್ ಮತಂಗಜಮ್."

ಕಲ್ಯಾಣದ ಚಾಲುಕ್ಯರ ನಂತರ ಕರ್ನಾಟಕದ ರಾಜಧಾನಿ ಹೊಯ್ಸಳರ ಕಾಲಕ್ಕೆ ಹಳೆಬೀಡಿಗೆ ಹೋಯಿತು. ಕ್ರಿ.ಶ. ೧೨೧೦ರ ಸುಮಾರಿಗೆ ಹೊಯ್ಸಳರ ರಾಜಕವಿ ಜನ್ನ 'ಅನಂತನಾಥ ಪುರಾಣ'ವೆಂಬ ಕಾವ್ಯಕೃತಿಯನ್ನು ರಚಿಸಿದ. ಅದರಲ್ಲಿಯ ಪ್ರತೀಹಾರಿ "ಉರಿ ಉರಿ ಮಾಗಾ ಬೈಸ ಜಾತೂ ಹಳೂ' ಎಂಬ ಸೂಚನೆ ಕೊಡುತ್ತಾನೆ. ಈ ವರ್ಣನೆ ದೊರೆಯುವದು ಹೊಯ್ಸಳರ ಶುದ್ಧ ಕರ್ನಾಟಕದ ಗರ್ಭಗೃಹವಾದ ಹಳೆಬೀಡಿನ ಓಲಗದ ಕವಿಯ ಅಭಿಜಾತವಾದ ಕನ್ನಡಕಾವ್ಯದಲ್ಲಿ ಎಂಬುದನ್ನು ನೆನಪಿನಲ್ಲಿಡಬೇಕು. ಕವಿ ತನ್ನ ಕಣ್ಣಿಂದ ನೋಡಿದ್ದನ್ನು, ಕಿವಿಯಿಂದ ಕೇಳಿದ್ದನ್ನು ಇಲ್ಲಿ ಒರೆದಿರಬೇಕೆಂದು ಅನ್ನಿಸುವದಿಲ್ಲವೇ? ಕ್ರಿ. ಶ. ೧೨೩೬ರ ಹೊತ್ತಿಗೆ ಆಂಡಯ್ಯ ಶುದ್ಧ ಕನ್ನಡದಲ್ಲಿ ಕಾವ್ಯರಚನೆ ಮಾಡುವ ಪ್ರತಿಜ್ಞೆ ಮಾಡಿದ್ದನ್ನು ಈಗಾಗಲೇ ಹೇಳಿಯಾಗಿದೆ. ಪ್ರಾಕೃತ ಮತ್ತು ಕನ್ನಡ ಇವೆರಡೂ ಒಂದೇ ಎಂದು ಅವನ ತಿಳುವಳಿಕೆ ಇರದಿದ್ದರೆ ಅವನ ಮುಕ್ತಹಸ್ತದಿಂದ ತನ್ನ ಕೃತಿಯಲ್ಲಿ ಪ್ರಾಕೃತ ಶಬ್ದಗಳನ್ನು ಬಿತ್ತುತ್ತಿರಲಿಲ್ಲ. ಸಂಸ್ಕೃತ ಮತ್ತು ಕನ್ನಡ ಪದಗಳನ್ನು ಕೂಡಿಸಿ ಸಮಾಸವನ್ನು ರಚಿಸುವದಕ್ಕೆ ಕನ್ನಡ ವೈಯಾಕರಣಿಗಳ ವಿರೋಧವಿದೆ. ಆದರೆ, ಅವರೆ ಕನ್ನಡ ಮತ್ತು ಪ್ರಾಕೃತ ಪದಗಳ ಸಮಾಸರಚನೆಗೆ ಅಪ್ಪಣೆ ಕೊಟ್ಟಿದ್ದಾರೆ. ಆಂಡಯ್ಯನ ಕೃತಿಯಲ್ಲಿ ರಾವುತರ ಬಾಯಿಂದ ಬರುವ ಈ ವಾಕ್ಯವನ್ನು ನೋಡಬೇಕು. 'ಝಾರೇ, ಜಝಾರೇ ಹಳೂ ರೇ, ಹೋ ಹೋ ಮಝಾ'. ಈ ವಾಕ್ಯದಲ್ಲಿ 'ಜಾ' ಶಬ್ದದ ಬದಲಾಗಿ ಮಹಾಪ್ರಾಣದ ಉಪಯೋಗವಿದೆ. ಈ ಉದಾಹರಣೆಯಿಂದ ಶುದ್ಧಕರ್ನಾಟಕದ ಕೇಂದ್ರದಲ್ಲಿ ಕೂಡ ಮರಾಠಿಯ ಪ್ರಯೋಗ ಜೀವಂತವಾಗಿತ್ತು ಮತ್ತು ಕೆಲವು ಕಡೆಗೆ ಮರಾಠಿ ಉಪಯೋಗದಲ್ಲಿತ್ತೆಂದು ಕಂಡುಬರುತ್ತದೆ. ಈ ಹಿನ್ನೆಲೆಯನ್ನು ಲಕ್ಷ್ಯಕ್ಕೆ ತಾರದೆ ಶ್ರವಣಬೆಳಗೊಳದ ಏಕಮೇವಾದ್ವಿತೀಯವಾದ ಪ್ರಾಚೀನ ಮರಾಠೀ ಶಿಲಾಲೇಖದ ಒಗಟು ಬಿಚ್ಚುವದಿಲ್ಲ. ಶ್ರವಣಬೆಳಗೊಳ ಮಹಾರಾಷ್ಟ್ರದಿಂದ ಬಹಳ ದೂರದಲ್ಲಿದೆ. ಮರಾಠಿಯ ಶಿಲಾಲೇಖ ಯಾವುದರ ಸಲುವಾಗಿ ಅಲ್ಲಿದೆ ಮತ್ತು ಅದೇ ಕಾರಣಕ್ಕಾಗಿ ಅಲ್ಲಿಯ ವರೆಗೆ ಮಹಾರಾಷ್ಟ್ರ ಪಸರಿಸಿತ್ತು ಎಂದು ಹೇಳುವ ಸಾಹಸವನ್ನು ಮಹಾರಾಷ್ಟ್ರದ ಪಂಡಿತರು ಕೂಡ ಮಾಡಿಲ್ಲ. "ಚಾಮುಂಡರಾಯೇ ಸುತ್ತಾಲೇ ಕರವಿಯಲೇ." ಈ ವಾಕ್ಯ ಮರಾಠಿಯೇ ಅಲ್ಲ ಎಂದನ್ನುವ ಕೆಲಕನ್ನಡಿಗರೂ ಇದ್ದಾರೆ. ಅದು ಗುಜರಾತೀ ವಾಕ್ಯ ಎಂದು ಸಿದ್ಧಮಾಡುವ ಪ್ರಯತ್ನಗಳೂ ಆಗಿವೆ. ಶ್ರವಣಬೆಳಗೊಳದ ಗೋಮಟೇಶ್ವರ ಇದು ಜೈನರ ಕ್ಷೇತ್ರಸ್ಥಾನ. ಗುಜರಾತದ ಜೈನಭಕ್ತರು ಯಾತ್ರೆಗೆಂದು ಅಲ್ಲಿಗೆ ಬರುತ್ತಾರೆ, ಅವರಿಗೆ ತಿಳಿಯಲೆಂದು ಈ ಗುಜರಾತೀ ವಾಕ್ಯವಿದೆ ಎಂದು ಕೆಲವರ ತರ್ಕವಿದೆ. ಒಂದು ಕ್ಷಣ ಇದನ್ನು ನಿಜವೆಂದು ನಂಬಿದರೆ ಇದುವರೆಗೆ ಉದ್ಧೃತವಾದ ಮರ್ಹಾಟೀ ವಾಕ್ಯಗಳ ಗತಿ ಏನು?

ಕರ್ಣಾಟಕ-ಮಹಾರಾಷ್ಟ್ರಗಳ ನಡುವಿನ ಇಂದಿನ ಜಗಳಾಟದ ಮನೋವೃತ್ತಿ ಪ್ರಾಚೀನ ಕರ್ನಾಟಕ-ಮಹಾರಾಷ್ಟ್ರಗಳ ಸಂಬಂಧವನ್ನು ತಿಳಿದುಕೊಳ್ಳಲು ಅಡ್ಡಿಯಾಗುತ್ತದೆ. ಇಂದಿನ ಪ್ರಾಂತಾಭಿಮಾನದ ಕನ್ನಡಕವನ್ನು ದೂರಸರಿಸದೆ ಆ ಕಾಲದ ವಸ್ತುಸ್ಥಿತಿಯನ್ನು ಸರಿಯಾಗಿ ಅರಿಯುವದು ಸಾಧ್ಯವಿಲ್ಲ. ಕನ್ನಡ ಮತ್ತು ಮರಾಠಿ ಭಾಷೆಗಳ ಮತ್ತು ಸಾಹಿತ್ಯದ ತಟಸ್ಥವಾದ ಅಭ್ಯಾಸಮಾಡದಿದ್ದರೆ ನಮ್ಮ ಸಾಂಸ್ಕೃತಿಕ ಇತಿಹಾಸದಲ್ಲಿಯ ಅನೇಕ ಸಮಸ್ಯೆಗಳು ಪರಿಹಾರವನ್ನು ಕಾಣಲಾರವು. ಚಾಂದಾ, ಭಂಡಾರಾ ಜಿಲ್ಲೆಗಳ 'ಕುರುಂಬ' ಮತ್ತು 'ಹೊಲೆಯ'

ಜಾತಿಯ ೪-೫ ಸಾವಿರದಷ್ಟು ಜನರು ಕನ್ನಡವನ್ನಾಡುತ್ತಾರೆಂದು ಗ್ರಿಯರ್‌ಸನ್ ತಮ್ಮ ಗ್ರಂಥದಲ್ಲಿ ಬರೆಯುತ್ತಾರೆ.[೩೦] ಈ ಕನ್ನಡವು ಬಿಜಾಪುರದ ಇಂದಿನ ಆಡುಮಾತಿಗೆ ಸಮೀಪದ್ದಾಗಿದೆಯೆಂದು ತಮ್ಮ ಸ್ಪಷ್ಟವಾದ ತೀರ್ಪವನ್ನು ಕೊಟ್ಟಿದ್ದಾರೆ. ಮಹಾರಾಷ್ಟ್ರದಿಂದ ಅತಿ ದೂರದಲ್ಲಿರುವ ಶ್ರವಣಬೆಳಗೊಳದ ಹತ್ತನೆಯ ಶತಮಾನದ ಶಿಲಾಲೇಖದಲ್ಲಿಯ ಮರ್ಹಾಟೀವಾಕ್ಯ ಮಹಾರಾಷ್ಟ್ರದ ಮುಂದೆ ಒಂದು ಒಗಟಾಗಿರುವಂತೆ, ಇಂದು ಕರ್ನಾಟಕ ದಿಂದ ಬಹಳ ದೂರದಲ್ಲಿರುವ ವರ್ಹಾಡದ ಚಾಂದಾ ಭಂಡಾರಾ ಜಿಲ್ಲೆಯಲ್ಲಿ ಕನ್ನಡ ಭಾಷೆಯನ್ನಾಡುವವರ ಅಸ್ತಿತ್ವ ಕನ್ನಡಿಗರಿಗೆ ಒಂದು ಒಗಟಾಗಿದೆ. ಇಂದಿನ ಈ ಎರಡೂ ಪ್ರಾಂತದವರ ಪ್ರಾಂತಾಭಿಮಾನದ ದೃಷ್ಟಿಕೋನ ದಿಂದ ಈ ಒಗಟಿಗೆ ಉತ್ತರ ದೊರೆಯುವದು ಶಕ್ಯವಿಲ್ಲ. ದೇವಗಿರಿ ಮತ್ತು ಹಳೆಬೀಡಿನ ಉತ್ತರಕಾಲದ ಯಾದವರ ಯಾದವೀ ಕಲಹದಿಂದ (ಕ್ರಿ. ಶ. ೧೨೦೦ರ ನಂತರ) ಕರ್ನಾಟಕ-ಮಹಾರಾಷ್ಟ್ರಗಳ ನಡುವೆ ದ್ವೇಷದ ಸಂಬಂಧ ಹುಟ್ಟಿಕೊಂಡಿತು. ಅಲ್ಲಿಯ ವರೆಗೆ ಮರ್ಹಾಟಿಯ ಬಗ್ಗೆ ಕನ್ನಡಿಗರಿಗೆ ತಿರಸ್ಕಾರವಿರಲಿಲ್ಲ. 'ಅರೇ ಅರಸು' (ಆರೇ ಭಾಷೆ ಶ್ರೇಷ್ಠ) ಎಂದು ಮರಾಠಿಯ ಬಗ್ಗೆ ಒಂದು ನಾಣ್ನುಡಿಯಿದ್ದು ಅದು ಒಂದು ಕಾಲಕ್ಕೆ ಮರಾಠಿಯ ಬಗ್ಗೆ ಕನ್ನಡಿಗರಿಗೆ ಇದ್ದ ದೃಷ್ಟಿಕೋನವನ್ನು ಸೂಚಿಸುತ್ತದೆ. ಯಾದವರ ಕಾಲಾನಂತರದಲ್ಲಿ ಕರ್ನಾಟ-ಮಹಾರಾಷ್ಟ್ರಗಳ ನಡುವಿನ ರಾಜಕೀಯ ಸಂಘರ್ಷದಿಂದ ಅವುಗಳ ನಡುವಿನ ಸಖ್ಯಭಾವ ಕಡಿಮೆ ಯಾಯಿತು. ವಿಜಾಪುರದ ಮುಸಲಮಾನ ರಾಜ್ಯಕರ್ತರು ಕರ್ನಾಟಕವನ್ನು ಆಳುವದರ ಸಲುವಾಗಿ ಮರಾಠಿ ಭಾಷಿಕರನ್ನು ವಿಶ್ವಾಸದಲ್ಲಿ ತೆಗೆದುಕೊಂಡರು. ಈ ಮುಸಲ್ಮಾನ ರಾಜರು ವಿಜಯನಗರದ ಪ್ರತಿಸ್ಪರ್ಧಿ ಗಳಾಗಿದ್ದರು. ಕರ್ನಾಟಕದ ವಿಜಯನಗರದೊಡನೆ ಜಗಳವಾಡುವಾಗ ಕನ್ನಡಿಗರಿಗಿಂತ ಅವರಿಗೆ ಮರಾಟಿಗರು ಹತ್ತಿರದವರಾದದ್ದು ಆಶ್ಚರ್ಯವೇನಿಲ್ಲ. ಇದರಿಂದಾಗಿಯೇ ಮರಾಠಿಯ ಸಂವರ್ಧನ ಕರ್ಣಾಟಕದಲ್ಲಿ ಆದದ್ದು ಲಕ್ಷ್ಯದಲ್ಲಿಡಬೇಕು. ಆದರೆ, ನಂತರದ ಕಾಲದಲ್ಲಿ ಈ ಎರಡು ಭಾಷೆಗಳ ಸಂಘರ್ಷ ಪ್ರಾರಂಭವಾಯಿತು. ಮರಾಠಿಯ ಬಗ್ಗೆ ಬದಲಾದ ಕನ್ನಡದ ದೃಷ್ಟಿಕೋನ ೧೭ನೆಯ ಶತಮಾನದ 'ಅಪ್ರತಿಮ ವೀರ ಚರಿತೆ'ಯೆಂಬ ಗ್ರಂಥದಲ್ಲಿ ಕಾಣುತ್ತದೆ. ರಾಜಕೀಯ ಆಕ್ರಮಕ ವೃತ್ತಿಯಿಂದಾಗಿ ಇವರಿಬ್ಬರಲ್ಲಿ ದ್ವೇಷ ಭಾವನೆ ಮುಂದೆ ಬೆಳೆಯುತ್ತ ಹೋಯಿತು. ಆದರೂ ಔರಂಗಜೇಬನ ಹಲ್ಲೆಯಿಂದ ತಪ್ಪಿಸಿಕೊಂಡು ಆತ್ಮಸಂರಕ್ಷಣೆಗಾಗಿ ಹೊರಟ ರಾಜಾರಾಮನಿಗೆ ಕೆಳದಿಯ ಕರ್ನಾಟರಾಜ, ಜಿದ್ದಿನ ಭಾವನೆಯ ಸಾಮ್ರಾಟನ ರೋಷ ಕೆರಳುತ್ತದೆಂದು ಗೊತ್ತಿದ್ದರೂ ಆಶ್ರಯ ಕೊಟ್ಟದ್ದನ್ನು ಮರೆಯುವಂತಿಲ್ಲ. ಇದರ ಮೊದಲು ಶಹಾಜಿ (ಶಿವಾಜಿಯ ತಂದೆ) ಬೆಂಗಳೂರು ಮೊದಲಾದ ಕಡೆ ಸಂಪಾದಿಸಿದ ವಿಜಯ ಹೊರಗಿನ ಒಬ್ಬ ವಿಜೇತನ ದಿಗ್ವಿಜಯದ ಫಲವಾಗಿ ಅಲ್ಲ. ಈ ಎರಡೂ ಪ್ರಾಂತಗಳಲ್ಲಿ ಮೊದಲಿನಿಂದ ನಡೆದು ಬಂದಿದ್ದ ಆತ್ಮೀಯತೆ ಮತ್ತು ಬಂಧು ಭಾವಗಳ ಮೂಲಕವಾಗಿಯೇ ಶಹಾಜಿಗೆ ಇಲ್ಲಿ ಸ್ವಾಗತ ದೊರೆಯಿತು. ಅಭಿಜಾತ ಕನ್ನಡಿಗರು ಮತ್ತು ಮರಹಟ್ಟೆಯರ ನಡುವೆ ಪ್ರಾಚೀನ ಕಾಲದಿಂದ ನಡೆದು ಬಂದಿದ್ದ ಗಾಢ ಸಂಬಂಧವನ್ನೇ ಇದು ಸೂಚಿಸುತ್ತದೆ.

ಜ್ಞಾನೇಶ್ವರ 'ಹೇ ಆಮ್ಹಾಸೀ ಕಾನಡೇ' (ಇದು ನಮಗೆ ಕನ್ನಡ-ಅಗಮ್ಯ) ಎಂದಿದ್ದರೂ, ಒಂದು ಕಾಲಕ್ಕೆ ಈ ಜನರಿಗೆ ಕನ್ನಡ ತಿಳಿಯುತ್ತಿತ್ತೆಂದು, ಈ ವಾಕ್ಯದ ಮೇಲಿಂದಲೇ ಅರ್ಥಮಾಡಬಹುದು. 'ಹೇ ಆಮ್ಹಾಸೀ ಕಾನಡೇ' ಎಂಬ ಹೇಳಿಕೆಯಲ್ಲಿ ಜ್ಞಾನೇಶ್ವರನ ಮರಾಠೀ ಅಭಿಮಾನ ವ್ಯಕ್ತವಾಗುತ್ತದೆ. ಅದರಂತೆ ಕನ್ನಡದಿಂದ ದೂರವಿರುವ (ಉತ್ತರ ಯಾದವಕಾಲೀನ) ಪ್ರವೃತ್ತಿಯೂ ಸೂಚಿತವಾಗುತ್ತದೆ. 'ಹೇ ಆಮ್ಹಾಸೀ ತೆಲುಗು' ಅಥವಾ 'ಹೇ ಆಮ್ಹಾಸೀ ದ್ರವಿಡ' ಎಂದು ಹೇಳದೆ 'ಹೇ ಆಮ್ಹಾಸೀ ಕಾನಡೇ' ಎಂದು ಹೇಳಿದ್ದರ ಅರ್ಥ ಒಂದು ಕಾಲಕ್ಕೆ ಕನ್ನಡ ತಿಳಿಯುತ್ತಿತ್ತು ಎಂದಾಗುತ್ತದೆ. ಜ್ಞಾನೇಶ್ವರನ ಗ್ರಂಥದಲ್ಲಿ ಕನ್ನಡ ಶಬ್ದಗಳು ತುಂಬಿಕೊಂಡಿರುವ ಸಂಗತಿ ಮರಾಠೀ ಪಂಡಿತರಿಗೂ ಒಪ್ಪಿಗೆಯಾದ ಮಾತಾಗಿದೆ. ಜ್ಞಾನೇಶ್ವರಿಯ ಭಾಷೆಯ ಮೇಲೆ ಕನ್ನಡದ ದಟ್ಟನೆರಳು ಬಿದ್ದಿರುವುದನ್ನು ಸಂಶೋಧಕರು ಸಪ್ರಮಾಣವಾಗಿ ಸಿದ್ಧಪಡಿಸಿದ್ದಾರೆ. ಇದಿರಂದ 'ಹೇ ಆಮ್ಹಾಸೀ ಕಾನಡೇ'- ಇದರ ಅರ್ಥ ಇಷ್ಟೇ: ಮರಾಠಿ ಈ ಹೊತ್ತಿಗೆ ಕನ್ನಡ ಪ್ರಭಾವದಿಂದ ಪಾರಾಗಲು ಹವಣಿಸುತ್ತಿತ್ತು. ಶ್ರೀ ವಿಠ್ಠಲ ರಾಮಜೀ

ಶಿಂಧೆಯವರು ತಮ್ಮ 'ಕನ್ನಡ ಮರಾಠಿಗಳ ತೌಲನಿಕ ಅಧ್ಯಯನ'ದಲ್ಲಿ ಇದೇ ನಿರ್ಣಯಕ್ಕೆ ಬಂದು ಮುಟ್ಟಿದ್ದಾರೆ. ಯಾದವರ ಮುಖ್ಯಮಂತ್ರಿ ಹೇಮಾಡಪಂತನು (ಹೇಮಾದ್ರಿ) ಮರಾಠಿಯ ಉದ್ಧಾರಕ್ಕಾಗಿ ಮನಃಪೂರ್ವಕವಾಗಿ ಪ್ರಯತ್ನಿಸಿದ. ಮೋಡೀಲಿಪಿಯನ್ನು ಪ್ರಾರಂಭಿಸಿದ ಶ್ರೇಯಸ್ಸು ಇವನದಾಗಿದೆ. ಮಹಾರಾಷ್ಟ್ರದಲ್ಲಿ ವೈಶಿಷ್ಟ್ಯ ಪೂರ್ಣವಾದ ಶಿಲ್ಪಕಲೆಯನ್ನು ಇವನೇ ಪ್ರಾರಂಭಿಸಿದನೆಂದು ಹೇಳಲಾಗುತ್ತಿದೆ. ಮಹಾರಾಷ್ಟ್ರದಲ್ಲಿ ಹೇಮಾಡಪಂತೀ ದೇವಾಲಯಗಳು ಸಾಕಷ್ಟು ಕಡೆಗೆ ಇವೆ. ಈ ಕಲೆ ಮತ್ತು ಮೋಡೀಲಿಪಿ ಇವುಗಳನ್ನು ಅವನು ದಕ್ಷಿಣದ-ಲಂಕೆಯಿಂದ ತಂದನೆಂದು ಒಂದು ದಂತಕತೆ ಪ್ರಚಾರದಲ್ಲಿದೆ. ವಿಠ್ಠಲ ರಾಮಜೀ ಶಿಂಧೆಯವರ ಪ್ರಕಾರ ಈ ಎರಡೂ ಕಲೆಗಳನ್ನು ಹೇಮಾಡಪಂತನು ಕರ್ನಾಟಕದಿಂದ ತಂದನೆಂದು ಅಭಿಪ್ರಾಯವಿದೆ. ಹಳೆಬೀಡು ಮೊದಲಾದ ಕಡೆಯಲ್ಲಿನ ವಾಸ್ತುಪದ್ಧತಿಯ ಅನುಕರಣೆ ಮಹಾರಾಷ್ಟ್ರದಲ್ಲಿ ಆಯಿತು. 'ಮೋಡೀ' ಈ ಶಬ್ದವೇ ಮೂಲ ಕನ್ನಡದ್ದಾಗಿದೆ. 'ಮೋಡಿ' ಅಂದರೆ ರೀತಿ, ಪದ್ಧತಿ, ಒಲವು. ಇದರ ಮೂಲ ಶಬ್ದ 'ಮುರಿ' ಎಂಬುದು. ಅಕ್ಷರಗಳನ್ನು ಮುರಿದು ಒಂದಕ್ಕೊಂದು ಜೋಡಿಸಿ ಬರೆಯುವ ರೀತಿಯೆಂದರೆ ಮೋಡೀ. ಈ ಸಂಗತಿಗಳು ಇಷ್ಟು ಸ್ಪಷ್ಟವಾಗಿದ್ದರೂ ಅವುಗಳನ್ನು ಲಂಕೆಯಿಂದ ತಂದದ್ದು ಎಂದು ಹೇಳುವ ಕಾರಣವಾದರೂ ಏನು? ಒಂದು ದೇಶದ ರಾಜಕೀಯ, ಸಾಮಾಜಿಕ ವರ್ಚಸ್ಸಿನಿಂದ ಹೊರಬರುವಾಗ ಆ ದೇಶದ ಜೊತೆಗೆ ಸಂಬಂಧವಿಲ್ಲ ವೆಂದು ಹೇಳುವದು ಮನುಷ್ಯ ಸ್ವಭಾವವಾಗಿದೆ. ಬ್ರಿಟಿಷರ ಬಗ್ಗೆ ನಮಗೆ ಇದೇ ರೀತಿಯ ಭಾವನೆಗಳಿದ್ದವು. ಇದೇ ಕನ್ನಡದ ಬಗ್ಗೆಯೂ ನಡೆಯಿತು. ಕನ್ನಡದಿಂದ ದೂರವಿರುವ ಮಹಾರಾಷ್ಟ್ರೀಯರ ಪ್ರಯತ್ನದಲ್ಲಿ ಇಂಥ ದಂತಕತೆಗಳು ಹುಟ್ಟಿದವು. ದೇವಗಿರಿಯ ರಾಜರ ಆಳಿಕೆಯಲ್ಲಿ, ಹದಿಮೂರನೆಯ ಶತಮಾನದ ಹೊತ್ತಿಗೆ ಮರಾಠಿಯ ಉತ್ಕರ್ಷದ ಕಾಲ ಆರಂಭವಾದದ್ದು ನಿರ್ವಿವಾದವಾಗಿದೆ. ಮರ್ಹಾಟಿಯ ಆದ್ಯಪ್ರವರ್ತಕ ರಾಗುವ ಶ್ರೇಯಸ್ಸು ದೇವಗಿರಿಯ ಯಾದವರಿಗೆ ಹೋಗಬೇಕಾದದ್ದು. ಮರ್ಹಾಟಿಯ ಉತ್ಕರ್ಷಕ್ಕೆ ಕಾರಣವಾದ ಈ ಯಾದವರ ಮನೆತನದ ಶಿಲಾಲೇಖ ನೂರಕ್ಕೆ ೯೯ರಷ್ಟು ಭಾಗ ಕನ್ನಡದಲ್ಲಿರುವದರ ಅರ್ಥವೇನು? ಮರಾಠಿ ಭಾಷೆ ಮೈತುಂಬಿಕೊಂಡು ನಡೆದಾಡುವ ಸ್ಥಿತಿಗೆ ಮುಟ್ಟಿ ವ್ಯವಹಾರದಲ್ಲಿ ಉಪಯೋಗವಾಗುವಷ್ಟು ಸಮರ್ಥ ವಾಗುವ ತನಕ, ಆ ಕಾಲದಲ್ಲಿ ಉತ್ಕರ್ಷದ ಪರಮಸ್ಥಿತಿಯನ್ನು ಮುಟ್ಟಿದ್ದ ಕನ್ನಡವನ್ನು ರಾಜ್ಯವ್ಯವಹಾರದಲ್ಲಿ ಉಪಯೋಗಿಸುವ ಅನಿವಾರ್ಯ ಸ್ಥಿತಿ ಯಾದವರಿಗೆ ಇತ್ತು. ಈಗ ಇಂಗ್ಲಿಷನ್ನು ನಾವು ಉಪಯೋಗಿಸುತ್ತಿರುವ ರೀತಿ ಇದರ ಹೊಚ್ಚ ಹೊಸ ಉದಾಹರಣೆಯಾಗಿದೆ. ಕ್ರಿ. ಶ. ೧೧೧೪ಕ್ಕಿಂತ ಮೊದಲು ಇಂಥ ಅರೇ ಶಿಲಾ ಲೇಖಗಳು ಮರಾಠಿಯಲ್ಲಿ ಉಪಲಬ್ಧವಾಗಿವೆ. ಇವುಗಳಲ್ಲಿ ಶ್ರವಣಬೆಳಗೊಳ ಮತ್ತು ಸೀತಾಬರ್ಡಿಯಲ್ಲಿಯ ಲೇಖನಗಳು ಬಹ ಮೊಟಕಾಗಿದೆ.[೩೨] ಅಂಬೆಗಾಂವದ ಲೇಖನ ಕೂಡ (೧೧೧೪) ಪ್ರೌಢಭಾಷೆಯ ಶೈಲಿಯಲ್ಲಿಲ್ಲ. ಇಷ್ಟಾಗಿಯೂ ಹೊಯ್ಸಳ ಯಾದವರ ವಿರುದ್ಧವಾಗಿ ಮರಾಠಿಯ ಧ್ವಜದಡಿಯಲ್ಲಿ ವೈರಿಗಳ ಗುಂಪನ್ನು ನಿರ್ಮಿಸಲು ಮರಾಠಿ ಭಾಷೆಯ ಅಭಿಮಾನವನ್ನು ಉಪಯೋಗಿಸಬೇಕಾಯಿತು. ಇದನ್ನು ಮಾಡಿರದಿದ್ದರೆ ದೇವಗಿರಿಯ ಯಾದವರ ರಾಜಕೀಯ ಎಂಥದು?

ದೇವಗಿರಿಯ ಯಾದವರ ಮನೆತನದಲ್ಲಿಯ ಲಸ್ತಿಯವ್ವ, ಧಾಡಿಯಪ್ಪ ಮೊದಲಾದ ಪೂರ್ವಜರ ಹೆಸರುಗಳ ಮೇಲಿಂದ ಕನ್ನಡದ ಪ್ರಭಾವ ಅವರ ಮೇಲೆ ಎಷ್ಟಿತ್ತೆಂಬುದು ತಿಳಿಯುತ್ತದೆ. ಹದಿಮೂರನೆಯ ಶತಮಾನದಲ್ಲಿ ಮಹಾದೇವರಾಯ, ರಾಮರಾಯ ಇವರ ಕಾಲದಲ್ಲಿ ಇವರು ಕನ್ನಡದ ಪ್ರಭಾವದಿಂದ ಸಾಕಷ್ಟು ಹೊರಬಂದಿದ್ದರು. ಮರಾಠಿ ಹೆಸರುಗಳಲ್ಲಿ 'ರಾಯ', 'ರಾವ' ಎಂದಾದದ್ದು. ಇದರ ನಂತರದ ಕಾಲದಲ್ಲಿ ಜ್ಞಾನೇಶ್ವರನಂಥವರಿಗೆ 'ಹೇ ಆಮ್ಹಾಸೀ ಕಾನಡೇ' ಎಂದು ಬಗೆಯುವುದು ಅಗತ್ಯದ್ದೆನಿಸಿತು. ಆದರೂ ಅನೇಕ ಶತಮಾನಗಳ ವರೆಗೆ ನಡೆದುಬಂದಿದ್ದ ಕನ್ನಡ-ಮರಾಠಿಗಳ ಸಂಬಂಧವನ್ನು ಹರಿದುಕೊಳ್ಳುವದು ಇಬ್ಬರಿಗೂ ಶಕ್ಯವಿರಲಿಲ್ಲ.

ಮಜ ಸಂಸ್ಕೃತೀ ನಾಹೀ ಅಭ್ಯಾಸ। ಕರ್ನಾಟಕ ಕವಿ ಕುಮಾರವ್ಯಾಸ।
ತ್ಯಾಚೇನಿ ಆಧಾರೇ ಗ್ರಂಥವಿಲಾಸ। ಪ್ರಾರಂಭಿಲಾ ಯಾ ಹೇತೂ॥ (೫೫)

ಉದ್ಯೋಗಪರ್ವ

ಮರಾಠಿ ಭಾಷಿಕರಿಗೆ ಸಂಸ್ಕೃತ ಭಾಷೆಯಂತೆ ಕನ್ನಡ ಕಾವ್ಯಕೃತಿಗಳು ಕೂಡ ಜ್ಞಾನ ಮತ್ತು ಸ್ಫೂರ್ತಿಯನ್ನು ಕೊಟ್ಟಿರಬೇಕೆಂಬುದು ಚಂದ್ರಾತ್ಮಜರುದ್ರನ ಈ ಓವೀಪದ್ಯದಿಂದ ತಿಳಿದುಬರುತ್ತದೆ. ಚಂದ್ರಾತ್ಮಜ ರುದ್ರನು ಕುಮಾರವ್ಯಾಸನ ಭೀಷ್ಮಪರ್ವವನ್ನು ಓದಿ ಮುಗ್ಧನಾದ. ಆದ್ದರಿಂದ, ಮರಾಠಿ ಭಾಷಿಕರ ಸಲುವಾಗಿ ಆ ಮನೋಹರ ಕೃತಿಯನ್ನು ಭಾಷಾಂತರಿಸಿದನೆಂದು ಹೇಳುತ್ತಾನೆ. (ಅಜಗಾಂವಕರರ ಮರಾಠಿ ಕವಿ ಚರಿತ್ರೆಯನ್ನು ನೋಡಬೇಕು) ಮರಾಠಿಯ ಮಹಾಕವಿ ಮುಕ್ತೇಶ್ವರ (ಕ್ರಿ. ಶ. ೧೬೫೦) ಮತ್ತು ಕುಮಾರ ವ್ಯಾಸನ ಮುಂದೆ ಕೊಟ್ಟಿರುವ ಪದ್ಯಗಳಲ್ಲಿಯ ಸಾಮ್ಯ ಅಭ್ಯಾಸಕ್ಕೆ ಯೋಗ್ಯವಾಗಿದೆ.

ಕವಳೋನಿ ಅಭಿಪ್ರಾಯ ಸರ್ವ। ಮಾಗಾ ಕಥಿಲೇ ಆದಿಪರ್ವ
ಆತಾ ಅಪೂರ್ವಾಪೂರ್ವ। ಸಭಾಪರ್ವ ಪರಿಯೇಸಾ ॥ ೧೩॥

ಮುಕ್ತೇಶ್ವರ ಕವೀ ಭಾರತ। ಟೀಕಾ ಪ್ರಾಂಜಳ ವ್ಯಕ್ತ।
ಜೇವೀ ವೇದಾಚಾ ಮಥಿತಾರ್ಥ। ಶ್ರುತಿಪುರಾಣೇಂ ಬೋಲತೀ ॥ ೧೪॥

ಜೋ ರಾಜಯಾತೇ ವೀರರಸು। ವಿಪ್ರವರ್ಯಾಂತೇ ವೇದ ಸಾರಾಂಶಂ।
ತತ್ವಾರ್ಥ ಬೋಧ ಪರಮಹಂಸು। ಯೋಗೇಶ್ವರು ಭಾವಿತೀ ॥ ೧೫॥

ಬುದ್ಧಿಯುಕ್ತೀಚಾ ಸಾಗರು। ಐಸೇ ಮಾನಿತೀ ಮಂತ್ರಿ ಚತುರು।
ವಿಲಾಸಿಯಾಂ ತೇ ಶೃಂಗಾರು। ಸುರತಾನಂದ ವರ್ಧತಾ ॥ ೧೬॥

ವಿದ್ಯಾಪ್ರವೀಣ ಶಾಸ್ತ್ರಮಂಡಿತ। ಕೌತುಕೇ ಮಾನಿತೀ ಕರ್ಣಾಮೃತ।
ದೋಷಾದೋಷಿ ಯಾಂಚೇ ಆರ್ತ। ಪುರವೀ ಗಂಗೇಸಾರಖೇ ॥ ೧೭॥

ಪರ್ವತಾಮಾಜೀ ಕನಕಮೇರೂ। ತಡಾಗಾಮಾಂಜೀ ಕ್ಷೀರಸಾಗರೂ।
ಮಹಾರಾಷ್ಟ್ರಾಂಸೀ ಕಾವ್ಯಗುರೂ। ಹಾ ಗೌರವೂ ಯೇ ಗ್ರಂಥೀಂ ॥ ೧೮॥

ಮುಕ್ತೇಶ್ವರನ ಈ ಭಾಗದೊಂದಿಗೆ ಕುಮಾರವ್ಯಾಸನ ಆದಿಪರ್ವದ ಮಂಗಲಾಚರಣದ ಮತ್ತು ಫಲಶ್ರುತಿಯ ಪದ್ಯಗಳನ್ನು ಹೋಲಿಸಿ ನೋಡಬೇಕು. ಕುಮಾರವ್ಯಾಸನ ಕಾಲ ಗೋವಿಂದ ಪೈ ಅವರ ಪ್ರಕಾರ ೧೨೩೦-೩೫ ಆಗುತ್ತಿದ್ದರೆ ಉಳಿದವರ ಪ್ರಕಾರ ಕೂಡ ಕ್ರಿ. ಶ. ೧೫೦೦ಕ್ಕಿಂತ ಮುಂದೆ ಹೋಗುವುದಿಲ್ಲ.

ಅರಸುಗಳಿಗಿದು ವೀರ ದ್ವಿಜರಿಗೆ
ಪರಮವೇದದ ಸಾರ ಯೋಗೀ
ಶ್ವರರ ತತ್ವವಿಚಾರ ಮಂತ್ರೀಜನಕೆ ಬುದ್ಧಿಗುಣ।
ವಿರಹಿಗಳ ಶೃಂಗಾರ ವಿದ್ಯಾ
ಪರಿಣತರಲಂಕಾರ ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ।

ವೇದಪಾರಾಯಣದ ಫಲ ಗಂ-
ಗಾದಿ ತೀರ್ಥಸ್ನಾನ ಫಲ ಕೃ-
ಚ್ಛ್ರಾದಿ ತಪಸಿನ ಫಲವು ಜ್ಯೋತಿಷ್ಟೋಮಯಾಗಫಲ।
ಮೇದಿನಿಯನೊಲಿದಿತ್ತ ಫಲ ವ-
ಸ್ತ್ರಾದಿ ಕನ್ಯಾದಾನಫಲಬಹು-
ದಾದರಿಸಿ ಭಾರತದೊಳೊಂದಕ್ಷರವ ಕೇಳ್ದರಿಗೆ।

ಕನ್ನಡದಲ್ಲಿ ರಾಘವಾಂಕ ಷಟ್ಪದಿಗೆ ಪ್ರವರ್ತಕನಾದನಷ್ಟೆ. ಈ ಛಂದೋಪ್ರಕಾರ ೧೨ನೆಯ ಶತಮಾನದ ನಂತರ ಬಹಳ ಲೋಕಪ್ರಿಯವಾಯಿತು. ಮರಾಠಿಯಲ್ಲಿಯೂ ಷಟ್ಪದಿಯಲ್ಲಿ ಬರೆದಿರುವ ಕವಿತೆಗಳು ಪ್ರೊ. ಪೋತದಾರ, ಶ್ರೀ ಖರೆ ಮೊದಲಾದವರ ಸಂಶೋಧನೆಗಳಲ್ಲಿ ದೊರೆಯುತ್ತವೆ. ಈ ಹೊಸಛಂದಸ್ಸು ಮರಾಠಿ ಪಂಡಿತರಲ್ಲಿ ಬಹಳ ಕುತೂಹಲವನ್ನು ಉಂಟುಮಾಡಿತ್ತು.

ಹದಿನೇಳನೆಯ ಶತಮಾನದ ವರೆಗೆ ಮರಾಠಿ ಕವಿಗಳು ಕನ್ನಡ ಭಾಷೆಯ ಅಭ್ಯಾಸಮಾಡುತ್ತಿದ್ದರೆಂದು ತೋರಿಸುವದಕ್ಕಾಗಿ ಈ ಉದಾಹರಣೆಗಳನ್ನು ಕೊಟ್ಟಿದೆ. ಮತ್ತು ಪ್ರಾಕೃತದ ನಿಮಿತ್ತದಿಂದ ಕನ್ನಡದ ಸಾಹಿತ್ಯಕಾರರು ೮-೧೦ನೆಯ ಶತಮಾನಗಳಿಂದ ಮರಾಠಿ ಭಾಷೆಯ ನಿರ್ಮಾಣಕ್ಕೆ ಹೇಗೆ ಸಹಾಯ ನೀಡಿದರೆಂದು ಈ ಮೊದಲು ಚರ್ಚಿಸಲಾಗಿದೆ. ಹದಿಮೂರನೆಯ ಶತಮಾನದ ಕೊನೆಗೆ ಅಥವಾ ಹದಿನೈದನೆಯ ಶತಮಾನದ ಆರಂಭಕ್ಕೆ ಇದ್ದ ಕುಮಾರವ್ಯಾಸನ ಗ್ರಂಥದಲ್ಲಿ ಮರಾಠಿ ಭಾಷೆಯ ಪ್ರಭಾವ ಸ್ಪಷ್ಟವಾಗಿದೆ. ಅವನು ಉಪಯೋಗಿಸಿರುವ ಶಬ್ದಗಳನ್ನು ಪ್ರಾಕೃತವೆಂದು ಕರೆದು ಗುರುತಿಸುವ ಪ್ರಯತ್ನವನ್ನು ಕೆಲವರು ಮಾಡಬಹುದು. ಆದರೆ, ಈ ರೀತಿ ಕಣ್ಣಿಗೆ ಬಟ್ಟೆಕಟ್ಟಿಕೊಂಡು ಸತ್ಯವನ್ನು ನೋಡಲು ನಿರಾಕರಿಸುವದು ನೈತಿಕಧೈರ್ಯದ ಲಕ್ಷಣವಲ್ಲ. ಅವನ ಹೊತ್ತಿಗೆ ಮರಾಠಿ ಭಾಷೆ ರಾಜಾರೋಷವಾಗಿ ವ್ಯವಹಾರದಲ್ಲಿತ್ತು ಮತ್ತು ಪ್ರಾಕೃತ ಎಂದೋ ಮರೆಗೆ ಹೋಗಿತ್ತು, ಶಹಾಣಪಣ, ರಹಾಣಿ, ಚೌರ್ಯಾಂಶಿ, ಗಯಾರ, ವಿಟಾಳ, ಬೋಳೆತನ, ಲಾವಕರು (ಚಾಡಿಕೋರರು), ಖೇಪ, ಖರೆ ಈ ಶಬ್ದಗಳು ಪ್ರಾಕೃತವೆಂದು ಹೇಳಿ ಎಷ್ಟು ದಿನ ದಾಟಿಸಬಹುದು? 'ಹೇ ಆಮ್ಹಾಂಸೀ ಕಾನಡೇ' ಎಂದು ಜ್ಞಾನೇಶ್ವರನು ಹೇಳಿದ್ದರೂ ಮಹಾರಾಷ್ಟ್ರದಲ್ಲಿ ಕನ್ನಡವನ್ನು ಕಲಿಯುವವರಿದ್ದರು. ಕರ್ನಾಟಕದಲ್ಲಿ ಮರಾಠಿಯಿಂದ ಕೂಗಳತೆಯ ದೂರದಲ್ಲಿ ಇರಬೇಕೆನ್ನುವ ಪ್ರಯತ್ನ ನಡೆದಿದ್ದರೂ ಸಂಪೂರ್ಣವಾಗಿ ಅದರ ಪ್ರಭಾವವನ್ನು ತಪ್ಪಿಸುವಂತಿರಲಿಲ್ಲ. ೧೩ನೆಯ ಶತಮಾನದ ನಂತರ ಕನ್ನಡ ಮತ್ತು ಮರಾಠಿ ಭಾಷೆಗಳ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಒಂದು ಮೋಜಿನ ಸಂಗತಿ ಬಯಲಿಗೆ ಬರುತ್ತದೆ. ಪಂಪ, ರನ್ನರಂಥ ಕವಿಗಳು 'ಳ'ಕಾರದ ಅನುಪ್ರಾಸವನ್ನು ತಮ್ಮ ಕಾವ್ಯದಲ್ಲಿ ಮನೋಹರವಾಗಿ ಉಪಯೋಗಿಸಿದ್ದಾರೆ, 'ಅವಿರಳ ಮಳಯಾನಿಳ ಕಂಪಿತಂಗಳ್' (ಪಂಪಭಾರತ) 'ಬಾಳ ಕೇಳೀ ಲೀಳೆ' (ಶಾಂತಿಪುರಾಣ, ೫. ೨೫) ಈ ರೀತಿಯ ವಾಕ್ಯಗಳು ಹಳೆಗನ್ನಡದ ಪ್ರೌಢಶೈಲಿಗೆ ನಿದರ್ಶನವಾಗಿದೆ. 'ಕಮಳ', 'ಜಳ' ಇವುಗಳಲ್ಲಿಯ 'ಳ'ಕಾರ ಆ ಕಾಲಕ್ಕೆ ಶಿಷ್ಟಮಾನ್ಯವಾಗಿತ್ತು. ಆದರೆ ೧೪-೧೫ನೆಯ ಶತಮಾನದ ನಂತರ 'ಕಮಲ', 'ಜಲ' ಪ್ರಯೋಗಗಳು ರೂಢವಾಗಿ 'ಳ' ಕಾರದ ಸ್ಥಳದಲ್ಲಿ 'ಲ'ಕಾರ ಬಂದಿತು. ಜ್ಞಾನೇಶ್ವರನಿಗಿಂತ ಮೊದಲಿನ ಮಹಾನುಭಾವ ಸಾಹಿತ್ಯದಲ್ಲಿ 'ಆಗಳಾ'ದಂಥ 'ಳ'ಕಾರಯುಕ್ತ ಪ್ರಯೋಗಗಳು ಸಿಗುತ್ತವೆ. ಆದರೆ, ರಾಜವಾಡೆ ಮೊದಲಾದವರು ಪ್ರಕಟಿಸಿದ ಜ್ಞಾನೇಶ್ವರಿಯ ಶುದ್ಧ ಹಾಗೂ ಪ್ರಾಚೀನ ಆವೃತ್ತಿಯಲ್ಲಿ 'ಳ'ಕಾರ ವರ್ಜ್ಯವಾಗಿದೆ. 'ಆಗಳಾ'ದಂಥ ಶಬ್ದಗಳಲ್ಲಿ ಕೂಡ ಜ್ಞಾನೇಶ್ವರ 'ಲ'ಕಾರವನ್ನೇ ಉಪಯೋಗಿಸಿದ್ದಾನೆ. ಜ್ಞಾನೇಶ್ವರನ ಸಮಕಾಲೀನ ಕನ್ನಡ ಕವಿಗಳು 'ಳ'ಕಾರವನ್ನು ಉಪಯೋಗಿಸುತ್ತಿದ್ದಾಗ ಮರಾಠಿಯ ವೈಶಿಷ್ಟವನ್ನು ತೋರಿಸಲು ಹೀಗೆ ಮಾಡಿರಲಿಕ್ಕಿಲ್ಲವೇ? ಏಕಂದರೆ ಜ್ಞಾನೇಶ್ವರ ಪ್ರಾರಂಭಿಸಿದ ಈ ರಿವಾಜನ್ನು ಮುಂದಿನ ತಲೆಮಾರಿನವರು ಯಾರೂ ಸ್ವೀಕರಿಸಲಿಲ್ಲ. ಅವನಿಗಿಂತ ಮೊದಲಿನ ಮಹಾನುಭಾವರಲ್ಲಿಯೂ ಅದಿಲ್ಲ. ಕಮಳ, ಸಕಾಳ, ವೇಳ ಮೊದಲಾದ 'ಳ'ಕಾರ ಮರಾಠಿಯಲ್ಲಿ ದೃಢಮೂಲವಾಗಿದ್ದರೆ ಕನ್ನಡದಲ್ಲಿ ಲಕಾರ ಮತ್ತೆ ಪ್ರವೇಶಮಾಡಿದೆ.

ಕನ್ನಡ ಮತ್ತು ಮರಾಠಿಗಳಲ್ಲಿ 'ಲ'ಕಾರ 'ಳ'ಕಾರಗಳಂತೆ ಅನೇಕ ಶಬ್ದ ಪ್ರಯೋಗಗಳು ಮುಂದಿನ ಕಾಲಕ್ಕೆ (ಅದಕ್ಕೂ ಮೊದಲು ಪ್ರಚಲಿತವಿದ್ದರೂ) ವ್ಯವಹಾರದಲ್ಲಿ ಬಿಟ್ಟು ಹೋದವು ಮತ್ತು ಅವುಗಳ ಪಾಲುಗಾರಿಕೆ ಅಣ್ಣ ತಮ್ಮಂದಿರಲ್ಲಿ ನಡೆದಂತೆ ಕಾಣುತ್ತದೆ. ಶಬ್ದರೂಪದಲ್ಲಿ ಬದಲಾವಣೆಯಾಗಿ ಹೊಸ ಸ್ವರೂಪದಲ್ಲಿ ಪ್ರಚಾರದಲ್ಲಿ ಬಂದಿವೆ. ಮುದಲ (ಮೊದಲು) ಕೈವಾರದಂಥ ಶಬ್ದಗಳು ಕನ್ನಡದಲ್ಲಿ ಹಿಂದೆ ಬಿದ್ದವು. ನಿರಿ, ಮಾಡ ಶಬ್ದಗಳು ನೀರಿಗೆ, ಮಾಳಿಗೆ ಎಂದು ರೂಪಾಂತರ ಹೊಂದಿದವು.

ಕನ್ನಡ ಮತ್ತು ಮರಾಠಿಯಲ್ಲಿಯ ಅನೇಕ ಶಬ್ದಗಳು ಈ ಭಾಷಿಕರ ನಿಕಟ ಸಂಬಂಧಕ್ಕೆ ನಿದರ್ಶಕವಾಗಿವೆ. ಈ ಮೊದಲು ಹೇಳಿದಂತೆ 'ಕೋಲ-ಕಾಠೀ', 'ಚೂಲ-ವೈಲ'. 'ಕೀಂವ-ಕಾಕುಳತೀ', 'ಓಲೀ-ಶೇಲಾ' ಮೊದಲಾದ ಎರಡೂ ಭಾಷೆಗಳ ಶಬ್ದಗಳಿಂದ ತಯಾರಾದ ಜೋಡುಶಬ್ದಗಳು ಈ ಮಾತಿಗೆ ಪುಷ್ಟಿಯನ್ನೀಯುತ್ತವೆ. ಈ ಬಗೆಯ ಜೋಡು ಶಬ್ದಗಳು ಕನ್ನಡದಲ್ಲಿಯೂ ಇವೆ. ಉದಾಹರಣೆಗೆ 'ಛಪ್ಪನ್ನೈವತ್ತಾರು', 'ನಡುಮಧ್ಯೆ' ಇತ್ಯಾದಿ. ಇದಲ್ಲದೆ ಅನೇಕ ಭಾವವಾಚಕ ಶಬ್ದಗಳನ್ನು ಈ ಭಾಷೆಗಳು ಪರಸ್ಪರ ಕಡ ತಂದುಕೊಂಡಿವೆ. ಮರಾಠಿಯ ಸಂಖ್ಯಾವಾಚಕಗಳು ಕನ್ನಡದಲ್ಲಿ ಪೂರ್ಣವಾಗಿ ಒಳಹೊಕ್ಕಿವೆ. 'ಬಾಹತ್ತರ ನಿಯೋಗ', 'ಎಕ್ಕಸರ', 'ತೆತ್ತೀಸಕೋಟಿ', 'ಅಠಾರಕಚೇರಿ' ಇತ್ಯಾದಿ ಶಬ್ದಗಳು ಕನ್ನಡದ ಆಡುಮಾತಿನಲ್ಲಿ ಸಾಹಿತ್ಯದಲ್ಲಿ ಪ್ರತಿಕ್ಷಣ ದೊರೆಯುತ್ತವೆ. ಇನ್ನೊಂದು ಭಾಷೆಯಿಂದ ಸಂಖ್ಯಾವಾಚಕಗಳನ್ನು ಕೊಂಡುಕೊಳ್ಳುವ ಭಾಷೆ ಆ ಇನ್ನೊಂದು ಭಾಷೆಗೆ ಬಹಳ ಋಣಿಯಾಗಿರುತ್ತದೆಂದು ಭಾಷಾಶಾಸ್ತ್ರಜ್ಞರ ಅಭಿಪ್ರಾಯವಿದೆ.

ಎರಡು ಭಿನ್ನಭಾಷೆಯನ್ನಾಡುವವರ ನಿಕಟ ಸಂಪರ್ಕದಲ್ಲಿ, ನಿತ್ಯ ವ್ಯವಹಾರದಲ್ಲಿ ತಮ್ಮ ಭಾಷೆಯಲ್ಲಿಲ್ಲದ ಅಗತ್ಯದ ವಸ್ತುಗಳ ಹೆಸರುಗಳ ಕೊಡುಕೊಳೆ ಅನಿವಾರ್ಯವಾಗುತ್ತದೆ. ಇದಕ್ಕಿಂತ ಹೆಚ್ಚು ಪರಿಣಾಮವಾದ ಕಡೆ ನಾಮಪದಗಳ ಜೊತೆಗೆ ಇನ್ನೊಂದು ಭಾಷೆಯ ಸಂಖ್ಯಾವಾಚಕಗಳೂ ಬರತೊಡಗುತ್ತದೆ. ಆದರೆ, ಇನ್ನೊಂದು ಭಾಷೆಯಲ್ಲಿಯ ಧಾತುರೂಪಗಳನ್ನು ಇದ್ದಕ್ಕಿದ್ದಂತೆ ಎತ್ತಿಕೊಳ್ಳುವ ಸಂಗತಿ ಮಾತ್ರ ಅಪರೂಪವಾಗಿದೆ. ತೌಲನಿಕ ಭಾಷಾಶಾಸ್ತ್ರದಲ್ಲಿಯೂ ಈ ಪ್ರಕಾರ ವಿಲಕ್ಷಣವೆಂದೇ ಹೇಳಬೇಕಾಗುತ್ತದೆ. ಆದರೆ, ಈ ಪ್ರಕಾರದ ಅಸಾಮಾನ್ಯ ದೃಶ್ಯವು ಮರಾಠಿಯಲ್ಲಿ ನೋಡಲು ಸಿಗುತ್ತದೆ. ಮರ್ಹಾಟಿಯಲ್ಲಿ ಕನ್ನಡದ ಧಾತುರೂಪಗಳಿವೆ; ಕಿಡಣೇ, ಮುರಕಣೇ, ಅಡಕಣೇ, ಮಿರವಿಣೇ, ಕಾಲವಿಣೇ, ಕುಟಣೇ ಇತ್ಯಾದಿ. ಇವು ಸಂಸ್ಕೃತದಿಂದ ಬಂದವೆಂದು ಹೇಳುವಂತಿಲ್ಲ. ಕಿಡು, ಮುರುಕು, ಅಡಕು, ಮೆರೆ, ಕಲಸು, ಕುಟ್ಟು ಇವು ಕನ್ನಡ ವರ್ಗದವಾಗಿದ್ದು ತಮಿಳು, ತೆಲುಗುಗಳಲ್ಲಿಯೂ ಇವೆ. ಆದ್ದರಿಂದ, ಇವು ಆರ್ಯವರ್ಗದ ಭಾಷೆಯವಲ್ಲವೆಂಬುದು ನಿರ್ವಿವಾದವಾಗಿದೆ. ಕನ್ನಡ ಮತ್ತು ಸಂಸ್ಕೃತಗಳ ಸಂಬಂಧ ಶತಮಾನಗಳಿಂದ ನಡೆದು ಬಂದಿದ್ದರೂ ಸಂಸ್ಕೃತದ ಧಾತುರೂಪಗಳು ಇದ್ದಕ್ಕಿದ್ದಂತೆ ಬರುವದಿಲ್ಲ. ಇಸು, ಸು ಪ್ರತ್ಯಯಗಳ ಸಂಸ್ಕಾರವಾದ ಮೇಲೆಯೇ ಅವು ಕನ್ನಡದಲ್ಲಿ ಬರುತ್ತವೆ. ಸಂಸ್ಕೃತದ 'ಗಮ್' ಧಾತು ಮರಾಠಿಯಲ್ಲಿ ಗಮಣೇ ಎಂದಾದರೂ ಅದು ಕನ್ನಡದಲ್ಲಿ ಹೊಕ್ಕಾಗ 'ಗಮಿಸು' ಎಂದು ಸಂಸ್ಕಾರವನ್ನು ಪಡೆಯುತ್ತದೆ. ಇಂಗ್ಲಿಷ್ ಭಾಷೆಯ ಆಳವಾದ ಪರಿಣಾಮ ಇಂದು ಎಲ್ಲ ಭಾಷೆಗಳ ಮೇಲೂ ಆಗಿದೆ. ಇಂಗ್ಲಿಷದಲ್ಲಿಯ ನಾಮಪದಗಳು ಇದ್ದಕ್ಕಿದ್ದಂತೆ ದೇಶೀಭಾಷೆಗಳಲ್ಲಿ ಹೊಕ್ಕುಬಿಟ್ಟಿವೆ. ಆದರೆ, ಧಾತುರೂಪಗಳಿಗೆ ಅಂಥ ಪ್ರವೇಶವಿಲ್ಲ. ಮೋಟರ ಡ್ರಾಯಿವ್ಹ್ ಮಾಡಿದರೆಂದು ಹೇಳಬಹುದೇ ಹೊರತು ಡ್ರಾಯ್‌ವ್ಹಿದರೆಂದು ಹೇಳಲು ಬರುವಂತಿಲ್ಲ. 'ಮೋಟರ' ನಾಮ ಪದವಿರುವದರಿಂದ ಅದು ಇದ್ದಕ್ಕಿದ್ದಂತೆ ಬರಬಹುದು. ಅದೇ ಡ್ರಾಯಿವ್ಹ್ ಧಾತುರೂಪವಾಗಿರುವದರಿಂದ ಹಾಗೆ ಬರುವಂತಿಲ್ಲ. ಈ ಪ್ರಕಾರದ ಪ್ರವೃತ್ತಿ ಪ್ರತಿಯೊಂದು ಭಾಷೆಯಲ್ಲಿಯೂ ಇರುವಾಗ ಮರಾಠಿಯಲ್ಲಿ ಕನ್ನಡದ ಧಾತುರೂಪಗಳು ಹೇಗೆ ಬಂದುವು?

ಮರಾಠಿಗರು ಆರ್ಯೋದ್ರಾವಿಡಿಯನ್ ವರ್ಗದವರೆಂದು ಶ್ರೀ ಭಾಸ್ಕರರಾವ ಜಾಧವ ಇವರು ಪ್ರತಿಪಾದಿಸಿದ್ದಾರೆ. ಹೀಗೆಂದು ಗೃಹೀತ ಹಿಡಿಯದಿದ್ದರೆ ಈ ವಿಚಿತ್ರ ಪ್ರಕಾರಕ್ಕೆ ಉತ್ತರವಿಲ್ಲ. ಇದೇ ಕಾರಣಕ್ಕಾಗಿ ಈ ಇಬ್ಬರು ಭಾಷಿಕರನ್ನು ಅವಳಿ ಸೋದರರೆಂದು ಹಿಂದಿನ ಪ್ರಕರಣದಲ್ಲಿ ಕರೆಯಲಾಗಿದೆ. ಜಾಧವರು ಅವರನ್ನು ಆರ್ಯೋದ್ರಾವಿಡಿಯನ್ ಎಂದು ಕರೆದಿದ್ದಾರೆ ನಿಜ. ಆದರೆ, ಮರಹಟ್ಟೆಯವರ ಉಗಮದ ರಹಸ್ಯ ಸ್ಪಷ್ಟವಾಗಿಲ್ಲವಾದ್ದರಿಂದ ಮರಹಟ್ಟೆಯರು ಮೂಲ ಆರ್ಯವರ್ಣೀಯರೆಂದು ಅವರ ತಿಳುವಳಿಕೆಯಾಗಿದೆ. ಆರ್ಯವರ್ಗೀಯ ಮರಾಟಿಗರು ದ್ರವಿಡವರ್ಗೀಯ ಹೆಂಗಳೆಯನ್ನು ಮದುವೆಯಾದರು. ಆದ್ದರಿಂದ ಅವರ ಸಂತಾನ ಆರ್ಯ-ದ್ರಾವಿಡವಾಯಿತೆಂದು ಜಾಧವರ ಅಭಿಪ್ರಾಯವಿದೆ. ಆದರೆ, ಋಗ್ವೇದ ಕಾಲಕ್ಕಿಂತ ಮೊದಲಿನ ಯದು-ತುರ್ವಸುಗಳ ಪರಂಪರೆ ಮತ್ತು ಯಾದವರ ಮಾತೃಪ್ರಧಾನ ಕುಟುಂಬ ಪದ್ಧತಿ ಮೊದಲಾದ ಪುರಾಣಗಳಲ್ಲಿನ ಪುರಾವೆಗಳನ್ನು ಲಕ್ಷ್ಯದಲ್ಲಿಡುವದು ಅಗತ್ಯವಾಗಿದೆ. ನಮ್ಮ ಪ್ರಾಚೀನ ವೇದವ್ಯಾಸಾದಿ ಪುರಾಣ-ಇತಿಹಾಸಗಳ ಲೇಖಕರು ವಾಸ್ತವ ಘಟನೆಗಳ ವಾಸ್ತವಚಿತ್ರವನ್ನು ನೀಡುವ ರೀತಿಯನ್ನು ಸ್ವೀಕರಿಸಿದವರಲ್ಲ. ಪ್ರತ್ಯಕ್ಷ

ನಡೆದಿರಬಹುದಾದ ಸಂಗತಿಗಳನ್ನು ಒಂದು ಸಂಕೇತದ ರೂಪದಲ್ಲಿ ಇಲ್ಲವೆ ಪ್ರಾತಿನಿಧಿಕ ರೂಪದಲ್ಲಿ ಒಂದು ಉದಾಹರಣೆಯನ್ನು ತೆಗೆದುಕೊಂಡು ಮುಂದೆ ಸಾಗುವ ರೀತಿ ಇವರದಾಗಿದೆ. ಮಹಾಭಾರತದಲ್ಲಿ ಯದು-ತುರ್ವಸುಗಳ ಆರ್ಯೀಕರಣದ ಸಂಗತಿಯ ಸೂಚನೆಯನ್ನು ಹೀಗೆಯೇ ಕೊಡಲಾಗಿದೆ. ದೇವಯಾನಿ ಶುಕ್ರಾಚಾರ್ಯರ ಮಗಳು, ಅಂದರೆ ಬ್ರಾಹ್ಮಣ ಕನ್ಯೆ; ಅವಳು ಯಯಾತಿಯನ್ನು ಮದುವೆಯಾಗುತ್ತಾಳೆ. ಇದು ಪ್ರತಿಲೋಮ ವಿವಾಹ. ಆರ್ಯ ವಧುವಿನಿಂದ ಯಯಾತಿಗಾದ ಮಗ ಯದು. ಈ ರೀತಿಯಲ್ಲಿ ಯದು ಸಂತತಿ-ಯಾದವರು 'ಆರಿಯ'ರಾದ ಸಂಗತಿಯನ್ನು ಪುರಾಣ ಹೇಳುತ್ತದೆ. ಇಂಥ ಆರಿಯ ಯಾದವರ ಗೌಳವಾಡಿಯಲ್ಲಿ ಜನ್ಮತಾಳಿದ ಪಾಕೃತಭಾಷೆಯಲ್ಲಿ ಕಾಣುವ ಸಂಸ್ಕೃತೇತರವಾದ ಹ್ರಸ್ವ ಎ, ಒ ಗಳು, ಳ ಮೊದಲಾದ ಉಚ್ಚಾರಗಳು ನೆಲೆ ಹಿಡಿದು ಕೂತಾಗ, ಈ ಯಾದವವಂಶ ಮೂಲದಲ್ಲಿ ತಥಾಕಥಿತ ದ್ರಾವಿಡವರ್ಗದ ಪತ್ತಿಜನರೆಂದು ಹೇಳುವದು ಹೆಚ್ಚು ಸಮಂಜಸವಲ್ಲವೆ? ಮತ್ತು ಇದಕ್ಕಾಗಿ ಆರ್ಯೀಕರಣದಿಂದ ಅವರ ಭಾಷೆ ಪೂರ್ಣವಾಗಿ ಬದಲಾದರೂ ಕನ್ನಡ ವರ್ಗದ ಧಾತುರೂಪಗಳು ಮರಾಠಿಯಲ್ಲಿ ಇದ್ದಕ್ಕಿದ್ದಂತೆ ಉಳಿದದ್ದು ಹೆಚ್ಚು ಸಂಭವನೀಯವಲ್ಲವೇ?

ಮರಾಠಿಯಲ್ಲಿ ಕನ್ನಡದ ಧಾತುರೂಪಗಳಿವೆ ಎಂದು ವಿಠ್ಠಲರಾಮಜೀ ಶಿಂಧೆಯವರು ತಮ್ಮ 'ಮರಾಠಿ ಕನ್ನಡಗಳ ಪರಸ್ಪರ ಸಂಬಂಧ'ವೆಂಬ ತಮ್ಮ ಮಹತ್ವದ ಲೇಖನದಲ್ಲಿ ವಿಶದಗೊಳಿಸಿದ್ದಾರೆ. ಇಷ್ಟೇ ಇಲ್ಲದ ಮರಾಠೆ ಮತ್ತು ಕನ್ನಡಿಗರಲ್ಲಿ ಯಾವುದೋ 'ಆನುವಂಶಿಕ ಸಂಬಂಧ'ವಿರದೆ ಕೆಳಗೆ ಕೊಟ್ಟ ಶಬ್ದಗಳ ಕೊಡು ಕೊಳೆಯಾಗುತ್ತಿರಲಿಲ್ಲವೆಂದು ಅವರು ಹೇಳಿದ್ದಾರೆ. "ಸಂಬಂಧ ಸೂಚಿಸುವ ಅವ್ವ (ಆವಾ, ಆವು). ಅಪ್ಪ (ಬಪ್ಪಾ, ಅಪ್ಪಾ, ಆಬಾ) ಮೊದಲಾದ ಶಬ್ದಗಳು ಮತ್ತು ಬೊಟ್ಟು (ಬೋಟ), ಪೊಟ್ಟೆ (ಪೋಟ), ತಲೆ (ತಾಳೂ) ಮೊದಲಾದ ಅಂಗವಾಚಕ ಶಬ್ದಗಳು ಎರಡೂ ಭಾಷೆಗಳಲ್ಲಿ ಸಾಮಾನ್ಯವಾಗಿರುವಾಗ, ಈ ಭಾಷೆಗಳಲ್ಲಿ ಹಳೆಯ ಭಾಷೆಯೊಡನೆ ಹೊಸದರ ನಿಕಟವಾದ ಆನುವಂಶಿಕ ಸಂಬಂಧವಿದೆಯೆಂದು ನಂಬದೆ ಗತ್ಯಂತರವಿಲ್ಲ." ಈ ನಿರ್ಣಯಕ್ಕೆ ಶಿಂಧೆಯವರು ಬಂದು ತಲುಪುತ್ತಾರೆ. ಆದರೆ, ಈ ಆನುವಂಶಿಕ ಸಂಬಂಧ ಯಾವ ಬಗೆಯ ದೆಂಬುದರ ಕಲ್ಪನೆ ಶಿಂಧೆಯವರಿಗೆ ಇರಲಿಲ್ಲ. ತೌಲನಿಕ ಭಾಷಾಶಾಸ್ತ್ರದ ಪುರಾವೆಗಳ ಮೇಲಿಂದ ಅನಿವಾರ್ಯವಾಗಿ ಬಂದು ಮುಟ್ಟಿದ ನಿರ್ಣಯದ ಅವರದಾಗಿದೆ. ಯದು-ತುರ್ವಸುಗಳ ವಂಶಕಥೆಯ ಬಗ್ಗೆ ಅವರು ಲಕ್ಷ್ಯಕೊಟ್ಟಿದ್ದರೆ ಅದರ ಜೊತೆಗೆ ಈ ವಿಚಾರದ ಸಾಂಗತ್ಯ ಕೂಡಬಹುದಿತ್ತು ಮತ್ತು ಕನ್ನಡ ಮತ್ತು ಮರಹಟ್ಟೆಯರ ಸಮಸ್ಯೆಯ ಪರಿಹಾರವಾಗಿ, ಮರಾಠಿಸಂಸ್ಕೃತಿಯಲ್ಲಿ ಕೆಲವು ತೊಡಕಿನ ಸಂಗತಿಗಳು ಸರಳವಾಗ ಬಹುದಿತ್ತು.

ಕನ್ನಡ ಮತ್ತು ಮರಾಠಿಗಳ ಸಂಪರ್ಕ (ಇಂದು ಬಹಳ ಜನರಿಗೆ ಕಾಣುವಂತೆ) ಸಾಂಗಲಿ, ಮಿರಜ, ಬಹಳಾದರೆ ಪುಣೆ ಈ ಭಾಗದಲ್ಲಷ್ಟೇ ಆಗಿದ್ದರೆ ಮೇಲೆ ಹೇಳಿದ ಮೂಲಗಾಮಿಯಾದ ಸಂಬಂಧ ನಮ್ಮ ಕಣ್ಣಿಗೆ ಬೀಳುತ್ತಿರಲಿಲ್ಲ. ವರ್ಹಾಡ-ನಾಗಪುರ ಕಡೆಯ ಭಾಷೆಯಲ್ಲಿಯೂ ಈ ಧಾತುರೂಪಗಳು ಯಾಕೆ ಇರಬೇಕಾಗಿತ್ತು? ಚಾಲುಕ್ಯ-ರಾಷ್ಟ್ರಕೂಟರ ಆಳಿಕೆಯಲ್ಲಿ ಈ ಭಾಷಿಕರು ಹತ್ತಿರ ಬಂದದ್ದರಿಂದ ಮರಾಠಿಯಲ್ಲಿ ಹೊಕ್ಕ ಕನ್ನಡ ಮತ್ತು ಕನ್ನಡದಲ್ಲಿ ಹೊಕ್ಕ ಮರಾಠೀ ನಾಮಪದಗಳು ಸಂಖ್ಯಾವಾಚಕ ಶಬ್ದಗಳು ಹೇಗೆ ಬಂದವೆಂಬ ಸಮಸ್ಯೆಗೆ ಉತ್ತರ ದೊರೆಯಬಹುದು. ಆದರೆ, ಮರಾಠಿಯಲ್ಲಿ ಕನ್ನಡದ ಧಾತುಗಳು ಬಂದದ್ದು ಹೇಗೆ ಎಂಬ ಪ್ರಶ್ನೆಗೆ ಉತ್ತರ ದೊರೆಯುವದಿಲ್ಲ. ಮರಾಠಿಭಾಷೆ ಹುಟ್ಟುವಾಗ ಹತ್ತಿರದಲ್ಲಿ ಕನ್ನಡ ಪ್ರಚಲಿತವಾಗಿತ್ತು ಎಂದು ಹೇಳುವದು ಅನಿವಾರ್ಯವಾಗುತ್ತದೆ. ಎರಡು ಭಾಷೆಗಳ ಉಪಯೋಗವಿರುವ ಕುಟುಂಬದಲ್ಲಿ ಸಣ್ಣಮಕ್ಕಳ ಭಾಷೆಯಲ್ಲಿ ಕೂಡ ಈ ಪ್ರಕಾರ ಕಣ್ಣಿಗೆ ಬೀಳುತ್ತದೆ. ದ್ವೈಭಾಷಿಕರ ಮಕ್ಕಳು ಎರಡೂ ಭಾಷೆಗಳ ಧಾತುಗಳನ್ನು ಉಪಯೋಗಿಸುತ್ತವೆ. ಆದ್ದರಿಂದ, ಈ ವಿಚಿತ್ರ ಪ್ರಕಾರ ಮರ್ಹಾಟ-ಕರ್ಣಾಟರ ನೆರೆಯ ಸಂಬಂಧಕ್ಕೆ ತಂದು ಮುಟ್ಟಿಸುತ್ತದೆ. ನೆರೆಯಲ್ಲಿ ಬೆಳೆದ ರಿಸ್ಟಿಕ-ಭೋಜಕರು ಪ್ರಥಮ ಮರ್ಹಾಟ ವರ್ಹಾಡವೇ ನಿಜವಿದ್ದರೆ ನೆರೆಯ ದೇಶ ಕನ್ನದೇಶ ಮೂಲದಲ್ಲಿ ಕಾನಡಾ ಇರಬೇಕು. ಇದರಿಂದ ಈ ಪ್ರಾಂತಗಳ ಸೋದರ ಸಂಬಂಧ ವ್ಯಕ್ತವಾಗುತ್ತದೆ.

ದೇವಾನುದೇವತೆಗಳು

ಅತಿ ಪುರಾತನ ಕಾಲದಿಂದ ಕರ್ನಾಟ-ಮರಹಟ್ಟ ಜನಾಂಗಗಳ ನಿಕಟವಾದ ಸೋದರ ಸಂಬಂಧದ ಸ್ಪಷ್ಟವಾದ ಪುರಾವೆಗಳನ್ನು ನೀಡುವ ಕೆಲವು ದೇವತೆಗಳ ಚರ್ಚೆ ಈ ಪ್ರಕರಣದಲ್ಲಿದೆ. ಅವುಗಳಲ್ಲಿ ಅತಿ ಪುರಾತನವಾದ ರುದ್ರ-ಶಿವನ ವಿಚಾರ ಮೊದಲನೆಯದು. ರುದ್ರನೆಂದರೆ 'ಪತ್ತೀನಾಂ ಪತಿಃ' ಎಂದು ವೇದದಲ್ಲಿ ಹೇಳಲಾಗಿದೆ. ರುದ್ರಾಧ್ಯಾಯದಲ್ಲಿ ಸ್ತೇನಾದಿ ಜನ ಸಮೂಹಗಳೊಡನೆ ಪತ್ತಿಗಳ ದೇವತೆಯೂ ರುದ್ರನೆಂದು ವರ್ಣನೆ ಇದೆ.* ಇದರಿಂದ ಪತ್ತಿಗಳೆಂದರೆ ಅನೇಕರಲ್ಲಿ ಒಬ್ಬರು, ಸಾಮಾನ್ಯ ಜನರೆಂಬ ಕಲ್ಪನೆ ಬರುವಂತಿದೆ. ಪತ್ತಿಗಳನ್ನು ಬಿಟ್ಟರೆ ಉಳಿದ ಜನಾಂಗಗಳ ಹೆಸರುಗಳನ್ನು ದಿಟ್ಟಿಸಿ ನೋಡಿದರೆ ಅವರ ಮಹತ್ವವೇನೆಂದು ಈ ಹೆಸರುಗಳ ಮೇಲಿಂದಲೇ ತಿಳಿಯಬಹುದು. ಸ್ತೇನರು, ಕುಲುಂಚರು, ಅರಣ್ಯರು, ತಸ್ಕರರು ಮೊದಲಾದ ಹೆಸರುಗಳು ಅವರ ಸಾಮಾಜಿಕ ಮಹತ್ವವನ್ನು ಸಾರಿ ಹೇಳುತ್ತವಾದ್ದರಿಂದ ಹೆಚ್ಚಿಗೆ ಹೇಳುವ ಕಾರಣವಿಲ್ಲ. ಅಲ್ಲದೆ ಈ ಜನರಿಗೆ ಮುಂದೆ ಯಾವದೇ ಬಗೆಯ ಸನ್ಮಾನ್ಯವಾದ ಐತಿಹಾಸಿಕ ಮಹತ್ವವೂ ದೊರೆತಂತೆ ಕಾಣುವದಿಲ್ಲ. ಆದರೂ ರುದ್ರನನ್ನು ಕುರಿತು, "ನೀನು ಕಳ್ಳರ ದೇವತೆ, ಬೇಡರ ದೇವತೆ, ನೀನು ವನಚರರ ದೇವತೆ" ಎಂಬುದಾಗಿ ವೈದಿಕ ಋಷಿಗಳು ಬಣ್ಣಿಸಿ ಹೇಳಿರುವದಾದರೂ ಯಾಕೆ?

ಈ ವರ್ಣನೆಯ ರೀತಿಯ ಮೇಲಿಂದಲೇ ರುದ್ರನ ಬಗ್ಗೆ ವೈದಿಕಆರ್ಯರ ಮನೋವೃತ್ತಿ ಏನೆಂಬುದು ವ್ಯಕ್ತವಾಗುತ್ತದೆ. ಇಂದಿಗೂ ಬ್ರಾಹ್ಮಣರಲ್ಲಿ ಎಲ್ಲ ಶಾಖೆಯವರೂ ರುದ್ರೋಪಾಸಕರಲ್ಲ. ಶೈವಪಂಥವನ್ನು ಸ್ವೀಕರಿಸದೆ ಉಳಿದ ಬ್ರಾಹ್ಮಣರಲ್ಲಿ ರುದ್ರನಿಗೆ ಮಹತ್ವವಿಲ್ಲ. ಶೈವರಲ್ಲಿಯೂ ತೀರ ನಿಷ್ಠರನ್ನು ಬಿಟ್ಟರೆ ಉಳಿದವರು ಸಂಕಲ್ಪ ಮಂತ್ರಗಳಲ್ಲಿ ವಿಷ್ಣು ಅಥವಾ ನಾರಾಯಣನಿಗೆ ಮಹತ್ವ ಕೊಡುತ್ತಾರೆ. ಶಂಕರಾಚಾರ್ಯರು ನಾರಾಯಣನ ಉಪಾಸನೆಯನ್ನು ಹೇಳಿದ್ದಾರೆ. ಅವರ ಚರ್ಪಟಪಂಜರಿ ಸ್ತೋತ್ರ ಗೋವಿಂದನ ಸ್ತುತಿ ಎಂದು ಪ್ರಖ್ಯಾತವಾಗಿದೆ. ಬ್ರಾಹ್ಮಣರು ಶಿವಾಲಯದ ಪೂಜಾರಿಗಳಾಗಬಾರದು, ಆದರೆ ಕಲ್ಯಾಣವಿಲ್ಲ, ಅರಿವು ಬಡಿಯುತ್ತದೆಂದು ಹಳೆಯ ತಲೆಮಾರಿನಲ್ಲಿ ನಂಬಿಕೆಯಿತ್ತು. ಶಿವನ ಪೂಜಾರಿಗಳು ಸಾಮಾನ್ಯವಾಗಿ ಗೊರವರಾಗಿರುತ್ತಿದ್ದರು. ಋಗ್ವೇದದಲ್ಲಿಯೇ ಇಂದ್ರನ ಪ್ರಮಾಣದಿಂದ ರುದ್ರನಿಗಿರುವ ಸೂಕ್ತಗಳು ಬಹಳ ಕಡಿಮೆಯಾಗಿವೆ. ಪೂರ್ಣವೆನ್ನಬಹುದಾದ ಸೂಕ್ತಗಳು

---

* ಇವುಗಳ ಆಳವಾದ ವ್ಯಾಖ್ಯಾನವನ್ನೂ ಶಂಬಾ ಅವರು ಮೊದಲು ಪ್ರಾರಂಭಿಸಿದ್ದು 'ಶಿವರಹಸ್ಯ' ಎಂಬ ಸಂಶೋಧನಾತ್ಮಕ ಗ್ರಂಥದಲ್ಲಿ. ಅದು ಕೇವಲ 'ಶಿವ-ರುದ್ರ'ರ ಭಾಷಿಕ ಸಂಕೇತ ನಾಮಗಳನ್ನು ವ್ಯಾಖ್ಯಾನಿಸುವುದಿಲ್ಲ ಬದಲಾಗಿ ಸಾಂಸ್ಕೃತಿಕ ಅನುಕರಣೆ, ಅನುಕರಣೆ, ಪ್ರಭಾವ, ವಿಲೀನಕರಣ ಪ್ರಕ್ರಿಯೆಗಳನ್ನೂ ಪಕ್ಕ ಪಕ್ಕದಲ್ಲಿಟ್ಟು ನೋಡುತ್ತದೆ. ಆಸಕ್ತರು ಆ ಗ್ರಂಥವನ್ನು ಪರಿಶೀಲಿಸಬಹುದು. (ಸಂ)

ಮೂರೇ ಇವೆ. ಅಲ್ಲದೆ ರುದ್ರನನ್ನು ಉದ್ದೇಶಿಸಿ ಮಾಡಿದ ಪ್ರಾರ್ಥನೆ ಕೂಡ ನೋಡುವಂಥದ್ದಾಗಿದೆ. 'ನಮಸ್ತೇ ರುದ್ರ ಮನ್ಯವ ಉತೋ ತ ಇಷವೇ ನಮಃ' (ವಾಜಸನೀಯ ಸಂಹಿತೆ, ೧೬-೧)

> ಮಾ ನೋ ಮಹಾಂತಮುತ ಮಾ ನೋ ಅರ್ಭಕಂ ಮಾನ ಉಕ್ಷಂತಮುತ ಮಾನ
> ಉಕ್ಷಿತಂ ಮಾ ನೋ ವಧೀಃ ಪಿತರಂ ಮೋತ ಮಾತರಂ ಮಾನಃ ಪ್ರಿಯಾಸ್ತನ್ವೋ
> ರುದ್ರ ರೀರಿಷಃ। ಮಾನಸ್ತೋಕೇ ತನಯೇ ಮಾನ ಆಯೌ ಮಾ ನೋ ಗೋಷು ಮಾ
> ನೋ ಅಶ್ವೇಷು ರೀರಿಷಃ। ವೀರಾನ್ ಮಾ ನೋ ರುದ್ರ ಭಾಮಿತೋ ವಧೀರ್ಹ
> ವಿಷ್ಮಂತಃ ಸದಮಿತ್ವಾ ಹವಾಮಹೇ॥ (೧. ೧೧೪. ೭-೮)."

ಹೇ ರುದ್ರ ನಿನ್ನ ಕೋಪಕ್ಕೆ ನಮಸ್ಕಾರ. ರುದ್ರ ನೀನು ನಮ್ಮಲ್ಲಿ ದೊಡ್ಡವರನ್ನಾಗಲಿ ಚಿಕ್ಕವರನ್ನಾಗಲಿ ಕೊಲ್ಲಬೇಡ. ನಮ್ಮಲ್ಲಿ ಬೆಳೆದವರನ್ನಾಗಲಿ, ಬೆಳೆಯುತ್ತಿರುವವರನ್ನಾಗಲಿ ಕೊಲ್ಲಬೇಡ. ನಮ್ಮ ತಂದೆ-ತಾಯಿಗಳ ಜೀವ ತೆಗೆಯಬೇಡ, ನಮ್ಮ ಶರೀರಕ್ಕೂ ದುಃಖ ಕೊಡಬೇಡ. ನಮ್ಮ ಮಕ್ಕಳನ್ನು, ಮೊಮ್ಮಕ್ಕಳನ್ನು, ಸೇವಕರನ್ನು ಸಂಹಾರಮಾಡಬೇಡ. ರುದ್ರ, ನೀನು ಸಿಟ್ಟಿಗೆದ್ದು ನಮ್ಮ ವೀರರನ್ನು ಸಂಹರಿಸಬೇಡ. ನಾವು ಹವಿಯಸ್ಸು ತೆಗೆದುಕೊಂಡು ಸದಾಕಾಲ ನಿನ್ನನ್ನು ಪ್ರಾರ್ಥಿಸುತ್ತೇವೆ.

ಈ ಪ್ರಾರ್ಥನೆಯಲ್ಲಿ ರುದ್ರನ ಉಗ್ರತನಕ್ಕೆ ಹೆದರಿದ ಮನೋವೃತ್ತಿ ವ್ಯಕ್ತವಾಗುತ್ತದೆ. ಇಂದ್ರನ ಪ್ರಾರ್ಥನೆಯಲ್ಲಿ ತುಂಬಿಕೊಂಡ ಆತ್ಮೀಯತೆ ಇಲ್ಲಿ ಕಾಣುವದಿಲ್ಲ. ಈ ರುದ್ರನಿಂದ ತೊಂದರೆಯಾಗಬಾರದೆಂದು ಪೀಡೆಯ ನಿವಾರಣಾರ್ಥವಾಗಿ ಈ ಪ್ರಾರ್ಥನೆಯನ್ನು ಮಾಡಿಕೊಂಡಂತಿದೆ.* ಮನೆಯನ್ನು ಹೊಸ ಸ್ಥಳಕ್ಕೆ ಬದಲಾಯಿಸಿದರೆ ಅಲ್ಲಿಯ ವಾಸ್ತುದೇವತೆ ಗ್ರಾಮದೇವತೆಯರು ಸಿಟ್ಟಿಗೇಳಬಾರದೆಂದು ತಮ್ಮ ಮುಖ್ಯ ದೇವತೆಯ ಪೂಜೆಯ ನಂತರ ಅವರಿಗೂ ನೈವೇದ್ಯ ನೀಡುವ ಸಂಪ್ರದಾಯ ಇಂದಿಗೂ ನಮ್ಮಲ್ಲಿದೆ. ಈ ರೀತಿಯಲ್ಲಿ ಹಿಂದೂಗಳ ದೇವಸ್ಥಾನಗಳಲ್ಲಿ ಅನೇಕ ಎರಡನೆಯ ದರ್ಜೆಯ ದೇವ ದೇವತೆಗಳು ಮೂಲೆ ಮೂಲೆಯಲ್ಲಿ ತುಂಬಿರುತ್ತಾರೆ. ವೇದಕಾಲದಲ್ಲಿ ರುದ್ರನಿಗೂ ಈ ಬಗೆಯ ಸ್ಥಾನವನ್ನು ವೈದಿಕರು ಕೊಟ್ಟಿರಬೇಕೆಂದು ಕಾಣುತ್ತದೆ. ಮೇಲಿನ ಮಂತ್ರದಲ್ಲಿ 'ರುದ್ರ ನಾವು ನಿನಗೆ ಹವಿಸ್ಸು ಕೊಡುತ್ತೇವೆ' ಎಂಬ ಮಾತಿದೆ. ಆದರೆ, ಇಂದ್ರನಿಗೆ ಸಮಾನವಾಗಿ ರುದ್ರನಿಗೆ ಹವಿರ್ಭಾಗವನ್ನು ಎಂದಿಗೂ ಕೊಡುವದಿಲ್ಲ. ಯಜ್ಞದಲ್ಲಿ ರುದ್ರನಿಗೆ ಸ್ಥಾನವೇ ಇಲ್ಲ.† ಆದರೂ ಅವನ ಕ್ರೋಧ ಕಡಿಮೆಯಾಗಲೆಂದು ಯಜ್ಞದಲ್ಲಿ ಇಂದ್ರಾದಿಗಳ ಸ್ತವನ ಮುಗಿದ ಮೇಲೆ, ಕೊನೆಯಲ್ಲಿ 'ರುದ್ರಾಯ ಪಶುಪತಯೇ ಸ್ವಾಹಾ' ಎಂದು ಹೇಳಿ ಅವಶಿಷ್ಟವಾದ ಭಾಗವನ್ನು ಕೊಟ್ಟುಬಿಡುತ್ತಾರೆ ಮತ್ತು ಆ ಕ್ರಿಯೆಯ ನಂತರ ಕೈ ತೊಳೆದುಕೊಳ್ಳುತ್ತಾರೆ. (ಅಪಉಪಸ್ಪೃಶ್ಯ). ಹವಿಸ್ಸನ್ನು ಕೊಡುವ ಈ ಕ್ರಮವನ್ನು ನೋಡಿದರೆ ಅದರಲ್ಲಿ ಅಂತಃಕರಣಕ್ಕಿಂತ ಬಲವಂತದ ಮನೋವೃತ್ತಿ ಕಾಣುತ್ತದೆ. ಅಮಂಗಳ, ಅಶುಭಕಾರಕ ಎಂಬ ಗ್ರಹಕ್ಕೆ ಮಂಗಳ ಎಂಬ ಹೆಸರು ಬಂದಿರುವಂತೆ ರುದ್ರನಿಗೂ ಶಿವ (ಮಂಗಲಕಾರಕ) ಎಂಬ ವಿಶೇಷಣ ಬಂದಿದೆಯೆಂದು ಭಾಷ್ಯಕಾರರು ಹೇಳುತ್ತಾರೆ. 'ಶಿವ' ಎಂಬ ವಿಶೇಷಣ ಹಚ್ಚುವಾಗ ಆ ಮಂತ್ರದ್ರಷ್ಟಾರರಾಗಿದ್ದ ವೈದಿಕರ ಎದೆಯಾಳದಲ್ಲಿ ಆ ದೇವತೆಯ ಬಗ್ಗೆ ಇದ್ದ ಅನಾದರ ಮತ್ತು ಭಯಗಳೇ ವ್ಯಕ್ತವಾಗುತ್ತವೆಯಲ್ಲವೇ?

ವೇದಗಳಲ್ಲಿಯ ವರ್ಣನೆಯಿಂದ ರುದ್ರನ ರೂಪದ ಕಲ್ಪನೆ ಬರುವಂತಿದೆ. ಈ ಪ್ರಕಾರದ ಸ್ವರೂಪ ವರ್ಣನೆಯ ಮೇಲಿಂದ ರುದ್ರನು ವೈದಿಕರ ಒಬ್ಬ ಸ್ವತಂತ್ರ ದೇವತೆ ಇರಬಹುದೆಂದು ಅನುಮಾನಿಸಲು ಆಸ್ಪದವಿದೆ. ಆದರೆ, ರುದ್ರನಿಗೆ ಮುಂದೆ ಪ್ರಾಮುಖ್ಯದಿಂದ ರೂಢವಾದ ಶಿವ ಎಂಬ ಹೆಸರಿನ ಮೇಲೆ ಈ ಇಬ್ಬರೂ ಒಂದೇ

---

* ಈ ಮಾತು ಇಂದ್ರನನ್ನೂ ಹೊರತು ಪಡಿಸಿದರೆ ಎಲ್ಲ ದೇವತೆಗಳಿಗೂ ಅನ್ವಯವಾಗುತ್ತದೆ (ಸಂ)

† ಮುಂದೆ ಬಂದ ಪುರಾಣಗಳು ಪ್ರಾಮುಖ್ಯವಾಗಿ ಶೈವಪುರಾಣಗಳು ರುದ್ರನಿಗೆ ಯಜ್ಞದಲ್ಲಿ ಸ್ಥಾನವನ್ನು ಕೊಟ್ಟವು ಈ ಬಗೆಯ ವಿವರಣೆಗಾಗಿ 'ಶಿವರಹಸ್ಯ' ಓದಬೇಕು (ಸಂ)

ಆಗಿರಬಹುದು ಎಂದೆನಿಸುತ್ತದೆ. ಮೇಲೆ ಹೇಳಿದಂತೆ ವೈದಿಕರಿಂದ ಗೌಣಸ್ಥಾನವನ್ನು ಪಡೆದ ರುದ್ರನು ಪುರಾಣಗಳಲ್ಲಿಯ ವರ್ಣನೆಯನ್ನು ಮೂಲದೊಂದಿಗೆ ಹೋಲಿಸಿದಾಗ ವೇದವರ್ಣಿತನಾದ ರುದ್ರನೇ ಪುರಾಣಗಳಲ್ಲಿ ಶಿವನಾದದ್ದು ಕಂಡುಬರುತ್ತದೆ. ಪುರಾಣಗಳ ಹೊತ್ತಿಗೆ ಶೈವಮತದ ಪ್ರಸಾರ ಪ್ರಾರಂಭವಾಗಿದ್ದರೂ ಪುರಾಣಗಳಲ್ಲಿಯ ಶಿವನ ವರ್ಣನೆಗಳು ಅಷ್ಟೇನೂ ಹೃದ್ಯವಾಗಿಲ್ಲ. ಮಾಧ್ವರು ಶೈವರನ್ನು ನಿಂದಾವ್ಯಂಜಕ ರೀತಿಯಲ್ಲಿ ಅಸುರರೆಂದೇ ಕರೆದಿದ್ದಾರೆ. ವೇದಗಳಲ್ಲಿ ರುದ್ರನನ್ನು ಅಸುರನೆಂದು ಎರಡು ಅರ್ಥಗಳಲ್ಲಿ ಬಣ್ಣಿಸಲಾಗಿದೆ. ಶಿವ ಅಸುರರ ಪಕ್ಷಪಾತಿಯೆಂದು ಎಷ್ಟೋ ಕಡೆಗೆ ವರ್ಣನೆಗಳಿವೆ. ರಾವಣಾದಿ ರಾಕ್ಷಸರು ಪರಮ ಶಿವಭಕ್ತರಾಗಿದ್ದರು. ಭಾಗವತದಲ್ಲಿಯ ಮುಂದಿನ ಪದ್ಯಗಳು ವಿಚಾರಣೀಯವಾಗಿವೆ.

ಅಯಂ ತು ದೇವ ಯಜನ ಇಂದ್ರೋಪೇಂದ್ರಾದಿಭಿರ್ಭವಃ।
ಸಹಭಾಗಂ ನ ಲಭತಾಂ ದೇವೈರ್ದೇವಗಣಾಧಮಃ ॥ ೧೮॥
ಭವವ್ರತಧರಾ ಯೇ ಚ ಯೇ ಚ ತಾನ್ ಸಮನುವ್ರತಾಃ।
ಪಾಖಂಡಿನಸ್ತೇ ಭವಂತು ಸಚ್ಛಾಸ್ತ್ರ ಪರಿಪಂಥಿನಃ ॥ ೨೮॥
ನಷ್ಟಶೌಚಾ ಮೂಢಧಿಯೋ ಜಟಾಭಸ್ಮಾಸ್ಥಿಧಾರಿಣಃ।
ವಿಶಂತು ಶಿವದೀಕ್ಷಾಯಾಂ ಯತ್ರ ದೈವಂ ಸುರಾಸವಮ್ ॥ ೨೯॥
....
ಏಷ ಏವಹಿ ಲೋಕಾನಾಂ ಶಿವಃಪಂಥಾಃ ಸನಾತನಃ ॥ ೩೧॥

ಮೇಲಿನ ಶ್ಲೋಕಗಳಿಂದ ಶೈವಪಂಥದ ಬಗ್ಗೆ ಭಾಗವತ ಸಂಪ್ರದಾಯದ ಬ್ರಾಹ್ಮಣರ ಭಾವನೆಗಳೇನಿದ್ದವೆಂಬುದು ಗೊತ್ತಾಗುತ್ತದೆ. ಭಾಗವತ ಸಂಪ್ರದಾಯದಲ್ಲಷ್ಟೇ ಅಲ್ಲದೆ ಮೂಲ ವೇದದಲ್ಲಿಯೇ ರುದ್ರನ ಸ್ಥಾನ ಹಿರಿದಾಗಿಲ್ಲ. ಆಚಾರಹೀನರು, ಪಾಖಂಡಿಗಳು, ಸುರಾಪಾನ ಮಾಡುವವರು, ಜಟಾಭಸ್ಮಗಳನ್ನು ಧರಿಸುವವರಾಗಿದ್ದು ಇಂಥ ಮೂರ್ಖರು ನಿನ್ನ ಭಕ್ತರಾಗುವವರು ಮತ್ತು ಇಂದ್ರಾದಿಗಳ ಜೊತೆಗೆ ನಿನಗೆ ಹವಿರ್ಭಾಗ ದೊರೆಯಲಾರದು-ಇಂಥ ವರ್ಣನೆಗಳ ಭಾಗವತದಲ್ಲಿವೆ. ಶೈವ ಸಂಪ್ರದಾಯದಲ್ಲಿ ಈ ರೀತಿಯ ಅನಾಚಾರಗಳಿಗೆ ಅವಕಾಶವಿದೆ ಮತ್ತು ಇತ್ತು ಎಂಬುದನ್ನು ಈ ಪಂಥದ ಇತಿಹಾಸ ಬಲ್ಲವರಿಗೆ ಹೇಳುವ ಕಾರಣವಿಲ್ಲ. ಈ ವಾಸ್ತವ ಸಂಗತಿ ಇದ್ದಾಗ ಅದನ್ನು ಮುಚ್ಚಿಹೊಚ್ಚಲು ಭಾಗವತಕಾರರು ದಕ್ಷನ ಬಾಯಿಯಲ್ಲಿ ಮೇಲಿನ ಶಾಪವನ್ನು ಹಾಕಿದ್ದಾರೆ. ವಸ್ತುಸ್ಥಿತಿ ಅನನುಕೂಲ ಅಥವಾ ಗೌಣವಿದ್ದಾಗ ಅದು ಸಮಂಜಸ ಕಾಣಲೆಂದು ಪುರಾಣಿಕರು ಶಾಪ ಮತ್ತು ವರಗಳನ್ನು ಉಪಯೋಗಿಸುತ್ತಾರೆ. ಕುಂತಿ ಪಡೆದ ವಿಚಿತ್ರ ಸಂತತಿಯ ಬಗ್ಗೆ ಸ್ಪಷ್ಟೀಕರಣವೀಯಲು ದೂರ್ವಾಸ ಅವಳಿಗೆ ವರವಿತ್ತಿದ್ದನೆಂದು ಹೇಳುವ ಒಂದು ಕಥೆ ಪುರಾಣದಲ್ಲಿಯಷ್ಟೆ. ಯದು-ತುರ್ವಸು ವಂಶೀಯರ ಕೆಲವು ಶಾಖೆಗಳಲ್ಲಿ ಮದ್ಯಮಾಂಸಗಳ ಸೇವನೆ ರೂಢಿಯಲ್ಲಿತ್ತು. ಅದು ಜನರಿಗೆ ಸಹ್ಯವಾಗಬೇಕೆಂದು ಯಯಾತಿಯ ಶಾಪದ ನಿಮಿತ್ತವನ್ನು ಮುಂದೆ ಮಾಡಲಾಯಿತು. ಪುರಾಣರಚನೆಯಲ್ಲಿಯ ಈ ತಂತ್ರವನ್ನು ನೋಡಿದರೆ, ಶೈವರು ಅನಾಚಾರಿಗಳಾಗುತ್ತಾರೆಂದು ದಕ್ಷ ಶಾಪಕೊಟ್ಟ ಎಂದು ಭಾಗವತದಲ್ಲಿ ಯಾಕೆ ಹೇಳಿರಬೇಕೆಂಬುದರ ರಹಸ್ಯ ಗೊತ್ತಾಗುತ್ತದೆ. ಅದರ ಅರ್ಥ ಇಷ್ಟೇ: ಶೈವರಲ್ಲಿ ಅಂಥ ಆಚಾರ ವಿಚಾರಗಳ ಜನರ ಗುಂಪು ಇತ್ತು.

ಶಾಕ್ತಪಂಥದ ಅನುಯಾಯಿಗಳು ಒಳಗೆ ಬಂದ ನಂತರ ಶೈವರಲ್ಲಿ ಈ ಪ್ರಕಾರದ ಅನಾಚಾರಗಳು ಹೆಚ್ಚಾಗಿರುವ ಸಂಭವವಿದೆ. ಯೋನಿ-ಲಿಂಗ ಪೂಜಕರಾದ ಶಾಕ್ತ ಸಂಪ್ರದಾಯ ಶೈವರಿಗಿಂತ ಭಿನ್ನವಾಗಿದ್ದು ಅದು ಮುಂದೆ ಶೈವಸಂಪ್ರದಾಯದಲ್ಲಿ ಒಂದಾಗಿರುವ ಸಾಧ್ಯತೆ ಇದೆ. ಇದರಿಂದ ಶೈವಪಂಥ ಮೂಲದಲ್ಲಿ ವೈದಿಕವಾಗಿತ್ತೆಂದು ಕೆಲವರು ಹೇಳಬಹುದಾಗಿದೆ. ಆದರೆ, ಶಿವ ಎಂಬ ಶಬ್ದ ಮೂಲದಲ್ಲಿ ಸಂಸ್ಕೃತವಾಗಿರದೆ ಆರ್ಯೇತರ ದ್ರಾವಿಡವರ್ಗದ ಭಾಷೆಯಿಂದ ಬಂದದ್ದಾಗಿದೆ. ಇದರಿಂದ, ಶಿವ-ದೇವತೆ ಮತ್ತು ಶೈವಪಂಥ ಇವು ವೈದಿಕ ಮಾರ್ಗದಿಂದ ಭಿನ್ನ ಎಂದು ಹೇಳಬೇಕಾಗುತ್ತದೆ. ವೇದಗಳಲ್ಲಿ ರುದ್ರನ ವರ್ಣನೆ, ಪುರಾಣಗಳಲ್ಲಿ ಶಿವನ

ವರ್ಣನೆಯನ್ನು ನೋಡಿದಾಗ ಅವನು ಆರ್ಯಪಕ್ಷಪಾತಿಯಾದ ದೇವತೆಯೆಂದು ಹೇಳುವ ಧೈರ್ಯವನ್ನು ಯಾರೂ ಮಾಡಲಾರರು.

ಸಾಯಣಾಚಾರ್ಯರು ವೇದಭಾಷ್ಯದಲ್ಲಿ 'ರುದ್ರ' ಶಬ್ದಕ್ಕೆ ಆರು ಬಗೆಯ ವ್ಯುತ್ಪತ್ತಿಗಳನ್ನು ಹೇಳುತ್ತಾರೆ. ಒಂದಕ್ಕಿಂತ ಹೆಚ್ಚು ವ್ಯುತ್ಪತ್ತಿಯನ್ನು ಹೇಳುವ ಆವಶ್ಯಕತೆಯಾದಾರೂ ಏನು? ಇವುಗಳಲ್ಲಿ ಒಂದು ತೃಪ್ತಿಕರವಾಗಿಲ್ಲವೆಂಬುದರ ಸಂಕೇತ ಇದಲ್ಲವೇ? ಇತ್ತೀಚಿನ ತೌಲನಿಕ ಭಾಷಾಶಾಸ್ತ್ರದ ಪ್ರಯತ್ನದಿಂದ ಈ ಶಬ್ದದ ನಿಶ್ಚಿತವಾದ ವ್ಯುತ್ಪತ್ತಿಯನ್ನು ತಿಳಿಯಬಹುದಾಗಿದೆ. ರುದ್ರನೆಂದರೆ ಒದರುವವನು, ಭೀಕರವಾದ ಶಬ್ದ ಮಾಡುವವನು ಎಂಬ ಅರ್ಥಕ್ಕಿಂತ ಆರ್ಯಭಾಷಾ ವರ್ಗದ ಹೋಲಿಕೆಯಿಂದ ತಿಳಿದು ಬರುವ ರುದ್ -Ruddy- ರುಧಿರ ಎಂಬ ವ್ಯುತ್ಪತ್ತಿ ಹೆಚ್ಚು ಉಚಿತವಾಗಿದೆ. ಅಂದರೆ, ರುದ್ರನೆಂದರೆ ಕೆಂಪು ಬಣ್ಣದವನೆಂಬ ಅರ್ಥ ನಿಶ್ಚಿತವಾಗುತ್ತದೆ. 'ಅಸೌ ಯಸ್ತಾಮ್ರೋಽರುಣ ಉತ ಬಭ್ರೂಃ ಸುಮಂಗಲಃ' (ವಾಜಸನೇಯ ಸಂಹಿತೆ, ೧೬.೬). ರುದ್ರನ ಈ ವರ್ಣನೆಯಲ್ಲಿ ಅವನ ಕೆಂಚು ಬಣ್ಣ ಅನೇಕ ರೀತಿಯಲ್ಲಿ ವ್ಯಕ್ತವಾಗಿದೆ. 'ರುದ್ರೋ ವಾ ಏಷ ಯದಗ್ನಿಃ' ತೈತ್ತಿರೀಯ ಸಂಹಿತೆಯಲ್ಲಿಯ (೫.೪.೧) ಈ ವಚನ ಈ ಮಾತಿಗೆ ಪೋಷಕವಾಗಿದೆ. 'ರುದ್ರ' ಶಬ್ದದ ಮುಖ್ಯಾರ್ಥ 'ಕೆಂಪು' ಎಂದಿದ್ದು ಮುಂದೆ ಅದಕ್ಕೆ ಬೇರೆ ಆನುಷಂಗಿಕ ಅರ್ಥಗಳು ಅಂಟಿಕೊಂಡಿವೆ. ಪುರಾಣ ಕಾಲದಲ್ಲಿ ರುದ್ರನಿಗೆ ಶಿವ ಎಂಬ ಹೆಸರು ಎಲ್ಲ ಕಡೆಗೂ ಪ್ರಚಾರದಲ್ಲಿ ಬಂತೆಂದು ಕಾಣುತ್ತದೆ. ಆದರೆ, ವೇದದಲ್ಲಿ 'ಶಿವ' ಶಬ್ದ ದೇವತಾವಾಚಕವಾಗಿಲ್ಲ. ಆದರೂ ರುದ್ರನಿಗೆ ಶಿವನೆಂದು ಕರೆಯುವದು ಪ್ರಾಚೀನ ಕಾಲದಿಂದ ರೂಢಿಯಲ್ಲಿದೆ. 'ಶತರುದ್ರೀಯ'ದಲ್ಲಿ 'ಶಿವ' ಶಬ್ದ ಅನೇಕ ಕಡೆಗಳಲ್ಲಿ ಬಂದಿದೆ. ರುದ್ರ-ಶಿವ ಈ ಜೋಡಿ ಹೆಸರು ಆಮೇಲೆ ವ್ಯವಹಾರದಲ್ಲಿ ಬಂದಿತು. ವೀರಶೈವರಲ್ಲಿ ಮಕ್ಕಳಿಗೆ 'ಶಿವರುದ್ರಪ್ಪ' ಎಂದು ಹೆಸರಿಡುವ ಪದ್ಧತಿಯಿದೆ. ರುದ್ರ ಮತ್ತು ಶಿವ ಇವು ಒಂದೇ ದೇವತೆಯ ಹೆಸರುಗಳಾಗಿದ್ದು ಅವು ಭಿನ್ನ ಭಾಷಾವರ್ಗಗಳಿಗೆ ಸೇರಿದವುಗಳಾಗಿವೆ. 'ರುದ್ರ' ಶಬ್ದ ಆರ್ಯಭಾಷಾವರ್ಗಕ್ಕೆ ಸೇರಿದ್ದಾಗಿದ್ದರೆ 'ಶಿವ' ಶಬ್ದ ಪತ್ತಿಜನರ ದ್ರಾವಿಡಭಾಷಾ ವರ್ಗಕ್ಕೆ ಸಂಬಂಧಿಸಿದ್ದಾಗಿದೆ.

'ಶಿವ' ಶಬ್ದದ ಮೂಲಗಾಮಿಯಾದ ವಿಚಾರ ಮಾಡುವ ಮೊದಲು 'ಚಂದ್ರಮಸ್' ಶಬ್ದದ ಸಂಶೋಧನೆ ಅಗತ್ಯವಾಗಿದೆ. 'ಚಂದ್ರ' ಮತ್ತು 'ಮಸ್' ಶಬ್ದಗಳು ಕೂಡಿಕೊಂಡು ಸಮಾಸವಾಗಿದ್ದರ ಬಗ್ಗೆ ಈ ಮೊದಲು ಹೇಳಲಾಗಿದೆ. ಪ್ರೊ. ವೈಜನಾಥ ಕಾಶೀನಾಥ ರಾಜವಾಡೆ ಇವರು ಚಂದ್ರನ ಬಗ್ಗೆ ಬರೆದ ತಮ್ಮ ಲೇಖನದಲ್ಲಿ, ವೇದಗಳಲ್ಲಿಯ ಪೃಥುಶ್ಚಂದ್ರ, ಹರಿಶ್ಚಂದ್ರ, ಅಧಿಶ್ಚಂದ್ರ, ಗುರುಶ್ಚಂದ್ರ, ವಿಶ್ವಶ್ಚಂದ್ರ ಮೊದಲಾದ ಉದಾಹರಣೆಗಳ ಮೂಲಕ ಸೂಚಿತವಾದ ಒಂದು ಮಹತ್ವದ ಶೋಧವನ್ನು ನಮೂದಿಸುತ್ತಾರೆ.[೩೩] ಇಂದು ರೂಢವಾಗಿರುವ 'ಚಂದ್ರ' ಶಬ್ದದ ಮೂಲ ಉಚ್ಚಾರ ವೇದಪೂರ್ವ ಕಾಲದಲ್ಲಿ 'ಶ್ಚಂದ್ರ' ಇರಬೇಕೆಂಬ ರಾಜವಾಡೆಯವರ ಅನುಮಾನ ಸರಿಯಾಗಿಯೇ ಇದೆ. ಮ್ಯಾಕ್‌ಡೊನೆಲ್ ಮತ್ತು ಕೀಥರು 'ಚಂದ್ರ' ಶಬ್ದದ ಅರ್ಥವನ್ನು ಹೀಗೆ ಕೊಟ್ಟಿದ್ದಾರೆ.[೩೪] ಋಗ್ವೇದದಲ್ಲಿ ಉಷೆಯನ್ನೂ ಚಂದ್ರ ಎಂದು ಸಂಬೋಧಿಸಲಾಗಿದೆ. ಉಷೆಯ ಬಣ್ಣ ಮೊದಲು ಕೆಂಪಾಗಿದ್ದು ಕ್ರಮವಾಗಿ ಬಿಳಿಯ ಬಣ್ಣದ ಕಡೆಗೆ ವಾಲುತ್ತದೆ, ಇದು ಸ್ಪಷ್ಟವಾದದ್ದು. 'ಚಂದ್ರ' ಶಬ್ದದ ಅರ್ಥ ಬಂಗಾರದಂಥ ಬಣ್ಣ ಎಂದು ಮ್ಯಾಕ್‌ಡೊನೆಲ್ ಹೇಳುತ್ತಾನೆ. ಬಂಗಾರದ ಬಣ್ಣದಲ್ಲಿ ಹಳದಿ ಮೋಡಿಯ ಕೆಂಪು ಮತ್ತು ಸ್ವಲ್ಪ ಬಿಳಿಯ ಬಣ್ಣ ಬೆರೆತಿರುತ್ತವೆ. ಆದ್ದರಿಂದ, ಮುಂದೆ 'ಚಂದ್ರ' ಎಂದರೆ ಬಿಳಿಯ ಬಣ್ಣ ಎಂಬ ಅರ್ಥವೂ ಬಂದಿತು. 'ಚಂದ್ರ' ಶಬ್ದಕ್ಕೆ ಬಂಗಾರ ಮತ್ತು ಕಪ್ಪುರ ಎಂಬ ಅರ್ಥಗಳನ್ನು ಕೋಶಗಳಲ್ಲಿ ಕೊಟ್ಟಿದ್ದಾರೆ. 'ಚಂದ್ರ' ಶಬ್ದದಲ್ಲಿ 'ಚ'ಕಾರದೊಡನೆ 'ಶ'ಕಾರದ ಸಂಬಂಧವಿರುವ ಸಂಗತಿ ಕೆಲವು ಶಬ್ದಗಳಲ್ಲಿ ಕಾಣುತ್ತದೆ. 'ಶಿಂದೂರ' ಶಬ್ದ ಕನ್ನಡದಲ್ಲಿ 'ಚೇಂದ್ರ' ಎಂದಾಯಿತೆಂದು ಹಳೆಯ ಪಂಡಿತರ ತಿಳುವಳಿಕೆಯಿದೆ. ಅಲ್ಲಿ ಚಕಾರ ಮತ್ತು ಶಕಾರಗಳ ಸಂಬಂಧವಂತೂ ಇದೆ. ಅಲ್ಲದೆ ಚೇಂದ್ರ-ಶೇಂದ್ರ ಇವುಗಳ ಮೂಲ ಅರ್ಥ ಸುಳಿವು ಹತ್ತುತ್ತದೆ. 'ಚೇಂದ್ರ' ಇಲ್ಲವೆ ಶೇಂದೂರ ಇದು ಕೆಂಪಾಗಿ ತೋರುತ್ತದೆ ಎಂದು ತಿಳಿಯಲು ಯಾವ ಗ್ರಂಥದ

ಆಧಾರದ ಅಗತ್ಯವಿಲ್ಲವೆಂಬುದು ಸಮಾಧಾನದ ಸಂಗತಿಯಾಗಿದೆ. ಇದರಿಂದ ಚೇಂದ್ರ ಮತ್ತು ಶೇಂದೂರಗಳ ಸಾಹಚರ್ಯದ ಅರಿವಾಗುತ್ತದೆ. ಕರ್ನಾಟಕದಲ್ಲಿ ಶೇಂದೂರಕ್ಕೆ ಚೇಂದ್ರವೆಂದು ಅನ್ನುತ್ತಾರೆ. ಮಹಾರಾಷ್ಟ್ರದಲ್ಲಿ ಶಿಂದೂರ ಶಬ್ದದಲ್ಲಿ ಶಕಾರಯುಕ್ತ ಉಚ್ಚಾರ ಉಳಿಯಿತು, ಅದೇ ಕರ್ನಾಟಕದಲ್ಲಿ ಚಕಾರಯುಕ್ತ ಉಚ್ಚಾರ ಉಳಿದು ಬಂದಿತು. ಚಂದ್ರ ಶಬ್ದದ ಉಚ್ಚಾರ, ವೇದ-ಪೂರ್ವ ಕಾಲದಲ್ಲಿ ಶ್ಚಂದ್ರ ಎಂದಿತ್ತು ಎಂಬ ಪ್ರೊ. ರಾಜವಾಡೆಯವರ ಅನುಮಾನಕ್ಕೆ ಶಿಂದೂರ ಮತ್ತು ಚೇಂದ್ರ ಎಂಬ ಒಂದೇ ಅರ್ಥದ ಉಚ್ಚಾರ ಸಾದೃಶ್ಯದ ಎರಡು ಶಬ್ದಗಳಿಂದ ಸಮರ್ಥನೆ ದೊರೆಯುತ್ತದೆ. ಇದೇ ರೀತಿಯ ಬೇರೆ ಪುರಾವೆಗಳು ಬೇರೆ ಶಬ್ದಗಳಿಂದಲೂ ದೊರೆಯಬಹುದು. ಉದಾಹರಣೆಗೆ 'ಚಂಪಕ' ಶಬ್ದ. 'ಚಂಪಕ' ಶಬ್ದದ ಔಚಿತ್ಯ ಕೇವಲ ಸಂಸ್ಕೃತದಿಂದ ತಿಳಿಯಲಾಗುವದಿಲ್ಲ. ಐದನೆಯ ಪ್ರಕರಣದಲ್ಲಿ ಸೂಚಿಸಿರುವಂತೆ ಈ ಶಬ್ದದಲ್ಲಿಯ ಚೆನ್ ಅಥವಾ ಶೆನ್ ಈ ಮೂಲಶಬ್ದಗಳ ಅರ್ಥವನ್ನು ಲಕ್ಷ್ಯದಲ್ಲಿಟ್ಟುಕೊಂಡರೆ 'ಚೆನ್‌ಪಕ' ಶಬ್ದದಲ್ಲಿ ಸಮಾವಿಷ್ಟವಾದ ಅರ್ಥದ ಸ್ವಾರಸ್ಯ ತಿಳಿಯಬಹುದು. ಚೆನ್ ಅಥವಾ ಶೆನ್ ಎಂದರೆ ಬಂಗಾರದಂಥ ಬಣ್ಣ ಎಂಬ ಅರ್ಥ ಪತ್ತಿಜನರ ಎಲ್ಲ ಭಾಷೆಗಳಲ್ಲಿ ವಿವಿಧ ರೂಪಗಳಲ್ಲಿ ದೊರೆಯುತ್ತದೆ. ಚೆನ್‌ಪಕ ಅಂದರೆ ಹೊನ್ನಿನ ಬಣ್ಣದ ಹೂವು-'ಚಾಫಾ'; ಈ ಶಬ್ದದಲ್ಲಿ ಮೂಲದಲ್ಲಿಯೇ ಈ ಅರ್ಥವಿದ್ದರೂ ಮರಾಠಿಗರ ಲಕ್ಷ್ಯಕ್ಕೆ ಅದು ಬಾರದೆ 'ಸೋನಚಾಫಾ' ಅನ್ನಬೇಕಾದ ಪ್ರಸಂಗ ಬಂದಿತು. ಚಂಪಕಕ್ಕೆ ಕನ್ನಡದಲ್ಲಿ ಸಂಪಗೆ ಎಂಬ ಪ್ರತಿಶಬ್ದವಿದೆ. ಇದು ಚಂಪಕದ ತದ್ಭವವೆಂಬ ತಿಳುವಳಿಕೆಯೂ ಇದೆ. ಆದರೆ, ಹೀಗೆ ಉಚ್ಚಾರಭೇದವಿದ್ದ ಶಬ್ದಕ್ಕೆ ತದ್ಭವವೆಂದು ಕರೆಯಲು ಬಾರದು; ಒಂದೇ ಶಬ್ದದ ಭಿನ್ನ ಉಚ್ಚಾರಗಳು ಇವಾಗಿವೆ.

ಪತ್ತಿಜನರ ಮೂಲಭಾಷೆಯಲ್ಲಿ 'ಚ'ಕಾರ ಮತ್ತು ಶಕಾರ ಇವೆರಡರ ಉಚ್ಚಾರವಿದ್ದ ಒಂದು ಅಕ್ಷರ ಅವರ ವರ್ಣಮಾಲೆಯಲ್ಲಿರಬೇಕು. ಇಂದು ತಮಿಳಿನಲ್ಲಿಯ ಈ ಪ್ರಕಾರದ ವಿಶಿಷ್ಟವಾದ ಅಕ್ಷರದ ಮೇಲಿಂದ ನಿರ್ಣಯಿಸುವದು ಶಕ್ಯವಿದೆ. ಒಂದೇ ಅಕ್ಷರದ ಉಚ್ಚಾರ ತಮಿಳಿನಲ್ಲಿ ಶ ಮತ್ತು ಚ ಎಂದು ಎರಡೂ ರೀತಿಯಲ್ಲಾಗುತ್ತದೆ. ರಾಜವಾಡೆಯವರು ಹೇಳಿದಂತೆ ವೇದಪೂರ್ವ ಕಾಲದಲ್ಲಿ ಶ ಮತ್ತು ಚ ದ ನಡುವಿನ ಉಚ್ಚಾರವು ಶೇಂದುರ-ಚೇಂದ್ರ, ಸನ್‌ಪಗೆ-ಚೆನ್‌ಪಕದಂಥ ಶಬ್ದಗಳಲ್ಲಿ ಸ್ವತಂತ್ರವಾದ ಎರಡು ಅಕ್ಷರಗಳಲ್ಲಿ ರೂಢವಾಗಿರುವದು ಕಾಣುತ್ತದೆ. ಮುಂದಿನ ಕಾಲದಲ್ಲಿ ಕರ್ನಾಟಕ-ಮಹಾರಾಷ್ಟ್ರದಲ್ಲಿ ಇವುಗಳೊಳಗಿನ ಒಂದೊಂದು ಉಚ್ಚಾರ ಪ್ರಚಲಿತವಾಗಿರಬೇಕು. 'ಹೇ ಆಮ್ಹಾಸೀ ಕಾನಡೇ' ಈ ಪ್ರವೃತ್ತಿಯನ್ನು ಇಟ್ಟುಕೊಂಡರೆ, ಚೇಂದ್ರ, ಚೆನ್‌ಪಕ, ಶೇಂದೂರ ಈ ಶಬ್ದದೊಳಗಿನ ಔಚಿತ್ಯದ ಆನಂದಕ್ಕೆ ನಾವು ಎರವಾಗುತ್ತೇವೆ. ಮರಾಠಿಯೊಡನೆ ನಮ್ಮ ಸಂಬಂಧವೇನೆಂದು ದುರ್ಲಕ್ಷ್ಯ ಮಾಡಿದರೆ ಕನ್ನಡ ಶಬ್ದಗಳ ಪೂರ್ವೇತಿಹಾಸ, ಅರ್ಥದ ಬೆಳವಣಿಗೆ, ಉಚ್ಚಾರದಲ್ಲಿಯ ಬದಲಾವಣೆ ಇವೆಲ್ಲ ತಿಳಿಯುವದು ಕಠಿಣವಾಗಬಹುದು. ರಾಜವಾಡೆಯವರಿಗೆ ಪತ್ತಿಜನರ ಭಾಷೆಯ ಪರಿಚಯವಿಲ್ಲವಾದ್ದರಿಂದ ಅವರ ಲೇಖನದಲ್ಲಿ ಒಂದು ಮಹತ್ವದ ಶೋಧದ ಜೊತೆಗೆ ಒಂದು ದೋಷ ಕೂಡ ತಿಳಿಯದಂತೆಯೇ ನುಸುಳಿಬಿಟ್ಟಿದೆ. ಅವರ ಪ್ರಕಾರ ಚಂದ್ರ ಮತ್ತು ಮಸ್ ಇವೆರಡೂ ಶಬ್ದಗಳು ಆರ್ಯಭಾಷೆಯ ವರ್ಗಕ್ಕೇ ಸೇರಿದವುಗಳಾಗಿವೆ.[೩೫] ಅವರು ಹೇಳಿದ್ದು. ಮೇಲಿನ ಹೇಳಿಕೆಯಲ್ಲಿ 'ಚಂದ್ರ' ಮತ್ತು 'ಮಾಸ್' ಇವೆರಡೂ ಶಬ್ದಗಳು ಆರ್ಯವರ್ಗದ ಭಾಷೆಯೊಳಗಿನವೆಂಬ ಗ್ರಹಿಕೆ ಮಾತ್ರ ನಿರಾಧಾರವಾಗಿದೆ. ಏಕಂದರೆ ಉಳಿದ ಇಂಡೋ ಜರ್ಮ್ಯಾನಿಕ್ ಭಾಷೆಗಳಲ್ಲಿ, ಅವುಗಳ ಕೋಶಗಳಲ್ಲಿ ಚಂದ್ರ ಶಬ್ದವಿಲ್ಲ. ಸಂಸ್ಕೃತದಲ್ಲಿ ಕೂಡ ಈ ಶಬ್ದಕ್ಕೆ ಇಂದಿನ ಚಂದ್ರನೆಂಬ ಅರ್ಥವಿರಲಿಲ್ಲ. ಈ ವಿಷಯದಲ್ಲಿ ಎ. ಬಿ. ಕೀಥ್ ಮತ್ತು ಮ್ಯಾಕ್‌ಡೊನೆಲ್ಲರ ಅಭಿಪ್ರಾಯ ವಿಚಾರಣೀಯವಾಗಿದೆ:[೩೬] ಋಗ್ವೇದದಲ್ಲಿ ಆರಂಭಕ್ಕೆ ಚಂದ್ರ ಶಬ್ದವನ್ನು ವಿಶೇಷಣದಂತೆ ಉಪಯೋಗಿಸಲಾಗಿದೆ. ರಾಜವಾಡೆಯವರು ಸೂಚಿಸಿದಂತೆ ಎರಡು ಭಿನ್ನಭಾಷೆಯ ಜನರ ಸಂಬಂಧ ರೂಢವಾದಂತೆ ಎರಡೂ ಭಾಷೆಗಳ ಸಮಾನಾರ್ಥಕ ಶಬ್ದಗಳು ಕೂಡಿಕೊಂಡು ಸಾಮಾಜಿಕ ಶಬ್ದಗಳಾಗುತ್ತವೆ. ಇಂಥ ಬೇಕಾದಷ್ಟು ಉದಾಹರಣೆಗಳಿವೆ. ಮರಾಠಿಯಲ್ಲಿ ಇಂಥ ಜೋಡುಶಬ್ದಗಳು ಮಹಾನುಭಾವಸಾಹಿತ್ಯದಲ್ಲಿ

ಮತ್ತು ಜ್ಞಾನೇಶ್ವರಿಯಲ್ಲಿ ಸಿಗುತ್ತವೆ. ಚಕ್ರಧರನ 'ಲೀಳಾ ಚರಿತ್ರೆ'ಯಲ್ಲಿ ಕೇವಲ 'ಕೋಲ' ಶಬ್ದದ ಉಪಯೋಗವಿದೆ. ಇದು ಮರಾಠಿ ಶಬ್ದವಲ್ಲ. ಮುಂದೆ ಈ ಶಬ್ದದ ಅರ್ಥ ಜ್ಞಾನೇಶ್ವರಿಯ ಹೊತ್ತಿಗೆ ಮಸುಕಾಗಿರಬೇಕು. ಆದ್ದರಿಂದ ಕೋಲ ಶಬ್ದದ ಅರ್ಥ ತಿಳಿಯಲು 'ಕಾಠೀ' ಎಂಬ ಮರಾಠೀ ಶಬ್ದ ಮುಂದೆ ಬರಬೇಕಾಯಿತು. ಜ್ಞಾನೇಶ್ವರಿಯಲ್ಲಿ 'ಕೋಲ-ಕಾಠೀ' ಎಂಬ ಶಬ್ದದ ಪ್ರಯೋಗವಿದೆ. ಇದೇ ರೀತಿಯಲ್ಲಿ ಓಲೀ-ಶೇಲಾ ಎಂಬ ಶಬ್ದ. ವಲ್ಲಿ ಎಂಬುದು ಹೊದ್ದುಕೊಳ್ಳುವ ವಸ್ತ್ರ ಎಂಬರ್ಥದಲ್ಲಿ ಕನ್ನಡದ ಆಡುಮಾತಿನಲ್ಲಿ ಪ್ರಯೋಗವಿದೆ. ಓಲೀ ಶಬ್ದ 'ಲೀಳಾಚರಿತ್ರೆ'ಯಲ್ಲಿ ಬರುತ್ತದೆ. ಆದರೆ, ನರೇಂದ್ರಕೃತ 'ರುಕ್ಮಿಣೀ ಸ್ವಯಂವರ'ದಲ್ಲಿ 'ಓಲೀಶೇಲಾ' ಎಂಬ ಜೋಡುಶಬ್ದ ದೊರೆಯುತ್ತದೆ. ಚಂದ್ರಮಸ್ ಶಬ್ದ ಇದೇ ರೀತಿಯಲ್ಲಿ ಪ್ರಚಾರದಲ್ಲಿ ಬಂದಿರಬೇಕು.

ಚಂದ್ರಮಸ್‌ದಂತೆ ರುದ್ರ-ಶಿವ ಇದು ಕೂಡ ಒಂದು ಜೋಡುಶಬ್ದವೆಂದು ನನಗನಿಸುತ್ತದೆ. ವೇದ ಪೂರ್ವಕಾಲದ ಪತ್ತಿಜನರ ದೇವತೆ ಶಿವನಾಗಿದ್ದು ಶಿವ ಶಬ್ದದ ಭಾಷಾಂತರವಾಗಿ ಶಿವ ರುದ್ರನೆಂಬ ಸಂಸ್ಕೃತ ರೂಪವನ್ನು ಪಡೆದಿರಬೇಕು. ಶಿನ್ ಮತ್ತು ಚೆನ್ ಇವುಗಳಿಗೆ ಕೆಂಪು ಅರ್ಥವಿರುವದನ್ನು ಈ ಮೊದಲೇ ಹೇಳಲಾಗಿದೆ. ಚೆನ್‌ಬು ಅಂದರೆ ಕೆಂಪುಪಾತ್ರೆ-ತಾಮ್ರದ ಪಾತ್ರೆ ಎಂದು ಅರ್ಥವಿದೆ. ಮರಾಠಿಯಲ್ಲಿ ತಾಂಬ್ಯಾ (ತಾಮ್ರ)ದಂತೆ 'ಚೆನ್‌ಬು' ಕೂಡ ಅರ್ಥಪೂರ್ಣವಾಗಿದ್ದು ತಂಬಿಗೆಯಂಥ ಪಾತ್ರೆ ಎಂಬ ಅರ್ಥದಲ್ಲಿ ದಕ್ಷಿಣದಲ್ಲಿ ರೂಢವಾಗಿದೆ. ಇದರಿಂದ ಸಂಸ್ಕೃತವೆಂದು ತಿಳಿದಿರುವ 'ಶಂಭು' ಶಬ್ದದಲ್ಲಿ ನಿಜವಾದ ಅರ್ಥದ ಸೂಚನೆ ಗೊತ್ತಾಗುತ್ತದೆ. ಶಿವ ಮತ್ತು ಶಂಭು ಈ ಎರಡೂ ಶಬ್ದಗಳ ಮೂಲದಲ್ಲಿ ಶಿನ್ ಶಬ್ದವಿದೆ. ಶಂಕರ ಶಬ್ದದ ಅರ್ಥವೂ ಹೀಗೇ ಇರಬೇಕು. ಶೆನ್ (ಮಂಗಲ) ಮಾಡುವವ ಶಂಕರ. ಶಿನ್ ಶಬ್ದದ ಅರ್ಥ ಕೆಂಪು. ಇದರಿಂದ ಈ ಶಬ್ದಗಳ ಔಚಿತ್ಯ ಸ್ಪಷ್ಟವಾಗುತ್ತದೆ. ದೇವತೆಗಳ ಮೂರ್ತಿಯನ್ನು ನಿರ್ಮಿಸುವಾಗ ಸಾಕಷ್ಟು ಸಾಂಕೇತಿಕ ಭಾಷೆಯನ್ನು ಉಪಯೋಗಿಸಿರುವ ಸಂಗತಿ ನಿಸ್ಸಂಶಯವಾಗಿದೆ. ದೇವತಾಮೂರ್ತಿಯಲ್ಲಿಯ ಸಂಕೇತಗಳು ನಿಶ್ಚಿತ ಅರ್ಥವನ್ನು ತಿಳಿಯಪಡಿಸುವ ಪುರಾವೆಗಳು ಸಿಕ್ಕಿಲ್ಲ. ಮೂರ್ತಿಯಲ್ಲಿಯ ಸಂಕೇತ ನಿರರ್ಥಕವಾಗಿರುವದಿಲ್ಲ. ಅವು ಅರ್ಥಪೂರ್ಣವಾಗಿರುತ್ತವೆಂದು ನಿಶ್ಚಿತವಾಗಿ ಹೇಳಬಹುದು. ಈ ಸಂಕೇತಗಳನ್ನು ಅರ್ಥವಿಸುವ ಪರಂಪರೆ ನಷ್ಟವಾಗಿರುವದರಿಂದ ನಮಗೆ ಅವುಗಳ ಅರ್ಥ ಮಸುಕಾಗಿಬಿಟ್ಟಿದೆ. ಶಿವನಿಗೆ ಮೂರನೆಯ ಉರಿಗಣ್ಣು ಯಾಕೆಂಬುದನ್ನು ಯಾರೂ ತಿಳಿಸಿ ಹೇಳಿದಂತೆ ಕಾಣುವದಿಲ್ಲ. ಅದರಂತೆ, ಶಿವನ ತಲೆಯಲ್ಲಿಯ ಚಂದ್ರನ ಅರ್ಥವೇನೆಂಬುದು ಊಹೆಯ ವಿಷಯವಾಗಿದೆ. ಆರ್ಯರು ಶಿವನನ್ನು ಅಗ್ನಿಸ್ವರೂಪನಾಗಿ ಕಂಡರು. 'ರುದ್ರೋವಾ ಏಷ ಯದಗ್ನಿಃ' ಶಿವಸ್ವರೂಪದ ಇಂಥ ವರ್ಣನೆಗಳಿವೆ. ಆರ್ಯರಿಗೆ ಅಗ್ನಿಯಲ್ಲಿ ಶಿವನು ಕಂಡಂತೆ ಪತ್ತಿಜನರಿಗೆ ಶೆನ್, ಚೆನ್, ಕೆನ್-ಚಂದ್ರ ಇದು ಶಿವನ ಪ್ರತೀಕವಾಗಿ ಕಂಡಿರಬೇಕು. ಈ ಕಾರಣದಿಂದ ಅಗ್ನಿ ಮತ್ತು ಚಂದ್ರ ಇವೆರಡೂ ಸಂಕೇತರೂಪದಿಂದ ರುದ್ರ-ಶಿವ ರೂಪವನ್ನು ನಿರ್ಮಿಸಲು ಕೂಡಿರಬೇಕು. ಚಂದ್ರವಾರ ಇಂದಿಗೂ ಶಿವನ ವಾರವಾಗಿದೆ. ಸೋಮಪ್ರದೋಷ ಶೈವವ್ರತಗಳೊಳಗಿನ ಮಹತ್ವದ ವ್ರತವಾಗಿದೆ. ಸೋಮವಾರ (ಚಂದ್ರ) ಶಿವನ ವಾರವಾಗಿರುವದು ನಿಷ್ಕಾರಣವಾಗಿಲ್ಲ.

ರುದ್ರನೆಂದರೆ ಉಗ್ರನೆಂದು ಆರ್ಯರ ಕಲ್ಪನೆ ಮತ್ತು ಅವನ ಉಗ್ರತೆಯನ್ನು ಕಡಿಮೆ ಮಾಡಲು ಶಿವ ಎಂಬ ಮಂಗಲಕಾರಕ ವಿಶೇಷಣವನ್ನು ಜೋಡಿಸಿದರು ಎಂದು ತಿಳುವಳಿಕೆಯಿದೆ. ಆದರೆ, ಶಿವಶಬ್ದದ ರಹಸ್ಯ ಭಿನ್ನವಾಗಿದೆ. ಶಿವ-ಕುಲದ ಎಲ್ಲ ಶಬ್ದಗಳನ್ನು (cognates) ಲಕ್ಷ್ಯದಲ್ಲಿಟ್ಟುಕೊಂಡರೆ ಈ ರಹಸ್ಯದ ಮೇಲೆ ಬೆಳಕು ಬೀಳಬಹುದು ಶಿನ್, ಇಲ್ಲವೆ ಶೆನ್ ಈ ಶಬ್ದ ಚೆನ್ ಮತ್ತು ಕೆನ್ ಎಂಬ ರೂಪಗಳಲ್ಲಿ ಕೂಡ ಪತ್ತಿಜನರ ವಿವಿಧ ಭಾಷೆಗಳಲ್ಲಿ ಉಪಯುಕ್ತವಾಗುತ್ತಿದೆ. ಶೆನ್, ಚೆನ್, ಕೆನ್ ಈ ಮೂರು ಶಬ್ದಗಳ ಮೂಲ ಅರ್ಥ ಕೆಂಪು ಎಂದೇ ಆಗುತ್ತದೆ. ಕನ್ನಡದ 'ಕೆಂಪು' ಶಬ್ದಕ್ಕೆ ಕೆನ್ ಮೂಲವಾಗಿದೆ. ಚೆನ್ ಇಲ್ಲವೆ ಚೆನ್‌ಗಳಿಂದ ನಿಷ್ಪನ್ನವಾದ ಅನೇಕ ಶಬ್ದಗಳು ಕನ್ನಡದಲ್ಲಿವೆ. ಚೆನ್ನ ಇದರ ಅರ್ಥ ಚಲುವ ಎಂದಿದೆ. ನನಗನಿಸುವ ಮಟ್ಟಿಗೆ ಮರಾಠಿಯ 'ಛಾನ' ಶಬ್ದ ಇದರದೇ ರೂಪವಾಗಿರಬೇಕು. ಆಧನಿಕ ಮರಾಠಿಯಲ್ಲಿಯ ಈ ಶಬ್ದ ಹಳೆಯ ಮರಾಠಿಯಲ್ಲಿ

'ಚಾಂಗ' ರೂಪದಲ್ಲಿ ಉಪಯುಕ್ತವಾಗುತ್ತಿತ್ತು. ಮಹಾನುಭಾವ ಸಾಹಿತ್ಯ ಮತ್ತು ಜ್ಞಾನೇಶ್ವರಿಗಳಲ್ಲಿ 'ಚಾಂಗ' ಶಬ್ದವು ಹೆಜ್ಜೆಹೆಜ್ಜೆಗೆ ಸಿಗುವಂಥದಾಗಿದೆ. ಮಹಾರಾಷ್ಟ್ರ ಶಬ್ದಕೋಶದಲ್ಲಿ 'ಚಾಂಗ' ಶಬ್ದದ ಸಂಬಂಧವನ್ನು ಕನ್ನಡದ 'ಚೆನ್ನ'ದೊಡನೆ ಹಚ್ಚುತ್ತಾರೆ. ಆದರೆ, 'ಛಾನ' ಶಬ್ದದ ಮೂಲ ಮಾತ್ರ ಅವರಿಗೆ ಅರಬೀ ಭಾಷೆಯಲ್ಲಿ ಕಾಣುತ್ತದೆ. ಅದೇನೇ ಇದ್ದರೂ 'ಚಾಂಗ' ಶಬ್ದವಾದರೂ 'ಚೆನ್ನ' ಶಬ್ದದಿಂದ ಬಂದುದ್ದು ಎಂಬುದರಲ್ಲಿ ಸಂಶಯವಿಲ್ಲ. ಚೆನ್ನ ಎಂದರೆ 'ಒಳ್ಳೆಯ' ಎಂದು ಅರ್ಥ ವ್ಯವಹಾರದಲ್ಲಿದ್ದು ಅದರ ಮೂಲ ಅರ್ಥ ಕೆಂಪು ಎಂದಾಗುತ್ತದೆ.

ಆರ್ಯರು ಮತ್ತು ಪತ್ತಿಜನರು ಇವರ ದೃಷ್ಟಿಕೋನದಲ್ಲಿಯ ಒಂದು ವಿಶೇಷ ಅಂಶ ಇಲ್ಲಿ ಸ್ಪಷ್ಟವಾಗುತ್ತದೆ. ಆರ್ಯರಿಗೆ ಬಿಳಿಯ ಬಣ್ಣ ಪ್ರಿಯವಾಗಿದ್ದರೆ ಪತ್ತಿಜನರಿಗೆ ಕೆಂಪು ಪ್ರಿಯ. ಗೌರಿ ಇವಳು ಆರ್ಯರ ಸೌಂದರ್ಯ ದೇವತೆ. ಗೌರವರ್ಣವಿದ್ದವಳು ಗೌರಿ. ಗೌರವರ್ಣ ಆರ್ಯರಿಗೆ ಸೌಂದರ್ಯದ ಲಕ್ಷಣವಾಗಿತ್ತು. ಶುಭ ಮತ್ತು ಶುಭ್ರ ಇವು ಒಂದೇ ಧಾತುವಿನಿಂದ ಹುಟ್ಟಿದ ಶಬ್ದಗಳು. ಆರ್ಯರಿಗೆ ಶುಭ್ರ ಶುಭಸೂಚಕವಾಗಿತ್ತು. ಆದ್ದರಿಂದ ಆರ್ಯರ ವರ್ಣನೆಯಲ್ಲಿ ಶಿವ ಕೂಡ ಕರ್ಪೂರಧವಲ 'ಗೌರಾಂಗ'ನಾದ. ಆದರೆ, ರುದ್ರಾಧ್ಯಾಯದ ವರ್ಣನೆಯಿಂದ ಮುಖ್ಯವಾಗಿ ಇವನು ಯಾವ ಜನಾಂಗದ ದೇವತೆಯೆಂಬುದು ಗೊತ್ತಾಗುತ್ತದೆ. 'ಪತ್ತೀನಾಂ ಪತಿ' (ರುದ್ರ). ಶಿವ ಮೂಲದಲ್ಲಿ ಗೌರಾಂಗನಲ್ಲ, ಯಾಕಂದರೆ ಶಿವ ಎಂದರೆ ಕೆಂಪು ಎಂಬ ಅರ್ಥವಿದೆ. ಆಧುನಿಕಶಾಸ್ತ್ರಜ್ಞರು 'ರುದ್ರ' ಶಬ್ದಕ್ಕೂ ಕೆಂಪು ಎಂಬ ಅರ್ಥವನ್ನೇ ಕೊಟ್ಟಿದ್ದಾರೆ. 'ಒಳ್ಳೆಯವನಾಗಿದ್ದಾನೆ' ಎನ್ನುವದಕ್ಕೆ 'ಚೆನ್ನಾಗಿದ್ದಾನೆ' ಎನ್ನುವದು ಪರ್ಯಾಯವಾಗಿದೆ. ಚೆನ್ನ ಮತ್ತು ಕೆನ್ನ ಇವು ಎರಡೂ ಒಂದೇ ಶಬ್ದಗಳು. 'ಚೆನ್ನಾಗಿದ್ದಾನೆ' ಎಂಬುದರ ಅರ್ಥ ಕೆಂಪಾಗಿದ್ದಾನೆ, ರಕ್ತವರ್ಣದವನು ಎಂದಾಗುತ್ತದೆ. ಪತ್ತಿಜನರಿಗೆ ಸೌಂದರ್ಯ ಕೆಂಪುಬಣ್ಣದಲ್ಲಿ ತುಂಬಿಕೊಂಡಂತೆ ಕಾಣುತ್ತಿತ್ತು. ಲಕ್ಷ್ಮಿಯ ಸೌಂದರ್ಯವನ್ನು ಬಣ್ಣಿಸುವಾಗ 'ತಪ್ತ ಕಾಂಚನ ಸನ್ನಿಭಾಂ' ಮತ್ತು 'ಸೂರ್ಯಾಭಾಂ', 'ಚಂದ್ರಾಭಾಂ' ಎಂದು ಹೇಳಲಾಗಿದೆ, ಕನ್ನಡದಲ್ಲಿ ಹುಡುಗಿಯ ಚೆಲುವನ್ನು ಹೇಳುವಾಗ 'ಕೆಂಪಾಗಿದ್ದಾಳೆ', 'ಗೋಧಿಯ ಬಣ್ಣ ಅವಳದು' ಎಂದು ಇಂದಿಗೂ ಹೇಳುತ್ತಾರೆ. ಅದೇ ಬ್ರಾಹ್ಮಣರಲ್ಲಿ 'ಬೆಳ್ಳಗಿದ್ದಾಳೆ' ಎಂದು ಹೇಳುತ್ತಾರೆ. ಇದರಿಂದ ಇವರಿಬ್ಬರ ಸೌಂದರ್ಯ ದೃಷ್ಟಿಯಲ್ಲಿಯ ಅಂತರ ಗೊತ್ತಾಗುತ್ತದೆ. 'ಛಾನ', 'ಚಾಂಗ' ಅಂದರೆ 'ಕೆಂಪು' ಎಂಬ ಅರ್ಥ ಈಗ ನಿಶ್ಚಿತವಾದಂತಾಯಿತು. ಸುಂದರ, ಶುಭಕಾರಕ ಎಂದರೆ ಚಂದ, ಅದೇ ಕೆಂಪು, ಇದೇ ಅರ್ಥ ಶಿವ ಶಬ್ದದಲ್ಲಿ ಸಮಾವಿಷ್ಟವಾಗಿದೆ. ಹೊರಗಿನಿಂದ ಅದಕ್ಕೆ ಮಂಗಲಕಾರಕ ಅರ್ಥವನ್ನು ಅಂಟಿಸುವ ಅಗತ್ಯವಿಲ್ಲ. ಆದರೆ, ಮೂಲದ ಅರ್ಥ ಅದೇ ಆಗಿದೆ.

ಶಿವದರ್ಶನವಾಗುವದೆಂದರೆ ಧಾತ್ವರ್ಥದ ಪ್ರಕಾರ ಕೆಂಪು ಕಾಣುವದು. ಧ್ಯಾನರತ ಯೋಗಿಜನರಿಗೆ ಜ್ಯೋತಿಃಸ್ವರೂಪದಲ್ಲಿ ಆಗುವ ದರ್ಶನಕ್ಕೆ ಶಿವ ಸಾಕ್ಷಾತ್ಕಾರ ಎಂದು ಹೇಳುವ ನಂಬಿಕೆಯ ಮಾತಿದೆ. ಒಳಗಣ್ಣಿಗೆ ತೋರುವ ಈ ಸಾಕ್ಷಾತ್ಕಾರದಂತೆ ಹೊರಗಣ್ಣಿಗೂ ಕಾಣುವ ದರ್ಶನದಲ್ಲಿಯೂ ವಿಚಿತ್ರ ಪ್ರಕಾರಗಳಿವೆ. ಸೃಷ್ಟ ವಸ್ತುಗಳಲ್ಲಿ ಕೆಂಪುಬಣ್ಣದ ಪದಾರ್ಥ ವಿಶೇಷಗಳು ಅವರಿಗೆ ಹೆಚ್ಚು ಪ್ರಿಯವಾಗುತ್ತವೆ. 'ಸುವರ್ಣ' ಇದು ಇಂಥದೇ ಒಂದು ವಸ್ತು. ಸುವರ್ಣಕ್ಕೆ ಕನ್ನಡದಲ್ಲಿ ಚಿನ್ನ ಎಂದು ಹೆಸರಿದೆ; ಇದು ಚಿನ್-ಶಿನ್ ವರ್ಗದ ಶಬ್ದ. ನರಿಯ ಮುಖ ಕಾಣುವದು ಶುಭದಾಯಕ ಎಂಬ ಹಳೆಯ ತಿಳುವಳಿಕೆಯೊಂದಿದೆ. ನರಿ ಎಂದರೆ ಈ ರೂಢಿಯಲ್ಲಿಯ ರಹಸ್ಯ ಗೊತ್ತಾಗುವದಿಲ್ಲ. ನರಿಗೆ ಜಂಬುಕ ಅಥವಾ ಶಂಬುಕ ಎಂಬೆರಡು ಪರ್ಯಾಯ ಶಬ್ದಗಳಿವೆ. ಶಿವ ಎಂಬುದರ ಅರ್ಥ ಕೂಡ ನರಿ ಎಂಬುದೇ. ಅದಕ್ಕಾಗಿ ನರಿಯು ಕಂಡರೆ ಶುಭ (ಕೆಂಪು) ದರ್ಶನ. ಜಂಬುಕೇಶ್ವರ ಹೆಸರಿನ ಅನೇಕ ಶಿವಾಲಯಗಳಿವೆ. ಶಂಬು (ಶಂಭು) ಮತ್ತು ಜಂಬು ತುಲನೀಯವಾದ ಶಬ್ದಗಳಾಗಿವೆ. ಗಣಪತಿ ಶಿವಪುತ್ರನೆಂಬುದು ಸುವಿಖ್ಯಾತವಾಗಿದೆ. ಗಣಪತಿಯ ಮೈಗೆ ಸಿಂಧೂರದ ಲೇಪ ಯಾಕೆಂಬುದರ ರಹಸ್ಯ ಇಲ್ಲಿ ಗೊತ್ತಾಗುತ್ತದೆ. ವೇದಗಳಲ್ಲಿ 'ಮರುತ'ರನ್ನು 'ರುದ್ರೀಯ', 'ರುದ್ರಪುತ್ರ'ರೆಂದು ಕರೆದಿದ್ದಾರೆ. ನಾರದ ಪುರಾಣದ ಪೂರ್ವಭಾಗದಲ್ಲಿ (೭೯-೩೫೩) ಮಾರುತಿಯನ್ನು 'ರುದ್ರಾಂಶ' ಎಂದು ಬಣ್ಣಿಸಿದ್ದಾರೆ. ಮಾರುತಿ ರುದ್ರಪುತ್ರನೆಂದು ಹೇಳಲೆಂದೇ ಮಹಾರಾಷ್ಟ್ರದಲ್ಲಿ ಅವನ ಮೈಗೆ ಸಿಂಧೂರವನ್ನು ಬಳಿಯುತ್ತಿರಲಿಕ್ಕಿಲ್ಲವಷ್ಟೇ?

ವಿಭೀಷಣ ಕೃತವೆಂದು ಪ್ರಸಿದ್ಧವಾಗಿರುವ 'ಹನುಮತ್‌ಸ್ತೋತ್ರ'ದಲ್ಲಿ 'ವಡವಾನಲ ಹನುಮಾನ್ ದೇವತಾ', 'ಮಹಾವೀರ ರುದ್ರಾವತಾರ' ಎಂಬ ವಿಶೇಷಣಗಳಿವೆ. ಮಾರುತಿಯ ಅಭಿಷೇಕ ಮಾಡುವಾಗ ರುದ್ರಾಧ್ಯಾಯದಲ್ಲಿನ ಮಂತ್ರಗಳನ್ನು ಪಠಿಸುವ ರೂಢಿಯಿದೆ. ಸಮರ್ಥ ರಾಮದಾಸರ "ಭೀಮರೂಪೀ ಮಹಾರುದ್ರಾ" ಎಂಬ ಸ್ತೋತ್ರ ತುಂಬ ಪ್ರಸಿದ್ಧವಾಗಿದೆ. ಇಲ್ಲಿಯ 'ಮಹಾರುದ್ರಾ' ಎಂಬ ಶಬ್ದ ವಿಚಾರಣೀಯ. 'ಕಾಲಾಗ್ನಿ', 'ಕಾಲರುದ್ರಾಗ್ನಿ' ಮೊದಲಾದ ವಿಶೇಷಣಗಳೂ ಕೂಡ ವಿಚಾರಾರ್ಹವಾಗಿವೆ. ಸಮರ್ಥ ರಾಮದಾಸರ ವರ್ಣನೆಯಲ್ಲಿ ವೇದಕಾಲದಿಂದ ವರ್ಣಿತವಾಗುತ್ತ ಬಂದ 'ಶಿವರುದ್ರ'ದಲ್ಲಿಯ ಮೂಲ ಕೆಂಪು ಅರ್ಥದ ಪೂರ್ಣ ಸಾಕ್ಷಾತ್ಕಾರವಿದೆ. "ಅಸೌಯಃ ತಾಮ್ರ ಅರುಣ ಉತ ಬಭ್ರುಃ" ಎಂದು ಹೇಳಿ ಮುಂದೆ ಉಪಯುಕ್ತವಾಗುವ ಮಂಗಲ ಶಬ್ದ 'ಶಿವ' ಶಬ್ದದ ಅರ್ಥವನ್ನು ವಿವರಿಸುವ ಭಾಷ್ಯವಾಗುತ್ತದೆ. ಶಿವ ಅಂದರೆ ಕೆಂಪು. ಈ ಕೆಂಪು ಆಕಸ್ಮಿಕವಾಗಿ ಕಂಡರೆ ಶುಭಸೂಚಕ, ಮಂಗಲದಾಯಕವೆಂಬ ನಂಬಿಕೆಯಿದೆ. ಚಂದ್ರನಂತೆ 'ಶಿವ' ಶಬ್ದ 'ಶಿನ್', ಚಿನ್' ವರ್ಗದ ಶಬ್ದವಾಗಿದ್ದರೆ ಶಿವ ಪತ್ತಿಜನರ ಮೂಲದೇವತೆ ಎಂಬ ಮಾತು ಸಿದ್ಧವಾಗುತ್ತದೆ.

ಪತ್ತಿಜನರ ಆತ್ಮೀಯ ದೇವತೆ ಶಿವನಾಗಿದ್ದನೆಂದು ವೈದಿಕಋಷಿಗಳು 'ಪತ್ತೀನಾಂ ಪತಿ' ಎಂದು ಹಾಡಿದರೆಂಬುದರಲ್ಲಿ ಸಂಶಯವಿಲ್ಲ. ಪತ್ತಿಜನರನ್ನು ಮುಂದೆ 'ಹಟ್ಟಿ' ಇಲ್ಲವೆ ಹಟ್ಟಿಗಾರರೆಂದು ಗುರುತಿಸಲಾಗುತ್ತಿತ್ತು. ಇದರಿಂದ ದೇವತೆಯ ನಾಮಾಂತರವೂ ಆಗಿದ್ದರೆ ಆಶ್ಚರ್ಯವಿಲ್ಲ. ಪತ್ತಿಗಳ ಪತಿ, ಅದರಂತೆ ಹಟ್ಟಿಗಳ ಪತಿಯಾದವನು ಹಾಟಕೇಶ್ವರನಾದದ್ದು ಸಹಜವಾಗಿದೆ. ಹಾಟಕೇಶ್ವರನ ಕ್ಷೇತ್ರಗಳು ದಕ್ಷಿಣಾಪಥದಲ್ಲಿ ವಿಪುಲವಾಗಿವೆ. ಗುಜರಾತದ ವಡನಗರದಲ್ಲಿ ಹಾಟಕೇಶ್ವರನ ಪ್ರಾಚೀನ ದೇವಸ್ಥಾನವಿದೆ. ಶ್ರೀಶೈಲದ ಮಲ್ಲಿನಾಥನಿಗೂ ಹಾಟಕೇಶ್ವರ ಎಂಬ ಹೆಸರಿರುವದನ್ನು ಈ ಮೊದಲೇ ಹೇಳಲಾಗಿದೆ. ಪೇಶ್ವೆಯವರ ದಪ್ತರುಗಳಲ್ಲಿ ಗೋಕರ್ಣವನ್ನು ಹಾಟಕೇಶ್ವರನೆಂದು ಕರೆದಿದ್ದಾರೆ. ಈ ಪ್ರದೇಶಕ್ಕೆ ಗೋಪರಾಷ್ಟ್ರ ಇಲ್ಲವೆ ಗೋರಾಷ್ಟ್ರ ಎಂಬ ಹೆಸರು ಕೆಲಕಾಲದ ವರೆಗೆ ಇತ್ತು. ಗೋವಾ ಎಂಬ ಹೆಸರಿನ ಊರು ಗೋಕರ್ಣದ ಭಾಗದಲ್ಲಿದೆ. ನಾಸಿಕದ ಸುತ್ತುಮುತ್ತಲಿನ ಪ್ರದೇಶಕ್ಕೆ ಮಹಾಭಾರತದ ಕಾಲಕ್ಕೆ ಗೋಪರಾಷ್ಟ್ರವೆಂದು ಹೆಸರಿತ್ತು. ಈ ಭಾಗದ ಗೋದಾನದಿ ಪ್ರಾಚೀನ ಗೋಪರಾಷ್ಟ್ರದ ಸಾಕ್ಷಿಯಾಗಿದೆ. (ವೈದ್ಯಕೃತ ಮಹಾಭಾರತದ ಉಪಸಂಹಾರ, ನಕ್ಷೆಗಳನ್ನು ನೋಡಬೇಕು. ೧೯೧೮) ಗೋದಾನದಿ, ಗೋಪರಾಷ್ಟ್ರ ಮತ್ತು ತ್ರ್ಯಂಬಕೇಶ್ವರನಿಗಿರುವ ಹಾಟಕೇಶ್ವರನೆಂಬ ಪರ್ಯಾಯ ನಾಮ ಈ ಮೂರೂ ಸಂಗತಿಗಳು ಈ ಭಾಗದಲ್ಲಿಯ ಪ್ರಾಚೀನ ಹಟ್ಟಿಕಾರರ ವಸತಿ ಸ್ಥಾನಕ್ಕೆ ಸಾಕ್ಷಿಯಾಗಿವೆ.

ವರ್‍ಹಾಟ (ಮರಹಟ್ಟ) ಈ ಹೆಸರು ಹಟ್ಟಿಕಾರರಿಂದ ಬಂದಿರಬೇಕು. ಈ ಮೊದಲು ತ್ರ್ಯಂಬಕೇಶ್ವರ-ಹಾಟಕೇಶ್ವರ ಮಾಡಿದ ಸಮೀಕರಣ ಈ ವಿವೇಚನೆಗೆ ಬಲ ನೀಡುತ್ತವೆ. ಹಟ್ಟಿಕಾರರು ಒಂದು ಕಾಲಕ್ಕೆ ಪ್ರಮುಖವಾಗಿ ವಾಸಿಸುತ್ತಿದ್ದರೆಂದು ಈ ಪ್ರಾಂತಕ್ಕೆ ಹಾಟಕ ಎಂಬ ಹೆಸರು ಪ್ರಾಪ್ತವಾಗಿರಬೇಕೆಂದು ಹೇಳುವ ಆವಶ್ಯಕತೆ ಇಲ್ಲ. ಹಿಂದೆ ಹೇಳಿರುವಂತೆ ರಾಮದಾಸರ ಒಂದು ಆರತಿ ಹಾಡಿನಲ್ಲಿ ವರ್ಣಿತವಾದ 'ಹಾಟಕ' ದೇಶವೆಂದರೆ ಇದೇ ಆಗಿದೆ. ನಾಶಿಕ, ಖಾನದೇಶಗಳಲ್ಲಿಯ ಕಾನಡ ಗೌಳಿಗಳ ಬಗ್ಗೆ ವಿವೇಚನೆ ಹಿಂದಿನ ಪ್ರಕರಣದಲ್ಲಿ ಬಂದಿದೆ. ಈಗ ಆ ಭಾಗದಲ್ಲಿ ವೀರಗಲ್ಲುಗಳ ಬಗ್ಗೆ ಇನ್ನೂ ಒಂದೆರಡು ಮಾತುಗಳನ್ನು ಹೇಳುವದು ಅಪ್ರಸ್ತುತವಾಗಲಾರದು. ವೀರಗಲ್ಲು ಪ್ರಾಚೀನ ಹಟ್ಟಿಜನರ ವೈಶಿಷ್ಟ್ಯವಾಗಿದೆ. ಈ ರೀತಿಯ ಸ್ಮಾರಕಶಿಲೆಗಳು ತಮಿಳು ಅಥವಾ ತೆಲುಗಿನಲ್ಲಿ ಇಲ್ಲ. ಶ್ರೀ. ಪಿ. ಟಿ. ಶ್ರೀನಿವಾಸ ಅಯ್ಯಂಗಾರ್ ಮತ್ತು ಡಾ।। ಕೃಷ್ಣಸ್ವಾಮಿ ಅಯ್ಯಂಗಾರ್ ಇವರು ಅನುಕ್ರಮವಾಗಿ ಬರೆದ History of Tamils ಮತ್ತು Some Contributions of Southern India To Indian Culture ಎಂಬ ಗ್ರಂಥಗಳಲ್ಲಿ ವೀರಗಲ್ಲುಗಳು ವಡುಕರ ಅಂದರೆ ಕರ್ನಾಟ (ಮಹಾರಾಷ್ಟ್ರ) ಜನರ ವೈಶಿಷ್ಟ್ಯಗಳೆಂದು ಹಳೆಯ ತಮಿಳು ಸಾಹಿತ್ಯದಲ್ಲಿಯ ಆಧಾರಗಳ ಮೇಲಿಂದ ಹೇಳಿದ್ದಾರೆ. ಹಟ್ಟಿಕಾರ ಗೌಳಿಗಳ ವೈಶಿಷ್ಟ್ಯವನ್ನು ತೋರಿಸುವ ವೀರಗಲ್ಲುಗಳು ನಾಸಿಕ ಜಿಲ್ಹೆಯಲ್ಲಿ ವಿಪುಲವಾಗಿವೆಯೆಂದು ಅಲ್ಲಿಯ ಗೆಜೆಟಿಯರದಿಂದ ಗೊತ್ತಾಗುತ್ತದೆ. ಕರ್ನಾಟಕದಲ್ಲಂತೂ ಈ ಬಗೆಯ ಸ್ಮಾರಕ ಶಿಲೆಗಳಿಲ್ಲದ ಜಿಲ್ಲೆಯೇ ಇಲ್ಲ. ಈ ಶಿಲೆಯ ಕೆಳಗೆ ಒಂದೆರಡು

ಸಾಲುಗಳನ್ನು ಮಾತ್ರ ಕೆತ್ತಿರುತ್ತಾರೆ. "...ತುರುವಂ ಮಗುಳ್ಚಿ ಪಗೆಯಂ ಕೊಂದು ಸಗ್ಗಮಂ ಸಂದೋನ್." ಇದು ಯಾರ ಸ್ಮಾರಕ ಶಿಲೆ ಮತ್ತು ಇದನ್ನು ನೆಡಿಸಿದ ಕಾರಣವೇನೆಂಬುದು ಇಂಥ ಕೊರೆದ ವಾಕ್ಯಗಳಿಂದ ಗೊತ್ತಾಗುತ್ತದೆ. ನಾಸಿಕ ಜಿಲ್ಲೆಯಲ್ಲಿಯ ಈ ಶಿಲೆಗಳು ಹಟ್ಟಿಕಾರ ವೀರರ ಧೈರ್ಯ-ಶೌರ್ಯ, ತ್ಯಾಗ ಮತ್ತು ಆತ್ಮಬಲಿದಾನದ ಅಮರ ಸ್ಮಾರಕಗಳಾಗಿವೆ. ಈ ವೀರರ ಜೊತೆಗೆ ಎಷ್ಟೋ ಕಡೆಗೆ ಅವರ ಹೆಂಡಂದಿರು ಸಹಗಮನ ಮಾಡಿರುತ್ತಾರೆ, ಅಂಥ ಸತಿಗಳ ಸ್ಮಾರಕಶಿಲೆಗಳು ಕರ್ನಾಟಕದಲ್ಲಿವೆ. ಇವುಗಳಿಗೆ 'ಮಾಸತಿ-ಕಲ್ಲು' ಎಂಬ ಸಂಜ್ಞೆಯಿದೆ. ಇಂಥ ಕೆಲವು ಕಡೆಗೆ ದೇವಿಯೆಂದು ತಿಳಿದು ಜಾತ್ರೆಯೂ ಕೂಡುತ್ತದೆ. ವೀರ (ದೇವ) ಪೂಜೆಯ ಈ ಪದ್ಧತಿ ಸ್ವಲ್ಪ ಭಿನ್ನವಾದ ರೀತಿಯಲ್ಲಿ ಧನಗರ-ಮರಾಠೆಯರಲ್ಲಿ ಪ್ರಚಲಿತವಿದೆ. ಸ್ಮಾರಕದ ಮೇಲೆ ಶಿವಲಿಂಗವನ್ನಿಟ್ಟು ದೇವಾಲಯಗಳನ್ನು ಕಟ್ಟಿದ್ದು ಕಾಣುತ್ತದೆ. ನಾಸಿಕ ಜಿಲ್ಲೆಯಲ್ಲಿಯ ವೀರಗಲ್ಲುಗಳು ಮತ್ತು ಖಾನದೇಶ, ನಾಸಿಕ, ನಗರ ಕಡೆಯಲ್ಲಿಯ ಕಾನಡ ಗೌಳಿಗಳು. ಈ ಸಂಗತಿಗಳ ಮೇಲಿಂದ ಈ ಭಾಗವೆಲ್ಲ ಹಟ್ಟಿಕಾರರ ತವರು ಮನೆಯೆಂದೇ ಕರೆದರೆ ಅನುಚಿತವಾಗಲಾರದು. ಆದ್ದರಿಂದ, ಇದಕ್ಕೆ ಹಾಟಕ ದೇಶವೆಂಬ ಹೆಸರು ಬಂದಿತು. ನಾಶಿಕ, ಖಾನದೇಶ ಈ ಭಾಗಗಳಲ್ಲಿ ಹಟ್ಟಿಕಾರರೇ ಪ್ರಮುಖ ಮತ್ತು ಪ್ರಬಲ ಜನಾಂಗವಾಗಿರಬೇಕು. ಆದ್ದರಿಂದ ಈ ಜನಾಂಗದ ಆರಾಧ್ಯದೇವತೆಗೆ 'ಹಾಟಕೇಶ್ವರ'ವೆಂದು ಹೆಸರು ಬಂದಿರುವ ಶಕ್ಯತೆ ಇದೆ.

ಈ ಸಂದರ್ಭದಲ್ಲಿ ಶಿವನ ಇನ್ನೊಂದು ಹೆಸರಿನ ಅರ್ಥದ ಮೇಲೆ ಹೊಸ ಬೆಳಕು ಬೀಳುತ್ತದೆ. ಕರ್ನಾಟಕದ ಹಳ್ಳಿಗಳಲ್ಲಿ ಅಲ್ಲಿಯ ಶಿಲಾಲೇಖದಿಂದ 'ಮೂಲಸ್ಥಾನ ಕಲ್ಲೇಶ್ವರ'ನೆಂಬ ಹೆಸರಿನ ದೇವಾಲಯಗಳು ಇರುವದು ಗೊತ್ತಾಗುತ್ತದೆ. 'ಕಲ್ಲಯ್ಯ' ಎಂಬ ಹೆಸರು ಕರ್ನಾಟಕದಲ್ಲಿ ಪ್ರಚಾರದಲ್ಲಿದೆ . ಕಲ್ಲು-ಪಾಷಾಣ, ಶಿಲೆ ಈ ಅರ್ಥ ಇಲ್ಲಿ ಇರಲಿಕ್ಕಿಲ್ಲ ಎಂದೆನಿಸುತ್ತದೆ. ಇದು ಸ್ವಯಂಭೂಸ್ಥಾನವೆಂದು ಅನೇಕ ಕಡೆಗೆ ಹೇಳಲಾಗಿದೆ. ಈ ಸ್ವಯಂಭೂ*-ಶಿವನ ಬಗೆಗೆ ಎಲ್ಲ ಕಡೆಗೂ ಸಾಮಾನ್ಯವಾದ ಒಂದು ಕತೆ ಹೇಳುತ್ತಾರೆ. 'ದನಗಾಹಿಗಳು ದನಗಳನ್ನು ಮೇಯಿಸಲು ಅಡವಿಗೆ ಹೋದಾಗ ಹುತ್ತದ ಬಳಿಯಲ್ಲಿ, ಇಲ್ಲವೆ ಒಂದು ಕಲ್ಲಿನ ಮೇಲೆ ಆವು ತೊರೆ ಬಿಟ್ಟು ಹಾಲಿನ ಧಾರೆ ಸುರಿಯುವದು; ಈ ಸಂಗತಿಯಿಂದ ಬೆರಗಾಗಿ ದನಗಾಹಿಗಳೋ, ಊರವರೋ ಕೂಡಿ ಆ ಸ್ಥಳದಲ್ಲಿ ಹುಡುಕುವದು, ಅಲ್ಲಿ ಸ್ವಯಂಭೂ ಶಿವನ ಜಾಗೃತ ಸ್ಥಾನ ದೊರೆಯುವದು–ಈ ರೀತಿಯ ದಂತಕತೆ ಇರುವ ದೇವಾಲಯಗಳು ಊರೂರಿಗೆ ಇವೆ. ಈ ಸ್ವಯಂಭೂ ಶಿವನ ಮತ್ತು ಹಾಲಿನ ಸಂಬಂಧ ಮಹತ್ವದ್ದಾಗಿದೆ. ಕಲ್-ಕಳ್ ಇದು ಕಂದಮಿಳ ವರ್ಗದಲ್ಲಿಯ ಪ್ರಾಚೀನ ಶಬ್ದವಾಗಿದೆ. ಇದು ರಸಾರ್ಥಕ ಶಬ್ದವಾಗಿದ್ದು 'ಪಾಲು' ಶಬ್ದದಂತೆ ಕ್ಷೀರವಾಚಕವಾಗಿದೆ. ಕಲ್ ಮೇಲಿಂದ ಕಲ್ಲೇಶ್ವರನೆಂದರೆ ಹಾಲಿನ ದೇವತೆ. ಹಟ್ಟಿಕಾರ ದೇವತೆಯನ್ನು ಸೂಚಿಸುವ ಇದು ಇನ್ನೊಂದು ಶಬ್ದವಾಗಿದೆ. ಕರ್ನಾಟಕ ಮತ್ತು ತಮಿಳುನಾಡಿನ ಪ್ರಾಚೀನ ಇತಿಹಾಸದಲ್ಲಿ 'ಕಳ್ಳರ್' 'ಕಳ್ವರ್' ಜನ ಎಂಬ ಹೆಸರಿನ ಒಂದು ರಾಜಮನೆತನವೂ ಇತ್ತೆಂಬುದಕ್ಕೆ ಆಧಾರಗಳಿವೆ,

ಶಿಲಾಲೇಖದಲ್ಲಿ ದೊರೆಯುವ "ಮೂಲಸ್ಥಾನ ಕಲ್ಲೇಶ್ವರ"ನ ಗುಡಿಗಳು ಗುಡ್ಡ-ಪರ್ವತಗಳ ಮೇಲಿದ್ದರೆ ಕಲ್ಲು ಎಂದರೆ ಶಿಲೆ ಎಂದು ಅರ್ಥಮಾಡಿಕೊಳ್ಳಬಹುದು. ಆದರೆ, ಬಳ್ಳಾರಿ, ವಿಜಾಪುರ ಭಾಗಗಳ ಶಿಲಾಲೇಖದಲ್ಲಿ ದೊರೆಯುವ ಕಲ್ಲೇಶ್ವರನ ಗುಡಿಗಳು ಬಯಲು ಪ್ರದೇಶದಲ್ಲಿವೆ. 'ಕಲ್ಲೇಶ್ವರ' ಹೆಸರಿನ ಬೇರೆ ರೂಪಗಳೂ ದೊರೆಯುತ್ತವೆ. 'ಕಲ್ಮೇಶ್ವರ' ಇಂಥ ರೂಪಗಳಲ್ಲಿ ಹೆಸರಿನ ಸಂಸ್ಕೃತೀಕರಣದ ಪ್ರಯತ್ನ ಕಾಣುತ್ತದೆ. ಕಲ್ಮೇಶ್ವರನಿಗೆ ಕಲ್ಲಿನಾಥನೆಂಬ ಹೆಸರು ವೀರಶೈವರ ವಚನಗಳಲ್ಲಿದೆ. ಹಳೆಯ ವೀರಶೈವ ಕಾವ್ಯದಲ್ಲಿ ಈ ಹೆಸರಿದೆ. ಕಲ್ಲೇಶ್ವರ, ಕಾಲೇಶ್ವರ, ಈ ಹೆಸರುಗಳನ್ನು ಇಡುವ ಪದ್ಧತಿ ದಕ್ಷಿಣದಲ್ಲಿದೆ. 'ಕಲ್ಲಯ್ಯ' ಈ ಹೆಸರು ವೀರಶೈವರಲ್ಲಿ ಬಹಳ ಪ್ರಚಾರದಲ್ಲಿದೆ. 'ಕಲ್ಲಪ್ಪ' ಈ ಹೆಸರು ಎಲ್ಲ ಜಾತಿಗಳಲ್ಲಿಯೂ ಸಿಗುತ್ತದೆ. 'ಕಲ್ಲ' ಶಬ್ದದ 'ಕಾಲ' 'ಕಾಳ'

---

* ಸ್ವಯಂಭೂ-ಎಂಬ ಪದಕ್ಕೆ 'ತನ್ನಿಂದ ತಾನೆ ಹುಟ್ಟಿದ್ದು' ಎಂದು ಅರ್ಥ. ಶಂಬಾ ಸಾಂಸ್ಕೃತಿಕಾರ್ಥದ ನೆಲೆಯಲ್ಲಿ ವ್ಯಾಖ್ಯಾನಿಸುವಾಗ ವಿಶಾಲಾರ್ಥ ಪಡೆದು ಪರಿಭಾಷೆಯಾಗುತ್ತದೆ. ಮೂಲ ಅರ್ಥದ ನೆಲೆ ವಿಸ್ತಾರಿತವಾಗುತ್ತದೆ (ಸಂ)

ರೂಪಗಳಾಗುತ್ತವೆ. ಕಾಲೇಶ್ವರ, ಕಾಳೇಶ್ವರ ಈ ಹೆಸರುಗಳು ಉಜ್ಜಯಿನಿಯ (ಮಹಾನ್) ಕಾಳೇಶ್ವರನ ನೆನಪು ತಂದುಕೊಡುತ್ತವೆ. ಈ ಕಾಲೇಶ್ವರ ಹಟ್ಟಿಕಾರರ ಕುಲದೇವರಾಗಿರುವ ಶಕ್ಯತೆ ಇದೆ.

ಇಂದೂರ ಮತ್ತು ಖಾನದೇಶ ಈ ಸೀಮೆಯಲ್ಲಿ ಪ್ರಾಚೀನ ಕಾಲದಲ್ಲಿ ಹಟ್ಟಿಕಾರರ ಶಾಖೆಯಲ್ಲಿಯ ಕಣ್ಣರೆಂಬವರ (ನಟ-ರಾಷ್ಟ್ರಿಕರಿಗೆ ಸಂಬಂಧಿಗಳು) ವಸಾಹತ್ತಿತ್ತು ಮತ್ತು ಖಾನದೇಶ ಈ ಹೆಸರು ಕಣ್ಣರಿಂದ ಬಂದಿರಬೇಕೆಂದು ಹಿಂದಿನ ಪ್ರಕರಣದಲ್ಲಿ ಹೇಳಲಾಗಿದೆ. 'Nattar (ನಾಟ್ಟರ್) the title of certain castes as 'ಕಳ್‌ರ್' etc. ಎಂದು ಎಡ್ಗರ್ ಥರ್ಸ್ಟನ್ ಹೇಳುತ್ತಾನೆ. 'ಕಣ್ಣ' ಇದು 'ಕಳ್ಳ' ಶಬ್ದದ ಮೂಲರೂಪವಿರಬೇಕು. ಕನ್ನಡದಲ್ಲಿ 'ಳ'ಕಾರ 'ಣ'ಕಾರವಾಗುತ್ತದೆ. (ಉದಾ: ಮುಳುಗು-ಮುಣುಗು, ಸರಪಳಿ-ಸರಪಣಿ ಇತ್ಯಾದಿ) ಇದರಿಂದ ಕಣ್ಣ ಜನರ ಹಳೆಯ ಹೆಸರು 'ಕಳ್ಳ' ಎಂದಿರಬೇಕೆಂದು ಸಿದ್ಧವಾಗುತ್ತದೆ. 'ಕಳ್ಳರ್' ಮತ್ತು 'ಕಳ್ವರ್' ಇವರ ಅಸ್ತಿತ್ವದ ಬಗ್ಗೆ ಹಿಂದೆ ಹೇಳಿದ್ದಾಗಿದೆ. 'ಕಳ್ವರ್', 'ಕಳಭ್ರರ್' ಈ ಹೆಸರಿನ ಮನೆತನಗಳು ಇತಿಹಾಸದಲ್ಲಿ ದಾಖಲಾಗಿವೆ.[೩೭] ವಾತಾಪಿಯ ಚಾಲುಕ್ಯರು ಕಳಭ್ರರನ್ನು ಸೋಲಿಸಿದರೆಂದು ಇತಿಹಾಸ ಹೇಳುತ್ತದೆ.

'ಕಳ್ಳ' ಇದು 'ಕಣ್ಣ'ದ ಹಳೆಯ ರೂಪವಿದ್ದು ಮುಂದೆ 'ಳ'ದ ಬದಲಾಗಿ 'ಣ'ಕಾರ ಬಂದು 'ಕಣ್ಣ' ರೂಪ ಸಿದ್ಧವಾಗಿದೆ. ಧಾರವಾಡ ಜಿಲ್ಲೆಯಲ್ಲಿ ಮತ್ತು ಮೈಸೂರು ಕಡೆಗೆ ಕಣ್ಣೇಶ್ವರನ ದೇವಾಲಯಗಳಿವೆ. ಕಣ್ಣೇಶ್ವರ ಹೆಸರಿನಿಂದ ಕೆಲವು ಸಂಶೋಧಕರಿಗೆ ಕಣ್ಣನ ಸಂಬಂಧವನ್ನು ಕೃಷ್ಣನೊಡನೆ ಜೋಡಿಸುವ ಮೋಹ ಉಂಟಾಯಿತು. ಕಣ್ಣೇಶ್ವರ ರೂಪಾಂತರಗೊಂಡು ಕೃಷ್ಣೇಶ್ವರನೂ ಆದ. ಆದರೆ, ಈ ಗೊಂದಲ ತಜ್ಞರ ಕಣ್ಣಿಗೆ ಬೀಳದೆ ಇರಲಿಲ್ಲ. ಕಣ್ಣನ ಸಂಸ್ಕೃತೀಕರಣ 'ಕರ್ಣ'ವಾಗಬಹುದೇ ಹೊರತು ಕೃಷ್ಣನಲ್ಲ. ಕೃಷ್ಣನಾಗಲಿಕ್ಕೆ 'ಕಣ್ಹ' ಎಂಬ ಮೂಲ ರೂಪವಿರಬೇಕು.[೩೮] ಕನ್ನ ಶಬ್ದದ ಕೃಷ್ಣನೊಡನೆ ಸಂಬಂಧವಿಲ್ಲವೆಂದು ಡಾ॥ ಲ್ಯುಡರ್ಸ್ ಸ್ಪಷ್ಟವಾಗಿ ವಿವರಿಸಿದ್ದಾರೆ.[೩೯] ಕನ್ನ (ಕಣ್ಣ) ಮತ್ತು ಕಣ್ಹ ಇವುಗಳ ಗೊಂದಲವಾದದ್ದರಿಂದಲೇ ಖಾನದೇಶ ಕೃಷ್ಣದೇಶವೆಂಬ ತಪ್ಪು ತಿಳುವಳಿಕೆಗೆ ಕಾರಣವಾಯಿತು. ಇರಲಿ. ಉಜ್ಜಯಿನಿಯ ಕಾಲೇಶ್ವರ ಈ ಭಾಗದಲ್ಲಿಯ ಅತಿ ಪುರಾತನ ಕಳವರ್-ಕಣ್ಣಜನರ ಅಸ್ತಿತ್ವವನ್ನು ಸೂಚಿಸುವ ದೇವತೆಯೆಂದು ಈ ವಿವೇಚನೆಯಿಂದ ಸಿದ್ಧವಾಗುತ್ತದೆ.

ಶಿವನು ವೇದಪೂರ್ವದ ಪತ್ತಿಜನರ ದೇವತೆಯೆಂಬುದು ಶಾಸ್ತ್ರಜ್ಞರಿಗೆ ಒಪ್ಪಿಗೆಯಾದ ಮಾತಾಗಿದೆ. ಆದರೆ, ಶಿವ ಮತ್ತು ಲಿಂಗ ಇವೆರಡೂ ಒಂದೇ ಎಂಬ ಕಲ್ಪನೆ ಇಂದಿಗೂ ಸಾರ್ವತ್ರಿಕವಾಗಿದೆ. ಮೊಹೆಂಜೊದಾರೋ, ಹರಪ್ಪಾ ಪ್ರದೇಶದಲ್ಲಿ ಸಿಗುವ ಲಿಂಗ ಮತ್ತು ಯೋನಿ ಪ್ರತೀಕಗಳ ಸಂಬಂಧವನ್ನು ಶೈವ-ಪಂಥದೊಂದಿಗೆ ಜೋಡಿಸುವ ಪ್ರಯತ್ನವನ್ನು ಅನೇಕ ವಿದ್ವಾಂಸರು ಮಾಡಿದ್ದಾರೆ. ಆದರೆ, ಇದರಲ್ಲಿ ವೈಚಾರಿಕ ಗೊಂದಲ ಇದೆ. ಮೂಲದಲ್ಲಿ ಈ ಪಂಥಗಳು ಭಿನ್ನವಾಗಿದ್ದು ಕಾಲಕ್ರಮದಲ್ಲಿ ಇವುಗಳ ಸಮನ್ವಯವಾಗಿದೆ. ಹರಿ ಮತ್ತು ಹರ ಇವರ ಸಮನ್ವಯ ಸಾಧಿಸಲು ಹರಿಹರ ದೇವತೆಯ ಪ್ರಚಾರವಾಯಿತು. ಅದೇ ರೀತಿ ಲಿಂಗ ಮತ್ತು ಶಿವ ಇವರ ಸಮನ್ವಯವೂ ಆಗಿರಬೇಕು. ವೇದಪೂರ್ವಕಾಲದಲ್ಲಿಯೇ ಇವು ಒಂದಾಗಿ ಇದ್ದಿದ್ದರೆ ವೇದದಲ್ಲಿ ಶಿವ, ರುದ್ರನ ವರ್ಣನೆ ಮಾಡುವಾಗ ಲಿಂಗರೂಪದ ಉಲ್ಲೇಖ ಇರಬೇಕಾಗಿತ್ತು. ಆದರೆ, ವೇದದಲ್ಲಿ ಆ ಬಗೆಯ ವರ್ಣನೆಯಿಲ್ಲ. ಪುರಾಣಗಳಲ್ಲಿ ಮಾತ್ರ ಇದರ ಉಲ್ಲೇಖವಿದೆ. ವೇದದಲ್ಲಿಯ "ಶಿಶ್ನೋದೇವಾಃ" (೭.೨೧.೫) ಈ ವಾಕ್ಯದಲ್ಲಿ ಲಿಂಗಪಂಥೀಯರ ಬಗ್ಗೆ ತಿರಸ್ಕಾರದ ಧ್ವನಿ ಇದೆ ಎಂದು ಆಧುನಿಕ ತಜ್ಞರ ಅಭಿಪ್ರಾಯವಿದೆ. ವೇದಗಳಲ್ಲಿ ರುದ್ರ-ಶಿವನ ಬಗ್ಗೆ ಸ್ವಲ್ಪದರೂ ಆತ್ಮೀಯತೆ ಕಂಡುಬರುತ್ತದೆ. ಆದರೆ, ಲಿಂಗಮಾಹಾತ್ಮ್ಯ ಪುರಾಣಕಾಲದ ವರೆಗೆ ತಲೆಯೆತ್ತಲಿಲ್ಲ. ಅದು ಗುಪ್ತವಾಗಿಯೇ ಉಳಿದಿತ್ತು. ಲಿಂಗ ಶಬ್ದದ ವ್ಯುತ್ಪತ್ತಿ ಸಂಸ್ಕೃತದಲ್ಲಿ ಸಿಗುವದಿಲ್ಲ. ಆ ಶಬ್ದ ಆಸ್ಟ್ರೋ-ಏಶಿಯಾಟಿಕ್ ಭಾಷೆಯೊಳಗಿನದೆಂದು ಕೆಲವು ಪಂಡಿತರ ಅಭಿಪ್ರಾಯವಿದೆ.[೪೦]

ಯಾವ ಭಾಷೆಯಿಂದ ಲಿಂಗಶಬ್ದ ಬಂದಿರಬಹುದೋ ಆ ಜನರಿಂದ ಈ ಪಂಥವನ್ನು ಎತ್ತಿಕೊಂಡಿರಬೇಕು. ಸಮನ್ವಯದಲ್ಲಿ ಹಿಂದೂಧರ್ಮಕ್ಕಿರುವ ಆಸಕ್ತಿಯನ್ನು ನೋಡಿದಾಗ ಬೇರೆಬೇರೆ ದೇವತೆಗಳ ಏಕೀಕರಣ

ಹೇಗಾಯಿತೆಂಬುದು ಕೂಡಲೆ ಲಕ್ಷ್ಯಕ್ಕೆ ಬರಬಹುದಾಗಿದೆ. ಕರ್ಣಾಟಕದಲ್ಲಿ ಶಿವನ ಆತ್ಯಂತಿಕ ವೀರಭಕ್ತರಿದ್ದಾರೆ. ಅವರಿಗೆ ವೀರಶೈವರೆಂದು ಹೆಸರು. ಆದರೆ, ಅವರಿಗೆ ಲಿಂಗವಂತರು ಎಂಬ ಇನ್ನೊಂದು ಹೆಸರೂ-ಇದೆ. ಒಂದು ವಿಶಿಷ್ಟ ಜನಾಂಗಕ್ಕೆ ಒಂದಕ್ಕಿಂತ ಹೆಚ್ಚು ಹೆಸರಿದ್ದರೆ ಅದರ ಹಿಂದಿನ ಕಾರಣ ಪರಂಪರೆಯನ್ನು ಅಭ್ಯಾಸ ಮಾಡಬೇಕಾಗುತ್ತದೆ. ಕಾರಣವಿಲ್ಲದೆ ಯಾವ ಸಂಗತಿಯೂ ರೂಢವಾಗಲಾರದು. ಈ ಪಂಥಕ್ಕೆ ರೂಢವಾದ ಎರಡು ಹೆಸರುಗಳು ಲಿಂಗಪಂಥ ಮತ್ತು ಶಿವಪಂಥ ಇವು ಬೇರೆ ಬೇರೆ ಪಂಥಗಳೆಂಬುದನ್ನು ಸೂಚಿಸುತ್ತವೆ. ಈ ಎರಡು ಪಂಥಗಳ ಸಮನ್ವಯವಾದ ನಂತರ ಈ ಜನಾಂಗಕ್ಕೆ ಎರಡೂ ಹೆಸರುಗಳು ಬಂದಿರಬೇಕು. ಈಗಿನ ವೀರಶೈವ ಅಥವಾ ಲಿಂಗಾಯತರಲ್ಲಿ ಎರಡು ಪ್ರತಿಸ್ಪರ್ಧಿಯಾದ ಪಕ್ಷಗಳಿವೆ. ಒಂದು ಪಕ್ಷ ಪಂಚಾಚಾರ್ಯರದು; ಇನ್ನೊಂದು ಶ್ರೀಬಸವ-ಅಲ್ಲಮಾದಿಗಳ ಶೂನ್ಯಸಿಂಹಾಸನದ ಪಂಥಕ್ಕೆ ಸೇರುತ್ತದೆ. ಮೊದಲನೆಯ ಪಕ್ಷದಲ್ಲಿ ಆರಾಧ್ಯ ಬ್ರಾಹ್ಮಣರಿದ್ದಾರೆ. ಅವರು ಕೆಲವು ಹೋಮಹವನಗಳನ್ನು ಮಾಡುತ್ತಾರೆ. ಎರಡನೆಯ ಪಕ್ಷದಲ್ಲಿ ವೈದಿಕ ಆಚಾರಗಳೆಲ್ಲ ವರ್ಜ್ಯವಾಗುತ್ತವೆ. ಹಳೆಯ ಗ್ರಂಥಗಳಲ್ಲಿ 'ಲಿಂಗಿನಃ' ಎಂಬವರ ಬಗ್ಗೆ ತೋರಿಸಿದ ತಿರಸ್ಕಾರ ಶೈವರ ಬಗ್ಗೆ ಇಲ್ಲ. ಹಾಗಿದ್ದಿದ್ದರೆ ವೇದಗಳಲ್ಲಿ ಆತ್ಮೀಯ ವರ್ಣನೆ ಇರುತ್ತಿದ್ದಿಲ್ಲ. ಭಾಗವತದಲ್ಲಿಯ ಶೈವಪಂಥದ ಬಗ್ಗೆ ಇರುವ ತಿರಸ್ಕಾರ ಲಿಂಗ ಮತ್ತು ಶಿವ ಇವರಿಬ್ಬರ ಐಕ್ಯವಾದ ನಂತರದ ಕಾಲದ್ದಿರಬೇಕು. ವೇದಗಳಲ್ಲಿ ರುದ್ರನ ಬಗ್ಗೆ ಇಂದ್ರ ಅಗ್ನಿಗಳ ಬಗ್ಗೆ ಇರುವ ಆತ್ಮೀಯತೆ ಅಷ್ಟೊಂದಾಗಿ ಕಾಣದಿದ್ದರೂ ಶಿಶ್ನದೇವನ ಬಗ್ಗೆ ಇರುವ ತಿರಸ್ಕಾರವೂ ಖಚಿತವಾಗಿ ಇಲ್ಲ.

ಆದರೆ, ಕಾಲಪ್ರವಾಹ ಮುಂದುವರಿದಂತೆ ನಾವು ಮೊದಲು ತಿರಸ್ಕಾರದಿಂದ ದೂರವಿಟ್ಟ ಸಂಗತಿಗಳನ್ನು ಸ್ವೀಕರಿಸಬೇಕಾದ ಪರಿಸ್ಥಿತಿ ಬರುತ್ತದೆ. ವೇದಕಾಲದಲ್ಲಿ ರುದ್ರಶಿವನನ್ನು ಹತ್ತಿರ ಕರೆದುಕೊಂಡು ಲಿಂಗಪಂಥವನ್ನು ದೂರವಿಡಲಾಯಿತು. ಶ್ವೇತಾಶ್ವತರೋಪನಿಷತ್ತಿನಲ್ಲಿ ರುದ್ರನ ಆತ್ಯಂತಿಕವಾದ ವರ್ಣನೆ ಇದೆ. ಆದರೂ ಆ ಕಾಲದ ವರೆಗೆ ಶಿವನನ್ನು ಲಿಂಗವೆಂದು ವ್ಯಕ್ತವಾಗಿ ಕರೆಯಲಿಲ್ಲ. ವೈದಿಕ ಸಾಹಿತ್ಯದಲ್ಲಿ ಶಿವ ಎಂಬ ಅರ್ಥದಲ್ಲಿ ಲಿಂಗ ಶಬ್ದ ಪ್ರಯುಕ್ತವಾಗಿಲ್ಲ. ಆದರೆ "ವಹ್ನೇರ್ಯಥಾ ಯೋನಿಗತಸ್ಯ ಮೂರ್ತಿಃ ನ ದೃಶ್ಯತೇ ನೈವ ಚ ಲಿಂಗನಾಶಃ[೪೧] ಈ ಶ್ಲೋಕದಲ್ಲಿ ಶ್ವೇತಾಶ್ವತರೋಪನಿಷತ್ತಿನ ಋಷಿಯು ಲಿಂಗ ಮತ್ತು ಯೋನಿ ಈ ಎರಡೂ ಶಬ್ದಗಳನ್ನು ಸೂಚಕವಾಗಿ ಸೊಗಸಿನಿಂದ ಉಪಯೋಗಿಸಿದ್ದಾನೆ. ಕಾಷ್ಠಗರ್ಭದಲ್ಲಿ ಸೂಕ್ಷ್ಮ ರೂಪದಲ್ಲಿರುವ ಅಗ್ನಿ ಕಣ್ಣಿಗೆ ಬೀಳದಿದ್ದರೂ ಲಿಂಗರೂಪದಲ್ಲಿ (ಸಂಕೇತ) ಇರುತ್ತಾನೆ. 'ಲಿಂಗಸ್ಯ-ಸೂಕ್ಷ್ಮ ರೂಪಸ್ಯ' ಎಂದು ಶಾಂಕರರು ತಮ್ಮ ಭಾಷ್ಯದಲ್ಲಿ ಲಿಂಗ ಶಬ್ದದ ಅರ್ಥವನ್ನು ಹೇಳಿದ್ದಾರೆ. ಶ್ವೇತಾಶ್ವತರೋಪನಿಷತ್ತಿನಲ್ಲಿಯ ಕಾಷ್ಠಯೋನಿ ಮತ್ತು ಅಗ್ನಿಲಿಂಗ ಈ ಶಬ್ದಯೋಜನೆಯಲ್ಲಿಯ ಕೌಶಲ್ಯ ಮಾರ್ಮಿಕವಾಗಿದೆ. ಆ ಕಾಲಕ್ಕೆ ಲಿಂಗಯೋನಿ ಪಂಥ (ಶಾಕ್ತಪಂಥ) ಅಸ್ತಿತ್ವದಲ್ಲಿತ್ತೆಂದು ಈ ಉಲ್ಲೇಖದಿಂದ ತಿಳಿದು ಬರುತ್ತದೆ. ಆದರೆ, ಆ ಪಂಥ ಇನ್ನೂ ಶಿಷ್ಟ ಮಾನ್ಯವಾಗಿರಲಿಲ್ಲ. ಶುದ್ಧ ಶೈವಪಂಥೀಯರಿಗೆ ಲಿಂಗರೂಪದಲ್ಲಿಯ ಶಿವನ ಆರಾಧನೆ ಒಪ್ಪಿಗೆಯಾಗಿರಲಿಕ್ಕಿಲ್ಲ. ಆದಕ್ಕಾಗಿಯೇ ಶಿವನನ್ನು ಲಿಂಗವೆಂದು ಕರೆಯುವ ಸಾಹಸವನ್ನು ಈ ಉಪನಿಷತ್ತಿನ ಋಷಿ ಮಾಡಲಿಲ್ಲ. 'ಅಂತಃ ಶಾಕ್ತಃ ಬಹಿಃ ಶೈವಃ' ಈ ಪ್ರಕಾರ ಶಂಕರಾಚಾರ್ಯರ ಕಾಲದ ವರೆಗೆ ಇತ್ತು. ಯೋನಿಲಿಂಗ ಪಂಥವೆಂದರೆ ಗೌಣಮಾರ್ಗ, ವಾಮಮಾರ್ಗ ಎಂಬ ತಿಳುವಳಿಕೆ ಆ ಕಾಲದಲ್ಲಷ್ಟೇ ಏಕೆ ಈಗಲೂ ಪ್ರಚಾರದಲ್ಲಿದೆ. ಆದರೆ ಯೋನಿಲಿಂಗಪಂಥ ಕ್ರಮವಾಗಿ ಮೇಲೇರುತ್ತ ಬಂದಿತು. ಆಗ ಶಿವನೇ ಪ್ರತ್ಯಕ್ಷ ಲಿಂಗವೆಂದು ಹೇಳಿ ಈ ಪಂಥವನ್ನು ಶಿಷ್ಟಮಾನ್ಯವನ್ನಾಗಿ ಮಾಡಲು ಪ್ರಯತ್ನಗಳು ನಡೆದವು.

ಮರಾಠೆಗಳು ಮೂಲತಃ ಶಿವನ ಭಕ್ತರು. ಇವರ ಪ್ರೀತಿಯ ಆರಾಧ್ಯ ದೇವತೆಯೆಂದರೆ ಖಂಡೋಬಾ. 'ಖಂಡೋಬಾ' ಎಂಬುದು ಈ ದೇವತೆಯ ಅರ್ವಾಚೀನ ಹೆಸರಾಗಿದೆ; ಈ ದೇವತೆಯ ಪ್ರಾಚೀನವಾದ ಹೆಸರು 'ಮಲ್ಹಾರಿ- ಮಾರ್ತಂಡ' ಎಂದಿದೆ. ಖಂಡೋಬನ ಜಾತ್ರೆಯಲ್ಲಿ 'ಏಳುಕೋಟಿ'ಯೊಡನೆ 'ಹರ ಹರ ಮಹಾದೇವ', 'ಜಯ ಮಲ್ಹಾರಿ' ಎಂಬ ಗರ್ಜನೆಗಳು ಕೇಳಬರುತ್ತವೆ. ಮಹಾರಾಷ್ಟ್ರದ ಪ್ರಾಚೀನ ಸಾಹಿತ್ಯದಲ್ಲಿ 'ಖಂಡೋಬಾ'

ಎಂಬ ಹೆಸರು ಸಿಗುವದಿಲ್ಲ. 'ಮಲ್ಹಾರಿ' ಎಂಬ ಶಬ್ದ ಮಹಾನುಭಾವ ಸಾಹಿತ್ಯದಲ್ಲಿದೆ. ಮಹಾರಾಷ್ಟ್ರದಲ್ಲಿ ಈ ದೇವತೆಗೆ ಮಲ್ಹಾರಿ, ಮೈರಾಳ. ಮಲ್ಹಾರಿ-ಮಾರ್ತಂಡ, ಮ್ಹಾಳಸಾ, ಮಾರ್ತಂಡ ಮೊದಲಾದ ವಿವಿಧ ಹೆಸರುಗಳಿವೆ.

ಖಂಡೋಬಾ-ಮಲ್ಹಾರಿ ಇದು ಶಿವನದೇ ಇನ್ನೊಂದು ರೂಪವೆಂದು ಭಾವಿಕ ಜನರು ನಂಬುತ್ತಾರೆ. ಆದರೆ, ಖಂಡೋಬನ ಮೂರ್ತಿಯನ್ನು ನೋಡಿದರೆ, ಅದರಲ್ಲಿ ಶಿವನ ಸ್ವರೂಪಕ್ಕೆ ಸಂಬಂಧಿಸಿದ ಮಹತ್ವದ ಎರಡು ವಸ್ತುಗಳು ಇಲ್ಲ. ಶಿವನ ವಾಹನ ನಂದಿ, ಆದರೆ ಖಂಡೋಬನ ವಾಹನ ಕುದುರೆ! ಶಿವ ತ್ರಿಶೂಲಧಾರಿ, ಖಂಡೋಬ ಖಡ್ಗಧಾರಿ. ಖಂಡೋಬನು ವೀರರ ದೇವತೆಯೆಂದು ಪ್ರತೀತಿ ಇದೆ. ಶಿವ ಭೋಳೇಶಂಕರ, ಕೇವಲ ವರದಾನಕ್ಕೆ ಮಾತ್ರ ಪ್ರಖ್ಯಾತನಾದ ದೇವತೆ. ಅಲ್ಲದೆ, ಶಿವನು ಅಸುರ ಸಂಹಾರಕನಲ್ಲ. ಪುರಾಣರ ವರ್ಣನೆಯ ಪ್ರಕಾರ ಖಂಡೋಬ ಮಣಿ-ಮಲ್ಲಾಸುರರ (ಮಲ್ಹಾರಿ) ನಾಶಗೈದವನು. ವೈರಿಗಳ ಸಂಹಾರಕ್ಕಾಗಿ ಶಿವ ಮುಂದೆಬರುವದು ಅಪರೂಪವಾಗಿದೆ. ಆ ಸಂದರ್ಭಗಳಲ್ಲಿ ವೀರಭದ್ರ, ಇಲ್ಲವೆ ಸೇನಾನಿಯಾದ ಷಣ್ಮುಖ ಇವರನ್ನು ಯೋಜಿಸಲಾಗುತ್ತಿದೆ. ಆದ್ದರಿಂದ ಖಂಡೋಬನು ಶಿವನ ಅವತಾರ ಅಥವಾ ಸ್ವರೂಪ ಎಂಬುದರ ಬಗ್ಗೆ ಸಂಶಯ ಬರುತ್ತದೆ.

ಖಂಡೋಬನ ಸಂಬಂಧವನ್ನು ಸ್ಕಂದ ಶಬ್ದದೊಡನೆ ಕೆಲವರು ಹಚ್ಚುತ್ತಾರೆ. 'ಸ್ಕಂದ' ಇದು ಷಣ್ಮುಖನ ಒಂದು ಹೆಸರು. ಈ ಎರಡು ಶಬ್ದಗಳಲ್ಲಿಯ ಸಾಮ್ಯದಿಂದ ಖಂಡೋಬನನ್ನು ಸ್ಕಂದನನ್ನಾಗಿ ಪರಿವರ್ತಿಸುವ ಪ್ರಯತ್ನಗಳು ನಡೆದಿವೆ. ಓಪರ್ಟ ಎಂಬ ಹೆಸರಿನ ಸಂಶೋಧಕರು ಹೀಗೆ ಮೊದಲು ಪ್ರಯತ್ನಮಾಡಿದರು. ದೇವತೆಯ ಹೆಸರು 'ಖಂಡೋಬಾ' ಎಂದು ಅವನ ಕೈಯಲ್ಲಿರುವ ಖಡ್ಗದಿಂದ ಎಂದು ಓಪರ್ಟ ಹೇಳಿಬಿಟ್ಟಿದ್ದಾರೆ.[೪೨] ಶಿವನಿಗೆ ಅವನ ಕೈಯಲ್ಲಿರುವ ಆಯುಧಗಳ ಮೇಲಿನ 'ಪಿನಾಕಿ', 'ತ್ರಿಶೂಲಿ' ಎಂದು ಬೇರೆ ಬೇರೆ ಹೆಸರುಗಳಿವೆ. ಆದರೆ, ಶಿವ ಖಡ್ಗಧಾರಿಯಾಗಿದ್ದನೆಂದು ಯಾವ ಪುರಾಣದಲ್ಲಿಯೂ ಹೇಳಿಲ್ಲ. ಹಾಗಿದ್ದರೆ ಖಡ್ಗದಾರಿಯಾಗಿ, ಅಶ್ವಾರೋಹಿಯಾಗಿರುವ ಈ ದೇವತೆಯಾರು? ಓಪರ್ಟ ಸಾಹೇಬರು ಖಂಡೋಬನನ್ನು ಕಾರ್ತಿಕೇಯನೆಂದು ಗುರುತಿಸುವಾಗ ಅವರಿಗೆ ಎರಡು ವಿಷಯಗಳ ಬಗ್ಗೆ ತೊಂದರೆಯಾಗಬೇಕಿತ್ತು. ಅವರ ವಿವೇಚನೆಯಲ್ಲಿ ಎರಡು ವಿಸಂಗತಿಗಳು ಸ್ಪಷ್ಟವಾಗಿ ಕಾಣುತ್ತವೆ. ಅವು ಅವರ ಲಕ್ಷ್ಯಕ್ಕೆ ಬಂದಿಲ್ಲ. ಏಕೆಂದರೆ ಅವರಿಗೆ ಪೂರ್ವಪರಂಪರೆಯ ಸೂಕ್ಷ್ಮವಾದ ತಿಳುವಳಿಕೆ ಇರುವದು ಶಕ್ಯವಿಲ್ಲ. ಆದರೆ, ನಮ್ಮಲ್ಲಿಯ ವಿದ್ವಾಂಸರು ಕೂಡ ಅವರಂತೆಯೇ ರಾಗವೆಳೆದಾಗ ಕನಿಕರ ಉಂಟಾಗುತ್ತದೆ. ಕಾರ್ತಿಕೇಯನ ವಾಹನ ನವಿಲು. ಆದರೆ, ಓಪರ್ಟರು ಗುರುತಿಸಿದ ಖಂಡೋಬ ಅಶ್ವಾರೋಹಿಯಾಗಿದ್ದಾನೆ. ಅಲ್ಲದೆ, ಖಂಡೋಬನೊಡನೆ ಇರುವ ಸ್ತ್ರೀಮೂರ್ತಿ ಮ್ಹಾಳಸಾ ಎಂದು ಅವರೇ ಸ್ಪಷ್ಟವಾಗಿ ಹೇಳಿದ್ದಾರೆ. 'ಮ್ಹಾಳಸಾ' ಅಂದರೆ ಪಾರ್ವತಿ ಎಂದೂ ಅವರು ಹೇಳಿದ್ದಾರೆ. ಮೊದಲ ಮಾತೆಂದರೆ ಕಾರ್ತಿಕೇಯನು ಬ್ರಹ್ಮಚಾರಿಯಾಗಿದ್ದಾನೆ. ಸ್ತ್ರೀಯರು ಕಾರ್ತಿಕೇಯನ ದರ್ಶನ ಮಾಡಬಾರದೆಂಬ ಪೂರ್ವಚಾರ ನಮ್ಮಲ್ಲಿದೆ. ಅಂದ ಮೇಲೆ ಖಂಡೋಬನ ಜೊತೆಯಲ್ಲಿರುವ ಸ್ತ್ರೀಮೂರ್ತಿ ಪಾರ್ವತಿ, ಕಾರ್ತಿಕೇಯನ ಪತ್ನಿ ಎಂದು ಹೇಳುವದು ಅತ್ಯಂತ ವಿಸಂಗತವಾದ ಮಾತಾಗುತ್ತದೆ. ಪಾರ್ವತಿ ಸ್ಕಂದನ, ಕಾರ್ತಿಕೇಯನ ತಾಯಿ. ಆದ್ದರಿಂದ ಖಂಡೋಬನೆಂದರೆ ಸ್ಕಂದ-ಕಾರ್ತಿಕೇಯ ಎಂದು ಭಾರತೀಯ ಸಂಪ್ರದಾಯದ ತಿಳುವಳಿಕೆ ಇದ್ದವರು ಯಾರೂ ಹೇಳಲಾರರು. 'ಮಲ್ಹಾರಿ-ಖಂಡೋಬಾ' ಎಂದರೆ ಕಾರ್ತಿಕೇಯ ಎಂಬ ಅಭಿಪ್ರಾಯ ಶ್ರೀ ಜಾಧವರಾವ್ ಅವರಿಗೂ ಒಪ್ಪಿಗೆಯಿಲ್ಲ. 'ಕಿರ್ಲೋಸ್ಕರ' ಪತ್ರಿಕೆಯ ಒಂದು ಸಂಚಿಕೆಯಲ್ಲಿ ಪ್ರಕಟವಾದ ಲೇಖನದಲ್ಲಿ ಅವರು 'ಖಂಡೋಬ' ಶಬ್ದಕ್ಕೆ ಇನ್ನೊಂದು ವ್ಯುತ್ಪತ್ತಿಯನ್ನು ಸೂಚಿಸಿದ್ದಾರೆ. ಶಿವನಿಗೆ 'ಖಂಡಪರಶು' ಎಂದು ಒಂದು ಪರ್ಯಾಯ ನಾಮವಿದೆ, ಅದರದೇ ಪರ್ಯಾಯ 'ಖಂಡ್ಯಾ', 'ಖಂಡೋಬಾ' ಎಂದಾಗಿರಬೇಕು ಎಂದು ಅವರು ಹೇಳುತ್ತಾರೆ. ಆದರೆ, ಖಾಂಡೇಯ, ಖಂಡೋಬಾ ಎಂಬ ಹೆಸರು ದೇವತೆಯ ಕೈಯಖಡ್ಗದಿಂದ ಬಂದಿರುವದರಿಂದ ಈ ಹೊಸ ವ್ಯುತ್ಪತ್ತಿಯ ಪರಿಶ್ರಮದ ಅಗತ್ಯವೆನಿಸುವದಿಲ್ಲ.

ಮಹಾನುಭಾವ ಸಾಹಿತ್ಯದಲ್ಲಿ ಕಂಡುಬರುವ ಹಳೆಯ 'ಮಲ್ಹಾರಿ' ಮುಂದೆ 'ಖಂಡೋಬಾ' ಎಂದು ಆದದ್ದು ಹೇಗೆ? ಈ ದೇವತೆಯ ಕೈಯ ಖಡ್ಗದಿಂದ ಹೆಸರು ಬಂದಿರುವ ಸಾಧ್ಯತೆ ಇದೆ. ನವರಾತ್ರಿಯಲ್ಲಿ ಮಹಾನವಮಿಯ ದಿನ ಆಯುಧಪೂಜೆ ಮಾಡುವ ಸಂಪ್ರದಾಯವಿದೆ. ಅದರಲ್ಲಿ ಖಡ್ಗಕ್ಕಿರುವ ಮಹತ್ವದಿಂದ ಆ ದಿವಸಕ್ಕೆ 'ಖಂಡೇನವಮಿ' ಎಂದು ಕರೆಯುವ ರೂಢಿ ಇದೆ. ಮಹಾನುಭಾವ ಭಾಸ್ಕರ ಕವಿಯ 'ರುಕ್ಮಿಣೀ ಸ್ವಯಂವರ' ಎಂಬ ಕಾವ್ಯದಲ್ಲಿ ಒಂದು ಕಡೆಗೆ 'ಖಾಂಡೇಬಾಹೋ' ಎಂಬ ಪ್ರಯೋಗವಿದೆ. 'ಖಂಡೋಬಾ' ಎಂಬ ಹೆಸರು ಹೇಗೆ ಬಂದಿರಬಹುದೆಂಬುದರ ಸೂಚನೆ 'ಖಾಂಡೇಬಾಹೋ' ಎಂಬ ವಾಕ್ಪ್ರಚಾರದಲ್ಲಿ ಸಿಗುತ್ತದೆ. 'ಖಾಂಡೇಬಾಹೋ' ಮಲ್ಹಾರಿ ಮುಂದೆ 'ಖಂಡೋಬಾ' ಎಂದು ಬದಲಾಗಿರುವ ಶಕ್ಯತೆ ಇದೆ.

ಖಂಡೋಬಾ ಎಂಬ ಹೆಸರು ಕರ್ಣಾಟಕದಲ್ಲಿ ಪ್ರಚಾರದಲ್ಲಿಲ್ಲ. ಖಂಡೋಬನಿಗಿಂತ ಮಲ್ಹಾರಿ ಹೆಸರು ಹೆಚ್ಚು ರೂಢಿಯಲ್ಲಿದೆ. ಆದರೆ, ಕನ್ನಡಿಗರು ಇದಕ್ಕಿಂತ ಬೇರೆಯಾಗಿರುವ 'ಮಲ್ಲಯ್ಯ' ಹೆಸರನ್ನು ಮೆಚ್ಚುತ್ತಾರೆ. ಖಂಡೇರಾವ, ಮಲ್ಹಾರಿ, ಮಲ್ಹಾರರಾವ ಈ ಹೆಸರುಗಳು ಬ್ರಾಹ್ಮಣ ವರ್ಗದಲ್ಲಿ ಅಥವಾ ಮರಾಠೆಯವರಲ್ಲಿ ದೊರೆಯುತ್ತವೆ. ಕನ್ನಡ ಬ್ರಾಹ್ಮಣರಲ್ಲಿ ಮಲ್ಹಾರ ಎಂಬ ಹೆಸರು ಇದೆ. ಆದರೆ, 'ಖಂಡೋ' ಎಂಬ ಹೆಸರು ಮರಾಠಿ ಭಾಷಿಕರಲ್ಲಿ ಮಾತ್ರ ಇದೆ. ಕರ್ಣಾಟ ಮತ್ತು ಮಹಾರಾಷ್ಟ್ರಗಳು ಒಂದರಿಂದೊಂದು ದೂರವಾದ ನಂತರ, ಮಹಾರಾಷ್ಟ್ರದಲ್ಲಿ 'ಖಂಡೋಬಾ' ಎಂಬ ಹೆಸರು ಪ್ರಚಾರದಲ್ಲಿ ಬಂದಿರಬೇಕು. ಆದರೆ 'ಮಲ್ಹಾರ' ಹೆಸರು ಇದಕ್ಕಿಂತ ಹೆಚ್ಚು ಪ್ರಾಚೀನವಾದದ್ದು. ಈ ಎರಡೂ ಪ್ರಾಂತಗಳು ಬೇರೆಯಾಗದಿದ್ದಾಗ, ಕರ್ಣಾಟಕದಲ್ಲಿ ಮಹಾರಾಷ್ಟ್ರೀಕರಣದ ಪ್ರಕ್ರಿಯೆ ನಡೆಯುತ್ತಿದ್ದಾಗ ಈ ಪ್ರದೇಶದಲ್ಲಿ 'ಮಲ್ಹಾರಿ' ಎಂಬ ಹೆಸರು ಲೋಕಪ್ರಿಯವಾಗಿರಬೇಕು. ದೇಶಸ್ಥಬ್ರಾಹ್ಮಣರಲ್ಲಿ (ದೇಶಸ್ಥ ಬ್ರಾಹ್ಮಣರು ಎರಡೂ ಪ್ರಾಂತಗಳಲ್ಲಿದ್ದಾರೆ) ಮಲ್ಹಾರಿ ಅನೇಕರ ಕುಲದೇವರಾಗಿದ್ದಾನೆ. ಕರ್ಣಾಟಕದಲ್ಲಿ ಈ ಮನೆತನಗಳು ಹೆಚ್ಚಾಗಿ ತುಂಗಭದ್ರೆಯ ಉತ್ತರದಲ್ಲಿವೆ.

ಕರ್ಣಾಟಕೀಯರಲ್ಲಿ ಮಹಾರಾಷ್ಟ್ರೀಕರಣ ನಡೆದಿದ್ದಾಗ ಈ ಹೆಸರು ನರ್ಮದೆಯ ದಕ್ಷಿಣದಿಂದ ಪ್ರಚಾರಕ್ಕೆ ಬಂದಿರಬೇಕು. ಈ ವಿಧಾನವನ್ನು ಪುಷ್ಟೀಕರಿಸಲು ಅನೇಕ ಕಾರಣಗಳು ದೊರೆಯುತ್ತವೆ. ಕರ್ಣಾಟಕದ ಮೂಲ ಮನೆತನಗಳಲ್ಲಿ, ಹಳೆ ಸಂಪ್ರದಾಯಗಳು ಸುರಕ್ಷಿತವಾಗಿರುವಲ್ಲಿ ಮಲ್ಹಾರಿ ಎಂಬ ಹೆಸರು ಇರುವಲ್ಲಿ ಲಿಂಗಾಯಿತರು ಮತ್ತು ಕುರುಬರಲ್ಲಿ ಮಲ್ಲಯ್ಯ, ಮಲ್ಲಪ್ಪ, ಮಲ್ಲೇಶ, ಮಲ್ಲಿನಾಥ, ಮಲ್ಲಿಕಾರ್ಜುನ ಎಂಬಂಥ ಹೆಸರುಗಳು ದೊರೆಯುತ್ತವೆ. ಮಲ್ಲಪ್ಪ ಎಂಬ ಹೆಸರಿನ ಬ್ರಾಹ್ಮಣರೂ ಕೂಡ ಗ್ರಾಮಾಂತರಗಳ ಆಳದಲ್ಲಿ ದೊರೆಯುತ್ತವೆ. ಆದರೆ, 'ಮಲ್ಹಾರಿ' ಎಂಬ ಹೆಸರು ಕನ್ನಡಿಗರಲ್ಲಿ ದೊರೆಯಲಾರದು. ಕನ್ನಡಿಗರು ಈ ದೇವರನ್ನು 'ಮಲ್ಲಯ್ಯ'ನೆಂದೇ ಗುರುತಿಸುತ್ತಾರೆ. ಈ ರೀತಿಯಲ್ಲಿ ಈ ದೇವರಿಗೆ ಹಳೆಯದಾದ ಎರಡು ಹೆಸರುಗಳು ದೊರೆಯುತ್ತದೆ. 'ಮಲ್ಲಯ್ಯ', 'ಮಲ್ಹಾರಿ' ಮತ್ತು ಹೆಸರುಗಳು ಕರ್ಣಾಟಕ ಮತ್ತು ಮಹಾರಾಷ್ಟ್ರಗಳ ವೈಶಿಷ್ಟ್ಯಗಳನ್ನು ಸೂಚಿಸುತ್ತವೆ. ಈ ಹೆಸರುಗಳ ಅರ್ಥ ತಿಳಿದರೆ ಆಯಾಪ್ರಾಂತದ ವೈಶಿಷ್ಟ್ಯವೇನು ಎಂಬುದು ಗೊತ್ತಾಗುತ್ತದೆ. ಮಲೆ+ಅಯ್ಯ ಈ ಎರಡು ಶಬ್ದಗಳು ಕೂಡಿಕೊಂಡು ಮಲ್ಲಯ್ಯ ಎಂಬ ಶಬ್ದವಾಗಿದೆ. ಮೂಲ ಪತ್ತಿಜನರ ಭಾಷೆಯಲ್ಲಿ 'ಮಲೆ' ಎಂದರೆ ಪರ್ವತ. 'ಅಯ್ಯಾ' ಎನ್ನುವದು ಸಮ್ಮಾನಾರ್ಥದಲ್ಲಿದೆ. ಮಲಯದೇವರೆಂದರೆ ಪರ್ವತದ ದೇವರು. ಇದರಿಂದ ಕನ್ನಡಿಗರ ಮೂಲ ಪುರುಷರು ಪರ್ವತ ಪೂಜಕರಿರಬೇಕು. ಮಲ್ಲಯ್ಯನಂತೆ ಪರ್ವತಪ್ಪ, ಗುಡ್ಡಪ್ಪ, ಗಿರಿಯಪ್ಪ ಎಂಬ ಹೆಸರುಗಳು ಇದೇ ಅರ್ಥದಲ್ಲಿ ಜನರಲ್ಲಿ ರೂಢವಾಗಿವೆ. ಪರ್ವತರೂಪದಲ್ಲಿಯ ಶಿವಪೂಜೆ ಇದಾಗಿದೆ. ತಮ್ಮ ದನಕರುಗಳನ್ನು ಮೇಯಿಸಲು, ಆಸರೆ ನೀಡಲು ಸ್ಥಳ ಕೊಡುವ ಪರ್ವತಗಳನ್ನು ಹಟ್ಟಿಕಾರಕರ-ಗೋಪಾಲಕರು ದೇವತಾ ಸ್ವರೂಪವೆಂದು ತಿಳಿದು ಪೂಜ್ಯ ಭಾವವನ್ನು ಪ್ರಕಟಿಸಿದ್ದು ಸ್ವಾಭಾವಿಕವಾಗಿದೆ. ರುದ್ರನನ್ನು 'ಗಿರಿಶ', 'ಗಿರಿತ್ರ' ಎಂದು ಯಜುರ್ವೇದದಲ್ಲಿ ಕರೆಯಲಾಗಿದೆ. ಇದರಿಂದ ಮಲ್ಲಯ್ಯ, ಗುಡ್ಡಪ್ಪ, ಪರ್ವತಪ್ಪ, ಗಿರಿಯಪ್ಪ ಇವೆಲ್ಲ ಶಿವನ ಪರ್ಯಾಯನಾಮಗಳಾಗುತ್ತವೆ. ರುದ್ರನಿಗೆ ಈ ಹೆಸರುಗಳು ವೇದದಲ್ಲಿಯೇ ಬಂದಿದ್ದರೂ ಇವು ಬ್ರಾಹ್ಮಣರಲ್ಲಿ ಹೆಚ್ಚು ಪ್ರಚಾರದಲ್ಲಿಲ್ಲ. ನೂರಾರು

ವರ್ಷಗಳಿಂದ ಈ ಹೆಸರುಗಳನ್ನು ಜೋಪಾನವಾಗಿ ಕಾಯ್ದುಕೊಂಡು ಬಂದ ಜನರ ಮೂಲ ದೇವರು ಇವನು ಎಂದರೆ ತಪ್ಪಾಗುವದಿಲ್ಲ. 'ಮಾರುತಿ' ಮತ್ತು 'ಹನುಮಂತ' ಈ ಹೆಸರುಗಳ ಬಗ್ಗೆ ಇರುವ ವಿಚಾರ ಕೂಡ ಈ ವಿಧಾನಕ್ಕೆ ಪುಷ್ಟಿಯನ್ನೀಯುತ್ತದೆ. ಕರ್ನಾಟಕದಲ್ಲಿ 'ಮಾರುತಿ' ಎಂಬ ಹೆಸರನ್ನು ಮಹಾರಾಷ್ಟ್ರೀಯರೇ ಬಳಸುತ್ತಾರೆ. ಮರಾಠೆ ಮತ್ತು ಬ್ರಾಹ್ಮಣರನ್ನು ಬಿಟ್ಟರೆ ಶುದ್ಧಕನ್ನಡ ಮನೆತನಗಳಲ್ಲಿ 'ಮಾರುತಿ' ಎಂಬ ಹೆಸರು ಕೇಳಸಿಗುವದಿಲ್ಲ. ಹಣಮಂತ ಎಂಬ ಹೆಸರೇ ಪ್ರಚಾರದಲ್ಲಿರುವದು. ಅಲ್ಲದೆ, ಇನ್ನೂ ಒಂದು ಸಂಗತಿ ವಿಚಾರಣೀಯವಾಗಿದೆ. ವೈದಿಕ ಪರಂಪರೆಯ ಅಭಿಮಾನಿಗಳಾದ ಮಹಾರಾಷ್ಟ್ರೀಯರಲ್ಲಿ 'ಮರುತ್' ಪರಂಪರೆಯ 'ಮಾರುತಿ' ಹೆಸರಿಗೆ ಪ್ರಾಶಸ್ತ್ಯ ವಿದೆಯೆಂಬುದು ನಿಜ; ಆದರೂ ದೇಶಸ್ಥರಲ್ಲಿ ಬ್ರಾಹ್ಮಣರು ತಪ್ಪಿ ಕೂಡ 'ಮಾರುತಿಭಟ್ಟ', 'ಮಾರುತಿರಾವ್' ಎಂಬ ಹೆಸರುಗಳನ್ನಿಡುವದಿಲ್ಲ; 'ಹಣಮಂತರಾವ' ಹೆಸರು ಇದೆ. ಆದೂ ಕೂಡ ಕರ್ನಾಟಕದಿಂದ ಬಂದದ್ದಾಗಿರಬೇಕು. ಮರುತ್ತರು ಪರಿವಾರಗಣದವರು, ಸೇವಕರು, ಆದ್ದರಿಂದ, ಅಬ್ರಾಹ್ಮಣರು. ಭೂತಬಾಧೆಯಂಥ ಅರಿಷ್ಟ ನಿವಾರಣೆಗಾಗಿ ಈ ದೇವರನ್ನು ಪೂಜಿಸಿದರೂ ಅವನ ಸ್ಥಾನ ಅಷ್ಟಕ್ಕಷ್ಟೇ.

ಮಲ್ಲಯ್ಯ ಶಿವನಾಗಿದ್ದರೆ (ರುದ್ರ) ಮಲ್ಹಾರಿ ಯಾರು? 'ಮಲ್ಹಾರಿ ಮಹಾತ್ಮ್ಯ'ವೆಂಬ ಪುರಾಣವೊಂದಿದೆ. ಮಲ್ಲನ ಸಂಹಾರ ಮಾಡಿದನೆಂದು ಅವನ ಹೆಸರು ಮಲ್ಹಾರಿಯಾಯಿತು. ಈ ಮಲ್ಲರು ಯಾರು? ಮಲಯವಾಸಿಗಳು ಮಲ್ಲರಿರಬೇಕು. ಅವರು ಆರ್ಯರಿಗೆ ವಿರೋಧಿಗಳಾಗಿರಬೇಕು. ಅಗಸ್ತ್ಯನ ಚರಿತ್ರೆಯಲ್ಲಿ ವಿಂಧ್ಯ ಪರ್ವತದೊಡನೆ ಅವನ ವಿರೋಧದ ಸಂಗತಿ ಇದೆ. ಅಗಸ್ತ್ಯ ವಿಂಧ್ಯಪರ್ವತವನ್ನು ಬಗ್ಗಿಸಿದನೆಂದು ಕಥೆ ಇದೆ. ಋಗ್ವೇದದಲ್ಲಿ ಪರ್ವತದೇವತೆಯ ಮಾತು ಇದೆ. ಆದರೆ, ಯಜುರ್ವೇದೀಯ (ವಾಜಸನೇಯ) ಸಂಹಿತೆಯ ಪ್ರಕಾರ ರುದ್ರ ಮತ್ತು ಪರ್ವತ ಇವುಗಳ ಸ್ಪಷ್ಟಸಂಬಂಧ ಸೂಚಿತವಾಗುವದಿಲ್ಲ. ಋಗ್ವೇದದಲ್ಲಿ ಮೂರು ಸಾರೆ ಇಂದ್ರನೊಡನೆ ಪರ್ವತದ ಮಾತೂ ಬರುತ್ತದೆ. 'ಇಂದ್ರಾಪರ್ವತಾ' ಎಂಬ ಜೋಡಿ ದೇವತೆಯ ಉಲ್ಲೇಖವಿದೆ. (ಋಗ್ವೇದ ಸಂಹಿತೆ ೧, ೧೨೨, ೩; ೧೩೨ ಮತ್ತು ೩, ೫೩, ೧) ಇಲ್ಲಿ ಪರ್ವತದೇವತೆಯಾಗಿದೆ ಎಂದು ಮ್ಯಾಕ್‌ಡೊನೆಲ್ ಹೇಳಿದ್ದಾರೆ.[೪೩] ಋಗ್ವೇದದ ವರ್ಣನೆಯ ಆಧಾರದ ಮೇಲಿಂದ ಅದರಲ್ಲಿ ಐತಿಹಾಸಿಕ ಘಟನೆ ಎಷ್ಟು ಎಂದು ಹೇಳುವದು ಬಹಳ ಬಿಗಿಯಾಗಿದೆ. ಯದು. ತುರ್ವಶರಂಥ ಐತಿಹಾಸಿಕವೆನಿಸುವ ಜನರ ಬಗ್ಗೆ ಇರುವ ಉಲ್ಲೇಖಗಳಲ್ಲಿ ಕೂಡ ಕಾವ್ಯಮಯವಾದ ಕಲ್ಪನೆಯ ಉಡ್ಡಯನಗಳಿವೆ. ಇಂದ್ರನ ರಥ ಭೂಮಿಯ ಮೇಲೆ ನಡೆಯಿತೆಂದು ಹೇಳುವಷ್ಟರಲ್ಲಿಯೇ ಅದು ಅಂತರಿಕ್ಷದಲ್ಲಿ ಹಾರತೊಡಗುತ್ತದೆ! ಐತಿಹಾಸಿಕ ಸಂಗತಿಗಳನ್ನು ಹೀಗೆ ಕಾವ್ಯಮಯವಾಗಿ ವರ್ಣಿಸುವ ರೀತಿಯನ್ನು ಭಾರತೀಯರು ಹಾಗೆಯೇ ಮುಂದುವರಿಸಿಕೊಂಡು ಬಂದರು. ವ್ಯಾಸ-ವಾಲ್ಮೀಕಿಗಳ ಭಾರತ-ರಾಮಾಯಣದಲ್ಲಿಯ ಸಂಗತಿಗಳು ಐತಿಹಾಸಿಕವೆಂದು ಎಲ್ಲರಿಗೂ ಅನ್ನಿಸುತ್ತಿದ್ದರೂ ಆ ಗ್ರಂಥಗಳನ್ನು ಇತಿಹಾಸವೆಂದು ಸ್ವೀಕರಿಸಲು ಯಾರೂ ಸಿದ್ಧರಿಲ್ಲ. ಕಾಳಿದಾಸ, ಪಂಪರಂಥ ಕವಿಗಳು ಐತಿಹಾಸಿಕ ಕಾಲದಲ್ಲಿ ಇದೇ ಪರಂಪರೆಯನ್ನು ಮುಂದುವರಿಸಿದರು. ರಾಮನಿಗೆ ಸಹಾಯ ಮಾಡಿದ ಮಾರುತಿ (ಮರುತ್ ವಂಶಜ) ಮಾನವನಿದ್ದಿರಬೇಕೆಂದು ಅನೇಕ ಸಂಶೋಧಕರಿಗೆ ಅನ್ನಿಸುತ್ತದೆ. ಆದರೆ, ಆ ವರ್ಣನೆಯನ್ನು ಮಾನವೋಚಿತವಾದ ವಾಸ್ತವಭಾಗ ಎಷ್ಟು, ಕವಿಕಲ್ಪನೆಯೆಷ್ಟು ಎಂಬುದರ ಪೃಥಕ್ಕರಣ ಬಿಗಿಯಾದ ಮಾತಾಗಿದೆ.

ಅದೇನೇ ಇದ್ದರೂ ಇಂಥ ವರ್ಣನೆಗಳ ಹಿಂದೆ ಕೆಲಮಟ್ಟಿಗೆ ವಾಸ್ತವ ಸಂಗತಿ ಇರುತ್ತದೆ. ಕವಿಗಳು ತಮ್ಮ ಪ್ರತಿಭೆಯಿಂದ ಈ ಘಟನೆಗಳನ್ನು ರೂಪಕಗಳಲ್ಲಿ ಬದಲಿಸುತ್ತಾರೆ. ತೀರ ನಿರಾಧಾರವಾದ ಕವಿಕಲ್ಪನೆಯ ವರ್ಣನೆಗಳೂ ಸ್ವಲ್ಪ ಇರಬಹುದು. ಆದರೆ, ವಾಸ್ತವ ಸಂಗತಿಯ ಆಧಾರದ ಮೇಲೆ ರಚಿತವಾದ ವರ್ಣನೆಗಳನ್ನು ಕಂಡುಹಿಡಿಯುವದು ಕಷ್ಟವೇನಲ್ಲ. ರುದ್ರನ ಅನುಯಾಯಿಗಳಾದ ಮರುತ್ತರನ್ನು 'ಪೃಷ್ಣಿಮಾತರಃ' 'ರುದ್ರಪುತ್ರ (ರುದ್ರಿಯ)' ಎಂದು ಬಣ್ಣಿಸಲಾಗಿದೆ. ರುದ್ರನ ಬಗ್ಗೆ ಅವರ ಅತ್ಯಂತಿಕ ಭಕ್ತಿ ಸುವಿಖ್ಯಾತವಾಗಿದೆ. ವೇದಗಳಲ್ಲಿ ಅವರನ್ನು 'ವೀರಾಃ' ಎಂದು ಕರೆಯಲಾಗಿದೆ. ಭೂಲೋಕದೊಳಗಿನ ಯಾರ ಜೊತೆಗೂ ಈ ರುದ್ರಭಕ್ತ ಮರುತ್ತರ

ಸಾಮ್ಯವಿಲ್ಲವೆಂದು ಹೇಳಲಿಕ್ಕಾಗುವದಿಲ್ಲ. ವೇದಗಳಲ್ಲಿಯ ಮರುತ್ತರು ಬಿರುಗಾಳಿಗಳಂತೆ ಆಕಾಶಗಾಮಿಗಳೇನೋ ನಿಜ. ಆದರೆ, ಆ ಕಾಲಕ್ಕೆ ಕೆಲವರಾದರೂ ರುದ್ರೋಪಾಸಕರಿದ್ದರಲ್ಲ? ಅವರ ಆಪ್ತಸಂಬಂಧದ ಅಸ್ಪಷ್ಟ ನೆನಪನ್ನಾದರೂ ಉಳಿಸಿಕೊಂಡಿರುವ ಅವರ ಮುಂದಿನ ತಲೆಮಾರಿನವರು ನಾಮಾವಶೇಷವಾಗಿ ಹೋದರೆ? ಕರ್ನಾಟಕದಲ್ಲಿಯ ವೀರಶೈವರು ತಮ್ಮ ಪರಂಪರೆ ವೇದಪೂರ್ವಕಾಲದೆಂದು ಹೇಳಿಕೊಳ್ಳುತ್ತಾರೆ. ಎಲ್ಲ ವೀರಶೈವರೂ ಆರ್ಯಪೂರ್ವ ಜನರ ವಂಶಜರೆಂದು ಹೇಳುವದು ಅತಿಶಯೋಕ್ತಿಯ ಪರಮಾವಧಿಯಾಗಬಹುದು. ಹಾಗೆಂದು ಅವರ ಹೇಳಿಕೆಯಲ್ಲಿ ಏನೂ ತಥ್ಯವಿಲ್ಲ. ಅದು ಮೂಲದಲ್ಲಿಯೇ ಸುಳ್ಳಾಗಿದೆಯೆಂದು ಹೇಳುವದೂ ಸರಿಯಲ್ಲ. ಹೊರಗಿನ ಎಷ್ಟೋ ಜನರು ವೀರಶೈವ ದೀಕ್ಷೆಯನ್ನು ಪಡೆದು ಪ್ರವೇಶ ಮಾಡಿದರೆಂಬ ಸಂಗತಿಯ ಬಗ್ಗೆ ಸಂಶಯವಿಲ್ಲ. ಆದರೆ, ಮೂಲದಲ್ಲಿ ಈ ಪಂಥದ ಪೂರ್ವಪರಂಪರೆ ವೇದಕಾಲದಷ್ಟಾದರೂ ಪ್ರಾಚೀನವಾಗಿದೆ. ತಾವು ಶಿವನ ಮಕ್ಕಳು ಎಂಬ ಮಾತಿನಲ್ಲಿ ಅವರಿಗೆ ಇರುವ ನಂಬಿಕೆ ಇನ್ನೂ ಜೀವಂತವಾಗಿದೆ. ವೃಷಭ (ಬಸವ)ನೇ ತಮ್ಮ ತಂದೆ ತಾಯಿ (ಪೃಷ್ಣಿಮಾತರಃ) ಎಂಬ ಸಂಗತಿಯಲ್ಲಿಯೂ ಅವರಿಗೆ ವಿಶ್ವಾಸವಿದೆ. ಶಿವನನ್ನು ಬಿಟ್ಟು ಬೇರೆ ಯಾವ ದೇವರನ್ನೂ ಅವರು ಪೂಜಿಸುವದಿಲ್ಲ. ('ಏಕೋ ಹಿ ರುದ್ರಃ') ತಾವೂ ಶಿವಗಣಕ್ಕೆ ಸೇರಿದವರೆಂದು ಅವರ ತಿಳುವಳಿಕೆಯಾಗಿದೆ. ಈ ಜನರ ಸ್ವಾಭಾವದಲ್ಲಿಯ ಉತ್ಸಾಹ ಮತ್ತು ತೀವ್ರತೆಗಳನ್ನು ನೋಡಿದರೆ ರುದ್ರಗಣದ ಅಸ್ಪಷ್ಟವಾದ ಛಾಯೆ ಅವರ ನಡೆವಳಿಕೆಯಲ್ಲಿ ಗೋಚರವಾಗುತ್ತದೆ. ಹಿಂದುಸ್ಥಾನದಲ್ಲಿ ಮರುತ್ಪುತ್ರನಾದ ಮಾರುತಿಯ ಉಪಾಸನೆ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಹೊರಗೆ ಅಷ್ಟೊಂದಾಗಿ ಕಂಡುಬರುವದಿಲ್ಲ. ರಾಮಾಯಣದೊಳಗಿನ ಕಿಷ್ಕಿಂಧೆ ಇದೇ ಭಾಗದಲ್ಲಿತ್ತೆಂದು ಸಂಶೋಧಕರು ಹೇಳುತ್ತಾರೆ.

ಋಗ್ವೇದದಲ್ಲಿಯ ಪರ್ವತಗಳ ವರ್ಣನೆಯಲ್ಲಿ ಕೂಡ ವಾಸ್ತವ ಮತ್ತು ಅವಾಸ್ತವಸಂಗತಿಗಳು ಬಿಡಿಸಬಾರದ ರೀತಿಯಲ್ಲಿ ಸೇರಿಹೋಗಿವೆ. ಇಂದ್ರ ಪರ್ವತಗಳ ಮೇಲೆ ಧಾಳಿಯಿಟ್ಟು ಅವುಗಳನ್ನು ಹುಡಿಗುಟ್ಟಿದ ಎಂಬ ವರ್ಣನೆ ಅನೇಕ ಕಡೆಗಳಲ್ಲಿದೆ. ಆದರೆ, ಋಗ್ವೇದದಲ್ಲಿ ರೂಪಸಾದೃಶ್ಯದಿಂದ ಮೋಡಗಳನ್ನು ಪರ್ವತಗಳೆಂದು ಕರೆಯಲಾಗಿದೆ.

> ತ್ವಂ ತಮಿಂದ್ರ ಪರ್ವತಂ ಮಹಾಮುರುಂ ವಜ್ರೇಣ ವಜ್ರಿನ್ ಪರ್ವಶಶ್ಚಕರ್ತಿಥ।
> ಅವಾಸೃಜೋ ನಿವೃತಾಃ ಸರ್ತವಾ ಅಪಃ ಸತ್ರಾ ವಿಶ್ವಂ ದಧಿಷೇ ಕೇವಲಂ ಸಹಃ ॥ ೧.೫೭.೬

"ಹೇ ವಜ್ರಧಾರಿಯಾದ ಇಂದ್ರ, ನೀನು ದೊಡ್ಡ ಮತ್ತು ವಿಸ್ತೀರ್ಣವಾದ ಪರ್ವತಗಳನ್ನು ತುಂಡು ತುಂಡು ಮಾಡಿದೆ. ಅವು ಹಿಡಿದಿಟ್ಟುಕೊಂಡಿದ್ದ ನೀರನ್ನು ಕೆಳಗೆ ಹರಿಯುವಂತೆ ಮಾಡಿದೆ. ನಿಜವಾಗಿಯೂ ಎಲ್ಲ ಶಕ್ತಿ ನಿನ್ನಲ್ಲಿಯೇ ಒಟ್ಟುಗೂಡಿದೆ." (ಸಿದ್ಧೇಶ್ವರ ಶಾಸ್ತ್ರಿ, ಚಿತ್ರಾವ ಋಗ್ವೇದ ಭಾಷ್ಯ)

ಈ ಪ್ರಸಂಗದಲ್ಲಿ 'ಪರ್ವತ'ವೆಂದರೆ 'ಮೇಘ' ಎಂದೇ ಅರ್ಥವಿದೆ. ಆದರೆ, ಎಲ್ಲೆಡೆಯಲ್ಲಿಯೂ ಈ ಅರ್ಥ ಅನ್ವಯವಾಗುವದಿಲ್ಲ. 'ಇಂದ್ರಾಪರ್ವತಾ' ಎಂಬ ಜೋಡುದೇವತೆಯ ಹೆಸರಿನಲ್ಲಿ ಪರ್ವತ ದೇವತಾ ವಾಚಕವಾಗಿದೆ. ಇಂದ್ರ ಪುರಗಳ ವೈರಿಯೂ ಹೌದು. ಪುರಗಳು ಕೂಡ ಪರ್ವತಗಳಂತೆ ರೂಪಕಗಳಾಗಿವೆ. ಆದರು ರೂಪಕಗಳ ಹಿಂದೆ ಲೌಕಿಕಸಂಗತಿಗಳು ಪ್ರೇರಕವಾಗಿಯೆಂದರೆ ತಪ್ಪಾಗಲಿಕ್ಕಿಲ್ಲ. ಕವಿ ಉಪಮಾನೋಪಮೇಯಗಳಿಗಾಗಿ ಉಪಯೋಗಿಸುವ ಶಬ್ದಗಳ ಹಿಂದೆ ಅವನ ಭಾವನೆಗಳು ಅಡಗಿರುತ್ತವೆ. ಪುರ ಮತ್ತು ಪರ್ವತಗಳ ಬಗ್ಗೆ ಋಷಿಗಳಿಗೆ ಆತ್ಮೀಯತೆ ಇರಲಿಲ್ಲ. ವಿರೋಧವೇ ಇದ್ದಿರಬೇಕು. ತಾವು ರಚಿಸಿದ್ದ ಸೂಕ್ತಗಳಲ್ಲಿ ಅವರು ಈ ವಿರೋಧವನ್ನು ವ್ಯಕ್ತ ಪಡಿಸಿರಬೇಕು. ಮುಂದಿನ ಕಾಲದ ಪೌರಾಣಿಕ ಕತೆ ಮೊದಲಾದ ಪರಂಪರಾಗತ ಸಂಗತಿಗಳಲ್ಲಿ ಈ ಮಾತಿಗೆ ಸಮರ್ಥನೆ ದೊರೆಯುವದರಿಂದ ಈ ತರ್ಕಕ್ಕೆ ಸಾಕಷ್ಟು ಅವಕಾಶವಿದೆ.

ಈ ದೃಷ್ಟಿಯಿಂದ ಮಲ್ಹಾರಿಯೆಂದರೆ ಪರ್ವತೀಯರ ನಾಶ ಮಾಡುವ ದೇವರು ಅಂದರೆ ಇಂದ್ರನೇ ಇರಬೇಕು ಎಂದೆನಿಸುತ್ತದೆ. ಪರ್ವತ ಮತ್ತು ಇಂದ್ರರ ವಿರೋಧದ ಪ್ರತಿಧ್ವನಿ ಭಾಗವತ ಪುರಾಣದಲ್ಲಿ (೧೦ನೆಯ ಸ್ಕಂಧ) ಒಂದು ಕಡೆಗೆ ಕಿವಿಗೆ ಬೀಳುತ್ತದೆ. ಯಾದವರು (ಆರ್ಯೀಕರಣದಲ್ಲಿ) ಇಂದ್ರಪೂಜೆಯನ್ನು ಆರಂಭಿಸುತ್ತಾರೆ.

ಆದರೆ, ಶ್ರೀಕೃಷ್ಣ ಪರ್ವತಪೂಜೆಯ ಹಳೆಯ ಪರಂಪರೆಯನ್ನು ಮುಂದುವರಿಸುವದರ ಬಗ್ಗೆ ಯೋಚಿಸಿದ ಮತ್ತು ಯಾದವರನ್ನು ಪರ್ವತಪೂಜೆಗೆ ಪ್ರೇರಿಸಿದ. ಇಂದ್ರನಿಗೆ ಇದರಿಂದ ಸಿಟ್ಟು ಬಂದಿತು. ಹೀಗೆ ಭಾಗವತದಲ್ಲಿ ಕಥೆಯಿದೆ. ಈ ಕಥೆ ಮತ್ತು ಈ ಮೊದಲು ಹೇಳಿದ ಅಗಸ್ತ್ಯನ ಕಥೆಯನ್ನು ಒಟ್ಟಿಗೆ ನೋಡಿದರೆ, ಋಗ್ವೇದದಲ್ಲಿ ಇಂದ್ರನು ಪರ್ವತಗಳನ್ನು ನಾಶಮಾಡುವ ರೂಪಕ ಕಥೆಯಲ್ಲಿ ವ್ಯಕ್ತವಾಗುವ ಅವರಿಬ್ಬರ ವಿರೋಧದ ಹಿಂದೆ ಭೂಲೋಕದಲ್ಲಿ ನಡೆದಿರಬಹುದಾದ ವಾಸ್ತವಸಂಗತಿ ಇರಬೇಕೆಂದು ಗೊತ್ತಾಗುತ್ತದೆ. ಝುಲ್ಲೋಮಲ್ಲರ ಯಾದಿಯಲ್ಲಿ ಮನುಸ್ಮೃತಿಯಲ್ಲಿ ನಟ-ಕರಣರ ಜೊತೆಗೆ ಮಲೆಯ-ಮಲ್ಲಜನರ ಹೆಸರೂ ಇದೆ. ಇವರು ವ್ರಾತ್ಯಕ್ಷತ್ರಿಯ ರಾಗಿದ್ದರೆಂದು ಮನುಸ್ಮೃತಿ ಹೇಳುತ್ತದೆ. ನಟಕರಣರಂತೆ ಇವರು ಕೂಡ ಆರ್ಯೀಕರಣದಲ್ಲಿ ಕ್ಷತ್ರಿಯಕುಲದಲ್ಲಿ ಸಮಾವಿಷ್ಟರಾಗಿರ ಬೇಕು. ಇದರಿಂದ ಮಲೆಯ ಜನರ ಪ್ರಾಚೀನತೆ ಗೊತ್ತಾಗುತ್ತದೆ. ಹರಿಹರರಂತೆ 'ಇಂದ್ರಾ ಪರ್ವತಾ' ಈ ಜೋಡಿದೇವತೆಗಳು ಋಗ್ವೇದಕಾಲದ ಆರ್ಯ ಮತ್ತು ಪಾರ್ವತೇಯ, ಹೀಗೆ ಎರಡು ಭಿನ್ನ ಪಂಥಗಳ ಸಮನ್ವಯದ ಪ್ರತೀಕವಾಗಿರುವ ಸಾಧ್ಯತೆಯಿದೆ. ಮಲ್ಹಾರಿಯ ಮೂರ್ತಿ ಅಶ್ವಾರೋಹಿಯಾಗಿದ್ದು ಅವನ ಕೈಯಲ್ಲಿ ಖಡ್ಗದಂಥ ಆಯುಧ ಇರುವದರಿಂದ ಕೂಡ ಈ ದೇವತೆ ಇಂದ್ರನಿರಬೇಕೆಂದು ಅನಿಸುತ್ತದೆ.

ಭಕ್ತರಾದವರು ತಮ್ಮ ಭಾವನೆಗಳ ಬಲದಿಂದ ಸೃಷ್ಟಿಸಿದ ದೇವರು ಆ ಭಕ್ತರ ಸ್ವಭಾವ ಮೊದಲಾದವುಗಳ ಒಂದು ಉದಾತ್ತವಾದ ದಿವ್ಯಭವ್ಯ ರೂಪವಾಗಿರುತ್ತಾನೆ. ಹೀಗೆ ಹೇಳಿದರೆ ಕೆಲಭಾವಿಕರಿಗೆ ಒಪ್ಪಿಗೆ ಯಾಗ ಲಿಕ್ಕಿಲ್ಲವೆಂದರೆ ದೇವರಂತೆಯೇ ಭಕ್ತರು ಎಂದು ಹೇಳಬೇಕಾಗುತ್ತದೆ. ಮಲ್ಲಯ್ಯ ಮತ್ತು ಮಲ್ಹಾರಿ ಈ ದೇವತೆಯ ಭಕ್ತರ ಸ್ವಭಾವದ ನಿರೀಕ್ಷಣೆಯನ್ನು ಮಾಡಿದರೆ ಈ ದೇವತೆಯ ಮೂಲಸ್ವರೂಪದ ಸುಳುವು ಸಿಗಬಹುದಾಗಿದೆ. ಈ ಜನರ ಸ್ವಭಾವದ ಬಗ್ಗೆ ಇಂದಿನ ಯಾವುದೇ ಅಭಿಪ್ರಾಯಕ್ಕಿಂತ ಹಳೆಯ ಉಲ್ಲೇಖ ದೊರೆತರೆ ಅದು ಹೆಚ್ಚು ಪ್ರಶಸ್ತವಾಗಬಹುದು. ಕ್ರಿ. ಶ. ೭೦೦ಕ್ಕಿಂತ ಮೊದಲಿನ 'ಅಪಭ್ರಂಶ ಕಾವ್ಯತ್ರಯೀ'ಯಲ್ಲಿಯ ಉದ್ಧರಣೆ ಬಹಳ ಮಹತ್ವದ್ದಾಗಿದೆ. ಮರಹಟ್ಟೆಗಳ ಬಗ್ಗೆ '.....ಅಭಿಮಾನಾನ್ ಕಲಹಶೀಲಾನ್ ಚ' ಎಂದು ಆ ಗ್ರಂಥ ಹೇಳುತ್ತದೆ. ಕರ್ಣಾಟಕೀಯರ ಬಗ್ಗೆ 'ಉತ್ಕಟದರ್ಪಾನ್ ಪದಕಾದ್ರಾನ್ ಪತಂಗವೃತ್ತೀನ್ ಚ' ಎಂದು ಹೇಳುತ್ತದೆ. ಇದೇ ರೀತಿ ಬೇರೆ ಕೆಲವು ಪ್ರಾಂತಗಳ ವೈಶಿಷ್ಟ್ಯಗಳ ವರ್ಣನೆಯೂ ಅಲ್ಲಿದೆ. ಪ್ರತ್ಯೇಕ ಜನರ ಗುಣ ದೋಷಗಳನ್ನು ಕುರಿತು ಹೇಳುವಾಗ ಶಕ್ಯವಿದ್ದಷ್ಟು ಸಮತೂಕದ ಪ್ರಜ್ಞೆಯನ್ನು ಕಾಯ್ದುಕೊಳ್ಳಲಾಗಿದೆ. ಮರಹಟ್ಟೆಯರ ಅಭಿಮಾನ ಮತ್ತು ತಮ್ಮ ಕೆಲಸವಾಗುವಾಗ ಅವರು ತೋರಿಸುವ ಜಿದ್ದಿನ ಸ್ವಭಾವ ಇಂದಿಗೂ ಭರತಖಂಡದಲ್ಲಿ ಸುಪ್ರಸಿದ್ಧವಾಗಿದೆ. ಅವರ ಈ ಅಭಿಮಾನೀಸ್ವಭಾವದಿಂದ ಅವರ ಭಾಷೆ ಮತ್ತು ದೇಶಮರ್ಯಾದೆಯು ವಿಸ್ತಾರ ವಾಗಿದೆ. ಇದಕ್ಕೆ ವಿಪರೀತವಾಗಿ ಕರ್ಣಾಟಕೀಯರು ಶೂರರು, ಉತ್ಕಟ ದರ್ಪದವರು, ವೈಯಕ್ತಿಕ ಅಹಂಕಾರ ಉಳ್ಳವರು, ಆವೇಗ-ಉದ್ವೇಗಗಳ ಸುಳಿಗೆ ಸೇರುವ ಭಾವನಾಶೀಲ ಪ್ರವೃತ್ತಿಯವರಾದ್ದರಿಂದ, ಅವರ ಸ್ವಭಾವದಲ್ಲಿ ಪತಂಗವೃತ್ತಿ ಎದ್ದು ಕಾಣುತ್ತದೆ. ಆಕರ್ಷಕವಾಗಿ ಕಂಡದ್ದರ ಕಡೆಗೆ ಓಡುವದು ಪತಂಗದ ಸ್ವಭಾವವಾಗಿದೆ. ಸ್ವಭಾವದಲ್ಲಿ ಸ್ಥೈರ್ಯ, ದೃಢತೆ ಕಡಿಮೆಯಾಗಿದೆ. ಕರ್ಣಾಟಕೀಯರ ಉತ್ಕರ್ಷ ಮತ್ತು ಅವನತಿ ಇವುಗಳ ರಹಸ್ಯ ಇಲ್ಲಿದೆ.

ಕರ್ಣಾಟಕದಲ್ಲಿ ಮರಹಟ್ಟೆಯರನ್ನು 'ಅರಿಯ'ರೆಂದು ಕರೆಯುತ್ತಾರೆಂದು ಪ್ರಸ್ತಾವಿತವಾಗಿದೆಯಷ್ಟೆ ಅರಿಯ-ಆರ್ಯರ ದೇವತೆ ಇಂದ್ರನಾಗಿದ್ದರೆ, ಕರ್ಣಾಟಕೀಯರಿಗೆ ಶಿವನು ದೇವತೆ. ಇಂದ್ರ ಯುದ್ಧಪ್ರಿಯ, ಶತ್ರುಗಳ ಮೇಲೆ ಆವೇಶದಿಂದ ಬಿದ್ದು ಯುದ್ಧ ಮಾಡುವವ, ಸ್ವಜನರ ಅಭಿಮಾನಿ ಮತ್ತು ಅವರ ರಕ್ಷಣೆಗೆ ಯಾವಾಗಲೂ ಸಿದ್ಧನಾಗಿರುವವ. ಇದಕ್ಕೆ ವಿಪರೀತವಾಗಿ ಪುರಾಣಗಳಲ್ಲಿ ದೊರೆಯುವ ಶಿವನ ವರ್ಣನೆ ಎಂಥದು? ಅವನು ಬೈರಾಗಿ, ಹೆಂಡತಿಯ ಬಗ್ಗೆಯೂ ಆಸ್ಥೆಯಿಲ್ಲ. ಸ್ವಾನಂದದಲ್ಲಿ ಮಗ್ನ, ಶೀಲಗುಣಗಳನ್ನು ವಿಚಾರಿಸದೆ ಪ್ರಾರ್ಥನ ಮಾಡಿದವರಿಗೆ ವರಗಳನ್ನು ನೀಡುವವ, ತಾನು ಕೊಟ್ಟದ್ದು ತನಗೇ ಮುಳುವಾಗಬಹುದೆಂಬ ಎಚ್ಚರ ಕೂಡ ಇಲ್ಲದವ-ಭೋಳೇಶಂಕರ.

ಸಾಮ್ಯವಿಲ್ಲವೆಂದು ಹೇಳಲಿಕ್ಕಾಗುವದಿಲ್ಲ. ವೇದಗಳಲ್ಲಿಯ ಮರುತ್ತರು ಬಿರುಗಾಳಿಗಳಂತೆ ಆಕಾಶಗಾಮಿಗಳೇನೋ ನಿಜ. ಆದರೆ, ಆ ಕಾಲಕ್ಕೆ ಕೆಲವರಾದರೂ ರುದ್ರೋಪಾಸಕರಿದ್ದರಲ್ಲ? ಅವರ ಆಪ್ತಸಂಬಂಧದ ಅಸ್ಪಷ್ಟ ನೆನಪನ್ನಾದರೂ ಉಳಿಸಿಕೊಂಡಿರುವ ಅವರ ಮುಂದಿನ ತಲೆಮಾರಿನವರು ನಾಮವಶೇಷವಾಗಿ ಹೋದರೆ? ಕರ್ಣಾಟಕದಲ್ಲಿಯ ವೀರಶೈವರು ತಮ್ಮ ಪರಂಪರೆ ವೇದಪೂರ್ವಕಾಲದೆಂದು ಹೇಳಿಕೊಳ್ಳುತ್ತಾರೆ. ಎಲ್ಲ ವೀರಶೈವರೂ ಆರ್ಯಪೂರ್ವ ಜನರ ವಂಶಜರೆಂದು ಹೇಳುವದು ಅತಿಶಯೋಕ್ತಿಯ ಪರಮಾವಧಿಯಾಗಬಹುದು. ಹಾಗೆಂದು ಅವರ ಹೇಳಿಕೆಯಲ್ಲಿ ಏನೂ ತಥ್ಯವಿಲ್ಲ. ಅದು ಮೂಲದಲ್ಲಿಯೇ ಸುಳ್ಳಾಗಿದೆಯೆಂದು ಹೇಳುವದೂ ಸರಿಯಲ್ಲ. ಹೊರಗಿನ ಎಷ್ಟೋ ಜನರು ವೀರಶೈವ ದೀಕ್ಷೆಯನ್ನು ಪಡೆದು ಪ್ರವೇಶ ಮಾಡಿದರೆಂಬ ಸಂಗತಿಯ ಬಗ್ಗೆ ಸಂಶಯವಿಲ್ಲ. ಆದರೆ, ಮೂಲದಲ್ಲಿ ಈ ಪಂಥದ ಪೂರ್ವಪರಂಪರೆ ವೇದಕಾಲದಷ್ಟಾದರೂ ಪ್ರಾಚೀನವಾಗಿದೆ. ತಾವು ಶಿವನ ಮಕ್ಕಳು ಎಂಬ ಮಾತಿನಲ್ಲಿ ಅವರಿಗೆ ಇರುವ ನಂಬಿಕೆ ಇನ್ನೂ ಜೀವಂತವಾಗಿದೆ. ವೃಷಭ (ಬಸವ)ನೇ ತಮ್ಮ ತಂದೆ ತಾಯಿ (ಪೃಷ್ನಿಮಾತರಃ) ಎಂಬ ಸಂಗತಿಯಲ್ಲಿಯೂ ಅವರಿಗೆ ವಿಶ್ವಾಸವಿದೆ. ಶಿವನನ್ನು ಬಿಟ್ಟು ಬೇರೆ ಯಾವ ದೇವರನ್ನೂ ಅವರು ಪೂಜಿಸುವದಿಲ್ಲ. ('ಏಕೋ ಹಿ ರುದ್ರಃ') ತಾವೂ ಶಿವಗಣಕ್ಕೆ ಸೇರಿದವರೆಂದು ಅವರ ತಿಳುವಳಿಕೆಯಾಗಿದೆ. ಈ ಜನರ ಸ್ವಾಭಾವದಲ್ಲಿಯ ಉತ್ಸಾಹ ಮತ್ತು ತೀವ್ರತೆಗಳನ್ನು ನೋಡಿದರೆ ರುದ್ರಗಣದ ಅಸ್ಪಷ್ಟವಾದ ಛಾಯೆ ಅವರ ನಡೆವಳಿಕೆಯಲ್ಲಿ ಗೋಚರವಾಗುತ್ತದೆ. ಹಿಂದುಸ್ಥಾನದಲ್ಲಿ ಮರುತ್ಪುತ್ರನಾದ ಮಾರುತಿಯ ಉಪಾಸನೆ ಕರ್ಣಾಟಕ ಮತ್ತು ಮಹಾರಾಷ್ಟ್ರಗಳ ಹೊರಗೆ ಅಷ್ಟೊಂದಾಗಿ ಕಂಡುಬರುವದಿಲ್ಲ. ರಾಮಾಯಣದೊಳಗಿನ ಕಿಷ್ಕಿಂಧೆ ಇದೇ ಭಾಗದಲ್ಲಿತ್ತೆಂದು ಸಂಶೋಧಕರು ಹೇಳುತ್ತಾರೆ.

ಋಗ್ವೇದದಲ್ಲಿಯ ಪರ್ವತಗಳ ವರ್ಣನೆಯಲ್ಲಿ ಕೂಡ ವಾಸ್ತವ ಮತ್ತು ಅವಾಸ್ತವಸಂಗತಿಗಳು ಬಿಡಿಸಬಾರದ ರೀತಿಯಲ್ಲಿ ಸೇರಿಹೋಗಿವೆ. ಇಂದ್ರ ಪರ್ವತಗಳ ಮೇಲೆ ಧಾಳಿಯಿಟ್ಟು ಅವುಗಳನ್ನು ಹುಡಿಗುಟ್ಟಿದ ಎಂಬ ವರ್ಣನೆ ಅನೇಕ ಕಡೆಗಳಲ್ಲಿದೆ. ಆದರೆ, ಋಗ್ವೇದದಲ್ಲಿ ರೂಪಸಾದೃಶ್ಯದಿಂದ ಮೋಡಗಳನ್ನು ಪರ್ವತಗಳೆಂದು ಕರೆಯಲಾಗಿದೆ.

ತ್ವಂ ತಮಿಂದ್ರ ಪರ್ವತಂ ಮಹಾಮುರುಂ ವಜ್ರೇಣ ವಜ್ರಿನ್ ಪರ್ವಶಶ್ಚಕರ್ತಿಥ।
ಅವಾಸೃಜೋ ನಿವೃತಾಃ ಸರ್ತವಾ ಅಪಃ ಸತ್ರಾ ವಿಶ್ವಂ ದಧಿಷೇ ಕೇವಲಂ ಸಹಃ ॥ ೧.೫೭.೬

"ಹೇ ವಜ್ರಧಾರಿಯಾದ ಇಂದ್ರ, ನೀನು ದೊಡ್ಡ ಮತ್ತು ವಿಸ್ತೀರ್ಣವಾದ ಪರ್ವತಗಳನ್ನು ತುಂಡು ತುಂಡು ಮಾಡಿದೆ. ಅವು ಹಿಡಿದಿಟ್ಟುಕೊಂಡಿದ್ದ ನೀರನ್ನು ಕೆಳಗೆ ಹರಿಯುವಂತೆ ಮಾಡಿದೆ. ನಿಜವಾಗಿಯೂ ಎಲ್ಲ ಶಕ್ತಿ ನಿನ್ನಲ್ಲಿಯೇ ಒಟ್ಟುಗೂಡಿದೆ." (ಸಿದ್ಧೇಶ್ವರ ಶಾಸ್ತ್ರಿ, ಚಿತ್ರಾವ ಋಗ್ವೇದ ಭಾಷ್ಯ)

ಈ ಪ್ರಸಂಗದಲ್ಲಿ 'ಪರ್ವತ'ವೆಂದರೆ 'ಮೇಘ' ಎಂದೇ ಅರ್ಥವಿದೆ. ಆದರೆ, ಎಲ್ಲೆಡೆಯಲ್ಲಿಯೂ ಈ ಅರ್ಥ ಅನ್ವಯವಾಗುವದಿಲ್ಲ. 'ಇಂದ್ರಾಪರ್ವತಾ' ಎಂಬ ಜೋಡುದೇವತೆಯ ಹೆಸರಿನಲ್ಲಿ ಪರ್ವತ ದೇವತಾ ವಾಚಕವಾಗಿದೆ. ಇಂದ್ರ ಪುರಗಳ ವೈರಿಯೂ ಹೌದು. ಪುರಗಳು ಕೂಡ ಪರ್ವತಗಳಂತೆ ರೂಪಕಗಳಾಗಿವೆ. ಆದರು ರೂಪಕಗಳ ಹಿಂದೆ ಲೌಕಿಕಸಂಗತಿಗಳು ಪ್ರೇರಕವಾಗಿಯೆಂದರೆ ತಪ್ಪಾಗಲಿಕ್ಕಿಲ್ಲ. ಕವಿ ಉಪಮಾನೋಪಮೇಯಗಳಿಗಾಗಿ ಉಪಯೋಗಿಸುವ ಶಬ್ದಗಳ ಹಿಂದೆ ಅವನ ಭಾವನೆಗಳು ಅಡಗಿರುತ್ತವೆ. ಪುರ ಮತ್ತು ಪರ್ವತಗಳ ಬಗ್ಗೆ ಋಷಿಗಳಿಗೆ ಆತ್ಮೀಯತೆ ಇರಲಿಲ್ಲ. ವಿರೋಧವೇ ಇದ್ದಿರಬೇಕು. ತಾವು ರಚಿಸಿದ್ದ ಸೂಕ್ತಗಳಲ್ಲಿ ಅವರು ಈ ವಿರೋಧವನ್ನು ವ್ಯಕ್ತ ಪಡಿಸಿರಬೇಕು. ಮುಂದಿನ ಕಾಲದ ಪೌರಾಣಿಕ ಕತೆ ಮೊದಲಾದ ಪರಂಪರಾಗತ ಸಂಗತಿಗಳಲ್ಲಿ ಈ ಮಾತಿಗೆ ಸಮರ್ಥನೆ ದೊರೆಯುವದರಿಂದ ಈ ತರ್ಕಕ್ಕೆ ಸಾಕಷ್ಟು ಅವಕಾಶವಿದೆ.

ಈ ದೃಷ್ಟಿಯಿಂದ ಮಲ್ಹಾರಿಯೆಂದರೆ ಪರ್ವತೇಯರ ನಾಶ ಮಾಡುವ ದೇವರು ಅಂದರೆ ಇಂದ್ರನೇ ಇರಬೇಕು ಎಂದೆನಿಸುತ್ತದೆ. ಪರ್ವತ ಮತ್ತು ಇಂದ್ರರ ವಿರೋಧದ ಪ್ರತಿಧ್ವನಿ ಭಾಗವತ ಪುರಾಣದಲ್ಲಿ (೧೦ನೆಯ ಸ್ಕಂಧ) ಒಂದು ಕಡೆಗೆ ಕಿವಿಗೆ ಬೀಳುತ್ತದೆ. ಯಾದವರು (ಆರ್ಯೀಕರಣದಲ್ಲಿ) ಇಂದ್ರಪೂಜೆಯನ್ನು ಆರಂಭಿಸುತ್ತಾರೆ.

ಆದರೆ, ಶ್ರೀಕೃಷ್ಣ ಪರ್ವತಪೂಜೆಯ ಹಳೆಯ ಪರಂಪರೆಯನ್ನು ಮುಂದುವರಿಸುವದರ ಬಗ್ಗೆ ಯೋಚಿಸಿದ ಮತ್ತು ಯಾದವರನ್ನು ಪರ್ವತಪೂಜೆಗೆ ಪ್ರೇರಿಸಿದ. ಇಂದ್ರನಿಗೆ ಇದರಿಂದ ಸಿಟ್ಟು ಬಂದಿತು. ಹೀಗೆ ಭಾಗವತದಲ್ಲಿ ಕಥೆಯಿದೆ. ಈ ಕಥೆ ಮತ್ತು ಈ ಮೊದಲು ಹೇಳಿದ ಅಗಸ್ತ್ಯನ ಕಥೆಯನ್ನು ಒಟ್ಟಿಗೆ ನೋಡಿದರೆ, ಋಗ್ವೇದದಲ್ಲಿ ಇಂದ್ರನು ಪರ್ವತಗಳನ್ನು ನಾಶಮಾಡುವ ರೂಪಕ ಕಥೆಯಲ್ಲಿ ವ್ಯಕ್ತವಾಗುವ ಅವರಿಬ್ಬರ ವಿರೋಧದ ಹಿಂದೆ ಭೂಲೋಕದಲ್ಲಿ ನಡೆದಿರಬಹುದಾದ ವಾಸ್ತವಸಂಗತಿ ಇರಬೇಕೆಂದು ಗೊತ್ತಾಗುತ್ತದೆ. ಝುಲ್ಲೋಮಲ್ಲರ ಯಾದಿಯಲ್ಲಿ ಮನುಸ್ಮೃತಿಯಲ್ಲಿ ನಟ-ಕರಣರ ಜೊತೆಗೆ ಮಲೆಯ-ಮಲ್ಲಜನರ ಹೆಸರೂ ಇದೆ. ಇವರು ವ್ರಾತ್ಯಕ್ಷತ್ರಿಯ ರಾಗಿದ್ದರೆಂದು ಮನುಸ್ಮೃತಿ ಹೇಳುತ್ತದೆ. ನಟಕರಣರಂತೆ ಇವರು ಕೂಡ ಆರ್ಯೀಕರಣದಲ್ಲಿ ಕ್ಷತ್ರಿಯಕುಲದಲ್ಲಿ ಸಮಾವಿಷ್ಟರಾಗಿರ ಬೇಕು. ಇದರಿಂದ ಮಲೆಯ ಜನರ ಪ್ರಾಚೀನತೆ ಗೊತ್ತಾಗುತ್ತದೆ. ಹರಿಹರರಂತೆ 'ಇಂದ್ರಾ ಪರ್ವತಾ' ಈ ಜೋಡಿದೇವತೆಗಳು ಋಗ್ವೇದಕಾಲದ ಆರ್ಯ ಮತ್ತು ಪಾರ್ವತೇಯ, ಹೀಗೆ ಎರಡು ಭಿನ್ನ ಪಂಥಗಳ ಸಮನ್ವಯದ ಪ್ರತೀಕವಾಗಿರುವ ಸಾಧ್ಯತೆಯಿದೆ. ಮಲ್ಹಾರಿಯ ಮೂರ್ತಿ ಅಶ್ವಾರೋಹಿಯಾಗಿದ್ದು ಅವನ ಕೈಯಲ್ಲಿ ಖಡ್ಗದಂಥ ಆಯುಧ ಇರುವದರಿಂದ ಕೂಡ ಈ ದೇವತೆ ಇಂದ್ರನಿರಬೇಕೆಂದು ಅನಿಸುತ್ತದೆ.

ಭಕ್ತರಾದವರು ತಮ್ಮ ಭಾವನೆಗಳ ಬಲದಿಂದ ಸೃಷ್ಟಿಸಿದ ದೇವರು ಆ ಭಕ್ತರ ಸ್ವಭಾವ ಮೊದಲಾದವುಗಳ ಒಂದು ಉದಾತ್ತವಾದ ದಿವ್ಯಭವ್ಯ ರೂಪವಾಗಿರುತ್ತಾನೆ. ಹೀಗೆ ಹೇಳಿದರೆ ಕೆಲಭಾವಿಕರಿಗೆ ಒಪ್ಪಿಗೆ ಯಾಗ ಲಿಕ್ಕಿಲ್ಲವೆಂದರೆ ದೇವರಂತೆಯೇ ಭಕ್ತರು ಎಂದು ಹೇಳಬೇಕಾಗುತ್ತದೆ. ಮಲ್ಲಯ್ಯ ಮತ್ತು ಮಲ್ಹಾರಿ ಈ ದೇವತೆಯ ಭಕ್ತರ ಸ್ವಭಾವದ ನಿರೀಕ್ಷಣೆಯನ್ನು ಮಾಡಿದರೆ ಈ ದೇವತೆಯ ಮೂಲಸ್ವರೂಪದ ಸುಳುವು ಸಿಗಬಹುದಾಗಿದೆ. ಈ ಜನರ ಸ್ವಭಾವದ ಬಗ್ಗೆ ಇಂದಿನ ಯಾವುದೇ ಅಭಿಪ್ರಾಯಕ್ಕಿಂತ ಹಳೆಯ ಉಲ್ಲೇಖ ದೊರೆತರೆ ಅದು ಹೆಚ್ಚು ಪ್ರಶಸ್ತವಾಗಬಹುದು. ಕ್ರಿ. ಶ. ೭೦೦ಕ್ಕಿಂತ ಮೊದಲಿನ 'ಅಪಭ್ರಂಶ ಕಾವ್ಯತ್ರಯೀ'ಯಲ್ಲಿಯ ಉದ್ಧರಣೆ ಬಹಳ ಮಹತ್ವದ್ದಾಗಿದೆ. ಮರಹಟ್ಟಿಗಳ ಬಗ್ಗೆ '.....ಅಭಿಮಾನಾನ್ ಕಲಹಶೀಲಾನ್ ಚ' ಎಂದು ಆ ಗ್ರಂಥ ಹೇಳುತ್ತದೆ. ಕರ್ಣಾಟಕೀಯರ ಬಗ್ಗೆ 'ಉತ್ಕಟದರ್ಪಾನ್ ಪದಕಾದ್ರಾನ್ ಪತಂಗವೃತ್ತೀನ್ ಚ' ಎಂದು ಹೇಳುತ್ತದೆ. ಇದೇ ರೀತಿ ಬೇರೆ ಕೆಲವು ಪ್ರಾಂತಗಳ ವೈಶಿಷ್ಟ್ಯಗಳ ವರ್ಣನೆಯೂ ಅಲ್ಲಿದೆ. ಪ್ರತ್ಯೇಕ ಜನರ ಗುಣ ದೋಷಗಳನ್ನು ಕುರಿತು ಹೇಳುವಾಗ ಶಕ್ಯವಿದ್ದಷ್ಟು ಸಮತೂಕದ ಪ್ರಜ್ಞೆಯನ್ನು ಕಾಯ್ದುಕೊಳ್ಳಲಾಗಿದೆ. ಮರಹಟ್ಟೆಯರ ಅಭಿಮಾನ ಮತ್ತು ತಮ್ಮ ಕೆಲಸವಾಗುವಾಗ ಅವರು ತೋರಿಸುವ ಜಿದ್ದಿನ ಸ್ವಭಾವ ಇಂದಿಗೂ ಭರತಖಂಡದಲ್ಲಿ ಸುಪ್ರಸಿದ್ಧವಾಗಿದೆ. ಅವರ ಈ ಅಭಿಮಾನೀಸ್ವಭಾವದಿಂದ ಅವರ ಭಾಷೆ ಮತ್ತು ದೇಶಮರ್ಯಾದೆಯು ವಿಸ್ತಾರ ವಾಗಿದೆ. ಇದಕ್ಕೆ ವಿಪರೀತವಾಗಿ ಕರ್ಣಾಟಕೀಯರು ಶೂರರು, ಉತ್ಕಟ ದರ್ಪದವರು, ವೈಯಕ್ತಿಕ ಅಹಂಕಾರ ಉಳ್ಳವರು, ಆವೇಗ-ಉದ್ವೇಗಗಳ ಸುಳಿಗೆ ಸೇರುವ ಭಾವನಾಶೀಲ ಪ್ರವೃತ್ತಿಯವರಾದ್ದರಿಂದ, ಅವರ ಸ್ವಭಾವದಲ್ಲಿ ಪತಂಗವೃತ್ತಿ ಎದ್ದು ಕಾಣುತ್ತದೆ. ಆಕರ್ಷಕವಾಗಿ ಕಂಡದ್ದರ ಕಡೆಗೆ ಓಡುವದು ಪತಂಗದ ಸ್ವಭಾವವಾಗಿದೆ. ಸ್ವಭಾವದಲ್ಲಿ ಸ್ಥೈರ್ಯ, ದೃಢತೆ ಕಡಿಮೆಯಾಗಿದೆ. ಕರ್ಣಾಟಕೀಯರ ಉತ್ಕರ್ಷ ಮತ್ತು ಅವನತಿ ಇವುಗಳ ರಹಸ್ಯ ಇಲ್ಲಿದೆ.

ಕರ್ಣಾಟಕದಲ್ಲಿ ಮರಹಟ್ಟೆಯರನ್ನು 'ಅರಿಯ'ರೆಂದು ಕರೆಯುತ್ತಾರೆಂದು ಪ್ರಸ್ತಾವಿತವಾಗಿದೆಯಷ್ಟೆ ಅರಿಯ-ಆರ್ಯರ ದೇವತೆ ಇಂದ್ರನಾಗಿದ್ದರೆ, ಕರ್ಣಾಟಕೀಯರಿಗೆ ಶಿವನು ದೇವತೆ. ಇಂದ್ರ ಯುದ್ಧಪ್ರಿಯ, ಶತ್ರುಗಳ ಮೇಲೆ ಆವೇಶದಿಂದ ಬಿದ್ದು ಯುದ್ಧ ಮಾಡುವವ, ಸ್ವಜನರ ಅಭಿಮಾನಿ ಮತ್ತು ಅವರ ರಕ್ಷಣೆಗೆ ಯಾವಾಗಲೂ ಸಿದ್ಧನಾಗಿರುವವ. ಇದಕ್ಕೆ ವಿಪರೀತವಾಗಿ ಪುರಾಣಗಳಲ್ಲಿ ದೊರೆಯುವ ಶಿವನ ವರ್ಣನೆ ಎಂಥದು? ಅವನು ಬೈರಾಗಿ, ಹೆಂಡತಿಯ ಬಗ್ಗೆಯೂ ಆಸ್ಥೆಯಿಲ್ಲ. ಸ್ವಾನಂದದಲ್ಲಿ ಮಗ್ನ, ಶೀಲಗುಣಗಳನ್ನು ವಿಚಾರಿಸದೆ ಪ್ರಾರ್ಥನ ಮಾಡಿದವರಿಗೆ ವರಗಳನ್ನು ನೀಡುವವ, ತಾನು ಕೊಟ್ಟದ್ದು ತನಗೇ ಮುಳುವಾಗಬಹುದೆಂಬ ಎಚ್ಚರ ಕೂಡ ಇಲ್ಲದವ-ಭೋಳೇಶಂಕರ.

ಮಲ್ಹಾರಿ ಇಲ್ಲವೆ ಖಂಡೋಬಾ ಇವನು ವೀರರ ದೇವತೆ. ಕುಮಾರವ್ಯಾಸನ ಭಾರತದಲ್ಲಿ 'ರಣ-ಮಲ್ಹಾರ' ಎಂಬ ಪ್ರಯೋಗವಿದೆ (೭೯-೬೪) 'ಮೈರಾಳ ಭಾವೂ' ಎಂದು ಹಳೆಯ ಒಂದು ಪ್ರಯೋಗ ರೂಢಿಯಲ್ಲಿದೆ. ಅದರ ಅರ್ಥ 'ಶಕ್ತಿ ಶಾಲಿಯಾದ ಕುಳ' ಎಂದು ಆಗುತ್ತದೆ. ಮಲ್ಹಾರ-ಮೈಲಾರ-ಮೈರಾಳ ಹೀಗೆ ಶಬ್ದದ ವ್ಯುತ್ಪತ್ತಿ ಇರುವದು ಲಕ್ಷ್ಯಕ್ಕೆ ಬಾರದ್ದರಿಂದ, ಕೋಶಕಾರರು 'ಈ ಅರ್ಥ ಈ ಹೆಸರಿನ ಒಬ್ಬ ವ್ಯಕ್ತಿಯಿಂದ ಬಂದಿರಬೇಕು' ಎಂದೂ ಊಹಿಸಿದ್ದಾರೆ. ಕುಮಾರವ್ಯಾಸನ 'ರಣ-ಮೈಲಾರ' ಪ್ರಯೋಗದಿಂದ 'ಮೈರಾಳ ಭಾವೂ'ದ ಅರ್ಥ ಸ್ಪಷ್ಟವಾಗುತ್ತದೆ. ಮರಾಠೆ ವೀರರಿಗೆ ಖಂಡೋಬಾ-ಮಲ್ಹಾರಿ ಯುದ್ಧಗಳಲ್ಲಿ ಸ್ಫೂರ್ತಿಯನ್ನೀಯುವ ದೇವತೆಯಾಗಿದ್ದ. ಮಹಾರಾಷ್ಟ್ರದ ಇತಿಹಾಸದಲ್ಲಿ ಈ ಹೆಸರಿನಿಂದ ಶೋಭಿಸುವ ಅನೇಕ ಸೇನಾನಿಗಳು, ವೀರರು ಆಗಿಹೋಗಿದ್ದಾರೆ. ಶಿವನೆಂದರೆ ರಣಕೋಲಾಹಲದಲ್ಲಿ ಆಡುವ ದೇವರೆಂದು ಆ ಸ್ವರೂಪದಲ್ಲಿ ಅವನ ಉಪಾಸನೆ ನಡೆಯುವದಿಲ್ಲ. 'ನೀನು ನಮ್ಮ ಶತ್ರುಗಳ ನಾಶಮಾಡಲು ಬಾ' ಎಂದು ರುದ್ರನನ್ನು ಕುರಿತ ಕೆಲವು ಪ್ರಾರ್ಥನೆಗಳಿವೆ ನಿಜ. ಆದರೆ, ದಸ್ಯುಗಳನ್ನು ಸಂಹರಿಸಲು ಇಂದ್ರ ಓಡಿ ಬರುವಂತೆ ರುದ್ರ ಓಡಿ ಬರುವ ವರ್ಣನೆ ಎಲ್ಲಿಯೂ ಇಲ್ಲ. ಇಂದ್ರನ ಪರಾಕ್ರಮ ಮತ್ತು ರಕ್ಷಣೆಗಾಗಿ ಓಡಿಬರುವ ಚಿತ್ರವನ್ನು ಬರೆದಿರುವ ವೈದಿಕಋಷಿಗಳ ಬಣ್ಣನೆಯಲ್ಲಿಯ ಛಾಯೆ ರುದ್ರನ ವರ್ಣನೆಯಲ್ಲಿಯೂ ಬಂದಿರುವ ಸಾಧ್ಯತೆ ಇದೆ. ಅಥವಾ ಕೆಲವು ವಿದ್ವಾಂಸರ ಅಭಿಪ್ರಾಯದ ಮೇರೆಗೆ ಯಾವುದೋ ಮೂಲ ವೈದಿಕ ದೇವತೆಯ ಜೊತೆಗೆ ಆರ್ಯೇತರ ರುದ್ರನನ್ನು (ಶಿವ) ಕಸಿ ಮಾಡಿರುವ ಶಕ್ಯತೆಯೂ ಇದೆ. ಕಾರಣವೆಂದರೆ ರುದ್ರನ ಚಿತ್ರಣದಲ್ಲಿ ಇಂಥ ವರ್ಣಸಂಕರವಾಗಿರುವದು ನಿಜ.

ರುದ್ರ ಇಂದ್ರನಂತೆ ರಣರಸಿಕನಾದ ದೇವತೆ ಅಲ್ಲದಿದ್ದರೂ 'ಇಂದ್ರಾಪರ್ವತಾ' ದೇವತೆಯ ಈ ವರ್ಣನೆಯನ್ನು ನೋಡಬೇಕು. "ಹೇ ಇಂದ್ರ ಪರ್ವತಗಳೇ, ಮುಂದೆ ಹೋಗಿ ಯುದ್ಧ ಮಾಡುವ ನೀವು ನಮ್ಮೊಡನೆ ಯುದ್ಧ ಮಾಡಬಯಸುವವರನ್ನು ಸಂಹಾರ ಮಾಡಿರಿ; ಅವರನ್ನು ವಜ್ರದಿಂದ ಹೊಡೆಯಿರಿ. ವಜ್ರ ನಷ್ಟರಾದವರನ್ನೂ ಸಂಹರಿಸಲು ಗಹನ ಸ್ಥಳಕ್ಕೆ ಹೋಗಬಲ್ಲದು. ಹೇ ವೀರ, ನಮ್ಮ ಶತ್ರುಗಳನ್ನು ಎಲ್ಲ ದಿಕ್ಕುಗಳಿಂದಲೂ ಬಂದು ಸೀಳಿಹಾಕು, ಸೀಳಿಹಾಕು" (ಋಗ್ವೇದ ೧. ೧೩೨. ೬-ಸಿದ್ಧೇಶ್ವರ ಶಾಸ್ತ್ರಿ. ಋಗ್ವೇದ ಭಾಷ್ಯ) ಈ ವರ್ಣನೆಯಿಂದ ಈ ಶತ್ರುಸಂಹಾರಕ ದೇವತೆ ವೀರರ ದೇವತೆ ಎಂಬುದು ಸ್ಪಷ್ಟ. "ಅಸ್ಮಾಕಂ ಶತ್ರೂನ್ ಪರಿಶೂರ ವಿಶ್ವತೋಶ ದರ್ಮಾದರ್ಷೀಷ್ಟ ವಿಶ್ವತಃ" ಈ ವಾಕ್ಯದಲ್ಲಿ 'ಹೇ ಶೂರ'ನೆಂಬ ಸಂಬೋಧನೆಯಲ್ಲಿ ಈ ಸಂಯುಕ್ತ ದೇವತೆಗಳ ಏಕತ್ವ ವ್ಯಕ್ತವಾಗುತ್ತದೆ. ಮಲ್ಹಾರಿ-ಮಲ್ಲಯ್ಯ ಹೀಗೆ ಜೋಡಿಹೆಸರುಗಳು ಪ್ರಚಾರದಲ್ಲಿ ಬಂದಿದ್ದರೂ ಇವು ಬೇರೆ ಬೇರೆ ದೇವತೆಗಳೆಂದು ನಂಬಿಕೆ ಇಲ್ಲ. ಕನ್ನಡಿಗರಿಗೆ ಇದರಲ್ಲಿ ಶಿವನ ದರ್ಶನವಾದರೆ ಮಹಾರಾಷ್ಟ್ರೀಯರಿಗೆ ಅಲ್ಲಿ ಮಲ್ಹಾರಿ (ಇಂದ್ರ) ಕಾಣುತ್ತಾನೆ. ಅದು, ಅವರವರ ಸ್ವಭಾವಕ್ಕೆ ಅನುಗುಣವಾಗಿದೆ. ಮಲ್ಹಾರಿಯ ಹೆಂಡತಿಯ ಹೆಸರು ಮ್ಹಾಳಸಾ. ಚಕ್ರಧರ 'ಲೀಳಾಚರಿತ್ರ'ದಲ್ಲಿ ಒಬ್ಬ ವ್ಯಕ್ತಿಗೆ 'ಮಾಲ್ಹಾಬಾಯಿಯ ಆಣೆ' ಹಾಕಿರುವದು ಕಂಡು ಬರುತ್ತದೆ. ಗದೋನಾಯಕನ ಹೆಂಡತಿಯ ಹೆಸರು ಮ್ಹಾಳಸಾಯೀ ಎಂದಿತ್ತು. ಮಾಳಪ್ಪ, ಮಾಳವ್ವ ಇವು ಕರ್ನಾಟಕದಲ್ಲಿ ಬಹಳ ಹಳೆಯ ಹೆಸರುಗಳಾಗಿದ್ದವು. ಪರ್ವತ ಇಲ್ಲವೆ ಗುಡ್ಡ ಎಂಬ ಅರ್ಥದಲ್ಲಿ ಮಲಯ-ಮಾಡ-ಮಾಳ ಈ ಶಬ್ದಗಳು ಇನ್ನೂ ರೂಢಿಯಲ್ಲಿವೆ. ಇದರಿಂದ ಮಾಳವ್ವನ ಸಂಸ್ಕೃತ ಭಾಷಾಂತರ ಪಾರ್ವತಿ ಎಂದಾಗುತ್ತದೆ. ಅದರಂತೆ 'ಮಾಳವ್ವ'ದ ಸಂಸ್ಕೃತೀಕರಣದಿಂದ 'ಮಹಾಲಸಾ' ಇಲ್ಲವೆ 'ಮ್ಹಾಳಸಾ' ಎಂದಾಗಿದೆ ಯೆಂಬುದು ನಿರ್ವಿವಾದ. ಮಲ್ಲಯ್ಯ-ಮಲ್ಹಾರಿ ಈ ಹೆಸರಿನ ದೇವತೆ ತಮಿಳುನಾಡಿನಲ್ಲಿ ಇಲ್ಲ. ತೆಲಂಗಾಣದಲ್ಲಿಯೂ ಈ ದೇವತೆಯ ಭಕ್ತರು ಅಪರೂಪವಾಗಿದ್ದಾರೆ. ಕರ್ನಾಟಕ-ಮಹಾರಾಷ್ಟ್ರದಿಂದ ವಲಸೆ ಹೋದವರು ಈ ದೇವತೆಗೆ ನಡೆದುಕೊಳ್ಳುತ್ತಾರೆ. ಕರ್ಣಾಟಕ ಮಹಾರಾಷ್ಟ್ರಗಳಲ್ಲಿ, ನರ್ಮದೆಯಿಂದ ಗೋದಾವರಿಯ ವರೆಗೆ ಮತ್ತು ಪೂರ್ವದಲ್ಲಿ ಶ್ರೀಶೈಲದವರೆಗೆ ಇರುವ ಪ್ರದೇಶದ ಜನರ ಮುಖ್ಯ ದೇವತೆಯೆಂದರೆ ಇದೇ ಆಗಿದೆ. ಮಲ್ಹಾರಿ-ಮಲ್ಲಯ, ಮಲ್ಲಿನಾಥ, ಮಲ್ಲಿಕಾರ್ಜುನ, ಗುಡ್ಡಪ್ಪ, ಪರ್ವತಪ್ಪ ಮೊದಲಾದ ಅನೇಕ ಹೆಸರುಗಳಿಂದ ಈ ದೇವರನ್ನು ಪೂಜಿಸಲಾಗುತ್ತದೆ. ಈ ದೇವತೆಯ ಹೆಸರು, ಆರತಿಗಳು, 'ಏಳುಕೋಟಿ' ಎಂಬ ಗರ್ಜನೆ

ಇವನ್ನೆಲ್ಲ ಒಟ್ಟಿಗೆ ವಿಚಾರಮಾಡಿದರೆ ಮಲ್ಲಯ್ಯ ಮೂಲದಲ್ಲಿ ಪತ್ತಿಜನರ ದೇವತೆಯೆಂದೇ ಹೇಳಬೇಕಾಗುತ್ತದೆ. ಆಮೇಲೆ 'ಇಂದ್ರಾಪರ್ವತಾ' ಸ್ವರೂಪದಲ್ಲಿ ಈ ಎರಡು ದೇವತೆಗಳ ಕೂಡಲ ಸಂಗಮ (ಆರ್ಯ ದ್ರವಿಡ) ವಾಗಿರಬೇಕೆಂದು ತೋರುತ್ತದೆ. ತಮಿಳು ಅಥವಾ ತೆಲುಗು ದೇಶಗಳಿಗಿಂತ ಕರ್ನಾಟಕೀಯರೊಂದಿಗೆ ಮಾತ್ರ ಇರುವ ಮಹಾರಾಷ್ಟ್ರೀಯರ ಅಂತಃಕರಣದ ಸಂಬಂಧವನ್ನು ತೋರಿಸುವ ದೇವತೆಯೆಂದರೆ ಮಲ್ಹಾರಿಯೇ. ವಿಠ್ಠಲ, ದತ್ತ, ವೆಂಕೋಬನಂಥ ದೇವತೆಗಳು ಹನ್ನೆರಡನೆಯ ಶತಮಾನದ ನಂತರ ಬಂದವುಗಳಾಗಿವೆ. ಆಮೇಲೆ ಅವು ಎಷ್ಟೋ ಜನರ ಕುಲದೇವತೆಗಳಾದವು. ಆದರೆ, ಮಲ್ಹಾರಿಯ ಭಕ್ತರ ಪರಂಪರೆ ಮಾತ್ರ ಈ ಎರಡೂ ಪ್ರದೇಶಗಳಲ್ಲಿ ಬಹಳ ಪ್ರಾಚೀನವಾಗಿದೆ.

ಕರ್ನಾಟಕದಲ್ಲಿಯ ಬಹುಜನ ಸಮಾಜದ ಪೂಜೆಯಲ್ಲಿ ಮಾರ್ತಂಡನಿಲ್ಲ. ಕೆಲವು ಬ್ರಾಹ್ಮಣರಲ್ಲಿ ಮಾತ್ರ ಈ ಹೆಸರಿನ ಕುಲದೇವತೆ ಇದೆ. ಮಾರ್ತಂಡನೆಂದರೆ ಸೂರ್ಯ. 'ಇಂದ್ರಾಪರ್ವತಾ'ದಲ್ಲಿ ಭಿನ್ನ ಪ್ರಕಾರದ ದೇವತೆಗಳು ಕೂಡಿಕೊಂಡಿರುವಂತೆ 'ಮಲ್ಹಾರಿ-ಮಾರ್ತಂಡ'ದಲ್ಲಿ ಬೇರೆ ಬಗೆಯ ಎರಡು ದೇವತೆಗಳು ಕೂಡಿಕೊಂಡು ಒಂದು ದೇವರಾಗಿರುವಂತೆ ಕಾಣುತ್ತದೆ. ಒಬ್ಬನೇ ದೇವತೆಯಲ್ಲಿ ಬಗೆ ಬಗೆಯ ಅನೇಕ ದೇವತೆಗಳು ಹೊಕ್ಕಿರುವದನ್ನು ಕಾಣಬಹುದು. ರುದ್ರ (ಶಿವ)ನ ಮೂಲ ಸ್ವರೂಪ ಕೆಂಪು, ತಾಮ್ರ ವರ್ಣದವನೆಂಬ ಕಲ್ಪನೆ ದೂರ ಉಳಿದುಕೊಂಡು, ಮುಂದೆ ಶಿವನಲ್ಲಿ ಅನೇಕ ದೇವರುಗಳು ಆರೋಪಿತವಾಗಿರುವದನ್ನು ತಜ್ಞರು ಸಿದ್ಧಪಡಿಸಿದ್ದಾರೆ. ಡಾ|| ಎ. ಬಿ. ಕೀಥರು Syncretism of different beliefs ಈ ವಿಷಯದ ಬಗ್ಗೆ ಬರೆಯುತ್ತ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[೪೪] ಭಕ್ತರ ಸಲುವಾಗಿ ಶಿವ ಸ್ಮಶಾನವಾಸಿಯಾದ. ಶಿವ ಮತ್ತು ಯಮ ಇವರಿಬ್ಬರೂ ಒಂದೇ ಎಂದು ಭ್ರಾಂತಿ ಹುಟ್ಟಿಸುವ ವರ್ಣನೆಗಳು ಬಂದವು. ಭವನ, ಶರ್ವ, ಮಹಾದೇವ ಮೊದಲಾದ ಬೇರೆ ಬೇರೆ ದೇವತೆಗಳು ಶಿವನಲ್ಲಿ ಅಂತರ್ಭೂತವಾಗಿರುವದನ್ನು ಸಂಶೋಧಕರು ಸಪ್ರಮಾಣವಾಗಿ ಸಿದ್ಧಗೊಳಿಸಿದ್ದಾರೆ. ಲಿಂಗ ಕೂಡ ಶಿವನಲ್ಲಿ ತಾದಾತ್ಮ್ಯ ಹೊಂದಿದ್ದರ ಬಗ್ಗೆ ಈ ಮೊದಲು ಹೇಳಲಾಗಿದೆ. ಅದೇ ರೀತಿಯಲ್ಲಿ ಮಲ್ಹಾರಿ-ಮಾರ್ತಂಡನಲ್ಲಿ ಮಾರ್ತಂಡ ರೂಪದಿಂದ ಸೂರ್ಯೋಪಾಸನೆ 'ಇಂದ್ರಾ ಪರ್ವತಾ'ದ ಪಂಥದಲ್ಲಿ ವಿಲೀನವಾಯಿತು.

ಸೂರ್ಯೋಪಾಸನೆ ನಮ್ಮ ದೇಶಕ್ಕೆ ಹೊಸದೇನಲ್ಲ. ವೈದಿಕರು ಸೂರ್ಯೋಪಾಸಕರಾಗಿದ್ದರು. ಆದರೆ ವೇದಕಾಲೀನ ಅಗ್ನಿ ಮತ್ತು ಸೂರ್ಯನ ಉಪಾಸನೆಯ ರೀತಿ ಬೇರೆಯಾಗಿತ್ತು. ಮತ್ತು ನಾಲ್ಕು-ಐದನೆಯ ಶತಮಾನದ ಸುಮಾರಿಗೆ ಭಾರತದಲ್ಲಿ ಪ್ರಸಾರಗೊಂಡ ಸೂರ್ಯೋಪಾಸನೆಯ ರೀತಿ ಬೇರೆಯಾಗಿತ್ತು. ಮೊದಲು ಸೂರ್ಯನಿಗೆ ಮೂರ್ತಿಪೂಜೆ ಇರಲಿಲ್ಲ. ಗುಪ್ತ ವಾಕಾಟಕರ ಕಾಲಕ್ಕೆ ಸೂರ್ಯನ ಮೂರ್ತಿಪೂಜೆ ಪ್ರಾರಂಭವಾಯಿತು ಮೂರ್ತಿಯ ಕಲ್ಪನೆ ಪರಕೀಯವೆಂದು ಡಾ|| ಅಳತೇಕರರು ಅಭಿಪ್ರಾಯಪಡುತ್ತಾರೆ.[೪೫] ಸೂರ್ಯೋಪಾಸನೆಯ ಈ ಪ್ರವಾಹ ಭಾರತದ ಹೊರಗಿನಿಂದ ಬಂದದ್ದೆಂದು ತತ್ಕಾಲೀನ ಭಿನ್ನಭಿನ್ನ ಮೂರ್ತಿಗಳ ಆಧಾರದಿಂದ ನಿಶ್ಚಿತವಾಗಿ ಹೇಳಬಹುದು. ೪-೫ನೆಯ ಶತಮಾನದಲ್ಲಿ ಕೋಟು-ಬೂಟು ತೊಟ್ಟ ಸೂರ್ಯನ ಮೂರ್ತಿಗಳು ದೊರೆಯುತ್ತವೆ. ಆದರೆ, ಭಾರತದಲ್ಲಿ ಈ ವೇಷ ತೊಟ್ಟ ಬೇರೆ ಯಾವ ದೇವತೆಯ ಮೂರ್ತಿಯೂ ಇಲ್ಲ. ಇದು ಪರಕೀಯ ಪ್ರಭಾವದ ಪರಿಣಾಮವೆಂದು ತಿಳಿಯಲು ಪರಿಶ್ರಮವಾಗಲಿ, ಬುದ್ಧಿಮತ್ತೆಯಾಗಲಿ ಬೇಕಾಗುವದಿಲ್ಲ. ಈ ಪ್ರಭಾವ ಎಲ್ಲಿಂದ ಬಂದಿರಬೇಕು? ನಮ್ಮಲ್ಲಿ ಪ್ರತಿ ದೇವತೆಗೂ ನಿಶ್ಚಿತವಾಗಿ ಒಂದು ಪುರಾಣ ಕಥೆ ಇರುತ್ತದೆ, ಮತ್ತು ಆ ಕಥೆಯಲ್ಲಿಯ ಮಹತ್ವದ ಸಂಗತಿಗಳು ಸೂಕ್ಷ್ಮ ಸಂಕೇತಗಳಲ್ಲಿ ವ್ಯಂಜಿತವಾಗಿರುತ್ತವೆ. ಮಲ್ಹಾರಿ ಎಂಬ ಹೆಸರು ಹೇಗೆ ಬಂದಿತೆಂಬುದು ಮಲ್ಹಾರಿಯ ಪುರಾಣದಿಂದಲೇ ಗೊತ್ತಾಗುತ್ತದೆ. ಮಲ್ಲಾಸುರನೆಂಬ ದೈತ್ಯನನ್ನು ಕೊಂದದ್ದರಿಂದ ಮಲ್ಹಾರಿ ಎಂಬ ಹೆಸರು ಪ್ರಾಪ್ತವಾಯಿತೆಂದು ವರ್ಣನೆ ಇದೆ. ಈ ಮಲ್ಲನ ವೈರಿ (ಮಲೆಯ-ಪರ್ವತೇಯ) ಯಾದವನು ಮಲ್ಹಾರಿ (ಇಂದ್ರ) ಇದು ಸರಿಯಾಯಿತು. ಅದೇ ಪುರಾಣದಲ್ಲಿ ಮಣಿ ಎಂಬ ಇನ್ನೊಬ್ಬ ದೈತ್ಯನ ಹೆಸರೂ ಇದೆ. ಮಣಿ ಎಂಬ ಹೆಸರಿನ ರಹಸ್ಯವನ್ನು ಭೇದಿಸುವ

ಪ್ರಯತ್ನ ಇನ್ನೂ ಆದಂತಿಲ್ಲ. ನನ್ನ ದೃಷ್ಟಿಯಿಂದ ಮಣಿಯ ಸಂಬಂಧ ಮಲ್ಹಾರಿಗಿಂತ ಮಾರ್ತಂಡನ ಜೊತೆಗೆ ಹೆಚ್ಚು ಇದೆ. ಮಲ್ಹಾರಿಯ ಜೊತೆಗೆ ಮಾರ್ತಂಡನ ಹೆಸರು ಬಂದಿರುವದು ನಿಶ್ಚಿತವಾಗಿ ಸೂರ್ಯನ ಪೂಜೆಯನ್ನು ಸೂಚಿಸುತ್ತದೆ.

ಇರಾಣದಲ್ಲಿ ಮೂರನೆಯ ಶತಮಾನದಲ್ಲಿ ಮಿತ್ರಪಂಥ (Mithraism) ಪ್ರಬಲವಾಗಿತ್ತು. 'ಮಣಿ' ಎಂಬ ಹೆಸರಿನ ಮಿತ್ರಪಂಥದ ಪ್ರಚಾರಕನೊಬ್ಬ ಆ ಕಾಲಕ್ಕೆ ಆಗಿಹೋದ, ತನ್ನ ದೇಶದಲ್ಲಿಯ ವಿರೋಧವನ್ನು ಲೆಕ್ಕಿಸದೆ ಅವನು ಮಿತ್ರಪಂಥದ, ಅಂದರೆ ಸೂರ್ಯೋಪಾಸನೆಯ ಪ್ರಚಾರ ಮಾಡಿದ. ವಿರೋಧಕರಿಂದಲೇ ಕೊನೆಯಲ್ಲಿ ಅವನು ಹತನಾದ. ಆದರೂ ನಂತರ ಅವನ ಪಂಥ ಬೇರೆಬೇರೆ ದೇಶಗಳಲ್ಲಿಯೂ ಪ್ರಸಾರಕ್ಕೆ ಬಂದಿತು. ಅಲ್ಲಿಯ ಧರ್ಮದ ಮೇಲೆ ಮಣಿಪಂಥದ ಆಳವಾದ ಪ್ರಭಾವ ಬಿದ್ದಿತು. ಮೂರನೆಯ ಶತಮಾನದಲ್ಲಿ ಉದಯ ಹೊಂದಿದ ಮಣಿಪಂಥೀಯ ಸೂರ್ಯೋಪಾಸನೆಯ ಪ್ರಚಾರ ಗುಪ್ತರ ಕಾಲಕ್ಕೆ ಪರಕೀಯರ ದಾಳಿಗಳೊಡನೆ ನಮ್ಮ ದೇಶಕ್ಕೂ ಬಂದಿರಬಹುದಾಗಿದೆ. ಏಕೆಂದರೆ ಆ ಕಾಲದಲ್ಲಿಯ ಸೂರ್ಯನ ಮೂರ್ತಿಯೆಂದರೆ ಈ ಪ್ರಚಾರದ ಪ್ರತೀಕವೇ ಆಗಿದೆ. ಬೇರೆ ಪಂಥಗಳ ವರ್ಚಸ್ಸು ಪ್ರಬಲವಾದಾಗಲೆಲ್ಲ; ನಮ್ಮ ಪೂರ್ವ ಪರಂಪರೆಗೆ ವಿಸಂಗತವಾಗದಂತೆ ಆ ಪಂಥಗಳ ಮಹತ್ವದ ಭಾಗವನ್ನು ಅರಗಿಸಿಕೊಂಡು ನಮ್ಮದಾಗಿಸಿಕೊಳ್ಳುವದು ಹಿಂದೂ ಧರ್ಮದ ಸನಾತನವಾದ ವೈಶಿಷ್ಟ್ಯವಾಗಿದೆ. ಇವೊತ್ತಿನ ವರೆಗಿನ ಸಮನ್ವಯದ ಎಲ್ಲ ಪ್ರಕಾರಗಳು ಇದೇ ರೀತಿಯವಾಗಿವೆ, ಮತ್ತು ಅವುಗಳ ಹಿಂದೆ ಇದೇ ಮನೋವೃತ್ತಿಯಿದೆ. ನಮ್ಮ ದೇಶದಲ್ಲಿ ಮೊದಲು ಸೂರ್ಯೋಪಾಸನೆ ಇತ್ತು. ನಿತ್ಯ ಪಠಣದಲ್ಲಿಯ ಗಾಯತ್ರಿಮಂತ್ರವು ಸೂರ್ಯೋಪಾಸನೆಯ ಒಂದು ಪ್ರಕಾರವಾಗಿದೆ. ಮುಂದೆ ಮಣಿಪಂಥದ ಸೂರ್ಯೋಪಾಸನೆಯನ್ನು ಸ್ವೀಕರಿಸಿದರೂ ಆದರಲ್ಲಿ ಮಣಿರಾಕ್ಷಸನನ್ನು ಕೊಂದು ಹಾಕಲಾಯಿತು. ಪರಕೀಯರಿಂದ ಯಾವದೇ ವಸ್ತುವನ್ನು ಸ್ವೀಕರಿಸಲಿ, ಅದು ನಮ್ಮ ಸ್ವಾಭಿಮಾನವನ್ನು ಚುಚ್ಚುತ್ತದೆ. ಮಲ್ಲಾಸುರನೊಡನೆ ಮಣಿರಾಕ್ಷಸನನ್ನೂ ಪುರಾಣದಲ್ಲಿ ಕೊಂದು ಹಾಕಿದರು. ಆದರೆ, ಸೂರ್ಯನ ಮೂರ್ತಿ ಪೂಜೆಯನ್ನು ನಮ್ಮವರು ಸ್ವೀಕರಿಸಿದರು. ರಾಷ್ಟ್ರಕೂಟರ ಕಾಲಕ್ಕೆ ಕರ್ಣಾಟಕ-ಮಹಾರಾಷ್ಟ್ರಗಳಲ್ಲಿ ಅನೇಕ ಸೂರ್ಯದೇವಾಲಯಗಳಿದ್ದವು. ತ್ರೈಪುರುಷ ದೇವಾಲಯದ ಉಲ್ಲೇಖ ಶಿಲಾಲೇಖಗಳಲ್ಲಿ ದೊರೆಯುತ್ತದೆ. ದೇಗುಲಗಳಲ್ಲಿ ಸಾಲಾಗಿ ಮೂರು ಗರ್ಭಗೃಹಗಳಿರುತ್ತಿದ್ದು ಶಿವ ಮತ್ತು ವಿಷ್ಣುಗಳ ಜೊತೆಗೆ ಬ್ರಹ್ಮ ಇಲ್ಲವೆ ಸೂರ್ಯವನ್ನು ಸ್ಥಾಪಿಸಲಾಗುತ್ತಿತ್ತು. ದೇವತೆಗಳಲ್ಲಿ ಕೆಲವರು ಶ್ರೇಷ್ಠ ಮತ್ತು ಕೆಲವರು ಕನಿಷ್ಠ ಎಂಬ ತಾರತಮ್ಯ ಆಗ ಇನ್ನೂ ಪ್ರಸೃತವಾಗಿರಲಿಲ್ಲ. ಭಾನಾಪುರ, ಭಾಸ್ಕರಪುರ, ಸುರೇಬಾನ (ಸೂರ್ಯಬನ) ಮೊದಲಾದ ಗ್ರಾಮನಾಮಗಳು ಒಂದು ಕಾಲಕ್ಕೆ ಸೂರ್ಯೋಪಾಸನೆ ಜನಪ್ರಿಯವಾಗಿತ್ತೆಂಬ ಮಾತಿಗೆ ಸಾಕ್ಷಿಯಾಗಿವೆ. ಏಳು-ಎಂಟನೆಯ ಶತಮಾನಗಳಲ್ಲಿ ಕನ್ನಡದ ಆಡು-ನುಡಿಯಲ್ಲಿದ್ದ 'ನೇಸರ್'ದ ಮೇಲಿಂದ 'ನೇಸರಗಿ'ಯಂಥ ಗ್ರಾಮನಾಮಗಳು ಕರ್ಣಾಟಕದಲ್ಲಿ ಇನ್ನೂ ಇವೆ.

'ಜಗದಂಬಾ' ಈ ಹೆಸರು ಬಹಳ ಸಂದಿಗ್ಧವಾಗಿದೆ. ಯಾವ ವಿಶಿಷ್ಟ ದೇವಿಯ ಬೋಧೆಯು ಇದರಿಂದಾಗು ವದಿಲ್ಲ. ಲೋಕಜನನಿ, ಮಹಾಮಾತೆ ಎಂದಿಷ್ಟೇ ಅರ್ಥವಾಗುತ್ತದೆ. ಸಿಂಹವಾಹಿನಿ, ಮಹಿಷಾಸುರ ಮರ್ದಿನಿ, ಪರಮೇಶ್ವರಿ ಅಥವಾ ವೈಷ್ಣವಿ, ಲಕ್ಷ್ಮೀ ಇವರಿಬ್ಬರೂ ಅವರವರ ಭಕ್ತರ ದೃಷ್ಟಿಯಿಂದ ಜಗದಂಬೆಯರೇ. ಆದರೆ ಜಗದಂಬೆ ಎಂದರೆ ಒಬ್ಬ ವಿಶಿಷ್ಟ ದೇವತೆಯೆಂದು ಅರ್ಥವಿಲ್ಲ. ಹಿಂದುಗಳ ಸಮನ್ವಯಶೀಲ ಪ್ರವೃತ್ತಿಗೆ ಇದು ಮತ್ತೊಂದು ನಿದರ್ಶನವಾಗಿದೆ. ಕೊಲ್ಹಾಪುರದ ದೇವಿಗೆ ಮಹಾಲಕ್ಷ್ಮಿ ಎಂದು ಕರೆಯುವ ರೂಢಿ ಇದೆ. ಆದರೆ, ಗೊಂದಲಗಳಲ್ಲಿ ಕೊಲ್ಲಾಪುರದ ಅಂಬಾಭವಾನಿ ಎಂಬ ಹೆಸರು ಕೇಳಬರುತ್ತದೆ. ಇಂದಿನ ವೀರಶೈವ ಮತ್ತು ವೀರವೈಷ್ಣವರ ದೃಷ್ಟಿಯಿಂದ ಇದು ಶೈವ-ವೈಷ್ಣವ ಹೆಸರುಗಳ ಕಲಬೆರಕೆ ಎಂದು ಕಾಣಸಬಹುದು. ಆದರೆ, ಒಂದು ಕಾಲಕ್ಕೆ ಹರಿಹರರಲ್ಲಿ ಅಭೇದವನ್ನು ಕಾಣುವ ದೃಷ್ಟಿಕೋನ ಇತ್ತೆಂಬುದನ್ನು ನೆನಪಿನಲ್ಲಿಡ ಬೇಕು. ಕ್ರಿ. ಶ. ೧೦೪೯ನೆಯ ವರ್ಷದಲ್ಲಿ ಶಿರೂರ ಗ್ರಾಮದಲ್ಲಿಯ ಶಿಲಾಲೇಖ ಪ್ರಸಿದ್ಧವಾದದ್ದು. ಅದರಲ್ಲಿ ಈ ವಾಕ್ಯಗಳಿವೆ.

"ರುದ್ರಾರ್ಧಾಂಗೋತ್ಸಂಗ ನಿವಾಸಿನೀ, ಸಿಂಹವಾಹಿನೀ ಶ್ರೀಮತ್ ಕೊಲ್ಹಾಪುರ ಪೀಠಾಧಿಷ್ಠಿತೇ ಶ್ರೀಮನ್ ಮಹಾಲಕ್ಷ್ಮ್ಯಾ ದೇವ್ಯಾಃ ಪಾದ ಪದ್ಮೋಪಜೀವೀ ಪಾಸುಪತಾಚಾರ್ಯ ಪ್ರಭುರಾಜವರ್ಮನ್"

ಇಲ್ಲಿ, ಕೊಲ್ಹಾಪುರದ ದೇವಿಯನ್ನು ಲಕ್ಷ್ಮಿ ಮತ್ತು ಪಾರ್ವತಿ ಎಂದು ಎರಡೂ ಹೆಸರುಗಳಿಂದ ಕರೆದದ್ದು ಸ್ಪಷ್ಟವಾಗಿದೆ. ಆದರೆ, ಪ್ರಸ್ತುತದಲ್ಲಿ ಜಗದಂಬೆ ಎಂದರೆ ಮಹಿಷಾಸುರ ಮರ್ದಿನಿ ಈ ಸ್ವರೂಪದ ದೇವಿಯ ಬಗ್ಗೆ ಮಾತ್ರ ಇಲ್ಲಿ ಚರ್ಚಿಸಲಾಗಿದೆ.

ಈ ದೇವಿಯ ಹೆಸರುಗಳಲ್ಲಿ 'ಮಹಿಷಾಸುರ ಮರ್ದಿನಿ' ಎಂಬ ಹೆಸರು ವಿಚಾರಣೀಯವಾಗಿದೆ. ಈ ಮೊದಲು ತಜ್ಞ ಸಂಶೋಧಕರಾದ ಶ್ರೀ ವಿ.ಕಾ. ರಾಜವಾಡೆ ಅವರು ಸೂಚಿಸಿರುವಂತೆ ಈ ದೇವಿ ಸಂಹರಿಸಿದ 'ಮಹಿಷಾಸುರ' ಎನ್ನುವದು ಸಾಂಕೇತಿಕ ಶಬ್ದವಾಗಿದೆ. ಒಂದು ಕಾಲಕ್ಕೆ ಈ ದೇಶದಲ್ಲಿ ಮಹಿಷ ಜನರು ವ್ಯಾಪಿಸಿದ್ದರು. ಈ ದೇವಿಯವರ ಪ್ರಸಾದದಿಂದ ಕೆಲವರು ಈ ಮಹಿಷ-ಜನರನ್ನು ನಾಶಮಾಡಿದರು. ಆದ್ದರಿಂದ ಈ ದೇವತೆ ಮಹಿಷ-ಜನರನ್ನು ಸಂಹರಿಸಿದ್ದ ಜನರ ಕುಲಸ್ವಾಮಿನಿಯಾದಳು.[೪೬] ಮಲ್ಲಾಸುರನ ನಾಶಮಾಡಿದ ದೇವರು ಮಲ್ಹಾರಿಯಾದರ ಮಹಿಷರ ನಾಶ ಮಾಡಿದವಳು ಮಹಿಷಾಸುರ ಮರ್ದಿನಿ. ಈ ಪರಂಪರೆ ಮಲ್ಹಾರಿಯ ಪರಂಪರೆಯಷ್ಟು ಪ್ರಾಚೀನವೆಂದೆನಿಸುವದಿಲ್ಲ. ಮಲ್ಲಜನರಂತೆ ಮಹಿಷ ಜನರೂ ಪ್ರಾಚೀನರಲ್ಲ.[೪೭]

ಮೈಸೂರ ರಾಜಮನೆತನದ ಕುಲದೇವತೆ ಮಹಿಷಾಸುರ ಮರ್ದಿನಿ. ಮೈಸೂರಿನ ಅರಸರು ತಮ್ಮ ಸಂಬಂಧವನ್ನು ಯದುವಂಶಕ್ಕೆ ಒಯ್ದು ಹಚ್ಚುತ್ತಾರೆ. ಶಿವಾಜಿಯ ಕುಲದೇವತೆ ಕೂಡ ಮಹಿಷಾಸುರ ಮರ್ದಿನಿ ಆಗಿದ್ದಳು. ನವರಾತ್ರಿಯ ಉತ್ಸವ ಇದೇ ದೇವಿಯ ಉತ್ಸವವಾಗಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ಮಹಾನವಮಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು. ಆಗಿನ ಕಾಲದ 'ಮಾನೋಮಿ ದಿಬ್ಬ' ಇಂದಿಗೂ ಪ್ರವಾಸಿಗಳನ್ನು ಆಕರ್ಷಿಸುತ್ತದೆ. ಆಗ ಸೇರುತ್ತಿದ್ದ ಒಡ್ಡೋಲಗದ ಸ್ಥಳವನ್ನು ಈಗಲೂ ತೋರಿಸುತ್ತಾರೆ. ಪಂಪಭಾರತದಲ್ಲಿ ಭಗವತಿಯ ಉಪಾಸನೆಯ ಮಾತು ಬರುತ್ತದೆ. ಒಟ್ಟಿನಲ್ಲಿ ಈ ನಾಡಿನ ರಾಜಮನೆತನಗಳ ಕುಲದೇವತೆ ಅವಳೇ ಎನ್ನುವದರಲ್ಲಿ ಸಂಶಯವಿಲ್ಲ. 'ಮಾನವಮಿ ದೀವಳಿಗೆ'ಯಂಥ ವಾಗ್ರೂಢಿ ಪಂಪಭಾರತದಲ್ಲಿದೆ. ಒಬ್ಬ ಹೆಣ್ಣುಮಗಳು ಒಬ್ಬ ಹಳ್ಳಿಗನ ಜೊತೆಗೆ ನರ್ಮ ವಿನೋದದಿಂದ ಹೀಗೆ ನುಡಿಯುತ್ತಾಳೆ: "ಆಹಾ ನೀನು ಬಂದೆ! ಅಂದ ಮೇಲೆ ನಾನು ಮಾನವಮಿ ದೀವಳಿಗೆ ಮಾಡದೆ ಹೇಗೆ ಇರಲಿ?" "ಸಾಧು ಸಂತಯೇತೀ ಘರಾ, ತೋಚಿ ದಿವಾಳಿ ದಸರಾ" (ಸಾಧು-ಸಂತರು ಮನೆಗೆ ಬಂದರೆ, ಅದೇ ದೀವಳಿಗೆ ದಸರೆ) ಎಂದು ಮಹಾರಾಷ್ಟ್ರದಲ್ಲಿ ಸರ್ವಶ್ರುತವಾದ ಮಹಾವಾಕ್ಯವಾಗಿದೆ. ಈ ಪ್ರಕಾರದ ಮಾತಿನ ರೂಢಿಗಳಿಂದ ಮಹಾನವಮಿಯ ಉತ್ಸವ, ರಾಜನಿಂದ ಬಡವನವರೆಗೆ, ಕರ್ನಾಟಕ-ಮಹಾರಾಷ್ಟ್ರಗಳಲ್ಲಿ ಎಲ್ಲರ ಹಬ್ಬವಾಗಿತ್ತೆಂದು ಹೇಳಬಹುದು.

ಪ್ರೊ. ಮಿರಾಶಿಯವರ ಸಂಶೋಧನವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಮಹಿಷಕರು ಮತ್ತು ಹಟ್ಟಿಕಾರರ ನಡುವಿನ ಸಂಘರ್ಷ ದಕ್ಷಿಣದಲ್ಲಿಯೇ ಆಗಿರಬೇಕು. ಇದು ನಿಜವಾಗಿದ್ದರೆ ಮಹಿಷಾಸುರ ಮರ್ದಿನಿ (ಕಾಳಿ) ದೇವಿ ಇಲ್ಲಿಂದಲೇ ಗೌಡ (ಗೌಳ) ದೇಶಕ್ಕೆ ಹೋಗಿರುವ ಸಾಧ್ಯತೆ ಇದೆ. ಬಂಗಾಲದಲ್ಲಿ ಇಂದಿನ ರಾಷ್ಟ್ರೀಯ ಉತ್ಸವ ನವರಾತ್ರಿಯೇ. ಬಂಗಾಲದ ಸಾಂಸ್ಕೃತಿಕ ಇತಿಹಾಸದ ಮೇಲೆ ದ್ರವಿಡಪ್ರಭಾವ ವಿಶೇಷವಾಗಿತ್ತೆಂದು ಅಲ್ಲಿಯ ವಿದ್ವಾಂಸರೇ ಬರೆಯುತ್ತಾರೆ. ಮಹಾರಾಷ್ಟ್ರ-ಕರ್ನಾಟಕದಲ್ಲಿಯೇ ಮಹಿಷಾಸುರ ಮರ್ದಿನಿಯ ಮಹಾತ್ಮ್ಯ ವಿಶೇಷವಾಗಿದೆಯೆಂಬ ಸಂಗತಿ ಕೂಡ, ಬಂಗಾಲದಲ್ಲಿಯ ತಥಾಕಥಿತ ದ್ರವಿಡರು ಯಾರು ಎಂಬ ಸಂಗತಿಯ ಮೇಲೆ ಬೆಳಕು ಚೆಲ್ಲುತ್ತದೆ. 'ದ್ರವಿಡ' ದಂಥ ಸಂದಿಗ್ಧ ಪದಪ್ರಯೋಗದ ಅರ್ಥ ಇದರಿಂದ ಸ್ಪಷ್ಟವಾಗುತ್ತದೆ. ಶ್ರೀ ರಾಮದಾಸರಿಂದ ಸ್ತುತಳಾದ ಹಾಟಕದೇವಿ ಗೌಡ ದೇಶಕ್ಕೆ ಹೋದರೆ ಶಾಕ್ತರ ಗೌಡಬಂಗಾಳಿ ವಿದ್ಯೆ (ಅವರು ಅದನ್ನು ಚೀನ-ಟಿಬೇಟ ದೇಶಗಳಿಂದ ಸ್ವೀಕರಿಸಿದ್ದರು) ಕರ್ನಾಟಕ-ಮಹಾರಾಷ್ಟ್ರಗಳಿಗೆ ಬಂದು, ಈ ರೀತಿಯ

ಸಾಂಸ್ಕೃತಿಕ ವಿನಿಮಯ ನಡೆದಂತೆ ಕಾಣುತ್ತದೆ. ಹನ್ನೊಂದು-ಹನ್ನೆರಡನೆಯ ಶತಮಾನದ ನಾಥಪಂಥೀಯ ಕವಿಹರುಕರ ಜೊತೆಗೆ ಮಾಟ. ಮದ್ದುಗಳ ಗೌಡಬಂಗಾಳಿ ವಿದ್ಯೆಯ ಗಾಳಿ ಈ ಕಡೆಗೆ ಬೀಸಿ ಬಂದಿರಬೇಕು.

ಕರ್ನಾಟಕ-ಮಹಾರಾಷ್ಟ್ರದಲ್ಲಿ ಹಟ್ಟಿಕಾರ ಜನರಿಂದ ರಾಜಮನೆತನಗಳು ಮುಂದೆ ಬಂದವೆಂಬುದನ್ನು ಹಿಂದೆಯೇ ಸೂಚಿಸಲಾಗಿದೆ. ಪತ್ತಿಜನರು ಗೋವಳರಾಗಿದ್ದರೆಂಬುದನ್ನು ಮತ್ತೆ ಹೇಳುವ ಕಾರಣವಿಲ್ಲ. ಪತ್ತಿ ಜನರ ಪೂರ್ವಾಪರ ನಡೆವಳಿಕೆಯಿಂದ ಹಿಂದೆ ಮಹಿಷಕ ಮತ್ತು ಗೋಪಾಲಕ ಹಟ್ಟಿ ಜನರಲ್ಲಿ ವೈರವಿತ್ತೆಂದು ಅನ್ನಿಸುತ್ತದೆ. ಇಂದು 'ಗವಳಿ' ಶಬ್ದ ಸರ್ವಸಾಮಾನ್ಯವಾಗಿದ್ದರೂ ಅವರು ಮಹಿಷ ಪಾಲಕರಾಗಿರುವದೇ ಹೆಚ್ಚು. ಹಟಗಾರ ಮರಾಠಿಯರು ಆಕಳ ಹಾಲನ್ನು ಬಿಟ್ಟು ಬೇರೆ ಹಾಲನ್ನು ಮುಟ್ಟುತ್ತಿದ್ದಿಲ್ಲವೆಂದು, ವರ್‍ಹಾಡದ ಗೌಳಿಗಳ ಬಗ್ಗೆ ರಸೆಲ್ ಬರೆದಿದ್ದಾರೆ. ಕರ್ನಾಟಕದಲ್ಲಿಯೂ ಹಟಗಾರರ ಕೆಲಮನೆತನಗಳು ಆಕಳಹಾಲನ್ನು ಬಿಟ್ಟರೆ ಬೇರೆ ಯಾವ ಹಾಲನ್ನೂ ಮಾರುವದಿಲ್ಲ. ಹಟ್ಟಿ ಮತ್ತು ದನ ಈ ಶಬ್ದಗಳು ಆಕಳು ಮತ್ತು ಎತ್ತುಗಳನ್ನೇ ನಿರ್ದೇಶಿಸುತ್ತವೆ. ಬ್ರಾಹ್ಮಣ ಗ್ರಂಥಗಳ ಪ್ರಕಾರ ಯಜನಕ್ರಿಯೆಗೆ ಆಕಳ ಹಾಲು ಮತ್ತು ತುಪ್ಪ ಅವಶ್ಯವಾಗಿದೆ. ಎಮ್ಮೆಯ ಹಾಲು ಮತ್ತು ತುಪ್ಪ ಪವಿತ್ರವಲ್ಲವೆಂದು ಸೂತ್ರಕಾಲೀನ ಸಮಾಜವ್ಯವಸ್ಥೆಯ ಬಗೆಗಿನ ಗ್ರಂಥದಲ್ಲಿ ಶ್ರೀ ವ್ಹಿ. ಎಸ್. ಆಪ್ಟೆಯವರು ಬರೆಯುತ್ತಾರೆ. ವಸುದ್ವಾದಶಿಯಂಥ ಹಬ್ಬಗಳು ಇನ್ನೂ ಜೀವಂತವಾಗಿವೆ. ಎಮ್ಮೆಯ ಪೂಜೆಯನ್ನು ಯಾರೂ ತಪ್ಪಿಕೂಡ ಮಾಡುವದಿಲ್ಲ. ಆದಕ್ಕೆ ವಿರುದ್ಧವಾಗಿ ಕೋಣವನ್ನು ಬಲಿಕೊಡುತ್ತಾರೆ. ನಮ್ಮ ದೇಶದಲ್ಲಿ ಮಹಿಷಜನ ಇದ್ದರೆಂದು ಖಚಿತವಾದ ಪ್ರಮಾಣಗಳಿವೆ. ಮ್ಹೈಸವಾಡಿ. ಮ್ಹೈಸೂರ, ಎಮ್ಮಿಗನೂರು, ಕೋಣನ ತಂಬಿಗೆ, ಕೋಣನಕೆರೆ ಮೊದಲಾದ ಗ್ರಾಮನಾಮಗಳು ಒಂದು ಕಾಲಕ್ಕೆ ಅವರ ಅಸ್ತಿತ್ವವನ್ನು ಸೂಚಿಸುತ್ತವೆ. ಕರ್ನಾಟಕದ ಧನಗರರಲ್ಲಿ 'ಎಮ್ಮೇನವರು' ಎಂಬ ಒಂದು ಗುಂಪು ಇದೆ. ಮಹಾರಾಷ್ಟ್ರದಲ್ಲಿ 'ಮ್ಹಸೇ' ಎಂಬ ಅಡ್ಡ ಹೆಸರಿದೆ.[೪೮] ಮೇಲೆ ಸೂಚಿಸಿದಂತೆ ಆಕಳು ಮತ್ತು ಎಮ್ಮೆಗಳ ನಡುವಿನ ಪಂಕ್ತಿಭೇದವನ್ನು ಲಕ್ಷ್ಯದಲ್ಲಿ ತೆಗೆದುಕೊಂಡರೆ ಮಹಿಷಾಸುರ ಮರ್ದಿನಿಯ ಸ್ವರೂಪದಲ್ಲಿಯ ರಹಸ್ಯ ಬಯಲಾಗುತ್ತದೆ. ಒಂದು ಕಾಲಕ್ಕೆ ಗೋಪಾಲಕ (ಹಟಗಾರ) ಮತ್ತು ಮಹಿಷಕರಲ್ಲಿ ತೀವ್ರವಾದ ವಿರೋಧವಿತ್ತೆಂದು ಸ್ಪಷ್ಟವಾಗುತ್ತದೆ. ಮಹಿಷಾಸುರ ಮರ್ದಿನಿಯ ಕೃಪೆಯಿಂದ ಗೋಪಾಲಕ ಹಟ್ಟಿಕಾರರು ಮಹಿಷಕರೊಡನೆ ಹೋರಾಡಿ ವಿಜಯವನ್ನು ಪಡೆದರು ನಿಜ. ಆದರೆ, ಮಹಿಷ ಸೋತು ಗೆದ್ದರೆ ಹಟಗಾರರು ಗೆದ್ದು ಸೋತರು. ಹಟಗಾರರು ಹೆಸರಿಗೆ ಗವಳಿಗಳಾದರು. ಮನೆಯಲ್ಲಿ ಎಮ್ಮೆಗಳನ್ನೇ ಸಾಕಿದರು! ಇದೇ ರೀತಿ ಮಲ್ಹಾರಿ ದೇವತೆಯ ಬಗ್ಗೆಯೂ ಆಯಿತು. ಶಿವನ ಹೆಸರೇನೋ ಅವನಿಗೆ ದಕ್ಕಿತು. ಆದರೆ, ಒಳಗೆ ಮಾತ್ರ ಹೆಸರು ಬದಲಾದ ಇಂದ್ರ ನಿಂತುಬಿಟ್ಟ!

ಮಹಿಷಾಸುರ ಮರ್ದಿನಿಗೆ 'ಕೋಲಾಸುರ ಭಯಂಕರಿ' ಎಂಬ ಒಂದು ವಿಶೇಷಣವೂ ಪುರಾಣದಲ್ಲಿದೆ. ಇವಳು ಕೋಲ-ಮುಂಡರನ್ನೂ ಸಂಹರಿಸಿದಳು. ಕೋಲ-ಮುಂಡರು ಬಹಳ ಪ್ರಾಚೀನರಾದ ಜನರು. ಕೋಲ, ಕೊಲ್ಲ, ಮುಂಡ ಇವುಗಳಿಂದ ಪ್ರಾರಂಭವಾಗುವ ಅನೇಕ ಊರುಗಳು ಕರ್ನಾಟಕ-ಮಹಾರಾಷ್ಟ್ರಗಳಲ್ಲಿವೆ. ವಿಶೇಷವಾಗಿ ಕೋಲ ಹೆಸರಿನ ಊರುಗಳು ಬಹಳ ಪ್ರಸಿದ್ಧವಾದ ದೇವಿಯ ಕ್ಷೇತ್ರಗಳಾಗಿವೆ. ಉದಾಹರಣೆಗೆ, ಕೋಲಾರ, ಕೊಲ್ಲೂರ, ಕೊಲ್ಹಾಪುರ ಮೊದಲಾದವು. ನಮ್ಮಲ್ಲಿಯ ದೇವದೇವತೆಗಳ ಈ ರೀತಿಯ ಹೆಸರುಗಳು ತಮ್ಮ ಸಂಸ್ಕೃತಿಯ ಬೆಳವಣಿಗೆಯ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತವೆ

ಶತಪಥ ಬ್ರಾಹ್ಮಣದಲ್ಲಿ ಶ್ರೀದೇವಿಯ ಹೆಸರು ಬರುತ್ತದೆ. ಶ್ರೀಯ ಉಲ್ಲೇಖ ಋಗ್ವೇದದಲ್ಲಿಯೂ ಇದೆ. ಲಕ್ಷ್ಮಿಯ ಹೆಸರು ಮೊದಲು ಶ್ರೀ ಎಂದೇ ಇರಬೇಕು. ಲಕ್ಷ್ಮಿಗಿಂತ ಶ್ರೀಯ ಹೆಸರಿನಲ್ಲಿಯೇ ದೇವಿಯ ಪೂಜೆ ವಿಶೇಷವಾಗಿ ನಡೆಯುತ್ತದೆ. ಶಾಕ್ತ ಪೂಜೆಯಲ್ಲಿ ಶ್ರೀಚಕ್ರದ ಉಪಾಸನೆ ಇದೆ. ಲಕ್ಷ್ಮಿ ಎಂಬ ಹೆಸರು ಇತ್ತೀಚೆಗೆ ಪ್ರಚಾರಕ್ಕೆ ಬಂದು ಶ್ರೀ ಎಂಬ ಹೆಸರು ಹಿಂದೆ ಸರಿದಿರಬೇಕು.

ದೇವಿ ಭವಾನಿಯ ಪೂಜೆಯನ್ನು ಎರಡು ಉದ್ದೇಶಗಳಿಂದ ಮಾಡಲಾಗುತ್ತಿದೆ. ಒಂದು ಅರಿಷ್ಟದ ನಿವಾರಣೆಗಾಗಿ, ಇನ್ನೊಂದು ಸಂಪತ್ತು-ಸಂತತಿಯ ಪ್ರಾಪ್ತಿಗಾಗಿ. ಮಂಗಳಗೌರಿಯ ಪೂಜೆ ಮೊದಲ ಉದ್ದೇಶದ

ಸಿದ್ಧಿಗಾಗಿ ಆ ದೇವಿಗೆ ಮಂಗಳಾದೇವಿ ಎಂಬ ಹೆಸರು ರೂಢಿಯಲ್ಲಿದೆ. ಅಮಂಗಲದ ನಿವಾರಣೆಯೇ ಈ ಪೂಜೆಯ ಉದ್ದೇಶವಾಗಿದೆ. ಇದರಿಂದ ಮಂಗಲಕಾರಿಣಿಯಾದ ದೇವಿ ಎಂದು ಆ ಹೆಸರು ಬಂದಿರಬೇಕೆಂದು ಅನುಮಾನ ಮಾಡಬಹುದಾಗಿದೆ. ಆದರೆ, ಅಮಂಗಲ ಮತ್ತು ಅಶುಭಸೂಚಕವೆಂದು ಪ್ರಸಿದ್ಧವಾದ ಮಂಗಳಗ್ರಹ ದಿಂದ ಹೆಸರು ಪಡೆದ ಮಂಗಳವಾರವೇ ಪೂಜಿಸಲ್ಪಡುವ ದೇವಿಯ ಹೆಸರು ಇದಾಗಿದೆ. ಮಂಗಳಾಯಿಯ ದೇವಾಲಯಗಳು ಬೇಕಾದಷ್ಟಿವೆ. ಮಂಗಳೂರ, ಮಂಗಳಾಪುರ, ಮಂಗಳಗಟ್ಟಿ, ಮಂಗಳವಾಡ (ವೇಢೆ) ಮೊದಲಾದ ಮಂಗಳನ ಸ್ಥಳನಾಮಗಳಿವೆ. ಮಂಗಳೂರಲ್ಲಿ ಮಂಗಳಾದೇವಿಯ ದೊಡ್ಡದಾದ ದೇವಸ್ಥಾನವಿದೆ. ಗೋಕರ್ಣ-ಮಂಗಳೂರ ಪ್ರವಾಸದಲ್ಲಿ ನನಗೊಂದು ವಿಶೇಷ ಸಂಗತಿ ಕಂಡು ಬಂದಿತು. ಆ ಭಾಗದಲ್ಲಿಯ ಒಕ್ಕಲಿಗರು ಮೊದಲಾದವರ ಹೆಸರುಗಳು ವಾರಗಳ ಹೆಸರುಗಳಾಗಿರುವದು. ನಮ್ಮಲ್ಲಿ ಈ ಪದ್ಧತಿ ಲುಪ್ತವಾಗಿ ಹೋಗಿದೆ. ಸ್ವಲ್ಪ ಹೆಸರುಗಳು ಮಾತ್ರ ಉಳಿದುಕೊಂಡಿವೆ. ಅಲ್ಲಿ ಮಾತ್ರ ಶುಕ್ರ, ಶನಿ, ಬುಧ ಮೊದಲಾದ ಹೆಸರುಗಳು ಇರುತ್ತವೆ. ಶನಿಯಪ್ಪ=ತನಿಯಪ್ಪ ಆಗಿದೆ. ಶುಕ್ರಪ್ಪ, ತುಕ್ಕಪ್ಪ ಎಂದಾಗಿದೆ. ಮಹಾರಾಷ್ಟ್ರದಲ್ಲಿ ತುಕಾ ಎಂಬ ಹೆಸರು ರೂಢಿಯಲ್ಲಿದೆ. ಪ್ರಸಿದ್ಧ ತುಕಾರಾಮನ ಹೆಸರ ಮೇಲಿಂದ ಇದು ಬಂದಿರಬಹುದೆಂದು ತಿಳಿದು 'ತುಕಾ' ಎಂದರೆ (ತುಕಣೇ=ತೂಗು) ಬಣಜಿಗ ಎಂಬ ಅರ್ಥವನ್ನು ಆ ಜಾತಿಯ ಮೇಲಿಂದ ಕಲ್ಪಿಸಿದ್ದಾರೆ.

ತುಳಜಾಪುರದ ಭವಾನಿಗೆ ತುಕಾಯಿ ಎಂದು ಹೆಸರಿದೆ. ತುಳಜಾಪುರ-ಕೊಲ್ಹಾಪುರಗಳಲ್ಲಿ ಪೂಜೆಯ ಮುಖ್ಯ ದಿನ ಶುಕ್ರವಾರವಾಗಿದೆ. ಲಕ್ಷ್ಮಿಯ ಗಂಡನಾದ ವಿಷ್ಣು (ಬಾಲಾಜಿ) ವಿನ ವಾರ ಕೂಡ ಶುಕ್ರವಾರವೇ ಆಗಿದೆ. ಇದರಿಂದ ತುಕ್ಕ ಎಂಬ ಹೆಸರು ಮೂಲದಲ್ಲಿ 'ಶುಕ್ರ'ದ ತದ್ಭವವಾಗಿದ್ದು ಅಂಬಾ ಭವಾನಿಯ ಪರ್ಯಾಯನಾಮವಾಗಿದೆ. ಅಂಬಣ್ಣಾ, ಅಂಬಪ್ಪ, ಅಂಬಾದಾಸ ಇವು ಅಂಬಾಬಾಯಿಯ ಭಕ್ತಿಯನ್ನು ಸೂಚಿಸುವ ಹೆಸರುಗಳಾಗಿವೆ. ಅದರಂತೆ, ತುಕಪ್ಪ, ತುಕೋಬಾ ಈ ಹೆಸರು ಕೂಡ ಕುಲಸ್ವಾಮಿನೀ ದೇವಿಯನ್ನು ಸೂಚಿಸುತ್ತವೆ. ಶ್ರೀದೇವಿಯ ಸಂಬಂಧ ಮತ್ತೆ ಚಂದ್ರನನ್ನು ಮುಟ್ಟುತ್ತದೆ. 'ಹಿರಣ್ಯವರ್ಣಾಂ. ಹೇಮಮಾಲಿನೀಂ, ಹಿರಣ್ಮಯೀಂ' ಎಂದು ಶ್ರೀಸೂಕ್ತದಲ್ಲಿ ಆಕೆಯ ವರ್ಣನೆ ಇದೆ. ಈ ದೇವಿಗೆ 'ಚಂದ್ರಾಂ' ಎಂದು ವಿಶೇಷಣವಿದೆ. 'ದೇವ ಜುಷ್ಟಾಂ' ಎಂಬ ವಿಶ್ಲೇಷಣ ವಿಚಾರಕ್ಕೆ ಅರ್ಹವಾಗಿದೆ. ಚಂದ್ರನಲ್ಲಿಯ ಅಮೃತವನ್ನು ತೆಗೆದುಕೊಂಡ ಮೇಲೆ ಉಳಿದ ಚಂದ್ರ ಎಂದು ಕೆಲವರು ಅರ್ಥ ಹಚ್ಚಿದ್ದಾರೆ. ಶ್ರೀದೇವಿಗೂ ಚಂದ್ರನಿಗೂ ಇರುವ ಸಂಬಂಧ ಇದರಿಂದ ವ್ಯಕ್ತವಾಗುತ್ತದೆ. 'ಚಂದಲಾ ಪರಮೇಶರೀ' ಎಂಬ ಹೆಸರಿನ ದೇವಿ ಅನೇಕ ಮನೆತನಗಳ ಕುಲದೇವಿಯಾಗಿದ್ದಾಳೆ. ನಿಜಾಮ ಹೈದರಾಬಾದದ ಕಡೆಗೆ ಈ ದೇವಿಯ ದೊಡ್ಡ ಕ್ಷೇತ್ರವಿದೆ. ಶ್ರೀಸೂಕ್ತದಲ್ಲಿಯ ವರ್ಣನೆಯ ಪ್ರಕಾರ ಶ್ರೀದೇವಿಯ ಸಂಬಂಧ ಹಿರಣ್ಯವರ್ಗದ ಜೊತೆಗೆ ಇರುವದು ಕಂಡುಬರುತ್ತದೆ. ಇದರಿಂದ 'ಶ್ರೀ' ಶಬ್ದ ಮೊದಲು ವಿವರಿಸಿದ 'ಶಿನ್' ಶಬ್ದದಿಂದ ನಿಷ್ಪನ್ನವಾಗಿರಬೇಕೆಂದು ತೋರುತ್ತದೆ. ಆರ್ಯದೇವತೆಗಳಲ್ಲಿ ಸ್ತ್ರೀದೇವತೆಗೆ ಮಹತ್ವದ ಸ್ಥಾನವಿಲ್ಲವೆಂದು ತಜ್ಞರ ಅಭಿಪ್ರಾಯವಿದೆ. ಋಗ್ವೇದದಲ್ಲಿ ನಾವಿಂದು ಪೂಜಿಸುವ ಲಕ್ಷ್ಮಿ. ಪಾರ್ವತಿಯರ ಹೆಸರುಗಳ ಸುಳಿವು ಕೂಡ ಇಲ್ಲ. ರಾಕಾ, ಸಿನೀವಾಲಿ, ಗುಂಗೂದಂಥ ಕೆಲವು ದೇವತೆಗಳ ಹೆಸರುಗಳಿವೆ. ಆದರೆ, ವೇದದಲ್ಲಿ ಅವುಗಳಿಗೆ ಮಹತ್ವವಿಲ್ಲ. ಅವುಗಳಲ್ಲಿ 'ಸಿನೀವಾಲಿ' ಎಂಬ ಹೆಸರು ಅಭ್ಯಾಸಕ್ಕೆ ಅರ್ಹವಾಗಿದೆ. 'Siniwali looks to me liko a foreign word' ಎಂದು ಲೋಕಮಾನ್ಯ ಟಿಳಕರು ತಮ್ಮ ಒಂದು ಲೇಖನದಲ್ಲಿ ಹೇಳಿದ್ದಾರೆ.[೪೯] ಸಿನೀವಾಲಿ ಇದು ಸಂಸ್ಕೃತ ಶಬ್ದವಲ್ಲ. ಈ ಶಬ್ದದ ಪೂರ್ವಭಾಗ 'ಸಿನೀ' ಎಂಬುದರ ಸಂಬಂಧ, ರೂಪ ಮತ್ತು ಅರ್ಥ ಸಾದೃಶ್ಯದಿಂದಾಗಿ, ಶಿನ್ ಎಂಬ ಪತ್ತಿಜನರ ಭಾಷೆಯಲ್ಲಿಯ ಧಾತು ರೂಪದೊಂದಿಗಿದೆ ಎಂದು ಹೇಳಲಡ್ಡಿಯಿಲ್ಲ. ಸಿನೀವಾಲಿಯ ಅರ್ಥವನ್ನು ನೋಡಿದರೆ 'ಶಿನ್'ದ ಜೊತೆಗೇ ನಿಶ್ಚಿತ ಸಂಬಂಧವಿರುವದು ಗೊತ್ತಾಗುತ್ತದೆ. ಅಮಾವಾಸ್ಯೆಯ ಹಿಂದಿನ ದಿನದ (ಚತುರ್ದಶಿಯ) ಚಂದ್ರ ಎಂದು ಈ ಶಬ್ದದ ಅರ್ಥವಾಗಿದೆ. 'ಸಿನೀ ಚಂದ್ರಕಲಾ' ಎಂದು ಭಾನುದೀಕ್ಷಿತರು ತಮ್ಮ ಅಮರಕೋಶದ ಟೀಕೆಯಲ್ಲಿ ಹೇಳಿದ್ದಾರೆ.

ಯದುತುರ್ವಸುಗಳು ಚಂದ್ರ ವಂಶೀಯರೆಂದು ಹೇಳಿದಾಗ ಪುರಾಣಿಕರು ಒಂದು ಉದ್ದೇಶವಿಟ್ಟು ಕೊಂಡಂತೆ ತೋರುತ್ತದೆ. ಈ ಜನರಲ್ಲಿ ಚಂದ್ರನ ಪೂಜೆ ಇಂದಿನ ತಲೆಮಾರಿನ ವರೆಗೂ ನಡೆಯುತ್ತಿದೆ. ವರ್ಷದ ಎಲ್ಲ ಹುಣ್ಣಿಮೆಗಳನ್ನು ಇವರು ಹಬ್ಬದಂತೆ ಆಚರಿಸುತ್ತಾರೆ. 'ಶಿನ್' ಶಬ್ದ ಸಿನೀವಾಲಿಯೊಡನೆ ಸಂಬಂಧಿತವಾಗಿದ್ದರೆ. ಈ ಚಂದ್ರಪೂಜೆ ಭಾರತದಿಂದ ಪರದೇಶಗಳಿಗೆ ಹೋಗಿರಬೇಕೆಂದು. ಪರದೇಶಗಳಲ್ಲಿಯ ರೂಢಿ-ಆಚಾರಗಳ ಮೇಲಿಂದ ಹೇಳಬಹುದಾಗಿದೆ. Sabbath ಈ ಶಬ್ದದ ಉತ್ಪತ್ತಿಯ ಬಗ್ಗೆ ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕದಲ್ಲಿ 11th Edition ಹೀಗೆ ಹೇಳಲಾಗಿದೆ.

> The word has nothing to do with tasting in the sense of enjoying repose....The grammatical form of Sabbath suggests a transitive sense; 'the divider' and apparently indicates Sabbath as dividing month

ಇದರ ಅರ್ಥ ಒಂದು ತಿಂಗಳಿನ ಹದಿನೈದು ದಿನಗಳ ಎರಡು ಭಾಗಗಳು ಎಂದು ಆಗುತ್ತದೆ. ಚಂದ್ರನ ಪೂಜೆಗಾಗಿ ಯಾವ ವಿಶಿಷ್ಟ ತಿಥಿಯನ್ನು ಹಿಡಿಯಬೇಕೆಂಬುದರ ಬಗ್ಗೆ ವಾದವಿದ್ದರೂ (ಹುಣ್ಣಿಮೆ, ಚತುರ್ದಶಿ, ಪ್ರತಿಪದೆ ಇತ್ಯಾದಿ) Sabbath ದ ಜೊತೆಗೆ ಚಂದ್ರನ ಸಂಬಂಧವಿದೆಯೆಂದು ತಜ್ಞರು ಹೇಳುತ್ತಾರೆ. 'Sinai' (The biblical Mountain) ಇದರ ಸಂಬಂಧ ಚಂದ್ರನ ಜೊತೆಗಿದೆ. As sin means 'moon'. this fast has been connected with Sinai' ಎಂದು ಕೆಲವರ ಅಭಿಪ್ರಾಯವಿದೆ. ಆದರೆ, ಬೇರೆ ಕೆಲವರಿಗೆ ಇದು ಒಪ್ಪಿಗೆ ಇಲ್ಲ. ಸಬ್ಬತ್ ಮೂಲ ಅರ್ಥತಿಂಗಳ ಎರಡು ಭಾಗಗಳು ಮತ್ತು ಆ ಅವಧಿಯಲ್ಲಿ ನಡೆಯುವ ವ್ರತೋಪವಾಸಗಳೆಂದು ಕೆಲತಜ್ಞರು ಅಭಿಪ್ರಾಯಪಡುತ್ತಾರೆ. ಅಂದರೆ : ವದ್ಯ ಚತುರ್ದಶಿಯಂದು ಚಂದ್ರನ ಪೂಜೆ ಮತ್ತು ಉಪವಾಸ ಎಂದು ಧ್ವನಿತವಾಗುತ್ತದೆ. ಹಿಂದೂಗಳಲ್ಲಿ ಪ್ರತಿ ತಿಂಗಳ ವದ್ಯ ಚತುರ್ದಶಿಯನ್ನು ಶಿವರಾತ್ರಿ ಎಂದು ಎಣಿಸುತ್ತಾರೆ. ಮಾಘಮಾಸದ ವದ್ಯ ಚತುರ್ದಶಿಯನ್ನು ಮಹಾಶಿವರಾತ್ರಿ ಎಂದು ಕರೆಯುತ್ತಾರೆ. 'ಶಿನ್ ಶಬ್ದದ ಸಂಬಂಧ ಶಿವನೊಂದಿಗೆ ಇರುವ ಬಗ್ಗೆ ಈ ಮೊದಲೇ ಹೇಳಿಯಾಗಿದೆ. ಶಿನ್, ಚೆನ್, ಕೆನ್ ಈ ಶಬ್ದಗಳ ಪರಸ್ಪರ ಸಂಬಂಧವನ್ನು ನೆನಪಿನಲ್ಲಿಡುವದು ಅವಶ್ಯವಾಗಿದೆ. "ಸರ್ವಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ" ಎಂದು ಶ್ರೀಯ ವರ್ಣನೆ ಮಾಡಿದ್ದು ಯೋಗ್ಯವಾಗಿದೆ. ಸರ್ವಮಂಗಲವೆಂದರೆ ಒಳ್ಳೆಯದು= 'ಚಾಂಗಲೇ' (ಚಾಂಗ=ಛಾನ್=ಜೆನ್=ಚೆನ್=ಕೆಂಪು)= ಹೀಗೆ ಮೊದಲು ಕೊಟ್ಟ ಅರ್ಥವನ್ನು ಪರಿಶೀಲಿಸಿದರೆ ಶಿವ ಶಬ್ದದ ಅರ್ಥಬೋಧವಾಗಬಹುದು.

ಮೇಲಿನ ಅವತರಣಿಕೆಯ ಆಧಾರದಿಂದ ಚಂದ್ರನೊಡನೆ ಸಂಬಂಧವಿರುವ ಈ ದೇವತೆಯ ಉಪಾಸನೆ ಯನ್ನು ಪತ್ತಿಜನರಿಂದ ಆರ್ಯರು ಸ್ವೀಕರಿಸಿದರು ಎಂದು ಹೇಳಿದರೆ ತಪ್ಪಾಗುವದಿಲ್ಲವಷ್ಟೆ.

ಪರಶುರಾಮನ ತಾಯಿ, ಜಮದಗ್ನಿಯ ಹೆಂಡತಿ ರೇಣುಕಾದೇವಿಯ ಪೂಜೆ ಕರ್ನಾಟಕ-ಮಹಾರಾಷ್ಟ್ರಗಳಲ್ಲಿ ಎಲ್ಲ ಕಡೆಗೂ ಇದೆ. ಆದರೆ, ಬೇರೆ ಬೇರೆ ಕಡೆಗೆ ಬೇರೆ ಬೇರೆ ಹೆಸರುಗಳಿಂದ ಈ ದೇವಿಯನ್ನು ಕರೆಯುತ್ತಾರೆ. ಕೆಲವು ಕಡೆಗೆ ಎಲ್ಲಮ್ಮ ಇನ್ನೂ ಕೆಲವು ಕಡೆಗೆ ರೇಣುಕಾ ಈ ಸ್ವರೂಪದಲ್ಲಿ ಈ ದೇವಿ ಕಾಣುತ್ತಾಳೆ. ಈ ಎರಡು ಪ್ರಾಂತಗಳಲ್ಲಿಯೇ ಈ ದೇವಿಯ ಪೂಜೆಯ ಪ್ರಸಾರ ಯಾಕೆ ಎಂಬುದೊಂದು ಪ್ರಶ್ನೆಯಿದೆ. ಕೇವಲ ಜಮದಗ್ನಿಯ ಹೆಂಡತಿಯೆಂದೆ ಇವಳ ಪೂಜೆ ನಡೆಯುವದಿಲ್ಲ. ಒಂದು ವೇಳೆ ಪರಶುರಾಮನ ತಾಯಿ ಎಂದು ಇವಳನ್ನು ಪೂಜಿಸಿದರೆ ಅದರಲ್ಲಿ ತಥ್ಯವಿದೆ. ಏಕವೀರಾ ಎಂಬ ಹೆಸರು ಇದನ್ನು ಸೂಚಿಸುತ್ತದೆ. ಕರ್ನಾಟಕದಲ್ಲಿ ರೂಢವಾಗಿರುವ ಎಲ್ಲಮ್ಮನ ಪೂಜಾ ವಿಧಿಯ ಮೇಲಿಂದ ಈ ಪೂಜೆ ರೇಣುಕೆಗಿಂತ ಭೂಮಾತೆಗೆ ಸಂಬಂಧಿಸಿದ್ದೆಂದು ಕಾಣುತ್ತದೆ. ಚೈತ್ರ ಮಾಸದ ಹುಣ್ಣಿಮೆಯಲ್ಲಿ ನಡೆಯುವ ಉತ್ಸವದಲ್ಲಿ ಈ ದೇವಿ ಮುತ್ತೈದೆಯಾಗುತ್ತಾಳೆ ಮತ್ತು ಮಾರ್ಗಶೀರ್ಷದ ಹುಣ್ಣಿಮೆಯ ದಿನ ಅವಳು ವಿಧವೆಯಾಗುತ್ತಾಳೆ (ರಂಡೆ ಹುಣ್ಣಿವೆ) ಮಾರ್ಗಶೀರ್ಷದಲ್ಲಿ ಬೆಳೆಯ ಕೊಯ್ಲು

ಮುಗಿದು ಭೂಮಿಯ ಸೌಭಾಗ್ಯ ನಷ್ಟವಾಗುತ್ತದೆ. ಅದೇ ಚೈತ್ರಮಾಸದಲ್ಲಿ ವಸಂತದ ಚಿಗುರು ಮೂಡುತ್ತದೆ. ಇಲ್ಲಿ ಋತುವಿನ, ನಿಸರ್ಗದ ಪೂಜೆಯೇ ಮೂಲದಲ್ಲಿರುವದು ಕಾಣುತ್ತದೆ ಮತ್ತು ಈ ಋತುಪೂಜೆ ದೇವಿಯ ಮೇಲೆ ಆರೋಪಿಸಿದಂತೆ ಕಾಣುತ್ತದೆ.

ಎಲ್ಲಮ್ಮನಿಗೆ ಸಂಬಂಧಿಸಿದ ಎಲ್ಲ ಉತ್ಸವಗಳು ಹುಣ್ಣಿಮೆಯಂದೇ ನಡೆಯುವದು ಕಾಕತಾಲೀಯ ನ್ಯಾಯವೇ? ಅದೇನೇ ಇದ್ದರೂ ಈ ಉತ್ಸವವೆಂದರೆ ಕರ್ನಾಟಕ-ಮಹಾರಾಷ್ಟ್ರಗಳ ವೈಶಿಷ್ಟ್ಯವಾಗಿದೆ. ಈ ಎರಡೂ ಜನಾಂಗಗಳ ನಡುವಿನ ಸ್ನೇಹ ಸಂಬಂಧದ ಅವಶೇಷವಾಗಿದೆ. 'ಎಲ್ಲಮ್ಮ' ಶಬ್ದದ ಅರ್ಥ ಎಲ್ಲರಿಗೂ ಹೊಳೆದಿರಲಿಕ್ಕಿಲ್ಲ. ಎಲ್ಲ ಅಂದರೆ ಸರ್ವ, ಅಮ್ಮ ಅಂದರೆ ತಾಯಿ. ಎಲ್ಲಮ್ಮ ಅಂದರೆ ಎಲ್ಲರ ತಾಯಿ, ಜಗದಂಬೆ, 'ಲೀಳಾಚರಿತ್ರ'ದಲ್ಲಿ ಕಾವೂಳಗಾಂವದಲ್ಲಿ ಏಕವೀರಾ ದೇವಿ ಇರುವಳೆಂದು ಉಲ್ಲೇಖಿಸಿದೆ. ಎಲ್ಲೂ ಆಯಿ ಈ ಹೆಸರು ಮಹಾರಾಷ್ಟ್ರದಲ್ಲಿ ಇಂದಿಗೂ ದೊರೆಯುತ್ತದೆ. ಕರ್ನಾಟಕದಲ್ಲಿಯ ಎಲ್ಲಮ್ಮನ ಕ್ಷೇತ್ರಕ್ಕೆ ವರ್‍ಹಾಡದಿಂದ ಕೂಡ ಭಕ್ತರು ಬರುತ್ತಾರೆ. ಶ್ರೀ ಚಕ್ರಧರರ ಶಿಷ್ಯರಲ್ಲಿ ಯಲ್ಹಂಭಟ್ಟ ಮತ್ತು ಯಲ್ಹಾಯಿ ಇದ್ದರೆಂದು 'ಲೀಳಾಚರಿತ್ರ'ದಿಂದ ತಿಳಿಯುತ್ತದೆ. ಶ್ರೀ ಚಕ್ರಧರರ ವಾಸ್ತವ್ಯ ಮಹಾರಾಷ್ಟ್ರದ ತಿದ್ದುಳು ನಾಡಿನಲ್ಲಿತ್ತೆಂದು ಅವರ ಚರಿತ್ರಕಾರರು ಅಭಿಮಾನದಿಂದ ಹೇಳುತ್ತಾರೆ. ಆ ಪ್ರಾಂತದ ಶಿಷ್ಟ ಮಂಡಳಿಯಲ್ಲಿ ಕೂಡ ಎಲ್ಲಂಭಟ್ಟ, ಯಲ್ಲೂಆಯಿ ಹೆಸರಿನ ವ್ಯಕ್ತಿಗಳಿದ್ದರೆಂಬುದು ನಿಶ್ಚಿತವಾಗಿದೆ. ಲೋಕಪ್ರಿಯ ದೇವತೆಗಳ ಹೆಸರನ್ನು ಮಕ್ಕಳಿಗೆ ಇಡುವ ಪದ್ಧತಿಯನ್ನು ಪರಿಶೀಲಿಸಿದರೆ ಈ ದೇವತೆ ವರ್‍ಹಾಡ ಮತ್ತು ಖಾನ ದೇಶಗಳಲ್ಲಿ ವರ್ಚಸ್ವೀ ದೇವತೆಯಾಗಿತ್ತೆಂದು ಹೇಳಬೇಕಾಗುತ್ತದೆ. ಅಂಬಾ (ದೇವಿ), ತುಕಾ (ದೇವಿ) ಯಂತೆ ಯಲ್ಲು (ದೇವಿ) ಈ ಹೆಸರುಗಳು ಸ್ತ್ರೀಯರಿಗಂತೂ ಸರಿಯೇ. ಗಂಡಸರ ಹೆಸರುಗಳು ಕೂಡ ಮಹಾರಾಷ್ಟ್ರದ ವರ್‍ಹಾಟ ಪ್ರದೇಶದಲ್ಲಿ ರೂಢವಾಗಿದ್ದವು ಮತ್ತು ಅವು ಬ್ರಾಹ್ಮಣರ ವರೆಗೆ ಹೋಗಿ ಮುಟ್ಟಿದ್ದವೆಂದು ಚಕ್ರಧರರ ಶಿಷ್ಯರ ಹೆಸರುಗಳಿಂದ ಗೊತ್ತಾಗುತ್ತದೆ. ಕರ್ನಾಟಕದಲ್ಲಿ ಯಲ್ಲಂಭಟ್ಟ ಈ ಹೆಸರು ರೇಣುಕಾಭಕ್ತರಲ್ಲಿ ಇನ್ನೂ ರೂಢಿಯಲ್ಲಿದೆ. ಎಲ್ಲಮ್ಮನ ಬದಲಾಗಿ ಏಕವೀರಾದಂಥ ಸಂಸ್ಕೃತ ಹೆಸರುಗಳು ಮುಂದೆ ಪ್ರಚಾರದಲ್ಲಿ ಬಂದಿರಬೇಕೆಂದು ತೋರುತ್ತದೆ.

ಈ ರೀತಿಯಲ್ಲಿ ಕರ್ನಾಟಕ-ಮಹಾರಾಷ್ಟ್ರಗಳಲ್ಲಿಯ ಮರ್ಗಜಾ (ಮರಗವ್ವ), ಮರೀ ಆಯಿ (ಮಾರಮ್ಮ) ದಂಥ ಇನ್ನೂ ಕೆಲವು ದೇವತೆಗಳನ್ನು ಉಲ್ಲೇಖಿಸಬಹುದು. ಆದರೆ, ವಿಸ್ತಾರಭಯದಿಂದ ಇಲ್ಲಿ ತಡೆಯುವದು ಒಳ್ಳೆಯದು.

ಧರ್ಮಪಂಥಗಳು

ಮಹಾರಾಷ್ಟ್ರದಲ್ಲಿ ಬೇರೆ ಬೇರೆ ಸಂಪ್ರದಾಯಗಳ ಅಭ್ಯಾಸ ಒಳ್ಳೆಯ ಆಸಕ್ತಿಯಿಂದ ಇತ್ತೀಚೆಗೆ ನಡೆಯತೊಡಗಿದೆ. ಆದರೆ, ಐತಿಹಾಸಿಕ ಕಾಲಕ್ರಮವನ್ನು ಅನುಸರಿಸಿ ಭಿನ್ನಭಿನ್ನ ಮತಗಳ ತೌಲನಿಕ ಅಭ್ಯಾಸ ಇನ್ನೂ ಆಗತೊಡಗಿಲ್ಲ. ಅದರಿಂದ ಮಹಾರಾಷ್ಟ್ರದ ಸಂಸ್ಕೃತಿಯಲ್ಲಿ ಕೆಲವು ಸ್ಥಾನಗಳು ಇನ್ನೂ ಸಂದಿಗ್ಧವಾಗಿ ಉಳಿದಿವೆ. ಉದಾಹರಣೆಗೆ ಮಹಾರಾಷ್ಟ್ರದ ಧರ್ಮಪಂಥಗಳೊಂದಿಗೆ ಮುಸಲ್ಮಾನರ ಸಂಬಂಧ ಇನ್ನೂ ಒಗಟಾಗಿಯೇ ಉಳಿದಿದೆ. ಶ್ರೀ ಜನಾರ್ದನ ಸ್ವಾಮಿಗಳು ಮುಸಲ್ಮಾನ ಅವಲಿಯಾನ ರೂಪದಲ್ಲಿ ದತ್ತಾತ್ರೇಯನ ಸಾಕ್ಷಾತ್ಕಾರವನ್ನು ಪಡೆದರೆಂದು ಒಂದು ದಂತಕತೆಯಿದೆ. ಆದರೆ, ಹಿಂದೂದೇವರು ಮುಸಲ್ಮಾನ ಅವಳಿಯಾನ ರೂಪವನ್ನು ತಳೆದು ದರ್ಶನ ನೀಡುವ ಸಂಗತಿ; ಇಂದು ಮುಸಲ್ಮಾನರ ಬಗ್ಗೆ ಇರುವ ತಿರಸ್ಕಾರದ ದೃಷ್ಟಿಕೋನದಿಂದಾಗಿ ಕೆಲವು ಪಂಡಿತರಿಗೆ ಆಶ್ಚರ್ಯಜನಕವಾಗಿ ಕಂಡು ಅವರು ಉದ್ವೇಗದಿಂದ ಏನೇನನ್ನೋ ಬರೆದುಬಿಡುತ್ತಾರೆ. ಕಿವಿಹರಕರೆಂದು ತಿರಸ್ಕೃತರಾಗಿದ್ದ ನಾಥ ಸಂಪ್ರದಾಯಿಗಳು ಜ್ಞಾನೇಶ್ವರನಂಥವರಿಗೆ ಹೇಗೆ ಗುರುಗಳಾಗಬಹುದು ಎಂಬ ಸಂಶಯ ಹುಟ್ಟಿ ಜ್ಞಾನೇಶ್ವರನ ಗುರುಗಳಾದ ನಾಥರು ಬೇರೆ ಪ್ರಕಾರದವರಾಗಿದ್ದರೆಂದು ಒಂದು ವಾದ ಹುಟ್ಟಿಕೊಂಡಿದೆ. ಇಂಥ ಹಲವಾರು ಒಗಟಗಳು ಇವೆ. ಅವುಗಳನ್ನು ನಿರ್ದೇಶಿಸುವದಕ್ಕಿಂತ, ಐತಿಹಾಸಿಕ ಹಿನ್ನೆಲೆಯಲ್ಲಿ ವಿಹಂಗಾವಲೋಕನ ಮಾಡಿದರೆ ಈ ಒಗಟುಗಳು ತಾವಾಗಿಯೇ ಬಿಚ್ಚಿಕೊಳ್ಳಬಹುದು.

ಮಹಾರಾಷ್ಟ್ರದಲ್ಲಿ ಮಹಾನುಭಾವ ಪಂಥ, ವಾರಕರಿ ಸಂಪ್ರದಾಯ, ಶ್ರೀ ರಾಮದಾಸ ಪಂಥ-ಹೀಗೆ ಅನೇಕ ಪಂಥಗಳು ಕಾಲಪ್ರವಾಹದಲ್ಲಿ ಬೇರೆ ಬೇರೆ ಹೆಸರುಗಳಿಂದ ಮುಂದೆ ಬಂದಿವೆ. ಆಯಾ ಪಂಥಗಳ ವೈಶಿಷ್ಟ್ಯಗಳನ್ನು ಸೂಚಿಸುವ ಹೆಸರುಗಳಿವೆ ನಿಜ. ಆದರೆ, 'ಗುರುದತ್ತ ಮಾರ್ಗ'ವೆಂದು ಇವೆಲ್ಲವುಗಳಿಗೂ ಅನ್ವಯವಾಗುವ ಹೆಚ್ಚು ಅನ್ವರ್ಥಕವಾದ ಹೆಸರನ್ನು ಸೂಚಿಸಬಹುದು. ಗುರುವಿನಿಂದ ದತ್ತವಾದದ್ದು ಮತ್ತು ಶಿಷ್ಯನಿಂದ ಸ್ವೀಕೃತವಾಗಿ ಮುಂದೆ ನಡೆಸಿಕೊಂಡದ್ದು ಈ 'ಗುರುದತ್ತ ಮಾರ್ಗ'ವೆಂದು ಹೇಳಬಹುದು, 'ಶ್ರೀ ಗುರುದೇವದತ್ತ' ಈ ಶಬ್ದದೊಂದಿಗೆ ಒಂದು ವಿಶಿಷ್ಟಮೂರ್ತಿಯೊಂದು ಕಣ್ಣಮುಂದೆ ನಿಲ್ಲುತ್ತದೆ. ಮೂರು ಮುಖಗಳ ಶ್ರೀದತ್ತಮೂರ್ತಿಯ ಚಿತ್ರ ಮಹಾರಾಷ್ಟ್ರದಲ್ಲಿ ವಿಖ್ಯಾತವಾಗಿದೆ. ಈ ಮೂರು ಮುಖಗಳು ಬ್ರಹ್ಮ, ವಿಷ್ಣು, ಮಹೇಶ್ವರವೆಂದು ಹೇಳಲಾಗುತ್ತಿದೆ. ಕಾಷಾಯವಸ್ತ್ರವನ್ನು ಧರಿಸಿದ ಈ ತ್ರಿಮೂರ್ತಿಯ ಹತ್ತಿರ ಒಂದು ಆಕಳು ನಿಂತಿರುತ್ತದೆ ಮತ್ತು ಹತ್ತಿರ ನಾಲ್ಕು ನಾಯಿಗಳಿರುತ್ತವೆ. ಗೋಮಾತೆ ಪೃಥ್ವಿಯ ಪ್ರತೀಕವೆಂದು ತಿಳಿುವಳಿಕೆ ಇದೆ. ಆದರೆ, ಮಗ್ಗುಲಲ್ಲಿರುವ ನಾಯಿಗಳ ಅರ್ಥವೇನಿರಬಹುದು?

ಮಗ್ಗುಲಲ್ಲಿರುವ ಈ ನಾಲ್ಕು ನಾಯಿಗಳನ್ನು ಕಂಡಾಗ ದತ್ತಾತ್ರೇಯ ವೈದಿಕ ಸಂಪ್ರದಾಯದ ದೇವತೆ ಹೇಗೆ ಎಂದು ಸಂಶಯ ಸುಳಿಯುತ್ತದೆ. ನಾಯಿ ಎಂದರೆ ವೈದಿಕರಿಗೆ ಮೆಚ್ಚಿಗೆಯಾಗದ ಅಪವಿತ್ರ ಪ್ರಾಣಿ[೧೦] ಅದನ್ನು

ಮುಟ್ಟಿದರೆ ಸಚೈಲ ಸ್ನಾನ ಮಾಡಬೇಕೆಂದು ಧರ್ಮಸೂತ್ರದ ಆಜ್ಞೆಯಿದೆ. 'ಶುನೋಪಹತಃ ಸಚೈಲೋಽ ವಗಾಹೇತ' ಅಲ್ಲದೆ

> ಶಾನಾ ದೃಷ್ಟಸ್ತು ಯೋ ವಿಪ್ರೋ ನದೀಂ ಗತ್ವಾ ಸಮುದ್ರಗಾಮ್।
> ಪ್ರಾಣಾಯಾಮಶತಂ ಕೃತ್ವಾ ಧೃತಂ ಪ್ರಾಪ್ಯ ವಿಶುದ್ಧ್ಯತಿ॥
> ಸುವರ್ಣ ರಜತಾಭ್ಯಾಂ ವಾ ಗವಾಂ ಶೃಂಗೋದಕೇನ ವಾ
> ನವೈಶ್ಚ ಕಲಶೈಸ್ನಾತ್ವಾ ಸದ್ಯ ಏವ ಶುಚಿರ್ಭವೇತ್॥

(ಬೌಧಾಯನ ಧರ್ಮಸೂತ್ರ ೧೨೪-೧೨೫)

ಈ ಧರ್ಮಸೂತ್ರವು ಕ್ರಿ. ಪೂ. ೫೦೦ರಿಂದ ೨೦೦ರ ಸುಮಾರಿಗೆ ರಚಿತವಾಗಿರಬೇಕೆಂದು ತಜ್ಞರು ಮತವಿದೆ. ಅಗ್ನಿಹೋತ್ರಿ ಮೊದಲಾದ ಶ್ರದ್ಧಾವಂತ ಬ್ರಾಹ್ಮಣರಲ್ಲಿ ಈ ಪರಂಪರೆ ಇನ್ನೂ ರೂಢವಾಗಿದೆ. ನಾಯಿಯಂಥ ಅಪವಿತ್ರ ಪ್ರಾಣಿಯನ್ನು ಹತ್ತಿರವಿಟ್ಟುಕೊಂಡ ದೇವರು, ಅದರಲ್ಲಿಯೂ ಸನ್ಯಾಸಿ ಇಡು ವೈದಿಕ ಮಾರ್ಗವಾಗಿರುವದು ಸಾಧ್ಯವೇ? ದತ್ತನ ಚಿತ್ರದಲ್ಲಿರುವ ನಾಯಿಗಳು ನಾಯಿಗಳೇ ಅಲ್ಲ. ನಾಯಿಗಳ ರೂಪದಿಂದ ವೇದಗಳು ದತ್ತನನ್ನು ಅನುಸರಿಸುತ್ತವೆಂದು ಹೇಳಲಾಗುತ್ತದೆ. ಆದರೆ, ಯಾವುದೇ ವೈದಿಕ ದೇವತೆಯ ಹಿಂದೆ ನಾಯಿ (ವೇದ)ಗಳಿವೆಯೆಂದು ಹೇಳಿಲ್ಲ. ಮಲ್ಹಾರಿ ಮಾರ್ತಂಡನ ಹತ್ತಿರ ನಾಯಿಗಳಿವೆ. ಆದರೆ ಅವು ವೇದಗಳ ಪ್ರತೀಕಗಳೆಂದು ಯಾರೂ ಹೇಳುವುದಿಲ್ಲ. ಮಲ್ಹಾರಿ ಮಾರ್ತಂಡನು ಮೂಲದಲ್ಲಿ ಆರ್ಯೇತರ ಪತ್ತಿ ಜನರ ದೇವರು. ಪತ್ತಿಜನರಿಗೆ ನಾಯಿ ಮೆಚ್ಚಿಗೆಯ ಪ್ರಾಣಿಯಾಗಿದೆ. ತಮಿಳು ಸಾಹಿತ್ಯದಲ್ಲಿ ಕಲ್ಲೀಮೀಸೆ ಮತ್ತು ನಾಯಿಗಳು ಹಟ್ಟಿಕಾರ ವಡುಕರ ವೈಶಿಷ್ಟ್ಯಗಳೆಂದು ಹೇಳಲಾಗಿದೆ. ವಿದರ್ಭದಲ್ಲಿ ಹುಲಿಗಳನ್ನು ಕೊಲ್ಲುವ ನಾಯಿಗಳು (ಮಾಚಲಃ) ಇದ್ದವೆಂಬ ವರ್ಣನೆ ಜೈಮಿನೀಯ ಉಪನಿಷದ್ ಬ್ರಾಹ್ಮಣದಲ್ಲಿ ಬರುತ್ತದೆ.[೫೧] ಹಟಗಾರ-ಧನಗರರಿಗೆ ನಾಯಿಗಳ ಆವಶ್ಯಕತೆ ಎಷ್ಟಿತ್ತೆಂಬುದು ಸಹಜವಾಗಿ ಅರಿವಿಗೆ ಬರುವ ಸಂಗತಿಯಾಗಿದೆ. 'ಶ್ವಪತಿಭ್ಯಃ' ರುದ್ರನ ಈ ವರ್ಣನೆ ಕೂಡ ನೆನಪಿಗೆ ತಂದುಕೊಳ್ಳುವಂಥದಿದೆ. ಇದರಿಂದ ರುದ್ರ-ಗಿರಿಶ ಆರ್ಯೇತರರ ದೇವರೆಂಬುದು ಮತ್ತೊಮ್ಮೆ ನಿದರ್ಶನಕ್ಕೆ ಬರುತ್ತದೆ.

ವೇದಗಳು ಅಪೌರುಷೇಯ; ಆ ವೇದಗಳನ್ನು ಸಂಪೂರ್ಣವಾಗಿ ಅನುಸರಿಸುವದೇ ವೈದಿಕರ ನಿಷ್ಠೆಯಾಗಿದೆ. ಹಾಗಿದ್ದಾಗ "ಯಾವಸ್ಮಾಕಂ ಸುಚರಿತಾನಿ ತಾನಿ ತ್ವಯೋಪಾಸ್ಯಾನಿ ನೋ ಇತರಾಣಿ" (ತೈತ್ತಿರೀಯ ಉಪನಿಷತ್). ಈ ಆದೇಶದಲ್ಲಿ ಶಿಷ್ಯನಾದವನು ಜಾಗ್ರತಬುದ್ಧಿಯಿಂದ ಗುರುವಿನಿಂದ ಗ್ರಾಹ್ಯವಾದದ್ದಷ್ಟನ್ನೇ ತೆಗೆದುಕೊಳ್ಳಬೇಕು ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಕಣ್ಣುಮುಚ್ಚಿಕೊಂಡು ಗುರು ಹೇಳಿದ್ದನ್ನು ಸಮಗ್ರವಾಗಿ ಆಚರಿಸಬೇಕೆಂದು ಹೇಳಿಲ್ಲ. ಗುರುವಿನ ಉಗುಳನ್ನು ಕುಡಿಯುವದು ವೈದಿಕ ಸಂಪ್ರದಾಯಕ್ಕೆ ಮಾನ್ಯವಿಲ್ಲ.

'ಶ್ರದ್ಧೆಯೊಂದೇ ಉದ್ಧಾರಕ ಶಕ್ತಿ. ಗುರುವಿನ ವಾಕ್ಯವೇ ವೇದವಾಕ್ಯ ಗುರುಮುಖದಿಂದಲ್ಲದೆ ಜ್ಞಾನವಾಗುವುದು ಶಕ್ಯವೇ ಇಲ್ಲ. ಗುರುವಿಗಿಂತ ಯಾರೂ ಶ್ರೇಷ್ಠರಲ್ಲ' ಇದು ಯತಿಪಂಥದ ವಿಚಾರ ಸರಣಿಯಾಗಿದೆ. "ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ। ಗುರುಸ್ಸಾಕ್ಷಾತ್ ಪರಂಬ್ರಹ್ಮ" ಈ ರೀತಿಯ ದೃಢಶ್ರದ್ಧೆ ಈ ಮಾರ್ಗದ ವೈಶಿಷ್ಟ್ಯವಾಗಿದೆ. 'ಶಿಷ್ಯಾದಿಚ್ಛೇತ್ ಪರಾಜಯಂ' ಈ ರೀತಿಯ ಮನೋವೃತ್ತಿಗೆ ಇಲ್ಲಿ ಅವಕಾಶವಿಲ್ಲ ಗುರುವೇ ದೇವರೆಂದು ತಿಳಿಯುವದು ಗುರುಮಾರ್ಗ. ಒಂದು ಕಾಲಕ್ಕೆ ಈ ಪಂಥ ನಿರೀಶ್ವರವಾದಿಯಾಗಿತ್ತೆಂದು ಹೇಳಲು ಸಾಕಷ್ಟು ಅವಕಾಶವಿದೆ. ಈ ಮಾರ್ಗದಲ್ಲಿ ಗುರು ದೇವರ ಸ್ಥಾನದಲ್ಲಿರುತ್ತಾನೆ. ಗುರು ದೇವರ ಪ್ರತಿನಿಧಿಯೆಂದು ಹೇಳಲಾಗುತ್ತದೆ.

> ಗುರುಃ ಪಿತಾ ಗುರುರ್ಮಾತಾ ಗುರುದೇವ ಪರಃ ಶಿವಃ।
> ಶಿವೇ ರುಷ್ಟೇ ಗುರುಸ್ತ್ರಾತಾ ಗುರೌ ರುಷ್ಟೇ ನ ಕಶ್ಚನ॥
> ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ।
> ಗುರುದೇವ ಪರಂ ತತ್ವಂ ತಸ್ಮಾತ್ ಗುರುಮುಪಾಶ್ರಯೇತ್॥

ಈ ಗುರುಮಾಹಾತ್ಮ್ಯ ಬುದ್ಧಿಪ್ರಧಾನರಿಗೆ ಒಪ್ಪಿಗೆಯಾಗದು. ಬುದ್ಧಿ ಪ್ರಧಾನ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯನ್ನು ಸರ್ವಗುಣ ಪರಿಪೂರ್ಣ, ಅನಂತ ಗುಣಯುಕ್ತ, ಪೂರ್ಣಪ್ರಜ್ಞ ಎಂದು ಮನ್ನಿಸುವದು ಸಾಧ್ಯವಿಲ್ಲ. ಅವನ ಮನಸ್ಸು ಸಾರ್ವಕಾಲಿಕವಾದ, ಸರ್ವವ್ಯಾಪಿಯಾದ, ಅವ್ಯಕ್ತವಾದ ಶಾಶ್ವತತತ್ವದ ಕಡೆಗೇ ಎಳೆಯುತ್ತದೆ. ಭಾವನಾಪ್ರಧಾನರಿಗೆ ಅವ್ಯಕ್ತ ಮತ್ತು ಅಮೂರ್ತ ತತ್ವ ತಿಳುವಳಿಕೆಗೆ ಬರುವದಿಲ್ಲ. ಅವರ ಒಲವು ವಿಶೇಷವಾಗಿ ಸಾಕಾರ, ಸಗುಣ ಮತ್ತು ನಡೆದಾಡುವ ಜೀವಂತ ವಸ್ತುವಿನ ಕಡೆಗೇ ಇರುತ್ತದೆ. ಅವ್ಯಕ್ತವಾದ ಮಹಾಂತ ತತ್ವಕ್ಕೆ ಬಹಳಾದರೆ "ಸಹಸ್ರ ಶೀರ್ಷಾಪುರುಷಃ" ಎಂದು ಯಾವುದೋ ವ್ಯಕ್ತರೂಪವನ್ನು ಕೊಟ್ಟು ಧೀಮಂತನಾದವನು ತನ್ನ ಭಾವನೆಗಳನ್ನು ತೃಪ್ತಿಗೊಳಿಸುತ್ತಾನೆ. ಆದರೆ, ಭಾವನಾಪ್ರಧಾನ ವ್ಯಕ್ತಿ ಮರ್ತ್ಯವಸ್ತುವಿನಲ್ಲಿಯೇ ಅವ್ಯಕ್ತವಾದ ಮಹಾಂತ ತತ್ವವನ್ನು ಆವಾಹನ ಮಾಡಿ ತನ್ನ ಬುದ್ಧಿಯನ್ನು ಅಲ್ಲಿಯೇ ತೊಡಗಲು ಹಚ್ಚುತ್ತಾನೆ. ಮೊದಲನೆಯವನು ತತ್ವಜ್ಞನಾದರೆ ಎರಡನೆಯವ ಭಕ್ತಿಯೋಗಿ. ಮೊದಲನೆಯ ಜ್ಞಾನಮಾರ್ಗಿಯಾದರೆ ಎರಡನೆಯ ಗುರುಮಾರ್ಗಿ.

ಗುರುಸಂಪ್ರದಾಯದಲ್ಲಿ ತಾವು ನಂಬಿಕೊಂಡ ಗುರುವಿನಲ್ಲಿ ಅಥವಾ ವೀರನಲ್ಲಿ ದೇವತ್ವವನ್ನು ಕಲ್ಪಿಸಿ, ಅದರ ಪ್ರತೀಕದ, ಸಮಾಧಿಯ ಪೂಜೆ ಮಾಡುವದು ಒಂದು ಮಹತ್ವದ ಅಂಗವಾಗಿದೆ. ಸಮಾಧಿಯ ಮೇಲೆ ಲಿಂಗ ಅಥವಾ ಮೂರ್ತಿಯನ್ನು ಸ್ಥಾಪಿಸಿ ಪೂಜೆಮಾಡುವ ಕ್ರಮ ಅನೇಕಕಡೆಯಲ್ಲಿ ನೋಡಲು ಸಿಗುತ್ತದೆ. ವೀರಗಲ್ಲುಗಳು ಇದಕ್ಕೊಂದು ಉದಾಹರಣೆಯಾಗಿದೆ. ಧೀ-ಉಪಾಸಕರಾದ ವೈದಿಕ ಮತದ ವೇದಗಳೇ ಅನುಯಾಯಿಗಳಾಗಿ, ಅವಧೂತ, ನಿರಂಜನನಾದ ದತ್ತನ ಹಿಂದೆ ನಾಯಿಗಳಂತೆ ಅನುಸರಿಸಿದವು ಎಂಬ ಪ್ರತೀಕ (Symbolism) ಏನೋ ವಿಶೇಷವಾದ ವ್ಯಂಗ್ಯಾರ್ಥವಿದೆ.* ವೇದಗಳು ನೆರಳಿನಂತೆ ಹಿಂಬಾಲಿಸುತ್ತವೆ. ಆದರೆ ವೇದಗಳನ್ನು ಅನುಸರಿಸಿ ಈ ದೇವತೆ ಹೋಗುವದಿಲ್ಲ ಎಂಬ ಧ್ವನ್ಯರ್ಥ ಈ ಚಿತ್ರದಲ್ಲಿಲ್ಲವೇ? ತ್ರಿಮೂರ್ತಿ ದತ್ತನ ಕಲ್ಪನೆಯ ಹಿಂದೆ ಬ್ರಹ್ಮ, ವಿಷ್ಣು, ಮಹೇಶ್ವರರ ಐಕ್ಯದ ಸೂಚನೆ ಇದೆ. ಆದರೆ, ಆ ದೇವರಿಗೆ ಮೂರು ಮುಖಗಳು ಎಂಬುದು ಕೆಲವರ ತಿಳುವಳಿಕೆಯಾಗಿದೆ. ಆದರೆ, ಪುರಾಣದಲ್ಲಿ ಈ ಕಲ್ಪನೆಗೆ ಆಧಾರವಿಲ್ಲ. ಶ್ರೀಭಾಗವತಾದಿ ಪುರಾಣಗಳಲ್ಲಿ ದತ್ತನ ಹೆಸರಿದೆ. ವೇದಗಳಲ್ಲಿ ದತ್ತನ ಉಲ್ಲೇಖವಿಲ್ಲ. ಪುರಾಣಗಳಲ್ಲಿ ದತ್ತನ ಕಥೆ ಹೀಗಿದೆ. ಅತ್ರಿಋಷಿಯಿಂದ ಅನಸೂಯೆಗೆ ಹತ್ತು ಪುತ್ರರು ಜನಿಸಿದರು. ಅವರಲ್ಲಿ ಒಬ್ಬ ದತ್ತಾತ್ರೇಯ. ಬ್ರಹ್ಮ, ವಿಷ್ಣು, ಮಹೇಶ ಇವರ ಅಂಶಗಳಿಂದ ಅತ್ರಿಗೆ ಹುಟ್ಟಿದ ಮಕ್ಕಳಲ್ಲಿ ಬ್ರಹ್ಮನು ಸೋಮರೂಪ. ವಿಷ್ಣು ದತ್ತರೂಪ ಮತ್ತು ರುದ್ರ ದುರ್ವಾಸರೂಪ-ಹೀಗೆ ಮೂರು ಬೇರೆ ಬೇರೆ ಮಕ್ಕಳಾದರು. ದತ್ತ ಕೇವಲ ವಿಷ್ಣುವಿನ ಅವತಾರ ಎಂದು ಸ್ಪಷ್ಟವಾಗುತ್ತದೆ. ಹೀಗಿದ್ದಾಗ ಈಗ ಎಲ್ಲೆಡೆಗೂ ಪ್ರಸಿದ್ಧವಾಗಿರುವ ದತ್ತನ ಚಿತ್ರಗಳಲ್ಲಿ ತ್ರಿಮೂರ್ತಿಗಳು ಒಟ್ಟುಗೂಡಿದ್ದರ ಕಾರಣವೇನು?

ದತ್ತಾತ್ರೇಯ ಒಬ್ಬ ಯತಿ ಎಂಬ ಸಂಗತಿ ಸರ್ವಶ್ರುತವಾಗಿದೆ. ಯತಿಪಂಥ ಮೂಲದಲ್ಲಿ ವೈದಿಕವಲ್ಲ ಎಂದು ಹೇಳಲು ಸಾಕಷ್ಟು ಅವಕಾಶವಿದೆ. ಆರ್ಯರ ವೈಶಿಷ್ಟ್ಯವೆಂದರೆ ಅಗ್ನಿಪೂಜೆ. ಆದರೆ, ಯತಿಗಳು ನಿರಗ್ನಿಗಳು. ಅಗ್ನಿ ಎಂದರೆ ಶಿಖಿ, ಬ್ರಾಹ್ಮಣರ ಶಿಖೆ ಇದು. ಬ್ರಾಹ್ಮಣರ ಶಿಖಿ (ಅಗ್ನಿ)ಯ ಉಪಾಸನೆಯನ್ನು ಸೂಚಿಸುತ್ತದೆ. ಶಿಖೆ ನಷ್ಟವಾದರೆ ದ್ವಿಜತ್ವ ನಷ್ಟವಾದಂತೆಯೇ. ಯತಿಯಾದರೆ ಬ್ರಾಹ್ಮಣನ ಶಿಖೆ ಮತ್ತು ಯಜ್ಞೋಪವೀತಗಳಿಗೆ ಸಂಚಕಾರ ಬಂದಂತೆ 'ನಿರಗ್ನಿ' ಎಂಬ ಶಬ್ದವನ್ನು ಬ್ರಾಹ್ಮಣರು ಬೈಗಳಂತೆ ಉಪಯೋಗಿಸುತ್ತಿದ್ದರು. ಶಿಖೆ ಮತ್ತು ಜನಿವಾರ ಈ ಎರಡೂ ಪ್ರತೀಕಗಳನ್ನು ನಿರಾಕರಿಸಿ ನಿರಗ್ನಿತನವನ್ನು ಸ್ವೀಕರಿಸಲು ಹೇಳುವ ಪಂಥ ವೈದಿಕವಾಗಿರುವದು ಸಾಧ್ಯವೇ? ಇಂದ್ರನು ಯತಿಗಳ ವೈರಿಯಾಗಿದ್ದನೆಂದು ತಿಳಿದು ಬರುತ್ತದೆ.[೫೨] ಇಂದ್ರ ಯತಿಗಳನ್ನು ಕೊಂದು ತೋಳಗಳಿಗೆ ತಿನ್ನಿಸಿದ (ಐತರೇಯ ಬ್ರಾಹ್ಮಣ ೭-೨೮) ಕೆಲವು ಯತಿಗಳು ಶರಣು ಬಂದದ್ದರಿಂದ ಇಂದ್ರ

---

* ಶಂಬಾ ಜೋಶಿ ಅವರು Symbol ಎಂಬ ಪದವನ್ನು 'ಸಂಕೇತ' ಎಂಬ ಪರಿಭಾಷೆಯಲ್ಲಿ ಸಾಂಸ್ಕೃತಿಕವಾಗಿ ಬಳಸುತ್ತಾರೆ. ಪ್ರತೀಕ ಎಂಬ ಪರಿಭಾಷೆಗಿಂತ 'ಸಂಕೇತ' ಎಂಬುದು ಸಾಂಸ್ಕೃತಿಕಾರ್ಥದಲ್ಲಿ ಮಹತ್ವವುಳ್ಳ ಪರಿಭಾಷೆಯಾಗಿದೆ. (ಸಂ)

ಅವರನ್ನು ರಕ್ಷಿಸಿದ, ಎಂದು ಮತ್ತೊಂದು ಉಲ್ಲೇಖವೂ ದೊರೆಯುತ್ತದೆ. ಇದರಿಂದ ಮುಂದೆ ವೈದಿಕರು ಯತಿಪಂಥವನ್ನು ಹತ್ತಿರ ತೆಗೆದುಕೊಂಡರೂ ಪೂರ್ವಕಾಲದಲ್ಲಿ ಅದು ಅವರಿಗೆ ಒಪ್ಪಿಗೆ ಇರಲಿಲ್ಲವೆಂಬುದು ಇದರಿಂದ ಧ್ವನಿತವಾಗುತ್ತದೆ.

ಯತಿಸಂಪ್ರದಾಯ ಅವೈದಿಕರದೆಂದು ಶ್ರೀ ರಮಾಪ್ರಸಾದ ಚಂದಾ, ಇವರು ಮೊಹೆಜೊಂದಾರೋದ ಬಗ್ಗೆ ತಮ್ಮ ಒಂದು ಲೇಖನದಲ್ಲಿ ಪ್ರತಿಪಾದಿಸಿದ್ದಾರೆ.[೫೩]

ಶುದ್ಧವೈದಿಕ ಮಾರ್ಗ ಯತಿಪಂಥಕ್ಕೆ ವಿರೋಧಿಯಾಗಿದೆ* ಕಾರಣವೆಂದರೆ ಯಜ್ಞಸಂಸ್ಥೆ ವೈದಿಕ ಮಾರ್ಗದ ತಳಹದಿಯಾಗಿದೆ ಮತ್ತು ಅಗ್ನಿ ಹೋತ್ರಿಯಾದವನು ಗೃಹಸ್ಥಾಶ್ರಮಿಯಾಗಿರಲೇಬೇಕಾಗುತ್ತದೆ. ಪೂರ್ವಮೀಮಾಂಸೆ ನಿಷ್ಠುರ ವೈದಿಕ ಮತಾನುಯಾಯಿಯಾಗಿದ್ದು ಸನ್ಯಾಸಪಂಥಕ್ಕೆ ವಿರುದ್ಧವಾಗಿದೆ. ಋಗ್ವೇದ, ಯಜುರ್ವೇದ, ಸಾಮವೇದ ಇವುಗಳ ನಂತರದ ಕಾಲದಲ್ಲಿ ಉಪನಿಷತ್ತು ಮುಂದೆ ಬಂದವು. ಉಪನಿಷತ್ತುಗಳಲ್ಲಿಯ ತತ್ವಜ್ಞಾನ ಬೇರೆ ದಿಕ್ಕಿಗೆ ಕವಲೊಡೆಯಿತು. ಉಪನಿಷತ್ತುಗಳು ಯತಿಪಂಥಕ್ಕೆ ಪೋಷಕವಾಗಿದೆ. ಈ ತತ್ವಜ್ಞಾನ ವೇದಗಳ ವೈಚಾರಿಕತೆಗಿಂತ ಭಿನ್ನವಾದದ್ದು. ಔಪನಿಷದಿಕ ಸನ್ಯಾಸಮಾರ್ಗವೆಂದರೆ ಯಜ್ಞಸಂಸ್ಥೆಯ ಉತ್ಕರ್ಷದ ಹೊತ್ತಿಗೆ ಕೆಲಕಾಲ ಹಿಂದೆ ಬಿದ್ದಿದ್ದ ವೇದಪೂರ್ವಕಾಲದ ಯತಿಪಂಥವೇ ಆಗಿದೆ. ವೈದಿಕ ಯಜ್ಞಯಾಗಾದಿಗಳ ಮಹತ್ವ ಕಡಿಮೆಯಾದಂತೆ ಮತ್ತೆ ಯತಿಧರ್ಮ ತಲೆಎತ್ತಿತು. ಇದು ಸಂಪೂರ್ಣವಾಗಿ ಯಜ್ಞಸಂಸ್ಥೆಯ ವಿರೋಧಿಯಾದ್ದರಿಂದ ಆರ್ಯರು ಯತಿಗಳನ್ನು ಯಜ್ಞಭೂಮಿಯ ಒಳಗೆ ಕಾಲಿಡಲು ಬಿಡಲಿಲ್ಲ. ಆದರೆ, ನಮ್ಮ ದೇಶದಲ್ಲಿಯ ಸಮನ್ವಯಬುದ್ಧಿ ಇಂಥ ಹೊತ್ತಿನಲ್ಲಿ ಯಾವಾಗಲೂ ಮುಂದೆ ಬರುತ್ತದೆ. 'ಯಜ್ಞ' ಶಬ್ದವು ಅರ್ಥವನ್ನೇ ಬದಲು ಮಾಡಿ, ಯಜ್ಞವೆಂದರೆ ಕೇವಲ ಅಗ್ನಿಕ್ರಿಯೆಯೇ ಅಲ್ಲ. ಅದರಲ್ಲಿ ಅನೇಕ ಬೇರೆ ವಸ್ತುಗಳು ಸಮಾವೇಶಗೊಳ್ಳುತ್ತವೆಂದು ಪ್ರತಿಪಾದಿಸುವದು ಪ್ರಾರಂಭವಾಯಿತು. ಕೌಷೀತಕಿ ಮೊದಲಾದ ಉಪನಿಷತ್ತುಗಳಲ್ಲಿ ಈ ರೀತಿಯ ಅಭಿಪ್ರಾಯಗಳು ನಮಗೆ ದೊರೆಯುತ್ತವೆ. 'ಯಜ್ಞ' ಶಬ್ದದ ಅರ್ಥ ಎಷ್ಟು ವ್ಯಾಪಕವಾಗಿದೆಯೆಂಬುದು ನಮಗೆ ಭಗವದ್ಗೀತೆಯಲ್ಲಿ ಸರಿಯಾಗಿ ಕಂಡುಬರುತ್ತದೆ. 'ಯಜ್ಞ' ಶಬ್ದದ ಅರ್ಥವನ್ನು ಬದಲು ಮಾಡುವ ಆವಶ್ಯಕತೆ ಏನಿತ್ತು? ಅಗ್ನಿಯಲ್ಲಿ ಆಹುತಿ ಹಾಕುವುದು ಮೊದಲಾದ ವಿಧಿಗಳಿಂದ ಮಾತ್ರ ಯಜ್ಞವಾಗುವದಿಲ್ಲವಾದರೆ, ಜಗತ್ತಿನಲ್ಲಿ ನಡೆದ ಕ್ರಿಯೆಗಳೆಲ್ಲ ಯಜ್ಞಪರವೇ ಆಗಿವೆ ಎಂದು ಪ್ರತಿಪಾದಿಸುವ ಆವಶ್ಯಕತೆ ಒಂದು ಕಾಲಕ್ಕೆ ಉಂಟಾಯಿತು. ಹಳೆಮಾತಿಗೆ ಬಿದ್ದ ಯಜ್ಞಸಂಸ್ಥೆಯನ್ನು ತಿರಸ್ಕರಿಸಿ ಹೊರಗೆ ಬೀಳುವ ಜನರಿಗೆ ಏನಾದರೂ ಸಮಾಧಾನ ಹೇಳಿ ಅವರನ್ನು ಒಳಗೇ ಇಟ್ಟುಕೊಳ್ಳುವ ಪ್ರಯತ್ನ ಇದಾಗಿತ್ತು. ವೇದಗಳಲ್ಲಿ ಹೇಳಿದಂತೆ ಹೋಮಹವನಾದಿಗಳನ್ನು ಬಿಟ್ಟು ಕೊಟ್ಟರು, ಈಶ್ವರಾರ್ಪಣ ಬುದ್ಧಿಯಿಂದ ಮಾಡುವದೆಲ್ಲ ಯಜ್ಞವೇ ಆಗಿದೆ. ಎಂದು ವಿರೋಧಿ ಪಕ್ಷದವರಿಗೆ ಸಮಾಧಾನ ಹೇಳುವ ಪರಿಸ್ಥಿತಿ ಒದಗಿದರೆ ಅದು ಯತಿಪಂಥದ ವಿಜಯವೆಂದೇ ಹೇಳಬೇಕಾಗುತ್ತದೆ. "ವೇದವಾದರತಾಃ", "ತ್ರೈಗುಣ್ಯವಿಷಯೋ ವೇದಾಃ" ಗೀತೆಯೊಳಗಿನ ಈ ಮಾತುಗಳು ವೈದಿಕ ಮಾರ್ಗದಲ್ಲಿ ನಿಷ್ಠುರ ಶ್ರದ್ಧೆಯಿದ್ದ ಪೂರ್ವಮೀಮಾಂಸೆಯನ್ನು ಟೀಕಿಸುತ್ತವೆ. ಈ ಉಲ್ಲೇಖ ಯತಿಪಂಥದ ಗೆಲುವಿನ ಸಂಕೇತವಾಗಿದೆ.*

ಆರ್ಯರು ಶೈವ ಪಂಥೀಯರಿಂದ ಈ ಯತಿಧರ್ಮವನ್ನು ಎತ್ತಿಕೊಂಡರೆಂದು ತೋರುತ್ತದೆ. ಬ್ರಾಹ್ಮಣರಲ್ಲಿ ಸಂನ್ಯಾಸ ಮಾರ್ಗಕ್ಕೆ ಅನುಕೂಲ ಮನೋವೃತ್ತಿಯವರೆಂದರೆ ಶೈವಪಂಥೀಯರು. ಯತಿಧರ್ಮ ಅತಿ ಪುರಾತನ

---

* ಯತಿ, ಮುನಿ ಮತ್ತು ಋಷಿ - ಈ ಸಂಪ್ರದಾಯಗಳಲ್ಲಿ ವ್ಯತ್ಯಾಸವುಂಟೆಂದು ಸ್ಪಷ್ಟವಾಗಿ 'ಋಗ್ವೇದಸಾರ : ನಾಗಪ್ರತಿಮಾ ವಿಚಾರ, ಎಂಬ ಬೃಹತ್ ಗ್ರಂಥದಲ್ಲಿ ಸಾಧಾರವಾಗಿಯೂ ಸಾಂಕೇತಿಕವಾಗಿಯೂ ಸಾಂಸ್ಕೃತಿಕವಾಗಿಯೂ ವ್ಯಾಖ್ಯಾನಿಸಿದ್ದಾರೆ. (ಸಂ).

* ಭಗವದ್ಗೀತೆಯ ಸಂಪೂರ್ಣ ಆಶಯವೇ 'ನಿವೃತ್ತಿ ಮಾರ್ಗ' ಪ್ರಚೋದಕವಾಗಿದೆ. ಶಂಕರರು ಗೀತೆಯ ಭಾಷ್ಯ ಭೂಮಿಕೆಯಲ್ಲಿ ಇದನ್ನು ಆಡಿಯೂ ಇದ್ದಾರೆ. ಶಂಬಾ ಅವರು 'ಶ್ರೀಮದ್ ಭಗವದ್ ಗೀತೆಯಲ್ಲಿ' ಹುದುಗಿರುವ ರಾಜಯೋಗದ ಸ್ವರೂಪ' ಎಂಬ ಪುಸ್ತಕದಲ್ಲಿ ಸಾಂಕೇತಿಕ ಆಶಯದ ಹಿನ್ನೆಲೆಯಲ್ಲಿ ಈ ವಿವರಗಳು ಸಾಂಸ್ಕೃತಿಕವಾಗಿ ಬರುತ್ತವೆ (ಸಂ)

ಕಾಲದಿಂದ ವೈದಿಕಮಾರ್ಗದ ಮಹತ್ವದ ಅಂಗವಾಗಿದ್ದರೆ ಎಲ್ಲ ಬ್ರಾಹ್ಮಣವರ್ಗದವರು ಅದನ್ನು ಸ್ವೀಕರಿಸ ಬೇಕಾಗಿತ್ತು. ಆದರೆ, ಇಂದು ಪರಿಸ್ಥಿತಿ ಹಾಗೆ ಇಲ್ಲ. ಬ್ರಾಹ್ಮಣರಲ್ಲಿ ಮಾಧ್ವ ಹಾಗೂ ಶ್ರೀ ವೈಷ್ಣವರಲ್ಲಿ ಸಾಮಾನ್ಯ ವಾಗಿ ಯಾರಿಗೂ ಸನ್ಯಾಸವನ್ನು ಸ್ವೀಕರಿಸಲು ಅಪ್ಪಣೆಯಿಲ್ಲ. ವಿರಕ್ತಿ ಉಂಟಾದರೆ ಸನ್ಯಾಸಿಯಾಗಲು ಅಡ್ಡಿಯಿಲ್ಲವೆಂದು ಶೈವ ಪಂಥದ ಪದ್ಧತಿಯಾಗಿದೆ. ಮೋಕ್ಷಕ್ಕಾಗಿ ಸನ್ಯಾಸವನ್ನು ಅವಲಂಬಿಸುವ ರೂಢಿ ಶೈವರಲ್ಲಿ ಮೊದಲು ಇದ್ದಂತೆ ಮಾಧ್ವ ಮತ್ತು ಶ್ರೀ ವೈಷ್ಣವರಲ್ಲಿ ಇರಲಿಲ್ಲ. ಈ ಪಂಥಗಳಲ್ಲಿ ಪೀಠಾಧೀಶರು ಮಾತ್ರ ಸನ್ಯಾಸಿಗಳಾಗಿರುತ್ತಾರೆ. ತಮ್ಮ ಪಂಥದ ಪ್ರಸಾರ ಮತ್ತು ರಕ್ಷಣೆಯ ಸಲುವಾಗಿ ಶಂಕರಮಠದ ಮಾದರಿಯ ಮೇಲೆ ಈ ಪೀಠಗಳು ಅಸ್ತಿತ್ವದಲ್ಲಿ ಬಂದವು. ಮಠಗಳನ್ನು ಹೊರತುಪಡಿಸಿ ವ್ಯಕ್ತಿಶಃ ಸನ್ಯಾಸಿಯಾಗುವ ಪ್ರವೃತ್ತಿಯನ್ನು ಈ ಪಂಥಗಳು ಪ್ರೋತ್ಸಾಹಿಸಲಿಲ್ಲ. ಇದರಿಂದ ಈ ಸನ್ಯಾಸಪಂಥ ಶೈವರಿಂದಲೇ ಪ್ರಚಾರಕ್ಕೆ ಬಂದಿರಬೇಕೆಂದು ಹೇಳಬೇಕಾಗುತ್ತದೆ ಮತ್ತು ಅದು ವೇದಪೂರ್ವಕಾಲದ್ದೆಂದು ಆನುಷಂಗಿಕವಾಗಿ ಹೇಳಬೇಕಾಗುತ್ತದೆ. ಸನ್ಯಾಸಿಯ ಶಾಟಿಯ ಕಾವಿ ಬಣ್ಣ ಶೈವರ (ಶಿವ=ಕೆಂಪು) ವೈಶಿಷ್ಟ್ಯವಾಗಿದೆ. ಶೈವ-ಶಾಕ್ತ ವಿರೋಧಿಯಾಗಿ ಪಂಚಕೃಷ್ಣನನ್ನು ಪರಮದೈವತೆಯೆಂದು ನಂಬಿದ್ದ ಚಕ್ರಧರ ಕಪ್ಪುಬಟ್ಟೆಯನ್ನು ತನ್ನ ಪಂಥದ ಸಂಕೇತವನ್ನಾಗಿ ಮಾಡಿಕೊಂಡ ದಿಗಂಬರ ಜೈನರಲ್ಲಿ ಶ್ವೇತಾಂಬರರಿದ್ದಾರೆ. ಬೌದ್ಧರು ಹಳದಿ ಬಟ್ಟೆಗೆ ಮಹತ್ವಕೊಟ್ಟರು. ಯಜ್ಞವಿರೋಧಿಗಳನ್ನು ಒಳಗುಮಾಡಿಕೊಳ್ಳಲು ಔಪನಿಷದಿಕ ತತ್ವಜ್ಞಾನವನ್ನು ಉಪಯೋಗಿಸಿಕೊಂಡರೂ ಮುಂದೆ ಜೈನ ಮತ್ತು ಬೌದ್ಧ ಧರ್ಮಗಳ ಪ್ರಸಾರವೇನೂ ತಪ್ಪಲಿಲ್ಲ. ಜೈನ-ಬೌದ್ಧರು ಕೆಲವು ಕಾಲ ತಮ್ಮ ವರ್ಚಸ್ಸನ್ನು ಮೆರೆದರು. ಆದರೆ, ಮತ್ತೆ ಗುಪ್ತರ ಕಾಲಕ್ಕೆ ಯಜ್ಞ ಸಂಸ್ಥೆಯನ್ನು ಉಜ್ಜೀವಿಸುವ ಪ್ರಯತ್ನ ನಡೆದದ್ದು ಇತಿಹಾಸದಲ್ಲಿ ದಾಖಲಾಗಿದೆ. ಅಶ್ವಮೇಧಾದಿ ಯಜ್ಞಗಳು ಮತ್ತೆ ನಡೆದವು. ಆದರೂ ಈ ಪ್ರಯತ್ನಗಳಿಗೆ ನಿರೀಕ್ಷಿಸಿದ ಯಶಸ್ಸು ಸಿಗಲಿಲ್ಲ; ಸಿಗುವಂತೆಯೂ ಇರಲಿಲ್ಲ. ಯಜ್ಞಸಂಸ್ಥೆಯ ವರ್ಚಸ್ಸು ಗೀತೆಯ ಕಾಲಕ್ಕೆ ಹಾರಿಹೋಗಿತ್ತು. ಆದರು ತಾವು ಸೋತಿಲ್ಲವೆಂದು ತೋರಿಸಿಕೊಡಲು ಚಾತುರ್ವರ್ಣ್ಯ ಮತ್ತು ಯಜ್ಞಸಂಸ್ಥೆಗಳ ಹೆಸರನ್ನು ಹೇಗೋ ಉಳಿಸಿಕೊಂಡು ವಿರೋಧೀ ಮತಗಳಿಗೆ ತಮ್ಮಲ್ಲಿ ಇಂಬುಗೊಡಲು ಹಿಂದೂ ಧರ್ಮ ಪ್ರಯತ್ನಿಸಿತು. ಯತಿಧರ್ಮಕ್ಕೆ ಚತುರ್ಥಾ ಶ್ರಮವೆಂದು ಮಾನ್ಯತೆ ದೊರೆಯಲಾರಂಭಿಸಿತು.

ಮೂಲದಲ್ಲಿ ಆಶ್ರಮಗಳು ಮೂರೇ ಇರಬೇಕು. ಆರ್ಯರಿಗೆ ಮೂರರ ಸಂಖ್ಯೆ ಅಚ್ಚುಮೆಚ್ಚಿನದು. ತ್ರಯೀ ವಿದ್ಯ. ತ್ರಿವೃತ್‌ಕರಣ ಮೊದಲಾದ ಉದಾಹರಣೆಗಳನ್ನು ನೋಡಬಹುದು. ವರ್ಣಗಳು ಕೂಡ ಮೊದಲು ಮೂರೇ ಆಗಿದ್ದವು. ನಾಲ್ಕನೆಯ ವರ್ಣವಾದ ಶೂದ್ರರನ್ನು ಆಮೇಲೆ ಸೇರಿಸಿಕೊಳ್ಳಲಾಯಿತು. ಅದರಂತೆ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಇವು ಮೂರೇ ಆಶ್ರಮಗಳು. ನಾಲ್ಕನೆಯ ಸನ್ಯಾಸಾಶ್ರಮಕ್ಕೆ 'ಅತ್ಯಾಶ್ರಮ' ಎಂದು ಹೆಸರಿದೆ. ಅತ್ಯಾಶ್ರಮವೆಂದರೆ ಆಶ್ರಮ ಧರ್ಮದ ಆಚೆಗಿನದು ಎಂದು ಅರ್ಥವಾಗುತ್ತದೆ. ಯತಿಪಂಥಕ್ಕೆ ವರ್ಣಾಶ್ರಮ ಒಪ್ಪಿಗೆಯಿಲ್ಲ. ಅಂದರೆ: ಯತಿಗಳು ವರ್ಣಾಶ್ರಮ ಸಂಸ್ಥೆಗೆ ವಿರೋಧಿಗಳು. ದೇವರಿಗೆ ಶರಣು ಹೋಗಿ, ಪರಮೇಶ್ವರನ ದಾಸ ಅಥವಾ ಸೇವಕನೆಂದು ಆಯುಷ್ಯವನ್ನೆಲ್ಲ ಕಳೆಯುವದು ಯತಿಪಂಥದ ಮುಖ್ಯ ಲಕ್ಷಣವಾಗಿದೆ. ಯತಿಪಂಥದ ಪ್ರಸಾರ ಹೆಚ್ಚಿದಂತೆಲ್ಲ ಯಜ್ಞಸಂಸ್ಥೆಯಲ್ಲಿ ಜನರ ನಂಬಿಕೆ ಹಾರಿಹೋಯಿತು. ಇದರಿಂದಾಗಿ ಜೈನ ಮತ್ತು ಬೌದ್ಧಧರ್ಮಗಳು ನಿರಾತಂಕವಾಗಿ ಹಬ್ಬಲು ಅನುವು ದೊರೆಯಿತು. ಯಜ್ಞ ಸಂಸ್ಥೆಯನ್ನು ಪುನರುಜ್ಜೀವಿಸುವ ಪ್ರಯತ್ನ ವಿಫಲವಾದ ನಂತರ, ವೈದಿಕಧರ್ಮ ಸನ್ಯಾಸಮಾರ್ಗವನ್ನು ತನ್ನ ವೈಚಾರಿಕತೆಯಲ್ಲಿ ಅಳವಡಿಸಿಕೊಂಡು ಬೌದ್ಧ - ಜೈನ ಧರ್ಮಗಳನ್ನು ಸೋಲಿಸಲು ಪ್ರಯತ್ನ ಮಾಡಿತು. ಅದರ ಚಿಹ್ನವೆಂದರೆ ಯೋಗಮಾರ್ಗದ ಅವಧೂತ 'ದತ್ತಪಂಥ'ವಾಗಿದೆ.

ಚಾತುರ್ವರ್ಣ್ಯಕ್ಕೆ ವಿರೋಧಿಯಾಗಿದ್ದ ಯತಿಪಂಥವನ್ನು ಅರಗಿಸಿಕೊಳ್ಳುವ ಪ್ರಯತ್ನವನ್ನು ಶಂಕರಾಚಾರ್ಯ ರಂಥ ಮೇಧಾವಿಗಳು ಕೌಶಲ್ಯದಿಂದ ಮಾಡಿದರು. ಅವರ ದಿಗ್ವಿಜಯಗಳಿಂದ ಅವರು ಪ್ರತಿಪಕ್ಷಗಳನ್ನು ಸೋಲಿಸಿದ

ರೆಂಬ ಮಾತನ್ನು ಹೇಳುವ ಆವಶ್ಯಕತೆ ಇಲ್ಲ. ಆದರೆ, 'ಶಾಂಕರ ದಿಗ್ವಿಜಯ' ಗ್ರಂಥದಲ್ಲಿ ಬಹಳ ಸೂಚಕವಾದ ಸಂಗತಿಯೊಂದಿದೆ. ಅದನ್ನು ಓದುವಾಗ ಶಂಕರಾಚಾರ್ಯರು ಮಾಡಿದ ಸಮಗ್ರ ಕಾರ್ಯಸೌಧ ಅದುರಿದಂತೆ ಅನ್ನಿಸುತ್ತದೆ. ಆ ಕತೆಯೆಂದರೆ ಹೀಗಿದೆ: ಕಾಶಿಯಲ್ಲಿ ಶಂಕರಾಚಾರ್ಯರು ಗಂಗಾಸ್ನಾನ ಮಾಡಿ ತಿರುಗಿ ಬರುತ್ತಿದ್ದರು. ದಾರಿಯಲ್ಲಿ ಅಸ್ಪೃಶ್ಯನೊಬ್ಬ ಅವರಿಗೆ ಮುಂದೆ ಬಂದುಬಿಟ್ಟ. 'ಮುಟ್ಟಗಿಟ್ಟೀ' ಎಂದು ಶಂಕರಾಚಾರ್ಯರು ಅವನು 'ಬ್ರಹ್ಮಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಽಪರಃ' ಎಂದು ಹೇಳಿದೆ. ಈ ರೀತಿಯ ತತ್ವ ಹೇಳುವ ನಿಮ್ಮ ಬಾಯಲ್ಲಿ ಮಡಿಮೈಲಿಗೆಯ ಭಾಷೆ ಏಕೆ?

ಈ ಪೇಚಿನ ಪ್ರಸಂಗದಿಂದ ಶಂಕರಾಚಾರ್ಯರು ಪಾರಾದದ್ದು ಹೇಗೆಂಬುದರ ಯಥಾರ್ಥವಾದ, ವಾಸ್ತವವಾದ ವರ್ಣನೆ ಆ ಗ್ರಂಥದಲ್ಲಿ ಇಲ್ಲ. ಮೈನಡುಗಿಸುವ ಈ ಪ್ರಕಾರದ ಪ್ರತಿಕೂಲ ಪ್ರಸಂಗದಿಂದ ಪಾರಾಗಲು, ಏನಾದರೂ 'ಚಮತ್ಕಾರ' (ಅಘಟಿತ ಘಟನೆ) ನಡೆಯಿತೆಂದು ಹೇಳುವ ಯುಕ್ತಿ ನಮ್ಮ ಪೌರಾಣಿಕರು ಪ್ರಾಚೀನ ಕಾಲದಿಂದ ರೂಢಿಸಿಕೊಂಡಿದ್ದಾರೆ. ಪ್ರಸ್ತುತಪ್ರಸಂಗದಲ್ಲಿ ಪುರಾಣ ಲೇಖಕ ಪೇಚಿನಲ್ಲಿ ಸಿಕ್ಕುಬಿದ್ದಿದ್ದಾನೆ. ಯತಿಪಂಥದ ತತ್ವಜ್ಞಾನವನ್ನು ಅನುಸರಿಸಿ ಭೇದಾಭೇದವಿಲ್ಲದೆ ಶಂಕರಾಚಾರ್ಯರು ಅಸ್ಪೃಶ್ಯನನ್ನು ಮುಟ್ಟಿದರು ಎಂದರೆ ವರ್ಣಾಶ್ರಮ ಧರ್ಮದ ತಳಹದಿ ಕುಸಿದಂತಾಗುತ್ತದೆ. ಶಂಕರಾಚಾರ್ಯರು ಅಸ್ಪೃಶ್ಯನನ್ನು ತಮ್ಮ ನೆರಳಿನಲ್ಲಿ ಇಟ್ಟುಕೊಳ್ಳದೆ ದೂರ ನೂಕಿದರು ಎಂದರೆ, ಶಂಕರಾಚಾರ್ಯರು ಕಾಶ್ಮೀರದಿಂದ ರಾಮೇಶ್ವರದವರೆಗೆ ಪ್ರಚಾರ ಮಾಡಿದ ತತ್ವಜ್ಞಾನದ ವಿರುದ್ಧ ತಾವೇ ನಡೆದರೆಂದು ಹೇಳಿದಂತಾಗುತ್ತದೆ. ಈ ಬಿಕ್ಕಟ್ಟಿನಿಂದ ಪಾರಾಗಲು ಆ ವ್ಯಕ್ತಿ ಅಸ್ಪೃಶ್ಯನಾಗಿರದೆ ಪ್ರತ್ಯಕ್ಷ ಕಾಶೀವಿಶ್ವೇಶ್ವರನಾಗಿದ್ದ; ವೇಷಧಾರಿಯಾಗಿ ಬಂದಿದ್ದ ಎಂದು ಹೇಳುವದು ಆ ಪುರಾಣಕಾರನಿಗೆ ಅವಶ್ಯ ಕಂಡಿತು. ಶಂಕರಾಚಾರ್ಯರು ಆ ಸಮಯದಲ್ಲಿ ಹೇಗೆ ವರ್ತಿಸಿದ ರೆಂಬುದು, ಶ್ರೀ ವಿಶ್ವೇಶ್ವರನ ಆಗಮನದಿಂದ ಏನೂ ಸ್ಪಷ್ಟವಾಗುವದಿಲ್ಲ. ಆದರೆ, ಜ್ಞಾನಿಗಳಾದ ಸಿದ್ಧರು ಚಾತುರ್ವರ್ಣ್ಯದ ಕಟ್ಟುಗಳನ್ನು ಪಾಲಿಸುತ್ತಿರಲಿಲ್ಲವೆಂಬುದು ಈ ವರೆಗಿನ ಇತಿಹಾಸವಾಗಿದೆ.

"ನಿಸ್ತ್ರೈಗುಣ್ಯೇ ಪಥಿ ವಿಚರತಾಂ ಕೋ ವಿಧಿಃ ಕೋ ನಿಷೇಧಃ" ಎಂಬಂಥ ವಚನಗಳಿಂದ ಜ್ಞಾನಿಗಳಾದ ಸಿದ್ಧರು ವರ್ಣಾಶ್ರಮದ ಕಟ್ಟುಗಳನ್ನು ಪಾಲಿಸುತ್ತಿರಲಿಲ್ಲವೆಂಬುದು ಸ್ಪಷ್ಟವಾಗಿದೆ. ಬೃಹಸ್ತೋತ್ರ ರತ್ನಾಕರದಲ್ಲಿ ಶಂಕರಾಚಾರ್ಯರ 'ಮನೀಷಾ ಪಂಚಕ'ದೊಳಗಿನ "ಚಾಂಡಾಲೋಽಸ್ತು ಸ ತು ದ್ವಿಜ್ಯೋಽಸ್ತು ಗುರುರಿತ್ಯೇಷಾ ಮನೀಷಾ ಮಮ" ಎಂಬ ಶ್ಲೋಕದಿಂದ ಅವರು ಅಸ್ಪೃಶ್ಯತೆಯನ್ನು ಪಾಲಿಸಿಲ್ಲವೆಂದು ಹೇಳಬೇಕಾಗುತ್ತದೆ.

ಸನಾತನ ವೈದಿಕ ಪಂಥಕ್ಕೆ ಯತಿಪಂಥವನ್ನು ದೂರ ಮಾಡುವದು ಅಸಾಧ್ಯವಾಯಿತು. ಹಿಡಿದರ ಕಚ್ಚುತ್ತದೆ, ಬಿಟ್ಟರೆ ಓಡುತ್ತದೆ ಎಂಬ ಅವಸ್ಥೆ ಪ್ರಾಪ್ತವಾಯಿತು. ಇಂಥ ಬಿಕ್ಕಟ್ಟಿನಲ್ಲಿಯೂ ಹಿಂದೂಗಳ ಸಮನ್ವಯ ಬುದ್ಧಿ ಒಂದು ದಾರಿಯನ್ನು ತೆರೆಯಿತು. ಯತಿಪಂಥವನ್ನು ಮಡಿಗೊಳಿಸಿ ಆಶ್ರಮ ವ್ಯವಸ್ಥೆಯಲ್ಲಿ ಅದಕ್ಕೊಂದು ಸ್ಥಾನ ಕೊಡಲಾಯಿತು ಮತ್ತು ಸಿದ್ಧ-ಬುದ್ಧರಿಗೆ ಮುಕ್ತಾವಸ್ಥೆಯಲ್ಲಿ ವರ್ಣಾಶ್ರಮದ ನಿಯಮಗಳು ಬಂಧನವಾಗಲಾರವೆಂದು, ಅವರನ್ನು ಅಪವಾದವೆಂದು ಎಣಿಸಿದರು.

ವೈದಿಕ ಸಂಪ್ರದಾಯ ಮತ್ತು ಯತಿಪಂಥ ಇವುಗಳಲ್ಲಿ ಇನ್ನೊಂದು ಮಹತ್ವದ ಅಂತರವನ್ನು ಗಮನಿಸಬೇಕು. ವೈದಿಕಮಾರ್ಗದಲ್ಲಿ ವಿಚಾರ ಸ್ವಾತಂತ್ರ್ಯ ಹೆಚ್ಚು. ಅಲ್ಲಿ ಮುಖ್ಯವಾಗಿರುವದು ಬುದ್ಧಿಯ ಉಪಾಸನೆ. ವೈದಿಕರ ನಿತ್ಯ ಅನುಷ್ಠಾನದ ಗಾಯತ್ರಿ ಮಂತ್ರದಲ್ಲಿ "ಧಿಯೋ ಯೋ ನಃ ಪ್ರಚೋದಯಾತ್" ಎಂದು ಪ್ರಾರ್ಥಿಸಲಾಗುತ್ತದೆ. 'ಧೀ' ಬುದ್ಧಿಯ ಉಪಾಸನೆಯೇ ಮುಖ್ಯವಾಗಿದೆ* ವಿವೇಕ-ವಿಚಾರಗಳಿಗೆ ಸಮ್ಮತವಾದುದ್ದನ್ನು ಮಾತ್ರ

---

* 'ಬುದ್ಧಿ ತಾತ್ಕಾಲಿಕೀ ಜ್ಞೇಯಾ ಪ್ರಜ್ಞಾ ತ್ರೈಕಾಲಿಕೀ ಮತಾ' ಎಂಬ ಭಟ್ಟತೌತನ ಮಾತನ್ನು ಹಿಡಿದು ಬುದ್ಧಿ, ಮತಿ, ಪ್ರಜ್ಞೆ ಈ ಮೂರರಲ್ಲೂ ಇರುವ ಆಶಯಗಳ ವಿವರಗಳನ್ನು ೧೯೮೪ರಲ್ಲಿ ಪ್ರಕಟವಾದ 'ಬಿತ್ತಿದ್ದನ್ನು ಬೆಳೆಕೊ' ಗ್ರಂಥದಲ್ಲಿ ವಿವರವಾಗಿ ಮಂಡಿಸಿದ್ದಾರೆ. (ಸಂ.)

ಸ್ವೀಕರಿಸಬೇಕೆಂಬುದು ಪ್ರಾಚೀನ ಋಷಿಗಳ ಆದೇಶವಾಗಿದೆ. "ಯಾನ್ಯ ನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ ನೋ ಇತರಾಣಿ"। ಅನುಯಾಯಿಗಳಲ್ಲಿ ಇಂಥ ಸಮಾಧಿಪೂಜೆಯ ಕ್ರಮ ಎಂದಿಗೂ ಕಾಣಲಾರದು. ವಸಿಷ್ಠ, ವಿಶ್ವಾಮಿತ್ರ ಮೊದಲಾದ ಪ್ರಾಚೀನ ಋಷಿಗಳು (ಅವರು ಯತಿಗಳಾಗಿದ್ದಿದ್ದರೆ) ಸಮಾಧಿಗಳ ಅವಶೇಷಗಳು ಎಲ್ಲಿಯಾದರೂ, ಕೊನೆಗೆ ನಾಮಮಾತ್ರವಾಗಿಯಾದರೂ ನೋಡಲಿಕ್ಕೆ ಸಿಗುತ್ತಿದ್ದವು. ಬುದ್ಧ-ಮಹಾವೀರರ ಪಂಥಗಳಂತೆ ಒಬ್ಬ ಗುರುವಿನ ಪರಂಪರೆಯಿಂದ ಹುಟ್ಟಿದ ಸಂಪ್ರದಾಯ ವೈದಿಕ ಮಾರ್ಗವಲ್ಲ. ಅನೇಕ ಋಷಿಗಳ ದರ್ಶನದ ಸಮ್ಯಕ್‌ಫಲವೆಂದರೆ ವೇದ. ಪೂರ್ವಸೂರಿಗಳಿಂದ ಒಳ್ಳೆಯದನ್ನು ಮಾತ್ರ ಪಡೆದುಕೊಂಡು ಭವಿಷ್ಯದ ಕಡೆಗೆ ಆಶಾವಾದಿಯಾಗಿ ವೈದಿಕಪಂಥ ಮಾರ್ಗಕ್ರಮಣ ಮಾಡುತ್ತದೆ. ವಿಜಿಗೀಷು ವೃತ್ತಿಯಿಂದ ಮುಂದುವರಿಯುವ ಮನೋವೃತ್ತಿಯುಳ್ಳ ಈ ಜನರಲ್ಲಿ, ದಾರಿಯಲ್ಲಿ ಬಂದ ವಿರೋಧವನ್ನು ಎದುರಿಸಿ, ಅರಗಿಸಿಕೊಳ್ಳುವ ಯಯುತ್ಸುವೃತ್ತಿ ಸ್ಪಷ್ಟವಾಗಿ ಕಾಣುತ್ತದೆ. ಸಮಾಧಿಪೂಜೆ, ಭೂತಪೂಜೆಗಳಿಗೆ ಈ ಮಾರ್ಗದಲ್ಲಿ ಅವಕಾಶನಿಲ್ಲ. ಆದರೆ, ಗುರುಮಾರ್ಗದಲ್ಲಿ 'ಗುರುವನ್ನು ಬಿಟ್ಟರೆ ಬೇರೆ ದೇವರಿಲ್ಲ' ಎಂದು ತೋರಿಸುವ ಉದ್ದೇಶದಿಂದಲೇ ದತ್ತನ ಅರ್ವಾಚೀನ ಚಿತ್ರ ಮುಂದೆ ಬಂದಿದೆ. ಆ ಪ್ರತಿಭಾಶಾಲಿಯಾದ ಚಿತ್ರಕಾರ ಬೇರೆ ಬೇರೆ ಸಂಕೇತಗಳಿಂದ ಗುರುಮಹಿಮೆಯನ್ನು ಸಂಪೂರ್ಣವಾಗಿ ಬಣ್ಣಿಸಿದ್ದಾನೆ. ಈ ಚಿತ್ರ ಒಂದು ದೃಷ್ಟಿಯಿಂದ ಗುರುಚರಿತ್ರೆಯ ತಿರುಳಾಗಿದೆ. ಭಾಗವತಾದಿ ಪುರಾಣಗಳಲ್ಲಿ ದತ್ತವಿಷ್ಣುವಿನ ಅಂಶರೂಪವೆಂದು ಸ್ಪಷ್ಟವಾಗಿದ್ದರೂ ಗುರುವೇ ವಿಷ್ಣು, ಗುರುವೇ ಬ್ರಹ್ಮ, ಗುರುವೇ ಶಿವ, ಇಷ್ಟೇ ಅಲ್ಲ ಗುರುವೇ ಪರಬ್ರಹ್ಮವಸ್ತುವೆಂದು ಸೂಚಿಸುವ ಆ ಚಿತ್ರಕಾರನ ಇಚ್ಛೆ ಪ್ರತಿ ಪ್ರತೀಕದಲ್ಲೂ ವ್ಯಕ್ತವಾಗಿದೆ. ಬ್ರಹ್ಮ, ವಿಷ್ಣು, ಮಹೇಶ, ಸೂಚಕವಾದ ಮೂರು ಮುಖಗಳು, ದತ್ತಮೂರ್ತಿಯ ಹತ್ತಿರ ಕೃಪೆಯನ್ನು ಯಾಚಿಸುವ ಪೃಥ್ವೀರೂಪದ ಗೋವು, ಗುರುವಿನ ಮುಖದಿಂದ ಬಿದ್ದದ್ದೆಲ್ಲ ವೇದವಚನವೆಂದು ಸೂಚಿಸಲು ಗುರುವಿನ ಹಿಂದೆ ನೆರಳಿನಂತೆ (ನಾಯಿಗಳಂತೆ) ಓಡುವ ನಾಲ್ಕು ನಾಯಿ ಅಥವಾ ವೇದಗಳು ಮತ್ತು ಕೇವಲ ಆತ್ಮಾನಂದಕ್ಕಾಗಿ ಸಂಸಾರ ಬಂಧನವನ್ನು ಬಿಟ್ಟು ಬಂದ ಗುರುವೆಂದು ಸೂಚಿಸುವ ಕಾವಿಬಣ್ಣದ ಕಂತೆ, ಜೋಳಿಗೆ-ಈ ಎಲ್ಲ ಸಂಕೇತಗಳು ಅರ್ಥಪೂರ್ಣ ವಾಗಿಲ್ಲವೆಂದು ಹೇಗೆ ಹೇಳುವದು?

ಕಾಲಚಕ್ರದಲ್ಲಿ ಪರಸ್ಪರ ವಿರೋಧಿ ತತ್ವಗಳ ಸಮನ್ವಯದ ಆವಶ್ಯಕತೆ ಉಂಟಾಗಿ ಪರಿಸ್ಥಿತಿ ಅನಿವಾರ್ಯವಾದಾಗ, ವೇದಗಳು ನಾಯಿಗಳಂತೆ ಓಡುತ್ತವೆಂದು ತೋರಿಸುವ ಚಿತ್ರವನ್ನು ಸನಾತನ ಮಾರ್ಗದ ಮನೆಗಳಲ್ಲಿ ಪೂಜಿಸುವದನ್ನು ನೋಡಬಹುದಾಗಿದೆ. ಇದೇ ರೀತಿಯಲ್ಲಿ ಸಮಾಧಿ ಪೂಜೆ (ಭೂತಪೂಜೆ) ಕೂಡ ನಮ್ಮ ಎದೆಯ ಮೇಲೆ ಕುಳಿತಿರುವದನ್ನು ಕಾಣಬಹುದು. ಧರ್ಮಸಂಪ್ರದಾಯದ ಈ ಪೂರ್ವಪರಂಪರೆಯ ಹಿನ್ನೆಲೆ ಗೊತ್ತಿಲ್ಲದಿದ್ದರೆ ನಮ್ಮ ದೇಶದಲ್ಲಿ ಐತಿಹಾಸಿಕ ಕಾಲದಲ್ಲಿ ನಡೆದ ಬೇರೆ ಬೇರೆ ಧರ್ಮಪಂಥಗಳ ಏಳುಬೀಳುಗಳನ್ನು ಸರಳವಾಗಿ ಅರ್ಥವಿಸಲು ಬರುವಂತಿಲ್ಲ. ಮಹಾರಾಷ್ಟ್ರದಲ್ಲಿಯ ಮಹಾನುಭಾವ ಮೊದಲಾದ ಧರ್ಮಪಂಥಗಳ ಸಮೀಕ್ಷೆ ನಡೆಸುವ ಮೊದಲು, ಅದಕ್ಕಿಂತ ಪೂರ್ವದಲ್ಲಿ ನಡೆದಿದ್ದ ಧಾರ್ಮಿಕ ಆಂದೋಲನಗಳನ್ನು ಲೆಕ್ಕಕ್ಕೆ ತಂದುಕೊಳ್ಳುವ ಆವಶ್ಯಕತೆ ಇದೆ. ೯-೧೦ನೆಯ ಶತಮಾನಗಳಲ್ಲಿ ಇಡೀ ಭರತಖಂಡದಲ್ಲಿ ಸಿದ್ಧ ಅಥವಾ ನಾಥ ಸಂಪ್ರದಾಯ ಬಹಳ ವರ್ಚಸ್ವಿಯಾಗಿತ್ತು. ಮಹಾಯಾನ ಬೌದ್ಧ ಪಂಥ ಹಿಂದೆ ಬಿದ್ದು ಅದರಿಂದಲೇ ಒಂದು ಹೊಸ ಪಂಥ ತೆರೆಯಂತೆ ಮೇಲೆದ್ದಿತು. ಬೌದ್ಧ ಧರ್ಮ ತನ್ನ ಕೊನೆಕೊನೆಯ ಅವಸ್ಥೆಯಲ್ಲಿ ಹತ್ತಿರ ಹತ್ತಿರ ಹಿಂದೂಧರ್ಮದ ಇನ್ನೊಂದು ಸ್ವರೂಪವಾಯಿತು; ಅಥವಾ ಹಿಂದೂಧರ್ಮ ಬೌದ್ಧಧರ್ಮವನ್ನು ಅರಗಿಸಿಕೊಳ್ಳಲು ಆ ಧರ್ಮದ ಸ್ವರೂಪವನ್ನು ಬದಲಿಸಿಬಿಟ್ಟಿತೆಂದು ಹೇಳಬಹುದು. ಇದರಿಂದಾಗಿ ಸಿದ್ಧ ಅಥವಾ ನಾಥ ಪಂಥ ಜನರಿಗೆ ಪರಕೀಯವೆಂದೆನಿಸಲಿಲ್ಲ. ಮತ್ಸ್ಯೇಂದ್ರ-ಗೋರಖ ಪ್ರಣೀತವಾದ ಈ ಧರ್ಮ ಭಾರತದ ತುಂಬ ಹಬ್ಬಿತು. ಈ ಮತಪ್ರಣಾಲಿಯಲ್ಲಿ ಹಿಂದೂ ದೇವತೆಗಳಿಗೆ ಅವಕಾಶವಿಲ್ಲ, ವರ್ಣಾಶ್ರಮಧರ್ಮ ಮತ್ತು ಜಾತಿಭೇದಗಳನ್ನು ಅದು ಮನ್ನಿಸುವದಿಲ್ಲ. ಈ ಪಂಥದಲ್ಲಿ ಗುರುವಿನ ಸ್ಥಾನ ಮಾತ್ರ ಅನನ್ಯವಾಗಿದೆ. ಆತ್ಮ

ಸಾಕ್ಷಾತ್ಕಾರ ಜೀವನದ ಏಕಮೇವ ಗುರಿಯಾಗಿದೆ. ಸಂಸಾರವೆಂದರೆ ಕೇವಲ ಮಾಯೆ, ಆತ್ಮಸಿದ್ಧಿಗಾಗಿ ವಿರಾಗಿಯಾಗಬೇಕಾದದ್ದು ಅವಶ್ಯವಾಗಿದೆ, ಹೀಗೆ ಈ ದಿಕ್ಕಿನಲ್ಲಿ ನಾಥ ಸಂಪ್ರದಾಯದ ವೈಚಾರಿಕತೆ ಸಾಗುತ್ತದೆ. ಆತ್ಮದರ್ಶನಕ್ಕಾಗಿ ಯೋಗಸಾಧನೆಯನ್ನು ಮಾಡಬೇಕೆಂದು ಈ ಪಂಥ ಹೇಳುತ್ತದೆ. ದೇಹಶುದ್ಧಿಯ ಸಲುವಾಗಿ ಹಠಯೋಗದ ಆವಶ್ಯಕತೆಯೇನೋ ಇದೆ. ಆದರೆ, ಹಠಯೋಗವೇ ಸಾಧ್ಯವಲ್ಲ ಅಥವಾ, ಮನೋಲಯಯೋಗವೇ ಈ ಪಂಥದ ಸಾರವಾಗಿದೆ.

ಬೌದ್ಧಧರ್ಮದ ಉತ್ತರಾರ್ಧದ ಹಿಡಿತದಿಂದ ಬಿಡಿಸಿಕೊಳ್ಳುವಾಗ ಅದರ ಪರಿಣಾಮವನ್ನು ಹಿಂದೂ ಧರ್ಮ ಅನುಭವಿಸಬೇಕಾಯಿತು. ಅದರಲ್ಲಿ ಒಂದಿಷ್ಟು ಒಳ್ಳೆಯದು, ಒಂದಿಷ್ಟು ಕೆಟ್ಟದು ಇರುವದು ಸಹಜ ವಾಗಿದೆ. ನಾಥ ಸಂಪ್ರದಾಯದಲ್ಲಿ ಜಾತಿಬಂಧನವಿಲ್ಲದ್ದರಿಂದ ಆ ಪಂಥದ ಯೋಗಿಗಳು ಯೋಗಮಾರ್ಗದ ಪ್ರಸಾರಕ್ಕಾಗಿ ಎಲ್ಲೆಡೆಗೂ ಸಂಚರಿಸತೊಡಗಿದರು. ನಾಥಯೋಗಿಗಳು ಯುರೋಪಿನ ಪ್ರವಾಸವನ್ನು ಮಾಡಿದರು. ಈ ಪಂಥವೇ ಭಾರತೀಯ ಸಂಸ್ಕೃತಿಯನ್ನು ತಿಬೇಟಕ್ಕೆ ತಂದಿತು. ಹಿಮಾಲಯದಲ್ಲಿಯ ಗುರ್ಖಾ ಜನರು ಗೋರಖನಾಥನ ಶಿಷ್ಯರೆಂದು ಕರೆದುಕೊಳ್ಳುತ್ತಾರೆ. ಗೋರಖನಾಥನ ಅಂತೇವಾಸಿ ಶಿಷ್ಯರಲ್ಲಿ ಕೆಲವರು ಆಫ್‌ಘಾಣಿಸ್ತಾನ, ಖೋರಾಸನ ಮೊದಲಾದ ದೇಶಗಳಲ್ಲಿ ಅನುಯಾಯಿಗಳನ್ನು ಮಾಡಿಕೊಂಡರು. ಆಫ್‌ಘಾಣಿ ಸ್ತಾನದಲ್ಲಿ ಅವರು ತಮ್ಮ ಮಠವನ್ನು ಕಟ್ಟಿ ಜಮೀನನ್ನೂ ಗಳಿಸಿದರು. ಇದರಿಂದಾಗಿ ನಾಥಸಂಪ್ರದಾಯಕ್ಕೆ ಮುಸಲ್ಮಾನರೂ ಶಿಷ್ಯರಾದರೆಂಬುದು ನಿರ್ವಿವಾದವಾಗಿದೆ.[೫೪]

ನಾಥ ಸಂಪ್ರದಾಯದ ಅಖಿಲ ಭಾರತೀಯ ಚಳವಳಿಯಿಂದ, ಅಧ್ಯಾತ್ಮ ದೃಷ್ಟಿಯಿಂದ ಜಾತಿಭೇದ ತೊಡೆದುಹೋಗಿ ಇಡೀ ಭಾರತ ಒಂದಾಗುವ ಶಕ್ಯತೆ ತಲೆದೋರಿತು. ಬಂಗಾಲದಿಂದ ಸಿಂಧ, ಮತ್ತು ಕಾಶ್ಮೀರದಿಂದ ರಾಮೇಶ್ವರದ ವರೆಗೆ ಈ ಸಂಪ್ರದಾಯವು ಪ್ರಭಾವವನ್ನು ಬೀರಿತು. ಅದರ ಜೊತೆಗೆ ಜಾತಿ ಭೇದದಲ್ಲಿಯ ತೀವ್ರತೆ ಕಡಿಮೆಯಾಗಿ ಸರ್ವ-ಮಾನವ-ಐಕ್ಯ ಸಾಧ್ಯವಿದೆಯೆಂದು ನಾಥಸಂಪ್ರದಾಯ ತೋರಿಸಿ ಕೊಟ್ಟಿತು. ನಾಥ ಸಂಪ್ರದಾಯದ ಈ ಪ್ರಭಾವದ ಪ್ರತಿಧ್ವನಿ ಹನ್ನೊಂದನೆಯ ಶತಮಾನದಲ್ಲಿ ಭಾರತ ಪ್ರತ್ಯೇಕ ಪ್ರಾಂತದಲ್ಲಿ ನಿಗದಿತವಾಯಿತು. ಈ ಮಾತು ಧಾರ್ಮಿಕ ಚಳವಳಿಯ ಇತಿಹಾಸದಲ್ಲಿ ದಾಖಲಾಗಿದೆ.

ಎಲ್ಲ ಜಾತಿಗಳನ್ನೂ ಮುರಿದು ಒಂದು ಮಾಡುವ ಕೆಲಸ ನಾಥ ಸಂಪ್ರದಾಯದವರಿಂದ ನಿರುದ್ದಿಷ್ಟವಾಗಿ ಆಯಿತು. ಅದರಂತೆ ಆ ಪಂಥದ ಧಾರ್ಮಿಕ ಆಚರಣೆಯ ಮೇಲೆ ಅದಕ್ಕಿಂತ ಪೂರ್ವದ ಹಲವಾರು ಧರ್ಮಪಂಥಗಳ ಪ್ರಭಾವವೂ ಆಯಿತು. ನಾಥಗುರುಗಳ ಯಾದಿಯಲ್ಲಿ ಆದಿನಾಥ, ಪಾರ್ಶ್ವ ನಾಥರಂಥ ಜೈನ ಪರಂಪರೆಯ ಹೆಸರುಗಳಿವೆ. ಜೈನಧರ್ಮದ 'ಮಲಧಾರಣ ವ್ರತ'ದಂಥ ಆಚಾರಗಳು ನಾಥಯೋಗಿಗಳ ನಿತ್ಯದ ಆಚರಣೆಯಲ್ಲಿದ್ದವು. ಇದಕ್ಕಿಂತ ಹೆಚ್ಚು ಪ್ರಭಾವಬೀರಿದ್ದು ಬೌದ್ಧಧರ್ಮ. ಮನೋಲಯಯೋಗ ಇಲ್ಲವೆ ಸಹಜಯೋಗ-ಶೂನ್ಯ ಸಂಪಾದನೆ ಈ ಪಂಥದ ಮುಖ್ಯ ಧ್ಯೇಯವಾಗಿದ್ದು ಅದು ಬಂದದ್ದು ಮಾತ್ರ ಬೌದ್ಧರಿಂದ. ಸಿದ್ಧರು (ನಾಥ) ಇಂದು ಶೈವ ಅಥವಾ ವೈಷ್ಣವರಿದ್ದರೂ ಕೂಡ ಅವರು ಬೌದ್ಧ ಧರ್ಮದ ವಾರಸುದಾರರೇ. ಟಿಬೇಟದಲ್ಲಿ ಈ ಪಂಥವು ಬೌದ್ಧ ಧರ್ಮದ್ದೇ ಇನ್ನೊಂದು ಶಾಖೆಯೆಂದು ತಿಳಿಯಲಾಗುತ್ತದೆ. ಆದರೆ, ಭಾರತದಲ್ಲಿ ಅದರ ಸ್ವರೂಪ ಬೇರೆಯಾಗಿ ಅದು ಹಿಂದೂಧರ್ಮದಲ್ಲಿ ಸ್ಥಾನವನ್ನು ಪಡೆಯಿತು. ನಮ್ಮ ದೇಶದಲ್ಲಿ ಸಿದ್ಧರಲ್ಲಿ ಕೆಲವರು ಶೈವರಾಗಿದ್ದು ಕೆಲವರು ವೈಷ್ಣವರಾಗಿದ್ದಾರೆ. ಶಿವ ಅಥವಾ ವಿಷ್ಣುವನ್ನು ಅವರು ಪೂಜಿಸುತ್ತಿದ್ದರೂ ಗುರುವನ್ನು ಬಿಟ್ಟರೆ ಬೇರೆ ದೇವರಿಲ್ಲ ಎನ್ನುವದು ಈ ಪಂಥದ ಆತ್ಯಂತಿಕ ಶ್ರದ್ಧೆಯಾಗಿದೆ. ಮರಾಠಿಯಲ್ಲಿ ನವನಾಥ ಚರಿತ್ರೆಯಲ್ಲಿ ಗೋರಖನಾಥನಿಗೆ ಗುರು ಸಾಕ್ಷಾತ್ಕಾರವಾಯಿತೆಂದು ಹೇಳಲಾಗಿದೆ. ಈ ಗುರು ಯಾರು? ಅವನು ಆತ್ರೇಯ ದತ್ತಗುರುವೇ ಇರಬಹುದೇ ಎಂದು ಸಂಶಯ ಬರುವಂತಿದೆ. ಏಕೆಂದರೆ ನಾಥಪಂಥದ ಪೂರ್ವಪರಂಪರೆ ಬೌದ್ಧಧರ್ಮವನ್ನು ಮುಟ್ಟುತ್ತದೆ.

ಅನಸೂಯಾ ಪುತ್ರ ಆತ್ರೇಯ ದತ್ತನಿಂದ ವೈದಿಕ ಮಾರ್ಗದಲ್ಲಿ ಅಂತರ್ಗತವಾದ ಗುರುಮಾರ್ಗದ

ಪ್ರಾರಂಭವಾಗಿರಬೇಕು. ಈ ದತ್ತನ ತಾಯಿಯ ಹೆಸರು 'ಅನಸೂಯಾ' ಎಂದಿರುವದು ಅರ್ಥಪೂರ್ಣವಾಗಿದೆ. ಜೈನ ಮತ್ತು ಬೌದ್ಧ ಪರಂಪರೆಯ ಸತ್ವವನ್ನು ಅರಗಿಸಿಕೊಂಡು ವೈದಿಕಪಂಥವನ್ನು ಎತ್ತಿಹಿಡಿಯುವ ಗುರುದತ್ತ ಅಸೂಯಾ ರಹಿತ ತಾಯಿಯ ಹೊಟ್ಟೆಯಲ್ಲಿ ಹುಟ್ಟಿಬಂದ. ಅನಸೂಯೆಯ ಈ ಪುತ್ರ ಗುರುಕೃಪಾ 'ದತ್ತ'ನಾಗಿದ್ದಾನೆ. ಎಂದು ಗುರುಚರಿತ್ರೆಯಲ್ಲಿಯ ಅವನ ಜನ್ಮಕಥೆಯಿಂದ ತಿಳಿದುಬರುತ್ತದೆ. ಆತ್ರೇಯದತ್ತ-ಮಾರ್ಗ ನಾಥಪಂಥದಂತೆಯೇ ಸರ್ವಸಂಗ್ರಾಹಕ ವೃತ್ತಿಯದಾಗಿದೆ. ಮುಸಲ್ಮಾನರಲ್ಲಿ ದತ್ತಭಕ್ತರಿದ್ದಾರೆ. ಬಾಬಾಬುಡಣಗಿರಿ (ಮೈಸೂರು) ದತ್ತ ಕ್ಷೇತ್ರವಿದ್ದು ಅಲ್ಲಿಯ ಪೂಜಾರಿ ಮುಸಲ್ಮಾನನಿದ್ದಾನೆ. ಹಿಂದೂ ಮುಸಲ್ಮಾನರಿಬ್ಬರೂ ಯಾತ್ರೆಗೆ ಹೋಗುತ್ತಾರೆ. ಆಧುನಿಕ ಕಾಲದಲ್ಲಿ ದತ್ತನ ಅವತಾರವೆಂದೇ ಪ್ರಸಿದ್ಧರಾಗಿರುವ ಅಕ್ಕಲಕೋಟೆಯ ಮಹಾರಾಜರು ಮತ್ತು ಹೈದರಾಬಾದ ಪ್ರದೇಶದಲ್ಲಿಯ ಶ್ರೀ ಮಾನಿಕಪ್ರಭುಗಳು ಇವರ ಅನುಯಾಯಿ ವರ್ಗದಲ್ಲಿ ಅನೇಕರು ಮುಸಲ್ಮಾನರಾಗಿದ್ದಾರೆ. ಈ ಗುರುಮಾರ್ಗ ಅವಧೂತ ನಿರಂಜನ ಪಂಥವಾಗಿದೆ. ಈ ರೀತಿಯ ಅವಧೂತ- ನಿರಂಜನ ದಿಗಂಬರ ಗುರುಮಾರ್ಗವನ್ನು ಕೊನೆಗೆ ವೈದಿಕರು ಹತ್ತಿರ ಬರಮಾಡಿಕೊಳ್ಳಲೇ ಬೇಕಾಯಿತು! 'ಕರತಲಭಿಕ್ಷಾ ತರುತಲವಾಸಃ' ಇಂಥ ವೃತ್ತಿಯ ನಿರಂಜನ ಪಂಥದ ದಿಗಂಬರ ಯತಿಗಳಿಗೆ ಜಾತಿಕುಲಗಳ ಬಂಧನಗಳು ಅಡ್ಡಬರುವದಿಲ್ಲ.

ಆತ್ರೇಯದತ್ತ ಪಂಥಕ್ಕಿಂತ ಮೊದಲು ಇನ್ನೊಂದು ನಿರಂಜನಪಂಥ ರೂಢವಾಗಿತ್ತು. ಅನಸೂಯೆಯ ಹತ್ತಿರ ಭಿಕ್ಷೆಗೆಂದು ಬಂದಿದ್ದ ಯತಿಗಳು ಈ ಪಂಥದವರಾಗಿದ್ದರು. ಅನಸೂಯೆಯ ಹತ್ತಿರ ಅವರು ಕೇಳಿದ ಭಿಕ್ಷೆಯ ಪ್ರಕಾರ ಶಾಕ್ತ-ಸಿದ್ಧ ಪಂಥದ್ದಾಗಿದೆ. ಗುರುಮಾಹಾತ್ಮ್ಯದಲ್ಲಿ ದತ್ತಗುರುವಿನ 'ವಿಕೃತ್ಯಾಚರಣ'ದ ವರ್ಣನೆ ಇದೆ. ಅದರ ಮೇಲಿಂದ ಈ ಪಂಥದಲ್ಲಿ ಮದ್ಯ ಮೊದಲಾದ ಪಂಚ-ಮಕಾರಗಳ ಸಾಧನೆಗೆ ಪ್ರತಿಕೂಲವಿರಲಿಲ್ಲ. ಆದರೆ, ಆತ್ರೇಯ ದತ್ತಪಂಥ ವೈದಿಕ ಪರಂಪರೆಯಿಂದ ದೂರಸಿಡಿದು ಹೋಗದೆ ಹತ್ತಿರಬರುವ ಒಲವು ತೋರಿಸಿದ್ದರಿಂದ, ಕಾಲಕ್ರಮದಲ್ಲಿ ಅದು ಅತ್ಯಂತ ಮಡಿವಂತಿಕೆಯಿಂದ ತುಂಬಿದ್ದನ್ನು ನರಸೋಬಾವಾಡಿ ಗಾಣಗಾಪುರ ಮೊದಲಾದ ಸ್ಥಳಗಳಲ್ಲಿ ನೋಡಬಹುದು.

ನಾಥಪಂಥ ಮತ್ತು ಆತ್ರೇಯ ದತ್ತಮಾರ್ಗ ಇವುಗಳನ್ನು ಅವಲಂಬಿಸಿ ಈ ಸಂಸಾರದರಿಂದ ಬೇಗನೆ ಮುಕ್ತಿ ಪಡೆಯುವ ಆಸೆಯಿಂದ ಲಕ್ಷಾಂತರ ಸ್ತ್ರೀ-ಪುರುಷರು ಎಲ್ಲ ಪ್ರಾಂತಗಳಿಂದ ಹೊರಬಂದರು. ಸಾಮಾಜಿಕ ಬಂಧನಗಳು ಅವರಿಗೆ ವಿಶೇಷವಾಗಿ ಇರಲಿಲ್ಲವಾದ್ದರಿಂದ ಮತ್ತು ಮುಮುಕ್ಷು ವೃತ್ತಿಯಿಂದ ಬಂದವರೆಲ್ಲ ಯಾವಾಗಲೂ ಉಚ್ಚ ದರ್ಜೆಯ ಮನುಷ್ಯರಲ್ಲವಾದದ್ದರಿಂದ ಈ ಗುರುಮಾರ್ಗ ಬೇಗನೆ ಅವನತಿಗೆ ಈಡಾಯಿತು. ಮನೋವಿಜಯ ಸಾಧಿಸಿದ್ದನ್ನು ನೋಡಲು 'ವಿಕೃತ್ಯಾಚರಣ'ವನ್ನು ಮಾಡುವ ಪದ್ಧತಿ ಈ ಮಾರ್ಗದಲ್ಲಿ ಸಾಮಾನ್ಯವಾಯಿತು. ಸ್ತ್ರೀಸಂಗದಲ್ಲಿದ್ದೂ ನಿಃಸಂಗವೃತ್ತಿ ತಮ್ಮಲ್ಲಿ ಮೈಗೂಡಿದೆಯೆಂದು ತೋರಿಸುವದು; ಅಪೇಯಪಾನ, ಅಭಕ್ಷ್ಯಭಕ್ಷಣ ಮೊದಲಾದ ಸಿದ್ಧಗುರುವಿನ ಆಚಾರವನ್ನು, ಗುರುವಿನ ಶಕ್ತಿವಿಶೇಷಕ್ಕೆ ಹೆದರಿ ದುರ್ಲಕ್ಷಿಸುವದು-ಇವೆಲ್ಲ ನಮ್ಮ ಜನರಲ್ಲಿ ಸೇರಿಕೊಂಡ ಗುಣಗಳಾಗಿವೆ. ಹೀಗಿದ್ದರೂ ಕಿವಿಹರಕರೆಂಬ ಶಬ್ದ ನಿಂದ್ಯ ನಡೆವಳಿಕೆಯ ದ್ಯೋತಕವಾಗಿದೆ. ಇದರಿಂದ ಆ ಕಾಲಕ್ಕೆ ಈ ಮಾರ್ಗದಲ್ಲಿ ಎಷ್ಟು ಅನಾಚಾರ ತುಂಬಿತ್ತೆಂಬುದರ ಸೂಚನೆ ಸಿಗುತ್ತದೆ.

ಹನ್ನೆರಡನೆಯ ಶತಮಾನದ ಮಧ್ಯದಲ್ಲಿ ಗುರುಮಾರ್ಗದ ಶೈವಶಾಖೆ ಒಂದು ಹೊಸ ರೂಪವನ್ನು ತಳೆಯಲು ಪ್ರಾರಂಭಿಸಿತು. ಅದರದೇ ಪರಿಣಾಮ ಸ್ವರೂಪವಾಗಿ ವೀರಶೈವಧರ್ಮದ ಪುನರುತ್ಥಾನ ನಡೆಯಿತು. ವೀರಶೈವ ಲಿಂಗಾಯತ ಧರ್ಮದ ಮೇಲೆ ನಾಥಸಂಪ್ರದಾಯದ ಆಳವಾದ ಪ್ರಭಾವವಿದೆ. ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿ ಆಗಿ ಹೋದ ಬಸವಾದಿ ಪ್ರಥಮಗಣದ ಗುರು ಅಲ್ಲಮಪ್ರಭು ನಾಥಪಂಥದ ಯೋಗಿ ಯಾಗಿದ್ದನೆಂದು ಹಠಯೋಗ ಪ್ರದೀಪಿಕೆಯಲ್ಲಿ ದಾಖಲಾದ ಗುರುಪರಂಪರೆಯ ಹೆಸರುಗಳಿಂದ ತಿಳಿಯುತ್ತದೆ. ಈ ಅಲ್ಲಮನೇ ಬೇರೆ ಎಂದು ಕೆಲ ವೀರಶೈವರ ಅಭಿಪ್ರಾಯವಿತ್ತು. ಆದರೆ, ಅಲ್ಲಮಪ್ರಭುವಿನ ಚರಿತ್ರೆಯನ್ನು

ಹೇಳುವ 'ಪ್ರಭುಲಿಂಗಲೀಲೆ'ಯ ಸಮಕಾಲೀನವಾದ, ಹದಿನಾಲ್ಕನೆಯ ಶತಮಾನದ 'ನವನಾಥ ಚರಿತ್ರಮು' ಎಂಬ ತೆಲುಗು ಗ್ರಂಥ ಉಪಲಬ್ದವಾಗಿದೆ. ಮದ್ರಾಸ ವಿಶ್ವವಿದ್ಯಾಲಯದವರು ಅದನ್ನು ಪ್ರಕಟಿಸಿದ್ದಾರೆ. ಈ ತೆಲುಗು ಗ್ರಂಥದಲ್ಲಿಯ ಶೈವ ನವನಾಥರ ಯಾದಿಯಲ್ಲಿ ಮತ್ಸ್ಯೇಂದ್ರ-ಗೋರಖರ ಜೊತೆಗೆ, ಕೆಲಹೆಸರುಗಳಾದ ಮೇಲೆ ಅಲ್ಲಮನ ಹೆಸರು ಬರುತ್ತದೆ. ಮತ್ತು ಈ ಗ್ರಂಥದಲ್ಲಿ ವರ್ಣಿಸಿದ ಅಲ್ಲಮನ ಚರಿತ್ರೆಗೂ 'ಪ್ರಭುಲಿಂಗಲೀಲೆ' ಯಲ್ಲಿಯ ಅಲ್ಲಮನ ಚರಿತ್ರೆಗೂ ಅಂತರವಿಲ್ಲ. ಇದರಿಂದ ಲಿಂಗಾಯತ ಧರ್ಮವನ್ನು ಉದ್ಧರಿಸಿದ ಅಲ್ಲಮಪ್ರಭು ಮೊದಲು ನಾಥ ಸಂಪ್ರದಾಯದ ಒಬ್ಬ ಯೋಗಿಯಾಗಿದ್ದನೆಂಬುದು ನಿಶ್ಚಿತವಾಗುತ್ತದೆ.

ವೀರಶೈವ ಸಾಧನೆಯ ಪರಮಧ್ಯೇಯವೆಂದರೆ 'ಶೂನ್ಯ ಸಂಪಾದನೆ'. ಶೂನ್ಯ ಸಂಪಾದನೆ ಮನೋಲಯ ಯೋಗದ ಒಂದು ಪರ್ಯಾಯವಾಗಿದೆ. ಶೂನ್ಯದ ಪರಿಭಾಷೆ ಬೌದ್ಧ ಧರ್ಮ ಮತ್ತು ನಾಥ ಸಂಪ್ರದಾಯದಲ್ಲಿ ದೊರೆಯುತ್ತದೆ. "ನಿಜಲಿಂಗ ನ್ಯಾಹಾಳಿತಾ" (ನಿಜಲಿಂಗವನ್ನು ನೋಡುತ್ತ) ತತ್ ಸ್ವರೂಪನಾಗಿ ಪರಮಸಿದ್ಧಿ ದೊರೆಯುತ್ತದೆಂದು ಶ್ರೀ ಗೋರಖನ ಉಪದೇಶವಿದೆ. ಅದೆ ಉಪದೇಶವನ್ನು ಇನ್ನೂ ವಿವಿಧ ರೀತಿಗಳಲ್ಲಿ ವಚನ ರೂಪದಲ್ಲಿ ಅಲ್ಲಮಪ್ರಭು ಶರಣರಿಗೆ ಕೊಟ್ಟಿದ್ದಾನೆ. ಲಿಂಗಾಯತ ವೀರಶೈವರು ಷಟ್ಸ್ಥಲ ಪದ್ಧತಿಯ ಹೊಸ ಆಯಾಮವನ್ನು ಸಾಧನೆ ಮಾರ್ಗದಲ್ಲಿ ತಂದರು.

'ನಿಶ್ಶಬ್ದಂ ಬ್ರಹ್ಮಂ ಉಚ್ಯತೇ' ಇದು ಪ್ರಭುವಿನ ಒಂದು ವಚನ.* ಪ್ರಭು ಕಲ್ಲು, ಲೋಹಗಳ ಪ್ರತಿಮೆಗಳನ್ನು ಪೂಜಿಸುವುದು, ನಿರರ್ಥಕ ಯಾತ್ರೆ ಮಾಡುವುದು ಇವುಗಳನ್ನು ಕಟುವಾಗಿ ಟೀಕಿಸಿದ್ದಾನೆ. ಜೀವ, ಆತ್ಮ ಮತ್ತು ಪರಮಾತ್ಮ- ಇವುಗಳಲ್ಲಿ ಕೊನೆಯ ಸ್ಥಳದಲ್ಲಿ ಆರೂಢನಾದವನಿಗೆ ಮಾಹೇಶ್ವರ ಸಿದ್ಧಿ ದೊರೆಯುತ್ತದೆಂದು ನಂಬಿಕೆ ಇದೆ. ಮಹಾಂತವಾದ ಆತ್ಮದ ಅನುಸಂಧಾನದಲ್ಲಿ ವಿಹಾರ ಮಾಡುವವನಿಗೆ 'ಮಹಾತ್ಮಾ' ಎಂದು ಕರೆಯುವ ರೂಢಿ ಇತ್ತೆಂದು ಪ್ರಭುಲಿಂಗಲೀಲೆಯ ವರ್ಣನೆಯಿಂದ ಗೊತ್ತಾಗುತ್ತದೆ. ವೀರಶೈವ ದೃಷ್ಟಿಯಲ್ಲಿ ಈ ಮಹಾತ್ಮರೇ ಆದರ್ಶ ವ್ಯಕ್ತಿಗಳು. ಈಶ್ವರಾರ್ಪಣ ಬುದ್ಧಿಯಿಂದ ಸರ್ವಸಮರ್ಪಣೆಯ ಯೋಗವನ್ನು ಆಚರಿಸುವವನೇ 'ಶಿವಶರಣ'. ಶಿವಶರಣರು ಲಿಂಗವನ್ನು ಧರಿಸಬೇಕು. ಅವರು ಮುಕ್ತಜೀವಿಗಳಾದ್ದರಿಂದ ಪಂಚಸೂತಕಗಳ ಬಂಧನ ಅವರಿಗೆ ಇಲ್ಲ. ವರ್ಣಾಶ್ರಮದಲ್ಲಿಯ ಜಾತಿಸೂತಕ, ಜನ್ಮಸೂತಕ, ಮರಣ ಸೂತಕ, ಮಾಸಿಕಋತುವಿನ ಸೂತಕ ಮೊದಲಾದ ಮೈಲಿಗೆಗಳು ಅವರಿಗಿಲ್ಲ. ವೀರಶೈವರು ಅವನ್ನು ಪಾಲಿಸುವುದೂ ಇಲ್ಲ. ಪಂಥದ ಅಭಿಮಾನಿಗಳಾದ ಶ್ರೀ ಸಿದ್ಧರಾಮಪ್ಪ ಪಾವಟೆಯವರು ವೀರಶೈವ ಧರ್ಮವನ್ನು 'ಅತಿ ವರ್ಣಷಡಾಶ್ರಮ' ಎಂದು ಹೊಸ ಹೆಸರಿನಿಂದ ಕರೆದಿದ್ದಾರೆ. ರುದ್ರನೇ ಸರ್ವಶ್ರೇಷ್ಠ ದೇವತೆ ಎಂದು ನಿರ್ಣಯಿಸುವ ಶ್ವೇತಾಶ್ವತರಲ್ಲಿ 'ಅತ್ಯಾಶ್ರಮ'ದ ಹೆಸರು ಬರುತ್ತದೆ. 'ಅತ್ಯಾಶ್ರಮಿ' ಎಂದರೆ, ಮೂರು ಆಶ್ರಮಗಳ ಆಚೆಗಿನವನು, ಯತಿ, ಸನ್ಯಾಸಿ ಈ ಪಂಥವನ್ನು ಯತಿಪಂಥವೆಂದು ಕರೆದರೆ ತಪ್ಪಾಗುವುದಿಲ್ಲ. ಜಂಗಮ (ಯತಿ) ಗುರುವಿನ ಸ್ಥಾನ ಈ ಮಾರ್ಗದಲ್ಲಿ ಅದ್ವಿತೀಯವಾದದ್ದು. 'ಜಂಗಮೋ ಜಗದೀಶ್ವರಃ' ಎಂಬಂಥ ಆತ್ಯಂತಿಕ ಶ್ರದ್ಧೆಯಿಂದ ಗುರುವನ್ನು ಓಲೈಸಬೇಕೆಂದು ಆದೇಶವಿದೆ. ಗುರುಪುತ್ರ, ಗುರುಪಾದ, ಮರಿ ಈ ಪ್ರಕಾರದ ವೀರಶೈವ ಹೆಸರುಗಳು ಅವರ ಗುರುಭಕ್ತಿಯನ್ನು ಸೂಚಿಸುತ್ತವೆ. ಗುರುಪಾದೋದಕ-ಪ್ರಸಾದ ಸ್ವೀಕರಿಸುವಾಗ ಪ್ರತ್ಯೇಕ ಧನ್ಯತೆಯನ್ನು ಅನುಭವಿಸುತ್ತಾನೆ. ಸಂಪೂರ್ಣವಾಗಿ ಶಿವವ್ರತವನ್ನು ಹಿಡಿದ ಭಕ್ತ ಜಂಗಮ ಗುರುವಿಗೆ ಧನಕನಕಾದಿ ಸಂಪೂರ್ಣವನ್ನು ಅರ್ಪಿಸಿ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕು. ಬಸವಾದಿಗಳು ಈ ರೀತಿಯ ವ್ರತಾಚರಣೆಯಲ್ಲಿ ಯಶಸ್ವಿ ಯಾದರೆಂದು ಬಸವಚರಿತ್ರೆಯಲ್ಲಿ ವರ್ಣನೆ ಇದೆ.

---

* ಈ ಮಾತು ಸಿದ್ಧಪಂಥ ಹಾಗೂ ಅನುಭಾವಮಾರ್ಗದಲ್ಲಿ ಇದ್ದೇ ಇದೆ. ಪ್ರಭುದೇವನು ಆ ಮಾರ್ಗದತ್ತ ಬಂದವನಲ್ಲ ಆಂಶಿಕ ಸಂಗತಿಯನ್ನು ಇದು ಪರ್ಯಾಯವಾಗಿ ಸೂಚಿಸುತ್ತದೆ. (ಸಂ)

ಶಿವಶರಣರು ತಮ್ಮ ಆಯುಷ್ಯವೆಲ್ಲ ಸರ್ವಜೀವರೊಡನೆ ಸ್ನೇಹಭಾವದಿಂದ ಇರಬೇಕೆನ್ನುವುದು ಶಿವಾನುಭವ ಮಾರ್ಗದ ಒಂದು ಲಕ್ಷಣವಾಗಿದೆ. ಅಲ್ಲಮನ ಇಷ್ಟದೈವ 'ಗುಹೇಶ್ವರ' ಇಲ್ಲವೆ 'ಗುಹೇಶ್ವರಲಿಂಗ'. ಅದು ಅವನ ಪ್ರತಿವಚನದ ಮುದ್ರಿಕೆಯಾಗಿ ಬರುತ್ತದೆ. ಗುಹೇಶ್ವರ ಶಬ್ದವನ್ನು ಅಲ್ಲಮ ಮಾರ್ಮಿಕವಾಗಿ, ಅರ್ಥಪೂರ್ಣವಾಗಿ ಉಪಯೋಗಿಸುತ್ತಾನೆ. ಶಿವಶರಣರು ನಶ್ವರವಾದ ಸ್ಥಾವರಲಿಂಗವನ್ನು ಪೂಜಿಸಬಾರದೆಂದು ಅವರಿಗೆ ಆಜ್ಞೆಯಿದೆ. ಚೈತನ್ಯಮಯ ಜಂಗಮಲಿಂಗ-ಜ್ಯೋತಿರ್ಲಿಂಗದ ಉಪಾಸನೆಯನ್ನೇ ಅವರು ಮಾಡಬೇಕು. ಪ್ರತಿವ್ಯಕ್ತಿಯ ಹೃದಯಗುಹೆಯಲ್ಲಿ ಅಂತರ್ಹಿತವಾದ ಚೈತನ್ಯಮೂರ್ತಿಯ ಮನನ, ನಿಧಿಧ್ಯಾಸಗಳಲ್ಲಿ ತೊಡಗಿರುವುದು, ಅದೇ ಸಾಧನೆಯನ್ನು ಮುಂದುವರಿಸುವುದು ಶಿವಶರಣನ ಕರ್ತವ್ಯವಾಗಿದೆ. ಈ ರೀತಿಯ ಆತ್ಮಾನುಸಂಧಾನದಲ್ಲಿರುವ ವ್ಯಕ್ತಿಗೆ ಸಮಾಜದಲ್ಲಿ ಬಹಳ ಗೌರವವಿದೆ. ಗುರುವನ್ನು ಅನುಸರಿಸದಿದ್ದರೆ ಆತ್ಮಸಿದ್ಧಿಯಾಗದೆಂದು ಈ ಪಂಥದ ಶ್ರದ್ಧೆಯಿದೆ. ಗುರುಗಳನ್ನು, ಆತ್ಮಜ್ಞಾನಿಗಳನ್ನು 'ಶಿವಾ' ಎಂದು ಕರೆಯುವ ಪರಿಪಾಠವಿದೆ. ಋಗ್ವೇದದಲ್ಲಿ 'ಶಿವಾಃ' ಎಂಬ ಹಸರಿನ ಜನರು ಆರ್ಯೇತರರಾಗಿದ್ದರೆಂದು ತಜ್ಞರ ಅಭಿಪ್ರಾಯವಿದೆ. ಗುರುಗಳನ್ನು. ಆತ್ಮಜ್ಞಾನಿಗಳನ್ನು 'ಶಿವಾ' ಎಂದು ಕರೆಯುವ ಪರಿಪಾಠ ವೀರಶೈವರಲ್ಲಿ ಬಹಳ ಪ್ರಾಚೀನವಾಗಿದೆ. ಋಗ್ವೇದದ 'ಶಿವಾಃ' ಇವರು ಶಿವ ಭಕ್ತ ಜಂಗಮ ವರ್ಗದವರಿರಲಿಕ್ಕಿಲ್ಲವೇ? ಈ ಸಂಗತಿ ವಿಚಾರಾರ್ಹವಾಗಿದೆ.

ವೀರಶೈವರಿಗೆ ಅರುವತ್ತುಮೂರು ಪುರಾತನರಿರುವ ಸಂಗತಿ ತಮಿಳುದೇಶದಲ್ಲಿಯೂ ಪ್ರಸಿದ್ಧವಾಗಿದೆ. ಆದರೆ, ವೈದಿಕ ಕಾಲದಿಂದ ಆ ಗುರುಗಳ ಹೆಸರು ದೆಸೆಗಳ ಪರಂಪರೆ ಮರೆತು ಹೋಗಿದ್ದರೂ ಈ 'ಪುರಾತನ'ರ ಪೂಜೆ ಈಮಾರ್ಗದಲ್ಲಿ ತಪ್ಪದೆ ನಡೆಯುತ್ತದೆ. ಗಣಾರಾಧನೆ ಈ ಪಂಥದ ವೈಶಿಷ್ಟ್ಯವಾಗಿದೆ. 'ಗಣ' ಶಬ್ದ ಸಂಸ್ಕೃತೇತರ ಭಾಷೆಯೊಳಗಿನದೆಂದು ಡಾ|| ಸುನೀತಿಕುಮಾರ ಚಟರ್ಜಿಯವರ ಅಭಿಪ್ರಾಯವಿದೆ. ಜಂಗಮ ಗಣಂಗಳ ಸಾಮೂಹಿಕ ಪೂಜೆ ವೀರಶೈವರಲ್ಲಿ ಇಂದಿಗೂ ನಡೆಯುತ್ತದೆ. ಈ ಶಿವ 'ಗಣ' ಯಾರಿರ ಬಹುದೆಂಬುದರ ಬಗ್ಗೆ ಋಗ್ವೇದದ ಒಂದು ಋಚೆಯಿಂದ ಚನ್ನಾಗಿ ತಿಳಿದುಬರುತ್ತದೆ. ಶಿವನನ್ನು ವರ್ಣಿಸುವಾಗ "ತ್ರಿಷಷ್ಟೀ ತ್ವಾ ಮರುತಃ" ಎಂಬ ಮಂತ್ರದಲ್ಲಿ ಶಿವನ ಅರುವತ್ತುಮೂರು ಮರುದ್ಗಣದ ಉಲ್ಲೇಖವಿದೆ. ಪರಿವ್ರಾಜಕ (ಜಂಗಮ) ಪಂಥದ ಉಲ್ಲೇಖ ಛಾಂದೋಗ್ಯೋಪನಿಷತ್ತಿನಷ್ಟು ಹಳೆಯದಾಗಿದೆ. ಯಾಜ್ಞವಲ್ಕ್ಯ ಕೊನೆಯಲ್ಲಿ ಪರಿವ್ರಾಜಕ ನಾದನೆಂದು ತಿಳಿದುಬರುತ್ತದೆ. ಹೀಗೆ ಈ ಶೈವ 'ವೀರ'ರ ಪರಂಪರೆ ಪುರಾತನವಾಗಿರುವುದರ ಎಳೆಗಳು ಇನ್ನೂ ಸಿಗುತ್ತವೆ.

ಶಿವಶರಣರಾಗಿ ಆತ್ಮೋದ್ಧಾರ ಮಾಡಿಕೊಳ್ಳಲು ಸ್ತ್ರೀಯರಿಗೂ ಮುಕ್ತದ್ವಾರವಿದೆ. ಯಾಜ್ಞವಲ್ಕ್ಯ ಮೈತ್ರೇಯಿಗೆ ಕೊಟ್ಟ ಆತ್ಮಜ್ಞಾನ ವಿಚಾರಣೇಯವಾಗಿದೆ. ಅಲ್ಲಮನ ಅನುಯಾಯಿ ವರ್ಗದಲ್ಲಿ ಅಕ್ಕಮಹಾದೇವಿಯಂಥ ಶ್ರೇಷ್ಠಶಿಷ್ಯಳು ಆಗಿಹೋದಳು. ಕಲ್ಯಾಣನಗರದಲ್ಲಿದ್ದ ಅಲ್ಲಮಪ್ರಭು ಮತ್ತು ಬಸವರಾಜನಿಂದ ಅನುಭವ ಸಿದ್ಧಿಯನ್ನು ಪಡೆಯಲು ಸಂಸಾರವನ್ನು ತೊರೆದು ಅತ್ಯಂತ ಆರ್ತ ಮುಮುಕ್ಷು ಭಾವದಿಂದ ಅವಳು ಕಲ್ಯಾಣಕ್ಕೆ ಧಾವಿಸಿ ಬಂದಳು. ಆ ಆರ್ತಸ್ಥಿತಿಯಲ್ಲಿ ಅವಳಿಗೆ ಮೈಮೇಲಿನ ವಸ್ತ್ರದ ಪರಿವೆ ಕೂಡ ಇರಲಿಲ್ಲ. ದಿಗಂಬರಳಾಗಿಯೇ ಅವಳು ಪ್ರಭುವಿನ ಹತ್ತಿರ ಹೋದಳೆಂದು ವರ್ಣನೆ ಇದೆ. ಅಲ್ಲಮ ಔಪರೋಧಿಕವಾಗಿ ಮಾತಾಡಿ ಅವಳ ಸ್ಥಿತಿಯ ಅರಿವನ್ನು ತಂದುಕೊಟ್ಟನು. ಅವಳೊಡನೆ ವಾದ ಹಾಕಿ ಅವಳು ಪರೀಕ್ಷೆಯಲ್ಲಿ ಗೆದ್ದಮೇಲೆ ಅವಳಿಗೆ ಗುರೂಪದೇಶವನ್ನು ಕೊಟ್ಟ ಮತ್ತು ಅವಳಿಗೆ ಭಾವಸಮಾಧಿಯಾಗುವಂತೆ ಮಾಡಿದ. ಕೇವಲ ಕಾರ್ಯಸಿದ್ಧಿ ಅಥವಾ ಅಣಿಮಾದಿ ಅಲ್ಲ. ಸಿದ್ಧಿಗಾಗಿ ಹಾತೊರೆಯುವವರ ಬಗ್ಗೆ ಅಲ್ಲಮನಿಗೆ ತಿರಸ್ಕಾರವಿತ್ತು. ಅವನು ತನ್ನ ಪ್ರವಾಸದಲ್ಲಿ ಅನೇಕ ಯೋಗಿಗಳ ಕಣ್ಣು ತೆರೆಯಿಸಿ ಅವರನ್ನು ಸನ್ಮಾರ್ಗಕ್ಕೆ ಹಚ್ಚಿದ. ಮಹಾದೇವಿ, ನಾಗಲಾಂಬಿಕೆ, ಮುಕ್ತಾಯಕ್ಕ ಮೊದಲಾದ ಯೋಗಿನಿಯರು ಬಸವಣ್ಣ, ಚನ್ನಬಸವಣ್ಣನಂಥ ಅನುಭಾವಿ ಶಿಷ್ಯರ ಸಹಾಯ ದಿಂದ ಅಲ್ಲಮಪ್ರಭು ಬಹಳ ಮಹತ್ವದ ಧರ್ಮಕ್ರಾಂತಿಯನ್ನು ಉಂಟುಮಾಡಿದ. ಈ ಕಾರ್ಯದಲ್ಲಿ ಬಸವಣ್ಣನ ಸಹಯೋಗ ಬಹಳ ದೊಡ್ಡದಾಗಿತ್ತು.

ಆ ಕಾಲದ ಸಮಾಜಕ್ಕೆ ಈ ಕ್ರಾಂತಿಯ ಅರ್ಥವಾಗಲಿಲ್ಲ. ಶಿವಶರಣರ ಪ್ರೇರಣೆಯಿಂದ ಆಗಿದ್ದ ಜಾತಿಭೇದದ ಅಳಿವು ವರ್ಣಾಶ್ರಮಿಗಳಿಗೆ ಎಳ್ಳಷ್ಟೂ ಸರಿಬರಲಿಲ್ಲ. ಅಲ್ಲಮ, ಬಸವಣ್ಣನ ಪ್ರೇರಣೆಯಿಂದಾಗಿ ಬ್ರಾಹ್ಮಣರ ಹುಡುಗಿ ಅಸ್ಪೃಶ್ಯ ಹುಡುಗನೊಡನೆ ಮದುವೆಯಾಗುವ ವರೆಗೆ ಮಜಲು ಮುಟ್ಟಿತು. ಸಮಾಜದಲ್ಲಿ ಇದರಿಂದ ಆಂದೋಲನ ಉಂಟಾಯಿತು, ಅರಾಜಕತೆ ತಲೆಯೆತ್ತಿತ್ತು, ರಾಜ್ಯಕ್ರಾಂತಿಯೂ ಆಯಿತು. ಬಸವಣ್ಣ ಮೊದಲಾದವರು ಜಲಸಮಾಧಿಯನ್ನು ಹೊಂದಿದರು, ಅಲ್ಲಮ ಮತ್ತು ಮಹಾದೇವಿಯಂಥವರು ಶ್ರೀಶೈಲದ 'ಕದಳಿವನ'ವನ್ನು ಪ್ರವೇಶಿಸಿದರು.

ವೀರಶೈವ ಚಳವಳಿಯ ನಂತರ (ಕ್ರಿ. ಶ. ೧೧೬೦) ಸುಮಾರು ೬೦-೭೦ ವರ್ಷಗಳಾದ ಮೇಲೆ ಮಹಾನುಭಾವಪಂಥ ಉದಯಕ್ಕೆ ಬಂದಿತು. ಮೊದಲ ಚಳವಳಿಯ ಉಗಮಸ್ಥಾನ ಕಲ್ಯಾಣವಾಗಿದ್ದರೆ, ಎರಡನೆಯ ಚಳವಳಿ ಋದ್ಧಿಪುರದಲ್ಲಾಯಿತು. ಕಲ್ಯಾಣ ಚಾಲುಕ್ಯರ ಅಸ್ತಮಾನದ ನಂತರದಲ್ಲಿ ರಾಜನ ಸಿಂಹಾಸನವನ್ನು ವಶಪಡಿಸಿಕೊಂಡು ರಾಜ್ಯವನ್ನು ಸ್ಥಾಪಿಸಿದ್ದ ಮಹಾದಂಡನಾಯಕ ಬಿಜ್ಜಳನ ಆಳಿಕೆಯಲ್ಲಿ ಮೊದಲ ಚಳವಳಿ ನಡೆಯಿತು. ಆ ಕಾಲಕ್ಕೆ ರಾಜಧಾನಿಯಾಗಿದ್ದ ಕಲ್ಯಾಣವು ದಕ್ಷಿಣಾಪಥದಲ್ಲಿ ಅತ್ಯಂತ ಮಹತ್ವದ ರಾಜಕೀಯ ಮತ್ತು ಸಾಂಸ್ಕೃತಿಕ ಕೇಂದ್ರವಾಗಿತ್ತು. ಇದರೊಂದಿಗೆ ಹೋಲಿಸಿದರೆ ಋದ್ಧಿಪುರದ ಮಹತ್ವ ಏನೂ ಇರಲಿಲ್ಲ. ಶ್ರೀ ಗೋವಿಂದ ಪ್ರಭುಗಳ ವಸತಿಸ್ಥಾನವೆಂದು ಮಾತ್ರ ಮಹತ್ವ ಪಡೆದ ಋದ್ಧಿಪುರ ವರ್‍ಹಾಡದಲ್ಲಿಯ ಒಂದು ಸಾಮಾನ್ಯವಾದ ಊರು. ಶ್ರೀಚಕ್ರಧರರ ಪಂಥಕ್ಕೆ ದೇವಗಿರಿಯ ಯಾದವರಿಂದ ಅಷ್ಟಿಷ್ಟು ನೆರವು ದೊರೆಯಿತು. ಪ್ರೊ. ಕೋಲತೆಯವರು ಹೇಳುವಂತೆ ಮಹಾನುಭಾವಪಂಥ ಮಹಾರಾಷ್ಟ್ರದ ಗರ್ಭಗೃಹದಲ್ಲಿ ವರ್‍ಹಾಡದಲ್ಲಿ ಜನ್ಮ ತಳೆಯಿತು. ವೀರಶೈವ ಪಂಥ ತನಗಿಂತ ಪೂರ್ವದ ಸಿದ್ಧ, ಶಾಕ್ತ ಮತ್ತು ಕಾಳಾಮುಖ ಮೊದಲಾದ ಪಂಥಗಳನ್ನು, ತನ್ನಲ್ಲಿ ಸೇರಿಸಿಕೊಂಡು ವಿಸ್ತಾರವನ್ನು ಪಡೆಯಿತು.* ಈ ಪಂಥದ ಉಪದೇಶದಿಂದ, ಆ ಕಾಲದ ಶೈವಾಚಾರ ಮತ್ತು ವಾಮಮಾರ್ಗೀಯ ಶಾಕ್ತಪಂಥದಲ್ಲಿಯ ಅನಾಚಾರ ಇಲ್ಲದಂತಾಯಿತು. ಮದ್ಯಮಾಂಸಗಳಿಂದ ಜನರನ್ನು ಪರಾವೃತ್ತಗೊಳಿಸಿ ಸಾಮಾನ್ಯ ಜನಜೀವನದ ಮಟ್ಟ ಎತ್ತರವಾಗಲು ಈ ಪಂಥ ಬಹಳ ಸಹಾಯಮಾಡಿತು. ಕನ್ನಡದಲ್ಲಿ ಈ ಪಂಥದ ಪ್ರಚಾರಕರು ಗ್ರಂಥಗಳನ್ನು ಬರೆದು ಹೊಸ ಬಗೆಯ ಸಾಹಿತ್ಯ ನಿರ್ಮಾಣಕ್ಕೆ ಅನುವು ಮಾಡಿಕೊಟ್ಟರು. ಸಾಹಿತ್ಯದ ಹೊಸ ಪ್ರಕಾರಗಳು ಬಳಕೆಗೆ ಬಂದವು. ಆದರೆ, ಬ್ರಾಹ್ಮಣ ಭಿಕ್ಷುಕರು ಈ ಚಳವಳಿಯ ಅಗ್ರಭಾಗದಲ್ಲಿದ್ದ ಜಂಗಮರು, ತಂತಮ್ಮ ಅನುಯಾಯಿಗಳ ಮೇಲೆ ವರ್ಚಸ್ಸನ್ನು ಬೀರುವ ಸ್ಪರ್ಧೆ ನಡೆದು, ಆ ಚಳವಳಿಯ ಪಾರ್ಶ್ವಭೂಮಿಯಲ್ಲಿ ವರ್ಣದ್ವೇಷದ ಬೀಜಗಳನ್ನು ಬಿತ್ತಿದರು. ಹೊಸ ಮತಸ್ಥಾಪನೆಯ ಉತ್ಸಾಹ ಮತ್ತು ಆವೇಶದಲ್ಲಿ ಹುಟ್ಟುವ ಜಿದ್ದಿನಲ್ಲಿ ಹುಟ್ಟಿದ ಕಹಿ ವೀರಶೈವ ಮತದ ಅನುಯಾಯಿಗಳಲ್ಲಿ ಇಂದಿಗೂ ಇದೆ. ಮಹಾನುಭಾವ ಪಂಥದ ಪ್ರಸಾರಕ್ಕಾಗಿ ಪ್ರಯತ್ನಮಾಡುವಾಗ ಚಕ್ರಧರ ಕೆಲವರ್ಷಗಳ ಹಿಂದೆ ಮಾತ್ರ ನಡೆದುಹೋದ ವೀರಶೈವ ಚಳವಳಿಯಿಂದ ಪಾಠ ಕಲಿತಿರುವದು ಶಕ್ಯವಿದೆ. ಮೊದಲ ಮತಪ್ರಸಾರಕರು ಮಾಡಿದ್ದ ತಪ್ಪುಗಳನ್ನು ತಾವು ಮಾಡಬಾರದೆಂಬ ಎಚ್ಚರವನ್ನು ಚಕ್ರಧರ ಕಾಯ್ದುಕೊಂಡನೆಂದು ಹೇಳಬೇಕಾಗುತ್ತದೆ. ಏಕೆಂದರೆ ಜಾತಿಭೇದವನ್ನು ಅಳಿಸಿಹಾಕಲು ವೀರಶೈವರು ತೋರಿಸಿದ ಉತ್ಸಾಹ, ಆವೇಶಗಳು ಚಕ್ರಧರನಲ್ಲಿ ಇಲ್ಲ. ವರ್ಣಾಶ್ರಮದ ವೈಷಮ್ಯ, ಜಾತಿಭೇದ ಚಕ್ರಧರನಿಗೂ ಒಪ್ಪಿಗೆ ಇರಲಿಲ್ಲ. ಆದರು ಅವುಗಳನ್ನು ಬುಡ ಸಮೇತ ಕಿತ್ತುಹಾಕಲು ಅವನು ಪ್ರತಿಜ್ಞೆ ಮಾಡಿರಲಿಲ್ಲ. ವರ್ಣಾಶ್ರಮ ಧರ್ಮವನ್ನು ಪಾಲಿಸುವವರಿಗೂ ತನ್ನ ಮತದ ಅನುಯಾಯಿಗಳಾಗಲು ಅವನ ಒಪ್ಪಿಗೆ ಇತ್ತು. ಸ್ತ್ರೀಯರು ಮಾಸಿಕಧರ್ಮದ ಮೈಲಿಗೆಯನ್ನು ಪಾಲಿಸ ಕೂಡದೆಂದು ವೀರಶೈವರಂತೆ ಚಕ್ರಧರನಿಗೂ ಅನ್ನಿಸಿತ್ತು. ಆದರೆ, ಪಾಲಿಸಲೇಬಾರದೆಂದು ಅವನು ಆಜ್ಞೆ

---

* ಶಿವರಹಸ್ಯ ಅಥವಾ ವೀರಶೈವ ಮತದ ಬೇರುಗಳು ೧೯೩೯ರಲ್ಲಿ ಪ್ರಕಟವಾದ ಪುಸ್ತಕದಲ್ಲಿ ಈ ವಿವರಗಳು ಬಂದಿವೆ. ಸತ್ಯಾನ್ವೇಷಿಗಳು ಗಮನಿಸಬಹುದು.

ಮಾಡಿರಲಿಲ್ಲ. ಮಹಾನುಭಾವ ಪಂಥದಲ್ಲಿಯ ಕೆಲವು ಪಾರಿಭಾಷಿಕ ಶಬ್ದಗಳು ವೀರಶೈವರಲ್ಲಿ ಉಪಯುಕ್ತವಾಗಿದ್ದವು. ಮಹಾತ್ಮಾ, ಅನುಭಾವ, ಸ್ಥಳ, ವಚನ, ದಾಸೋಹ ಈ ಪ್ರಕಾರದ ಕೆಲ ಉದಾಹರಣೆಗಳಿವೆ. ಅಲ್ಲಮನಂತೆ ಚಕ್ರಧರನಿಗೂ ಮೂರ್ತಿಪೂಜೆ ಒಪ್ಪಿಗೆಯಾಗಿರಲಿಲ್ಲ.

"ದೈವತೇ ಪಾಟೀ ಭರುನಿ ಅವಧೀ ಪಾಣಿಯಾಂತ ಘಾತಲೀ
ಮಗ ತಯಾಸಿ ಬೋಧೂ ಝಾಲಾ॥"

ಚೀಲದಲ್ಲಿ ತುಂಬಿ ದೇವತೆಗಳನ್ನು ನೀರಲ್ಲಿ ಹಾಕಿದಾಗಲೇ ಅದರಿಂದ ತಿಳಿವು ಉಂಟಾಯಿತು. ಹೀಗೆಂದು ಚಕ್ರಧರನ ಲೀಲೆ ವರ್ಣಿತವಾಗಿದೆ. (ಉತ್ತರಾರ್ಧ, ಪು. ೬) ಹೀಗೆ ಇವರಿಬ್ಬರಲ್ಲಿ ಸಾಮ್ಯವಿದ್ದರೂ ಅವರ ತತ್ತ್ವಜ್ಞಾನದಲ್ಲಿ ಸಾಕಷ್ಟು ಭಿನ್ನತೆ ಇದೆ.

ಮಹಾನುಭಾವ ಪಂಥದ ಮೇಲೆ ಜೈನ ಮತ್ತು ಬೌದ್ಧರ ಪ್ರಭಾವ ಬಹಳಷ್ಟಾಗಿದೆ. ಬೌದ್ಧರಿಗಿಂತ ಜೈನ ಧರ್ಮದ ಛಾಯೆ ವಿಶೇಷವಾಗಿ ಬಿದ್ದಿದೆ. ತಜ್ಞರ ಸಮ್ಮತಿಗಾಗಿ ಈ ವಿಷಯದ ಬಗ್ಗೆ ನಾನು ನವಭಾರತದ ಒಂದು ಸಂಚಿಕೆಯಲ್ಲಿ (ಸೆಪ್ಟೆಂಬರ್ ೧೯೪೯) ಒಂದು ಲೇಖನವನ್ನು ಪ್ರಕಟಿಸಿದೆ. 'ಮಹಾರಾಷ್ಟ್ರ ಸಂಸ್ಕೃತಿ'ಯ ಬಗ್ಗೆ ಬರೆದ ತಮ್ಮ ಗ್ರಂಥದಲ್ಲಿ ಡಾ॥ ಪೆಂಡಸೆಯವರು ಮಹಾನುಭಾವ ಪಂಥದ ಮೇಲೆ ಬೌದ್ಧ ಧರ್ಮದ ಪ್ರಭಾವವಾಗಿದೆಯೆಂದು ಹೇಳಿದ್ದಾರೆ. ಆದರೆ ಪ್ರೊ॥ ಸರದಾರರು 'ಸಹ್ಯಾದ್ರಿ' ಮಾಸಪತ್ರಿಕೆಯಲ್ಲಿ ಬರೆದ ಒಂದು ವಿಸ್ತೃತವಾದ ಸುಂದರ ಲೇಖನದಲ್ಲಿ ಮಹಾನುಭಾವ ಪಂಥ ಜೈನಧರ್ಮಕ್ಕೆ ಎಷ್ಟು ಋಣಿಯಾಗಿದೆಯೆಂಬುದನ್ನು ನಿದರ್ಶನಕ್ಕೆ ತಂದುಕೊಟ್ಟಿದ್ದಾರೆ.*

ಶ್ರೀ ಚಕ್ರಧರ ಉಪದೇಶಿಸಿದ ಅಹಿಂಸೆ ಮತ್ತೆ ಮತ್ತೆ ಜೈನಧರ್ಮದ ನೆನಪು ತಂದುಕೊಡುತ್ತದೆ. ಬೇಡನ ಕೈಯಿಂದ ಮೊಲವನ್ನು ಬದುಕಿಸುವದು, ಹಾವು ಚೇಳುಗಳಂಥ ಪ್ರಾಣಿಗಳನ್ನೂ ಕೊಲ್ಲದೆ ದೂರ ಬಿಟ್ಟು ಬರುವದು, ಇಂಥ ಲೀಲೆಗಳು ಚಕ್ರಧರನ ಚರಿತ್ರೆಯಲ್ಲಿ ವರ್ಣಿತವಾಗಿವೆ. ಯಾವ ಜೀವಕ್ಕೂ ನೋವುಂಟಾಗಬಾರದೆಂದು ಚಕ್ರಧರ ಎಷ್ಟು ಎಚ್ಚರಿಕೆ ವಹಿಸುತ್ತಿದ್ದನೆನ್ನುವದು ಪ್ರಸಿದ್ಧವಾಗಿದೆ. ಆದರೆ, ಇದಕ್ಕಿಂತ ಹೆಚ್ಚು ಮಹತ್ವದ ಮಾತೆಂದರೆ 'ಪಚನ-ಪಾಚನ'ದಲ್ಲಿ ಕೂಡ ಹಿಂಸೆಯಾಗಬಾರದೆಂದು ಚಕ್ರಧರನ ಅಭಿಪ್ರಾಯವಿತ್ತು. ಜೋಗಿಯಾದವನು ಶಿಸ್ತಾಗಬಾರದು, ಹೊಲಸಿನಿಂದ ತುಂಬಿರಬೇಕೆಂದು ಅವನ ಆಜ್ಞೆಯಾಗಿತ್ತು. ಈ ಮಲಧಾರಣ ವಿಧಿಯ ಹಿಂದೆ ಎರಡು ಉದ್ದೇಶಗಳಿವೆ. ಮೊದಲ ಉದ್ದೇಶವೆಂದರೆ ಸೊಗಸುಗಾರಿಕೆಯಿಂದ ಕಾಮುಕತೆ ಹೆಚ್ಚಾಗುತ್ತದೆ, ಭೋಗೇಚ್ಛೆ ಹೆಚ್ಚಾಗುತ್ತದೆಂಬ ಹೆದರಿಕೆ. ಎರಡನೆಯದೆಂದರೆ ಮೈಯಹೊಲಸನ್ನು ಸ್ವಚ್ಛ ಮಾಡುವಾಗ ಸೂಕ್ಷ್ಮ ಜೀವಿಗಳಿಗೆ ಹಿಂಸೆಯಾಗಬಹುದೆಂಬ ಸಂಶಯ. ಮಹಾನುಭಾವ ಪಂಥ ದ್ವೈತಮತದ್ದಾಗಿದೆ. ಜೀವ ಮತ್ತು ಪರಮಾತ್ಮರ ಐಕ್ಯ ಈ ಪಂಥಕ್ಕೆ ಒಪ್ಪಿಗೆ ಇಲ್ಲ. ಮಾಧ್ವಮತದಲ್ಲಿಯ ತಾರತಮ್ಯ ಪದ್ಧತಿಯೊಂದಿಗೆ ಇದರ ಹೋಲಿಕೆ ಇದೆ. ಯಾವ ಅರ್ಥದಲ್ಲಿ ಶಾಂಕರಮತವನ್ನು ಪ್ರಚ್ಛನ್ನ ಬೌದ್ಧಮತವೆಂದು ಕರೆಯುತ್ತಾರೋ, ಅದೇ ಅರ್ಥದಲ್ಲಿ ಮಾಧ್ವಮತವನ್ನು ಪ್ರಚ್ಛನ್ನಜೈನವೆಂದು ಕರೆಯಬಹುದು. ಮಧ್ವಾಚಾರ್ಯರು ಚಕ್ರಧರನ ನಂತರ ಬಂದವರು. ಇಬ್ಬರಲ್ಲಿಯೂ ಒಂದು ತಲೆಮಾರಿನ ಅಂತರವಿದೆ. ಮಧ್ವಾಚಾರ್ಯರ ಜನ್ಮ ೧೨೨೦ ಇಲ್ಲವೆ ೧೨೫೦ ಸುಮಾರಿಗೆ ಆಯಿತೆಂದು ತಿಳಿದುಬರುತ್ತದೆ. ಈ ದೃಷ್ಟಿಯಿಂದ ಚಕ್ರಧರನು ನಿಃಸಂಶಯವಾಗಿ ಮೊದಲಿನವನಾಗುತ್ತಾನೆ. ಈ ದೃಷ್ಟಿಯಿಂದ ದ್ವೈತಮತದ ಆದ್ಯಪ್ರವರ್ತಕ ಚಕ್ರಧರನಾಗುತ್ತಾನೆ. ಮಾಧ್ವ ಸಂಪ್ರದಾಯದವರಲ್ಲಿ ವಿಶೇಷವಾಗಿ

---

* ಮಹಾನುಭಾವ ಪಂಥದ ವಿಚಾರಗಳು, ಮುಂದೆ 'ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ' ೧೯೬೦ರಲ್ಲಿ ಪ್ರಕಟಗೊಂಡ ಗ್ರಂಥದಲ್ಲಿ ಅನುಷಂಗಿಕವಾಗಿ ಪ್ರಸ್ತಾಪಿತವಾಗಿವೆ. ಅನುಭಾವ ಪಂಥದ ಮಾರ್ಗಕ್ಕೂ ಬೌದ್ಧ-ಜೈನ ಮಾರ್ಗಕ್ಕೂ ಸೂಕ್ಷ್ಮ ವ್ಯತ್ಯಾಸಗಳೂ ಆಳವಾದ ಪಾರ್ಶ್ವಪ್ರಭಾವಗಳೂ ಒಳಗೊಂಡಿರುವುದನ್ನು ಶಂಬಾ ಅವರು ಆ ಗ್ರಂಥದ ಅನೇಕ ಎಡೆಗಳಲ್ಲಿ ಪ್ರಸ್ತಾವ ಮಾಡಿದ್ದಾರೆ. (ಸಂ)

ರೂಢವಾದ 'ಆಚಾರ್ಯ' ಪದವಿ ಹಯಗ್ರೀವಾಚಾರ್ಯ, ನಾರಾಯಣಾಚಾರ್ಯ, ಮೊದಲಾದ ಮಹಾನುಭಾವರು ಮೊದಲೇ ಬಳಕೆಗೆ ತಂದಿದ್ದರು. ಮಹಾನುಭಾವ ಮತ್ತು ಮಾಧ್ವತತ್ತ್ವಜ್ಞಾನಗಳಲ್ಲಿ ಬಹಳಷ್ಟು ಸಾಮ್ಯವಿದೆ. ಮಾಧ್ವರ ವೈಚಾರಿಕತೆ ಜೈನ ವಿಚಾರಸರಣಿಯನ್ನು ಹೋಲುತ್ತಿದ್ದರೆ, ಮಹಾನುಭಾವರ ಆಚಾರಪದ್ಧತಿ ಜೈನರದಂತೆ ಇದೆ. ದ್ವೈತಮತ ಪ್ರವರ್ತಕರಾದ ಈ ಇಬ್ಬರು ಮಹಾಪುರುಷರು ಜೈನಮತದ ಪ್ರಭಾವವಿದ್ದ ಪ್ರದೇಶಗಳಲ್ಲಿ ಹುಟ್ಟಿದರು. ಚಕ್ರಧರನ ಜನ್ಮಭೂಮಿ ಗುಜರಾತವಾಗಿದ್ದರೆ; ಮಧ್ವಾಚಾರ್ಯರು ಕರ್ನಾಟಕದ ಉಡುಪಿಯಲ್ಲಿ ಹುಟ್ಟಿದರು.

ಚಕ್ರಧರನಿಗೆ 'ನಗ್ನದೇವ', 'ಜಿನವೀರ', 'ಗೋಮಟದೇವ' ಎಂಬ ಪರ್ಯಾಯ ನಾಮಗಳಿದ್ದವೆಂದು ಚರಿತ್ರೆಕಾರರು ಬರೆದಿದ್ದಾರೆ. ಶ್ರವಣ ಬೆಳುಗೊಳ (ಕರ್ನಾಟಕ)ದ ಬಾಹುಬಲಿಯ ಭವ್ಯಮೂರ್ತಿಗೆ ಗೋಮಟನೆಂಬ ಹೆಸರಿದೆ. ಮಹಾನುಭಾವರು ಜೈನರಿಂದ ಅಹಿಂಸೆಯ ತತ್ತ್ವವನ್ನು ಸ್ವೀಕರಿಸಿದರು ಮತ್ತು ದಯಾವೃತ್ತಿಗೆ ಮಹತ್ವಕೊಟ್ಟರು. ಮಾಧ್ವರು ಯಜ್ಞದಲ್ಲಿ ಹಿಂಸೆಯನ್ನು ಬಿಟ್ಟುಕೊಟ್ಟು ಪಿಷ್ಟಪಶುವಿನ ಬಲಿಕೊಡುವ ಪದ್ಧತಿಯನ್ನು ರೂಢಿಗೆ ತಂದರು. ಮಹಾನುಭಾವರ ಮೇಲೆ ಜೈನ ಧರ್ಮದಂತೆ ನಾಥ ಸಂಪ್ರದಾಯದ ಪ್ರಭಾವವೂ ಆಗಿದೆ. ಕಾಲಮಾನಕ್ಕೆ ಅನುಗುಣವಾಗಿ ದಕ್ಷಿಣಪಂಥದಲ್ಲಿ ನಾಥ ಸಂಪ್ರದಾಯದ ಬದಲಾದ ಸ್ವರೂಪವೇ ಇದೆಂದರೂ ಸಲ್ಲುತ್ತದೆ. ನಾಥಸಂಪ್ರದಾಯದಲ್ಲಿಯ ಶೈವ ಪರಂಪರೆಯನ್ನು ವೀರಶೈವರು, ಅದರಲ್ಲಿ ಸ್ವಲ್ಪ ಬದಲಾವಣೆ ತಂದು ಮುಂದುವರಿಸಿದರು. ಅದೇ ರೀತಿ ಮಹಾನುಭಾವರು ಅದರಲ್ಲಿಯ ವೈಷ್ಣವ ಪರಂಪರೆಯನ್ನು ಮುಂದುವರಿಸಿದರು. ನಾಥ ಸಂಪ್ರದಾಯದ ಮೆಟ್ಟಿನಲ್ಲಿಯೇ ಮಹಾನುಭಾವ ಸಂಪ್ರದಾಯದ ಉಗಮವಾಗಿದೆ. 'ಲೀಳಾಚರಿತ್ರೆ'ಯ ಸಂಪಾದಕ ಶ್ರೀ ನೇನೇ ಅವರಿಗೆ ಈ ಮಾತು ಲಕ್ಷ್ಯಕ್ಕೆ ಬಂದಿಲ್ಲವೆಂದಲ್ಲ. ಆದರೆ, ಆ ಗ್ರಂಥದ ಪ್ರಸ್ತಾವನೆಯಲ್ಲಿ ಮಾತ್ರ ಅವರು ಸ್ಪಷ್ಟವಾಗಿ ಹಾಗೆ ಒಪ್ಪಿಕೊಳ್ಳಲು ಹಿಂಜರಿದಿದ್ದಾರೆಂದು ತೋರುತ್ತದೆ. ಮಹಾನುಭಾವ ಸಂಪ್ರದಾಯದ ನಡೆನುಡಿಗಳು ನಾಥಸಂಪ್ರದಾಯದ ನಡೆನುಡಿಗಳನ್ನು ಹೋಲುತ್ತವೆ. ಇಬ್ಬರಿಗೂ ವರ್ಣಾಶ್ರಮಧರ್ಮ ಒಪ್ಪಿಗೆ ಇಲ್ಲ. ಹೆಣ್ಣಿನ ಬಗ್ಗೆ ತಿರಸ್ಕಾರ ಇಬ್ಬರಿಗೂ ಸಮಾನವಾಗಿದೆ. ಚಿತ್ರದಲ್ಲಿಯೂ ಹೆಣ್ಣನ್ನು ನೋಡಬಾರದೆಂದು ಚಕ್ರಧರನ ಆಜ್ಞೆಯಿದೆ. ಆದರು, ನಾಥಯೋಗಿಗಳಿಗೆ ಯೋಗಿನಿಯರಾದ ಶಿಷ್ಯೆಯರಿರುತ್ತಾರೆ! ಮಹಾನುಭಾವ ಸಂಪ್ರದಾಯದಲ್ಲಿ ಚಕ್ರಧರನ ಪರಿವಾರದಲ್ಲಿ ಸಾಕಷ್ಟು ಹೆಣ್ಣುಮಕ್ಕಳಿದ್ದರೆಂಬ ಮಾತು ಲೀಳಾಚರಿತ್ರೆಯಿಂದ ಗೊತ್ತಾಗುತ್ತದೆ. ಈ ಎರಡೂ ಪಂಥಗಳಿಗೆ ಪರಿವ್ರಾಜಕ ಸನ್ಯಾಸಧರ್ಮ ಆದರ್ಶ ವಾಗಿದೆ. ಚಕ್ರಧರ ತನ್ನ ಸನ್ಯಾಸಿಶಿಷ್ಯರನ್ನು ಜೋಗಿಗಳೆಂದು ಕರೆದಿದ್ದಾನೆ. ಉದಾ: 'ಜೋಗ್ಯಾಂನೀ ಲಿಸಪೂಸ ಕರೂಂ ನಯೇ' (ಜೋಗಿಗಳು ಶಿಸ್ತು-ಸೊಗಸು ಮಾಡಬಾರದು.)

ವೈದಿಕ ಸಂಪ್ರದಾಯದವರು ಬರೆದಿರುವ 'ನವನಾಥ ಭಕ್ತಿಸಾರ'ದಂಥ ಗ್ರಂಥಗಳಲ್ಲಿ ಮತ್ಸ್ಯೇಂದ್ರ-ಗೋರಖರಿಗೆ ಶ್ರೀಗುರುದತ್ತ ಕೃಪೆಯಾಗಿತ್ತು ಎಂಬ ವರ್ಣನೆ ಇದೆ. ಮಹಾನುಭಾವರ ದೇವತೆ ಕೂಡ ದತ್ತನೇ ಆಗಿದ್ದಾನೆ. ದ್ವಾರಾವತಿಯ ಚಾಂಗದೇವ ರಾವೂಳನಿಗೆ ದತ್ತನೇ ವ್ಯಾಘ್ರರೂಪದಿಂದ ದರ್ಶನವಿತ್ತು, ಸಿದ್ಧಿಯನ್ನು ಕರುಣಿಸಿದನೆಂದು ಹೇಳುತ್ತಾರೆ. ಚಾಂಗದೇವ ಯೋಗಿಯಾಗಿದ್ದ. 'ರಾವೂಳ', 'ಗೋಸಾವಿ' ಈ ಪದವಿ ನಾಥಸಂಪ್ರದಾಯದ ಯೋಗಿಗಳ ಹೆಸರಿಗೆ ಅಂಟಿಕೊಂಡಿದೆ. ಮಹಾನುಭಾವರ ಆದಿಗುರುವಾಗಿದ್ದ ಗುಂಡಮಪ್ರಭುವಿಗೆ ಶ್ರೀ ದತ್ತನಿಂದ ಪ್ರಸಾದ ಪಡೆದ ಚಾಂಗದೇವ ರಾವೂಳನ ಕಡೆಯಿಂದಲೇ ದೀಕ್ಷೆ ದೊರೆಯಿತು. ಚಕ್ರಧರನ ದೇಹದಲ್ಲಿ ಚಾಂಗದೇವ ರಾವೂಳನೇ ಪ್ರವೇಶ (ಪರಕಾಯ) ಮಾಡಿದನೆಂದು ಒಂದು ಕತೆ ಇದೆ. ಈ ಕತೆ ದಂತಕತೆ ಎಂದು ತಿಳಿದರೂ ಚಕ್ರಧರನಿಗೆ ಗುಂಡಮಪ್ರಭುವಿನಿಂದ 'ಶಕ್ತಿಪ್ರಾಪ್ತವಾಯಿತು' ಎಂಬುದರಲ್ಲಿ ಸಂಶಯವಿಲ್ಲ, ಈ ಎಲ್ಲ ಸಂಗತಿಗಳ ಮೇಲಿಂದ ಮಹಾನುಭಾವರ ಗುರುಪರಂಪರೆ ಶ್ರೀ ಅವಧೂತ ನಿರಂಜನ ದತ್ತನಿಂದಲೇ ಪ್ರಾರಂಭವಾಗುತ್ತದೆಂಬ ಸಂಗತಿಯನ್ನು ತಳ್ಳಿ ಹಾಕುವಂತಿಲ್ಲ. ನಾಥಸಂಪ್ರದಾಯದ ಉಧಳೀನಾಥನಿಂದ ಚಕ್ರಧರನಿಗೆ ಶಿಲ್ಪವಿದ್ಯೆ ಪ್ರಾಪ್ತವಾಯಿತೆಂದು 'ಲೀಳಾಚರಿತ್ರೆ'ಯಲ್ಲಿ ವರ್ಣನೆಯಿದೆ. ಉಧಳೀನಾಥನು 'ನಾಥ' ಸಂಪ್ರದಾಯದ

ಯೋಗಿಯಾಗಿದ್ದನು. ಚಕ್ರಧರ ಶ್ರೀಪರ್ವತದ ಮೇಲೆ ಹನ್ನೆರಡು ವರ್ಷ ತಪಸನ್ನಾಚರಿಸಿದನೆಂದು ಅವನ ಚರಿತ್ರೆ ಹೇಳುತ್ತದೆ. ಶ್ರೀಪರ್ವತ ಇದು ಮಲ್ಲಿನಾಥ (ಜ್ಯೋತಿರ್ಲಿಂಗ) ನ ಸುಪ್ರಸಿದ್ಧ ಕ್ಷೇತ್ರವಾಗಿದೆ ಮತ್ತು ಅದು ಸಿದ್ಧನಾಥರ ದೊಡ್ಡ ಕೇಂದ್ರವಾಗಿತ್ತು. ತೆಲುಗು ಭಾಷೆಯಲ್ಲಿಯ 'ನವನಾಥ ಚರಿತ್ರಮು' ಎಂಬ ಗ್ರಂಥವನ್ನು ಶ್ರೀಶೈಲದ ಒಬ್ಬ ಯೋಗಿಯ ಆದೇಶದ ಮೇರೆಗೆ ಬರೆಯಲಾಯಿತು. ಸಿದ್ಧರು, ಯೋಗಿಗಳು ದೇಹ ವಿಸರ್ಜನೆಗಾಗಿ (ಗುಹಾ ಪ್ರವೇಶ) ಶ್ರೀಶೈಲದ ಕಡೆಗೆ ಧಾವಿಸಿ ಬರುತ್ತಿದ್ದರು. 'ಗುರುಚರಿತ್ರೆ'ಯಲ್ಲಿ ಶ್ರೀನರಸಿಂಹ ಸರಸ್ವತಿ ಶ್ರೀಶೈಲ ಪರ್ವತದ ಕದಳಿವನದಲ್ಲಿ ಪ್ರವೇಶ ಮಾಡಿದನೆಂದು ವರ್ಣನೆ ಇದೆ. ಅದಕ್ಕಿಂತ ೧೦೦-೧೫೦ ವರ್ಷ ಮೊದಲಿಗೇ ಅಲ್ಲಮಪ್ರಭು ಕೂಡ ಕದಳಿಯನ್ನು ಪ್ರವೇಶಿಸಿದನೆಂದು ಹಿಂದೆಯೇ ಹೇಳಲಾಗಿದೆ. ಸಿದ್ಧ ಸಂಪ್ರದಾಯದ ಯೋಗಿಗಳಿಗೂ ಶ್ರೀಶೈಲ ಪರ್ವತಕ್ಕೂ ಇಂಥ ಘನಿಷ್ಠವಾದ ಸಂಬಂಧವಿದೆ. ಕ್ರಿಸ್ತಾಬ್ದಕ್ಕಿಂತ ಮೊದಲೇ ವಿಖ್ಯಾತವಾಗಿದ್ದ ನಾಗಾರ್ಜುನಕೊಂಡ ಶ್ರೀಶೈಲದ ಪರಿಸರದಲ್ಲೇ ಇದೆ. ನಾಗಾರ್ಜುನನು ಬೌದ್ಧಧರ್ಮದ ಹೆಸರಾದ ಮಹಾಯೋಗಿಯಾಗಿದ್ದ. 'ಮಂಜುಶ್ರೀ ಮೂಲಕಲ್ಪ' ವೆಂಬ ಹೆಸರಿನ ಬೌದ್ಧ ಗ್ರಂಥದಲ್ಲಿ ಶ್ರೀಶೈಲದ ಉಲ್ಲೇಖವಿದೆ. ಆ ಕಾಲದಲ್ಲಿ ಶ್ರೀಶೈಲ ಬೌದ್ಧಧರ್ಮದ ಕೇಂದ್ರವಾಗಿರುವ ಸಾಧ್ಯತೆ ಇದೆ. ಅದೇ ಪರಂಪರೆಯನ್ನು ಮುಂದೆ ಬಂದ ಸಿದ್ಧ ಗೋಸಾವಿಗಳು ತೀಡಿರಬೇಕು. ಚಕ್ರಧರನ ಪರಿವಾರದಲ್ಲಿ 'ನಾಥೋಬಾ'ನಂಥ ಯೋಗಿಗಳಿದ್ದರು. ಸ್ವತಃ ಚಕ್ರಧರನ ಇರವು ಮತ್ತು ನಡೆವಳಿಕೆಗಳು ಯೋಗಿಗಳಿಂದ ಭಿನ್ನವಾಗಿರಲಿಲ್ಲವೆಂದು 'ಲೀಳಾಚರಿತ್ರೆ'ಯಿಂದ ತಿಳಿದುಬರುತ್ತದೆ.

ಶ್ರೀ ಚಕ್ರಧರನ ಗುರುವಿನ ಹೆಸರು ಗುಂಡಮಪ್ರಭು ಇಲ್ಲವೆ ಗುಂಡಮರಾವೂಳ ಎಂದಿತ್ತು. 'ನಾಥ' ಶಬ್ದವನ್ನು ಬಿಟ್ಟು ಅಲ್ಲಮ ತನ್ನ ಹೆಸರ ಮುಂದೆ 'ಪ್ರಭು' ಶಬ್ದವನ್ನು ಇಟ್ಟುಕೊಂಡ. ಗುಂಡಮ ಅದೇ 'ಪ್ರಭು' ಶಬ್ದವನ್ನು ಸ್ವೀಕರಿಸಿರಬೇಕು. 'ಗೋಸ್ವಾಮಿ' (ಗೋಸಾವಿ) ಎಂದರೆ ಇಂದ್ರಿಯಗಳ ಮೇಲೆ ಪ್ರಭುತ್ವ ಸ್ಥಾಪಿಸಿದವನು ಎಂದು ಅರ್ಥವಾಗುತ್ತದೆ. 'ನಾಥ' ಎನ್ನುವದು 'ಗೋಸಾವಿ'ಯ ಪ್ರತಿಧ್ವನಿಯಾಗಿದೆ. ನಾಥನೆಂದರೆ ಸ್ವಯಂನಾಥ. 'ಸ್ವಯಂ' ಎಂಬ ಮೊದಲ ಶಬ್ದ ಆಡುಮಾತಿನಲ್ಲಿ ಲುಪ್ತವಾಗಿ 'ನಾಥ' ಅಷ್ಟೇ ಉಳಿಯಿತು. ನಾಥ ಶಬ್ದವೂ ಹಿಂದೆ ಬಿದ್ದು 'ಪ್ರಭು' ಶಬ್ದ ಉಪಯೋಗದಲ್ಲಿ ಬಂದಿರಬೇಕು. ಆಮೇಲೆ ದೇವ ಇಲ್ಲ ಈಶ್ವರ ಪದಗಳು ಬಳಕೆಗೆ ಬಂದವು. ಜ್ಞಾನದೇವ, ಜ್ಞಾನೇಶ್ವರ ಇವು ಉದಾಹರಣೆಗಳಾಗಿವೆ. ಗುರುಮಾರ್ಗದಲ್ಲಿಯ ಹೊಸ ಪ್ರಕರಣಗಳ ಆರಂಭ ಸೂಚಿಸುವ ಈ ಶಬ್ದಗಳು ಐತಿಹಾಸಿಕ ದೃಷ್ಟಿಯಿಂದ ನಮ್ಮ ಸಂಸ್ಕೃತಿಯ ಅಭ್ಯಾಸದಲ್ಲಿ ಬಹಳ ಸಹಾಯಕವಾಗಿವೆ. 'ಗುಂಡಮರಾವೂಳ' ಎಂಬ ಹೆಸರು ಎಷ್ಟೋ ಸಂಗತಿಗಳನ್ನು ಅರಹುತ್ತದೆ. ಗುಂಡೂ, ಗುಂಡಪ್ಪ, ಗುಂಡೇರಾವ ಈ ಹೆಸರುಗಳು ಕರ್ನಾಟಕದಲ್ಲಿ ಇಂದಗೂ ರೂಢಿಯಲ್ಲಿವೆ. ಗುಂಡ ಎಂದರೆ ಕಲ್ಲು. ಕೂಸಿನ ಅಪಮೃತ್ಯು ತಪ್ಪಿ ಅದು ಹೇಗಾದರೂ ಬದುಕಲಿ ಎಂದು, ಮಕ್ಕಳು ಬದುಕದಿರುವ ಮನೆಗಳಲ್ಲಿ ಇಂಥ ಹೆಸರಿಡುವ ರೂಢಿ ಕರ್ನಾಟಕದಲ್ಲಿದೆ. ಗುಂಡಮ ರಾವೂಳನಿಗೆ ಇಂಥ ಹೆಸರಿಡಬೇಕಾದರೆ ಮನೆಯಲ್ಲಿ ಇಂಥದೇ ಕಾರಣವಿರಬೇಕು. 'ಗುಂಡಮ'ದೊಳಗಿನ 'ಅಮ' ಶಬ್ದ ವಿಚಾರಣೀಯವಾಗಿದೆ. ರಾವ, ಪಂತ ಇವುಗಳಂತೆ ಇದೂ ಸನ್ಮಾನಾರ್ಥದ ಶಬ್ದವಾಗಿದೆ. ಅಮ್ಮ, ಅಣ್ಣ, ಅಪ್ಪ, ಅಕ್ಕ ಮೊದಲಾದ ಶಬ್ದಗಳನ್ನು ಅಂಕಿತನಾಮಗಳಿಗೆ ಜೋಡಿಸಿ ಕರೆಯುವ ರೂಢಿ ಒಂದು ಕಾಲಕ್ಕೆ ವಿಶೇಷವಾಗಿತ್ತು. ಒಂಬತ್ತು-ಹತ್ತನೆಯ ಶತಮಾನಗಳ ಕನ್ನಡ ಕಾವ್ಯಗಳಲ್ಲಿ 'ಅಮ್ಮ' ಶಬ್ದ 'ಆರ್ಯ' ಅಥವಾ 'ತಾತ' ಎಂಬ ಅರ್ಥದಲ್ಲಿ ಉಪಯೋಗವಾಗಿದೆ. ಶಿಲಾಲೇಖಗಳಲ್ಲಿ ಕೂಡ ಇಂಥ ಹೆಸರುಗಳು ಸಿಗುತ್ತವೆ. ಮೊದಲು ಪುಂ-ಸ್ತ್ರೀಲಿಂಗದ ಈ ಶಬ್ದ ಅರ್ವಾಚೀನ ಕಾಲದಲ್ಲಿ ಅರ್ಥ ಸಂಕೋಚ ಮಾಡಿಕೊಂಡು ಕೇವಲ ಸ್ತ್ರೀಲಿಂಗದ ಶಬ್ದವಾಯಿತು. 'ಅಲ್ಲಮ' (ಇ. ಸ. ೧೧೬೦) ದಲ್ಲಿಯ ಸನ್ಮಾನಾರ್ಥದ 'ಅಮ' ಶಬ್ದ 'ಗುಂಡಮ'ದಲ್ಲಿಯೂ (ಇ. ಸಿ. ೧೨೫೦) ಕಾಣುತ್ತದೆ. ಅಲ್ಲಮಪ್ರಭು, ಗುಂಡಮಪ್ರಭು ಇವರಿಬ್ಬರಲ್ಲಿಯ ಸಾದೃಶ್ಯ ಮಹತ್ವದ್ದಾಗಿದೆ.

ಅವಧೂತೂ ಗುಂಡಮ ರಾವುಳ, ಶಬರೀ ಮನು ಅಜಗಿರೀ
ಜಿರಾಬಾಯೀ ಖೇಚರೀ, ದೇಮಾದೇವೀ ॥ ತತ್ತ್ವಸಾರ ೮೭೭

ಮೇಲಿನ ಶ್ಲೋಕದಲ್ಲಿ ಅವಧೂತ ಪಂಥದ ಯೋಗಿಗಳು ಮತ್ತು ಯೋಗಿನಿಯರ ಯಾದಿಯಲ್ಲಿ ಗುಂಡಮಪ್ರಭುವಿನ ಹೆಸರಿದೆ. ಇದರಿಂದ ಮಹಾನುಭಾವ ಸಂಪ್ರದಾಯದ ಉಗಮ ನಾಥಪಂಥದಲ್ಲಿದೆ ಎಂಬುದು ನಿರ್ವಿವಾದವಾಗುತ್ತದೆ. "ಆದರೂ ಗುಂಡಮ ರಾವೂಳ ಉರ್ಫ ಗೋವಿಂದ ಪ್ರಭು ಇವರು ನಾಥಪಂಥೀಯರೆಂದು ಆ ವೇಳೆಗೆ, ಮತ್ತು ಆಮೇಲೆ ಕೂಡ ಪ್ರಸಿದ್ಧರಾಗಿರಲಿಲ್ಲ" ಎಂದು ಪ್ರೊ. ಕೋಲತೆ ಅಭಿಪ್ರಾಯಪಟ್ಟಿದ್ದಾರೆ. ಆದರೆ, ಮಹಾನುಭಾವ ಪಂಥದ ಹೊರಗೆ ಗುಂಡಮ ರಾವೂಳನೆಂಬ ವ್ಯಕ್ತಿ ಆ ಕಾಲಕ್ಕಂತೂ ಇರಲಿಲ್ಲ. ಶ್ರೀ ಗುಂಡಮಪ್ರಭು ನಾಥಯೋಗಿಗಳಂತೆ 'ಬಾಲವತ್, ಪಿಶಾಚವತ್' ಆಚರಣೆ ನಡೆಸುತ್ತಿದ್ದರು. ಈ ಪ್ರಕಾರದ ಆಚರಣೆ ಯೋಗ ಸಾಧನೆಯಲ್ಲಿ ಒಂದು ವಿಶಿಷ್ಟ ಅವಸ್ಥೆಯದಾಗಿದೆ. ಅಂಥ ಯೋಗಿಯಿಂದ ಚಕ್ರಧರ ದೀಕ್ಷೆ ತೆಗೆದುಕೊಂಡಿದ್ದನ್ನು ಮತ್ತು ಮತ್ಸ್ಯೇಂದ್ರ-ಗೋರಖರ ಪರಂಪರೆ ಗುರುದತ್ತನಿಂದ ಆರಂಭವಾದದ್ದನ್ನು 'ನವನಾಥ ಭಕ್ತಿಸಾರ'ದಲ್ಲಿ ಹೇಳಿದ್ದಾಗಿದೆ. ಅಂದರೆ, ಗುಂಡಮಪ್ರಭುವಿನ ಪರಮಗುರುವೆಂದರೆ ದತ್ತನೇ. ಇದರಿಂದ ನಾಥ ಸಂಪ್ರದಾಯ ಮತ್ತು ಮಹಾನುಭಾವ ಸಂಪ್ರದಾಯ ಇವೆರಡೂ ಒಂದೇ ಮೂಲದ ಎರಡು ಶಾಖೆಗಳು, ಮತ್ತು ಮಹಾನುಭಾವ ಸಂಪ್ರದಾಯ ನಾಥಸಂಪ್ರದಾಯದ ಇನ್ನೊಂದು ಪರ್ಯಾಯವೆಂದು ಹೇಳಬೇಕಾಗುತ್ತದೆ. ಶ್ರೀ ಚಕ್ರಧರ 'ಗುರುದತ್ತಮಾರ್ಗ'ದೊಳಗಿನ ಒಂದು ಹೊಸ ಪ್ರಕರಣದ ನಿರ್ಮಾತೃವೆಂದು ಹೇಳುವದು ಹೆಚ್ಚು ಯೋಗ್ಯವಾಗಬಹುದು. ಇವನಿಂದ 'ಗುರುದತ್ತ ಮಾರ್ಗ' ಮುಂದುವರಿಯಿತು ಮತ್ತು ಅದರಲ್ಲಿ ಕೆಲವು ಹೊಸ ರೀತಿಗಳನ್ನೂ ಅವನು ತಂದ. 'ಪಂಚಕೃಷ್ಣ'ನನ್ನು ಆರಾಧ್ಯದೇವತೆಯನ್ನಾಗಿ ಮಾಡಿಕೊಂಡ. ಈ ಪಂಥದ ಮೂಲ ದೇವತೆ ದತ್ತನಾಗಿದ್ದರೂ ಚಕ್ರಧರನಿಗೆ ಕೃಷ್ಣ ಇಷ್ಟದೈವತವಾದ ಮತ್ತು ಮುಂದಿನವರ ಕುಲದೈವತವಾದ. ಸೂಕ್ಷ್ಮವಾಗಿ ನೋಡಿದರೆ ಶ್ರೀಕೃಷ್ಣನ ಸಂಬಂಧ ಆಮೇಲಿನದೆಂದು ತಿಳಿಯಬೇಕು. ಚಾಂಗದೇವನಿಗೆ ಶ್ರೀದತ್ತನಿಂದ ಸಿದ್ಧಿ ದೊರಕಿತು. ಆದರೆ, ಅವನು ದ್ವಾರಾವತಿಯಲ್ಲಿದ್ದು 'ಚಕ್ರಪಾಣಿ' ಎಂದು ಹೆಸರನ್ನು ಇಟ್ಟುಕೊಂಡ. ಚಾಂಗದೇವನ ಪ್ರಿಯ ಶಿಷ್ಯನಾದ ಅವಧೂತ, ನಿರಂಜನ, ಆವಲಿಯಾ ವೃತ್ತಿಯ ಗುಂಡಮ ರಾವೂಳನಿಗೆ 'ಗೋವಿಂದ' ಎಂದು ಇನ್ನೊಂದು ಹೆಸರಿತ್ತೆಂದು ತಿಳಿಯುತ್ತದೆ. ಆದರೆ, ಮೂಲ ಹೆಸರಾದ 'ಗುಂಡೂ' ಸಂಸ್ಕೃತೀಕರಣದಿಂದ 'ಗೋವಿಂದ' ಆಗಿರಬೇಕು. ಅವನ ಶಿಷ್ಯ 'ಚಕ್ರಧರ'. ಇವನೇ ಆ ಪಂಥದ ನಿಜವಾದ ಪುರಸ್ಕರ್ತ. ಆದರೆ, ಚಕ್ರಧರ ತಪಸ್ಸು ಮಾಡಿದ್ದು ಶ್ರೀಶೈಲದಲ್ಲಿ. ಸಿದ್ಧಿ ದೊರಕಿದ್ದು ದತ್ತ ಪ್ರಾಸಾದಿಕರಿಂದ! ಅಂದ ಮೇಲೆ ಶ್ರೀಕೃಷ್ಣನೊಡನೆ ಈ ಪಂಥದ ಸಂಬಂಧ ಅಷ್ಟರಮಟ್ಟಿಗೆ ಹೆಸರಿಗೆ ಮಾತ್ರ ಎಂದು ಹೇಳಬೇಕಾಗುತ್ತದೆ. ಎಲ್ಲ ಮಹಾನುಭಾವರ ಆಚಾರ ವಿಚಾರಗಳು ಅವಧೂತ ನಿರಂಜನ ಪದ್ಧತಿಯನ್ನು ಅನುಸರಿಸಿದ್ದವು. ಅವು ಇನ್ನೂ ಹಾಗೇ ಇವೆ. ಯೋಗಭೋಗಗಳ ಸಮನ್ವಯದ ಪಾಠವನ್ನು ಹೇಳಿಕೊಡುವ ಮತ್ತು ನಿಷ್ಕಾಮ ಕರ್ಮಯೋಗದ ಉಪದೇಶವನ್ನು ನೀಡುವ ದ್ವಾರಕಾಧೀಶ ಶ್ರೀಕೃಷ್ಣನು ಅವರ ಮಾದರಿಯಾಗಿದ್ದನೆನ್ನುವದಕ್ಕಿಂತ, ಸರ್ವಸಂಗ ಪರಿತ್ಯಾಗಿ ಮತ್ತು ಕೇವಲ ವಿರಕ್ತಪಂಥದ ಶ್ರೀದತ್ತ ಅವರ ಆದರ್ಶವಾಗಿದ್ದನೆಂದರೆ ಹೆಚ್ಚು ಸಮಂಜಸವಲ್ಲವೇ?

ವಿಠ್ಠಲ ವಾರಕರೀ ಪಂಥದ ಆದ್ಯಪ್ರವರ್ತಕರೆಂದರೆ ಜ್ಞಾನೇಶ್ವರರು. ಅವರಿಗೆ ಅಣ್ಣಾ ನಿವೃತ್ತಿನಾಥನಿಂದ ದೀಕ್ಷೆ ಸಿಕ್ಕಿತು. ಅವನ ಗುರುಪರಂಪರೆ ಮತ್ಸ್ಯೇಂದ್ರ ಗೋರಖನಾಥನವರೆಗೆ ಹೋಗಿ ನಿಲ್ಲುತ್ತದೆ. ಜ್ಞಾನೇಶ್ವರರು ಸ್ಪಷ್ಟ ಶಬ್ದಗಳಲ್ಲಿ ತಮ್ಮ ಗುರುಪರಂಪರೆಯನ್ನು ಹೇಳಿಬಿಟ್ಟದ್ದರಿಂದ ವಾರಕರೀ ಸಂಪ್ರದಾಯದ ಉಗಮ ನಾಥ ಸಂಪ್ರದಾಯದಲ್ಲಿದೆ ಎಂಬ ಸಂಗತಿಯೂ ಸ್ಪಷ್ಟವಾಗಿದೆ. ವೀರಶೈವ ಮತ್ತು ಮಹಾನುಭಾವ ಪಂಥಗಳ ಉಗಮದಂತೆ ಬೇರೆ ಆಧಾರ ಪ್ರಮಾಣಗಳನ್ನು ಕೊಟ್ಟು ಸ್ಪಷ್ಟೀಕರಿಸುವ ಕಾರಣವಿಲ್ಲ. ಮೇಲಿನ ಮೂರು ಪಂಥಗಳೂ ದಕ್ಷಿಣಾಪಥದಲ್ಲಿ ನಾಥಪಂಥದ ಪ್ರತಿಧ್ವನಿಗಳೇ ಆಗಿವೆ. ಮಹಾನುಭಾವರ ನಂತರ ಒಂದೆರಡು ತಲೆಮಾರುಗಳು ಕಳೆದ ಮೇಲೆ ಜ್ಞಾನೇಶ್ವರನ ಲೋಕೋತ್ತರ ಕಾರ್ಯ ಪ್ರಾರಂಭವಾಯಿತು. ಅವನು ಸ್ಥಾಪಿಸಿದ ವಾರಕರೀ

ಪಂಥದ ಪೂರ್ವಪೀಠಿಕೆ ನಾಥಸಂಪ್ರದಾಯದ ವಿಚಾರ ಪ್ರಣಾಲಿಯಲ್ಲಿದೆ ಎಂದರೆ ಯಾರೂ ಒಪ್ಪಬಹುದು. ನಾಥ ಸಂಪ್ರದಾಯದಲ್ಲಿ ವರ್ಣಾಶ್ರಮ ಧರ್ಮಕ್ಕೆ ಅವಕಾಶವಿಲ್ಲವೆಂದು ಹಿಂದೆ ಹೇಳಿದ್ದಾಗಿದೆ. ವರ್ಣಾಶ್ರಮ ಧರ್ಮವನ್ನು ಪಾಲಿಸದ ನಾಥ ಸಂಪ್ರದಾಯದಲ್ಲಿ ಗುರುದೀಕ್ಷೆಯನ್ನು ಪಡೆದ ವಾರಕರೀ ಪಂಥವನ್ನು ವೈದಿಕ ಮಾರ್ಗದ ಪರ್ಯಾಯವೆಂದು ಹೇಳುವದು ಸಾಹಸದ ಮಾತಾಗಲಿಕ್ಕಿಲ್ಲವೇ? ಆದರು ಈ ಸಾಹಸ ಶ್ರೀ ಸೋನೋ ಪಂತ ದಾಂಡೇಕರರಂಥ ವಿದ್ವಾಂಸ ಸಂತರೂ ಮಾಡಬೇಕೆಂದರೆ ಆಶ್ಚರ್ಯವಾಗುತ್ತದೆ! ಮಹಾರಾಷ್ಟ್ರ ಜ್ಞಾನಕೋಶದಲ್ಲಿಯ ತಮ್ಮ ಲೇಖನದಲ್ಲಿ ಪ್ರೊ. ದಾಂಡೇಕರರು ವಾರಕರೀ ಸಂಪ್ರದಾಯ ವೈದಿಕ ಮಾರ್ಗವನ್ನು ಅನುಸರಿಸುತ್ತದೆಂದು ಬಹಳ ಆವೇಶದಿಂದ ಪ್ರತಿಪಾದಿಸಿದ್ದಾರೆ. ದಾಂಡೇಕರ ಮೊದಲಾದವರಿಗೆ ತಮ್ಮ ಪಂಥ ವೈದಿಕಮಾರ್ಗವೆಂದು ಈರ್ಷ್ಯೆಯಿಂದ ಸಿದ್ಧಮಾಡುವದು ಆವಶ್ಯಕ ಅನ್ನಿಸುವದೇ ಅವರ ಪಕ್ಷದ ದುರ್ಬಲತೆಯನ್ನು ಎತ್ತಿ ತೋರಿಸುತ್ತದೆ.

ನಾಥಪಂಥ ವರ್ಣಾಶ್ರಮದ ಚೌಕಟ್ಟಿನಲ್ಲಿ ಇಲ್ಲವೆಂದು 'ಅತ್ಯಾಶ್ರಮಿ' ತಂದೆಯ ಮಕ್ಕಳಾದ ಜ್ಞಾನೇಶ್ವರ ಮೊದಲಾದವರಿಗೆ ಆ ಪಂಥದಲ್ಲಿ ಆಶ್ರಯ ದೊರಕಿತು. ಎಲ್ಲ ಜಾತಿ ಮತಗಳನ್ನೂ ತಮ್ಮ ಒಡಲಲ್ಲಿ ಸೇರಿಸಿಕೊಂಡು ಅಖಂಡ ಭಾರತದಲ್ಲಿ ಒಂದು ಹೊಸಪಂಥವನ್ನು ನಿರ್ಮಾಣಮಾಡುವ ಪ್ರಯತ್ನವನ್ನು ನಾಥಪಂಥದವರು ಮಾಡಿದರು. ಹದಿನೆಂಟು ಜಾತಿಗಳನ್ನು ಒಂದು ಕುಲುಮೆಯಲ್ಲಿ ಕರಗಿಸಿ ಒಂದೇ ಜಾತಿಯ ಹಿಂದೂ ಸಮಾಜವನ್ನು ನಿರ್ಮಿಸುವ ಕಲ್ಪನೆ ಇಂದು ಪ್ರಸಾರಗೊಳ್ಳುತ್ತಲಿದೆ. ಇದರ ಬುನಾದಿಯನ್ನು, ತಮಗರಿವಿಲ್ಲದೆಯೇ ಮತ್ಸ್ಯೇಂದ್ರ-ಗೋರಖರು ಹತ್ತು-ಹನ್ನೊಂದನೆಯ ಶತಮಾನಗಳಲ್ಲಿ ಹಾಕಿದ್ದರೆಂಬುದನ್ನು ಮರೆಯುವಂತಿಲ್ಲ. ಗೋರಖನ ಶಿಷ್ಯಪರಂಪರೆಯಲ್ಲಿ ಹೊರಗಿನಿಂದ ಬಂದಿದ್ದ ಅಹಿಂದೂಗಳ ಭರತಿಯೂ ಸಾಕಷ್ಟಾಗಿತ್ತು. ಮುಸಲ್ಮಾನ ದತ್ತಭಕ್ತರು ಇಂದಿಗೂ ದೊರೆಯುತ್ತಾರೆ. ಶ್ರೀಕೃಷ್ಣನ ಪ್ರೇಮದಿಂದ ಹುಚ್ಚರಾಗಿ ಹಗಲು-ರಾತ್ರಿ ಹಾಡುತ್ತ ತಿರುಗುವ ಮುಸಲ್ಮಾನರೂ ಕಡಿಮೆಯಿಲ್ಲ. ರಾಮನಾಮದ ಮಹಿಮೆಯನ್ನು ಜಗತ್ತಿಗೆ ಸಾರುವ ಕಬೀರ ಮುಸಲ್ಮಾನನಾಗಿದ್ದ. ವಾರಕರೀ ಸಂಪ್ರದಾಯದಲ್ಲಿ ಮುಸಲ್ಮಾನ ಸಂತರಿಲ್ಲವೆಂದು ಹೇಳಲು ಬರುವಂತಿಲ್ಲ. ದೇವೀದಾಸಕೃತ 'ಸಂತಮಾಲಿಕಾ ಸ್ತೋತ್ರ'ದಲ್ಲಿ ಮುಸಲ್ಮಾನ ಸಂತರ ಹೆಸರುಗಳಿವೆ. ಮಹಾಯೋಗಿ ಸಂತನಾಗಿದ್ದ ಮುಂತೋಜಿ ಬಹಮನೀ ರಾಜವಂಶೀಯ ಮುಸಲ್ಮಾನನಾಗಿದ್ದ. ಗಹಿನೀನಾಥನ ಸಮಾಧಿಗೆ ಹಿಂದೂ ಮುಸಲ್ಮಾನರಿಬ್ಬರೂ ನಡೆದು ಕೊಳ್ಳುತ್ತಾರೆ.

ಯಾವುದೋ ಕಾರಣಕ್ಕಾಗಿ ಮುಸಲ್ಮಾನನಾಗಿದ್ದ ಜಾತವೇದ ಭೈರಂಭಟ್ಟನಿಗೆ ಮತ್ತೆ ಹಿಂದೂಧರ್ಮದ ದೀಕ್ಷೆ ಕೊಡುವ ವರದ ನಾಗೇಶ ಉರ್ಫ ವಡವಾಳ ಸಿದ್ಧ ಇವನು ವೀರಶೈವನಾಗಿದ್ದಿರಬೇಕು. ವೀರಶೈವರಲ್ಲಿ 'ಫಕೀರಪ್ಪ' ಎಂದು ಹೆಸರಿಡುವ ಪದ್ಧತಿಯಿದೆ. ಫಕೀರಸ್ವಾಮಿಯ ಮಠ ಕರ್ನಾಟಕದಲ್ಲಿದೆ. ಮುಸಲ್ಮಾನರಿಗೆ ವೀರಶೈವ ದೀಕ್ಷೆಯನ್ನು ಕೊಡುವ ಪ್ರಯತ್ನಗಳಾಗಿವೆ. ಮಲೆಯ ಮಲ್ಲೇಶನೆಂಬ ಸಾಧು ಮಕ್ಕಾಯಾತ್ರೆಯನ್ನು ಮಾಡಿದ್ದನೆಂದು ಹೇಳಲಾಗುತ್ತಿದೆ. ಅವನ ಸಮಾಧಿಗೆ ಲಿಂಗಾಯತ ಮತ್ತು ಮುಸಲ್ಮಾನರು ನಡೆದುಕೊಳ್ಳುತ್ತಾರೆ. ಶ್ರೀ ಜನಾರ್ದನ ಸ್ವಾಮಿಗಳಿಗೆ ಅವಲಿಯಾನ ರೂಪದಲ್ಲಿ ದತ್ತಾತ್ರೇಯನ ದರ್ಶನವಾಯಿತೆಂದು ಹೇಳುತ್ತಾರೆ. ಶಹಾ ಅಲ್ಲಮ ಪ್ರಭು, ಶ್ರೀದತ್ತನ ರೂಪದಲ್ಲಿ ಜನಾರ್ದನ ಸ್ವಾಮಿಗಳಿಗೆ ಕಾಣಿಸಿಕೊಂಡನೆಂದು ಮಹಾರಾಷ್ಟ್ರ ಸಾರಸ್ವತ (ಟಿಪ್ಪಣಿ)ದಲ್ಲಿ ಉಲ್ಲೇಖಿತವಾಗಿದೆ. ವೀರಶೈವ ಇಲ್ಲವೆ ನಾಥಪಂಥೀಯ ಅಲ್ಲಮಪ್ರಭುವಿನ ಕಾಲ ಕ್ರಿ.ಶ. ೧೧೬೦, ಅಲ್ಲಮನು ಜನಾರ್ದನಸ್ವಾಮಿಗಳಿಗೆ ೨೦೦ ವರ್ಷಗಳಾದ ನಂತರ ಕಾಣಿಸಿಕೊಂಡನೆಂದರೆ ಆಶ್ಚರ್ಯವಾದೀತು. ಆದರೆ 'ಗುರುಮಾರ್ಗದಲ್ಲಿ ಗುರುಗಳು ಅಮರರಾಗಿರುತ್ತಾರೆಂಬ ನಂಬಿಕೆಯಿದೆ. ಅವರು ಬೇಕೆಂದಾಗ ನೂರಾರು ವರ್ಷಗಳಾದ ಮೇಲೆ ಭಕ್ತರಿಗೆ ದರ್ಶನ ಕೊಡುವ ಉದಾಹರಣೆಗಳು ಜಗತ್ತಿನಲ್ಲೆಲ್ಲ ನಮೂದಾಗಿವೆ. ಬೌದ್ಧಸಂಪ್ರದಾಯದಲ್ಲಿಯೂ ಈ ನಂಬಿಕೆಯಿದೆ. ದೇಹಾವಸಾನದ ನಂತರವೂ ದರ್ಶನ ಕೊಡುತ್ತಿದ್ದರೆ; ಅವರನ್ನು ಅಮರರೆಂದು ಕರೆಯಬೇಕಾಗುತ್ತದೆ. ಮರಣ ಮರ್ತ್ಯನಾದವನ ಲಕ್ಷಣವಾಗಿದೆ.

ಮರ್ತ್ಯರು ಯೋನಿಜರಾದ್ದರಿಂದ ಗುರುಗಳು ಅಯೋನಿಜರೆಂದು ಗೃಹೀತ ಹಿಡಿಯಬೇಕಾಗುತ್ತದೆ. ಈ ವಿಚಾರಗಳಿಂದ ಮಹಾಪುರುಷರ ಚರಿತ್ರೆಗಳಲ್ಲಿ ಜನ್ಮದ ಚಮತ್ಕಾರಗಳ, ಅವರ ಅಜಾತ. ಅಯೋನಿಜ ಸ್ಥಿತಿಗಳ ವರ್ಣನೆ ಮಾಡುವ ಸಂಕೇತ ಪುರಾಣಗಳಿರುತ್ತದೆ. ಅಲ್ಲ-ಅಲ್ಲಮ ಈ ಹೆಸರು ಮುಸಲ್ಮಾನರದೆಂದು ಕೆಲವರಿಗೆ ಅನ್ನಿಸುತ್ತದೆ. ಆದರೆ, ಅಲ್ಲಮಪ್ರಭುವಿನ ಜನ್ಮಸ್ಥಾನ ಮೊದಲಾದವುಗಳು ನಿಶ್ಚಿತವಾಗಿ ಗೊತ್ತಿರುವದರಿಂದ ಲಿಂಗಾಯತ ಮತಪ್ರವರ್ತಕನಾದ ಅಲ್ಲಮ ಮುಸಲ್ಮಾನನಾಗಿರಲಿಲ್ಲವೆನ್ನುವದು ನಿಶ್ಚಿತವಾಗಿದೆ. ಆದರೆ, ಫಕೀರಪ್ಪನಂತೆ 'ಅಲ್ಲಮ'ನೆಂಬ ಹೆಸರೂ ಮುಸಲ್ಮಾನರಿಂದ ಬಂದದ್ದೇನೆಂದು ಗೊತ್ತಾಗಿಲ್ಲ. ಒಬ್ಬ ಬ್ರಾಹ್ಮಣ ಅಲ್ಲಮ ಗುರುವಿನ ಚರಿತ್ರೆಯನ್ನು ಮರಾಠಿಯಲ್ಲಿ ಬರೆದಿದ್ದು ಅದರ ಹಸ್ತಪ್ರತಿ ದೊರಕಿದೆ. ಮುಸಲ್ಮಾನರಿಗೆ ಹಿಂದೂ ಧರ್ಮದ ಕಕ್ಷೆಯಲ್ಲಿ ಪ್ರವೇಶಿಸಲು ದತ್ತ ಸಂಪ್ರದಾಯದ ಮೂಲಕವಾಗಿ ಒಂದು ಮಾರ್ಗವಿತ್ತು. ಹದಿಮೂರು ಮತ್ತು ಹದಿನಾಲ್ಕನೆಯ ಶತಮಾನಗಳಿಂದ ಭಾರತದ ರಾಜಧಾನಿಯಾಗಿದ್ದ ದಿಲ್ಲಿಯ ಸಿಂಹಾಸನ ನೂರಾರು ವರ್ಷ ಮುಸಲ್ಮಾನರ ವಶವಾಗಿರದಿದ್ದರೆ ಹಿಂದೂ-ಮುಸಲ್ಮಾನರ ಐಕ್ಯದಲ್ಲಿ ಭಂಗವುಂಟಾಗುತ್ತಿರಲಿಲ್ಲ. ಹಿಂದೆ ಹೂಣರು ಸಿಥಿಯನ್ನರು ಭಾರತದ ಮೇಲೆ ದಾಳಿ ಮಾಡಿದ್ದರು, ಕೆಲವು ಪ್ರದೇಶಗಳಲ್ಲಿ ರಾಜ್ಯವಾಳಿದರು. ಆದರು ಈ ಪರದೇಶದ ಜನರು ಭಾರತಕ್ಕೆ ಬಂದನಂತರ ಒಂದೆರಡು ತಲೆಮಾರುಗಳಲ್ಲಿಯೇ ಪರಮಶೈವ ಅಥವಾ ಪರಮಭಾಗವತರಾದ ಉದಾಹರಣೆಗಳು ಬೇಕಾದಷ್ಟಿವೆ. ಗ್ರೀಕ್ ಮೊದಲಾದ ಜನರನ್ನು ಅರಗಿಸಿಕೊಂಡು ತಮ್ಮವರನ್ನಾಗಿ ಮಾಡಿಕೊಂಡ ಹಿಂದೂಧರ್ಮಕ್ಕೆ ಮುಸಲ್ಮಾನರನ್ನು ಅರಗಿಸಿಕೊಳ್ಳುವದು ಯಾಕೆ ಕಷ್ಟವಾಗಬೇಕು? ಬಹುಶಃ ಮುಸಲ್ಮಾನರು ಸಾಮ್ರಾಟರಾಗಿರದಿದ್ದರೆ ಅಶಕ್ಯವಾಗುತ್ತಿರಲಿಲ್ಲವೇನೋ! ಸಾಮ್ರಾಟರ ಬೆಂಬಲ ದೊರಕಿದ ಮುಸಲ್ಮಾನರ ಸ್ವಭಾವ ಮತ್ತು ವರ್ತನೆಗಳಲ್ಲಿ ಆಕ್ರಾಮಕತೆ ಬಂದಿತು. ಹಿಂದೂ ಮುಸಲ್ಮಾನರ ನಡುವೆ ಆಧ್ಯಾತ್ಮಿಕ ಸಂಬಂಧ ಗೌಣವಾಗಿ ಅದಕ್ಕೆ ಅನಿವಾರ್ಯವಾಗಿ ರಾಜಕೀಯ ಸ್ವರೂಪ ಪ್ರಾಪ್ತವಾಯಿತು. ಅಲ್ಲದೆ, ವೈಭವದ ಶಿಖರದಿಂದ ಕೆಳಗೆ ಜಾರುತ್ತಿದ್ದ ಹಿಂದೂಸಮಾಜದ ಕಾಲುಗಳು ಸ್ಥಿರವಾಗಿ ನಿಲ್ಲದೆ ಹೋದದ್ದರಿಂದ ಮುಸಲ್ಮಾನರಂಥ ತೀಕ್ಷ್ಣ ಸ್ವಭಾವದ ಜನರನ್ನು ತಮ್ಮವರನ್ನಾಗಿಸಿಕೊಳ್ಳುವದು ಅಶಕ್ಯವಾಯಿತು. ಮುಸಲ್ಮಾನರ ರಾಜಸತ್ತೆ ಒಂದೇ ಸಮನೆ ನಡೆಯುತ್ತಲೇ ಇತ್ತು. ಏಕರೂಪತೆಯ ಹಿಂದೂ ಸಮಾಜ ಏಕರೂಪ ವಾಗಿರದೆ ಜಾತಿಭೇದದ ಶ್ರೇಷ್ಠ ಕನಿಷ್ಠದಂಥ ವಿಷಮಯ ಭಾವನೆಗಳ ಸುಳಿಯಲ್ಲಿ ಸಿಕ್ಕು ದುರ್ಬಲವಾಗ ತೊಡಗಿತ್ತು. ಈ ಪ್ರಯೋಗದಲ್ಲಿ ತಾವೇ ಸಂಪೂರ್ಣವಾಗಿ ಮುಸಲ್ಮಾನರ ಆಹಾರವಾಗುವ ಭಯ ತಲೆದೋರಿತು. ತಮ್ಮ ಸ್ವತ್ವವನ್ನು ರಕ್ಷಿಸಿಕೊಳ್ಳುವ ಸಲುವಾಗಿಯೇ ಮುಸಲ್ಮಾನರನ್ನು ದೂರವಿರಿಸುವ ಆವಶ್ಯಕತೆ ಅನಿಸತೊಡಗಿತು. ಆದರೆ, ಇಷ್ಟೇ, ರಾಜಕೀಯ ಮತ್ತು ಸಾಮಾಜಿಕ ರಂಗಗಳಲ್ಲಿ ಹಿಂದೂ-ಮುಸಲ್ಮಾನರ ನಡುವೆ ಸಂಘರ್ಷ ತಲೆದೋರಿದರೂ ಅವರಿಬ್ಬರಲ್ಲಿ ನಿಜವಾದ ಆಧ್ಯಾತ್ಮಿಕ ಪ್ರವೃತ್ತಿಯವರಲ್ಲಿ ಸಾಮರಸ್ಯಕ್ಕೆ ಯಾವ ಬಾಧೆಯೂ ಉಂಟಾಗಲಿಲ್ಲ.

ಮಹಾನುಭಾವರು ಮುಸಲ್ಮಾನ ಪ್ರವೃತ್ತಿಯವರಾಗಿದ್ದರಿಂದ ಮಹಾರಾಷ್ಟ್ರದಿಂದ ದೂರ ಹೋಗಬೇಕಾಯಿತೆಂದು ಕೆಲವರ ಅಭಿಪ್ರಾಯವಿದೆ. ಮೇಲಿನ ವಿವೇಚನೆಯನ್ನು ನೋಡಿದಾಗ ಈ ಹೇಳಿಕೆಗೆ ಯಾವದೇ ಐತಿಹಾಸಿಕ ಆಧಾರಗಳಿಲ್ಲ. ಗುರುದತ್ತಮಾರ್ಗದಲ್ಲಿಯ ಎಲ್ಲ ಶಾಖೆಗಳಲ್ಲಿ ಮುಸಲ್ಮಾನರಿಗೆ ಅವಕಾಶವಿತ್ತೆಂದು ಹೇಳುವದಕ್ಕೆ ಆಧಾರಗಳಿವೆ. ಅದರಂತೆ, ಮಹಾನುಭಾವ ಪಂಥದವರಿಗೆ ಆಧ್ಯಾತ್ಮಿಕ ವೃತ್ತಿಯ ಮುಸಲ್ಮಾನರು ಪರಕೀಯರೆಂದು ಕಂಡಿರಲಿಕ್ಕೂ ಇಲ್ಲ. ಚಕ್ರಧರನಿಗೆ ಉತ್ತರಭಾರತದಲ್ಲಿ ಶಿಷ್ಯರಿದ್ದರು. "ಆತಾ ಹೇ (ಚಕ್ರಧರ) ಮ್ಲೇಛ್ಛಾಮಧ್ಯೇ ಅಸ್ಸೆಲ; ಉತ್ತರ ಪಂಥೇ ಗಮನ" ಎಂದು ಚಕ್ರಧರನ ವಚನವಿದೆ. "ಗೋಸಾವಿಯಾತೇ ಮ್ಲೇಛ್ಛಾಮಧ್ಯೇ ರಾಜ್ಯ ಕರಿತಾ (ಶಿಷ್ಯರನ್ನು ಸಂಪಾದಿಸಿ ಮತಪ್ರಸಾರ ಮಾಡುವದು) ದೇಖಿಲೇ" ಎಂದು ಒಂದು ಲೀಲೆಯನ್ನು ಉತ್ತರಾರ್ಧದಲ್ಲಿ ವರ್ಣಿಸಿದ್ದಾಗಿದೆ. ಉಜ್ಜಯಿನಿಯಿಂದ ಯಾರೋ ತಂದ ಮೇಲಿನ ಸುದ್ದಿ ದಾಖಲಾಗಿದೆ. ಮಹಾನುಭಾವರಿಗೆ ಕಾಬಲ ಕಡೆಯಲ್ಲಿ ಕೂಡ ಒಳ್ಳೆಯ ಆಶ್ರಯ ದೊರೆಯಿತು. ಇದರ ರಹಸ್ಯ ಏನೆಂಬುದನ್ನು

ಬೇರೆ ಹೇಳುವ ಕಾರಣವಿಲ್ಲ. ರಾಜಕೀಯ ರಣರಂಗದಲ್ಲಿಯ ರಾಗದ್ವೇಷಗಳ ದೃಷ್ಟಿಯಿಂದ ನೋಡುವವರಿಗೆ ಇದರ ಅರ್ಥ ತಿಳಿಯುವದಿಲ್ಲ. ಗುರುಮಾರ್ಗದಲ್ಲಿ ಹಿಂದೂ-ಮುಸಲ್ಮಾನರ ಸಂಗಮ ಅವರಿಗೆ ವಿಚಿತ್ರವಾಗಿ ಕಾಣುತ್ತದೆ. ಇದೆಲ್ಲ ಮುಸಲ್ಮಾನೀಯವಾಗುವ ಮನೋವೃತ್ತಿ ಎಂದು ಅವರು ಸಾಮಾನ್ಯವಾಗಿ ಆರೋಪಿಸುತ್ತಾರೆ. ಆದರೆ, ಇಂಥ ದೃಷ್ಟಿಕೋನದಿಂದ ನಮ್ಮ ಸಂಸ್ಕೃತಿಯಲ್ಲಿಯ ಸಮಸ್ಯೆಗಳು ಅರ್ಥವಾಗುವದಿಲ್ಲ. ಇದೇ ಪ್ರಕಾರದ ಜ್ಞಾನೇಶ್ವರನ ಗುರುದತ್ತ ಮಾರ್ಗವನ್ನು ಅನುಸರಿಸುವ ವಾರಕರೀಪಂಥ ವರ್ಣಾಶ್ರಮಧರ್ಮ ಪ್ರತಿಪಾದಕವಾದ ವೈದಿಕ ಪಂಥದಿಂದ ಭಿನ್ನವಲ್ಲ ಎಂದು ಸಾಧಿಸುವ ಪ್ರಯತ್ನ ಐತಿಹಾಸಿಕ ದೃಷ್ಟಿಯಿಂದ ಸಯುಕ್ತಿಕವಾಗಬಹುದೇ?

ಮೊದಲನೆಯವನು ಎಡವಿದರೆ ಹಿಂದಿನವನು ಜಾಣ. ಈ ನ್ಯಾಯದಿಂದ ಜ್ಞಾನೇಶ್ವರ ತನಗಿಂತ ಮೊದಲಿನ ಧಾರ್ಮಿಕ ಚಳವಳಿಗಳಿಂದ ಸಾಕಷ್ಟು ಪಾಠ ಕಲಿತಿರಬೇಕು. ಎಲ್ಲವನ್ನೂ ಏಕಾಕಾರ ಮಾಡಲು ಹೊರಟರೆಂದು ನಾಥಪಂಥದವರಿಗೆ ಅಪವಾದ ಬಂದಿತು. ವೀರಶೈವರು ಸಾಮಾಜಿಕ ವಿರೋಧವನ್ನು ಎದುರಿಸಬೇಕಾಯಿತು. ಈ ಧರ್ಮಕ್ಕೆ ಮಹಾರಾಷ್ಟ್ರದಲ್ಲಿ ಸ್ವಾಗತ ಸಿಕ್ಕಿರಲಿಕ್ಕಿಲ್ಲ. ಮಹಾರಾಷ್ಟ್ರದಲ್ಲಿ ವೀರಶೈವ ಮತ ಪ್ರಸಾರವಾಗಲಿಲ್ಲವೆಂದು ಇದರ ಅರ್ಥವಲ್ಲ. ವರ್ಹಾಡದಲ್ಲಿ ಇಂದಿಗೂ ಲಿಂಗಾಯತ ಮನೆತನಗಳಿವೆ. ಉಜ್ಜಯಿನಿಯಲ್ಲಿ ವೀರಶೈವ ಮತ ಇತ್ತು. ಕೆಲವು ಶಿವಶರಣರು ಸೌರಾಷ್ಟ್ರದ ಸೋಮನಾಥನ ಭಕ್ತರಾಗಿದ್ದರು. ಮುಸಲ್ಮಾನರ ಚಟುವಟಿಕೆಗಳು ಸುರುವಾದ ನಂತರ ಸೋರಠದ ಸೋಮನಾಥ ದಕ್ಷಿಣದ ಕರ್ನಾಟಕದ ಪುಲಿಗೆರೆಯಲ್ಲಿ (ಲಕ್ಷ್ಮೇಶ್ವರ) ಸ್ಥಿರವಾಗಿ ನಿಂತನು. ಸೋಮನಾಥನ ಪ್ರತೀಕಗಳು ಕರ್ನಾಟಕದಲ್ಲಿ ಲೋಕಪ್ರಿಯವಿದ್ದು ಹೊಯ್ಸಳ ಯಾದವರು ಅವನ ಹೆಸರಲ್ಲಿ ಒಂದು ಊರನ್ನು ನಿರ್ಮಿಸಿದರು. ಉಜ್ಜಯಿನಿಯ ಕಾಳೇಶ್ವರನೂ ದಕ್ಷಿಣಕ್ಕೆ ಬಂದ. ಬಳ್ಳಾರಿ ಜಿಲ್ಲೆಯಲ್ಲಿ ಕಾಳಉಜ್ಜೈನಿ ಎಂಬ ಕ್ಷೇತ್ರವಿದ್ದು ಅಲ್ಲಿ ವೀರಶೈವ ಶಾಖೆಯ ಒಂದು ಮಠವೂ ಇದೆ. ಈ ಎರಡೂ ಕ್ಷೇತ್ರಗಳು ಹಿಂಜರಿಯುತ್ತ ಕರ್ನಾಟಕಕ್ಕೆ ಬಂದಂತೆ ವೀರಶೈವ ಪಂಥಕ್ಕೆ ಮಹಾರಾಷ್ಟ್ರದಿಂದ ಕೂಡ ಎತ್ತುಗಡೆಯಾಯಿತು. ವಾರಕರೀ ಪಂಥದ ಕಾರ್ಯವನ್ನು ವರ್ಣಿಸುತ್ತ ಶ್ರೀ ವಿ. ಲ. ಭಾವೆಯವರು ಕೊಟ್ಟ ಹೇಳಿಕೆ ಪರಿಶೀಲಿಸಲು ಯೋಗ್ಯವಾಗಿದೆ. ವಾರಕರೀ ಮತ್ತು ರಾಮದಾಸೀ ಪಂಥಗಳು ಮುಂದೆ ಬರದಿದ್ದರೆ ಇಡೀ ಮಹಾರಾಷ್ಟ್ರ ವೀರಶೈವ ಮತದಿಂದ ಬಿಡುಗಡೆ ಪಡೆಯುತ್ತಿರಲಿಲ್ಲವೆಂದು ಅವರು ತಮ್ಮ ಅಭಿಪ್ರಾಯ ನೀಡಿದ್ದಾರೆ. ಮಹಾನುಭಾವರು ವೀರಶೈವರಂತೆ ಪ್ರಬಲವಾದ ಸಾಮಾಜಿಕ ವಿರೋಧವನ್ನು ಎದುರಿಸಬೇಕಾಯಿತು. ಕಾರಣವೆಂದರೆ ಈ ಪಂಥಗಳು ಮುಚ್ಚುಮರೆಯಿಲ್ಲದೆ ವರ್ಣಾಶ್ರಮದ ತಳಹದಿಯನ್ನೇ ಅಗೆದು ಹಾಕುವ ಪ್ರಯತ್ನಮಾಡಿದವು.

ಸ್ವತಃ ಜ್ಞಾನೇಶ್ವರ ಮತ್ತು ಅವನ ಅಣ್ಣತಮ್ಮಂದಿರು ಅತ್ಯಾಶ್ರಮಿ ಸನ್ಯಾಸಿ ತಂದೆಯ ಮಕ್ಕಳಾದ್ದರಿಂದ ಸಾಮಾಜಿಕ ಬಹಿಷ್ಕಾರದ ದಿವ್ಯದೊಳಗಿಂದ ಹಾಯ್ದು ಪ್ರಾಯಶ್ಚಿತ್ತವನ್ನು ತೆಗೆದುಕೊಳ್ಳಬೇಕಾಯಿತು. ಇದೇ ಸಾಮಾಜಿಕ ಪ್ರಕೋಪಕ್ಕಾಗಿ ಅವರ ತಂದೆತಾಯಿಗಳು ಪ್ರಯಾಗದಲ್ಲಿ ಜೀವಂತ ಸಮಾಧಿಯನ್ನು ಹೊಂದಿ ಬಿಡುಗಡೆ ಪಡೆಯಬೇಕಾಯಿತು. ಇದೆಲ್ಲದರ ಅರಿವು ಜ್ಞಾನೇಶ್ವರನಿಗಿತ್ತು. ಮೊದಲೇ ಕೆರಳಿ ಹೋಗಿದ್ದ ಸಮಾಜವನ್ನು ಇನ್ನಷ್ಟು ಕೆರಳಿಸಿ, ಕೆಲಸ ಕೆಡಿಸಿಕೊಳ್ಳುವ ಅವಿವೇಕದ ಮಾರ್ಗವನ್ನು ಅನುಸರಿಸುವದು, ಅಂಥ ವಿವೇಕಿ ಮತ್ತು ದೂರದರ್ಶಿಯಾಗಿದ್ದ ಮಹಾತ್ಮನಿಗೆ ಸಾಧ್ಯವಿರಲಿಲ್ಲ. ಸಮಾಜ ಎಷ್ಟೇ ಮೂರ್ಖತನದಿಂದ ನಡೆದುಕೊಂಡಿದ್ದರೂ ಪ್ರತೀಕಾರದ ದಾರಿಯನ್ನು ಹಿಡಿಯದೆ ತನ್ನ ಉದಾರ ಮನೋವೃತ್ತಿಯಿಂದ ಅಂಥ ಸಮಾಜವನ್ನೂ ಅವನು ಹತ್ತಿರ ಕರೆದುಕೊಂಡ. ಇಂದಿನ ಮನಃಶಾಸ್ತ್ರಜ್ಞರನ್ನು ಗೊಂದಲದಲ್ಲಿ ಕೆಡವಬಹುದಾದ ಅನುಪಮವಾದ ಉದಾಹರಣೆ ಇದಾಗಿದೆ. ಜ್ಞಾನೇಶ್ವರನಿದ್ದಂಥ ಪರಿಸ್ಥಿತಿಯಲ್ಲಿ ಯಾರಾದರೂ ವ್ಯಂಗ್ಯ, ವಿಡಂಬನ, ವಕ್ರೋಕ್ತಿಗಳಿಗೆ ಮಾರುಹೋಗಬಹುದಾಗಿತ್ತು. ಸರಳವಾಗಿ, ಬಿಚ್ಚಾಗಿ ಮಾತಾಡುವದು ಅಶಕ್ಯವಾದರೆ, ವಿರೋಧಕರ ತೊಂದರೆಯಿಂದ ಕ್ಷುಬ್ಧವಾದ ಮನಸ್ಸು, ಒಂದಿಲ್ಲೊಂದು ರೀತಿಯಲ್ಲಿ, ವ್ಯಕ್ತ ಅಥವಾ ಅವ್ಯಕ್ತ ಉಪರೋಧದಿಂದ, ಶ್ಲೇಷೆಯಿಂದ ಮಾತಾಡಿ ಮನಸ್ಸು ಸೇಡು ತೀರಿಸಿಕೊಳ್ಳುತ್ತದೆ. ಆದರೆ, ಜ್ಞಾನೇಶ್ವರನಂಥ ಅಸಾಮಾನ್ಯ ಚರಿತ್ರೆಯುಳ್ಳ ಮನುಷ್ಯನದೆಲ್ಲ ಲೋಕವಿಲಕ್ಷಣವಾಗಿರುತ್ತದೆ. ಮಹಾರಾಷ್ಟ್ರದ ಸಂತರು ಜ್ಞಾನೇಶ್ವರನನ್ನು 'ಮಾವುಲೀ' (ತಾಯಿ) ಎಂದು

ಕ[illegible]ವದು ಯಥಾರ್ಥವಾಗಿದೆ. ಜ್ಞಾನೇಶ್ವರ ತನ್ನ ಉದಾತ್ತಚರಿತ್ರೆಯಿಂದ ಸಮಾಜವೇ ನಾಚುವಂತೆ ಮಾಡಿದ. ಚಾತುರ್ವರ್ಣ್ಯವನ್ನು ಪ್ರತ್ಯಕ್ಷವಾಗಿ ವಿರೋಧಿಸುವದು ಸರಿಯಲ್ಲ; ಅದರಿಂದ ಕಾರ್ಯಹಾನಿಯಾಗುತ್ತದೆಂಬುದು ಮೊದಲಿನ ಚಳವಳಿಗಳಿಂದ ಸ್ಪಷ್ಟವಾಗಿತ್ತು. ಆದ್ದರಿಂದ ಈ ವಿಷಯದಲ್ಲಿ ಜ್ಞಾನೇಶ್ವರ ಮೌನವನ್ನು ಸ್ವೀಕರಿಸಿದಂತೆ ಕಾಣುತ್ತದೆ. ಪ್ರಚಲಿತ ಪದ್ಧತಿಗಳಿಗೆ ಧಕ್ಕೆಯಾಗದಂತೆ ಗುರುದತ್ತಮಾರ್ಗದ ಪ್ರಸಾರ ಮಾಡುವ ಕಾರ್ಯವನ್ನು ಅವನು ಚಾತುರ್ಯದಿಂದ ನಿರ್ವಹಿಸಿದ.

ಜ್ಞಾನೇಶ್ವರನ ಸ್ವಭಾವ ಸರ್ವಸಂಗ್ರಾಹಿಯಾಗಿತ್ತು, ಸಾರಗ್ರಾಹಿಯಾಗಿತ್ತು. ದುರಾಗ್ರಹ, ಏಕಗ್ರಾಹ, ಹಟವಾದ ಅವನ ವಿವರಣೆಯಲ್ಲಿ ಇಲ್ಲವೇ ಇಲ್ಲ. ತನ್ನ ಮಾರ್ಗವೈದಿಕವೋ ಅವೈದಿಕವೋ ಎಂಬ ವಿವಂಚನೆಯಿಲ್ಲ, ಬೀಳಲಿಲ್ಲ. ಎಲ್ಲೆಲ್ಲಿ ಒಳ್ಳೆಯದಿರುತ್ತದೋ ಅದನ್ನು ಬಿಡದೆ ಸಂಗ್ರಹಿಸುವದು ಅವನ ಪ್ರತಿಜ್ಞೆಯಾಗಿತ್ತು. ಆದ್ದರಿಂದ ವೈದಿಕಪದ್ಧತಿಯಲ್ಲಿ ತನ್ನ ಮಾರ್ಗಕ್ಕೆ ಪೋಷಕವಾಗಿರುವದನ್ನು ಇಟ್ಟುಕೊಳ್ಳಲು ಯಾವಾಗಲೂ ಸಿದ್ಧನಾಗಿದ್ದ. ಎಲ್ಲರು ತಂತಮ್ಮ ಆಶ್ರಮಧರ್ಮವನ್ನು ಪಾಲಿಸಲಿ, ಆದರೆ, ಮುಖ್ಯ ಮಾತೆಂದರೆ ಆತ್ಮಾನುಭೂತಿಮತ್ತು ಈಶ್ವರ ಪ್ರಾಪ್ತಿ. ಆದ್ದರಿಂದ ಅದಕ್ಕೆ ವಿರೋಧವಾಗಿರುವದರ ಕಡೆಗೆ ಅಲಕ್ಷ್ಯದಿಂದಿರುವದು ಸಂತಮಾರ್ಗದ ವೈಶಿಷ್ಟ್ಯವಾಗಿದೆ. 'ಕ್ಷೀರ ಸಿಂಧು ಪರಿಸರೀ ಶ್ರೀ ತ್ರಿಪುರಾರಿ' ಇದು ಜ್ಞಾನೇಶ್ವರನ ವಚನ. ಇದರಿಂದ ಶಿವನಾಗಲಿ ವಿಷ್ಣುವಾಗಲಿ ದೇವರ ಹೆಸರಿನ ಬಗ್ಗೆ ಹಟವಿಲ್ಲವೆನ್ನುವದು ಸ್ಪಷ್ಟವಾಗಿದೆ. ತಮತಮಗೆ ಯಾವುದು ರುಚಿಸುತ್ತದೋ. ಪಥ್ಯವಾಗುತ್ತದೋ ಅಂಥ ಹೆಸರನ್ನು ಜಪಿಸಬೇಕು ಮತ್ತು ಉದ್ಧಾರ ಮಾಡಿಕೊಳ್ಳಬೇಕು. ಒಟ್ಟಿನಲ್ಲಿ ಆತ್ಮೋದ್ಧಾರ ಇದು ಮುಖ್ಯ ಧ್ಯೇಯವಾಗಿದೆ. ಈ ಉದಾರಭಾವದ 'ಹಿನ್ನೆಲೆಯಿದ್ದದ್ದರಿಂದಲೇ ವಾರಕರೀ ಸಂಪ್ರದಾಯದಲ್ಲಿ ಏಕೋಬಾನಂಥ ದತ್ತಭಕ್ತರಿದ್ದರು; ಬಹಿರಾಪಿಶಾರಂಥ ಅನ್ಯಮತವನ್ನು ಸ್ವೀಕರಿಸಿ ಮರಳಿ ಬಂದ, ಶೈವದೀಕ್ಷೆಯನ್ನು ಪಡೆದಂಥ ಭಿನ್ನ ಭಿನ್ನ ಮತಗಳ ಜನರು ಈ ಪಂಥದಲ್ಲಿ ಬಂದು ಸೇರಿದರು. ಜ್ಞಾನೇಶ್ವರನ ತತ್ವವಿಚಾರದಲ್ಲಿ ಶೂನ್ಯದ ಪರಿಭಾಷೆಯೂ ಇದೆ.

'ಚಹೂ ಶೂನ್ಯಾ ಆರಂತೇ। ಮಹಾಶೂನ್ಯ ಪರಂತೇ।
ಸರ್ವಾಸೀ ಪಾಹತೇ। ತೇಚಿ ಗಾ॥'

ಅದರಂತೆ ಲಿಂಗ. ಜಂಗಮದ ಭಾಷೆ ಅವನ ವಿವರಣದಲ್ಲಿ ಇದೆ. 'ಗುರುಲಿಂಗ ಜಂಗಮ। ತ್ಯಾನ ದಾವಿಲಾ ಆಗಮ॥' ಮಹಾನುಭಾವ, ಮಹಂತ-ಮಹಾತ್ಮರು ಇಂಥ ಪ್ರಯೋಗಗಳು ದೊರೆಯುತ್ತವೆ ಮತ್ತು 'ಕೋಕಿಳೀ ಜ್ಞಾನ'ದಂಥ ಮಹಾನುಭಾವರ ಪರಿಭಾಷೆಗಳ ಸಂಪರ್ಕವೂ ಅಲ್ಲಿದೆ. ಜ್ಞಾನೇಶ್ವರನಿಗೆ ದ್ವೈತ-ಅದ್ವೈತಗಳ ಆಗ್ರಹವೂ ಇರಲಿಲ್ಲ. ಜ್ಞಾನೇಶ್ವರಿಯಲ್ಲಿರುವದು ಶಾಂಕರಅದ್ವೈತವೇ ಎಂಬ ಸಂಶಯ ಅನೇಕರಿಗಿದೆ. ಅದಕ್ಕೆ ಕಾರಣವೆಂದರೆ ಇದೇ, ಭಕ್ತಿಯ ಸಂದರ್ಭದಲ್ಲಿ ದ್ವೈತಭಾವ, ಸಗುಣ ಸಾಕಾರ ರೂಪಗಳೇ ಪರಮಲಕ್ಷ್ಯವಾಗಿದ್ದರೆ, ತನ್ಮಯಾವಸ್ಥೆಯಲ್ಲಿ ಅದ್ವಯಾನಂದದ ಅನುಭವ ಹೀಗೆ ಅವನು ದ್ವೈತ-ಅದ್ವೈತಗಳನ್ನು ಸಮನ್ವಯ ಮಾಡಿದ್ದಾನೆ. ವಿಠ್ಠಲನ ತಲೆಯ ಮೇಲೆ ಶಿವಲಿಂಗವಿದೆ ಎಂಬ ನಂಬಿಕೆ ಜ್ಞಾನೇಶ್ವರನ ಪ್ರಣೀತ ಸಂತಮಾರ್ಗದಲ್ಲಿ ನಡೆದು ಬಂದಿದೆ. ಹರಿಹರನಂಥ ಸಂಯುಕ್ತ ದೇವತೆ ಪ್ರಚಾರದಲ್ಲಿ ಬರಲು ಜ್ಞಾನೇಶ್ವರನ ಪ್ರಭಾವ ಕಾರಣೀಭೂತವಾಗಿದೆ. ಜಾತಿವ್ಯವಸ್ಥೆಯಲ್ಲಿಯ ಭೇದದ ಗೋಡೆಗಳು ಅದರಿಂದಾಗಿ ನೆಲಸಮವಾಗಿ ಹೋದವು. ಪರಮಾತ್ಮನ ಸಿದ್ಧಿಗಾಗಿ ಹಾತೊರೆಯುವ ಎಲ್ಲ ಜಾತಿಯ ಮತ್ತು ಎಲ್ಲ ಪಂಥದ ಜನರಿಗೂ ಪಂಢರಪುರದ ದಾರಿ ಜ್ಞಾನೇಶ್ವರನ ಪ್ರಭಾವದಿಂದ ಮುಕ್ತವಾಯಿತು. ಈರೀತಿಯಲ್ಲಿ ಧರ್ಮಾಭಿಮಾನಿಗಳ ವಿರುದ್ಧವಾಗಿ ಚಕಾರ ಶಬ್ದವೆತ್ತದೆ ಜ್ಞಾನೇಶ್ವರ ತಾನು ಸಾಧಿಸಬೇಕಾದ್ದನ್ನೆಲ್ಲ ಸಾಧಿಸಿದ. ಅವನು ಪ್ರತ್ಯಕ್ಷವಾಗಿ ವರ್ಣಾಶ್ರಮ ಧರ್ಮದ ವಿರೋಧ ಕಟ್ಟಿಕೊಳ್ಳಲಿಲ್ಲ ನಿಜ. ಆದರೆ, ತನ್ನ ಉಪದೇಶದಿಂದ ಅದರ ತಳಹದಿ ಅದುರುವಂತೆ ಮಾಡಿದ. ಇದರಿಂದಾಗಿ ಗಡಬಡಿಸಿಕೊಂಡು ಮೇಲೆದ್ದ ಬ್ರಾಹ್ಮಣ ಸಮಾಜ ವಾರಕರೀಪಂಥದ ವಿರುದ್ಧ ಚಳವಳಿ ಮಾಡಿದ್ದು ತುಕಾರಾಮ ಮೊದಲಾದ ಸಂತರಚರಿತ್ರೆಯಲ್ಲಿ ದೃಷ್ಟಿಗೋಚರವಾಗುತ್ತದೆ. ಬ್ರಾಹ್ಮಣಮಾರ್ಗ ತನ್ನ ಸ್ವತ್ವವನ್ನು ಕಾಯ್ದುಕೊಳ್ಳಲು ಒಂದು ಸ್ವತಂತ್ರ ಪಕ್ಷದ ಆವಶ್ಯಕತೆಯನ್ನು ಅನುಭವಿಸಿತು.

ಜ್ಞಾನೇಶ್ವರ, ನಾಮದೇವ, ಏಕನಾಥ, ತುಕಾರಾಮ ಮೊದಲಾದ ಸಂತರ ಉಜ್ವಲ ವ್ಯಕ್ತಿತ್ವದಿಂದಾಗಿ ಮಹಾರಾಷ್ಟ್ರದಲ್ಲಿ ವಾರಕರೀಪಂಥ ವೇಗವಾಗಿ ಬೆಳೆದು ಬಂದಿತು. ಬೇರೆ ಪ್ರಾಂತಗಳಲ್ಲಿಯೂ ಅವರ ಪ್ರೇಮಲ ಭಜನೆಗಳು ಜನರ ಮನಸೆಳೆದವು. ಪಂಜಾಬದಲ್ಲಿ ಗುರುನಾನಕನ 'ಗ್ರಂಥ ಸಾಹೇಬ'ದಲ್ಲಿ ನಾಮದೇವನ ವಚನಾಮೃತ ಸಂಗ್ರಹವಾಗಿದೆ. ಕರ್ನಾಟಕದ ಮುಮುಕ್ಷುಗಳು ಜ್ಞಾನೇಶ್ವರಿಯಿಂದ ಮುಗ್ಧರಾಗಿಬಿಟ್ಟರು. ಈ ಮಹಾರಾಷ್ಟ್ರ ಮುದ್ರೆಯ ವಿಠ್ಠಲಭಕ್ತಿಯ ಪ್ರಸಾರ ಕರ್ನಾಟಕದ ಹೃದಯಸ್ಥಾನದಲ್ಲಿ ನಡೆಯಿತು. ಸಂತರ ಈ ಕಾರ್ಯದಿಂದ ಆಶ್ರಮಧರ್ಮವನ್ನು ಒಪ್ಪದಿದ್ದ ವೀರಶೈವಧರ್ಮ ಮಹಾರಾಷ್ಟ್ರದಿಂದ ಗುಡಿ ಚಾಪೆಯನ್ನು ಕಿತ್ತಬೇಕಾದದ್ದು ಅನಿವಾರ್ಯವಾದರೂ ಇದರಿಂದ ವರ್ಣಾಶ್ರಮಧರ್ಮದ ತಳಹದಿ ಸಡಿಲಾದದ್ದು ಕೂಡ ಸುಳ್ಳಲ್ಲ. ವಾರಕರೀ ಸಂಪ್ರದಾಯ ವರ್ಣಾಶ್ರಮ ಧರ್ಮವನ್ನು ಪ್ರತ್ಯಕ್ಷವಾಗಿ ವಿರೋಧಿಸಲಿಲ್ಲ. ಅದರಿಂದ ಅದು ವೈದಿಕ ಮಾರ್ಗಾವಲಂಬಿ ಎಂದು ಹೇಳುವದು ಸರಿಯಾಗಲಾರದು. ಒಂದು ವೇಳೆ ಹಾಗೆ ತಿಳಿದರೂ ಕೂಡ, ವೈದಿಕರು ಸಂತರನ್ನು ವಿರೋಧಿಸಿ ಅವರಿಗೆ ವಿಧವಿಧವಾಗಿ ತೊಂದರೆ ಕೊಡುತ್ತಿದ್ದುದನ್ನು ಹೇಗೆ ಸಮರ್ಥಿಸಿಕೊಳ್ಳಬೇಕು? ಜ್ಞಾನೇಶ್ವರನು ಜಾತಿವ್ಯವಸ್ಥೆಯನ್ನು ವಿರೋಧಿಸದಿದ್ದರೂ ಗುರುದತ್ತ ಮಾರ್ಗದೊಳಗಿನ ಮಹತ್ವದ ಕೆಲಸಂಗತಿಗಳನ್ನು ಇದ್ದಕ್ಕಿದ್ದ ಹಾಗೇ ಮುನ್ನಡೆಸಿದ. ಆಸಂಗತಿಗಳು ಶುದ್ಧವೈದಿಕರಿಗೆ ಮಾನ್ಯವಿರಲಿಲ್ಲ, ಇಂದಿಗೂ ಇಲ್ಲ.

೧) ಸಂಸ್ಕೃತ ಮಂತ್ರಗಳ ಮಹತ್ವ ಕಡಿಮೆಯಾಗುವದು ವೈದಿಕರಿಗೆ ಸರಿ ಬರುವದೇ ಇಲ್ಲ. ವೈದಿಕ ಮಂತ್ರಗಳ ಮಾತ್ರೆ, ಸ್ವರಗಳಿಗೆ ಭಂಗಬಾರದಂತೆ ಅವುಗಳ ಪಠಣವಾಗಬೇಕು. ಬ್ರಾಹ್ಮಣನು ಗಾಯತ್ರೀಮಂತ್ರ ವನ್ನು ಎಂದೂ ಬಿಡಬಾರದು. (ಸಂಸ್ಕೃತ) ಮಂತ್ರ -ಜಪದಿಂದ ಮಾತ್ರ ಜ್ಞಾನ ಪ್ರಾಪ್ತವಾಗುತ್ತದೆ ಮತ್ತು ಸಂಸ್ಕೃತವನ್ನು ಬಿಟ್ಟರೆ ಉಳಿದ ಭಾಷೆಗಳಿಗೆ ಮಂತ್ರ ಶಕ್ತಿಯಿಲ್ಲ. ಇದು ವೈದಿಕ ವರ್ಗದವರ ದೃಢವಾದ ನಂಬಿಕೆಯಾಗಿದೆ. ಆದರೆ, ಸಂತರ ನಂಬಿಕೆ ಭಿನ್ನವಾಗಿದೆ. ಅವರಿಗೆ 'ನಾಮಕ್ಕಿಂತ ಶ್ರೇಷ್ಠವಾದದ್ದು ಯಾವದೂ ಇಲ್ಲ' ನಾಮಧಾರಕರಿಗೆ ತಾವು ಸ್ವೀಕರಿಸಿದ ನಾಮ ಗಾಯತ್ರಿಗಿಂತ ಪವಿತ್ರವಾಗಿದೆ. ನಾಮ ಜಪಿಸುತ್ತ 'ನಾಮಕ್ಕಿಂತ ಹೆಚ್ಚಿನ ತತ್ವವಿಲ್ಲ. ವ್ಯರ್ಥವಾಗಿ ಇನ್ನೊಂದು ಪಂಥಕ್ಕೆ ಯಾಕೆ ಹೋಗುವಿ?', 'ಮುಖದಲ್ಲಿ ಹರಿಪಾಠದ ಕೀರ್ತಿ ಇದ್ದರೆ ಅದೇ ಅವನ ದೇಹವಾಗುತ್ತದೆ' ನಾಮಸ್ಮರಣೆಯಿಂದ ತಪಸ್ಸಿನ ಸಾಮರ್ಥ್ಯ ಬರುತ್ತದೆ, ತೀರ್ಥಾಟನದ ಪುಣ್ಯ ದೊರೆಯುತ್ತದೆ. ತುಕಾರಾಮ ಒಂದು ಕಡೆಗೆ ಸ್ಪಷ್ಟವಾಗಿ ಹೇಳಿದ್ದಾನೆ. 'ಬ್ರಾಹ್ಮಣರಿಗೆ ಈ ರಹಸ್ಯ ಗೊತ್ತಾಗಿಲ್ಲ, ಪರಬ್ರಹ್ಮ ಒಂದು ನಾಮದಲ್ಲಿ ಅಡಗಿದೆ. ಅದೇ ಸಂಧ್ಯೆ, ಧ್ಯಾನ ಕರ್ಮಕ್ರಿಯೆ, ಅದರ ಸುಲವಾಗಿಯೇ ಬ್ರಹ್ಮಕರ್ಮ ಧ್ಯಾನಗಳೆಲ್ಲ', 'ನಾಮದಿಂದ ಸ್ನಾನಸಂಧ್ಯೆ ಕ್ರಿಯಾಕರ್ಮಗಳನ್ನು ಮಾಡಿದೆ', 'ನಾಮಧಾರಕರಿಗೆ ವರ್ಣಜಾತಿಗಳಿಲ್ಲ', 'ಆನಂದದಿಂದ ವೈಷ್ಣವರು ನಮಸ್ಕಾರ ಹಾಕುತ್ತಾರೆ, ಅವರು ಒಬ್ಬರಿಗಿಂತ ಒಬ್ಬರು ಭದ್ರ ಜಾತಿಯವರು'. 'ಸಮರ್ಥರಿಗೆ ವರ್ಣಾಶ್ರಮವಿಲ್ಲ' ಈ ಪ್ರಕಾರದ ದೃಢಭಾವನೆ ಸಂತರಲ್ಲಿತ್ತು.

ಈ ಎರಡೂ ಪಂಥಗಳನ್ನು ಕೂಡಿಸಿ ಒಂದು ಮಧ್ಯಮ ಮಾರ್ಗವನ್ನು ಕಂಡುಹಿಡಿಯುವದು ಬೇರೆ. ಆದರೆ, ಈ ಪಂಥಗಳು ಮೂಲದಲ್ಲಿಯೇ ಅಭಿನ್ನವೆಂದು ಹೇಳುವದು ಧಾರ್ಷ್ಟ್ಯದ ಮಾತೆಂದು ಕಾಣುತ್ತದೆ.

೨) ಸಂಸ್ಕೃತದಲ್ಲಿಯ ಮಂತ್ರಗಳನ್ನೇ ಜಪಿಸಬೇಕು, ವೈದಿಕ ಮಂತ್ರ ಮಾತ್ರ ತಾರಕವಾಗಬಲ್ಲದು ಎಂಬುದು ಒಂದು ಭೇದ. ಈ ಎರಡೂ ಪಂಥಗಳಲ್ಲಿಯ ಇನ್ನೊಂದು ಮಹತ್ವದ ಭೇದವೆಂದರೆ ಗುರುವಿನ ಬಗ್ಗೆ ಇರುವ ದೃಷ್ಟಿಕೋನದಲ್ಲಿ. ಗುರುವಿಗಿಂತ ಶ್ರೇಷ್ಠವಾದ ದೈವತವಿಲ್ಲ, ಗುರುವಿಗೆ ಶರಣು ಹೋಗಿ ಅವನ ಕೃಪೆಯನ್ನು ಯಾಚಿಸುವ ಗುರುಮಾರ್ಗದ ರೀತಿಯಲ್ಲಿ ವಿಶೇಷವಿದೆ. ಜ್ಞಾನೇಶ್ವರನು ತನಗಿಂತ ಮೊದಲು ಇದ್ದ ರೂಢಿಯಲ್ಲಿಯ ದೋಷಪೂರ್ಣವಾದದ್ದನ್ನು ತೆಗೆದುಹಾಕಿದರೂ ಕೆಲಭಾಗ ಉಳಿದದ್ದು ಉಳಿದೇಬಿಟ್ಟಿತು.

ಗುರುವಿನ ಚರಣದಲ್ಲಿ ಸರ್ವಸ್ವವನ್ನು ಅರ್ಪಿಸಿ ಅವನ ಕರುಣೆಯನ್ನು ಯಾಚಿಸಬೇಕು, ಅನುಗ್ರಹವನ್ನು ಪಡೆಯಬೇಕೆಂದು ಹೇಳಲಾಗುತ್ತದೆ. 'ಸರ್ವ ಸಮರ್ಪಣ'ದ ಅರ್ಥ ಯಾವಮಟ್ಟವನ್ನು ಮುಟ್ಟಬಲ್ಲದೆನ್ನುವದು ಒಂದು ಮಹತ್ವದ ಸಮಸ್ಯೆಯಾಗಿದೆ. ತನು-ಮನು-ಧನಗಳನ್ನು ಗುರುಚರಣದಲ್ಲಿ ಅರ್ಪಿಸಬೇಕಾಗುತ್ತದೆ.

ಪಾಂಡಿಚೇರಿಯ ಶ್ರೀಅರವಿಂದಾಶ್ರಮದಲ್ಲಿ ಸ್ವಂತದ್ದೆನ್ನುವದನ್ನು ಏನೂ ಇಟ್ಟುಕೊಳ್ಳಬಾರದೆಂದು ಆಶ್ರಮಸ್ಥರಿಗೆ ಆದೇಶವಿದೆ. 'ಯೋಗಕ್ಷೇಮಂ ವಹಾಮ್ಯಹಂ' ಎಂದು ಭಗವಂತನು ಗೀತೆಯಲ್ಲಿ ಆಶ್ವಾಸನವನ್ನು ಕೊಟ್ಟಿದ್ದಾನೆ. ಗುರುಮಾರ್ಗದಲ್ಲಿ ಇದೊಂದು ನಂಬಿಕೆಯೆ ಮಹತ್ವದ ಅಂಶವಾಗಿದೆ. ಗುರು-ತಾಯಿಗೆ ಸರ್ವವನ್ನೂ ಅರ್ಪಿಸಿ ಶರಣು ಹೋಗುವದೊಂದೇ ಭಕ್ತನ ಕರ್ತವ್ಯವಾಗಿದೆ. ಜ್ಞಾನೇಶ್ವರನು ನಾಮವನ್ನು ಕೊಡುವ ಗುರು 'ಸರ್ವಸ್ವ'ದ ಅಪೇಕ್ಷೆಯನ್ನಿಟ್ಟುಕೊಳ್ಳಬಾರದೆಂದು ಹೇಳಿದ್ದಾನೆ; ಮಾನವ ಗುರುವಿಗಿಂತ ವಿಠ್ಠಲನಿಗೆ ಸರ್ವಸ್ವವನ್ನೂ ಅರ್ಪಿಸುವ ಪದ್ಧತಿಯನ್ನು ರೂಢಿಗೆ ತಂದ. ಗುರುನಾಮವನ್ನು ಕೊಡುವದಕ್ಕೆ ಮಾತ್ರ ನಿಮಿತ್ತನಾಗುತ್ತಾನೆ. ಆದರೆ, ಗುರುವಿಲ್ಲದೆ ನಾಮ ಸಾರ್ಥವಾಗುವದಿಲ್ಲ ಎನ್ನುವ ಮಾತಿನಲ್ಲಿ ಮಾತ್ರ ಬದಲಾವಣೆ ಇಲ್ಲ. ಗುರುಪ್ರಸಾದ ದೊರೆಯದಿದ್ದರೆ ಶಿಷ್ಯ ನಿಜವಾದ ಶಿಷ್ಯನಾಗುವದೇ ಇಲ್ಲ. ಸ್ಥೂಲವಾದ ಅರ್ಥದಲ್ಲಿ ಪ್ರಸಾದವೆಂದರೆ ಶಿಷ್ಟ ಮತ್ತು ಸಭ್ಯ ಪ್ರಕಾರದ್ದೆಂದು ಕಾಣುತ್ತದೆ. ಆದರೆ, ಇದರ ಹಿಂದೆ ಯಾವ ಭಾವ ಅಡಗಿದೆಯೆಂಬುದನ್ನು ನೋಡುವಂತಿದೆ. ಶಿಷ್ಯ ಸಮರ್ಪಿಸಿದ್ದನ್ನು ಗುರು ತೆಗೆದುಕೊಳ್ಳಬೇಕು. ಗುರು ತಾನು ತೆಗೆದುಕೊಂಡು, ಉಪಭೋಗಿಸಿ ಶೇಷವನ್ನು (ಪ್ರಸಾದ) ತಿರುಗಿ ಕೊಡಬೇಕು. ದೇವರಿಗೆ ನಾವು ನೈವೇದ್ಯ ತೋರಿಸುತ್ತೇವೆ. ಆಮೇಲೆ ಪ್ರಸಾದ ತೆಗೆದುಕೊಳ್ಳುತ್ತೇವೆ. ಸ್ಪಷ್ಟವಾಗಿ ಹೇಳಬೇಕೆಂದರೆ ಪ್ರಸಾದವೆಂದರೆ ಗುರುವಿನ ಎಂಜಲು. ಸರ್ವಸ್ವವನ್ನು ಅರ್ಪಿಸುವದೆಂದರೆ ಅದರಲ್ಲಿ ತನು-ಮನಗಳ ಜೊತೆಗೆ ಧನವೂ ಬರುತ್ತದೆ. ಧನವೆಂದರೆ ರೊಕ್ಕವೆಂದು ಆಧುನಿಕ ಅರ್ಥವಾಗಿದೆ. ಆದರೆ, ಹೆಂಡತಿಯೂ ಒಂದು ಧನವೇ ಆಗಿತ್ತು. ಪಾಂಡವರು ದ್ಯೂತದಲ್ಲಿ ಸೋತಾಗ ಸಂಪತ್ತಿನೊಡನೆ ದ್ರೌಪದಿಯನ್ನೂ ಕಳೆದುಕೊಂಡರು. ಚಕ್ರಧರನ 'ಲೀಳಾಚರಿತ್ರ'ಯಲ್ಲಿ ಒಬ್ಬ ಶಿಷ್ಯ ಗುರುವಿಗೆ ತನ್ನ ಹೆಂಡತಿಯನ್ನು ಅರ್ಪಿಸಿದನೆಂದು ವರ್ಣನೆಯಿದೆ. ಆ ಗುರು ಆಗಿಂದಾಗ್ಗೆ ಅವಳನ್ನು ಶಿಷ್ಯನಿಗೆ ತಿರುಗಿ ಕೊಟ್ಟ ಉಲ್ಲೇಖವಿದೆ.

"ಸಕಳ್ಳೆ ಗುರುಸೀ. ಅರ್ಪಾವೇ ಚಿತ್ತ, ವಿತ್ತ, ಕಾಯಾ.
ತೀನ್ಹಿ ಈಶ್ವರಾಸೀ ಅರ್ಪಾವೀ,
ಐಸೇ ಮ್ಹಣೋನೀ (ಪಾಠಕ) ಗೋಸಾವಿಯಾ ಜವಳೀ
ಆಪುಲೀ ಬ್ರಾಹ್ಮಣೀ ಜವಳೀ ಬೈಸವಿಲೀ.
ಜವಳೀ ಕಂಠಾಳ ಠೇವಿಲೀ ಬೈಲೂ ಬಾಂಧಲಾ ಗೋಸಾವಿಯಾತೇ
ದಂಡವತೇ ಘಾತಲೀ. ಚರಣಾ ಲಾಗಲೀ.

ಎಲ್ಲವನ್ನೂ ಗುರುವಿಗೆ ಅರ್ಪಿಸಬೇಕು. ತನು-ಮನ-ಧನಗಳನ್ನು ಈಶ್ವರನಿಗೆ ಅರ್ಪಿಸಬೇಕು, ಎಂದು ಹೇಳಿ ಗೋಸಾವಿಯ ಹತ್ತಿರ ತನ್ನ ಬ್ರಾಹ್ಮಣಿಯನ್ನು ಕುಳ್ಳಿರಿಸಿದನು. ಗೋಸಾವಿಗೆ ದಂಡಪ್ರಣಾಮ ಮಾಡಿ ಬಿದ್ದನು. ಹನ್ನೆರಡನೆಯ ಶತಮಾನದ ಹರಿಹರ ಬರೆದಿರುವ 'ಬಸವರಾಜ ದೇವರ ರಗಳೆ'ಯಲ್ಲಿ ಬಸವ ಜಂಗಮರೂಪಿಯಾದ ಶಿವನಿಗೆ ತನ್ನ ಹೆಂಡತಿಯನ್ನು ಅರ್ಪಿಸಿ ತೃಪ್ತಿಗೊಳಿಸಿದನೆಂದು ಬಣ್ಣನೆ ಇದೆ.

ಆದರೆ, ಜ್ಞಾನೇಶ್ವರ ತನ್ನ ಗುರು-ಮಾರ್ಗದಲ್ಲಿ ಈ ವಿಷಯವನ್ನು ಪೂರ್ಣ ತೆಗೆದು ಹಾಕಿದನು. ನಾಥ ಪಂಥದಲ್ಲಿ ಯೋಗಿಗಳು, ಯೋಗಿನಿಯರು ಸರ್ವಸಂಗ ಪರಿತ್ಯಾಗಿಗಳಾಗಿದ್ದರೂ ಪ್ರಸಂಗ ವಿಶೇಷದಲ್ಲಿ ಅವರಲ್ಲಿ ಏನು ನಡೆಯುತ್ತಿತ್ತೆಂದು ಚಕ್ರಧರ ಹೇಳಿದ ಕಾನೀಫ ಯೋಗಿ ಮತ್ತು ಬಹುಡಿ ಯೋಗಿನಿ ಇವರ ಕತೆಯಿಂದ ತಿಳಿಯುತ್ತದೆ. ಯಾವುದೋ ಕ್ಷುಲ್ಲಕ ಕಾರಣಕ್ಕಾಗಿ ಕಾನೀಫ ಮತ್ತು ಬಹುಡಿ ಇವರಲ್ಲಿ ಯೋಗಶಕ್ತಿಯ ಪ್ರಭಾವದ ಬಗ್ಗೆ ಸ್ಪರ್ಧೆ ಸುರುವಾಯಿತು. ಬ್ರಹ್ಮಚರ್ಯೆಯ ಪರೀಕ್ಷೆಯಲ್ಲಿ ಯಾರು ಮೊದಲು ಸೋಲುತ್ತಾರೆಂದು ನೋಡಲು ಜಿದ್ದಿನಿಂದ ರತಿಕ್ರೀಡೆಗೆ ಆರಂಭಿಸಿದರು. ಅದರಲ್ಲಿ ಬಹುಡಿ ಸೋತಳೆಂದು ಚಕ್ರಧರ ಹೇಳುತ್ತಾನೆ. ನಾಥ ಸಂಪ್ರದಾಯದಲ್ಲಿ ಈ ಹೇಸಿಗೆ ಹುಟ್ಟಿಸುವ ಪ್ರಸಂಗಗಳು ಮುಂದಿನ ಧರ್ಮಪಂಥಗಳಲ್ಲಿ ಕಡಿಮೆಯಾಗುತ್ತ ಬಂದವು. ಜ್ಞಾನೇಶ್ವರ ಇಂಥ ಪ್ರಸಂಗಗಳಿಗೆ ಸಂಪೂರ್ಣವಾಗಿ ಪ್ರತಿಬಂಧ ಹಾಕಿದ್ದಲ್ಲದೆ ವಿಠ್ಠಲ ಪಂಥದ ಭಕ್ತಿಮಾರ್ಗದಲ್ಲಿಯ 'ಮಧುರ' ಪ್ರಕಾರವನ್ನು ವರ್ಜ್ಯ ಮಾಡಿದ. ಚೈತನ್ಯ ಪಂಥದ ಮಧುರಾ ಕೃಷ್ಣಭಕ್ತಿ ಮಹಾರಾಷ್ಟ್ರಕ್ಕೆ

ರುಚಿಸಲಿಲ್ಲ. ಕೃಷ್ಣಭಕ್ತಿಯನ್ನು ಮಾಡಿದರೇನೋ ನಿಜ. ಆದರೆ, ಅವನ ಹೆಸರನ್ನು ಬದಲಾಯಿಸಿದರು. ಕೃಷ್ಣ ಶಬ್ದದೊಂದಿಗೆ ಗೋಪೀಲೀಲೆಯೂ ಆನುಷಂಗಿಕವಾಗಿ ನೆನಪಾಗುತ್ತದೆಂದು ಮಹಾರಾಷ್ಟ್ರ ವಿಠ್ಠಲ ಭಕ್ತಿ ಪ ಹೊಸ ಅಧ್ಯಾಯವನ್ನೇ ಪ್ರಾರಂಭಿಸಿತು. ಸಂತರ ಭಜನಾವಲಿಯಲ್ಲಿ ತಪ್ಪಿಕೂಡ 'ಗೋಪೀ ಕುಚಮರ್ದನ' ಕೃಷ್ಣನ ಉಲ್ಲೇಖ ಬರುವದಿಲ್ಲ. ಇಷ್ಟೆಲ್ಲ ಮಡಿವಂತಿಕೆಯನ್ನು ತೋರಿಸಿದರೂ ಒಂದು ವಿಷಯ ಉಳಿದೇ ಉಳಿಯಿತು.

ಜ್ಞಾನೇಶ್ವರನ ವಿಠ್ಠಲಭಕ್ತಿಗಿಂತ ಮೊದಲು ಮಧ್ವಾಚಾರ್ಯರು ವಿಷ್ಣುಭಕ್ತಿಯನ್ನು ಪ್ರಸಾರಮಾಡಿದರು. ಮಾಧ್ವರನ್ನು ವೈಷ್ಣವರೆಂದೂ ಕರೆಯುವ ರೂಢಿ ಇದೆ. ಆದರೂ ಸ್ವಲ್ಪ ಸೂಕ್ಷ್ಮವಾಗಿ ಪರೀಕ್ಷಿಸಿದರೆ ಮಧ್ವಾಚಾರ್ಯರು ವಿಷ್ಣುಭಕ್ತಿಯನ್ನು ಹೇಳಿದ್ದರೂ, ರೂಢಿಯಲ್ಲಿ ತಂದದ್ದು ರಾಮಪೂಜೆಯನ್ನು. ಮಾಧ್ವರಲ್ಲಿ ಹನುಮಂತನ ಪೂಜೆ ಮುಖ್ಯವಾಗಿದ್ದು ದೇವರಿಗೆ ಅರ್ಪಿಸುವ ನೈವೇದ್ಯ ಮೊದಲಾದವುಗಳು 'ಶ್ರೀಮದ್ ಹನುಮದಂತರ್ಗತ...' ವೆಂಬ ಸಂಕಲ್ಪದಿಂದ ಅರ್ಪಿತವಾಗುತ್ತವೆ. ಶ್ರೀವೈಷ್ಣವರಲ್ಲಿ ಗರುಡನಿಗೆ ಇರುವ ಸ್ಥಾನ ಮಾಧ್ವರಲ್ಲಿ ಇಲ್ಲ. ಹನುಮನಿಗೆ (ಭೀಮ) ಇರುವ ಸ್ಥಾನ ಅರ್ಜುನನಿಗೂ ಇಲ್ಲ. ಮಾಧ್ವ ಉತ್ತರಾದಿ ಮಠಾಧೀಶರ ನಿತ್ಯಾರ್ಚನೆಯಲ್ಲಿಯ ಶ್ರೀರಾಮನ ಮೂರ್ತಿಯನ್ನು ಶ್ರೀನರಹರಿತೀರ್ಥರು ಕಲಿಂಗ ದೇಶದಿಂದ ತಂದರೆಂದು ಇತಿಹಾಸವಿದೆ. ನರಹರಿತೀರ್ಥರು ಮತ್ತು ಅವರ ತಂದೆ ಇವರಿಬ್ಬರೂ ಕಲಿಂಗ ದೇಶದ ರಾಜನಲ್ಲಿ ಮುಖ್ಯ ಪ್ರಧಾನಿಗಳಾಗಿದ್ದರು. ಆದ್ದರಿಂದ ಅವರು ಅಲ್ಲಿಂದ ರಾಮನ ಪ್ರತಿಮೆಯನ್ನು ತಂದರು.

ಈ ರೀತಿಯಲ್ಲಿ ಹದಿಮೂರನೆಯ ಶತಮಾನದಲ್ಲಿ ಕರ್ಣಾಟಕದಲ್ಲಿ ಬಂದ ರಾಮಭಕ್ತಿಯ ಹಿಂದೆ ಒಂದಿಷ್ಟು ಇತಿಹಾಸವಿದೆ. ೧೨ನೆಯ ಶತಮಾನದಲ್ಲಿ ನಿಂಬಾರ್ಕ ಕೃಷ್ಣಭಕ್ತಿಯನ್ನು ಪ್ರೋತ್ಸಾಹಿಸಿದ. ಈ ರಾಧಾಕೃಷ್ಣ ಭಕ್ತಿ ಹೇಗೆ ಶೃಂಗಾರವಿಲಾಸದಲ್ಲಿ ಪರ್ಯವಸಾನವಾಯಿತೆಂಬುದರ ನಿದರ್ಶನ ಕ್ರಿ.ಶ. ೧೧೭೨ರ ಸುಮಾರಿಗೆ ಬರೆದ ಜಯದೇವನ 'ಗೀತಗೋವಿಂದ' ಕಾವ್ಯದಲ್ಲಿ ಒಳ್ಳೆಯ ರೀತಿಯಲ್ಲಿ ನೋಡಬಹುದು. ಮುಂದಿನ ಚೈತನ್ಯ ಪಂಥದವರಲ್ಲಂತೂ 'ಗೋಪೀ ಪರಕೀಯಾ' ಸಾಧನೆಯ ಸಲುವಾಗಿ ಅವಶ್ಯವೆಂದು ನಂಬಿದವರು ಹೊರಟರು. ಮನೆಯ ಹೆಂಡತಿಯನ್ನು ಬಿಟ್ಟು ಪರಕೀಯಳೊಡನೆ ಪ್ರಣಯ ನಡೆಸುವದು ಅವಶ್ಯಕವಾದ ಅಂಗ ಎಂಬ ನಂಬಿಕೆ ರೂಢವಾಯಿತು. ಶಾಕ್ತ ಮತ್ತು ನಾಥ ಸಂಪ್ರದಾಯದಲ್ಲಿಯಂತೆ ಇಲ್ಲಿಯೂ ಇತಿಹಾಸದ ಪುನರುಕ್ತಿ ಕಂಡುಬಂದಿತು. ರಾಧಾಕೃಷ್ಣ ಭಕ್ತಿಯ ಈ ವಿಕೃತರೂಪವನ್ನು ಕಂಡು ಉತ್ತರದಲ್ಲಿ ಶ್ರೀ ರಾಮಾನಂದ ಹದಿಮೂರನೆಯ ಶತಕದಲ್ಲಿ ರಾಮೋಪಾಸನೆಯನ್ನು ಪ್ರಚಾರದಲ್ಲಿ ತಂದನು. ಆ ಮಡಿವಂತಿಕೆಯ ರಾಮೋಪಾಸನೆಯನ್ನು ಮಾಧ್ವರು ಕರ್ನಾಟಕದಲ್ಲಿ ತಂದರು. ರಾಮದಾಸರು ಅದನ್ನು ೧೭ನೆಯ ಶತಮಾನದಲ್ಲಿ ಮಹಾರಾಷ್ಟ್ರದಲ್ಲಿ ಪ್ರಚಾರದಲ್ಲಿ ತಂದರು. ಮಾಧ್ವ ಮಠಾಧೀಶರು ವಿಷ್ಣುವನ್ನು ರಾಮನ ರೂಪದಲ್ಲಿ ಪೂಜಿಸುತ್ತಿದ್ದರೂ ಮಾಧ್ವಪಂಥದ ದಾಸರು ಮಾತ್ರ ವಿಷ್ಣುವನ್ನು ವಿಠ್ಠಲನ ರೂಪದಲ್ಲಿಯೇ ಸ್ತುತಿಸಿದರು. ಪಂಢರಪುರದ ವಿಠಲ ಸಂತ ಮತ್ತು ದಾಸರ ಆರಾಧ್ಯ ದೈವತವಾಗಿದ್ದಾನೆ.

ಒಂದು ಭಾಷೆಯಲ್ಲಿಯ ಶಬ್ದ, ವಾಕ್‌ಸಂಪ್ರದಾಯಗಳು, ಗಾದೆ ಮಾತುಗಳು ಇವುಗಳಲ್ಲಿ ಹಿಂದಿನ ಸಂಸ್ಕೃತಿ ಪ್ರತಿಬಿಂಬಿತವಾಗಿರುತ್ತದೆ. ಶಿಲಾಲೇಖ ಮೊದಲಾದ ಲಿಖಿತ ಆಧಾರ ದೊರೆಯದಿದ್ದ ಕಡೆಗಳಲ್ಲಿ ಭಾಷೆಯಲ್ಲಿಯ ಅವಶೇಷಗಳು ಮಾತ್ರ ಹಿಂದಿನ ಸಂಸ್ಕೃತಿಯನ್ನು ಅರಿಯಲು ಸಹಾಯ ಮಾಡುತ್ತವೆ. ಈ ಪ್ರಕರಣದಲ್ಲಿ 'ಉಗುಳು ಹಿಡಿಯುವದು' ಎಂಬ ವಾಕ್‌ಸಂಪ್ರದಾಯ ಸಾಕಷ್ಟು ಮಾಹಿತಿಯನ್ನು ನಮಗೆ ಒದಗಿಸುತ್ತದೆ. 'ಉಗುಳು ಹಿಡಿಯುವದು' ಈ ಪ್ರಯೋಗದ ಶಬ್ದಶಃ ಅರ್ಥ ಮಾಡುವದು ತುಂಟತನವಾಗಬಹುದು. ಆದರೆ, ಈ ಪ್ರಯೋಗದ ಲಕ್ಷಣಾರ್ಥವನ್ನೇ ಇಂದು ನಾವು ಉಪಯೋಗಿಸುತ್ತಿದ್ದರೂ ಒಂದು ಕಾಲಕ್ಕೆ ಇದು ಅಕ್ಷರಶಃ ಉಪಯೋಗವಾಗುತ್ತಿತ್ತೆಂದೇ ಇಂದು ಈ ಪ್ರಯೋಗ ರೂಢಿಗೆ ಬಂದಿದೆ. ಸುದೈವದಿಂದ ಕೆಲವು ಹಳೆಯ ಪ್ರಮಾಣಗಳೂ ದೊರೆಯುತ್ತವೆ. ಕನ್ನಡದಲ್ಲಿ 'ಬಾಯ ತಂಬುಲಕೆ ಕೈಯಾನು' ಎಂಬ ಪ್ರಾಚೀನ ಪ್ರಯೋಗವಿದೆ.

ಕುಮಾರವ್ಯಾಸ ಹಲವಾರು ಕಡೆಗೆ ಈ ಪ್ರಯೋಗವನ್ನು ಕೃಷ್ಣ, ಕುಂತಿ ಇವರ ಬಾಯಲ್ಲಿ ಹಾಕಿದ್ದಾನೆ. ಬಾಯಲ್ಲಿಯ ತಂಬುಲಕ್ಕೆ ಕೈಕೊಡುವದೆಂದು ಇದರ ಶಬ್ದಶಃ ಅರ್ಥವಾಗುತ್ತದೆ. ಹೇಳಿದ್ದಕ್ಕೆ 'ಜೀ' ಎನ್ನುವದು, ದಾಸ್ಯಭಾವ ತೋರಿಸುವದು ಎಂಬುದು ಇದರ ಲಕ್ಷಣಾರ್ಥವಾಗಿದೆ. ನಮ್ಮವರಾರು, ಪರಕೀಯರಾರು ಎಂಬ ನಿರ್ಣಯ ಒಂದೇ ಎಲೆಯಲ್ಲಿ ಊಟಮಾಡುವದರಿಂದ ಆಗುತ್ತಿತ್ತು ಎಂಬುದು ಹಳೆಯ ರೂಢಿ. ಬೆನ್ನುಹತ್ತಿ ಬಂದಿದ್ದ ಯವನರಿಗೆ ಶಿವಾಜಿ ತಮ್ಮವನೆಂದು ತೋರಿಸಲು ಬ್ರಾಹ್ಮಣನೊಬ್ಬ ತನ್ನ ಎಲೆಯಲ್ಲಿ ಊಟಕ್ಕೆ ಕರೆದುಕೊಂಡನೆಂದು ಒಂದು ಕತೆ ಇದೆ. ತನ್ನ ಕುಲದ ಬಗ್ಗೆ ಸಂಶಯವಿದ್ದ ಕರ್ಣನಿಗೆ, ಅವನು ತನ್ನ ಆಪ್ತಬಾಂಧವ, ಸೂತಪುತ್ರನಲ್ಲ ಎಂದು ಮನಗಾಣಿಸಲು ಕೃಷ್ಣ ತನ್ನ ಬಾಯ ತಂಬುಲವನ್ನು ಅವನಿಗೆ ಕೊಟ್ಟನೆಂದು ಕುಮಾರವ್ಯಾಸ ವರ್ಣಿಸುತ್ತಾನೆ. ಪಂಪಭಾರತದಲ್ಲಿಯೂ (ಇ. ಸ. ೯೩೨) ಇದೇ ರೀತಿಯ ವರ್ಣನೆ ಇದೆ. ಕರ್ಣಾವಸಾನದ ನಂತರ ಅವನು ತನ್ನ ಹಿರಿಯ ಅಣ್ಣನಾಗಿದ್ದನೆಂದು ಯುಧಿಷ್ಠಿರನಿಗೆ ತಿಳಿದು ಅವನು ವಿಲಾಪ ಮಾಡುತ್ತಾನೆ.

"ನೀನು ನನ್ನ ಅಣ್ಣನೆಂದು ಮೊದಲೇ ತಿಳಿದಿದ್ದರೆ ಎಷ್ಟು ಒಳ್ಳೆಯದಾಗುತ್ತಿತ್ತು? ಈಗ
ನಾನು ನಿನ್ನ ಎಂಜಲಕ್ಕೆ ಬಾಯತಂಬುಲಕ್ಕೆ ಎರವಾದೆನಲ್ಲ"

ಎಂದು ಉದ್ಗಾರವೆತ್ತಿದ್ದಾನೆ. ಮೋರೋಪಂತನ ಭಾರತದಲ್ಲಿ ಕೃಷ್ಣ ಹೀಗೆ ಹೇಳುತ್ತಾನೆ. 'ನೀನು ಪಾಂಡವರ ಕಡೆಗೆ ಬಂದರೆ.

"ರಾಜ್ಯಾಭಿಷೇಕ ಕರತೀಲ ನರ..... ಕಿಂಬಹುನಾ ಘೇಯಿಲ
ತಾಂಬೋಳ ಕ್ಷಿಪ್ರಭೂಮಿಪ ದರಾವೇ." (ಉದ್ಯೋಗಪರ್ವ, ೧೦-೭೮).

ಕೊನೆಯ ವಾಕ್ಯದಲ್ಲಿಯ ಶ್ಲೇಷದ ಸಂದಿಗ್ಧಾರ್ಥ ಕುಮಾರವ್ಯಾಸನನ್ನೂ ಮೀರಿ ಹೋಗುತ್ತದೆ. (ಇಲ್ಲಿ 'ಭೂಮಿಪ' ಎಂದರೆ ಯುಧಿಷ್ಠಿರ).

ಕರ್ನಾಟಕ ಮತ್ತು ಮಹಾರಾಷ್ಟ್ರದ ಕವಿಗಳು ಬಣ್ಣಿಸಿದ ಈ ಪ್ರಕಾರಕ್ಕೆ ಐತಿಹಾಸಿಕ ಆಧಾರಗಳೂ ಇವೆ. ಬಸವಣ್ಣನ (ಇ. ಸ. ೧೧೬೦) ಒಂದು ವಚನ ಹೀಗಿದೆ : 'ಆವನಾದಡೇನು ಶ್ರೀ ಮಹಾದೇವನ ನೆನೆವನು। ಬಾಯ ತಂಬುಲ ಮೆಲುವೆ. ಬೀಳುಡಿಗೆಯ ಹೊದೆವೆ.' ಶ್ರೀ ಚಕ್ರಧರನ "ಲೀಳಾಚರಿತ್ರೆ"ಯಲ್ಲಿ ಇಂಥ ವರ್ಣನೆಗಳು ಬೇಕಾದಷ್ಟಿವೆ:

ಶ್ರೀಮುಖದ ತಂಬುಲಕೆ ಅಂಜುಳಿಯನೊಡ್ಡಿದನು, ಗೋಸಾವಿ ತಂಬುಲವ ಕೊಟ್ಟನು.
ಅದ ಬಾಯಲ್ಲಿ ಹಾಕಿದನು, ಮತ್ತು ಸಾಷ್ಟಾಂಗ ಹಾಕಿ ಮುನ್ನಡೆದನು.

ಶಿಷ್ಯರು ಈ ಪ್ರಕಾರವಾಗಿ ಗುರು ಪ್ರಸಾದವನ್ನು ಸ್ವೀಕರಿಸಿ ಧನ್ಯರಾಗುತ್ತಿದ್ದರು. ವಾರಕರೀ ಸಂಪ್ರದಾಯದಲ್ಲಿ ಕೂಡ (ನಾಥ ಸಂಪ್ರದಾಯದಲ್ಲಿಯ ಉಳಿದ ಅಂಶಗಳನ್ನು ಬಿಟ್ಟುಕೊಟ್ಟಿದ್ದರೂ) ಗುರುಪ್ರಸಾದವನ್ನು ಸ್ವೀಕರಿಸುವ ಈ ಪ್ರಕಾರ ಮಾತ್ರ ಹಿಂದಿನಂತೆಯೇ ನಡೆದುಬಂತೆಂದು ತೋರುತ್ತದೆ. ವಾರಕರೀ ಸಂಪ್ರದಾಯವನ್ನು ಒಪ್ಪದಿದ್ದ ರಾಮದಾಸರಿಗೂ ಗುರುಮಹಿಮೆ ಮಾನ್ಯವಾಗಿದೆ.

ಸದ್ಗುರು ಕೃಪಾವಿರಹೀತ। ಸರ್ವಥಾ ನ ಘಡೇ ಸ್ವಹಿತ।
ಯಮಪುರಿಚಾ ಅನರ್ಥ। ಚುಕೇನಾ। (ದಾಸಬೋಧೆ, ೧-೩-೪೫)

ಸದ್ಗುರುವಿನ ಕೃಪೆ ಇಲ್ಲದಿದ್ದರೆ ಸ್ವಹಿತ ಎಂದಿಗೂ ಆಗದು. ಯಮಪುರಿಯ ಅನರ್ಥ ತಪ್ಪುವದೇ ಇಲ್ಲ

ಮ್ಹಣೋನೀ ಸುದ್ಗುರು ಪೂರ್ಣಪಣೇ। ದೇವಾಹುನಿ ಅಧಿಕಕೋಟಿ ಗುಣೇ।
ಜ್ಯಾಸೀ ವರ್ಣಿತಾ ಭಾಂಡಣೇ। ವೇದಶಾಸ್ತ್ರಾ ಲಾಗಲೀ (ದಾಸ ಬೋಧೆ, ೫-೩-೪೫)

ಆದ್ದರಿಂದ ಸದ್ಗುರುವು ತನ್ನ ಪೂರ್ಣತೆಯಿಂದ ದೇವತೆಗಳಿಗಿಂತ ಕೋಟಿಗುಣ ಅಧಿಕನಾಗಿದ್ದಾನೆ. ಅವನ ವರ್ಣನೆಗಾಗಿ ವೇದಶಾಸ್ತ್ರಗಳು ಜಗಳಾಡುತ್ತವೆ.

ಶರಣ ಸದ್ಗುರೂಶೀ ಗೇಲೇ ಪಾಹಿಜೇ।
(ಸದ್ಗುರುವಿಗೆ ಶರಣು ಹೋಗಬೇಕು)

ಆದರೆ, ಸಮರ್ಥ ರಾಮದಾಸರು ಈ ವಿಷಯದಲ್ಲಿ ತಮ್ಮ ಮತಭೇದವನ್ನು ಸ್ಪಷ್ಟಶಬ್ದಗಳಲ್ಲಿ ಹೇಳಿದ್ದಾರೆ. ಗುರುಪಾದೋದಕವನ್ನು ತೆಗೆದುಕೊಳ್ಳಲೂ ಅವರ ಆಕ್ಷೇಪಣೆ ಇಲ್ಲ. ಇಷ್ಟೇ ಅಲ್ಲದೆ, ಈ ಕೆಲಸಗಳನ್ನು ಶಿಷ್ಯ ಮಾಡಲೇಬೇಕೆಂದು ಅವರು ಅಭಿಪ್ರಾಯವಿದೆ. ಹಾಗಿದ್ದರೆ ವಿರೋಧ ಇರುವದಾದರೂ ಯಾವುದಕ್ಕೆ? ಚಾತುರ್ವರ್ಣ್ಯದಲ್ಲಿ ಬ್ರಾಹ್ಮಣ ಅಗ್ರಜ ಮತ್ತು ಬ್ರಾಹ್ಮಣ ಈ ಅಗ್ರಜತ್ವವನ್ನು ಬಿಡಬಾರದು ಎಂದು ರಾಮದಾಸರ ಅಭಿಪ್ರಾಯವಾಗಿದೆ. ಜರೀ ಬ್ರಾಹ್ಮಣ ಝಾಲಾಭ್ರಷ್ಟ। ತರೀ ತೋ ತಿನ್ಹಿ ಲೋಕಿ ಶ್ರೇಷ್ಠ (ಬ್ರಾಹ್ಮಣ ಭ್ರಷ್ಟನಾದರೂ ಮೂರೂ ಲೋಕಗಳಲ್ಲಿ ಅವನೇ ಶ್ರೇಷ್ಠ) ಎಂದು ಅವರಿಗೆ ಅನಿಸುತ್ತದೆ.

'ಜರೀ ಬ್ರಾಹ್ಮಣ ಮೂಢಮತೀ। ತರೀ ತೋ ಜಗದ್ವಂದ್ಯ।

ಬ್ರಾಹ್ಮಣ ಮೂಢನಾಗಿದ್ದರೂ ಅವನೇ ಜಗದ್ವಂದ್ಯ' ಎಂದು ಹೇಳುತ್ತಾರೆ. ಬ್ರಾಹ್ಮಣನಾದವನು ಕೆಳಜಾತಿಯ ಯಾವನನ್ನೂ ಗುರುವೆಂದು ಒಪ್ಪಿಕೊಳ್ಳಬಾರದೆಂಬುದು ವೈದಿಕರ ಆಗ್ರಹ. ತಮ್ಮ ಪೂರ್ವಪರಂಪರೆಯ ರಕ್ಷಣೆಗೆ ಈ ಪ್ರತಿಜ್ಞೆ ಉಪಯುಕ್ತವಾಗಿತ್ತು. ಬ್ರಾಹ್ಮಣನೇ ಗುರುವಾಗಬೇಕೆಂಬ ಹಟ ಈ ಕಾರಣಕ್ಕಾಗಿ ಇತ್ತು. ಆದರೆ, ನಾಥ ಸಂಪ್ರದಾಯದಲ್ಲಿ ಜಾತಿಭೇದವಿರಲಿಲ್ಲ. ಸಿದ್ಧಪುರುಷ ಯಾವ ಜಾತಿಯವನೇ ಆಗಿರಲಿ ಅವನು ಗುರುವಾಗ ಬಹುದಿತ್ತು. ವರ್ಣಾಶ್ರಮವನ್ನು ಉಳಿಸುವದಕ್ಕಾಗಿ ಶಂಕರಾಚಾರ್ಯರು ಪ್ರಯತ್ನ ಮಾಡಿದ್ದರೂ. ಅವರು ಕೂಡ 'ಚಂಡಾಲೋಽಪಿ ಸ ಗುರುಃ' ಎಂದು ಸ್ಪಷ್ಟವಾಗಿಯೇ ಹೇಳಿದರು. ಜ್ಞಾನೇಶ್ವರ ನಾಥಸಂಪ್ರದಾಯದ ರೂಢಿಯನ್ನು ಮುಂದುವರಿಸಿದ. ಸಂತಮಾರ್ಗದಲ್ಲಿ ಗುರು ಯಾವ ಜಾತಿಯವನಿದ್ದರೂ ನಡೆಯುತ್ತದೆ. ತುಕಾರಾಮನ ಹದಿನಾರು ಶಿಷ್ಯರಲ್ಲಿ ಒಂಬತ್ತು ಜನ ಬ್ರಾಹ್ಮಣರಾಗಿದ್ದರು. ಇಂಥ ಅನೇಕ ಉದಾಹರಣೆಗಳನ್ನು ಕೊಡಬಹುದು. ಇದರಿಂದ ವೈದಿಕಮಾರ್ಗದ ಮಡಿವಂತಿಕೆಗೆ ಮಂಗಳಾರತಿಯಾಯಿತು.

ನೀಚಯಾತೀಚಾ ಗುರೂ। ತೋಹಿ ಕಾನ ಕೋಡಾ ವಿಚಾರೂ।
ಬ್ರಹ್ಮ ಸಭೇಸೀ ಜೈಸಾ ಚೋರೂ। ತೈಸಾ ದಡೇ॥
ಬ್ರಹ್ಮಸಭಾ ದೇಖತಾ। ತ್ಯಾಚೇ ತೀರ್ಥ ನಯೇ ಘೇತಾ।
ಅಥವಾ ಪ್ರಸಾದ ಸೇವಿತಾ। ಪ್ರಾಯಶ್ಚಿತ್ತ ಘಡೇ।
ತೀರ್ಥ ಪ್ರಸಾದಾಚೀ ಸಾಂಡೀ ಕೇಲೀ। ತೇಥೇ ನೀಚತಾ ದಿಸೋನ ಆಲೀ
ಗುರುಭಕ್ತಿ ತೇ ಸಟವಲೀ। ಏಕಾಏಕೀ। ಗುರೂಚೀ ಮರ್ಯಾದಾ ರಾಖಿತಾಂ।
ಬ್ರಾಹ್ಮಣ ಕ್ಷೋಭತೀ ತತ್ವತಾ। ತೇಥೇ ಬ್ರಾಹ್ಮಣ್ಯ ರಕ್ಷೂ ಜಾತಾ।
ಗುರು ಕ್ಷೋಭ ಘಡೇ॥ ಐಸೀ ಸಾಂಕಡೀ ದೋಹಿಕಡೇ।
ತೇಥೇ ಪ್ರಸ್ತಾವ ಘಡೇ। ನೀಚ ಯಾತೀಸ ಗುರುತ್ವ ನ ಘಡೇ।
ಯಾ ಕಾರಣೇ॥ ತಥಾಪಿ ಆವಡೀ ಘೇತಲೀ ಜೀವೇ। ತರೀ ಆಪಣಚೀ ಭ್ರಷ್ಟಾವೇ।
ಬಹುತ ಜನಾಸ ಭ್ರಷ್ಟವಾವೇ। ಹೇ ತೋ ದೂಷಣಚ ಕೀ॥
ಸ್ವಯಾತೀಚಾ ಪಾಹಿಜೇ ಗುರೂ। ನಾಹೀ ತರೀ ಭ್ರಷ್ಟಾಕಾರೂ।
.... ನೇಮಸ್ತ (ಖಚಿತಾಚೀ) ಘಡೇ॥
(ಹಳೆಯ ದಾಸಬೋಧ, ಸಮಾಸ ೫, ೫೮-೬೪).

ನೀಚ ಜಾತಿಯ ಗುರುವನ್ನು ಮಾಡಿಕೊಂಡರೆ ಪರಿಸ್ಥಿತಿ ಕಠಿಣವಾಗುತ್ತದೆ. ಬ್ರಹ್ಮ ಸಭೆಯಲ್ಲಿ ಒಬ್ಬ ಕಳ್ಳ ಹೊಕ್ಕಂತೆ ಶಿಷ್ಯನ ಅವಸ್ಥೆ ಉಂಟಾಗುತ್ತದೆ. ಇನ್ನೊಬ್ಬರೆದುರಿನಲ್ಲಿ ಗುರುವಿನ ತೀರ್ಥವನ್ನು ತೆಗೆದುಕೊಳ್ಳುವಂತಿಲ್ಲ. ಅಥವಾ ಗುರುವಿನ ಪ್ರಸಾದ ಸ್ವೀಕರಿಸಿದರೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗುತ್ತದೆ. ತೀರ್ಥ ಪ್ರಸಾದಗಳನ್ನು ತೆಗೆದುಕೊಳ್ಳದಿದ್ದರೆ ನೀಚತನ ಎದ್ದುಕಾಣುತ್ತದೆ. ಗುರುಭಕ್ತಿ ನಾಶವಾಗುತ್ತದೆ. ಗುರುವಿನ ಮಾರ್ಯದೆಯನ್ನು

ಕಾಯಬೇಕೆಂದರೆ ಬ್ರಾಹ್ಮಣರು ಕ್ಷೋಭೆಗೊಳ್ಳುತ್ತಾರೆ, ಬ್ರಾಹ್ಮಣ್ಯವನ್ನು ರಕ್ಷಿಸಲು ಹೋದರೆ ಗುರು ಕ್ಷೋಭೆಗೊಳ್ಳುತ್ತಾನೆ. ಹೀಗೆ ಎರಡೂ ಕಡೆಯಿಂದ ಸಂಕಟ ಬರುವದರಿಂದ ಪಶ್ಚಾತ್ತಾಪಕ್ಕೆ ಎಡೆಯಾಗುತ್ತದೆ. ಆದ್ದರಿಂದ ನೀಚಜಾತಿಯ ಗುರುವನ್ನು ಒಪ್ಪಿಕೊಳ್ಳಬಾರದು. ಇಷ್ಟಾದರೂ ಅಂಥ ಗುರು ಮನಸ್ಸಿಗೆ ಒಪ್ಪಿಗೆಯಾಗಿದ್ದರೆ ತಾನೊಬ್ಬನೇ ಭ್ರಷ್ಟನಾಗಬೇಕೇ ಹೊರತು ಉಳಿದ ಜನರನ್ನು ಭ್ರಷ್ಟಗೊಳಿಸಬಾರದು. ಅದರಿಂದ ಪರಿಣಾಮ ಕೆಟ್ಟದಾಗುತ್ತದೆ.

ಅಬ್ರಾಹ್ಮಣ ಗುರುವಿನಿಂದ ಬ್ರಾಹ್ಮಣ್ಯ ನಷ್ಟವಾಗುತ್ತದೆ. ಇದು ರಾಮದಾಸರ ನಿಃಸಂದಿಗ್ಧವಾದ ನಿರ್ಣಯವಾಗಿದೆ. ಬ್ರಾಹ್ಮಣ್ಯ ನಷ್ಟವಾಗುವದೆಂದರೆ ವೈದಿಕ ಪರಂಪರೆಗೆ ಭಂಗ ಬಂದಂತೆ. ಇದೇ ನಿಜವಾದ ಅರ್ಥವಾಗಿದ್ದರೆ ಶ್ರೀ ಸೋನೋಪಂತ ದಾಂಡೇಕರ ಮೊದಲಾದವರು ಹೇಳುವಂತೆ ವಾರಕರೀ ಸಂಪ್ರದಾಯ ವೈದಿಕಮಾರ್ಗದ ಅವಿರೋಧಿ ಎಂದು ಹೇಳಲಾಗುವದಿಲ್ಲ. ಯಾವದೇ ಕಾರಣಕ್ಕಾಗಿ ವೈದಿಕ ಸಂಸ್ಕಾರವನ್ನು ಬಿಡಲಾಗುವದಿಲ್ಲ. ಸಂಸ್ಕಾರ ಲೋಪವಾದಲ್ಲಿ ಬ್ರಾಹ್ಮಣ್ಯನಷ್ಟವಾಗಿ ಬ್ರಾಹ್ಮಣ 'ವ್ರಾತ್ಯ'ನಾಗಿ ಬಿಡುತ್ತಾನೆ. ಬ್ರಾಹ್ಮಣರು ಅಗ್ರಜತ್ವವನ್ನು ಬಿಡಬಾರದು. ಈ ರೀತಿಯ ಸ್ವಾಭಿಮಾನ ಗುರುದತ್ತ ಮಾರ್ಗದಲ್ಲಿ ಇರುವದು ಸಾಧ್ಯವಿಲ್ಲ.

ಹೋ ಕಾಂ ವರ್ಣಾಮಾಜಿ ಅಗ್ರಣೀ। ಜೋ ವಿಮುಖ ಹರಿಚರಣೀಂ
ತ್ಯಾಹುನಿ ಶ್ವಪಚ ಶ್ರೇಷ್ಠ ಮಾನೀ। ಜೋ ಭಗವದ್ ಭಜನೀ ಪ್ರೇಮಳೂ॥

ವರ್ಣದಲ್ಲಿ ಅಗ್ರಣಿಯಾಗಿದ್ದರೂ ಹರಿಚರಣದಿಂದ ವಿಮುಖನಾದ ಬ್ರಾಹ್ಮಣನಿಗಿಂತ ಭಗವದ್ ಭಕ್ತನಾಗಿರುವ ಶ್ವಪಚ ಹೆಚ್ಚು ಶ್ರೇಷ್ಠನಾಗಿದ್ದಾನೆ. ಎಂದು ಏಕನಾಥ ಹೇಳುತ್ತಾನೆ. (ಭಾಗವತ, ಅ. ೫ ಓ, ೬೦) ಏನೇ ಇದ್ದರೂ ಬ್ರಾಹ್ಮಣ ಶೂದ್ರನಿಗಿಂತ, ಅಂತ್ಯಜನಿಗಿಂತ ಕಡಿಮೆಯೆಂದು ಹೇಳಿದರೆ ಸನಾತನೀ ವೈದಿಕರಿಗೆ ಅದು ಪಥ್ಯವಾಗಲಾರದು. ಅಗ್ರಜ ಎಂದಿದ್ದರೂ ಅಗ್ರಜನೇ ಎಂದು ಅವರ ಆಗ್ರಹ. ಬ್ರಾಹ್ಮಣರು ಇತರ ವರ್ಣದವರಿಗೆ ಹೇಗೆ ನಮಸ್ಕಾರ ಮಾಡಬೇಕೆಂದು ಹೇಳುವವರೆಗೆ ಈ ಪಂಕ್ತಿಪ್ರಪಂಚ ಮುಟ್ಟಿದೆ. ಅಂಥ ವೈದಿಕ ಪಂಥಕ್ಕೆ ಬ್ರಾಹ್ಮಣರನ್ನು ಬಿಟ್ಟರೆ ಬೇರೆ ಜಾತಿಯವರ ಪಾದಧೂಳಿಯನ್ನು ತಲೆಯಲ್ಲಿರಿಕೊಳ್ಳುವದು ಒಪ್ಪಿಗೆ ಯಾಗಬಹುದೆ? ಚರಣತೀರ್ಥ ರುಚಿಸಬಹುದೇ? ಗುರುವಿನ ಎಲೆಯಲ್ಲಿಯ ಪ್ರಸಾದ ಗಂಟಲಲ್ಲಿ ಇಳಿಯಬಹುದೇ? ಯಾವದೇ ಜಾತಿಯ ಗುರುವನ್ನು ಒಪ್ಪಿಕೊಳ್ಳಲು ತಯಾರಿರುವ ವಾರಕರೀ ಪಂಥ ವೈದಿಕ ಪಂಥದ ಪರ್ಯಾಯ ವೆಂದು ಹೇಗೆ ಹೇಳಬಹುದು?

ಗುರು ಸಂಪ್ರದಾಯ ಧರ್ಮ। ತೇಚಿ ಜಯಾ ವರ್ಣಾಶ್ರಮ।
ಗುರು ಪರಿಚರ್ಯಾ ನಿತ್ಯಕರ್ಮ। ಜಯಾಚೇಯಾ॥
ಗುರುಚೀ ನಾಮಮಾತ್ರ। ತೇಚಿ ಆಮ್ನಾಂ ವೇದಶಾಸ್ತ್ರ।
ಗುರುಸೀ ಮಾನೀ ಮಾಣುಸಪಣ। ತೋ ಪಾಪಿಷ್ಟ ಜಾಣ ಸರ್ವಥಾ॥
ಅಗ್ನಿಹೋತ್ರಾಚಾ ಸುಕಾಳ। ವಡ ಪಿಂಪಳಾಶೀ ಕಾಳ।
ತೀನ್ಹೀ ದೇವ ಪಿಂಪಳಾಂತ। ಅಗ್ನಿಹೋತ್ರೀಂ ಕೇಲಾ ಘಾತ॥
ಮ್ಹಣತೀ ಸೋಮಯಾಗ ಕರಾ। ಮುಖ ಧರೋನಿ ಮೇಂಢಾ ಮಾರಾ॥

ಗುರು ಮಾರ್ಗವೇ ಧರ್ಮ; ಅದೇ ವರ್ಣಾಶ್ರಮ. ಗುರುಪರಿಚರ್ಯೆ ನಿತ್ಯಕರ್ಮ ನಮಗೆಲ್ಲ. ಗುರುವಿನ ನಾಮವೇ ನಮಗೆ ವೇದಶಾಸ್ತ್ರ. ಗುರುವನ್ನು ಮನುಷ್ಯನೆಂದು ತಿಳಿಯುವವನೇ ಸರ್ವಥಾ ಪಾಪಿ. ಅಗ್ನಿಹೋತ್ರದ ಸುಕಾಲವೆಂದರೆ ಆಲ, ಅರಳೆ (ಕಟ್ಟಿಗೆ) ಗಳಿಗೆ ಮೃತ್ಯು. ಅರಳೆ ಗಿಡದಲ್ಲಿ ತ್ರಿಮೂರ್ತಿಗಳಿರುತ್ತಾರೆ. ಅಗ್ನಿ ಹೋತ್ರಿಯಾದವನು ಅದನ್ನು ಕೊಲ್ಲುತ್ತಾನೆ. ಸೋಮಯಾಗ ಮಾಡಿರೆಂದು ಹೇಳುತ್ತಾರೆ, ಕುರಿಗಳನ್ನು ಕೊಲ್ಲುತ್ತಾರೆ.

ಈ ರೀತಿ ಯಜ್ಞಯಾಗಗಳನ್ನು ಟೀಕೆ ಮಾಡುವ ವಾರಕರೀಪಂಥ ವೈದಿಕಮಾರ್ಗವೆಂದು ಹೇಳಬಹುದೇ?

ಸಾಂಡೂ ಜಾತೀಚಾ ಅಭಿಮಾನ। ಉಂಚನೀಚ ನಾಹೀ ನಾಮಾಚಿಯಾಪುಢೇ।
ಯವನಾದಿ ನೀಚ ಅಸೋತಭಲತೇ। ಪರಿನಾಮ ಸರ್ವದಾ ಮುಖೀಂ ವಸೋ॥
ಕೋಣ ಭಕ್ತೀ ಕೇಲೀ ಗೋಪಾಳೀ। ಕಾಯ ತೀ ಸೋವಳೀ ಕೀ ಓವಳೀ
ತ್ಯಾಚೇ ಉಚ್ಛಿಷ್ಟ ಕವಳ ಮೀ ಗಿಳೀ। ಪ್ರೇಮ ಸಮ್ಮೇಳೀ ಡುಲ್ಲತ॥

ಜಾತಿಯ ಅಭಿಮಾನವನ್ನು ಬಿಟ್ಟುಕೊಡೋಣ. ನಾಮದ ಎದುರಿಗೆ ಯಾರೂ ಉಚ್ಚ ನೀಚರಲ್ಲ. ಯವನಾದಿಗಳು ನೀಚರಾಗಿದ್ದಿರಬಹುದು. ಆದರೆ, ನಾಮ ಯಾವಾಗಲೂ ನಮ್ಮ ಮುಖದಲ್ಲಿರಲಿ. ಗೋಪಾಲನಲ್ಲಿ ಭಕ್ತಿ ತೋರಿಸಿದವರು ಯಾರು? ಅವರ ಭಕ್ತಿ ಮಡಿ ಮೈಲಿಗೆಯೆ? (ಅದನ್ನೆಲ್ಲ ವಿಚಾರ ಮಾಡದೆ) ಅವರ ಎಂಜಲು ತಿನ್ನುವೆ, ಪ್ರೇಮ ಸಮ್ಮಿಲನದಲ್ಲಿ ನಡೆಯುವೆ.

ಶ್ರೀ ಸಮರ್ಥ ರಾಮದಾಸರು ಇದೇ ಕಾರಣಕ್ಕಾಗಿ ವಾರಕರೀ ಸಂಪ್ರದಾಯದ ವಿರುದ್ಧ ಬಂಡೆದ್ದರು. ಗುರುಮಾರ್ಗದೊಳಗಿನ ಪಾದೋದಕ, ತೀರ್ಥ, ಪ್ರಸಾದ ಇವೆಲ್ಲವನ್ನು ಇಟ್ಟುಕೊಂಡರೂ ಯಾವದೇ ಜಾತಿಯವನು ಗುರುವಾಗುವದು ಅವರಿಗೆ ಒಪ್ಪಿಗೆ ಇರಲಿಲ್ಲ. ಈ ಪದ್ಧತಿಯನ್ನು ಅವರು ನಿಷೇಧಿಸಿದರು. ಅವರ ಪಂಥದಲ್ಲಿ ಯವನರು ಹೋಗಲಿ, ಅಬ್ರಾಹ್ಮಣರಾದವರನ್ನೂ ಬಹಳಷ್ಟು ಒಳಗೆ ಬರಗೊಡಲಿಲ್ಲ. ತಾರತಮ್ಯವನ್ನು ಪಾಲಿಸಿ ಕೆಲಸ ಮಾಡುವ ವ್ಯಾವಹಾರಿಕ ತತ್ತ್ವಜ್ಞಾನವನ್ನು ರಾಮದಾಸರು ದುರ್ಲಕ್ಷಿಸಲಿಲ್ಲ. ಜ್ಞಾನೇಶ್ವರನ ಉಪದೇಶದಲ್ಲಿ ವರ್ಣಾಶ್ರಮದ ವಿರುದ್ಧ ಒಂದು ಚಕಾರ ಶಬ್ದವಿರಲಿಲ್ಲ ನಿಜ. ಆದರು ವಾರಕರೀ ಪಂಥದ ಸರ್ವಸಮಭಾವದ ಉಪದೇಶದಿಂದ ಮತ್ತು ಬೇಕಾದ ಜಾತಿಯವನನ್ನು ಗುರು ಮಾಡಿಕೊಳ್ಳುವ ಪದ್ಧತಿಯಿಂದ ವರ್ಣಾಶ್ರಮ ಧರ್ಮದ ತಳಹದಿ ಅದುರತೊಡಗಿತು. ಇದರಿಂದ ಜಾಗೃತರಾದ ಬ್ರಾಹ್ಮಣರು ವಾರಕರೀ ಪಂಥದ ವಿರುದ್ಧ ಹೂಡಿದ ಚಳವಳಿಯಿಂದ ಆದ ತೊಂದರೆ ತುಕಾರಾಮ ಮೊದಲಾದ ಸಂತರ ಚರಿತ್ರೆಯಿಂದ ಗೊತ್ತಾಗುತ್ತದೆ. ಬ್ರಾಹ್ಮಣವರ್ಗಕ್ಕೆ ತನ್ನ ಸ್ವತ್ವವನ್ನು ರಕ್ಷಿಸಿಕೊಳ್ಳಲು ಒಂದು ಸ್ವತಂತ್ರ ಪಕ್ಷದ ಆವಶ್ಯಕತೆ ತೀವ್ರವಾಗಿ ಅನಿಸತೊಡಗಿತು. ಇಂಥ ಸಾಮಾಜಿಕ ಮನಃಸ್ಥಿತಿಯಲ್ಲಿ ಸಮರ್ಥ ರಾಮದಾಸರ ಪಂಥ ಉದಯಕ್ಕೆ ಬಂದಿತು. ಬ್ರಾಹ್ಮಣ ಬೇರೆ ಜಾತಿಯವರನ್ನು ಗುರು ಮಾಡಿಕೊಳ್ಳಬಾರದೆಂದು ಅವರ ಟೀಕೆಯಿತ್ತು.

ಗುರೂತೋ ಸಕಳಾಸೀ ಬ್ರಾಹ್ಮಣ। ಜರೀ ತೋ ಜಾಹಲಾ ಕ್ರಿಯಾಹೀನ।
ತರೀ ತಯಾಸೀ ಶರಣ। ಅನನ್ಯ ಭಾವೇ ಅಸಾವೆ॥ (೫೦೫)

ಬ್ರಾಹ್ಮಣನೇ ಎಲ್ಲರಿಗೂ ಗುರು. ಅವನು ಕ್ರಿಯಾಹೀನನಾಗಿದ್ದರೂ ಅವನಿಗೇ ಅನನ್ಯಭಾವದಿಂದ ಶರಣು ಹೋಗಬೇಕು. ಎಂದು 'ದಾಸಬೋಧ'ದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ರಾಮದಾಸರಿಗಿಂತ ಮೊದಲೇ ಹಿದಿನೈದನೇ ಶತಮಾನದಲ್ಲಿ ಶ್ರೀ ನೃಸಿಂಹ ಸರಸ್ವತಿಯು ವೈದಿಕ ಪರಂಪರೆಯನ್ನು ರಕ್ಷಿಸಲು ಗುರುದತ್ತಮಾರ್ಗದಲ್ಲಿಯೇ ಒಂದು ಮಡಿವಂತಿಕೆಯ ಮಾರ್ಗವನ್ನು ಹುಡುಕಿ ತೆಗೆದಿದ್ದ. ಜನಾರ್ದನಸ್ವಾಮಿಯ ದತ್ತಮಾರ್ಗ ನೃಸಿಂಹ ಸರಸ್ವತಿಯ ಮಾರ್ಗದಂತೆ ನಿಷ್ಠುರವಾದ ಮಡಿವಂತಿಕೆಯ ಬಿಗುವಿನದಲ್ಲ. ಜನಾರ್ದನಸ್ವಾಮಿಯ ಶಿಷ್ಯ ಏಕನಾಥ ವಾರಕರೀ ಸಂಪ್ರದಾಯದವನು. ಸ್ವತಃ ಜನಾರ್ದನ ಸ್ವಾಮಿಗೆ ದತ್ತ ಅವಲಿಯಾನ ರೂಪದಲ್ಲಿ ದರ್ಶನವಿತ್ತನು. ಆದರೆ, ನೃಸಿಂಹ ಸರಸ್ವತಿಯ ಪರಂಪರೆಯಲ್ಲಿಯ ಯತಿಗಳು ಪಂಢರಪುರದ ಭಕ್ತರ ನೆರವಿಯ ಗಾಳಿಗೂ ನಿಲ್ಲಲಾರರು. ಮೂಲ ಗುರುಪಂಥ ವೇದಾನುಸಾರಿಯಾಗಿರದೆ ವೇದಗಳೇ ಅದನ್ನು ಅನುಸರಿಸುತ್ತವೆ. ಗುರುದತ್ತನ ಚಿತ್ರದಲ್ಲಿಯ ನಾಯಿಗಳು ಈ ಮಾತನ್ನೇ ಧ್ವನಿಸುತ್ತವೆ. 'ಗುರುವಾಕ್ಯವನ್ನು ಬಿಟ್ಟರೆ ಬೇರೆ ಯಾವ ಶಾಸ್ತ್ರವೂ ಇಲ್ಲ'. ಗುರುವಿನ ಬಾಯಿಂದ ಬಂದದ್ದೇ ವೇದವಚನ ಎಂಬ ಆಗ್ರಹವಿರುವ ಈ ಪಂಥವನ್ನು ವೈದಿಕ ಪಂಥೀಯರು ಮಡಿಗೊಳಿಸಿ ಸ್ವೀಕರಿಸುವ ಪ್ರಯತ್ನ ಮಾಡಿದರು. ಶ್ರೀಪಾದ, ಶ್ರೀವಲ್ಲಭ ಮತ್ತು ನೃಸಿಂಹ ಸರಸ್ವತಿಯವರ ಪರಂಪರೆಯಲ್ಲಿ ಈ ಮಡಿವಂತಿಕೆ ಇನ್ನೂ ಉಳಿದುಕೊಂಡಿದೆ. ಶ್ರೀ ವಾಸುದೇವಾನಂದ ಸರಸ್ವತಿ (ಟೇಂಬೆ) ಮಹಾರಾಜರಲ್ಲಿ ಇದು ಪರಾಕಾಷ್ಠೆಗೆ ಮುಟ್ಟಿತು. ಆಧುನಿಕ ಕಾಲದಲ್ಲಿ ದತ್ತನ ಅವತಾರವೆಂದೇ ನಂಬಿದ್ದ ಶ್ರೀ ಅಕ್ಕಲಕೋಟೆಯ ಸ್ವಾಮಿಗಳು ಯಾವದೇ ಜಾತಿಯವರ ಮನೆಯಲ್ಲಿ ಊಟ ಮಾಡುತ್ತಿದ್ದರು.

ಮಸೀದಿಗಳಿಗೆ ಪ್ರಾರ್ಥನೆಗೆ ಹೋಗುತ್ತಿದ್ದರು. ಮಡಿ ಮೈಲಿಗೆಯ ವಿಧಿ ನಿಷೇಧಗಳು ಅವರಲ್ಲಿ ಇರಲಿಲ್ಲ. ನಿರಂಜನ ಅವಲಿಯಾ ಎಂದೇ ಅವರ ಪ್ರಸಿದ್ಧಿ ಇತ್ತು. ಅವರ ಮುಂದಿನ ತಲೆಮಾರಿನಲ್ಲಿಯ ಪ್ರಾಸಾದಿಕ, ದತ್ತಾವತಾರಿ ಎಂದು ತಿಳಿದಿದ್ದ ಟೇಂಬೆಸ್ವಾಮಿಗಳದು ಇದಕ್ಕೆ ತೀರ ವಿರುದ್ಧವಾದ ಕ್ರಮ. ತ್ರಿಕಾಲಸ್ನಾನ, ಶೂದ್ರರ ನೆರಳಿನಿಂದಲೂ ಅವರಿಗೆ ಮೈಲಿಗೆಯಾಗುತ್ತಿತ್ತು. ಅವರ ಮಡಿವಂತಿಕೆ ಶುದ್ಧ ಸನಾತನಿಗಳಿಗೂ ಆಶ್ಚರ್ಯ ಹುಟ್ಟಿಸುತ್ತಿತ್ತು. ಭಜನೆಯ ಮೇಳದವರೆಂದರೆ ತಾಳ ಕುಟ್ಟುವವರೆಂದೇ ಅವರ ಅಭಿಪ್ರಾಯವಾಗಿತ್ತು. ಇಂಥ ಮಡಿವಂತಿಕೆಯ ದತ್ತಪಂಥದ ಇತಿಹಾಸದಲ್ಲಿ ಕೂಡ ಮುಸಲ್ಮಾನ ಶಿಷ್ಯರು ದೊರೆಯುತ್ತಾರೆ. ನೃಸಿಂಹಸರಸ್ವತಿಯು ವಾದಕ್ಕೆಂದು ಬಂದ ಬ್ರಾಹ್ಮಣನೊಬ್ಬನನ್ನು ಹೊಲೆಯನಿಂದ ಸೋಲಿಸಿದನು. ಮುಸಲ್ಮಾನ ಬಾದಶಹನ ರೋಗವನ್ನು ಗುಣಪಡಿಸಿ ಅವನನ್ನು ಶಿಷ್ಯನನ್ನಾಗಿ ಮಾಡಿಕೊಂಡ.

ಕರ್ನಾಟಕದಲ್ಲಿಯ ಸಂಪ್ರದಾಯಪ್ರಿಯತೆ ಮತ್ತು ಮಡಿವಂತಿಕೆಯಲ್ಲಿ ಏನೋ ವಿಶೇಷತೆಯಿದೆ. ಇಲ್ಲಿಯ ಧಾರ್ಮಿಕ ಚಳವಳಿಗಳಲ್ಲಿಯ ಕೆಲವು ಸಂಗತಿಗಳ ಸಂಬಂಧ ಮಹಾರಾಷ್ಟ್ರದ ಧಾರ್ಮಿಕ ಚಳವಳಿಗಳ ಜೊತೆಗಿದೆ. ವಾರಕರೀ ಸಂಪ್ರದಾಯದ ಬಗ್ಗೆ ಕರ್ನಾಟಕದ ಪ್ರತಿಕ್ರಿಯೆಯನ್ನು ಅರಿಯುವದು ತೌಲನಿಕ ಅಭ್ಯಾಸದ ದೃಷ್ಟಿಯಿಂದ ಮಹತ್ವದ್ದಾಗಿದೆ. ಮಹಾರಾಷ್ಟ್ರದ ಸಂತಚರಿತ್ರೆಯ ಪ್ರಕಾರ ಸಂತ ಭಾನುದಾಸನು ವಿಠ್ಠಲನ ಮೂರ್ತಿಯನ್ನು ವಿಜಯನಗರದಿಂದ ಪಂಢರಪುರಕ್ಕೆ ಒಯ್ದನೆಂದು ತಿಳಿದುಬರುತ್ತದೆ. ಆದರೆ, ಆಮೂರ್ತಿ ವಿಜಯನಗರಕ್ಕೆ ಬಂದದ್ದೇಕೆಂದು ಸ್ಪಷ್ಟವಾಗುವದಿಲ್ಲ. ಕರ್ನಾಟಕದಲ್ಲಿ ಪುರಂದರ ಮೊದಲಾದ ಹರಿದಾಸರು ವಿಠ್ಠಲ ಭಕ್ತರಾಗಿದ್ದರು, ಈ ಮಾತು ವಿಖ್ಯಾತವಾಗಿದೆ. ಅವರ ಹಾಡುಗಳು 'ಪುರಂದರ ವಿಠ್ಠಲ', 'ಜಗನ್ನಾಥ ವಿಠ್ಠಲ'ದಂಥ ಮುದ್ರಿಕೆಗಳಿಂದ ಕೊನೆಯಾಗುತ್ತವೆ. ಪಂಢರಪುರ ವಿಠ್ಠಲಭಕ್ತರನ್ನು ತನ್ನೆಡೆಗೆ ಸೆಳೆದುಕೊಳ್ಳುವ ಮಹಾಕ್ಷೇತ್ರವಾಗಿತ್ತು. ಕರ್ನಾಟಕದಂತೆ ಮಹಾರಾಷ್ಟ್ರದಲ್ಲಿಯೂ ಜ್ಞಾನೇಶ್ವರನಿಂದ ಮೊದಲುಗೊಂಡು ಸಂತರೆಲ್ಲ ಪಂಢರಪುರದ ಕಡೆಗೆ ಆಕರ್ಷಿತರಾಗಿದ್ದರು. ಜ್ಞಾನೇಶ್ವರ ಮೊದಲಾದ ಸಂತರ ವರ್ಣನೆಯ ಮೇರೆಗೆ ಈ ಕ್ಷೇತ್ರ ಆ ಕಾಲಕ್ಕೆ ಕರ್ನಾಟಕದಲ್ಲಿತ್ತೆಂದು ಕಾಣುತ್ತದೆ.

ಕಾಶೀಯೇ ಕನೋಜು, ದ್ವಾರಕಾ ಗುಜರೂ। ಕಾನಡಾ ವಿಠ್ಠಲು ಪಂಢರೀಯೇ।
ಕಾನಡಾ ಹೋ ವಿಠ್ಠಲು ಕರ್ನಾಟ ಕು। ಯೇಣೇ ಮಜ ಲಾವಿಲಾಸೇ ವೇಧು॥
ವಿಠ್ಠಲು ಕಾನಡೀ ಬೋಲೂಂ ಜಾಣೇ। ತ್ಯಾಚೀ ಭಾಷಾ ಪುಂಡಲೀಕ ನೇಣೇ॥

ಮೇಲಿನ ಅಭಂಗದಲ್ಲಿ ವಿಠ್ಠಲ ಕನ್ನಡದೇವತೆ ಮತ್ತು ಪಂಢರಪುರ ಕನ್ನಡಕ್ಷೇತ್ರವೆಂದು ಸ್ಪಷ್ಟ ಶಬ್ದಗಳಲ್ಲಿ ಹೇಳಲಾಗಿದೆ. ಇದೇ ಅಭಿಪ್ರಾಯದ ಬೇರೆ ಅಭಂಗಗಳೂ ಪ್ರಸಿದ್ಧವಾಗಿವೆ. 'ಕಾನಡಾ' ಎಂಬ ಶಬ್ದವನ್ನು ಅಗಮ್ಯ, ತಿಳಿಯದ್ದು ಎಂಬ ಅರ್ಥದಲ್ಲಿ ಕೆಲವು ಕಡೆ ಪ್ರಯೋಗಿಸಲಾಗಿದೆ ನಿಜ. 'ಕಾನಡಾ ಹೋ ವಿಠ್ಠಲು' ಅಂದರೆ ಅಗಮ್ಯ, ಬುದ್ಧಿಗೆ ನಿಲುಕದವನು ಎಂದು ಅರ್ಥವಾಗುವುದು ಶಕ್ಯವಿದೆ. ಆದರೆ, ಕಾಶೀ ಮತ್ತು ದ್ವಾರಕಾ ಈ ಸ್ಥಳನಾಮಗಳಂತೆ ಕರ್ನಾಟಕದ ಹೆಸರು ಹೇಳಿ ಆ ಕ್ಷೇತ್ರ ಈ ಪ್ರಾಂತದಲ್ಲಿದೆ ಎಂದು ಮೇಲಿನ ಅಭಂಗದಲ್ಲಿ ಹೇಳಲಾಗಿದೆ.

ಒಂದು ಕಾಲಕ್ಕೆ ಪಂಢರಪುರದ ವಿಠ್ಠಲ ಕರ್ನಾಟಕದ ಹರಿಭಕ್ತರ ಅಂತರಂಗದ ದೇವತೆಯಾಗಿದ್ದ. ವಿಠ್ಠಲ ಮುದ್ರಿಕೆಯಿಂದ ಕೂಡಿದ ಸಾವಿರಾರು ದಾಸರ ಪದಗಳು ಕರ್ನಾಟಕದ ಹರಿಭಕ್ತರ ನಾಲಿಗೆಯ ಮೇಲೆ ಕುಣಿಯುತ್ತಿವೆ. ಆದರೆ ಹನ್ನೆರಡನೆಯ ಶತಮಾನದ ವರೆಗೆ ಕನ್ನಡಿಗರ ದೈವತವೆಂದು ಎಣಿಸಲ್ಪಡುತ್ತಿದ್ದ ವಿಠ್ಠಲ ಇಂದು ಆ ನೆನಪನ್ನು ಎರಡೂ ಪ್ರಾಂತಗಳಿಗೆ ಕೊಡಬೇಕಾದ ಪರಿಸ್ಥಿತಿ ಬಂದೊದಗಿದೆ. ಕನ್ನಡದ ವಿಷ್ಣುಭಕ್ತರಿಗೆ ವಿಠ್ಠಲ ಬೇಕು. ಆದರೆ ಪಂಢರಪುರ ಬೇಡ ಎಂಬ ಪರಿಸ್ಥಿತಿ ಯಾಕೆ ನಿರ್ಮಾಣವಾಗಬೇಕು? ಇಂದು ಉಡುಪಿ ಮತ್ತು ತಿರುಪತಿಗಳಲ್ಲಿ ಕೂಡುವ ಭಕ್ತರ ನೆರವಿಯಂತೆ ಕನ್ನಡ ಭಕ್ತರು ಖಚಿತವಾಗಿ ಪಂಢರಪುರಕ್ಕೆ ಬರುವುದಿಲ್ಲ. ಉಡುಪಿಯ ದೇವರು ಶ್ರೀಕೃಷ್ಣ, ತಿರುಪತಿಯ ದೇವರು ವೆಂಕಟೇಶ ಅಥವಾ ಶ್ರೀನಿವಾಸ. ಆದರೆ, ಕನ್ನಡದ ಹರಿಭಕ್ತರು ವಿಠ್ಠಲನ ಹಾಡುಗಳನ್ನು ಹಾಡುತ್ತ ಉಡುಪಿ ಮತ್ತು ತಿರುಪತಿಗೆ ಯಾತ್ರೆ ಮಾಡುತ್ತಾರೆ. ಕಾರಣವೇನಿರ ಬಹುದು? ಕಾರಣವೆಂದರೆ ಜ್ಞಾನೇಶ್ವರನ ವಾರಕರೀ ಸಂಪ್ರದಾಯವೆಂದೇ ಹೇಳಬೇಕಾಗುತ್ತದೆ.

ಪಂಢರಪುರದಿಂದ ವಿಠ್ಠಲನ ಮೂರ್ತಿ ವಿಜಯನಗರಕ್ಕೆ ಬಂದಿತು. ಭಾನುದಾಸನ ಸಮಕಾಲೀನರಾಗಿದ್ದ ವಾದಿರಾಜ ಸ್ವಾಮಿಗಳು ತೀರ್ಥಪ್ರಬಂಧಕವೆಂಬ ಸಂಸ್ಕೃತ ಗ್ರಂಥದಲ್ಲಿ ವಿಠ್ಠಲ ವಿಜಯನಗರಕ್ಕೆ ಬಂದನೆಂದು ಹೇಳಿದ್ದಾರೆ. 'ತುಂಗಾತೀರ ಗತೋಽಸಿ ವಿಠ್ಠಲ' ಇದರ ಅರ್ಥ ಚಂದ್ರಭಾಗೆಯಿಂದ ಹೊರಟು ವಿಠ್ಠಲಾ, ನೀನು ತುಂಗಾತೀರಕ್ಕೆ ಬಂದೆ ಎಂದಾಗುತ್ತದೆ. ವಿಠ್ಠಲನ ಮೂರ್ತಿಯನ್ನು ವಿಜಯನಗರಕ್ಕೆ ತಂದರೆಂಬುದರ ಬಗ್ಗೆ ಪುರಾವೆ ಇಲ್ಲದೆ. ಆದರೆ, ವಿಜಯನಗರಕ್ಕೆ ಮೂರ್ತಿಯನ್ನು ತಂದದ್ದೇಕೆ, ಅದರ ಹಿಂದಿನ ಮನೋಭೂಮಿಕೆ ಏನಿರಬಹುದೆಂದು ಗೊತ್ತಾಗುವದಿಲ್ಲ. ಮುಸಲ್ಮಾನರ ದಾಳಿಗಳಿಂದ ವಿಠ್ಠಲನ ಮೂರ್ತಿ ಅಪವಿತ್ರವಾಗಬಾರದೆಂದು ಹಿಂದುತ್ವದ ಅಭಿಮಾನಿಯಾದ, 'ಹಿಂದೂರಾಯ ಸುರತ್ರಾಣ' ಎಂಬ ಬಿರುದಾಂಕಿತ ವಿಜಯನಗರದ ರಾಯ, ಮುಸಲ್ಮಾನ ರಾಜ್ಯದಲ್ಲಿ ಸಿಕ್ಕುಬಿದ್ದಿದ್ದ ಪಂಢರಪುರದಿಂದ ವಿಠ್ಠಲನ ಮೂರ್ತಿಯನ್ನು ವಿಜಯನಗರಕ್ಕೆ ಒಯ್ದಿರಬಹುದೆಂದು ಕೆಲವರ ತಿಳುವಳಿಕೆ ಇದ್ದಂತೆ ಕಾಣುತ್ತದೆ. ಇದರಲ್ಲಿ ತಥ್ಯವಿದೆಯೆಂದು ಹೇಳುವಂತಿಲ್ಲ. ಸಂತ ಭಾನುದಾಸನು ವಿಜಯನಗರದಿಂದ ಮೂರ್ತಿಯನ್ನು ತಿರುಗಿ ಪಂಢರಪುರಕ್ಕೆ ಹೋದಾಗ ಮತ್ತು ಆ ಮೇಲೆ ಕೂಡ ಪಂಢರಪುರ ಕ್ಷೇತ್ರ ಮುಸಲ್ಮಾನರ ಹಿಡಿತದಿಂದ ಹೊರಬಿದ್ದಿರಲಿಲ್ಲ. ಆದ್ದರಿಂದ, ಕನ್ನಡ ಹರಿದಾಸರು ವಿಠ್ಠಲಮೂರ್ತಿಯನ್ನು ವಿಜಯನಗರಕ್ಕೆ ತಂದದ್ದರ ಕಾರಣ ಬೇರೆ ಇರಬೇಕೆಂದು ತೋರುತ್ತದೆ. ಒಬ್ಬ ಕನ್ನಡ ವಿಠ್ಠಲ ಭಕ್ತನ ಗೀತದಲ್ಲಿ ವಿಠ್ಠಲ ಪಂಢರಾಪುರದಿಂದ ಓಡಿ ಬಂದ ಎಂದು ವರ್ಣನೆ ಇದೆ. ಈ ಗೀತದ ಕವಿ ಅರ್ವಾಚೀನ, ಅಂದರೆ, ಎರಡುನೂರು ವರ್ಷಗಳಷ್ಟು ಹಿಂದಿನವ ಎಂದರೂ, ಪೂರ್ವ ಪರಂಪರೆಯಿಂದ ಅವನಿಗೆ ಗೊತ್ತಾದ ಮಾಹಿತಿ ಇಲ್ಲಿ ವ್ಯಕ್ತವಾಗಿದೆ.

> ಏನಿದು ಕೌತುಕವೋ ವಿಠ್ಠಲಾ। ಏನಿದು ಕೌತುಕವೋ।
> ನೀನಿಲ್ಲಿಗೇಕೆ ಬಂದೆ, ವಿಠ್ಠಲಾ। ಏನಿದು ಕೌಂತುಕವು ॥ ಪ॥
> ಮಧ್ವದ್ವೇಷಿಗಳು ಮಾಡುವ ಪದ್ಧತಿಯನು ಕಂಡು।
> ಹೃದ್ಯವಾಗದೆ ಕದ್ದ ಕಳ್ಳನಂತೆ, ಎದ್ದಿಲ್ಲಿಗೆ ಬಂದ್ಯಾ ॥ ೧॥
> ಮಿಥ್ಯಾವಾದಿಗಳು ನಿರಂತರ ಸುತ್ತಿಮುತ್ತಿಕೊಂಡು।
> ಅತ್ತು ಕರೆದು ಕೂಗುತಿರೆ ಬಹಳ ಬೇಸತ್ತು ಹೊರಟು ಬಂದ್ಯಾ ॥ ೨॥
> ಶ್ರೀವಿಠ್ಠಲ ನಿನ್ನ ಸದ್ಗುಣ ವೇದಶಾಸ್ತ್ರಗಳಲ್ಲಿ ।
> ಶೋಧಿಸಿ ನೋಡಲು ಭೂದೇವರಿಗೊಲಿದಾದರಿಸಿ ಬಂದ್ಯಾ ॥ ೩॥
> ವಿಠ್ಠಲಾ। ಏನಿದು ಕೌತುಕವೋ॥

ಬ್ರಾಹ್ಮಣರ ಮೇಲಿನ ಕೃಪೆಯಿಂದ ವಿಠ್ಠಲಾ ನೀನು ಇತ್ತ ಕಡೆಗೆ ಓಡಿ ಬಂದೆಯಾ ಎಂದು ಕೇಳಿರುವುದು ವಿಚಾರಾರ್ಹವಾಗಿದೆ. ಅಬ್ರಾಹ್ಮಣ ಗುರುವನ್ನು ಒಪ್ಪಿಕೊಳ್ಳುವ ಪದ್ಧತಿಯ ವಾರಕರೀ ಸಂಪ್ರದಾಯದಲ್ಲಿ ಹೋಗುವದರಿಂದ ಬ್ರಾಹ್ಮಣ್ಯ ನಷ್ಟವಾಗುವ ಭೀತಿಯಿದೆ. ಇಂಥ ಎಚ್ಚರಿಕೆಯನ್ನು ರಾಮದಾಸರು 'ದಾಸಬೋಧ'ದಲ್ಲಿ ಕೊಟ್ಟಿದ್ದಾರೆ. ವಿಠ್ಠಲ ಸಂಪ್ರದಾಯದ ವಾರಕರೀ ಬ್ರಾಹ್ಮಣರನ್ನು ಬ್ರಾಹ್ಮಣರೆಂದು ಒಪ್ಪಿಕೊಳ್ಳಲು ಕರ್ನಾಟಕದ ಮಾಧ್ವ ಬ್ರಾಹ್ಮಣರು ಸಿದ್ಧರಿರಲಿಲ್ಲವೆಂದು ಇದರಿಂದ ಧ್ವನಿತವಾಗುತ್ತದೆ. ಮಡಿಯಿಲ್ಲದ, ಜಾತಿ ಭೇದವಿಲ್ಲದ ಭಕ್ತಿಗೆ ಬೇಸತ್ತು ವಿಠ್ಠಲ ಪಂಢರಪುರವನ್ನು ಬಿಟ್ಟು ಇಲ್ಲಿಯ ಪವಿತ್ರ ವಾತಾವರಣಕ್ಕೆ ಬಂದನೆಂದು ಗೀತದಿಂದ ಧ್ವನಿತವಾಗುತ್ತದೆ. ಇದರಿಂದ ಕನ್ನಡದ ವೈಷ್ಣವ ಭಕ್ತರು ಪಂಢರಪುರವನ್ನು ಬಿಟ್ಟದ್ದೇಕೆಂದು ಸ್ಪಷ್ಟವಾಗುತ್ತದೆ. ಈ ರೀತಿಯಲ್ಲಿ ಕಾನಡಾ ವಿಠ್ಠಲ ಮರಾಠಾ ಆಗಿಬಿಟ್ಟನು.

ಮಹಾರಾಷ್ಟ್ರ ಈ ರೀತಿಯಲ್ಲಿ ಕರ್ನಾಟಕದ ಮೇಲೆ ವಿಜಯ ಸಾಧಿಸಿತು ಮತ್ತು ಸಾಲ ಮುಟ್ಟಿಸಿತು. ಆದರೆ, ಅದಕ್ಕಿಂತ ಮೊದಲು ದೇವಗಿರಿಯ ಯಾದವರ ಆಳಿಕೆಯಲ್ಲಿ ಕೊನೆಗೆ ಮರಾಠಿಗೆ ರಾಜಾಶ್ರಯ ದೊರೆಯುವ ತನಕ, ಅಂದರೆ ಹದಿಮೂರನೆಯ ಶತಮಾನದ ನಡುಗಾಲದ ವರೆಗೆ ಕರ್ನಾಟಕ ಮಾತಿನ ಪ್ರಭಾವ ಮರಾಠಿಯ

ಮೇಲೆ ಇತ್ತು. ಆದರ ಮುಂದಿನ ಕಾಲದಲ್ಲಿ ಮಾತ್ರ ಎಲ್ಲ ತಿರುಗುಪ್ಪಾಯಿತು. ವಾರಕರೀ ಸಂಪ್ರದಾಯ ಕನ್ನಡಿಗರ ಮೇಲೆ ಪ್ರಭಾವ ಬೀರಿತು. ಕನ್ನಡಿಗರು ಭಾಗವತ (ವಿಠ್ಠಲ) ಪಂಥದಿಂದ ಆಕರ್ಷಿತರಾದರು. ಹರಿಹರರಲ್ಲಿ ಭೇದ ಮಾಡಬಾರದು, ಎಂಬ ವಿಚಾರದ ಸಮತ್ವವಾದಿಗಳು ವಾರಕರೀ ಸಂಪ್ರದಾಯದ ಕಡೆಗೆ ಸೆಳೆಯಲ್ಪಟ್ಟರು. ಅದ್ವೈತಪಂಥದಲ್ಲಿಯ ನಿಷ್ಠುರ ಸನಾತನಿಗಳು ವಾರಕರೀ ಪಂಥದಿಂದ ದೂರ ಉಳಿದರು; ನೃಸಿಂಹ ಸರಸ್ವತಿಯ ಮಡಿವಂತಿಕೆಯ ದತ್ತಪಂಥದ ಪ್ರಭಾವ ಅವರ ಮೇಲೆ ಆಯಿತು. ಕೆಲವರು ರಾಮದಾಸಿಗಳೂ ಆದರು. ಮಹಾರಾಷ್ಟ್ರದ ಈ ಧಾರ್ಮಿಕ ಸಂಪ್ರದಾಯಗಳೊಡನೆ ಅವುಗಳಲ್ಲಿಯ ಮರಾಠೀ ಹಾಡುಗಳು, ಆರತಿ ಪದಗಳು ಇವುಗಳ ಪ್ರಸಾರ ಕರ್ಣಾಟಕದಲ್ಲಿ ಆಯಾ ಪಂಥಗಳಲ್ಲಾಯಿತು. ಕನ್ನಡಿಗರಿಂದ ಮಹಾರಾಷ್ಟ್ರಕ್ಕೆ ಶಿವಭಕ್ತಿ, ಮಲ್ಲಾರಿ ಮಾರ್ತಂಡ, ಎಲ್ಲಾಯಿ, ತುಕಾಯಿ ಮೊದಲಾದ ಸಂಪ್ರದಾಯಗಳು ಒಂದು ಕಾಲಕ್ಕೆ ದೊರೆತಿದ್ದವು, ಅವುಗಳ ಋಣ (ಸಾಂಸ್ಕೃತಿಕ ಬಡ್ಡಿ ಸಹಿತ ತೀರಿದಂತಾಯಿತು.)

ಉಪಸಂಹಾರ

ಇಂದಿನ ಸಮಸ್ಯೆಗಳು ಇಂದೇ ನಿರ್ಮಾಣವಾಗಿರುವದಿಲ್ಲ. ಆ ಸಮಸ್ಯೆಗಳ ಬೇರುಗಳು ಭೂತಕಾಲದ ಗರ್ಭದಲ್ಲಿ ದೂರದ ವರೆಗೆ ಇಳಿದಿರುತ್ತವೆ. ಕಾಲ ಅಖಂಡವಾಗಿದೆ. ನಿನ್ನೆ, ಇಂದು, ನಾಳೆ ಹೀಗೆ ವ್ಯವಹಾರದ ಅನುಕೂಲತೆಗಾಗಿ ಅದರಲ್ಲಿ ವಿಭಾಗಗಳನ್ನು ಮಾಡಲಾಗಿದೆ. 'ನಿನ್ನೆ'ಯ ಹೊಟ್ಟೆಯೊಳಗಿಂದ 'ಇಂದು' ಹುಟ್ಟಿ ಬಂದಿರುತ್ತದೆ. ಬೇರೆ ಶಬ್ದಗಳಲ್ಲಿ ಹೇಳುವದಾದರೆ 'ಇಂದು', ಸ್ವಲ್ಪ ಬದಲಾವಣೆಗೊಂಡ ನಿನ್ನೆಯದೇ ಅವತಾರವಾಗಿರುತ್ತದೆ. ಇವೊತ್ತಿನ ರೋಗದ ನಿದಾನಕ್ಕಾಗಿ ನಿನ್ನೆಯ ನಮ್ಮ ಕರ್ಮಗಳ ವರದಿ ಒಪ್ಪಿಸಬೇಕಾಗುತ್ತದೆ. ಆದರೆ, ಮನುಷ್ಯನ ಅಭಿಮಾನ, ಅಹಂಕಾರಗಳು ಅಡ್ಡ ಬರುತ್ತವಾದ್ದರಿಂದ ನಿನ್ನೆ ಮಾಡಿದ ಕೃತಿಯನ್ನು ಎಷ್ಟು ತಟಸ್ಥವಾಗಿ, ಶಾಂತವಾಗಿ, ನಿರ್ವಿಕಾರವಾಗಿ ವಿಶ್ಲೇಷಿಸಬೇಕೋ ಅಷ್ಟು ಆಗುವದಿಲ್ಲ. ಆದ್ದರಿಂದ ಸಾಮಾನ್ಯವಾಗಿ ನಮ್ಮ ಸಮಸ್ಯೆಯ ಸತ್ಯಾರ್ಥ ತಿಳಿಯುವದು ಕಠಿಣವಾಗುತ್ತದೆ.

ಕನ್ನಡ ಮರ್ಹಾಟಿಯ ತೊಡಕಿನ ಸ್ಥಿತಿಯೂ ಇದೇ ಆಗಿದೆ. ಈ ತೊಡಕು ಇತ್ತೀಚಿನದೆಂದು ಕೆಲವರ ತಿಳುವಳಿಕೆಯಾಗಿದೆ. ಆದರೆ, ನಮ್ಮ ದೃಷ್ಟಿಯಿಂದ ಇದು ಬಹಳ ಪ್ರಾಚೀನವಾಗಿದೆ. ಇಲ್ಲಿಯ ವರೆಗೆ ನಡೆದ ವಿವೇಚನೆಯಿಂದ ಕರ್ನಾಟ-ಮಹಾರಾಷ್ಟ್ರದ ಪೂರ್ವಜರು ಒಬ್ಬರೇ ಇದ್ದು ಆಜನ ಅವಳಿ ಸೋದರರಿದ್ದರೆಂದು ನಿರ್ಣಯಮಾಡಿದರೆ ತಪ್ಪಾಗಬಹುದೇ? ಇಂದು ಕನ್ನಡ ಮರಾಠಿ ಎಂದು ಗುರುತಿಸಲ್ಪಡುವ ಜನರ ವ್ಯವಹಾರಗಳು ಸಾವಿರ ವರ್ಷಗಳಿಂದ ಒಂದರೊಳಗೊಂದು ಎಷ್ಟು ತೊಡಕು ಹಾಕಿಕೊಂಡಿವೆ, ಮತ್ತು ಅವರ ಪ್ರಭಾವ ಒಬ್ಬರದೊಬ್ಬರ ಮೇಲೆ ಎಷ್ಟೊಂದು ಆಗಿದೆಯೆಂದರೆ, ಈ ಎರಡು ಜನಾಂಗಗಳಲ್ಲಿ ಒಬ್ಬೊಬ್ಬರ ಅಭ್ಯಾಸವನ್ನು ಸ್ವತಂತ್ರ ರೀತಿಯಲ್ಲಿ ಮಾಡುವದು ಸಾಧ್ಯವಿಲ್ಲ. ಎರಡೂ ಭಾಷೆಗಳಲ್ಲಿಯ ಗಾದೆಮಾತುಗಳು, ಶಬ್ದಗಳು ಇವುಗಳ ಮರ್ಮ ಮತ್ತು ಔಚಿತ್ಯಗಳನ್ನು ತಿಳಿಯಬೇಕಾದರೆ ಪರಸ್ಪರರ ಸಾಹಿತ್ಯ ಮತ್ತು ಪರಂಪರೆಗಳ ಅಭ್ಯಾಸ ಮಾಡಬೇಕಾಗುತ್ತದೆ. 'ಗಂಗೇತ ಘೋಡೇ ನ್ಹಾಲೇ' ('ಗಂಗೆಯಲ್ಲಿ ಕುದುರೆಗಳ ಮೈತೊಳೆದರು') ಈ ಮರಾಠಿಯ ಗಾದೆಮಾತು ತಜ್ಞರ ಹೇಳಿಕೆಯಂತೆ ಪೇಶವೆಯವರು ಉತ್ತರ ಭಾರತದ ದಿಗ್ವಿಜಯದ ಕಾಲಕ್ಕೆ ಪ್ರಚಾರವಾಗಿರಬೇಕು. ಆದರೆ, ವಸ್ತುಸ್ಥಿತಿ ಎಂದರೆ ಕರ್ನಾಟ-ಮಹಾರಾಷ್ಟ್ರಗಳ ಚಾಲುಕ್ಯ ಮತ್ತು ರಾಷ್ಟ್ರಕೂಟರ ಆಳಿಕೆಯಲ್ಲಿ ಈ ಮಾತು ಜನರ ನಾಲಿಗೆಯ ಮೇಲಿದ್ದದ್ದಕ್ಕೆ ಪ್ರಮಾಣಗಳು ದೊರೆಯುತ್ತವೆ. ಪಂಪ ಮಹಾಕವಿಯ ಪಂಪಭಾರತದಲ್ಲಿ (ಕ್ರಿ. ಶ. ೯೩೨) ಅರಿಕೇಸರಿಯ ಕುದುರೆಗಳು ಗಂಗೆಯಲ್ಲಿ ಮಿಂದವೆಂಬ ವರ್ಣನೆ ಆ ಕಾವ್ಯದ ಮೊದಲನೆಯ ಆಶ್ವಾಸದಲ್ಲಿಯೇ ಬಂದಿದೆ. ('ಗಂಗಾ ವಾರ್ಧಿಯೊಳ್ ಆತ್ಮ ತುರಂಗಮಂ ಮಿಸಿಸಿದನ್'). ಮರಾಠಿಯೊಳಗಿನ 'ಅತಿ ರಹಾಣಾ ತ್ಯಾಚಾ ಬೈಲ ರಿಕಾಮಾ' (ಅತಿ ಜಾಣನ ಎತ್ತಿಗೆ ಕೆಲಸವಿಲ್ಲ) ಎಂಬ ಗಾದೆ ಇಂದಿನ ಕನ್ನಡ

ಭಾಷೆಯಲ್ಲಿ ಪ್ರಯೋಗದಲ್ಲಿಲ್ಲ. ಆದರೆ ಕ್ರಿ. ಶ. ೧೧೩೫ರ ಸುಮಾರಿಗೆ ಧಾರವಾಡ ಜಿಲ್ಲೆಯ ಮುಳಗುಂದದಲ್ಲಿ ಆಗಿಹೋದ ನಯಸೇನನ 'ಧರ್ಮಾಮೃತ' ಕಾವ್ಯದಲ್ಲಿ 'ಅತಿಜಾಣನ ಗೋಣಿ ಬರಿದು' ಎಂಬ ಗಾದೆ ಇದೆ. ಕನ್ನಡದಲ್ಲಿ ಲುಪ್ತವಾಗಿರುವ ಪರಂಪರೆಯ ಅವಶೇಷಗಳು ಮರಾಠಿಯಲ್ಲಿ ದೊರೆಯುತ್ತವೆ, ಅದರಂತೆ ಮರಾಠೀ ಭಾಷೆ ಮತ್ತು ಸಂಪ್ರದಾಯಗಳಲ್ಲಿಯ ಸಮಸ್ಯೆಗಳಿಗೆ ಪರಿಹಾರ ಕನ್ನಡದಲ್ಲಿ ಸಿಗುತ್ತವೆ. 'ಕೈವಾರಿ' ಎಂಬ ಶಬ್ದ ಹಳೆಗನ್ನಡ ಸಾಹಿತ್ಯದಲ್ಲಿ ಹದಿಮೂರು ಮತ್ತು ಹದಿನಾಲ್ಕನೆಯ ಶತಮಾನಗಳವರೆಗೆ ಸಿಗುತ್ತಿದ್ದು ಮುಂದೆ ಅದರ ಪ್ರಯೋಗ ನಿಂತುಹೋಯಿತು. 'ಪತ್ಕರಣೇ' ಎಂಬ ಮರಾಠೀ ಶಬ್ದದ ಅರ್ಥಬೋಧ ಇಂದಿನ ಸ್ವರೂಪದಲ್ಲಿ ಆಗುವದಿಲ್ಲ. ಆದರೆ, ಕುಮಾರವ್ಯಾಸನು ಹೆಜ್ಜೆಹೆಜ್ಜೆಗೆ ಉಪಯೋಗಿಸುವ 'ಪತಿಕರಿಸಿದನು' ಎಂಬ ಪ್ರಯೋಗವನ್ನು ನೋಡಿದರೆ ಅದರ ಅರ್ಥರಹಸ್ಯ ಸ್ಪಷ್ಟವಾಗುತ್ತದೆ. 'ಇಸು' ಪ್ರತ್ಯಯದಿಂದ ಈ ಶಬ್ದವು ಮೂಲದಲ್ಲಿ ಕನ್ನಡವಲ್ಲ ಎಂದು ಸಿದ್ಧವಾಗುತ್ತದೆ. ಜ್ಞಾನೇಶ್ವರಿಯಲ್ಲಿ 'ಪದತೀರಾ' ಶಬ್ದದ ಪ್ರಯೋಗವಿದೆ. ಮರಾಠಿಯಲ್ಲಿಯ ಈ ಶಬ್ದವನ್ನು 'ಇಸು' ಪ್ರತ್ಯಯ ಹಚ್ಚಿ ಕುಮಾರವ್ಯಾಸ ಉಪಯೋಗಿಸಿದ್ದಾನೆ. 'ಪೋವಾಡಾ' ಎಂಬ ಶಬ್ದದ ಅರ್ಥ ತಿಳಿಯಬೇಕಾದರೆ ಕನ್ನಡದಲ್ಲಿ 'ಪವಾಡ' ಶಬ್ದದ ಹಳೆಯ ಪ್ರಯೋಗವನ್ನು ನೋಡಬೇಕು. ಚಮತ್ಕಾರ, ದಿವ್ಯ, ಅತಿಮಾನುಷ ಕೃತಿ ಎಂಬ ಅರ್ಥ ಈ ಶಬ್ದಕ್ಕಿದೆ. ಅದರಿಂದ ಒಬ್ಬ ವ್ಯಕ್ತಿಯ ಮಹಿಮೆಯನ್ನು ವರ್ಣಿಸುವ ಗೀತಗಳು 'ಪ್ರವಾಡೇ'-'ಪೋವಾಡೇ' ಎಂದು ರೂಢವಾದವು. ಮರಾಠಿಯಲ್ಲಿ ಈ ಶಬ್ದದ ಔಚಿತ್ಯ ಇಂದು ತಿಳಿಯದಂತಾಗಿದೆ. ಕನ್ನಡದಲ್ಲಿಯ 'ಓಲೀ' (ವಲ್ಲಿ) ಶಬ್ದ ಮಹಾನುಭಾವ ಸಾಹಿತ್ಯದಲ್ಲಿದ್ದದ್ದನ್ನು ಈಗಾಗಲೇ ಹೇಳಿಯಾಗಿದೆ. ಈ ಶಬ್ದ ಕನ್ನಡದ ಪ್ರೌಢ ಸಾಹಿತ್ಯಕ ಭಾಷೆಯಲ್ಲಿ ಸಿಗಲಾರದು. ಇದರ ಹಳೆಯ ಪ್ರಯೋಗವನ್ನು ಕಾಣಬೇಕಾದರೆ ಕನ್ನಡ ಸಾಹಿತ್ಯಜ್ಞರು ಚಕ್ರಧರನ ಲೀಳಾಚರಿತ್ರ' ಮತ್ತು 'ರುಕ್ಮಿಣೀ ಸ್ವಯಂವರ' ಈ ಕೃತಿಗಳ ಕಡೆಗೆ ಓಡಬೇಕಾಗುತ್ತದೆ. 'ಮುದ್ದಲ' ಶಬ್ದವೂ ಇದೇ ಬಗೆಯದಾಗಿದೆ. ಕನ್ನಡ ಭಾಷೆಯ ಯಾವದೇ ಸಾಹಿತ್ಯಕೃತಿಯಲ್ಲಿ ಅಥವಾ ಗಣಿತದ ಪುಸ್ತಕದಲ್ಲಿ ಈ ಶಬ್ದ ತಪ್ಪಿಕೂಡ ದೊರೆಯುವದಿಲ್ಲ. ಆದರೆ, ಹನ್ನೆರಡನೆಯ ಶತಮಾನದ ನಯಸೇನನ 'ಧರ್ಮಾಮೃತ'ದಲ್ಲಿ 'ಮೊದಲಂಕೊಂಡುಪತ್ರಮಂ ಸೀಳ್ವಂತೆ' ಎಂದು ಪ್ರಯೋಗವಿದೆ. 'ಮುದಲ' ಶಬ್ದ ಮರಾಠಿಯಲ್ಲಿ ಜ್ಞಾನೇಶ್ವರನಿಂದ ಹಿಡಿದು ಇಂದಿನ ಆಡುಭಾಷೆಯಲ್ಲಿಯೂ ಜೀವಂತವಾಗಿದೆ. ಕನ್ನಡ ಮಾತ್ರ ತನ್ನ ಈ ಸುಂದರವಾದ ಶಬ್ದಕ್ಕೆ ಎರವಾಗಿ 'ಅಸಲು' ಎಂಬ ಪರಕೀಯ ಶಬ್ದವನ್ನು ಉಪಯೋಗಿಸುತ್ತಿದೆ. ಕನ್ನಡ ಮೊದಲಲ್ಲಿಯೇ ತಪ್ಪಿತು. ಮುದಲ್ ಅಥವಾ ಮೊದಲ್ ಎಂದರೆ ಪ್ರಾರಂಭದ ಎಂದು ಅರ್ಥವಿದ್ದು ವ್ಯಾಪಾರ ಮತ್ತು ವ್ಯವಹಾರಗಳಲ್ಲಿ ಲಕ್ಷಣಾರ್ಥದಿಂದ ಈ ಶಬ್ದಕ್ಕೆ ಮೂಲಧನ ಅರ್ಥ ಬಂದಿತು. ನಯಸೇನನ ಮೇಲಿನ ಪ್ರಯೋಗದಲ್ಲಿ ಸಾಲದ ವ್ಯವಹಾರ ಮುಗಿದ ಮೇಲೆ ಪತ್ರವನ್ನು ಹರಿದುಹಾಕುವ ಇಂದಿನ ಪದ್ಧತಿ ಆ ಕಾಲಕ್ಕೂ ಪ್ರಚಲಿತವಾಗಿರುವದರ ವರ್ಣನೆ ಇದೆ. ಇಂಥ ಉಲ್ಲೇಖಗಳು ಪ್ರಾಚೀನ ಕಾಲದಲ್ಲಿ ಕರ್ಣಾಟ-ಮಹಾರಾಷ್ಟ್ರಗಳಲ್ಲಿ ರೂಢವಾಗಿದ್ದ ಸಾಮಾಜಿಕ ಪದ್ಧತಿಗಳ ಮೇಲೆ ಬೆಳಕು ಚೆಲ್ಲುತ್ತವೆ.

ಗಾದೆಮಾತು, ವಾಗ್ರೂಢಿಗಳು ಶಬ್ದಗಳು ಮೊದಲಾದ ಭಾಷಾವಿಷಯಕ ತೊಡಕುಗಳಂತೆ ಈ ಎರಡೂ ಪ್ರಾಂತಗಳ ಸೀಮೆಗಳು, ಮತ್ತು ಹೆಸರುಗಳು ಇವುಗಳ ಬಗ್ಗೆ 'ಇದು ಅಥವಾ ಅದು' ಎಂಬಂಥ ಭ್ರಮೆಗಳು ಆರಂಭದಿಂದ ಇಲ್ಲಿಯ ವರೆಗೆ ಹಾಗೇ ಉಳಿದುಕೊಂಡು ಬಂದಿವೆ. 'ದಕ್ಷಿಣ ಮಹಾರಾಷ್ಟ್ರ' ವೆಂದು ಮಹಾರಾಷ್ಟ್ರ ಕರೆದ ಪ್ರದೇಶಕ್ಕೆ ಕನ್ನಡಿಗರು 'ಉತ್ತರ ಕರ್ನಾಟಕ' ಎಂದು ಕರೆಯುತ್ತಾರೆ. ಇದರಲ್ಲಿ ಹೊಸದೇನೂ ಇಲ್ಲ. ಪ್ರಾಚೀನ ಕಾಲದಲ್ಲಿ ಕೂಡ ಇದೇ ರೀತಿ ಇತ್ತು. ಕರ್ಣಾಟಕದ ಸುಪ್ರಸಿದ್ಧ ಇತಿಹಾಸ ಸಂಶೋಧಕರಾಗಿದ್ದ ಮಂ ಗೋವಿಂದ ಪೈಯವರು ಭಾರತೀಯ ಇತಿಹಾಸ ತಜ್ಞರೆಂದು ಭಾರತದಲ್ಲಿ ಖ್ಯಾತರಾಗಿದ್ದಾರೆ. ಕರ್ಣಾಟ-ಮಹಾರಾಷ್ಟ್ರಗಳ ಪುರಾತನ ಇತಿಹಾಸವನ್ನು ಕೂಲಂಕಷವಾಗಿ ಅಭ್ಯಾಸ ಮಾಡಿದ್ದ ಅವರಿಗೆ ಈ ಎರಡೂ ಪ್ರಾಂತಗಳು ಅಭಿನ್ನವಾಗಿದ್ದು ಕರ್ಣಾಟಕವೆಂದರೆ ಮಹಾರಾಷ್ಟ್ರ, ಮಹಾರಾಷ್ಟ್ರವೆಂದರೆ ಕರ್ಣಾಟಕ ಎಂದು ಅನ್ನಿಸಿತ್ತು. 'ಕರ್ಣಾಟ' ಶಬ್ದದ ವ್ಯುತ್ಪತ್ತಿಯನ್ನು ಅವರು ಇದೇ ದೃಷ್ಟಿಯಲ್ಲಿ ನಿರ್ವಹಿಸಿದ್ದಾರೆ. ಕರಂ ಅಥವಾ ಕರು

ಎಂದರೆ ದೊಡ್ಡದು, ಎತ್ತರವಾದದ್ದು ಎಂದು ಅರ್ಥ. ಕರುನಾಡು ಎಂದರೆ ಎತ್ತರವಾದ ದೊಡ್ಡನಾಡು ಅಂದರೆ ಕರ್ಣಾಟ-ಮಹಾರಾಷ್ಟ್ರ ಎಂದು ಅವರ ನಿರ್ಣಯವಾಗಿತ್ತು. ಮತ್ತು 'ತಾರಾತಂತ್ರ'ವೆಂಬ ಪ್ರಾಚೀನ ಗ್ರಂಥ ವೊಂದರದಲ್ಲಿ ಮಹಾರಾಷ್ಟ್ರ ದೇಶದ ಹೆಸರು ಕರ್ಣಾಟವೆಂದು ಕೊಡಲಾಗಿದ್ದು, ಕರ್ಣಾಟ-ಮಹಾರಾಷ್ಟ್ರ ಒಂದೇ ದೇಶ ಎಂಬ ಉಲ್ಲೇಖವಿರುವುದೆಂದು ಪೈಯವರು ಹೇಳುತ್ತಾರೆ. ಈ ದೃಷ್ಟಿಯಿಂದ ಶಿ. ಎ. ಮಾಸ್ಪರ, ಆಯ್. ಸಿ. ಎಸ್. ಇವರ ವಾಕ್ಯ ಉಲ್ಲೇಖನೀಯವಾಗಿದೆ.[೫೫]

ಮಹಾರಾಷ್ಟ್ರದ ಅದ್ವಿತೀಯ ವಿದ್ವಾಂಸರು ಮತ್ತು ಸಂಶೋಧಕರಾಗಿದ್ದ ಡಾ|| ಭಾಂಡಾರಕರರು ಕೂಡ ಈ ಪ್ರದೇಶದ ಇತಿಹಾಸವನ್ನು ಬರೆಯುವಾಗ ಅದಕ್ಕೇನು ಹೆಸರು ಕೊಡಬೇಕೆಂದು ಗೊಂದಲದಲ್ಲಿ ಬಿದ್ದಿರಬೇಕು. ಮಹಾರಾಷ್ಟ್ರದ ಇತಿಹಾಸವೆನ್ನಬೇಕೆಂದರೆ ಬಾದಾಮಿ, ಮಳಖೇಡ, ಕಲ್ಯಾಣದಂಥ ಇಂದಿಗೂ ಕನ್ನಡ ಪ್ರದೇಶದಲ್ಲಿರುವ ರಾಜಧಾನಿಗಳು; ಕರ್ನಾಟಕದ ಇತಿಹಾಸವೆನ್ನಬೇಕೆಂದರೆ ಪುಲಿಕೇಶಿಯ ರಾಜ್ಯವನ್ನು ಕಂಡು ಹ್ಯೂಯನ್‌ತ್ಸಾಂಗ ಅಲ್ಲಿಯ ಜನರನ್ನು ಮಹಾರಾಷ್ಟ್ರೀಯರೆಂದು ಕರೆದಿದ್ದಾನೆ. ಚಾಲುಕ್ಯ-ರಾಷ್ಟ್ರಕೂಟರ ಸಂಬಂಧಿಕರೆಲ್ಲ ಉತ್ತರದ ಕಡೆಗೆ: ಈ ಎಲ್ಲ ಗೊಂದಲದಿಂದ ಬಿಡಿಸಿಕೊಳ್ಳಲು ಅವರು ತಮ್ಮ ಗ್ರಂಥಕ್ಕೆ "History of Deccan" 'ದಕ್ಷಿಣಾಪಥದ ಇತಿಹಾಸ' ಎಂಬ ಹೆಸರನ್ನು ಕೊಟ್ಟಿದ್ದಾರೆ.

ಮಂ. ಗೋವಿಂದ ಪೈ, ಭಾಂಡಾರಕರ ಮತ್ತು ಮಾಸ್ಪರರಂಥ ಆಧುನಿಕ ಸಂಶೋಧಕರ ಪರಿಸ್ಥಿತಿ ಹೇಗಿದೆಯೋ ಅದೇ ಪರಿಸ್ಥಿತಿ ಪ್ರಾಚೀನ ಕಾಲದಲ್ಲಿಯೂ ಇತ್ತು. ಮೇಲೆ ಹೇಳಿದ 'ತಾರಾತಂತ್ರ' ಗ್ರಂಥದಲ್ಲಿ ಮಹಾರಾಷ್ಟ್ರ-ಕರ್ಣಾಟಕಗಳು ಅಭಿನ್ನವೆಂದು ಉಲ್ಲೇಖಿಸಿದ್ದನ್ನು ಹೇಳಲಾಗಿದೆ. ನಂದಲಾಲ ಡೇ ಇವರ ಪ್ರಾಚೀನ ಸ್ಥಳನಾಮಗಳ ಕೋಶದಲ್ಲಿ ಕರ್ಣಾಟಕವನ್ನು ಕುಂತಲ ದೇಶವೆಂದು ಕರೆಯಲಾಗಿದೆ. 'ವಿಕ್ರಮಾಂಕದೇವ ಚರಿತೆ' ಎಂಬ ಹೆಸರಿನ ಕಾವ್ಯಕ್ಕೆ ಬರೆದ ಪ್ರಸ್ತಾವನೆಯಲ್ಲಿ ಕುಂತಲವೆಂದರೆ ಕರ್ನಾಟಕ ಎಂದು ಬುಲ್ಹರ ಬರೆದಿದ್ದಾರೆ. ಡಾ. ಬಿ. ಸಿ. ಲಾ ಇವರ ಅಭಿಪ್ರಾಯವೂ ಅದೇ ಆಗಿದೆ. ಬಾದಾಮಿಯ ಚಾಲುಕ್ಯರನ್ನು ತಮಿಳು ದೇಶದವರು 'ಕುಂತಲಾಧಿಪತಿ'ಗಳೆಂದು ಕರೆಯುತ್ತಿದ್ದರು. (Tamil Lexicon ಕುಂತಲ ನೋಡಿ). 'ವಿಕ್ರಮಾಂಕದೇವ ಚರಿತೆ'ಯ ಬಿಲ್ಹಣನು ಕಲ್ಯಾಣಿಯ ಚಾಲುಕ್ಯರನ್ನು 'ಕುಂತಲೇಂದು' ಎಂದು ಕರೆದಿದ್ದಾನೆ. ಸಾತಕರ್ಣಿ ರಾಜನನ್ನು ಕುಂತಲಾಧೀಶನೆಂದು ಕರೆದದ್ದರ ಉಲ್ಲೇಖ ವಾತ್ಸ್ಯಾಯನನ ಕಾಮಸೂತ್ರದಲ್ಲಿ ಒಂದು ಕಡೆಗೆ ಇದೆ. ಸಾತಕರ್ಣಿ ರಾಜನ ರಾಜಧಾನಿಯೋ ಪೈಠಣ (ಮಹಾರಾಷ್ಟ್ರ). ಬುಲ್ಹರನಂಥ ದಕ್ಷ ಸಂಶೋಧಕನ ಪ್ರಕಾರ ಕುಂತಲದ ಅರ್ಥ ಕರ್ಣಾಟಕವಾಗಿದ್ದರೆ ಪೈಠಣ ಕರ್ಣಾಟಕದಲ್ಲಿ ಬರುತ್ತದೆ. 'ಕರ್ಪೂರ ಮಂಜರಿ' ನಾಟಕದಲ್ಲಿ ವಿದರ್ಭವನ್ನು ಕುಂತಲವೆಂದು ಕರೆದಂತೆ ಕಾಣುತ್ತದೆ. ಈ ಗ್ರಂಥವನ್ನು ಸಂಪಾದಿಸಿದ ಡಾ|| ಸ್ಟೇನ ಅವರ ಟೀಕೆಯಲ್ಲಿ ಕುಂತಲ ದೇಶ ನರ್ಮದಾದಿಂದ ಕೃಷ್ಣಾ-ತುಂಗಭದ್ರೆಯ ವರೆಗೆ ಕುಂತಲದೇಶ ಹಬ್ಬಿತ್ತೆಂದು ಹೇಳಲಾಗಿದೆ.[೫೬] 'ವಾಚಸ್ಪತ್ಯ' ಮಹಾಕೋಶದಲ್ಲಿ ಶಕ್ತಿಸಂಗಮ ತಂತ್ರದಿಂದ ಒಂದು ಶ್ಲೋಕವನ್ನು ಉದ್ಧರಿಸಿ ಕುಂತಲದೇಶದ ಹರಹನ್ನು ವರ್ಣಿಸಲಾಗಿದೆ. 'ಕಾಮಗಿರೀಂ ಸಮಾರಭ್ಯ ದ್ವಾರಕಾಂತಂ ಮಹೇಶ್ವರೀ। ಶ್ರೀ ಕುಂತಲಾಭಿಧೋ ದೇಶಃ ಕಥಿತಃ ಪೂರ್ವ ಸೂರಿಭಿಃ॥' ಕುಂತಲ ದ್ವಾರಕಿಯವರೆಗೆ ಬಂದು ಮುಟ್ಟುತ್ತದೆ! ವಿದರ್ಭ ನಿಃಸಂಶಯವಾಗಿ ಮೂಲಮಹಾರಾಷ್ಟ್ರವಾಗಿರು ವದರಿಂದ. ವಿದರ್ಭ ಕುಂತಲವಾಗಿದ್ದರೆ, ನರ್ಮದೆಯಿಂದ ತುಂಗಭದ್ರೆಯ ವರೆಗೆ ಮಹಾರಾಷ್ಟ್ರವಾಗುತ್ತದೆ. ಮೈಸೂರಿನ ಕೆಲಭಾಗ ಕುಂತಲದಲ್ಲಿ ಬರುವದೆಂದು ಕನ್ನಡ ಜೈಮಿನಿಭಾರತದಿಂದ ಕಂಡುಬರುತ್ತದೆ. ಇದರಿಂದ ಕರ್ಣಾಟಕಕ್ಕೆ ಸ್ವತಂತ್ರವಾದ ಅಸ್ತಿತ್ವವೆಲ್ಲಿಂದ ಬಂದಿತು? ಇಷ್ಟೇ ಅಲ್ಲ ಕುಂತಲ ದ್ವಾರಕೆಯವರೆಗೆ ಅಂದರೆ ಲಾಡ ಲಾಟಕರ ಇವರೆಲ್ಲ ನಿಃಸಂಶಯವಾಗಿ ಮಹಾರಾಷ್ಟ್ರೀಯರೇ ಆಗಿಬಿಡುತ್ತಾರೆ.

ಬೃಹನ್ಮಹಾರಾಷ್ಟ್ರದ ಕಲ್ಪನೆ ಇತ್ತೀಚಿದನು. ೨೫-೩೦ ವರ್ಷ ಹಿಂದೆ ಯಾರಿಗೋ ಈ ಶಬ್ದ ಹೊಳೆಯಿತು. ಆದರೆ, ಬೃಹತ್ ಕರ್ಣಾಟಕವೆಂಬ ಶಬ್ದ ಹಳೆಯ ಒಂದು ಶಿಲಾಲೇಖದಲ್ಲಿದೆ.[೫೭] ಈ ಬೃಹತ್ ಕರ್ಣಾಟಕದಲ್ಲಿ ಮಹಾರಾಷ್ಟ್ರವು ಸಮಾವಿಷ್ಟವಾಗಿರಬೇಕು. ಲಾಟಕರ್ಣಾಟಕದ ಹಳೆ ಉಲ್ಲೇಖವನ್ನು ನೋಡಬೇಕು "ಜತ್ವಾ

ಚೋಳ ಕಲಿಂಗ ಸೇವುಣ ಬೃಹತ್ ಕರ್ಣಾಟ ಲಾಟಾಧಿಪಾನ್", "ಲಾಟ-ಕರ್ಣಾಟ-ಕರ್‍ಹಾಟ- ಕಲಿಂಗ-ಕೊಂಗ-ವಂಗ-ವೆಂಗಿ" 'ಜಿತ್ವಾವಂಗ-ತಿಲಂಗ-ಗುರ್ಜರ ಲಸತ್ ಕರ್ಣಾಟ- ಗೌಡಾಧಿಪಾನ್", "ಕರ್ಣಾಟ-ಲಾಟೋದ್ ಭಟ ಕ್ಷೋಣೀಪಾಲ ವಿಡಂಬನಃ ಪ್ರಾಚೀನ ಲೇಖನಗಳಲ್ಲಿ ಕಂಡುಬರುವ ಉಲ್ಲೇಖ ಕರ್ಣಾಟ ಮತ್ತು ಮಹಾರಾಷ್ಟ್ರ ಒಂದೇ ಇದ್ದದ್ದನ್ನು ತೋರಿಸುತ್ತವೆ.[೫೮] ಇಷ್ಟೇ ಯಾಕೆ, ಕ್ರಿಸ್ತಶಕದ ಪ್ರಾರಂಭದಲ್ಲಿ ಬರೆದ ಒಂದು ಕಥೆಯಲ್ಲಿ ಇದೇ ಬಗೆಯ ತಿಳುವಳಿಕೆ ರೂಢವಾಗಿದ್ದದ್ದು ಕಂಡುಬರುತ್ತದೆ. ಶೂದ್ರಕರಾಜನು ವೀರವರನೆಂಬ ತನ್ನ ಸೇವಕನಿಗೆ ಲಾಟ-ಕರ್ಣಾಟ ಎಂಬ ಸಂಯುಕ್ತ ದೇಶವನ್ನು ಕೊಟ್ಟನೆಂದು ವರ್ಣನೆ ಇದೆ. 'ಲಾಟದೇಶೇ ತತೋರಾಜ್ಯಂ ಸಕರ್ಣಾಟಯಂತೇ ನೃಪಃ'.

ಮೇಲಿನ ಲಾಟ-ಕರ್ಣಾಟ ಈ ಜೋಡು ಶಬ್ದದಿಂದ ಎರಡು ರೀತಿಯ ಅರ್ಥ ಹೊರಡಬಹುದಾಗಿದೆ: ೧) ಮಹಾರಾಷ್ಟ್ರ ಮತ್ತು ಕರ್ಣಾಟಕ ಆ ಕಾಲಕ್ಕೆ ಅಭಿನ್ನವಾಗಿದ್ದವು; ಮಹಾರಾಷ್ಟ್ರ ಕರ್ಣಾಟಕದಲ್ಲಿ ಅಂತರ್ಭೂತವಾಗಿತ್ತು ಇಲ್ಲವೆ ೨) ಮಹಾರಾಷ್ಟ್ರ ಆ ಕಾಲಕ್ಕೆ ವರ್‍ಹಾಟದಲ್ಲಿಯೇ ಇತ್ತು. ವರ್‍ಹಾಡದಿಂದ ಹೊರಗೆ ಅದು ಇನ್ನೂ ಹಬ್ಬತೊಡಗಿರಲಿಲ್ಲ. ಹೀಗೆ ಅರ್ಥ ಮಾಡದಿದ್ದರೆ ಲಾಟ-ಕರ್ಣಾಟ ಶಬ್ದವು ಅರ್ಥಹೀನವಾಗಿ ಬಿಡುತ್ತದೆ. 'ಲಾಟ-ಕರ್ಣಾಟ' ಶಬ್ದ ಕೇವಲ ಒಬ್ಬಿಬ್ಬರು ಉಪಯೋಗಿಸಿದ್ದಲ್ಲ. ತಾಮ್ರಪಟ, ಶಿಲಾಲೇಖಗಳನ್ನು ಬರೆಯಿಸುವ ಜವಾಬ್ದಾರರಾದ ಪರರಾಷ್ಟ್ರ ಮಂತ್ರಿ (ಸಂಧಿವಿಗ್ರಹಿ) ರಾಜಮಂತ್ರಿಗಳಿಂದ ಈ ಪರಿಭಾಷೆ ನೂರಾರು ವರ್ಷಗಳಿಂದ ಉಪಯುಕ್ತವಾಗುತ್ತಿತ್ತು. ಲಾಟದೇಶದ ಸೀಮೆ ಮುಗಿದೊಡನೆ ಕರ್ಣಾಟ ದೇಶದ ಸೀಮೆ ಸುರುವಾಗುತ್ತಿದ್ದರೆ ಲಾಟ ಶಬ್ದವು ಮುಂದೆ ಒಮ್ಮೆಲೆ ಕರ್ಣಾಟ ಶಬ್ದದ ಉಪಯೋಗ ಮಾಡುವದು ಯೋಗ್ಯವಲ್ಲ. ರಾಜರಾಜರ ಕೊಡುಕೊಳೆಯ ಮಧ್ಯೆ ರಾಜ್ಯದ ಸೀಮೆಗಳನ್ನು ಅರಿತಿದ್ದ ಹೊಣೆಗಾರ ವ್ಯಕ್ತಿಗಳು ಈ ಶಬ್ದವನ್ನು ಉಪಯೋಗಿಸಿದ್ದಾರೆ. ಇದು ನಿಜವಾಗಿದ್ದರೆ ಲಾಟದೇಶ ಮುಗಿದೊಡನೆ ಕರ್ಣಾಟ ದೇಶದ ಸೀಮೆ ಸುರುವಾಗುತ್ತದೆಂದು ಹೇಳುವದು ಕ್ರಮಪ್ರಾಪ್ತವಾಗುತ್ತದೆ. ಆದರೆ, ಇಂದು ಅಲ್ಲಿ ಕರ್ಣಾಟಕದ ಸುಳಿವು ಕೂಡ ಇಲ್ಲ. ಒಂದು ಕಾಲಕ್ಕೆ ಕರ್ಣಾಟವಿದ್ದ ಅವಶೇಷಗಳಾದರೂ ನೋಡಸಿಗುತ್ತವೆಯೇ? ಸ್ವಲ್ಪ ಸೂಕ್ಷ್ಮವಾಗಿ ಮತ್ತು ತರ್ಕಶುದ್ಧ ರೀತಿಯಲ್ಲಿ ಪರೀಕ್ಷಿಸಿದರೆ ಆ ಭಾಗದಲ್ಲಿ. ಪ್ರಾಚೀನ-ಕಾಲದಲ್ಲಿ ಕರ್ಣಾಟಕದ ಅಸ್ತಿತ್ವವಿದ್ದದ್ದಕ್ಕೆ ಸಕಾಷ್ಟು ಪ್ರಮಾಣಗಳು ದೊರೆಯುತ್ತವೆ ಮತ್ತು ಅದರ ವಿವರಣೆ, 'ಅವಳಿ ಸೋದರರು' ಎಂಬ ಪ್ರಕರಣದಲ್ಲಿ ಬಂದಿದೆ.

ವಾಲ್ಮೀಕಿ ರಾಮಾಯಣದಲ್ಲಿ ಈ ದೇಶವನ್ನು 'ವಿದರ್ಭಾನ್ ಋಚಿಕಾನ್ ಚೈವ' ಎಂದು ವರ್ಣಿಸಲಾಗಿದೆ. ಮಹಾಭಾರತದಲ್ಲಿ ಮತ್ತು ಹರಿವಂಶದಲ್ಲಿ ಋಚಿಕ ಅಥವಾ ಋಷಿಕ ದೇಶದ ಹೆಸರು ಬರುತ್ತದೆ. ಈ ಋಚಿಕ (ಋಷಿಕ)ರೆಂದರೆ ಅಶೋಕನ ಲೇಖನದಲ್ಲಿರುವ. ರಿಷ್ಟಿಕರು ರಿಷ್ಟಿಕ-ರಟ-ರಾಠ-ರಟ್ಟ ಇವರು ಕನ್ನಡಿಗರಾಗಿರಬೇಕೆಂಬ ನಿರ್ಣಯ. ಡಾ|| ಅಳತೇಕರರು ತಮ್ಮ ರಾಷ್ಟ್ರಕೂಟರ ಬಗ್ಗೆ ಬರೆದ ಗ್ರಂಥದಲ್ಲಿ ಬೇರೆ ಬೇರೆ ಕಾರಣಗಳನ್ನು ಕೊಟ್ಟು ಸಿದ್ಧಮಾಡಿ ತೋರಿಸಿದ್ದಾರೆ. ಅಶೋಕನ ಲೇಖದಲ್ಲಿ ರಿಷ್ಟಿಕರೊಡನೆ ಭೋಜಕರ ಉಲ್ಲೇಖವೂ ಇದೆ. ರಾಮಾಯಣದಲ್ಲಿ ಋಚಿಕರ ಜೊತೆಗೆ ವಿದರ್ಭಾನ್ ಎಂದು ವರ್ಣನೆ ಇದೆ. ಭೋಜಕರು ವಿದರ್ಭದ ರಾಜರಾಗಿದ್ದರು. ಇದರಿಂದ ಖಾರವೇಲದ ಮತ್ತು ಅಶೋಕನ ಲೇಖದಲ್ಲಿಯ ಭೋಜಕರೆಂದರೆ ವಿದರ್ಭದ ಜನರೆಂದು ಅರ್ಥವಾಗುತ್ತದೆ. ಪ್ರಥಮ-ಮಹಾರಾಷ್ಟ್ರವೆಂದರೆ ವರ್‍ಹಾಟ ಎಂದು ಸಿದ್ಧವಾಗಿ ಬಿಟ್ಟಿದೆ. ವರ್‍ಹಾಟದ ಜನ ಭೋಜಕರಾಗಿದ್ದರೆ ಭೋಜಕರ ಹತ್ತಿರ ರಿಷ್ಟಿಕರ ವಸಾಹತು ಇಲ್ಲವೆ ದೇಶ ಇರಲಿಕ್ಕೆ ಬೇಕು. ಅಶೋಕನ ಶಾಸನದಲ್ಲಿಯ ಭೋಜಕ-ರಿಷ್ಟಿಕರ ಉಲ್ಲೇಖದ ಮೇಲಿಂದ ಡಾ|| ಬಿ. ಸಿ. ಲಾ ಅವರು ಈ ಎರಡು ಜನಾಂಗ ಗಳ ದೇಶಗಳು ಹತ್ತಿರ ಹತ್ತಿರವಿರಬೇಕೆಂದು ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ. ಖಾನದೇಶಕ್ಕೆ ಒಂದು ಕಾಲಕ್ಕೆ ಋಚಿಕ-ಋಷಿಕ ಎಂಬ ಹೆಸರಿತ್ತು. ಈ ಋಚಿಕ ಅಥವಾ ಋಷಿಕರು ಭೋಜಕರು ಆಪ್ತಬಾಂಧವರಾಗಿದ್ದ ರಿಷ್ಟಿಕ ಅಥವಾ ರಾಷ್ಟ್ರಿಕರೇ ಇರಬೇಕೆಂದು ಹೇಳಬೇಕಾಗುತ್ತದೆ. ಏಕೆಂದರೆ ವಿದರ್ಭದ ಭೋಜಕರ ಹತ್ತಿರ ಖಾನದೇಶವನ್ನು

ಬಿಟ್ಟರೆ ಬೇಡೆರೆಡೆಗೆ ಈ ಹೆಸರಿನ ಜನರಿರುವದು ಅಸಾಧ್ಯ. ಋಚಿಕದೇಶ, ಗೋಪದೇಶ, ಅಶ್ಮಕ ಮೊದಲಾದ ಹೆಸರುಗಳು ಹಿಂದೆ ಬಿದ್ದು ಮೂಲಜನ ವಾಚಕ ಕನ್ನದೇಶ-ಖಾನದೇಶ ಈ ಹೆಸರು ಮುಂದೆ ತಲೆ ಎತ್ತಿತು. ವರ್ಹಾಟ-ಮರ್ಹಾಟ ಈ ಹೆಸರು ಈ ತರ್ಕವನ್ನು ಪುಷ್ಟೀಕರಿಸುತ್ತದೆ. ವಿದರ್ಭದಂಥ ಬೇರೆ ಹೆಸರು ಕೆಲಕಾಲ ರೂಢವಾಗಿತ್ತು. ಆದರೆ ಹೊಸದಾಗಿ ರೂಢವಾದ ಹೆಸರು ಹಿಂದೆ ಬಿದ್ದು ಮೂಲ ಮರ್ಹಾಟ (ವರ್ಹಾಟ) ಈ ಹೆಸರೇ ಇಂದಿನವರೆಗೆ ಗಟ್ಟಿಯಾಗಿ ನಿಂತಿದೆ. ಅದರ ಭಾಷಾಂತರವಾದ 'ಝಾಡೀ ಮಂಡಳ' ಕೂಡ ಗ್ರಂಥಸ್ಥವಾಗಿಯೇ ಉಳಿದುಬಿಟ್ಟಿತು.

ಈ ರೀತಿಯಿಂದ ಯಾರಿಂದ ಈ ಪ್ರದೇಶಕ್ಕೆ ಹೆಸರು ಬಂದಿತೋ ಆ ಕರ್ಣಾಟ-ಮರ್ಹಾಟರ ಪೂರ್ವಜರು, ವೇದ ಮತ್ತು ಭಾರತಕಾಲದ ಯದು-ತುರ್ವಸುಗಳು, ಅಶೋಕನ ಕಾಲದ ರಿಷ್ಟಿಕ-ಭೋಜಕರು ಮತ್ತು ಮೂಲ ಹಟ್ಟಿಕಾರ (ಕಣ್ಣಜನ ಮತ್ತು ಮರಹಟ್ಟೆಯರು)ರು ಅತಿ ಪ್ರಾಚೀನ ಕಾಲದಿಂದ ಹತ್ತಿರದ ಆಪ್ತ ಸಂಬಂಧಿಕರಂತೆ-ಅವಳಿ ಸೋದರರಂತೆ ಇದ್ದು ಬೆಳೆದು ಬಂದರೆಂಬ ಸಂಗತಿ ಸ್ಪಷ್ಟವಾಗುತ್ತಿದೆ.

ಯಾವ ಇತಿಹಾಸ ಈ ಎರಡು ಜನಾಂಗಗಳ ಆಪ್ತಸಂಬಂಧವನ್ನು ಮೇಲೆ ಹೇಳಿದಂತೆ ಪ್ರತ್ಯಯಕ್ಕೆ ತಂದಿತೋ ಅದೇ ಇತಿಹಾಸ ತೋರಿಸುವ ಮುಂದಿನ ಸಂಗತಿಗಳು ಅಭ್ಯಾಸಕ್ಕೆ ಯೋಗ್ಯವಾಗಿವೆ. ಕಾಲಗರ್ಭದಲ್ಲಿ ಪರಸ್ಪರ ವಿರುದ್ಧವಾಗಿರುವ ಘಟನೆಗಳು ಮುಳುಗಿ ಹೋಗಿರುತ್ತವೆ. ಕಾಲ ಅವುಗಳ ನಿರಪೇಕ್ಷ ಸಾಕ್ಷಿಯಾಗಿದೆ. ಆದರೆ, ಮನುಷ್ಯ ಮಾತ್ರ ಅವುಗಳನ್ನು ತನ್ನ ಸದ್ಯದ ಸ್ವಾರ್ಥಕ್ಕಾಗಿ ದುಡಿಯ ಹಚ್ಚುತ್ತಾನೆ. ಮನುಷ್ಯನೂ ಕಾಲನಂತೆ ತಟಸ್ಥವಾದ ನಿರಪೇಕ್ಷ ಬುದ್ಧಿಯಿಂದ, 'ಗುಣಾಃ ಗುಣೇಷು ವರ್ತಂತೇ' ಎಂಬ ದೃಷ್ಟಿಯಿಂದ ನೋಡಿದರೆ, ಅದರಿಂದ ದೊರೆಯುವ ವಿಶಾಲದರ್ಶನ ಅವನನ್ನು ಮನುಷ್ಯತ್ವದ ಉನ್ನತಶಿಖರಕ್ಕೆ ಒಯ್ದು ಮುಟ್ಟಿಸಬಹುದು. ಅದಕ್ಕಾಗಿ, ಈಗ ಮರ್ಹಾಟ ಕರ್ಣಾಟದ ಮೂಲ ಜನಾಂಗಗಳ ನಡುವಿನ ಅಂತಃಕರಣದ ಸಂಬಂಧ ಅಟ್ಟಿಸಿ ಹೋಗಿ ಇಂದಿನ 'ಯೂಯಂ ಯೂಯಂ ವಯಂ ವಯಂ' ಎಂಬಂಥ ವೃತ್ತಿ ಯಾಕೆ ನಿರ್ಮಾಣವಾಯಿತೆಂಬುದರ ಕಡೆಗೆ ತಿರುಗೋಣ.

ಐತಿಹಾಸಿಕ ದೃಷ್ಟಿಯಿಂದ ದೇವಗಿರಿಯ ಮತ್ತು ಹಳೆಬೀಡಿನ ಯಾದವರ ಯಾದವೀಕಲಹದಿಂದ ಈ ವಿತುಷ್ಟಿಗೆ ಉಕ್ಕು ಬಂದಂತೆ ಕಾಣುತ್ತದೆ. ಮುಂದೆ ಎರಡೂ ಪ್ರಾಂತಗಳಲ್ಲಿಯ ರಾಜ್ಯಾಭಿಮಾನ ಮತ್ತು ಪ್ರಾಂತಾಭಿಮಾನಗಳ ರಾಜಕಾರಣಕ್ಕೆ ಬಣ್ಣವೇರಿದಂತೆ ಈ ವಿತುಷ್ಟಿ ಇನ್ನಷ್ಟು ಉಗ್ರವಾಗತೊಡಗಿತು. ಆದರೆ ಇಂಥ ಮನೋವೃತ್ತಿಯಿಂದ ಎರಡೂ ಪ್ರಾಂತಗಳು ತಮ್ಮ ನಿಜವಾದ ಇತಿಹಾಸವನ್ನು ಅಭ್ಯಾಸ ಮಾಡಲು ಹೇಗೆ ಅಸಮರ್ಥವಾದವೆಂಬುದನ್ನು ಹಿಂದಿನ ಪ್ರತಿಪ್ರಕರಣದಲ್ಲಿ ಸೂಚಿಸಲಾಗಿದೆ. ಅರ್ಥಾತ್ ಇವೆಲ್ಲವುಗಳ ಸಮಗ್ರವಾದ ವಿವೇಚನೆಯ ಅಗತ್ಯವಿದೆ. ಆದರೆ, ಇದು ಒಬ್ಬ ವ್ಯಕ್ತಿಯಿಂದಾಗುವ ಕೆಲಸವಲ್ಲ. ಇದೆಲ್ಲದರ ಆಮೂಲಾಗ್ರವಾದ ಅಭ್ಯಾಸವಾಗಿ ಆ ರೀತಿಯ ಮಹಾಗ್ರಂಥವೊಂದು ತಯಾರಾಗಲು ಎಲ್ಲ ಅನುಕೂಲತೆಗಳಿರುವ ವಿಶ್ವವಿದ್ಯಾಲಯದಂಥ ಸಂಸ್ಥೆಗಳು ಮುಂದೆ ಬರುವ ಅಗತ್ಯವಿದೆ, ಇರಲಿ.

ರಿಷ್ಟಿಕ ಭೋಜಕರು ಖಾನದೇಶ ಮತ್ತು ವರ್ಹಾಡದಲ್ಲಿದ್ದರು. ಮತ್ತು ಅವರೇ ಕರ್ಣಾಟ-ಮರ್ಹಾಟಗಳ ಐತಿಹಾಸಿಕ ಕಾಲದ ಪೂರ್ವಜರು. ಇದು ನಿಜವಾಗಿದ್ದರೆ ಖಾನದೇಶದಿಂದ ಕರ್ಣಾಟಕ ಜಾರುತ್ತ ಕೃಷ್ಣಾ ನದಿಯವರೆಗೆ ಹೇಗೆ ಹಿಮ್ಮೆಟ್ಟಿತು, ಅಥವಾ ಮರ್ಹಾಟದಿಂದ (ವರ್ಹಾಟ) ಮಹಾರಾಷ್ಟ್ರ ಹೇಗೆ ಆಯಿತು? ಈ ಪ್ರಶ್ನೆಯ ಸರಳ ಉತ್ತರವೆಂದರೆ ಆರ್ಯೀಕರಣದ ಪ್ರಬಲವಾದ ಪ್ರಕ್ರಿಯೆಯಲ್ಲಿ ಮರ್ಹಾಟ ಮಹಾರಾಷ್ಟ್ರವಾಯಿತು. ಮಹಾರಾಷ್ಟ್ರದ ವಿಸ್ತಾರವಾಗುತ್ತ ಕರ್ಣಾಟಕವೂ ಅದರ ಕಕ್ಷೆಯಲ್ಲಿ ಸಿಕ್ಕುಬಿದ್ದಿತು. ಐತಿಹಾಸಿಕ ಕಾಲದ ಕೆಲ ಉಲ್ಲೇಖಗಳಿಂದ ಸಾಮಾನ್ಯವಾಗಿ ಪ್ರತಿ ೨೦೦-೨೫೦ ವರ್ಷಗಳಿಂದ ಮಹಾ ರಾಷ್ಟ್ರದ ಸೀಮೆ ದಕ್ಷಿಣದಲ್ಲಿ ಒಂದೊಂದು ನದಿಯನ್ನು ದಾಟಿ ಹೋದದ್ದು ಕಾಣುತ್ತದೆ. ನರ್ಮದೆಗೆ ಆರ್ಯಾವರ್ತ ಮುಗಿಯುತ್ತದೆಂದು ಮನುಸ್ಮೃತಿ ಮೊದಲಾದವುಗಳಿಂದ ನಿಶ್ಚಿತವಾಗಿ ತಿಳಿಯುತ್ತದೆ. ಆದರು, ವೈದಿಕ ಋಷಿಗಳ ಸಂಬಂಧ ವೇದಕಾಲದಿಂದಲೇ

ದಕ್ಷಿಣಾಪಥದೊಂದಿಗೆ ಇತ್ತು ಎಂದು ಅಗಸ್ತ್ಯನ ಕಥೆ ಸೂಚಿಸುತ್ತದೆ. ಅಗಸ್ತ್ಯ ತಮಿಳುನಾಡಿನ ವರೆಗೆ ಆರ್ಯ ಸಂಸ್ಕೃತಿಯನ್ನು ಪ್ರಸಾರ ಮಾಡಿದನೆಂದು ಆ ನಾಡಿನ ರೂಢ ಕಥೆಗಳು ಮತ್ತು ಹಳೆಯ ಪರಂಪರೆ ತಿಳಿಯಪಡಿಸುತ್ತವೆ. ವರ್ಹಾಟದ ಹೆಸರು ವಿದರ್ಭವೆಂದು ಮಹಾಭಾರತದ ಪೂರ್ವದ ಉಲ್ಲೇಖಗಳಿವೆ. ದಕ್ಷಿಣ ಪಥದಲ್ಲಿ ಆರ್ಯರ ಮೊದಲ ವಸಾಹತು, ನರ್ಮದೆಯ ದಕ್ಷಿಣಕ್ಕೆ, ವರ್ಹಾಟದಲ್ಲಿ ಪ್ರಾರಂಭವಾಯಿತೆಂದು ಎಲ್ಲ ಸಂಶೋಧಕರ ಅಭಿಪ್ರಾಯವಿದೆ. ನರ್ಮದಾನದಿ ಒಂದು ಕಾಲಕ್ಕೆ ಆರ್ಯಾವರ್ತದ ದಕ್ಷಿಣ ಸೀಮೆಯಾಗಿತ್ತೆಂಬುದರ ಬಗ್ಗೆ ಸಂಶಯವಿಲ್ಲ. ಆದರೆ, 'ಗೋದಾವರ್ಯಾಃ ದಕ್ಷಿಣೇ ತೀರೇ' ಈ ಸಂಕಲ್ಪ ಮಂತ್ರದಲ್ಲಿ ನರ್ಮದಾ ನದಿಯ ಹೆಸರು ನಿಜವಾಗಿ ಇರಬೇಕಾಗಿತ್ತು. ಇದರಿಂದ, ಈ ಮಂತ್ರರಚನೆಯ ಕಾಲದಲ್ಲಿ ಆರ್ಯಾವರ್ತ ಗೋದಾವರಿಯ ವರೆಗೆ ಬಂದು ಮುಟ್ಟಿತ್ತೆಂದು ಹೇಳಬೇಕಾಗುತ್ತದೆ. ಎರಡನೆಯ ಪುಲಿಕೇಶಿಯ ಹೊತ್ತಿಗೆ ಹ್ಯುಯತನ್‌ತ್ಸಾಂಗನೆಂಬ ಚೀನೀಪ್ರವಾಸಿ ಈ ದೇಶಕ್ಕೆ ಬಂದ. ಫ್ಲೀಟನ ಅಭಿಪ್ರಾಯದಂತೆ 'ಮೊಹೊಲೋಚಾ'ದ ಒಂದು ರಾಜಧಾನಿ ನಾಶಿಕವಾಗಿರಬೇಕು. ಇದರಿಂದ ಏಳನೆಯ ಶತಮಾನದಿಂದ ಮಹಾರಾಷ್ಟ್ರದ ವಿಸ್ತಾರ ಗೋದಾವರಿಯವರೆಗೆ ಆಯಿತೆಂದು ಹೇಳಬೇಕಾಗುತ್ತದೆ.

ಅಮೋಘವರ್ಷ-ನೃಪತುಂಗ ಈ ರಾಷ್ಟ್ರಕೂಟ ರಾಜನಿಂದ ಪ್ರಸಿದ್ಧವಾದ ಕವಿರಾಜಮಾರ್ಗದಲ್ಲಿ ಕರ್ಣಾಟದ ಮರ್ಯಾದೆ ಗೋದಾವರಿಯವರೆಗೆ ಇತ್ತೆಂದು ಹೇಳಲಾಗಿದೆ. 'ಕಾವೇರಿಯಿಂದಮಾ ಗೋದಾವರಿ ವರಮಿರ್ದ ನಾಡದಾ ಕನ್ನಡ' ಈ ಆಧಾರದ ಮೇಲಿಂದ ನಾಶಿಕ ಜಿಲ್ಲೆಯೊಳಗಿನ ಕಾವಡಗೌಳಿ ಮತ್ತು ವೀರಗಲ್ಲುಗಳನ್ನು ಲೆಕ್ಕಕ್ಕೆ ಹಿಡಿದರೆ ಕರ್ಣಾಟ ಗೋದಾವರಿಯವರೆಗೆ ಇತ್ತೆಂಬ ವಿಧಾನ ಕಾವ್ಯದೊಳಗಿನ ಅತಿಶಯೋಕ್ತಿಯಲ್ಲ ಎಂದು ಖಾತ್ರಿಯಾಗಬಹುದು. ಯಾದವರ ಕಾಲದವರೆಗೆ ಕರ್ಣಾಟಕದ ಉತ್ತರದ ಸೀಮೆ ಗೋದಾವರಿ ಇತ್ತೆಂಬುದಕ್ಕೆ ಪ್ರಮಾಣಗಳು ದೊರೆಯುತ್ತವೆ. ಆದರೂ ಕರ್ನಾಟಕದಲ್ಲಿ ಒಳಗಿಂದೊಳಗೆ ಅರಿಯದಂತೆ ಮಹಾರಾಷ್ಟ್ರೀಕರಣ ನಡೆದಿತ್ತೆಂಬುದೂ ಅಷ್ಟೇ ನಿಜವಾಗಿದೆ.

ಅ) ಮಹಾನುಭಾವ ಲೀಳಾಚರಿತ್ರೆಯಲ್ಲಿ ಈ ಉಲ್ಲೇಖವಿದೆ: ಸಾಠಿ ಲಕ್ಷ ಮಹಾರಾಷ್ಟ್ರ। ತೇಹಿ ವಸವಿಲೇ ಗಂಗಾತೀರೂ ತ್ರ್ಯಂಬಕ ವೇರ್ಥಿ ।। ಆರ್ಯರಿಗೆ ಗೋದಾವರಿ ಗಂಗೆಯಾಗಿ ಕಾಣುವದು ಸ್ವಾಭಾವಿಕವಾಗಿದೆ।

ಬ) ಐಸೇ ಯುಗೀ ಪರೀ ಕಳೀ। ಆಣಿ ಮಹಾರಾಷ್ಟ್ರ ಮಂಡಳೀ। ಶ್ರೀ ಗೋದಾವರೀಚ್ಯಾ ಕೂಲೀ।। ಜ್ಞಾನೇಶ್ವರಿ (೧೮-೧೮-೩)

ಅ) ಮುಸಲ್ಮಾನೀ ಆಳಿಕೆಯಲ್ಲಿ ಬಹಮನಿ ರಾಜರು ವರ್ಹಾಡೀ (ಮರಾಠಿ) ಜನರಿಗೇ ಹೆಚ್ಚಾಗಿ ನೌಕರಿ ಕೊಡುತ್ತಿದ್ದರು. ಯಾಕಂದರೆ ವಿಜಯನಗರದ ಕನ್ನಡ ರಾಜನೊಡನೆ ಯುದ್ಧ ಮಾಡಲು ಕನ್ನಡಿಗರ ಉಪಯೋಗವಾಗದೆಂದು ಸ್ಪಷ್ಟವಾಗಿತ್ತು. (ಮರಾಠೀ ಜ್ಞಾನಕೋಶ ನೋಡಿ. ಮಹಾರಾಷ್ಟ್ರ ಸಾರಸ್ವತದಲ್ಲಿ ನಂತರ ಮುಂದೆ ಬಂದ ಮಹಾರಾಷ್ಟ್ರೀಯರ ಬಗ್ಗೆ ಮಾಹಿತಿ ದೊರೆಯುತ್ತದೆ.)

ಬ) ಕೈ. ಪಾಂಗಾರಕರ ಇವರು ತಮ್ಮ ಒಂದು ಮುದ್ರಿತ ವ್ಯಾಖ್ಯಾನದಲ್ಲಿ ಈ ಮಾಹಿತಿಯನ್ನು ಕೊಟ್ಟಿದ್ದಾರೆ. ವಿಜಾಪುರದ ಆದಿಲಶಾಹನ ದರಬಾರಿನಲ್ಲಿ ಮುಕುಂದರಾವನೆಂಬ ಸರದಾರನಿದ್ದ. ಈ ಮರಾಠಾ ಸರದಾರನ ತಂಗಿಯ ಮೇಲೆ ಮೋಹಗೊಂಡ ಆದಿಲಶಹ ಅವಳನ್ನು ತನ್ನ ಜನಾನಾಕ್ಕೆ ಸೇರಿಸಿಕೊಂಡ. ಮುಂದೆ ಅವಳಿಂದ ವಿಜಾಪುರದ ದರ್ಬಾರಿನಲ್ಲಿ ಮರಾಠಿಗೆ ಮಹತ್ವ ಬಂದಿತು.

ವಿಜಾಪುರದ ವರೆಗೆ ಮರಾಠಿ ಬಂದಿತೆಂದು ಹೇಳುವ ಪಾಂಗಾರಕರರ ಮಾತಿಗೆ ಪುಷ್ಟಿ ನೀಡುವ ಉಲ್ಲೇಖ ಒಂದು ಹಳೆಯ ಕನ್ನಡ ಕೈಫಿಯತ್ತಿನಲ್ಲಿ ದೊರೆಯುತ್ತದೆ.[೫೯]

ರಕ್ಕಸತಂಗಡಗಿಯ ಕಾಳಗದಲ್ಲಿಯ ಪರಾಜಯದ ನಂತರ ವಿಜಯನಗರದ ರಾಜನು ಪೆನುಗೊಂಡೆಗೆ ರಾಜಧಾನಿಯನ್ನು ಸ್ಥಳಾಂತರಿಸಿದನು. ವಿಜಯನಗರದ ರಾಜರಿಗೆ 'ಕರ್ನಾಟಕ ಸಿಂಹಾಸನಾಧೀಶ್ವರ'ನೆಂದು ಬಿರುದು ಇತ್ತು. ಆದ್ದರಿಂದ ಅವರ ರಾಜಧಾನಿ ಇದ್ದಲ್ಲಿ ಕರ್ನಾಟಕ ರಾಜ್ಯ! ಆದರೆ, ಪೆನುಗೊಂಡೆ ತೆಲುಗು ಪ್ರಾಂತದಲ್ಲಿತ್ತು! ಈ ರೀತಿಯಲ್ಲಿ ಕರ್ನಾಟಕ ಪರಾಧೀನವಾಗಿ, 'ಕರ್ಣೇ ಅಟತಿ' ಎಂಬುದು ನಿಜವಾಯಿತು. ವಿಜಾಪುರದವರೆಗೆ ಮಹಾರಾಷ್ಟ್ರ ಬಂದಿತು!! ಮಹಾಕವಿ ಮುಕ್ತೇಶ್ವರನ ಸಮಾಧಿ ಕುರುಂದವಾಡದ ಹತ್ತಿರದ ತೇರವಾಡದಲ್ಲಿದೆ. 'ಮುದಗಲ್ಲ' ಎನ್ನುವದು ಅವನ ಅಡ್ಡ ಹೆಸರಾಗಿದ್ದರೆ ಅದು ಕನ್ನಡ ಮನೆತನವಾಗುತ್ತದೆ. ಅವನ ಕುಲದೇವರು ಸೋವಾರಿಯ ಭೈರವ. ಸೊಲ್ಲಾಪುರದ ಪೂರ್ವದ ಹೆಸರು ಸೊನ್ನಲಾಪುರವೆಂದು ಹಳಗನ್ನಡ ಸಾಹಿತ್ಯದಿಂದ ತಿಳಿಯುತ್ತದೆ. ಸೊನ್ನಲಾಪುರ ಸೋನಾರಪುರವಾಗುವದು ಶಕ್ಯವಿದೆ. ಏಕನಾಥನ ಹೆಂಡತಿ ವಿಜಾಪುರದವಳೆಂದು ಶ್ರೀ ಪಾಂಗಾರಕರ ಹೇಳುತ್ತಾರೆ.

ಕ) ಕರ್ನಾಟಕದಲ್ಲಿಯ ಗ್ರಾಮನಾಮಗಳಲ್ಲಿಯ ಪ್ರಮಾಣಗಳು ವಿಚಾರಾರ್ಹವಾಗಿವೆ. ಧಾರವಾಡ ಜಿಲ್ಲೆಯಷ್ಟೇ ಏಕೆ, ಮೈಸೂರಿನವರೆಗೆ ಕೂಡ 'ಆರೇ' ಜನರಿದ್ದದ್ದು ಕಂಡುಬರುತ್ತದೆ. ಉದಾ : ಆರೇ ಕುರಹಟ್ಟಿ, ಆರೇ ಹೊಸೂರ, ಆರೇ ಮಲ್ಲಾಪುರ. ಆರೇ ಲಕಮಾಪುರ ಮೊದಲಾದವು.

ಡ) ಸೊರಬ ತಾಲ್ಲೂಕಿನಲ್ಲಿ (ಮೈಸೂರ) ವೀರಗಲ್ಲಿನ ಲೇಖದಲ್ಲಿ 'ಆರಿಯ ನಾಯಕರ್ ಮುನಿದು... ತುರುವಂ ಕೊಲ್ಲುವಲ್ಲಿ (ಎದುರಿಸಿ) ಮಲ್ಲಿಶೆಟ್ಟಿ ಮಡಿದ' (E.p. 1225 E.p Carnatica VIII . IX Bn. Dg. ; XII p.48)

೧೩ನೆಯ ಶತಕದ ಆರಂಭದಲ್ಲಿಯೇ ಮರಾಠೆಯರು ಕರ್ನಾಟಕದಲ್ಲಿ ಎಲ್ಲಿಯವರೆಗೆ ಪಸರಿಸಿದ್ದರೆಂದು ಮೇಲಿನ ಸಂಗತಿಯಿಂದ ತಿಳಿದುಬರುತ್ತದೆ. ಇದರ ನಿದರ್ಶನ ಇನ್ನೊಂದು ರೀತಿಯಿಂದಲೂ ಸಿಗಬಹುದಾಗಿದೆ. ನಮ್ಮ ದೇಶ ಪವಿತ್ರ, ಇತರರದು ಅಪವಿತ್ರ, ಪತಿತ ಇದು ಮನುಷ್ಯನ ಪ್ರವೃತ್ತಿ. ಜಗತ್ತಿನಲ್ಲಿ ಎಲ್ಲರಲ್ಲಿಯೂ ಒಂದೇ ರೀತಿ ಇದೆ. ಪಂಚನದ ದೇಶ ಪವಿತ್ರವೆಂದು ಒಂದು ಕಾಲಕ್ಕೆ ಅನಿಸುತ್ತಿತ್ತು. ಆದರೆ, ಮುಂದೆ ಆರ್ಯಾವರ್ತದ ಸೀಮೆಗಳು ವಿಂಧ್ಯಪರ್ವತವನ್ನು ಮುಟ್ಟಿದವು. ಆ ಪರ್ವತದ ಹೆಸರು ಪಾರಿಯಾತ್ರವೆಂದು ಇದೆ. ದಕ್ಷಿಣಾಪದ-ದಕ್ಷಿಣಾಪಥವು 'ಅಯಜ್ಞೀಯ ಭೂಮಿ' ಎಂದು ನಿರ್ಣಯವಾಗಿತ್ತು. ಅಪವಿತ್ರ, ಬಹಿಷ್ಕೃತರ ಭೂಮಿಯೆಂದು ಠರಾವಾಗಿ ಹೋಗಿತ್ತು.

ಇಲ್ಲಿಯ ಜನರನ್ನು "ಸಂಕೀರ್ಣಾಚಾರ ಧರ್ಮಾಃ, ಪಶುಧರ್ಮಾಃ, ಪಾಪಾಃ, ಮ್ಲೇಂಛ್ಯಾಃ" ಎಂದು ನಿಂದಾತ್ಮಕ ವಿಶೇಷಣಗಳಿಂದ ವರ್ಣಿಸಲಾಗಿದೆ. ಮಹಾಭಾರತ, ಮನುಸ್ಮೃತಿ ಮೊದಲಾದ ಗ್ರಂಥಗಳಲ್ಲಿ ಇಂಥ ಅವತರಣಿಕೆಗಳು ದೊರೆಯುತ್ತವೆ. 'ಭಾರತೀಯ ಭೂಘಟನಾ' ಎಂಬ ಒಂದು ಗ್ರಂಥದಲ್ಲಿ ಈ ದೇಶದ ಭೂಮಿಯನ್ನು ಸಾತ್ವಿಕ, ರಾಜಸ, ತಾಮಸ ಎಂದು ವಿಂಗಡಿಸಲಾಗಿದೆ.

ಹಿಮವದ್ ವಿಂಧ್ಯಯೋರ್ಮಧ್ಯೇ ಸಾತ್ವಿಕಂ ಭೂತಲಂ ಸ್ಮೃತಂ।
ನಾಗರಸ್ತು ಸ್ಮೃತೋ ದೇಶೋ ಹಿಮವದ್ ವಿಂಧ್ಯಮಧ್ಯಗಃ॥
ವಿಂಧ್ಯಶೈಲಾದಿ ಕೃಷ್ಣಾಂತಂ ರಾಜಸಂ ಪರಿಕೀರ್ತಿತಂ।
ತುಂಗಕೃಷ್ಣಾದಿ ಕನ್ಯಾಂತಂ ತಾಮಸಂ ಭೂತಲಂ ಸ್ಮೃತಂ॥
ಕೃಷ್ಣಾಯಾ ದಕ್ಷಿಣೋ ಭಾಗಃ ತಾಮಸಃ ಪರಿಕೀರ್ತಿತಃ ೬೦

ತಮ್ಮ ದೇಶವಾದರೆ ಅದು ಸಾತ್ವಿಕ, ಬಹಳವಾದರೆ ರಾಜಸ, ನಾಗರದೇಶ; ಮತ್ತು ಕೃಷ್ಣೆ ಮತ್ತು ತುಂಗಭದ್ರೆಯ ದಕ್ಷಿಣಕ್ಕಿರುವದೆಲ್ಲ ತಾಮಸ ಅಸಂಸ್ಕೃತ ದೇಶ.

ಈ ಗ್ರಂಥ ರಚನೆಯ ಕಾಲ ತಿಳಿಯುವಂಥದ್ದಿದೆ. ಕೃಷ್ಣೆಯ ವರೆಗೆ ಮಹಾರಾಷ್ಟ್ರದ ಸೀಮೆಗಳು ಬಂದಿವೆ, ಅವು ತುಂಗಭದ್ರೆಯ ವರೆಗೆ ಹಬ್ಬಲಿವೆ-ಇಂಥ ಕಾಲಕ್ಕೆ ಈ ಗ್ರಂಥವನ್ನು ಬರೆದಿರಬೇಕು. ಏಕೆಂದರೆ ತುಂಗೆಯ ವರೆಗಿನ ಭೂಮಿ ಒಮ್ಮೆ ರಾಜಸವಾದರೆ ಕೃಷ್ಣಾನದಿ ರಾಜಸಭೂಮಿಯ ದಕ್ಷಿಣದ ಸೀಮೆಯಾಗುತ್ತದೆಂದು ಹೇಳಲು ಸಾಧ್ಯವಾಗುತ್ತದೆ. ಆದರೆ, ೧೨೦೦-೧೩೦೦ರ ಸುಮಾರಿಗೆ ಇದ್ದ ಹರದತ್ತ ಭಾರತದ ಸೀಮೆಗಳನ್ನು ಸ್ಪಷ್ಟವಾಗಿ ಹೇಳಿದ್ದಾನೆ. ಅದು ಹೀಗೆ: "ಲೋಕೋಽಯಂ ಭಾರತಂ ವರ್ಷಂ ಶರವತ್ಯಾಸ್ತು ಯೋಽವಧೇಃ" ಅಂದರೆ ಈ ಸುಮಾರಿಗೆ ಆರ್ಯಾವರ್ತದ ಸೀಮೆ ಶರಾವತೀ ನದಿ (ಗೇರು ಸೊಪ್ಪೆ) ಯ ವರೆಗೆ ಬಂದು ಮುಟ್ಟುತ್ತದೆ. ಅಂದರೆ ಮಹಾರಾಷ್ಟ್ರ ಇಲ್ಲಿಯವರೆಗೆ ಹಬ್ಬಿಕೊಂಡಿತು.

ಈ ಮಹಾರಾಷ್ಟ್ರೀಕರಣ ಹೇಗಾಯಿತು ಎಂಬುದು ಮುಂದಿನ ಘಟನೆಗಳಿಂದ ತಿಳಿದುಬರುತ್ತದೆ. ವೇದಕಾಲೀನ ಸಂಸ್ಕೃತದಲ್ಲಿ ಸಂಸ್ಕೃತೇತರ ಶಬ್ದಗಳು, ಕೆಲ ದ್ರಾವಿಡ ವರ್ಗೀಯ ಶಬ್ದಗಳು ಹೊಕ್ಕುಬಿಟ್ಟಿವೆ. ಅಂದರೆ, ಆ ಕಾಲಕ್ಕೆ ಬೇರೆ ಭಾಷೆಗಳನ್ನಾಡುವ ಜನ ಇದ್ದರು ಎನ್ನುವದು ಸ್ಪಷ್ಟ. ವೇದ ಮತ್ತು ಉಪನಿಷತ್ತುಗಳಲ್ಲಿ 'ಚಂದ್ರ', 'ಮಟಚೀ', 'ಆಲರ್ಕ' ಇಂಥ ಶಬ್ದಗಳಿವೆ. ಇವು ಪುರಭಾಷೆಯವಾಗಿದ್ದರೆ ಈ ಭಾಷೆಯಲ್ಲಿ ಗ್ರಂಥಗಳು ರಚಿತವಾಗಿರಬೇಕು, ಪಂಚನದ ದೇಶದಲ್ಲಿಯೇ ಈ ಜನ ಇದ್ದಿರಬಹುದಾಗಿದೆ. ಆರ್ಯರ ಸಂಪರ್ಕ ಇವರೊಡನೆ ಅಲ್ಲಿಯೇ ಮೊದಲು ಆಗಿರಬೇಕು. ಚಂದ್ರ+ಮಸ್, ತುರ್-ವಸುದಂಥ ಎರಡು ಭಿನ್ನ ಭಾಷೆಗಳ ಶಬ್ದಗಳಿಂದ ತಯಾರಾದ ಜೋಡು ಶಬ್ದಗಳು ಆ ವೇಳೆಗೆ ರೂಢಿಯಲ್ಲಿ ಬಂದಿರಬೇಕು-ಇದೆಲ್ಲ ನಿಜವಾಗಿದ್ದರೆ ತಥಾಕಥಿತ ದ್ರವಿಡ ಜನರ ಆರ್ಯೀಕರಣಕ್ಕೆ ಋಗ್ವೇದ ಕಾಲದಲ್ಲಿಯೇ ಪ್ರಾರಂಭವಾಗಿರಬೇಕು. ಇಬ್ಬರು ಭಿನ್ನಭಾಷಿಕರ ಸಂಬಂಧ ಬಂದು ಮಿಶ್ರಣಕ್ಕೆ ಆರಂಭವಾದ ಮೇಲೆ ಪರಸ್ಪರ ಭಾಷೆಗಳ ಪ್ರಭಾವ ಒಂದರ ಮೇಲೊಂದು ಹೇಗೆ ಆಯಿತೆಂಬುದರ ಸೂಕ್ಷ್ಮವಾದ, ಸಮಗ್ರವಾದ ಅಭ್ಯಾಸ ತಜ್ಞರಿಂದ ಆಗಬೇಕಾಗಿದೆ. ಅದರ ಸಹಾಯದಿಂದ ಈ ಸಮಸ್ಯೆಗೆ ಪರಿಹಾರ ಸಿಗುತ್ತದೆ. 'ಭಾಷಿಕ ಪ್ರಮಾಣಗಳು' ಈ ಪ್ರಕರಣದಲ್ಲಿ ಅದರ ವಿವೇಚನೆ ಇದೆ.

ಐತಿಹಾಸಿಕ ಕಾಲದಲ್ಲಿಯ ಕೆಲಸಂಗತಿಗಳು ವಿಚಾರಾರ್ಹವಾಗಿವೆ. ವೈವಾಹಿಕ ಸಂಬಂಧದಿಂದ ದಕ್ಷಿಣದಲ್ಲಿ ಮಹಾರಾಷ್ಟ್ರೀಕರಣ ವೇಗವಾಗಿ ನಡೆಯಿತು. ಅಗಸ್ತ್ಯ ವಿದರ್ಭಕನ್ಯೆಯಾಗಿದ್ದ ಲೋಪಾಮುದ್ರೆಯನ್ನು ಮದುವೆಯಾದ. ಶುಕ್ರಾಚಾರ್ಯರ ಮಗಳು ದೇವಯಾನಿ ಯಯಾತಿಯನ್ನು ಮದುವೆಯಾದಳು. ಈ ಪ್ರಕಾರದ ಇತಿಹಾಸ ಪೂರ್ವದ ಅನುಲೋಮ-ಪ್ರತಿಲೋಮ ವಿವಾಹಗಳನ್ನು ಅಷ್ಟೊಂದಾಗಿ ಪರಿಶೀಲಿಸದೆ ಇತ್ತೀಚಿನ ಕೆಲವು ಘಟನೆಗಳ ಬಗ್ಗೆ ವಿಚಾರ ಮಾಡಬಹುದು. ವೈವಾಹಿಕ ಸಂಬಂಧದಿಂದ ಕನ್ನಡದ ಮನೆತನಗಳು ಮೊದಲು ಪ್ರಾಕೃತ ಮೇಲೆ ಮರಾಠಿಯಾದವು. ಶಾತವಾಹನರದೊಂದೇ ಇಂಥ ಉದಾಹರಣೆಯಲ್ಲ. ಚಾಲುಕ್ಯ, ಕದಂಬ ಮೊದಲಾದ ರಾಜಮನೆತನಗಳ ಹೆಸರಿನಂಥ ಅಡ್ಡಹೆಸರು ಮರಾಠೆಯರಲ್ಲಿ ಇವೆ. ಆದರೆ, ಕನ್ನಡಿಗರಲ್ಲಿ ಅವು ಉಳಿದಿಲ್ಲ. ರಾಷ್ಟ್ರಕೂಟ ರಾಜಮನೆತನದಲ್ಲಿ ಮಧ್ಯ ಹಿಂದೂಸ್ತಾನದ ತ್ರಿಪುರಿಯಲ್ಲಿಯ ಚೇದಿವಂಶದ ಕನ್ಯೆಯೊಡನೆ ಮದುವೆಯಾಗುವ ರೂಢಿ ಎರಡು ಮೂರು ತಲೆಮಾರುಗಳಿಂದ ನಡೆದು ಬಂದಿತ್ತು. ಈ ರೀತಿ ಚಾಲುಕ್ಯ ಮೊದಲಾದವರ ಮನೆತನಗಳಲ್ಲಿ ಉತ್ತರದ ರಾಣಿಯರಿಂದ ಬಂದ ಪ್ರಾಕೃತಭಾಷೆಯನ್ನು ಕರ್ನಾಟಕದ ರಾಜಧಾನಿಗೆ ತಂದರು. ಆಭಾಷೆ ಮೊದಲು ಅರ್ಧ ಆಮೇಲೆ ಪೂರ್ಣ ಸಿಂಹಾಸನವನ್ನು ವಶಪಡಿಸಿಕೊಂಡಿತು. ಶಾತಕರ್ಣಿ ರಾಜನ ಅಂತಃಪುರದಲ್ಲಿ ಪ್ರಾಕೃತ ಭಾಷೆಯನ್ನಾಡುವ ಸ್ತ್ರೀಯರಿದ್ದರು. 'ಶ್ರೂಯತೇ ಕುಂತಲೇಷು ಸಾತವಾಹನೋ ರಾಜಾ, ತೇನ ಪ್ರಾಕೃತ ಭಾಷಾತ್ಮಕ ಅಂತಃಪುರಮೇವಂ ವರ್ತಿತೋ ನಿಯಮಃ' ಎಂದು ಕವಿ ರಾಜಶೇಖರ ಹೇಳುತ್ತಾನೆ. 'ಶಾತಕರ್ಣಿಗಳಿಗೆ ಸಂಸ್ಕೃತ ಗೊತ್ತಿರಲಿಲ್ಲ, ಅವರು ಪ್ರಾಕೃತಕ್ಕೆ ಆಶ್ರಯವಿತ್ತರು' ಎಂದು ಡಾ|| ಇರಾವತೀಬಾಯಿ ಕರ್ವೆ ಬರೆದಿದ್ದಾರೆ. ಆರ್ಯ ಮಿಶ್ರಣವಿದ್ದ ಮಂಗೋಲ ಶಾತವಾಹನರಲ್ಲಿ ಹಾಲ, ಪುಲಿ, ಮಾಯಿ ಎಂಬಂಥ ಕನ್ನಡ ಹೆಸರುಗಳು ಹೇಗೆ? ಅಲ್ಲದೆ, ತಮ್ಮ ಮೂಲಸ್ಥಾನ ಕರ್ನಾಟಕ ಎಂದು ಅವರು ಹೇಗೆ ಹೇಳಿದರು? ಡಾ|| ಆರ್. ಡಿ. ಬ್ಯಾನರ್ಜಿ ಇವರು ಇವರ ಮನೆತನ ಕನ್ನಡದ್ದೆಂದು ಸ್ಪಷ್ಟವಾಗಿ

ನಿರ್ದೇಶಿಸಿದ್ದಾರೆ. ಡಾ॥ ಸುಖತನಕರ ಮತ್ತು ಡಾ॥ ಬ್ಯಾನರ್ಜಿ ಇಂಥ ದೊಡ್ಡ ಸಂಶೋಧಕರು ಕೊಟ್ಟಿರುವ ತಾಮ್ರಪಟಗಳಂಥ ಬೇರೆ ಕೆಲವು ಆಂತರಿಕ ಸಂಗತಿಗಳು ಮಹತ್ವದವಾಗಿವೆ. "ವಾಸಿಷ್ಠೀ ಪುತ್ರಸ್ಯ" ಇಂಥ ತಾಯಿಯ ಹೆಸರಿನ ಮೇಲಿಂದ ವಂಶವನ್ನು ಹೇಳುವ ಸಂಗತಿಯ ಬಗ್ಗೆ ಇವರ ಲೇಖನವಿದೆ. "ಮಾತೃಪ್ರಧಾನ ಕುಟುಂಬ ಪದ್ಧತಿಯ ದ್ಯೋತಕವಾಗಿದೆ" ಎಂದು ಡಾ॥ ಇರಾವತಿ ಬಾಯಿ ಕರ್ವೆ ಹೇಳುತ್ತಾರೆ. ಸ್ತ್ರೀಯರ ಹೆಸರಿನಿಂದ ಕುಲಹೇಳುವ ಪದ್ಧತಿ ಇನ್ನೂ ಕನ್ನಡಿಗರಲ್ಲಿದೆ. ಇಂಥ ಕೆಲ ಶಿಲಾಲೇಖಗಳು ದೊರೆಯುತ್ತವೆ. ಪ್ರೊ. ಕುಂದಣಗಾರರು ಸಂಪಾದಿಸಿದ ಸಂಗ್ರಹದಲ್ಲಿ ಅದರ ಬಗ್ಗೆ ವಿವರಣೆ ಇದೆ. ಆದರೆ, ಡಾ॥ ಇರಾವತೀ ಕರ್ವೆಯವರು ಶಾತವಾಹನರು ಆರ್ಯ ಮಂಗೋಲ ಮಿಶ್ರವಂಶದವರೆಂದೂ, ಅವರು ಮಧ್ಯ ಏಶಿಯಾದಿಂದ ಬಂದವರೆಂದೂ ಹೇಳುತ್ತಾರೆ. ಡಾ. ಕರ್ವೆಯವರು ತಮ್ಮ ಅಭಿಪ್ರಾಯವನ್ನು ಸಮರ್ಥಿಸಲು ಎರಡು ಕೆಲಸಗಳನ್ನು ಮಾಡಬೇಕು. ೧) ಡಾ॥ ಸುಖತನಕರರಿಗೆ ದೊರೆತ ತಾಮ್ರಪಟ ಸುಳ್ಳು ಅಥವಾ ಅದರ ಅರ್ಥವಿವರಣೆ ಬೇರೆಯಾಗಿದೆಯೆಂದು ತೋರಿಸಬೇಕು. ೨) ಆರ್ಯರಲ್ಲಿ ಮತ್ತು ಮಂಗೋಲರಲ್ಲಿ ಮಾತೃಪ್ರಧಾನ ಕುಟುಂಬ ಪದ್ಧತಿ ಇತ್ತೆಂದು ತೋರಿಸಬೇಕು. ಶಾತಕರ್ಣಿ ಅಥವಾ ಶಾತವಾಹನ ಈ ಹೆಸರಿನ ಅರ್ಥ ಇನ್ನೂ ಅನಿರ್ಣೀತವಾಗಿದೆ. ಆದರೂ ಪ್ರಾಚೀನ ತಮಿಳು ಗ್ರಂಥದಿಂದ ಒಂದು ಉಲ್ಲೇಖ ನಿಃಸಂದಿಗ್ಧವಲ್ಲದಿದ್ದರೂ ಅರ್ಥಸೂಚಕವಾಗಿದೆ. ಶಾತಕರ್ಣಿಗಳನ್ನು 'ನೂರುವರ್ ಕಣ್ಣರ್" ಎಂದು ಕರೆಯಲಾಗಿದೆ.

ಈ ಸಂದಿಗ್ಧ ಉಲ್ಲೇಖವನ್ನು ಬಿಟ್ಟರೂ ಶಾತಕರ್ಣಿಗಳ ಕೆಲಹೆಸರುಗಳು ಅರ್ಥಪೂರ್ಣವಾಗಿದೆ. ಈ ಮನೆತನದಲ್ಲಿ 'ಹಾಲ' ನೆಂಬ ಪ್ರಸಿದ್ಧ ರಾಜನಿದ್ದ. 'ಹಾಲಪ್ಪ' ಎಂಬ ಹೆಸರುಗಳು ಕನ್ನಡಿಗರಲ್ಲಿ ಪ್ರಚಲಿತವಾಗಿವೆ. ಈ ವಂಶದಲ್ಲಿ ಪುಲಿಮಾಯಿ ಎಂಬ ರಾಜನೂ ಇದ್ದ. ಪುಲಿ ಎಂಬುದು ಕನ್ನಡ ಶಬ್ದ. ಶೂರ ಪರಾಕ್ರಮಿ ಎಂಬ ಅರ್ಥದಲ್ಲಿಯೂ ಇದನ್ನು ಉಪಯೋಗಿಸಬಹುದು. ಪುಲಿಯಿಂದ ಹೆಸರು ಪಡೆದ ಅನೇಕ ಅರಸರು ಕನ್ನಡದ ಇತಿಹಾಸದಲ್ಲಿದ್ದಾರೆ. ಚಾಲುಕ್ಯರ ಪುಲಿಕೇಶಿ ಮಹಾರಾಷ್ಟ್ರಕ್ಕೂ ಅಪರಿಚಿತನಲ್ಲ. ಮಹಾರಾಷ್ಟ್ರೀಕರಣದಲ್ಲಿ ರಾಜರಂತೂ ನಿಜವೇ ಅದರೊಂದಿಗೆ ಸಾಮಂತರು 'ಸಾಮಂತ' ರಾದರು. ಕನ್ನಡ ಕಾವ್ಯಗಳಲ್ಲಿ ವರ್ಣಿತರಾದ 'ಮನ್ನೆಯರು', 'ಮಾನೇ' ಆದರು. ಹಳೆಬೀಡಿನ ಹೊಯ್ಸಳರ ದರ್ಬಾರಿನಲ್ಲಿ ರಚಿತವಾದ ಕನ್ನಡ ಕಾವ್ಯದಲ್ಲಿ ಪ್ರತಿಹಾರಿಗಳ ಬಾಯಲ್ಲಿ ಮರಾಠಿ ವಾಕ್ಯಗಳು ಹೇಗೆಂಬುದರ ರಹಸ್ಯ ಇಲ್ಲಿ ಪ್ರಕಟವಾಗುತ್ತದೆ. ಆನೆಗಳನ್ನು ಪಳಗಿಸುವ ರಾವುತರು ಮರಾಠಿ ಮಾತಾಡುತ್ತಾರೆ. ರಾಜಕುಮಾರರ ಶಿಕ್ಷಕರು ಸಂಸ್ಕೃತ-ಪ್ರಾಕೃತ ಉಭಯ ಭಾಷಾವಿಶಾರದರಾಗಿದ್ದಾರೆ.

ಮೊದಲು 'ಪ್ರಾಕೃತ'ವೆಂದು ಪೋಷಿಸಲ್ಪಟ್ಟ ಭಾಷೆಯೇ ಮುಂದೆ ಮರಾಠಿ ಭಾಷೆಯ ನಿರ್ಮಿತಿಗೆ ಹಾಗೂ ಬೆಳವಣಿಗೆಗೆ ಆವಶ್ಯಕವಾದ ಹಿನ್ನೆಲೆಯನ್ನು ಸಿದ್ಧಗೊಳಿಸಲು ಕಾರಣವಾಯಿತು. ಮೇಲಿನ ವಿವರಣೆ, ಮುಖ್ಯವಾಗಿ ರಾಜಮನೆತನದ ಸುತ್ತಲಿನ ವಾತಾವರಣ ಹೇಗೆ ಮರಾಠಿಯ ಉದ್ಗಮಕ್ಕೆ ಕಾರಣವಾಯಿತೆಂದು ತೋರಿಸುವ ಸಲುವಾಗಿ ಮಾಡಿದ್ದಾಗಿದೆ. 'ಯದ್ಯದಾಚರತಿ ಶ್ರೇಷ್ಠಃ' "ತತ್ತದೇವೇತರೋ ಜನಃ" ಪ್ರತಿಷ್ಠಿತರು ಆಡುವದು ನಾಳೆ ಜನಸಾಮಾನ್ಯರ ಭಾಷೆಯಾಗುತ್ತದೆ. ಇದಲ್ಲದೆ, ಲಾಟ-ಕರ್ನಾಟಕದಲ್ಲಿ ಸಾಮಾನ್ಯಜನರ ವರೆಗೆ ಪ್ರಾಕೃತವನ್ನು ಒಯ್ಯುವ ಇನ್ನೊಂದು ಮಹತ್ವದ ಸಂಗತಿ ಇದೆ. ಅದರ ಕಡೆಗೆ ಬಹಳಷ್ಟು ಲಕ್ಷ್ಯಕೊಟ್ಟಿಲ್ಲವೆಂದು ಕಾಣುತ್ತದೆ. ಜೈನರು ತಮ್ಮ ಮತದ ಪ್ರಚಾರದ ಸಲುವಾಗಿ ದೇಶಭಾಷೆಯಲ್ಲಿ ಗ್ರಂಥ ಬರೆಯಲು ಪ್ರಾರಂಭಿಸಿದರು. ಕರ್ನಾಟದಲ್ಲಿ ಕನ್ನಡ ಸಾಹಿತ್ಯದ ಮೊದಲ ಹಂತದಲ್ಲಿ ಉತ್ತಮೋತ್ತಮ ಗ್ರಂಥಗಳನ್ನು ಬರೆದರು. ಈ ದೇಶಭಾಷೆಗಳ ಜೊತೆಗೆ ತಮ್ಮ ಪಾಠಶಾಲೆಗಳು ತೀರ್ಥಕ್ಷೇತ್ರಗಳಲ್ಲಿ ಪ್ರಾಕೃತದ ಧರ್ಮಗ್ರಂಥಗಳ ಅಧ್ಯಯನ-ಅಧ್ಯಾಪನಕ್ಕೆ ಅನುಕೂಲ ಮಾಡಿಕೊಟ್ಟರು. ಈ ರೀತಿಯಲ್ಲಿ ಪ್ರಾಕೃತ ಭಾಷೆ ಹಳ್ಳಿಪಳ್ಳಿಗಳಲ್ಲಿ ಹೋಗಿ ಮುಟ್ಟಿತು. ಕನ್ನಡದಲ್ಲಿ ತದ್ಭವಗಳು ಕಿಕ್ಕಿರಿದವು. ಪ್ರಾಕೃತದಲ್ಲಿ ದೇಶ್ಯಶಬ್ದಗಳ ಹೆಸರಿನಲ್ಲಿ ಕನ್ನಡ ಶಬ್ದಗಳು ಹೊಕ್ಕವು. ಹೇಮಚಂದ್ರನ ದೇಶೀನಾಮ ಮಾಲೆಯಲ್ಲಿ ಬಂದ ಕನ್ನಡ ಶಬ್ದಗಳ ಯಾದಿಯನ್ನು ಡಾ॥ ಉಪಾಧ್ಯೆ ಇವರು ಸಿದ್ಧಪಡಿಸಿದ್ದಾರೆ. ಮೆಲ್ಲಮೆಲ್ಲಗೆ

ಆದರ ಪರಿಣಾಮ ಹೀಗಾಯಿತು, ಲಾಟದೇಶದಲ್ಲಿ ಒಂದು ಕಾಲಕ್ಕೆ ಬೇರೆ ಭಾಷೆ ಇತ್ತೆಂಬ ಸಂಗತಿ ತಜ್ಞರು ಹೇಳಿದರೂ ಕೆಲವರಿಗೆ ಸತ್ಯವೆಂದು ಕಾಣುವದಿಲ್ಲ. ಈ ಮಾತನ್ನು ಡಾ. ಸ್ಟೇನಕೋನೋ ಇವರು ಸಂಶೋಧದಿಂದ ಸಿದ್ಧಪಡಿಸಿದರು. "The substrata, over which, Gujarati and Marathi have spread was Dravidian." ಇಲ್ಲಿ Dravidian ಯಾರು ಎಂಬುದೇ ಪ್ರಶ್ನೆಯಾಗಿದೆ.

ಲಾಟ ದೇಶದಲ್ಲಿ ಮೂಲ ದೇಶಭಾಷೆ ಸಂಪೂರ್ಣ ನಷ್ಟವಾಗಿ ಆ ಸ್ಥಳವನ್ನು ಪ್ರಾಕೃತ ಭಾಷೆ ಆಕ್ರಮಿಸಿತು. ಕರ್ಣಾಟಕದ ಉತ್ತರ ಸೀಮೆಯೂ ಇದೇ ಕಾರಣಕ್ಕಾಗಿ ಹಿಮ್ಮೆಟ್ಟಿದವು ಮತ್ತು ಕನ್ನಡದಲ್ಲಿ ಪ್ರಾಕೃತ ಶಬ್ದಗಳ ವೈಪುಲ್ಯ ಹೆಚ್ಚಾಗಿ ಕನ್ನಡ ಪ್ರಾಕೃತದಂಥ ಭಾಷೆಯಾಯಿತು. ಕರ್ಣಾಟಕದ ಜನ ಪ್ರಾಕೃತ ಸಂಸ್ಕೃತಗಳನ್ನು ಪ್ರೀತಿಯಿಂದ ಸ್ವಾಗತಿಸಿದರು. ಅಂತಲೇ ಭಾಷೆಯಲ್ಲಿ ಮೂಲಗಾಮಿಯಾದ ಬದಲಾವಣೆಯಾಯಿತು. ಸಂಸ್ಕೃತ ಮತ್ತು ಪ್ರಾಕೃತಗಳ ಆಕರ್ಷಣೆ ಹೆಚ್ಚಾಗಿ ಕನ್ನಡಿಗರಿಗೆ ತಮ್ಮ ಭಾಷೆ ರುಚಿಸದಂತಾಯಿತು. (ಇದಕ್ಕೆ ವಿಪರೀತವಾಗಿ ತಮಿಳರು ಒಳ್ಳೆ ಹೇವದಿಂದ ತಮ್ಮ ವರ್ಣಮಾಲೆಯನ್ನು ಬದಲಾಗಗೊಡಲಿಲ್ಲ.) ಇದರಿಂದ ಸಂಸ್ಕೃತ ಪ್ರಾಕೃತ ಶಬ್ದಗಳು, ತಮಿಳು ವೇಷವನ್ನು ತೊಟ್ಟು ಆ ಭಾಷೆಯಲ್ಲಿ ಪ್ರವೇಶಿಸಬೇಕಾಯಿತು. 'ದಂತ' ಶಬ್ದ ತಮಿಳಿನಲ್ಲಿ 'ತಂದ' ಎಂದಾಗುತ್ತದೆ ತಮಿಳರಿಗೆ ಇಂದಿಗೂ ತಮ್ಮ ಭಾಷೆಯಲ್ಲಿ ಬದಲಾವಣೆ ಸಹನವಾಗುವದಿಲ್ಲ. ಕನ್ನಡದಲ್ಲಿ ಸಂಸ್ಕೃತದ ವರ್ಣಮಾಲೆ ಪೂರ್ತಿಯಾಗಿ ಬಂದುಬಿಟ್ಟಿತು. ಸಂಸ್ಕೃತ ಪ್ರಾಕೃತ ಶಬ್ದಗಳು ಮೂಲ ಸ್ವರೂಪದಲ್ಲಿಯೇ ಪ್ರತಿಷ್ಠಿತವಾದವು.

ಸಂಸ್ಕೃತ ಪ್ರಾಕೃತ ಶಬ್ದಗಳನ್ನು ಬೆರೆಸಿದರೆ ಭಾಷೆಯ ಸವಿ ಹೆಚ್ಚಾಗುತ್ತದೆಂದು ಕೆಲವರ ಅನಿಸಿಕೆಯಾಗಿದೆ. ಅಭಿಜಾತವಾದ ಹಳೆಗನ್ನಡದಲ್ಲಿ ಬರೆಯಬೇಕೆಂಬುವರ ಪಕ್ಷ ನಾಮಶೇಷವಾಯಿತು. ಕವಿಗಳಿಗೆ ಆದರ್ಶವಾದ ರಾಜಮಾರ್ಗವನ್ನು ನಿರ್ಮಿಸಲು ಬರೆದಿರುವ 'ಕವಿರಾಜಮಾರ್ಗ' ಗ್ರಂಥದಲ್ಲಿ ಈ ವಿಷಯದ ಬಗೆಗಿನ ಅಭಿಪ್ರಾಯ ವಿಚಾರಾರ್ಹವಾಗಿದೆ. ಉಚ್ಚಾರಕ್ಕೆ ಕಠಿಣವಾದ ಸಂಯುಕ್ತಾಕ್ಷರ ಶಬ್ದಗಳನ್ನು ಬಿಟ್ಟುಕೊಟ್ಟು 'ಸಮ ಸಂಸ್ಕೃತ'ವನ್ನು ಬಳಸಬೇಕೆಂದು ಈ ಗ್ರಂಥಕಾರನ ಅಭಿಪ್ರಾಯವಾಗಿದೆ. ಅವನಿಗೆ ಹಳೆಗನ್ನಡದ ಬಗ್ಗೆ ಆದರವಿಲ್ಲ. ಅಂಥ ಹಳೆಯ ಭಾಷೆಯಲ್ಲಿ ಬರೆಯುವದರಲ್ಲಿ ಆನಂದವಿಲ್ಲ ಎಂದು ಹೇಳುವಾಗ ಅವನು ಉಪಯೋಗಿಸುವ ಉಪಮೆಯಲ್ಲಿ ತಿರಸ್ಕಾರ ತುಂಬಿದೆ. ಆ 'ಪಳಗನ್ನಡ'ದಲ್ಲಿ ಬರೆಯುವಾಗ 'ಜರದ್‌ವಧೂ ಸುರತ ಸುಖ'ದಲ್ಲಿಯ ರಸಿಕತೆ ಇದೆಯೆಂದು ಅವನು ಹೇಳುತ್ತಾನೆ. (೧-೫೦).

ಕವಿರಾಜಮಾರ್ಗವು ರಾಷ್ಟ್ರಕೂಟರ ಆಶ್ರಯದಲ್ಲಿ ಬರೆದ ಗ್ರಂಥ. ಒಂಬತ್ತನೆಯ ಶತಮಾನದ ಆರಂಭಕ್ಕೆ ರಾಷ್ಟ್ರಕೂಟ ಆಳಿಕೆಯ ಹೊತ್ತಿಗೆ ಆರಂಭವಾದ ಈ ಭಾಷಾಕ್ರಾಂತಿ, ಒಂದು ದೃಷ್ಟಿಯಿಂದ ಮರಾಠಿಯ ಉದಯದ ಗುಡಿ ಏರಿಸಿತು ಎಂದು ಹೇಳಲು ಅಡ್ಡಿಯಿಲ್ಲ. ಕನ್ನಡ ಸಾಹಿತ್ಯದ ಪುನರುಜ್ಜೀವನಕ್ಕೆ ಜೈನರ ಈ ಪ್ರಯತ್ನ ಪರಿಣಾಮತಃ ಮರಾಠಿಯ ಆಳಿಕೆಗೆ ಅನುಕೂಲವಾಯಿತು.* ಜೈನೇತರರಲ್ಲಿ, ಬ್ರಾಹ್ಮಣರಿಗೆ ಕನ್ನಡದ ಬಗ್ಗೆ ಪ್ರೀತಿ ಹುಟ್ಟುವ ವರೆಗೆ ೧೪ನೆಯ ಶತಮಾನ ಬೆಳಗಾಯಿತು. ಕುಮಾರವ್ಯಾಸ, ರುದ್ರಭಟ್ಟ, ಲಕ್ಷ್ಮೀಶ ಮೊದಲಾದವರು ಶ್ರೇಷ್ಠ ಕಾವ್ಯಕೃತಿಗಳನ್ನು ರಚಿಸಿದರು. ಆದರೆ, ಅವುಗಳು ಕೂಡ ಸಂಸ್ಕೃತ ಪ್ರಾಕೃತ ಶಬ್ದಗಳಿಂದ ತುಂಬಿಕೊಂಡಿವೆ. ಒಂಬತ್ತನೆಯ ಶತಮಾನದಲ್ಲಿ ಕನ್ನಡದ ತಳಹದಿ ಹಾಕುವ ಹೊತ್ತಿಗೆ, ಈ ಭಾಷೆ ಸಂಸ್ಕೃತ ಮತ್ತು ಪ್ರಾಕೃತದಿಂದ ಹುಟ್ಟಿಬಂದದ್ದೆಂಬ ತಪ್ಪು ತಿಳುವಳಿಕೆಯ ಪರಿಣಾಮ ಇದಾಗಿದೆ. ಕನ್ನಡದ ಹಳೆಯ ಶಬ್ದಗಳು ಹಿಂದೆ ಬಿದ್ದು ಆ ಸ್ಥಳದಲ್ಲಿ ಆರ್ಯಭಾಷೆಯ ಶಬ್ದಗಳು ಪ್ರತಿಷ್ಠಿತವಾದವು.

---

* ಈ ಅಂಶವು ವಿಪುಲವಾದ ವ್ಯಾಖ್ಯಾನ ಹಾಗೂ ವಿವರಗಳೊಡನೆ ಮಹಾರಾಷ್ಟ್ರದ ಮೂಲ (೧೯೩೪) ಗ್ರಂಥದಲ್ಲಿ ವಿಪುಲವಾದ ವ್ಯಾಖ್ಯಾನಕ್ಕೆ ಒಳಗಾಗಿದೆ (ಸಂ)

ಬ್ರಾಹ್ಮಣರಲ್ಲಿ ಕನ್ನಡದ ಬಗೆಗೆ ಆ ಬಳಿಕ ಸ್ವಲ್ಪ ಆತ್ಮೀಯತೆ ತಲೆದೋರಿತು. ಪ್ರಾದೇಶಿಕ ಅಭಿಮಾನದ ಆವಶ್ಯಕತೆ ಅನಿಸತೊಡಗಿದ ಮೇಲಿನ ಮಾತು, ಇದು. ವೀರಶೈವರು ಮತಪ್ರಸಾರಕ್ಕಾಗಿ ಕನ್ನಡದಲ್ಲಿ ಮಹತ್ವದ ಸಾಹಿತ್ಯವನ್ನು ನಿರ್ಮಿಸಿದರು. ಜೈನರ ನಂತರ ವೈದಿಕರನ್ನು ಎದುರಿಸಿದ ವೀರಶೈವ ಪರಂಪರೆ ಬ್ರಾಹ್ಮಣರಲ್ಲಿ ಕನ್ನಡದ ಬಗ್ಗೆ ಅನಾಸ್ಥೆಯನ್ನು ಹುಟ್ಟಿಸಿರಬೇಕು. ಆದರು ಪಾಮರರನ್ನು ವೈಷ್ಣವ ಭಕ್ತಿಮಾರ್ಗದ ಕಡೆಗೆ ಎಳೆಯಲು ಮಾಧ್ವದಾಸವರ್ಯರು ಕನ್ನಡದಲ್ಲಿ ಗ್ರಂಥರಚನೆಯನ್ನು ಪ್ರಾರಂಭಿಸಿದರು. ದಾಸರಪದಗಳನ್ನು ಪ್ರಚಾರ ಮಾಡಿದರು. ಆದರೆ, ಮಾಧ್ವರಲ್ಲಿಯೇ ವ್ಯಾಸಕೂಟಕ್ಕೆ, ಗೀರ್ವಾಣವಾಣಿಯ ಅಭಿಮಾನಿಗಳಿಗೆ ಇದು ಒಪ್ಪಿಗೆಯಾಗಿರಲಿಲ್ಲ. ತೆಲಂಗಾಣದಲ್ಲಿಯ ಬ್ರಾಹ್ಮಣರಿಗೆ ತೆಲುಗು ಮಡಿಗೆ ಬರುತ್ತದೆ. ದೇವರ ಪೂಜೆಯ ಮಂತ್ರಗಳು ಆ ಭಾಷೆಯಲ್ಲಿದ್ದರೂ ಅವುಗಳನ್ನು ಆಹ್ನಿಕದ ವೇಳೆಯಲ್ಲಿ ಪಠಿಸಲು ಅವರಿಗೆ ಗೌಣವೆನ್ನಿಸುವದಿಲ್ಲ. ಅದಾಗ ಬಾರದೆಂದೇ ತೆಲುಗು 'ಕಣ್ವಮುನಿ' ಪ್ರತೀತವಾದ ಭಾಷೆ ಎಂಬ ದಂತಕತೆ ಪ್ರಚಾರದಲ್ಲಿ ಬಂದಂತೆ ಕಾಣುತ್ತದೆ. ತಮಿಳು ಭಾಷೆಯ ಪ್ರವರ್ತಕ ಅಗಸ್ತ್ಯನಾಗಿರುವದರಿಂದ ಆ ಭಾಷೆಯೂ ಬ್ರಾಹ್ಮಣರ ಪೂಜೆಗೆ ನಡೆಯುತ್ತದೆ. ಆದರೆ, ಮಡಿಯಲ್ಲಿರುವಾಗ ಕನ್ನಡ ಮಾತಾಡಿದರೆ ಮೈಲಿಗೆಯಾಗುವದೆಂಬ ಹೆದರಿಕೆ ಕನ್ನಡ ಬ್ರಾಹ್ಮಣರಲ್ಲಿ ಇದೆ. ಇಂಥ ಉದಾಹರಣೆಗಳು ದಿನದಿನಕ್ಕೆ ಕಡಿಮೆಯಾಗುತ್ತ ನಡೆದಿದ್ದರೂ ಮಾದರಿಗಾದರೂ ಒಂದೆರಡು ಸಿಗುತ್ತವೆ. ಪುರಂದರದಾಸರು ಬರೆದಿದ್ದ ಕನ್ನಡದ ಭಜನಗ್ರಂಥಗಳನ್ನು ಪೂಜೆಗಾಗಿ ಸಂಸ್ಕೃತ ಗ್ರಂಥಗಳ ಜೊತೆಗೆ ಇಟ್ಟದ್ದು, ವ್ಯಾಸರಾಯ ಸ್ವಾಮಿಗಳ ಕೆಲವು ಶಿಷ್ಯರಿಗೆ ಸಹನವಾಗದೆ ಅವರು ಅವುಗಳನ್ನು ತೆಗೆದು ಬೀಸಾಡಿದರು ಎಂದು ಒಂದು ಆಖ್ಯಾಯಿಕೆ ಇದೆ! ಮಾಧ್ವ ಉತ್ತರಾದಿ ಮಠದ ಸ್ವಾಮಿಗಳ ಪಂಚಾಂಗ ಕನ್ನಡ ಭಾಷೆಯಲ್ಲಿ, ಆದರೂ ಬಾಲಬೋಧ (ದೇವನಾಗಿರಿ) ಲಿಪಿಯಲ್ಲಿ ಮುದ್ರಿಸುವ ಪರಿಪಾಠವಿತ್ತು. ಕನ್ನಡ ಲಿಪಿಯ ಮೇಲೆ ಕೂಡ ಬಹಿಷ್ಕಾರವಿದ್ದದ್ದಕ್ಕೆ ಇದೊಂದು ನಿದರ್ಶನವಾಗಿದೆ.

ಕನ್ನಡಭಾಷೆ ಋಷಿ ಪ್ರಣೀತವೆಂದು ಹೇಳುವ ಆವಶ್ಯಕತೆ ಅವರಿಗೆ ಅನ್ನಿಸಲಿಲ್ಲ. ಮೊದಲು ಸಂಸ್ಕೃತ, ಅದರ ಮೇಲೆ ಪ್ರಭುತ್ವ ಪಡೆಯುವದು ಅಶಕ್ಯವಾದ ಮೇಲೆ ಪ್ರಾಕೃತ ಮುಂದೆ ನಂತರದ ಕಾಲದಲ್ಲಿ ಮರಾಠಿಯ ಕಡೆಗೆ ಬ್ರಾಹ್ಮಣರ ಎಳೆತ ಹೆಚ್ಚಾದದ್ದೂ ಕಾಣುತ್ತದೆ. ಇದರಿಂದ, ಮಹಾರಾಷ್ಟ್ರದ ಹತ್ತಿರದ ಸೀಮೆಯಲ್ಲಿ ಮರಾಠಿಗೆ ಪ್ರವೇಶಿಸಲು ಅನುಕೂಲವಾಯಿತು. ತೆಲಂಗಾಣದಲ್ಲಿ ಕರ್ನಾಟಕದವರು ತೆಲುಗನ್ನು ಹತ್ತಿರ ಕರೆದುಕೊಂಡರು. ತೆಲುಗು ಭಾಷೆಯ ಆದಿಕವಿ ನನ್ನಯ ಭಟ್ಟನಿಗೆ ಕರ್ನಾಟಕ ಪಂಡಿತ ನಾರಾಯಣಭಟ್ಟನೇ ತೆಲುಗಿನಲ್ಲಿ ಭಾರತವನ್ನು ರಚಿಸಲು ಪ್ರೋತ್ಸಾಹಿಸಿ ಅದನ್ನು ಬರೆಸಿದನಂತೆ. ಜೈನರ ಗ್ರಂಥಗಳು ಕನ್ನಡದಲ್ಲಿರುವದರಿಂದ, ಬ್ರಾಹ್ಮಣ ಕನ್ನಡವನ್ನು ಕಲಿತರೆ, ಕನ್ನಡ ಪ್ರೇಮಿಯಾಗಿ ಅವನ ವೈದಿಕ ಧರ್ಮಾಭಿಮಾನ ಶಿಥಿಲವಾಗಬಹುದೆಂಬ ಸಾಧಾರಭೀತಿ ಬ್ರಾಹ್ಮಣರಲ್ಲಿತ್ತು. ಜೈನಭಾರತದ ಪ್ರಚಾರದಿಂದ ವ್ಯಾಸಭಾರತದ ಪ್ರಚಾರ ಕರ್ನಾಟಕದಲ್ಲಿ ಹಿಮ್ಮೆಟ್ಟಿತು. ಕುಮಾರವ್ಯಾಸನಂಥ ಕವಿ ಕೂಡ ಪಂಪನ ಪ್ರಭಾವಕ್ಕೆ ಒಳಗಾಗಿದ್ದಾನೆ. ವ್ಯಾಸಭಾರತಕ್ಕಿಂತ ಭಿನ್ನವಾದ ಕೆಲವು ಕತೆಗಳನ್ನು ಅವನು ಪಂಪನಿಂದ ಎತ್ತಿಕೊಂಡಿದ್ದಾನೆ. ಈ ಸಂಕಟದಿಂದ ಪಾರಾಗಲು ಬ್ರಾಹ್ಮಣವರ್ಗ ಕನ್ನಡವನ್ನು ಕಲಿಯಲು ವಿರೋಧ ತೋರಿಸುತ್ತಿದ್ದಿರಬೇಕು. ಕನ್ನಡದ ನಾರಾಯಣಭಟ್ಟ ಕನ್ನಡ ಭಾರತದ ದುಷ್ಪರಿಣಾಮವನ್ನು ತಪ್ಪಿಸಲು ನನ್ನಯ ಭಟ್ಟನಿಗೆ ತೆಲುಗಿನಲ್ಲಿ ಭಾರತವನ್ನು ಬರೆಯಲು ಆಜ್ಞೆಮಾಡಿದ. ಹಿಂದೂ ಧರ್ಮಾಭಿಮಾನಿಗಳಾಗಿದ್ದ ವಾತಾಪಿಯ ಚಾಲುಕ್ಯರಾಜರ ಗುಜರಾತ ಮತ್ತು ತೆಲಂಗಾಣದ ಶಾಖೆಗಳು ಆಯಾ ಪ್ರಾಂತಗಳಲ್ಲಿ ಅಲ್ಲಿಯ ಭಾಷೆಗಳಿಗೆ ರಾಜಾಶ್ರಯವಿತ್ತು ಗ್ರಂಥಗಳನ್ನು ಬರೆಸಿದರು. ಆದರೆ, ವಾತಾಪಿ ಮನೆತನದವರು ಕನ್ನಡ ತಮ್ಮ ಪ್ರಾಂತದಲ್ಲಿ ಬೆಳೆಸಲು ಪ್ರಯತ್ನ ಮಾಡಲಿಲ್ಲ. ಕೊಲ್ಲಾಪುರ, ಸಾಂಗಲಿ, ಸಾತಾರಾ ಈ ಭಾಗಗಳಲ್ಲಿ ಕನ್ನಡ ಮಾತಾಡುವವರನ್ನು, 'ನೀವು ಜೈನರೇ?' ಎಂದು ಕೇಳುತ್ತಾರೆ. ಪ್ರಸ್ತುತ ಲೇಖಕನಿಗೆ ಈ ಅನುಭವ ಸಾಕಷ್ಟಾಗಿದೆ. ಸಾತಾರೆಯ ಕಡೆಯ ಸುಪ್ರಸಿದ್ಧ ಜೈನ-ಪಾಟೀಲರ ಮನೆತನಗಳಲ್ಲಿ ಮುಪ್ಪಿನ ಹೆಣ್ಣುಮಕ್ಕಳ ಬಾಯಲ್ಲಿ ಇಂದಿಗೂ ಕನ್ನಡ ಭಾಷೆಯಿದೆ, ಆದರೆ ಮುಂದಿನ ಪೀಳಿಗೆಯವರಲ್ಲಿ ಕನ್ನಡದ ಗಂಧವೇ ಇಲ್ಲ.

ಕನ್ನಡದಲ್ಲಿ 'ದೇಶಿಕ' ಶಬ್ದದ ಅರ್ಥ ಅನಾಥ ಎಂದಾಗುತ್ತದೆ! 'ದೇಶೀ' ಎಂದರೆ ಸಂಸ್ಕಾರವಿಲ್ಲದ್ದು, 'ವಿಲಾಯತೀ' ಎಂದರೆ ಪರಿಷ್ಕೃತವಾದದ್ದು ಎಂಬುದು ಇಂದಿನ ಮನೋವೃತ್ತಿಯಾಗಿದೆಯೆಂದು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಮರಾಠಿಯಲ್ಲಿಯ 'ರಾಠ' (ರಟ್ಟ, ರಾಷ್ಟ್ರಿಕ) ಶಬ್ದದಲ್ಲಿಯ ವ್ಯಂಗ್ಯಧ್ವನಿ ಮೇಲಿನ ಕನ್ನಡದ ವಾಕ್ಪ್ರಚಾರಕ್ಕೆ ಪುಷ್ಟಿ ಕೊಡುತ್ತದೆ. ಕರ್ಣಾಟಕದಲ್ಲಿಯ ಹಿಂದುಗಳ, ವಿಶೇಷವಾಗಿ ಬ್ರಾಹ್ಮಣವರ್ಗದ ಈ ಒಳಗಿನ ಮನೋವೃತ್ತಿಯನ್ನು ಲೆಕ್ಕಕ್ಕೆ ಹಿಡಿಯದಿದ್ದರೆ ಇಡೀ ಕರ್ಣಾಟಕ ಯಾಕೆ ದ್ವೈಭಾಷಿಕವಾಗಿದೆಯೆಂಬುದು ಗೊತ್ತಾಗಲಾರದು. ಕರ್ಣಾಟಕದಲ್ಲಿ ತೆಲುಗು, ತಮಿಳು ಅಥವಾ ಮರಾಠಿ ಇವುಗಳಲ್ಲಿ ಒಂದಾದರೂ ಭಾಷೆ ತಿಳಿಯುವದಿಲ್ಲವೆನ್ನುವ ಮತ್ತು ಕೇವಲ ಕನ್ನಡವೊಂದೆ ಗೊತ್ತಿರುವ ಭಾಗ ಬಹಳ ಚಿಕ್ಕದಾಗಿದೆ. ಮಹಾರಾಷ್ಟ್ರದ ಹತ್ತಿರದವರು ಮರಾಠಿಯಾದರು, ತೆಲುಗಿನ ಹತ್ತಿರದವರು ತೆಲುಗರಾದರು, ರಟ್ಟ-ರಡ್ಡಿಗಳು ಆಂಧ್ರರಾದದ್ದು ಕಾಣುತ್ತದೆ. ದಕ್ಷಿಣದಲ್ಲಿ ರಾಮಾನುಜ ಮತ ಪ್ರಸಾರಗೊಂಡಿತು. ದತ್ತ ಮತ್ತು ವಿಠ್ಠಲ ಸಂಪ್ರದಾಯಗಳ ಜೊತೆಗೆ ಕರ್ಣಾಟಕದಲ್ಲಿ ಮರಾಠಿ ಬಂದಂತೆ ರಾಮಾನುಜ ಮತದ ಜೊತೆಗೆ ತೆಲುಗು ಇಲ್ಲವೆ ತಮಿಳು ಭಾಷೆಗಳಿಗೆ ಪ್ರವೇಶ ಸಿಕ್ಕಿತು. ಇದೇ ಕಾರಣಕ್ಕಾಗಿ 'ಕರ್ನಾಟಕ ರಾಜ್ಯ ರಮಾರಮಣ' ನರಪತಿ ಕೃಷ್ಣರಾಯನ ಕಾಲಕ್ಕೆ ವಿಜಯನಗರದಲ್ಲಿ ರಾಜಾಶ್ರಯ ದೊರೆತು, ಅದು ತೆಲುಗು ಸಾಹಿತ್ಯದ ಮಹತ್ವದ ಕೇಂದ್ರವಾಯಿತು! ಮರಾಠಿ ಸಂಸ್ಥಾನಿಕರ ಮರಾಠಿಯ ಬಗ್ಗೆ ಇರುವ ಅಭಿಮಾನದೊಂದಿಗೆ ಹೋಲಿಸಿದರೆ ಕನ್ನಡ ಮತ್ತು ಮರಾಠೀ ಜನಾಂಗಗಳ ನಡುವಿನ ಅಂತರ ಸ್ಪಷ್ಟವಾಗುತ್ತದೆ. ಮರಾಠಿ ಸರದಾರರು, ಸಂಸ್ಥಾನಿಕರು ತಾವು ಬೀಡು ಬಿಟ್ಟಲ್ಲೆಲ್ಲ ತಮ್ಮ ಭಾಷೆಯನ್ನು ಬಿತ್ತಿಬೆಳೆಸಿದರು. ಈ ವೃತ್ತಿಯಿಂದಾಗಿ ನರ್ಮದೆಯಿಂದ ಕರ್ಣಾಟಕದ ಸೀಮಾರೇಖೆ ಯಾಕೆ ಹಿಮ್ಮೆಟ್ಟಿತೆಂಬುದರ ಬಗ್ಗೆ ಸ್ವಲ್ಪದರೂ ಕಲ್ಪನೆ ಬರಬಹುದು.

ಆರ್ಯೀಕರಣದ ಪ್ರಾರಂಭದಲ್ಲಿ ಕನ್ನಡಿಗರು ಎಲ್ಲ ಬಗೆಯ ಬದಲಾವಣೆಗಳನ್ನು ಸ್ವಾಗತಿಸಿದರು; ತಮಿಳರಂತೆ ಸೆಟೆದುಕೊಂಡು ವರ್ತಿಸಲಿಲ್ಲ. ಆದರೆ, ಹೊಸ ಸುಧಾರಣೆಗಳ ಸೆಳವಿಗೆ ಸಿಕ್ಕು ಸ್ವತ್ವವನ್ನು ಕಳೆದುಕೊಂಡೆವಲ್ಲ ಎಂಬ ಅರಿವು ಮೂಡಲು ಹನ್ನೆರಡನೆಯ ಶತಮಾನದ ಬೆಳಕು ಕಾಣಬೇಕಾಯಿತು. ಈ ನಡುವೆ ಅವರು ವಿರೋಧವನ್ನು ತೋರಿಸಲಿಲ್ಲ ಎಂದು ಇದರ ಅರ್ಥವಲ್ಲ. ಆದರೆ ಹನ್ನೆರಡನೆಯ ಶತಮಾನದ ನಂತರ ಕನ್ನಡಿಗರಲ್ಲಿ, ಯಾವ ಬದಲಾವಣೆಗೂ ಜಗ್ಗಬಾರದೆಂಬ ಹಟ ಹೊಕ್ಕಂತೆ ಕಾಣುತ್ತದೆ. ಕರ್ಣಾಟಕಕ್ಕೆ ಪ್ರಗತಿಯ ಕಟು ಅನುಭವ ಬಂದು, ಅಲ್ಲಿಯ ಜನರಿಗೆ ಹಳೆಯ ಪರಂಪರೆಗೆ, ರೂಢಿಗಳಿಗೆ ಅಂಟಿಕೊಂಡಿರುವ ಸ್ಥಿತಿಯಲ್ಲಿ ಆನಂದವೆನಿಸುತ್ತಿರ ಬೇಕು. ಪ್ರತಿಕ್ರಿಯೆಯ ತೆರೆ ವೀರಶೈವ ಮತ್ತು ಮಾಧ್ವರ ನಿಷ್ಠುರ ಮನೋವೃತ್ತಿಯಲ್ಲಿ ಕಂಡುಬರುತ್ತದೆ.

ಆದರೆ, ಈ ಹಿನ್ನೆಲೆಯ ಅರ್ಥವಾಗದ್ದರಿಂದ ಮಹಾರಾಷ್ಟ್ರ ಭಾಷೆ ಮತ್ತು ಸಂಸ್ಕೃತಿಯಲ್ಲಿಯ ಕೆಲವು ಸಮಸ್ಯೆಗಳಿಗೆ ಸರಳವಾದ ಮತ್ತು ಸಮರ್ಪಕವಾದ ಉತ್ತರ ದೊರೆಯಲಿಲ್ಲ. ತುಂಗೆಯವರೆಗೆ, ಶ್ರವಣಬೆಳ್ಗೊಳದವರೆಗೆ ಮಹಾರಾಷ್ಟ್ರದ ವಿಸ್ತಾರವಿತ್ತೆಂದು ತಿಳುವಳಿಕೆ ಇದೆ. ಇದೊಂದೇ ಸಮಸ್ಯೆಯನ್ನು ತೆಗೆದುಕೊಂಡರೂ ಇದರ ನಿಜವಾದ ಅರ್ಥ ಏನೆಂಬುದು ನ್ಯಾಯಮೂರ್ತಿ ರಾನಡೆ ಅಥವಾ ಲೋಕಮಾನ್ಯ ಟಿಳಕರಂಥ ಕೆಲವು ಅಪವಾದಗಳನ್ನು ಬಿಟ್ಟರೆ ಎಷ್ಟು ಜನರಿಗೆ ತಿಳಿದೀತು ಎಂದು ಸಂಶಯ ಬರುವಂತಿದೆ. ಲೋಕಮಾನ್ಯರು ಗುರ್ಲಹೊಸೂರಿನ ಪ್ರಸಿದ್ಧ ಭಾಷಣದಲ್ಲಿ ನಾವೆಲ್ಲ ಒಂದು ಎಂದು ಕನ್ನಡ ಬಾಂಧವರಿಗೆ ಹೇಳುವಾಗ "ಇಂದಿನ ಮಹಾರಾಷ್ಟ್ರವೆಂದರೆ ಪೂರ್ವದ ಕರ್ನಾಟಕವೇ" ಎಂದು ನುಡಿದಿದ್ದು ಕನ್ನಡಿಗರ ನೆನಪಿನಲ್ಲಿ ಇನ್ನೂ ಹಸುರಾಗಿದೆ. ಕನ್ನಡಿಗರ ವಿಶ್ವಾಸವನ್ನು ಪಡೆಯಲು ಲೋಕಮಾನ್ಯರು ಹೂಡಿದ ರಾಜಕೀಯ ಸಂಚು ಎಂದು, ಲೋಕಮಾನ್ಯರ ಮೇಲೆ ಅನ್ಯಾಯದಿಂದ ಅಪ್ರಾಮಾಣಿಕತೆಯ ಆರೋಪ ಹೊರಿಸುವದರಿಂದ, ಆ ಮನೋವೃತ್ತಿಯನ್ನು ತಾವೇ ಪ್ರಕಟಿಸುತ್ತೇವೆಂಬ ಅರಿವಿಲ್ಲದವರು ಸಿಗಬಹುದು. ಆದರೆ, ನ್ಯಾಯಮೂರ್ತಿ ರಾನಡೆಯವರ ಮೇಲೆ ಅಂಥ ಆರೋಪ ಹೊರಿಸಲೂ ಅವಕಾಶವಿಲ್ಲ. **"The mixutre of two elements (Marathi and Dravidian) is best illustrated by the peculiarities of the (Marathi) language whose base is Dravidian, but whose structure has been entirely fashioned by Aryan influence."**

ನ್ಯಾಯಮೂರ್ತಿಯವರ ಈ ನಿರ್ಣಯದ ಬಗ್ಗೆ ಕೂಡ ಕೆಲವರು ಪ್ರಶ್ನೆ ಕೇಳಬಹುದು. ರಾನಡೆಯವರಿಗೆ ಭಾಷಾಶಾಸ್ತ್ರದಲ್ಲಿ ಪ್ರಾವೀಣ್ಯವೆಲ್ಲಿಂದ ಬಂದಿತು? ತಮ್ಮದಲ್ಲದ ಕ್ಷೇತ್ರದಲ್ಲಿ ಅಭಿಪ್ರಾಯ ಹೇಳಲು ಅವರಿಗೇನು ಅಧಿಕಾರ?

ಭಾರತೀಯ ಭಾಷೆಗಳ ಉಗಮ ಮತ್ತು ವಿಕಾಸಗಳ ಬಗ್ಗೆ ಸಂಶೋಧನ ಮಾಡುವದೇ ಮುಖ್ಯ ವ್ಯವಸಾಯವಾಗಿದ್ದ ಡಾ॥ ಗ್ರಿಯರ್‌ಸನ್ ಅವರ ಅಭಿಪ್ರಾಯವಾದರೂ ವಿಚಾರಾರ್ಹವಾಗಬಹುದೇ? Linguistic survey of India ಎಂಬ ಹೆಸರಿನ ಪ್ರಚಂಡ ಗ್ರಂಥದ ಮುಖ್ಯ ಸಂಪಾದಕರಾಗಿದ್ದ ಅವರು ಆರ್ಯ ಮತ್ತು ದ್ರಾವಿಡವರ್ಗೀಯ ಭಾಷೆಗಳು ಒಂದರ ಮೇಲೊಂದು ಬೀರಿದ ಪ್ರಭಾವ ಹಾಗೂ ವಿಸ್ತಾರಗಳ ಬಗ್ಗೆ ತಮ್ಮ ಗ್ರಂಥದಲ್ಲಿ ವಿಸ್ತೃತವಾಗಿ ಚರ್ಚಿಸಿದ್ದಾರೆ. ಅವರು ಹೇಳಿದ್ದು: ``When an Aryan tongue comes into contact with an uncivilized aboriginal one, it is invariably the latter which goes to the wall. The Aryan does not attempt to speak it, and the necessities of intercourse compel the aboriginal to use broken pigeon form of the language of a superior civilization. As generations pass this mixed jargon more and more approximates to its model and in process of time the old aboriginal language is frogotten and dies a natural death....we can watch it in all stages of its progress."

ಮೇಲಿನ ಅವತರಣಿಕೆಯಲ್ಲಿಯ aboriginal ಮತ್ತು uncivilized ಈ ಎರಡು ಶಬ್ದಗಳನ್ನು ಬಿಟ್ಟರೆ ಉಳಿದೆಲ್ಲ ವಿಷಯ ಶಾಸ್ತ್ರೀಯವಾಗಿದೆಯೆಂದು ಭಾಷಾಶಾಸ್ತ್ರದ ದೃಷ್ಟಿಯಿಂದ ಹೇಳಲು ಅಡ್ಡಿಯಿಲ್ಲ. ಗ್ರಿಯರ್‌ಸನ್ನರ ಕಾಲಕ್ಕೆ ಸೈಂಧವ ಸಂಸ್ಕೃತಿಯ ಉತ್ಖನನ ಇನ್ನೂ ಸುರುವಾಗಿರಲಿಲ್ಲ. ಆದ್ದರಿಂದಲೇ ಗ್ರಿಯರ್‌ಸನ್ನರಂಥ ಜನ ಮೇಲಿನಂತೆ ಶಬ್ದಗಳನ್ನು ಉಪಯೋಗಿಸುತ್ತಾರೆ. ಆರ್ಯವರ್ಗೀಯ ಭಾಷೆಗಳು ಪ್ರಸರಣಶೀಲವಾಗಿವೆ. ಅವು ಎಲ್ಲಿ ಕಾಲಿಡುತ್ತವೋ ಅಲ್ಲಿಂದ ಹಿಮ್ಮೆಟ್ಟುವದಿಲ್ಲ. ಅವುಗಳು ವಿಶೇಷವಾದ ಬೆಳವಣಿಗೆಯನ್ನು ಪಡೆಯದಿದ್ದರೂ ಅಲ್ಲಿಂದ ಕಾಲು ಕೀಳುವದಿಲ್ಲ. ನೀಲಗಿರಿ, ಟ್ರ್ಯಾಂವಣ್ ಕೋರ, ಮದ್ರಾಸ ಇಂಥ ಕಡೆಗಳಲ್ಲಿ, ಮಹಾರಾಷ್ಟ್ರದ ಎಲ್ಲ ಸಂಬಂಧವನ್ನೂ ಕಡಿದುಕೊಂಡಿರುವ ಪ್ರಾಂತಗಳಲ್ಲಿ, ಯಾವುದೋ ಕಾಲಕ್ಕೆ ಹೋಗಿದ್ದ ಮರಾಠಿಗರು ಇಂದಿಗೂ ತಮ್ಮ ಭಾಷೆಯನ್ನು ಹರಕು-ಮುರುಕಾದ ರೂಪದಲ್ಲಿಯೇ ಆಗಲಿ ಉಳಿಸಿಕೊಂಡು ಬಂದಿದ್ದಾರೆ.

ದ್ರಾವಿಡ ಭಾಷೆಗಳದು ಇದಕ್ಕೆ ವಿಪರೀತವಾದ ಸ್ಥಿತಿ ಎಂಬುದು ಗ್ರಿಯರ್‌ಸನ್ನರಿಗೆ ಎಲ್ಲ ಕಡೆ ಅನುಭವಕ್ಕೆ ಬಂದಿದೆ. ಆರ್ಯಭಾಷಾ ವರ್ಗೀಯ ಪ್ರದೇಶದಲ್ಲಿ ಸಿಕ್ಕ ದ್ರಾವಿಡವರ್ಗೀಯ ಭಾಷೆಗಳು ಕಾಲಾಂತರದಲ್ಲಿ ಇಲ್ಲದಂತಾಗುತ್ತದೆ, ಇದರ ಅರ್ಥ ದ್ರಾವಿಡವರ್ಗೀಯ ಭಾಷೆಯವರು ಆರ್ಯವರ್ಗದ ಭಾಷೆಯನ್ನು ಸ್ವೀಕರಿಸಿ ತಮ್ಮ ಭಾಷೆಯನ್ನು ಮರೆತುಬಿಡುತ್ತಾರೆಂದೇ ಅಲ್ಲವೇ ? ದ್ರಾವಿಡ ಭಾಷಿಕರಲ್ಲಿಯೂ ಕನ್ನಡ ಮಾತಾಡುವವರಲ್ಲಿ ಈ ನಿಯಮ ನೂರಕ್ಕೆ ೯೯ರಷ್ಟು ನಿಜವಾಗಿದೆ. ಸಾತಾರಾ-ಕೊಲ್ಲಾಪುರದ ಕಡೆಯ ಜೈನ ಮತ್ತು ಲಿಂಗಾಯತ ಮನೆತನಗಳಲ್ಲಿ ಕನ್ನಡ ಹೇಗೆ ಲುಪ್ತವಾಗುತ್ತದೆಂಬುದನ್ನು ಈ ಕ್ಷಣಕ್ಕೂ ನೋಡಲು ಸಿಗುತ್ತದೆ. ಬೇವೂರ, ಮುಧೋಳಕರ, ಗಜೇಂದ್ರಗಡಕರ, ಬನಹಟ್ಟಿ, ವಿಜಾಪುರಕರ ಮೊದಲಾದ ಶುದ್ಧ ಕನ್ನಡ ಅಡ್ಡಹೆಸರಿನ ಮನೆತನಗಳು ಮಹಾರಾಷ್ಟ್ರಕ್ಕೆ ಹೋದ ಮೇಲೆ 'ಹೇ ಆಮ್ಹಾಸೀ ಕಾನಡೆ' ಎಂದು ಹೇಳುವ ಪರಿಸ್ಥಿತಿ ಉಂಟಾಗುತ್ತದೆ. ಕರ್ನಾಟಕದಲ್ಲಿ ಹರಿಹರ, ಶ್ರವಣಬೆಳ್ಗೊಳದ ವರೆಗೆ ಮರಾಠಿ ಭಾಷೆಯ ಪ್ರತಿಧ್ವನಿ ಕೇಳುತ್ತದೆಂದರೆ ಅದರ ಅರ್ಥವೇನು? ಡಾ॥ ಗ್ರಿಯರ್‌ಸನ್ನರ ಸೂತ್ರದ ಮೇರೆಗೆ ಮರಾಠಿ ಭಾಷಿಕರು ಅಲ್ಲಿಯ ವರೆಗೆ ಹಬ್ಬಿಕೊಂಡಿದ್ದರು, ಮಹಾರಾಷ್ಟ್ರದ ವಿಸ್ತಾರ ಅಲ್ಲಿಯವರೆಗೆ ಆಗಲು ಹವಣಿಸುತ್ತಿತ್ತು ಎನ್ನಬೇಕಾಗುತ್ತದೆ. ಡಾ॥ ಗ್ರಿಯರ್‌ಸನ್ ತಮ್ಮ ಸಂಶೋಧನದ ನಿಶ್ಚಿತಸೂತ್ರದ ಮೇರೆಗೆ ಬಲೂಚಿಸ್ತಾನದಲ್ಲಿರುವ ದ್ರಾವಿಡವರ್ಗೀಯ ಅವಶಿಷ್ಟವಾದ ಬ್ರಾಹುಯೀ ಭಾಷೆ ಹೊರಗಿನಿಂದ ಬಂದದ್ದೆಂದು ಹೇಳಲು ಸಿದ್ಧರಿಲ್ಲ. ದ್ರಾವಿಡ ವರ್ಗದ ಜನ ಸಿಂಧಪಂಜಾಬಗಳವರೆಗೆ ಹಬ್ಬಿಕೊಂಡಿದ್ದರು. ಆರ್ಯರ ಪ್ರಸಾರಕ ವೃತ್ತಿಯಿಂದಾಗಿ ದ್ರಾವಿಡವರ್ಗದ ಭಾಷೆಗಳು ವಿದೀರ್ಣವಾದವು.

ತಳಕ್ಕೆ ಮುಳುಗಿ ಹೋದ ಅವು ಬ್ರಾಹುಯೀಯ ರೂಪದಲ್ಲಿ ಅವಶಿಷ್ಟವಾಗಿ ಉಳಿದುಕೊಂಡಿವೆ. ಇದರ ಮೇಲಿಂದ ವರ್‍ಹಾಡದ ಕಡೆಯ ಚಾಂದಾ, ಭಂಡಾರಾ ಜಿಲ್ಲೆಗಳಲ್ಲಿ ಇನ್ನೂ ಜೀವಂತವಾಗಿರುವ ಕುರುಂಬ ಮತ್ತು ಹೊಲೆಯರ ಕನ್ನಡ ಮತ್ತು ನಾಸಿಕ ಖಾನದೇಶದ ಕಡೆಯ ಹೆಸರಿಗೆ ಕನ್ನಡವಾಗಿರುವ ಹಟಕಾರ, ಗೌಳಿಗಳು (Kanadas) ಇವರೆಲ್ಲ ಹೊರಗಿನಿಂದ ಬಂದವರಾಗಿರದೆ ಆ ಭಾಗದ ಮೂಲಜನರೆಂದೇ ಸಿದ್ಧವಾಗುತ್ತದೆ. ಮರಾಠಿಯ ಪ್ರಚಾರದಲ್ಲಿ ಕರಗುತ್ತ ಬಂದಿದ್ದ ಕನ್ನಡದಲ್ಲಿ ಉಳಿದು ಹೋದ ಅವಶೇಷ ಇದಾಗಿದೆ.

ಹಳೆಯ ಮರಾಠಿ ಮತ್ತು ಕನ್ನಡ ಭಾಷೆಗಳ ತೌಲನಿಕ ಅಭ್ಯಾಸವನ್ನು ಮಾಡಿದರೆ ಈ ಭಾಷೆಗಳು ಒಂದು ಕಾಲಕ್ಕೆ ಒಂದೇ ಕಡೆಯಲ್ಲಿ ಬೆಳೆದುಬಂದಿರಬೇಕೆಂಬ ನಿರ್ಣಯಕ್ಕೆ ಬಂದು ತಲುಪುತ್ತೇವೆ. ಕನ್ನಡದ ಪ್ರಾಕೃತ ರೂಪಗಳು, ಮರಾಠಿಯ ಜನ್ಮಕ್ಕಿಂತ ಮೊದಲೇ, ಇವೆರಡರ ನಡುವೆ (ಕನ್ನಡ ಮತ್ತು ಪ್ರಾಕೃತ) ನಿಕಟವಾದ ಸಂಬಂಧವಿತ್ತೆಂದು ತೋರಿಸುತ್ತವೆ. ಮರಾಠಿಯ ಮೂಲಜನ ಮತ್ತು ಕನ್ನಡ ಮೂಲಜನ ಇವರ ನಡುವೆ ಆನುವಂಶಿಕ ಸಂಬಂಧವಿತ್ತೆಂದು ಮರಾಠಿಯಲ್ಲಿಯ ಕನ್ನಡದ ಎಳೆತ, ನಾಮಪದ ಮತ್ತು ಧಾತುರೂಪಗಳು ಸೂಚಿಸುತ್ತವೆ. ಕರ್ಣಾಟ ಮತ್ತು ಮರಹಟ್ಟದಲ್ಲಿಯ ಮಲ್ಹಾರಿ, ವಿಠ್ಠಲ ಮೊದಲಾದ ದೇವತೆಗಳು, ಜನರ ರೀತಿ, ನಡೆವಳಿಕೆಗಳು ಇವು ಮೇಲಿನ ಭಾಷಿಕ ಪ್ರಮಾಣಗಳನ್ನು ಪುಷ್ಟೀಕರಿಸುತ್ತವೆ. ಚಾಲುಕ್ಯ-ರಾಷ್ಟ್ರಕೂಟ ಮೊದಲಾದ ಕರ್ಣಾಟ ಮರಹಟ್ಟದ ರಾಜಮನೆತನಗಳು ತಮ್ಮ ವಂಶವೃಕ್ಷ ಯದು-ತುರ್ವಸುಗಳಿಂದ ಬೆಳೆದು ಬಂದವೆಂದು ಹೇಳುತ್ತವೆ. ಕಾನಡೇ ಮತ್ತು ಮರಹಟ್ಟೆ ಇವರಲ್ಲಿ 'ಆನುವಂಶಿಕ ಸಂಬಂಧವಿರಬೇಕು' ಎಂಬ ನಿರ್ಣಯ ಕೊಡುವ ಪ್ರಮಾಣಗಳನ್ನು ಪರೀಕ್ಷಿಸಿದರೆ ತಾವು ಯದು-ತುರ್ವಸು ವಂಶೀಯರೆಂಬ ಈ ಮನೆತನಗಳ ನಂಬಿಕೆ ನಿರಾಧಾರವಲ್ಲವೆಂದು ತೋರುತ್ತದೆ.

ಅಲ್ಲದೆ ಪಾಲೀ ಗ್ರಂಥಗಳ ಮೇಲಿಂದ ಅಂಧಕವೃಷ್ಣಿಯಾದವರ ಕುಲ ಪರಂಪರೆ ಆರ್ಯೇತರವೆಂದು ಕಾಣುತ್ತದೆ. ವೇದಗಳ ಕೆಲಅಂಶಗಳು ಈ ತರ್ಕಕ್ಕೆ ಪೋಷಕವಾಗಿದೆ. ಇದೇ ಸೂತ್ರದ ಮೇರೆಗೆ ಇತಿಹಾಸಕಾಲದ ರಿಷ್ಟಿಕ-ಭೋಜಕರ ಪರಂಪರೆ ಕೂಡ ಉದ್ಬೋಧಕವಾಗಿದೆ. ಇಂದು ಗೊತ್ತಿರುವ ಸಂಗತಿಗಳನ್ನು ಲೆಕ್ಕಕ್ಕೆ ಹಿಡಿದು ಗತಕಾಲದ ಅಭ್ಯಾಸ ನಡೆಸಿದರೆ, 'ಅವಳಿ ಸೋದರಂತೆ ಕಾಣುವ ಕಾನಡೇ ಮತ್ತು ಮರಾಠೆ' ಇವರ ಪೂರ್ವಪರಂಪರೆ ರಿಷ್ಟಿಕ-ಭೋಜಕ, ಯದು-ತುರ್ವಸುಗಳಂಥ ಜೋಡಿ ಹೆಸರುಗಳ ಜನರ ಹತ್ತಿರ ಮುಟ್ಟಿಸುತ್ತದೆ.* ವೇದ ಕಾಲದಲ್ಲಿ ಆರ್ಯೇತರ ದ್ರಾವಿಡವರ್ಗೀಯ ಜನ ಇವರು ಪಂಚನದ ದೇಶದಲ್ಲಿದ್ದರೆಂದು ಆಧುನಿಕ ಸಂಶೋಧಕರ ಅಭಿಪ್ರಾಯವಿದೆ. ಅದರ ಜಾಡುಹಿಡಿದು ನಡೆದರೆ, ವೇದದಲ್ಲಿಯ ಯದು-ತುರ್ವಸುಗಳ ಅಸ್ತಿತ್ವ, ಮೊಹೆಂಜೊದಾರೋದಂಥ ದೊಡ್ಡ ನಗರವನ್ನು ನಿರ್ಮಿಸಿ ವೈಭವದಿಂದ ಇದ್ದ ಪುರುವಿನ ದರ್ಶನವನ್ನು ಮಾಡಿಸುತ್ತವೆ. ಮಹಾಭಾರತದಲ್ಲಿಯ ಯದುಗಳ ಕುಟುಂಬ ಪದ್ಧತಿ ಮತ್ತು ರೀತಿ ರಿವಾಜುಗಳ ಮೇಲಿಂದ ಅವರು ಆರ್ಯೇತರರಾಗಿದ್ದರೆಂದು ದೃಢವಾಗಿ ಹೇಳಬಹುದು. ಈ ತರ್ಕವನ್ನು ಪಾಲೀಗ್ರಂಥಗಳಲ್ಲಿಯ ಉಲ್ಲೇಖಗಳು ಪುಷ್ಟೀಕರಿಸುತ್ತವೆ. ಪ್ರಾಕೃತಭಾಷೆಗಳಲ್ಲಿಯ ವಿಕೃತಿಗಳ ಸರಳವಾದ ಅರ್ಥವನ್ನು ಹಚ್ಚಲಿಕ್ಕೆ ಆ ಭಾಷೆಗಳ ಮೂಲಜನ ಆರ್ಯೇತರರಿದ್ದರೆಂದು ತಿಳಿಯದೆ ಗತ್ಯಂತರವಿಲ್ಲ. ಮತ್ತು ದಕ್ಷಿಣಾಪಥದ ಎಲ್ಲ ರಾಜಮನೆತನಗಳು ತಮ್ಮ ಸಂಬಂಧವನ್ನು ಯದು-ತುರ್ವಸುಗಳೊಂದಿಗೆ ಜೋಡಿಸುತ್ತಾರೆಂಬ ಸಂಗತಿಯಿಂದ ಈ ತರ್ಕ ದೃಢತಮವಾಗುತ್ತದೆ.

ಈ ರೀತಿಯಲ್ಲಿ ಯಾವದೇ ದೃಷ್ಟಿಕೋನದಿಂದ ವಿಚಾರಮಾಡಿದರೂ ಅದೇ ನಿರ್ಣಯ ದೃಢವಾಗುತ್ತದೆ ಮತ್ತು ಮಹತ್ವದ ಸಂಗತಿಗಳಲ್ಲಿ ಪರಸ್ಪರ ತಾಳಮೇಳವಿದ್ದರೆ ಈ ತರ್ಕದಲ್ಲಿ ಬಹಳಷ್ಟು ತಥ್ಯಾಂಶವಿರಬೇಕೆಂದು ಹೇಳಿದರೆ ಅನುಚಿತವಾಗಲಿಕ್ಕಿಲ್ಲ.

---

* ಶಂಬಾ ಅವರ ಈ ತರ್ಕಬದ್ಧ ಸೂತ್ರವು ಸಾಂಸ್ಕೃತಿಕವಾಗಿ ಮಹತ್ವದ್ದು. ಈ ಅಂಶವು 'ಕರ್ಣಾಟ ಸಂಸ್ಕೃತಿ ಪೂರ್ವ ಪೀಠಿಕೆ' ೧೯೬೭ರ ಗ್ರಂಥದಲ್ಲಿ ಮುಂದುವರೆಯುತ್ತದೆ (ಸಂ).

ಟಿಪ್ಪಣಿ

೧. ಪ್ರಾಚೀನ ಮಹಾರಾಷ್ಟ್ರ ಭಾಗ ೧, ಪು ೧೪

೨. South Indian Inscriptions Vol. I pp. 63,65.

೩,೪. Russels : Castes and Tribes in Berar

೫. ***Epirgraphia Indica,*** XIV p. 155

೬. ***Mysore Arch,*** Rept. 1929

೭. Bagachi P.C., ***Indian Historical Quarterly,*** 1933 p. 254

೮. ***Indian Antiquery,*** VII p. 293

೯. Wilson Philological Lectures, 1867 pp. 46, 47, 81, 87, 108

೧೦. ***'Kolerian & Dravidian Place-names.'*** J.R.A.S. 1903 Part III. ಮೇಲಿನ ಅವತರಣಿಕೆಯೊಡನೆ ತುಲನಾತ್ಮಕವಾಗಿ ನೋಡಬಹುದು

೧೧. ೧೯ನೆಯ ಶತಮಾನದ ಕೊನೆಯವರೆಗೆ (ಈ ಶತಮಾನದ ಪ್ರಾರಂಭದ ತನಕ) ಅಂದರೆ ದಕ್ಷಿಣದಲ್ಲಿ ರಾಷ್ಟ್ರೀಯ ಭಾವನೆ ಜಾಗೃತವಾಗುವವರೆಗೆ ಮಹಾರಾಷ್ಟ್ರದ ಬ್ರಾಹ್ಮಣನನ್ನು ಯಾರಾದರೂ 'ಮರಾಠಾ' ಎಂದು ಕರೆದರೆ ಅವನಿಗೆ ಅಪಮಾನವಾದಂತಾಗುತ್ತಿತ್ತು. ಅವನು ತಟ್ಟನೆ ಉತ್ತರವನ್ನು ಕೊಡಬಹುದಾಗಿತ್ತು : 'ಛೆ! ಛೆ! ನಾನು ಮರಾಠಾ ಅಲ್ಲ ದಕ್ಷಿಣದ ಬ್ರಾಹ್ಮಣನಾಗಿದ್ದನೆ." ಜದುನಾಥ ಸರಕಾರರ 'ಶಿವಾಜಿ ಚರಿತ್ರೆ' ಅನುವಾದ ಶ್ರೀ ವಿ. ಸ. ವಾಕಸಕರ, ಪುಟ ೨೮೫ (***Shivaji & his times***-Sir Jadunath Sarkar, 1919 p. 484. ಮೂಲಕೃತಿಯನ್ನು ನೋಡಿ.)

೧೨. R. V. Russell and Hiralal : ***Tribes and Castes of Central Provinces,*** Vol. I pp 361; 249 to 255 and ***Tribes and Castes of Nizam Dominions,*** Vol. I p. 165

೧೩. Mr. Sherring's, ***Berar Gazetteer,*** pp. 202-222., vol III p.105; tribes and Castes of Nizam's Dominion Vol I. See Hatgar and Dhangar; Enthoven Vol I p. 312 etc

೧೪. Krishnaswamy Iyengar S., ***The Satwats*** : Proceedings of the 2nd Oriental Conference. 1922

೧೫. "Diverse Indications point to the Dravidian substrata having made itself felt in Mathura for a long time..." Mythic Society Journal, Silver Jubilee November, p. 48

೧೬. "The Aryans were a People who had never known a city. Their way of life is clearly presented in the Rigveda, and is far from being that of complicated. urban organisation". ***'Pre-historic India',*** Stuart Piggot, penguin Books. P. 263

೧೭. "It is perfectly reasonable to hold that the Turvasas and yadus were two distinct though closely allied tribes". Macdonell and Keith. Vedic Index Vol I and II

೧೮. Ephigraphia Indica Vol, I. IX P. 340

೧೯. Vedic Index Vol II P. 273

೨೦. B.C. Law, " The rastrikas who were almost associated with the Bojas must have occupied the adjoining tracts and it may be assumed that they were located in the very region where present Marthas have their habitat". Some Ancient Indian Tribes, Indian Culture,1935, p. 390.

೨೧. ಅಪಭ್ರಂಶ ಕಾವ್ಯತ್ರಯೀ ಪುಟ. ೬೩

೨೨. "They still retain their manly independence of character, they have strong well developed physique and they still carry their heads with the same haughtly toss as their forefathers did in ther stirring fighting days, where as on old proverb had it, 'the slain rested in yard of the slayer' and where every warrior constantly carried his sword and shield. Both men and women of Banta community are among the comeliest of Asiatic races. (Castes and Tribes in southern India. Vol. I. p. 149)

೨೩. Vincent Smith. Early History of India, p. 430

೨೪. "The familiar phrase Rastrakoota, Pramukhan Kutumbinh, which occurs in copper plate inscriptions, shows also that the Rashtrakutas were i. e. cultivators, who enjoyed a higher social status than others of their community." (***Epigraphia Indica*** XI, p.p. 342-343)

೨೫. 'Nattar meaning: people of the Country reported by some to be a main caste and some others a sub. caste of Vellalas. Nearly all those who returned the name came from salem and were cultivators.' (Thurston Vol, IV. p. 140)

೨೬. "Kanadas are a peculiar race of drovers who some-times visit the western forests of Khandesh... They appear to be descended from Dravidian Immigrants, but (to our misfortune) have no tradition to that effect and no special language. More civilized and respectable than most wandering herdsmen, they differ little from Maratha husband men, and in parts of Nasik, have taken entirely to agriculture. They have a peculiar breed of black and white cattle, hatkar, (ಹಟಗಾರ-ದನ) which, though not large, are much prized for their strength and spirit....take good care of their cattle." Khandesh Gazeteter, p. 105

೨೭. "The cattle breeding tribes, the Kanadas.... who formed a fair proportion of the people...mainly depend on their herds and flocks....the Kanadas were remarkably well off. Some Kanada hamlets with not more than three or four houses had as many as 500 cattle and 500 goats" (Nasik Gazeetteer. 232)

೨೮. Memorial stones are found all over the District and are specially numerous near the sahyadris....Shivar has a remarkable group of memorial stones.... One group of unusually large stones occur at Chousale... The faces are carved with rude figures, sometimes of one or more men on horse back, sometimes armed with swords..... sometimes rude inscriptions are carved under figures.... The people say that they were raised by the villagers, The custom seems to have prevailed among all cultivating classes, especially among Kunabis, Kolis and Vanjaris, Nasik gazetteer, P. 647

೨೯. Vincent Smith, ***Early History of India,*** p. 434-35

೩೦. Andhra Historical Journal, Vol. 10- P. 95

೩೧. 'Linguistic Survey of India' Vol. IV P. 446

೩೨. ಡಾ. ತಳವುಳೆ 'ಮರಾಠಿ ಸಾಹಿತ್ಯ ಪತ್ರಿಕಾ' ಸಂಚಿಕೆ ೯೯, ೧೯೫೧

೩೩. Vaidyanath Kasheenath Rajvaade, All this leads me to the conclusion that the original word was ಶ್ಚಂದ್ರ in Pre-Vedic times. of Rig Veda, it had shed its ಶ- and that it showed its original spelling in some cases, but its absence in others (ಅಭಿಚಂದ್ರಾನ್, ಸಚಂದ್ರ, ಇತ್ಯಾದಿ) shows that had become popluar and that no attempts could dislodge it. This is the only explanation intelligible to me. Proceedings of the Fifth Oriental conference, Vol. I, page 273

೩೪. 'ಚಂದ್ರ' appears to denote gold in certain number of passages from Rig Veda onwards Vedic Index, Vol I, p. 254

೩೫. Rajavade. V. K., "ಚಂದ್ರ and ಮಾಃ both meaning the Moon belonged to two separate groups of the Aryan race. As in course of time these groups merged into one big race, so did their languages or dialects. Hence the existence of synonyms. Some of these synonyms came unconsciously to be combined. Hence the origin of tautological compounds as ಚಂದ್ರಮಾಃ (ಚಂದ್ರ+ಮಾಸ್). One comes across such instances in Marathi, though by their very nature, they number very few (proceedings of the Fifth oriental conference Vol. p. 277)

೩೬. Mac-donell and A. B. Keith, Vedic Index., "ಚಂದ್ರ and ಚಂದ್ರಮಸ್ are the names of the Moon, the latter occuring onwards from the Rigveda, the former being first used in this sense by the Atharva Veda. Very little is said about the Moon in Vedic Literature, except as identified with Soma, both alike being described as waxing and waning."

೩೭. History of Tamils, page 536

೩೮. Ephigraphia Carnatica ix H.R. 30 XI DG p. 14, 96, 103 etc.

೩೯. The Kanarese equivalent is ಕನ್ನರ represent the Sanskrit ಕರ್ಣ (Ep. Ind. Vol. iv. p. 336)

೪೦. "It is clear from what has been written, that the history of a word like Linga is not without improtance for the study of religion.... A series of study meant to prove that a certain number of myths, legends and tales of Aryan India, have been borrowed from Astro-Asiatic people. ***Pre-Aryan and Pre-Dravidian***, pp. 8-15.

೪೧. ಶ್ವೇತಾಶ್ವತರೋಪನಿಷತ್ ೧. ೧೩, ನಿರ್ಣಯಸಾಗರ ಮುದ್ರಣಾಲಯ

೪೨. "He (ಕಾರ್ತಿಕೇಯ) is everywhere revered as household deity and numerous temples are erected for his worship. The shépherds claim him as tutelary deity. He is most frequently represented as riding on horse-back, attended by a dog and accompanied by his wife ಮ್ಹಾಳಸಾ, another form of ಪಾರ್ವತಿ. As he generally carries in his hand a big sword, his name is popularly derived from Khande (sword)." (Karmrakar - O. P. ***'Religions of India'*** ಎಂಬ ಗ್ರಂಥದಿಂದ ಉದ್ಧೃತ, ಭಾಗ ೧-ಪುಟ ೧೬೪)

೪೩. Mac-donell A, Here Parvata Seems to be a Mountain God; Vedic Mythology, p. 154

೪೪. A. B. Keith, ***The Religion and Philosophy of the Vedas and Upanishads***, p. 148

೪೫. 'Vakataka-Gupta' by R. C. Mujumdar & Dr. Altekar

೪೬. ರಾಜವಾಡೆ 'ಲೇಖಸಂಗ್ರಹ' ಭಾಗ ೩ ಪುಟ : ೨೪೬-೨೫೪

೪೭. ಪ್ರೊ. ಮಿರಾಶಿ, "ಶಾಲಿವಾಹನ ಶಕೆಯ ಪೂರ್ವಪೀಠಿಕೆ"-"ನವಭಾರತ" ೧೯೫೧ ಜನವರಿ-ಈ ಲೇಖನದಲ್ಲಿ ಮಹಿಷ ಜನರ ಪರಿಚಯವಿದೆ.

೪೮. ನವಭಾರತ, ಫೆಬ್ರುವರಿ ಸಂಚಿಕೆ ಪು : ೫೨

೪೯. Bhandrakar Commemoration Vol. p. 40

೫೦. ಈ ಹೆಸರು ಹೇಗೆ ಸಾರ್ಥಕವಾಗಿದೆಯೆಂದು ಮೊದಲು ನವಭಾರತದಲ್ಲಿ ಒಂದು ಲೇಖನದಲ್ಲಿ ನಾನು ಸ್ಪಷ್ಟಪಡಿಸಿದ್ದೆ. (ನವಭಾರತ, ಸೆಪ್ಟೆಂಬರ್ ೧೯೪೯). 'ಗುರುಮಾರ್ಗ' ಈ ಹೆಸರು ಡಾ|| ಸೌ|| ಇರಾವತೀಬಾಯಿ ಕರ್ವೆಯವರಂಥ ಚಿಕಿತ್ಸಕ ವಿಚಾರಶೀಲರಿಗೆ ಮಾನ್ಯವಾಗಿದೆಯೆಂದು ಗೊತ್ತಾಗಿದೆ. (ಮರಾಠೀ ಲೋಕಾಂಚೀ ಸಂಸ್ಕೃತಿ ಪುಟ ೨೫೨, ೫೩)

೫೧. Mac-donell, Vedic Index Vol. II, p. 297

೫೨. ನೋಡಿ, ತೈತ್ತಿರೀಯ ಸಂಹಿತಾ, ೬.೨.೭೫, ನಿರ್ಣಯಸಾಗರ ಮುದ್ರಣ

೫೩. The Later vedic literature repeatedly refers to a legend which shows that the yatis incurred the hostility of Indra and were destroyed as a consequence. The yati were not originally priests of the vedic cult like the Bhrigus and kanwas, but non vedic rites were practised by the indigenous pre-Aryan population of the Indus Valley. In the legend of the Slaughter of the yatis by Indra we probably hear an echo of the conflict between native priesthood and intruding Rishis in the proto-historic period..... As Applied to a priest, yati can only mean a person engaged in religious exercises such as tapas, austerities and yoga. Von Schoreder understands by the term, a magician priest or a Shramana. The marble statuette of Mohenjo-Daro, with head, neck and body quite erect and half-shut eyes fixed on the tip of the nose, has the exact posture of one engaged in practising yoga. These yatis primarily yogis receded into the backgound, were gradually reduced to the condition of then out-caste religious mendicants or Vratyas. (Survival of the Prehistoric Civilization of the Indus valley: Memoir of the Archaelogical Survey of India, No 41-1921)

೫೪. Gorakhnath and Medieval Mysticism

೫೫. 'Karu means not only tall but great and it seems highly probable that the Prakrit Speaking inhabitants of the North of Deccan high Lands, simply translated the word 'Karunadu' into 'Maharashtra' to desingnate the area from which they come. ***Indian Antiquary.*** vol. VII.p. 175

೫೬. ಕರ್ಪೂರ ಮಂಜರೀ ನಾಟಕ, ಅಂಕ ೧-೧-೨೫; ಹಾವರ್ಡ್ ಯುನಿವರ್ಸಿಟಿ ಪ್ರಕಾಶನ, ಪುಟ ೧೬೦

೫೭. Epigraphia Indica Vol. III - 87

೫೮. Ibid, Vol IV P. 261 ಮತ್ತು Ibid, Vol XII P. 24

೫೯. ಈ ಕೈಫಿಯತ್ತಿನ ಹೆಸರು 'ಅರ್ಕಾಡ ಸಂಸ್ಥಾನದ ಕೈಫಿಯತ್ತು' ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ, Vol, IX ಪು. ೧೩೩-೧೩೭

೬೦. ಮಹಾರಾಷ್ಟ್ರ ಸಾಹಿತ್ಯ ಪತ್ರಿಕಾ Vol. II, ಪುಟ. ೮೫

ಕರ್ನಾಟದ ವೀರಕ್ಷತ್ರಿಯರು

ಅಥವಾ

ಹಟ್ಟಿಕಾರರು

ದಿವಂಗತ
ಪೂಜ್ಯ ಶ್ರೀ ಮಂಜೇಶ್ವರ ಗೋವಿಂದ ಪೈ

ಮಾನ್ಯರೆ,

ಆಮರಣ ಜ್ಞಾನೋಪಾಸನೆಗಾಗಿ ತಪಿಸಿದ ತಮ್ಮ ಸ್ಮೃತಿ ಪವಿತ್ರವಾಗಿದೆ. ತಮ್ಮ ಸಂದರ್ಶನವು, ಈ ಪ್ರಬಂಧದ ಮೂಲಕ ಲಭ್ಯವಾಯಿತು. ಅದನ್ನೋದಿ ತಾವು ಕಳಿಸಿದ ಮೆಚ್ಚಿಕೆಯ ಸಂದೇಶ, ನನ್ನ ಈವರೆಗಿನ ಅಭ್ಯಾಸ ಹಾಗೂ ಸಾಂಸ್ಕೃತಿಕ ಸಮೀಕ್ಷೆಯ ಕೆಲಸದಲ್ಲಿ ಆತ್ಮವಿಶ್ವಾಸವನ್ನು ತಂದಿದೆ. ನನ್ನನ್ನು ಗೇಲಿಮಾಡಿ ದಿಗ್ಭ್ರಾಂತನನ್ನಾಗಿಸುವ ಸಂಚಿನ ಮಾತಿನ-ಮಾಟದ ಒಂದು ಪ್ರಯತ್ನ, ನಿಷ್ಪ್ರಯೋಜಕವಾಗಲು ತಮ್ಮ ಅಮೋಘ ಆಶೀರ್ವಾದವೆ ಕಾರಣವಾಗಿರುವುದನ್ನು ಕಾಣುತ್ತಿದ್ದೇನೆ.

ಅಂದು ತಮ್ಮ ಅಟ್ಟದ ಮೇಲಣ ಸರಸ್ವತೀ ಮಂದಿರದಲ್ಲಾದ ತಮ್ಮ ಮೊದಲ ಭೆಟ್ಟಿಯ ಆ ಸಂಸ್ಮರಣೀಯ ಪ್ರಸಂಗ, ಈ ಪ್ರಬಂಧದ ನಿಮಿತ್ತದಿಂದ ಮರಳಿ ಕಣ್ಣಮುಂದೆ ನಿಲ್ಲುತ್ತದೆ. ತಮ್ಮ ಅಪೂರ್ವ ಆತಿಥ್ಯ ಪಡೆದು ತಮ್ಮನ್ನು ಬೀಳ್ಕೊಂಡು ಹೊರಡಲು ಏಳುವಾಗ, ತಾವು ಕೇಳಿದಿರಿ, "ಜೋಶಿಯವರೆ, ನೀವು ಕುಳಿತ ಈ ಹಾಸು ನೋಡಿದಿರಾ? ಅದು ಏನು?" ಎಂದು. ಉರುಟು ದಪ್ಪಎಳೆಗಳು ಹಾಸುಹೊಕ್ಕಾಗಿದ್ದ ಆ ಹಸನಾದ ಬಿಳಿಯ ಆಸನ ಗುಡಾರದ ಒಂದು ಹಾಳೆ ಇರಬೇಕು ಎಂದು ಗ್ರಹಿಸಿ ಹಾಗೆ ಹೇಳಿದೆ. ಕೂಡಲೆ, ಸುಹಾಸ್ಯವದನರಾಗಿ ಕೈಕುಲುಕಿ "ಹಾ! ಜೋಶಿಯವರೆ, ನೀವೇ ಬರೆದಿಲ್ಲವೊ, ಮರದ ಬಟ್ಟೆಗಳ ಬಗೆಗೆ! ಇದು, ಅಂಥ ಒಂದು 'ಝಾಡಿ'" ಎಂದು ಅಪ್ಪಣೆ ಕೊಡಿಸಿದಿರಿ!

ಕಾಡಿನೊಳಗಿನ ಒಂದು ಹೆಮ್ಮರದ ತೊಗಟೆಯ ಒಳಪದರು ಗುಡಾರದ ಹಾಳೆಯಂತೆ, 'ಝಾಡಿ' ಯಾಗಿದ್ದುದನ್ನು ಸಾಕ್ಷಾತ್ತಾಗಿ ತೋರಿಸಿದ ಶ್ರೇಯಸ್ಸು ತಮಗಿದೆ. ನನಗಂದು ಮೊದಲ ಭೆಟ್ಟಿಯಲ್ಲಿ ಒಂದು ಅಪೂರ್ವ 'ಝಾಡಿ'ಯ ಮೇಲೆ ಕುಳ್ಳಿರಿಸುವಲ್ಲಿ ತಾವು ತೋರಿದ ಔಚಿತ್ಯವು ತಮ್ಮ ರಸಿಕ ಕುಶಲತೆಯ ಸಾಕ್ಷಿ. ಈ ಪ್ರಬಂಧದೊಳಗಿನ 'ಝಾಡಿ', 'ತೊಗಟಿಗರು' ಇವರ ಬಗೆಗೆ ಪ್ರತ್ಯಕ್ಷ ಪ್ರಮಾಣವನ್ನು ಒದಗಿಸಿದ ತಮಗೆ ಈ ಪ್ರಬಂಧವನ್ನು ಸಮರ್ಪಿಸುವಲ್ಲಿ ಒಂದು ಕೃತಾರ್ಥತೆಯ ಆನಂದವುಂಟು.

–ಶಂ. ಬಾ. ಜೋಶಿ

ಅರಿಕೆ

ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ।
ತತ್ತ್ವಂ ಪೂಷನ್ ಅಪಾವೃಣು ಸತ್ಯಧರ್ಮಾಯದೃಷ್ಟಯೇ।।

-ಈಶಾವಾಸ್ಯ

'ಪ್ರಥಮ ಕರ್ಣಾಟವು ನರ್ಮದಾತೀರ'ವೆಂಬ ಬಗ್ಗೆ ಈಗ ಸಂದೇಹವೇ ಉಳಿದಿಲ್ಲ. ಡಾ. ಎ. ವೆಂಕಟಸುಬ್ಬಯ್ಯ,M.A., Ph. D. (Germ.) ಶ್ರೀಮಾನ್ ಮಂ. ಗೋವಿಂದ ಪೈ, ಶ್ರೀ ಡಿ. ವಿ. ಗುಂಡಪ್ಪ, ಡಾ. ಬಿ. ಎ. ಸಾಲೆತೂರ, M.A. Ph. D. (Lond). D Phil. (Germ), ಪ್ರೊ. ಆರ್. ವ್ಹಿ. ಜಹಗೀರದಾರ,M.A. (Lond.) M.B.A.S. ಶ್ರೀ ದೊರೆಸ್ವಾಮಿ ಅಯ್ಯಂಗಾರ್ಯ ಮೊದಲಾದ ವಿದ್ವಾಂಸರು ಈ ಮಾತನ್ನು ಎತ್ತಿಹಿಡಿದು ಅದಕ್ಕೆ ತಮ್ಮ ಸಂಪೂರ್ಣ ಸಮ್ಮತಿಯನ್ನಿತ್ತಿದ್ದಾರೆ.

'ಕಣ್ಮರೆಯಾದ ಕನ್ನಡ'ದೊಳಗಿನ ಎಷ್ಟೋ ವಿಚಾರಗಳ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಅದರೊಳಗಿನ ಮುಖ್ಯ ಪಲ್ಲವಿಯಾದ 'ಪ್ರಥಮ ಕರ್ಣಾಟಕ'ದ ಸಿದ್ಧಾಂತವನ್ನು ಮಾತ್ರ ಅಲ್ಲಗಳೆಯಲಾಗುವದಿಲ್ಲವೆಂದು ಸಂಶೋಧಕರಾದ ಬಲ್ಲಿದರು ತಮ್ಮ ನಿರ್ಣಯವನ್ನು ಕೊಟ್ಟುದಕ್ಕಾಗಿ ನಾನು ಅವರಿಗೆ ಅತ್ಯಂತ ಕೃತಜ್ಞನಾಗಿದ್ದೇನೆ. ಹೊಸ ಸಂಗತಿಗಳು ಗೊತ್ತಾದ ಬಳಿಕ ಅದಕ್ಕನುಸರಿಸಿ ಕೆಲವು ಮಾತುಗಳನ್ನು ನಾನು ಮಾರ್ಪಡಿಸಿಕೊಂಡಿದ್ದೇನೆ. ಈ ವರೆಗೆ ಕನ್ನಡರ ಮೂಲಸ್ಥಾನದ ಸರಿಯಾದ ಕಲ್ಪನೆಯಿಲ್ಲದ್ದರಿಂದ ದಕ್ಷಿಣಾಪಥದ ಇತಿಹಾಸದೊಳಗಿನ ಎಷ್ಟೋ ಸಂದಿಗ್ಧ ಸಮಸ್ಯೆಗಳಿಗೆ ಸಮಾಧಾನಕರವಾದ ಕಾರಣ ಮೀಮಾಂಸೆಯೆ ಗೊತ್ತಾಗುತ್ತಿದ್ದಿಲ್ಲ.

'ಪ್ರಥಮ ಕರ್ಣಾಟ'ವೆಲ್ಲಿ, ಎಂಬುದರ ನಿರ್ಣಯವಾದುದರಿಂದ ಕರ್ಣಾಟಕ-ಮಹಾರಾಷ್ಟ್ರದ ಜಾತಿ-ಜನಾಂಗ, ಭಾಷೆ ಮತ್ತು ಇತಿಹಾಸದೊಳಗಿನ ಹಲವು ತೊಡಕುಗಳು ಬಹಳ ಸುಲಭವಾಗಿ ಬಿಟ್ಟು ಹೋಗುತ್ತಿವೆ. 'ಮಹಾರಾಷ್ಟ್ರದ ಮೂಲ'ದಲ್ಲಿ ಈ ಪ್ರಶ್ನೆಯನ್ನು ಕೆಲಮಟ್ಟಿಗೆ ವಿವೇಚಿಸಿದ್ದಾಗಿದೆ. ಮಹಾರಾಷ್ಟ್ರದ ವಿದ್ವಾಂಸರೊಡನೆ ವಿಚಾರ-ವಿನಿಮಯವನ್ನು ಮಾಡುವುದಕ್ಕಾಗಿ ಪುಣೆಯ ಭಾರತ ಇತಿಹಾಸ ಸಂಶೋಧಕಮಂಡಲದ ಒಂದು ಪಾಕ್ಷಿಕ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಿದ್ದಾಯಿತು. ಪುಣೆಯ ಕೇಸರೀ ಪತ್ರದಲ್ಲಿ 'ಮಹಾರಾಷ್ಟ್ರದ ಮೂಲ'ದ ಸಾರಾಂಶವು ಪ್ರಸಿದ್ಧವಾಯಿತು. ಅದನ್ನೋದಿದ ಕೆಲವು ತಜ್ಞರು ಅನುಕೂಲ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. "ನಿಮ್ಮ ವಿಚಾರವು ಹುರುಳುಳ್ಳದ್ದಾಗಿದೆ. ಮರಾಠೀ ಭಾಷೆಯಲ್ಲಿ ಕನ್ನಡದ ವರ್ಚಸ್ಸು ಇಷ್ಟೊಂದು ವಿಶೇಷವಿರುವ ಕಾರಣವೇನೆಂಬುದರ ಉಪಪತ್ತಿಯು ನಿಮ್ಮ ಸಿದ್ಧಾಂತದಿಂದ ಬಹಳ ಸಮರ್ಪಕವಾಗಿ ಗೊತ್ತಾಗುತ್ತಿದೆ" ಎಂದು ತಮ್ಮ ಸಮ್ಮತಿಯನ್ನಿತ್ತು ಕೊನೆಗೆ ಇನ್ನೂ ಹೆಚ್ಚು ಪ್ರಮಾಣಗಳನ್ನು ದೊರಕಿಸಿ ಈ ಮಾತನ್ನು ಪುಷ್ಟೀಕರಿಸಲು ಹಲವರು ಸೂಚಿಸಿದ್ದಾರೆ.

ಅದಕ್ಕನುಸರಿಸಿ ಇನ್ನೂ ಕೂಲಂಕಷವಾಗಿ ನಡೆಸಿದ ವಿಮರ್ಶೆಯಲ್ಲಿ ಹಲಕೆಲವು ಸಂಗತಿಗಳನ್ನು ಸಂಗ್ರಹಿಸಿ ವಿದ್ವಾಂಸರ ಮುಂದಿರಿಸಿದ್ದೇನೆ. ಇದರೊಳಗೆ ಎಷ್ಟೋ ಕುಂದು-ಕೊರತೆಗಳು ಉಳಿದಿರುವುದು ಸ್ವಾಭಾವಿಕ. ಇದು ತೀರ ಹೊಸ ವಿಷಯವಾದುದರಿಂದ ವಿವರಿಸಿ ಹೇಳುವಾಗ ದ್ವಿರುಕ್ತಿ ದೋಷವು ಅನಿವಾರ್ಯವಾಯಿತು. ಈ ಬಗೆಯ ತಪ್ಪು-ತಡೆಗಳನ್ನು ಸೂಜ್ಞರಾದ ವಾಚಕರು ಮನ್ನಿಸುವರೆಂದು ನಂಬಿದ್ದೇನೆ. ಇದರಲ್ಲಿ ಹೊನ್ನು ಎಷ್ಟು ಹಿತ್ತಾಳೆಯೆಷ್ಟು? ಎಂಬುದನ್ನು ಬಲ್ಲಿದರು ನಿರ್ಧರಿಸಬೇಕಾಗಿ ಬಿನ್ನಹ. ಪ್ರಸ್ತುತ ಪ್ರಬಂಧದಲ್ಲಿ ಮುಖ್ಯವಾಗಿ ಕನ್ನಡರು ನರ್ಮದಾತೀರದ ನಾಡಿನಲ್ಲಿ ನೆಲೆಯಾಗುವ ಮೊದಲಿನ ಅವಸ್ಥೆಯ ವಿಚಾರವು ಬಂದಿದೆ. ಇದು ಕನ್ನಡದ 'ಹಟ್ಟಿಕಾರತನ'ದ ಕಾಲ (Nomadic period) ಈ ಕಾಲದ ಕನ್ನಡರ ಚರಿತೆಯೆಂದರೆ, ಅದು ಗೌಳ (ಗೌಡ)ರು ಮತ್ತು ಜಾಡರಕತೆಯೆ ಕತೆ.

ಪ್ರಾಚೀನ ಕರ್ಣಾಟಕದ ನಿಜವಾದ ಇತಿಹಾಸವು ಬೆಳಕಿಗೆ ಬಂದಂತೆ ಕರ್ಣಾಟ-ಮಹಾರಾಷ್ಟ್ರದ ಸಮಸ್ಯಾಪೂರ್ತಿಯಾದ ಹಾಗೆ ಆಂಧ್ರ-ಕರ್ಣಾಟದ ಗೂಢವು ತನ್ನ ತಾನೇ ಬಯಲಿಗೆ ಬರುತ್ತಲಿದೆ. ಕನ್ನಡ ಹಟ್ಟಿಕಾರರಲ್ಲಿಯೇ ಹಲವಾರು ಆರೇ (ಆರ್ಯ) ರಾದುದು, ತೆಲುಗರಾದುದು ಹೇಗೆ ಎಂಬುದು ಈ ಲೇಖನದಿಂದ ಕೆಲಮಟ್ಟಿಗಾದರೂ ವಿಶದವಾಗಿ ಸ್ಪಷ್ಟವಾಗಬಹುದೆಂದು ಆಸೆಯಿದೆ. ಈ ಪ್ರಬಂಧದಲ್ಲಿಯೂ ಭಿನ್ನಾಭಿಪ್ರಾಯಗಳಿಗೆ ಅವಕಾಶವಿಲ್ಲದಿಲ್ಲ. ಆದರು, 'ಕನ್ನಡರು ದ್ರಾವಿಡರ ಒಂದು ಶಾಖೆಯವರೆಂ'ಬುದು ನಿಶ್ಚಿತವಿದ್ದರೆ, 'ದ್ರಾವಿಡರು ವೇದ-ಪೂರ್ವಕಾಲದಿಂದಲೂ (ಕೊನೆಗೆ ಆರ್ಯ ರಷ್ಟಾದರೂ ಪ್ರಾಚೀನರಾಗಿ) ಹಿಂದೂ ದೇಶದಲ್ಲಿ ಪ್ರಬಲರಾಗಿದ್ದರೆ' ಂಬುದು ನಿಜವಿದ್ದರೆ ಕನ್ನಡರ ಮೂಲ ಜನಾಂಗದ ಐತಿಹ್ಯವು ವೇದಕಾಲದಿಂದಾದರೂ ಗೊತ್ತಾಗಲಿಕ್ಕೇಬೇಕಷ್ಟೇ? ಹಾಗಾದರೆ ಆ ಇತಿಹಾಸವೇನು? ಕನ್ನಡಿಗರಿಗೆ ತಾವು ಏನಿದ್ದೆವು, ಏನಾಗಿರುವೆವು, ಮುಂದೆ ಮಾಡಬೇಕೇನು ಎಂಬಿವೇ ಮೊದಲಾದ ಸಂಗತಿಗಳ ಸ್ಪಷ್ಟಜ್ಞಾನ ವಾಗಬೇಕಾಗಿದ್ದರೆ, ಇವರಿಗೆ ತಮ್ಮ ಸ್ಥಿತಿ ಮತ್ತು ಗತಿಯ ಅರಿವು ಉಂಟಾಗುವುದು ಆವಶ್ಯಕವಾಗಿಲ್ಲವೆ? ಸಾದ್ಯಂತವಾದ ಇತಿಹಾಸ-ಪೂರ್ವಕಾಲದ ಕನ್ನಡರ ಚರಿತೆಯನ್ನು ಬರೆಯುವುದಕ್ಕೆ ಯಾರಾದರೂ ಸಮರ್ಥರಾದ ವಿದ್ವಾಂಸರು ಮುಂದೆ ಬರುವವರೆಗೆ ಈ ಕೊರತೆಯು ಹಾಗೇ ಉಳಿಯುವಂತೆ ತೋರುತ್ತದೆ.

ನಾನೀಗ ಬರೆಯಬೇಕೆಂದು ಕೈಕೊಂಡಿರುವ ವಿಷಯವು ಅನಂತವೂ ಅಪಾರವೂ ಆದುದು. ನನ್ನಂತಹನಿಗಿದು ಸಣ್ಣ ಬಾಯ್ಗೆ ದೊಡ್ಡ ತುತ್ತು. ನಾನು ಇದನ್ನು ಬರೆಯಲುಪಕ್ರಮಿಸುವುದು-ಕಾಲಿದಾಸನ ಮಾತಿನಲ್ಲಿ ಹೇಳಬೇಕಾದರೆ ಉಪಹಾಸಕ್ಕೆ ಕಾರಣ. ಆದರೂ ಆಂತರಿಕ ಒತ್ತಾಯದ ಮೂಲಕವಾಗಿ ಇದನ್ನು ಬರೆವ ಸಾಹಸವನ್ನು ಮಾಡಿದ್ದೇನೆ. ಅದರಲ್ಲಿಯೂ ಸಂಶೋಧನಶಾಸ್ತ್ರದಲ್ಲಿ ನಿಷ್ಣಾತರಾದ ಇಬ್ಬರು ಹಿರಿಯರ ಆಶೀರ್ವಾದ, ಪ್ರೋತ್ಸಾಹಗಳ ಬೆಂಬಲವಿಲ್ಲದಿದ್ದರೆ ಎಲ್ಲ ಬಗೆಯಿಂದಲೂ ಅನನುಕೂಲ ಪರಿಸ್ಥಿತಿಯಲ್ಲಿ ಒದ್ದಾಡುತ್ತಿರುವ ನನ್ನಿಂದ ಲೆಕ್ಕಣಿಕೆಯನ್ನು ಎತ್ತುವುದೇ ಸಾಧ್ಯವಿದ್ದಿಲ್ಲ. ಆ ಆಂತರಿಕ ಒತ್ತಾಯವನ್ನು ದುರ್ಲಕ್ಷಿಸಬಹುದಾಗಿತ್ತು.

ಈ ಪ್ರಬಂಧವನ್ನು ಬರೆವಾಗ ಪ್ರೊ. ಸಾಸನೂರರು ಗ್ರಂಥಸಹಾಯವನ್ನು ಒದಗಿಸಿ ಕೊಡದಿದ್ದರೆ ಇದೆಲ್ಲವೂ ಮೂಕನ ಕನಸೇ ಆಗುತ್ತಿತ್ತು. ಕರ್ಣಾಟಕ ವಿದ್ಯಾವರ್ಧಕ ಸಂಘದವರು 'ಕಣ್ಮರೆಯಾದ ಕನ್ನಡ' 'ಮಹಾ ರಾಷ್ಟ್ರದ ಮೂಲ'ಗಳಿಗೆ ಮೆಚ್ಚುಗೆಯನ್ನಿತ್ತು. ಸ್ವಲ್ಪಾದರೂ ಧನಸಹಾಯವನ್ನು ಮಾಡಿರದಿದ್ದರೆ, ಮೊದಲಿನ ಅಚ್ಚಿನ ವೆಚ್ಚದ ಭಾರವೇ ಹೆಚ್ಚಾಗಿ, ನನ್ನಿಂದ ಈ ಹೊಸ 'ದಂದುಗ'ಕ್ಕೆ ಕೈಯಿಕ್ಕುವುದು ಸಾಧ್ಯವಿದ್ದಿಲ್ಲ. ಆದುದರಿಂದ, ಇವರಿಗೆ ನಾನು ತುಂಬ ಉಪಕೃತನಾಗಿದ್ದೇನೆಂದು ಬೇರೆ ಹೇಳಬೇಕಾಗಿಲ್ಲ. ಪಡೆಯಚ್ಚಿನ ಶಾಲೆಯ ಒಡೆಯರಾದ ಶ್ರೀ ಪೋತದಾರ ಶ್ರೀನಿವಾಸರಾಯರೂ ಮತ್ತು ಅಚ್ಚುಕೂಟದ ಒಡೆಯರಾದ ಶ್ರೀ ರಾಯದುರ್ಗ ಕೃಷ್ಣರಾಯರೂ ಮಾಡಿದ ಸಹಾಯವನ್ನು ಇಲ್ಲಿ ಉಲ್ಲೇಖಿಸದೆ ಇರಲಾರೆನು. ಇದರಂತೆಯೇ ಬಗೆಬಗೆಗಳಿಂದ ನೆರವಾದ ಇನ್ನೂ ಕೆಲವು ಹಿತಚಿಂತಕರೂ ಮಿತ್ರರೂ ಉಂಟು, ಅವರಿಗೆಲ್ಲರಿಗೂ ನನ್ನ ಅನಂತಾನಂತ ಪ್ರಣಾಮಗಳು.

ಸಾಧನಕೆರೆ, ಧಾರವಾಡ — -ಶಂ. ಬಾ. ಜೋಶಿ

ಬರೆದ ಮಿತಿ : ಹಟ್ಟಿಯಹಬ್ಬ

ಅಚ್ಚಾದ ಮಿತಿ : ಫಾಲ್ಗುಣ ವದ್ಯ ೫

A Spontaneous opinion of an eminent Scholar of Karnataka After his first reading of this book

I cannot but congratulate you on the production of such an unusually excellient work. So far I know no spade else than yours has yet delved deeper into the dark and unknown past of Karnataka. Yours have been the greatest pains to reach the other side of that unknown past and I promise, yours will be glory of Columbus ere long.

Govind Pai

ಬಿನ್ನಹ*

ಈ ಪ್ರಬಂಧವು ಮೊದಲಬಾರಿ 'ಕರ್ಣಾಟ ವೀರಕ್ಷತ್ರಿಯರು' ಅಥವಾ 'ಹಟ್ಟಿಕಾರ-ದನಗಾರರು' ಎಂಬ ಹೆಸರಿನಲ್ಲಿ ಹಿಂದೆ ಪ್ರಕಟವಾಗಿತ್ತು (೧೯೩೬). ಕರ್ಣಾಟದ ಮೂಲಿಗರು ಯಾರಿರಬಹುದು? ಅವರ ಸಂಸ್ಕೃತಿಯು ಬೆಳೆದುಬಂದ ಹಂತಗಳು ಯಾವುವು? ಕರ್ಣಾಟ ಸಂಸ್ಕೃತಿ, ಭಾರತೀಯ ಸಂಸ್ಕೃತಿ ಎಂದು ಎರಡು ಪದಗಳನ್ನು ಬಳಸುತ್ತೇವೆ. ಹಾಗಾದರೆ ಇವೆರಡೂ ತೀರ ಬೇರೆಯೆ? ಅಥವಾ ಇವರೆಡರಲ್ಲಿ ಸಮಾನ ಸಂಗತಿಗಳು ಉಂಟೆ? ಇದ್ದರೆ ಅವು ಯಾವುವು? ಬೇರೆತನವು ಯಾತರಲ್ಲಿ ಒಳಗೊಂಡಿದೆ? 'ಸಂಸ್ಕೃತಿ' ಎಂಬ ಮಾತನ್ನು ಸ್ಥೂಲವಾಗಿ ಬೇಕಾದಹಾಗೆ ಬಳಸಲಾಗುತ್ತದೆ; ಅದರ ಅರ್ಥ ನಿಶ್ಚಿತಿಯ ಪ್ರಯತ್ನವು ಅವಶ್ಯವಿಲ್ಲವೆ?..... ಹೀಗೆ ಹಲವಾರು ಪ್ರಶ್ನೆಗಳು ಒಮ್ಮೆಲೆ ಎದ್ದು ತಲೆ ಕೆಡುವ ಹೆದರಿಕೆಯು ಉಂಟಾಗದ ಸುಶಿಕ್ಷಿತರು ವಿರಳ, ಎಂದು ನನಗೆ ಕಂಡಿದೆ.

ಲೋಕಮಾನ್ಯರಿಂದ ದೊರೆತ ಪ್ರೇರಣೆ. ಮಹಾತ್ಮಾಜಿಯವರಿಂದ ದೊರೆತ ಪೋಷಣೆಯಲ್ಲಿ ಆಕಾರ ಪಡೆದ ಉತ್ಸಾಹಶಕ್ತಿಯನ್ನು ನನ್ನ ಸ್ವಂತದ ತಿಳುವಳಿಕೆಯನ್ನು ಹಸನಾಗಿಸಿಕೊಳ್ಳುವುದಕ್ಕಾಗಿ ವಿನಿಯೋಗಿಸುವುದೇ ಸ್ವ. ಪರಹಿತಕ್ಕೆ ಕಾರಣವಾದೀತೆಂಬ ಶ್ರದ್ಧೆಯು ದೃಢವಾಗಲು, ನನ್ನ ಈ ಸಾಂಸ್ಕೃತಿಕ ಕ್ಷೇತ್ರಯಾತ್ರೆಗೆ ಪ್ರಾರಂಭ ವಾಗುತ್ತದೆ. ಕೇವಲ ಜ್ಞಾನಾರ್ಜನೆಯ ಗುರಿಯು ಶ್ರೇಷ್ಠವೇ? ಎಂಬ ಬಗೆಗೆ ಇಂದಿಗೂ ಸಂದೇಹಿ ನಾನು. ಕರ್ಮವು ಜ್ಞಾನದಲ್ಲಿ 'ಪರಿಸಮಾಪ್ಯತೇ' ಎಂದು ಗೀತೆಯು ಹೇಳಿರುವ ಮೂಲಭೂತ ವಿಚಾರವು ನನಗೆ ತತ್ತ್ವತಃ ಹೆಚ್ಚು ಮಾನ್ಯ. ಜ್ಞಾನದಲ್ಲಿ ಪರಿಸಮಾಪ್ಯವಾಗುವ ದೃಷ್ಟಿಯಿಂದ ಆಮರಣ ಸತ್ಕಾರ್ಯನಿರತನಾಗಿರುವ ರೀತಿಯಲ್ಲಿ ಬಾಳುವುದು ಪ್ರಶಸ್ತಮಾರ್ಗ. ಕೇವಲ ಗ್ರಂಥಾಲಯದಲ್ಲಿ ಹುಗಿದುಕೊಳ್ಳುವವನಿಗೆ 'ಜೀವನ'ದ ನೆಳಲು ಮಾತ್ರ ನೋಡಲು ದೊರೆಯಬಲ್ಲದು.

ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಕಾರ್ಯಕಲಾಪಗಳಲ್ಲಿ ಭಾಗಿಯಾಗಿ ಮಾನವ ಸ್ವಭಾವದ ಏರುಪೇರುಗಳನ್ನು ಕಾಣುತ್ತಿರುವಾಗ, ಆ ಜೀವನಪ್ರವಾಹದಲ್ಲಿ 'ಸ್ವ' ಸ್ವ-ರೂಪದರ್ಶನವೂ ಆಗುತ್ತದೆ-ಅಹಂ

---

* 'ಕರ್ಣಾಟ ಸಂಸ್ಕೃತಿಯ ಪೂರ್ವಪೀಠಿಕೆ'ಯ ದ್ವಿತೀಯ ಭಾಗವೆಂದು ಈ ಪುಸ್ತಕವು ೧೯೬೭ರಲ್ಲಿ ಮರು ಮುದ್ರಣಗೊಂಡಿತು. ಈ ಹೊಸನಾಮಕರಣದ ಉದ್ದೇಶ: ೧೯೬೭ರಲ್ಲಿ 'ಕರ್ಣಾಟ ಸಂಸ್ಕೃತಿಯ ಪೂರ್ವಪೀಠಿಕೆ' ಎಂದು ಕಂನಾಡ ಜನರ ನೆಲೆ-ಬೆಲೆ ತಿಳಿಯುವ ತಾತ್ತ್ವಿಕ ಗ್ರಂಥ ಬರೆದರು. ಅದಾದ ಮೇಲೆ ಅದರ ಉಪಪೂರಕವಾಗಿ ಇದನ್ನು ಮರುನಾಮಕರಣ ಮಾಡಿ ಹೊಸಹೆಸರಿನಿಂದ ಪ್ರಕಟಿಸಿದರು (ಸಂ).

ಕಾರಿಯಾಗಿ, 'ತಾನೇ ಸರಿ; ಉಳಿದವರು ತಪ್ಪುಗಾರರು' ಎಂಬ ಆವೇಶದಿಂದ ಅಂಧನಾಗಿರದಿದ್ದಲ್ಲಿ ಪ್ರಸ್ತುತ ಈ ಮಾತು ಯಾತಕ್ಕೆ ಎಂದರೆ, ಯಾವ ನಾಡು-ನುಡಿ, ಸಂಸ್ಕೃತಿಯ ಪುನರುಜ್ಜೀವನಕ್ಕೆಂದು ಸಂಕಲ್ಪಬದ್ಧನಾಗಿ ಕೆಲಸಕ್ಕೆ ಹೊರಟೆನೋ ಅದರ ಬಗೆಗೆ ಯಾವ ನಿಶ್ಚಿತ ತಿಳುವಳಿಕೆಯೆ ಇಲ್ಲದೆ, ನನ್ನಿಂದಾದ ಸಂಕಲ್ಪದ ಬಗೆಗೆ ನನಗೇ ನಾಚಿಕೆಯಾಯ್ತು! ಹೊರಗಿನ ಪ್ರಪಂಚದೊಡನೆ ಮನೋಭಾವದಿಂದ ಸಂಪೂರ್ಣವಾಗಿ ಸಂಬಂಧವನ್ನು ಇಟ್ಟುಕೊಂಡಲ್ಲಿ ಸ್ವಂತದ ಅಜ್ಞಾನ ನಿರ್ವೃತ್ತಿಯು ಆದ್ಯಕರ್ತವ್ಯವೆನಿಸಿತು. ಓರ್ವ ಸ್ವಯಂಸೈನಿಕನಾಗಿ ನನ್ನಿಂದಾಗ ಬಹುದಾಗಿದ್ದ ಪ್ರತ್ಯಕ್ಷ ಕಾರ್ಯಕ್ಕಿಂತ, ಈ ವ್ಯಾಸಂಗದ ಮೂಲಕವಾಗಿ ಆಗಬಹುದಾದ ಕೆಲಸವು ಹೆಚ್ಚು ಪರಿಣಾಮಕಾರಿ ಯಾದೀತೆಂದು ಎನಿಸಿತು. ಸತ್ಯಾನ್ವೇಷಣೆಯು ನನ್ನೀವ್ಯಾಸಂಗದ ಫಲಿತವು ಏನೇ ಇರಲಿ ಅದು ಸತ್ಯವನ್ನು ಹುಡುಕಿಕೊಂಡು ಹೊರಟ ಇನ್ನುಳಿದವರಿಗೆ ಪರ್ಯಾಯದಿಂದಲಾದರೂ ಕೆಲಮಟ್ಟಿಗೆ ಉಪಯುಕ್ತವಾಗದೆ ಇರಲಾರದು, ಎಂಬ ವಿಶ್ವಾಸವು ನನ್ನನ್ನು ಈ ಕ್ಷೇತ್ರದಲ್ಲಿ ತಳ್ಳಿಕೊಂಡು ಹೊರಟಿತು.

ಪ್ರಸ್ತುತ ಪ್ರಕಟನೆಗೆ 'ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ' ಎಂದು ಹೆಸರಿಸಲು ಕಾರಣಗಳುಂಟು. ಮೂವತ್ತು ವರುಷಗಳ ಹಿಂದೆ ಈ ನಾಡಿನ ಮೂಲಿಗರನ್ನು ಕುರಿತು ನಡಸಿದ ಸಮೀಕ್ಷೆಯ ಫಲಿತವಿದು. ಇದಕ್ಕೂ ಮುಂಚೆ, 'ಮೊದಲ ಬಾರಿ ಕರ್ನಾಟವು ಮೈವೆತ್ತುದು ಭಾರತದ ಯಾವ ಭಾಗದಲ್ಲಿ?' ಎಂಬ ಪ್ರಶ್ನೆಯುಂಟಾಗಿ ಅದರ ವಿವರವು ಎರಡು ಪ್ರಕಟನೆಗಳಲ್ಲಿ ಬಂದಿತು. ಮೊದಲು 'ಕರ್ನಾಟ' ಎಂಬುದು ಎಲ್ಲಿಯ ವರೆಗೆ ಇದ್ದಿತು? 'ಗೋದಾವರಿವರಂ' ಎಂಬುದು ನಿಜವೆ? ಅತಿಶಯೋಕ್ತಿಯೆ? ಇದನ್ನು ಕೂಲಂಕಷವಾಗಿ ಸಮೀಕ್ಷಿಸಿದವರು ಅಂದು ಯಾರೂ ಇಲ್ಲದ್ದು ವಿಷಾದವನ್ನುಂಟುಮಾಡಿತು. ಕೆಲರನ್ನು ವಿಚಾರಿಸಿದರೆ ಅಭಿಮಾನದ ಆವೇಶದಲ್ಲಿ ಅದನ್ನು 'ವಾಸ್ತವ ಸತ್ಯ' ಎನ್ನುವುದು ಕಾಣಿಸಿತು. ಇನ್ನು ಕೆಲರಿಗೆ ಅದು ನಮ್ಮ ಕವಿಗಳ 'ಅತ್ಯುಕ್ತಿ' ಎಂದು ಎನಿಸಿದ್ದು ತಿಳಿಯಿತು! ಇಂತಹ ಸಂದರ್ಭದಲ್ಲಿ ಈ ನಾಡಿನ ಗಡಿಯ ಪೂರ್ವೋತ್ತರಗಳ ವಿಚಾರದೊಡನೆ 'ಮೂಲಿಗರು' ಯಾರು, ಎಂಬ ಪ್ರಶ್ನೆಯೂ ತಲೆಯೆತ್ತಿ ನಿಂತಿತು.

ಹೀಗೆ ಈ ವ್ಯಾಸಂಗವು ಇಡಿಯಾಗಿ ಈ ಜನಜೀವನದ ಏರಿಳಿತಕ್ಕೆ ಸಂಬಂಧಿಸಿದ್ದೇ ಇರುವುದರಿಂದ ಈ ಪ್ರಕಟಣೆಗೆ ಸಂಸ್ಕೃತಿಯ ಪೂರ್ವಪೀಠಿಕೆಯ 'ಪ್ರಸ್ತಾಪ' ಎನ್ನುವುದನ್ನು ನಿರ್ಧರಿಸಿದ್ದಾಯ್ತು. ಮೂವತ್ತು ವರುಷಗಳ ಹಿಂದಿನ ಈ ಪ್ರಬಂಧಕ್ಕೆ ಈ ವರೆಗೆ ಆದ ಸಂಶೋಧನದ ಪರಿಶಿಷ್ಟ ಅಥವಾ ಪ್ರಸ್ತಾವನೆಯು ಅವಶ್ಯವೆನಿಸಿತು. ಹಾಗೆ ಬರೆಯತೊಡಗಿದಾಗ ಅದು ಇನ್ನೊಂದು ಸ್ವತಂತ್ರ ಪುಸ್ತಕವೆ ಆಗುವಷ್ಟು ದೊಡ್ಡದಾಯ್ತು! ಈ ಭಾಗವು 'ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ'ಯ ಮೊದಲನೆಯ ಭಾಗವೆಂದು ಬೇರೆಯಾಗಿ ಪ್ರಕಟವಾಗಲಿದೆ.

ಇವೆರಡೂ ಭಾಗಗಳ ಜೊತೆಗೇ ಪ್ರಕಟವಾಗಬೇಕಾಗಿರುವ ಇನ್ನೊಂದು ವಿಭಾಗದ ಬಗೆಗೂ ಎರಡು ಮಾತು ಹೇಳುವುದು. ಅವಶ್ಯವೆಂದು ತೋರುತ್ತದೆ. 'ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ'ಯನ್ನು ಅರಿತುಕೊಳ್ಳುವ ಪ್ರಯತ್ನದಲ್ಲಿ, ಭಾರತೀಯ ಸಂಸ್ಕೃತಿಯ ಹುಟ್ಟು ಬೆಳವಿಯ ಸ್ಥೂಲ ಪರಿಚಯವಾದರೂ ಅವಶ್ಯವೆನಿಸಿತು. 'ಕಂನಡದ ನೆಲೆ'ಯನ್ನು ಕಂಡುಕೊಳ್ಳುವ ಸಂದರ್ಭದಲ್ಲಿ ಕಾಣಿಸಿಕೊಂಡ 'ಮೂಲಸ್ಥಾನ ಕಲ್ಲೇಶ್ವರ'ನ ವಿಚಾರವು, ನನ್ನನ್ನು ವೇದಕಾಲದ ವರೆಗೆ ಅಟ್ಟಿಕೊಂಡೊಯ್ದಿತು. ಕರ್ನಾಟ-ಮಹಾರಾಷ್ಟ್ರಗಳ ಸಾಂಸ್ಕೃತಿಕ ಸಂಬಂಧಗಳ ಸಮೀಕ್ಷೆಯಲ್ಲಿ ನನ್ನ ಗಮನ ಸೆಳೆದ ಆದಿನಾರಾಯಣೋಪಾಸಕ ವಿಷ್ಣುಸಂಪ್ರದಾಯದ ಮೂಲಕವಾಗಿಯೂ ನಾರಾಯಣ-ವಿಷ್ಣುದೈವತಗಳ ಹಿನ್ನೆಲೆಯನ್ನು ಅರಿಯಲು ವೇದಕಾಲದ ವರೆಗಿನ ಪ್ರವಾಸವು ಅನಿವಾರ್ಯ ವಾಯಿತು. ಈ ಪ್ರವಾಸದಲ್ಲಿ ನನ್ನ ಅರಿಕೆಗೆ ಬಂದ ಸಂಗತಿಗಳ ಟಿಪ್ಪಣಿಗಳೂ ಬೇಗನೆಯೆ ಪ್ರಕಟವಾಗಲಿವೆ. ಈ ಟಿಪ್ಪಣಿಗಳಲ್ಲಿ ಈ ವರೆಗೆ ಎಂದರೆ ಸುಮಾರಾಗಿ ಕಳೆದ ೩೦-೩೫ ವರುಷಗಳಲ್ಲಾದ ಸಾಂಸ್ಕೃತಿಕ ಕ್ಷೇತ್ರಯಾತ್ರೆಯ ಸಾರಾಂಶವು ಒಳಗೊಂಡಿದೆ. 'ಹಾಲುಮತ ದರ್ಶನ'ದಲ್ಲಿ ಬಂದಿರುವ ಸಂಗತಿಗಳ ಪೂರಕ ಹಾಗೂ ಪೋಷಕ ಸಂಗತಿಗಳನ್ನು ಈ ಮೂರನೆಯ ಪ್ರಕಟನೆಯು ಒಳಗೊಳ್ಳುತ್ತದೆ. 'ಕರ್ನಾಟ ಸಂಸ್ಕೃತಿಯ ಹಿನ್ನೆಲೆ' ಅಥವಾ 'ಭಾರತೀಯ ಸಂಸ್ಕೃತಿಯ ಪೂರ್ವಪೀಠಿಕೆ'ಯನ್ನು ಕುರಿತ ಸಂಗತಿಗಳು ಅದರಲ್ಲಿ ಅಡಕವಾಗಿವೆ.

ಕರ್ಣಾಟಕ ಸಂಸ್ಕೃತಿಯ ಪೂರ್ವೋತ್ತರಗಳನ್ನು ಅರಿಯುವ ಜಿಜ್ಞಾಸೆಯು, ಜನದಲ್ಲಿ ದಿನದಿನಕ್ಕೂ ತೀವ್ರವಾಗುತ್ತಿದೆ. ವಿಶ್ವವಿದ್ಯಾಲಯದಲ್ಲಿ ಓದುವ, ಜ್ಞಾನಲಾಲಸೆಯ ತರುಣರಲ್ಲಿ ತಮ್ಮ ನಾಡು-ನುಡಿಯ ಬಗೆಗಿನ ಹೆಚ್ಚಿನ ವ್ಯಾಸಂಗಕ್ಕೆ, ಇದು ಪರ್ಯಾಯದಿಂದಲಾದರೂ ಉತ್ತೇಜನಕಾರಿಯಾದೀತೆಂದು ನಂಬಿದ್ದೇನೆ. 'ಸಂಶೋಧನದಲ್ಲಿ ಸತ್ಯಾನ್ವೇಷಣದ ದೃಷ್ಟಿಯು - ಸಂಶೋಧನ ಪದ್ಧತಿಯು ಮಹತ್ತ್ವದ್ದು. ಕೇವಲ ಸಂಶೋಧನದ ಫಲಿತವಲ್ಲ' ಎಂದು ತಜ್ಞರು ಹೇಳಿದ್ದು ನಿಜವಿದೆ. 'ಇದು ಸತ್ಯ; ಇದನ್ನು ಪ್ರಸ್ಥಾಪಿಸುವುದು ಕರ್ತವ್ಯ' ಎಂಬೀ ಬಗೆಯ ಶ್ರದ್ಧೆಯೆ ಪ್ರಾರಂಭ ಬಿಂದುವಾಗಿರುವ ಸಂಶೋಧನವು ಸತ್ಯದ ಅನ್ವೇಷಣೆಯೆ ಅಲ್ಲ; 'ಸತ್ಯ' ಎಂದು ತಾನು ಶ್ರದ್ಧೆ ವಹಿಸಿದ್ದನ್ನು ಸಿದ್ಧಪಡಿಸುವ ವಕೀಲೀ ರೀತಿಯ ಹವ್ಯಾಸವು ಅದು. ಇಂತಹ ಸಂಶೋಧನಗಳು ಸತ್ಯಾಸತ್ಯ ನಿರ್ಣಯಕ್ಕೆ ಯಾವ ಬಗೆಯಿಂದಲೂ ಉಪಕಾರವಾಗಲಾರವು. ಯಾವುದೇ ಜನ, ದೇಶದ ಇತಿಹಾಸವು ಮಾನವೇತಿಹಾಸದ ಭಾಗವಾಗಿದೆ. ಆದಕಾರಣ ಮಾನವೇತಿಹಾಸದ ಚೌಕಟ್ಟಿನಲ್ಲಿ ಒಗ್ಗದ ಲೇಖನವು 'ಇತಿಹಾಸ' ಎಂಬ ಹೆಸರಿಗೆ ಅರ್ಹವಾಗದು.

ಇಡಿಯದರ ಅನುಸಂಧಾನದಲ್ಲಿ ಅದರ ಅಂಗದ ಅರ್ಥವು ಸರಿಯಾಗಿ ಆಗಬಲ್ಲದು. ಭಾರತೀಯ ಜೀವನಪ್ರವಾಹವನ್ನು ಲೆಕ್ಕಿಸದೆ, ಅದರ ಅಂಗವಾದ ಕರ್ಣಾಟದ ಜನ, ಭಾಷೆ, ಸಾಹಿತ್ಯ ಅಥವಾ ಸಂಸ್ಕೃತಿಯ ಯಾವುದೊಂದು ಕಾಲದ ವಿವೇಚನವು ಅ. ಸಮಗ್ರಮವೇ ಸರಿ. ಕರ್ಣಾಟ ಭಾಷೆ ಹಾಗೂ ಸಂಸ್ಕೃತಿಯು ಆಕಾರ ತಾಳಿದ್ದು ಭಾರತೀಯ ಸಂಸ್ಕೃತಿಯ ಪ್ರಭಾವದಲ್ಲಿ. ಈ ಭಾಷೆ, ಸಾಹಿತ್ಯ, ಸಂಸ್ಕೃತಿಯ ಬೇರುಗಳು, ಅವೆಷ್ಟೊ ಸಂಸ್ಕೃತದಲ್ಲಿವೆ; ವೇದದಲ್ಲೂ ಇವೆ. ಇದು ಗಮನಕ್ಕೆ ಬಂದಬಳಿಕ ಆದ ಸಮೀಕ್ಷೆಯ ವರದಿ ಇದು. ಈ ಮಾತನ್ನು ಮನಗಾಣಿಸಿಕೊಡಲು ವೇದದೊಳಗೆ ಇರುವ ಕಂದಮಿಳ ಮಾತುಗಳನ್ನು ಹೋಲುವ ಪದಗಳನ್ನು ಕೊಟ್ಟಿದ್ದಾಗಿದೆ. ಕರ್ಣಾಟ ಸಂಸ್ಕೃತಿಯ ಇಂದಿನ ಸ್ವರೂಪ ತಿಳಿಯಲು ಅದು ಬೆಳೆಯುತ್ತ ಬಂದ ಕ್ರಮ ತಿಳಿಯ ಬೇಡವೆ? ಈ ಅಭಿಪ್ರಾಯದ ಸೂಚನೆಗಾಗಿ, ಈ ಪ್ರಬಂಧದಲ್ಲಿ 'ಋಗ್ವೇದ ಕಾಲದಿಂದ ಕಂನಡರ ಕಥೆ'ಯ ಅಂಶಗಳು ಉಂಟು ಎಂದು ಹೇಳಿದ್ದಾಗಿದೆ. ಆದರೆ, ಒಬ್ಬರು ವೇದಕಾಲದಲ್ಲಿ 'ಕಂನಡ ನಾಡುನುಡಿ'ಗಳು ಇವೆಯೆಂದು ಬರೆದಿರುವ ಸಂಶೋಧಕರು ಉಂಟೆಂದು ಪಿಸುಗುಟ್ಟಿದ್ದಾರೆ. ಅವರು, ಗ್ರಂಥದ ಹೆಸರು ಹೇಳಿ ಅವತರಣಿಕೆ ಕೊಟ್ಟು ತಮ್ಮ ಮಾತಿನ ಸತ್ಯವಂತಿಕೆಯನ್ನು ಸಿದ್ಧಪಡಿಸಿದ್ದರೆ ಅದು ಅವರ ನೈತಿಕಧೈರ್ಯದ ಲಕ್ಷಣವಾಗಬಹುದಿತ್ತು. ಅವರು ಯಾರನ್ನುದ್ದೇಶಿಸಿ ವಿಡಂಬಿಸಿದ್ದಾರೆ ಅವರೇ ಬಲ್ಲರು! ಪ್ರಾಚೀನ ಕರ್ಣಾಟ ಹಾಗೂ ಭಾರತೀಯ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು, ಈ ವರೆಗಿನಕಿಂತಲೂ ಹೆಚ್ಚು ಸುಸ್ಪಷ್ಟವಾಗಿ-ಕಾರ್ಯಕಾರಣ ಸಂಬಂಧದೊಡನೆ ಅರ್ಥಯಿಸಿಕೊಳ್ಳಲು ನೇರವಾಗಬಲ್ಲ ಹಲವು ಸಂಗತಿಗಳು (ಪ್ರಮಾಣಗಳು) ಇತ್ತೀಚೆಗೆ ದೊರೆತಿವೆ. ಅವೆಲ್ಲವುಗಳನ್ನು ಈ ಪ್ರಬಂಧದ ಮುನ್ನುಡಿಯಲ್ಲಿ ಸೇರಿಸುವ ಮೋಹದಲ್ಲಿ, ಈ ಪುಸ್ತಕದ ಮೂಲ ಆಕಾರಕ್ಕೇ ಬಾಧೆಬರುವುದಾಗಿ ಕಂಡಿತು. ಅದರಿಂದಾಗಿ ಆ ಭಾಗವನ್ನು ಮೂರನೆಯ ಪ್ರಕಟನೆಯ ರೂಪದಲ್ಲಿ ಬೇರೆಯಾಗಿಯೆ ಕೊಡುವುದೆ ಲೇಸೆನಿಸಿದೆ.

ಈಗ ಪ್ರಕಟವಾಗುತ್ತಿರುವ ಈ ಪ್ರಬಂಧದ ತಳಹದಿಯ ಯಾವ ಮಾತುಗಳನ್ನೂ ಬದಲಿಸುವ ಆವಶ್ಯಕತೆ ಇಲ್ಲ ಎಂಬುದು, 'ಹಾಲುಮತ ದರ್ಶನ'ದ ವರೆಗಿನ ವ್ಯಾಸಂಗದಿಂದ ಗಗನಕ್ಕೆ ಬಂದಿತ್ತು. ಇದರ ವಿವರದೊಳಗಿನ ಕೆಲವು ಉದಾಹರಣೆಗಳನ್ನು ಬಿಡಬಹುದಿತ್ತು ಅಥವಾ ತಿದ್ದಬಹುದಿತ್ತು. ಆದರೆ, ಈ ಕೊರತೆಯಿಂದ ಇಡೀ ಕಟ್ಟಡಕ್ಕೆ ಯಾವ ಬಾಧೆಯೂ ಬರಲಾರದೆಂದು ಬಗೆದಿದ್ದೇನೆ. ಈ ಮೊದಲಿನ ಪ್ರಕಟನೆಗಳಾದ 'ಕಣ್ಮರೆಯಾದ ಕಂನಡ' ಹಾಗೂ 'ಮಹಾರಾಷ್ಟ್ರದ ಮೂಲ' ಇವುಗಳಲ್ಲಿ ಬಂದ ವಿಷಯಗಳ ಸಾರಗ್ರಹಣಕ್ಕಾಗಿ 'ಹಾಲುಮತ ದರ್ಶನ'ವು ಈಗ ಉಪಲಬ್ಧವಿದೆ. ಅದರ ವಾಚನವು, ಈ ಪ್ರಬಂಧದ ಅರ್ಥಗ್ರಹಣಕ್ಕೆ ಪ್ರಯೋಜನಕಾರಿ ಯಾಗಬಲ್ಲದು. ಈ ಪ್ರಬಂಧವು, ಪ್ರಕಟವಾದೊಡನೆ ವಿದ್ವಜ್ಜನರಿಂದ ಪಡೆದ ಮೆಚ್ಚಿಕೆಯು ಅಂದಿನ ಸವಿನೆನಪು

ಎಂದಿಗೂ ಮರೆಯದಂತಹದಾಗಿದೆ. ಇದರಲ್ಲಿ ಕೊರತೆಗಳಿಲ್ಲವೆಂದು ಇದರರ್ಥವಲ್ಲ. ನೆರಳು ಬೆನ್ನಟ್ಟಿಕೊಂಡು ಹೊರಟ ಮಾನವನ ಕೃತಿ ಇದು! ಅವತಾರಿ-ಕಾರಣಿಕರ 'ಆರ್ಷದೃಷ್ಟಿ'ಯ ಅಮರಕೃತಿಗಳ ಸಾಲಿನ ಸಾಹಿತ್ಯವಲ್ಲ ಎಂಬುದನ್ನು ಕ್ಷಣಮಾತ್ರವೂ ಮರೆತು ನಡೆಯದು.

ಈ ಪುಸ್ತಕಕ್ಕೆ ಇಂಗ್ಲಿಷಿನಲ್ಲಿ ಒಳ್ಳೆ ವಿವೇಚನಾತ್ಮಕ ಪ್ರಸ್ತಾವನೆ ಬರೆದುಕೊಟ್ಟು ಉಪಕಾರ ಮಾಡಿರುವ ಡಾ. ದೇಶಪಾಂಡೆ ವಸಂತರಾಯರಿಗೆ ನಾನು ಆಭಾರಿಯಾಗಿದ್ದೇನೆ. ಈ ಪ್ರಕಟನೆಗೆ ನೆರವಾದ ಶ್ರೀ ಘಾಣೇಕರ ಪಿತಾ-ಪುತ್ರರಿಗೆ ಧನ್ಯವಾದಗಳು.

-ಶಂ. ಬಾ. ಜೋಶಿ

FOREWORD

Our author in one of his works, describes history as 'self-knowledge'[1] (a similar view has been put foreword by Profs. Collingwood[2] and Ernst Cassirer[3]).I leave the defence of this view to our author (and the great thinkers); my point is, that such a view throws some light as to the motivations behind Shri. Joshi's streneous preoccupations of the last three decades with certain aspects of social and cultural problems of this land-especially that of Karnatak and Maharashtra(and recenly of the Vedic period).

It would be absurd to deny (notwithstanding some logicians and social anthropologists), that the sociocultural thought and life of living men require the understanding of its past; history is directly useful to such an understanding of the living past. History "is a movement", says Louis Domont, "by which a society reveals itself what it is".[4] In India the need is all the greater; now that we are on the threshold of momentous changes, we must understand ourselves dispassionately and objectively only through, and by standing on the shoulders of our past.

Here I do not write as a critic of what our author has done in the present work, but mostly about histroy-specially about historical explanation (etc); the idea is, that even cursory and extremely brief considerations of this sort would, I hope, provide some kind of back-ground in the light of which, the reader would be enabled for a just and proper estimate of the labours and efforts of our author in the present work.

Whether in history or in science, inquiry begins with a problem-with a question. There may be many reasons, why an investigator may ask such a question or be worried about a problem; he might have been intellectually dissatisfied with the kind of account of certain historical events given by historians of his day; or such an

account may suffer from internal inconsistency; or it may be inconsistent with an already accepted historical explanation; or two historians may be saying exactly opposite things; or, he would be worried to seek an answer, for the inconsistency (nay contradiction) that he may find in the way people actually behave in the (living) present, and the traditional norms and values they overtly and explicitly speak about (-i, e. the split between practice and precept).

In this context let me illustrate by articulating our author's problem. Poets had sung the glory of Karnataka lying between Godavari on the North, and Kaveri in the South. Was this purely a poet's imagination or had some grain of historical truth in it? Now some Maharashtrian scolars claimed that the boundaries of Maharashtra were stretched as far as Tungabhadra, while kannada scholars maintained that Karnatak boundaries had reached the shores of Godavari.

Here was a problem, that needed an answer. Our author said : both the positions (described above) cannot be true. This led him to the question : what might have been the process by which the cultural linguistic entities viz. Karnataka and Maharashtra came into being? What was the common cultural substrata of both? His answer was : the common cultural substrata was Kandamila[5] (a new term he coined to replace the Dravidian, to avoid the highly misleading connotations associated with it); and further, Maharashtra grew on the cultural soil of this pre-Karnataka and pre-Maharashtra substrata.[6]

Again take the theme of the present work. Having argued the hypothesis of a common cultural soil out of which Karnataka and Maharashtra took shape, the next question Shri Joshi asked was: Can any account as to various cultural phases of development of the original speakers of Kandamila be given, till the formation of the old Kannada language? He sought the answer in the back-ground of the general social evolutiouary development in terms of various stages-such as the food gathering, domestication of animals, food-producing (agricultural etc. He uncovered through various historical clues, the following cultural stages of the ancient peopels of Narmada-Kaveri region (the region of Dandakaranya): firstly those in the food-gathering stage, whose livelihood depended on trees and were predominantly tree worshippers [in the Vidarbha, there is Zadimandala and people termed Zades; near Kaveri, Talakadu are the Maravars (and Kalawaras)]; the other cultural layer was that of herdsmen and agriculturists (in the stage of beginnings of agriculture); they are the Dhanagars[7] and Hattikars. In sum, through a detailed consideration of available data,[8] Shri Joshi reached in Marawars and Kurumbas, almost the bottom of

the cultural substrata of the Kandamila-the precursor of the extant Karnataka and Maharashtra.

The kind of question that a historian asks, determines the evidence that is relevent to its answer. This evidence may be of a varied sort: archaelogical, epigraphic, literary, mythical, folkloristic, religious customs, place-names, linguistic (comparative philological) and evidences based on considrations of cross-cultural studies in anthropology[9] etc. The evidences are really clues-clues in the sense, that the acceptance of an evidence is critical acceptance, its value being determined by its ability to throw light on the problem, the historian tackles.

A historian is perforced to make use of many kinds of generalizations-may be simple generalizations about human action, or natural phenomena, or high-level generalizations from science-say, the uncovering of the motives of human action through the use of psycho-analytic concepts- or the use of the generalizations from comparative philology etc. A discerning historian will be critical and cautious in the use of such techniques; but the use of generalizations in the main, is only a means to provide a coherent, unified answer, the historian is trying to provide[10]. If here and there he fails in the strict use of techniques which are of greatest importance to the specialist (the archeologist or the epigraphist or the linguist), that need not vitiate his main results. An historical explanation is a net-work or a web woven out of numerous threads of interpertation of historical clues or evidences; as long as the main thread or hypothesis is continuously substained by these threads, he need feel no qualms; a weak link, or an illegitimate intrusion or a thread, may cause worry to the critic but need not be fatal to the main job of the historian.

A historian has many times to play two roles simultaneously : (i) as a recorder, (ii) and as a historian. In these days of specializaiton, these roles are increasingly separated. For instance, the archeologist tends to work in his specialized fields only; and as in other fields of knowledge, this has created problems in the field of historical scholorship too. Only recently, we saw the famous episode of how an eminent archeologist of international repute, Prof. Wooley refused to give any credence to literary works such as the Rgveda as valuable historical source materials. An archeologist may be so much impressed by the succes of his spade, that for him nothing is genuine historical evidence except the archeological finds; on the other hand, a Sanskritist may find nothing of much importance, except the literary texts. Now, for history, both-the figurines, sealings of the archeologist etc and literary documents of the Sanskritists-are evidence of equal value. While the former

may give valuable information regarding the external manifestations of an ancient civilization, the latter may provide the internal manifestations of man's relegious beliefs, outlook, customs, folkways, religious practices, cultural interaction phenomena etc. We need not think that some historical data is 'hard' (e. g. archeological finds) and other, 'soft' (mythological, folkloristic etc). The problem of how to interpret them remains; but we need not call interpretations in respect of one data as genuine and the other speculative[11] (what is a genuine or valid interpretation and what is speculative is ultimately decidable interms or cannons or critical acceptability-the criteria of critical acceptance varying from one sort or evidence to other).

The point is worth making in view of criticisms made against Shir Joshi for his use of linguistic data; the use of techniques from comparative philology is now a well-established tool; the fact that it is often abused does not imply, that it should not be used at all; such a thing would be like throwing away the baby with the bath; of course, a conclusion arrived at by the use of philological tools, if supported independently, enhances its validity. To avoid jumping to hasty conclussions from linguistic data alone, (as could be seen from his work) Shri Joshi has been in the habit of using them, if only he could find independent confirmation (or other circumstantial-evidence considerations.)

Many historians and logicians simply seem to ignore that historical explanation is of a different kind than that of the scientific. While the crucial interest of history is in specific, singular events and contingencies, the predominant interest of science is in laws (theories). Natural scientific explanation to be adequate, 'must conform to the deductivist model in which a general law or formula applied to a particular case is shown to require, and hence logically to explain, result of such and such description.'

Many philosophers and even historians have come to consider, historical explanations as degenerate cases of the scientific ones; this is a mistake. and is the result of indiscriminate and pathetic 'aping' of the natural sciences. The form of a historical explanation resembles a story or a novel (a view to which I am persuaded by Prof. Collingwood and Gallie).[12] But how does historical narrative differ from that of a story or a novel? The answer is : the historian must make his narration ('picture') as true as possible; it must be an account of things that really happened.

The historian must fulfill the following three requirements (here I follow Gallie)[13]:

1. The historian's picture must be located in space and time
2. All history must be consistent with itself. Purely imaginary worlds cannot clash

and need not agree; each is a world in itself. But there is only one historical world, and everything in it must stand in some relation to everything else.

3. The historian's picture stands in a peculiar relation to something called evidence.

A question of great importance is: what is the historian's criterion of truth? Collingwood's answer is, that the criterion is the idea of history itself; the idea of an imaginary picture of the past.[14] I am not satisfied with this answer, because, if true it would destroy independent criteria of adequacy of interpretation; this adequacy, I believe, is determined in terms of objective standards of truth or falsity (we talk of one particular historical account more truer than another etc). Conceding the role of histroical imagination in providing a smooth, unified, evidenced narrative, we will still need to say, that the adequate historical narrative is one which succeeds in describing 'as faithfully as possible'[15] (whatever that may mean) the actual historical facts or happenings. The task of attempting to confront and compare historical description with the historical reality (a reality which is a thing in the past) is a challenge set to the historian, and to the extent that he succeeds in meeting this challenge, he must be deemed to have succeeded. There may not be the interpretation of certain historical happenings, but to seek such an interpretation is a regulative principle (an Ideal of Reason in the words of Kant) that must always guide an historian.

By describing the criterion of historical truth as the idea of history itself, or to talk of the self-explanatory nature of a unified, evidenced narrative is to give up hope of presenting the historical description viz., the one best avilable faithful description of the historical reality.

It is a naive belief to assume, that there can be only one historical interpretation (even in exact sciences, cases can be cited where, the same phenomena are legitimately explained by more than one theory : e.g. the photon and the wave theory to explain light phenomena). But the existence of many possible interpretations, need not detract the value of a particular historian's attempt to present his account. Of course the historian presents his theme as the only interpretation, an acceptable one because it is evidenced and is an unified narrative. When a historian presents them, he expects others to better his account, and present a more plauisble, better evidenced narrative; or, if there are gaps in his narrative, which can be filled by additional evidence, which the historian has not used, he will expect others to fill them; or, if in the use of certain results he has committed errors, he would expect such errors to be pointed out; or, if in the use of linguistic techniques he has made a slip, or from a literary point of view made a semantic error in reading certain literary texts he would expect others to present such objections, so

that he may amend that part of his narrative; or, if a radical shift in his hypothesis is warranted, he will be even willing to do that. In the absence of any such conscientious criticisms and objections, his narrative must stand as the only acceptable and valid.

6. Whatever the ultimate fate of Shri Joshi's interpretations (and even in exact sciences, theories are continuously modified or even abandoned), he has asked some of the most original questions in the field of sociocultural problems of Karnataka and Maharashtra; he has veritably blazed a new trail. I am sure, no one would be so glad as The himself would be, if someone would overthrow his interpretations by better ones. Of science, a great philosopher Karl Popper, has said : ".....scientific theories are often overthrown by experiments, the overthrow of theories is indeed the vehicle of scientific progress"[16.] The same may be to some extent, adapted to history. Nothing can be dearer to our author, than the 'progress' in historical understanding of our past, whatever the final verdict of his labours.

Dharwar
April ,1965

V. N. Deshpande

REFERENCES

1. S.B. Joshi; ***Marhati Samskriti,*** Antarbharati Prakashan, 1952, p 17.
2. R. G. Collingwood; ***The Idea of History,*** Oxford Univ. Press (paperback), 1962, p. 226; also p. 292.
3. R. G. Collingwood: "History is not knowledge of external facts or events; it is a form of self-knowledge". (quoted from) The Philosophy of Ernst Cassirer, Schilpp Vol. VI, p. 613; also Ernst Cassirer, ***Essay on Man,*** Yals Uni. Press, 1944 p. 64
4. Louis Dumont; (quoted from) ***Essays in Social Anthropology,*** Faber and Faber, 1962, p. 56.
5. Complaint, that the term Dravidian is misleading, is made by Vincent Smith; ***Ancient Indian History,*** p. 429: D. L. Barnett, ***Indian Antiqityy***, H. Weller ABORI, 1937, p. 293
6. Shir Joshi's thesis is supported by a wealth of evidence which is difficult to describe in a nutshell: Manu Smirti puts the limit of Aryavarta in the South, only upto Narmada; further, our author uses a varied sort of evidence to make his point: the study of place-names (e.g. ಪಟ್ಟಿ, ಪಾಡಿ, ವಾಡ, ವಾಡಿ, ಖೋಪ (ಕೊಪ್ಪ), ಹಾಳ, ಹಾಡಿ, ಬೀಡು etc) ***ABORI ; XXXIII,*** 41-6. The study of the names of gods and goddesses (e.g. ಮೈಲಾರ, ಮಲ್ಹಾರ, ಮಾರ್ತಂಡ, ಎಲ್ಲಮ್ಮ, ಕಲ್ಲೇಶ್ವರ, etc.) Marhati Samskriti; study of other linguistic data ವಿಠೋಬ (e.g. consideration of verbs like (ನಂದಣೆ (ಸೇಂದು), ಕುಟಣೆ (ಕರುಟ್ಟು), ಸೊಲಣೆ (ಸುಲಿ), ನಡಣೆ (ನಡು), ತುಂಬಣೆ (ತುಂಬು) etc.), ibid p. 97-110 Also of Sten Know : "the substrata over which Gujarat and Maharashtra have spread was Dravidian"; also of. M. G. Ranade: "the base of Marathi is Dravidian and structure Aryan" quoted from Marhati Samskriti. p. 214.
7. The beginnings of cultural interation amongest the Sanskrit speaking peoples and Kandamila speakers, is mirrored in the term Dhanagar; in Marathi it means shepherds (Kurumbas), while in Kannada it means one who is a cattle-breeder (i.e. hattikara).
8. Consideration of data such as place-names (e.g. padi, patti, Hatr, uru) and tribal-names (Zade and Maravar Kalavar); in the sheperd stage, consideration or Kurumbas.
   For Maravar, Kalavar and Kurumbas, refer, Thurston: Caste and Tribe in Southern India, Vol. III p. 62, 63, 67, 69, V, p. 25, 28; also, Krishnaswami Iyengar, Some contributions of South India to Indian culture, p. 24, 25, 26, 149, 160, V. R. Dixtar: Studies in Tamil literature and history, p. 228, 251-52.

9. In recent times, anthropologists have come to regard anthropology as history. The difference between the two, according to a well known British anthropologist, Prof. Evans Pritchard, "are not of aim or method, for fundamentally both are trying to do the same thing, to translate one set of ideas into terms of another, their own, so that they may become intelligible, and they employ similar means to that end. The fact that an anthropologist studies people at first- hand and the historian in documents is a technical, not a methodological difference", ibid. p. 58.

10. The use of generalizations or laws (such as that of Malthus or Greshams or laws from Freudian psychology) is "something incidental to his main job, which is to present the development as part of a followable, and as the evidenced acceptable narrative." Gallie, ibid, p.108-9.

    Also : "What we expect from him (the historian) is the ability to use other men's laws and theories, as and when they are relevant for his own purpose : Which is to help us see which is the most likely of number of conceivable or followable development in the difficult because imperfectly evidenced narrative that he is trying to present", ibid p. 113

    The matter is put in a different way by Prof. Cassirer : "History can make use of scientific methods, but it cannot restrict itself to the data available by these methods. No object whatever is exempt from the laws of nature. Historical objects have no seperate and self-contained reality; they are embodied in physical objects. But in spite of this embodiment they belong to a higher dimension", ***Essay on Man***, p. 176-7.

11. R. C. Muzumdar has something hard to say as to the parochial minded dogmatism of the specialist. His solution to deal with the evil is drastic indeed:

    "The responsibility or reconstructing the history and culture of ancient India must be taken out of the hands of such Sanskritists and archeologists. Their proper activities should be limited to collecting the data and arranging them scientifically. The function of reconstructing the history and culture or India properly belongs to the historian who alone can correctly assess the different value of the different types of data collected by specialists. This, of course, does not mean that a Sanskritist or an archeologist cannot be also a historian. For each of them may be a properly qualified historian by necessary knowledge and training. But it would be a mistake to suppose that an expert Sanskritist, or archeologist is necessarily also a good historian though unfortunately, he often regards himself as such", ABORI, XL (1959), p. 10.

12. cf. Cassirer's account of historical knowledge as the story of the works of man: ".....an understanding of human life is the general theme and ultimate aim of historical knowledge. In history, we regard all the works reconstitue them into this original state, we wish to of man, and we wish to understand and feel the life from which they are derived", ibid. p. 178

13. Ibid, p. 76

14. Ibid, p. 248: of. Cassirer's view: "Ideal reconstruction not empirical observaiton, is the first step in historical knowledge", (quoted from Schillp vol. VI), p. 695.

15. " Ranke once voiced the desire to extinguish his own self and to make himself the pure mirror of things." quoted from cassirer, schilpp Vol. VI, P. 663

16. Karl Popper, ***Open Society and Its Enemies***, Routledge and Kegan Paul, 1945, Vol. II, p. 260.

೧ನೆಯ ನೆಲೆ

ಪೀಠಿಕೆ

ಭಾರತದ ಪ್ರತಿಯೊಂದು ಪ್ರಾಂತದವರೂ ತಮ್ಮ ನಾಡಿನ ಪೂರ್ವಚರಿತ್ರೆಗಳನ್ನು ಶಕ್ಯವಿರುವ ಸಾಧನಗಳಿಂದ ಸಂಗ್ರಹಿಸಿ ಬರೆದಿಟ್ಟಿದ್ದಾರೆ; ಬರೆದಿಡುತ್ತಲಿದ್ದಾರೆ. ಅದರಂತೆ ತೀರ ಆರಂಭಕಾಲದಿಂದ ಮೊದಲ್ಗೊಂಡು ಕರ್ನಾಟದ ಇತಿಹಾಸವನ್ನು ಅರಿತುಕೊಳ್ಳಲಿಕ್ಕೆ ಯತ್ನಿಸುವುದೂ ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವೇ ಆಗಿಲ್ಲವೆ? ತಾಮ್ರಪಟಗಳೂ ಶಿಲಾಶಾಸನಗಳೂ ಪ್ರಾಚೀನ ಇತಿಹಾಸವನ್ನು ತಿಳಿದುಕೊಳ್ಳಲಿಕ್ಕೆ ಬಹಳ ಮಹತ್ವದ ಸಾಧನಗಳಾಗಿವೆ. ಆದರೆ, ಅದಕ್ಕಿಂತಲೂ ಹಿಂದಿನ-ಅತಿ ಪ್ರಾಚೀನ ಇತಿಹಾಸದ ವಿಷಯಕ್ಕೆ ಅವು ಮೌನತಾಳುತ್ತವೆ. ಹಾಗಾದರೆ, ತಾಮ್ರಪಟಗಳೂ ಶಿಲಾಶಾಸನಗಳೂ ಇಲ್ಲದ ಆ ಕಾಲದ ಐತಿಹ್ಯವನ್ನು ಅರಿತುಕೊಳ್ಳುವ ಬಗೆ ಹೇಗೆ? ಕೇವಲ ಶಿಲಾಶಾಸನಾದಿಗಳ ಮೇಲೆಯೆ ಕೈಯೂರಿದರೆ ಕ್ರಿಸ್ತಿಶಕದ ೪-೫ ಶತಮಾನಗಳ ವರೆಗಿನ ಇತಿಹಾಸವನ್ನು ಹಾಗೂ ಹೀಗೂ ಹೇಗೋ ದೊರಕಿಸಬಹುದು.* ಶಾಸನಗಳು ನಮ್ಮನ್ನು ಅದಕ್ಕಿಂತಲೂ ಹಿಂದಿನ ಕಾಲಕ್ಕೆ ಒಯ್ಯಲಾರವು. ಕನ್ನಡರು ಅದಕ್ಕಿಂತಲೂ ಪ್ರಾಚೀನ; ಆರ್ಯ-ಪೂರ್ವ ("ದ್ರಾವಿಡ") ಜನಾಂಗ ವೆಂದು ಬಗೆಯಲಾಗಿದೆ.

ನಮ್ಮ ಅತಿಪ್ರಾಚೀನ ಗ್ರಂಥವೆಂದರೆ ಋಗ್ವೇದ. ಋಗ್ವೇದದಲ್ಲಿ ಆ ಕಾಲದ ಭಾರತವರ್ಷದ ಎಷ್ಟೋ ಇತಿಹಾಸವು ಅಡಕವಾಗಿದೆಯೆಂದು ಬಲ್ಲಿದರು ಹೇಳುತ್ತಾರೆ. ಇದು ನಿಜವಿದ್ದರೆ ಋಗ್ವೇದದಲ್ಲಿ ಒಂದಿಲ್ಲೊಂದು ತೆರನಾಗಿ ಕನ್ನಡದ ಮೂಲಿಗರ ಉಲ್ಲೇಖಗಳಿರಬೇಕಷ್ಟೆ? ಹಾಗಾದರೆ ಅವು ಯಾವವು? ಮುಂದೆ ಆ ಜನಾಂಗದಲ್ಲಿ ಆದ ಮಾರ್ಪಾಟಗಳು ಯಾವವು? ಋಗ್ವೇದ ಕಾಲದಲ್ಲಿದ್ದ ಆ ಮೂಲಜನಾಂಗದ ಇಂದಿನ ಪೀಳಿಗೆಯ ಹೆಸರೇನು? ಇವೆಲ್ಲವೂ ಕೆಲಮಟ್ಟಿಗಾದರೂ ತಿಳಿಯಲು ಸಾಧ್ಯವೆ? ಕನ್ನಡರು ಆಭೀರರಂತೆ, ಗುರ್ಜರರಂತೆ ಅಥವಾ ಹೂಣರಂತೆ ನಡುವೆ ಆರ್ಯರು ಬಂದ ಬಳಿಕ, ಹಿಂದೂ ದೇಶಕ್ಕೆ ಅಡಿಯಿಟ್ಟ ಜನಾಂಗವಲ್ಲ. ಪ್ರತ್ಯಕ್ಷ, 'ಕನ್ನಡ'ವೆಂಬ ಹೆಸರೇ ದೊರೆಯದಿದ್ದರೂ ಇನ್ನೂ ಬೇರೆ ಹೆಸರಿನಿಂದಾಗಲಿ ಋಗ್ವೇದ ಕಾಲಕ್ಕೆ ಮೊದಲಿನಿಂದಲೂ

---

* ಕನ್ನಡದಲ್ಲಿ ಶಿಲಾಶಾಸನಾದಿಗಳನ್ನು ಲೆಕ್ಕಕ್ಕೆ ಹಿಡಿದು ನಾಡಿನ ಚರಿತ್ರೆ ಬರೆಯುವ ಪದ್ಧತಿಯ ಬದಲು ವಿವಿಧ ಜ್ಞಾನಕ್ಷೇತ್ರಗಳ ಹಾಗೂ ಮಾನವಿಕ ಪರಂಪರೆಯನ್ನು ಹಿಡಿಯಬೇಕೆಂಬುದು ಶಂಬಾ ಅವರ ವಿಚಾರವಾಗಿತ್ತು. ೧೯೬೦ರಲ್ಲಿ ಪ್ರಕಟಗೊಂಡ 'ಹಾಲುಮತ ದರ್ಶನ'ದಲ್ಲಿ ಈ ಸೈದ್ಧಾಂತಿಕ ವಿಚಾರ ಬೆಳೆದುಕೊಂಡಿದೆ (ಸಂ).

ಹಿಂದೂದೇಶದಲ್ಲಿ ನೆಲೆಸಿದ್ದವರು ಇವರು. ಆದುದರಿಂದ, ಕ್ರಿಸ್ತಶಕದ ೪-೫ ಅಥವಾ ಇನ್ನು ಕೆಲರು ಕಂಡು ಹಿಡಿದಂತೆ ೨-೩ ಶತಮಾನಗಳಿಗಿಂತಲೂ ಪ್ರಾಚೀನಕಾಲದಲ್ಲಿ, ಅದೇಕೆ, ಋಗ್ವೇದ ಕಾಲಕ್ಕೆ ಮೊದಲ ನಿಂದಲೂ ಇವರು ಇದ್ದುದೇ ನಿಜವಿದ್ದರೆ ಆ ಕಾಲದ ಇವರ ಇತಿಹಾಸವಾದರೂ ಏಕೆ ಗೊತ್ತಾಗಬಾರದು?

ಆದರೆ, ಆ ಕಾಲದ ಈ ಜನಾಂಗದ ಚರಿತೆಯನ್ನು ಅರಿತುಕೊಳ್ಳುವುದು ಮಾತ್ರ ಬಹಳ ಬಿಗಿಯಾಗಿದೆ. ಶಿಲಾಶಾಸನ ತಾಮ್ರಪಟಗಳಂತಹ ಸುಸ್ಪಷ್ಟವಾದ ಲೇಖನಗಳು ಸಿಕ್ಕುವ ರಾಜಾಧಿರಾಜರ ಇತಿಹಾಸದಲ್ಲಿಯೇ ಇಷ್ಟೊಂದು ಭಿನ್ನಾಭಿಪ್ರಾಯಗಳೂ ಮತಮತಾಂತರಗಳೂ ಇರುವಾಗ ಈ ಬಗೆಯ ಯಾವ ನಿಶ್ಚಿತ ಪ್ರಮಾಣಗಳೂ ದೊರೆಯದ, ಆ ಇತಿಹಾಸಪೂರ್ವಕಾಲದ ಚರಿತೆಯ ಬಗ್ಗೆ ಇನ್ನಷ್ಟು ಮತಭೇದವಿರಬೇಡ? ಆದರೂ ಮನುಷ್ಯ ಪ್ರಯತ್ನಕ್ಕೆ ಆವುದು ಅಸಾಧ್ಯ? ಆಧುನಿಕ ಸಂಶೋಧಕರು ಮಾನವನ ಚರಿತೆಯನ್ನು ಅರಿತುಕೊಳ್ಳಲು ಹಲವು ಬಗೆಗಳಿಂದ ಪ್ರಯತ್ನ ಮಾಡಿದ್ದಾರೆ. ಅವರು ಪರಿಶ್ರಮಪೂರ್ವಕವಾಗಿ ಸಿದ್ಧಪಡಿಸಿಟ್ಟಿರುವ ಒಂದೊಂದು ಶಾಸ್ತ್ರದ ಕೈದೀಪಗಳ ಬೆಳಕಿನಲ್ಲಿ, ಹಿಂದು-ಮುಂದಿನ ತುಂಬ ಎಚ್ಚರವುಳ್ಳವರಾಗಿ, ಮೆಲ್ಲನೆ ಒಂದೊಂದು ಅಡಿಯಿಡುತ್ತ ಮುಂದೆ ನಡೆದರೆ ಈ ದಿಕ್ಕಿನಲ್ಲಿ ನಮಗೆ ಇಷ್ಟ ಫಲವು ದೊರೆಯದೆ ಇರದು. ತುಲನಾತ್ಮಕ ಭಾಷಾಶಾಸ್ತ್ರವು (Philology) ಈ ವಿಚಾರದಲ್ಲಿ ಅಡಿಗಡಿಗೆ ಸಹಾಯ ಮಾಡಲು ಸಿದ್ಧವಿದೆ.; ಆದರೆ ಕೇವಲ 'ಶಬ್ದ-ಪ್ರಮಾಣವು' ಬಹಳ ದಿಗ್ಭ್ರಮೆಯನ್ನುಂಟು ಮಾಡುವ ಸಂಭವವು ಹೆಚ್ಚಾಗಿದೆ. ಆದುದರಿಂದ ಇದರೊಂದಿಗೆ ಇನ್ನೂ ಕೆಲವು ಪೋಷಕ ಪ್ರಮಾಣಗಳು ದೊರೆತರೆ ಮಾತ್ರ ಆ ಊಹೆಗೆ ಏನಾದರೂ ಬೆಲೆ.* ಇಲ್ಲದಿದ್ದರೆ ಅದೊಂದು ಗಾಳಿಗೋಪುರ; ನಿರಾಧಾರ ತರ್ಕ. 'ಧನ' ಶಬ್ದವು ಕನ್ನಡದಲ್ಲಿ 'ದನ'ವೆಂದಾಗಿದೆ; ಆದುದರಿಂದ ಕನ್ನಡರಿಗೆ ಪ್ರಾಚೀನಕಾಲದಲ್ಲಿ 'ದನ'ವೆ ಧನವಾಗಿತ್ತು, ಎಂದು ಒಮ್ಮೆಲೆ ತರ್ಕಿಸಿ ಬಿಡಬಹುದು. ಆದರೆ, ಈ ತರ್ಕವು ಸುಪ್ರತಿಷ್ಠಿತವಾಗಬೇಕಾದರೆ ಇದಕ್ಕೆ ಬೇರೆ ಕೆಲವು ಆಧಾರಗಳೂ ಆವಶ್ಯಕ. ಇಲ್ಲಿ ಮಾನವ ಸಮಾಜ-ವಿಕಾಸದ ಇತಿಹಾಸವು (History of Social Development) ಬಹಳ ಸಹಕಾರಿಯಾಗಿದೆ. ದನಗಾರಿಕೆಯೇ ಒಮ್ಮೆ ಮನುಷ್ಯ ಸಮಾಜದ ಮುಖ್ಯ ಹೋರೆಯಾಗಿತ್ತು. ಈ ಕಾಲದಲ್ಲಿ ಮಾನವನಿಗೆ ದನವೇ ಧನವಾಗಿದ್ದುದೂ (Cattel=Capital) ನಿಜವೆಂದು ಜಗತ್ತಿನೊಳಗಿನ ಎಲ್ಲ ಭಾಗದ ಮಾನವನ ಇತಿಹಾಸವೂ ಇದಕ್ಕೇ ಬೆಂಬಲ ವನ್ನೀಯುತ್ತಿದೆ. ಸಂಸ್ಕೃತ ಭಾಷೆಯ ಪಶು (ವಶಾ) ಮತ್ತು ವಸು ಶಬ್ದಗಳಲ್ಲಿರುವ ಅರ್ಥಸಾದೃಶ್ಯ ಮತ್ತು ರೂಪಸಾದೃಶ್ಯವೂ ಇದನ್ನೇ ಸೂಚಿಸುತ್ತಿದೆ. ಸರಿ, ಈ ಬಗೆಯಾಗಿ ಭಾಷಾಶಾಸ್ತ್ರವು ಕೊಡುವ ಸಲಹೆ ಸೂಚನೆಗಳಿಗೆ ಸಮಾಜ ವಿಕಾಸಶಾಸ್ತ್ರ, ವಂಶವಿಜ್ಞಾನ ಪುರಾಣಶಾಸ್ತ್ರ ಪರಂಪರೆ, ಧರ್ಮಶಾಸ್ತ್ರ, ಮಾನಸಶಾಸ್ತ್ರ ಅಥವಾ ಪುರಾತನ ವಸ್ತುವಿಜ್ಞಾನಶಾಸ್ತ್ರ ಇಂತಹ ಬೇರೆ ಬೇರೆ ಶಾಖೆಯ ಶಾಸ್ತ್ರಗಳ ಬೆಂಬಲವೂ ದೊರೆತರೆ ಮಾತ್ರ ಆ ಮಾತನ್ನು, ನಿಶ್ಚಿತ ಸಿದ್ಧಾಂತವೆಂದಲ್ಲದಿದ್ದರೂ ವಿಚಾರಾರ್ಹವೆಂದು ಪರಿಗ್ರಹಿಸಿ ಮುಂದಡಿಯಿಡಲು ಅಡ್ಡಿಯಿಲ್ಲ. ಇವೆಲ್ಲ ಶಾಸ್ತ್ರಗಳಲ್ಲಿ ಪಾರಂಗತರಾದ ವಿದ್ವಾಂಸರು ಈ ಕೆಲಸವನ್ನು ಎಂದು ಕೆಯ್ಕೊಳ್ಳುವರೊ ಅದು ಕರ್ಣಾಟದ ಇತಿಹಾಸದ ಸುವರ್ಣದಿನ. ಆದರೆ, ಅಲ್ಲಿಯ ವರೆಗೆ ಉಳಿದವರು ತಮ್ಮ ಅಭ್ಯಾಸದಲ್ಲಿ ಹೊಳೆದುದನ್ನು, ತಿಳಿದುದನ್ನು, ಅರಿತುದನ್ನು ಕುರಿತುದನ್ನು ಸಂಗ್ರಹಿಸಿ, ತಮ್ಮ 'ಅಳಿಲು-ಸೇವೆ'ಯನ್ನು ಸಲ್ಲಿಸುವುದು ಅಪರಾಧವಾದೀತೆ?

ನಮ್ಮ ನಾಡಿನ ಪುರಾತನ ಘಟನೆಗಳು ವೇದ ಪುರಾಣಾದಿಗಳಲ್ಲಿ ಒಳಗೊಂಡಿರುವುದು ಕಂಡುಬರುತ್ತದೆ. ಆದರೆ, ವೇದಪುರಾಣಗಳ ಭಾಷಾಸಂಕೇತಗಳು ಅರ್ಥವಾಗುವುದು ಇಂದು ಕಠಿಣವಾಗಿದೆ. ಅಲ್ಲದೆ, ಅದರಲ್ಲಿ ಹುರುಳಿನೊಂದಿಗೆ ಹೊಟ್ಟೂ ಕೂಡಿದೆಯೆಂಬುದೂ ಸುಳ್ಳಲ್ಲ. ಆದುದರಿಂದ ಇದನ್ನು ಕೇರಿ, ಹಸನಮಾಡಿ

---

* ಭಾಷಿಕ ಪ್ರಮಾಣಗಳೇ ಮುಂದೆ ಶಂಬಾ ಅವರ ಸಾಂಸ್ಕೃತಿಕ ಜಗತ್ತಿನಲ್ಲಿ ಭಾಷಿಕ ಸಂಕೇತಗಳಾಗಿ ಪರಿವರ್ತನೆಗೊಂಡವು. ಈ ವಿಚಾರವು 'ಋಗ್ವೇದ ಸಾರ: ನಾಗಪ್ರತಿಮಾ ವಿಚಾರ'ದಲ್ಲಿ ಮೊತ್ತಮೊದಲ ಬಾರಿಗೆ ಮೈದಾಳಿತು (ಸಂ).

ಆಧುನಿಕರಿಗೂ ಸರ್ವಮಾನ್ಯವಾಗುವ ರೀತಿಯಲ್ಲಿ ವಿವರಿಸಿ ಹೇಳುವ ಮಹಾಕಾರ್ಯವನ್ನು ಮಾಡಲು ಸಮರ್ಥರೂ ಪ್ರತಿಭಾಶಾಲಿಗಳೂ ಆದ ಸಂಶೋಧಕರು ಮುಂದೆ ಬರಬೇಕಾಗಿದೆ.

ಆಧುನಿಕ ಶಾಸ್ತ್ರಜ್ಞರ ಅಭಿಪ್ರಾಯದಂತೆ ಮಾನವನ ಇಂದಿನ ವರೆಗಿನ ಪ್ರಗತಿಯಲ್ಲಿ ಸ್ಥೂಲವಾದ ಎರಡು ವಿಭಾಗಗಳನ್ನು ಕಲ್ಪಿಸಬಹುದು; (೧) ಆಹಾರ ಸಂಚಯಕಾಲ (food gathering period), (೨) ಆಹಾರದ ಉತ್ಪಾದನೆಯಕಾಲ ಮೊದಲನೆಯ ಅವಸ್ಥೆಯಲ್ಲಿ ಮಾನವನ ಪ್ರಗತಿಯು ಅತ್ಯಂತ ಮಂದವಾಗಿತ್ತು. ಆ ಕಾಲದಲ್ಲಿ ಅನ್ನಸಂಗ್ರಹಕ್ಕಾಗಿ ಗುಡ್ಡ, ಕಾಡು, ಹಳ್ಳ-ಕೊಳ್ಳಗಳಲ್ಲಿ ಅಲೆದಾಡಬೇಕಾಗುತ್ತಿತ್ತು; ನಿಂತಲ್ಲಿ ನಿಲ್ಲುವುದು ಸಾಧ್ಯವೇ ಇದ್ದಿಲ್ಲ. ಹೊಟ್ಟೆಯ ಪಾಡಿಗಾಗಿ ಮಾಡಬೇಕಾಗುವ ಹೋರಾಟದಲ್ಲಿ ಬಿಡುವು ಎಂಬುದೇ ಆತನಿಗೆ ಗೊತ್ತಿದ್ದಿಲ್ಲ. ಮಾನವನಸಂಸ್ಕೃತಿಗೆ ಆರಂಭವಾದುದು, ಆತನಿಗೆ ಆಹಾರನಿರ್ಮಾಣದ ಹದವು ತಿಳಿದ ಮೇಲೆ. ಈ ಅನ್ನ ಉತ್ಪಾದನೆಯ ಕಾಲದ ಪ್ರಾಥಮಿಕ ಅವಸ್ಥೆಯೇ ದನಗಾರಿಕೆ; ಈ ಕಾಲದಲ್ಲಿ ಕುರಿ, ಆಕಳು ಮೊದಲಾದ ಸಾಕುಪ್ರಾಣಿಗಳ ಹಿಂಡುಗಳೆ ಆತನ ಜೀವನಾಧಾರ.

ಈ ಅವಸ್ಥೆಯಲ್ಲಿದ್ದಾಗಲೆ ಒಕ್ಕಲತನದ ಗುಟ್ಟು ಗೊತ್ತಾಯಿತು. ಒಕ್ಕಲತನದಲ್ಲಿ ಮೊದಲು ಹೊಲವಲ್ಲ; ತೋಟವನ್ನು. ತೋಡಿ ತನ್ನ ಪ್ರೀತಿಯ ಗಿಡಗಂಟೆಯನ್ನು ನೆಟ್ಟು ಬೆಳೆಸುವ ಹದವು ತಿಳಿದ ಮೇಲೆ ಮುಂದೆ ಬರುಬರುತ್ತ ಒಕ್ಕಲತನದ ಬೆಳವಣಿಗೆಯಾಯಿತು. ಜಗತ್ತಿಗೆ ಈ ವಿದ್ಯೆಯನ್ನು ಮೊದಲು ತಂದ ಶ್ರೇಯಸ್ಸು ಗಂಡಸಿಗಿಲ್ಲ. ಮಾನವನ ಹೃದಯವನ್ನು ತಮ್ಮ ಆಕರ್ಷಣದಿಂದ ಕೃಷಿಮಾಡಿ ದಯಾ-ಪ್ರೀತಿಗಳ ಬೀಜವನ್ನು ಮೊದಲು ಬಿತ್ತಿದವರು ಹೆಂಗಸರು. ಭಾವಲೋಕದಂತೆ ಭೂಲೋಕದ ಕೃಷಿಯ ಆರಂಬಗಾರರೂ ಹೆಂಗಸರೇ. ಉಪಜೀವನದ ಹೋರಾಟದಲ್ಲಿ ಗಂಡಸರಿಗೆ ಮೈಮುರಿವಂತೆ ಹೋರಾಡಬೇಕಾಗುತ್ತಿತ್ತು. ಆದರೆ, ಹೆಂಗಸರಿಗೆ ಇವರಿಗಿಂತಲೂ ಎಷ್ಟೋ ಬಿಡುವು ಹೆಚ್ಚು. ಬಸಿರು, ಹೆರಿಗೆ, ಶಿಶುಸಂಗೋಪನ, ಗಂಡಸು ಸಂಗ್ರಹಿಸಿದ ಆಹಾರ ವಸ್ತುಗಳ ವ್ಯವಸ್ಥೆ ಈ ಮೊದಲಾದ ಕೆಲಸಗಳು ಹೆಂಗಸಿನ ಪಾಲಿಗೆ ಬಂದುದರಿಂದ ಅವಳಿಗೆ ಒಂದೆಡೆಯಲ್ಲಿ ನಿಲ್ಲುವುದಕ್ಕೆ ಅವಕಾಶವು ದೊರೆಯಿತು. ಇಂತಹ ಸಂದರ್ಭದಲ್ಲಿ ತಾನಿದ್ದಲ್ಲಿಯೆ ಹತ್ತಿರದ ಭೂಮಿಯಲ್ಲಿ ತನಗೆ ಇಷ್ಟವೆನಿಸಿದ ಗಿಡಬಳ್ಳಿಗಳನ್ನು ಹಚ್ಚಿ ಬೆಳೆಸುವ ಉಪಕ್ರಮವನ್ನು ಮೊಟ್ಟಮೊದಲಿಗೆ ಸ್ತ್ರೀಯರೆ ಆರಂಭಮಾಡಿರುವುದು ಸಹಜವಿದೆ. ಸ್ತ್ರೀಯರಿಂದ ಅರಿತ ಈ ವಿದ್ಯೆಯನ್ನು ಗಂಡಸು ಮುಂದೆ ಬೆಳಸಿಕೊಂಡನು. ಹೊಳೆ, ಹಳ್ಳ, ಕೊಳ್ಳಗಳಲ್ಲಿರುವ ನೀರಿನ ನೆರೆಯಲ್ಲಿ, ಇವುಗಳ ಕಾಲುವೆಗಳ ಕೆಲಬಲದಲ್ಲಿಯೆ ಮೊದಲಿನ 'ಪಟ್ಟಿಗಳು' -'ತೋಟ' ಇದ್ದುವು. 'ಪಟ್ಟಿ' ಶಬ್ದದೊಡನೆ ಸಂಸ್ಕೃತ 'ವಾಟೀ' 'ವಾಟ' ಶಬ್ದಗಳನ್ನು ಹೋಲಿಸಿ ನೋಡಬಹುದು. ಇವುಗಳಲ್ಲಿರುವ ಸಾಮ್ಯವು ಆಶ್ಚರ್ಯಕರವಾಗಿದೆ. ಪಟ್ಟಿ ಮತ್ತು ವಾಟೀ, ವಾಟಗಳಿಗೆ ದನಗಾರರ ಹಟ್ಟಿ (ಗ್ರಾಮ) ಮತ್ತು ತೋಟವೆಂದು ಎರಡೂ ಅರ್ಥಗಳಿದ್ದುದು ಕೋಶಗಳಿಂದ ನಿದರ್ಶನಕ್ಕೆ ಬರುತ್ತಿದೆ. ಇದರಲ್ಲಿ ನಮ್ಮ ನಾಡಿನ ಗ್ರಾಮಗಳ ವಿಕಾಸಕ್ರಮವು ಚೆನ್ನಾಗಿ ಗೊತ್ತಾಗುವಂತಿದೆ. ಮಳೆಯ ನೀರಿನ ಸಹಾಯದಿಂದ ಒಕ್ಕಲತನವನ್ನು ಮಾಡಿಕೊಳ್ಳುವ ಬಗೆಯು ಮುಂದೆ ಗೊತ್ತಾಯಿತು. ಕೃಷಿಜೀವಿಗಳು ಕುಡದಿಂದ ಜೀವಿಸುವವರೆಂದು ಇವರಿಗೆ 'ಕುಡವ'ರೆಂಬ ಹೆಸರು. ಒಕ್ಕಲತನವು ಗೊತ್ತಾದ ಬಳಿಕವೇ ಊರುಗಳು ಹುಟ್ಟಿದುವು. ಒಕ್ಕಲತನಕ್ಕಿಂತ ಮುಂಚಿನ ಸ್ಥಿತಿಯಲ್ಲಿ ಮಾವನಿಗೆ ಒಂದೆಡೆಯಲ್ಲಿ ಊರಿಕೊಂಡು ನಿಲ್ಲುವುದೇ ಸಾಧ್ಯವಿದ್ದಿಲ್ಲ. ಒಕ್ಕಲು ಶಬ್ದದಲ್ಲಿ ಈ ಅರ್ಥವೆಲ್ಲ ಅಡಕವಾಗಿದೆ. ಆದುದರಿಂದಲೆ, ಒಕ್ಕಲತನಕ್ಕೂ, ಒಕ್ಕಲಾಗಿರುವುದಕ್ಕೂ ಇಷ್ಟೊಂದು ಅನ್ಯೋನ್ಯ ಸಂಬಂಧ. 'ಕುಡವ'ರೆ ಕುಳರಾದರು; ಕುಡುಮಿ (ಕೂರ್ಮಿ=ರೆಡ್ಡಿ)- ಕುಟುಂಬಿಗಳಾದರು; ಕುಡ-ಒಕ್ಕಲರಾದರು. ಊರೂರಿಗೆ ಕುಳಕುಲಗಳು ತಲೆಯೆತ್ತಿದುವು. ಜನಾಂಗವು ಊರು (ಪೂರ-ಪುರ)ಗಳನ್ನು ಕಟ್ಟಿಕೊಂಡು ಬಾಳಲಾರಂಭಿಸಿತು. ಮಾನವನು ಒಂದಡಿ ಮುಂದೆ ಇಟ್ಟನು. ಈ ಮುಂದಿನ ತರಗತಿಯಲ್ಲಿಯೇ ನಾಡು-ರಾಷ್ಟ್ರಗಳು ಉದಯವಾದುವು. ನಾಡವರೂ (ರಾಷ್ಟ್ರಿಕರೂ), ಒಂದೊಂದು ಜನಾಂಗದ ಹೆಸರಿನ ದೇಶಗಳೂ ಕಾಣಿಸಿ ಕೊಳ್ಳಲಾರಂಭಿಸಿದುವು.

ಆರಂಭದಲ್ಲಿ ಮನುಷ್ಯನು ಹೊಟ್ಟೆಯ ಸಲುವಾಗಿ, ಅವ್ಯಾಹತವಾಗಿ ಒಂದಿಲ್ಲೊಂದು ಹೋರೆಯನ್ನು ಕೈಕೊಳ್ಳಬೇಕಾಯಿತು; ಹೋರಾಡುವುದನ್ನು ಕಲಿತನು; ಉದ್ಯೋಗಿಯೂ ಆದನು. ದನಗಾರಿಕೆ, ಒಕ್ಕಲತನದ ಕಾಲದಲ್ಲಿ ಆಹಾರದ ಚಿಂತೆಯು ಎಷ್ಟೋ ಮಟ್ಟಿಗೆ ಕಡಿಮೆಯಾದ ಹಾಗೆ ಬಿಡುವು ದೊರೆಯಲಾರಂಭಿಸಿತು. ಬಿಡುವಿನಲ್ಲಿ ಬುದ್ಧಿಯು ಚಿಗುರಿತು; ಪ್ರತಿಭೆಯ ಉದಯವಾಯಿತು. ಸಂಗೀತ, ಸಾಹಿತ್ಯ, ಕಲೆಗಳು ಮೊಳೆಯಲಾರಂಭಿಸಿದುವು. ಧಾರ್ಮಿಕ ವಿಚಾರಗಳು ಅಂಕುರಿಸಹತ್ತಿದುವು. ತುರುಕಾರ (ಗೋವಳ)ನ ಕೊಳಲು, ಸುಗ್ಗಿಯ ಕುಣಿತ, ಹಂತಿಯ ಹಾಡುಗಳು, ಹಳ್ಳಿಗರ ಹೃದಯದಿಂದ ಕಾಲಕಾಲಕ್ಕೆ ಉಕ್ಕಿಉಕ್ಕಿ ಬರಲಾರಂಭಿಸಿದುವು. ಜಗತ್ತಿನ ಎಲ್ಲ ಜನಾಂಗಗಳ ಆರಂಭದ ಸಾಹಿತ್ಯವು ಇದೇ ಬಗೆಯದು. ಈ ಬಗೆಯ ಸಾಹಿತ್ಯದಲ್ಲಿ ಆಯಾ ಸಮಾಜದ ಆರಂಭದ ಸ್ಥಿತಿಯ ಜೀವನಚಿತ್ರವು ಒಡಮೂಡಿದುದನ್ನು ಕಂಡುಕೊಳ್ಳಬಹುದು. ಆದುದರಿಂದ ಪ್ರಾಚೀನ ಇತಿಹಾಸ ಸಂಶೋಧನೆಯ ಕಾರ್ಯದಲ್ಲಿ ಹಳ್ಳಿಗರ ಹಾಡು, ಕಥೆ, ಪ್ರಾಚೀನ ವಸ್ತುಗಳು, ಪರಂಪರೆ ಮೊದಲಾದುವುಗಳೆಲ್ಲವೂ ಮಹತ್ವದ ಸಾಧನಗಳಾಗಿವೆ. ಇವುಗಳನ್ನರಿಯದೆ ಯಾವದೊಂದು ಜನಾಂಗದ ಸಂಪೂರ್ಣ ಇತಿಹಾಸವನ್ನು ಅರಿತುಕೊಳ್ಳುವುದೇ ಸಾಧ್ಯವಿಲ್ಲ. ತೋಟ-ಪಟ್ಟಿಗಳೂ ಹೊಲಗಳೂ ಊರ್ಜಿತ ಸ್ಥಿತಿಗೆ ಬಂದ ಬಳಿಕ ಪಟ್ಟಿ (ಹಟ್ಟಿ)ಗಳೇ ಪಟ್ಟಣಗಳಾದವು. ಕುಡುವನಿಂದ ಬಣಜಿಗನು ಮುಂದಾದನು. ಇವನೇ ಈಗ ಶ್ರೇಷ್ಠ. ನಾಗರಿಕತೆ ತಲೆದೋರಿತು. ಸಂಸ್ಕೃತಿಯ (Culture) ಪ್ರವಾಹವು ನಾಗರಿಕತೆಯಲ್ಲಿ (Civilization) ಬಂದು ಕೂಡಿತು. ಉಪನಿಷತ್ತುಗಳು ಅದಕ್ಕಿಂತಲೂ ಒಂದಡಿ ಮುಂದಿಟ್ಟು ಮಾನವ್ಯ (Humanism)ದ ಮಹಾ ಮಂತ್ರವನ್ನು ಜಗತ್ತಿಗೆ ಅರುಹಿದುವು. ಆದರೆ, ಪ್ರಪಂಚದ ರಾಷ್ಟ್ರಗಳು ತಮ್ಮದೂ ಇದೇ ಹೆಗ್ಗುರಿಯೆಂದು ಈಗ ಒಪ್ಪಿಕೊಳ್ಳುವ ವಿಚಾರ ನಡೆಸಿವೆ. ಹೀಗಿದು ಇಲ್ಲಿಯ ತನಕ ಮುಗ್ಗರಿಸುತ್ತ ಮೇಲೇಳುತ್ತ ಮಾನವನು ಮಾಡಿಕೊಂಡ ಪ್ರಗತಿಯ ಇತಿಹಾಸ.

ಪ್ರಗತಿಯಲ್ಲಿಯೇ ಪರಾಗತಿಯ ಕಾಲ್ತೊಡಕೂ ಇದ್ದುಬಿಟ್ಟಿದೆ. ಆದುದರಿಂದ ಅವಿಚ್ಛಿನ್ನವಾದ ಪ್ರಗತಿಯೆಂಬುದು ಅಸಾಧ್ಯವಾಗಿದೆ. ಅಶೋಕನು ಅಹಿಂಸಾಧರ್ಮವನ್ನು ತ್ರಿಕರಣಪೂರ್ವಕವಾಗಿ ಆಚರಿಸಿದನು. "ಜಗತ್ತಿನಲ್ಲಿ ಇಂತಹ ಮಹಾರಾಜನು ಇನ್ನೂ ಆಗಿಲ್ಲ; ಈತನು ಜಗತ್ತಿಗೇ ಆದರ್ಶ"ನೆಂದು ಯುರೋಪೀಯ ವಿದ್ವಾಂಸರೂ ಹೊಗಳುವರು. ಆದರೆ, ಆ ಕಾಲಕ್ಕೆ ಪ್ರಪಂಚದ ಇನ್ನುಳಿದ ರಾಷ್ಟ್ರಗಳಿಗೆ ಅಹಿಂಸಾವ್ರತದ ಗಂಧವೂ ಇದ್ದಿಲ್ಲ. ಹಿಂದೂದೇಶವು ಅಂತಹರ ಬಾಯ್ಗೆ ತುತ್ತಾಯಿತೆಂದು ಕೆಲವು ಇತಿಹಾಸಜ್ಞರ ಅಭಿಪ್ರಾಯವಿದೆ. ಸಾಮೂಹಿಕ ಪ್ರಗತಿಗಾಗಿ, ಒಂದು ವ್ಯಕ್ತಿಗೆ, ಸಮಾಜಕ್ಕೆ, ಇಲ್ಲವೆ ರಾಷ್ಟ್ರಕ್ಕೆ ಅದರ ಮನದ ಇಷ್ಟದಂತೆ ಲಗುಬಗೆಯಿಂದ ಮುಂದೋಡುವುದಕ್ಕಾಗದೆ, ತಡೆದು ನಿಲ್ಲಬೇಕಾಗುವುದು! ಎಷ್ಟೋಸಾರೆ ಹಿಂದೆ ಬೀಳಬೇಕಾಗುವ ಸಂದರ್ಭವೂ ಇದೆ. ಆದುದರಿಂದ ವೈಯಕ್ತಿಕ ಸ್ವಾತಂತ್ರ್ಯ, ವೈಯಕ್ತಿಕ ಸುಖಗಳು ಕೇವಲ ತಾತ್ಕಾಲಿಕ; ಕ್ಷಣಿಕ. ಸಾಮೂಹಿಕ ಪ್ರಗತಿಯಾಗುವ ವರೆಗೆ ವೈಯಕ್ತಿಕ ಪ್ರಗತಿಗೆ ಸ್ಥೈರ್ಯವುಂಟಾಗಲಾರದು. ಸ್ವಾಭಿಮಾನವಿಲ್ಲದ ಜಾತಿಯಿಲ್ಲ; ಜನಾಂಗವಿಲ್ಲ. 'ಅಂ'-'ಹಂ' ಎಂಬುದು ಮನುಷ್ಯನೊಡನೆಯೆ ಹುಟ್ಟಿದೆ. ಆದರೆ, ಇದರಲ್ಲಿ ಒಂದು ದುರ್ದೈವದ ಸಂಗತಿ: ಪ್ರತಿಯೊಂದು ವ್ಯಕ್ತಿ, ಜಾತಿ, ಜನಾಂಗವು ತಾನು ಮಾತ್ರ ಮೇಲು; ಉಳಿದವರು ಕೀಳು ಎಂದು ಹೇಳುವ ಪ್ರವೃತ್ತಿಯುಳ್ಳುದಾಗಿದೆ 'ಜನ್ಮ ಜನ್ಮಾಂತರದಲ್ಲಿ ಪುಣ್ಯಮಾಡಿ ನಮ್ಮ.....ಲ್ಲಿ ಹುಟ್ಟಬೇಕು' ಎಂದೇ ಎಲ್ಲರು ಹೇಳುವುದು! ತಮ್ಮ ಜಾತಿ, ತಮ್ಮ ಧರ್ಮದವರು ಮಾತ್ರ ಸ್ವರ್ಗ ಮೋಕ್ಷಗಳಿಗೆ ಅಧಿಕಾರಿಗಳು; ಉಳಿದವರು ನರಕಭಾಜನರು! ಈ ಬಗೆಯ ಅವಿಚಾರತನವೂ ಮಾನವ ಕುಟುಂಬದ ಪ್ರಗತಿಯಲ್ಲಿ ಅಡಿಗಡಿಗೆ ಅಡ್ಡಬರುತ್ತಲಿದೆ. ಸ್ವಲ್ಪ ಅಧಿಕಾರ, ಸಂಪತ್ತುಗಳು ಪ್ರಾಪ್ತವಾಗುತ್ತಲೇ ಮನುಷ್ಯನು ತನ್ನ ಮೂಲಸ್ಥಿತಿಯನ್ನು ಮರೆಯಲಾರಂಭಿಸುತ್ತಾನೆ; ತಾನು, ತನ್ನ ಕುಲ, ತನ್ನ ಜಾತಿಗಳು ದೇವಾಂಶಸಂಭೂತವೆಂಬ ಭ್ರಾಂತಿಯನ್ನುಂಟು ಮಾಡಿಕೊಂಡು, ಉಳಿದ ಜಗತ್ತಿಗೂ ಆ ಭ್ರಮೆಯಲ್ಲಿಡಲು ಪ್ರಯತ್ನಪಡುತ್ತಾನೆ! ಆದರೆ, ನಮ್ಮಲ್ಲಿ ಒಂದು ತುಂಬ ಹುರುಳುಳ್ಳ ನಾಣ್ಣುಡಿಯಿದೆ; ಋಷಿಯ ಕುಲ, ನದಿಯ ಮೂಲವನ್ನು ನೋಡಬಾರದೆಂದು ಹಿರಿಯರು

ಹೇಳುವರು. 'ನದಿಯ ಮೂಲ'ವೆಂಬಲ್ಲಿ 'ಜನಾಂಗದ ಮೂಲ'ವೆಂದು ಸ್ವಲ್ಪ ಬದಲಿಸಿಕೊಂಡರಾಯಿತು. ಈ ಲೋಕೋಕ್ತಿಯಲ್ಲಿ ನಮ್ಮ ಪೂರ್ವಜರ ಅನುಭವವು ಬಹಳ ಚೆನ್ನಾಗಿ ಸಂಗ್ರಹಿಸಲ್ಪಟ್ಟಿದೆ. ನದಿಯ ಪ್ರವಾಹವು ದೊಡ್ಡದಾಗಿರುವ ಸ್ಥಳದಲ್ಲಿರುವ ಸೌಂದರ್ಯವು ಉಗಮಸ್ಥಾನದಲ್ಲಿರುವದಿಲ್ಲ.

ಒಂದೇ ಜನಾಂಗದಲ್ಲಿಯೆ ಹಲವು ಕಾರಣಗಳಿಂದ ಎಷ್ಟೋ ಸಣ್ಣ ದೊಡ್ಡ ಪಂಗಡಗಳಾಗುವದುಂಟು. ನಾಡುಗಳು ಬೇರೆ ಬೇರೆಯಾಗಿ ಅವರ ಧಾರ್ಮಿಕ, ಸಾಮಾಜಿಕ ಆಚಾರ-ವಿಚಾರಗಳಲ್ಲಿ ಅಲ್ಪಸ್ವಲ್ಪ ಹೆಚ್ಚು ಕಡಿಮೆಗಳು ಆಗುತ್ತಲೆ ಆ ಗುಂಪುಗಳಲ್ಲಿದ್ದ ಪರಸ್ಪರ ಸಂಬಂಧವು ಕಡಿದುಹೋಗಿ ಅವರು ತಮ್ಮತಮ್ಮ ಜಾತಿಗಳು ಸ್ವತಂತ್ರವೆಂದೇ ಭಾವಿಸಿಕೊಳ್ಳಲಾರಂಭಿಸುವರು. ತೆಂಕ, ಬಡಗ, ಮುಲಕನಾಡು ಮೊದಲಾದುವು ಈ ಬಗೆಯ ಉದಾಹರಣಗಳು. ಉಪಜೀವನದ ಉದ್ಯೋಗಭೇದದಿಂದಲೂ ಒಂದೇ ಪಂಗಡದಲ್ಲಿಯೆ ಒಳ ಬಣಗಳಾಗಿವೆ; ಕಲ್ಲ ಒಡ್ಡರು, ಮಣ್ಣು ಒಡ್ಡರು ಇದಕ್ಕೆ ನಿದರ್ಶನ. ಬೇರೆ ತತ್ವಜ್ಞಾನದ ಕಡೆಗೆ ಒಲಿಯುವುದರಿಂದಲೂ, ಆ ಧರ್ಮವನ್ನು ಸ್ವೀಕರಿಸುವುದರಿಂದಲೂ ಜಾತಿಗಳಾಗಿವೆ. ಬ್ರಾಹ್ಮಣರಲ್ಲಿಯೆ ಸ್ಮಾರ್ತ, ವೈಷ್ಣವ, ಶ್ರೀವೈಷ್ಣವಾದಿ ಭೇದಗಳು ಇದಕ್ಕೆ ಸಾಕ್ಷಿ. ಒಂದು ಧರ್ಮದವರೆಲ್ಲ ಒಂದೇ ಜನಾಂಗ (race) ದವರೇ ಇರುತ್ತಾರೆಂದು ನಿಶ್ಚಿತವಾಗಿ ಹೇಳಲಿಕ್ಕಾಗುವದಿಲ್ಲ. ಜನಾಂಗವೆಂಬುದು ಜಾತಿ, ಧರ್ಮಗಳಿಂದ ಭಿನ್ನವಾದುದು. ಜನಾಂಗವೆಂದರೆ ಸಾಮಾನ್ಯವಾಗಿ ತೀರ ಆರಂಭಕಾಲದಲ್ಲಿ ಒಟ್ಟಿಗೆ ಇದ್ದು ಬೆಳೆದ ಒಂದು ಮನುಷ್ಯ ಸಮಾಜ. ಈ ಬಗೆಯ ಕೆಲವು ಜನಾಂಗಗಳು ಪ್ರಾಚೀನ ಕಾಲದಲ್ಲಿ ಇದ್ದುವೆಂದು ಬಲ್ಲವರು ಹೇಳುವರು. ಆರ್ಯಜನಾಂಗ, ನಿಗ್ರೋಜನಾಂಗ, ಮೊಂಗೋಲಿಯನ್ ಜನಾಂಗ ಇತ್ಯಾದಿ. 'ಜನಾಂಗ' (Race) ಎಂಬರ್ಥದಲ್ಲಿ ವಂಶವೆಂಬ ಶಬ್ದವನ್ನು ಬಳಸಬಹುದು. ಬೌದ್ಧ ಧರ್ಮದಲ್ಲಿದ್ದವರೆಲ್ಲ ಒಂದೇ ಜನಾಂಗ (Race) ದವರೆಂದು ಭಾವಿಸಲಿಕ್ಕಾಗದು. ಅದರಂತೆ, ವೀರಶೈವಮತದಲ್ಲಿ ಬೇಕಾದ ಜನಾಂಗದವರೂ ಶಿವಶರಣರಾಗಿ ಅತಿವರ್ಣಷಡಾಶ್ರಮಿಗಳಾಗಿ ದೀಕ್ಷೆಯನ್ನು ಪಡೆಯಬಹುದು. ಆದುದರಿಂದ, ಒಂದು ಧರ್ಮದಲ್ಲಿದ್ದವರೆಲ್ಲ ನಿಶ್ಚಿತವಾಗಿ ಒಂದೇ ಜನಾಂಗಕ್ಕೆ ಸೇರಿದವರಿರುತ್ತಾರೆಂದು ಗ್ರಹಿಸಲಾಗದು.

ಈಗ ಜಗತ್ತಿನಲ್ಲಿ ತೀರ ಶುದ್ಧಸ್ವರೂಪದಲ್ಲಿ ಯಾವ ಜನಾಂಗವೂ ಸಿಕ್ಕದು. ಪರ್ಯಟನ, ಯುದ್ಧ ಮತ್ತು ವ್ಯಾಪಾರ-ವ್ಯವಹಾರಗಳು ಜನಾಂಗಗಳ ಸಂಮಿಶ್ರಣದ ಮುಖ್ಯಕಾರಣಗಳು. ಆರಂಭಸ್ಥಿತಿಯಲ್ಲಿ ಮನುಷ್ಯನಿಗೆ ಆಕರ್ಷಕ ವಸ್ತು-ಸುಲಿದುಕೊಂಡು-ಎತ್ತಿಕೊಂಡು ಒಯ್ಯಬೇಕೆಂದೆನಿಸುವಂತಹ ವಸ್ತುವೆಂದರೆ ಮುಖ್ಯವಾಗಿ ಹೆಣ್ಣು. ಏಕೆಂದರೆ ಆಗ ಮಾನವನಲ್ಲಿ, ಧನಸಂಚಯವೆಂಬುದೇ ಇದ್ದಿಲ್ಲ. ಹೆಣ್ಣೇ ಒಂದು ಆತನ ಸಂಪತ್ತು. ಸಂಸ್ಕೃತ 'ಭಗ' ಶಬ್ದದಲ್ಲಿ ಇವೆರಡೂ ಅರ್ಥಪ್ರತೀತಿಯಾಗುವುದಕ್ಕೆ ಇದೇ ಕಾರಣವು. ಶೌರ್ಯ-ಸಾಹಸಾದಿಗಳು ಹೆಚ್ಚಿರುವಲ್ಲಿ ಬಹುತರವಾಗಿ ಹೆಣ್ಣಿನ ಹುಚ್ಚು ಅಳತೆಮೀರಿರುವುದನ್ನು ಕಾಣಬಹುದು. ರಾವಣ ಜರಾಸಂಧಾದಿಗಳಂತೂ ಸರಿ; ಕೃಷ್ಣ, ಅರ್ಜುನ, ಭೀಮಸೇನರ ಕಥೆಗಳು ಸಹ ಇದಕ್ಕೆ ಒಳ್ಳೆಯ ದೃಷ್ಟಾಂತಗಳಾಗಿವೆ. ಒಂದು ನಾಡಿನ ದಂಡಾಳುಗಳು ಮತ್ತೊಂದು ನಾಡಿನ ಮೇಲೆ ಏರಿಹೋದಾಗ ಆಗುವ ಸಂಘಟನೆಗಳನ್ನು ಒಂದರೆಗಳಿಗೆ ನೆನೆದುಕೊಂಡರೆ, ಪ್ರಾಚೀನ ಕಾಲದಲ್ಲಿ ಜಗತ್ತಿನಲ್ಲೆಲ್ಲ ಎಷ್ಟೊಂದು ವಂಶಮಿಶ್ರಣಗಳು ನಡೆದು ಹೋಗಿರಬೇಕೆಂಬುದರ ಸ್ಥೂಲಕಲ್ಪನೆಯು ಬರಬಹುದು. ವ್ಯಾಪಾರವೂ ವಂಶಮಿಶ್ರಣಕ್ಕೆ ಕಾರಣವಾಗಿದೆ. ತನ್ನ ಮನೆಮಾರುಗಳನ್ನು ಬಿಟ್ಟು ದೂರ ಪರಸ್ಥಳದಲ್ಲಿ ಹೋದಾಗ, ಅಲ್ಲಿಯೆ ನಿಲ್ಲಬೇಕಾದಾಗ, ಆ ನಾಡಿನವನೇ ಆದಾಗ, ವಂಶಮಿಶ್ರಣವು ಆಗದೆ ಇರುವುದು ಅಶಕ್ಯವಾಗಿದೆ. ಇದರಂತೆ ಗುಳೇದಲ್ಲಿ (Immigration) ಜನಾಂಗಗಳ ಸಂಮಿಶ್ರಣವು ಆಗುವುದು ಅಪರಿಹಾರ್ಯ. ಆದುದರಿಂದಲೇ ಮಧ್ಯಕಾಲದಲ್ಲಿ ನಮ್ಮ ಸ್ಮೃತಿಕಾರರು ಸಮುದ್ರಯಾನ, ಮ್ಲೇಚ್ಛದೇಶಗಮನಕ್ಕೆ ತೀರ ವಿರೋಧಿಗಳಾಗಿದ್ದರು. ವಂಶಮಿಶ್ರಣಗಳ ಪ್ರತಿಬಿಂಬವು ಭಾಷೆಗಳಲ್ಲಿ ಒಡಮೂಡದೆ ಎಂದೂ ಇರುವುದಿಲ್ಲ. ಪ್ರತ್ಯಕ್ಷ ಸಂಮಿಶ್ರಣವಾಗದೆ ಹಲವು ಕಾಲದ ಬರಿ ಹೊರಬಳಕೆಯುಂಟಾಗಿದ್ದರೂ ಕೂಡ ಭಾಷೆಯ ಮೇಲೆ ಅದರ ಪರಿಣಾಮಗಳಾಗದೆ ಇರುವುದಿಲ್ಲ. ಆದುದರಿಂದ, ಪರಭಾಷೆಯ ಸ್ವಲ್ಪವೂ ಸಂಪರ್ಕವಿಲ್ಲದಿರುವ-ತೀರ ಪರಿಶುದ್ಧವಾದ ಭಾಷೆಯನ್ನು ಹುಡುಕುವುದೂ ಮೊಲದ ಕೋಡಿಗಾಗಿ ಪರಿಶ್ರಮ ಪಡುವುದೂ ಎರಡೂ ಒಂದೇ.

ಪರಿಸ್ಥಿತಿಯು ಹಲವು ಬಗೆಗಳಿಂದ ವಂಶಮಿಶ್ರಣಕ್ಕೆ ಜನಾಂಗಗಳನ್ನು ಒತ್ತಾಯಪಡಿಸುತ್ತಿದ್ದರೂ, ಮನುಷ್ಯನಲ್ಲಿರುವ ಸ್ವತ್ವದ ಅಭಿಮಾನವು ಈ ವಿಷಯಕ್ಕೆ ಎಷ್ಟೋ ತಡೆಯನ್ನು ಹಾಕಿದೆ. ಈತಡೆಯು ಎಷ್ಟೋ ಕಡೆಗಳಲ್ಲಿ ಹಿತಕಾರಕವಾಗಿರುವಂತೆ ಇನ್ನು ಕೆಲವು ಸಂದರ್ಭಗಳಲ್ಲಿ ಅಹಿತಕ್ಕೂ ಕಾರಣವಾಗಿದೆ. ಯಾವುದೇ ಜನಾಂಗವು ಜಗತ್ತಿನಲ್ಲಿ ತನ್ನಷ್ಟಕ್ಕೆ ತಾನೇ ಇದ್ದುದಾಗಿದ್ದರೆ ಪ್ರಗತಿಯ ಆಶೆಯೆ ಇದ್ದಿಲ್ಲ. ಜನಾಂಗ-ಜನಾಂಗಗಳಲ್ಲಿ ಪರಸ್ಪರ ಸಂಘರ್ಷಣ-ಸಂಪರ್ಕಗಳು ಉಂಟಾಗಿ, ಒಬ್ಬರೊಬ್ಬರ ಗುಣವಿಶೇಷಗಳು ಒಬ್ಬರೊಬ್ಬರಿಗೆ ಲಾಭದಾಯಕ ವಾಗುತ್ತವೆ. ಜಗತ್ತಿನ ಜ್ಞಾನದ ವಿಕಾಸ ಕ್ರಮವೇ ಹೀಗಿದೆ. ಪ್ರಗತಿಯ ರೀತಿಯೇ ಇದು. ಯಾವುದೇ ಒಂದು ವ್ಯಕ್ತಿಯಾಗಲಿ, ಸಮಾಜವಾಗಲಿ, ಭೋಂಕನೆ ಯಾವ ಜ್ಞಾನವನ್ನೂ ಪಡೆದಿಲ್ಲ. ಒಬ್ಬರಿಂದ ಒಂದು, ಇನ್ನೊಬ್ಬರಿಂದ ಇನ್ನೊಂದು ಹೀಗೆಯೇ ಸಂಸ್ಕೃತಿ-ಸುಧಾರಣೆಗಳು ಬೆಳೆಯುತ್ತಲಿವೆ. ಯಾವುದೇ ದೇಶದ ಪುನರುಜ್ಜೀವನ ಕಾಲದ ಇತಿಹಾಸವನ್ನು ನೋಡಬಹುದು: ಸಾಮಾನ್ಯವಾಗಿ ಬೇರೊಂದು ಜನಾಂಗದ ಸಂಘಟನೆಯಲ್ಲಿಯ ಅದರ ಉಗಮವಿದ್ದುದು ಗೋಚರವಾಗುತ್ತದೆ. ಆದಕಾರಣ, ಕೇವಲ ತನ್ನಲ್ಲಿಯೇ ತಾನು ಹುದುಗಿಕೊಂಡಿದ್ದು ಅನ್ಯಸಮಾಜ ಗಳಿಂದ ದೂರಿರುವುದಕ್ಕೆ-ಅವರ ಸಂಬಂಧವನ್ನು ತಪ್ಪಿಸಿಕೊಳ್ಳುವುದಕ್ಕೆ ಯಾವಾಗಲೂ ಹವಣಿಸುವುದು ಆತ್ಮೋನ್ನತಿಗೆ ವಿರೋಧಕವಾಗಿದೆ. ಇದರಂತೆ 'ಸುಧಾರಣೆ'ಯ ಮಬ್ಬಿನಲ್ಲಿ ಸ್ವತ್ವವನ್ನು ಮರೆತು ಪರಕೀಯರಲ್ಲಿ ಸೇರಿ ಮೈಮರೆತು ಬಿಡುವುದೂ ವಿಲೀನರಾಗುವುದೂ ಆತ್ಮನಾಶಕ್ಕೆ ಕಾರಣವಾಗಿದೆ.

ಕನ್ನಡಜನಾಂಗದ ಇತಿಹಾಸಕ್ಕೆ ಇದೆಲ್ಲವೂ ಸಂಪೂರ್ಣವಾಗಿ ಅನ್ವಯಿಸುತ್ತಿರುವುದರಿಂದ ಇದನ್ನು ಇಲ್ಲಿ ಸ್ವಲ್ಪ ವಿಸ್ತಾರದಿಂದ ಹೇಳಬೇಕಾಯಿತು. ಹಟ್ಟಿಕಾರರ ಚರಿತೆಯನ್ನು ಅರಿತುಕೊಳ್ಳಲಿಕ್ಕೆ ಆವಶ್ಯಕವಾದ ಕೆಲವು ಸಾಮಾನ್ಯತತ್ವಗಳ ದಿಗ್ದರ್ಶನವನ್ನಿಲ್ಲಿ ಮಾಡಿದ್ದಾಯಿತು. ಹಟ್ಟಿಕಾರರನ್ನು ಕುರಿತ ವಿಶೇಷ ಸಂಗತಿಗಳನ್ನು ಇನ್ನು ಮುಂದಿನ ನೆಲೆಗಳಲ್ಲಿ ನೋಡಿಕೊಳ್ಳಬಹುದು.

೨ನೆಯ ನೆಲೆ

ಹಟ್ಟಿಕಾರರು ಯಾರು?

ಮಹಾನವಮಿ ಮತ್ತು ದೀಪಾವಳಿಗಳು ನಮ್ಮಲ್ಲಿ ಬಹಳ ದೊಡ್ಡಹಬ್ಬ. "ನಿನಗೆ ಮಾನಾಮಿಯಂ, ದೀವಳಿಗೆಯಂ ಮಾಡೆನೆ?" ಎಂಬ ಲೋಕೋಕ್ತಿಯು ಪಂಪನ (ಕ್ರಿ. ಶ. ೯೪೧) ಭಾರತದಲ್ಲಿ ಬಂದಿದೆ. ಇವು ಸಾವಿರಾರು ವರುಷಗಳಿಂದಲೂ ನಡೆದು ಬಂದ ನಮ್ಮ ನಾಡಿನ ಹಬ್ಬ; ನಾಡಹಬ್ಬ. ಸುಮಾರಾಗಿ ಇವೆರಡೂ ಒಂದೇ ಹಬ್ಬ. ಒಂದಕ್ಕೊಂದು ಹೊಂದಿಕೊಂಡ ಹಬ್ಬ. ದೀವಳಿಗೆಗೆ ಜಾನಪದ ಭಾಷೆಯಲ್ಲಿ ಹಟ್ಟಿಯಹಬ್ಬವೆಂದು ಹೆಸರು. ಹಟ್ಟಿಯೆಂದರೆ ದನಕರುಗಳ ಬೀಡು; ಕುರಿಗಾರರೂ ತುರು (ಗೋವು)ಕಾರರೂ ಪಟ್ಟುಕೊಂಡಿರುವ ಪಟ್ಟಿ;[೧] ಹಟ್ಟಿಕಾರನೆಂದರೆ 'ಜೀವಧನಂಗಳ' ಸಾಕಿ ಬದುಕುವವನು; ಆದುದರಿಂದ ಹಟ್ಟಿಯ ಹಬ್ಬವೆಂದರೆ ಹಟ್ಟಿಕಾರರ ಹಬ್ಬ: ದನಕರುಗಳ ಹಬ್ಬ. ಹಟ್ಟಿಯ (ದೀವಳಿಗೆ) ಹಬ್ಬದ ಆರಂಭವು 'ವಸು-ದ್ವಾದಶಿ'ಯಿಂದ. ಆಶ್ವೀಜನ ಬಹುಳ ದ್ವಾದಶಿಯಂದು ಗೋಪೂಜೆಯಾಗಲೇಬೇಕು. ಕಾರ್ತಿಕ ಶುದ್ಧ ಪ್ರತಿಪದೆಗೆ 'ಗೋ-ಕ್ರೀಡನ'ದ ಹಬ್ಬವೆಂಬುದನ್ನು ಈಗ ಕಣ್ಣಾರೆ ಕಾಣುವುದು ಶಕ್ಯವಿಲ್ಲದಿದ್ದರೂ ಇದನ್ನು ಪಂಚಾಂಗದಲ್ಲಿಯಾದರೂ ಬರೆಯುವರೆಂದು ಉಳಿದಿದೆ. ಈ ಬಗೆಯಾಗಿ ಹಟ್ಟಿಯ ಹಬ್ಬದಲ್ಲಿ ಗೋಪೂಜೆಯಷ್ಟೆ ಅಲ್ಲ; ಕುರಿಗಳ ಪೂಜೆಯೂ ನಡೆಯುವುದು. ರೈತರು ಎತ್ತುಗಳನ್ನು ಸಿಂಗರಿಸಿ ಊರಲ್ಲಿ ಮೆರೆಯಿಸುವುದುಂಟು. ಈ ಹಬ್ಬದಲ್ಲಿ ದನಕರುಗಳು ಪೂಜೆ ನಡೆಯದ ಮನೆಯೇ ದೊರೆಯದು. ಇದು ಮೊಟ್ಟಮೊದಲಿಗೆ ದನಗಾರರ ಹಬ್ಬ. 'ಧನ'ವು ದನಗಾರರಿಂದ- 'ಮೇಟಿ' ಒಕ್ಕಲರ ಕೈಯಿಂದ-ಜಾರಿ ವರ್ತಕರಲ್ಲಿ ಸೇರುತ್ತಲೆ 'ಹಟ್ಟೀಹಬ್ಬವು' 'ದೀವಳಿಗೆ'ಯಾಯಿತು; ಅದಕ್ಕೆ ಈಗಿನ ಸ್ವರೂಪವು ಪ್ರಾಪ್ತವಾಯಿತು.

ಹಟ್ಟಿಕಾರ, ದನಗಾರರೆಂಬ ಹೆಸರುಗಳು ಈಗಿನ ಕರ್ಣಾಟದಲ್ಲಿ ಮೂಲೆಗುಂಪಾಗಿದ್ದರೂ ಇವುಗಳಿಗೆ ಪ್ರಾಶಸ್ತ್ಯವಿದ್ದ ಒಂದು ಕಾಲವಿತ್ತು.

"ತುರು-ಕರುವು ಇರದೂರು ನರಕಭಾಜನವಕ್ಕು;
ತುರುಕರು ಉಂಟಾದರೆ ಉಣಲು ಉಂಟು;"

ಆದುದರಿಂದ "ಜಗಕೆಲ್ಲ ತುರು-ಕರುವೆ ದೈವ" ಎಂದು ಸರ್ವಜ್ಞನು ಹೇಳಿದುದು, ಒಂದು ಕಾಲದಲ್ಲಿ ಅಕ್ಷರಶಃ ನಿಜವಾಗಿತ್ತು. ಅತಿಪ್ರಾಚೀನಕಾಲದಲ್ಲಿ ಎಲ್ಲೆಡೆಗಳಲ್ಲಿ ಹಟ್ಟಿಗಳೆ ಹಟ್ಟಿಗಳು. ಪಟ್ಟಿ ಎಂಬುದು ಹಟ್ಟಿ ಶಬ್ದದ ಆರಂಭದ ರೂಪ. ಪಟ್ಟಿ, ಹಟ್ಟಿ, ಪಾಟ, ವಾಟಿ, ವಾಡ, ವಾಡಿ ಈ ಬಗೆಯ ಹೆಸರಿನ ಊರುಗಳಿಲ್ಲದ

ಭಾಗವು ದಕ್ಷಿಣಾಪಥದಲ್ಲಿ ಎಲ್ಲಿಯಾದರೂ ಸಿಕ್ಕಬಹುದೇ ಎಂಬುದೆ ಸಂದೇಹ. ಹಟ್ಟಿಕಾರರಲ್ಲಿ ಹಲವರು ತೋಟಿ-ಪಟ್ಟಿ ಮಾಡಿಕೊಂಡು ಕುಳಗಳಾದ ಬಳಿಕ, ಒಕ್ಕಲುಗಳಾದ ಬಳಿಕ, ಊರಿಕೊಂಡು ನಿಲ್ಲುವುದಕ್ಕೆ ಸಾಧ್ಯವಾಯಿತು. ಆದುದರಿಂದ ಮೊದಲು ಹಟ್ಟಿ, ಬಳಿಕ ಊರು. 'ಒಕ್ಕಲಿಲ್ಲದ ಊರು' ಹೊಲ್ಲ; ಅದು ಊರೇ ಅಲ್ಲವೆಂದು ಸರ್ವಜ್ಞನು ಹೇಳಿರುವುದು ಸುಳ್ಳಲ್ಲ. ಇದಕ್ಕೂ ಮೊದಲಿನ ಅವಸ್ಥೆಯಲ್ಲಿ ಹೊಳೆ, ಹಳ್ಳ, ಕೊಳ್ಳಗಳ ಅನುರೋಧದಿಂದ ನಮ್ಮ ನಾಡಿನಲ್ಲಿ ಹೆಚ್ಚಾಗಿದ್ದುದು ಹಟ್ಟಿಗಳೇ. ಹಟ್ಟಿಕಾರರಲ್ಲಿ ಕುರುಬರು ತುರುಕಾರರು ಎಂದು ಬಗೆಗಳಾದರೂ ಇವರೆಲ್ಲರೂ ದನಗಾರರು. ಇವರಿಗೆಲ್ಲ ದನವೆ ದೈವ;[೨] ದನವೆ ಧನ. ಆದುದರಿಂದಲೆ ಇವರಿಗೆ ಮರಾಠಿಯಲ್ಲಿ 'ಧನಗರ'ರೆಂಬ ಹೆಸರು. ಆದರೆ, ಧನಗರ ಶಬ್ದವು ಹೇಗೆ ಸಿದ್ಧವಾಯಿತೆಂಬುದರ ನೆಲೆಯು, ಕನ್ನಡದ ಈ ಪರಂಪರೆಯನ್ನರಿಯದ ಪರಕೀಯ ವಿದ್ವಾಂಸರಿಗೂ ಮರಾಠಿ ಸಂಶೋಧಕರಿಗೂ ಹತ್ತಲಾರದು. ವಿಲ್ಸನ್ ಮೊದಲಾದವರು ಧನಗರವು 'ಧೇನುಕರ' ಶಬ್ದದಿಂದ ಬಂದಿರಬಹುದೇ, ಎಂದೊಮ್ಮೆ; ಉಃ! ಇದೇನೂ ಸರಿದೋರಲೊಲ್ಲದೆಂದು ಇನ್ನೊಮ್ಮೆ; ಹೀಗೆ ಹೊಯ್ದಾಡುತ್ತಿದ್ದಾರೆ. 'ಧನಗರ'ವು ಸಂಸ್ಕೃತ ವೆಂದು ಹೇಳಬೇಕೆ? ಅದರ ಅಸಂಸ್ಕೃತ ಸ್ವರೂಪವು ಮೋರೆಯ ಮೇಲೆಯೇ ಎದ್ದು ಕಾಣುತ್ತಿದೆ! ಇನ್ನೇನು ಗತಿ? 'ನೇತಿ ನೇತಿ' ಎಂದು ಕೈಯೂರಿದ್ದಾರೆ.[೩] ಧನ ಶಬ್ದವು ಹದಿಮೂರನೆಯ ಶತಮಾನಕ್ಕೆ ಮೊದಲೆ! 'ದನ'ವೆಂದು ರೂಪಹೊಂದಿ ಕನ್ನಡದಲ್ಲಿ ಬಂದಿತು. ಅದು ಇನ್ನೂ ಮರಾಠಿಯ ತೊದಳ್ನುಡಿಯ ಕಾಲ. ಕನ್ನಡದಲ್ಲಿ ೧೩ನೆಯ ಶತಮಾನಕ್ಕೆ ಮೊದಲೇ ಎಷ್ಟೋ ಕಾಲದಿಂದ ಕನ್ನಡದಲ್ಲಿ ಈ ಶಬ್ದವು ರೂಢವಾಗಿ ಹೋಗಿರಬೇಕು; ಅದೇ ಹೊಸತಾಗಿ ಬಳಕೆಯಲ್ಲಿ ಬಂದಿದ್ದರೆ ಕೇಶಿರಾಜನಿಂದ (೧೩ನೆಯ ಶತಮಾನ) ಅದಕ್ಕೆ ಮಾನ್ಯತೆಯು ದೊರೆವ ಸಂಭವವಿದ್ದಿಲ್ಲ.[೪] ಹಟ್ಟಿಕಾರರಿಗೆ ದನಗಾರರೆಂದು ಆಗಿನವರ ಮಾತಿನಲ್ಲಿರಬೇಕು. 'ಹಿಂಡುಕಾರ-ದನಗಾರ'ರೆಂಬ ಮಾತು ಹಳ್ಳಿಗಳಲ್ಲಿ ಈಗಲೂ ನಮಗೆ ಕೇಳಲಿಕ್ಕೆ ಸಿಕ್ಕುತ್ತದೆ. ಈ ಕನ್ನಡ ದನಗಾರನೇ ಮರಾಠಿಯಲ್ಲಿ ಧನಗರನಾದನು[೫] ಈ ಜನಾಂಗಕ್ಕೆ ಮಹಾರಾಷ್ಟ್ರದೇಶದ ಗೆಜೆಟಿಯರುಗಳಲ್ಲಿ ಹಟಗಾರ-ಧನಗರರೆಂದು ಉಲ್ಲೇಖಿಸಿದ್ದಾಗಿದೆ. ಖಾನದೇಶ-ನಾಸಿಕಗಳ ಸುತ್ತಲಿನ ನಾಡಿನಲ್ಲಿ 'ಕನ್ನಡ' (ಕಾನಡ)ರೆಂಬ ಹೆಸರಿನ ಹಟ್ಟಿಕಾರರಿದ್ದಾರೆ.[೬] ಬ್ರಿಟಿಶ ವರ್ಹಾಟ, ನಿಜಾಮ ಇಲಾಖೆಗೆ ಸೇರಿದ ವರ್ಹಾಟಗಳಲ್ಲಿಯೂ ಹತ್ತಿರದ ಭಾಗದಲ್ಲಿಯೂ "ಹಟಗಾರ-ಧನಗರರು" ಉಂಟು.[೭] ಧನಗರರು ಸಂಯುಕ್ತ ಪ್ರಾಂತದ ವರೆಗೂ ಹಬ್ಬಿರುವರು,' ಎಂದು ಎಂಥೋವೆನರು ಹೇಳುತ್ತಾರೆ.[೮] 'ರಾಜಮಹಾಲ ಗುಡ್ಡಗಳು, ಛೋಟಾನಾಗಪೂರ, ಶೋಣನದೀತೀರದ ವರೆಗೂ ಒಂದು ಶಾಖೆಯು ವ್ಯಾಪಿಸಿಕೊಂಡಿದೆ' ಎಂದು ಡಾ. ಗ್ರಿಯರಸನ್‌ರು ಕಂಡು ಹಿಡಿದಿರುವರು.[೯] ಇಲ್ಲಿ ಈ ಜನಾಂಗಕ್ಕೆ ಕುರುಬರೆಂದೇ ಹೆಸರು! ಆದರೆ 'ಕುರುಬ' ಶಬ್ದವನ್ನು ಔತ್ತರೇಯರಉಚ್ಚಾರದಲ್ಲಿ ಕುರುಕ-ಕುರ್ಖ ಎಂದು ಸ್ವಲ್ಪ ವ್ಯತ್ಯಾಸ ಹೊಂದಿದೆ. ಕುರುಬ (ಕುರ್ಖ) ಶಬ್ದದ ಅರ್ಥವು ತಿಳಿಯದುದರಿಂದ ಅಲ್ಲಿಯ ಜನರು ಇವರಿಗೆ 'ಕುರುಕ-ಧನಗರ'ರೆಂದು ಕರೆಯುತ್ತಾರೆ! ಇವರಿಗೇ ಓರಾಜನರೆಂಬ ಇನ್ನೂ ಒಂದು ಹೆಸರಿದೆ.[೧೦]

ದಕ್ಷಿಣದಲ್ಲಿ ಸಾಧಾರಣವಾಗಿ ನೀಲಗಿರಿಯಿಂದ ಕುರು(೦) ಬರ ಸೀಮೆ ಆರಂಭವಾಗುತ್ತದೆ. ಉತ್ತರಕ್ಕೆ ಗಂಗಾ-ಶೋಣಭದ್ರಾನದಿಯ ವರೆಗೂ ಈ ಜನಾಂಗವು ವ್ಯಾಪಿಸಿಕೊಂಡಿರುವುದು ಅನುಭವಕ್ಕೆ ಬರುತ್ತಿದೆ. ಇವರೆಲ್ಲರೂ ಒಂದೇ ಜನಾಂಗ (Race) ದವರೊ? ಅಥವಾ ಇವರೆಲ್ಲರ ಉದ್ಯೋಗ ದನಗಾರಿಕೆ ಯಾದುದರಿಂದ, ಕೇವಲ ನಾಮಸಾದೃಶ್ಯದಿಂದ ಇವರೆಲ್ಲ ಒಂದೇ ಜನಾಂಗದವರೆಂಬ ಭ್ರಮೆಯು ಉಂಟಾಗುತ್ತಿರುವುದೊ? ಇವರೆಲ್ಲ ಒಂದೇ ಜನಾಂಗದವರೆಂದು ಈ ಜನಗಳ ಪರಂಪರೆ, (ಆಚಾರ ವಿಚಾರ), ಭಾಷೆಗಳಿಂದ ಸಿದ್ಧವಾಗುತ್ತಲಿದೆ. ಇದರ ವಿಶೇಷ ವಿವರಣೆಯು ಮುಂದೆ ಬರಲಿದೆ. ಆದರೂ ಯುರೋಪೀಯ ಸಂಶೋಧಕರೂ ವಂಶ-ವಿಜ್ಞಾನದಲ್ಲಿ (Ethnology) ಬಲ್ಲವರೂ ಏನು ಹೇಳುತ್ತಾರೆಂಬುದನ್ನು ಅರಿತುಕೊಳ್ಳುವುದೂ ಆವಶ್ಯಕವಾಗಿದೆ. ಪರಂಪರೆ ಮತ್ತು ಭಾಷೆಗಳಿಂದ ಸಿದ್ಧವಾಗುವ ಮಾತಿಗೆ ವಂಶಶಾಸ್ತ್ರದ ಬೆಂಬಲವೂ ದೊರೆತರೆ ಇದೆಲ್ಲವೂ ಮೂಲ ಒಂದೇ ಜನಾಂಗವೆಂಬ ಬಗ್ಗೆ ಎಳ್ಳಷ್ಟೂ ಸಂದೇಹಕ್ಕೆ ಅವಕಾಶವೇ ಉಳಿಯುವುದಿಲ್ಲ. ಆಧುನಿಕ ವಂಶಶಾಸ್ತ್ರಜ್ಞರಲ್ಲಿ

ಹ್ಯಾಡೊನ್‌ರು ಸುವಿಖ್ಯಾತರು. ಇವರ ಅಭಿಪ್ರಾಯದಂತೆ ಕುರ್‍ಖ (ಕುರುಬ)ರು ನಿಃಸಂದಿಗ್ಧವಾಗಿ ದ್ರಾವಿಡರು. ಇವರು ಬರೆದಿರುವುದೇನೆಂದರೆ:

> All authorities are agreed that the Oraon (Kurkh) people are Dravidian people, who immigrated on to the plains of Chota-nagpur.......[೧೧]

ಧರ್ಮ ಮತ್ತು ನೀತಿಯ ವಿಶ್ವಕೋಶದಲ್ಲಿ ಇವರನ್ನು ಕುರಿತು ಬರೆಯುವಲ್ಲಿ ಆ ಲೇಖಕರು ಅಭಿಪ್ರಾಯಪಟ್ಟಿರುವದೇನೆಂದರೆ: "The Oraons are Dravidians of the full blood." ಮಿ. ಗೇಟಿ ಎಂಬ ತಜ್ಞರು ಇದೇ ಅಭಿಪ್ರಾಯವನ್ನು ಇದಕ್ಕಿಂತಲೂ ಸ್ಪಷ್ಟ ಮಾತಿನಲ್ಲಿ ಹೀಗೆ ಹೇಳಿದ್ದಾರೆ.

> ......According to their tradition, they came from the Carnatic.... and settled in Bihar on the banks of Son.....and their language is more closely allied to Canarese than to any other Dravidian language spoken in the south of India[೧೨]

ಛೋಟಾನಾಗಪುರದ ಕುರುಕರು ಕರ್ನಾಟಕರು; ಇವರ ಮಾತು ತಮಿಳು ತೆಲುಗಿಗಿಂತಲೂ ಕನ್ನಡಕ್ಕೇ ತೀರ ಸಮೀಪ.

ಈ ಕುರುಕ (ಕುರುಬ)ರಿಗೆ ಉಳಿದ ಎಲ್ಲ ಹೋರೆಗಳಿಗಿಂತಲೂ ದನಗಾರಿಕೆಯಲ್ಲಿಯೇ ಇಂದಿಗೂ ವಿಶೇಷ ಪ್ರೀತಿಯಂತೆ. ಅಂತೂ ಕಾವೇರಿಯಿಂದ ಗಂಗೆಯವರೆಗೆ, ನೀಲಗಿರಿಯಿಂದ ರಾಜಮಹಾಲದ ವರೆಗೆ ವ್ಯಾಪಿಸಿ ಕೊಂಡಿರುವ ಈ ಹಟ್ಟಿಕಾರ-ದನಗಾರರು ದ್ರಾವಿಡ ಜನಾಂಗ; ಅದರಲ್ಲಿಯೂ ಕನ್ನಡ ಶಾಖೆಗೆ ಸೇರಿದವರು, ಎಂಬುದು ನಿರ್ವಿವಾದ. ವರ್‍ಹಾಟದಲ್ಲಿ ವಿಜಾಪುರದಂತೆಯೆ ಕನ್ನಡ ಮಾತಿನ ರೀತಿಯುಳ್ಳ ಕುರುಂಬರೂ ಗೋವಳರೂ ಈಗಲೂ ಇದ್ದಾರೆ.[೧೩] ಇಂದು ಕಾವೇರಿಯಿಂದ ಗಂಗೆಯ ವರೆಗೆ ಹಬ್ಬಿರುವ ಈ ಹಟ್ಟಿಕಾರ-ದನಗಾರರು ದ್ರಾವಿಡರು. ದ್ರಾವಿಡರು ಆರ್ಯ-ಪೂರ್ವಜನಾಂಗವೆಂದು ವಿದ್ವಾಂಸರು ನಿರ್ಧರಿಸಿದ್ದಾರೆ. ಆದುದರಿಂದ ಆರ್ಯರಿಗಿಂತ ಮೊದಲು ಈ ಪ್ರದೇಶದಲ್ಲೆಲ್ಲ ವಿಶೇಷ ಪ್ರಬಲರಾಗಿದ್ದವರು ಇವರೇ ಎಂದು ಸಿದ್ಧಪಡಿಸಲು ಬೇರೆ ಪ್ರಮಾಣಗಳ ಆವಶ್ಯಕತೆಯೆ ಇಲ್ಲ. ಆರ್ಯರಿಗಿಂತ ಮೊದಲು ಹಿಂದೂ ದೇಶದಲ್ಲಿ ಎರಡು ಜನಾಂಗಗಳು ಕಾಣಸಿಕೊಳ್ಳುತ್ತಿದ್ದುವೆಂದು ಸಂಶೋಧಕರ ಅಭಿಪ್ರಾಯ. ಒಂದಕ್ಕೆ, ಆಸ್ಟ್ರೋ-ಏಶಿಯಾಟಿಕ್ ಎಂದೂ ಇನ್ನೊಂದಕ್ಕೆ 'ದ್ರಾವಿಡ'ವೆಂದೂ ಸ್ಥೂಲವಾಗಿ ಹೆಸರುಗಳನ್ನು ಕಲ್ಪಿಸಿದ್ದಾರೆ. ಮೊದಲನೆಯವರು ದ್ರಾವಿಡರಿಗಿಂತಲೂ ಪ್ರಾಚೀನರು; ದ್ರಾವಿಡರು ಅವರನ್ನು ತಳ್ಳಿ ತಮ್ಮ ವರ್ಚಸ್ಸನ್ನು ಸ್ಥಾಪಿಸಿದ್ದುದಾಗಿ ಬಲ್ಲಿದರು ಹೇಳುತ್ತಾರೆ. ಆದರು ಹಿಂದೂದೇಶದ ಪೂರ್ವಭಾಗದಲ್ಲಿ-ಬಂಗಾಳದಿಂದ ಕೋಸಲದ ವರೆಗೆ-ಸಾಧಾರಣವಾಗಿ ಆಸ್ಟ್ರೋ-ಏಶಿಯಾಟಿಕ್ ಜನಾಂಗವೂ ಪಶ್ಚಿಮ ಭಾಗದಲ್ಲಿ-ಸಿಂಧೂ ದೇಶದಿಂದ ರಾಮೇಶ್ವರದ ವರೆಗೆ 'ದ್ರವಿಡ' ಜನಾಂಗವೂ ಪ್ರಬಲವಾಗಿದ್ದಿತೆಂದು ನಿರ್ಧರಿಸಬಹುದಾಗಿದೆ. ಇವರೇ ಅನುಕ್ರಮವಾಗಿ ನಾಗರು ಮತ್ತು ಗರುಡರೆಂಬ ಹೆಸರಿನಿಂದ ಕರೆಯಲ್ಪಡುತ್ತಿರ ಬೇಕೆಂದೂ ಒಂದು ಅಭಿಪ್ರಾಯವಿದೆ.[೧೪] 'ದ್ರಾವಿಡರು' ಯಾರು? ಅವರ ಮೂಲಸ್ಥಾನವೆಲ್ಲಿ? ಎಂಬ ಬಗ್ಗೆ ತುಂಬಾ ಮತಭೇದಗಳಿವೆ.[೧೫] ಅಲ್ಲದೆ ಇದು ಪ್ರಸ್ತುತ ಚರ್ಚೆಯ ವಿಷಯವೂ ಅಲ್ಲ. 'ದ್ರಾವಿಡರು' ಆರ್ಯಪೂರ್ವ ಜನಾಂಗ. ಇವರು (ಗರುಡರು? ಆಸ್ಟ್ರೋ ಏಶಿಯಾಟಿಕ, (ನಾಗ?) ರನ್ನು ತಮ್ಮ ಶಕ್ತಿಯಿಂದ ಅಂಕೆಯಲ್ಲಿರಿಸಿ ಕೊಂಡಿದ್ದರು. ಸಿಂಧೂ ತೀರದಿಂದ ಹಿಂದೂ ದೇಶದ ಪಶ್ಚಿಮಭಾಗದಲ್ಲಿ ಪ್ರಬಲರಾಗಿದ್ದರು. ಇವಿಷ್ಟು ಮಾತುಗಳು ಸಾಧಾರಣವಾಗಿ ಬಹುಜನ ವಿದ್ವಾಂಸರಿಗೆ ಸಮ್ಮತವಾಗಿವೆ.

ಪ್ರೊ. ಪಿ. ಟಿ. ಶ್ರೀನಿವಾಸ ಅಯ್ಯಂಗಾರರ ಅಭಿಪ್ರಾಯದಂತೆ ತಮಿಳರೂ ಪ್ರಾಚೀನಕಾಲದಲ್ಲಿ ಹಟ್ಟಿಕಾರ-ದನಗಾರರೇ ಆಗಿದ್ದರು.[೧೬] 'ಆ ಜನಾಂಗದ ಪ್ರಾಥಮಿಕ ಅವಸ್ಥೆಯೂ ಕುರುಂಬಿಕೆಯೆ' ಎಂದು ಪ್ರತಿ

ಪಾದಿಸಿದ್ದಾರೆ. ಈ ಜನಾಂಗವು ಕುರಿಗಳನ್ನು ಸಾಕುತ್ತಿದ್ದಿತೆಂದು ಇವರಿಗೆ ಕುರುಂಬರೆಂಬ ಹೆಸರು... ಎಂದು ಈಗಿನ ಸಾಮಾನ್ಯವಾದ ಗ್ರಹಿಕೆ. 'ಕುರು' ಎಂದರೆ 'ಎತ್ತರ'ವೆಂಬ ಒಂದು ಅರ್ಥವಿದೆ. ಅದಕ್ಕನುಸರಿಸಿ ಕುರು(ಂ)ಬನೆಂದರೆ ಎತ್ತರದ ನಾಡಿನಲ್ಲಿ-ಗುಡ್ಡ ಬೆಟ್ಟಗಳಲ್ಲಿ ಇರುವವನೆಂದೂ ಅರ್ಥವಾಗುತ್ತದೆ. ಕುರುಬರಿಗೆ ಮೊದಲು ತಮ್ಮ ಉಪಜೀವನಕ್ಕಾಗಿ ಗುಡ್ಡಬೆಟ್ಟಗಳ ಹುಲ್ಲಿನ ಪ್ರದೇಶಗಳನ್ನು ಹುಡುಕಿಕೊಂಡು ಬದುಕಬೇಕಾಗುತ್ತಿದ್ದಿತೆಂಬುದನ್ನು ನೆನೆದುಕೊಂಡರೆ ಈ ಅರ್ಥವೂ ಅಸಂಭವನೀಯವೆಂದು ಹೇಳಲಿಕ್ಕಾಗುವುದಿಲ್ಲ. ಅಲ್ಲದೆ ಕುರು(ಂ)ಬರಿಗೆ ಪ್ರಾಚೀನ ತಮಿಳು ಕಾವ್ಯಗಳಲ್ಲಿ ಮಲೆಯರು ಎಂದೂ ವರ್ಣಿಸಿದ್ದಾರೆ.[೧೭] ಆದಕಾರಣ ಕುರು(ಂ)ಬರು, ಮಲೆಯರು, ಎಂದರೆ ಗುಡ್ಡದಲ್ಲಿ ವಾಸವಾಗಿದ್ದವರು, ಎಂಬುದೇ ಹೆಚ್ಚು ಸಮರ್ಪಕವಾಗಿದೆ. ಗಂಗೆಯಿಂದ ಕಾವೇರಿಯ ವರೆಗೆ ಹಬ್ಬಿಕೊಂಡಿರುವ ಕನ್ನಡ ಹಟ್ಟಿಕಾರ-ದನಗಾರರೂ ಕಾವೇರಿಯಿಂದ ಸಿಂಹಳದ್ವೀಪದ ವರೆಗೆ ವ್ಯಾಪಿಸಿರುವ ತಮಿಳರೂ ಒಂದೇ ಜನಾಂಗ. ಮೂಲ ದ್ರಾವಿಡ ಪಂಗಡಕ್ಕೆ ಸೇರಿದವರೆಂದು ವಂಶಶಾಸ್ತ್ರಜ್ಞರು ಹೇಳುವ ಮಾತನ್ನೇ ಭಾಷೆಯ ಅಭ್ಯಾಸದಿಂದಲೂ ನಿರ್ಧರಿಸಬಹುದಾಗಿದೆ. ಹಳಗನ್ನಡ ಶಬ್ದಗಳ ಪ್ರಾಚೀನತಮ ರೂಪಗಳನ್ನು ನಿರೀಕ್ಷಿಸುತ್ತ ಹೋದರೆ, ಒಂದು ಕಾಲಕ್ಕೆ ಹಳಗನ್ನಡ ಮತ್ತು ತಮಿಳು ಇವೆರಡೂ ಅಭಿನ್ನ ಭಾಷೆಗಳಾಗಿದ್ದುವೆಂದು, ಇವರೆಡೂ ಭಾಷೆಯೊಳಗಿನ ಶಬ್ದಗಳ ರೂಪಗಳು ಒಂದೇ ಬಗೆಯವಿದ್ದುವೆಂದು ರಾವಬಹಾದ್ದೂರ ಆರ್. ನರಸಿಂಹಾಚಾರ್ಯರು ಸರಿಯಾಗಿ ಊಹಿಸಿದ್ದಾರೆ.

ಆವರೆ, ಈ ಸಮಾಜಗಳು ಮೊಟ್ಟ ಮೊದಲಿಗೆ ಒಂದೇ ಇದ್ದುವೆಂದು ಸಂಶೋಧಕರು ಊಹಿಸಿ ಹೇಳಬೇಕಾಗಿದೆಯೇ ಹೊರತು ಈ ಜನಾಂಗಗಳಲ್ಲಾಗಲಿ ಅವುಗಳ ಸಾಹಿತ್ಯದಲ್ಲಾಗಲಿ ಇದರ ನೆನಪು ಜೀವಂತವಾಗಿ ಇದ್ದಂತೆ ತೋರುವುದಿಲ್ಲ. ತಮಿಳರ ಪ್ರಾಚೀನ ಸಾಹಿತ್ಯದಲ್ಲಿ ಅಲ್ಲಿಯ ಕವಿಗಳು ತಮ್ಮ ಬಡಗ (ಉತ್ತರ) ಬಾಂಧವರನ್ನು ತಿರಸ್ಕಾರದಿಂದ ಒಕ್ಕಣಿಸಿದ್ದಾರೆ. ಅಂಡರ್, ಪೊಡುವರ್, ಇಡೈಯರ್, ಕುರುಂಬರ್ ಎಂಬಿವೇ ಮೊದಲಾದ ಹಟ್ಟಿಕಾರ-ದನಗಾರರ ಪರ್ಯಾಯನಾಮಗಳೊಡನೆ ಕಳವರ್ ಎಂದೂ ಇವರಿಗೆ ಹೆಸರಿಟ್ಟುದುಂಟು.[೧೮] ತಮಿಳರ ಕ್ರಿಸ್ತಶಕದ ಆದಿಭಾಗದ ಸಾಹಿತ್ಯದಲ್ಲಿಯೇ, ಹೀಗೆ ಈ ಜನಾಂಗವು ಇಬ್ಭಾಗವಾಗಿದ್ದುದರ ಸ್ಪಷ್ಟವಾದ ಉಲ್ಲೇಖಗಳಿವೆ. ಆದುದರಿಂದ, ಇದಕ್ಕೂ ಎಷ್ಟೋ ಶತಮಾನಗಳಿಗೆ ಮೊದಲೆ 'ದ್ರಾವಿಡ' ಜನಾಂಗದ ಮೂಲ ಸಂಘದಲ್ಲಿ ಒಳಬಣಗಳಾಗಲು ಆರಂಭವಾಗಿರಬೇಕೆಂದು ಬೇರೆ ಹೇಳಬೇಕಾಗಿಲ್ಲ. ಕ್ರಿಸ್ತಶಕದ ೨ನೆಯ ಶತಮಾನದ ಗ್ರೀಕನಾಟಕದಲ್ಲಿರುವ ಕೆಲವು ಮಾತುಗಳು ಕನ್ನಡದುವೇ ಎಂದು ವಿದ್ವಾಂಸರು ನಿರ್ಣಯಿಸಿದ್ದಾರೆ.[೧೯] ಶ್ರೀಮಾನ್ ಗೋವಿಂದ ಪೈಗಳವರು 'ಕನ್ನಡದ ಪ್ರಾಚೀನತೆ'ಯನ್ನು ಕುರಿತು ವಿವೇಚಿಸಿ ಕ್ರಿಸ್ತಪೂರ್ವ ೧-೨ ಶತಮಾನಗಳಿಂದಲೇ ಕನ್ನಡದಲ್ಲಿ ಸಾಹಿತ್ಯವಿದ್ದಿತೆಂದು ಊಹಿಸಿದ್ದಾರೆ.[೨೦] ಶ್ರೀಮಾನ್ ಆರ್. ನರಸಿಂಹಾಚಾರ್ಯರೇ ಒಂದೆಡೆಯಲ್ಲಿ ಬರೆದಿರುವುದೇನೆಂದರೆ.

> In fact, there seems reason to believe that Kannada was one of the earliest. if not the earliest, to be cultivated of all the south Indian Languages.[೨೧]

ಕ್ರಿಸ್ತಪೂರ್ವ ೨-೩ ಶತಮಾನಗಳ ಸುಮಾರಿಗೆ ಕನ್ನಡವು ಸ್ವತಂತ್ರ ಭಾಷೆಯೆನಿಸುವಷ್ಟು ಮಾರ್ಪಾಟಗಳನ್ನು ಹೊಂದಿರಬೇಕಾದರೆ, ಅದಕ್ಕೂ ಕೆಲವು ಶತಮಾನಗಳಿಗೆ ಮೊದಲೆ ಅದು ಮೂಲದ್ರಾವಿಡದಿಂದ ಬೇರೆಯಾಗಲಾರಂಭಿಸಿರಬೇಕಲ್ಲವೆ? ಈ ಪ್ರಕಾರವಾಗಿ ವಿಭಾಗಗಳಾಗಿ ಎಷ್ಟೋ ಶತಮಾನಗಳು ಸಂದು ಹೋದುದರಿಂದಲೆ, ಈ ಜನಾಂಗಕ್ಕೆ "ತಾವೆಲ್ಲ ಮೊದಲಿಗೆ ಒಂದೇ ಬಳಗದವರು" ಎಂಬುದರ ಸಂಪೂರ್ಣ ವಿಸ್ಮರಣವಾಗಿರುವುದು ಸಹಜವಿದೆ.

ಹಟ್ಟಿಕಾರ ಶಬ್ದವನ್ನು ಬಳಕೆಯ ಮಾತಿನಲ್ಲಿ 'ಹಟಗಾರ'ವೆಂದು ಹೇಳುವವರೇ ಹೆಚ್ಚು. ಮರಾಠಿಯವರಂತೂ ಹಟಗಾರ, ಹೇಟಕರ ಎಂದು ಎರಡು ಮೂರು ತೆರನಾಗಿ ಬರೆಯುವರು. ಮರಾಠಿ ಭಾಷೆಯಂತೆ ಹಟಗಾರಶಬ್ದದ

ರೂಪಸಿದ್ಧಿಯೆ ಆಗುವದು ಕಷ್ಟ; ಅದರ ನಿಜವಾದ ಅರ್ಥವು ತಿಳಿಯದುದರಿಂದ ಅವರಿಗೆ ಇದೊಂದು ಗೂಢಶಬ್ದವೆ ಆಗಿದೆ. 'ಹಟಗಾರ'-ದನಕಾರರಂತೆ, 'ಹಟಗಾರ'-ಜಾಡರ ಇನ್ನೊಂದು ಮಹತ್ವದ ಸಮಾಜವಿದೆ. ಇವೆರಡೂ ಸಮಾಜಗಳಲ್ಲಿ ಬರಿಯ ಹೆಸರಿನ ಹೋಲಿಕೆ ಇದೆಯೆ? ಅಥವಾ ಪ್ರಾಚೀನ ಕಾಲದಲ್ಲಿ ಇವೆರಡೂ ಜನಾಂಗಗಳೊಳಗೆ ಏನಾದರೂ ಸಂಬಂಧವಿದ್ದಿತೆ? ಎಂಬುದು ಬಹಳ ಮಹತ್ವದ ಪ್ರಶ್ನೆಯಾಗಿದೆ. 'ಹಟ್ಟಿ' (ದನಗಳಬೀಡು) ಮಾಡಿಕೊಂಡಿದ್ದವರು 'ಹಟ್ಟಿಕಾರ'ರಾದರು; 'ಪಟ' (ವಸ್ತ್ರ)ಗಳನ್ನು ಮಾಡುವವರು ಹಟಕಾರರಾದರು. ಇವರಲ್ಲಿ ಏನು ಸಂಬಂಧ ಎಂದು ಕೆಲರು ಶಂಕಿಸಬಹುದು. ಉಪಜೀವನದ ಉದ್ಯೋಗಗಳು ಭಿನ್ನವಾದರೂ ಮೂಲದಲ್ಲಿ ಒಂದೇ ಜನಾಂಗದವರು ಏಕೆ ಆಗಿರಲಿಕ್ಕಿಲ್ಲ? ಎಂದು ಇನ್ನೊಂದು ದಿಕ್ಕಿನಿಂದ ಪ್ರಶ್ನೆ ಹುಟ್ಟುವುದು. ಈಗ ಈ ಸಮಾಜಗಳಲ್ಲಿ ಅನ್ನ-ಕನ್ಯಾವ್ಯವಹಾರಗಳು ಆಗುವದಿಲ್ಲ; ಎಷ್ಟೋ ಜಾಡರಿಗೆ ತಾವು ಒಂದು ಕಾಲಕ್ಕೆ ಹಟ್ಟಿಕಾರ-ದನಗಾರರಾಗಿದ್ದೆವೆಂಬ ಕಲ್ಪನೆಯೂ ರುಚಿಸಲಿಕ್ಕಿಲ್ಲ. ಗೃಹಸ್ಥರು, ನಿಯೋಗಿಗಳು, ರಾಯರುಗಳಾಗಿರುವ ಬ್ರಾಹ್ಮಣರಿಗೆ ನೀವೂ ಒಂದು ಕಾಲಕ್ಕೆ ವೈದಿಕರು, ಭಟ್ಟರುಗಳಾಗಿದ್ದಿರೆಂದು ಹೇಳಿದರೆ, ಕೇಳಿ ಹಲವರ ಮೆಯ್ಗೆ ಮುಳ್ಳುಬರಬಹುದು. ಆದರೇನು? ಸತ್ಯ-ಸಂಶೋಧನೆಯಲ್ಲಿ ಅರೆದು-ಒರೆದು ಕೊನೆಗೆ ನಿಕ್ಕಳಾಗಿ ನಿಂತುದನ್ನು ಒಪ್ಪಿಕೊಳ್ಳಲೆಬೇಕಲ್ಲವೆ?

ಹಟಗಾರ-ಜಾಡರ ಇಂದಿನ ಹೋರೆ ನೇಗಿ. ಇವರು ದೇವಾಂಗರೆಂಬ ಹೆಸರಿನಿಂದಲೇ ಸುಪ್ರಸಿದ್ಧರಿದ್ದಾರೆ. 'ದೇವಾಂಗ ಪುರಾಣ'ವೆಂಬ ಒಂದು ಗ್ರಂಥವೂ ಇದೆ. ಇದರ ಹೆಸರೇ 'ಪುರಾಣ'. ಆದರು ಈ ಜನಾಂಗದ ಪ್ರಾಚೀನ ಪರಂಪರೆಯನ್ನು ಅರಿತುಕೊಳ್ಳಲಿಕ್ಕೆ ಇದರಷ್ಟು ಉತ್ಕೃಷ್ಟವಾದ ಬೇರೆ ಸಾಧನವೆ ಇಲ್ಲ. ಇದರಲ್ಲಿ ಜೇಡರ ದಾಸಿಮಯ್ಯನ ಹೆಸರು ಬಂದಿರುವುದರಿಂದ ಇದು ಹನ್ನೆರಡನೆಯ ಶತಮಾನದ ಮುಂದಿನ ಭಾಗದಲ್ಲಿಯೆ ರಚಿತವಾಗಿರಬೇಕು. ಆದರೆ, ಇದನ್ನು ರಚಿಸಿದವನು ತಾನುಕೇಳಿದ ಪೂರ್ವಪರಂಪರೆಗಳನ್ನು ಮಾತ್ರ ಬಹಳ ಜಾಣ್ಮೆಯಿಂದ ಸಂಗ್ರಹಿಸಿದ್ದಾನೆ. ಇದರೊಳಗಿನ ಎಷ್ಟೋ ಮಾತುಗಳಲ್ಲಿ ತುಂಬ ಸತ್ಯಾಂಶವಿದ್ದುದು ಕಂಡುಬರುತ್ತಿದೆ. ಈ ಪುರಾಣದಲ್ಲಿ ದೇವಾಂಗರು 'ನಂದಿಧ್ವಜ'ರೆಂದು ಹೇಳಿದೆ.[೨೨] ನಂದಿಧ್ವಜವಿರುವುದರಿಂದ ಈ ಸಮಾಜವು ಶಿವೋಪಾಸಕರದೆಂದು ಅರ್ಥವಾಗುವಂತೆ, ಇವರು ಎತ್ತು (ಆಕಳು)ಗಳಿಂದ ಜೀವಿಸುವವರು ಎಂದೂ ಧ್ವನಿತವಾಗುವುದು. ಇದೇ ಪುರಾಣದಲ್ಲಿ ಇನ್ನೊಂದೆಡೆಗೆ ಪಾರ್ವತಿಯು ದೇವಾಂಗನಿಗೆ ಕಂಕಣವನ್ನು ದಯಪಾಲಿಸಿದ ಸಂಗತಿಯಿದೆ. (ಪುಟ. ೯೧). ಆ ಕಂಕಣವು ದೊರೆತ ಬಳಿಕ ದೇವಿಯ ಅಪ್ಪಣೆಯಂತೆ ನೇಗಿಯನ್ನು ಕೆಯ್ಕೊಂಡ ವರ್ಣನೆಯಿದೆ. ಆದರೆ, ಜೇವಿಯು ಕೊಟ್ಟ ಕಂಕಣವು ಎಂತಹದು?....... ಎಂಬುದರ ಬಗ್ಗೆ ಮಾತ್ರ ಪುರಾಣವು ಮೌನವನ್ನು ತಾಳುತ್ತದೆ! ಅದು ಉಣ್ಣೆಯದೆ? ಹತ್ತಿಯದೆ? ಸ್ವಲ್ಪ ವಿಚಾರಿಸಿ ನೋಡಿದರೆ ಹತ್ತಿಗಿಂತ ಮೊದಲು ಉಣ್ಣೆಯೆಂಬುದು ಗೊತ್ತಾಗುವಂತಿದೆ. ಒಕ್ಕಲುತನವು ಗೊತ್ತಾದ ಬಳಿಕ ಹತ್ತಿ; ಕಾಡುಹತ್ತಿಯ ಗಿಡಗಳು ದೊರೆತ ಬಳಿಕ ಅದು ಮನುಷ್ಯನಿಗೆ ಗೊತ್ತು. ಅಲ್ಲಿಯ ವರೆಗೆ? ಹಟ್ಟಿಕಾರ-ದನಗಾರನಾಗಿದ್ದಾಗ ಸುಲಭವಾಗಿ ಸಿಕ್ಕುವ ಉಣ್ಣೆಯಿಂದ ಬಟ್ಟೆಗಳನ್ನು ಮಾಡಿಕೊಳ್ಳುವ ಬಗೆಯನ್ನು ಮನುಷ್ಯನು ಮೊಟ್ಟಮೊದಲಿಗೆ ಕಲಿತಿರಲಿಕ್ಕೆ ಬೇಕು. ಆದುದರಿಂದ ಉಣ್ಣೆಕಂಕಣದವರು ಹಳಬರು, ಹತ್ತಿಕಂಕಣವು ಅದರ ಮುಂದಿನ ತರಗತಿ. ಇದರಿಂದ ದೇವಾಂಗ ಋಷಿಗೆ ದೇವಿಯು ಮೊದಲಿಗೆ ಉಣ್ಣೆಯ ಕಂಕಣವನ್ನೇ ಕೊಟ್ಟಿರಬೇಕೆಂದು ಹೇಳಬಹುದು.

ದೇವಾಂಗಪುರಾಣ ಕರ್ತೃವು ಈ ಸಂದರ್ಭದಲ್ಲಿ ಉಪಯೋಗಿಸಿದ ಮಾತುಗಳೂ ಸ್ವಲ್ಪ ಸಂದಿಗ್ಧವಾಗಿಯೆ ಇವೆ.

ಗಚ್ಛ ಶೀಘ್ರಂ ಸಕಾಶಂ ತ್ವಂ ವಿಷ್ಣೋಃ ಅಮಿತ ತೇಜಸಃ
ವೇತ್ವಾ ವಸ್ತ್ರಾಣಿ ದಿವ್ಯಾನಿ ತದ್ವಿತೀರ್ಣೈಶ್ಚ ತುಂತುಭಿಃ। (ಪು. ೩೪-೩೫)

ನೀನು ವಿಷ್ಣುವಿನ ಹತ್ತಿರ ಹೋಗು; ಅವನು ನಿನಗೆ ತಂತುಗಳನ್ನು ಕೊಡುತ್ತಾನೆ; ಅವುಗಳಿಂದ ಬಟ್ಟೆಯನ್ನು ಸಿದ್ಧಪಡಿಸು ಎಂದು ಶಿವನ ಸಂದೇಶವು ದೊರೆತಿತು. ಇಲ್ಲಿ ವಿಷ್ಣುವು ಎಂದರೇನು?

ವಿಷ್ಣುವಿಗೆ "ಸುತಂತುಃ" "ತಂತುವರ್ಧನಃ" ಎಂದೂ ವಿಷ್ಣುಸಹಸ್ರನಾಮಾವಳಿಯಲ್ಲಿ ಹೇಳಿದೆ. ವಿಷ್ಣುವೇ ಕೃಷ್ಣನೆಂದು ನಮ್ಮವರ ದೃಢವಿಶ್ವಾಸ. ಕೃಷ್ಣನಿಗೆ ವೃಷ್ಣಿ (ವಾರ್ಷ್ಣೇಯ) ಎಂದು ಪರ್ಯಾಯ ನಾಮವಿದೆ. ಆದುದರಿಂದ ವಿಷ್ಣುವೂ ವೃಷ್ಣಿಯೂ ಒಂದೇ. ವೃಷ್ಣಿ ಎಂದು ಸಂಸ್ಕೃತದಲ್ಲಿ ಟಗರಿಗೂ ಹೆಸರು!! ('ಯದ್ಭೂತಂ, ಯಚ್ಚ ಭವ್ಯಂ' ಸರ್ವವೂ ವಿಷ್ಣು. ಆದುದರಿಂದ, ವಿಷ್ಣುವು ವೃಷ್ಣಿಯೂ ಏಕೆ ಅಲ್ಲ?) ಆದಕಾರಣ ದೇವಾಂಗನಿಗೆ ವಿಷ್ಣುವಿನಿಂದ- ವೃಷ್ಣಿಯಿಂದ ತರಲು ಹೇಳಿದ ತಂತುಗಳೆಂದರೆ ಉಣ್ಣೆಯಲ್ಲದೆ ಬೇರೆ ಏನೂ ಇರಲಾರದು. ಒಂದು ಕಾಲಕ್ಕೆ ಬಟ್ಟೆಗಳು ಕೂದಲಿನವೆ ಇರುತ್ತಿದ್ದುವೆಂಬ ಸೂಚನೆಯು ಕನ್ನಡದ 'ನವುರು' (ಸೂಕ್ಷ್ಮಬಟ್ಟೆ) ಎಂಬ ಶಬ್ದದಲ್ಲಿಯೂ ಗೋಚರವಾಗುತ್ತಿದೆ. ನವಿರು (ಕೂದಲು) ಮತ್ತು ನವುರು (ಕೂದಲು, ಬಟ್ಟೆ) ಇವೆರಡೂ ನುಡಿಗಳನ್ನು ಹೋಲಿಸಿಕೊಳ್ಳಬಹುದು. ಇದರಂತೆ ಚೂಲ=ಕೂದಲು (Apte's Ditionary). ಚೋಲ, ಚೋಲಿ ಎಂಬುದೊಂದು ವಸ್ತ್ರವಿಶೇಷ. ಚೂಲದಿಂದ ಎಂದರೆ ಕೂದಲು-ಉಣ್ಣೆಯಿಂದ ಮಾಡಿದುದು ಚೋಲ ಚೋಲಿ ವಸ್ತ್ರ-ವಿಶೇಷವು ಆಗಿರಲಿಕ್ಕಿಲ್ಲವೆ?

ಹಟ್ಟಿಕಾರ-ದನಗಾರರೂ ಹಟ್ಟಿಗಾರ-ಜಾಡರೂ ಪ್ರಾಚೀನ ಕಾಲದಲ್ಲಿ ಒಂದೇ ಬಗೆಗೆ ಸೇರಿದವರೆಂಬುದನ್ನು ಇನ್ನೂ ಒಂದು ರೀತಿಯಲ್ಲಿಯೂ ಕಂಡುಕೊಳ್ಳಬಹುದಾಗಿದೆ. ಹಟ್ಟಿಕಾರ ದನಗಾರರಲ್ಲಿ ಎಂದರೆ ಕುರು(ಂ)ಬರಲ್ಲಿ ಜಾಡಿಯವರುಂಟು; ಇವರು ನೇಯುವುದು ಕಂಬಳಿ. ಇವರು ಉಣ್ಣೆಕಂಕಣದವರು. 'ಜಾಡ'ರೆಂಬವರು ಈಗ ನೇಯುವುದು ನೂಲಿನ ಬಟ್ಟೆಗಳನ್ನು. ಉಣ್ಣೆಕಂಕಣದ ಜಾಡಿಗಳೇ ಹತ್ತಿಯು ಗೊತ್ತಾದ ಬಳಿಕ ಜಾಡರಾಗಿ-ದೇವಾಂಗರಾಗಿ ಮುಂದುವರಿದಿರಬೇಕೆಂದು ವ್ಯಕ್ತವಾಗುತ್ತಿದೆ. ಜಾಡಿಕೆಗೂ ಜಟಾ, ಜಡೆ (ಕೂದಲು) ಶಬ್ದಗಳಿಗೂ ಏನಾದರೂ ಹತ್ತರಿನ ಸಂಬಂಧವು ಇರಲಿಕ್ಕಿಲ್ಲವೆ? ಜಾವಳ, ಜಾವುಳವೆಂದು ಕೂದಲಿಗೆ ಹೆಸರು; 'ಜಾವಳಿ ಎಂಬುದು ಒಂದು ವಿಶಿಷ್ಟ ಜಾತಿಯ ಕುರಿ ಎಂಬುದಾಗಿ ಮಹಾರಾಷ್ಟ್ರ ಶಬ್ದಕೋಶವು ಹೇಳುತ್ತಿದೆ. ಇದರೊಡನೆ 'ಜವಳಿ' (ವಸ್ತ್ರ) ಎಂಬ ಶಬ್ದವನ್ನೂ ತೂಗಿ ನೋಡುವಂತಿದೆ. ಜಾಡರಲ್ಲಿ ಕರೆ ಜಾಡರು, ಬಿಳೆ ಜಾಡರೆಂದು ಅವರವರ ನೇಗಿಯ ಪ್ರಕಾರಗಳಿಂದ ಒಳ ಬಣಗಳಾದುದು ಕಂಡು ಬರುತ್ತಲಿದೆ. ಅದರಂತೆ, ಆರಂಭದ ಜಾಡಿಗಳೇ (ಕುರುಬ) ಮುಂದೆ ಜಾಡರಾಗಿರುವುದು ಅಸಂಭವವಲ್ಲ. ಈ ಜನಾಂಗಕ್ಕೆ ಜಾಡಿ-ಜಾಡರೆಂದು ಏಕೆ ಹೆಸರು ಬಂದಿರಬಹುದೆಂಬುದನ್ನೂ ಅರಿತುಕೊಳ್ಳುವುದು ಆವಶ್ಯಕ. ಜಾಡಿ (ಕುರುಬ) ಜನಾಂಗದಲ್ಲಿ ಮರಗಳ ಪೂಜೆಗೆ ತುಂಬ ಮಹತ್ವವಿದೆ. ಅತ್ತಿ, ಆಲ, ಅರಳೆ ಎಂಬಿವೇ ಮೊದಲಾದ ಮರಗಳು ಇವರ ದೈವತ. ಮಿ. ರಿಚರ್ಡ್ಸ್ ಇವರು ಬರೆಯುವುದೇನೆಂದರೆ;

> "A large portion of them are names of plants and the clan so named observe a quasi-totamistic reverence for the plants after which they are named."[೨೩]

"ಮರಗಳೆ ದೈವ" ಎಂದು ಶ್ರೀ ಬಸವಣ್ಣನ ವಚನದಲ್ಲಿರುವ ಮಾತು ಈ ಜಾಡರನ್ನು ಉದ್ದೇಶಿಸಿಯೇ ಇದೆ. ಪ್ರಾಚೀನ ತಮಿಳುಸಾಹಿತ್ಯದಲ್ಲಿ ಜಾಡರಿಗೆ 'ಮರವ'ರೆಂದು ಹೆಸರಿದೆ. ತಮಿಳಿನಲ್ಲಿ ಒಂದು ಗಾದೆಯುಂಟು. ಕಳವ (ಕುರುಬ)ರು ಸ್ವಲ್ಪ ಉಳ್ಳವರಾಗುತ್ತಲೆ ಮರವ (ಜಾಡ) ರಾಗುತ್ತಾರೆ.[೨೪] ಇಲ್ಲಿ ಮತ್ತೆ ಹಟ್ಟಿಕಾರರೂ ಹಟಗಾರರೂ ಒಂದೇ ಎಂಬುದಕ್ಕೆ ತಮಿಳರು ಸಾಕ್ಷಿ! ಇದು (ಮರಗಳ ಪೂಜೆಯು) ದಕ್ಷಿಣದಲ್ಲಿ ಅಷ್ಟೇ ಅಲ್ಲ; ಗಂಗಾ ತೀರದ ಕುರುಬರಲ್ಲಿಯೂ ಇದೆ; ಅವರಲ್ಲಿ ಮರದಮ್ಮನಿಗೆ ಭಯ-ಭಕ್ತಿಗಳಿಂದ ತಲೆವಾಗದವರೇ ಇಲ್ಲ. (Encyclopaedia of Religion and Ethics) ದಲ್ಲಿ "The Oraons concieve trees to be the abode of spirits." (ಓರಾಓನರು ಗಿಡಗಳಲ್ಲಿ ದೈವೀಶಕ್ತಿ ವಾಸವಾಗಿರುತ್ತದೆಂದು ನಂಬುತ್ತಾರೆ) ಎಂದು ಬರೆದಿದೆ. ಇಂತಹ ಗಿಡಗಳ ಹತ್ತಿರ ಹಾದುಹೋಗುವಾಗ ಗಂಡಸರು ಇವಕ್ಕೆ ಕೈಮುಗಿಯುವರು; ಹೆಂಗಸರು ಮುಸುಕು ಎಳೆದು ಮರ್ಯಾದೆ ಕೊಡುವರು! ವರ್ಹಾಟದಲ್ಲಿ ಸಹ ಇದೇ ಬಗೆಯ ಪದ್ಧತಿಯಿದೆ.

ಆದುದರಿಂದಲೆ, ಈ ಜನಾಂಗಕ್ಕೆ ಮರವರು ಇಲ್ಲವೆ ಜಾಡರು ಎಂದು ಹೆಸರು ಬಂದಿರುವುದು ಸಹಜವಿದೆ. 'ಮರವ' ಎಂಬ ಕನ್ನಡ ಶಬ್ದದ ಪ್ರಾಕೃತ ರೂಪವೇ ಜಾಡ-ಝಾಡೆ; ವರ್ಹಾಟದಲ್ಲಿ ಇವರಿಗೆ 'ಝಾಡೆ' ಎಂದು ಹೇಳುವರು. ಝಾಡೆ, ಜೇಧೆ ಇವು ಮಹಾರಾಷ್ಟ್ರದ 'ಹಟಗಾರ'ರೊಳಗಿನ ಹೆಸರುಗಳಂತೆ! ಜಾಡರ ಕುಲವರ್ಧಿನಿಯು ಶಾಕಂಭರಿ-ಶಾಕಾಂಬರಿ, ಬನಶಂಕರಿ; ಎಷ್ಟು ಔಚಿತ್ಯವಿದೆ ಈ ಹೆಸರಿನಲ್ಲಿ! ಮರದಮ್ಮನೆಂದು ಹೇಳಿದರೆ ಇದರ ಅರ್ಥವು ಇನ್ನಿಷ್ಟು ಸ್ಪಷ್ಟವಾಗುತ್ತದೆ. ಬನದಮ್ಮ, ಬನಶಂಕರಿ ಎಂದು ನಮ್ಮ ಈ ಜನಾಂಗವು ಆರಾಧಿಸುವವಳನ್ನೇ ಮರಾಠೀ ದೇಶದ ಹಟಗಾರ-ದನಗಾರ (ಧನಗರ)ರು ಬನಾಯಿ-ಬನದ ಆಯಿ-ಎಂಬ ಹೆಸರಿನಿಂದ ಪೂಜಿಸುವರು![೨೫] ಮೈಸೂರು ಸಾಲೆಂಗಳ ಕಡೆಗೆ ಅಲ್ಲಿಯ ದೇವಾಂಗರು ಚೌಡೇಶ್ವರಿ (ಚಾಮುಂಡಿ?) ಎಂಬ ಹೆಸರಿನಿಂದ ಭಜಿಸುವ ದೇವಿಯ ಮಹಾಪೂಜೆಯ ಕಾಲಕ್ಕೆ ಒಂದು ಬನವನ್ನು (Grove) ರಚಿಸಿ ಅದರಲ್ಲಿ ದೇವಿಯನ್ನು ಸ್ಥಾಪಿಸುವರು![೨೬] ಬನಶಂಕರಿಯೆಂಬುದು ಮೊದಲಿನ ಅವತಾರ, ಚೌಡೇಶ್ವರಿಯು ಅದರ ಮುಂದಿನದಾಗಿರಬೇಕು. ಚಾಮುಂಡಿಯೆಂಬುದು ಚೌಡೇಶ್ವರಿಯ ಸಂಸ್ಕೃತರೂಪ. 'ಚಾಮುಂಡಿ' ಎಂಬುದಕ್ಕೆ ಹೇಳುವ ಅರ್ಥಕ್ಕಿಂತಲೂ ಚೌಡೇಶ್ವರಿ ಎಂಬ ಶಬ್ದಕ್ಕೆ ಆಗುವ ಅರ್ಥವು ಬಹಳ ಮಹತ್ವದ ಐತಿಹ್ಯವನ್ನು ಬೆಳಕಿಗೆ ತರುತ್ತದೆ. ಚೂಡಾ=ಕೂದಲು; (ಇದರೊಡನೆ ಕನ್ನಡದ ಸೂಡು, ತಮಿಳಿನ ಚೂಟ್ಟು, ಮತ್ತು ಕನ್ನಡದ ಜುಟ್ಟುಗಳನ್ನು ತೂಗಿ ನೋಡಿ). ಬನದ ಶಂಕರಿ ಅವಳು; ಚೂಡದ ಈಶ್ವರಿ ಇವಳು. ಇಬ್ಬರೂ ನೇಯ್ಕಾರರಿಗೆ ಜೀವನಾಧಾರವನ್ನೀವ ಮಹಾದೇವಿಯರೇ. ಚೂಡಾ ಎಂದರೆ ಕಂಕಣ (ಬಳಿ); ಕಾಜಿನ ಕಂಕಣಗಳು ಗೊತ್ತಾಗುವ ಮೊದಲು ಕೂದಲಿನ (ಚೂಡಾ). ಕಂಕಣವಿರಬೇಕೆಂದು ಊಹಿಸಬಹುದಾಗಿದೆ. ಮೊಟ್ಟಮೊದಲಿಗೆ ಉಣ್ಣೆ ಕಂಕಣವೇ ಎಲ್ಲರಲ್ಲಿ ಇದ್ದಿತೆಂದು ವ್ಯಕ್ತವಾಗುತ್ತಿದೆ. ಚೌಡೇಶ್ವರಿಯು ಕೂದಲು, ಕಂಕಣಗಳ ಅಧಿದೇವತೆ; ಆದುದರಿಂದಲೆ, ಭಾಗ್ಯದೇವತೆ; ಸೌಭಾಗ್ಯದಾಯಕ ಪರಮೇಶ್ವರಿ.

ಮರದಮ್ಮನ ಪೂಜೆಯಲ್ಲಿ ಭಯಕ್ಕಿಂತಲೂ ಉಪಯುಕ್ತತಾವಾದ (Utilitarianism) ವೇ ಮುಖ್ಯವಾಗಿರಬೇಕು. ಉಪಜೀವನಕ್ಕೆ ಸಹಾಯಕವಾದುದನ್ನೆಲ್ಲ ದೈವೀಭಾವದಿಂದ ಪೂಜಿಸುವ ರೂಢಿಯು ನಮ್ಮ ಜನಾಂಗದ ಒಂದು ವೈಶಿಷ್ಟ್ಯ. ಆ ಕಾಲದಲ್ಲಿ ಮರಗಳು ಈ ಜನಾಂಗದ ಉಪಜೀವಿಕೆಯ ಮುಖ್ಯ ಸಾಧನವಾಗಿರಬೇಕು. ಉಣ್ಣೆಗಿಂತಲೂ ಮೊದಲಿಗೆ ಎಷ್ಟೋ ಕಾಲದವರೆಗೆ, ಉಣ್ಣೆ ಬಂದ ಬಳಿಕ ಎಷ್ಟೋ ದಿನಗಳವರೆಗೆ ಗಿಡಗಳಿಂದಲೆ ಬಟ್ಟೆಗಳನ್ನು ಮಾಡಿಕೊಳ್ಳುವ ಪದ್ಧತಿಯಿತ್ತು. ನೇಗೆಯು ಗೊತ್ತಾಗುವ ಮೊದಲು ಕಾಡುಸ್ಥಿತಿಯ ಮಾತು ಹಾಗಿರಲಿ, ಹೆಣೆಯುವುದು-ನೇಯುವುದು ತಿಳಿದ ಬಳಿಕ, ಹತ್ತಿಗಿಂತ ಮೊದಲು, ಗಿಡಗಳೇ ನೇಯ್ಕಾರರಿಗೆ ಜೀವನಾಧಾರವಾಗಿದ್ದುವು. "ತ್ವಕ್, ಫಲ, ಕ್ರಿಮಿ-ರೋಮಾಣಿ ವಸ್ತ್ರಯೋನಿಃ" (ನಾರು, ನೂಲು, ಕ್ರಿಮಿಜ ರೋಮಂಗಳು) ಎಂದು ಅಮರಕೋಶವು ಹೇಳುತ್ತದೆ. ತ್ವಕ್ ಎಂದರಿಲ್ಲಿ ವಲ್ಕಲ. ವಲ್ಕಲ ವಸ್ತ್ರಗಳಿಗೆ ಪ್ರಾಚೀನ ಕಾಲದಲ್ಲಿ ನಮ್ಮ ದೇಶದೊಳಗೆ ಎಷ್ಟೊಂದು ಪ್ರಾಶಸ್ತ್ಯವಿದ್ದಿತೆಂಬುದು ಸುಪ್ರಸಿದ್ಧವೇ ಇದೆ. ಕಣ್ವನ ಆಶ್ರಮದ ಒಂದು ಗಿಡವು-ಶಕುಂತಲೆಗೆ ಅತ್ತೆಯ ಮನೆಗೆ ಹೋಗುವಾಗ-ವಸ್ತ್ರ (ಕ್ಷೌಮ)ವನ್ನು ಕೊಟ್ಟ ಹಾಗೆ ಕಾಲಿದಾಸನು ವರ್ಣಿಸಿದ್ದಾನೆ. ಇದರಲ್ಲಿ ದೈವೀ ಚಮತ್ಕಾರಕ್ಕಿಂತಲೂ ನಿಜಸ್ಥಿತಿಯ ವರ್ಣನೆಯೇ ಇದೆ. ಸ್ತ್ರೀಯರು ಕಾಲಿಗೆ ಹಚ್ಚಿಕೊಳ್ಳುತ್ತಿದ್ದ ಅಲತಿಗೆಯ ರಸಕ್ಕೆ ಮರಾಠಿಯಲ್ಲಿ 'ಜಾವಡೀ' ಎಂದೂ ಹೆಸರು. ಇನ್ನು 'ಸೀರೆ'ಯೂ ಒಂದು ಕಾಲಕ್ಕೆ 'ನಾರುಬಟ್ಟೆ'ಯೇ ಆಗಿದ್ದಿತೆಂದು ಗೋಚರವಾಗುತ್ತದೆ. ಚೀರದ ತದ್ಭವ ಸೀರೆ (ಶ. ಮ. ದಪು. ೨೬.) ಚೀರಕ್ಕೆ ವಸ್ತ್ರವೆಂದೂ ಗಿಡದ ತೊಗಟೆಯೆಂದೂ ಅರ್ಥವಿದೆ. ಆದುದರಿಂದ, ಶಕುಂತಲೆಗಾಗಿ ಕಣ್ವನ ಆಶ್ರಮದೊಳಗಿನ ಒಂದು ಗಿಡದಿಂದ 'ಚೀರ'ವೂ (ಸೀರೆ) ಮತ್ತೊಂದು ಗಿಡದಿಂದ ಜಾಡವೀ (ಜಾವಡಿ) ರಸವೂ ತರಲ್ಪಟ್ಟಿತೆಂದೇ ಅರ್ಥವಾಗುತ್ತದೆ.

ಉಣ್ಣೆಯಿಂದ ಬಟ್ಟೆಗಳನ್ನು ಮಾಡಿಕೊಳ್ಳುವುದು ತಿಳಿದ ಮೇಲೆ ಸಹ ಈ ಜನಗಳಿಗೆ ಜಾಡಿಗಳು-ಜಾಡರು ಎಂಬ ಹೆಸರು ಮಾತ್ರ ತಪ್ಪಲಿಲ್ಲ. ಎಳ್ಳಿನಿಂದ ಹೊರಟುದು ಎಳ್+ನೆಯ್-ಎಣ್ಣೆ. ಆದರೆ, ಮುಂದೆ ಕೊಬ್ಬರಿ,

[illegible]

> [illegible]

[illegible]

[illegible]

"Krurbas will not ride horse or ponies as they are the vehicle of the God Beerappa, who seems to be a form of Veerabhadra"[೨೭]

ಆದುದರಿಂದ ಪ್ರಾಚೀನ ಕಾಲದಲ್ಲಿ ಹಟ್ಟಿಕಾರರ ಈ ಒಳಪಂಗಡಕ್ಕೆ ಪತ್ತಿಗಳು, ಪದಾತಿಗಳು ಎಂದು ಹೆಸರಿತ್ತು. ಇವರೆ ಮುಂದೆ ಪಾಯಿಕರು-ಪೈಕರು, ಹಳಬರು, ಹಳ-ಪೈಕರು ಎಂದು ಮುಂತಾಗಿ ಕರೆಯಲ್ಪಟ್ಟಿದ್ದಾರೆ. (ಹಳಪೈಕರು, ಹಳಬರನ್ನು ಕುರಿತು ಕಾರವಾರ, ಬೆಳಗಾಂವಿ, ವರ್ಹಾಟ ಗ್ಯಾಝಿಟಿಯರು ನೋಡಿ) 'ಪತ್ತಿ' ಮತ್ತು ಪಟ್ಟಿ (ಹಟ್ಟಿ) ಕಾರರು ಒಂದೇ ಎಂದು ಮೋನಿಯರ್ ವಿಲಿಯಂಸ್ ಇವರ ಕೋಶದಿಂದ ಗೊತ್ತಾಗುತ್ತದೆ. "ಪಟ್ಟಿ (ಪತ್ತಿಃ) name of a people" ಎಂದು ಅರ್ಥ ಕೊಟ್ಟಿದ್ದಾರ. ಇವೆಲ್ಲ ವರ್ಣನೆಯನ್ನು ನೋಡಿದರೆ "ರುದ್ರಧ್ಯಾಯ"ದೊಳಗಿನ ಕೆಲವೊಂದು ಮಂತ್ರಗಳ ನೆನಪಾಗುತ್ತವೆ. 'ಪತ್ತೀನಾಂ ಪತಯೇನಮಃ' ಎಂದು ನಮಸ್ಕರಿಸುವಲ್ಲಿ ಈ ರುದ್ರನೇ ಮಲ್ಲಯ್ಯನಾಗಿರಲಿಕ್ಕಿಲ್ಲವೇ ಎಂಬ ವಿಚಾರವು ತಲೆದೋರುವುದು.

"ನಮೋ ವೃಕ್ಷೇಭ್ಯೋ ಹರಿಕೇಶೇಭ್ಯಃ ಪಶೂನಾಂ ಪತಯೇ ನಮಃ।"

"ವನಾನಾಂ ಪತಯೇ ನಮಃ"। "ವೃಕ್ಷಾಣಾಂ ಪತಯೇನಮಃ।"

"ವಾಣಿಜಾಯ ಕಕ್ಷಾಣಾಂ ಪತಯೇ. ನಮಃ।"

ಎಂಬಲ್ಲಿ ಮರವ (ಜಾಡ)ರ ದೇವರು ಇವನು, ಎಂಬ ವಿಚಾರವು ದೃಢವಾಗಲಾರಂಭಿಸುವುದು. "ನಮಉಚ್ಚೈರ್ಘೋಷಾಯಾಕ್ರಂದಯತೇ ಪತ್ತೀನಾಂ ಪತಯೇ ನಮಃ।" ಎಂಬ ಮಂತ್ರದೊಡನೆ 'ವ್ರಾತೇಭ್ಯೋ ವ್ರಾತಪತಿಭ್ಯಃ' 'ಗಣೇಭ್ಯೋ ಗಣಪತಿಭ್ಯಃ' ಶ್ವಭ್ಯಃ ಶ್ವಪತಿಭ್ಯಃ" ಇತ್ಯಾದಿ ವಾಕ್ಯಗಳನ್ನೂ ಗಮನಿಸಿದರೆ ಇದರ ಬಗ್ಗೆ ಸಂದೇಹಕ್ಕೆ ಅಷ್ಟು ಅವಕಾಶವೆ ಉಳಿಯುವುದಿಲ್ಲ.

ಹಟ್ಟಿಕಾರ-ದನಗಾರರ ನಾಯಿಗಳು ಬಹಳ ಪ್ರಾಚೀನ ಕಾಲದಿಂದಲೂ ಹೆಸರಾಗಿವೆ. ಮಾಮೂಲನಾರ್ ಕವಿಯು (ಕ್ರಿ. ಶ. ೨ನೆಯ ಶತಮಾನ) 'ವಡಕರು (ಹಟ್ಟಿಕಾರರು) ಕ್ರೂರವಾದ ನಾಯಿಗಳನ್ನು ಸಾಕಿಕೊಂಡಿರುತ್ತಾರೆಂದು ವರ್ಣಿಸಿದ್ದಾನೆ.[೨೮] ವಿದರ್ಭದ ನಾಯಿಗಳ ಗರ್ಜನೆಯ ಪ್ರತಿಧ್ವನಿಯು ವೈದಿಕ ಸಾಹಿತ್ಯದಲ್ಲಿಯೂ ಕೇಳಬರುತ್ತಿದೆ. ವಿದರ್ಭದಲ್ಲಿ ಹುಲಿಯನ್ನು ಕೊಲ್ಲುವ ನಾಯಿಗಳಿದ್ದುವೆಂದು ಜೈಮಿನೀಯ ಉಪನಿಷತ್ ಬ್ರಾಹ್ಮಣದಲ್ಲಿ ಹೇಳಿದೆ.[೨೯] 'ಕುರೆ,' 'ಕುರೆ' ಎಂದು (ಕನ್ನಡಿಗರಲ್ಲಿ) ನಾಯಿಗೆ ಕರೆವ ರೂಢಿಯಿದೆ. ಇದರಿಂದಲೆ ಸಂಸ್ಕೃತದಲ್ಲಿ ಕುರ್ಕುರ ಕುಕ್ಕುರ, ಕುಕುರ ಎಂಬ ಶಬ್ದಗಳು ಬಳಕೆಯಲ್ಲಿ ಬಂದಿರಬೇಕೆಂದು ಕಿಟೆಲ್‌ರ ಅಭಿಪ್ರಾಯ. ಅಥರ್ವವೇದದಲ್ಲಿ 'ಕುರ್ಕುರ'ವೆಂದು ನಾಯಿಗೆ ಹೆಸರಿದೆ.[೩೦] 'ಕುಕುರ' (ನಾಯಿಗಳ ನಾಡು ಎಂಬ ದೇಶವಿದ್ದುದು ಕ್ರಿ.ಶ. ೨ನೆಯ ಶತಮಾನದ ಶಾಸನಗಳಿಂದಲೂ ವರಾಹಮಿಹಿರನ (೬ನೆಯ ಶತಮಾನ) ಬೃಹತ್‌ಸಂಹಿತೆಯಿಂದಲೂ ಕಂಡು ಬರುತ್ತದೆ.[೩೧] ಬಸವಪುರಾಣ (೬-೧೮) ದಲ್ಲಿಯೂ ಇದರ ಉಲ್ಲೇಖವಿದೆ. ಆಜನ್ಮ ನಾಯಿಗಳಂತೆ ನಡೆದುಕೊಳ್ಳುವ ವ್ರತಿಗಳಾದ 'ವಗ್ಗಯ್ಯ' ರನ್ನೂ ಈ ಜನಾಂಗದ (ಹಟ್ಟಿಕಾರರ) ನಾಯಿಗಳ ಖ್ಯಾತಿಯನ್ನೂ ವಿಚಾರಿಸಿದರೆ, ಈ ಕುಕುರರು ಹಟ್ಟಿಕಾರ ದನಗಾರರ ಒಂದು ಭಾಗವಾಗಿರಬೇಕೆಂದು ತೋರುತ್ತದೆ. ಏಕೆಂದರೆ 'ಶ್ವ-ಪತಿ' ರುದ್ರನು-ಮಲ್ಲಯ್ಯನು ಇವರ ದೇವರು.

ಮರವರು-ಜಾಡರು ಎಂದು ಹೆಸರಿರುವಂತೆ ಈ ಜನಾಂಗದ ಕೆಲವೊಂದು ಭಾಗಕ್ಕೆ ಕುಂತಲರು ಎಂಬ ಇನ್ನೊಂದು ಹೆಸರೂ ಇದೆ. 'ಕುಂತಲ' ಎಂದರೆ ಕೂಂದಲ-ಕೂದಲ, ಜಡೆ ಹಟ್ಟಿಕಾರರಿಗೆ ಕೂಂದಲರು-ಜಡೆಯವರು ಎಂದು ಹೆಸರು ಬರುವುದಕ್ಕೆ ಕಾರಣವೇನಿರಬಹುದು? ಪಿ. ಟಿ. ಶ್ರೀನಿವಾಸ ಅಯ್ಯಂಗಾರರು ಹೇಳುವಂತೆ ಈ ಜನಾಂಗಕ್ಕೆ ಕ್ಷೌರವಿದ್ಯೆ ಗೊತ್ತಿದ್ದಿಲ್ಲವೆಂದೂ ಅಥವಾ ಕೂದಲಿನ ಮೇಲಿನ ಪ್ರೀತಿಯಿಂದೂ ಇವರಲ್ಲಿ ಕೂದಲಕ್ಕೆ ಸ್ವಲ್ಪ ವಿಶೇಷ ಮಹತ್ವವಿರಬೇಕೆಂದು ತೋರುತ್ತದೆ. ಅದರಲ್ಲಿಯೂ ಮೀಸೆಯ ವಿಷಯಕ್ಕೆ ಇವರಿಗೆ ಮಿತಿಮೀರಿದ ಅಭಿಮಾನ. ಆರ್ಯರು ಯಾವಾಗಲೂ ಮೀಸೆಯ ಮೇಲೆ ಕತ್ತಿಯನ್ನೆತ್ತಿದವರು; ಹಟ್ಟಿಕಾರರಿಗೆ ಮೀಸೆಯೆಂದರೆ ಪಂಚಪ್ರಾಣ. ಇವರ ಅಪಮಾನಮಾಡುವುದೆಂದರೆ ಮೀಸೆ ಬೋಳಿಸುವುದು. 'ಕುಡಿಮೀಸೆ,

ಗಲ್ಲಮೀಸೆ (ಕಲ್ಲೀ ಮೀಸೆ)'ಗಳು ಇವರ ಅಭಿಮಾನದ ವಿಷಯ; ಪೌರುಷದ ಲಕ್ಷಣ. ಗಂಡುಗಾಡಿಯ ಕುರುಹು. ಪಂಪನ ದ್ರೋಣನು ದ್ರುಪದನ ಮೇಲೆ ಹಗೆ ತೀರಿಸಿಕೊಳ್ಳುವುದಕ್ಕಾಗಿ ಪ್ರತಿಜ್ಞೆಯನ್ನು ಮಾಡುವಾಗ "ನಿನ್ನನ್ ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಮೀಸೆಪೊತ್ತೆನೆ?" (೨-೫೦) ಎಂದು ಆರ್ಭಟಿಸುತ್ತಾನೆ. "most of the Hatkars do not permit the removal of the hair on the face" ಎಂದು ವರ್ಹಾಟ ಮತ್ತು ನಿಜಾಮ ಇಲಾಖೆಯ ಭಾಗದ ಹಟ್ಟಿಕಾರರ ಬಗ್ಗೆ ಆಧುನಿಕ ಲೇಖಕರು ಬರೆಯುತ್ತಾರೆ.[೩೨] ಕೊಡವರಲ್ಲಿಯೂ ಮೀಸೆಗಳ ಬಗ್ಗೆ ಇದೇ ಬಗೆಯ ಪಕ್ಷಪಾತವಿದೆ. ಗಲ್ಲಮೀಸೆಗಳನ್ನು ಸಮರ್ಥರಾದವರೇ ಬಿಡಿಸತಕ್ಕದ್ದು. ಹುಲಿಯನ್ನು ಕೊಂದು ಅದರೊಡನೆ ಮದುವೆಯಾದವರೇ ಗಲ್ಲಮೀಸೆಗಳನ್ನು ಇಡಬೇಕೆಂದು ಕೊಡವರಲ್ಲಿ ವಾಡಿಕೆ.[೩೩] ನಮ್ಮಲ್ಲಿ ವೀರನ ವರ್ಣನೆಯ ಕಾಲಕ್ಕೆ ಆತನ ಮೀಸೆಗಳನ್ನು ಬಣ್ಣಿಸದೆ ಆ ಹೊಗಳಿಕೆಯೆ ಪೂರ್ಣವಾಗುವುದಿಲ್ಲ. ಆದರೆ, ಸಂಸ್ಕೃತ ಸಾಹಿತ್ಯದಲ್ಲಿ ಮೀಸೆಯ ವರ್ಣನೆಗಳು ಸಿಕ್ಕುವುದೇ ದುರ್ಲಭ! ಕಿಟ್ಟೆಲ್ಲರ ಅಭಿಪ್ರಾಯದಂತೆ 'ಕುಜುರ,' 'ಕುಂತಲ', 'ಕುರಲ' ('ಆಲಕ') ಶಬ್ದಗಳು ಸಂಸ್ಕೃತವಲ್ಲ; 'ದ್ರಾವಿಡ'ರಿಂದ ಸಂಸ್ಕೃತದವರು ಕೈಗಡ ತಕ್ಕೊಂಡ ಮಾತುಗಳು 'ಕ್ರಾಪ್,' 'ಫ್ರೆಂಚಕಟ್' ಈಗ ನಮಗೆ ಪರಕೀಯರಿಂದ ಬಂದುವುಗಳೆಂದು ಆ ಹೆಸರುಗಳಿಂದಲೇ ಗೊತ್ತಾಗುತ್ತದೆ. ತಮ್ಮಲ್ಲಿ ಇಲ್ಲದ ಹೊಸ ಪ್ರಕಾರವನ್ನು ರೂಢಿಸುವಾಗ ಆ ಅರ್ಥದ ಪರಕೀಯ ಶಬ್ದಗಳನ್ನು ಸ್ವೀಕರಿಸಲೇ ಬೇಕಾಗುತ್ತದೆ. ಅದರಂತೆ ಸಂಸ್ಕೃತದಲ್ಲಿ ಹಟ್ಟಿಕಾರರಿಂದ 'ಕೂಂದಲ' (ಮೀಸೆಯನ್ನಿಡುವುದೇ ಮೊದಲಾದ) ಸಂಸ್ಕೃತಿಯು ಸೇರಿರಬಹುದಲ್ಲವೆ?

ಸ್ಥೂಲವಾಗಿ ದಕ್ಷಿಣಾಪಥಕ್ಕೇ ಕುಂತಲದೇಶವೆಂದು ಹೇಳಿದ ಹಾಗೆ ಕೆಲವು ಉಲ್ಲೇಖಗಳಿಂದ ಕಂಡುಬರುತ್ತದೆ. ಕರ್ಪೂರಮಂಜರಿಯಲ್ಲಿ ವಿದರ್ಭಕ್ಕೆ ಕುಂತಲವೆಂದು ಹೇಳಿದೆ. ಸ್ಟೆನ್ ಕೊನೊ ಅವರು ನರ್ಮದೆಯಿಂದ ಕೃಷ್ಣಾ-ತುಂಗಭದ್ರೆಯ ವರೆಗೆ ಕುಂತಲವಿದ್ದಿತೆಂದು ಬರೆಯುತ್ತಾರೆ.[೩೪]

"ಕಾಮಗಿರಿಂ ಸಮಾರಭ್ಯ ದ್ವಾರಕಾಂತಂ ಮಹೇಶ್ವರೀ।
ಶ್ರೀ ಕುಂತಲಾಭಿದೋ ದೇಶಃ ಕಥಿತಂ ಪೂರ್ವ ಸೂರಿಭಿಃ॥

ಎಂದು ಶಕ್ತಿಸಂಗಮತಂತ್ರದಲ್ಲಿದೆ.[೩೫] ಪೂರ್ವಸೂರಿಗಳು ಕುಂತಲವು ದ್ವಾರಕೆಯ ವರೆಗೂ ಇದ್ದಿತೆಂದು ಹೇಳುವರು! ಇದು ಕೆಲರಿಗೆ ಅತಿಶಯೋಕ್ತಿ ಎನಿಸಬಹುದು. ಆದರೆ, ಪ್ರಾಚೀನ ಕಾಲದಲ್ಲಿ ಕುಂತಲ (ಕರ್ಣಾಟವು) ಅಲ್ಲಿಯವರೆಗೂ ಇದ್ದಿತೆಂದು ಅನೇಕಾನೇಕ ಪ್ರಮಾಣಗಳಿಂದ ನಿಶ್ಚಿತವಾಗಿ ಗೊತ್ತಾಗುತ್ತಿದೆ. ಹಟ್ಟಿಕಾರರ-ದನಗಾರರ-ಕುಂತಲರ ನಾಡೂ ಭಾರತಕಾಲದಲ್ಲಿ ವಿಖ್ಯಾತರಾದ ಗೋವಳಯಾದವರ ದೇಶವೂ ಒಂದೆಡೆಯಲ್ಲಿಯೇ ಬಂದುವು!

ಪಳ್ಳಿ-ಹಳ್ಳಿ ಇದು ಪಟ್ಟಿ-ಹಟ್ಟಿ ಶಬ್ದದಿಂದಲೆ ಆಗಿರಬೇಕು. ಪಳ್ಳಿ 'ಪಾಳ್ಯ-ಪಟ್ಟು' ಈ ನುಡಿಗಳಲ್ಲಿರುವ ಹತ್ತುಗೆಯು ವಿಮರ್ಶಾರ್ಹವಾಗಿದೆ. 'ಪಲ್ಲಿ'ಯನ್ನು ಕುರಿತು ಮೋಲಿಯರ್ ವಿಲಿಯಂಸ್‌ನು ಹೀಗೆ ಬರೆಯುತ್ತಾನೆಃ "a small village, especially a settlement of wild tribes" ಮತ್ತು ಇವು ದಕ್ಷಿಣಭಾರತದಲ್ಲಿಯೇ ವಿಶೇಷವೆಂದೂ ಹೇಳುತ್ತಾನೆ. ಪಲ್ಲಿಗಳು ದಕ್ಷಿಣದಲ್ಲಿಯೇ ಏಕೆ ಉತ್ತರದೇಶದಲ್ಲಿಯೂ ಪ್ರಾಚೀನಕಾಲಕ್ಕೆ ಇದ್ದುವು. ಆದರೆ, ಮುಂದೆ ಆರ್ಯೀಕರಣದಲ್ಲಿ 'ಪಲ್ಲಿ'ಗಳು ಬೇರೆ ಹೆಸರುಗಳನ್ನು ತಾಳಿದುವು. ಸುಮಾರು ೮ನೆಯ ಶತಮಾನದ ರಾಷ್ಟ್ರಕೂಟರ ಕಕ್ಕರಾಜನ ಒಂದು ಶಾಸನವು ದೊರೆತಿದೆ.[೩೬] ಅದರಲ್ಲಿ ಈಗಿನ ಬಡೋದೆಯ ಸಮೀಪದ ನಾಡಿನ ಉಲ್ಲೇಖವಿದೆ. ಮಹಿಷಕ ವಿಷಯದೊಳಗಿನ ಬ್ರಾಹ್ಮಣಪಳ್ಳಿ, ಲಿಕ್ಕಿವಳ್ಳಿಗಳೆಂಬ ಊರುಗಳ ವರ್ಣನೆಯಿದೆ. ಇವುಗಳ ನೆರೆಯಲ್ಲಿಯೇ 'ಧಾಡಿಯಪ್ಪಾ' ಎಂಬುದೂ ಇನ್ನೊಂದು ಊರು! ಬ್ರಾಹ್ಮಣಪಲ್ಲಿಯ ಈಗಿನ ಹೆಸರು ಬಾಮಣಗಾಂವ! ಪಳ್ಳಿಯು ಗಾಂವ ಆಯಿತು! ಇಂತಹ ಉದಾಹರಣೆಗಳು ಇನ್ನೂ ಎಷ್ಟೊ!! ೮-೯ನೆಯ ಶತಮಾನದ ವರೆಗೂ ದ್ವಾರಕೆಯ ವರೆಗೆ ಕುಂತಲ (ಕರ್ಣಾಟ)ರ ಅವಶೇಷಗಳು ಕಾಣಬರುತ್ತಿದ್ದುದು

ಈ ಶಾಸನದಿಂದ ಸಿದ್ಧವಾಗುತ್ತಿದೆ. ಆದುದರಿಂದ, ಶಕ್ತಿಸಂಗಮತಂತ್ರದ ಪ್ರಕಾರ ದ್ವಾರಕೆಯ ವರೆಗೂ ಕುಂತಳ ವಿದ್ದಿತೆಂದು ಪ್ರಾಚೀನರು ಹೇಳುತ್ತಿದ್ದುದು ನಿಜವೆಂಬುದಕ್ಕೆ ಸಂದೇಹವೆ ಇಲ್ಲ. ಉತ್ತರದಲ್ಲಿ ದ್ವಾರಕೆ- ಭೋಟಾ ನಾಗಪೂರಗಳಿಂದ ದಕ್ಷಿಣಕ್ಕೆ ನೀಲಗಿರಿಯ ವರೆಗೆ, ಪೂರ್ವ-ಪಶ್ಚಿಮ ಸಮುದ್ರತೀರಗಳವರೆಗೂ[೩೭] ಹಟ್ಟಿಕಾರರು (ಕುಂತಲರು, ಅಂಡೆಯವರು, ಇಡ್ಡೆಯರು ಮೊದಲಾದ ಹಲವು ಹೆಸರುಗಳಿಂದ) ಹಬ್ಬಿಕೊಂಡು ಕ್ರಿಸ್ತಶಕದ ಆರಂಭಕಾಲದಲ್ಲಿ ತುಂಬ ಪ್ರಬಲವಾದ ಜನಾಂಗದವರಾಗಿದ್ದರೆಂದು ತಮಿಳು ಸಾಹಿತ್ಯ ಮತ್ತು ಹಲವು ಬೇರೆ ಪ್ರಮಾಣಗಳಿಂದ ಸಿದ್ಧವಾಗುತ್ತಿದೆ.

ಈ ಕಾಲದಲ್ಲಿ (ಕ್ರಿಸ್ತಶಕದ ಆರಂಭದಲ್ಲಿ) ಆಂಧ್ರ-ಕರ್ನಾಟವು ಒಂದೇ ದೇಶ. ಅನೇಕ ಸಂಶೋಧಕರು ಹೇಳುವಂತೆ ಈ ಕಾಲಕ್ಕೆ ಆಂಧ್ರವೆಂದರೆ ಕರ್ಣಾಟ; ಕರ್ಣಾಟವೆಂದರೆ ಆಂಧ್ರ. ಹಟ್ಟಿಕಾರ ವಡುಕರು ಪೂರ್ವ ಸಮುದ್ರದಿಂದ ಪಶ್ಚಿಮಸಮುದ್ರದ ವರೆಗೂ ಹಬ್ಬಿಕೊಂಡಿರುವರೆಂದು ಪ್ರಾಚೀನ ತಮಿಳುಕಾವ್ಯಗಳಲ್ಲಿ ಬಂದಿರುವ ವರ್ಣನೆಗಳಿಂದಲೂ ಈ ಮಾತು ಸಿದ್ಧವಾಗುತ್ತದೆ. ಕಲಿಂಗವು ತ್ರಿ(ಕ)ಲಿಂಗವಾದ ಬಳಿಕ ತೆಲುಗು ತಲೆಯೆತ್ತಿತು; ಆಂಧ್ರ-ಕರ್ಣಾಟಗಳು ಬೇರೆಬೇರೆಯಾದುವು. ಆದರೆ, ಮೊದಲು ಆಂಧ್ರ-ಕರ್ಣಾಟರು ಒಂದೇ ಜನಾಂಗ; ಎಂದರೆ ದ್ರಾವಿಡ ಶಾಖೆಯವರು.[೩೮] ತೆಲುಗರು ಎಂದರೆ ಕಲಿಂಗ-ತ್ರಿಲಿಂಗರು ದ್ರವಿಡ-ಪೂರ್ವ ಜನಾಂಗ; ಆಸ್ಟ್ರೋ-ಏಶಿಯಾಟಿಕ್ ವಂಶಕ್ಕೆ ಸೇರಿದವರು[೩೯] ಕಲಿಂಗ ತ್ರಿ (ಕ)ಲಿಂಗರ ಭಾಷೆಯಲ್ಲಿ ಬೆರೆತ ಆಂಧ್ರ-ಕಾರ್ಣಾಟಿಯಿಂದ ಮುಂದೆ ತೆಲುಗು ನಿರ್ಮಾಣವಾಯಿತು. ಈಕಾಲಕ್ಕೆ ಮಹಾರಾಷ್ಟ್ರದ ಕಾರಣ-ಶರೀರವನ್ನು ಕಾಣಬಹುದಲ್ಲದೆ ಸ್ಥೂಲಸೃಷ್ಟಿಗೆ ಅದು ಇನ್ನೂ ಬಂದು ನಿಲುಕಿದ್ದಿಲ್ಲ. ಆದುದರಿಂದಲೆ, ಲೋಕಮಾನ್ಯ ಬಾಳಗಂಗಾಧರ ತಿಲಕರು ಹೇಳುವಂತೆ[೪೦] 'ಪ್ರಾಚೀನಕಾಲದಲ್ಲಿ ಕರ್ಣಾಟ ಮತ್ತು ಮಹಾರಾಷ್ಟ್ರಗಳು ಬೇರೆ ಬೇರೆ ಇದ್ದಿಲ್ಲವೆಂಬುದೇ ನಿಜ, ಈ ಕಾಲದ ತಮಿಳು ಜನಗಳೇ 'ವಡುಕ (ಹಟ್ಟಿಕಾರ)ರ ಭಾಷೆಯು ತಮ್ಮಿಂದ ಸ್ವಲ್ಪ ಭಿನ್ನವಾದುದೆಂದು.[೪೧] ಅದೊಂದು ಬೇರೆ ಭಾಷೆಯೆಂದು ಆಡಿಕೊಂಡಿರುವುದರಿಂದ 'ಮೂಲದ್ರಾವಿಡ' ಭಾಷೆಯು ಈ ಮೊದಲೆ ಅಡಗಿ ಹೋಗಿದ್ದಿತೆಂದು ಬೇರೆ ಹೇಳಬೇಕಾಗಿಲ್ಲ. ಈ ಕಾಲದ ಹಟ್ಟಿಕಾರರ ಭಾಷೆಯು ನೃಪತುಂಗನ ಪೂರ್ವದ ಹಳಗನ್ನಡ ಇದೇ ಕನ್ನಡ "ಜರದ್ವಧೂ."

ಕ್ರಿಸ್ತಶಕದ ೨ನೆಯ ಶತಮಾನದ ಸುಮಾರಿನ ಕನ್ನಡ ಮಾತಿನ ಮಾದರಿಗಳನ್ನು ಇಜಿಪ್ತಿನಲ್ಲಿ ದೊರೆತ ಗ್ರೀಕನಾಟಕದೊಳಗಿನ ಒಂದು ಸಂಭಾಷಣೆಯಿಂದ ಕೆಲಮಟ್ಟಿಗೆ ಅರಿತುಕೊಳ್ಳಬಹುದಾಗಿದೆ.

"ಬೇರೆ ಕೊಂಚ ಮಧುಪಾತ್ರಕ್ಕೆ ಹಾಕಿ;
ಪಾನಂ ಬೇರೆತ್ತಿ ಕಟ್ಟಿ ಮಧುವಂ ಬೆರೆತ್ತುವೆನ್"

ಈ ಒಂದೇ ವಾಕ್ಯದಲ್ಲಿ ಎಷ್ಟು ಸಂಸ್ಕೃತ ಶಬ್ದಗಳು ಸೇರಿಕೊಂಡಿವೆ![೪೨] ತಮಿಳು ಭಾಷೆಯಲ್ಲಿ ಕ್ರಿಸ್ತಶಕ ೫ನೆಯ ಶತಮಾನದಿಂದ ಮುಂದೆ ಸಂಸ್ಕೃತ ಶಬ್ದಗಳಿಗೆ ಇಂಬು ದೊರೆತಿತೆಂದು ಪಿ. ಟಿ. ಶ್ರೀನಿವಾಸ ಅಯ್ಯಂಗಾರ್ಯರು ಹೇಳುತ್ತಾರೆ. ಭೌಗೋಲಿಕ ಪರಿಸ್ಥಿತಿಯನ್ನು ನೋಡಿದರೂ ದ್ರಾವಿಡರಲ್ಲಿ ತಮಿಳರಿಗಿಂತ ಹಟ್ಟಿಕಾರರಿಗೇ ಮೊಟ್ಟಮೊದಲು ಆರ್ಯರ ಸಂಪರ್ಕವುಂಟಾಯಿತೆಂಬುದು ತಾನೆ ಗೊತ್ತಾಗುವಂತಿದೆ. ಕ್ರಿಸ್ತಶಕ ಎರಡನೆಯ ಶತಮಾನದ ಸುಮಾರಿನ-ಮೇಲಣ ಕನ್ನಡ ವಾಕ್ಯದೊಳಗಿನ ಸಂಸ್ಕೃತ ಪ್ರಚುರಭಾಷೆಯನ್ನು ನೋಡಿದರೆ, ಆರ್ಯರೊಡನೆ ಈ ಜನಾಂಗದ ಬಳಕೆಗೆ ಆರಂಭವಾಗಿ ಎಷ್ಟೋ ಕಾಲವು ಸಂದು ಹೋಗಿರಬೇಕೆಂದು ಗೊತ್ತಾಗುತ್ತದೆ.

ಇನ್ನು ಹಟ್ಟಿಕಾರರಿಗೂ ಆರ್ಯರಿಗೂ ಮೊದಲು ಭೆಟ್ಟಿಯಾದುದೆಲ್ಲಿ ಮತ್ತು ಎಂದು ಎಂಬ ವಿಮರ್ಶೆಯೂ ಬಹಳ ಮನೋರಂಜಕವಾಗಿದೆ.

ಟಿಪ್ಪಣಿಗಳು

೧. ಸಂಸ್ಕೃತದಲ್ಲಿ ಪಟ್ಟ (ಹಟ್ಟಿ)ಗೆ ವಾಟೀ ವಾಟ ಎಂದು ಶಬ್ದಗಳಿವೆ! ಅಲ್ಲದೆ ಘೋಷ ಮತ್ತು ವ್ರಜ ಎಂದೂ ಹೆಸರುಗಳಿವೆ. ಈ ಶಬ್ದಗಳಿಂದ ಕೆಲವು ಮಹತ್ವದ ಸಂಗತಿಗಳು ತಿಳಿಯುವಂತಿವೆ. ಹಟ್ಟಿಯಲ್ಲಿ ದನಕರುಗಳ ಘೋಷಣೆಯು ಯಾವಾಗಲೂ ಕೇಳ ಬರುವುದೆಂದು 'ಘೋಷ' ಎಂಬ ಹೆಸರು ಬಂದಿರಬಹುದಲ್ಲವೆ? 'ವ್ರಜ' ಎಂದರೆ ಹಿಂಡು; ಸಮೂಹ. ದನಕರುಗಳ ಹಿಂಡು ಇವರಲ್ಲಿರುವುದೆಂದು ಅಥವಾ ಈ ಜನಾಂಗವು ಗುಂಪುಗೂಡಿಯೆ ಇರುತ್ತಿದ್ದಿತೆಂದು ಇವರಿಗೆ ವ್ರಜ-ವ್ರಾತರೆಂದು ಹೆಸರಿರಬಹುದಲ್ಲವೆ? 'ಮಂದೆ' 'ದೊಡ್ಡಿ' (ದಡ್ಡಿ) ಶಬ್ದಗಳನ್ನು 'ವ್ರಜ' ವ್ರಾತಗಳೊಡನೆ ಹೋಲಿಸಬಹುದು.

೨. 'ಪಶು-ಪತಿ' ಶಿವನು ಇವರೆಲ್ಲರ ಕುಲದೈವತ!

೩. i Enthoven R. E., ***The Tribes and Castes of Bombay,*** Vol. I. P. 311

ii. ***Tribes and castes of the Nizam's Dominion***, Vol. I p. 166

೪. ***ಶಬ್ದಮಣಿದರ್ಪಣಂ,*** ಸಾಹಿತ್ಯ ಪರಿಷತ್ತಿನ ಮುದ್ರಣ, ಪು. ೨೫೪

೫. ಕನ್ನಡದ ಆರಂಭದ ಅಲ್ಪಪ್ರಾಣಾಕ್ಷರವನ್ನು ಮಹಾಪ್ರಾಣವಾಗಿ ಉಚ್ಚರಿಸುವುದು ಮರಾಠಿಯ ರೀತಿಯಾಗಿದೆ. ಕೊಬ್ಬರಿ ಖೊಬರೇ; ಕಟುಕ-ಖಾಟೀಕ; ದಾಳಿ-ಧಾಳಿ-ಧಾಡ ಇತ್ಯಾದಿ. ಹಾಗೆ ದನಗಾರ-ಧನಗರ.

೬. ***Khandesh Gazetteer,*** P. 106; ***Nasik Gazetteer***, P. 231 ಮತ್ತು ಕರ್ಣ್ಮರೆಯಾದ ಕನ್ನಡ, ಪು. ೪೧-೪೮

೭. ***Berar Gazetteer,*** P. 200 - 222; ***The Cast and Tribes of Nizam's Dominions,*** I. P. 166; 248

೮. Enthoven R. E., ***Castes and Tribes of Bam,*** Vol. I. P. 311

೯. Grierson, Lingustic Survey of India, Vol. IV p. 446

೧೦. Russell, R. V. , ***Castes and Tribes,*** of C.P. Vol I. 69; P ; 359

೧೧. Sarat Chandra Roy, ***Oranos of chota-nagpur***, Ranchi; ಮುನ್ನುಡಿ

೧೨. ಅದೇ ಗ್ರಂಥದ ಮುನ್ನುಡಿಯಲ್ಲಿ ಹ್ಯಾಡೊನರು ಕೊಟ್ಟ ಅವತರಣಿಕೆ "ಯೂರೋಪೀಯ ಲೇಖಕರು 'ಕುರುಕ' ಒರಾಓನರಿಗೆ 'ಸಂಪೂರ್ಣದ್ರಾವಿಡರೆಂದು' ಹೇಳಿದರೂ ಇಂದು ಅವರು ಶುದ್ಧ 'ದ್ರಾವಿಡ'ರಲ್ಲ; ಈ ಜನಾಂಗವು ಅಲ್ಲಿ ಕೋಲ-ಮುಂಡಾ ಜನಾಂಗದೊಡನೆ ಬಹಳ ಮಟ್ಟಿಗೆ ಮಿಶ್ರವಾಗಿದೆ".

೧೩. Grierson : ***Ingristic Survey of India,*** Vol. IV. P. 446

ಆದರೆ, ಕುರುಂಬರು ದ್ರಾವಿಡ-ಪೂರ್ವ ಜನಾಂಗ; 'ಆಸ್ಟ್ರೋ ಏಶಿಯಾಟಿಕ್' ಶಾಖೆಗೆ ಸೇರಿದವರು; ಎಂದು ಕೆಲವರ ಅಭಿಪ್ರಾಯವಿದೆ. ಕೆಲರ ಮುಖಲಕ್ಷಣಾದಿಗಳಿಂದ ಎಲ್ಲ ಜನಾಂಗದ ಬಗ್ಗೆ ಸಾಮಾನ್ಯ ನಿಯಮವನ್ನು ಕಟ್ಟುವುದು ಸರಿಯಾಗದು. ಈ ಜನಾಂಗದ ಭಾಷೆ, ಪ್ರಾಚೀನ ಐತಿಹ್ಯಗಳನ್ನು ನೋಡಿದರೆ ಇವರು ಮುಖ್ಯವಾಗಿ 'ದ್ರಾವಿಡ' ವರ್ಗದವರೆಂದು ಹೇಳಬೇಕಾಗುತ್ತದೆ. ಆದುದರಿಂದ ಡಾ. ಹ್ಯಾಡೊನ್‌ರು ಕುರ್ಬ (ಕುರುಬ)ರ ಬಗ್ಗೆ ಕೊಟ್ಟ ಅಭಿಪ್ರಾಯವನ್ನೆ ಇಲ್ಲಿ ಎಲ್ಲ ಕುರುಬರ ಬಗ್ಗೆ ಸ್ವೀಕರಿಸಲಾಗಿದೆ.

೧೪. ***Indian Culture***, Calcutta; Jan-1935; p. 376

೧೫. ದ್ರಾವಿಡರು ಯಾರು ಎಂಬುದನ್ನು ಕುರಿತು ಬಹಳ ಸೂಕ್ಷ್ಮವಾದ, ತೀಕ್ಷ್ಣವಾದ ಮತಮತಾಂತರಗಳಿವೆ. ಈಗ ಅವುಗಳ ಸತ್ಯಾಸತ್ಯತೆಯಲ್ಲಿ ಸೇರುವ ಕಾರಣವಿಲ್ಲ. ದ್ರಾವಿಡ ಜನಾಂಗದ ಬಗ್ಗೆ ಅರಿತುಕೊಳ್ಳಲು ಉಪಯುಕ್ತವಾದ ಕೆಲವು ಗ್ರಂಥಗಳು:

I. E. Thurston : ***Castes and Tribes of Southern India***, Vol. I. ಮುನ್ನುಡಿ, ನೋಡಿ.

II Risley : ***People of India***

III C. Hayavadan Rao : ***Mysore Gazetteer,*** Vol. I.

Iv Journal of the Department of letters, Calcutta; Vol. XXVI, 1935

V ***Man In India***, Dec.1934 : etc.

೧೬. Shrinivas Ayangar P. T., ***History of Tamil***

೧೭. Some Contributions of Southern India to Indian Culture P. 25-26

೧೮. i ೧೬ನೆಯ ಟಿಪ್ಪಣಿಯ ಗ್ರಂಥ ಪು. ೧೯೦, ೧೯೧; ೩೪೫, ೩೪೬

ii. Dr. S. Krishnaswamy Ayangar : Some Contributions of Southern India to Indian culture,1923; p. 24, 25, 34, 35, 159, 160

೧೯. ನರಸಿಂಹಾಚಾರ್ಯ ರಾ., ಕವಿಚರಿತೆ ಸಾಗ I ಪು. ೬ "ಬೇರೆ ಕೊಂಚ ಮಧು ಪಾತ್ರಕ್ಕೆ ಹಾಕಿ; ಪಾನಂ ಬೇರೆತ್ತಿ ಕಟ್ಟಿ ಮಧುವಂ ಬೆರೆತ್ತುವೆನ್" ಎಂದು ಡಾ. ಹುಲ್ಷರು ಓದುತ್ತಾರೆ. ಇವೂ ಇನ್ನು ಕೆಲವು ಮಾತುಗಳೂ ಕನ್ನಡದುವೇ ಎಂದು Mysore Archaeological Report, 1904; 1926-27 ರಲ್ಲಿ ಪ್ರಸ್ತಾಪಿಸಲ್ಪಟ್ಟಿತು. ಆದರೆ, ಶ್ರೀ ಎಸ್. ಶ್ರೀಕಂಠಶಾಸ್ತ್ರಿಗಳು ಆ ಮಾತು ತಮಿಳು ಏಕೆ ಇರಲಿಕ್ಕಿಲ್ಲವೆಂದು ಶಂಕಿಸಿದರು. ಶ್ರೀಮಾನ್ ಗೋವಿಂದ ಪೈಗಳು ವಿಸ್ತಾರವಾದ ಮಹತ್ವದ ಒಂದು ಲೇಖನವನ್ನು ಬರೆದು ಆ ಮಾತುಗಳು ಕನ್ನಡದುವೇ ಎಂದು ಸಪ್ರಮಾಣವಾಗಿ ನಿರ್ಧರಿಸಿದ್ದಾರೆ. ಪ್ರಬುದ್ಧ ಕರ್ಣಾಟಕ, ೧೯೩೦

೨೦. ಉದಯಭಾರತ, ಮಂಗಳೂರು, ಸಂಪುಟ ೨; ಆಗಸ್ಟ್ ೧೯೨೮

೨೧. Mysore Gazett. (New Edition) Vol. II. Part I P. 425

೨೨. ದೇವಾಂಗ ಕುಲಭೂಷಣ ಶ್ರೀಮಾನ್ ಶಂಕರಪ್ಪ ಸಕ್ಕರಿ, ದೇವಾಂಗ ಪುರಾಣ, ೧೯೨೩; ಇಳಕಲ್ಲ (ವಿಜಾಪುರ), ಪು. ೧೧೨; 'ನಂದಿಧ್ವಜ ಸಂಪಾದನಂ ನಾಮ ದಶಮೋಧ್ಯಾಯಃ' ನೋಡಿ

೨೩. Salem Gazett. p. 170

೨೪. E. Thurston : Tribes Castes of Southern India. Vol VII. P. 377

೨೫. Enthoven; Tribes and Castes of Bombay, Vol, I P. 310, 311

೨೬. Mysore Gazett. Vol. I

೨೭. Bellary Gazett. 1916. p. 75

೨೮. ೧೮ನೆಯ ಟಿಪ್ಪಣಿಯ ii ನೆಯ ಗ್ರಂಥ; ಪು. ೨೪

೨೯. Mac-donell, Vedic Index, Vol. II. p. 297

೩೦. Ibid, Vol. I. 171

೩೧. ನಾಸಿಕದ ಗವಿಶಾಸನ, Arch-Survey, Western India, Vol. IV P. 169; ರುದ್ರದಾಮನ್‌ನ ಶಾಸನ Indian Ant. Vol. VII p. 262; ಬೃಹತ್‌ಸಂಹಿತೆ XIV. ೯

೩೨. Castes and Tribes of the Nizam's Dominions Vol - I, p. 250

೩೩. ಐ. ಕುಶಾಲಪ್ಪನವರ "ಕೊಡಗಿನ ಭೂವಿವರಣೆ ಮತ್ತು ಸಿವಿಕ್ಸ್"

೩೪. ಕರ್ಪೂರ ಮಂಜರಿ ನಾಟಕ, ಅಂಕ ೧. ೨೫; ಹಾರ್‌ವರ್ಡ ವಿಶ್ವವಿದ್ಯಾಲಯದ ಪ್ರಕಟನೆ ಪು. ೧೬೦

೩೫. ತಾರಾನಾಥ ತರ್ಕವಾಚಸ್ಪತಿ, ವಾಚಸ್ಪತ್ಯ ಕೋಶಂ 'ಕುಂತಲ' ನೋಡಿ.

೩೬. Epigraphia Indica, XXII, Part II. P. 85

೩೭. Ayangar S. K., Some Contributions of Southern India to Indian Culture, p. 35

೩೮. i V. R. Dixitar, "The view a generally taken that they (Andhras) were Dravidian people" ***Sources of early Andhra History***

ii. "The Andhras.........were.........Dravidian in blood and speach"-***Cambridge History of India***, Vol. I. p.124

೩೯. ***Pre-Aryan and Pre-Dravidian,*** P. 74-79

ತಿಲಿಂಗ, ತ್ರಿಕಲಿಂಗ, ತೆಲಂಗ ಎಂದು ಮುಂತಾಗಿ ಈ ಶಬ್ದದ ಅನಿಶ್ಚಿತ ಸ್ವರೂಪದ ಕಾರಣವನ್ನು ಹೇಳುವಾಗ ಪ್ರೊ. ಲೆವಿಯವರು ಬರೆದ ಮಾತುಗಳು ಮನನೀಯವಾಗಿವೆ. ತೆಲುಗು ಜನಾಂಗವು ಅತಿಪ್ರಾಚೀನ; ಕಲಿಂಗರೂ ಇವರೂ ಒಂದೇ. ಆದರು ಕಲಿಂಗರಂತೆ ಇವರು ಉನ್ನತಸ್ಥಿತಿಯಲ್ಲಿರಲಿಲ್ಲ. ಇವರು ತಲೆಯೆತ್ತಿ ಮೆರೆಯಲಾರಂಭಿಸಿದುದು ಕ್ರಿ. ಶ. ೧೦೦೦ದಿಂದ ಮುಂದೆ. ಮರಾಠಿ ಸಾಹಿತ್ಯವು ತಲೆದೋರಿದುದೂ ಇದೇ ಸುಮಾರಿಗೆ. ಪ್ರೊ. ಲೆವಿಯವರು ಬರೆಯುವುದೇನೆಂದರೆ:

The name of Kaling has been fixed under this form at an early time because Kalinga played an important role in the political history of India as soon as the Aryan civilization had spread up to the eastern coast; witness the inscriptions of Ashoka and Kharvela. Tilinga has not the same fortune; the Aryan and Dravidian Conquest had cut into pieces; the variations of its name indicate its political variations; it is only about the Year 1000 A. D. that some princes claimed "the suzerainty of Trikaling", perhaps with the intention of absorbing both T(r)ilinga and Kalinga under this designation (p. 99)

ಪ್ರೊ. ಲೆವಿಯವರು ಹೇಳಿದ ತಿಲಿಂಗ ಗೆದ್ದ ದ್ರವಿಡರು ಯಾರು? ಆಂಧರೆನಿಸಿದ ಆಂಡೆಕುರುಬರೂ ಮುಂದೆ ಗಂಗರೂ, ಚಲುಕ್ಯರೂ ತಾನೆ? ಎಂದರೆ ಅವರು ಹಟ್ಟಿಕಾರರು.

೪೦. ಆಲೂರ ವೆಂಕಟರಾಯ *'ಕರ್ನಾಟಕ ಗತವೈಭವ'* ಪು. ೧

೪೧. ೩೭ನೆಯ ಟಿಪ್ಪಣಿ ನೋಡಿ

೪೨. ೧೯ನೆಯ ಟಿಪ್ಪಣಿ ನೋಡಿ.

೩ನೆಯ ನೆಲೆ

ಪ್ರಾಚೀನತೆ

ದಕ್ಷಿಣದೇಶದಲ್ಲಿ ಸಿಕ್ಕುವ ಪ್ರಾಚೀನ ನಾಣ್ಯಗಳೆಂದರೆ ಕುರುಂಬರವೇ ಎಂದು ಸರ್ ಇಲಿಯಟ್ ಪ್ರಭೃತಿಗಳ ಅಭಿಪ್ರಾಯ.[೧] ಇವು ಸುಮಾರು ಕ್ರಿ. ಶ. ೩ನೆಯ ಶತಮಾನದುವು. ಕುರಿಕಾಯವವರು-ಕುರು(ಂ)ಬರು ಇಷ್ಟು ವಿಖ್ಯಾತರಾಗಿರುವುದು ಸಾಧ್ಯವೆ? ಎಂದು ಕೆಲರಿಗೆ ಸಂದೇಹ! 'ಗೋ-ಪಾಲ'ನು ರಾಜನಾಗಬಲ್ಲ; ಗೋಪಾಲ ಶಬ್ದಕ್ಕೆ ಸಂಸ್ಕೃತದಲ್ಲಿ ಅರಸನೆಂಬರ್ಥವೂ ಇದೆ. ಅದನ್ನೆ ಕನ್ನಡದಲ್ಲಿ ಕುರು(ಂ)ಬ, ಹಟ್ಟಿಕಾರ- ದನಗಾರನೆಂದರೆ ಮಾತ್ರ ಆತನ ಅರಸುತನಕ್ಕೆ ಕೊರತೆಯೇಕೆ? ಹೋಮರನೆಂಬ ಕವಿಯು ಕುರು(ಂ)ಬ ಶಬ್ದವನ್ನು ರಾಜನೆಂಬರ್ಥದಲ್ಲಿ ಉಪಯೋಗಿಸಿದ್ದುದನ್ನು ಹೇಳುತ್ತಾರೆ. ದನಕಾರಿಕೆ-ಹಟ್ಟಿಕಾರಿಕೆಯಿಂದ ಉಪಜೀವಿಸುತ್ತಿದ್ದ ಪ್ರಾಚೀನ ಜನಾಂಗಗಳೊಳಗಿಂದಲೆ ಧೀರವೀರರು ಹುಟ್ಟಿ ರಾಜ್ಯಗಳನ್ನು ಕಟ್ಟಿದ ಉದಾಹರಣೆಗಳು ಬೇಕಾದಷ್ಟಿವೆ. ತಮಿಳು ಕಾವ್ಯಗಳಲ್ಲಿ ಹಟ್ಟಿಕಾರರಿಗೆ "ಕುರುನಿಲ ಮನ್ನೆಯರ್" ಎಂದು ವರ್ಣಿಸಿದ್ದುಂಟು. "ಕುರುನಿಲ ಮನ್ನೆಯರು" ಎಂದರೆ ಚಿಕ್ಕಪುಟ್ಟ ರಾಜರು ಎಂದು ಅರ್ಥ ಮಾಡಿ ಈ ಜನಾಂಗದವರು ದೊಡ್ಡರಾಜ್ಯಗಳನ್ನು ಆಳಲೇ ಇಲ್ಲವೆಂದು ಕೆಲವರು ಭಾವಿಸಿದ್ದಾರೆ! 'ಗೋ' ಎಂದರೆ ಭೂಮಿ; ಅದರಂತೆ 'ಕುರು' ಎಂದರೂ ಭೂವಿಶೇಷ; ಆದುದರಿಂದ ಗೋಪನೆಂದರೂ ಭೂಪತಿ; ಕುರು(ಂ)ಬನೆಂದರೂ ಭೂಪತಿ; ಅರಸು. ತಮಿಳು ಕಾವ್ಯಗಳಲ್ಲಿ ಇಡೈಯರೊಡನೆ ವರಾಹಧ್ವಜದ 'ಶೆಲುಕ್ಕಿಯನ್'ರ ಹೆಸರೂ ಬರುವುದು.[೨] ಈ ಶೆಲುಕ್ಕಿಯನ್-ಚಲುಕ್ಯರೇ ತಮಿಳರಿಗೂ ಕೈತೋರಿದ, ಹರ್ಷನನ್ನೂ ಹಿಂದಕ್ಕಟ್ಟಿದ ಮಹಾಸಾಮ್ರಾಟರಾಗಲಿಲ್ಲವೆ? ಆದುದರಿಂದ ಸರ್ ಇಲಿಯಟರು ನಿರ್ಣಯಿಸಿದ ಹಡಗಿನ ಸ್ತಂಭಗಳ (Mastes) ಗುರುತುಳ್ಳ ಆ ನಾಣ್ಯಗಳು ಕುರುಂಬರವೇ ಆಗಿರಬೇಕೆಂದು ಊಹಿಸಲು ಅಡ್ಡಿಯಿಲ್ಲ.

ಶೀಲಪ್ಪದಿಗಾರಂ ಮೊದಲಾದ ಪ್ರಾಚೀನ ತಮಿಳುಸಾಹಿತ್ಯದಲ್ಲಿ ಇಡೈಯರ್, ಅಂಡರ್, ಕುರುಂಬರ್, ವಡುಗರ್ ಎಂದು ಮುಂತಾಗಿ ಕನ್ನಡ ಹಟ್ಟಿಕಾರರ ಉಲ್ಲೇಖಗಳು ಬರುತ್ತಿರುವುದರಿಂದ ಈ ಜನಾಂಗವು ಕ್ರಿಸ್ತಶಕದ ೨ನೆಯ ಶತಮಾನಕ್ಕೆ ಮೊದಲೇ ತನ್ನ ಸ್ವತಂತ್ರ ಅಸ್ತಿತ್ವವನ್ನು ಸ್ಥಾಪಿಸಿಕೊಂಡಿದ್ದಿತೆಂದು ಸಿದ್ಧವಾಗುತ್ತದೆ. ಈಗ ಛೋಟಾನಾಗಪುರ ಪ್ರಾಂತದಲ್ಲಿ ನೆಲಸಿರುವ ಕುರುಕ (ಕುರುಬರ)ರು "ರಾಮನಿಗೆ ವಾನರರೆಂಬ ಹೆಸರಿನಿಂದ ನೆರವಾದವರು ತಾವೇ" ಎಂದು ತಮ್ಮ ಜನಾಂಗದ ಹಿರಿಯರಲ್ಲಿ ಕಿವಿಯಿಂದ ಕಿವಿಗೆ ಬಂದ ಪರಂಪರೆಯನ್ನು ಹೇಳುತ್ತಾರೆ.[೩] ಕರ್ಣಾಟಕಕ್ಕೂ ಕಿಷ್ಕಿಂಧೆಗೂ ಇರುವ ನಿಕಟ ಸಂಬಂಧವನ್ನು ನೋಡಿದರೆ ಈ ಪರಂಪರೆಯು

ಕೇವಲ ಹುರುಳಿಲ್ಲದುದೆಂದು ದುರ್ಲಕ್ಷಿಸಲಿಕ್ಕಾಗುವುದಿಲ್ಲ. ಗರುಡರ ಗರುಡಿ, ಮಲವರ ಮಲ್ಲವಿದ್ಯೆ, ಜಾಡಿಗಳ ಜಟ್ಟವಿದ್ಯೆಗಳು ಪುರಾತನ ಕಾಲದಿಂದಲೂ ಹೆಸರಾಗಿವೆ. ಜಟ್ಟಿಗೆ ಮಹಾಭಾರತ (೨. ೪. ೭) ದಲ್ಲಿ ಝಲ್ಲ ನೆಂದು ಹೆಸರಿದೆ. ನಮ್ಮ ಜಾಡನ ಸಂಸ್ಕೃತ ಸಾಹಿತ್ಯದೊಳಗಿನ ಹೆಸರು ಇದು. ಮನುಸ್ಮೃತಿಯಲ್ಲಿ (೧೦.೨೨) "ಝಲ್ಲೋ ಮಲ್ಲಶ್ಚ" ಎಂದು ವ್ರಾತ್ಯಕ್ಷತ್ರಿಯರ ಪಟ್ಟಿಯನ್ನು ಕೊಟ್ಟಿದೆ. ಅದರಲ್ಲಿ ಜಾಡರು, ಮಲವರು, ನಾಡವರುಗಳ ಹೆಸರಿವೆ. ಮನುಸ್ಮೃತಿಯ ರಚನಾ ಕಾಲವು ಕ್ರಿಸ್ತಪೂರ್ವ ೨೦೦ ರಿಂದ ಕ್ರಿ. ಶ. ೨೦೦ ಒಳಗಾಗಿ ಇದೆಯೆಂದು ಬುಲ್ಹರ್, ಕಾಣೆ ಮೊದಲಾದ ವಿದ್ವಾಂಸರು ನಿರ್ಣಯಿಸಿದ್ದಾರೆ.

ಕುರುಬರಲ್ಲಿ ಅಂಡೆ (ಹಂಡೆ)ಯವರೆಂಬ ಒಂದು ಬಣವಿದೆಯಷ್ಟೆ. ತಾವು ಅಂಡೆಯವರು ರಾವುತರು, ಸರದಾರರು, ಅರಸುಕುಲದವರಾಗಿದ್ದವೆಂಬುದನ್ನು ಇಂದಿಗೂ ಮರೆತಿಲ್ಲ ಕುರುಬರ ಚರಿತ್ರೆಯ ಲೇಖಕರು, ಈ ಪಂಗಡದವರಿಗೆ ಅಂಡೆವಜೀರರೆಂಬ ಹೆಸರಿದ್ದ ಹಾಗೂ ಹೇಳುತ್ತಾರೆ (ಪು. ೨೩). ತಮಿಳು ಪ್ರಾಚೀನ ಕಾವ್ಯಗಳಲ್ಲಿ ಅಂಡರ್ ಎಂದು ನಿರ್ದೇಶಿಸಿದ್ದು ಇವರನ್ನೇ. ಇದು ಹಟ್ಟಿಕಾರರಲ್ಲಿ ಪ್ರಾಚೀನ ಕಾಲದಿಂದಲೂ ಅತಿವಿಖ್ಯಾತವಾದ ಪಂಗಡ. ಕ್ರಿ.ಶ. ೨ನೆಯ ಶತಮಾನದ ಟಾಲಮಿಯು ಅಂಡರರ ಹೆಸರು ಹೇಳುತ್ತಾನೆ. ಪಾಲಿ ಗ್ರಂಥಗಳಲ್ಲಿರುವ ಅಂಧ, ಅಂಧಕರೂ ನಮ್ಮ ಹಟ್ಟಿಕಾರರ ಅಂಡರರೂ ಒಂದೇ ಎಂಬುದನ್ನು ಡಾಕ್ಟರ್ ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ಯರು ಸಿದ್ಧಮಾಡಿದ್ದಾರೆ ಮತ್ತು ಇವರೇ ಆಂಧ್ರರೆಂದೂ ಪ್ರತಿಪಾದಿಸಿದ್ದಾರೆ[೪] ಆಂಧ್ರರ ಹೆಸರು ಐತರೇಯ ಬ್ರಾಹ್ಮಣದಲ್ಲಿ ಕಿವಿಗೆ ಬೀಳುತ್ತದೆ. ಇದರಿಂದ ಈ ಜನಾಂಗವು ಕ್ರಿಸ್ತಪೂರ್ವ ೧೫೦೦-೨೦೦೦ ವರುಷಗಳಷ್ಟು ಪ್ರಾಚೀನವೆಂದು ಹೇಳಬೇಕಾಗುತ್ತದೆ. ಹಿಂದಿನ ಪ್ರಕರಣದಲ್ಲಿ ಸೂಚಿಸಿದಂತೆ ರುದ್ರಾಧ್ಯಾಯದಲ್ಲಿ ಬಂದಿರುವ 'ಪತ್ತಿ'-ಪಟ್ಟಗಳ ಉಲ್ಲೇಖವನ್ನು ನೋಡಿದರೆ ಈ ಜನಾಂಗವು ವೇದಕಾಲದಲ್ಲಿ ಸುವಿಖ್ಯಾತವಾಗಿದ್ದಿತೆಂದು ಹೇಳಲು ಅಡ್ಡಿ ತೋರುವುದಿಲ್ಲ. ಪ್ರಾಚೀನ (ಸುಮಾರು ಕ್ರಿ.ಶ. ೨ನೆಯ ಶತಮಾನ) ತಮಿಳು ಕವಿಯೊಬ್ಬನು ಕೃಷ್ಣನ ಲೀಲೆಗಳನ್ನು ವರ್ಣಿಸುವಾಗ ಯಾದವ ಸ್ತ್ರೀಯರಿಗೆ "ಅಂಡರ್ ಮಹಳಿರ್" ಎಂದಿರುವನು. ಅದರಿಂದ ಗೋವಳರಾದ ಯಾದವರು ಅಂಡರ್-ಎಂದರೆ ಅಂಡೆ ಕುರು(ಂ)ಬರ ಪಂಗಡಕ್ಕೆ ಸೇರಿದವರಾಗಿರಬೇಕೆಂದು ಡಾ. ಕೃಷ್ಣಸ್ವಾಮಿಯವರು ಸೂಚಿಸುತ್ತಾರೆ.[೫] ಅರ್ಕಾಟ, ತಂಜಾವರಗಳ ಕಡೆಗೆ ಕುರುಬರು ಯಾದವರೆಂದು ಕರೆಯಲ್ಪಡುವುದಾಗಿ ಕುರುಬರ ಚರಿತ್ರೆಯಲ್ಲಿದೆ (ಪು. ೩೮) ಜೀನ ಪ್ರಿಲಸ್ಕಿಯವರು ಇದನ್ನು ಇನ್ನೂ ಕೂಲಂಕಷವಾಗಿ ವಿಚಾರಿಸಿ ಯಾದವರೂ-ಯಾದವರೊಳಗಿನ ಅಂಧಕ-ವೃಷ್ಣಿಗಳೂ ದ್ರಾವಿಡ ರೆಂದು ನಿರ್ಧರಿಸಿದ್ದಾರೆ.[೬]

> "ಪಾಲಿ ಸಾಹಿತ್ಯದಲ್ಲಿ ಅಂಧಕ ವೇಣ್ಹುವು ದಾಸನೆಂದು ಹೇಳಿದೆ. ಪಾಣಿನಿಯು 'ಅಂಧಕ-ವೃಷ್ಣಿ'ಗಳನ್ನು ಕಾಡಾಡಿಗಳು [Barbarians] ಎಂದು ಕರೆದಿದ್ದಾನೆ. ಅಂಧಕರ ಇನ್ನೊಂದು ಪ್ರಕಾರವಾದ ಆಂಧ್ರರು ಆರ್ಯರಿಂದ ತಿರಸ್ಕೃತರು; ಅನಾರ್ಯರು. ವೃಷ್ಣಿ ಎಂದರೆ ಟಗರು; ವೃಷ್ಣಿಗಳು ಎಂದರೆ ಟಗರು-ಕುರಿಗಳನ್ನು ಸಾಕಿ ಬದುಕುವವರು ಅಂಧಕ-ಅಂಡೆಯವರ ಹೋರೆಯೂ ಇದೇ ಅಂಧಕ-ವೃಷ್ಣಿಗಳು ಯಾದವರ ಆಪ್ತರು."

ಕೃಷ್ಣನಿಗೆ ವಾರ್ಷ್ಣೇಯನೆಂದೂ ಹೆಸರು. ಆದುದರಿಂದ ಭಾರತ ಭಾಗವತಾದಿಗಳಲ್ಲಿ ಯಾದವರನ್ನು ಗೋವಳರೆಂದೇ ವರ್ಣಿಸಿದ್ದರೂ ಇವರಲ್ಲಿ ಹಲವರು 'ಅಂಧಕ-ವೃಷ್ಣಿಗಳು-ಕುರಿಗಾರರೆಂದು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಭಾರತಕಾಲದ ಯಾದವರು ಹಟ್ಟಿಕಾರ-ದನಗಾರರೆಂಬುದು ವಿದ್ವಾಂಸರಿಗೆ ಮಾನ್ಯವಾಗಿದೆ. ಇವರಲ್ಲಿ ತುರುಕಾರರಂತೆ ಕುರಿಗಾರರ ಸಮಾವೇಶವೂ ಆಗಿದ್ದಿತೆಂದು ಮೇಲಣ ವಿವರಣೆಯಿಂದ ಗೊತ್ತಾಗುತ್ತದೆ.

ಭಾರತ ಭಾಗವತಾದಿಗಳಲ್ಲಿ ವರ್ಣಿತರಾದ ಯಾದವರ ಸಾಮಾನ್ಯ ರೀತಿ. ನೀತಿಗಳನ್ನು ನೋಡಿದರೆ ಅವು ಇಂದಿನ ನಮ್ಮ ಹಟ್ಟಿಕಾರರಿಂದ ವಿಶೇಷ ಭಿನ್ನವಾಗಿಲ್ಲ. ಬಲರಾಮನು ಹಲಾಯುಧನು. ನೇಗಿ(ಲಿನ) ಆಕಾರದ ಡೊಣ್ಣೆಯವನು; ಜಟ್ಟಿ; ಇವನ ನಿಷ್ಕಪಟ ಸರಲ ಸ್ವಭಾವ ತಟ್ಟನೆ ಸಿಟ್ಟಿಗೆದ್ದು ಕೂಡಲೆ ಶಾಂತನಾಗುವ

ಬಗೆಯಾಗಿದೆ; ತಾಲವೃಕ್ಷವೇ ಇವನ ಧ್ವಜ; ಡೊಣ್ಣೆ ಕಾಳಗ-ಮಲ್ಲಯುದ್ಧ ಪ್ರೇಮ; ಇವೆಲ್ಲ ಗುಣಗಳಿಂದ ಇವನು ನಿಜವಾಗಿ ಇಂದಿಗೂ ಹಟ್ಟಿಕಾರರ ಪ್ರತಿನಿಧಿ. ಕೃಷ್ಣನ ಚಿತ್ರವನ್ನು ಬರೆಯುವಲ್ಲಿ ಅನೇಕ ಪ್ರತಿಭಾಶಾಲಿಗಳಾದ ಕವಿಗಳ ಕೈಯು ಆಡಿರುವದರಿಂದ ಬಣ್ಣವು ಹೆಚ್ಚಾಗಿ ಆತನ ಮೂಲಸ್ವರೂಪವು ಸ್ಪಷ್ಟವಾಗಿ ತಿಳಿಯುವುದೆ ಕಷ್ಟವಾಗಿದೆ. ಆದರು ಯಾದವರ ಲೀಲಾವಿನೋದಗಳನ್ನು ಇಂದಿನ ಹಟ್ಟಿಕಾರರಲ್ಲಿಯೂ ಬಹಳ ಮಟ್ಟಿಗೆ ಕಂಡರೂ ಅವುಗಳನ್ನು ವ್ಯಾಸರಂತೆ ಆದರ-ಪ್ರೀತಿಗಳಿಂದ ಹೋಗಲಿ, ಸಹಾನುಭೂತಿಯಿಂದ ನೋಡುವವರೂ ಸಹ ದುರ್ಲಭ! ಇವೆಲ್ಲ ಸಂಗತಿಗಳನ್ನು ವಿಚಾರಿಸಿದರೆ ಭಾರತಕಾಲದ ಯಾದವರು 'ದ್ರಾವಿಡ' ವರ್ಗದ ಹಟ್ಟಿಕಾರರೆಂದೇ ಹೇಳಬೇಕಾಗುತ್ತದೆ.

ಯದುಗಳ ಹೆಸರು ಋಗ್ವೇದದಲ್ಲಿದೆ. ಸುಮಾರು ೧೪ ಸಾರೆ ಬಂದಿದೆ. ಯದುಗಳೊಡನೆ 'ತುರ್ವಶ'ರ ಹೆಸರೂ ಬಹುತರವಾಗಿ ಬಂದೇ ಬರುತ್ತದೆ. ಯದು ಮತ್ತು ತುರ್ವಶರೆಂಬುವು ವ್ಯಕ್ತಿಗಳಲ್ಲ; ಜನಾಂಗದ ಹೆಸರುಗಳೆಂದು ಬಲ್ಲಿದರ ಅಭಿಪ್ರಾಯ.[೭] ಇವರು ಸುದಾಸರಾಜನ ವಿರೋಧಿಗಳಾಗಿರಬೇಕೆಂದು ಮ್ಯಾಕಡೊನೆಲ್‌ರು ಊಹಿಸುತ್ತಾರೆ. ಸುದಾಸನ ಇನ್ನುಳಿದ ವಿರೋಧಿಗಳಲ್ಲಿ ಅಜಾಃ (ಆಡಿನವರು), ಶಿಗ್ರುಃ (ಕುದುರೆಯವರು) ಎಂಬೀ ಬಗೆಯ ಹೆಸರುಗಳಿವೆ.[೮] ಇವರನ್ನು ಕುರಿತ ಟಿಪ್ಪಣಿಗಳಲ್ಲಿ 'ಅಜರೂ ಶಿಗ್ರುಗಳೂ ಪ್ರಾಣಿ ವನಸ್ಪತಿಗಳ ಮೇಲಿಂದ ತಮ್ಮ ಬೆಡಗು (ಪಂಗಡ) ಹೇಳುವ ಅನಾರ್ಯರಾಗಿರುವ ಸಂಭವವಿದೆ. ಆದರೂ ಇದು ಕೇವಲ ಊಹೆ," ಎಂದು ಬರೆದಿರುವರು. 'ಭೇದ' (ಬೇಡ?)ನ ಬಗ್ಗೆ ಬರೆವಾಗಲೂ ಹೀಗೆಯೆ ಹೇಳಿದ್ದಾರೆ. ಇನ್ನೂ ಕೆಲವು ವಿದ್ವಾಂಸರು ಈ ಜನಗಳು ಅನಾರ್ಯರಾಗಿರಬೇಕೆಂದೇ ತರ್ಕಿಸುತ್ತಾರೆ. (Cambridge History of India, Vol, I. p. 82)

ಮ್ಯಾಕ್‌ಡೊನೆಲ್‌ರು ಎಚ್ಚರಿಕೆ ಕೊಟ್ಟಂತೆ ಈ ಮಾತನ್ನು ಬರಿ ಊಹೆಯೆಂದೇ ದುರ್ಲಕ್ಷಿಸಬಹುದಾಗಿತ್ತು. ಉಳಿದವರ ಮಾತು ಹಾಗಿರಲಿ; ಆದರೆ, ಯದು ಮತ್ತು ತುರ್ವಶರನ್ನು ಕುರಿತು ವಿಚಾರ ಮಾಡಿದ ಹಾಗೆಲ್ಲ ಈ ಜನಾಂಗಗಳು ವೈದಿಕಆರ್ಯರಿಂದ ಭಿನ್ನವಾದುವುಗಳಾಗಿರಬೇಕೆಂದು ಎನಿಸುತ್ತಿದೆ. ಇವರಿಗೆ (ಬೇಕಾದರೆ) ಆರ್ಯರ ಇನ್ನೊಂದು ಶಾಖೆಯೆಂದು ಸಮಾಧಾನ ಹೇಳಬಹುದು; ಆದರೆ, ವೇದಗಳ ಆರ್ಯರು ಮಾತ್ರ ಇವರಲ್ಲ ಭಾರತಕಾಲದ ಯದುಗಳಲ್ಲಿ ಸಮಾವಿಷ್ಟರಾಗಿರುವ ಅಂಧಕ-ವೃಷ್ಣಿಗಳು (ಆಂಧ್ರರೂ) ಪತಿತರು; ಅದಕ್ಕೂ ಈಚೆಗೆ ಬಂದರೆ ಇವರ ಪರಂಪರೆಯು ಅಂಡರ್, ಅಂಡೆಕುರುಬರ ವರೆಗೂ ಬಂದು ಹತ್ತುವುದು. ಕೆಂಬ್ರಿಡ್ಜ್ 'ಹಿಸ್ಟರಿ-ಆಫ್ ಇಂಡಿಯಾ'ದ ಲೇಖಕರು 'ವೇದಕಾಲದ ಆಂಧ್ರರು ದ್ರಾವಿಡರೇ ಆಗಿರಬೇಕೆಂದು' ಅಭಿಪ್ರಾಯ ಪಡುತ್ತಾರೆ. (ಪು. ೧೨೪), ವಸಿಷ್ಠ-ವಿಶ್ವಾಮಿತ್ರರ ಕಥೆಗಳಲ್ಲಿ ಅವರಿರ್ವರ ಸ್ವಭಾವವು ಚೆನ್ನಾಗಿ ವ್ಯಕ್ತವಾಗಿದೆ. ವಸಿಷ್ಠನ ಪರಂಪರಾಭಿಮಾನವೂ ವಿಶ್ವಾಮಿತ್ರನ ಪ್ರಾಗತಿಕ ಪ್ರವೃತ್ತಿಯೂ ಸುಪ್ರಸಿದ್ಧವಾಗಿಯೆ ಇವೆ. ಋಗ್ವೇದದಲ್ಲಿ ಗೋಚರನಾಗುವ ವಸಿಷ್ಠನ ಸ್ವಭಾವವು ಇದಕ್ಕೆ ಸರಿಹೋಗುವಂತೆಯೆ ಇದೆ. ಯಜ್ಞ ವಿರೋಧಿಗಳಾದ ವೈರಿಗಳನ್ನು, ದಾಸರನ್ನು, ದಸ್ಯುಗಳನ್ನು, ರಾಕ್ಷಸರನ್ನು, ಪಣಿಗಳನ್ನು ನಾಶಮಾಡುವುದಕ್ಕಾಗಿ ಇಂದ್ರನಿಗೆ ಇವನು ಆಗಾಗ್ಗೆ ಸ್ತೋತ್ರ ಮಾಡುತ್ತಾನೆ. ಇಂತಹ ವಸಿಷ್ಠನು,

ನಿತುರ್ವಶಂ ನಿ ಯಾದ್ವಂ ಶಿಶೀಯ್ಯತಿಥಿಗ್ವಾಯ ಶಂಸ್ಯಂ ಕರಿಷ್ಯನ್ ॥

ಋಗ್ವೇದ ಸಂಹಿತೆ ಮಂ. VII. ಸೂ ೧೯. ಮಂ ೮

ಇಂದ್ರನೇ..... ಅತಿಥಿಗ್ವಾ ಸುದಾಸನಿಗೆ ಏಳ್ಗೆಯನ್ನಿತ್ತು, ನೀನು ತುರ್ವಶ ಮತ್ತು ಯಾದ್ವರನ್ನು ಅಂಕಿತರನ್ನು ಮಾಡು ಎಂದು ಪ್ರಾರ್ಥಿಸುತ್ತಾನೆ. ಆದುದರಿಂದ, ತುರ್ವಶರೂ ಯಾದವರೂ ಆರ್ಯ-ವಿರೋಧಿಗಳಾಗಿರಬೇಕೆಂದು ಊಹಿಸಲು ಇಂಬು ದೊರೆಯುತ್ತದೆ. ಋಗ್ವೇದದ ಹತ್ತನೆಯ ಮಂಡಲದ "ದಾಸಾ...ಯದುಃ ತುರ್ವಃ" (೬೨.೧೦) ಎಂಬ ಉಲ್ಲೇಖದ ಬಲದಿಂದ ಯದು-ತುರ್ವಶರು ದಾಸರು-ಆರ್ಯೇತರರು ಎಂದು ಶ್ರೀ ರಾಮಪ್ರಸಾದ ಚಂದಾ ಮತ್ತು ಪ್ರೊ. ಎನ್. ಕೆ. ದತ್ತ ಇವರು ಸ್ವತಂತ್ರ ಲೇಖನಗಳನ್ನು ಬರೆದು ಈ ಮೊದಲೆ ಸಿದ್ಧಪಡಿಸಿದ್ದಾರೆ.[೯]

ಸಾಯಣಾಚಾರ್ಯರು "ದಾಸಾಃ" ಎಂಬ ಪದಕ್ಕೆ "ದಾಸವತ್ ಪ್ರೇಷ್ಯವತ್ ಸ್ಥಿತೌ" ಎಂದು ಭಾಷ್ಯ ಮಾಡುತ್ತಾರೆ. ಯದು ತುರ್ವಶರಿಗೆ ರಾಜರ್ಷಿಗಳೆಂದು ಒಕ್ಕಣಿಸುತ್ತಾರೆ. ಆದರೆ, ವಸಿಷ್ಠ ಋಷಿಗಳ ಮೇಲ್ಕಾಣಿಸಿದ ಪ್ರಾರ್ಥನೆಯ ಮೇಲಿಂದ ಯದು-ತುರ್ವಶರ ಕುಲದವರೆಲ್ಲರೂ ವೈದಿಕ ಧರ್ಮಿಗಳಾಗಿ ರಾಜರ್ಷಿ ಗಳಾಗಿದ್ದರೆಂದು ಹೇಳುವುದಕ್ಕೆ ಸಂಕೋಚವೆನಿಸುತ್ತಿದೆ. ವೇದಕಾಲದ ಯದು-ತುರ್ವಶರಂತೂ ಇರಲಿ; ಭಾರತಕಾಲದಲ್ಲಿ ಸಹ ಶ್ರೀಕೃಷ್ಣನೂ ಅವನ ಹಲವು ಅನುವರ್ತಿಗಳೂ ಆರ್ಯಪರಂಪರೆಯ ಅಭಿಮಾನಿಗಳಾಗಿ, ಆರ್ಯ-ಧರ್ಮ-ಪ್ರಸಾರಕರಾಗಿ ಮುಂದೆ ಬಂದಿದ್ದರೂ ಇನ್ನುಳಿದ ಯಾದವರ ಆಪ್ತ-ಬಾಂಧ ವರನ್ನು ನೋಡಿದರೆ ಅವರಲ್ಲಿ ಅನೇಕಾನೇಕರು ಇನ್ನೂ ಆರ್ಯವಿರೋಧಿಗಳಾಗಿ-ದಾಸರಾಗಿಯೇ ಇದ್ದುದು ಕಂಡು ಬರುತ್ತದೆ. ಕಂಸ, ಜರಾಸಂಧ, ಶಿಶುಪಾಲ, ರುಕ್ಮಿ, ಮೊದಲಾದ ಯಾದವರ ಬಳಗದವರು ಆರ್ಯ-ವಿರೋಧಿಗಳೆಂದೇ ಹೇಳಬಹುದಲ್ಲವೆ? ಋಗ್ವೇದದೊಳಗೆ ದಾಸರ ಮೈಬಣ್ಣವೆಂದು ವರ್ಣಿಸಲ್ಪಟ್ಟ ಕೃಷ್ಣವರ್ಣವು ಶ್ರೀಕೃಷ್ಣನ ವೈಶಿಷ್ಟ್ಯವೇ ಆಗಿದೆ.

ಋಗ್ವೇದದ ಹತ್ತನೆಯ ಮಂಡಲದಲ್ಲಿ ಯದು-ತುರ್ವಶರಿಗೆ 'ದಾಸ'ರೆಂದು ವಿಶೇಷಿಸಿದ್ದಷ್ಟೇ ಅಲ್ಲ; ಒಂಬತ್ತನೆಯ ಮಂಡಲದಲ್ಲಿ ಸೋಮಪ್ರಶಂಸೆಯ ಕಾಲಕ್ಕೆ ಇದಕ್ಕೂ ಸ್ಪಷ್ಟವಾದ ಒಂದು ಉಲ್ಲೇಖವಿದೆ.

ಪುರಂ ಸದ್ಯ ಇತ್ಥಾಧಿಯೆ ದಿವೋದಾಸಾಯ ಶಂಬರಂ।
ಅಧತ್ಯಂ ತುರ್ವಶಂ ಯದುಂ ॥ ೯-೬-೧-೨

ಸತ್ಯಕರ್ಮಿಯಾದ ದಿವೋದಾಸನಿಗಾಗಿ ಒಂದೇ ದಿವಸ ಶಂಬರ, ತುರ್ವಶ ಮತ್ತು ಯದುಗಳನ್ನು ಗೆದ್ದು ಅವರ ಪುರಗಳನ್ನು ಒಡೆದನು. ಇಲ್ಲಿ ಉಕ್ತನಾದ ಶಂಬರನು ದಾಸನು-ದೈತ್ಯನೆಂಬ ಬಗ್ಗೆ ಯಾರ ಭಿನ್ನಾಭಿಪ್ರಾಯವೂ ಇಲ್ಲ. ಈ ಶಂಬರನೊಡನೆ ಕೂಡಿದ ತುರ್ವಶ ಮತ್ತು ಯದುಗಳು ನಿಶ್ಚಿತವಾಗಿಯೂ ಆರ್ಯರ ವೈರಿಗಳು ಎಂದರೆ ದಾಸರೇ ಆಗಿರಬೇಕಲ್ಲವೇ? '(ವಿಷ್ಣು) ಕೃಷ್ಣನು ದ್ರಾವಿಡರ ದೇವರು',[೨] ಎಂದು ಪ್ರಿಲಸ್ಕಿಯವರು ಸ್ಥಾಪಿಸಿದ್ದಾರೆ. ಈ ದೇವರ ಭಕ್ತರಿಗೆ ದಾಸರೆಂದು ಅನೇಕ ಶತಮಾನಗಳಿಂದಲೂ ನಡೆಯುತ್ತ ಬಂದ ಹೆಸರು. ರುದ್ರನ ಪರಿವಾರವು 'ಗಣ', ಎಂದರೆ ವ್ರಾತ-ವ್ರಾತ್ಯ(?)- ಸಮೂಹವೆಂಬರ್ಥ. ಡಾ. ಸುನೀತಿ ಕುಮಾರ ಚಟರ್ಜಿಯವರ ಅಭಿಪ್ರಾಯದಂತೆ 'ಗಣ'ವು ಅವೈದಿಕಶಬ್ದ ಆದುದರಿಂದ ಇವರೆಡೂ ಹೆಸರುಗಳಲ್ಲಿಯೂ ಅವೈದಿಕ ಜನಾಂಗವೆಂಬ ಧ್ವನಿಯು ಇಲ್ಲದಿಲ್ಲ.

ಆವುದೇ ಸಮಾಜದಲ್ಲಿ ಪ್ರಗತಿಪರರು ಕೆಲರು; ಪುರಾಣವಾದಿಗಳು ಕೆಲರು ಇರತಕ್ಕವರೇ. ಎರಡು ಜನಾಂಗಗಳ ಮೊದಲ ತಿಕ್ಕಾಟದೊಳಗಿನ ಆವೇಶವು ಅಲ್ಪಸ್ವಲ್ಪ ತಗ್ಗಿದ ಬಳಿಕ ಎರಡೂ ಪಕ್ಷಗಳೊಳಗಿನ ಹಲಕೆಲವು ವಿವೇಕಿಗಳು ಮುಂದೆ ಬಂದು, ಒಂದೂಗೂಡಿ ಒಗೆತನದಿಂದ ಬಾಳಿಬದುಕುವ ಶಾಂತಿಪಾಠವನ್ನು ಹೇಳುವ ಪದ್ಧತಿಯು ಜಗತ್ತಿನ ಇತಿಹಾಸದಲ್ಲಿ ಎಲ್ಲೆಲ್ಲೂ ಕಾಣುವುದು. ಆದರು ಎರಡೂ ಕಡೆಯ ಅತಿವಾದಿಗಳು ಈ ಉಪದೇಶಕ್ಕೆ ಎಂದೂ ಕಿವಿಗೊಡುತ್ತಿರುವುದಿಲ್ಲ. ಇದರಿಂದ ಮಧ್ಯಮ ಮಾರ್ಗಿಗಳು ಕೆಲರು; ಹಠವಾದಿಗಳು ಕೆಲರು ಆಗುವರು. ಪ್ರಗತಿವಾದ ಮತ್ತು ಪುರಾಣಮತವಾದಗಳೊಳಗಿನ ಅತಿವಾದದ ಎರಡು ತಡೆಗಳ ನಡುವಿನಿಂದ ಜೀವನ-ಪ್ರವಾಹವು ಕೆಲಸಾರೆ ಈ ದಂಡೆಗೆ ಕೆಲಸಾರೆ ಆ ದಂಡೆಗೆ ಅಪ್ಪಳಿಸುತ್ತ ಅವ್ಯಾಹತವಾಗಿ ಮುಂದೆ ಸಾಗಿದೆ. ನಿಃಕ್ಷತ್ರಿಯ ಪೃಥ್ವಿಯನ್ನು ಮಾಡಹೊರಟ ಪರಶುರಾಮನು ಇಂತಹ ಅತಿವಾದಿಗಳ ಒಬ್ಬ ಪ್ರತಿನಿಧಿ. ಭಗವದ್ಗೀತೆಯ ಶ್ರೀಕೃಷ್ಣನು ಹಿತ-ಮಿತ ವಚನಿಯು; ಕರ್ಮಕೌಶಲವನ್ನರಿತ ಯೋಗಿ ಜೀವನ ರಹಸ್ಯವನ್ನು ಕಂಡ ದಿವ್ಯಜ್ಞಾನಿ.*

* ಈ ವಿಚಾರಗಳು, ಸಾಂಸ್ಕೃತಿಕ ಸಾಂಕೇತಿಕ ಪಾತಳಿಯ ವೈಚಾರಿಕ ಭೂಮಿಕೆಯಿಂದ ಇನ್ನೊಂದು ನೆಲೆಯಲ್ಲಿ ನೋಡಲು ಹೊರಟದ್ದನ್ನು 'ಶ್ರೀಮತ್ ಭಗವದ್ಗೀತೆಯಲ್ಲಿ ಹುದುಗಿರುವ ರಾಜಯೋಗದ ಸ್ವರೂಪ' (೧೯೯೬) ಪುಸ್ತಕದಲ್ಲಿ ನೋಡಬಹುದು (ಸಂ)

ವಸಿಷ್ಠರು ಯದು-ತುರ್ವಶರ ನಾಶಕ್ಕಾಗಿ ಪ್ರಾರ್ಥಿಸಿದವರು. ಆದರೆ ಕಾಣ್ವರು ಇವರ ಹಿತಚಿಂತಕರಾಗಿದ್ದುದು ಅನೇಕ ಮಂತ್ರಗಳಿಂದ ಸಿದ್ಧವಾಗುತ್ತದೆ. ಯದು-ತುರ್ವಶರಲ್ಲಿಯೂ ಹಲವರು ಆರ್ಯರ ಪಂಗಡಕ್ಕೆ ಬಂದು ಸೇರಿಕೊಂಡಿರಬೇಕು. ಏಕೆಂದರೆ, ಇವರು ಇಂದ್ರಾಗ್ನಿಗಳ ಪೂಜಕರಾಗಿದ್ದುದು, ಯಂತ್ರಗಳಿಂದಲೇ ಗೊತ್ತಾಗುತ್ತದೆ. ಈ ದೇವತೆಗಳೂ ಯದು-ತುರ್ವಶರಿಗೆ ಸಂಪತ್ತನ್ನು ಕೊಟ್ಟಿವೆ; ಇವರಲ್ಲಿ ವಸತಿಯನ್ನು ಕೂಡ ಮಾಡಿದ್ದ ವರ್ಣನೆಗಳಿವೆ.[೧೦] ಋಗ್ವೇದದಲ್ಲಿ ಕಂಡು ಬರುವ ಯದು-ತುರ್ವಶರು ಮತ್ತು ಕಾಣ್ವರುಗಳ ನಡುವಿನ ಪರಸ್ಪರ ಪ್ರೀತಿ-ವಿಶ್ವಾಸಗಳ ಈ ಸಂಬಂಧವನ್ನು ನೋಡಿದರೆ ಕಾಣ್ವರು ಈ ಜನಾಂಗದ ಪುರೋಹಿತರೆಂದೇ ಹೇಳಬಹುದು. ಋಗ್ವೇದಕಾಲದಲ್ಲಿ ಉಂಟಾದ ಯದು-ತುರ್ವಶರ ಮತ್ತು ಕಾಣ್ವರ ಸ್ನೇಹ-ಸಂಬಂಧಗಳು ಮುಂದೆ ಸಾವಿರಾರು ವರುಷಗಳ ವರೆಗೂ ಅವ್ಯಾಹತವಾಗಿ ನಡೆದು ಬಂದುವು. ವೇದಕಾಲದಲ್ಲಿ ಆರ್ಯರಿಗೆ ತುಂಬ ತೊಂದರೆ ಕೊಟ್ಟವರು ಪಣಿಗಳು. ಇವರು ಆರ್ಯರ ಗೋವುಗಳನ್ನು ಕದ್ದೊಯ್ದು ಅಡಗಿಸಿಡುತ್ತಿದ್ದರು. ಋಗ್ವೇದದೊಳಗಿನ 'ಪಣಿ ಮತ್ತು ಸರಮಾ (ನಾಯಿ) ಸಂವಾದವನ್ನು ಓದಿದರೆ ಪಣಿಗಳ ವೃತ್ತಿಯ ಕಲ್ಪನೆಯು ಬರುವುದು (೧೦.೧೦೮). ಶೆರಿಂಗನು ತನ್ನ ಗ್ರಂಥದಲ್ಲಿ (Vol. III. P. 177) ಕುರುಬರೊಳಗೆ ನಾಯ(ಕ?) ಕುರುಬ, ಪಣಿಯ ಕುರುಬರೆಂಬ ಹೆಸರಿನ ಪಂಗಡಗಳೂ ಇದ್ದುದಾಗಿ ಹೇಳುತ್ತಾನೆ. ಕಲ್ಯಾಣ ಪಟ್ಟಣದತ್ತಣಿಂದ ಎಂದರೆ ಉತ್ತರ ಭಾಗದಿಂದ ವಿಜಾಪೂರ ಬೆಳಗಾಂವಿ ಕನ್ನಡ ಜಿಲ್ಹೆಗಳ ಕಡೆಗೆ ಹರಿದು ಬಂದ ಹಣಬರೆಂಬ ಒಂದು ತಂಡವಿದೆ. (Tribes. Castes of Bombay, II. P. 57). ಇಂದಿಗೂ ದನಗಾರಿಕೆಯಿಂದಲೇ ಇವರ ಉಪಜೀವನ. "ಅಡವಿಯಲ್ಲಿದ್ದು ತುರುಕಾಯ್ದು ಹೈನಮಾರಿ ಜೀವಿಸಬೇಕೆಂದು ಇವರ ಜಾತಿ ಧರ್ಮ." ಹಣಬರ-ಹಟ್ಟಿ, ಪಣಂಬೂರುಗಳು ಈ ಜನಾಂಗದ ನೆಲೆವೀಡಿನ ಕುರುಹುಗಳಾಗಿವೆ.

ಋಗ್ವೇದದಲ್ಲಿ ಬಂದ ಶಂಬರನೆಂಬ ದಾಸನ ವರ್ಣನೆಗಳಲ್ಲಿ (೨-೧೨, ೧೧; ೪-೩೦-೧೪; ೬-೨೬-೫) ಪರ್ವತದೊಡನೆ ಇವನ ಸಂಬಂಧವಿದ್ದುದು ಕಂಡುಬರುತ್ತದೆ. ಆದುದರಿಂದ, (ಮ್ಯಾಕಡೊನೆಲ್‌ರು ಊಹಿಸುವಂತೆ ಆರ್ಯರಿಗೆ ಹೆದರಿ ಗುಡ್ಡ ಸೇರಿದವರೆಂದು ಮಾತ್ರ ತಿಳಿಯಲಾಗದು) ದಾಸರು ಪರ್ವತನಿವಾಸಿಗಳು (ಎಂದರೆ ಮಲೆಯರು) ಆಗಿರಬೇಕೆಂದು ಹೇಳಲು ಅಡ್ಡಿಯಿಲ್ಲ. (Vedic Index, I .p. 358 n.). ಕುರುಬ ಶಬ್ದವು ಗುಡ್ಡ-ಪರ್ವತ ಎಂಬರ್ಥದ 'ಕುರು' ಎಂಬ ಪದದಿಂದ ಹುಟ್ಟಿದೆಯೆಂದು ಹೇಳುವುದೂ ಇದಕ್ಕೆ ಸರಿಹೋಗುತ್ತದೆ.[೧೧] ಇಂದ್ರನು ತನ್ನ ವಜ್ರದಿಂದ ಪರ್ವತಗಳ ಪಕ್ಕಗಳನ್ನು ಕಡಿದು ಅವುಗಳ ಹಾರಾಟವನ್ನು ತಗ್ಗಿಸಿದನೆಂಬ ಕಥೆಯೂ ಈ ಸಂದರ್ಭದಲ್ಲಿ ಬಹಳ ಅರ್ಥದಾಯಕವಾಗಿದೆ. ಶಂಬರನೊಡನೆ ಉಲ್ಲೇಖಿತರಾದ (೯.೬೧.೨) ಯದು-ತುರ್ವಶರೂ ಪರ್ವತಪ್ರದೇಶಕ್ಕೆ ಸಂಬಂಧಪಟ್ಟವರು-ಮಲೆಯರು ಆಗಿರಬಹುದಲ್ಲವೆ?

ಯದುಗಳು ಗೋವಳರು-ದನಗಾರರೆಂಬ ಬಗ್ಗೆ ಭಿನ್ನಾಭಿಪ್ರಾಯವೇ ಇಲ್ಲ. ಆದುದರಿಂದ, ಇವರಿಗೆ ತೀರ ನಿಕಟವರ್ತಿಗಳಾದ, ಒಂದೇ ಬಳಗದವರಂತಿರುವ ತುರ್ವಶರೂ ದನಗಾರರೇ ಆಗಿರಬೇಕಲ್ಲವೆ? ತುರ್ವಶರಿಗೆ ಋಗ್ವೇದದಲ್ಲಿ 'ತುರ್ವ' ರೆಂದು ಒಂದೆಡೆಗೆ ಹೇಳಿದೆ. (X. ೬೨.೧೦.) ಈ ತುರ್ವರು ಅಥವಾ ತುರ್ವಶರು ಪುರಾಣಗಳಲ್ಲಿ ತುರ್ವಸುಗಳೆಂಬ ಹೆಸರಿನಿಂದ ವರ್ಣಿಸಲ್ಪಟ್ಟಿದ್ದಾರೆ.[೧೨] ವಸು ಎಂದರೆ ಧನ, ಹಾಗಾದರೆ 'ತುರ್ವಿನ' ವಸು (ಎಂದರೆ ಧನ)ವುಳ್ಳ ಜನಾಂಗವಿದು ಎಂದಂತಾಯಿತು. ಇನ್ನು ದನಗಾರರಾದ ಇವರ ಧನ-ದನವು ಆವುದು? ತರ್-ತುರು-ತರುವ-ತುರ್ವ ಎಂದರೇನು? ಇಲ್ಲಿ ತುರು ಎಂದರೆ ಆಕಳು ಎಂದೇ ಅರ್ಥ ಪ್ರತೀತಿಯಾಗುವುದಿಲ್ಲವೆ? 'ವಶಾ' ಎಂದರೆ ವೈದಿಕ ಸಾಹಿತ್ಯದಲ್ಲಿ ಆಕಳು ಎಂಬರ್ಥ. ಋಗ್ವೇದದಲ್ಲಿ 'ವಶ' ಎಂಬ ಒಂದು ಜನಾಂಗದ ಉಲ್ಲೇಖವಿದೆ (Vedic Index, II. p. 273). ವಶರೂ ಗೋವಳರಾಗಿರಬೇಕು. ಯಾದವರ ಹತ್ತರಿನವರಾದ ತುರ್ವಶರಂತೂ ಗೋವಳರೇ. ಆದಕಾರಣ 'ತುರ್ವಶ' ಇದೂ ಒಂದು "ಕೂಡಲಸಂಗಮ" ಜಾತಿಯಶಬ್ದ. ಇದರಲ್ಲಿ ಎರಡು ಭಾಷೆಗಳ, ಎರಡು ಜನಾಂಗಗಳ ಸಂಗಮವು

ಗೋಚರವಾಗುತ್ತಿದೆ. ಅಂತೂ ತುರ್ವರು-ತುರ್ವಶರು ತುರುಕಾರರು; ಹಟ್ಟಿಕಾರರು. ತಮಿಳು ಕಾವ್ಯಗಳಲ್ಲಿ ವರ್ಣಿತರಾದ ಇಡೈಯರು.

ಇದರಂತೆ ಯದುಗಳಿಗೂ ದ್ರಾವಿಡ ಹಟ್ಟಿಕಾರರಿಗೂ ನಿಕಟ ಸಂಬಂಧವಿರುವದನ್ನು ಇನ್ನೊಂದು ಬಗೆಯಿಂದಲೂ ತೋರಿಸಿಕೊಡಬಹುದಾಗಿದೆ. ಯದುಗಳಿಗೆ ಋಗ್ವೇದದಲ್ಲಿ ಒಂದೆಡೆಗೆ ಯಾದ್ವರೆಂದೂ ಹೇಳಿದೆ (VII. ೧೯.೫). ಇಂದಿನ ಜಾಧವ ಮನೆತನದವರು ಯಾದವರೊಡನೆ ತಮ್ಮ ಸಂಬಂಧವನ್ನು ಹೇಳುತ್ತಾರೆ. ಯ=ಜ ; ಉದಾಹರಣಾರ್ಥವಾಗಿ ಯಮುನಾ / ಜಮುನಾ, ಯಾತ್ರೆ / ಜಾತ್ರೆ ಮುಂತಾದುವು, ಇದರಂತೆ ತವರ್ಗ ಟವರ್ಗಗಳ ಪಲ್ಲಟದ ಉದಾಹರಣಗಳಿಗೂ ಕೊರತೆಯಿಲ್ಲ (ಲನೆಯ ಟಿಪ್ಪಣಿಯಲ್ಲಿ ಕೊಟ್ಟ ಉದಾಹರಣೆಗಳನ್ನು ನೋಡಿ). ಆದುದರಿಂದ, ಪ್ರಾಕೃತ ಜಾಧವ-ಜಾಡವನೇ ಸಂಸ್ಕೃತ ಯಾದ್ವ-ಯಾದವನೆಂದು ವ್ಯಕ್ತವಾಗುತ್ತದೆ. ಇವರೇ ತಮಿಳು ಸಾಹಿತ್ಯದೊಳಗಿನ ಮರವರು; ಇಡೈಯರ ಸಂಬಂಧಿಗಳು; ಆದುದರಿಂದ "ತುರ್ವ-ಯಾದ್ವರು" (ತುರ್ವಶರೂ ಯದುಗಳೂ) ತುರುಕಾರರು ಜಾಡರು; 'ದ್ರಾವಿಡ' ವರ್ಗದ ಹಟ್ಟಿಕಾರ ಜನಾಂಗದ ಮೂಲಾಧಾರರು..

ಋಗ್ವೇದದಲ್ಲಿ ಹೀಗೆ 'ದ್ರಾವಿಡ'ಹಟ್ಟಿಕಾರರನ್ನು ತಂದಿಡುವುದು, ತುರ್ವಶ-ಯದುಗಳನ್ನು ತುರುಕಾರ-ಜಾಡರ ಮೊದಲಿಗರೆಂದು ಪ್ರತಿಪಾದಿಸುವುದು, ಸಾಹಸವೇ ಸರಿ. ಆದರೆ, ವಸ್ತುಸ್ಥಿತಿಯು (facts) ಒತ್ತಾಯ ಪಡಿಸುತ್ತದೆ. ವೈದಿಕ ವಾಙ್ಮಯದಲ್ಲಿ "ದ್ರಾವಿಡ"ವೆಂದು ಹೇಳುವ ಹಲವು ಶಬ್ದಗಳಿದ್ದುದು ಸಿದ್ಧವಾಗಿದೆ.[೧೩] ವೇದ ಕಾಲದಲ್ಲಿ ಆರ್ಯರೊಡನೆ ಹೋರಾಡಿದ ದಸ್ಯು, ದಾಸರೆಂದು ಉಲ್ಲೇಖಿಸಲ್ಪಟ್ಟ ಒಂದು ಜನಾಂಗವಿದ್ದುದೂ ಸರ್ವಸಮ್ಮತವಾಗಿದೆ. ಉತ್ತರ ಹಿಂದುಸ್ತಾನದಲ್ಲಿ (ಗಂಗಾಯಮುನಾ ನದಿಗಳ ನಾಡಿನಲ್ಲಿ) 'ಆರ್ಯ-ದ್ರಾವಿಡ' ಮಿಶ್ರಣದ ನಿಶ್ಚಿತವಾದ ಕುರುಹುಗಳನ್ನು ಕಣ್ಣು, ಮೂಗು, ಬಣ್ಣಗಳಿಂದ ನಿರ್ಧರಿಸಲಾಗಿದೆ. ಪಾಲಿ, ಪಾಕೃತ ಭಾಷೆಗಳಲ್ಲಿಯೂ ಹಿಂದುಸ್ತಾನಿ ಬಂಗಾಲಿ ಮೊದಲಾದ ಸಂಸ್ಕೃತೋದ್ಭವ ಆಧುನಿಕ ದೇಶಭಾಷೆಗಳಲ್ಲಿಯೂ ಎಷ್ಟೋ "ದ್ರಾವಿಡ" ಅಂಶಗಳಿರುವುದು ಅನುಭವಕ್ಕೆ ಬಂದಿದೆ. ಇಷ್ಟೆಲ್ಲ ಸಂಗತಿಗಳಲ್ಲದೆ ಬಲೂಚಿಸ್ಥಾನದ ಮಧ್ಯದಲ್ಲಿ ಇನ್ನೂ ಜೀವಂತವಾಗಿರುವ "ಬ್ರಾಹೂಯೀ" ಎಂಬ "ದ್ರಾವಿಡ" ವರ್ಗದ ಭಾಷೆಯು "ನಾನಿಲ್ಲಿ ಹೇಗೆ? ಉತ್ತರ ಕೊಡಿ" ಎಂದು ಸಂಶೋಧಕರನ್ನೆಲ್ಲ ವಿಚಾರಿಸುತ್ತಲಿದೆ.

ಇಲ್ಲಿ ಅಡಿಗಡಿಗೆ "ದ್ರಾವಿಡ," "ದ್ರಾವಿಡ" ಎಂದು ಹೇಳುವ ಉತ್ತರವು ಅಷ್ಟು ಸಮಾಧಾನಕರವಿಲ್ಲ. 'ದ್ರಾವಿಡ' ರೆಂದು ಆಧುನಿಕ ವಿದ್ವಾಂಸರು ಹೇಳುವುದು ಈ ಜನಾಂಗದ ಮೂಲ ವಂಶಕ್ಕೆ. ಸಂಸ್ಕೃತ ಸಾಹಿತ್ಯದಲ್ಲಿ ದ್ರಾವಿಡ ಶಬ್ದವು ಇಷ್ಟು ವಿಸ್ತೃತವಾದ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿಲ್ಲ.* ಚೋಳ, ಚೇರ, ಪಾಂಡ್ಯಾದಿಗಳ ನಾಡಿಗೂ, ಜನಕ್ಕೂ ಮುಖ್ಯವಾಗಿ ದ್ರಾವಿಡರೆಂದು ಹೆಸರು; ಇವರೇ ಇಂದಿನ ತಮಿಳರು. ತಮಿಳರ ಭಾಷೆ ಮತ್ತು ಇತಿಹಾಸಗಳನ್ನು ವಿಮರ್ಶಿಸಿದರೆ ವೇದಕಾಲದಲ್ಲಿ ಆರ್ಯರೊಡನೆ ಸಂಬಂಧ ಬಂದುದು ಈ ಜನಾಂಗದೊಡನೆ ಅಲ್ಲವೇ ಅಲ್ಲವೆಂದು ಕಂಡುಬರುತ್ತದೆ. ಡಾ. ಕೃಷ್ಣಸ್ವಾಮಿ ಅಯ್ಯಂಗಾರ್ಯರು ಅಥವಾ ಪಿ. ಟಿ. ಶ್ರೀನಿವಾಸ ಅಯ್ಯಂಗಾರ್ಯರು ಬರೆದ ತಮಿಳರ ಪ್ರಾಚೀನ ಇತಿಹಾಸದಲ್ಲಿ ತುಂಗಾ-ಕೃಷ್ಣಾ ನದಿಗಳ ಮೇಲ್ಗಡೆಯನಾಡು ಈ ಜನಾಂಗದ ವಿಶೇಷ ಕಾರ್ಯಕ್ಷೇತ್ರವಾಗಿದ್ದುದರ ಉಲ್ಲೇಖಗಳೇ ಇಲ್ಲ; ಉತ್ತರ ಭಾರತದೊಡನೆ ನಿಕಟ ಸಂಬಂಧವಿದ್ದುದನ್ನು ಸೂಚಿಸುವ ಪರಂಪರೆ, ದಂತ ಕಥೆಗಳು ಸಹ ಇಲ್ಲ! ವೇದಗಳ ಕಾಲದ ಆರ್ಯಭೂಮಿ ಸಪ್ತಸಿಂಧುವಿನ ನೆರೆಹೊರೆಯ ನಾಡು; ನಮ್ಮ ತಮಿಳರ ನಾಡು ಡಾ. ಎಸ್. ಕೃಷ್ಣಸ್ವಾಮಿಯವರ ಅಭಿಪ್ರಾಯದಂತೆ

---

* 'ದ್ರಾವಿಡ' ಎಂಬ ಪರಿಭಾಷೆಯನ್ನು ಸಾಂಸ್ಕೃತಿಕ ಅನುಸಂಧಾನದ ಮಾರ್ಗದಲ್ಲಿ ಬಳಸುವುದು ಯುಕ್ತವಲ್ಲವೆಂದು ಶಂಬಾ ಅವರು ಅನೇಕ ಗ್ರಂಥಗಳಲ್ಲಿ ಹೇಳಿದ್ದಾರೆ. 'ಮಹಾರಾಷ್ಟ್ರದ ಮೂಲ' ಹಾಗೂ 'ಮರ್ಹಾಟೀ ಸಂಸ್ಕೃತಿ: ಕೆಲವು ಸಮಸ್ಯೆಗಳು' ಎಂಬೆರಡು ಗ್ರಂಥಗಳ ಹಲವು ಭಾಗಗಳಲ್ಲಿ ಈ ಚರ್ಚೆಗಳ ಮುಖ್ಯ ಆಶಯಗಳೂ ಆಗಿವೆ. (ಸಂ)

ಸಹ ಕೃಷ್ಣೆಯಿಂದ ದಕ್ಷಿಣಕ್ಕೆ! ಹಾಗಾದರೆ ವೇದಾದಿಗಳಲ್ಲಿ ಕಂಡುಬರುವ 'ದ್ರಾವಿಡ' ಅಂಶಗಳಿಗೆ ಕಾರಣರು ಯಾರು? ತಮಿಳು ಭಾಷೆಯೊಡನೆ ವೇದಕಾಲದಿಂದಲೇ ಸಂಸ್ಕೃತ ಭಾಷೆಯ ಸಂಪರ್ಕವುಂಟಾಗಿದ್ದರೆ ತಮಿಳು ಇಂದಿಗೂ ಇಷ್ಟು ತನ್ನ ಪ್ರಾಚೀನ ಸ್ಥಿತಿಯನ್ನು ಕಾಯ್ದುಕೊಳ್ಳುವುದಕ್ಕೇ ಸಾಧ್ಯವಿಲ್ಲ. ಆರ್ಯರ ಗಾಳಿ ಸಹ ಸೋಂಕದಷ್ಟು ದೂರದಲ್ಲಿ, ಆರ್ಯರ ಸ್ವಾಭಿಮಾನದ ಆರಂಭದ ಉತ್ಸಾಹದ ಉಕ್ಕು ಕಡಿಮೆಯಾಗುವ ವರೆಗೂ ಅನೇಕ ಶತಮಾನಗಳ ವರೆಗೆ (ಹೆಚ್ಚಾಗಿ ತಮ್ಮಷ್ಟಕ್ಕೆ ತಾವೇ) ನೆಲಸಿದ್ದರಿಂದಲೆ ತಮಿಳು ಭಾಷೆಯು ವಿಶೇಷ ವ್ಯತ್ಯಾಸಗಳನ್ನು ಹೊಂದದೆ ಹಾಗೆ ಉಳಿಯಿತು. ಆದುದರಿಂದ, ಸಂಸ್ಕೃತ ಭಾಷೆಯ ಮೇಲೆ ಪರಿಣಾಮ ಮಾಡಿದವರು, ಉತ್ತರ ಭಾರತದಲ್ಲಿ ಆರ್ಯರೊಡನೆ ಸಂಬಂಧ ಬಂದವರು ತಮಿಳ-ದ್ರಾವಿಡರಲ್ಲ; ತಮಿಳರ ಉತ್ತರಕ್ಕಿರುವ 'ವಡುಕರು.' ಎಂದರೆ ಈ ಮೊದಲು ವಿವರಿಸಿದ ಹಟ್ಟಿಕಾರ-ದ್ರಾವಿಡರೆ ಇದಕ್ಕೆಲ್ಲ ಮುಖ್ಯ ಕಾರಣರೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ಯದು-ತುವಶರು ಗೋವಳರು, ದನಗಾರರೆಂಬೊಂದೇ ಮಾತಿನಿಂದಲೇ ಇವರು 'ದ್ರಾವಿಡ' ಹಟ್ಟಿಕಾರರೆಂದು ಹೇಳುವುದು ಹುಚ್ಚುತನವಾದೀತು. ಹಾಗೆ ದನಗಾರಿಕೆಯೇ ಮುಖ್ಯ ಹೋರೆಯಾಗಿರುವ ಜನಾಂಗಗಳೆಷ್ಟಿಲ್ಲ? ಆಭೀರರ ಉದಾಹರಣೆಯೇ ಇದೆ. ಆದರೆ ಇದಕ್ಕಿಂತಲೂ ಮಹತ್ವದ ಹಲವು ಕಾರಣಗಳು ಇದ್ದುದರಿಂದಲೇ ಇವರು ಆರ್ಯೇತರರೆಂದು ಹೇಳಬೇಕಾಗಿದೆ. ಯದುಗಳ-ಯಾದವರ ಪರಂಪರೆ, ಇವರಲ್ಲಿ ಸೇರಿಕೊಂಡಿರುವ ಅಂಧಕ-ವೃಷ್ಣಿಗಳಲ್ಲದೆ ಪ್ರೊ. ಲೆವಿಯವರು ಆಸ್ಟ್ರೋ-ಏಷಿಯಾಟಿಕ್‌ರೆಂದು ಹೇಳುವ ಭೋಜಕರು ಮೊದಲಾದ ಜನಾಂಗಗಳೊಡನೆ ಇರುವ ಇವರ ಬಾಂಧವ್ಯ, ಋಗ್ವೇದದಲ್ಲಿಯೇ ದಾಸರೆಂಬಂತೆ ಇರುವ ಕೆಲವು ವರ್ಣನೆಗಳು, ಜಾಡವ-ತುರುಕಾರರೊಡನೆ ಇರುವ ನಾಮಸಾದೃಶ್ಯ, ವೃತ್ತಿಸಾದೃಶ್ಯಾದಿ ಕಾರಣಗಳಿಂದ (ಪಣಿಗಳು-ಹಣಬರ ಹೊರತು) ಇವೆರಡೂ ತಂಡಗಳು ವೇದಕಾಲದ ಹಟ್ಟಿಕಾರರವೆಂದೂ ಇವರೆ ವೇದಾದಿಗಳಲ್ಲಿರುವ 'ದ್ರಾವಿಡ' ಅಂಶಕ್ಕೆ ಮುಖ್ಯಕಾರಣರೆಂದೂ ಹೇಳಬೇಕಾಗುತ್ತದೆ. ಹಿಂದೂದೇಶದ ಐತಿಹಾಸಿಕ ಪರಂಪರೆಯನ್ನು ಅರಿತುಕೊಳ್ಳಲಿಕ್ಕೆ ಪುರಾಣಗಳು ಬಹಳ ಮಹತ್ವದ ಸಾಧನಗಳಾಗಿವೆ. ಬ್ರಹ್ಮಾಂಡ, ಬ್ರಹ್ಮ, ವಾಯು, ಮತ್ಸ್ಯ ಮೊದಲಾದ ಒಂಬತ್ತು ಪುರಾಣಗಳಲ್ಲಿ ಯದು-ತುರ್ವಶರ ವಂಶ ವೃಕ್ಷವು ಸಿಕ್ಕುತ್ತದೆ.[೧೪] ನಹುಷನ ಮಗನಾದ ಯಯಾತಿಯು ಸಪ್ತದ್ವೀಪಗಳನ್ನು ಗೆದ್ದು ತನ್ನ ಮಕ್ಕಳಿಗೆ ಹಂಚುತ್ತಾನೆ. ತುರ್ವಸು ಎಂಬ ಮಗನಿಗೆ ದಕ್ಷಿಣಾಪಥವನ್ನು ಕೊಟ್ಟಹಾಗೆ ಹರಿವಂಶಾದಿಗಳಲ್ಲಿ ಉಲ್ಲೇಖವಿದೆ. ಪ್ರಾಚೀನ ಕಾಲಕ್ಕೆ ದಕ್ಷಿಣದಲ್ಲಿ ಕುರುಂಬರು-ಗೋವಳರು ರಾಜ್ಯವಾಳಿದರೆಂದು ಐತಿಹ್ಯವಿದೆ.[೧೫] ಇಲ್ಲಿ ಪುರಾಣ ಮತ್ತು ಐತಿಹಾಸಿಕ ಪರಂಪರೆಗಳೆರಡೂ ಎಷ್ಟು ಒಂದಕ್ಕೊಂದು ಪೋಷಕವಾಗಿವೆ! ಇವೆಲ್ಲಕ್ಕೂ ಕಳಸವನ್ನಿಡುವ ಇನ್ನೊಂದು ಪರಂಪರೆಯಿದೆ. ಗಂಗರಾಜರು ತಾವು ತುರ್ವಶರ ವಂಶಜರೆಂದು ಹೇಳಿಕೊಳ್ಳುತ್ತಾರೆ! ತುರ್ವನಿಗೆ ಮಕ್ಕಳಿರಲಿಲ್ಲವಂತೆ; ಗಂಗೆಯ ವರಪ್ರಸಾದದಿಂದ ಮಗನನ್ನು ಪಡೆದುದರಿಂದ ಗಂಗರೆಂಬ ಹೆಸರು ಬಂದಿತಂತೆ! ಇವರು, ಗಂಗಾತೀರದಿಂದ ಇತ್ತ ಬಂದು ಆಳಿದಂತೆ ದಂತಕಥೆಗಳಿವೆ.[೧೬] ಜಾಹ್ನವೇಯ ವಂಶದ ಗಂಗರು ಕಾಣ್ವಾಯನ ಗೋತ್ರದವರು! ಈ ಪರಂಪರೆಯಲ್ಲಿ ಎಷ್ಟು ಹುರುಳಿದೆ! ಕಾಣ್ವರು ತುರ್ವಶರ ಪೌರೋಹಿತ್ಯವನ್ನು ಸ್ವೀಕರಿಸಿದ್ದರೆಂಬುದಕ್ಕೆ ಇದಕ್ಕಿಂತಲೂ ಹೆಚ್ಚಿನ ಆಧಾರ ಏನು ಬೇಕು? ಇವೆಲ್ಲ ಸಂಗತಿಗಳನ್ನು ಸಮ್ಯಕ್‌ದೃಷ್ಟಿಯಿಂದ ವಿಚಾರಿಸಿದರೆ ದಕ್ಷಿಣೋತ್ತರಗಳ ಹಟ್ಟಿಕಾರರಲ್ಲಿ ಎಷ್ಟು ಹತ್ತರಿನ ಸಂಬಂಧವಿದೆಯೆಂಬುದು ಚೆನ್ನಾಗಿ ಗೊತ್ತಾಗುವುದು. ಗಂಗರಾಜರಲ್ಲಿ ಕೆಲವು ಹೆಸರುಗಳನ್ನು ನೋಡಿದರೆ, ಅವರ ವೈಶಿಷ್ಟ್ಯವು ಇನ್ನೂ ಸ್ಪಷ್ಟವಾಗುವುದು. ಅವಿನೀತ, ದುರ್ವಿನೀತ, ಬೂತುಗ ಇವು ಆರ್ಯರ ಹೆಸರುಗಳೆಂದು ಹೇಳುವುದು ಹೇಗೆ? ಗಂಗವಾಡಿಯ ಗಂಗಡಿಕಾರರು ಕುರುಬರೊಡನೆ ಅನ್ನೋದಕ ವ್ಯವಹಾರವನ್ನು ಮಾಡುವರು[೧೭] ತುರ್ವಶರು ಚೋಳ, ಪಾಂಡ್ಯ, ಕೇರಳಾದಿ ರಾಜ್ಯಗಳನ್ನು ಸ್ಥಾಪಿಸಿಕೊಂಡು ನೆಲಸಿದರೆಂದು ಪದ್ಮಪುರಾಣವು ಹೇಳುತ್ತದೆ. (VI ೨೫೦. ೧-೨). "ಇದು ಅಸಂಭವನೀಯವಾಗಿಲ್ಲ. ತುರ್ವಸುಗಳು ಈ ಬಗೆಯಾಗಿ ರಾಜ್ಯಗಳನ್ನು ಸ್ಥಾಪಿಸಿ ಇಳಿಸಿರಲಿಕ್ಕೆ ಸಾಕು;" ಎಂದು ಪಾರ್ಗಿಟರರೂ ಒಪ್ಪಿಕೊಳ್ಳುತ್ತಾರೆ.[೧೮]

ಹಟ್ಟಿಕಾರರಲ್ಲಿ ಒಂದು ಶಾಖೆಯವರು ಗೋವಳರಾಗಿ 'ಗೋ' (ಪೃಥ್ವಿ) ಪಾಲಕರೂ ಆದರು; ಇನ್ನೊಂದು ವಿಭಾಗದವರು ಹಟ್ಟಿಕಾರ ಜಾಡರು ನೇಗಿಯಲ್ಲಿ ನೈಪುಣ್ಯವನ್ನು ಸಂಪಾದಿಸಿ ಅವರಲ್ಲಿಯೂ ಲೋಕವಿಖ್ಯಾತರಾದರು. ಪಶ್ಚಿಮದೇಶಗಳಿಗೆ ಹಿಂದೂದೇಶದ ಬಟ್ಟೆಯೇ ಹೋಗುತ್ತಿದ್ದಿತೆಂದು ಅನೇಕ ಸಂಶೋಧಕರು ಬಲವಾದ ಪ್ರಮಾಣಗಳಿಂದ ಸಿದ್ಧಪಡಿಸಿದ್ದಾರೆ. ಪ್ರಾಚೀನ ಇಜಿಪ್ತಿನಲ್ಲಿ ಬಟ್ಟೆಗೆ 'ಪಟ'ವೆಂಬ ಹೆಸರಿದ್ದಿತೆಂದೂ ಅದು ಹಿಂದೂ ದೇಶದಿಂದ ಬರುತ್ತಿದ್ದಿತೆಂದೂ ಪಂಚಾನನ ಮಿತ್ರರು ಪ್ರತಿಪಾದಿಸುತ್ತಾರೆ.[೧೯] 'ಪ್ರಾಚೀನ ಇಜಿಪ್ತಿನಲ್ಲಿ ವೃಷಭಧ್ವಜವಿದೆ. ಇದು ಪೂರ್ವದೇಶದಿಂದ ಎಂದರೆ ಹಿಂದುಸ್ತಾನದಿಂದ-ಬಂದುದು, ಎಂದು ಎಚ್. ಫ್ರಾಂಕ ಫೋರ್ಟರ ಅಭಿಪ್ರಾಯ.[೨೦] ನಮ್ಮ ಹಟ್ಟಿಕಾರರೂ ವೃಷಭ (ನಂದಿ) ಧ್ವಜವೇ; ಸಿಂಧುತೀರದ ಹರಪ್ಪಾ, ಮೋಹೆಂಜೊದಾರೊ ಗಳಲ್ಲಿ ಸಿಕ್ಕ ಹಲವು ವಸ್ತುಗಳಲ್ಲಿ ಎತ್ತಿನ ಮುದ್ರೆಗಳು ಬಹಳೇ ಮಹತ್ವದವು ಗಳಾಗಿವೆ. ಅದರಂತೆ, ಅಲ್ಲಿ ದೊರೆತ ಬಗೆ ಬಗೆಯ ಆಕಾರದ ಶಿವಲಿಂಗಗಳೂ ಪ್ರೇಕ್ಷಣೀಯವಾಗಿವೆ. ಹಟ್ಟಿಕಾರರು ರುದ್ರಗಣ; ಶಿವಭಕ್ತರು, ಈ ಸಂಗತಿಗಳಲ್ಲಿ ಪರಸ್ಪರ ಏನೂ ಸಂಬಂಧವು ಇರಲಿಕ್ಕಿಲ್ಲವೆ? ಹರಪ್ಪಾ, ಮೊಹೆಂಜೋದಾರೊದಲ್ಲಿ ದೊರೆತ ಬಂಗಾರವು, ಕೋಲಾರ, ಹಟ್ಟಿ (ಊರು)ಗಳಿಂದ ಬಂದುದಿರಬೇಕೆಂದು ಮಾರ್ಶಲರ ಅಭಿಪ್ರಾಯವಿದೆ.[೨೧]

ಇಜಿಪ್ತ ಮತ್ತು ಸೈಂಧವ ಸಂಸ್ಕೃತಿಗಳು ವೇದಪೂರ್ವಕಾಲಕ್ಕೆ ಸೇರಿದವು ಎಂದು ಒಂದು ಮತವಿದೆ. ಹಾಗಾದರೆ ಇಜಿಪ್ತಿಗೆ ಪಟ-ಬಟ್ಟೆಕಳಿಸುವ ನಂದಿಧ್ವಜರಾದ ಹಟ್ಟಿಕಾರರು ೬೦೦೦-೭೦೦೦ ವರುಷಗಳ ಪ್ರಾಚೀನ ಜನಾಂಗವೆಂದು ತಾನೇ ಸಿದ್ಧವಾಗುತ್ತಿದೆ. ಹಡಗಿನ ಚಿತ್ರವುಳ್ಳ ಕುರು(೦) ಬರ ನಾಣ್ಯಗಳು ಹಟ್ಟಿಕಾರರ ಬಟ್ಟೆ ಮೊದಲಾದ ಸರಕಿನ ಪರದೇಶದ ವ್ಯಾಪಾರದ ದ್ಯೋತಕಗಳಾಗಿವೆ. ಇವು 'ಪರದರು' ಹರಿದಾಡಿ ದೂರ ದೂರಿನ ದೇಶಗಳೊಡನೆ ವ್ಯಾಪಾರ ಮಾಡುತ್ತಿದ್ದುದರ ಕುರುಹುಗಳಲ್ಲವೆ? ಯಾದವಮ್ ಎಂದರೆ ಆಕಳ ಹಿಂಡು; ಯಾದಸ್ ಎಂದರೆ ನೀರು; ಯಾದಸಾಂಪತಿಃ ಎಂದರೆ ವರುಣ; ಜಲದೇವತೆ. ಯಾದವರಲ್ಲಿ ಹಲರು ಜಲ ಸಂಚಾರಿಗಳೂ ಆಗಿರಬೇಕೆಂದೂ ಇವರೇ ಇಜಿಪ್ತಿನವರೆಗೆ ಹಡಗಿನಿಂದ ವ್ಯಾಪಾರ ನಡೆಸುತ್ತಿರಬೇಕೆಂದೂ ಊಹಿಸಲು ಅವಕಾಶವಿದೆ. ಅಗ್ನಿಯು ಯದುಗಳನ್ನು ದೂರದಿಂದ ಕರೆತಂದ ಹಾಗೆ ವರ್ಣನೆಯಿದೆ (ಋಕ್ ಸಂಹಿತೆ ೧. ೩೬. ೧೮). ವ್ಯಾಪಾರ ವ್ಯವಹಾರಕ್ಕಾಗಿ ಹೊರನಾಡಿನಲ್ಲಿದ್ದ, ಆರ್ಯರಿಗೆ ಅನುಕೂಲರಾಗಿದ್ದ ಕೆಲವು ಯದು- ತುರ್ವಶರನ್ನು ಕರೆಯಿಸಿಕೊಂಡ ಹಾಗೆ ತೋರುತ್ತದೆ. 'ಸಿಂಧು ತೀರದ ಅಗೆತದಲ್ಲಿ ದೊರೆತ ಪಾತ್ರೆಗಳಂತಹ ಪಾತ್ರೆಗಳೇ ಬೆಂಗಳೂರಿನ ಹತ್ತಿರ ಹುತ್ತನಹಳ್ಳಿಯಲ್ಲಿ ಸಿಕ್ಕಿವೆ, ಇವು ಲೋಹಯುಗಾರಂಭದ (Early iron age) ವಸ್ತುಗಳು,' ಎಂದು ತಜ್ಞರು ಕಂಡು ಹಿಡಿದಿದ್ದಾರೆ.[೨೨] ಕೊಡಗು, ನೀಲಗಿರಿಗಳಲ್ಲಿ ದೊರೆತ ಪ್ರಾಚೀನ ಅವಶೇಷಗಳನ್ನು ಕುರಿತು ವಾಲಹೌಸರು ಬರೆದ ಲೇಖನಗಳು ಅಭ್ಯಸನೀಯವಾಗಿವೆ.[೨೩] ಆರ್ಯ ಪೂರ್ವಕಾಲದ ವಿಶೇಷ ಪ್ರಕಾರದ ಗೋರಿಗಳು ಅಗಡಿ, ಸಿಡೇನೂರು, ರಟ್ಟಿಹಳ್ಳಿ, ಬ್ಯಾಡಗಿ, ಕೊಯಿಮತ್ತೂರು, ಹೈದರಾಬಾದ ಸಂಸ್ಥಾನ ಮುಂತಾದ ಕಡೆಗೆ ಈಗಲೂ ಸಿಕ್ಕುತ್ತಿವೆ. ಬಳ್ಳಾರಿ, ಕೊಯಿಮತ್ತೂರ ಜಿಲ್ಲೆಗಳಲ್ಲಿ ಈ ಬಗೆಯ ಅವಶೇಷಗಳು ವಿಶೇಷವಾಗಿದೆ.[೨೪] ಡಾ. ಎಂ. ಎಚ್. ಕೃಷ್ಣರು ಚಂದ್ರವಳ್ಳಿ, ಸಿದ್ದಾಪುರಗಳ ಹತ್ತಿರ ಮಾಡಿರುವ ಸಂಶೋಧನವಂತೂ ಅಪೂರ್ವವಾಗಿದೆ. 'ಚಂದ್ರವಳ್ಳಿಯಲ್ಲಿ ಸಾವಿರಕ್ಕಿಂತಲೂ ಹೆಚ್ಚು ಅವಶೇಷಗಳು ದೊರೆತಿವೆ. ಅವುಗಳನ್ನು ಮೈಸೂರಿಗೆ ಹೆಚ್ಚಿನ ಅಭ್ಯಾಸಕ್ಕಾಗಿ ಒಯ್ಯಲಾಗಿದೆ.' ಸಿದ್ದಾಪುರದ ಹತ್ತಿರ (ಮೊಳಕಾಲ್ಮೂರು ತಾಲೂಕು) ಅಶೋಕಶಾಸನದ ಬಳಿಯಲ್ಲಿ ಇತಿಹಾಸ-ಪೂರ್ವಕಾಲದ ಮಹತ್ವದ ಸ್ಥಳವು ದೊರೆತಿದೆ. ಅದು ಸುಮಾರು ೪೦೦೦-೫೦೦೦ ವರುಷಗಳಷ್ಟು ಪ್ರಾಚೀನ ಕಾಲದ್ದಿರಬೇಕೆಂದು ಊಹಿಸಿದ್ದಾರೆ. ಅದರಂತೆ ಕಿತ್ತೂರು ಎಂಬಲ್ಲಿ ಪುನ್ನಾಟದ ಪ್ರಾಚೀನ ಕುರುಹುಗಳು ದೊರೆಯುತ್ತಿರುವವಂತೆ.[೨೫] ದಕ್ಷಿಣಾಪಥದಲ್ಲಿ ದೊರೆವ ಗೋರಿ ಮೊದಲಾದ ಅವಶೇಷಗಳು ಪ್ರಾಚೀನ ಕಾಲದ ಕುರುಂಬ (ಹಟ್ಟಿಕಾರ)ರವೆಂದು ಸರ್ ಇಲಿಯಟರ ಅಭಿಪ್ರಾಯವಿದೆ.

ಇಂತಿವೆಲ್ಲ ಕಾರಣಗಳನ್ನು ಪರ್ಯಾಲೋಚಿಸಿದರೆ ನಮ್ಮ ಹಟ್ಟಿಗಾರರ ಪ್ರಾಚೀನತೆಯ ಬಗ್ಗೆ ಸಂದೇಹವೆ ಉಳಿಯುವದಿಲ್ಲ. ೬-೭ ಸಾವಿರ ವರುಷಗಳ ಆ ಪ್ರಾಚೀನ ಸಮಾಜದಲ್ಲಿ ಯದು-ತುರ್ವಶರಂತಹ ಕೆಲವು ಪಂಗಡಗಳು ವಿಶೇಷವಾಗಿ ಸುಧಾರಿಸಿದ್ದುದರಿಂದ ಅವುಗಳೊಳಗಿನ ಮಹತ್ವದ ಭಾಗವು ವೈದಿಕಸಂಸ್ಕೃತಿಯಲ್ಲಿ ಒಂದುಗೂಡಿ ಹೋಗಲು ವಿಶೇಷ ಅಡ್ಡಿಯುಂಟಾಗಲಿಲ್ಲ. ಸಾಧಾರಣವಾಗಿ ಸಮಾನ ಸಂಸ್ಕೃತಿಯ ಆ ಯದು-ತುರ್ವಶರನ್ನು ಆರ್ಯರು ಒಳಗು ಮಾಡಿಕೊಂಡುದರಿಂದ ಇವರು ಆರ್ಯರೇ ಇರಬೇಕೆಂಬ ಕಲ್ಪನೆಯಾಗಿ ಹಟ್ಟಿಕಾರರ ಪ್ರಾಚೀನ ಇತಿಹಾಸವು ಬೆಳಕಿಗೆ ಬರುವುದಕ್ಕೆ ಇಷ್ಟು ದಿನಗಳು ಹಿಡಿದವು. ಯದು-ತುರ್ವಶರು 'ದ್ರಾವಿಡ' ವರ್ಗದವರಿರಬಹುದೆ? ಎಂಬ ಬಗ್ಗೆ ಇನ್ನೂ ಏನಾದರೂ ಸ್ವಲ್ಪ ಸಂದೇಹವು ಉಳಿದಿದ್ದರೆ ಅದು ಮುಂದಿನ ಪ್ರಕರಣದೊಳಗಿನ ವಿವೇಚನೆಯಿಂದ ದೂರಾಗಬಹುದೆಂದು ಆಶೆಯಿದೆ.

ಟಿಪ್ಪಣಿ

೧. Brown C. J., ***The Coins of India,*** Heritage of India Series, p 58

೨. Dr. Ayangar S. K. , ***The Satwats*** Proceedings of The 2nd Oriental Conference;1922

೩. Oraons of Chota-Nagpur, 1915

೪. ***The Satwats***, proceedings of the Second oriental Conference, Calcutta, 1922, P. 360

೫. Mythic Society Journal Silver Jubilee November P. 39-48

೬. Mac-donell, ***Vedic Index***. Vol I and II. See Yadu, Turvasa

೭. ಅದೇ ಗ್ರಂಥ, ಅಜ, ಶಿಗ್ರು ನೋಡಿ ಭೇದ : ಎಂಬ ಇನ್ನೊಂದು ಹೆಸರೂ ಇದೆ. ಇದು ಬೇಡ ಎಂಬುದರ ಸಂಸ್ಕೃತೀಕರಣ ವಿರಬಹುದೆ? ಡ / ದ ಆದ ಹಲವು ಉದಾರಣಗಳಿವೆ. ದೋರಕಾಯಿ-ಡೋರಗಾಯಿ; ಪತ್ತನ / ಪಟ್ಟಣ; ಗದ್ದ / ಗಡ್ಡ; ವೃದ್ಧಿ / ಬಡ್ಡಿ.

೮. i Ramaprasad Chanda ***Races of India,*** p. 25

ii N.K. Duttu: Journal of the Department of Letters Calcutta University. Vol XXII, 1928, P. II

೯. ಋಗ್ವೇದ ಸಂಹಿತೆ, I ೩೬, ೧೮; ೫೪.೬; VI ೪೫, ೧; VIII ೭, ೧೮; VIII. ೯ ೧೪; ೪೫. ೨೭; X ೪೯, ೮; I. ೧೦೮; ೮.

೧೦. Mac-donell, ***Vedic index,*** vol. II. p. 315 "closely allied tribes"

೧೧. Monier Williams: ***A Sanskrit-English Dictionary***, ತುರ್ವಸು a later form of ತುರ್ವಶ p. 379

೧೨. ಡಾ ಸುನೀತಿಕುಮಾರ ಚಟರ್ಜಿಯವರ ***The Origin and Development of Bengali Language***, ಎಂಬ ವಿದ್ವನ್ಮಾನ್ಯವಾದ ಮಹಾಗ್ರಂಥದಲ್ಲಿ ಸಂಗ್ರಹಿಸಿಕೊಟ್ಟಿರುವ ಪಟ್ಟಿಯನ್ನೇ ಇಲ್ಲಿ ಕೊಟ್ಟಿದೆ; ಋಗ್ವೇದದೊಳಗಿನ ಕೆಲಶಬ್ದಗಳು : ಅಣು; ಅರಣಿ (ಅರೆಧಾತು ತಿಕ್ಕು); ಕಟುಕ (ಹದನ); ಕಪಿ; ಕುರ್ಮಾರ;ಕಲಾ; ಕಾಲ (ವೇಳೆ); ಕಿತವ (gramster) ; ಕುಟ (ಗುಡಿಸಲು); ಕುಂಡ; ಗಣ; ನಾನಾ; ನೀಲ; ನೀಹಾರ (ಹಿಮ; ಮೋಡ); ಪುಷ್ಕರ; ಪುಷ್ಪ; ಪೂಜನ; ಫಲ; ಬಿಲ; ಬೀಜ; ಮಯೂರ; ರಾತ್ರಿ; ರೂಪ; ಸಾಯಂ; ವಲ್ಗು (ಚಂದ್ರ). ಬ್ರಾಹ್ಮಣಗಳಲ್ಲಿ ಇದಕ್ಕೂ ಹೆಚ್ಚು ಶಬ್ದಗಳಿವೆ. ಅವುಗಳಲ್ಲಿ ಕೆಲವು ಮಾದರಿ: ಅಡವಿ; ಅಲರ್ಕ (ಒಂದು ಬಗೆಯ ಹೂ); ಆಡಂಬರ (ಆಡುವಾಗ ಬಾರಿಸುವ ವಾದ್ಯ; durm); ಕಂಬಳ, ಕುಲಾಲ; ಖಡ್ಗ (ಘೇಂಡಾ ಮೃಗ); ತಂಡುಲ; ತಿಲ; ಫಣ್ಣ (froth); ಮಟಚಿ (ಮಿಡಿಚಿ); ಮರ್ಕಟ; ವಲಕ್ಷ; ಬಲಕ್ಷ; ವಲ್ಲಿ; ವ್ರೀಹಿ; ಶವ (ಹೆಣ);

೧೪. Pargiter; ***Ancient Indian Historical Traditions.***

೧೫. i ***Khanadeshn Gazetteer,*** 'ಇತಿಹಾಸ'ದ ಅಧ್ಯಾಯ ನೋಡಿ

ii ***North. Kanara Gazetteer,*** ಕುರುಬರ ಬಗ್ಗೆ ಇಲಿಯಟರ ಲೇಖದ ಟಿಪ್ಪಣಿಯನ್ನು ನೋಡಿ

ii ***Coins of India***, Heritage of India Series P. 61

೧೬. i ***Indian Antiquiery***, vol. XIII P. 275

ii ರಾವಬಹದ್ದೂರ ಆರ್. ನರಸಿಂಹಾಚಾರ್ಯರು: ಸಾಹಿತ್ಯ ಪರಿಷತ್ಪತ್ರಿಕೆ ೧೯೨೪, ಅಕ್ಟೋಬರ.

೧೭. Nanjundayya H. V., ***Ethnological Survey of Mysore.*** See 'ಗಂಗಡಿಕಾರ'.

೧೮. ೧೪ನೆಯ ಟಿಪ್ಪಣಿ, ಪು. ೧೦೮

೧೯. ***Pre-Historic Culture and Races of India,*** Journal of the Department of Letters, Vol. I p. 195

೨೦. Annual bibliography of Indian Archaeology, 1935 Vol. VII P. 10; Kern Institute, Leyden, (Holland).

೨೧. Mohenjo-Daro the Indus Civilization, , Vol. II. p. 674-675

೨೨. Dr. Mujumdar, ***Exploration of Sind,*** p. 154

೨೩. ***Indian Antiquery,*** Vol. IV P. 12, 13 Vol - VII p. 176

೨೪. I ೧೯ನೆಯ ಟಿಪ್ಪಣಿಯಲ್ಲಿ ಉಲ್ಲೇಖಿತ ಲೇಖ; ಪು. ೧೭೩, ೧೭೬

ii ***Bellary Gazett,*** P. 25-17; 306;233;

೨೫. Mysore Archaeological Report, 1930

೪ನೆಯ ನೆಲೆ

ಯಾದವ-ದುಗ್ಧಾಬ್ಧಿ-ಚಂದ್ರ

ಯಾದವ ಶ್ರೀಕೃಷ್ಣನಿಗೆ ಹಾಲು-ಬೆಣ್ಣೆಗಳೆಂದರೆ ಜೀವ. ಶ್ರೀ ಕೃಷ್ಣನನ್ನು ಗೋವಿಂದ, ಗೋಪಾಲ ಎಂದು ಮುಂತಾಗಿ ಕರೆವುದುಂಟು. ಶ್ರೀ ಕೃಷ್ಣನೆ ಶ್ರೀವಿಷ್ಣುವೆಂದು ನಮ್ಮವರ ಶ್ರದ್ಧೆ. ಶ್ರೀಮನ್ಮಹಾವಿಷ್ಣುವು ಕ್ಷೀರಸಾಗರದಲ್ಲಿಯೇ ಇದ್ದು ಬಿಟ್ಟಿದ್ದಾನೆ! ಈ ಕ್ಷಿರಸಾಗರವು ಆವುದು? ಇದನ್ನು ಎಲ್ಲಿ ಕಾಣಬಹುದು? ಭಾವಲೋಕದಲ್ಲಲ್ಲದೆ ಮತ್ತೆಲ್ಲಿ?

ನಮ್ಮ ಹಟ್ಟಿಕಾರ-ದನಗಾರರು ತಮಗೆ ಹಾಲುಮತದವರೆಂದು ಹೇಳಿಕೊಳ್ಳುತ್ತಾರೆ. ಈ ಅರ್ಥದಿಂದ ಯದು-ತುರ್ವಶರೂ ಹಾಲುಮತದವರೇ. ಈ ಮೂಲಕಲ್ಪನೆಯನ್ನೇ ವಿಸ್ತರಿಸಿ ಪೌರಾಣಿಕರು ಮನೋಹರವಾದ ರೂಪಕದಿಂದ, ಅರ್ಥಪೂರ್ಣವಾದ ಸಾಂಕೇತಿಕ ಪರಿಭಾಷೆಯಿಂದ ಕ್ಷೀರ-ಸಾಗರವನ್ನು ನಿರ್ಮಿಸಿದರು. ಹಾಲಿನಂತಹ ಬೆಳ್ದಿಂಗಳನ್ನು ಸುರಿಸುವ ಚಂದಪ್ಪನು (ಸುಧಾಂಶು) ಹುಟ್ಟಿದುದು ಕ್ಷೀರಾಬ್ಧಿಯಲ್ಲಿ! ಬೆಳ್ದಿಂಗಳೆಂಬ ಹಾಲಿನಲ್ಲಿ ಬೆಣ್ಣೆಯಂತಹ ಚಂದ್ರನು! ಹುಣ್ಣಿಮೆಯ ಬೆಳ್ದಿಂಗಳ ಹಾಲಿನಲ್ಲಿ ಚಂದ್ರನು ಬೆಣ್ಣೆಯ ಗುಂಡಿನಂತೆ ತೇಲಾಡುತ್ತಿರುವ ಮನೋಹರವಾದ ದೃಶ್ಯವನ್ನು ಯಾರು ತಾನೆ ನೋಡಿಲ್ಲ? ಹಾಲು ಬೆಣ್ಣೆಗಳ ಸಾಂಕೇತಿಕ ಭಾಷೆಯು ಹಟ್ಟಿಕಾರರದು. 'ಚಂದ್ರಮಾ ಮನಸೋಜಾತಃ' ಎಂಬುದು ಆರ್ಯಪರಂಪರೆ. ಕ್ಷೀರಸಾಗರದಲ್ಲಿ ಚಂದ್ರನು ಹುಟ್ಟಿದನೆಂಬುದು ಹಾಲುಮತದವರ ಮಾತು. ಯದು-ತುರ್ವಶಾದಿಗಳು ಚಂದ್ರವಂಶದವರೆಂದು ಪುರಾಣಗಳು ಸಾರುತ್ತವೆ. ಯದು-ತುರ್ವಶರು ಮೂಲದಲ್ಲಿ ಹಾಲುಮತದವರೇ. ಹಟ್ಟಿಕಾರರು ಎಂಬುದನ್ನು ನಮ್ಮ ಪುರಾಣಕರ್ತೃಗಳು ಎಷ್ಟು ಸೂಕ್ಷ್ಮವಾಗಿ ಸೊಗಸಾಗಿ ಸೂಚಿಸಿದ್ದಾರೆ!

ಸಾವಿರ ಮಾತಿನಲ್ಲಿ ಹೇಳಲಿಕ್ಕಾಗದುದನ್ನು ಸಂಕೇತ (Symbol) ದಿಂದ ಸೂಕ್ಷ್ಮವಾಗಿ ಸ್ವಲ್ಪದರಲ್ಲಿ ಸೂಚಿಸಲಿಕ್ಕೆ ಬರುತ್ತದೆ. 'ಕಿರಿದರೊಳು ಪಿರಿದರ್ಥವನ್ನು' 'ಹೇಳುವ ಶಕ್ತಿಯು ಇದರಲ್ಲಿದೆ. ಅಧ್ಯಾತ್ಮ ಶಾಸ್ತ್ರದೊಳಗಿನ ಸಾಂಕೇತಿಕ ಪರಿಭಾಷೆಯಲ್ಲಿ ಹಿಂದೂ ಜನರಷ್ಟು ಪರಿಣತಿಯನ್ನು ಬೇರಿನ್ನಾರಾದರೂ ಸಂಪಾದಿಸಿರುವರೇ ಎಂಬ ಬಗ್ಗೆ ಸ್ವಲ್ಪ ಸಂದೇಹವಿದೆ.* ಯಾವದೇ ಶಾಸ್ತ್ರದ ಉಚ್ಚವಿಭಾಗದಲ್ಲಿ ಸಂಕೇತಗಳಿಲ್ಲದೆ ನುಡಿಯುವದಿಲ್ಲ. ಆತ್ಯಂತಿಕ ಸತ್ಯವನ್ನು ಶಬ್ದದಿಂದ ಹೇಳುವುದು ಅಸಾಧ್ಯ; ಅಲ್ಲಿ ಸಂಕೇತವೇಬೇಕು. ಆದರೆ, ಸಂಕೇತದಲ್ಲಿ ಒಂದು ಕೊರತೆಯೂ ಇದೆ.

---

* ಸಾಂಕೇತಿಕ ಪರಿಭಾಷಾ ಸೂತ್ರವನ್ನು ಶಂಬಾ ಅವರು ಸಾಂಸ್ಕೃತಿಕ ಅಧ್ಯಯನದಲ್ಲಿ ಮುಕ್ತವಾಗಿ ಬಳಸಿಕೊಂಡರು. ಅದು ಮುಂದೆ ಅವರ ಮುಖ್ಯ ವೈಚಾರಿಕ ನೆಲೆಯೂ ಆಯಿತು. (ಸಂ)

ಅದನ್ನು ಬಲ್ಲವನೆ ಬಲ್ಲ. ಅರಿತವರ ಪರಂಪರೆಯು ಕಟ್ಟಾಗುತ್ತಲೆ ಆ ಸಂಕೇತವು ಅರ್ಥಹೀನ, ನಿರರ್ಥಕ; ನಿರುಪಯುಕ್ತ. ನಮ್ಮ ಪ್ರಾಚೀನರ ಲೇಖನದೊಳಗಿನ ಎಷ್ಟೋ ಭಾಗವೂ ಸಹ ಯಾರಿಗೂ ಬಿಚ್ಚಲಾರದ ಕಗ್ಗಂಟು ಆಗಿದೆ ಈಗ. ಹಟ್ಟಿಕಾರರಿಗೆ ಚಂದ್ರವಂಶದವರೆಂದು ಹೇಳಿದುದರಲ್ಲಿ ಎಷ್ಟು ಔಚಿತ್ಯವಿದೆ! ಯುರೋಪೀಯರು 'ದ್ರಾವಿಡರೆಂದು' ಹೇಳುವ ಪ್ರಾಚೀನ ಮೂಲಜನಾಂಗದವರೆಲ್ಲ ಹಟ್ಟಿಕಾರರಾಗಿದ್ದರು. ಶ್ರೀ. ಪಿ. ಟಿ. ಶ್ರೀನಿವಾಸ ಅಯ್ಯಂಗಾರ್ಕರು ತಮಿಳರ ಆರಂಭವನ್ನು ಕುರುಂಬರಿಂದಲೇ ಹೇಳಿದುದನ್ನು ಈ ಮೊದಲೆ ಸೂಚಿಸಿದ್ದಾಗಿದೆ. ವೆಳ್ಳರು ತಮಿಳು ನಾಡಿನ ಮುಖ್ಯಜನಾಂಗ. ವೆಳ್ಳರಲ್ಲಿ ದನಗಾರ, ಒಕ್ಕಲ, ವ್ಯಾಪಾರಿ, ಎಂಬೀ ಬಗೆಯಾಗಿ, ದಿವಾಕರನೆಂಬ ಟಿಪ್ಪಣಿಕಾರನು (೧೧೦೦-೧೨೦೦) ವಿಭಾಗಗಳನ್ನು ಮಾಡುತ್ತಾನೆ. ಕಾಲಾಂತರವಲ್ಲಿ ಹಟ್ಟಿಕಾರರೊಳಗೆ ಪಂಗಡಗಳಾದರೂ ಮೊಟ್ಟಮೊದಲು ಇವರೆಲ್ಲ ಒಂದೇ ಜನಾಂಗ. ಇವರ ಆರಂಭದ ಹೋರೆಯು ದನಗಾರಿಕೆಯಾಗಿದ್ದಿತೆಂದು ಈ ಜನಾಂಗದ ಹೆಸರುಗಳಿಂದಲೇ ಸೂಕ್ಷ್ಮವಾಗಿ ಧ್ವನಿತವಾಗುತ್ತಲಿದೆ. ವೆಳ್ ಶಬ್ದದ ವ್ಯುತ್ಪತ್ತಿಯನ್ನು ಹಲವರು ಹಲವು ಬಗೆಗಳಿಂದ ಹೇಳುತ್ತಿದ್ದಾರೆ. ಪಳ್ಳಿ (ಹಳ್ಳಿ) ಯವನು ವೆಳ್ಳನಾದನೆಂದು ಓಪರ್ಟನ ಅಭಿಪ್ರಾಯ. ವೆಳ್ಳಂ ಎಂದರೆ ನೀರು. ವೆಳ್ಳನೆಂದರೆ ನೀರು ಕುಟಿಗನೆಂದು ಹಲವರು ಹೇಳುತ್ತಾರೆ.[೧]

ವೆಳ್ಳ ಮತ್ತು ನೇಯ್ಕಾರರೆಂಬ ಎರಡು ಹೆಸರುಗಳೂ ಹಟ್ಟಿಕಾರರಿಗೇ ಅನ್ವಯಿಸುತ್ತವೆ. ಮನುಷ್ಯನು ಪ್ರಾಥಮಿಕ ಅವಸ್ಥೆಯಲ್ಲಿ ನೀರುಕುಟಿಗನಾಗುವ ಅಶ್ಯಕತೆಯಿಲ್ಲ. ಮನುಷ್ಯನ ಸಂಸ್ಕೃತಿಗೆ ಆರಂಭವಾದುದು ದನಗಾರಿಕೆಯಿಂದ (Herds man). ದನಗಾರಿಕೆಯನ್ನು ಮಾಡಿಕೊಂಡಿದ್ದಾಗ ಹೈನದ ವ್ಯಾಪಾರವು ಇವರ ಮುಖ್ಯ ಕೆಲಸವಾಗಿರಬೇಕು. ಆದುದರಿಂದ, ಯುರೋಪೀಯ ಸಂಶೋಧಕರು ದ್ರಾವಿಡರೆಂದು ಹೇಳುವ ಈ ಮೂಲಜನಾಂಗಕ್ಕೆ ಹಾಲುಮತದವರೆಂದು ಕರೆಯುವುದೆ ಹೆಚ್ಚು ಸಮರ್ಪಕವೆಂದು ತೋರುತ್ತದೆ. ಪಯಸ್, ಇಲಾ (ಇಡಾ, ಇರಾ) ಮತ್ತು ನವನೀ(ತ) ಶಬ್ದಗಳ ವಿಮರ್ಶೆಯಿಂದ ವೇದಕಾಲದಿಂದಲೂ ಆರ್ಯರ ಮತ್ತು ಹಾಲುಮತದವರಲ್ಲಿ ಎಷ್ಟೊಂದು ನಿಕಟ ಸಂಬಂಧವಿದ್ದಿತೆಂಬುದು ಚೆನ್ನಾಗಿ ನಿದರ್ಶನಕ್ಕೆ ಬರುತ್ತಿದೆ. ಪಾಲ್-ಹಾಲು ದೇಶ್ಯಶಬ್ದವೆಂದು ಹೇಳುಬಹುದಷ್ಟೆ? ಈಗ ಸಂಸ್ಕೃತ ಪಯಸ್, ಪಾಯಸ ಶಬ್ದಕ್ಕೂ ದೇಶ್ಯಪಾಲಿಗೂ ಎಷ್ಟೊಂದು ಹೋಲಿಕೆ! ಈರು=ನೀರು; ಈರುಳ್ಳಿ ಇಲ್ಲಿ ಈರವೆಂದು ನೀರಿಗೆ ಹೆಸರಿದೆ. ಸಂಸ್ಕೃತದಲ್ಲಿ 'ಇರಾ' ಇದಕ್ಕೆ "ಭೂ, ವಾಕ್, ಸುರಾ, ಆಪ್" ಎಂಬರ್ಥಗಳಿವೆ. ಈರ ಮತ್ತು ಇರಾ (ಈರಾ)ಗಳೆರಡಕ್ಕೂ ನೀರೆಂದು ಅರ್ಥವಿರುವದು ವಿಚಾರಾರ್ಹವಾಗಿದೆ. ಈರ ಮತ್ತು ನೀರ ಶಬ್ದಗಳೆರಡೂ ಒಂದೇ. ಆರಂಭಕ್ಕೆ ನಕಾರ ಈಕಾರದಲ್ಲಿ ಸೇರಿಕೊಂಡಿತು. ಇದು ಈ ಭಾಷೆಯ ಒಂದು ವೈಶಿಷ್ಟ್ಯ ಇವುಗಳಲ್ಲಿ ಉದಾಹರಣಾರ್ಥ ಅಚ್ಚು-ನಚ್ಚು. ಆದುದರಿಂದ ಈರು ಮತ್ತು ನೀರು ಶಬ್ದಗಳನ್ನು ಭಿನ್ನವೆಂದು ತಿಳಿಯುವ ಕಾರಣವಿಲ್ಲ. ಇನ್ನು ನೀರ ಶಬ್ದವು ಎರಡೂ ಭಾಷೆಗಳಲ್ಲಿದೆ! ಸಂಸ್ಕೃತದಲ್ಲಿ ನೀರ ಶಬ್ದವನ್ನು ಎರಡು ಮೂರು ಪ್ರಕಾರಗಳಿಂದ (ಭಾನುಜಿ ದೀಕ್ಷಿತ ಅಮರ ಕೋಶ ಟೀಕಾ ಪು. ೧೫೪) ಸಾಧಿಸುವುದನ್ನು ನೋಡಿದರೆ ಕಿಟ್ಟೆಲ್ ಪ್ರಭೃತಿಗಳು ಹೇಳುವಂತೆ ಇದು 'ದ್ರಾವಿಡ' (ಹಾಲುಮತದವರ) ಮಾತೆಂದೇ ಅನುಮಾನವುಂಟಾಗುತ್ತದೆ. ಈರಾ ಎಂದು ಮದಿರೆಗೂ ಹೆಸರು; ನಮ್ಮ ನಾಡಿನಲ್ಲಿ ಇದಕ್ಕೆ ನೀರಾ ಎಂದೆನ್ನುವರು; ಈಳಿಗೆ (ಈಡಿಗೆ) ಯವರೆಂದು ಇದರ ಉದ್ಯೋಗಿಗಳಿಗೆ ಹೆಸರು. ಅಮರಕೋಶದಲ್ಲಿ 'ಹಾಲಾ' ಎಂದು ಮದಿರೆಯ ಹೆಸರನ್ನು ಹೇಳಲಾಗಿದೆ. ಇದು ಸಿಂದೀಗಿಡದ 'ಹಾಲು.' ಪಯಸ್ ಶಬ್ದವು 'ಹಾಲು' ಎಂದೂ ರೂಪಗೊಂಡಿತೆ? ಪಕಾರವು ಹಕಾರವಾಗಿ ಪರಿಣಮಿಸುವುದು ಸಂಸ್ಕೃತಭಾಷೆಯಲ್ಲಂತೂ ಇಲ್ಲ! ಹಾಲು, ನೀರು ಮತ್ತು ಮಧ್ಯವೆಂಬುದಕ್ಕೆ ಅವೇ ಪದಗಳಿದ್ದುದು ವಿಚಾರಣೀಯವಿದೆ. ಇರಾ, ಇಡಾ ಮತ್ತು ಇಲಾ ಇವೆಲ್ಲವೂ ಒಂದೇ ಶಬ್ದ. ಇಳಾ ಶಬ್ದಕ್ಕೆ ಅನ್ನವೆಂದು ವೈದಿಕನಿಘಂಟುವಿನಲ್ಲಿ ಅರ್ಥ ಕೊಟ್ಟಿದೆ. 'ಇಳಾ' ಇದು ಭೂಲೋಕದ ಅಮೃತವೆನ್ನುವಷ್ಟು ಆ ಅನ್ನಕ್ಕೆ ಮಹತ್ವವನ್ನು ಕೊಡಲಾಗಿದೆ. ಇಳಾ ಎಂದು ಗೋವಿಗೂ ಹೆಸರು. ಆದುದರಿಂದ ಇಳಾ-ಇಡಾ ಇದು ಗೋ-ರಸವು, ಹಾಲು ಎಂದು ಅರಿತುಕೊಳ್ಳಬಹುದಾಗಿದೆ. ತಮಿಳಿನಲ್ಲಿ

ಗೋವಳರಿಗೆ ಇಡೈಯರ್ ಎಂದು ಹೆಸರು. ವೈದಿಕನಿಘಂಟುವಿನಲ್ಲಿ ಅಂಧಃ ಎಂದರೂ ಅನ್ನ-ಹಾಲು. ಅಂಡರರು-ಅಂಡೆಯವರೆಂದು ಹಾಲುಮತದಲ್ಲಿರುವ ಒಂದು ಪಂಗಡದ ಹೆಸರು. ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಇಡೈಯರಂತೆ ಅಂಡರರ ಉಲ್ಲೇಖಗಳೂ ಇವೆ. ವೈದಿಕ ಋಷಿಗಳಿಗೆ ಇಡೈಯರೂ ಅಂಡರರೂ ಸಲ್ಲಿಸುತ್ತಿದ್ದ ಆಹಾರ ಪದಾರ್ಥಗಳವು. ವಸ್ತುವಿನೊಡನೆ ಅದರ ಹೆಸರೂ ಋಷಿಗಳ ನಾಲಗೆಯಲ್ಲಿ ನಲಿದಾಡಿದುದನ್ನು ವೈದಿಕಸಾಹಿತ್ಯದಲ್ಲಿ ಅಡಿಗಡಿಗೂ ಕಾಣಬಹುದು.

ಬೆಣ್ಣೆ ಎಂಬುದು ಒಂದೇ ಶಬ್ದವಲ್ಲ. ಬೆಳ್+ನೆಯ್=ಬೆಣ್ಣೆ. ನಿಜವಾಗಿ ಬೆಳ್ಳ ಅಥವಾ ತಮಿಳಿನಲ್ಲಿರುವಂತೆ 'ವಿಳುದು' ಇದು Butter ಎಂಬರ್ಥದರ್ಶಕವಾಗಿದೆ. ನೆಯ್ ಎಂದರೆ ತುಪ್ಪ. ಮೂಲ ಹಾಲುಮತದವರಲ್ಲಿ ವಿಳ್-ವೆಳ್ಳರೆಂದೂ ನೆಯ್‌ಯವರು-ನೆಯ್‌ಕಾರರೆಂದೂ ಎರಡೂ ಪಂಗಡಗಳಿಗೆ ಹೆಸರು ಬರಲು ಅವರು ಮಾಡಿಕೊಂಡ ವಿಳುದು ಮತ್ತು ನೆಯ್ ವ್ಯಾಪಾರ-ವ್ಯವಹಾರದ ವೈಶಿಷ್ಟ್ಯವೇ ಕಾರಣವಾಗಿರಬೇಕೆಂದು ತೋರುತ್ತದೆ. ವಿಳುದು ಇದರಲ್ಲಿ ಉದು ಪ್ರತ್ಯಯವಾಯ್ತು. ವಿಳ್‌ದ ವ್ಯಾಪಾರಿಗಳು ವಿಳ್ಳರು-ವೆಳ್ಳರು; ಇವರೇ ತಮಿಳು ನಾಡಿನ ಅಡಿಗಲ್ಲು. ನೆಯ್ಯ ಉದ್ಯೋಗವನ್ನು ಮಾಡುವವರು ನೆಯ್ಕಾರರಾದರು; ಇವರೇ ಹಟ್ಟಿಕಾರರು. ವೆಳ್ಳರು ನೀರುಕುಟಿಗರೆಂಬುದಕ್ಕಿಂತ, ಸಮಾಜವಿಕಾಸಕ್ರಮದ ಐತಿಹ್ಯದಂತೆ (Butter) 'ವಿಳುದಿನ ವ್ಯವಹಾರಿಗಳೆಂದು ಗ್ರಹಿಸುವುದೇ ಹೆಚ್ಚು ತರ್ಕಶುದ್ಧವಾಗಿದೆಯೆಂದು ಹೇಳಬಹುದು. ನೆಯ್ಕಾರ ಶಬ್ದದಲ್ಲಿ ನೆಯ್ ಎಂದರೆ ತುಪ್ಪದ ವ್ಯವಹಾರಿಗಳಾದ ತುರುಕಾರರೂ, 'ನೇಗಿಲಯೋಗಿ'ಗಳಾದ ಒಕ್ಕಲರೂ, ನೇಗಿಯ ಉದ್ಯೋಗಿಗಳಾದ ನೇಕಾರರೂ ಎಂಬ ಈ ಮೂರು ಬಗೆಯವರ ಸಮಾವೇಶವೂ ಆಗುತ್ತದೆ. ಬಲರಾಮನಿಗೆ "ಸೀರಪಾಣಿ" "ಹಲಾಯುಧ" ಎಂದು ಹೇಳಿರುವಲ್ಲಿ ಸೀರ ಅಥವಾ ಹಲ ಎಂಬ ಶಬ್ದಗಳಲ್ಲಿ 'ನೇಗಿ' ಶಬ್ದದಷ್ಟು ವಿಶಾಲವಾದ ಅರ್ಥವನ್ನು ಸೂಚಿಸುವ ಸಾಮರ್ಥ್ಯವಿಲ್ಲ. ಕೃಷ್ಣನ ಕೆಯ್ಯ 'ಕಡೆಗೋಲು, 'ಮತ್ತು ಚಕ್ರ (ರಾಟೆ)ಗಳು, ಬಲರಾಮನ 'ಸೀರ' (ನೇಗಿಲು) ಇವೆರಡೂ ಇವರು 'ನೆಯ್ಕಾರ' ಜನಾಂಗಕ್ಕೆ ಸೇರಿದವರೆಂಬುದನ್ನೇ ಸೂಚಿಸುತ್ತಲಿವೆ.

ಕನ್ನಡದ 'ತುಪ್ಪ' ಶಬ್ದವು ಮರಾಠಿಯಲ್ಲಿ 'ತೂಪ' ಎಂದು ವ್ಯವಹರಿಸುತ್ತದೆ* ಕನ್ನಡದ ತುಪ್ಪವು ಮರಾಠಿಯಲ್ಲಿ ಹೇಗೆ? ಎಂಬ ಬಗ್ಗೆ ಕಾರಣವನ್ನು ಹೇಳುವಾಗ ಶ್ರೀ. ಚಿಂತಾಮಣಿರಾವ ವೈದ್ಯರು ಹೀಗೆ ಬರೆಯುತ್ತಾರೆ. ವರ್‍ಹಾಟ (ಮಹಾರಾಷ್ಟ್ರ)ದ ಹತ್ತಿರ ಕನ್ನಡಗೌಳಿಗಳು ಇರುತ್ತಿದ್ದರು. ಇವರಿಂದ ಆರ್ಯರು ತುಪ್ಪ (ನೆಯ್) ಕೊಳ್ಳುತ್ತಿದ್ದುದರಿಂದ ಈ ಕನ್ನಡ ಶಬ್ದವು ಆರೇಮಾತಿನಲ್ಲಿ ಸೇರಿಕೊಂಡಿತು. ಶ್ರೀ ವೈದ್ಯರು ಹೇಳಿದುದರಲ್ಲಿ ಅರ್ಥವಿದೆ. ಜಂಬುಕಂಡಿ ನಾಡಿನಲ್ಲಿ ಇಂದಿಗೂ ತುಪ್ಪವನ್ನೇ ಮಾರುವರಲ್ಲದೆ ಬೆಣ್ಣೆ (Butter) ಸಿಕ್ಕುವುದು ದುರ್ಲಭ. ಪ್ರಾಚೀನ ಕಾಲಕ್ಕೆ ಉತ್ತರದ ಹಟ್ಟಿಕಾರ(ವಡುಕ)ರಲ್ಲಿ ಇದೇ ರೂಢಿಯೇ ಪ್ರಾಮುಖ್ಯದಿಂದಿರಬೇಕು. ಸಂಸ್ಕೃತದ 'ನವನೀ' ಶಬ್ದದಲ್ಲಿ ನೆಯ್ಯನರುಗು (ಗಂಧವು) ಬರುತ್ತಲಿದೆ. 'ನವನೀ (ತ)' ಶಬ್ದವು ಅಖಂಡ ಸಂಸ್ಕೃತ ಶಬ್ದವಿದ್ದಂತೆ ಎನಿಸುವುದಿಲ್ಲ. ಸಂಸ್ಕೃತದಲ್ಲಿ 'ನವನೀ' ಮತ್ತು 'ನವನೀತ' ಎಂಬ ಎರಡೂ ರೂಪಗಳಿವೆ. ಮೂಲತಃ ಧಾತುಸಾಧಿತ (ನೀಧಾತುವಿನಿಂದ) ನೀತ ಎಂದೇ ಇರಬೇಕಾಗಿತ್ತು. ತಕಾರವು ಹೆಚ್ಚಿನ ಪ್ರತ್ಯಯದಂತೆ ಮತ್ತೆ ಬಂದು ಸೇರಿಕೊಂಡ ಹಾಗಿದೆ. ನವ+ನೀ ಇದರಲ್ಲಿ ನೀ ಧಾತುವನ್ನು ಎಳೆದೆಳೆದು ತಂದು ಅರ್ಥ ಮಾಡಿ, ನವನೀ ಎಂದರೆ ಹೊಸತಾಗಿ ತಂದುದು, ತೆಗೆದುದು ಎಂದರೆ ಬೆಣ್ಣೆ (Butter) ಎಂಬುದಾಗಿ ಅದೂ ಪರ್ಯಾಯದಿಂದ ಅರ್ಥ ಮಾಡಬೇಕಾಗುವುದು. ಆದುದರಿಂದ ಇಲ್ಲಿ 'ನೀ' ಶಬ್ದವು ಧಾತುವಾಗಿರದೆ ನೆಯ್ ಇದಕ್ಕೆ ಹತ್ತಿರದ್ದಾಗಿದ್ದಂತೆ ತೋರುತ್ತಿದೆ. ಸಂಸ್ಕೃತದವರ 'ನವ' ವಿಶೇಷಣವನ್ನು ಜೋಡಿಸಿಕೊಂಡು (ತುಪ್ಪದ ಮೊದಲಿನ ರೂಪ?) ಬೆಣ್ಣೆ (Butter) ಎಂಬರ್ಥದ ಶಬ್ದವನ್ನು ಮಾಡಿಕೊಂಡಂತೆ ಎನಿಸುತ್ತದೆ. ದಿನಾಲು

---

* ಈ ಅಂಶವು ವಿಸ್ತರವಾಗಿ 'ಮಹಾರಾಷ್ಟ್ರದ ಮೂಲ' ಗ್ರಂಥದಲ್ಲಿ ಚರ್ಚಿತವಾಗಿದೆ ಹಾಗೂ 'ಮರ್‍ಹಾಟೀ ಸಂಸ್ಕೃತಿ: ಕೆಲವು ಸಮಸ್ಯೆಗಳು' ಎಂಬ ಗ್ರಂಥದಲ್ಲೂ ವಿಶೇಷವಾಗಿ ಚರ್ಚಿತವಾಗಿ (ಸಂ)

ಜನರು ಉಪಯೋಗಿಸುವುದು ನವನೀತವಲ್ಲ "ಮನುಷ್ಯರಿಗೆ 'ಘೃತ;' ದೇವರಿಗೆ ಆಜ್ಯ; ನವನೀತವು ಗರ್ಭಕ್ಕೆ ಹಚ್ಚುವುದಕ್ಕೆ ಯೋಗ್ಯವಾದುದೆಂದು ಐತರೇಯಬ್ರಾಹ್ಮಣದಲ್ಲಿ ಹೇಳಿದೆ.[೨] ದಿನಾಲು ಹೊಚ್ಚ ಹೊಸತಾಗಿ ತೆಗೆದು ಉಪಯೋಗಿಸಬೇಕಾದುದಾಗಿದ್ದರೆ ನವ ಎಂಬ ವಿಶೇಷಣದ ಔಚಿತ್ಯವಿತ್ತು. ಗರ್ಭಕ್ಕೆ ಹಚ್ಚುವುದಕ್ಕೇ ಉಪಯೋಗಿಸುವ ವಸ್ತುವಿದು. ಇಲ್ಲಿ ನವ ಎಂದರೆ ಹೊಸತಾಗಿ ಹೆರವರಿಂದ ತಕ್ಕೊಂಡು (ಶಬ್ದ) 'ನೀ'- ನೆಯ್ ಎಂಬುದೇ ಸರಿಯೆಂದು ತೋರುತ್ತಿದೆ. ಸಂಸ್ಕೃತ ಸಾಹಿತ್ಯದಲ್ಲಿ 'ನವನೀತ'ಕ್ಕೆ ಅಷ್ಟು ಪ್ರಾಶಸ್ತ್ಯವಿಲ್ಲದುದೂ ವಿಚಾರಣೀಯವಾಗಿದೆ. ಇಡಾ, ಅಂಧಸ್‌ಗಳಂತೆ 'ನೀ' (ನೆಯ್)ಇದೂ ಹಟ್ಟಿಕಾರರ ಮಾತೇ ಆಗಿರುವ ಸಂಭವವಿಲ್ಲವೆ?

"ಇಳಾ" ಹಟ್ಟಿಕಾರರ ದೇವರು. "ಇಳಾ ಯೂಥಸ್ಯ ಮಾತಾ" ಎಂದು ಋಗ್ವೇದದಲ್ಲಿದೆ. ಯೂಥ ಎಂದರೆ ದನಗಳ ಹಿಂಡು. ಇವು ಆರ್ಯರ ದನಗಳ ಹಿಂಡೇ ಏಕೆ ಅಲ್ಲ ? ಎಂದೂ ಪ್ರಶ್ನೆಯುಂಟಾಗುವುದು. ಇದನ್ನು ಇನ್ನೂ ಸ್ವಲ್ಪ ಆಳವಾಗಿ ವಿಚಾರಿಸಿ ನೋಡುವ ಹಾಗಿದೆ. ಋಗ್ವೇದದಲ್ಲಿ "ಇಳಾ" ಇದು ಹೆಣ್ಣು ದೇವರು. ಇಳೆಯು ಸರಸ್ವತಿ ಮತ್ತು ಮಹೀದೇವಿಯರೊಡನೆ ಆಪ್ರೀ-ಸೂಕ್ತಗಳಲ್ಲಿ ಬರುವಳು.[೩] ಋಗ್ವೇದದಲ್ಲಿ 'ಲಕ್ಷ್ಮೀ'ಯ ಹೆಸರಿಲ್ಲ. ಈಗ ಹಿಂದೂ ಜನರು ಆರಾದಿಸುವ ಶ್ರೀ, ಸರಸ್ವತಿ ಮತ್ತು ದುರ್ಗಾ ಈ ಮೂರು ದೇವತೆಗಳಲ್ಲಿ ನಡುವಿನವಳು ಪ್ರಾಚೀನಕಾಲದಿಂದಲೂ ಇದ್ದಾಳೆ. 'ಮಹೀ' ದೇವಿಯೇ ದುರ್ಗೆಯು; ದುರ್ಗೆಗೆ 'ಕುಜಾ' (ಭೂದೇವಿ) ಎಂದೂ ಹೆಸರಿದೆ. ಇನ್ನು ಶ್ರೀ-ದೇವಿಯು ಯಾರು? ಇಳಾ ದೇವಿಯೇ ಶ್ರೀ, ಲಕ್ಷ್ಮೀದೇವಿಯಾಗಿ ಪರಿಣಮಿಸಿರಬೇಕು. ಲಕ್ಷ್ಮೀದೇವಿ ಕ್ಷೀರಸಾಗರದಲ್ಲಿ ಹುಟ್ಟಿದವಳೆಂದು ಸುಪ್ರಸಿದ್ಧವಿದೆ. ಆದುದರಿಂದ, ಇಳೆಯಿಂದಲೇ (ಇಳಾ=ಹಾಲು) ಲಕ್ಷ್ಮೀದೇವಿಯಾಗಿರಬೇಕೆಂಬುದು ಸ್ಪಷ್ಟ. ವೇದದಲ್ಲಿ ಇಳೆಯು ದೇವಿಯೇನೋ ಸರಿ. ಹಾಲುಮತದವರಲ್ಲಿ ಇದೇ ಗಂಡುದೇವರೂ ಇದೆ. 'ಇಟ್ಟಪ್ಪ' - ವಿಟ್ಟಪ್ಪ'ನು ಹಾಲುಮತದವರ ಇಷ್ಟದೇವತೆ. ವಿಟ್ಟ-ವಿಠ್ಠಲನು "ದ್ರಾವಿಡರ" (ಹಾಲುಮತದವರ) ದೇವ ರೆಂದು ಪ್ರಿಲಸ್ಕಿಯವರು ಬಹಳ ಯುಕ್ತಿಯುಕ್ತವಾಗಿ ಈ ಮೊದಲೇ ಸಿದ್ಧ ಮಾಡಿದ್ದಾರೆ.[೪] ವಿಟ್ಟ (ವಿಳ್ಳ)ನು ಹಾಲು ಬೆಣ್ಣೆಯಲ್ಲಿ ಪ್ರತಿನಿತ್ಯವೂ ಮೀಯಲುಬೇಕು; ಪಂಢರಿಪುರದಲ್ಲಿ ಇದನ್ನು ಈಗಲೂ ಕಾಣಬಹುದು. ವಿಟ್ಟ-ವಿಷ್ಣುವು ಹಾಲಿನಲ್ಲಿ-ಕ್ಷೀರಾಬ್ಧಿಯಲ್ಲಿರುವವನು! ಪ್ರಿಲಸ್ಕಿಯವರು ಹೇಳುವಂತೆ.[೫] ಇಟ್ಟ-ನಿಟ್ಟನು "ದ್ರಾವಿಡ" ದೇವರೆಂಬುದು ನಿಜವಿದ್ದರೆ ಇಡಾದೇವಿಯೂ (ವಿಟ್ಟನ ಹೆಂಡತಿ ಲಕ್ಷ್ಮೀಯೂ) ದ್ರಾವಿಡರ (ಹಾಲುಮತದ) ದೇವಿಯೇ ಏಕೆ ಅಲ್ಲ?

ಇದರಂತೆಯೇ, ಈ ಜನಾಂಗಕ್ಕೆ "ಚಂದ್ರ" ವಂಶದವರೆಂದು ಹೇಳಿರುವ ಮಾತೂ ಬಹಳ ಅರ್ಥಗರ್ಭಿತವಾಗಿದೆ. ಆರ್ಯರು ಸೂರ್ಯಾಭಿಮಾನಿಗಳು ದಿನಾಲು ಸೂರ್ಯೋಪಾಸನೆ ಮಾಡದವನು. ಸಾವಿತ್ರಿಯ ಉಪಾಸನೆ ಇಲ್ಲದವನು-ಆರ್ಯನೇ ಅಲ್ಲ. ಯದು-ತುರ್ವಶಾದಿಗಳು ಚಂದ್ರವಂಶದವರೆಂದು ಹೇಳಿ, ಪೌರಾಣಿಕರು, ಈ ಜನಗಳು ಆರ್ಯರಿಂದ ಭಿನ್ನಪಂಥದವರೆಂಬುದನ್ನೇ ಸೂಚಿಸಿರಲಿಕ್ಕಿಲ್ಲವೆ? ಚಂದ್ರವಂಶದ ರೀತಿನೀತಿಗಳು ಸೂರ್ಯವಂಶದವರಿಂದ ಬಹಳ ಭಿನ್ನವಾಗಿವೆ. ಸೂರ್ಯವಂಶದ ಆದರ್ಶ ಸ್ತ್ರೀ ಸೀತೆ. ಇವಳು ಚಂದ್ರವಂಶದ ಕುಂತಿ, ದ್ರೌಪದಿ, ರುಕ್ಮಿಣಿ, ಸತ್ಯಭಾಮೆಯರಿಗಿಂತ ಎಷ್ಟು ಭಿನ್ನ! ಆರ್ಯರಲ್ಲಿ ಪುರುಷನು ಕೇಂದ್ರ ಸ್ಥಾನದಲ್ಲಿ. ಚಂದ್ರವಂಶದಲ್ಲಿ ಆ ಸ್ಥಾನವು ಸ್ತ್ರೀಯರಿಗಿದೆ. ಪಿತೃಪ್ರಧಾನ ಕುಟುಂಬ ಆರ್ಯರದು. ಸ್ತ್ರೀಪ್ರಧಾನ ಕುಟುಂಬ ಚಂದ್ರವಂಶಿಗಳದು. ಸೂರ್ಯವಂಶದ ಮನುವಿನ ಧರ್ಮಶಾಸ್ತ್ರದಲ್ಲಿ ಸ್ತ್ರೀಯರಿಗೆ ಯಾವ ಸ್ಥಾನವಿರುವದೆಂಬುದು ಸುಪ್ರಸಿದ್ಧವಿದೆ. ಆದರೆ, ಹಟ್ಟಿಕಾರರಲ್ಲಿ ಒಕ್ಕಲರಲ್ಲಿ ಸ್ತ್ರೀಯರಿಗೇ ಅಗ್ರಸ್ಥಾನ.

ಯಾವುದಕ್ಕೆ ಮಹತ್ವವೊ ಅದಕ್ಕೆ ಬೇಗನೆ ದೇವತ್ವವು ಪ್ರಾಪ್ತವಾಗುತ್ತದೆ. ಆಕಳಿಗೆ ಮಹತ್ವವು ಬಂದಿತು; ಆಕಳೆ ದೇವರಾಯಿತು; ಕಾಮಧೇನುವಾಯಿತು; ಎತ್ತು ಮೇಲಕ್ಕೇರಿ ಬಸವೇಶ್ವರನಾದನು. ಹಾಗೆ ಸ್ತ್ರೀಯರಿಗೆ ಮನ್ನಣೆಯಿರುವ ಈ ಜನಾಂಗದಲ್ಲಿ ಸ್ತ್ರೀ-'ದೇವೀ' ಪೂಜೆಗೆ ಮಹತ್ವವು ಬಂದಿತು.[೬] ವೇದಗಳಲ್ಲಿ ಗಂಡು ದೇವತೆಗಳಿಗಿರುವ ಮಹತ್ವವು ಹೆಣ್ಣು ದೇವರಿಗೆ ಇಲ್ಲ.[೭] ಮರಗವ್ವ, ಕಾಳಮ್ಮ, ಎಲ್ಲಮ್ಮ, ಬನದಮ್ಮ, ಅಂಬಾಬಾಯಿ, ಮಹಾಂಕಾಳಿ, ದುರ್ಗೆ ಮೊದಲಾದ ರೂಪಗಳಲ್ಲಿ ಸ್ತ್ರೀಪೂಜೆಯನ್ನು ಈ ಜನಾಂಗವು

ಪ್ರಾಚೀನಕಾಲದಿಂದಲೂ ಮಾಡುತ್ತ ಬಂದಿದೆ. ಸ್ತ್ರೀ ಪೂಜೆಯಲ್ಲಿಯೂ ಮತ್ತೆ ಚಂದ್ರನ ಸಂಬಂಧವು ಇಲ್ಲದೆ ಇಲ್ಲ. ಈ ಎಲ್ಲ ದೇವಿಯರ ಆರಾಧನೆಯು ನಡೆಯುವುದು ಒಂದಿಲ್ಲೊಂದು ಹುಣ್ಣಿಮೆಯ ದಿನವೆ! ಶಾಕ್ತಪಂಥದಲ್ಲಿ ಸಾಧಕನಿಗೆ ಹುಣ್ಣಿಮೆಯ ಮಹತ್ವವು ಬಹಳ. ಈ ಜನಾಂಗದ ಹಬ್ಬಗಳೆಲ್ಲ ಬಹುತರವಾಗಿ ಹುಣ್ಣಿಮೆಗೇ. ಇವರ ಕಾಲಗಣನೆಯು ಹುಣ್ಣಿಮೆಗಳ ಮೇಲಿಂದ (ಚಾಂದ್ರ ಮಾನ). ಒಬ್ಬ ಚೆನ್ನಿಗನು ದೊರೆಯುವವರೆಗೆ ಆ 'ಚಂದ್ರಾಮರಾಯ'ನೆ ಗಂಡ, ನಮ್ಮ ನಾಡಿನ ಹುಡುಗೆಯರಿಗೆಲ್ಲ! ಹೀಗೆಲ್ಲ ವಿಚಾರಿಸಿದರೆ ಈ ಜನಾಂಗದ ಕುಲಪತಿ ಚಂದ್ರನೆಂದು ದೃಢವಾಗುತ್ತದೆ.

ಗಂಡಿಗೂ ಹೆಣ್ಣಿಗೂ ಒಂದೇ ಹೆಸರಿರುವುದು ಈ ಜನಾಂಗದ ವೈಲಕ್ಷಣ್ಯವಾಗಿದೆ. ಪ್ರಾಚೀನ ಶಾಸನಗಳಲ್ಲಿ ಚಟ್ಟ-ಚಟ್ಟಲೆ; ಮಾಳಪ್ಪ-ಮಾಳವ್ವೆ, ಬೀರಪ್ಪ-ಬೀರವ್ವೆ; ಅದರಂತೆ ಚೆಂದಪ್ಪ-ಚೆಂದಲೆ. ಈ ಭಾಷೆಯ ಹಲವು ಶಬ್ದಗಳು ಪುಂ-ಸ್ತ್ರೀಲಿಂಗವಾಗಿದ್ದುದರ ಕೆಲವು ಅವಶೇಷಗಳನ್ನು ಕಾಣಲಿಕ್ಕೆ ಸಿಕ್ಕುತ್ತಿದೆ. ತೊತ್ತು; ಆಳು; ಅಮ್ಮ ಇತ್ಯಾದಿ. ಇಟ್ಟಶಬ್ದವೂ ಪುಂ-ಸ್ತ್ರೀಲಿಂಗವಾಗಿದ್ದುದು ಈ ಮೊದಲೇ ಕಂಡು ಬಂದಿದೆ. ಅದರಂತೆ ಚಂದಿರನೂ ಹಟ್ಟಿಕಾರರಲ್ಲಿ ಪುಂ-ಸ್ತ್ರೀಲಿಂಗ. ಛೋಟಾನಾಗಪುರದ ಕುರುಕ (ಕುರುಬ)ರಲ್ಲಿ ಚಂದ್ರನು ಸೂರ್ಯನ ಹೆಂಡತಿ-ಎಂಬ ನಂಬುಗೆಯು ಪ್ರಾಚೀನಕಾಲದಿಂದಲೂ ನಡೆದು ಬಂದಿದೆ.[೮] (ಚಂದ್ರನು ಎಂದೊಡನೆ ಶಬ್ದವು ಪುಲ್ಲಿಂಗವೇ ಇರಲಿಕ್ಕೆಬೇಕೆಂದು ತಿಳಿಯುವ ಕಾರಣವಿಲ್ಲ. ಅಕ್ಕನು ಅಮ್ಮನು ಎಂಬುದೇ ಇದಕ್ಕೆ ದೃಷ್ಟಾಂತ). ಅವರಲ್ಲಿ ಚಂದ್ರನನ್ನು ಸ್ತ್ರೀಯರೇ ಪೂಜಿಸುವರು. ಚಂದ್ರನ ವಿಚಾರದಲ್ಲಿರುವ ನಮ್ಮ ಜನಗಳ ಭಾವನೆಗಳನ್ನೂ ನೋಡಬಹುದು. ಚಂದ್ರನು ಕಾಮೋತ್ತೇಜಕ. ಸ್ತ್ರೀಯರ ಮುಖಕ್ಕೆ ಯಾವಾಗಲೂ ಹೋಲಿಸುವುದು ಚಂದ್ರಬಿಂಬವನ್ನೆ. ಗರ್ಭರಕ್ಷಕ ದೇವತೆ ಚಂದ್ರನು.*

ಋಗ್ವೇದದಲ್ಲಿ ರಾಕಾ ಮತ್ತು ಸಿನೀವಾಲೀ ಎಂಬ ಎರಡು ದೇವತೆಗಳು ಬರುವವು. ಇವೆರಡೂ ಚಂದ್ರನ ಸಂಬಂಧಿಯಾದವುಗಳು; ಎರಡೂ ಸ್ತ್ರೀದೇವತೆಗಳು! ರಾಕಾ ಹುಣ್ಣಿಮೆಯ ಚಂದ್ರ; ಸಿನೀವಾಲೀ ಅಮಾವಾಸ್ಯೆಯ ಮುಂಚಿನ (ಚತುರ್ದಶೀ) ಚಂದ್ರ. ಸಿನೀವಾಲಿಯು ಮಕ್ಕಳನ್ನು ದಯಪಾಲಿಸುವ ಶಕ್ತಿಯುಳ್ಳವಳೂ, ಗರ್ಭ ಸಂರಕ್ಷಿಸುವವಳೂ ಸ್ವತಃ ಸುಪ್ರಸವಿಯೂ ಆದ ದೇವಿ, ಎಂದು ಋಗ್ವೇದದಲ್ಲಿ ವರ್ಣನೆಯಿದೆ. (೫.೪೨. ೧೨; ೧೦.೧೮೪. ೨; ೨.೩೨.೭). ರಾಕಾ ಮತ್ತು ಸಿನೀವಾಲಿಗಳೊಡನೆ 'ಗುಂಗೂ' ಎಂಬ ಇನ್ನೊಂದು ದೇವಿಯೂ ಋಗ್ವೇದಲ್ಲಿದ್ದಾಳೆ.

"ಯಾ ಗುಂಗೂರ್ಯಾ ಸಿನೀವಾಲೀ ಯಾ ರಾಕಾ ಯಾ ಸರಸ್ವತೀ
ಇಂದ್ರಾಣೀಮಹ್ವ ಊತಯೇ ವರುಣಾನೀಂ ಸ್ವಸ್ತಯೇ" ।। ೨.೩೨.೫

ಇಲ್ಲಿ ಉಲ್ಲೇಖಿತ 'ಗುಂಗೂ' ದೇವಿಯು ಯಾರು? ಈ ಹೆಸರಂತೂ ಸಂಸ್ಕೃತ ಭಾಷೆಗೆ ಎಳ್ಳಷ್ಟೂ ಸರಿ ಹೋಗುವುದಿಲ್ಲ; ಮುಂದಿನ ಕಾಲದಲ್ಲಿ ಈ ದೇವಿಯ ಹೆಸರೂ ಕೇಳಲಿಕ್ಕೆ ಸಿಕ್ಕುವುದಿಲ್ಲ! 'ಗುಂಗೂ' ಎಂದರೇನು ಅರ್ಥ? ಮನುಷ್ಯನಿಗೆ ಗುಂಗು ಹಿಡಿಸುವವಳೇ? ಮೋಹಿನೀ ದೇವಿಯೋ? ಭ್ರಮರಾಂಬೆಯೆಂದು ಪೂಜಿಸುವ ದೇವಿಯೇ ಮೊದಲು 'ಗುಂಗೂ' ಆಗಿರಬಹುದೆ? ಅದೇನೇ ಇರಲಿ; ಈ ಹೆಸರು ಅನಾರ್ಯ ಭಾಷೆಯಿಂದ ತಕ್ಕೊಂಡಿದ್ದಾಗಿರಬೇಕು. ಇಂದ್ರಾಣಿ, ಸರಸ್ವತಿಗಳಂತೆ ಈ ಹೆಸರು ಸಂಸ್ಕೃತದ್ದೆನಿಸುವುದಿಲ್ಲ. 'ರಾಕಾ' ಶಬ್ದವೂ ಇನ್ನೂ ಪೂರ್ಣ ಸಂಸ್ಕೃತರೂಪವನ್ನು ತಾಳಿದಂತೆನಿಸುವುದಿಲ್ಲ. 'ರಾಕಾ' ದೇವಿಯು ರಾಗಿಣಿಯಿರಬಹುದೇನೊ! ಸಿನೀವಾಲಿ ಶಬ್ದವೂ ಸಂಸ್ಕೃತವಲ್ಲ. ಲೋಕಮಾನ್ಯ ತಿಲಕರು "Sinivali looks to me like a foreign

---

* 'ಋಗ್ವೇದಸಾರ : ನಾಗಪ್ರತಿಮಾವಿಚಾರ' ಗ್ರಂಥದಲ್ಲೂ ಅನಂತರದ ಗ್ರಂಥಗಳಲ್ಲೂ ಸಾಂಸ್ಕೃತಿಕ ಪದರನ್ನು ಎರಡು ಪಾತಳಿಗಳ ನೆಲೆಯಲ್ಲಿ ನೋಡುತ್ತಾರೆ. ಒಂದು ಸೌರಪಾತಳಿ ಮತ್ತೊಂದು ಚಾಂದ್ರಪಾತಳಿ. ಸೌರವು 'ಪ್ರಜ್ಞೆ'ಯ ಪ್ರತೀಕ ಚಾಂದ್ರವು 'ಬುದ್ಧಿ'ಯ ಪ್ರತೀಕವೆಂದು ಆಶಯವನ್ನು ಗ್ರಹಿಸಿ ವಿಸ್ತಾರವಾಗಿ ಚರ್ಚಿಸುತ್ತಾರೆ. (ಸಂ)

word"[೯] ಎಂದು ಒಂದು ಸಂದರ್ಭದಲ್ಲಿ ಹೇಳಿರುವುದು ಸರಿಯೆಂದು ತೋರುತ್ತದೆ. ಆದುದರಿಂದ, ವೇದಕಾಲದ ಚಂದ್ರನ ಸ್ತ್ರೀರೂಪದ ಪೂಜೆಯು ಹಾಲುಮತದವರದೇ ಇರಬೇಕೆಂದು ಕುರುಕ (ಕುರುಬ)ರಲ್ಲಿ ಉಳಿದಿರುವ ಸಂಪ್ರದಾಯದಿಂದಲೂ ಊಹಿಸಬಹುದಾಗಿದೆ. ನಮ್ಮ ನಾಡಿನಲ್ಲಿ ಎಷ್ಟೋ ಬ್ರಾಹ್ಮಣರ ಮನೆತನಗಳ ಕುಲದೇವತೆಯಾದ ಚಂದಲಾ-ಪರಮೇಶ್ವರಿಯು ಚಂದ್ರನ ಸ್ತ್ರೀರೂಪವೆಂದೇ ಹೇಳಬಹುದಾಗಿದೆ. ಚೆಂಗಳಿಕಮ್ಮನೆಂಬ ಒಂದು ದೇವಿಯು ನಮ್ಮ ನಾಡಿಗರಲ್ಲಿದ್ದಾಳೆ. ಚಂದ್ರ ಶಬ್ದವು ಋಗ್ವೇದದಲ್ಲಿದೆ. ಯದು-ತುರ್ವಶಾದಿಗಳ ಕುಲ ಸೂಚಕನಾದ ಚಂದ್ರಮನು ಈ ಜನಾಂಗದ ಪ್ರಾಚೀನ ಇತಿಹಾಸವನ್ನು ಅರಿತುಕೊಳ್ಳಲಿಕ್ಕೆ ಒಳ್ಳೆ ನಿಚ್ಚಳವಾದ ಬೆಳಕು ಕೊಡುತ್ತಲಿದ್ದಾನೆ. ಈ ಜನಾಂಗದೊಡನೆ ಆರ್ಯರ ಸಂಬಂಧವು ಯಾವಾಗ ಬಂದಿತೆಂಬುದನ್ನು ಸಂಶಯಕ್ಕೆ ಸ್ವಲ್ಪವೂ ಆಸ್ಪದವಿಲ್ಲದಂತೆ ಸಿದ್ಧಪಡಿಸುವುದಕ್ಕೆ ಚಂದ್ರ ಶಬ್ದವು ಅತ್ಯಂತ ಉಪಯುಕ್ತವಾಗಿದೆ. ಯದು-ತುರ್ವಶರ ಕುಲಕ್ಕೆ ಚಂದ್ರವಂಶವೆಂದು ಕರೆದಿರುವುದು ಈ ದೃಷ್ಟಿಯಿಂದ ನೋಡಿದರೂ ಬಹಳ ಸಮರ್ಪಕವಾಗಿದೆಯೆಂದು ಹೇಳಬೇಕಾಗುತ್ತದೆ.

ಚಂದ್ರ-ಮಸ್ ಶಬ್ದವನ್ನು ಕುರಿತು ಹಲವು ದಿನಗಳಿಂದಲೂ ತಲೆಯಲ್ಲಿ ಎಷ್ಟೋ ವಿಚಾರಗಳ ಹುತ್ತು ಏಳುತ್ತಲಿತ್ತು. ಆದರೆ. ಅದೆಲ್ಲವನ್ನು ಆಡುವ ಧೈರ್ಯವಿದ್ದಿಲ್ಲ, ಪ್ರೊ. ರಾಜವಾಡೆಯವರಂತಹ ಸಂಶೋಧಕರಾದ ವಿದ್ವಾಂಸರು 'ಚಂದ್ರ' ಶಬ್ದವನ್ನು ಕುರಿತು ಬರೆದ ಲೇಖನವು ಕಣ್ಣಿಗೆ ಬಿದ್ದ ಬಳಿಕ ಮನಸಿಗೆ ಒಂದು ಬಗೆಯ ಸಮಾಧಾನವಾಯಿತು. ಅವರ ಆ ಲೇಖನದಲ್ಲಿ ನಾನು ಹೇಳಬೇಕಾದುದೆಲ್ಲವೂ ಬಂದಿದೆ; ಇನ್ನು ಒಂದೆರಡು ಮಾತುಗಳನ್ನು ಅದಕ್ಕೆ ಜೋಡಿಸಿ ಬಿಟ್ಟರೆ ಆ ಪ್ರಬಂಧವು ಪರಿಪೂರ್ಣವಾಗುವುದು. ಪ್ರೊ. ರಾಜವಾಡೆಯವರಿಗೆ ಹಳಗನ್ನಡ, ತಮಿಳುಗಳ ಸ್ವಲ್ಪ ಪರಿಚಯವಿದ್ದಿದ್ದರೆ, ನಾನು ಹೇಳಬೇಕಾದ ಒಂದೆರಡು ಸಂಗತಿಗಳನ್ನು ಅವರೇ ಸೇರಿಸಬಹುದಾಗಿತ್ತು. ಆದರೆ, ಅವರಿಗೆ ಈ ಭಾಷೆಗಳು ಗೊತ್ತಿಲ್ಲದ್ದರಿಂದ ಕೊನೆಗೆ ಸ್ವಲ್ಪ ಮಾತ್ರ ಕೊರತೆಯುಳಿದಿದೆ. ಚಂದ್ರಮಾಃ ಶಬ್ದವು ಜೋಡುನುಡಿ. ಇದರಲ್ಲಿ ಚಂದ್ರ+ಮಾಃ ಎಂದು ಎರಡು ಶಬ್ದಗಳಿವೆ. ಇವೆರಡೂ ಪದಗಳಿಗೂ ಚಂದ್ರ (Moon) ಎಂದೇ ಅರ್ಥ. ಹೀಗಿದ್ದರೂ ಒಂದೇ ಅರ್ಥವುಳ್ಳ ಎರಡೂ ಶಬ್ದಗಳನ್ನು ಒಂದರ ಮುಂದೆ ಒಂದು ಇಟ್ಟು ಪ್ರಯೋಗಿಸುವ ರೂಢಿ ಬೀಳುವುದಕ್ಕೆ ಕಾರಣವೇನು? ಸಂಸ್ಕೃತ ಮಾಃ, ಮಾಸ ಶಬ್ದಕ್ಕೆ ಸಮೀಪದ Moon Month, Mences ಇವೇ ಮೊದಲಾದ ಶಬ್ದಗಳು ಇಂಗ್ಲಿಷಿನಲ್ಲಿವೆ, Menh ಎಂದು ಅವೆಸ್ತಾದಲ್ಲಿದೆ. ಪ್ರೊ. ರಾಜವಾಡೆಯವರು ಇದನ್ನು ಕುರಿತು ಬರೆಯುವುದೇನೆಂದರೆ:

> ಚಂದ್ರ+ಮಾಃ both meaning the moon belonged to two separate groups of the Aryan race. As in course of time these groups merged into one big race, so did their languages or dialects. Hence the existence of synonyms.
> Some of these synonyms came unconsciously to be combined. Hence the origin of tantalogical compounds as ಚಂದ್ರಮಾಃ (ಚಂದ್ರ +ಮಾಸ್).[೧೦]

ಪ್ರೊ. ರಾಜವಾಡೆಯವರು ಬರೆದುದರಲ್ಲಿ, ಒಂದು ಮಾತನ್ನು ಬಿಟ್ಟರೆ ಉಳಿದುದೆಲ್ಲವೂ ಸರಿ. ಚಂದ್ರ ಮತ್ತು ಮಾಸ್ ಎಂಬಿವು ಎರಡು ಬೇರೆಬೇರೆ ಜನಾಂಗದ ಮಾತುಗಳು, ಎಂದು ಪ್ರೊ. ರಾಜವಾಡೆಯವರು ಹೇಳುವುದು ನಿಜವಾಗಿದೆ. ಆದರೆ, 'ಮಾಸ್'ದಂತೆ ಚಂದ್ರವು ಆರ್ಯಭಾಷೆಯ ಶಬ್ದವೆಂದು ಹೇಳಲಿಕ್ಕಾಗುವುದಿಲ್ಲ. ವೇದಗಳಲ್ಲಿ 'ದ್ರಾವಿಡ' ಭಾಷೆಯ ಶಬ್ದಗಳಿದ್ದುದು ಸಿದ್ಧವಾಗಿದೆ. "ಮಿಡಿಚೆ," ಎಂದು ಕನ್ನಡದಲ್ಲಿರುವ ಶಬ್ದಕ್ಕೆ ಸಮೀಪವಾದ "ಮಟಚಿ" ಎಂಬುದು ಛಾಂದೋಗ್ಯದಲ್ಲಿ ಬಂದಿದೆ. ಛಾಂದೋಗ್ಯವು ದಕ್ಷಿಣ ಹಿಂದುಸ್ತಾನದಲ್ಲಿ ಸಂಗ್ರಹಿಸಲ್ಪಟ್ಟ ಉಪನಿಷತ್ತಲ್ಲ; ಆರ್ಯರು ಪಂಜಾಬಿನಲ್ಲಿದ್ದಾಗಲೆ ಇದು ರಚಿತವಾದುದು. ಪಂಜಾಬಿನಲ್ಲಿ

ಮಿಡಿಚೆ ಶಬ್ದವು! ಇದನ್ನು ಕುರಿತು ಹೇಳುವಾಗ ತಮ್ಮ ಉಪನ್ಯಾಸದಲ್ಲಿ ಡಾ. ದೇವದತ್ತ ಭಂಡಾರಕರರು ಎನ್ನುವುದೇನೆಂದರೆ:

> I have no doubt that more such (words) will be forth coming from the Vedic Literature if scholars of Dravidian Languages undertake this task.[೧೧]

ಆದುದರಿಂದ ಈ ಮೊದಲು ಹೇಳಿದ ತುರ್ವ ಮತ್ತು ಡಾ. ಜಾಕೋಬಿ ಮೊದಲಾದ್ಧವರು ಹೇಳುವ ಮಟಚಿಯಂತೆ ಚಂದ್ರವೂ ಸಂಸ್ಕೃತ ಶಬ್ದವಾಗಿರದೆ 'ದ್ರಾವಿಡ'- ಹಟ್ಟಿಕಾರರ ನುಡಿಯೇ ಆಗಿರಬೇಕು. ಈ ಆರ್ಯೇತರ ಹಟ್ಟಿಕಾರರ ಮೂಲ ಜನಾಂಗವು ಋಗ್ವೇದಕಾಲದಲ್ಲಿಯೆ ಒಡೆದು ಇಬ್ಭಾಗವಾಯಿತೆಂದು ಊಹಿಸುವುದಕ್ಕೆ 'ಚಂದ್ರ' ಶಬ್ದವು ಒತ್ತಾಯಪಡಿಸುತ್ತಲಿದೆ. ಏಕೆಂದರೆ ಋಗ್ವೇದದಲ್ಲಿ ಚಂದ್ರಶಬ್ದವು ಶ್ಚಂದ್ರ-ಶ(ಚ)ಂದ್ರವೆಂಬುದಾಗಿಯೂ ಹಲವೆಡೆಗೆ ಕಾಣಿಸಿಕೊಳ್ಳುತ್ತದೆ. ಆರಂಭದಲ್ಲಿದ್ದ ಶ(ಚ)ಂದ್ರವು ಮುಂದೆ ಉಚ್ಚಾರದಲ್ಲಿ ಬದಲಾವಣೆಗಳು ಆಗಲಾರಂಭಿಸಿದ ಬಳಿಕ 'ಚಂದ್ರ'ವಾಯ್ತೆಂದು ಪ್ರೊ. ರಾಜವಾಡೆಯವರು ಸರಿಯಾಗಿ ಕಂಡು ಹಿಡಿದಿರುವರು. ಇವರು ಅಭಿಪ್ರಾಯ ಪಡುವುದೇನೆಂದರೆ:

> The original word was 'ಶ್ಚಂದ್ರ' current in the pre-Rugvedic times, by the time of that Veda it had shed its ಶ್ and that it showed its original spelling in some cases.
>
> But its absence in others shows that ಚಂದ್ರ had become popular and that no attempt could dislodge it. This is the only explanation intelligible to me.

ಋಗ್ವೇದದಲ್ಲಿ ಚಂದ್ರಶಬ್ದವು ಪುರು, ಹರಿ, ಅಶ್ವ, ವಿಶ್ವ ಮೊದಲಾದ ಪದಗಳು ಮುಂದೆ ಬಂದಾಗ ಪುರುಶ್ಚಂದ್ರ, ಅಶ್ವಶ್ಚಂದ್ರ, ವಿಶ್ವಶ್ಚಂದ್ರ ಎಂದಾಗುವ ಕಾರಣವೇನು? ಈ ಪ್ರಶ್ನೆಗೆ ಪ್ರೊ. ರಾಜವಾಡೆಯವರು ಹೇಳಿದ ಕಾರಣವು ಬಹಳೆ ಸಮಾಧಾನಕರವಿದೆ. ದ್ರಾವಿಡ ಭಾಷೆಯ ತಾಯ್ನುಡಿಯಲ್ಲಿ ಚಕಾರ ರಕಾರಗಳ ಮಿಶ್ರ ಉಚ್ಚಾರವುಂಟೆಂದು ವಿದ್ವಾಂಸರು ನಿರ್ಧರಿಸಿದ್ದಾರೆ. ತಮಿಳು ಭಾಷೆಯಲ್ಲಿ ಅದು ಈಗಲೂ ಗೋಚರವಾಗುವುದು. ಈ ಉಚ್ಚಾರವನ್ನು ಕೇಳಿದರೆ ಅದು ಶಕಾರವೊ ಚಕರಾವೊ ಸ್ಪಷ್ಟವಾಗಿ ತಿಳಿಯುವುದಿಲ್ಲ. ಶ-ಚಕಾರಗಳ ನಡುವಿನ ಉಚ್ಚಾರವದು. ಕನ್ನಡದಲ್ಲಿ ಈ ಬಗೆಯ ಉಚ್ಚಾರವು ಉಳಿದಿಲ್ಲ. ಆ ಉಚ್ಚಾರದೊಳಗಿನ ಶಕಾರದ ಭಾಗವು ಹಿಂದೆ ಬಿದ್ದು ಚಕಾರವು ಮಾತ್ರ ರೂಢವಾಯಿತು. ಅಂದರೆ, ಆ ಮೂಲ ಭಾಷೆಯಿಂದ ಭಿನ್ನವಾದ ಹೊಸತೊಂದು ಮಾತು ತಲೆಯೆತ್ತಲಾರಂಭಿಸಿತು. ತಮಿಳರು ಆರ್ಯರ ಸಂಪರ್ಕದಿಂದ ಬಹಳ ದೂರವಿದ್ದುದರಿಂದ ಅವರ ಮಾತುಗಳಲ್ಲಿ ವಿಶೇಷ ವ್ಯತ್ಯಾಸಗಳುಂಟಾಗಲಿಲ್ಲ. ಆದರೆ, ಉತ್ತರದ ಕಡೆಯ 'ದ್ರಾವಿಡ' ಶಾಖೆಯವರಿಗೆ ತಮ್ಮ ಭಾಷೆಯನ್ನು ಇದ್ದಕ್ಕಿದ್ದ ಹಾಗೆಯೆ ಕಾಯ್ದುಕೊಳ್ಳುವುದು ಅಸಾಧ್ಯವಾಯ್ತು. ಮಾತಿನಲ್ಲಿ - ಉಚ್ಚಾರದಲ್ಲಿ ಮಾರ್ಪಾಟು ಗಳಾಗಲಾರಂಭಿಸಿದುವು. ಎರಡು ಭಿನ್ನಭಾಷೆಗಳ ಸಂಬಂಧವು ಬಂದಾಗ ಈಬಗೆಯ ಪರಿಣಾಮ ಗಳಾಗುವುದು ಅನಿವಾರ್ಯ.[೧೨] ಋಗ್ವೇದ ಕಾಲದಲ್ಲಿ ಹೀಗೆ ಮಾರ್ಪಾಟುಗಳನ್ನು ಹೊಂದಲಾರಂಭಿಸಿದ ಈ ನುಡಿಯೇ ಉತ್ತರದ (ವಡುಕ) ಹಟ್ಟಿಕಾರರ ಭಾಷೆಯೆಂದು ಹೇಳಬಹುದು. ಕನ್ನಡದ ಮಿಡಿಚೆ ಶಬ್ದಕ್ಕೆ ತೀರ ಸಮೀಪದ 'ಮಟಚಿ' ಎಂಬ ಛಾಂದೋಗ್ಯದೊಳಗಿನ ಈ ಮಾತನ್ನು ನೋಡಿದರೆ ಋಗ್ವೇದಕಾಲದಿಂದ ಛಾಂದೋಗ್ಯ ಉಪನಿಷತ್ಕಾಲದ ಒಳಗಾಗಿ ಆಂಧ್ರ-ಕರ್ಣಾಟಕ ನುಡಿಯ ತಾಯಿಯಾದ 'ಮೊದಲ ಹಳಗನ್ನಡ' ಭಾಷೆಯು ಒಂದು ರೂಪಕ್ಕೆ ಬಂದಿತ್ತೆಂದು ಊಹಿಸಬಹುದಾಗಿದೆ. ಈ ಬಗೆಯಾಗಿ ಕನ್ನಡದ ಉಗಮವು ಋಗ್ವೇದದ ಕಾಲದಲ್ಲಿ ಆದುದು ಗೋಚರವಾಗುತ್ತಿದೆ.

ವೈದಿಕ ಸಾಹಿತ್ಯದಲ್ಲಿ ಚಂದ್ರ ಶಬ್ದಕ್ಕಿರುವ ಅರ್ಥವನ್ನು ನೋಡಿದರೂ ಇದು ಕನ್ನಡ-ತಮಿಳುಗಳ ಬಳಗದ ಮಾತೆಂದು ಅನುಭವಕ್ಕೆ ಬರುತ್ತಿದೆ. ಚಂದ್ರಾ, ಅರ್ಜುನಿ ಎಂದು ಉಷಸ್ಸಿಗೆ ವಿಶೇಷಿಸಿದ್ದಾರೆ; ಅಗ್ನಿಯನ್ನು ವರ್ಣಿಸುವಾಗಲೂ ಚಂದ್ರಶಬ್ದವನ್ನು ಉಪಯೋಗಿಸಿದ್ದಾರೆ. ಆದುದರಿಂದ ಚಂದ್ರ ಶಬ್ದವು ಕೆಂಪು (ಹಳದಿ ಮಿಶ್ರ) ಬಣ್ಣವನ್ನು ಸೂಚಿಸುವ ಶಬ್ದವೆಂದು ತಿಳಿದುಕೊಳ್ಳಬಹುದಾಗಿದೆ. ತಮಿಳು-ಕನ್ನಡಿನಲ್ಲಿ ಶೆನ್-ಚೆನ್-ಕೆನ್ ಗಳಿಗೆ ಇದೇ ಅರ್ಥವಿದೆ. ಋಗ್ವೇದ ಮೊದಲಾದ ವೈದಿಕಸಾಹಿತ್ಯದಲ್ಲಿ ಚಂದ್ರವೆಂದರೆ ಬಂಗಾರವೆಂದರ್ಥ. ಚನ್-ಚಿನ್-ಚಿನ್ನವೆಂದರೆ ಕನ್ನಡದಲ್ಲಿಯೂ ಬಂಗಾರ! ಶೆನ್(ಚೆನ್)ದ ಒಂದು ರೂಪವೇ ಶಿನ್; ಮತ್ತು ಚಿನ್ನ, 'ಸು-ವರ್ಣ'-ಒಳ್ಳೆ ಬಣ್ಣ-ಎಂಬುದು ಚಿನ್-ಚೆನ್ ಚೆಂದ-ಎಂಬುದರ ಭಾಷಾಂತರದಂತೆ ತೋರುವುದು. ಚಂದ್ರನಿಗೆ Moon ಎಂಬ ಅರ್ಥವು ಅರ್ಥವೇದದ ಕಾಲಕ್ಕೆ ಬಂದಿತು. ಚೆನ್ನಿಗ-ಚೆಂದವಾಗಿರುವವನೆಂದು ಲಕ್ಷಣಾರ್ಥದಿಂದ ತಿಂಗಳನಿಗೆ ಚಂದಿರನೆಂದೂ, ಚಂದ್ರನೆಂದೂ ಕರೆಯಲಾರಂಭಿಸಿರಬೇಕು.

ಶಿನೀವಾಲೀ ಶಬ್ದದ ಅರ್ಥವನ್ನು ಭಾನುಜಿ ದೀಕ್ಷಿತ ತನ್ನ ಅಮರಕೋಶದ ಟೀಕೆಯಲ್ಲಿ "ಸಿನೀ ಚಂದ್ರಕಲಾ" ಎಂದು ಕೊಡಲಾಗಿದೆ. ಶಿನ್. ಹೆಸರಿನ ಚಂದ್ರನ ಪೂಜೆಯು 'ಉರ್' ಎಂಬ ಊರಲ್ಲಿ (ಸಿಂಧೂ ದೇಶದ ಪೂರ್ವಕ್ಕೆ) ಹಿಂದೂದೇಶದ ಹೊರನಾಡಿನಲ್ಲಿ ಅತಿಶಯವಾಗಿ ನಡೆಯುತ್ತಿದ್ದಿತೆಂದು ಸಂಶೋಧಕರು ಕಂಡು ಹಿಡಿದಿದ್ದಾರೆ. ಬಾಬಿಲೋನಿಯಾ ಮತ್ತು ಅಸ್ಸಿರಿಯಾ ದೇಶಗಳ ದೊಡ್ಡದೊಡ್ಡ ಪಟ್ಟಣಗಳಲ್ಲಿ ಚಂದ್ರನ ಗುಡಿಗಳಿದ್ದುವೆಂದು ಗೊತ್ತಾಗಿದೆ. ಇದರ ಪ್ರಸಾರವು ಗ್ರೀಸದೇಶದ ವರೆಗೂ ಆಗಿತ್ತು. ಶಿನಯ್ ಎಂಬ (Sinai, the bilical mount) ಚಂದ್ರಗಿರಿಯ ಉಲ್ಲೇಖವು ಕ್ರೈಸ್ತಧರ್ಮಗ್ರಂಥದಲ್ಲಿ ಬಂದಿದೆ. ಕ್ರೈಸ್ತ ಧರ್ಮದೊಳಗಿನ "ಸಬ್ಬಾತ್" (Sabbath)ದಲ್ಲಿ ಚಂದ್ರಪೂಜೆಯ ಸಂಬಂಧವಿದೆಯೆಂದು ಹೇಳುತ್ತಾರೆ.[೧೩] ಅರಬರ (ಮಹಮ್ಮದೀಯರ) ಚಂದ್ರಪೂಜೆಯಂತೂ ಸುಪ್ರಸಿದ್ಧವಿದೆ. ಆದುದರಿಂದ, ಇಂದು ಪಶ್ಚಿಮದವರಿಂದ ಪೂರ್ವಕ್ಕೆ ಎಂದರೆ ಹಿಂದೂದೇಶಕ್ಕೆ ಬಂದ ಸಂಪ್ರದಾಯವೆಂದು ಗ್ರಹಿಕೆಯಾಗುವ ಸಂಭವವಿದೆ.

ಶಿನ್-ಶೆನ್-ಚೆನ್ ಶಬ್ದವು* ಸಂಪೂರ್ಣವಾಗಿ "ದ್ರಾವಿಡ" ಭಾಷೆಗೆ ಸಂಬಂಧಪಟ್ಟುದೆಂದು ಸ್ಪಷ್ಟವಿರುವುದರಿಂದ ಶಿನ್-ಶಿನೀವಾಲೀ ದೇವತೆಯ ಆರಾಧನೆಯು ಹಿಂದೂದೇಶದಿಂದಲೇ ಅಸ್ಸೀರಿಯಾ ಬಾಬಿಲೋನಿಯಾಗಳ ಮುಖಾಂತರವಾಗಿ ಗ್ರೀಸದೇಶದ ಕಡೆಗೆ ಹೋಗಿರಬೇಕೆಂದು ಊಹಿಸುವುದಕ್ಕೆ ಅವಕಾಶವಿದೆ. ಗ್ರೀಸದೇಶದ ಎಲ್ಲಮ್ಮನ (Mother of all Gods- and all men) ಪೂಜೆಯು ಕ್ರೈಸ್ತಧರ್ಮಕ್ಕಿಂತ ಮುಂಚೆ ಬಹಳೇ ಲೋಕಪ್ರಿಯವಾಗಿತ್ತು.[೧೪] ಕೆಲವು ಸಂಶೋಧಕರ ಅಭಿಪ್ರಾಯದಂತೆ ಈ ದೇವಿಯ ಆರಾಧನೆಯು ಏಶಿಯಾಮೈನರಿನಲ್ಲಿಯೆ ಮೊದಲು ಹುಟ್ಟಿತು. ಇದು ನಿಜವೆಂದು ಒಪ್ಪಿಕೊಂಡರೂ ಕ್ರಿಸ್ತಪೂರ್ವ ೬ನೆಯ ಶತಮಾನದ ಸುಮಾರಿಗೆ ಗ್ರೀಸದಲ್ಲಿ ನಡೆಯುತ್ತಿದ್ದ ಶಿವ-ಶಕ್ತಿ ಪೂಜೆಯ ರೀತಿಯನ್ನು ನೋಡಿದರೆ ಈ ಪೂಜಾಪದ್ಧತಿಯಾದರೂ ಹಿಂದೂ ದೇಶದಿಂದಲೇ ಅಲ್ಲಿಗೆ ಹೋಗಿರಬೇಕೆಂದು ಹೇಳಬೇಕಾಗುತ್ತದೆ. ಎಲ್ಲಮ್ಮನ (Great Goddess) ಸಂಬಂಧವು ಗುಡ್ಡಕ್ಕೆ ಇರುವುದು; ಗುಡ್ಡದ ಮೇಲೇ ಗುಡಿಗಳು; ಮಹಾದೇವಿ; ಜಗನ್ಮಾತೆ ಎಂಬ ವಿಶೇಷಣಗಳು. ಇವಳ ಭಕ್ತರು, ಅರ್ಚಕರಲ್ಲಿ ಗಂಡು 'ಜೋಗವ್ವ'ಗಳಾಗುವುದು; ಬಿಡುಗೂದಲಿನವರಾಗಿರುವುದು (ಜಡೆ ಬಿಡುವುದು); ನಾನಾವಾದ್ಯಗಳ ನಿನಾದದಲ್ಲಿ ಮೈಮರೆವವರೆಗೆ ಕುಣಿತ; ಗಣೆ ಅಥವಾ ನಂದೀಕೋಲನ್ನು ಮೆರೆಸುತ್ತ ಒಯ್ಯುವುದು; ಕೊರಳಲ್ಲಿ ಲಿಂಗವನ್ನು ಧಾರಣಮಾಡುತ್ತಿದುದ್ದು ಮುತ್ತು (?) ಕಟ್ಟಿ ಜೋಗಿತನದ ದೀಕ್ಷೆ ಕೊಡುವುದು; ರಂಡೆಹುಣ್ಣಿವೆ ಅಥವಾ ದೇವಿಯು ಮೃತಳಾದಳೆಂದು ದುಃಖಿಸುವುದು; ಮುಂದೆ ಮುತ್ತೈದೆ ಹುಣ್ಣಿವೆಯಂತಹ ಸಮಾರಂಭವನ್ನು ಜರುಗಿಸುವುದು; ಬಲಿದಾನ, ಎಣ್ಣೆಯ ಕಮ್ಮಟ

---

* ಶಿವರಹಸ್ಯ (೧೯೩೯) ಗ್ರಂಥದಲ್ಲಿ 'ಶಿವ' ಶಬ್ದವನ್ನು ಶಿಂವ್' ಎಂಬ ಮೂಲರೂಪದಿಂದ ಸಾಧಿಸುತ್ತಾರೆ. ಅಲ್ಲಿ 'ಶಿನ್, ಶೆನ್' ಶಬ್ದಗಳ ಸ್ವರೂಪ, ಅವುಗಳ ಆಶಯಗಳನ್ನು ಕುರಿತೂ ಚರ್ಚಿಸಿದ್ದಾರೆ (ಸಂ).

(ಕರ್ಪಟ)ಗಳನ್ನು ಧರಿಸುವುದು; ಇವೆಲ್ಲ ಸಾಮ್ಯಗಳನ್ನು ನೋಡಿದರೆ ಇಂದಿಗೂ ನಮ್ಮ ಜನಾಂಗದವರು ಪೂಜಿಸುತ್ತಲಿರುವ ಎಲ್ಲಮ್ಮ, ಅಂಬಾಭವಾನಿ ಮತ್ತು ಮಲ್ಲಯ್ಯನ (ಶಿವ-ಶಕ್ತಿಗಳ) ಜಾತ್ರೆಗಳಿಗೂ ಇದಕ್ಕೂ ವಿಶೇಷ ವ್ಯತ್ಯಾಸವೇ ತೋರುವುದಿಲ್ಲ. ಆದುದರಿಂದ, ಈ ನಾಡಿನಿಂದಲೇ ಶಿನ್- (ಚಂದ್ರ)ನ ಪೂಜೆಯು ಗ್ರೀಸದೇಶದ ಕಡೆಗೆ ಹೋಯಿತೆನ್ನಬೇಕಾಗುತ್ತದೆ.

ಈ ಪ್ರಬಂಧದ ಕೊನೆಯ ಪರಿಶಿಷ್ಟದಲ್ಲಿ ಹತ್ತಿಯ ಕಥೆಯಲ್ಲಿ ಸೂಚಿಸಿರುವಂತೆ ಗ್ರೀಸ, ಇಜಿಪ್ತದ ಕಡೆಯ ದೇವತೆಗೆ ಮಾ ಅಥವಾ ಅಮ್ಮ (Ammon) ನವರು, ಎಂದು ಹೆಸರಿದ್ದುದಂತೂ ಇನ್ನೂ ಆಶ್ಚರ್ಯಕರವಾಗಿದೆ. ಅಮ್ಮನೆಂಬ ಹೆಸರಿನಂತೆ ಗ್ರೀಸದೇಶಕ್ಕೆ ಶಿನ್ ಹೆಸರಿನ ದೇವತೆಯೂ ಏಕೆ ಇಲ್ಲಿಂದಲೇ ಅಲ್ಲಿ ಹೋಗಿರಲಿಕ್ಕಿಲ್ಲ? ಪ್ರಾಚೀನ ಕಾಲದಲ್ಲಿ ಹಿಂದೂ ದೇಶದ ಜನಾಂಗದ ವ್ಯಾಪಾರ ವ್ಯವಹಾರಗಳು ನೈಲ್‌ನದಿಯ ವರೆಗೆ ಅವ್ಯಾಹತವಾಗಿ ಸಾಗುತ್ತಿದ್ದವೆಂದು ಸರ್ ಮಾರ್ಶಲ್‌ರು ಬರೆಯುತ್ತಾರೆ.[೧೫] 'ದ್ರಾವಿಡ' ಜನಾಂಗಕ್ಕೂ ಸುಮೇರಿಯದ ಜನಾಂಗಕ್ಕೂ ಎಷ್ಟೊಂದು ಬಳಿಕೆಯಿರಬೇಕೆಂಬುದು ಇವೆರಡೂ ಭಾಷೆಗಳಲ್ಲಿರುವ ಒಂದೇ ಬಗೆಯ ಒಂದು ಅರ್ಥದ ಅನೇಕ ಶಬ್ದಗಳಿಂದ ಸಿದ್ಧವಾಗುತ್ತಲಿದೆ.

ಚಂದ್ರನನ್ನು ಕುರಿತು ಇನ್ನೂ ಒಂದು ಮಾತು ವಿಚಾರಣೀಯವಾಗಿದೆ. ಸಿನೀವಾಲಿಯು ವಿಷ್ಣುವಿನ ಹೆಂಡತಿಯೆಂದು ಅರ್ಥವೇದದಲ್ಲಿದೆ.[೧೬] ವಿಷ್ಣುವಿನ ಹೆಂಡತಿಯ ಹೆಸರು ನಿಜವಾಗಿ ಲಕ್ಷ್ಮಿ. ಆದಕಾರಣ 'ಶಿನ್' ಇವಳೇ ಶಿರಿ, ಶ್ರೀ ಆಗಿರಬೇಕಲ್ಲವೆ? ಶಿರಿ (ಸಿರಿ) ಇದು ಶ್ರೀ ಇದರ ತದ್ಭವವಲ್ಲ; ಶಿರಿ ಇದರ ಸಂಸ್ಕೃತೀಕರಣವಾಗಿ ಶ್ರೀ ಯಾಗಿರಬೇಕು. ಪರಂಪರೆಯು ಚಂದ್ರ ಮತ್ತು ಲಕ್ಷ್ಮೀ ಇವರಿಬ್ಬರೂ ಕ್ಷೀರಸಾಗರದಲ್ಲಿ ಹುಟ್ಟಿದವರೆಂದಿರುವ ಪರಂಪರೆ ಅರ್ಥಪೂರ್ಣವಾಗಿಲ್ಲವೆ? ಶಿನ್ ಇದರ ಗಂಡುರೂಪು ಚಂದ್ರ; ಹೆಣ್ಣುರೂಪು ಶಿರಿ-ಶ್ರೀ ಎಂದು ಹೇಳಬಹುದೆ? ಶ್ರೀಸೂಕ್ತದಲ್ಲಿ ಲಕ್ಷ್ಮಿಯನ್ನು 'ಹಿರಣ್ಯವರ್ಣಾಂ', 'ಸುವರ್ಣಾಂ' 'ಹೇಮ ಮಾಲಿನೀಂ' 'ಹಿರಣ್ಮಯೀಂ' ಎಂದು ಮುಂತಾಗಿ ಬಣ್ಣಿಸಿದ್ದಾಗಿದೆ. ಅದರಲ್ಲಿ, ಲಕ್ಷ್ಮಿಗೆ 'ಚಂದ್ರಾಂ,' 'ಚಂದ್ರಾಭಾಂ' ಎಂದು ವರ್ಣಿಸಿದ್ದುಂಟು. 'ಸೂರ್ಯಾಗ್ನಿವರ್ಣಾಭಾಂ' ಎಂದೂ ಉಂಟು; ಆದರೆ 'ಚಂದ್ರಾಂ' ಎಂದು ಹೇಳಿರುವಲ್ಲಿರುವ ಔಚಿತ್ಯವೂ ಪರಂಪರಾಗತವಾದ ಅರ್ಥವೈಪುಲ್ಯವೂ ಬೇರೆ ಯಾವ ಪದಗಳಲ್ಲಿಯೂ ಕಾಣಬರುವುದಿಲ್ಲ. ವೈದಿಕಸಾಹಿತ್ಯದಲ್ಲಿ 'ಚಂದ್ರ' (ಚೆನ್-ಚಿನ್-ಚಿನ್ನ) ಎಂದರೆ ಬಂಗಾರ. ನಮ್ಮವರಿಗೆ-ಅದೇಕೆ ಜಗತ್ತಿಗೆ ಬಂಗಾರವೆಂದರೇ ಲಕ್ಷ್ಮಿ. ಆದುದರಿಂದ, ಮೂಲತಃ ಚಂದ್ರಾ-(ಚಂದ್ರ) ಎಂದರೇ ಲಕ್ಷ್ಮಿಯೆಂದು ಗೊತ್ತಾಗುವಂತಿದೆ. ದೇವರು ಚಂದ್ರನನ್ನು ಉಣ್ಣುವುದರಿಂದ ಆತನು ಕ್ಷೀಣನಾಗುವನೆಂದು ಪ್ರಾಚೀನ ಪರಂಪರಾಗತವಾದ ಕಥೆಯಿದೆ. ಶ್ರೀಸೂಕ್ತದಲ್ಲಿ ಲಕ್ಷ್ಮಿಗೂ "ದೇವಜುಷ್ಟಾಂ" ಎಂದು ವರ್ಣಿಸಿದ್ದುಂಟು! ಆದುದರಿಂದ, ಶಿನೀ(ವಾಲೀ) ಶಿರಿ, ಮತ್ತು ಚಂದ್ರಾ ಇವೆಲ್ಲವೂ ಲಕ್ಷ್ಮಿಯ ಸ್ವರೂಪಗಳು; ಚಂದಿರನ ಸ್ತ್ರೀರೂಪಗಳೆಂದು ವ್ಯಕ್ತವಾಗುತ್ತದೆ.

ಸಂಸ್ಕೃತದಲ್ಲಿ 'ಚಂದ್ರ' ಶಬ್ದದ ನಿರುಕ್ತಹೇಳುವಾಗ ಚೆನ್ (ಹೊಳೆ, ಪ್ರಕಾಶಿಸು) ಧಾತುವಿನಿಂದ ಇದನ್ನು ಸಾಧಿಸುವ ಪರಿಪಾಠವಿದೆ. ಆದರೆ, ಪ್ರೊ. ರಾಜವಾಡೆಯವರು ಕಂಡುಹಿಡಿದಂತೆ ನಿಜವಾಗಿಯೂ 'ಚಂದ್ರ'ವೆಂಬುದು ಮೂಲಶಬ್ದವಲ್ಲ; ಇದರ ಮೂಲ ರೂಪವು ಶೆಂದಿರ (ಋಗ್ವೇದದೊಳಗಿನ 'ಶ್ಚಂದ್ರ'); ಆದಕಾರಣ ಇದು ಮೂಲ ದ್ರಾವಿಡದ 'ಶೆನ್' ಶಬ್ದದಿಂದ ಹೊರಟಿತೆಂಬುವುದೇ ಹೆಚ್ಚು ಯೋಗ್ಯವಾಗಿದೆ. ಈ ಬಗೆಯಾಗಿ ಇದೆಲ್ಲವೂ ಹಾಲುಮತದವರ ಪರಂಪರೆಯೆಂದು ಹೇಳಬಹುದಾಗಿದೆ.* ವೇದಕಾಲದ ಇಡಾ, ಅಂಧಸ್‌ಗಳ

---

* ಈ ಅಂಶವು ಹಲವು ಬಗೆಯ ಚರ್ಚೆಗಳಿಗೆ ಎಡೆಮಾಡಿಕೊಡುತ್ತದೆ. ಇದರ ಫಲವಾಗಿ ೧೯೬೦ರಲ್ಲಿ 'ಹಾಲುಮತ ದರ್ಶನ' ಬರೆದು ಕಂನಾಡದ ಮೂಲಿಗ ಪರಂಪರೆಯಲ್ಲಿ ಹಟ್ಟಿಕಾರರು ಮತ್ತು ಧನಗಾರರ ಸಾಂಸ್ಕೃತಿಕ ಮೂಲಎಳೆಗಳನ್ನು ತಿಳಿಯುವ ಯತ್ನ ಮಾಡಿದರು ಹಟ್ಟಿಕಾರರ ಸಾಂಸ್ಕೃತಿಕ ಚರಿತ್ರೆಯು ವಿಸ್ತೃತವಾಗಿ ಪ್ರಾರಂಭವಾಗುವುದೇ ಈ ಪುಸ್ತಕದಿಂದ. ಇದರೊಡನೆ ಇನ್ನಷ್ಟು ವಿವರಗಳೂ ವ್ಯಾಖ್ಯಾನವೂ ಸೇರಿದ್ದು ಹಾಲುಮತ ದರ್ಶನದಲ್ಲಿಯೇ. (ಸಂ)

ಇಡ್ಯೆಯರೂ ಅಂಡೆಯವರೂ ಹಾಲುಮತದವರು. ಕ್ಷೀರಸಾಗರದಲ್ಲಿ ಹುಟ್ಟಿದ ಚಂದಿರನು ಈ ಜನಾಂಗದ ಪ್ರತೀಕ. ಯದು-ತುರ್ವಸರು ಚಂದಿರವಂಶದವರೆಂದು ಪುರಾಣಗಳೆಲ್ಲವೂ ಏಕಕಂಠದಿಂದ ಸಾರುತ್ತಲಿವೆ.

ನಮ್ಮ ನಾಡಿನವರಲ್ಲಿ ಶೃಂಗಿಗೋತ್ರವನ್ನು ಹೇಳುವವರುಂಟು. ಋಗ್ವೇದದಲ್ಲಿ 'ವಿಷಾಣಿ'ಗಳ ಹೆಸರು ಒಮ್ಮೆ ಬಂದಿದೆ. (೭.೧೮.೭) 'ವಿಷಾಣಿನ್' ಎಂದರೇನೆಂಬುದು ತಿಳಿಯದ್ದರಿಂದ 'ಶಿವಸ್ಥಾಣಕ್ಕೆ ಕೊಂಬು ಹಚ್ಚಿಕೊಂಡಿರಬಹುದೇನೋ?' ಎಂದು ಕೆಲವರು ಊಹಿಸುತ್ತಾರೆ.[೧೭] ಆದರೆ, ದನಗಳೇ ಪ್ರಧಾನವಿಷಯವಾಗಿರುತ್ತಿದ್ದ ಹಟ್ಟಿಕಾರರಿಗೇ 'ವಿಷಾಣಿ'ಗಳೆಂದು ಹೇಳಿರುವ ಸಂಭವವು ಹೆಚ್ಚಾಗಿದೆ. ಇವರೊಡನೆ "ಶಿವಾಃ" ಇವರುಗಳ ಉಲ್ಲೇಖವೂ ಇದೆ. ಲಿಂಗವಂತರಲ್ಲಿ ಹಲವರಿಗೆ 'ಶಿವಾ' ಎಂದು ಸಂಬೋಧಿಸುವ ಪದ್ಧತಿಯು ಈಗಲೂ ಉಂಟು. ಶೃಂಗಿ (ವಿಷಾಣಿ)- ಗೋತ್ರದವರು, ಪಶುಗಳ ಪತಿಯಾದ ಶಿವನ ಉಪಾಸಕರೂ (ಶಿವಾಃ) ದನಗಾರಿಕೆಯನ್ನು ಮಾಡಿಕೊಂಡಿದ್ದವರೂ (ವಿಷಾಣಿನ್, ಶೃಂಗಿನ್) ಆದ ತುರುಕಾರರು (ತುರ್ವಶರು) ನಮ್ಮ ಹಟ್ಟಿಕಾರರೇ ಆಗಿರಬೇಕಲ್ಲವೆ? ಯಾದವರು ಗೋವಳರೆಂಬುದು ಸುಪ್ರಸಿದ್ಧವೇ ಇದೆ. ಜಾಲ (ಜಾಡ?) ಶಬ್ದಕ್ಕೆ ಕಿಟ್ಟೆಲ್ಲರ ಕೋಶದಲ್ಲಿ ಗೋಸಮೂಹವೆಂಬ ಒಂದು ಅರ್ಥವೂ ಕೊಡಲ್ಪಟ್ಟಿದೆ! "ಯಾದವಂ ಗೋಮಹಿಷಾದಿಕೇ ಧನೇ" ಎಂದು ಸಂಸ್ಕೃತಕೋಶವು ಹೇಳುತ್ತಿದೆ.

ಟಿಪ್ಪಣಿ

೧. Thurston : ***Tribes Castes of Southern India***, See ವೆಳ್ಳ P. 361-89
೨. Mac-donell, ***Vedic index,*** Vol. I. P. 437
೩. Ibid, ***Vedic Mythology***, P. 127
೪.೫. Mythic Society Journal, Silver Jubilee Number
೬. Cf-Jean Przyluski: ***The Great Goddess in India and Iran*** (Indian Historical Quarterly, Vol. X. p. 405)
೭. Mac-donell, ***Vedic Mythology***, P. 124
೮. Encyclopaedia of Religion and Ethics
೯. Bhandarkar R. G., Commemoration Volume, P. 40
೧೦. Proceedings of Fifth Oriental Conference Vol. I. p 273
೧೧. The Carmichael Lectures, 1918 P. 27
೧೨. ಭಾಷೆಯಲ್ಲಿ ಈ ಬಗೆಯ ಎಷ್ಟೊ ಮಹತ್ವದ ಪರಿಣಾಮಗಳಾಗುತ್ತವೆಂಬುದನ್ನು ಅರಿತುಕೊಳ್ಳಲು ಈ ಮೊದಲು ಹೇಳಿದ ಸ್ಕೀನ್, ಜಸ್ಪರಸನ್‌ರ ಗ್ರಂಥಗಳನ್ನು ನೋಡಿಕೊಳ್ಳಬಹುದು.
೧೩. Encyclopaedia of Britanica, 11th Edition : ನೋಡಿ Sin, Sinai, Sabbath;
೧೪. ಅದೇ : Great Goddess ನೋಡಿ.
೧೫. Sri Johu Marshal, ***Mohenjo Daro,*** P. 50
೧೬. Mac-donell, Vedic Mythology P. 125
೧೭. Mac-donell, Keath. A. B., Vedic Index Vol. II ವಿಷಾಣಿನ್ ಮತ್ತು ಶಿವಾಃ ಪದಗಳನ್ನು ನೋಡಿ.

೫ನೆಯ ನೆಲೆ

ಹಟ್ಟಿಕಾರರ ಹರಿದಾಟ

ದೇವಾಂಗದವರು ಕೆಂಪೇಗೌಡನ ಕಾಲಕ್ಕೆ ತಮ್ಮಲ್ಲಿ ನೆಲೆಯಾಗಲು ಹಂಪಿಯತ್ತಣಿಂದ ಬಂದರೆಂದು ರಾವಬಹದ್ದೂರ ಸಿ. ಹಯವದನರಾಯರು ಮೈಸೂರ ಗೆಜೆಟಿಯರಿನಲ್ಲಿ ಬರೆದಿದ್ದಾರೆ (ಭಾಗ I ಪು. ೨೩೯). ಸೇಲಂ ಜಿಲ್ಲೆಗೆ ಇವರು ಹಂಪಿ-ವಿಜಯನಗರದಿಂದ ಬಂದರೆಂದು ಆ ಜಿಲ್ಲೆಯ ಗ್ಯಾಝಿಟಿಯರು ಹೇಳುತ್ತದೆ (ಭಾಗ I ಪು. ೧೮೧).

ಆದರೆ, ಹಂಪಿಯ ಹೆಸರು ಸಾಹಿತ್ಯದಲ್ಲಿ ಕೇಳ ಬರಲಾರಂಭಿಸಿದುದು ೧೨ನೆಯ ಶತಮಾನದಿಂದ ಮುಂದೆ. ಆದುದರಿಂದ ರಾಮಾಯಣಕಾಲದಿಂದ ವಿಖ್ಯಾತವಾದ ಹಂಪಿಯು ಇದೇ ಆಗಿರಬಹುದೇ ಎಂಬ ಬಗೆಗೆ ಸಂದೇಹವುಂಟಾಗುತ್ತದೆ. ರಾಮಾಯಣ ಕಾಲದ ಕಿಷ್ಕಿಂಧೆಯು ಇಲ್ಲಿಯೇ ಇದ್ದಿತೆಂದು ತೋರಿಸುವ ವಾಡಿಕೆಯುಂಟು. ಆ ಬಗೆಯಾಗಿ ಪ್ರತಿಪಾದಿಸುವ ಕೆಲವು ವಿದ್ವಾಂಸರೂ ಉಂಟು. ಆದರೆ, ಇದು ಪ್ರಾಚೀನ ರಾಮಾಯಣ ಕಾಲದ ಹಂಪಿಯಾಗಲಿ ಕಿಷ್ಕಿಂಧೆಯಾಗಲಿ ಅಲ್ಲವೇ ಅಲ್ಲವೆಂದು ಹೇಳುವವರೂ ಹಲವರಿದ್ದಾರೆ. ಪ್ರತ್ಯಕ್ಷ ವಾಲ್ಮೀಕಿ ರಾಮಾಯಣದಲ್ಲಿಯೇ ಕಿಷ್ಕಿಂಧೆಯು ವಿಂಧ್ಯದ ಉತ್ತರಕ್ಕಿದೆಯೆಂದು ಸ್ಪಷ್ಟವಾದ ಉಲ್ಲೇಖವಿದೆ. "ಕಿಷ್ಕಿಂಧೆಯಿಂದ ದಕ್ಷಿಣಕ್ಕೆ ಹೋದರೆ ನಿನಗೆ ದಾರಿಯಲ್ಲಿ ವಿಂಧ್ಯ, ನರ್ಮದೆ, ಗೋದಾವರಿಗಳು ಸಿಕ್ಕುವವು" ಎಂದು ಸುಗ್ರೀವನು ವಾನರನಿಗೆ ಹೇಳಿದ್ದುಂಟು. (ವಾಲ್ಮೀಕಿ. ರಾಮಾಯಣ. ೪೧, ೬-೮). ಬೃಹತ್‌ಸಂಹಿತೆಯಲ್ಲಿ ಹೇಳಿದ ಕಿಷ್ಕಿಂಧೆಯ ಸ್ಥಳವು ಈಗಿನ ಹಂಪಿಗೆ ಸರಿಹೋಗುವುದಿಲ್ಲ. ಮೋನಿಯರ ವಿಲಿಯಂಸ್‌ನು ಓಢ್ರದೇಶದ ಹತ್ತಿರ ವಾಲಿಯ ನಿವಾಸಸ್ಥಾನವು ಇದ್ದಿತೆಂದು ಹೇಳುತ್ತಾನೆ.

ಕಿಷ್ಕಿಂಧೆಯ ವಿಚಾರದಲ್ಲಿ ಮತಭೇದವಿದ್ದರೂ ಇಲ್ಲಿಯ ಜ್ಯೋತಿರ್ಲಿಂಗದ ಸಂಬಂಧವಂತೂ ಹೊಚ್ಚಹೊಸತು.

> 'ಈ ಲಿಂಗಂ ಜೋತಿರ್ಮಯಲಿಂಗಂ;
>
> ಈ ಲಿಂಗದ ಮಹಿಮೆಯಂ ಪೇಳ್ವುದಕೆ ಬ್ರಹ್ಮದೇವಂಗಂ ಅಸಾಧ್ಯಂ; ಎಮ್ಮ ಪಾಡೇನು?

ಎಂದು ಕೆಳದಿ ನೃಪವಿಜಯವು ಬಿತ್ತರಿಸಿದರೂ ಸುಪ್ರಸಿದ್ಧವಾದ ದ್ವಾದಶ-ಜ್ಯೋತಿರ್ಲಿಂಗಗಳಲ್ಲಿ ಹಂಪೆಯ ವಿರೂಪಾಕ್ಷನ ಹೆಸರೇ ಇಲ್ಲ.[೧] ಜ್ಞಾತ ಇತಿಹಾಸದಲ್ಲಿ ಹಂಪಿಗಿಂತಲೂ ಬಾದಾಮಿಯ ರಾಜವೈಭವವು ಹೆಚ್ಚು ಪ್ರಾಚೀನ. ದೇವಾಂಗರ ನೆಲೆವೀಡು ಇದು. ಹಂಪಿಗಾಗಲಿ, ಹಂಪಿಯಿಂದ ಮುಂದೆ ಮೈಸೂರು, ಸೇಲಂಗಳ ಕಡೆಗಾಗಲಿ ಹೋದ ಶಾಖೆಗಳ ಮೂಲವು ಇಲ್ಲಿಯೆ ಎಂದು ಊಹಿಸಬಹುದಾಗಿದೆ.

ಆದರೆ, ಈ ಭಾಗಕ್ಕೆ ಸಹ ಹಟ್ಟಿಗಾರ-ಜಾಡರು ಹೊಸಬರೇ. ಇವರ ಮೂಲಸ್ಥಾನವು ಇದಲ್ಲ. ಇವರು ಉತ್ತರದಿಂದ ಇತ್ತ ಬಂದವರೆಂದು ಶ್ರೀ ವೆಂಕಟರಂಗೋ ಕಟ್ಟಿಯವರ ಅಭಿಪ್ರಾಯ.[೨] ಈ ಹಟ್ಟಿಕಾರರು ಈಗಿನ ಆಶ್ರಯಸ್ಥಾನಗಳು ಇಳಕಲ್ಲು, ಗುಳೇದಗುಡ್ಡ. ಇವರು ಇಲ್ಲಿಗೆ ಗುಳೆಕಟ್ಟಿಕೊಂಡು ಬಂದು ಇಳಿದುಕೊಂಡವರೆಂದು ಆ ಊರ ಹೆಸರೆ ಹೇಳುತ್ತಿವೆ. "ತಾವು ಈ ಭಾಗಕ್ಕೆ ಗುಳೆದವರು" ಎಂಬ ಒಂದು ಹಳೆಯ ನೆನಪು, ಈ ಜನಾಂಗದಲ್ಲಿ ಮಸಮಸಕಾಗಿ ಉಳಿದುದನ್ನು ಹಲಕೆಲವರ ಬಾಯಿಂದ ಇನ್ನೂ, ಕೇಳಲಿಕ್ಕೆ ಸಿಕ್ಕುತ್ತದೆ. ಈ ಜನಾಂಗದ ದೇವಿ ಬನದಮ್ಮ-ಬನಶಂಕರಿ. ಬದಾಮಿಯ ಗುಡ್ಡವು ಏನು ಬನವೊ! ಮೈಸೂರ ಸೀಮೆಯಲ್ಲಿ ಈ ದೇವಿಯನ್ನು ಆರಾಧಿಸುವಾಗ ಮಂಟಪ ಕಟ್ಟಿ ಬನವನ್ನು (Groves) ವಿರಚಿಸುವುದುಂಟು[೩] ದೇವಿಭಾಗವತದಲ್ಲಿ (VII.) ವಿಂಧ್ಯವಾಸಿನೀ ದೇವಿಯು ಬರುತ್ತಾಳೆ. ಶಿವಪುರಾಣದಲ್ಲಿ (IV. ೧. ೨೧) ಸಹ ಇವಳ ಹೆಸರು ಬರುವುದು. ವಿಂಧ್ಯಾಚಲದ ಪಂಚಕ್ರೋಶಿಯಲ್ಲಿಯೆ ಪ್ರಾಚೀನ ಪಂಪಾಪುರವಿರುವುದೆಂದು ಹೇಳುವರು.[೪] ಅಲ್ಲಿ ಪಂಪಾಪುರಕ್ಕೆ ಸಮೀಪದಲ್ಲಿದ್ದವರು, ಇತ್ತ ಬಂದ ಬಳಿಕ ಇಲ್ಲಿ ಸಹ ಹತ್ತರಲ್ಲಿ ಒಂದು ಹಂಪೆ ಬೇಕಾಯಿತು!

ಪ್ರಾಚೀನ ಕಾಲದಲ್ಲಿ ನೆಯ್ಕಾರಿಕೆಯ ಸಲುವಾಗಿ ಪ್ರಸಿದ್ಧವಾದ ಸ್ಥಾನವೆಂದರೆ ಪೈಠಣ; ಉಜ್ಜೈನ, ಪೈಠಣ, ತಗರಗಳು ನೂಲಿನ ಬಟ್ಟೆಗಳಿಗಾಗಿ ಪ್ರಸಿದ್ಧವಾಗಿದ್ದುವೆಂದು ಪೆರಿಪ್ಲಸದಿಂದ ಗೊತ್ತಾಗುತ್ತದೆ. (ಕ್ರಿ. ಶ. ೮೯). 'ಪೈಠಣಿ' ಎಂಬ ವಸ್ತ್ರವಿಶೇಷಕ್ಕೆ ಈ ಊರ ಹೆಸರೆ ಬಂದಿದೆ. ಪೈಠಣಕ್ಕೆ ಸಂಸ್ಕೃತದವರು ಪ್ರತಿಷ್ಠಾನವೆನ್ನುತಿದ್ದರೂ 'ಪೋಟಲಿ' ಎಂದು ಇನ್ನೊಂದು ಪ್ರಾಚೀನ ಹೆಸರಿದ್ದಿತು. ಇದು ಪೊಳಲು ಎಂಬ ಕನ್ನಡ ಶಬ್ದ ವಿಕೃತಿಯಿರಬಹುದೆ? ಇಲ್ಲಿಯ ಚಲುಕ್ಯರ ಮೊದಲಿನ ರಾಜಧಾನಿ. ಮೊದಲನೆಯ ಪುಲಿಕೇಶಿಯು ಕದಂಬ ಹರಿವರ್ಮನಿಂದ ಬಾದಾಮಿಯನ್ನು ಗೆದ್ದಬಳಿಕ ಇದನ್ನು ತನ್ನ ಮುಖ್ಯಪಟ್ಟಣವನ್ನು ಮಾಡಿಕೊಂಡನು (ಕ್ರಿ. ಶ. ೫೫೦).[೫] ಆ ಮೇಲೆ ಹಟ್ಟಿಕಾರ ದೇವಾಂಗದವರೂ ಪೈಠಣದಿಂದ ಬಾದಾಮಿ ನಾಡಿಗೆ ಗುಳೆ ಹೊರಟಿರಬೇಕು. ಈ ಪೈಠಣ (ಪೋಟಲಿ) ನಾಡಿಗಾದರೂ ಈ ಜನಾಂಗವು ಬಂದುದು ಎತ್ತಣಿಂದ? ಋಗ್ವೇದದಲ್ಲಿ ಬಂದ ಯಾದ್ವ (ಯದು)-ತುರ್ವರೇ ಜಾಡ-ತುರುಕಾರರು, ಎಂದು ಹಿಂದಿನ ಅಧ್ಯಾಯಗಳಲ್ಲಿ ಸೂಚಿಸಿದ್ದುದು ಸರಿಯಾಗಿದ್ದರೆ ಇವರು ಮೊದಲು ಆರ್ಯಾವರ್ತದಲ್ಲಿ ಎಲ್ಲಿಯಾದರೂ ನೆಲೆಯಾಗಿರಬೇಕೆಂಬುದು ಕ್ರಮಪ್ರಾಪ್ತ. ಯದು-ತುರ್ವಶರು ಸುದಾಸರಾಜನೊಡನೆ ಕಾಳಗಕ್ಕೆ, ಪರುಷ್ಣಿ ನದಿಯನ್ನು ದಾಟಿಬಂದರೆಂದು ಋಗ್ವೇದದಲ್ಲಿದೆ.[೬] ಇವರು ಈ ನದಿಯನ್ನು ದಾಟಿದುದು ಯಾವ ದಿಕ್ಕಿನಿಂದ? ಎಂಬುದು ಸ್ಪಷ್ಟವಿಲ್ಲ. ಆದರು ಪಶ್ಚಿಮದಿಂದ ಪೂರ್ವಕ್ಕೆಂದು ವಿದ್ವಾಂಸರ ಅಭಿಪ್ರಾಯ.[೭] ಪರುಷ್ಣಿ ನದಿಯ ಈಗಿನ ಹೆಸರು ರಾವಿ. ಪರುಷ್ಣಿ (ರಾವಿ) ನದಿಯನ್ನು ದಾಟಿ ಪೂರ್ವಕ್ಕೆ ಬಂದುದು ನಿಜವಿದ್ದರೆ ಇವರ ನೆಲೆವೀಡು ಆ ನದಿಯ ಪಶ್ಚಿಮದಲ್ಲಿರಬೇಕು. ಪರುಷ್ಣಿ ನದಿಯ ನಾಡು ಋಗ್ವೇದಕಾಲದಲ್ಲಿ ಉಣ್ಣೆಯ ಸಲುವಾಗಿ ಬಹಳೆ ಪ್ರಖ್ಯಾತವಾಗಿತ್ತು.[೮] ಪರುಷ್ಣಿನದಿಗೂ ಉಣ್ಣೆಗೂ ಸಂಬಂಧವಿರುವುದನ್ನು ಮ್ಯಾಕ್ಸಮುಲ್ಲರ ಮತ್ತು ಓಲ್ಡೆನಬರ್ಗರೂ ಒಪ್ಪಿಕೊಳ್ಳುತ್ತಾರೆ. ಪರುಸ್ ಎಂದರೆ ಉಣ್ಣೆಯ ರಾಶಿ; ಪರುಸ್ ಶಬ್ದದಿಂದ ಪರುಷ್ಣಿ ಆಗಿದೆಯೆಂದು ಪಿಶೆಲ ಸಾಹೇಬರು (Pishel) ಹೇಳುತ್ತಾರು.[೯] ಯದು-ತುರ್ವಶರು ದನಗಾರರು. ಇವರ ಜಾಡಿಕೆಗೆ ಇಲ್ಲಿಯ ಆರಂಭವಾಗಿರಬೇಕು. ಉಣ್ಣೆಯ ಇಷ್ಟೊಂದು ವೈಪುಲ್ಯಕ್ಕೆ ದನಗಾರರಾದ ಯದು-ತುರ್ವಶರೆ ಕಾರಣವಾಗಿರಬೇಕಲ್ಲವೆ? ಇಲ್ಲಿಯೆ ಸಿಂಧೂನದಿ. ಋಗ್ವೇದದಲ್ಲಿ 'ಊರ್ಣಾವತಿ' ಎಂದು ಸಿಂಧುನದಿಗೇ ವಿಶೇಷಣವುಂಟೆಂದು ಪಿಶೆಲನ ಅಭಿಪ್ರಾಯ. ಪರುಷ್ಣಿ, ಊರ್ಣಾವತಿಗಳೆಂಬ ಉಣ್ಣೆಯ ಹೆಸರಿನ ನದಿಗಳ ಸಾಲಿನಲ್ಲಿಯೆ ವೇದಕಾಲದ 'ಗೋಮತೀ' ಎಂಬ ಇನ್ನೊಂದು ಹೊಳೆಯು ಆ ನಾಡಿನಲ್ಲಿಯೆ ಇದೆ! ದನಗಾರರಾದ ಯದು-ತುರ್ವಶರ ನಾಡು ಉಣ್ಣೆ-ಆಕಳಿನ ಹೆಸರುಳ್ಳ ಈ ನದಿಗಳ ಕೆಲ-ಬಲದಲ್ಲಿಯೆ ಇರಬಹುದಲ್ಲವೆ? ಮ್ಯಾಕಡೊನೆಲ್‌ರು, ಇವರ ನೆಲೆವೀಡು ಇಲ್ಲಿಯೇ ಎಂದು ಊಹಿಸಿದ್ದಾರೆ. ಅಂತೂ ಸಿಂಧು ತೀರವು ಋಗ್ವೇದಕಾಲದ ಇವರ-ವಸತಿಸ್ಥಾನವೆಂದು ನಿಶ್ಚಿತ. ಹಿಂದೂದೇಶದ ಉಳಿದ ಭಾಗದಲ್ಲಿ ಇವರು ಇರಲೇ ಇಲ್ಲವೆಂದು ಅರ್ಥವಲ್ಲ. ೭ನೆಯ ಪ್ರಕರಣದಲ್ಲಿ ತೋರಿಸಿದಂತೆ ದಕ್ಷಿಣದೇಶದಲ್ಲಿ ಇವರು ಚಂದ್ರವಳ್ಳಿ, ನೀಲಗಿರಿ, ತಮಿಳುನಾಡಿನಲ್ಲಿ ಆದಿತ್ಯನಲ್ಲೂರುಗಳ ವರೆಗೂ ಹಬ್ಬಿದ್ದುದರ ಕುರುಹುಗಳಿವೆ. ಆದರೂ

ತಾರತಮ್ಯದಿಂದ ಮಾತನಾಡುವುದಾದರೆ ಇವರು ವಿಶೇಷವಾಗಿ ಬೇರುಬಿಟ್ಟುದು ಸಿಂಧೂತೀರದಲ್ಲೆಂದು ಹೇಳಬೇಕಾಗುತ್ತದೆ. ಇನ್ನೂ ಒಂದು ನೆನಪಿಡಬೇಕಾದ ಸಂಗತಿಯೆಂದರೆ ಈಗಿನಂತಹ ನಾಡುಗಳು ಆಗ ಇನ್ನೂ ಉಗಮವಾಗಿದ್ದಿಲ್ಲ. ಕೆಲವರು ಪಟ್ಟಣಗಳನ್ನು ಕಟ್ಟಿಕೊಂಡಿದ್ದರು. ಇನ್ನು ಹಲವರು ಅನುಕೂಲತೆಗಳಿದ್ದಲ್ಲಿ ಹಟ್ಟಿಗಳನ್ನು ಮಾಡಿಕೊಂಡು ಆಗಾಗ ಅಲೆದಾಡುತ್ತಿದ್ದರು.

ಹರಪ್ಪಾ, ಮೊಹೆಂಜೋದಾರೊ, ಊರ್, ನಳ್‌ಗಳಲ್ಲಿ ದೊರೆತ ೫-೬ ಸಾವಿರ ವರುಷಗಳ ಹಿಂದಿನ ಪಟ್ಟಣಗಳಿಗೂ ಈ ಜನಾಂಗಕ್ಕೂ ಏನಾದರೂ ಸಂಬಂಧವಿರಬಹುದೆ? ಇವು ವೈದಿಕ ಸಂಸ್ಕೃತಿಗಿಂತ ಭಿನ್ನವಾದ ಜನಾಂಗದ ಕುರುಹುಗಳೆಂದು ಹಲವು ವಿದ್ವಾಂಸರ ಅಭಿಪ್ರಾಯವಿದೆ. ಹರಪ್ಪಾ, ಮೊಹೆಂಜೊದಾರೊಗಳು ಋಗ್ವೇದಕ್ಕೆ ಹೊಸದಲ್ಲವೆಂದೂ ಕೆಲವು ವಿದ್ವಾಂಸರು ಪ್ರತಿಪಾದಿಸುತ್ತಾರೆ. ಯದು-ತುರ್ವಶರು ಋಗ್ವೇದದಲ್ಲಿದ್ದಾರೆ. ಇವರು ದಾಸರೂ ಅಹುದು. ಆದುದರಿಂದ ಸಿಂಧೂತೀರದ ಪ್ರಾಚೀನ ಸಂಸ್ಕೃತಿಯ ಒಡೆಯರು ಯದು-ತುರ್ವಶರ ಸಂಬಂಧಗಳೇ ಆಗಿರಬಹುದೆ?

ಹಿಂದೂ ದೇಶಕ್ಕೆ 'ದ್ರಾವಿಡರು' ಹೊರಗಿನಿಂದ ಬಂದವರೆಂದು ಯುರೋಪೀಯ ವಿದ್ವಾಂಸರ ಅಭಿಪ್ರಾಯ. ಆದರೆ ಎಲ್ಲಿಂದ? ಎಂಬ ಬಗ್ಗೆ ಇನ್ನೂ ಐಕಮತ್ಯವಿಲ್ಲ. ಆದರು ಕಳೆದ ಕೆಲವು ವರುಷಗಳಿಂದ ಈ ಜನಾಂಗಕ್ಕೂ ಭೂಮಧ್ಯ ಸಮುದ್ರದ ನೆರೆಯ ಜನಾಂಗಕ್ಕೂ ಬಹಳ ಸಾಮ್ಯವಿದೆಯೆಂದೂ ಅತ್ತ ಕಡೆಯಿಂದ ಹಿಂದೂ ದೇಶಕ್ಕೆ ಬಂದ ಒಂದು ಶಾಖೆಯವರೆ 'ದ್ರಾವಿಡರ' ಪೂರ್ವಜರೆಂದೂ ಅನೇಕ ವಿದ್ವಾಂಸರು ಪ್ರತಿಪಾದಿಸುತ್ತಲಿದ್ದಾರೆ. (Dr. S. K. Chatterji the Modern Review, Dec. 1924). ವೇದದಲ್ಲಿ ಬರುವ ದಾಸ ಮತ್ತು ಪಣಿಗಳ ನಾಡು ಇನ್ನೂ ಪಶ್ಚಿಮಕ್ಕೆ ದೂರದಲ್ಲಿರಬೇಕೆಂದು ಕೆಲವು ವಿದ್ವಾಂಸರ ಮತವಿದೆ (Vedic Index, I. 357-8). ಇನ್ನೊಬ್ಬ ಸಂಶೋಧಕರು ಬರೆಯುವುದೇನೆಂದರೆ: 'ತುರ್ವಶರ ಬಗ್ಗೆ ನಿಶ್ಚಿತವಾಗಿ ಏನೂ ಹೇಳುವುದಕ್ಕಾಗದಿದ್ದರೂ ಯಾದವರು ಮಾತ್ರ ಉತ್ತರಸಿರಿಯಾದ ಕಡೆಯಿಂದ ಹಿಂದೂ ದೇಶಕ್ಕೆ ಬಂದ ಜನರೆಂಬುದು ನಿಶ್ಚಿತ (Journal of the Department of letters, Calcutta, IV. 1921). ಯದು-ತುರ್ವಶರು ಹಿಂದೂ ದೇಶಕ್ಕೆ ಬಹಳ ದೂರದಿಂದ ಸಮುದ್ರ ಮಾರ್ಗವಾಗಿ ಬಂದ ಜನಾಂಗದವರಾಗಿರಬೇಕೆಂದು ಶ್ರೀ ರಾಮಪ್ರಸಾದ ಚಂದಾ ಇವರು ತಮ್ಮ ಗ್ರಂಥದಲ್ಲಿ ಪ್ರತಿಪಾದಿಸುತ್ತಾರೆ. ಆದರೆ, ಈ ಚರ್ಚೆಯು ಸದ್ಯಕ್ಕೆ ಅಪ್ರಸ್ತುತವಾಗಿದ್ದುದರಿಂದ ಯದು-ತುರ್ವಶರ ಸಿಂಧುತೀರದ ನೆಲೆವೀಡಿನಿಂದ ಮುಂದಿನ ಸ್ಥಾನಾಂತರಗಳನ್ನು ಕುರಿತು ಮಾತ್ರ ಇಲ್ಲಿ ವಿವರಿಸಿದ್ದಾಗಿದೆ.

ವೇದಕಾಲದ ನಂತರ ಯದು-ತುರ್ವಶರು ಸಿಂಧು ತೀರದಲ್ಲಿ ಕಣ್ಣಿಗೆ ಬೀಳುವದಿಲ್ಲ. ಮಹಾಭಾರತ ಕಾಲಕ್ಕೆ ಮೊದಲೆ ಇವರ ಕೇಂದ್ರವು ಗಂಗಾ-ಯಮುನಾ ತೀರಕ್ಕೆ ಬಂತು. ಇಲ್ಲಿ ಯದು-ತುರ್ವರು ಒಂದು ಕಾಲಕ್ಕೆ ಇದ್ದರೆಂದು ಸಿದ್ಧಪಡಿಸುವುದಕ್ಕೆ ಹೆಚ್ಚಿನ ಪ್ರಮಾಣಗಳೆ ಬೇಕಾಗಿಲ್ಲ; ಏಕೆಂದರೆ ಭಾರತ ಭಾಗವತಗಳಿಂದ ಇದು ಸುಪ್ರಸಿದ್ಧವಾಗಿದೆ. ಐತರೇಯ ಬ್ರಾಹ್ಮಣದಲ್ಲಿ 'ವಶರು' ಮಧ್ಯದೇಶದವರೆಂದು ಹೇಳಿದೆ. ಇದರ ಹಿಂದಿನ ಕಾಲದ ಪರಂಪರೆಯ ವಿಚ್ಛೇದವಾಗಿರುವುದರಿಂದ ಅಲ್ಲಿಯೆ ಸ್ವಲ್ಪ ತೊಂದರೆ. ಸಿಂಧೂತೀರದಿಂದ ಗಂಗಾ-ಯಮುನೆಗಳ ನಾಡಿಗೆ ಹಲವರು ಬಂದಂತೆ, ಸಿಂಧೂನದಿಯ ಮಾರ್ಗವಾಗಿ ಹೊರಟ ಒಂದು ಶಾಖೆಯು ಸೌರಾಷ್ಟ್ರಕ್ಕೂ ಹೋಗಿರಬೇಕು. ಕೃಷ್ಣನು ಎಷ್ಟೋ ಯಾದವರೊಡನೆ ಮಥುರೆಯನ್ನು ಬಿಟ್ಟು ದ್ವಾರಕೆಗೆ ತೆರಳುತ್ತಾನೆ. ಯಾರೇ ಆಗಲಿ, ಶತ್ರುಗಳ ಕಾಟಕ್ಕಾಗಿ, ಸಂಕಟದೊಳಗಿಂದ ಪಾರಾಗುವುದಕ್ಕಾಗಿ ತಮ್ಮ ಆಪ್ತರು- ಇಷ್ಟರು ಇರುವಲ್ಲಿಗೆ ಹೋಗುವರಲ್ಲವೆ? ಆದರಂತೆ ದ್ವಾರಕೆ=ಸೌರಾಷ್ಟ್ರದ ಪೂರ್ವ ಪರಿಚಯವಿಲ್ಲದೆಯೆ ಕೃಷ್ಣನು ಅಲ್ಲಿಗೆ ಆಶ್ರಯಕ್ಕೆ ಹೋದನೆಂದು ಗ್ರಹಿಸುವುದು ಅಷ್ಟು ಸಮರ್ಪಕವಾಗಲಾರದು. ಸಿಂಧೂತೀರದಿಂದ ಸೌರಾಷ್ಟ್ರದ ಮಾರ್ಗವಾಗಿ ಇನ್ನೂ ದಕ್ಷಿಣಕ್ಕೆ ಕೆಲರು ಇಳಿದು ಬಂದವರುಂಟು. ಅವರೆ ಸಿಂಧರು. ಸಿಂಧಖೇಡ (ಖಾನದೇಶ), ಸಿಂದಗಿ (ವಿಜಾಪೂರ ಜಿಲ್ಲೆ), ಸಿಂದವಾಡಿ (ಬಳ್ಳಾರಿ ಜಿಲ್ಲೆ) ಗಳು ಈ ಜನಾಂಗದ ಅಸ್ತಿತ್ವದ ಸಾಕ್ಷಿಯನ್ನು ಕೊಡುತ್ತಿವೆ. ಸಿಂದರ ಒಂದು ಅರಸು ಮನೆತನವೂ ಕರ್ನಾಟದಲ್ಲಿ ಸುವಿಖ್ಯಾತವಾಗಿ ಹೋಯಿತು. ಸೌರಾಷ್ಟ್ರದಲ್ಲಿ

ದ್ವಾರಾವತಿಯು ಆ ಕಾಲಕ್ಕೆ ವ್ಯಾಪಾರೋದ್ಯೋಗಗಳಿಗಾಗಿ ಬಹಳ ಹೆಸರಾದ ಪಟ್ಟಣವಾಗಿರಬೇಕು. ಇದು ಆ ಕಾಲದ 'Gate way of India' ಆಗಿದ್ದಿತು. ಇದೇ ಹೆಸರಿನ ಹೋಲಿಕೆಯು ತಮಿಳರ "ಪಾಂಡ್ಯ ಕವಾಟ ನಗರ" ದಲ್ಲಿಯೂ ಇದೆ. ಎರಡೂ ಪಟ್ಟಣಗಳೂ ಧನಕನಕ ಸಮೃದ್ಧಿಗಾಗಿ ಸುಪ್ರಸಿದ್ಧವಾಗಿದ್ದುವು. (Studies in Tamil literature ನಲ್ಲಿ ಕವಾಟನಗರದ ಬಗ್ಗೆ ನೋಡಿ; ಪು. ೧೪, ೧೫) Gate-way 'ದ್ವಾರ'ವೆಂಬ ಕಲ್ಪನೆಯು ಹೊಸತಲ್ಲ. ಸುಮಾರು ವೈದಿಕಕಾಲದಷ್ಟು ಪ್ರಾಚೀನವಿದೆ. ಕನ್ನಡ ನೆಯ್‌ಕಾರರ Gate-way ದ್ವಾರಾವತಿ ತಮಿಳು ವಿಳ್‌ರ Gate-way "ಪಾಂಡ್ಯ ಕವಾಟ." ಎರಡೂ ಸಂಸ್ಕೃತಿಯ ಪ್ರಗತಿಯು ಎಷ್ಟು ಸಮಾಂತರ ರೇಷೆಯಲ್ಲಿ ಸಾಗಿತ್ತೆಂಬುದು ಇದರಿಂದ ವ್ಯಕ್ತವಾಗುತ್ತಿದೆ.

ಸಿಂಧೂತೀರದಿಂದ ಎದ್ದ ಮೇಲೆ ಈ ಜನಾಂಗದ ಒಂದು ಶಾಖೆಯು ಮಥುರಾ-ವೃಂದಾವನದ ಕಡೆಗೆ ನೆಲೆಸಿತು; ಇನ್ನೊಂದು ದ್ವಾರಾವತಿಯ ದ್ವಾರದಿಂದ ಸೌರಾಷ್ಟ್ರಕ್ಕೆ ಬಂದಿತು. ಮತ್ತೊಂದು ವಿದರ್ಭದ ಕಡೆಗೆ ಕಾಲೂರಿ ನಿಂತಿತು. ರಾವೀ ತೀರದ ವರೆಗೆ ಇದ್ದ ಯದು-ತುರ್ವಶರು ರೇವಾ ತೀರಕ್ಕೆ ಬಂದು ಬಿದ್ದರು.[೧೦] ಮುಂದೆ, ಹಲವು ಶತಮಾನಗಳವರೆಗೂ ರೇವಾ ನದಿಯೆ ಈ ಜನಾಂಗದ ಸಾಮಾನ್ಯವಾಗಿ ಉತ್ತರದ ಮೇರೆಯಾಯಿತು. (ಯದು) ತುರ್ವಶರು ದಕ್ಷಿಣಕ್ಕೆ ಸರಿದರೆಂಬ ಸಂಗತಿಯನ್ನು ಪುರಾಣಗಳು ಹೇಗೆ ಮುಸುಕಿನ ಮಾತಿನಲ್ಲಿ ಹೇಳಿವೆ! ಯಯಾತಿರಾಜನು ತನ್ನ ಮಕ್ಕಳ ಹತ್ತಿರ ಯೌವ್ವನವನ್ನು ಕೇಳಿದನು. ತುರ್ವಶರು ಒಪ್ಪಲಿಲ್ಲ. ಆಗ ತಂದೆಯು ಅವನಿಗೆ ಹೀಗೆ ಶಪಿಸಿದನು:

"ಸಂಕೀರ್ಣಾಚಾರ-ಧರ್ಮೇಷು ಪ್ರತಿಲೋಮಚರೇಷುಚ।
ಪಿಶಿತಾಷಿಷು ಚಾಂತ್ಯೇಷು ಮೂಢ! ರಾಜಾಭವಿಷ್ಯಸಿ!
ಗುರುದಾರ ಪ್ರಸಕ್ತೇಷು ತಿರ್ಯಕ್ ಯೋನಿಗತೇಷು ಚ।
ಪಶುಧರ್ಮಿಷು ಪಾಪೇಷು ಮ್ಲೇಚ್ಛೇಷು ತ್ವಂ ಭವಿಷ್ಯಸಿ॥

(ಮಹಾಭಾರತ ಆದಿಪರ್ವ. ೮೪ನೆಯ ಅಧ್ಯಾಯ)

ಇದು ತಂದೆಯು ಮಗನಿಗೆ ಕೊಟ್ಟ ಶಾಪ! ತುರ್ವಸುಗಳು ಮೇಲ್ಕಾಣಿಸಿದಂತಹ ಪ್ರಜೆಗಳುಳ್ಳ ದಕ್ಷಿಣಾ ಪಥದ ರಾಜರಾದರು. ಪುರಾಣದೊಳಗಿನ ಈ ಶಾಪವಾಣಿಯ ಅರ್ಥವೇನು? ಅವುದೇ ಜನಾಂಗವು ಸ್ಥಾನಾಂತರ ಮಾಡುವ ಕಾರಣಗಳೇನು? ಡಾ. ಹ್ಯಾಡೊನ್‌ರು The Wanderings of Peoples ಎಂಬ ಗ್ರಂಥದಲ್ಲಿ ಬರೆದ ವಿಚಾರವು ಇಲ್ಲಿಯೂ ಸರಿಹೋಗುತ್ತದೆ.

> " A craving for land is only a partial explanation; sentiment and reaction against even the slightest of social restrictions had a great deal to do with it."

ಇವರು, ರಾಜ್ಯವನ್ನು ದೊರಕಿಸಲಿಕ್ಕೆ ದಕ್ಷಿಣಕ್ಕೆ ಸರಿದರೆಂದು ತಿಳಿಯುವುದು ಸರಿಯಾಗಲಾರದು. ನೆಲೆಸಿದ ನಾಡನ್ನು ಬಿಟ್ಟು ಹೆಂಡಿರು ಮಕ್ಕಳನ್ನು ಕಟ್ಟಿಕೊಂಡು ಅಲೆದಾಡುವುದು ಯಾರಿಗೆ ಬೇಕು? ಆರ್ಯರು ಅಮೇರಿಕೆಯ ಯುರೋಪಿಯನ್ ವಸಾಹತುಗಾರರಂತೆ ಇಲ್ಲಿಯ ಮೊದಲಿನ ಜನಾಂಗವನ್ನು ಸಂಪೂರ್ಣವಾಗಿ ನಾಮಶೇಷಮಾಡಲಿಲ್ಲ. ಇವರ ಉದಾತ್ತ ತತ್ವಜ್ಞಾನವು ಬೇಗನೆ ಅಡ್ಡಬಂತು. ಶಕ್ಯವಿದ್ದಷ್ಟರ ಮಟ್ಟಿಗೂ ಆರ್ಯೀಕರಣದಿಂದ ಇಲ್ಲಿಯ ಮೊದಲಿಗರನ್ನು ಒಳಗೆ ತಕ್ಕೊಳ್ಳುತ್ತಿದ್ದರು. ಆದರೆ, ಆರ್ಯರಲ್ಲಿ ಸೇರಿಕೊಳ್ಳುವುದು ಮನಸಿಗೆ ಬಾರದೇ ಇದ್ದವರು ದಕ್ಷಿಣಕ್ಕೆ ಮೋರೆ ತಿರುವಿದರು. ಯದು-ತುರ್ವಶರಲ್ಲಿ ಕೆಲವರು ಆರ್ಯರಾದರು. ಗಂಗಾ ಯಮುನಾ ತೀರದ ಶಾಖೆಯವರು ಬೇಗ ಬೇಗನೆ ಆರ್ಯರಾಗಿ ಬಿಡುವುದಕ್ಕೆ ಸನ್ನದ್ಧರಾದರು. ಆದರೆ ಇದಕ್ಕೆ ಮನವೊಪ್ಪದವರು ಶಾಪದೊರೆತವರಂತೆ ಸ್ಥಾನಾಂತರ ಮಾಡದೆ ಗತ್ಯಂತರವೆ ಉಳಿಯಲಿಲ್ಲ. ಸ್ವಾಭಿಮಾನಿಗಳಾದ ಒಂದು ಪಂಗಡದವರು ಗಂಗಾತೀರದಿಂದ ತೆಂಕಣಕ್ಕೆ ಎದ್ದರು; ಇವರೆ ಗಂಗರು; ಗಂಗಡಿಕಾರರ

ಮೂಲಪುರುಷರಾಗಿರಬೇಕು. ಗಂಗಾತೀರದಿಂದ ಹೊರಟ ಈ ಹಟ್ಟಿಕಾರರ ಪಂಗಡವು ಗೋದಾನದಿಯ ದಂಡೆಯಲ್ಲಿ ನೆಲಸಿತು. ಇಲ್ಲಿ 'ಗಂಗಥಡೆ' ಎಂಬ ಕುಡು ಒಕ್ಕಲರು ಈಗಲೂ ಇದ್ದಾರೆ. ಹಿಂದಕ್ಕೆ ಗೋದೆಗೆ ಗಂಗಾನದಿಯೆಂದು ಕರೆವ ವಾಡಿಕೆಯಿತ್ತು. ಇಲ್ಲಿಂದಲೂ ಕೆಳಕ್ಕೆ ಸರಿದು ಹೋದ ಶಾಖೆಯವರೇ ಗಂಗವಾಡಿಯ (ಮೈಸೂರ) ಗಂಗಡಿಕಾರರೆಂದು ಹೇಳಬಹುದು. ಗಂಗರಂತೆ ಕಾಪು-ರಡ್ಡಿಗಳು, ಚಾಲುಕ್ಯಾದಿಗಳ ಪೂರ್ವಜರು ಸಹ ಗಂಗಾತೀರದ ನಾಡಿನಲ್ಲಿ ಇದ್ದರೆಂದು ಅವರ ಪ್ರಾಚೀನ ಪರಂಪರೆಗಳಿಂದ ಹೇಳಬಹುದಾಗಿದೆ. ತಲೆತಲಾಂತರಗಳಿಂದ ನಡೆದು ಬಂದ ಇವೆಲ್ಲ ಕಥೆಗಳು ಕೇವಲ ಸುಳ್ಳು ಎಂದೆನ್ನುವುದು ಸರಿಯಾದೀತೆ?ᑎᑎ

ಋಗ್ವೇದದಲ್ಲಿ ಬಂದಿರುವ 'ದಕ್ಷಿಣಾಪದಾ" ಎಂಬ ಮಾತು ಸಹ ಮೇಲಣ ವಿಚಾರಕ್ಕೆ ಬೆಂಬಲವನ್ನೀಯುತ್ತಿದೆ. 'ದಕ್ಷಿಣಾಪಥ ಶಬ್ದವು ಋಗ್ವೇದದ ಮುಂದಿನ ಕಾಲದಲ್ಲಿ ರೂಢವಾಯ್ತು', 'ದಕ್ಷಿಣಾಪದಾ' ಶಬ್ದದ ಟಿಪ್ಪಣಿಯಲ್ಲಿ ಮ್ಯಾಕಡೊನೆಲ್‌ರು ಹೀಗೆ ಬರೆಯುತ್ತಾರೆ:

> (The) expression 'ದಕ್ಷಿಣಾ ಪದಾ' "with south wordfoot" in the "ಋಗ್ವೇದ" (is) referring to the place where the exile (ಪರಾ-ವ್ರಜ್) goes on being expelled. This no doubt simply means 'the south' beyond the limits to the recongized Aryan world, which ven as late as the ಕೌಶೀತಕಿ ಉಪನಿಷತ್ appears as bounded by the ವಿಂಧ್ಯ on the south (Vedic Index I. 337).

ಆದುದರಿಂದಲೆ ಮುಂದಿನ ಕಾಲದಲ್ಲಿ ಅನೇಕ ಶತಮಾನಗಳ ವರೆಗೆ ವಿಂಧ್ಯದ ದಕ್ಷಿಣಭಾಗವು ಯಜ್ಞಕ್ಕೆ ಅನರ್ಹವಾದ ಭೂಮಿ, ಅಪವಿತ್ರ ಭೂಮಿಯ ಸಾಲಿನಲ್ಲಿಯೆ ಎಣಿಸಲ್ಪಡುತ್ತಿತ್ತು. ಆರ್ಯೀಕರಣಕ್ಕೆ ಒಪ್ಪದಿದ್ದ ಹಟ್ಟಿಕಾರರ ಹಠವಾದಿಗಳೆಂದೆನಿಸಲಾರಂಭಿಸಿದರು. ಇವರೇ ವ್ರಾತ್ಯರು (ಹಟವಾದಿ); ಸಂಸ್ಕಾರವಿಹೀನರು; 'ಹಟ್ಟಿಕಾರರೆಂಬುದಕ್ಕೆ (obstinate) ಹಠವುಳ್ಳವರೆಂದು ಕೆಲವು ಗೆಜೆಟಿಯರುಗಳಲ್ಲಿ (ವಿಜಾಪುರ ಸಾಲೆ ಮುಂ.) ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. "ನಿಷಿದ್ಧೋ ವಿಂಧ್ಯವಾಸಿನಃ" ಎಂಬುದಕ್ಕೆ "ವಿಂಧ್ಯವಾಸಿ ಪ್ರಭೃತಯಃ" ಎಂದು ಮೇಧಾತಿಥಿಯು ಟೀಕೆ ಬರೆಯುತ್ತಾನೆ. 'ವಿದರ್ಭದೇಶವು' ಎರಡೂ ಸಂಸ್ಕೃತಿಗಳ ನಡುವಿನದು. ಹೊಸ್ತಿಲ ಹಾಗೆ. ಇಲ್ಲಿಯವರ ಸ್ಥಿತಿಯೂ ಹೀಗೆಯೆ ಇದೆ. ಇಲ್ಲಿಯ ಭೋಜಕರು ಒಮ್ಮೆ ವೈದಿಕ ಸಂಸ್ಕೃತಿಯವರೆಂದು ಕಂಡರೆ ಮತ್ತೆ ಅವೈದಿಕರೆಂಬುದಕ್ಕೂ ಆಧಾರಗಳು ಸಿಕ್ಕುತ್ತವೆ.

> "ಏವಂ ಸರ್ವ ಏವ ಬಾಹ್ಯಾ ಭೋಜಕ ಪಾಂಚರಾತ್ರಿಕ,
> ನಿಗ್ರಂಥಾ ನಾರ್ಥವಾದ ಪಾಶುಪತ ಪ್ರಭೃತಯಃ"

ಎಂಬ ವಾಕ್ಯಗಳೂ ದೊರೆಯುತ್ತವೆ (History of Dharma Sastra Vol. I. P. 273). ಭೋಜಕರು ಯಾದವರ ಶಾಖೆಯವರು ಯಾದವರಲ್ಲಿ ಹಲವರು ಆರ್ಯರಾದಂತೆ ಭೋಜಕರೂ ಕೆಲರು ಆರ್ಯರಲ್ಲಿ ಎಣಿಸಲ್ಪಡುತ್ತಿರಬೇಕು. ಭೋಜನೆಂಬುದು ರಾಜಪದವಿಯಂತೆ ವೈದಿಕಸಾಹಿತ್ಯದಲ್ಲಿ ಉಪಯೋಗಿಸಲ್ಪಟ್ಟಿದೆ. ಭೋಜಕರು (ಯಾದವರು) ವೈದಿಕ-ಅವೈದಿಕರ ಎರಡೂ ಪಂಗಡಗಳಲ್ಲಿ, ಇನ್ನೂ ಸ್ಮೃತಿಕಾಲದಲ್ಲಿ ಸಹ ಕಾಣಿಸಿ ಕೊಳ್ಳುತ್ತಿರುವರು! ವಿಮಲಚರಣ ಲಾ ಎಂಬವರು ಭೋಜರನ್ನು ಕುರಿತು ಒಂದು ಲೇಖನದಲ್ಲಿ ಬಹಳ ಮಹತ್ವದ ಸಂಗತಿಗಳನ್ನು ಸಂಗ್ರಹಿಸಿ ಹೇಳಿದ್ದಾರೆ. (Indian Culture; Jan. 85 ')

> "ಭಜನ-ಭಜಮಾನ-ದಿವಿ- ಅಂಧಕ-ದೇವಾವೃಧ-ಮಹಾಭೋಜ-
> ವೃಷ್ಣಿ ಸಂಜ್ಞಾನಾಃ ಸಾತ್ವತಸ್ಯ ಪುತ್ರಾಃ ಬಭೂವುಃ"

ಎಂಬಲ್ಲಿ ಭೋಜರು ಧರ್ಮಾತ್ಮರೆಂದು ಹೇಳಿದೆ! ಭೋಜರೂ ಸಾತ್ವರೂ ನಂಟರು; ಯದುವಂಶಿಗಳು ಯಮುನಾತೀರದವರು; ಮತ್ಸ್ಯ, ವಾಯು, ವಿಷ್ಣು ಪುರಾಣಗಳಲ್ಲಿ ಇದಕ್ಕೆ ಆಧಾರಗಳು ದೊರೆಯುತ್ತವೆ.

ವಿದರ್ಭ ದೊಳಗಿನ ಭೋಜರ ರಾಜ್ಯವು ಯದವಂಶೀಗಳದೆಂದು ಮತ್ಸ್ಯ, ವಾಯು, ಪುರಾಣಗಳಲ್ಲಿ ಹೇಳಿದೆ. ಕಾಲಿದಾಸನು ವಿದರ್ಭದ ರಾಜನಿಗೆ ಭೋಜನೆಂದಿದ್ದಾನೆ. (ರಘುವಂಶ V- ೩೯. ४೦). ಇವೆಲ್ಲ ಸಂಗತಿಗಳ ಮೇಲಿಂದ ಗಂಗಾ-ಯಮುನಾತೀರದ ಯಾದವರಿಗೂ ವಿದರ್ಭದ ಯಾದವರಿಗೂ ನಿಕಟಸಂಬಂಧವಿದ್ದುದು ನಿದರ್ಶನಕ್ಕೆ ಬರುತ್ತಿದೆ. ಕೃಷ್ಣನ ಪಟ್ಟದರಸಿ ರುಕ್ಮಿಣಿಯು ವಿದರ್ಭದವಳು. ಇಲ್ಲಿ ಮತ್ತೆ ವಿದರ್ಭ ಸೌರಾಷ್ಟ್ರ ಮತ್ತು ಶೂರಸೇನ (ಮಥುರಾ) ದೇಶಗಳ ಪರಸ್ಪರ ಸಂಬಂಧವು ಚೆನ್ನಾಗಿ ವ್ಯಕ್ತವಾಗುತ್ತಿದೆ.

ಉಂಡ ಅನ್ನವು ಅರುಗುವುದಕ್ಕೂ ಕೆಲವೊಂದು ಕಾಲವು ಬೇಕಾಗುತ್ತದೆ, ಆರ್ಯರ ಒಡಲಲ್ಲಿ ಸಿಲುಕಿದ ಯದು-ತುರ್ವಶರೆಂಬ ಹಟ್ಟಿಕಾರರು ಆರ್ಯರಾಗಿ ಹೋಗುವುದಕ್ಕೂ ಕೆಲವೊಂದು ಕಾಲಾವಧಿಯು ಬೇಕಾಯಿತು. ಒಂದು ಸಮಾಜದಲ್ಲಿ ಕೆಲವರು ಪ್ರಗತಿಪರರಿದ್ದರೆ ಇನ್ನು ಕೆಲರು ಸನಾತನಿಗಳು-ಪುರಾಣವಾದಿಗಳು ಇದ್ದೇ ಇರುತ್ತಾರೆ. ಪ್ರಗತಿಪರರು ಸಂಸ್ಕೃತ ಪ್ರಾಕೃತಭಾಷೆಗಳನ್ನು ಸ್ವೀಕರಿಸಿ 'ಆರ್ಯ' ರಾದರು. ಸನಾತನಿಗಳು ಅವರಿಗೆ ವಿರೋಧಿಸಿದರು. ಈ ತಿಕ್ಕಾಟದಲ್ಲಿ ಹಲವರು ದಕ್ಷಿಣಕ್ಕೆ ಸರಿದರು. ರುಕ್ಮಿಣಿಯ ತಂದೆ-ತಾಯಿಗಳು ಕೃಷ್ಣನಿಗೆ ಹೆಣ್ಣು ಕೊಡಲಿಕ್ಕೆ ಇದೇ ಕಾರಣದಿಂದಲೆ ವಿರೋಧಿಸಿರಬೇಕು. ಕಂಸ ಮೊದಲಾದವರು ಕೃಷ್ಣನ ಹಗೆಗಳಾಗುವುದಕ್ಕೆ ಇದೇ ಬಗೆಯ ಕಾರಣವಿರಬೇಕೆಂದು ತೋರುತ್ತದೆ. ಯದು-ತುರ್ವಶಾದಿಗಳು ಆರ್ಯರಿಂದ ಭಿನ್ನಭಾಷೆಯ ವರಿದ್ದರೆಂಬುದಕ್ಕೆ ಇಲ್ಲಿ ಬಹಳ ಬಲವಾದ ಪ್ರಮಾಣವು ದೊರೆಯುತ್ತಿದೆ. ಬೇರೆಬೇರೆ ಭಾಷೆಯ ಎರಡು ಜನಾಂಗಗಳು ಒಂದರೊಳಗೊಂದು ಬೆರೆವಾಗ ಅವರಲ್ಲಿ ಹೊಸತೊಂದು ಮಿಶ್ರಭಾಷೆಯು ಉತ್ಪನ್ನವಾಗುತ್ತದೆ. ಮೊಗಲರ ದಂಡಿನಲ್ಲಿ ಪರ್ಶಿಯನ್ ಹೋಗಿ ಉರ್ದು ಆಯಿತು; ಚೀನದಲ್ಲಿ 'ಪಿಜನ್ ಇಂಗ್ಲಿಷು' ಜನ್ಮತಾಳಿತು. ಅದರಂತೆ, ಗಂಗಾ-ಯಮುನಾತೀರದಲ್ಲಿ ಯದು-ತುರ್ವಶರ ಹಟ್ಟಿ (ವ್ರಜ)ಗಳಲ್ಲಿ 'ಪ್ರಾಕೃತ'ವೆಂಬ ಹೊಸತೊಂದು ಬಗೆಯ ಭಾಷೆಯು ತಲೆದೋರಿತು. ಸಂಸ್ಕೃತವು, ಯಾದವ (ಜಾಡ) ಹಟ್ಟಿಕಾರರ ಬಾಯಲ್ಲಿ ವಿಕೃತಿಯನ್ನು ಹೊಂದಿ 'ಶೂರಸೇನ'ರ ಭಾಷೆಯಾಯಿತು. ಇದೇ ಶೌರಸೇನೀ ಪ್ರಾಕೃತ. ಪ್ರಾಕೃತ, ಪಾಲಿಗಳಲ್ಲಿರುವ ಎ, ಒಕಾರಗಳು ಎಲ್ಲಿಂದ ಬಂದಿರಬೇಕೆಂದು ಡಾ. ಆರ್. ಜಿ. ಭಂಡಾರಕರರು ಬಹಳ ಸೊಗಸಾಗಿ ವಿವೇಚಿಸಿದ್ದಾರೆ. ಸಂಸ್ಕೃತದಿಂದ ತೈಲ ಶಬ್ದವು ನೇರವಾಗಿ 'ತೇಲ' ಎಂಬ ರೂಪವನ್ನು ಧರಿಸುವದಿಲ್ಲ; ತೈಲ / ತೆಲ್ಲ / ತೇಲ. ಈ ಬಗೆಯ ಹಲವು ಉದಾಹರಣಗಳನ್ನು ಕೊಟ್ಟು ಡಾ. ಭಾಂಡಾರಕರರು ಇದೆಲ್ಲ ದ್ರಾವಿಡ ಜನಾಂಗದ ಭಾಷೆಯ ಪರಿಣಾಮವಿರಬೇಕೆಂಬ ಸಿದ್ಧಾಂತವನ್ನು ಪ್ರಸ್ಥಾಪಿಸಿದ್ದಾರೆ.[೧೨]

ತಮಿಳರ ಪ್ರಾಚೀನ ಸಾಹಿತ್ಯದೊಳಗೆ ಹಟ್ಟಿಕಾರರ ಬಗ್ಗೆ ಇರುವ ಪರಕೀಯ ಭಾವನೆಯ ಮೇಲಿಂದಲೂ, ಋಗ್ವೇದದೊಳಗಿನ ಚಂದ್ರಶಬ್ದ, ಛಾಂದೋಗ್ಯದೊಳಗಿನ ಮಟಚಿ ಶಬ್ದಗಳ ಮೇಲಿಂದಲೂ ವೇದಕಾಲದ ಹೊತ್ತಿಗೆ 'ದ್ರಾವಿಡ' ಜನಾಂಗದಲ್ಲಿ ಪಂಗಡಗಳಾಗಿ (ಆಂಧ್ರ) ಕರ್ಣಾಟ ಭಾಷೆಯು ಮೂರ್ತಸ್ವರೂಪವನ್ನು ಹೊಂದಿದ್ದಿತೆಂಬುದು ನಿಶ್ಚಿತವಾಗುತ್ತದೆ. ಆದುದರಿಂದ, ವೇದಕಾಲದಿಂದಲೂ ದೊರೆವ ಮಟಚೀ ಮೊದಲಾದ ಈ ಜಾತಿಯ ಶಬ್ದಗಳನ್ನು 'ದ್ರಾವಿಡ'ವೆಂಬ ಸ್ಥೂಲ ಹೆಸರಿನಿಂದ ಹೇಳುವುದು ಸರಿಯಾಗಲಾರದು. ಅವುಗಳಿಗೆ ಈಗ ಹಟ್ಟಿಕಾರ (ಕನ್ನಡ) ಜನಾಂಗದ ಮಾತುಗಳೆಂದು ಕರೆಯುವುದು ಯುಕ್ತವಾಗಿದೆ. ಯಮುನಾ ತೀರದ ಪ್ರಾಕೃತಭಾಷೆಯ ಜನನಕ್ಕೆ ಯಾದವರ ತಂಡವೇ ಮುಖ್ಯಕಾರಣ. ಈ ತಂಡವು ದ್ರಾವಿಡರರೆಂದು ಪ್ರಿಲಸ್ಕಿಯವರು ಇನ್ನೊಂದು ಬೇರೆ ದಿಕ್ಕಿನಿಂದ ವಿಚಾರಿಸುತ್ತ ಇದೇ ನಿರ್ಣಯಕ್ಕೆ ಬಂದಿದ್ದಾರೆ. ಅವರು ಬರೆಯುವುದೇನೆಂದರೆ:[೧೩]

> The diverse indications point to the Dravidian substrata having made itself felt in Mathura for a long time.

ಮತ್ತು ಮರಾಠಿ ದೇಶದಲ್ಲಿ ಹಿಂದಕ್ಕೆ "ನಂದಭಾಷೆ" ಯೆಂದು ಕನ್ನಡನುಡಿಗೆ ಹೆಸರಿದ್ದುದನ್ನು ಮರಾಠಿ ಲೇಖಕರೇ ಹೇಳುತ್ತಾರೆ. ಇದರಿಂದ ನಂದಗೌಳಿಗಳಾದ ಯದು. ತುರ್ವಶರ ಭಾಷೆಯ ಮೊದಲು ಕನ್ನಡಕ್ಕೆ ಸಂಬಂಧಿಸಿದುದಿರಬೇಕೆಂಬುದು ಮತ್ತಿಷ್ಟು ಸ್ಪಷ್ಟವಾಗುತ್ತದೆ. ನಮ್ಮ ಹಟ್ಟಿಕಾರರಿಗೆ ಕುಂತಲರೆಂದು ಹೆಸರಿದ್ದುದನ್ನು

ಹಿಂದೊಮ್ಮೆ ವಿವರಿಸಲಾಗಿದೆ. 'ದ್ವಾರಕೆಯವರೆಗೂ ಕುಂತಲದೇಶ'ವೆಂದು 'ಪೂರ್ವ ಸೂರಿಗಳು' ಹೇಳುತ್ತಿದ್ದುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು. ಅಂದರೆ ಯಾದವರ ಸೌರಾಷ್ಟ್ರವು ಕುಂತಲ! ಭೋಜರ ವಿದರ್ಭವೂ ಕುಂತಲ! ಬಳ್ಳಾರಿ ಜಿಲ್ಲೆಯವರೆಗೂ ಕುಂತಲ! ಉತ್ತರ ಭಾರತದ ಕೆಲವೊಂದು ಭಾಗಕ್ಕೆ ಗೌಳ-ಗೌಡವೆಂದೂ ಹೆಸರು! ಅದಂತಿರಲಿ. ಇಷ್ಟೆಲ್ಲ ಘಟನೆಗಳು ಆಗುವುದರೊಳಗಾಗಿ ತಂಡಗಳ ಕಾಲವು ಮುಗಿದು ನಾಡುಗಳು ಮೂಡಲಾರಂಭಿಸಿದುವು.

ಹಟ್ಟಿಕಾರರು ಈಗ ನಿಂತುದೆ 'ಹಟ್ಟಿ' ನಾಡು ಆಯಿತು. ಆದರೆ ಸಂಸ್ಕೃತದಲ್ಲಿ ಈ ಭಾಗದ ಪ್ರಾಚೀನಕಾಲದ ಹೆಸರು ವಿದರ್ಭವೆಂದೆ ಇದೆ. ಇದು ಹೇಗೆ? ಸಂಸ್ಕೃತದವರ ಒಂದು ಸ್ವಭಾವ; ಅವರು ತಿಳಿದೂ ತಿಳಿದೂ, ಪರಭಾಷೆಯ ಶಬ್ದಗಳನ್ನು ಇದಕ್ಕಿದ್ದಂತೆ ಶಕ್ಯವಿರುವವರೆಗೂ ಸ್ವೀಕರಿಸಲಿಲ್ಲ. ಭಾಷಾಂತರ ಅಥವಾ ರೂಪಾಂತರ ಇಲ್ಲವೆ ಇನ್ನೂ ಒಂದು ವಿಶೇಷ ಪ್ರಕಾರದಿಂದ ಆ ಮೂಲಶಬ್ದಕ್ಕೆ ಪ್ರತಿಶಬ್ದವನ್ನು ನಿರ್ಮಿಸಿಕೊಳ್ಳುವ ಪದ್ಧತಿಯು ಸಂಸ್ಕೃತದಲ್ಲಿ ಎಂದಿನಿಂದಲೂ ನಡೆದು ಬಂದಿದೆ. ಆದರೆ, ಈ ವರೆಗೆ ದೊರೆತ ಒಂದೇ ಒಂದು ಅಪವಾದ ವಿದೆ. ಯೋಗಾನರಸಿಂಹರು ೧೨ನೆಯ ಶತಮಾನದ ಶಾರದಾತನಯನ ಗ್ರಂಥದಲ್ಲಿ 'ಕನ್ನಡ'ವೆಂಬ ಶಬ್ದವೇ ಸಂಸ್ಕೃತದಲ್ಲಿ ಬಂದುದನ್ನು ಮೈಸೂರು ಸಂಸ್ಕೃತ ವಿದ್ಯಾಲಯ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಸಾಮಾನ್ಯವಾಗಿ ಸಂಸ್ಕೃತದಲ್ಲಿ 'ಕನ್ನಡ'ವೆಂಬ ಶಬ್ದವು ಸಿಕ್ಕಲಾರದು, ಅಲ್ಲಿರುವುದು ಕರ್ನಾಟಕ; ತಮಿಳು ಇಲ್ಲ; ದ್ರವಿಡ. ಇದರಿಂದ ಈ ಶಬ್ದಗಳು ಸಂಸ್ಕೃತ ಭಾಷೆಯಿಂದ ಈಚೆಯವರೆಂದು ಎಣಿಸಲಿಕ್ಕಾದೀತೆ? ವಿದರ್ಭನು ಬಂದು ರಾಜ್ಯವಾಳುತ್ತಾನೆ. ಆ ನಾಡಿಗೆ ತನ್ನ ಹೆಸರನ್ನಿಡುತ್ತಾನೆ. ಆದರೆ, ಆತನು ಆಳುತ್ತಿದ್ದ ಜನಾಂಗದ ಭಾಷೆಯೊಳಗಿನ ಹೆಸರು ಆ ನಾಡಿಗೆ ಮೊದಲು ಇರಲೇ ಇಲ್ಲವೆಂದು ಎಣಿಸುವುದು ಸಯುಕ್ತಿಕವಾದೀತೆ? ಈ ನಾಡಿಗೆ ವಿದರ್ಭವೆಂದು ಹೆಸರಿಡುವ ಮೊದಲು ಏನೆಂದು ಕರೆಯುತ್ತಿದ್ದರು? ಧಾರವಾಡದ ಒಂದು ಭಾಗಕ್ಕೆ ಒಬ್ಬ ಸಾಹೇಬರ ಸ್ಮರಣಾರ್ಥವಾಗಿ 'ಗಿಬ್ಬಟೌನ' ಎಂಬ ಹೆಸರು ಇಡಲ್ಪಟ್ಟಿದೆ. ಅದನ್ನು ಸರಕಾರಿ ಕಾಗದಪತ್ರದಲ್ಲಿ ಕಾಣಬಹುದು. ಆದರೆ, ಜನ ಸಾಮಾನ್ಯರು ಆ ಭಾಗಕ್ಕೆ ಮಾಳ-ಮರಡಿ ಎಂದೇ ಹೇಳುತ್ತಾರೆ. 'ವಿದರ್ಭ'ವೆಂಬ ಹೆಸರು ಸಂಸ್ಕೃತ ಸಾಹಿತ್ಯದಲ್ಲಿ ಉಳಿಯಿತು. ಜನರ ಬಳಕೆಯಲ್ಲಿ ಇನ್ನೊಂದು ಹೆಸರಾಯಿತು! ಅದೇ "ಹಟ್ಟಿ;" "ಮರಹಟ್ಟಿ". ಈ ಜನಾಂಗವು (ತುರ್ವಶ-ಯಾದವಾದಿಗಳು) ಮೊದಲಿದ್ದುದು (ಸಿಂಧೂ) ರಾವೀ ತೀರ, ಈಗ ರೇವತಟಾಕ. ಅಲ್ಲಿ ಗೋಮತಿ ನದಿ; ಇಲ್ಲಿ ಗೋತಮೀ-ಗೋದಾವರಿ! ನಾಸಿಕದ ಹತ್ತರಿನ ಬೆಟ್ಟಗಳಿಗೆ ಗೋವರ್ಧನಗಿರಿಯೆಂದು ಹೆಸರು. ಈ ಪ್ರದೇಶಕ್ಕೆ ಒಂದು ಕಾಲದಲ್ಲಿ ಗೋಪರಾಷ್ಟ್ರವೆಂದೂ ಹೆಸರಿತ್ತು.[೧೪] ನಮ್ಮ ಹಟ್ಟಿಕಾರರೊಡನೆ ಉತ್ತರದ ಚಂದ್ರಭಾಗಾ (ಚಿನಾಬ) ನದಿಯೂ ದಕ್ಷಿಣಕ್ಕೆ ಬಂದಿತು!

ಈ ನಾಡಿನ ಅಧಿದೇವತೆಯಾದ ತ್ರ್ಯಂಬಕೇಶ್ವರನಿಗೆ ಹಾಟಕೇಶ್ವರನೆಂದೂ ಹೆಸರು![೧೫] ಹಟ್ಟಿಕಾರರೊಡನೆ ಹಂಪಿಗೆ ಬಂದ ಜ್ಯೋತಿರ್ಲಿಂಗವು ಇದೇ ಇರಬಹುದೇನೊ! ಪೈಠವು, ಪ್ರಾಚೀನ ಕಾಲದಲ್ಲಿ ದೇವಾಂಗರ ಆಗರವೆಂದು ಹೆಸರಾದುದು; ಇದೂ ಇಲ್ಲಿಯೇ ಇದೆ. ಈ ನಾಡಿಗೆ 'ದೇವರಾಷ್ಟ್ರ' ವೆಂಬ ಇನ್ನೊಂದು ಹೆಸರಿದ್ದ ಹಾಗೂ ಕಂಡುಬರುತ್ತಿದೆ. ಪಟ್ಟ (ಹಟ್ಟ) ಗಾರರಿಗೆ ದೇವಾಂಗರೆಂದು ಹೆಸರು. ಈ ಪ್ರದೇಶವು ಒಂದು ಕಾಲಕ್ಕೆ ದೇವಾಂಗರ ಆಗರ. ಆದುದರಿಂದ, ಇವರ ಮೇಲಿಂದಲೇ ಈ ಪ್ರದೇಶಕ್ಕೆ ದೇವಾಂಗರ ರಾಷ್ಟ್ರ-ದೇವರಾಷ್ಟ್ರವೆಂಬ ಹೆಸರು ಬಂದಿರುವ ಸಂಭವವಿದೆ. ಈಗಲೂ ಕಾನಡ (ಕನ್ನಡ) ಗೌಳಿಗಳೆಂದು ಕರೆಯಲ್ಪಡುವ ತಂಡಗಳು ನೆಲೆಸಿರುವುದು ಈ ಭಾಗದಲ್ಲಿಯೇ. ಆದುದರಿಂದ, ಈ ಪ್ರದೇಶಕ್ಕೆ 'ಹಾಟಕ'ವೆಂಬ ಹೆಸರು ಎಲ್ಲ ಬಗೆಯಿಂದಲೂ ಸಾರ್ಥಕವಾಗಿದೆ. ತಾರಾನಾಥ ತರ್ಕವಾಚಸ್ಪತಿಗಳು ತಮ್ಮ ಸಂಸ್ಕೃತಕೋಶದಲ್ಲಿ 'ಹಾಟಕ'ವೆಂಬ ಹೆಸರಿನ ದೇಶವಿದ್ದುದನ್ನು ಹೇಳುತ್ತಾರೆ. 'ಹಟ್ಟಿಕಾರರು' ಕಾಲೂರಿನಿಂತ ನಾಡೇ ಹಟ್ಟಿ; ಹಾಟಕ. ದಕ್ಷಿಣಾಪಥದಲ್ಲಿ ಮೊದಲು ಬಂದ ಬ್ರಾಹ್ಮಣರು 'ದೇಶಸ್ಥ' ರಾದುದೂ ಇಲ್ಲಿಯೇ. ಪ್ರಾಕೃತರ 'ಹಟ್ಟಿ'; ಆರ್ಯರ 'ದೇಶ'ವಿದು.

ಸಂಸ್ಕೃತ ಸಾಹಿತ್ಯದಲ್ಲಿ ವಿದರ್ಭವೆಂದು ಹೆಸರಿರುವ ಈ ಹಟ್ಟಿನಾಡಿನ ವಿಸ್ತಾರವು ಎಷ್ಟು ಇದ್ದಿತೆಂಬುದನ್ನು ಶ್ರೀ ನಂದಲಾಲ ಡೇ ಇವರ "ಪ್ರಾಚೀನ ಭಾರತದ ಭೂಗೋಲ"ದಿಂದ ಕೆಲಮಟ್ಟಿಗೆ ಅರಿತುಕೊಳ್ಳಬಹುದಾಗಿದೆ. ಈಗಿನ ವರ್‍ಹಾಟ, ಖಾನದೇಶ (ನಾಸೀಕವೂ ಇದರಲ್ಲಿದೆ), ನಿಜಾಂ ಇಲಾಖೆಯ ಉತ್ತರಭಾಗ, ಇವೆಲ್ಲ ಪ್ರದೇಶಗಳು ಸೇರಿ ಪ್ರಾಚೀನ ವಿದರ್ಭವಾಗಿತ್ತು. ಬೀದರವು ಪ್ರಾಚೀನ ವಿದರ್ಭದ ರಾಜಧಾನಿಯೆಂದು ಸುಪ್ರಸಿದ್ಧ ಇತಿಹಾಸಸಂಶೋಧಕರಾದ ಕೆ. ಪಿ. ಜಯಸ್ವಾಲರು ಹೇಳುತ್ತಾರೆ, (Hisotry of India 150-350 A. D: J.B. O. R. S. P. 87. 88) ಬೀದರದ ಮನೆಮಾತು ಇಂದಿಗೂ ಕನ್ನಡ! "ದ್ರಾವಿಡ" ವರ್ಗದ ಭಾಷೆಗಳು ಹೊಸತಾಗಿ ಯಾವುದೊಂದು (ಉತ್ತರದ) ಪ್ರದೇಶಕ್ಕೆ ಹೋಗಿ ಅಲ್ಲಿಯ ಜನಾಂಗದಲ್ಲಿ ಪ್ರಸಾರವಾದುದನ್ನು ನಾವು ಎಲ್ಲಿಯೂ ಕಾಣಲಾರೆವು; ಆದುದರಿಂದ ಕನ್ನಡ ಮೊದಲಾದ ಈ ಭಾಷೆಗಳು (ಉತ್ತರಕ್ಕೆ) ಎಲ್ಲಿಯಾದರೂ ದೂರದ ನಾಡಿನಲ್ಲಿ ಇದ್ದುದು ಗೋಚರವಾದರೆ ಅದು ಅಲ್ಲಿಯವರ ಮೂಲಭಾಷೆಯೆಂದು ತಿಳಿಯಲು ಅಡ್ಡಿಯಿಲ್ಲ; ಎಂದು ಡಾ. ಗ್ರಿಯರಸನ್‌ರು ತಮ್ಮ ೨೫-೩೦ ವರುಷಗಳ ಸಂಶೋಧನದಲ್ಲಿ ಬಂದ ಅನುಭವದಿಂದ ಬರೆದಿಟ್ಟಿದ್ದಾರೆ. ಇದಕ್ಕನುಸರಿಸಿ ಈಗಲೂ ಕನ್ನಡವು ಜೀವಂತವಿರುವ ಬೀದರವು ಪ್ರಾಚೀನ ಕಾಲದಲ್ಲಂತೂ ತಿರುಳ್ಗನ್ನಡಿನ ತವರೂರಾಗಿರಬೇಕೆಂದು ನಿರಾತಂಕವಾಗಿ ಹೇಳಬಹುದು. ಇಂತಹ ಬೀದರವು ಪ್ರಾಚೀನ ವಿದರ್ಭದ ರಾಜಧಾನಿ! ಹಟ್ಟಿ-ನಾಡಿನ ಹಿರಿಯೂರು! ಆದ್ದರಿಂದ ಪ್ರಾಚೀನ ವಿದರ್ಭದ ಮೊದಲಿಗರ ಮನೆಮಾತು ಕನ್ನಡವಾಗಿದ್ದಿತೆಂಬುದು ಸ್ಪಷ್ಟ.

ದೇಶಗಳಿಗೆ ಹಲವು ಕಾರಣಗಳಿಂದ ಹೆಸರು ಪ್ರಾಪ್ತವಾಗುವವು. ಅವೆಲ್ಲ ಕಾರಣಗಳಲ್ಲಿ ಜನಾಂಗದಿಂದ ದೇಶಕ್ಕೆ ಹೆಸರು ಬರುವ ಪದ್ಧತಿಯೇ ಪ್ರಾಚೀನತಮ. ಈ ನಾಡು ಹಟ್ಟಿಕಾರರು ಇರುವ ದೇಶವಾದುದರಿಂದಲೆ ಇದಕ್ಕೆ 'ಹಟ್ಟಿ' ಯೆಂಬ ಹೆಸರು. ಸಂಸ್ಕೃತ ಸಾಹಿತ್ಯದೊಳಗಿನ ಹಾಟಕ; ವೈದಿಕ ಕಾಲದ 'ಪತ್ತಿ (ಟ್ಟಿ)'ಗಳ ದೇಶ ಶಿವಭಕ್ತರದೇಶ. ನರ್ಮದಾ ನದಿಯಲ್ಲಿ ಶ್ರೇಷ್ಠವಾದ ಬಾಣ (ಶಿವಲಿಂಗ)ಗಳು ದೊರೆಯುತ್ತವೆಂದು ನಮ್ಮವರ ಭಾವನೆಯು ಅರ್ಥಪೂರ್ಣವಾಗಿದೆ. ಈ ನಾಡಿನಲ್ಲಿ ಹಟ್ಟಿಕಾರರು ಇನ್ನೂ ಪ್ರಮುಖರಾಗಿದ್ದಾರೆ.[೧೬] ಇಂದೂರಿನ ರಾಜರು ಹಟ್ಟಿಕಾರ ಕುಲತಿಲಕರು. ಹಿಂಗೋಲಿ ಮತ್ತು ವರ್‍ಹಾಟಗಳ ನಾಯಿಕರು-ಮುಖ್ಯವಾಗಿ ಹಟ್ಟಿಕಾರವಂಶ ದವರೇ.[೧೭] ಇಲ್ಲಿಯ ಗೌಡರಲ್ಲಿ ಹಟ್ಟಿಕಾರರೇ ಹೆಚ್ಚು. ಹಟ್ಟಿಕಾರ ಜಾಡಿಗಳಿಗೆ ವರ್‍ಹಾಟ, ಅದಿಲಾಬಾದಗಳ ಕಡೆಗೆ ಝಾಡೇ ಎಂದೆನ್ನುವರು.[೧೮] ಇಲ್ಲಿ ಹಟ್ಟಿಕಾರ-ಝಾಡಿಗಳು ಬಹಳೇ ಪ್ರಮುಖರೂ ಪ್ರಬಲರೂ ಆಗಿದ್ದುದರಿಂದ ಒಂದುಕಾಲಕ್ಕೆ ಈ ನಾಡಿಗೆ "ಝಾಡಪಟ್ಟೀ" ಎಂದು ಹೆಸರಿತ್ತು. ದೇವಗಿರಿಯ ಯಾದವ ಮನೆತನದ ರಾಮದೇವನ ಮಂತ್ರಿಯಾದ ಹೇಮಾದ್ರಿಯು "ಝಾಡಿ ಮಂಡಲ"ವನ್ನು ಗೆದ್ದುದರಿಂದ ಅವನಿಗೆ "ನಿರ್ಜಿತ ಝಾಡಿ-ಮಂಡಲಃ" ಎಂದು ಬಿರುದು ಇದ್ದುದು ಕಣ್ಣೇರದ ತಾಮ್ರಶಾಸನದಿಂದ ಗೊತ್ತಾಗುತ್ತದೆ.[೧೯]

ಆದರೆ, ಈ ನಾಡಿಗೆ 'ಝಾಡ-ಪಟ್ಟೀ' ಎಂಬ ಹೆಸರಾಗಲಿ, 'ಝಾಡಿ-ಮಂಡಳ'ವೆಂಬುದಾಗಲಿ ಮುಖ್ಯ ಹೆಸರಾಗಿ ನಿಲ್ಲಲಿಲ್ಲ. ಈ ಹಟ್ಟಿಕಾರರು, ಝಾಡಿಗಳು-ಜಾಡರು; ಕನ್ನಡ ಜನಾಂಗ. ಇವರೇ ಮರವರೆಂದು ತಮಿಳು ಸಾಹಿತ್ಯದಲ್ಲಿ ಅಜರಾಮರರಾಗಿರುವರು. ಝಾಡಿ-ಮಂಡಳವೆಂಬುದು ಪ್ರಾಕೃತ ಮಾತು; ಇದು 'ಮರಹಟ್ಟ'ವೆಂಬ ಅಚ್ಚಗನ್ನಡದ ಭಾಷಾಂತರ. ಈ ನಾಡು ಝಾಡಿಯವರ ಎಂದರೆ ಮರವರ ಹಟ್ಟಿ. ಆದುದರಿಂದಲೇ ಮರಹಟ್ಟಿ-ಮರಹಾಟವೆಂದು ಇದರ ಮೂಲ ಹೆಸರು. 'ಮರಹಟ್ಟ'ವೇ ವರಹಾಟವೆಂದು ಹೇಗೆ ರೂಪಾಂತರವನ್ನು ಹೊಂದಿತು ಮತ್ತು ಮಹಾರಾಷ್ಟ್ರವೆಂದು ಸಂಸ್ಕೃತ ರೂಪವನ್ನೂ ಹೇಗೆ ತಾಳಿತು ಎಂಬ ಬಗ್ಗೆ 'ಮಹಾರಾಷ್ಟ್ರದ ಮೂಲ'ದಲ್ಲಿ ವಿಸ್ತಾರವಾಗಿ ವಿವೇಚಿಸಿರುವುದರಿಂದ ಇಲ್ಲಿ ಅದರ ಪುನರುಚ್ಚಾರಣೆಯ ಆವಶ್ಯಕತೆಯಿಲ್ಲ. ಮರವರನ್ನು ಕುರಿತು ಪ್ರಾಚೀನ ತಮಿಳ ಸಾಹಿತ್ಯದಲ್ಲಿ ಬಂದ ವರ್ಣನೆಯನ್ನು ಪ್ರೊ. ದೀಕ್ಷಿತರು ಕೊಟ್ಟಿದ್ದಾರೆ.

> 'ಇವರು ಕಡುಗಲಿಗಳು; ಯುದ್ಧದಲ್ಲಿ ಪರಾಕ್ರಮಶಾಲಿಗಳು. ಮರವರು ಮೀಶೆ-ಗಡ್ಡಗಳನ್ನು ಧರಿಸುವರು. ಉಗ್ರ ಸ್ವರೂಪಿಗಳು. ಮೆಯ್‌ಕೆಯ್ಯಿಂದ ಗಟ್ಟಿಗರು. ತುಡುಕುವುದು ಇವರ ಸ್ವಭಾವ; ಬಿಲ್ಲು-ಬಾಣಗಳು ಇವರ ಆಯುಧ. ಎರಡು ಮಗ್ಗುಲಿನಿಂದಲೂ ಬಾರಿಸಬಹುದಾದಂತಹ ಒಂದು ವಿಶೇಷ ಪ್ರಕಾರದ ವಾದ್ಯವು ಇವರಲ್ಲಿದೆ. ಇವರ ಧೈರ್ಯ, ಶೌರ್ಯ, ಸಾಹಸಾದಿ ಗುಣಗಳನ್ನು ನೋಡಿ ತಮಿಳು ರಾಜರೂ ಇವರನ್ನು ದಂಡಿನಲ್ಲಿ ಸೇರಿಸಿ ಕೊಳ್ಳುತ್ತಿದ್ದರು.'[೨೦]

ಮರವರು ಶೂರರಷ್ಟೇ ಅಲ್ಲ, ಬುದ್ಧಿವಂತರೂ ಅಹುದು. ಇವರಲ್ಲಿ ಹಲವರು ಪಾಂಡ್ಯ, ಚೇರ ರಾಜರಲ್ಲಿ ಮಂತ್ರಿಗಳೂ ಸೇನಾಪತಿಗಳೂ ಸಹ ಆಗಿದ್ದರು. ಇಂತಹ ಪ್ರಬಲವಾದ ಪ್ರಾಚೀನ ಜನಾಂಗವಿದು. ಇವರು ಬೀಡು ಬಿಟ್ಟನಾಡಿಗೆ ಇವರ ಹೆಸರೆ ಬಾರದೆ ಇದ್ದೀತೆ? ಇಲ್ಲಿ ಎಷ್ಟು ದೂರದಲ್ಲಿ ಕನ್ನಡ ಹಟ್ಟಿಕಾರರು ಎಲ್ಲಿಂದ ಬರಬೇಕು? ಇದು ಕೇವಲ ಅತಿವಾದವೆಂದು ಇನ್ನೂ ಸಂದೇಹ ಪಟ್ಟುಕೊಳ್ಳುವವರು, ಇಂದಿಗೂ ವರ್ಹಾಟದಲ್ಲಿರುವ ಕನ್ನಡದ ಅವಶೇಷಗಳನ್ನು ನೋಡಿಕೊಳ್ಳಲಿ; ಈಗಲೂ ವರ್ಹಾಟದಲ್ಲಿ ಕುಟುಂಬರೆಂಬ ಹೆಸರುಳ್ಳ ಕನ್ನಡ ಮಾತನಾಡುವ ಸಾವಿರಾರು ಜನರ ತಂಡವಿದೆ. 'ಒಕ್ಕಲಿಗ' ಎಂಬು ಹೆಸರಿನವರೇ ಹಲವರಿದ್ದಾರೆ.

> A Canarese caste of cultivators, of which a few representatives were returned from Nagpur.

ಜನಗಣನೆಯಲ್ಲಿ ಇವರ ಲೆಕ್ಕವು ಸರಿಯಾಗಿ ಸಿಕ್ಕಲಿಲ್ಲ. ಇವರಲ್ಲದೆ 'ಹಳಬ'ರಂತೂ ಸರಿಯೆ.[೨೧] ವರ್ಹಾಟಿನ ದೇಶಮುಖರೂ ಪಾಟೀಲರೂ ಹಟ್ಟಿಕಾರ ಕುಲಕ್ಕೆ ಸಂಬಂಧಿಸಿದವರು.[೨೨] ಇಲ್ಲಿಯ ದನಗಾರ-ಹಟ್ಟಿಕಾರರು ಆರ್ಯಪೂರ್ವಜನಾಂಗವೆಂದು ವಂಶಶಾಸ್ತ್ರಜ್ಞ (Ethnologist) ರು ನಿರ್ಣಯಿಸಿರುವುದನ್ನು ಈ ಮೊದಲೆ ಹೇಳಿದೆ.[೨೩] ಆದಕಾರಣ ಹಟ್ಟಿಕಾರ ಜನಾಂಗದಿಂದಲೆ ಈ ನಾಡಿಗೆ ಹಾಟ, ಮರಹಾಟ (ವರ್ಹಾಟ) ವೆಂಬ ಹೆಸರು ಬಂದಿತೆಂದು ಹೇಳಲು ಅಡ್ಡಿಯೇನು?

ಹಟ್ಟಿಕಾರರು ಹಿಂದೂಸ್ಥಾನದಲ್ಲಿ ಎಲ್ಲೆಡೆಗಳಲ್ಲಿಯೂ ಹರಿದಾಡಿದುದನ್ನು ಕಾಣಬಹುದು. ಇವರು ಅಸ್ಸಾಮದವರೆಗೂ ಹೋಗಿದ್ದರೆಂದು ಗೋಹಟ್ಟಿ ಊರು ಸಾಕ್ಷಿ ಹೇಳುತ್ತಿದೆ. ಬಂಗಾಳಿನಲ್ಲಿ ಪಟ್ಟಿ, ಹಟ್ಟಿ, ಪಾಟ, ವಾಟ, ವಾಡಗಳಿಗೆ ಕೊರತೆಯಿಲ್ಲ. ಅಲ್ಲದೆ ಬಂಕೂರಾ, ಹೌವ್ರಾರಾ ಎಂದು 'ಊರು' ಶಬ್ದವು ಕೊನೆಗೆ ಇರುವ ಹೆಸರುಗಳೂ ದೊರೆಯುತ್ತವೆ. ಇದೆಲ್ಲವೂ ಕನ್ನಡಿಗನು ಹೇಳುವ ಅಭಿಮಾನದ ಮಾತಲ್ಲ.[೨೪] ವಿದ್ವಾಂಸರಾದ ಬಂಗಾಲಿಗಳು ತಮ್ಮ ಭಾಷೆಯಲ್ಲಿರುವ ಈ ಬಗೆಯ ಅಂಶಗಳನ್ನೆಲ್ಲ ಆರಿಸಿ ಅವರೇ ಸಪ್ರಮಾಣವಾಗಿ ಸಿದ್ಧ ಪಡಿಸಿರುವ ಸಂಗತಿಗಳು.[೨೫] 'ಹಟ್ಟಿ' ಎಂಬ ಊರುಗಳಿವೆ; ಆದರೆ ಈ ಹೆಸರು 'ನಾಡು' ಶಬ್ದದಂತೆ ದೇಶವಾಚಕವಾಗಿದೆಯೆ? ನಾಡುಶಬ್ದದ ಧಾತ್ವರ್ಥವು ಸಹ ರಾಷ್ಟ್ರ, ದೇಶವೆಂದಿಲ್ಲ. ಲಕ್ಷಣಾರ್ಥದಲ್ಲಿ ಮುಂದೆ, ಈ ಅರ್ಥವು ಪ್ರಾಪ್ತವಾಯಿತು. ಹಾಗೆಯೆ ಹಟ್ಟಿ ಶಬ್ದದಲ್ಲಿ ಊರು ಎಂಬ ಅರ್ಥವಿರುವಂತೆ ದೇಶ, ದೇಶವಿಭಾಗವೆಂಬ ಅರ್ಥದ್ಯೋತಕ ಶಕ್ತಿಯೂ ಇಲ್ಲದಿಲ್ಲ. ೫೦ರಿಂದ ೧೦೦ ವರೆಗಿನ ಹಳ್ಳಿಗಳ ವಿಭಾಗಕ್ಕೆ ಗೊಂಡಜನರು 'ಪಟ್ಟಿ' ಎಂದು ಹೇಳುವರು; ಆ ನಾಡು, ಈ ನಾಡು ಎನ್ನುವಂತೆ ಅವರು ಘಾಟಪಟ್ಟಿ (ಗಟ್ಟದ ನಾಡು) ಎಂದು ಮುಂತಾಗಿ ಸಂಬೋಧಿಸುವರು.[೨೬] ಪ್ರಾಚೀನ ಕಾಲದ ರಟ್ಟಪಾಡಿ, ಗಂಗಪಾಡಿ, ನೊಳಂಬವಾಡಿ ಮೊದಲಾದುವು ದೇಶವಾಚಕವಲ್ಲವೆ? ಕಾಲಾಂತರದಲ್ಲಿ ದೇಶವಿಭಾಗಗಳನ್ನು ಸೂಚಿಸುವ ಬೇರೆ ಕೆಲವು ಹೆಸರುಗಳು ತಲೆದೋರಿದ ಬಳಿಕ 'ಪಾಡಿ' 'ಪಟ್ಟಿ'ಯು ಹಿಂದೆ ಬಿದ್ದಿತು. ಈಗಿನ ತಾಲೂಕಿಗಿಂತಲೂ ಸ್ವಲ್ಪ ಸಣ್ಣ ವಿಭಾಗಕ್ಕೆ ಇರುವ ಪೇಟಾ (ಪೇಠಾ) ಎಂಬ ಶಬ್ದವು ಪಾಡಿ-ಪಾಟದ ಒಂದು ವಿಕೃತರೂಪವೆ ಆಗಿದೆ.

ಪಟ, ಪಟ್ಟವೆಂದು ಬಟ್ಟೆಗೆ ಹೆಸರು. ಪ್ರಾಚೀನ ಇಜಿಪ್ತಿನಲ್ಲಿ ವಸ್ತ್ರಕ್ಕೆ ಪಟವೆಂಬ ಶಬ್ದವಿದ್ದಿತೆಂದು ಕಂಡು ಬಂದಿದೆಯಷ್ಟೆ. ಆದರೆ, ವೇದಗಳಲ್ಲಿ ಮಾತ್ರ 'ಪಟ' ಶಬ್ದವಿಲ್ಲ! ಕರ್ಪಟ, ಕಾರ್ಪಾಸಗಳೂ ಇಲ್ಲ! ಬಟ್ಟೆಗಳಿಗೆ ಅವು ತಯಾರಾಗುವ ಸ್ಥಳದ ಹೆಸರು ಬರುವುದನ್ನು ಕಾಣುತ್ತೇವೆ. ಕಾಲಿಕತ್ತು - 'ಕ್ಯಾಲಿಕೊ;' - 'ವಸ್ತ್ರಭೇದೇ' ಚೀನ; ಮ್ಯಾಂಚೆಸ್ಟರ-'ಮಾಂಜರ' ಪಾಟು; ಹೀಗೆಯೆ ಪಟ್ಟಿಗೂ ಪಟಕ್ಕೂ ಅನ್ಯೋನ್ಯಸಂಬಂಧವಿರಲಾರದೆ?

ವೇದದಲ್ಲಿ ಬಟ್ಟೆಗೆ ವಸನ, ವಸ್ತ್ರ, ವಾಸಸ್ ಎಂದು ಪದಗಳಿವೆ. 'ಕರ್ಪಟ'; ಕರ್ಪಾಸ ಇವೆಲ್ಲ ಮುಂದಿನ ಕಾಲದ ಸಂಸ್ಕೃತದಲ್ಲಿ ಕಾಣಬರುತ್ತವೆ. ಕರ್ಪಸ ಮತ್ತು ಕರ್ಪಾಸವೆಂದರೆ ಹತ್ತಿ, ಕರ್ಪಸ ಮತ್ತು ಕರ್ಪಾಸದೊಳಗಿನ 'ಕರ್' ಎಂಬುದನ್ನು ತೆಗೆದು ಬಿಡಬಹುದು. 'ಕರ್' ಎಂಬುದು ಸ್ವತಂತ್ರ ಶಬ್ದಾವಯವ. ಇನ್ನುಳಿದುದು ಪಸ ಮತ್ತು ಪಾಸ; ಪಸ < ವಸ(ನ); ಪಾಸ<ವಾಸ, ಇವು ಎಷ್ಟು ಸಮೀಪ! ಈಗ ಪಟ < ಪಸ ಎಂದೂ ಕಂಡುಕೊಳ್ಳ ಬಹುದಾಗಿದೆ. ಈ ದ್ರಾವಿಡ ವರ್ಗದ ಶಬ್ದಗಳಲ್ಲಿ ಪ್ರಥಮಾಕ್ಷರವು ಮಾತ್ರ ಸ್ಥಿರವಾಗಿ ಉಳಿದು ಮುಂದಿನ ಅಕ್ಷರದಲ್ಲಿ ಆಗುವ ಮಾರ್ಪಾಟಗಳನ್ನು ಅಷ್ಟು ಇಷ್ಟೆಂದು ಹೇಳುವುದು ಕಷ್ಟ. ಕುಳ್ಳಿರ್ ಶಬ್ದದ ವಿವಿಧರೂಪಗಳನ್ನು ನೋಡಿ ಈ ಮಾತನ್ನು ಮನಗಾಣಬಹುದು. ಕೂಡು; ಕುಂಡ್ರು; ಕೂತು, ಇವೆಲ್ಲವುಗಳಲ್ಲಿ 'ಕು'-'ಕೂ' ಎಂಬುದಿಷ್ಟು ಸ್ಥಿರವಿದ್ದು ಉಳಿದ ಭಾಗವು ತುಂಬ ಬದಲಾವಣೆಗಳನ್ನು ಹೊಂದಿತು.

ಪ್ರಿಲಸ್ಕಿಯವರು ಕಿರಾತ-ಕಿರಾಡ-ಕಿರಾಸ ಎಂಬ ಉದಾಹರಣವನ್ನು ಕೊಟ್ಟು ತ, ಡ ಮತ್ತು ಸಕಾರಗಳು ಹೇಗೆ ಮಾರ್ಪಡುವುವೆಂಬುದನ್ನು ತೋರಿಸಿದ್ದಾರೆ. ವೇದಪೂರ್ವಕಾಲದ ಪಟ ಶಬ್ದವು ವಸ(ನ), ವಸ್ತ್ರ, ವಾಸಸ್ ಎಂಬ ರೂಪಗಳನ್ನು ಧರಿಸಿ ಆರ್ಯೀಕರಣವಾಗಿ ವೈದಿಕಸಾಹಿತ್ಯದಲ್ಲಿ ಸ್ಥಾನವನ್ನು ಪಡೆದಿತು. ಈ ದೃಷ್ಟಿಯಿಂದ ವಿಚಾರಿಸಿದರೆ ಪಟವಾಸಃ ಎಂಬುದು ಚಂದ್ರಮಸ್, ಕೂಡಲ-ಸಂಗಮ, ಖೇಳಾಡು, ಜಾತಿಯ ಶಬ್ದ. ಪಟವಾಸಃ ಎಂಬುದಕ್ಕೆ ಈಗ ಕೋಶಗಳಲ್ಲಿ ಸಿಕ್ಕುವುದು ಮೂಲಾರ್ಥವಲ್ಲ; ಮುಂದೆ ಪ್ರಾಪ್ತವಾದ ವಿಶೇಷಾರ್ಥ (Specialization of the meaning). ಪಟ್ಟಿಯಲ್ಲಿ ಹುಟ್ಟಿದುದು ಪಟ್ಟ. ಹೀಗೆ ಸಹಜ ಸುಲಭವಾಗಿ ವ್ಯುತ್ಪತ್ತಿಯು ಸಾಧ್ಯವಿರುವಾಗ ಪ್ರಿಲಸ್ಕಿಯವರಿಗೆ ಆಸ್ಟ್ರೋ ಏಶಿಯಾಟಿಕ್ ಭಾಷೆಯತನಕ ದೂರಿನ ಪ್ರವಾಸದ ಕಾರಣವೇ ಇದ್ದಿಲ್ಲ.[೨೭]

ವಾಸಸ್ ಶಬ್ದವನ್ನು ಕುರಿತು ಟಿಪ್ಪಣಿಯಲ್ಲಿ ಮ್ಯಾಕಡೊನೆಲ್‌ರು "the clothes were often woven of sheep's wool" ಎಂದಿದ್ದಾರೆ.[೨೮] ಈ ಜನಾಂಗವು ಉತ್ತರ ಭಾರತದಲ್ಲಿದ್ದಾಗ ಪಟ್ಟಿ (ಘೋಷಃ) ಯಲ್ಲಿ ತಯಾರಿಸುವ ಪಟವು ಉಣ್ಣೆಯದಿರುವ ಸಂಭವವೇ ಹೆಚ್ಚು. ಜಾಡಿಗಳಲ್ಲಿ (ಜಾಡರಲ್ಲಿ) ಹಳಬರು ಉಣ್ಣೆಕಂಕಣದವರು.[೨೯] ಹತ್ತಿಯು ಗೊತ್ತಾಗುವ ಮೊದಲು ಹಟ್ಟಿಕಾರರು, ತಮ್ಮಲ್ಲಿ ಹೊರಟ ಉಣ್ಣೆಯಿಂದಲೆ ಜಾಡಿಗಳನ್ನು ನೇಯುತ್ತಿರಬೇಕು. ಆದ್ದರಿಂದ ಈ ವಸ್ತುವು-ಕಳ್ತಿ, ಪತ್ತಿಯು ಪಟ್ಟಿ (ಹಟ್ಟಿ) ನಾಡಿನಲ್ಲಿಯೆ ಮೊದಲು ದೊಡ್ಡ ಪ್ರಮಾಣದಿಂದ ಬೆಳೆಯಲಾರಂಭಿಸಿರಬೇಕೆಂದು ಊಹಿಸಬಹುದಾಗಿದೆ. ಸಪ್ತಸಿಂಧು ತೀರದ ಆರ್ಯರಿಗೆ ಹತ್ತಿಯು ಗೊತ್ತಿರುವ ಸಂಭವವೇ ಇಲ್ಲ. ಏಕೆಂದರೆ ಅದು ಹತ್ತಿ ಬೆಳೆವ ನಾಡು ಅಲ್ಲ. ಕರ್ಪಸ ಅಥವಾ ಕಾರ್ಪಾಸಗಳು ಸಂಸ್ಕೃತ ಶಬ್ದಗಳಂತೆ ತೋರುವುದಿಲ್ಲ. ಇವೆರಡೂ ಶಬ್ದಗಳಲ್ಲಿರುವ ಆರಂಭದ 'ಕರ್'ಎಂಬ ಅವಯವದ ಅರ್ಥವೇನೊ ತಿಳಿಯದು. 'ಪಸ' ಎಂಬ ಇನ್ನುಳಿದ ಮುಖ್ಯಭಾಗವು 'ಪಟ' ಶಬ್ದದ ಇನ್ನೊಂದು ರೂಪವೆಂದು ಅರಿತುಕೊಳ್ಳಲು ವಿಶೇಷ ಶ್ರಮಪಡಬೇಕಾಗಿಲ್ಲ. 'ಪಟ' ಶಬ್ದದ ರೂಪವಿಕಾರಗಳನ್ನು ಕುರಿತು ಈ ಮೊದಲೆ ಚರ್ಚಿಸಿದ್ದಾಗಿದೆ.

ಹಟ್ಟಿನಾಡಿನ ಹೆಸರಿನಿಂದಲೆ ತಾನೂ ಹೆಸರುಗೊಂಡು ಪ್ರಾಚೀನ ಕಾಲಕ್ಕೆ ವಿಖ್ಯಾತವಾದ ಇನ್ನೂ ಒಂದು ವಸ್ತುವಿದೆ. ಅದು ಹಾಟಕ ಎಂದರೆ ಬಂಗಾರ. ಈಗ ನಿಜಾಮ ಇಲಾಖೆಯಲ್ಲಿ ಸಮಾವಿಷ್ಟವಾಗಿರುವ (ಆದರೆ ಪ್ರಾಚೀನ ಕಾಲದ ಹಟ್ಟಿನಾಡಿನ ಭಾಗವಾಗಿದ್ದ) 'ಹಟ್ಟಿ' ಎಂಬ ಊರಲ್ಲಿ ಪುರಾತನಕಾಲದಿಂದ ಬಂಗಾರವನ್ನು ತೋಡುವ ಕೆಲಸವು ಬಹಳ ಜೋರಿನಿಂದ ಸಾಗುತ್ತಿತ್ತು. ಸರ್ ಮಾರ್ಶಲ್‌ರು ಬರೆಯುವುದೇನೆಂದರೆ:[೩೦]

'ಹಟ್ಟಿಯ ಗಣಿ'ಗಳು ಹಿಂದೂದೇಶದ ಅತಿಪ್ರಾಚೀನ ಗಣಿಗಳಲ್ಲಿ ಎಣಿಸಲ್ಪಡುತ್ತವೆ. ಇವುಗಳಲ್ಲಿ ಒಂದು ೬೨೦ ಫೂಟಿನಷ್ಟು ಆಳವಿದೆ!' ಇಲ್ಲಿ ಅಂದರೆ ಹಟ್ಟಿಯಲ್ಲಿ ಹುಟ್ಟಿದ್ದರಿಂದ ಬಂಗಾರಕ್ಕೆ ಹಾಟಕವೆಂದು ಹೆಸರು, ಬಂಗಾರವು ಹಾಟಕ (ದೇಶ)ದಲ್ಲಿ ಹುಟ್ಟಿದ್ದರಿಂದ, ಅದಕ್ಕೆ 'ಹಾಟಕ'ವೆಂಬ ಹೆಸರು ಬಂದಿರುವುದೆಂದು ವಾಚಸ್ಪತ್ಯಕೋಶವು ಹೇಳುತ್ತದೆ.

ಬಂಗಾರವು ಹಿಂದೂ ದೇಶದಲ್ಲಿ, ಮುಖ್ಯವಾಗಿ ದಕ್ಷಿಣದೇಶದ (ನರ್ಮದಾ-ಕಾವೇರಿಮಧ್ಯ ಕರ್ನಾಟದ) ವಸ್ತುವಾಗಿರುವುದರಿಂದ ಇದಕ್ಕೆ ವೇದದಲ್ಲಿ "ಚಂದ್ರಾ" (ಶಿನ್-ಚಿನ್) ಎಂದೂ ಮುಂದೆ ಹಾಟಕ (ಹಟ್ಟಿ ನಾಡಿನ ವಸ್ತು)ವೆಂದೂ ಸಂಸ್ಕೃತದಲ್ಲಿ ಹೆಸರುಗಳಿರುವುದು ಉಚಿತವಾಗಿಯೇ ಇದೆ. ಇಲ್ಲಿ ಇನ್ನೊಂದು ಮಾತು ಬಹಳ ವಿಚಾರಾರ್ಹವಾಗಿದೆ. ದಕ್ಷಿಣಾಪಥದ ಉತ್ತರಕ್ಕೆ ನರ್ಮದಾತೀರದಲ್ಲಿಯೂ ದಕ್ಷಿಣಕ್ಕೆ ಕಾವೇರಿ ತಟದಲ್ಲಿಯೂ ಮರವರು, ಇಡೈಯರು, ಅಂಡರರು ಪ್ರಾಚೀನಕಾಲದಿಂದಲೂ ಕಾಣಿಸಿಕೊಳ್ಳುವರು. ಆದರೆ, ಸಂಸ್ಕೃತಸಾಹಿತ್ಯ ದೊಳಗಿನ ಕೆಲವೊಂದು ವರ್ಣನೆಗಳಿಂದ ಭ್ರಮೆಗೊಂಡು ಅನೇಕ ವಿದ್ವಾಂಸರು "ಹಿಂದಕ್ಕೆ ದಕ್ಷಿಣಾ ಪಥವೆಲ್ಲ ಅರಣ್ಯಮಯವಾಗಿತ್ತು; ಎಂದು ಪ್ರತಿಪಾದಿಸುತ್ತಿದ್ದಾರೆ! ಆದರೆ ಆಶ್ಮಯುಗದಿಂದಲೂ ಈ ನಾಡಿನಲ್ಲಿ ಜನಗಳು ವಾಸವಾಗಿದ್ದುದರ ಕುರುಹುಗಳು ಅಲ್ಲಿಗಲ್ಲಿಗೆ ಬೇಕಾದಷ್ಟು ದೊರೆಯುತ್ತಿವೆ. ಆಶ್ಮಯುಗದ ಬೇರೆ ಬೇರೆ ಪ್ರಕಾರದ ಆಯುಧಗಳೂ ಉಪಕರಣಗಳೂ ಧಾರವಾಡ ಜಿಲ್ಹೆಯ ಬೆಣ್ಣೆಹಳ್ಳದಲ್ಲಿ ದೊರೆತಿವೆ. ಬಳ್ಳಾರಿ ಜಿಲ್ಹೆಯ ಕಪ್ಪಗಲ್ಲು ಮೊದಲಾದ ಸ್ಥಳಗಳು ಪ್ರಾಚೀನ ಅವಶೇಷಗಳಿಗಾಗಿ ಸುಪ್ರಸಿದ್ಧ. ಚಂದ್ರವಳ್ಳಿಯಲ್ಲಿ ದೊರೆತ ೪-೫ ಸಾವಿರ ವರುಷಗಳ ಹಿಂದಿನ ಕುರುಹುಗಳ ಬಗ್ಗೆ ಯಾರಿಗೂ ಸಂದೇಹವೇ ಉಳಿದಿಲ್ಲ. ಬನವಾಸಿ, ಪೈಠಣ, ಕರ್ಹಾಟಗಳು ಪುರಾತನ ಪಟ್ಟಣಗಳು. ನರ್ಮದೆಯ ಕೊಳ್ಳದಲ್ಲಿಯೇ ಮೊದಲಿಗೆ ಮಂಗನಿಂದ ಮನುಷ್ಯನಾದುದು ಎಂದು ಪ್ರತಿಪಾದಿಸುವವರು ಹಲವರು. ಇಷ್ಟು ಪುರಾತನಕಾಲದಿಂದಲೂ ಇಲ್ಲಿ ಮನುಷ್ಯನ ಕುರುಹುಗಳಿವೆ. (Journal of the Department of Letters Vol. I. ಪಂಚಾನನ ಮಿತ್ರರ ಲೇಖನವನ್ನೋದಿ).

ಅಲ್ಲದೆ ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಉಲ್ಲೇಖಿತರಾದ ವಡುಕ ಹಟ್ಟಿಕಾರರು ಮೇಲೆ ನರ್ಮದಾತೀರಕ್ಕೆ; ಕೆಳಗೆ ತಿರುಪತಿ, ಕಾವೇರಿಗಳ ಹತ್ತಿರ ಇದ್ದು ನಡುವಿನ ಸೀಮೆಯಲ್ಲಿ ಮಾತ್ರ ಇರಲಿಲ್ಲವೆಂದು ಗ್ರಹಿಸುವುದು ಸರಿಯಾಗಲಾರದು.

ನರ್ಮದಾ-ಕಾವೇರಿಗಳ ನಡುವಿನ ನಾಡು ಅಥವಾ ವಿಂಧ್ಯ-ನೀಲಗಿರಿಗಳ ಮಧ್ಯದೇಶವು, ಆರ್ಯರು ದಕ್ಷಿಣಾಪಥಕ್ಕೆ ಬರುವ ಸುಮಾರಿಗೆ ವಡುಕ-ಹಟ್ಟಿಕಾರ ವಾಸಸ್ಥಾನವಾಗಿದ್ದಿತೆಂದು ಹೇಳಬಹುದು. ಅದರಲ್ಲಿಯೂ ವಿದರ್ಭವು ಮರವ (ಜಾಡ)ರ ಹೆಸರಿನಿಂದಲೇ ವಿಖ್ಯಾತವಾಗಿ ಮರಹಟ್ಟಿ ಎಂದು ಹೆಸರುಗೊಂಡಿತ್ತು.

ಟಿಪ್ಪಣಿಗಳು

೧ ಸೌರಾಷ್ಟ್ರೇ ಸೋಮನಾಥಂ ಚ ಶ್ರೀಶೈಲೇ ಮಲ್ಲಿಕಾರ್ಜುನಮ್ ಉಜ್ಜಯಿನ್ಯಾಂ ಮಹಾಂಕಾಲಮೋಂಕಾರ ಮಮಲೇಶ್ವರಮ್॥
ಪರಲ್ಯಾಂ ವೈಜನಾಥಂ ಚ ಡಾಕಿನ್ಯಾಂ ಭೀಮಶಂಕರಮ್। ಸೇತುಬಂಧೇ ತು ರಾಮೇಶಂ ನಾಗೇಶಂ ದಾರುಕಾವನೇ॥
ವಾರಾಣಸ್ಯಾಂ ತು ವಿಶ್ವೇಶಂ ತ್ರ್ಯಂಬಕಂ ಗೌತಮೀ ತಟೇ। ಹಿಮಾಲಯೇ ತು ಕೇದಾರಂ ಘೃಸೃಣೇಶಂ ಶಿವಾಲಯೇ॥

೨. ವೆಂಕಟ ರಂಗೋ ಕಟ್ಟಿ, ***ಮುಂಬೈ ಕರ್ನಾಟಕ ಗೆಜೆಟೀಯರು*** (ಕನ್ನಡ) ಪು. ೧೬೫

೩. ಹಯವದನರಾವ್ ಸಿ., ***Mysore Gazetteer,*** vol I. p. 293

೪. Nandolal Dey, ***Geographical Dictionary of Ancient India***

೫. ***Historical Inscriptions of Southern India,*** P. 21

೬.೭. Mac-donell, ***Vedic index,*** see Yadu, Turvasa

೮. ಅದೇ. Vol. I. p. 106

೯. ಅದೇ. Vol. I. P. 499

೧೦. Pargiter; ***Ancient Indian Historical Traditians***, 1922, p. 259

೧೧. ಈವರೆಗೆ ಇದರ ಬಗ್ಗೆ ಸಂದೇಹವನ್ನು ವ್ಯಕ್ತಬಡಿಸುವುದಕ್ಕೆ ಕಾರಣವಿದ್ದಿತು. ಕನ್ನಡರಿಗೂ ಔತ್ತರೇಯರಿಗೂ ಸಂಬಂಧವಿಲ್ಲೆಂಬ ಗ್ರಹಿಕೆಯು ಆಗ ಮನೆಮಾಡಿಕೊಂಡಿತ್ತು. ಆದರೆ, ಅರ್ವಾಚೀನ ಸಂಶೋಧನದಲ್ಲಿ ಕಂಡು ಬಂದ ಅನೇಕ ಸಂಗತಿಗಳು ಈ ಪೂರ್ವಗ್ರಹವನ್ನು ಬದಲಿಸಿಕೊಳ್ಳಲು ಒತ್ತಾಯಪಡಿಸುತ್ತಿವೆ. ಸಿಂಧೂತೀರದಿಂದ ರಾಮೇಶ್ವರದ ವರೆಗೂ ಜನಾಂಗಗಳ ಓಡಾಟದ ಕುರುಹುಗಳು ದೊರೆಯುತ್ತಿರುವದರಿಂದ ಮೊದಲಿನ ಗ್ರಹಿಕೆಗೆ ಅವಕಾಶವೆ ಉಳಿಯುವದಿಲ್ಲ.

i ರಡ್ಡಿಗಳು ಅಯೋಧ್ಯೆಗೆ ಸಂಬಂಧ ಹಚ್ಚುವರು Thurston, Vol. III P. 226. ಮತ್ತು Vol. I. 63

ii ಗೌಡರು-ತಾವು ಯಾದವ ವಂಶಿಗಳೆನ್ನುವರು Thruston, Vol. II 273

iii ವೆಲ್ಲಾಳರಲ್ಲಿ 'ಗಂಗಾಕುಲಂ' ಎಂಬ ಒಳಭೇದವಿದೆ. ಇವರೂ ಅತ್ತ ಕಡೆಯವರೇ Vol. VIII P. 262

IV ಕೊಮ್ಮಟಿಗ-ಅಯೋಧ್ಯೆ Thurston-ಕೊಮ್ಮಟಿ, ನಗರ್ತ ನೋಡಿ.

೧೨. Bhandarkar R. G., ***Wilson Philological Lectures***, 1867, P. 46, 47, 81, 87, 108

ಪಾಲಿ ಮತ್ತು ಪ್ರಾಕೃತ ಭಾಷೆಗಳಲ್ಲಿ ಕಂಡುಬರುವ ಕೆಲವು ಎ, ಒಕಾರಗಳ ಉದಾಹರಣಗಳು:

ಅರ್ಪಯತಿ∠ಒಪ್ಪೆ ಇ; ಉಷ್ಟ∠ಒಠ್ಠ; ಅವಸೃಜತಿ∠ಒಸ್ಸಜತಿ; ಏಕ∠ಎಕ್ಕ; ಕೋಟ∠ಕೊಟ್ಟ; ಗರ್ಭ∠ಗಬ್ಭ∠ಗಾಭಣ; ಗೇಯ∠ಗೆಯ್ಯ; ಚತುರ್ಥ∠ಚೊತ್ಥ; ದ್ರಕ್ಷ್∠ದೆಕ್ಖ; ನೇತ್ರ∠ನೆತ್ತ; ಪಿಷ್ಟ∠ಪಿಠ್ಠ ಅಥವಾ ಪೆಠ್ಠ∠ಪೀಠ; ಪುಷ್ಕರ∠ಪೊಕ್ಖರ; ಪದ್ಮ∠ಪೊಮ್ಮ; ಮೋಕ್ಷ∠ಮೊಕ್ಖ; ವಲ್ಲೀ∠ವೆಲ್ಲಿ∠ವೇಲಿ; ಶ್ರೇಷ್ಠ∠ಶೆಟ್ಟ∠ಶೇಟ[ಜೀ]; ಶ್ರೋತ್ರೀಯ∠ಸೊತ್ತಿಯ; ಇತ್ಯಾದಿ

ಈ ಉದಾಹರಣಗಳಲ್ಲಿ ದ್ವಿತ್ವದ ಹಿಂದಿನ ಎ, ಒಕಾರಗಳನ್ನು ದೀರ್ಘವಾಗಿ ಉಚ್ಚರಿಸುವುದೇ ಸಾಧ್ಯವಿಲ್ಲ; ದೀರ್ಘವಾಗಿ ಉಚ್ಚರಿಸುವುದಂತು ಆರ್ಯರ ಬಾಯಿಗೆ ರೂಢಿ. ಆದುದರಿಂದಲೆ, ಕನ್ನಡದ ಉಚ್ಚಾರ ಪದ್ಧತಿಯ ವರ್ಚಸ್ಸು ಕಡಿಮೆಯಾದ ಹಾಗೆ ಪ್ರಾಕೃತಗಳಲ್ಲಿ [ಹ್ರಸ್ವ] ಎ, ಒಕಾರಗಳು ಅದೃಶ್ಯವಾಗಲಾರಂಭಿಸಿದುವು. ಪೀಠ, ಶೇಟ [ಜಿ], ಗಾಭಣೇ ಎಂದು ಮುಂತಾದ ರೂಪಗಳು ಪ್ರಾಶಸ್ತ್ಯವನ್ನು ಪಡೆದುವು. ವೂಲನರ್ ಇವರು 'ಪ್ರಾಕೃತದ ಪ್ರಸ್ತಾವನೆ' ಎಂಬ ಗ್ರಂಥದಲ್ಲಿ ಬರೆಯುವುದೇನೆಂದರೆ: 'the vowel before the double consonant is always short.' p. 14 ಇದರೊಂದಿಗೆ S. K. ***Chattergi Bengali Language its Origin and Development,*** ಇದನ್ನೂ ಅವಶ್ಯವಾಗಿ ಓದಬೇಕು.

೧೩. Jean Przyluski : Mythic Society Journal, Silver Jubilee Number P. 48

Risley : ***People of India***, P. 33-34

Antiqueties of India P. 9-10

Datta N. K., ***Aryanisation of India*** : P. 87

೧೪. Konkan ***Konkani Language,*** P. 8

೧೫. Molier Williams, Samskrit English Dicitionary, "Worshiped on the banks of Godavary"

೧೬. ತಾರಾನಾಥ ತರ್ಕವಾಚಸ್ಪತಿ, ವಾಚಸ್ಪತ್ಯ : "ದ್ರಷ್ಟುಂ ತ್ರೈಲೋಕ್ಯ ಭರ್ತಾರಂ ತ್ರ್ಯಂಬಕಂ ಹಾಟಕೇಶ್ವರಂ"

೧೭. Enthoven Berar Gazetteer, P. 200-22; Snerring Vol. III P. 105 C and T. of Nizam's Dominion Vol, I See ಹಟಗಾರ ಧನಗರ Another large sub-division known as Hatkars seems to have been of considerable improtance in Berar"- Vol. I. P. 312

೧೮. Castes and Tribes of Nizam's Dominions Vol, I p. 249-255

೧೯. Russell R. V., ***Castes and Tribes of Central Provinces,*** vol I. p. 369

Castes and Tribes of H E. H the Nizam's Dominionns Vol. I. p. 165

೨೦. ಮಹಾರಾಷ್ಟ್ರ ಶಬ್ದಕೋಶದಲ್ಲಿ 'ಝಾಡೀ' ಶಬ್ದವನ್ನು ನೋಡಿ ಹೋಲಿಸಿರಿ.

೨೧. Prof. Dixitar, ***Studies in Tamil Literature,*** P. 228. 229 ***History of Tamils,*** P. 81 ; 82

ಶ್ರೀ ದೀಕ್ಷಿತರು 'ತುಡುಗರು' ಎಂಬ ಪದವನ್ನು ಉಪಯೋಗಿಸಿದ್ದಾರೆ. ನಾನದನ್ನು 'ತುಡುಕು' ಎಂದು ಸ್ವಲ್ಪ ಸೌಮ್ಯವಾಗಿ ಮಾಡಿಕೊಂಡಿದ್ದೇನೆ.

೨೨. Grierson: ***Linguisitic Survey of India,*** Vol. IV.

೨೩. Sherring, ***Hindu Tribes and castes*** of C. P. Vol II P. 99

೨೪. ಕಣ್ಮರೆಯಾದ ಕನ್ನಡ ೧೯೩೩, ಪು. ೪೮-೫೫, ಮಹಾರಾಷ್ಟ್ರದ ಮೂಲ ೧೯೩೪, ಪು. ೩೦-೩೫

೨೫. Chattergee S. K., ***Origin and Development of the Bengali Language***, p. 28 37-43
ದ್ರಾವಿಡ ಗ್ರಾಮನಾಮಗಳು P. 66-67 Appendix B and C Kolerian and Dravidian Place names; J. R. A. S. 1903 Part III
ದ್ರಾವಿಡ ಗ್ರಾಮನಾಮಗಳು P. 66, 67; Appendix B and C.
"ಬಾಂಗಾಲಾ ಭಾಷಾಯ ದ್ರಾವಿಡೀ ಉಪಾದಾನ." ಶ್ರೀ ಬಿ.ಸಿ. ಮುಜುಮದಾರ, ಬಂಗಾಳಿ ಸಾಹಿತ್ಯ ಪರಿಷತ್ ಪತ್ರಿಕಾ, VoL. XX p I. ಇದನ್ನು ಶ್ರೀ ದೇವದತ್ತ ಭಂಡಾರಕರರು ತಮ್ಮ ಉಪನ್ಯಾಸಗಳಲ್ಲಿ ಉಲ್ಲೇಖಿಸಿದ್ದಾರೆ.

೨೬. Ashutosh Mukerjee, Silver Jubilee Volume. P. 131

೨೭. Pre-Aryan and Pre-Dravidian, P. 23-25; Mythic Society Journal, Silver Jubilee number, P. 39-48

೨೮. Mac-donell, Vedic Index, Vol II P. 29

೨೯. Salem Gazett Vol I P. 169

೩೦. Sir. John Marshal. ***Mohenjo-Daro and the Indus Civilization,*** Vol III

೬ನೆಯ ನೆಲೆ

ಸಂಕ್ರಮಣಕಾಲ

ಗಚ್ಛತಿ ಇತಿ ಜಗತ್. ಇಲ್ಲದಿದ್ದರೆ ಇದಕ್ಕೆ ಜಗತ್ತು ಎಂಬ ಹೆಸರೆ ಸಲ್ಲದು. ಪ್ರತಿನಿತ್ಯ ಸಂ-ಕ್ರಮಣವು ನಡೆದೆ, ಇದೆ. ಆದರೇ ಪ್ರತಿದಿನದ ಬದಲಾವಣೆಯು ಬಹಳ ಸ್ವಲ್ಪ. ಸಾಮಾನ್ಯ ಜನರಿಗೆ ಅದರ ಅರಿವು ಕೂಡ ಇರುವುದಿಲ್ಲ. ಆದುದರಿಂದ ಅವರಿಗೆ ಆರಾರು ತಿಂಗಳಿಗೊಮ್ಮೆ ಸಂಕ್ರಮಣ. ಜನಾಂಗಗಳ ಸಂ-ಕ್ರಮಣ, ಸಂ-ಕ್ರಾಂತಿಗಳು ಎಡೆಬಿಡದೆ ನಡೆದಿವೆ. ಆದರೆ ಇದಾವುದರ ಎಚ್ಚರವಿಲ್ಲದೆ "ನಾವು ಯುಗಾರಂಭದಿಂದಲೂ ಅಚ್ಚಳಿಯದೆ ಉಳಿದಿದ್ದೇವೆ," ಎಂದು ಉಸುರುವವರೂ ಇದ್ದಾರೆ.!

ಹಟ್ಟಿಕಾರರ ಸ್ಥಿತಿಗತಿಗಳಲ್ಲಿ ಆದ ಅವಸ್ಥಾಂತರಗಳೆಷ್ಟು! ವೇದಕಾಲದ ಮೊದಲಿನಿಂದಲೂ ಇದ್ದ ಈ ಜನಾಂಗವು ಅನೇಕ ಸಂ-ಕ್ರಾಂತಿಗಳ ಬಾಯೊಳಗಿಂದ ಪಾರಾಗಿ ಇಂದಿಗೂ ಜೀವ ಹಿಡಿದುಕೊಂಡಿದೆ! ಇಜಿಪ್ತ, ಬಾಬಿಲೋನ ಸಂಸ್ಕೃತಿಯ ಮೊದಲಿಗರನ್ನು ಇಂದು ಬೆರಳಿಟ್ಟು ತೋರುವುದು ಸಾಧ್ಯವಿಲ್ಲ. ಆದರೆ ೬೦೦೦-೭೦೦೦ ವರುಷಗಳ ಹಿಂದಿನ ಹಟ್ಟಿಕಾರರ ಪೀಳಿಗೆಯವರನ್ನು ಮಾತ್ರ ಕಣ್ತಣಿವವರೆಗೂ ಇಂದು ನೋಡಬಹುದು. ವಸಿಷ್ಠ ವಿಶ್ವಾಮಿತ್ರಾದಿಗಳ ಗೋತ್ರಗಳನ್ನು ಹೇಳುವ ಬ್ರಾಹ್ಮಣರನ್ನೂ, ಯದು-ತುರ್ವಶಾದಿಗಳ ಸಂತತಿಯವರಾದ ಜಾಡವರು-ತುರುಕಾರರನ್ನೂ, ಯುಗಯುಗಾಂತರಗಳು ಕಳೆದ ಮೇಲೆಯೂ ಕಾಣುವಂತಹ ಪವಾಡವು ಹಿಂದೂ ದೇಶದಲ್ಲಿಯೆ ಸಾಧ್ಯ! ಪ್ರಪಂಚದಲ್ಲಿಯೆ ಅಪರೂಪವಾಗಿರುವ ಸೋಜಿಗವಿದು. ಅಶಾಶ್ವತದಲ್ಲಿ ಶಾಶ್ವತವನ್ನು ಕಾಣುವ, ಹರಿಯುವುದರಲ್ಲಿ ಸ್ಥಿರವನ್ನು ಹುಡುಕುವ ಹಿಂದೀಯರಿಗೇ ಇದು ಶಕ್ಯ. ಈ ಸ್ಥಿರ-ಚರಬಿಂದುಗಳ ಸಮನ್ವಯವು ತಪ್ಪಿದಾಗೆಲ್ಲ ನಮ್ಮ ಜನಾಂಗವು, ನಮ್ಮ ನಾಡು ಕೇಡಿಗೀಡಾಗದೆ ಹೋಗಿಲ್ಲ.

ಜಗತ್ತಿನಲ್ಲಿ ಒಬ್ಬೊಬ್ಬರಿಗೂ ಒಂದೊಂದು ವ್ಯಕ್ತಿತ್ವವಿದೆ; ವೈಶಿಷ್ಟ್ಯವಿದೆ. ಒಂದು ನಾಡಿನ ಜನಾಂಗದ ವೈಶಿಷ್ಟ್ಯವು ಅವರ ನುಡಿಯಲ್ಲಿಯೂ ಪ್ರತಿಬಿಂಬಿತವಾಗದೆ ಇರುವುದಿಲ್ಲ. ಕನ್ನಡ ನುಡಿಯ ಮೊಟ್ಟಮೊದಲಿನ ವೈಶಿಷ್ಟವು ತಿಳಿದರೆ ಇದರ ಆರಂಭದ ಜನಾಂಗದ ಜೀವನದ ರೀತಿಯು ಗೊತ್ತಾಗುವುದು. ಯಾವ ವಿಚಾರವು ಪ್ರಬಲವೊ, ಯಾವ ಕೃತಿಗೆ ಹೆಚ್ಚು ಪ್ರಾಶಸ್ತ್ಯವೊ ಆ ಬಗೆಯ ಮಾತುಗಳೆ ಭಾಷೆಯಲ್ಲಿ "ಯಜಮಾನ" ಶಬ್ದವು ನಮ್ಮಲ್ಲಿದ್ದ ಯಜ್ಞಸಂಸ್ಥೆಯ ಮಹತ್ವವನ್ನು ಸೂಚಿಸುತ್ತಲಿದೆ. ಇದೇ ಬಗೆಯ ಅಚ್ಚಕೆಚ್ಚಿನ ಕನ್ನಡ ಮಾತುಗಳಾವವು? ಅವು ತಿಳಿದರೆ ಈ ನುಡಿಗಳಲ್ಲಿ ಅಡಕವಾಗಿರುವ ಕನ್ನಡದ ಮೂಲಪುರುಷರ ಇತಿಹಾಸವು ಬೆಳಕಿಗೆ ಬರುವುದು.

ಇದನ್ನು ಕುರಿತು ವಿಮರ್ಶೆಯನ್ನು ನಡೆಸಿದುದರಲ್ಲಿ ನನಗೆ ಕಂಡು ಬಂದ ಕೆಲವು ನುಡಿಗಳನ್ನಿಲ್ಲಿ ಕೊಟ್ಟಿದ್ದೇನೆ. ಆವು, ಆಡು, ಕೊಳ್, ಪಡು (ಪಾಡು) ಇವು ಮೊದಲ ಕನ್ನಡನುಡಿಯ ಮುಖ್ಯಮಾತುಗಳು. ಈಗ ಸಹ ಇವುಗಳ ಸಹಾಯವಿಲ್ಲದೆ ಒಂದರ್ಧ ತಾಸು ಮಾತಾಡಲಿಕ್ಕಾದೀತೆ? ಎಂದು ಸಂದೇಹವಿದೆ. ಇನ್ನೂ ಒಂದು ಶಬ್ದವು ನೃಪತುಂಗನ ಕಾಲಕ್ಕೆ (೯ನೆಯ ಶತಮಾನ) ಮೂಲೆ ಗುಂಪಾಗಿದೆ. ಅದು ಕುರಿ. ಕವಿರಾಜಮಾರ್ಗದಲ್ಲಿ ಕುರಿಧಾತುವಿನ ವಿಶೇಷ ಪ್ರಯೋಗವಿದೆ. ಅದು ಮುಂದಿನ ಕಾಲದಲ್ಲಿ ಇಲ್ಲವೆ ಇಲ್ಲ. 'ಕುರಿತೋದದೆಯುಂ' 'ಕುರಿವಂತೆ ಪರರ ಬಗೆಯಂ' ಎಂಬೀ ಬಗೆಯ ವಿವಿಧರೂಪಗಳು ಇದ್ದರೂ ಕ್ರಿಯಾಪದವಾಗಿ ಬಳಸಿದ್ದು ಮಾತ್ರ ಸಿಕ್ಕುವುದು ಕಷ್ಟ. 'ಕುರಿ' ಹಿಂದೆ ಬಿದ್ದಿತು. 'ಆಡು' ಮತ್ತು 'ಕೊಳ್' ಹಿನ್ನುಡಿಗಳಾದವು. ಸ್ವಂತ ಮುಂದೆ ಬಂದು ಅರ್ಥಕೊಡುವ ಶಕ್ತಿ ಹೋಯಿತು. ಸಹಾಯಕಪದಗಳಾದುವು. ಬಿಸಾಡು, ಓಡಾಡು, ಎರಕೊಳ್ಳು, ತಕ್ಕೊಳ್ಳು ಇತ್ಯಾದಿ ಸಂಯುಕ್ತಧಾತುಗಳ ವೈಪುಲ್ಯವೆ ಇದಕ್ಕೆ ಸಾಕ್ಷಿ. 'ಪಡು' ಇದರ 'ಪಾಡು' ಹೀಗೆಯೇ. ಪಡು-ಪಾಡು ಶಬ್ದಗಳಲ್ಲಿ ತುಂಬಿ ಹೊರಸೂಸುತ್ತಿರುವ ಅರ್ಥವನ್ನು ಹೃದಯದಿಂದ ಭಾವಿಸಿಕೊಳ್ಳಬೇಕಲ್ಲದೆ ಶಬ್ದಗಳಿಂದ ಬಿತ್ತರಿಸಿ ಹೇಳಲಸಾಧ್ಯ. ಕನ್ನಡರ ಸುಖಕರವಾದ ಸರಸವಾದ ಜೀವನ-ಸಂಗೀತದ ಸುಮಧುರ ಶ್ರುತಿಯು "ಪಾಡು" ಈ ನುಡಿಯಲ್ಲಿ ಕೇಳಬರುತ್ತಿದೆ. ಪರಭಾಷೆಯಲ್ಲಿ ಇದಕ್ಕೆ ಸರಿಯಾದ ಪ್ರತಿ ಶಬ್ದವಿಲ್ಲ. ಆದರೆ, ಬೇರೆ ಪದಗಳು ಬಂದು ಕನ್ನಡದ 'ಹಾಡು' ಕಿವಿಗೆ ಬೀಳದಾಯಿತು 'ಪಡು' ಇದು ಹೊಸಗನ್ನಡ ರೂಪವನ್ನು ತಾಳಕೂಡದೆಂದು ಸಾಮಾಜಿಕ ಕಟ್ಟಪ್ಪಣೆ! ಹೊಸಗನ್ನಡದಿಂದ ಅದನ್ನು ಉಚ್ಚರಿಸುವವನ ಮೇಲೆ ಬಹಿಷ್ಕಾರವು ಬಾರದಿರಲಾರದು! ಈ ಶಬ್ದಗಳ ಸ್ಥಿತಿಗೂ ಹಟ್ಟಿಕಾರನ ಇಂದಿನ ಅವಸ್ಥೆಗೂ ಏನೂ ಅಭ್ಯಂತರವಿಲ್ಲ. ಈ ನುಡಿಗಳಂತೆ ಹಟ್ಟಿಕಾರರಲ್ಲಿಯೂ ಮಾರ್ಪಾಟುಗಳಾಗಿವೆ. ಆಕಳು ಬಹುವಚನಾಂತವಿದ್ದುದು ಏಕವಚನಾಂತವಾಗಬೇಕೆನ್ನುತ್ತಿದೆ; (ಅದಕ್ಕೆ ಮೊದಲಿದ್ದ ಮರ್ಯಾದೆಯು ಈಗ ಇಲ್ಲವೆಂದರ್ಥ;) ಕನ್ನಡರಿಗೆ ಆಕಳನ್ನು ಏಕವಚನದಿಂದ ಕರೆದು ಗೊತ್ತಿಲ್ಲ. ಆವು ಎಂದರೆ ನಮ್ಮ ನಾಡಿನಲ್ಲಿ ಅರ್ಥವಾಗುವುದಿಲ್ಲ. ಒಂದೇ ಇದ್ದರೂ ಆಕಳೇ! ಏಕೆಂದರೆ ಪ್ರಾಚೀನ ಕಾಲದಿಂದಲೂ 'ಹಿಂಡು' ಕಟ್ಟಿಗೊತ್ತು ಈ ಜನಾಂಗಕ್ಕೆ. 'ಹಿಂಡು' ಎಂದರೆ 'ಗೋ-ಸಮೂಹ' ಎಂದು ಕೇಶಿರಾಜನು (೧೨೦೦) ಅರ್ಥ ಹೇಳುತ್ತಾನೆ ಆದುದರಿಂದ, ಕನ್ನಡರು ಆವು ಅರಿಯರು; ಆಕಳು, ತುರು, ಹಿಂಡು ಎಂಬ ಸಮೂಹವಾಚಕವಾಗಿಯೆ ಇವರಿಗೆ ಗೊತ್ತು.

ಎಮ್ಮೆಗಳು ಕನ್ನಡರಿಗೆ ಎಂದೂ ಪ್ರಿಯಕರವಾಗಿಲ್ಲ; ಅದರಂತೆ ಆರ್ಯರಿಗೂ ಅವುಗಳ ಬಗ್ಗೆ ಅನಾದರ. ಹಟ್ಟೀಹಬ್ಬದಲ್ಲಿ ತುರುಗಳು ಪೂಜೆ! 'ವಸುದ್ವಾದಶಿ,' 'ಗೋ-ಕ್ರೀಡನ'ಗಳು ನಡೆಯುವವು. ಸಗಣಿಯ ಗೋವರ್ಧನ ಪರ್ವತ, ಗೋಪಿಯರು, ಬಲರಾಮ ಮೊದಲಾದವುಗಳನ್ನು ಮಾಡಿ ಪೂಜಿಸುವರು. ಕುರಿಗಳನ್ನೂ ವಿಶೇಷ ರೀತಿಯಿಂದ ಪೂಜಿಸುವರು. ಆದರೆ, ಈ ಮರ್ಯಾದೆ ಎಮ್ಮೆಗಿಲ್ಲ. ಸುಮ್ಮನೆ ಹತ್ತರ ಕೂಡ ಹನ್ನೊಂದು; ಕೊಟ್ಟಿಗೆಯೊಳಗಿನ ದನ; ಅದರ ಕೊಂಬಿಗೂ ಅಷ್ಟು ಬಣ್ಣ ಬಳಿಯವರು. ಆದರೆ, ಎತ್ತು-ಆಕಳ ಸ್ಥಾನವು ಎಮ್ಮೆ-ಕೋಣಗಳಿಗಿಲ್ಲ. ಕೋಣನ ಮೆರವಣಿಗೆ, ದೇವಿಗೆ ಬಲಿಕೊಡುವುದಕ್ಕಾಗಿ ಒಯ್ಯುವಾಗಲೆ! ಎಮ್ಮೆಗಂತೂ ಪೂಜೆಯೆ, ಇಲ್ಲ. ಎಮ್ಮೆಯು ವಿಶ್ವಾಮಿತ್ರನ ಸೃಷ್ಟಿಯೆಂದು ಹೇಳುವವರೂ ಇದ್ದಾರೆ.[೧] ಹೀಗಿದ್ದರೂ ಈಗಿನ ನಿಜಸ್ಥಿತಿಯು ಏನಿದೆ? ಹೆಸರು ಗೌಳಿ; ಆತನಲ್ಲಿರುವುದೆಲ್ಲ ಮುಖ್ಯವಾಗಿ ಎಮ್ಮೆ! ನಾವು ಗೋಪೂಜೆ ಮಾಡುವುದು; ಎಮ್ಮೆ ಹಾಲು ಕುಡಿಯುವುದು! ಉಪಾಕರ್ಮಾದಿ ಸಂದರ್ಭಗಳಲ್ಲಿ ಹಸುವಿನ ಹಾಲು ಬೇಕಿದ್ದರೆ ಅದೆಷ್ಟು ಹುಡುಕಾಡಬೇಕು! ಆದರೂ ನಾವೆಲ್ಲ ಗೋಭಕ್ತರು! 'ಸಂ-ಕ್ರಾಂತಿ' ಎಂದರೇನು ಮತ್ತೆ! ಕುರಿ, ತುರುಗಳ ಹಟ್ಟಿಯಲ್ಲಿ ಎಮ್ಮೆಗಳು ಎಂದು ಹೊಕ್ಕವೊ ತಿಳಿಯದು. ನರ್ಮದಾ ತೀರದಲ್ಲಿ ಎಮ್ಮಿಗ (ಮಹಿಷಕ)ರು ಇದ್ದುದನ್ನು ಪುರಾಣಾದಿಗಳು ಒತ್ತೊತ್ತಿ ಹೇಳುತ್ತವೆ. ನರ್ಮದಾತೀರದಲ್ಲಿಯೆ ತುರುವರ ಹಟ್ಟಿ (ನಾಡು). ಇಲ್ಲಿಯೆ ಎರಡೂ ಜನಾಂಗದ ಸಂಮಿಶ್ರಣವಾಗಿರಬೇಕು. ಎಮ್ಮಿಗರು ಯಾರು, ಎಂಬುದು ನಿಶ್ಚಿತವಾಗಿ ತಿಳಿದಿಲ್ಲ. ಹೈಹಯರು ಮಾಹಿಷ್ಮತಿಯವರು. ಇವರೆ ಮಹಿಷಕ (ಎಮ್ಮಿಗ) ರೆಂದು ಕೆಲರ ಅಭಿಪ್ರಾಯ, ಎಮ್ಮಿಗರಿಗೂ ಹಟ್ಟಿಕಾರರಿಗೂ

ತುಂಬಾ ಕಾದಾಟಗಳಾಗಿ ಕೊನೆಗೆ ಅವರು ಹಟ್ಟಿಕಾರರಿಗೆ ತಲೆವಾಗಿ ಅವರೊಳಗೆ ಬೆರೆತುಕೊಂಡು ಬಿಟ್ಟಿರಬೇಕು. ಈ ಕಾದಾಟದ ಕಲ್ಪನೆಯು ಮಹಿಷಾಸುರ-ಮರ್ದಿನಿಯ ಕಥೆಯಿಂದ ಚೆನ್ನಾಗಿ ಆಗುವಂತಿದೆ. ಹಟ್ಟಿಕಾರರಿಗೆ ಈ ದೇವಿಯಲ್ಲಿ ಭಕ್ತಿ ಬಹಳ. ಚಾಮುಂಡೇಶ್ವರಿ, ದುರ್ಗಾ ಮೊದಲಾದ ಹೆಸರಿನಲ್ಲಿ ಇವಳನ್ನು ಪೂಜಿಸುವರು. ನವರಾತ್ರಿಯಲ್ಲಿ ಈ ದೇವಿಯ ಪೂಜೆಯೇ ಪೂಜೆ.

ಮಹಾರಾಷ್ಟ್ರದಲ್ಲಿ ಸಾಮಾನ್ಯವಾಗಿ ಮ್ಹಸೋಬ (ಕೋಣಪ್ಪ) ನಿಲ್ಲದ ಊರಿಲ್ಲ. ಇದು ಕೇಡುಮಾಡುವ ದೇವತೆ. ಕರ್ಣಾಟದಲ್ಲಿ ಈ ಹೆಸರಿನ ದೇವರು ಇಲ್ಲವೆಂದರೂ ಸಲ್ಲುವುದು. ಆದರೂ ಕನ್ನಡ ಜಿಲ್ಹೆಯಲ್ಲಿ ಇದರ ಅವಶೇಷಗಳಿವೆ. ಮ್ಹಸೋಬನನ್ನು ಕುಂಡೋದರ, ವೇತಾಳನೆಂಬ ರೂಪದಲ್ಲಿ ಪೂಜಿಸುವರು. ಜಾತಿವಿವೇಕದಲ್ಲಿ 'ಮಾಹಿಷ್ಯ ಸ್ತ್ರೀಯ ಸಂತತಿಯವರು ಧನಗರರು' ಎಂದಿದೆಯಂತೆ[೨] ಮ್ಹಸೆ, ಮ್ಹಸಕೆ ಎಂದು ಮಹಾರಾಷ್ಟ್ರದಲ್ಲಿ ಅಡ್ಡ ಹೆಸರಿನವರುಂಟು. ಕರ್ಣಾಟಕದ ಕುರುಬರಲ್ಲಿ ಎಮ್ಮೆಯವರ ಒಳಬಣಗಳಿದ್ದುದೂ ಕಂಡು ಬರುತ್ತಿದೆ[೩] ನರ್ಮದಾತೀರದ ಮಹಿಷಮಂಡಲವೆ ಕೆಳಕ್ಕೆ ಸರಿದು ಈಗಿನ ಮೈಸೂರು ಆಯಿತೆಂಬುದನ್ನು ಕುರಿತು ಶ್ರೀ ಎಂ. ಎ. ದೊರೆಸ್ವಾಮಿ ಅಯ್ಯಂಗಾರ್ಯರು ಬರೆಯಲಿದ್ದಾರೆ. ಆಗ ಇನ್ನೂ ಹಲವು ಸಂಗತಿಗಳ ಹೆಚ್ಚು ಸ್ಪಷ್ಟೀಕರಣ ವಾಗಬಹುದು. ಎಮ್ಮಿಗನೂರು, ಕೋಣನತಂಬಿಗೆ, ಕೋಣನೂರ (ಕೊಣ್ಣೂರು?) ಮೈಸಾಳ, ಮ್ಹಸಾಳ, ಮ್ಹಸವೆ ಎಂಬ ಹಲವು ಊರುಗಳು ಇಂದಿಗೂ ಎಮ್ಮಿಗರ ನೆನಪನ್ನು ಕೊಡುತ್ತಿವೆ.

ಹಟ್ಟಿಕಾರರಲ್ಲಿ ಇದಕ್ಕೂ ಪ್ರಾಚೀನ ಕಾಲದಲ್ಲಿಯೆ ಭೋಜಕರೆಂಬ ಒಂದು ಜನಾಂಗವು ಕರಗಿ ಹೋಗಿರಬೇಕು. ಬಹಳ ಬೇಗನೆ ಆರ್ಯೀಕರಣಕ್ಕೆ ಒಳಗಾದವರು ಭೋಜಕರು. ಆದುದರಿಂದ, ಹಟ್ಟಿಕಾರರ ಕನ್ನಡ ಗುಂಪಿನಲ್ಲಿ ಈ ಹೆಸರಿಗೆ ಬಹಳ ಕಾಲದ ವರೆಗೂ ಮನ್ನಣೆಯಿದ್ದಿಲ್ಲ. "ಜೀ, ಎನೆ ಧರಿತ್ರಿಯಂ ಬೇಡಿಕೊಳ್ಳದೆ" ಎಂದು 'ಜೀ' ಶಬ್ದವನ್ನು ಕೀಳ್ಮೆಯಲ್ಲಿ ಉಪಯೋಗಿಸುತ್ತಿದ್ದುದು ಕಂಡು ಬರುತ್ತದೆ. ಕನ್ನಡರಾಜರ ಪ್ರಾಚೀನ ಹೆಸರುಗಳಲ್ಲಿ 'ಭೋ-ಜೀ'ಗಳಿಲ್ಲ; ಭೋಜರೊಡನೆ ಚಲುಕ್ಯ ರಾಷ್ಟ್ರಕೂಟರ ನಿತ್ಯವಿರೋಧ. ೧೨ನೆಯ ಶತಮಾನದ ಮುಂದೆ 'ಜೀ'ಶಬ್ದವು ಕನ್ನಡದಲ್ಲಿ ಮನ್ನಣೆಯನ್ನು ಪಡೆಯಿತು. ಹೆಸರಿನ ಕೊನೆಗೆ ಸನ್ಮಾನಾರ್ಥದಲ್ಲಿ ಸೇರಿಕೊಳ್ಳಲಾರಂಭಿಸಿತು. ಶಿಲಾಹಾರಮನೆತನದ ರಾಜರಲ್ಲಿ ಭೋಜರೆಂಬ ಹೆಸರುಗಳಿವೆ. ವಿಜಯನಗರದ ಕೃಷ್ಣದೇವನೂ 'ಭೋಜ' ನಾದನು. ಭೋಜರು ಬಹಳ ಪ್ರಾಚೀನ ಜನಾಂಗ; ಕಂಬೋಜರೆಂದೂ ಒಂದು ಶಾಖೆಯಿದೆ. ಇವರು ಆಸ್ಟ್ರೋ-ಏಶಿಯಾಟಿಕ್ ಜನಾಂಗಕ್ಕೆ ಸೇರಿದವರೆಂದು ಪ್ರೊ. ಲೆವಿಯವರ ಅಭಿಪ್ರಾಯವಿದೆ. ಇವರನ್ನು ಕುರಿತು ವಿದ್ವಾಂಸರು ವಿಸ್ತೃತವಾದ ಲೇಖಗಳನ್ನು ಬರೆದಿದ್ದಾರೆ.[೪] ಕಂಬೋಜ, ಇದು ಕಂಬಲ ಭೋಜದ ಸಂಕ್ಷಿಪ್ತ ರೂಪವೆಂದು ಹೇಳುತ್ತಾರೆ. ವೇದಕಾಲದಿಂದಲೆ 'ಕಂಬಳಿ'ಯವರ ಹೆಸರು ಕೇಳಬರುತ್ತದೆ. ಅಥರ್ವವೇದದಲ್ಲಿ 'ಕಂಬಲ' ಶಬ್ದವು ಬಂದಿದೆ (ಕುಂತಲ ಕುಂತ-) ಕುಂತಿಗಳು ಪಾಂಚಾಲರನ್ನು ಸೋಲಿಸಿದ್ದುದು ಕಾಠಕ ಸಂಹಿತೆಯಲ್ಲಿದೆ.[೫] ಭೋಜರು ಕುಂತಿಗಳೊಡನೆ ಒಂದುಗೂಡಿ ಯಾದವರ ಬಳಗದಲ್ಲಿ ಕುಂತಿಭೋಜರೆಂಬ ಹೆಸರಿನಿಂದ ಪ್ರಸಿದ್ಧ ರಾದರೆಂದು ತೋರುತ್ತದೆ.

ಯದು-ತುರ್ವಶಾದಿಗಳಲ್ಲಿ 'ನಾಗ'ರೂ ಸಮಾವಿಷ್ಟರಾಗಿ ಎಷ್ಟೋ ಸಹಸ್ರವರ್ಷಗಳಾದುವು. ಯಮುನಾ ತೀರದಲ್ಲಿದ್ದಾಗ 'ಕಾಳಿಂಗ' ನಂತಹ ಪೀಡಾಕರ ವಿರೋಧಿಯನ್ನು ಯಾದವರು ಹೊಡೆದಟ್ಟಿದರೂ ನಾಗಕನ್ಯೆಗಳನ್ನು ಇವರು ಮದುವೆಯಾಗುತ್ತಿದ್ದರು. ನಾಗಕನ್ಯೆಯರು ಬಹಳ ಚೆಲುವೆಯರೆಂದು ಪುರಾಣ ಪ್ರಸಿದ್ಧವಾಗಿದೆ. ಇವರಿಗೆ ಮನಸೋಲದವರೆ ಅಪರೂಪ. ಆದುದರಿಂದ, ಆಸೇತು ಹಿಮಾಚಲ ಇವರಿಗೆ ಬೇಕಾದ ಹಾಗೆ ಪ್ರದೇಶವು ದೊರೆತಿತು. ಅದರೊಳಗೂ ಪಶ್ಚಿಮ ಕರಾವಳಿಯಲ್ಲಿ ಇವರು ಹೆಚ್ಚಾಗಿ ನೆಲೆಸಿದ್ದರು; ಬನವಾಸಿ ನಾಡಿನಲ್ಲಿ ನಾಗರಖಂಡವೆಂದು ಒಂದು ಪ್ರದೇಶಕ್ಕೇ ಹೆಸರಿತ್ತು. ನಾಗನೂರು, ನಾಗರಕಟ್ಟೆ, ನಾಗಾಪಟ್ಟಣ ಮೊದಲಾದ ಊರುಗಳು ಅವರ ಸ್ಮಾರಕಗಳಾಗಿವೆ. ಕೈಕೇಯರೆಂಬ ಇನ್ನೊಂದು ತಂಡವು ಮೈಸೂರ ಸೀಮೆಯ ವರೆಗೂ ಬಂದುದು ಗೋಚರವಾಗುತ್ತಿದೆ. ಇವರು ಮೂಲತಃ ಇರಾಣ-ಪಂಜಾಬದ ಕಡೆಯವರು. ಈ ನಾಡಿಗೆ ಬಂದು ಈಗ ಅದೃಶ್ಯರಾಗಿರುವರು.

ಭಿನ್ನ ಭಿನ್ನ ಜನಾಂಗಗಳ ಸಂಮಿಶ್ರಣವು ತಮ್ಮಲ್ಲಿ ಹೇಗೆ ನಡೆದು ಹೋಗಿದೆಯೆಂಬುದನ್ನು ದೇವಾಂಗ ಪುರಾಣವು ಬಹಳ ಸೊಗಸಾಗಿ ಸೂಚಿಸುತ್ತಲಿದೆ. ದೇವಾಂಗರಾಜನು ಬೇರೆ ಬೇರೆ ಜಾತಿಯ ವಧುಗಳೊಡನೆ ಆದ ಮದುವೆಗಳ ವರ್ಣನೆಯಿದೆ. ಅದರಲ್ಲಿ "ಅಸುರ ಕನ್ಯಾ ವಿವಾಹದ ವೃತ್ತಾಂತ"ವಿದೆ. ಈ ಅಸುರ-ಸಂಪರ್ಕವು ಎಲ್ಲಿ ಆಗಿರಬಹುದೆಂಬುದನ್ನು ಊಹಿಸಲಿಕ್ಕೆ ಪುರಾಣ ಕರ್ತೃವು ಅವಕಾಶವನ್ನೂ ಇಟ್ಟಿದ್ದಾನೆ. "ವೀರ ಮಹೇಂದ್ರ" ಪಟ್ಟಣದಲ್ಲಿ ಈ ಮದುವೆಯಾಯಿತಂತೆ! ಇದು ಈಗಿನ ರಾಜಮಹೇಂದ್ರಿಯಾಗಿರಬಹುದೇ? ಇದರಂತೆ ದೇವಾಂಗನು ನಾಗಕನ್ಯೆಯ ಕೈಹಿಡಿದ ಕಥೆಯೂ ಈ ಪುರಾಣದಲ್ಲಿದೆ (ಪು. ೧೦೧). ಅವರಲ್ಲದೆ, ಕ್ಷತ್ರಿಯ ಕನ್ಯೆಯೊಬ್ಬಳು ಬೇರೆಯಿದ್ದಾಳೆ. ಈ ದೇವಾಂಗ ಸಮಾಜವು ಈಗಿನ ಕರ್ನಾಟದಲ್ಲಿಯೇ ಮುಖ್ಯವಾಗಿ ನೆಲೆಸಿರುವುದಾದರೂ ಅವರ ಪುರಾಣದಲ್ಲಿ ನಡೆದ ಘಟನೆಗಳೆಲ್ಲ ಪರಿಠಾಣ (ಪೈಠಣ)ದ ಸುತ್ತುಮುತ್ತಲು! ಸಗರದೇಶ (ಗಂಗಾತೀರ?) ದವರೆಗೂ ಇವು ಮುಟ್ಟಿವೆ. ನೇಪಾಳದ ರಾಜನು ಇವರ ಪುರಾಣದಲ್ಲಿ ಬರುತ್ತಾನೆ. ವೈಜಯಂತಿ (ಬನವಾಸಿ) ಹೆಸರೂ ಇದೆ. ವಿಕ್ರಮಾದಿತ್ಯನು ವೇತಾಳವು, ಶಾತವಾಹನನೂ ಕಣ್ಣೆದುರು ಹಾಯ್ದು ಹೋಗುತ್ತಾರೆ.

ಶ್ರೀಮಾನ್ ದೇವುಡು ನರಸಿಂಹ ಶಾಸ್ತ್ರಿಗಳು "ಕರ್ಣಾಟಕ ಸಂಸ್ಕೃತಿ" ಎಂಬ ತಮ್ಮ ಉತ್ಕೃಷ್ಟವಾದ ಪ್ರಬಂಧದಲ್ಲಿ ಅಭಿಪ್ರಾಯಪಟ್ಟಿರುವಂತೆ ಇದು ಆರ್ಯ-ಸಂಸ್ಕೃತಿ, ಇದು ದ್ರಾವಿಡ-ಸಂಸ್ಕೃತಿ ಎಂದು ಬೇರ್ಪಡಿಸಿ ಹೇಳುವುದು ಈಗ ಸಾಧ್ಯವಿಲ್ಲ. ಋಗ್ವೇದ ಕಾಲದಲ್ಲಿಯೇ ಇವೆರಡೂ ಸಂಸ್ಕೃತಿಗಳ ಸಂಗಮವಾಗಿರುವುದನ್ನು ("ಶಿನೀವಾಲಿ, ಗುಂಗು" ಮುಂತಾದುವುಗಳಲ್ಲಿ) ಕಾಣಬಹುದು. ಇಂಡೋ-ಇರಾಣಿಯನ್ನ ಕಾಲದಲ್ಲಿಯೆ ಈ ಬಗೆಯ ಸಮನ್ವಯಕ್ಕೆ ಆರಂಭವಾಗಿರಬೇಕೆಂದು ಜೀನ್ ಪ್ರಿಲಸ್ಕಿಯವರ ಮತ ಪ್ರಯಾಗದಲ್ಲಿ ಗಂಗಾ-ಯಮುನೆಗಳ ಸಂಗಮವಾದ ಬಳಿಕ ಸಹ ಕೆಲವೊಂದು ಮೈಲಿನ ವರೆಗೆ ಅವುಗಳ ನೀರಿನಲ್ಲಿರುವ ಭೇದವು ಸೂಕ್ಷ್ಮವಾಗಿ ಕಣ್ಣಿಗೆ ಬೀಳುವುದು. ಅದರಂತೆ, ವೇದಕಾಲದಲ್ಲಿ ಇವೆರಡೂ ಜನಾಂಗಗಳು ಕೂಡಿ ಒಂದುಗೂಡಿದ ಹಾಗೆ ಆದರೂ ಬೇರೆ ಬೇರೆಯಾಗಿದ್ದ ಹಾಗೂ ಆಗಾಗ್ಗೆ ಗೋಚರವಾಗುವುದು. ಎರಡೂ ಜನಾಂಗಗಳು ಒಬ್ಬರೊಬ್ಬರೊಳಗಿನ ಒಳ್ಳೆಯ ಸಂಗತಿಗಳನ್ನು ಎತ್ತಿಕೊಂಡು ಅಳವಡಿಸಿಕೊಳ್ಳುತ್ತಿರುವುದು ಕಂಡು ಬರುತ್ತಲಿದೆ.

ಇಟ್ಟ-ವಿಟ್ಟ-ವಿಟ್ಟಲನು ಆರ್ಯರ ವಿಷ್ಣುವಾದನು. ಪಂಢರಿಯಲ್ಲಿ ವಿಠ್ಠಲನು ಒಂಟಿಗನಾಗಿ ನಿಂತಿರುವನು. ವಿಟ್ಟನು ಲಕ್ಷ್ಮೀನಾರಾಯಣರ ಕಲ್ಪನೆಯ ಉದಯವಾಗುವುದಕ್ಕಿಂತ ಮೊದಲಿಗನು. ಆದುದರಿಂದ ಈತನು ಒಂಟಿಗ ಮುಂದೆ ರುಕ್ಮಿಣಿಯನ್ನು ಆತನಿಗೆ ಜೋಡಿಸಿದರು. "ಯುಗೇ ಅಠ್ಠಾವೀಸ;" ಇಪ್ಪತ್ತೆಂಟು ಯುಗ ಯುಗಾಂತರಗಳಿಂದಲೂ ಭಕ್ತರ ಉದ್ಧಾರಕ್ಕಾಗಿ ನಿಂತ ದೇವರೆಂದು ಪ್ರಸಿದ್ಧಿಯಿದೆ. ಇವನು ಕೃಷ್ಣ-ವಿಷ್ಣುಗಳಿಗಿಂತಲೂ ಮುಂಚಿನವನೆಂಬುದು ಇದರಿಂದ ಸೂಚಿತವಾಗುತ್ತಲಿದೆ. ವಿಠ್ಠಲನ ಮೂಲಸ್ಥಾನವು ಚಂದ್ರಭಾಗಾತೀರ. ಭೀಮರಥಿನದಿಗೆ ಈಗ ರೂಢವಾಗಿರುವ ಚಂದ್ರ-ಬಾಗಾ ಎಂಬ ಹೆಸರು ಮೊದಲಿನದಲ್ಲ. ಈಗಿನ ಚೀನಾಬನದಿಯೇ ಪ್ರಾಚೀನ ಕಾಲದ ಚಂದ್ರಭಾಗಾ. ಹಾಲುಮತದ ಹಟ್ಟಿಕಾರರು ಸಿಂಧೂತೀರದಲ್ಲಿ ಚಂದ್ರಭಾಗೆಯ-ನೆರೆಯಲ್ಲಿದ್ದಾಗ ವಿಟ್ಟನು ಹುಟ್ಟಿರಬೇಕು. ಅಷ್ಟು ಪ್ರಾಚೀನನಾದುದರಿಂದಲೇ ಇಪ್ಪತ್ತೆಂಟು ಯುಗಗಳ ಮೊದಲಿನ ದೇವನೆ ಎಂದು ಈತನ ಸ್ತುತಿ. ಯದು-ತುರ್ವರು ದಕ್ಷಿಣಕ್ಕೆ ಸರಿದ ಬಳಿಕ ಅವರೊಡನೆ ಈ ದೇವನೂ ಭೀಮಾತೀರಕ್ಕೆ ಬಂದನು.

ಮಲ್ಲಯ್ಯ ಮಲ್ಹಾರಿಗಳಲ್ಲಿ ಇವೆರಡೂ ಜನಾಂಗಗಳ ವಿಚಾರಗಳ ಸಂಗಮವು ಇನ್ನೂ ಚೆನ್ನಾಗಿ ವ್ಯಕ್ತವಾಗುತ್ತಲಿದೆ. ಮಲ್ಲಯ್ಯನೆಂದರೆ ಪರ್ವತೇಶ್ವರ; ಮಲ್ಲಾರಿಯು ಮಲೆಗಳ ಅರಿ! ಆದರೂ ಈಗ ಇವೆರಡೂ ಒಂದೇ! ಮಲ್ಲಯ್ಯನು ಶಿವನು; ರುದ್ರನು; ಮಲೆಗಳ ಅರಿಯು ಇಂದ್ರನು. ಮಲ್ಲಾರಿ ಮಲ್ಲಯ್ಯಗಳ ಪೂಜೆಯಲ್ಲಿ ಇಂದ್ರ-ರುದ್ರರ ಜೋಡಿಯಿದೆ. ವೈದಿಕ ದೇವತೆಗಳಲ್ಲಿ ದ್ಯಾವಾ-ಪೃಥಿವಿಯಂತಹ ಜೋಡುದೇವತೆಗಳದೊಂದು ವೈಶಿಷ್ಟ್ಯವೆ ಆಗಿದೆ. ಇದೇ ಪದ್ಧತಿಯನ್ನೆ ಅನುಸರಿಸಿ ಮುಂದಿನವರು ಪುಂಡರೀಕವಿಠಲ, ಹರಿ-ಹರಾದಿ ದೇವತೆಗಳನ್ನು ನಿರ್ಮಿಸಿಕೊಂಡಿರಬೇಕು. "ರುದ್ರನು ಅಗ್ನಿ ಅಥವಾ ಇಂದ್ರನ ಅಪರಾವತಾರವೆಂಬುದು ಸ್ಪಷ್ಟವೇ ಇದೆ." ಎಂದು ವಿಲ್ಸನನು ಹೇಳುತ್ತಾನೆ ಆದುದರಿಂದ, ಮಲ್ಲಯ್ಯ-ಮಲ್ಲಾರಿಗಳ ಪೂಜೆಯು ವೈದಿಕ ಕಾಲದಿಂದಲೂ

ನಡೆದು ಬಂದ ರುದ್ರ-ಇಂದ್ರರ ಆರಾಧನೆಯೆಂಬುದಕ್ಕೆ ಸಂದೇಹವೇ ಇಲ್ಲ[೬] ಆರ್ಯರ ಇಂದ್ರನೂ ಹಟ್ಟಿಕಾರರ ರುದ್ರನೂ ಇಲ್ಲಿ ಒಂದುಗೂಡಿ ಮಲ್ಲಾರಿ-ಮಲ್ಲಯನು "ಆರ್ಯ-ದ್ರಾವಿಡ" ಸಂಸ್ಕೃತಿಯ ಪ್ರತಿನಿಧಿಯಾಗಿದ್ದಾನೆ. ರುದ್ರ ಶಿವನು ನಂದಿವಾಹನನು. ಆದರೆ, ಮಲ್ಲಾರಿಯು ಏರಿದುದು ಕುದುರೆ! ಇಂದ್ರನ ತೇರಿಗೆ ಹೂಡಿದುದು ವಾಯುವೇಗದ ಕುದುರೆಗಳನ್ನು ಮಲ್ಲಾರಿಗಿರುವ ಖಂಡೋಬನೆಂಬ ಇನ್ನೊಂದು ಹೆಸರು. 'ಅಖಂಡಲ'ನೆಂದು ಇಂದ್ರನಿಗಿರುವ ಪರ್ಯಾಯ ನಾಮವನ್ನು ಸೂಚಿಸುತ್ತಿರಬಹುದೆ? ಮಲ್ಲಯ್ಯನ ಭಕ್ತರಾದ ಹಾಲುಮತದವರಲ್ಲಿ "ಇಂದ್ರ ಶೂದ್ರ" ರುಂಟು (ಕುರುಬರ ಚರಿತ್ರೆ, ಪು. ೨೨) ಮಲ್ಲಯ್ಯನ ಭಕ್ತರು "ಏಳು ಕೋಟಿ," "ಏಳುಕೋಟಿ" ಎಂದು ಉದ್ಘೋಷಿಸುವುಂಟು. ವೈದಿಕ ಪರಂಪರೆಯೇ ಕಡಿದುಹೋದುದರಿಂದ ಇದರ ನಿಜವಾದ ಅರ್ಥವೂ ಮರೆತು ಹೋಗಿದೆ! "ಏಳು ಕೋಟಿ" ಎಂದರೆ ಅಷ್ಟುಭಕ್ತರ ಸಮುದಾಯವೆಂದು ಕೆಲರ ಗ್ರಹಿಕೆ. ಆದರೆ, ಮಲ್ಲಾರಿಯು ವೈದಿಕ ಇಂದ್ರನೆಂಬ ದೇವತೆಯೆಂಬುದನ್ನು ಸ್ಮರಿಸಿಕೊಂಡರೆ ಋಗ್ವೇದದೊಳಗಿನ ಕೆಳಗಿನ ಮಂತ್ರ ದಿಂದ ಏಳುಕೋಟಿಯ ಅರ್ಥವು ಚೆನ್ನಾಗಿ ಗೊತ್ತಾಗುವುದು :

ಅಹಂ ಸಪ್ತಹಾ ನಹುಷೋ ನಹುಷ್ಟರಃ। ಪ್ರಶ್ರಾವಯಂ ಶವಸಾ ತುರ್ವಶು ಯದುಂ॥
ಅಹಂ ನೃಪನ್ಯಂ ಸಹಸಾ ಸಹಸ್ಕರಂ। ನವವ್ರಾಧತೋ ನವತಿಂ ವಕ್ಷಯಃ॥

೧೦. ೪೯. ೮

"ಶತ್ರುಗಳ ಏಳು ಕೋಟೆಗಳನ್ನು ನಾಶಮಾಡಿದ, ಬಲಿಷ್ಠರಲ್ಲಿ ಬಲಿಷ್ಠನಾದ (ನಿಮ್ಮ ಹತ್ತರಿನವರಿಗಿಂತೂ ಹತ್ತರಿನವನಾದ) ನಾನು ತುರ್ವಶ ಮತ್ತು ಯದುಗಳನ್ನು ಸಾಮರ್ಥ್ಯದ ಬಗ್ಗೆ ಕೀರ್ತಿವಂತರನ್ನಾಗಿ ಮಾಡಿದೆನು. ನಾನು ಇನ್ನುಳಿದ ಭಕ್ತರಿಗೂ ಬಲವನ್ನಿತ್ತು ಬಲಿಷ್ಠರನ್ನಾಗಿ ಮಾಡಿದೆನು. ತೊಂಬತ್ತೊಂಬತ್ತು ಉತ್ಸಾಹಿಗಳಾದ ಹಗೆಗಳನ್ನು ನಾಶಮಾಡಿದೆನು." 'ಅಹಂ ಸಪ್ತಹಾ' ಈ ಸಂಸ್ಕೃತ ಮಂತ್ರಕ್ಕೆ ಸರಿಯಾಗಿ ಯದು. ತುರ್ವರ ಪೀಳಿಗೆಯವರು ತಮ್ಮ ಮಾತಿನಲ್ಲಿ 'ಏಳುಕೋಟಿ' ಎಂದು ಈ ಜಯಜಯಕಾರವನ್ನು ಕನ್ನಡಿಸಿಕೊಂಡಿರಬೇಕು. ಮಹಾರಾಷ್ಟ್ರದಲ್ಲಿಯೂ ಇದೇ ಉದ್ಘೋಷವಿರುವುದರಿಂದ ಮೂಲತಃ ಈದೇವರು ಕನ್ನಡ ಜನಾಂಗಕ್ಕೆ ಸಂಬಂಧಿಸಿದವನೆಂದು ಸಿದ್ಧವಾಗುತ್ತಲಿದೆ.

"ಇಂದ್ರನು ವೇದಕಾಲದ ರಾಷ್ಟ್ರೀಯ ದೇವತೆ; ಋಗ್ವೇದದಲ್ಲಿ ಇವನಷ್ಟು ಬೇರಿನ್ನಾವ ದೇವತೆಗೂ ಪ್ರಾಧಾನ್ಯವಿಲ್ಲ"

ಎಂದು ವೇದಶಾಸ್ತ್ರಜ್ಞರು ಹೇಳುತ್ತಾರೆ.[೭] ಈ ವೈದಿಕ ದೇವತೆಯು ಎಲ್ಲಿ ಅದೃಶ್ಯವಾಯಿತೆಂದು ಸಹಜವಾಗಿ ಒಂದು ಜಿಜ್ಞಾಸೆಯುಂಟಾಗುವುದು. ಆದರೆ, ಈಗ ನರ್ಮದಾ-ಕಾವೇರಿಗಳ ನಡುವಿನ ನಾಡಿನ ರಾಷ್ಟ್ರೀಯ ದೇವತೆಯು ಮಲ್ಲಯ. ಇವನೇ ಹಟ್ಟಿಕಾರರ ಕುಲದೇವತೆ ಶ್ರೀಶೈಲದ ಮಲ್ಲಯ್ಯನಿಗೆ ಹಾಟಕೇಶ್ವರನೆಂದು ಬಸವಪುರಾಣದಲ್ಲಿ ಉಲ್ಲೇಖವಿದೆ (೫೩. ೫೨) ನಾಸೀಕದ ತ್ರ್ಯಂಬಕನೂ ಹಾಟಕೇಶ್ವರನೇ. ಹಟ್ಟಿಕಾರ (ಯದು-ತುರ್ವರ) ರಂತೆ ದೇಶಸ್ಥ, ಕಾಣ್ವ, ಕರ್ನಾಟಕ ಬ್ರಾಹ್ಮಣರಲ್ಲಿಯೂ ಅನೇಕರ ಕುಲದೈವತ ಮಲ್ಲಾರಿ! ಮಲ್ಲಯ್ಯನನ್ನು ಬ್ರಾಹ್ಮಣರು 'ಮ್ಹಾಳಸಾ ಮಾರ್ತಂಡ' 'ಮಲ್ಲಾರಿ ಮಾರ್ತಂಡ' 'ಖಂಡೋಬ'ನೆಂಬ ಹೆಸರಿನಿಂದ ಕಾಣುವರು.

ಕೇವಲ ಧರ್ಮ -ತತ್ವಜ್ಞಾನಗಳಲ್ಲಷ್ಟೇ ಅಲ್ಲ; ವೇದಕಾಲದಲ್ಲಿ ಈ ಜನಾಂಗಗಳೊಳಗೆ ಇದಕ್ಕೂ ಆಳವಾದ ಸಂಬಂಧಗಳು-ವೈವಾಹಿಕ ಸಂಬಂಧಗಳಿದ್ದುವೆಂದು ಕಂಡು ಬರುತ್ತಲಿದೆ. ಕ್ರಿ.ಶ. ೧೦ನೆಯ ಶತಮಾನದವರೆಗೂ ಅನುಲೋಮ ವಿವಾಹಗಳು ನಡೆಯುತ್ತಿದ್ದುದರ ಉಲ್ಲೇಖಗಳಿವೆ. ಕವಿರಾಜ ರಾಜಶೇಖರನು ಚಾಹುಆಣ ಕುಲರನ್ನೆಯನ್ನು ಮದುವೆಯಾಗಿದ್ದನು.[೮] ವೇದಕಾಲದ ಚ್ಯವನ ಮತ್ತು ಶಾವಾಶ್ವರೆಂಬ ಋಷಿಗಳು ಕ್ಷತ್ರಿಯ ಕನ್ನೆಯರನ್ನು ಮದುವೆಯಾಗಿದ್ದರು.[೯] ದಶರಥನ ಮಗಳು ಶಾಂತೆ ಋಷ್ಯಶೃಂಗನ ಹೆಂಡತಿ. ಅನುಲೋಮ ವಿವಾಹದ ಸಂತತಿಗೆ ತಂದೆಯ ಜಾತಿಯೇ ಪ್ರಾಪ್ತವಾಗುತ್ತಿದ್ದ ಕಾಲವು ಒಂದಿತ್ತು. ದಶಪೇಯಯಜ್ಞದಲ್ಲಿ

ಬ್ರಾಹ್ಮಣನು, ತನ್ನ ತಾಯಿಯು ಬ್ರಾಹ್ಮಣೆಯಲ್ಲದಿದ್ದರೆ ಅವಳ ಹೆಸರನ್ನು ಉಚ್ಚರಿಸಬಾರದೆಂದು ಲಾಟ್ಯಾಯನ ಶ್ರೌತಸೂತ್ರಗಳಲ್ಲಿ ಹೇಳಿರುವುದಾಗಿ ಡಾ. ಶ್ಯಾಮಾಶಾಸ್ತ್ರಿಗಳು ಬರೆಯುತ್ತಾರೆ.[೧೦] ಐಲೂಷ ಕವಶನಿಗೆ 'ದಾಸೀಪುತ್ರ'ನೆಂದು ಮೂದಲಿಸಿ ನುಡಿದುದರ ಉಲ್ಲೇಖಗಳು ಬ್ರಾಹ್ಮಣ ಗ್ರಂಥಗಳಲ್ಲಿ ಸಿಕ್ಕುತ್ತವೆ.[೧೧] ಜಮದಗ್ನಿ ಋಷಿಯ ಹೆಂಡತಿ ರೇಣುಕೆ ಪ್ರಸೇನಜಿತ್ ರಾಜನ ಮಗಳು[೧೨]; (ಜಮದಗ್ನಿಯ ಮಗ) ಪರಶುರಾಮನು ಬ್ರಾಹ್ಮಣ. ವ್ಯಾಸಮುನಿಗಳ ಜನ್ಮಕಥೆಯು ಎಲ್ಲರಿಗೂ ಗೊತ್ತಿದ್ದುದೇ ಆಗಿದೆ; ಇವರಿಗೆ ಕೃಷ್ಣ-ದ್ವೈಪಾಯನರೆಂದು ಹೆಸರು. ಇವರ ಮೈಬಣ್ಣ 'ಕಪ್ಪು' ಇದ್ದಿತೆಂದು ವರ್ಣನೆಯಿದೆ.

ಆರ್ಯರಲ್ಲಿ-ಬ್ರಾಹ್ಮಣರಲ್ಲಿ ಚಿತ್ರವಿಚಿತ್ರ ರೂಪ, ಆಕಾರಗಳು ಕಾಣಿಸಿಕೊಳ್ಳುತ್ತಿರುವುದಕ್ಕೆ ಅನುಲೋಮ ವಿವಾಹವೇ ಮುಖ್ಯವಾದ ಕಾರಣ. ಅನುಲೋಮವಿವಾಹದ ಸಂತತಿಗೆ ಸಮಾನಸ್ಥಾನವು ಸಿಕ್ಕಬಾರದೆಂಬ ವಿಚಾರವು ಪ್ರಬಲವಾಗುವುದಕ್ಕೆ ಬಹಳ ಕಾಲವು ಬೇಕಾಗಿರಲಿಕ್ಕಿಲ್ಲ. ಆದರು ಇದನ್ನು ಒಮ್ಮೆಲೆ ತಡೆದು ನಿಲ್ಲಿಸುವುದು ಸಾಧ್ಯವಿದ್ದಿಲ್ಲ. ಆವುದೇ ನಡೆವಳಿಕೆಯಾದರೂ ಥಕ್ಕನೆ ತಲೆದೋರುವುದಿಲ್ಲ. ಅದರಂತೆ ಥಟ್ಟನೆ ಮಾಯವಾಗುವುದಿಲ್ಲ. ಅನುಲೋಮವಿವಾಹದ ಸಂತತಿಯಲ್ಲಿ ಅದೇ ಬಗೆಯ ವಿವಾಹಗಳು ಆಗಿ ನಾಲ್ಕೈದು ತಲೆಗಳ ನಂತರ ಅವರಿಗೆ ಶ್ರೇಷ್ಠ ವರ್ಣವು ಪ್ರಾಪ್ತವಾಗಬಹುದೆಂಬ ವಿಚಾರವು ಕೆಲವು ದಿನಗಳ ವರೆಗೆ ಇತ್ತು. ಆದರೆ, ಮೂರನೆಯ ಮೆಟ್ಟಿನಲ್ಲಿ ಅದೂ ಅದೃಶ್ಯವಾಗಿ ಕೇವಲ ಭೋಗಕ್ಕಾಗಿ ಅನುಲೋಮ ವಿವಾಹವನ್ನು ಮಾಡಿಕೊಳ್ಳಬಹುದೆಂಬ ರೂಢಿಯುಂಟಾಯಿತು. ಕೊನೆಗೆ ಇದೂ ಹೋಯ್ತು. ಈಗ ವಿವಾಹಸಂಸ್ಕಾರವೂ ಆಗುವ ಹಾಗಿಲ್ಲ. 'ಮದುವೆಯ ಹೆಂಡತಿ' ಎಂಬ ಸನ್ಮಾನಾರ್ಥಕ ಪದವಿಯೂ ಇಲ್ಲದಂತಾಯ್ತು. ಅನುಲೋಮ ವಿವಾಹದ ಮೊದಲನೆಯ ಮತ್ತು ಎರಡನೆಯ ಮೆಟ್ಟಿನ ಸಂಕ್ರಮಣ ಕಾಲದಲ್ಲಿ 'ತಾವು ಬ್ರಾಹ್ಮಣರು,' 'ತಾವು ಕ್ಷತ್ರಿಯರು,' 'ತಾವು ವೈಶ್ಯ'ರೆಂದು ಹಕ್ಕು ಹೇಳುವ ಅನುಲೋಮಸಂತತಿಯವರನ್ನು ಆಯಾ ವರ್ಣದ ಪುರಾಣಮತವಾದಿಗಳು ಹಿಂದಕ್ಕೆ ತಳ್ಳಲಾರಂಭಿಸುತ್ತಲೆ ಆಗಿನ ಸಮಾಜದಲ್ಲಿ ಎಂತಹ ಕೋಲಾಹಲವುಂಟಾಗಿರಬಹುದು!

ಪ್ರತಿಲೋಮ ವಿವಾಹಗಳು ಎಂದೂ ಅಷ್ಟು ಮನ್ನಣೆಯನ್ನು ಪಡೆಯಲಿಲ್ಲ. ಗ್ರಂಥಾಂತರಗಳಲ್ಲಿ ಇಂತಹ ಉದಾಹರಣೆಗಳು ಸಾಕಷ್ಟು ಸಿಕ್ಕದಿರುವುದಕ್ಕೆ ಇದೇ ಮುಖ್ಯಕಾರಣವು. ಶುಕ್ರಾಚಾರ್ಯರ ಮಗಳಾದ ದೇವಯಾನಿಯು ಪುರಾಣದ ಯದು-ತುರ್ವಸುಗಳ ತಾಯಿ. ದಂಡಕಾರಣ್ಯವನ್ನಾಳುತ್ತಿದ್ದ ಒಬ್ಬ ಭೋಜನು ಬ್ರಾಹ್ಮಣ ಕುಮಾರಿಯನ್ನು ಒತ್ತಾಯಪಡಿಸಿದುದರ ಉಲ್ಲೇಖವು ಕೌಟಿಲ್ಯನ ಅಥಶಾಸ್ತ್ರದಲ್ಲಿದೆ.[೧೩] ಬಂಗಾಳದಲ್ಲಿ ಆಳಿದ ಕರ್ನಾಟಕ ಕುಲತಿಲಕರಾದ ಸೇನಮನೆ. ತನದ ರಾಜರು "ಬ್ರಹ್ಮ-ಕ್ಷತ್ರಿಯರು." ಮಯೂರಶರ್ಮನಿಂದ ಮುಂದೆ ಕದಂಬ ವಂಶವು ಕ್ಷತ್ರಿಯತ್ವವನ್ನು ಸ್ವೀಕರಿಸಿ 'ವರ್ಮ'ರೆಂಬ ಪದವಿಯನ್ನು ಧರಿಸಿತು. ಅನುಲೋಮ ಪ್ರತಿಲೋಮ ವಿವಾಹಗಳು ಕ್ರಿಸ್ತಶಕದ ೨-೩ ಶತಮಾನದ ವರೆಗೂ ನಡೆಯುತ್ತಿದ್ದುವೆಂದು ಡಾ. ದೇವದತ್ತ ಭಂಡಾರಕರರು ಬರೆಯುತ್ತಾರೆ.[೧೪]

ಅಗಸ್ತ್ಯ ಋಷಿಯು ಮದುವೆಯಾದ ಲೋಪಾಮುದ್ರೆಯು ವಿದರ್ಭ (ಹಟ್ಟಿ)ನಾಡಿನವಳು. ವಿದರ್ಭರಾಜನ ಮನೆಯಲ್ಲಿ ಬೆಳೆದವಳಂತೆ. ಇವಳು ಅಗಸ್ತ್ಯನಿಗೆ ಧನವನ್ನು ತಂದು, ಎಂದರೆ ತೆರವನ್ನು ತೆತ್ತು ಮದುವೆಯಾಗಲು ಹೇಳುತ್ತಾಳೆ! ಬ್ರಾಹ್ಮಣಪದ್ಧತಿಯ ವರದಕ್ಷಿಣೆಯಂತೂ ಇಲ್ಲವೇ ಇಲ್ಲ; ಕನ್ಯಾದಕ್ಷಿಣೆ ಬೇಡುತ್ತಾಳೆ! ಬಲುಗಡುಸುಗಾತಿಯಾಗಿರಬೇಕು. ಗಂಡನೊಡನೆ ಆದ ಒಂದು ಸಂವಾದವು ಋಗ್ವೇದದಲ್ಲಿದೆ (೧.೧೭೯. ೧-೪) ಆದರಲ್ಲಿ ಇವಳ ವ್ಯಕ್ತಿತ್ವವು ಚೆನ್ನಾಗಿ ಪ್ರತಿಬಿಂಬಿತವಾಗಿದೆ. ಈ ಸಂವಾದವನ್ನು ಕೇಳಿದುದಕ್ಕಾಗಿ ಪ್ರಾಯಶ್ಚಿತ್ತವೆಂದು ಮುಂದಿನ ಐದು-ಆರನೆಯ ಋಚೆಗಳಿರುವುದಾಗಿ ಋಗ್ವಿಧಾನದಿಂದ ತಿಳಿದು ಬರುತ್ತದೆ.[೧೫] ಪ್ರೊ. ಗುಣೆ ಎಂಬ ಭಾಷಾಶಾಸ್ತ್ರಜ್ಞರು ಹೊಸಭಾಷೆಗಳು ಹೇಗೆ ಹುಟ್ಟುತ್ತವೆಂಬುದನ್ನು ವಿವರಿಸುವಾಗ ಬರೆಯುದೇನೆಂದರೆ ಎಲ್ಲೆಲ್ಲಿ ಹೊಸ ಭಾಷೆಗಳು ತಲೆದೋರಿರುವುವೋ ಅಲ್ಲಿ ಎಲ್ಲೆಡೆಗಳಲ್ಲಿಯೂ ಭಿನ್ನಭಾಷೆ ಮತ್ತು ಭಿನ್ನಭಿನ್ನ ಮಾನವವಂಶದ ಜನಾಂಗಗಳ

ಸಂಯೋಗವಾಗಿ ಆದರಲ್ಲಿ ಮೆತ್ತಗಿನವರು ಬಲಿಷ್ಠರಲ್ಲಿ ಒಂದುಗೂಡಿ ಹೋದುದು ಕಂಡು ಬರುತ್ತದೆ. ಇಂತಹ ಸಂಧಿಕಾಲದಲ್ಲಿಯೆ ಹೊಸ ಭಾಷೆಗಳು ಹುಟ್ಟುವವು."[೧೬]

ಈ ಬಗೆಯ ಸಂಕ್ರಮಣಕಾಲದಲ್ಲಿಯೇ ಮೂಲ 'ದ್ರಾವಿಡವು' ನಾಮಶೇಷವಾಯಿತು. ಕನ್ನಡವು ತಲೆಯೆತ್ತಿತು. ಪಾಲಿ ಪ್ರಾಕೃತ ಭಾಷೆಗಳು ಪ್ರಾಶಸ್ತ್ಯವನ್ನು ಪಡೆದುವು. ಸಂಸ್ಕೃತ ನಾಟಕಗಳಲ್ಲಿ ನಾಯಕನದು ಗೀರ್ವಾಣವಾಣಿ; ಸ್ತ್ರೀಯರೂ ಉಳಿದ ಸಾಮಾನ್ಯ ಜನರೂ ಮಾತಾಡುವುದು ಪ್ರಾಕೃತ. ಇದು ಅನುಲೋಮ ವಿವಾಹದಿಂದ ಆದ ಪರಿಣಾಮವಾಗಿರಲಿಕ್ಕಿಲ್ಲವೆ? ಕನ್ನಡದ ನಾಡಿಗರ ನಿತ್ಯವ್ಯವಹಾರದೊಳಗಿನ ಪಲ್ಲೆ, ಪದಾರ್ಥ (ಥ), ಕಾರಣ (ಮದುವೆ); ಅಂಬಲಿ; ಧಾವತಿ (ಶ್ರಮ) ಇಂತಹ ಸಂಸ್ಕೃತ ಸಂಬಂಧಿಯಾದ ನುಡಿಗಳನ್ನು ಕೇಳಿದರೆ ಇವರಡೂ ಸಮಾಜಗಳು ಎಷ್ಟು ಒಡಗೂಡಿ ಬೆಳೆದಿವೆಯೆಂಬುದರ ಮನವರಿಕೆಯಾಗುತ್ತದೆ.

ಮಥುರೆಯಿಂದ ವಿದರ್ಭದ ವರೆಗೆ ಶೂರಸೇನ ಯಾದವರೂ ಭೋಜಕರೂ ವ್ಯಾಪಿಸಿದ್ದರು. ಇವರು ಆರ್ಯೀಕರಣಕ್ಕೆ ಒಪ್ಪಿದವರು; ಆರ್ಯರಾಗಲಾರಂಭಿಸಿದವರು. ಶೌರಸೇನಿ ಮತ್ತು ಮಹಾರಾಷ್ಟ್ರೀ ('ವಿದರ್ಭ') ಪ್ರಾಕೃತಗಳು ಹತ್ತರಿನವು. ಶೌರಸೇನಿಯೆ ಮುಂದೆ ಮಹಾರಾಷ್ಟ್ರೀ ಆಯಿತು ಎಂದು ಮನೋಮೋಹನ ಘೋಷರು ಪ್ರತಿಪಾದಿಸಿರುವುದು ಒಂದು ದೃಷ್ಟಿಯಿಂದ ಸರಿಯಾಗಿದೆ ಏಕೆಂದರೆ ಶೂರಸೇನದ ಯಾದವರೂ ವಿದರ್ಭದ ಭೋಜಕರೂ ಒಂದೇ ಜನಾಂಗ. ಶೂರಸೇನ, ವಿದರ್ಭದ ಮರವರು-ಮರಹಟ್ಟಿಕಾರರು ಮಹಾರಾಷ್ಟ್ರಿಕರಾಗ ಲಾರಂಭಿಸಿದುದು ಈ ಕಾಲದಲ್ಲಿಯೇ.

ಮರಾಠಾ ಸಮಾಜದ ಮುಂದಾಳುಗಳಾದ ಶ್ರೀಮಾನ್ ಜಾದವರಾಯರು ತಮ್ಮ ಒಂದು ಲೇಖನದಲ್ಲಿ "ಮರಾಠರು ಆರ್ಯ-ದ್ರಾವಿಡ ವಂಶಕ್ಕೆ ಸೇರಿದವರು"[೧೭] ಎಂದು ಅಭಿಪ್ರಾಯಪಟ್ಟುದು ತೀರ ಸಮರ್ಪಕವಾಗಿದೆ. ಮರಾಠೀ ಭಾಷೆಯ ಅಂತಃಸ್ವರೂಪದ ನಿರೀಕ್ಷಣ-ಪರೀಕ್ಷಣದಿಂದಲೂ ಇದೇ ಮಾತು ಸಿದ್ಧವಾಗುತ್ತಲಿದೆ.

> The mixture of the two elements (Maratta and Dravidian) is best illustrated by the peculiarities of the (Maratti) language, whose base is Dravidian, but whose structure have been entirely fashioned by Aryan influance.

ದ್ರಾವಿಡ ಭಾಷೆಯ ಅಡಿಗಲ್ಲ ಮೇಲೆ ಸಂಪೂರ್ಣ ಆರ್ಯಭಾಷೆಯ ವರ್ಚಸ್ಸುಳ್ಳ ಒಂದು ಭಾಷಾ ಮಂದಿರವು ನಿರ್ಮಾಣವಾಗಿದೆ; ಅದುವೆ ಮರಾಠಿ, ಎಂದು ನ್ಯಾಯಮೂರ್ತಿ ರಾನಡೆಯವರು ನಿರ್ಣಯಿಸಿದ್ದಾರೆ. ಗುಜರಾತಿ ಮತ್ತು ಮರಾಠಿ ಭಾಷೆಗಳನ್ನು ಸ್ವೀಕರಿಸಿದ ಜನಾಂಗವು ಮುಖ್ಯವಾಗಿ ದ್ರಾವಿಡ ವರ್ಗಕ್ಕೆ ಸೇರಿದುದೇ ಆಗಿರಬೇಕೆಂದು ಡಾ. ಸ್ಟೆನ್ ಕೊನೊ ಅವರ ಅಭಿಪ್ರಾಯವಿದೆ. "ದ್ವಾರಕಾಂತಂ ಕುಂತಲದೇಶ" ಎಂದು ಪೂರ್ವಸೂರಿಗಳು ಹೇಳಿದ ಮಾತನ್ನೆ ಡಾ. ಕೊನೊ ಅವರು ಇನ್ನೊಂದು ಬಗೆಯಿಂದ ಪುಷ್ಟೀಕರಿಸುತ್ತಲಿದ್ದಾರೆ. ಋಗ್ವೇದ ಕಾಲದಿಂದಲೇ ದ್ರಾವಿಡ ಮೂಲ ಸಂಘದಲ್ಲಿ ಕವಲುಗಳು ಒಡೆದುದರಿಂದ ಮರಾಠಿ ಗುಜರಾತಿ, ಹಿಂದೀ, ಅಥವಾ ಬಂಗಾಳಿ ಭಾಷೆಗಳಲ್ಲಿ ಕಾಣುವ "ದ್ರಾವಿಡ" ಅಂಶಕ್ಕೆ ಹಿಂದೀ. ಅಥವಾ ಬಂಗಾಳಿ ಭಾಷೆಗಳಲ್ಲಿ ಕಾಣುವ "ದ್ರಾವಿಡ" ಅಂಶಕ್ಕೆ ಇನ್ನು ಮುಂದೆ "ದ್ರಾವಿಡ' ವೆಂದು ಸ್ಥೂಲ, ಸಂದಿಗ್ಧಾರ್ಥಕ ಶಬ್ದವನ್ನು ಉಪಯೋಗಿಸದೆ 'ಅದು ಕನ್ನಡದ ವರ್ಚಸ್ಸು' ಎಂದು ಸ್ಪಷ್ಟ ಮಾತಿನಿಂದ ಹೇಳುವುದು ಆವಶ್ಯಕವು ಈ ಕೆಲಸವನ್ನು ಮಿ. ಆಲ್ಫ್ರೆಡ್ ಮಾಸ್ಟರ ಇವರು ತಮ್ಮ ಒಂದು ಲೇಖನದಲ್ಲಿ ಮರಾಠಿ, ಗುಜರಾತಿಗಳ ಮಟ್ಟಿಗೆ ಚೆನ್ನಾಗಿ ನೆರವೇರಿಸಿದ್ದಾರೆ.[೧೮] ಕನ್ನಡ-ಮರಾಠಿಗಳ ಸಂಬಂಧವನ್ನು ಕುರಿತು ಶ್ರೀ ರಾಜಪುರೋಹಿತ, ಶ್ರೀ ವಿಠ್ಠಲ ರಾಮಜಿ ಸಿಂಧೇ, ಪ್ರೊ. ಜಹಗೀರದಾರ ಇವರು ಪರಿಶ್ರಮಪೂರ್ವಕವಾಗಿ ಬರೆದ ಪ್ರಬಂಧಗಳೂ ಮಹತ್ವದವುಗಳಾಗಿವೆ.

"ಒಂದು ಕಾಲಕ್ಕೆ ಉತ್ತರ ಭಾರತದಲ್ಲಿಯೂ 'ದ್ರಾವಿಡ' ಭಾಷೆಯು ನಡೆಯುತ್ತಿದ್ದಿತೆಂಬ ಬಗ್ಗೆ ಸಂದೇಹವಿಲ್ಲ"ವೆಂದು ವಿದ್ವನ್ಮಣಿಗಳಾದ ಡಾ. ಭಂಡಾರಕರ ಪಿತಾ-ಪುತ್ರರು ಹೇಳುತ್ತಾರೆ. ಇದು ಎಲ್ಲ ವಿದ್ವಾಂಸರಿಗೂ ಮಾನ್ಯವಿದೆ. ಆವುದೇ ಭಾಷೆಯು ನಾಮಶೇಷವಾಗುವ ಮೊದಲು ಅಲ್ಲಿ ದ್ವಿಭಾಷಿಗಳ ಸಂಖ್ಯೆಯು ಹೆಚ್ಚಾಗಲಾರಂಭಿಸುತ್ತದೆ. ದ್ವಿಭಾಷೆಗೆ (Bilinguism) ಆರಂಭವಾದ ಮೇಲೆ ಧಾರ್ಮಿಕ, ಸಾಮಾಜಿಕ, ರಾಜಕೀಯ ಮನ್ನಣೆಯು ವಿಶೇಷವಾಗಿರುವ ಭಾಷೆಯು ಮೇಲೆ ಬಂದು ಮತ್ತೊಂದು ನೆಲಕ್ಕುರುಳುತ್ತದೆ.

ರಾ. ನರಸಿಂಹಾಚಾರ್ಯರೇ ಒಂದೆಡೆಯಲ್ಲಿ ಬರೆದಿರುವಂತೆ ಕನ್ನಡವು ತಮಿಳಿನಷ್ಟೇ ಪುರಾತನ ಭಾಷೆಯಾಗಿದ್ದರೂ ಇದರಲ್ಲಿ ತಮಿಳಿನಷ್ಟು ಪ್ರಾಚೀನ ಗ್ರಂಥಗಳು ಏಕೆ ದೊರೆಯುವುದಿಲ್ಲ? ದ್ವಿಭಾಷೆಯ (bilingual) ದುಷ್ಪರಿಣಾಮಗಳೇ ಇದಕ್ಕೆ ಮುಖ್ಯ ಕಾರಣ. ಎಣ್ಣೆ ಮತ್ತು ತುಪ್ಪವನ್ನು ಒಂದರಲ್ಲೇ ತರಲು ಹೋಗಿ ಎರಡಕ್ಕೂ ಎರವಾದವನಂತೆ ಕರ್ಣಾಟಕದ ಭಾಷೆಯು ಸ್ಥಿತಿಯಾಯಿತು. ತಮಿಳರಿಗೆ ಇಂತಹ ಕುತ್ತಿನಲ್ಲಿ ಬಹಳ ಹೊತ್ತು ಸಿಕ್ಕಿಬೀಳುವ ಪ್ರಸಂಗವೆ ಬರಲಿಲ್ಲ. ದ್ವಿಭಾಷೆಯ ನಾಡಿನವರ ಸ್ಥಿತಿಯನ್ನು ಕುರಿತು ಜಸ್ಪರಸನ್ ಎಂಬ ಭಾಷಾಶಾಸ್ತ್ರಜ್ಞನು ಬರೆಯುವುದೇನಂದರೆ.[೧೯]

> It is of course and advantage for a child to be familiar with two languages: but without dout the advantage may be, and generally, purchased too dear. First of all the child in question hardly learns either of the two languages as perfectly as he would have done if he had limited himself to one........the worst of the system is, that instead of learning things necessary to us we must spend our time and energy in learning to express the same thought in two or three languages at the same time!

ಹಿಂದಕ್ಕೆ ನಮ್ಮ ಜನಗಳಲ್ಲಿ 'ಸುಧಾರಿಸಿದವರು' 'ಸುಸಂಸ್ಕೃತರು' ಎಂಬವರಲ್ಲಿ ಕನ್ನಡಕ್ಕೆ ಪ್ರಥಮ ಸ್ಥಾನ ದೊರೆಯಲೇ ಇಲ್ಲ. ಮೊದಲು ಸಂಸ್ಕೃತ ಬಳಿಕ ಪ್ರಾಕೃತ. ಇದೂ ತಪ್ಪಿದನಂತರ ಸಂಸ್ಕೃತ-ಪ್ರಾಕೃತೋದ್ಭವ ಭಾಷೆಗಳು (ಮರಾಠೀ, ಹಿಂದೀ.....); ಕೊನೆಗೆ ವಿರ್ವಾಹವಿಲ್ಲದುದಕ್ಕೆ ಕನ್ನಡ! ಈ ಬಗೆಯ ಮನೋವೃತ್ತಿಯೇ ಕನ್ನಡದ ಅವನತಿಗೆ ಕಾರಣವಾಗಿದೆ. ಕನ್ನಡದಲ್ಲಿ ಬೇಗನೆ ಗ್ರಂಥ ರಚನೆಗೆ ಆರಂಭವಾಗದಿರುವುದಕ್ಕೂ ಇದೇ ಮೂಲಕಾರಣ ಯಾದವರು ತುರುವರುಗಳಲ್ಲಿ ಹಲವರು ಆರ್ಯರಾದರು. ಅವರ ಮಾತಿಗೂ 'ಪ್ರಾಕೃತ'ವೆಂಬ ಹೆಸರು ಬಂದಿತು. 'ಸಂಸ್ಕೃತಂ, ಪ್ರಾಕೃತಂ, ಅಪಭ್ರಂಶಂ, ಪೈಶಾಚಿಕಂ ಎಂಬ ಮೂರೂವರೆ ಭಾಷೆಗಳೊಳ್ ಪುಟ್ಟುವ' ನುಡಿ ಕನ್ನಡವೆಂದು ಹಿಂದಿನವರ ಗ್ರಹಿಕೆಯಿತ್ತು. ಪ್ರಾಕೃತ ವ್ಯಾಕರಣಕಾರರು 'ಕರ್ಣಾಟೀ', 'ಕೌಂತಲಿ'ಗಳೆಂದು ಪ್ರಾಕೃತಗಳನ್ನು ಹೇಳುತ್ತಾರೆ. ಕನ್ನಡದೊಳಗಿನ ತದ್ಭವಪ್ರಕರಣವನ್ನು ನೋಡಿದರೆ-ಅನೇಕ ಕನ್ನಡ ಮಾತುಗಳನ್ನು ಆ ಬಗೆಯಿಂದಲೇ ಮಾರ್ಪಡಿಸಿಕೊಳ್ಳುವುದನ್ನು ಗಮನಿಸಿದರೆ, ಕನ್ನಡವು ಪ್ರಾಕೃತವು ಒಂದು ಪ್ರಭೇದ. ಅದೂ ಪ್ರಾಕೃತವೇ ಎಂಬ ಕಲ್ಪನೆ ಹಿಂದಿನಕಾಲದಲ್ಲಿ ಎಷ್ಟು ದೃಢವಾಗಿರಬೇಕೆಂಬುದು ಗೊತ್ತಾಗುತ್ತದೆ. ಕನ್ನಡಕ್ಕೆ ಮ್ಲೇಚ್ಛಭಾಷೆಯೆಂದು ಹೇಳಿದುದೂ ಉಂಟು. ಅದರಂತೆ ಶುದ್ಧ ಸಂಸ್ಕೃತ ಅಭಿಮಾನಿಗಳಿಗೆ ಪ್ರಾಕೃತವಾದರೂ ಎಲ್ಲಿ ಪ್ರಿಯಕರವಾಗಿತ್ತು? 'ಪ್ರಾಕೃತವನ್ನು ಕಲಿಯಲಾಗದು. ಅದು ಬ್ರಾಹ್ಮಣನಿಗೆ ನರಕಕ್ಕೆ ಒಯ್ಯುವುದು' ಎಂದು ಗರುಡಪುರಾಣವು ಆಜ್ಞಾಪಿಸುತ್ತಿದೆ. ಆದರೆ, ಸಂಸ್ಕೃತವು ಅಸಾಧ್ಯವಿಷಯವಾದ ಬಳಿಕ, ಪ್ರತಿನಿತ್ಯದ ವ್ಯವಹಾರಕ್ಕೆ ಪ್ರಾಕೃತವನ್ನೂ ದೇಶಭಾಷೆಯನ್ನೂ ಕಲಿಯದೆ ನಡೆಯದಾದ ನಂತರ ಮೊದಲಿನ ಆಗ್ರಹವು ಉಳಿಯಲಿಲ್ಲ . ಕ್ರಿ.ಶ. ೩೦೦ರ ಸುಮಾರಿಗೆ[೨೦] ಆದ ನಾರದಸ್ಮೃತಿಯಲ್ಲಿ ಬರೆದಿರುವುದೇನೆಂದರೆ:

ಸಂಸ್ಕೃತೈಃ ಪ್ರಾಕೃತೈಃ ಶಿಷ್ಯಂ ಅನುರೂಪತಃ।
ದೇಶಭಾಷಾದ್ಯುಪಾಯೈಃ ಚ ಬೋಧಯೇತ್ ಸ ಗುರುಃ ಸ್ಮೃತಃ॥

ನಾರದನು ದೇಶಭಾಷಾಭ್ಯಾಸಕ್ಕೆ ಅನುಜ್ಞೆಯನ್ನಿತ್ತ ಮೇಲೆ ಸಹ ಕನ್ನಡದಲ್ಲಿ ಶಿಲಾಶಾಸನಗಳು ಜನ್ಮ ತಾಳುವುದಕ್ಕೆ ಮತ್ತೆ ಮುಂದೆ ೨೦೦-೩೦೦ ವರುಷಗಳು ಬೇಕಾದುವು! ಧರ್ಮಗ್ರಂಥಗಳು ಹುಟ್ಟುವುದಕ್ಕೆ ಅದಕ್ಕೂ ಮುಂದೆ ೭೦೦-೮೦೦ ಕ್ಕಿಂತ ಹೆಚ್ಚು ಕಾಲವು ಹಿಡಿಯಿತು! ಈ ಸಂಧಿಕಾಲದಲ್ಲಿ, ಕನ್ನಡವನ್ನು 'ಪ್ರಾಕೃತ' ಭಾಷೆಯನ್ನಾಗಿ ಮಾಡುವ ಪ್ರಯತ್ನದಲ್ಲಿ ಮರಾಠಿಯು ಜನ್ಮ ತಾಳಿತು! ಮರಾಠಿ ಕವಿಗಳು "ದೇಶಿ"ಯಲ್ಲಿ ಬರೆಯಲಾರಂಭಿಸಿದರೆ ಅದು ಕನ್ನಡದ ಎಷ್ಟು ಹತ್ತಿರಕ್ಕೆ ಬರುತ್ತದೆಂಬುದನ್ನು ಜ್ಞಾನೇಶ್ವರಿಯಲ್ಲಿ ನೋಡಬಹುದು. ಕನ್ನಡ ಕವಿಗಳು 'ಮಾರ್ಗ'ದಲ್ಲಿ ಬರೆಯಲಾರಂಭಿಸಿದರೆ ಅದಕ್ಕೂ ಮರಾಠಿಗೂ ಪ್ರತ್ಯಯಗಳಲ್ಲಿ ಮಾತ್ರ ಭೇದ ಉಳಿಯುವುದು. ಹಳೆಗನ್ನಡ ಕವಿಗಳು ಬರೆಯುತ್ತಿದ್ದಂತೆ ಈಗಿನವರು 'ಕಮಳ' ಕುಳ (ಕುಲ)' ಎಂದು ಮುಂತಾಗಿ ಹೇಳಿದರೆ 'ನೀವು ಮರಾಠಿಗರೇ' ಎಂದು ಕೇಳಬಹುದು! ೧೮೦೦ ಸುಮಾರಿಗೆ ಆಗಿ ಹೋದ ಜಗನ್ನಾಥರಾಯರು ಸಹ ಹರಿಕಥಾಮೃತ ಸಾರದಲ್ಲಿ ಕನ್ನಡಕ್ಕೆ 'ಪ್ರಾಕೃತ'ವೆಂದು ಹೇಳಿದ್ದಾರೆ!

ಅಗಸ್ತ್ಯ ವಾತಾಪಿಗಳ ಕಥೆಯಲ್ಲಿ ಒಂದು ಮಹತ್ವದ ಐತಿಹಾಸಿಕ ಸತ್ಯವು ಹುದುಗಿಕೊಂಡಿದೆ. ವಾತಾಪಿ ಇಲ್ವಲರು ಅಣ್ಣತಮ್ಮಂದಿರು. ವಾತಾಪಿಯು ಕುರಿಯ ರೂಪವನ್ನು ಧರಿಸುತ್ತಿದ್ದನು. ಆ ಕುರಿಯನ್ನು ಅತಿಥಿಗಳಾಗಿ ಬಂದ ಬ್ರಾಹ್ಮಣರಿಗೆ ಇಲ್ವಲನು ಬಡಿಸುತ್ತಿದ್ದನು. ಬ್ರಾಹ್ಮಣರ ಊಟವಾದ ಬಳಿಕ ಇಲ್ವಲನು ವಾತಾಪಿಗೆ ಬಾ ಎಂದು ಕರೆಯಲು ಆತನು ಬ್ರಾಹ್ಮಣರ ಹೊಟ್ಟೆ ಹರಿದು ಹೊರಗೆ ಬರುತ್ತಿದ್ದನಂತೆ. ಅಗಸ್ತ್ಯಋಷಿಗೆ ಇದೇ ಮೇರೆಗೆ ಮಾಡಿದಾಗ ಆತನು ವಾತಾಪಿಯನ್ನು ತನ್ನ ಹೊಟ್ಟೆಯಲ್ಲಿಯೇ ಅರಗಿಸಿ ಬಿಟ್ಟನಂತೆ. ಈ ಕಥೆಯು ಗುಹ್ಯಾರ್ಥವುಳ್ಳುದಿರಬೇಕೆಂದು ಮೇಲೆಯೆ ಕಾಣುತ್ತಿದೆ. ಏಕೆಂದರೆ, ಇದರಲ್ಲಿ ವರ್ಣಿಸಿರುವಂತೆ ಮನುಷ್ಯನು ಕುರಿಯಾಗುವುದೂ ಸತ್ತು ಮತ್ತೆ ಜೀವಂತನಾಗುವುದೂ ಕವಿಕಲ್ಪನೆಗಳು; ಅಥವಾ ಅಗಸ್ತ್ಯನು ನರಮಾಂಸ ಭಕ್ಷಕನೆಂದು ಗ್ರಹಿಸುವುದಂತೂ ತೀರ ವಿಪರೀತ. ಇಲ್ಲಿ ವಾತಾಪಿಯು 'ಕುರಿ' ಆದನು ಎಂದುದು, ಕುಂತಲರ (ಕುರಿ) ನಾಡಿಗೆ ಸಾಂಕೇತಿಕ ಶಬ್ದವಿರಬೇಕು. ಯದುತುರ್ವಶಾದಿ ಹಟ್ಟಿಕಾರರು ಆರ್ಯರಲ್ಲಿ ಅರಗಿ ಹೋದುದನ್ನೂ ಇನ್ನುಳಿದ ಇಲ್ವಲನು (ತಮಿಳರು?) ತಲೆವಾಗಿ ಶಿಷ್ಯತ್ವವನ್ನು ಒಪ್ಪಿಕೊಂಡಿದ್ದನ್ನೂ ಈ ಕಥೆಯಲ್ಲಿ ವ್ಯಂಗ್ಯಸರಣಿಯಿಂದ ಸೂಚಿಸಿರಲಿಕ್ಕಿಲ್ಲವೆ?

ಕನ್ನಡದ ಮೂಲ ಜನಾಂಗವೆಂದರೆ ಯದು-ತುರ್ವಶಾದಿ ಹಟ್ಟಿಕಾರರು. ಅವರೇ ಆರ್ಯರಾದ ಬಳಿಕ ಇನ್ನೆಲ್ಲಿಯ ಕರ್ಣಾಟ? ಕರ್ಣಾಟವೆಲ್ಲವೂ ಮಹಾರಾಷ್ಟ್ರವೆಂಬ ಒಂದು ವಿಚಾರವು ಹಲಕೆಲವು ಆರೇ ಜನಗಳಲ್ಲಿ ಇನ್ನೂ ಕಾಣಿಸಿಕೊಳ್ಳುತ್ತಲಿದೆ. ಪ್ರಾಚೀನಕಾಲದಿಂದಲೂ ಈ ಬಗೆಯ ಭಾವನೆಯೊಂದು ಪರಂಪರೆಯಿಂದ ನಡೆದು ಬಂದಿರಬೇಕೆಂದು ತೋರುತ್ತದೆ. ದೇಶವಿಭಾಗಗಳಲ್ಲಿ ಕರ್ಣಾಟದ ಹೆಸರು ದೊರೆಯದ ಪುರಾಣಗಳುಂಟು. ದಕ್ಷಿಣದಲ್ಲಿ ಕರ್ಣಾಟಾದಿ ಬ್ರಾಹ್ಮಣರೆಲ್ಲ 'ಪ್ರಂಚದ್ರಾವಿಡ'ದಲ್ಲಿ ಸೇರಿಸಲ್ಪಡುತ್ತಾರೆ. ಭಾಷೆ, ಜನಾಂಗಗಳ ವರ್ಗೀಕರಣದಲ್ಲಿ 'ದ್ರಾವಿಡ'ವೆಂಬುದೇ ಅಳತೆಗೋಲಾಗಿದೆ. ಕರ್ಣಾಟಕದಲ್ಲಿ ಅಶೋಕನ ಶಾಸನಗಳಿದ್ದು ಅವುಗಳಲ್ಲಿ ಒಂದರೊಳಗೂ ಈ ನಾಡಿನ ಹೆಸರಿಲ್ಲ. ಎರಡನೆಯ ಶತಮಾನದ ಟಾಲೆಮಿಯು ತಮಿಳು ನಾಡಿನ ಉತ್ತರಕ್ಕೆ 'ಅರಿಯಾಕೆ' (ಆರ್ಯರ ದೇಶ) ವೆಂದು ಹೇಳುತ್ತಾನೆ! ತಮಿಳು ಕಾವ್ಯಗಳಲ್ಲಿ ಇಡೈಯರ್, ವಡುಕರ್, ವಡವರ್ ಮರಾಡರ್, ಆಯರ್ (ಆರ್ಯ) ಇವೆಲ್ಲ ಪದಗಳನ್ನು ಸ್ವಲ್ಪ ಹೆಚ್ಚು ಕಡಿಮೆ ಒಂದೇ ಅರ್ಥದಿಂದ ಉಪಯೋಗಿಸಿದಂತಿದೆ. ಕ್ರಿ.ಶ. ೨ನೆಯ ಶತಮಾನದ ಸುಮಾರಿಗೆ ಅದನ್ ಎಂಬ ರಾಜನು ಕಾವೇರಿಯ ಉತ್ತರಕ್ಕೆ ದಂಡೆತ್ತಿ ಬಂದು ದಂಡಾರಣ್ಯದ ಕೆಲವೊಂದು ಭಾಗವನ್ನು ಗೆದ್ದುಕೊಂಡು ಆರ್ಯರನ್ನು ಸೋಲಿಸಿದ ಹಾಗೆ ತಮಿಳು ಕಾವ್ಯಗಳಲ್ಲಿ ವರ್ಣನೆಯಿದೆ.[೨೧] ಆದರೆ, ಇಲ್ಲಿ ತಮಿಳು ಕವಿಗಳು ಹೇಳಿದ ಆರ್ಯರು ಕನ್ನಡ ಹಟ್ಟಿಕಾರರಲ್ಲದೆ ಬೇರೆ ಯಾರೂ ಅಲ್ಲ. ಏಕೆಂದರೆ ೯ನೆಯ ಶತಮಾನದಲ್ಲಿ ಕರ್ಣಾಟವು ಗೋದಾವರಿಯ

ವರೆಗೆ ಇದ್ದಿತೆಂದು ಕವಿರಾಜಮಾರ್ಗದಲ್ಲಿದೆ. ಸ್ವಂತ ಮಹಾರಾಷ್ಟ್ರರು ಸಹ ಸುಮಾರಾಗಿ ಹೀಗೆಯೇ ಹೇಳುತ್ತಾರೆ.[೨೨] ಆದುದರಿಂದ ಕನ್ನಡ ನಾಡಿಗೇ 'ಆರ್ಯರ ನಾಡು' ಎಂದು ತಮಿಳು ಕವಿಗಳಲ್ಲಿ ಕೆಲವರ ಗ್ರಹಿಕೆಯಾಗಿದ್ದಿತೆಂದು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಎರಡನೆಯ ಶತಮಾನದಲ್ಲಿ ಕೃಷ್ಣಾತೀರದ ಕೆಳಗಿದ್ದ ಕರ್ನಾಟವು ೯ನೆಯ ಶತಮಾನದಲ್ಲಿ ನೃಪತುಂಗನ ಕಾಲಕ್ಕೆ ಗೋದಾವರಿಯ ವರೆಗೆ ಮೇಲಕ್ಕೆ ಹಬ್ಬಿತೆಂದೆನ್ನಬೇಕಾಗುತ್ತದೆ! ಆದರೆ, ಕನ್ನಡವು ಕಾಲಕ್ರಮದಲ್ಲಿ ದಕ್ಷಿಣಕ್ಕೆ ಸರಿದು ಸಣ್ಣಾದುದನ್ನು ಕಾಣಬಹುದೇ ಹೊರತು ಉತ್ತರಕ್ಕೆ ಹಬ್ಬಿದ್ದನ್ನು ಇತಿಹಾಸದಲ್ಲಿ ನೋಡಲಿಕ್ಕೇ ಸಿಗುವುದಿಲ್ಲ. ನೃಪತುಂಗನಿಗೆ ತನ್ನ ರಾಜ್ಯವೆಲ್ಲವೂ ಕರ್ನಾಟವೇ ಎಂದು ಹೇಳುವುದಿದ್ದರೆ ಅವನ ರಾಜ್ಯವು ನರ್ಮದೆಯ ವರೆಗೂ ಇದ್ದುದರಿಂದ ಅದನ್ನೆ ಕರ್ನಾಟದ ಉತ್ತರಮೇರೆಯೆಂದು ಬರೆದಿಡಬಹುದಾಗಿತ್ತು. ಆದರೆ, ಆಗ ಕರ್ನಾಟವು ನರ್ಮದೆಯಿಂದ ದಕ್ಷಿಣಕ್ಕೆ ಗೋದಾತೀರಕ್ಕೆ ಆದಕಾರಣ ೨ ರಿಂದ ೭ನೆಯ ಶತಮಾನದಲ್ಲಿ ಸುಮಾರು ನರ್ಮದೆಯ ವರೆಗೂ ಕರ್ನಾಟವೇ ಇತ್ತು. ಆದರು ೭ನೆಯ ಶತಮಾನದಲ್ಲಿ ಈ ದೇಶಕ್ಕೆ ಬಂದಿದ್ದ ಹೂಯನ್‌ತ್ಸಾಂಗನು ಮರವರನ್ನು (ಮರಹಟ್ಟರನ್ನು) ಮಹೋಲೋಚರೆಂದು ಕರೆದಿದ್ದಾನೆ. ಎರಡನೇ ಪುಲಿಕೇಶಿಯು ಬಾದಾಮಿಯಲ್ಲಿ ರಾಜಧಾನಿ ಮಾಡಿಕೊಂಡು ಆಳುತ್ತಿದ್ದು ಆತನು ಕರ್ನಾಟರಾಜನೆಂಬುದೂ ಸುಪ್ರಸಿದ್ಧವಿದ್ದು ಈ ಚೀನಿ ಪ್ರವಾಸಿಯು ಈ ನಾಡಿನ ಹೆಸರನ್ನು ಮಾತ್ರ ಹೇಳುವುದಿಲ್ಲ! ಮಹೋಲೊಚದ ಭಾಷಾಂತರವು ಮಹಾರಾಷ್ಟ್ರವಾಗುತ್ತದೆಂದು ಕೆಲವಿದ್ವಾಂಸರ ಮತವಿದೆ. ೧೩ನೆಯ ಶತಮಾನದ ಜನ್ನಕವಿಯ ಮಾತಿನಿಂದ ಈ ವಿಷಯಕ್ಕೆ ಸಂದೇಹವೆ ಉಳಿಯುವುದಿಲ್ಲ. ಹೊಯ್ಸಳರ ಆಸ್ಥಾನ ಕವಿಯಾದ ಜನ್ನನು ನರ್ಮದಾ-ಕಾವೇರಿಗಳ ನಡುವಿನ ನಾಡಿಗೆಲ್ಲ 'ಮಹಾರಾಷ್ಟ್ರ ಮಂಡಳ' ವೆಂದು ಕರೆದಿದ್ದಾನೆ![೨೪]

ಆದ್ದರಿಂದ, ಕನ್ನಡ, ಕರ್ನಾಟ ಎಂಬ ಹೆಸರಿಗೆ ಸಲ್ಲಬೇಕಾದ ಎಷ್ಟೋ ಮಹತ್ವದ ಸಂಗತಿಗಳ ಶ್ರೇಯಸ್ಸು ಒಂದೆಡೆಗೆ ಮಹಾರಾಷ್ಟ್ರವು ಸೆಳೆದುಕೊಂಡಿತು; ತೆಲುಗರೇ ಆಂಧ್ರರೆಂಬ ಗ್ರಹಿಕೆಯಾಗಿ ಪ್ರಾಚೀನ ಆಂಧ್ರ ಕರ್ನಾಟರು ಒಂದೇ ಎಂಬ ಮಾತು ಮುಂದೆ ಬರಲೊಲ್ಲದು; ಸಾತವಾಹನಾದಿ ರಾಜರ ಮಹಾಕಾರ್ಯದ ಶ್ರೇಯಸ್ಸು ತೆಲುಗರಿಗೆ ದೊರೆಯುತ್ತಲಿದೆ. ದ್ರವಿಡರೆಂದು ಈಗ ತಮಿಳರಿಗೇ ಮುಖ್ಯವಾಗಿ ಹೇಳುತ್ತಿರುವುದರಿಂದ ಪ್ರಾಚೀನ "ದ್ರಾವಿಡಸಂಸ್ಕೃತಿಯ ಮೇಲ್ಮೆಗೆ ಮೂಲಕಾರಣರು ತಮಿಳರೇ" ಎಂಬ ಭ್ರಮೆಯುಂಟಾಗಿ ಕನ್ನಡರಿಗೆ ಇದರಲ್ಲಿಯೂ ಶ್ರೇಯಾಂಶವು ದೊರೆಯುವುದಿಲ್ಲ! ಮಹಾರಾಷ್ಟ್ರವು ನರ್ಮದೆಯಿಂದ ತುಂಗಭದ್ರೆಯ ವರೆಗೆ ಇದ್ದಿತೆಂದು ಡಾ. ರಾಮಕೃಷ್ಣ ಭಂಡಾರಕರರು ಬರೆಯುತ್ತಾರೆ; ಡಾ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ಯರ ಅಭಿಪ್ರಾಯದಂತೆ ಪ್ರಾಚೀನ ತಮಿಳನಾಡಿನ ಉತ್ತರ ಮರ್ಯಾದೆ ಕಾರವಾರ.[೨೪] ಇವೆಲ್ಲ ಉಲ್ಲೇಖಗಳನ್ನು ನೋಡಿದರೆ ಕರ್ನಾಟಕ, ಕನ್ನಡನುಡಿ ಇವು ನಡುವೆ ಎಲ್ಲಿಂದ ಬಂದುವೆಂಬುದೇ ತಿಳಿಯದಾಗುತ್ತದೆ! ಭೂಮಿಯೊಳಗಿಂದ ಫಕ್ಕನೆ ಮೇಲೆ ಬಂದಿರಬೇಕು; ಇಲ್ಲವೆ ಮುಗಿಲಿನಿಂದ ತಟ್ಟನೆ ಕ್ರಿ.ಶ. ಐದು-ಆರನೆಯ ಶತಮಾನದ ಸುಮಾರಿಗೆ ನೆಲಕ್ಕಿಳಿದಿರಬೇಕು. ಈ ಸುಮಾರಿಗೆ ಇವರು ಹೊರಗಿನಿಂದ ಬಂದರೆನಬೇಕೆ? ಇತಿಹಾಸದಲ್ಲಿ ಇದಕ್ಕೆ ಸ್ವಲ್ಪವೂ ಆಧಾರ ಸಿಕ್ಕುವುದಿಲ್ಲ!

ನಮ್ಮ ಜನಾಂಗದವರಲ್ಲಿ ತಾವು ದ್ರಾವಿಡ ಸಂಬಂಧಿಗಳೆಂದು ಒಪ್ಪಿಕೊಳ್ಳುವುದಕ್ಕೆ ಸಿದ್ಧರಾಗಿರುವವರು ಬಹುತರ ಇಲ್ಲವೇ ಇಲ್ಲ! ತಾವು ಆರ್ಯರು, ಆರ್ಯರ ಒಂದಿಲ್ಲೊಂದು ಪಂಗಡಕ್ಕೆ ಸೇರಿದವರೆಂದು ತೋರಿಸಿ ಕೊಳ್ಳುವ ಪ್ರಯತ್ನದಲ್ಲಿಯೇ ಎಲ್ಲರೂ! 'ದ್ರಾವಿಡ'ರೆಂದರೆ ಹೀನರಲ್ಲ; ಅವರಿಗೂ ಒಂದು ಉಚ್ಚ ಸಂಸ್ಕೃತಿ ಯಿತ್ತು, ಎಂಬುದು ಸಿದ್ಧವಾದ ಮೇಲೆ ವಿಚಾರಶೀಲರಾದ ಕೆಲವು ಮುಂದಾಳುಗಳು, ತಾವು 'ದ್ರಾವಿಡರು' 'ಆರ್ಯರಿಗೂ ಕೆಲವು ಸಂಸ್ಕೃತಿಯನ್ನು ಕೊಟ್ಟ, ಆರ್ಯರಿಗಿಂತಲೂ ಪ್ರಾಚೀನವಾದ ಆ ಶ್ರೇಷ್ಠಜನಾಂಗಕ್ಕೆ' ಸಂಬಂಧಿಸಿದವರೆಂದು ಅಭಿಮಾನದಿಂದ ಹೇಳಿಕೊಳ್ಳಲು ಆರಂಭಿಸಿದ್ದಾರೆ. ಆದರೆ, ಹಿಂದಕ್ಕೆ ಇದಕ್ಕೆ ವಿಪರೀತವಾದ ಸ್ಥಿತಿಯಿದ್ದುದರಿಂದಲೇ ಹೊರಗಿನವರಿಗೆ ಇದು 'ಅರಿಯರ ನಾಡು' 'ಅರಿಯಾಕೆ' 'ಮಹಾರಾಷ್ಟ್ರ'ವೆಂದೇ ಭಾಸವಾಗಿದ್ದರೆ ಅದರಲ್ಲಿ ಆಶ್ಚರ್ಯವೇನು?

ಕನ್ನಡರು ಸಂಕ್ರಮಣಚಕ್ರದಲ್ಲಿ ಸಿಲುಕಿ ಸುತ್ತಾಡುತ್ತಿದ್ದುದೇ ಇಷ್ಟೆಲ್ಲ ದಿಗ್ಭ್ರಮೆಗಳಿಗೆ ಕಾರಣವಾಗಿದೆ.

ಟಿಪ್ಪಣಿಗಳು

೧. ನೀಲಗಿರಿಯ ತೋಡರಲ್ಲಿ ಮಾತ್ರ ಎಮ್ಮೆ ಪೂಜೆಯಿದೆ. ಹಿಂದೂ ದೇಶದಲ್ಲಿ ಎಮ್ಮೆ ಪೂಜಕರು ಇವರೊಬ್ಬರೆಯೆಂದು ತೋರುತ್ತದೆ. ನೋಡಿ. ಇರುಳರಲ್ಲಿ ಎಮ್ಮೆಕೋಣಗಳ ಮಾಂಸ ತಿನ್ನಬಾರದೆಂದು ಕಟ್ಟು ಇದೆ. E. Thurston Vol. II, P. 379

೨. Enthoven R. E., ***Castes and Tribes of Bombay,*** Vol. II P. 309

೩. i Nanjundayya H. V., ***Ethnological Survey of Mysore,*** ಕುರುಬ, ನೋಡಿ
ii Enthoven I 314
iii ಹನುಮಂತಯ್ಯ ವಿ. ಆರ್., ***ಕುರುಬರ ಚರಿತ್ರೆ*** : ಪು. ೩೫೦

೪. i Pro. Levi, ***Pre-Aryan and Pre-Dravidian,*** P. 199-126
ii B.C. Law, ***Some Krshatria Tribes in Ancient India,*** Vol. II. p. 230-251.
iii ***Indian Culture,*** Calcutta, Jan. 1935 p. 384-186

೫. B. C. Law: ***Some Ancient Indian tribes,*** Vol. II P. 50

೬. "ಇಂದ್ರಾ-ಪರ್ವತಾ" ಎಂಬ ಜೋಡು ದೇವತೆಯ ಹೆಸರು ಋಗ್ವೇದದಲ್ಲಿ ಬಂದುದೂ ಇಲ್ಲಿ ವಿಚಾರಾರ್ಹವಾಗಿದೆ. (೧. ೧೨೨. ೩; ೧೩೨. ೬) ಮಲ್ಹಾರಿ-ಮಾರ್ತಂಡನೆಂದೂ ಈ ದೇವತೆಗೆ ಹೆಸರಿದೆ. ಋಗ್ವೇದದಲ್ಲಿ 'ಇಂದ್ರಾ-ವಿಷ್ಣು' ದೇವತೆಯಿದೆ! ಸೂರ್ಯನಿಗೆ ವಿಷ್ಣುವೆಂದು ಹೇಳಲಾಗುತ್ತದೆ. ಆದುದರಿಂದ, ಇಲ್ಲಿ ಮಲ್ಲಾರಿ ಮಾರ್ತಾಂಡನೆಂದರೆ ವೈದಿಕ ಇಂದ್ರಾ-ವಿಷ್ಣುವೇ ಎಂದು ವ್ಯಕ್ತವಾಗುತ್ತಿದೆ. ವರ್ಹಾಟ, ಹುಶಂಗಾಬಾದಗಳ ಕಡೆಗೆ ಗುಡ್ಡಗಳನ್ನು ಸೂರ್ಯದೇವನೆಂದು ಪೂಜಿಸುವರು, ಎಂದು Encyclopaedia of Religion and Ethics ದಲ್ಲಿ ಉತ್ತರದ ದ್ರಾವಿಡರ ಬಗ್ಗೆ ಬರೆಯುವಾಗ ಹೇಳಿದೆ.

೭. Mac-donell, ***Vedic Mythology,*** P. 54

೮. ಜಯಕರ್ಣಾಟಕ ೧ನೆಯ ಸಂಪುಟ; ಪಂಡಿತ ಕೇಶವಶರ್ಮಾ ಗಲಗಲಿಯವರ ಲೇಖ : ಕವಿರಾಜಶೇಖರ

೯. Dr. Ghurye G. S : ***Caste and Race in India,*** P. 44

೧೦. 2nd Oriental Conference Proceedings P. 132

೧೧. Mac-donell, A. B. Keath, ***Vedic Index,*** Vol. II p. 259

೧೨. ***Mysore Gazetteer,*** Vol. II Part I. P. 18

೧೩. Indian Culture Journal of the Research Institute Calcutta, January 1935

೧೪. ***Epigraphia Indica,*** April 1930 ಸಂಚಿಕೆಯಲ್ಲಿ ಡಾ. ಡಿ. ಆರ್. ಭಂಡಾರಕರರು ಮಾಡಿದ ಚರ್ಚೆಯನ್ನು ಓದಿ

೧೫. ಋಗ್ವೇದದ ಋಚೆಗಳ ಭಾಷಾಂತರವನ್ನು ವಿದ್ಯಾನಿಧಿ ಸಿದ್ಧೇಶ್ವರಶಾಸ್ತ್ರಿ ಚಿತ್ರಾವ ಇವರ ಗ್ರಂಥದಿಂದ ಕೊಟ್ಟಿದ್ದು. ಆದಕ್ಕಾಗಿ ನಾನು ಅವರಿಗೆ ಋಣಿಯಾಗಿದ್ದೇನೆ.

೧೬. ***ವಿವಿಧ ಜ್ಞಾನವಿಸ್ತಾರ,*** ಜುಲೈ, ೧೯೨೨; ಪು. ೩೦೦

೧೭. ಮೇಲಿನದೆ ಆಗಸ್ಟ್; ೧೯೩೧

೧೮. i Alfred Master., ***Parallelisms in Indo-Aryan and Dravidian with especial reference to Marathi, Gujarathi and Kanarease"*** C. I. E. J. B. B. R. A. S. Vol V and VIII ನೋಡಿರಿ.
ii ನಾ. ಶ್ರೀ ರಾಜಪುರೋಹಿತ, ***ಕಾನಡಿ ಆಣೀ ಮರಾಠಿ***
iii ವಿಠ್ಠಲ ರಾಮಜೀ ಸಿಂಧೆ-ಕಾನಡಿ ಆಣೀ ಮರಾಠೀ (ಮರಾಠಿ ಭಾಷೇಚಿ ಘಟನಾ ಪರಿಶಿಷ್ಟ ನೋಡಿರಿ)
iv ಮಹಾರಾಷ್ಟ್ರದ ಮೂಲ ಪು. ೩೩-೩೪
v ***Influence of old Kannada on ಜ್ಞಾನೇಶ್ವರಿ*** Prof Jahagirdar R. V.

೧೯. ***Language : its nature, developement and origine:*** p. 147

೨೦. ಸ್ಮೃತಿಗಳ ಕಾಲನಿರ್ಣಯದ ಬಗ್ಗೆ ಶ್ರೀ. ಪಿ. ವಿ. ಕಾಣೆಯವರ "History of Dharmasastra Vol. I. ಆಧಾರವಾಗಿ ಅನುಸರಿಸಿದ್ದೇನೆ.

೨೧. Dr. Krishanaswamy Ayangar S., ***Some contrbutions of S. India to Indian culture***, P. 35
Satwats : 2nd Oriental Conference Proceedings P. 360

೨೨. "ಮಹಾರಾಷ್ಟ್ರದೇಶ, ಮರಾಠಾ ಸಮಾಜ ವ ಮರಾಠಿ ಭಾಷಾ ಹ್ಯಾಂಚೇ ಘಟನಾ ವರದಿಲೇಲ್ಯಾ ರೀತೀಸ ಖ್ರಿಸ್ತೋತ್ತರ ೬೦೦-೭೦೦ ಚ್ಯಾ ಸುಮಾರಾಸ ಝಾಲೀ-***ಮರಾಠೀ ಭಾಷಾ ಉದ್ಗಮ ವ ವಿಕಾಸ;*** ಪೃಷ್ಠ ೧೩೮.
ಇದರೊಡನೆ ಮಹಾರಾಷ್ಟ್ರದ ಮೂಲ ಪು. ೪೦-೪೫ ಓದಬಹುದು.

೨೩. ಜನ್ನ ***ಅನಂತನಾಥ ಪುರಾಣಂ*** ೧೪. ೪೭ರ ವಚನ

೨೪. i ***Epigraphia Indica,*** Vol. V. P. 188
ii ***Some contributions of S. India to Indian culture***

೭ನೆಯ ನೆಲೆ

ಗಂಡುಗಲಿಗಳು

'ದ್ರಾವಿಡರು ಯೋದ್ಧರಲ್ಲ; ಶಾಂತವಾದ ಜನಾಂಗ'ವೆಂದು ಕೆಲವರ ಅಭಿಪ್ರಾಯ. ಆದರೆ, ಇದು ಆರ್ಯರಿಗೂ ಈ ಜನಾಂಗಕ್ಕೂ ಸಂಬಂಧವು ಬರುವ ಮೊದಲಿನ ಸ್ಥಿತಿಯ ಕಾಲ್ಪನಿಕ ಚಿತ್ರವಾಗಿರಬೇಕು. ಆಗ ಸಹ ಇದು ಎಷ್ಟರ ಮಟ್ಟಿಗೆ ನಿಜವೊ ಎಂಬ ಬಗ್ಗೆ ಸಂದೇಹವಿದೆ. ಏಕೆಂದರೆ 'ದ್ರಾವಿಡರಿಗಿಂತ ಮೊದಲು ಇಲ್ಲಿ ನೆಲೆಗೊಂಡಿದ್ದ 'ಆಸ್ಟ್ರೋ-ಏಶಿಯಾಟಿಕ್' ಜನಾಂಗವನ್ನು ಹಿಂದಿಕ್ಕಿ ತಮ್ಮ ವರ್ಚಸ್ಸನ್ನು ಪ್ರಸ್ಥಾಪಿಸಲು ಇವರಿಗೆ ಹೋರಾಡಲೇ ಬೇಕಾಗಿರಬಹುದಲ್ಲವೆ, ಆ ಮೇಲೆ 'ದ್ರಾವಿಡರಲ್ಲಿ (ಹರಪ್ಪಾ, ಮೋಹೇಂಜೋದಾರೊದಂತಹ) ದೊಡ್ಡ ದೊಡ್ಡ ಪಟ್ಟಣಗಳನ್ನು ಕಟ್ಟಿಕೊಂಡು ಕೆಲವರೂ, ಹಿರೆಹೊಳೆಗಳ ಕೊಳ್ಳಗಳಗುಂಟ ಹಟ್ಟಿಗಳಲ್ಲಿ ಹಲವರೂ 'ಶಾಂತವಾಗಿ' ಕೆಲವು ಶತಮಾನಗಳ ವರೆಗೆ ದನಗಾರಿಕೆ, ಒಕ್ಕಲತನ, ವ್ಯಾಪಾರಗಳನ್ನೆ ಮುಖ್ಯ ಹೋರೆಗಳನ್ನಾಗಿಟ್ಟುಕೊಂಡು ಜೀವಿಸುತ್ತಿರಬಹುದು.

ಆದರೆ, ಋಗ್ವೇದಕಾಲದಿಂದ ಮುಂದೆ ದಾಸರೆಂಬ ಹೆಸರಿನಿಂದಾಗಲಿ, ಯದು-ತುರ್ವಶರೆಂಬ ಹೆಸರಿನಿಂದಾಗಲಿ ಕಾಣಸಿಕೊಳ್ಳುವ ಜನಾಂಗದವರೆಲ್ಲ "ಯೌಧೇಯರು;" "ಶೂರಸೇನರು;" 'ಪತ್ತಿ'ಗಳು. 'ಇಂದ್ರನು ಕುರಿಯಿಂದ ಸಿಂಹವನ್ನು ಗೆದಿಸಿದನು; ಕೊಡಲಿಯ ಕೆಲಸವನ್ನು ಸೂಜಿಯಿಂದ ಮಾಡಿಸಿದನು' ಎಂಬುದಾಗಿ ಋಗ್ವೇದದಲ್ಲಿ ವರ್ಣನೆಯಿದೆ. ಈ ವರ್ಣನೆಯಿಂದ ಇಂದ್ರನ ಶೌರ್ಯವು ವ್ಯಕ್ತವಾಗುತ್ತಿರುವಂತೆ ಇವನ ವಿರೋಧಿಗಳು ಸಹ ಎಷ್ಟೊಂದು ಬಲಶಾಲಿಗಳಾಗಿದ್ದರೆಂಬುದೂ ಚೆನ್ನಾಗಿ ಬೆಳಕಿಗೆ ಬರುತ್ತಲಿದೆ. 'ದ್ರಾವಿಡರು' ದುರ್ಬಲರಿದ್ದುದರಿಂದ ಆರ್ಯರಿಗೆ ಸೋತರೆಂದು ಬಲ್ಲಿದರು ಹೇಳುವುದಿಲ್ಲ. ಆರ್ಯರ ಹತ್ತಿರ ದ್ರಾವಿಡರಿಗಿಂತ ಹೆಚ್ಚಿನ ಯುದ್ಧೋಪಯುಕ್ತ ವಸ್ತುಗಳಿದ್ದುವು. ಆರ್ಯರ ಗೆಲುವಿಗೆ ಇದೇ ಮುಖ್ಯ ಕಾರಣ. "ದ್ರಾವಿಡರಲ್ಲಿ" ಕುದುರೆಗಳು ಇಲ್ಲದ್ದರಿಂದ ಶ್ರೇಷ್ಠ ಕುದುರೆಗಳೇ ಮುಖ್ಯವಾಹನವಾಗಿದ್ದ ಆರ್ಯರಿಗೆ ಅವರು ಈಡಾಗಲಿಲ್ಲವೆಂದು ಹ್ಯಾವೆಲ್ಲರ ಅಭಿಪ್ರಾಯವಿದೆ. ಉಗ್ರವಾದ ಸ್ವಾಭಿಮಾನಿಗಳೆದುರು ಶೂರರಿದ್ದರೂ 'ಶಾಂತ ಸ್ವಭಾವವಿದ್ದವರು' ಹಿಂಜರಿಯಬೇಕಾಗುವುದು; ಅನೇಕ ಕಡೆಗಳಲ್ಲಿ ಸೋತವರ ಸಂಸ್ಕೃತಿಯು ಗೆದ್ದವರ ಸಂಸ್ಕೃತಿಗಿಂತ ಹೆಚ್ಚು ಶ್ರೇಷ್ಠವಾದದ್ದಿರುತ್ತದೆ. ಹಾಗೆ "ದ್ರಾವಿಡರು" ಆರ್ಯರಿಗಿಂತ ಹೆಚ್ಚಿನ ಸಂಸ್ಕೃತಿಯವರಾಗಿದ್ದುದರಿಂದಲೇ ಸೋತರೆಂದು ಪ್ರತಿಪಾದಿಸುವವರು ಕೆಲರು.

ಇದೇನೇ ಇರಲಿ. ಹಟ್ಟಿಕಾರ (ದ್ರಾವಿಡ)ರು ಶೂರರಾದ ಜನಾಂಗದವರೆಂದು ತಮಿಳರ ಪ್ರಾಚೀನ ಕಾವ್ಯಗಳಿಂದಲೂ ಸಿದ್ಧವಾಗುತ್ತಲಿದೆ. ಅಲ್ಲಿ 'ಕುರುಂಬು' 'ಕುರುನಿಲ ಮನ್ನೆಯ'[೧] ಈ ಪದಗಳಿಗಿರುವ ಅರ್ಥದಿಂದ ಈ ಜನಾಂಗದ ಅರಸುತನದ ಬಗ್ಗೆ ಸಂದೇಹವೇ ಉಳಿಯುವುದಿಲ್ಲ. ಈ ಮೊದಲೇ ಒಂದೆಡೆಗೆ ಸೂಚಿಸಿರುವಂತೆ ಮನುವು ಕೂಡ ಇವರ ರಾಜಪದವಿಯನ್ನು ಒಪ್ಪಿಕೊಂಡಿದ್ದಾನೆ.

ಝುಲ್ಲೋಮಲ್ಲಶ್ಚ ರಾಜನ್ಯಾದ್ ವ್ರಾತ್ಯಾನಿಚ್ಛಿವಿರೇವ ಚ।
ನಟಶ್ಚ ಕರಣಶ್ಚೈವ ಖಸೋ ದ್ರವಿಡ ಏವ ಚ ॥ ೧೦. ೨೨॥

ಇಲ್ಲಿ ಹೇಳಿರುವವರೊಳಗೆ 'ದ್ರವಿಡ'ರನ್ನು ಮೊದಲು ತಕ್ಕೊಳ್ಳುವ. ಇವರು ಮೊದಲು ದನಗಾರರಾಗಿದ್ದರು. ಅವರು ಬಳಿಕ ರಾಜಪದವಿಯನ್ನು ಸಂಪಾದಿಸಿದರು. ಪ್ರೊ. ದೀಕ್ಷಿತರು ತಮ್ಮ ಗ್ರಂಥದಲ್ಲಿ ಬರೆಯುವುದೇನೆಂದರೆ:

> The evolution of the status of the tribal chief the head of the kingdom is clearly seen.....hte king is designated among other names by ಕೋ (ಗೋ) or ಕೋಣ meaning a cowherd......therefore by the term ಕೋಣ is meant that chief whose wealth was cattle.[೨]

ಇದೇ ಗ್ರಂಥದಲ್ಲಿಯೇ ಪಾಂಡ್ಯರಾಜರು ಹಟ್ಟಿಕಾರ-ದನಗಾರರ ಕುಲಕ್ಕೆ ಸೇರಿದವರೆಂದು ಪ್ರೊ. ದೀಕ್ಷಿತರು ಸಾಧಾರವಾಗಿ ತೋರಿಸಿಕೊಟ್ಟಿದ್ದಾರೆ. ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಕುರುಂಬರಂತೆ 'ಪೊಡುವ'ರೆಂಬ ಹಟ್ಟಿಕಾರರಾಜರ ಉಲ್ಲೇಖವಿದ್ದುದನ್ನು ಪ್ರೊ. ಪಿ. ಟಿ. ಶ್ರೀನಿವಾಸ ಅಯ್ಯಂಗಾರ್ಯರು ಹೇಳುತ್ತಾರೆ. ಅದು:

> "....the word Poduvar means heards-man chiefs and must refer to the rulars of the pastoral tribes."[೩]

ತಮಿಳರಲ್ಲಿ ಚೇರ ಮತ್ತು ಚೋಳ ಮನೆತನಗಳು ಬಹಳ ವಿಖ್ಯಾತ. ಆದರೆ, ಚೇರ ಮತ್ತು ಚೋಳರೆಂದರೆ ಯಾರು? ಇವರು ತಮಿಳನಾಡಿನ ಅತಿ ಪ್ರಾಚೀನ ರಾಜರು. 'ಮೂಲ ದ್ರಾವಿಡರೆಲ್ಲ ಒಂದು,' ಎಂಬ ಊಹೆಯು ನಿಜವಿದ್ದರೆ ಇವರು ಮತ್ತು ವಡುಕ ಹಟ್ಟಿಕಾರರೂ ಒಂದೇ ವಂಶಕ್ಕೆ ಸೇರಿದವರಾಗಿರಬೇಕಷ್ಟೆ? ಇವರೆಲ್ಲರೂ ಮೊದಲು ದನಗಾರರಾಗಿದ್ದುದು ನಿಜ. ಅದರಂತೆ, ಚೇರ ಮತ್ತು ಚೋಳವೆಂಬ ಈ ಹೆಸರುಗಳನ್ನು ನಿರೀಕ್ಷಿಸಿದರೂ ಇವರೆಲ್ಲ ಮೊದಲು ತೀರ ಹತ್ತುಗೆಯವರೆಂದೇ ವ್ಯಕ್ತವಾಗುತ್ತಿದೆ. ಚೇರರು ಮರವ (ಜಾಡ)ರ ಸಮೀಪ-ಬಂಧುಗಳು. ಮರವರಿಗೂ ಜಾಡಿಕೆ (ನೆಯ್ಕಾರಿಕೆ)ಗೂ ಅನ್ಯೋನ್ಯ ಸಂಬಂಧವು ಕಂಡು ಬರುವಂತೆ ಚೇರರಿಗೂ (ಚೀರ, ಚೇಲ) ವಸ್ತ್ರಗಾರಿಕೆಯೂ ಪರಸ್ಪರ ಸಂಬಂಧವಿರಲಿಕ್ಕಿಲ್ಲವೆ? ಜಾಡನಿಗೆ ತಮಿಳಿನಲ್ಲಿ ಚೇಡನೆಂಬರು. ಕೊನೆಯ ಡಕಾರವು ರಕಾರವಾಗಿ ಪರಿಣಮಿಸುವುದು ಅಪರೂಪವಲ್ಲ. ಚೋಳ ಶಬ್ದದಲ್ಲಿ ಇದೆಲ್ಲವನ್ನೂ ಮನಗಾಣಬಹುದು. ಚೋಳ=ಚೋಡ=ಚೋರ. ಆದುದರಿಂದ ವಡುಕ ಹಟ್ಟಕಾರರಾದ ಜಾಡರೇ ತಮಿಳು ನಾಡಿನ ಚೇರರಂದು ಹೇಳಬಹುದಾಗಿದೆ. ಪ್ರೊ. ದೀಕ್ಷಿತರು ಇನ್ನೂ ಒಂದು ಸೋಜಿಗದ ಸಂಗತಿಯನ್ನು ಹೇಳುತ್ತಿದ್ದಾರೆ

> (a) curiosity of warfare was to fell the guardian tree (ಕಾವಲ ಮರಂ) of the enemy and make out of the cut trunk a war drum. It would appear that each Tamil chief grew a special tree which was the symbol of his sovereignty. To fell that tree amounted to capturing the chieftain's flag.


ಬನವಾಸಿಯ ಚುಟುಕಲಾನಂದರಿಗೂ, 'ಕದಂಬ' ವೃಕ್ಷಕ್ಕೂ ಇದೇ ಬಗೆಯ ಸಂಬಂಧವಿದ್ದುದರಿಂದಲೇ ಅವರಿಗೆ ಕದಂಬರೆಂಬ ಹೆಸರು ಬಂದಿರಬಹುದಲ್ಲವೆ? ಒಂದೊಂದು ವೃಕ್ಷವಿಶೇಷದಲ್ಲಿ ಒಬ್ಬೊಬ್ಬ ವ್ಯಕ್ತಿಯ ಜೀವವು ಹುದುಗಿಕೊಂಡಿದ್ದು ಆ ಮರವನ್ನು ಕಡಿದರೆ ಅಥವಾ ಅದು ಏನೊಂದು ಕಾರಣದಿಂದ

ಸೂಚನೆ:
ಈ ವಂಶವೃಕ್ಷವು ವೇದಕಾಲದಿಂದ ಆರಂಭವಾಗಿದೆ. ಬ್ರಾಹ್ಮಣಕಾಲ, ಭಾರತಕಾಲದಿಂದ ಇಂದಿನವರೆಗಿನ ಹಬ್ಬುಗೆಯನ್ನು ಇದರಲ್ಲಿ ಕಂಡುಕೊಳ್ಳಬಹುದು. ಇದರೊಳಗಿನ ಹಲವು ಶಾಖೆಗಳು ಕೊನೆಕೊನೆಗೆ ಆರೇ(ಆರ್ಯ) ಮತ್ತು ತೆಲುಗು ಆದುದುವನ್ನೂ ಕಾಣಬಹುದು.

ಹಟ್ಟಿಕಾರ


ಅಖಿಲ ಭಾರ

ವೇದ



ಸೂಚನೆ:

ಇದು ಆರ್ಯ–ಪೂರ್ವ ಜನಾಂಗ. ಆದರೆ ಕಾಲಾಂತರದಲ್ಲಿ ಬೇರೆ ಬೇರೆ ಧರ್ಮ, ಬೇರೆ ಬೇರೆ ಜನಾಂಗಗಳ ಸಂಪರ್ಕಾದಿ ಕಾರಣಗಳಿಂದ ಇವರಲ್ಲಿ ಅನೇಕ ಜಾತಿಗಳು ಆದುವು. ಅನ್ನವ್ಯವಹಾರಾದಿಗಳು ಕಟ್ಟಾದವು. ಆದರೂ ಪ್ರಾಚೀನಕಾಲದಲ್ಲಿ ಇವರೊಳಗೆ ಅನ್ನವ್ಯವಹಾರವಷ್ಟೇ ಅಲ್ಲ; ಕನ್ಯಾಸ್ವೀಕಾರ ಮಾಡಿ ಮದುವೆಗಳೂ ಆಗಿವೆ. ರಾಷ್ಟ್ರಕೂಟರಿಗೂ ಗಂಗರಿಗೂ ಹೆಣ್ಣು–ಗಂಡು ಆಗಿವೆ. ಚಲುಕ್ಯರ ಮನೆಹೆಣ್ಣು ರಾಷ್ಟ್ರಕೂಟರಲ್ಲಿವೆ. ಸಾತವಾಹನರಲ್ಲಿ ಅಗ್ನಿಕುಲದ ಹೆಣ್ಣುಗಳಿದ್ದುದು ಇತಿಹಾಸದಿಂದ ಸಿದ್ಧವಾಗಿದೆ. ಆದಕಾರಣ, ಇಂದಿನ ನಮ್ಮ ಒಡಕು ಸಮಾಜಸ್ಥಿತಿಯ ಮೇಲಿಂದ ಹಿಂದಿನಕಾಲದ ಚಿತ್ರವನ್ನು ಚಿತ್ರಿಸಿಕೊಳ್ಳಲಾಗದು. ಇದರೊಳಗಿನ ಎರಡೆರಡು, ಮೂರು ಮೂರು ಮನೆತನಗಳಲ್ಲಿ ಬಂದ ಸಂಬಂಧ, ಆದ ಐಕ್ಯಗಳನ್ನು ಇಲ್ಲಿ ತೋರಿಸುವುದು ಅಶಕ್ಯವಾದುದರಿಂದ ನಿರುಪಾಯವಾಗಿ ಬಿಟ್ಟುಬಿಡಬೇಕಾಯ್ತು.



ಬಾಡಿದರೆ ಅದಕ್ಕೆ ಸಂಬಂಧವಿದ್ದ ಮನುಷ್ಯನ ಜೀವಕ್ಕೂ ಅಪಾಯ ಸಂಭವಿಸುವುದೆಂದು ನಮ್ಮ ಹಳ್ಳಿಗರಲ್ಲಿ ಇನ್ನೂ ದಂತಕಥೆಗಳಿವೆ. ಪ್ರಾಚೀನ ತಮಿಳರಲ್ಲಿ ಒಂದೊಂದು ಮರ ಒಬ್ಬೊಬ್ಬ ರಾಜರ ಜೀವಾಳದಂತಿದ್ದುದು ಪ್ರೊ. ದೀಕ್ಷಿತರ್ ಇವರ ಲೇಖನದಿಂದ ವ್ಯಕ್ತವಾಗುತ್ತಿದೆ. ಆದುದರಿಂದ, ಚೇರರೇ ಮೊದಲಾದ ಪ್ರಾಚೀನ ತಮಿಳು ರಾಜರೂ ಮರವರೂ ಆಪ್ತರೆಂದು ಹೇಳಬಹುದಲ್ಲವೆ?

ಇನ್ನು ಚೋಳ (ಚೋಡ)ರ ವಿಚಾರ. ಎರಡನೆಯ ನೆಲೆಯಲ್ಲಿ (ಪು. ೨೦-೨೫) ವಿವರಿಸಿದಂತೆ ಹಟ್ಟಿಕಾರರಲ್ಲಿ ಮೊದಲು 'ಚೂಡ (ಉಣ್ಣೆ-ಕೂದಲು) ಗಳ ವ್ಯವಹಾರಿಗಳಾಗಿದ್ದವರೇ ಚೋಳರೆಂದು ಅರಿತುಕೊಳ್ಳಬಹುದಾಗಿದೆ. ವಡುಕರಲ್ಲಿ 'ಕುಂತಲ'ರು ಹೇಗೊ ಹಾಗೆ ತಮಿಳರಲ್ಲಿ 'ಚೋಡ'ರು; ಎರಡರ ಅರ್ಥವೂ ಒಂದೇ. ಆದುದರಿಂದ. ತಮಿಳು ರಾಜರಲ್ಲಿ ಮರವರು ಸೇನಾಪತಿಗಳೂ ಮಂತ್ರಿಗಳೂ ಆಗಿದ್ದುದರಲ್ಲಿ ಸೋಜಿಗವೇನು? ಚೋಳರಾಜರ ಬಗ್ಗೆ ನಮ್ಮ ನಾಡಿನ ಜನಾಂಗದವರಲ್ಲಿ ಕೆಲವೊಂದು ಆತ್ಮೀಯ ಭಾವವಿದ್ದುದು, ಕಂಡುಬರುತ್ತದೆ. ಈ ಬಗೆಯ ಪ್ರೀತಿಯೇ ಕೊನರಿ ಕೇಶಿರಾಜನ 'ದೊರೆವಡೆದ ಚೋಳ ಪಾಲಕ ಚರಿತ'ವು ಮುಂದೆ ಬಂದಿತು; ಷಡಕ್ಷರ ಕವಿಯ ರಾಜಶೇಖರ ವಿಳಾಸವೆಂಬ ಕಾವ್ಯವಾಯಿತು. ವೀರಶೈವರ ಅರುವತ್ತುನಾಲ್ಕು ಪುರಾತನರೂ ತಮಿಳು ನಾಡಿನವರು!

ಆದರೆ, ಈ ಬಗೆಯ ಅಲ್ಪಸಲ್ಪ ಆತ್ಮೀಯತೆಗಿಂತಲೂ ದಾಯಾದಿತನವೆ ಪ್ರಬಲವಾಗಿದ್ದುದು ಗೋಚರ ವಾಗುತ್ತದೆ. ಗಡಸುಗಾರರಾದ ವಡುಕ ಹಟ್ಟಿಕಾರರಿಗೆ ಕಡವರು ಎಂದರೆ ಕಸುವುಳ್ಳವರೆಂದು ಹೆಸರಿತ್ತು. ಆದರೆ. ಅದನ್ನು ವಿಕಾರಗೊಳಿಸಿ ತಮಿಳರು ಇವರಿಗೆ ಕಳವರೆಂದರು.[೪] ಮುಯ್ಯಕ್ಕೆ ಮುಯ್ಯವೆಂಬಂತೆಯೇ ಚೋಳರಿಗೆ ಚೋರರೆಂಬ ಹೆಸರು ಬಂದಿತು![೫] ಚಲುಕ್ಯ, ರಾಷ್ಟ್ರಕೂಟ, ಗಂಗ, ಹೊಯ್ಸಳಾದಿ ವಡುಕರಿಗೂ ಚೋಳಚೇರ ಮೊದಲಾದವರಿಗೂ ಹದಿನೈದು-ಹದಿನಾರನೆಯ ಶತಮಾನದ ತನಕ ಎಷ್ಟೊಂದು ಸ್ಪರ್ಧೆಯಿತ್ತೆಂಬುದು ಸುಪ್ರಸಿದ್ಧವೆ ಇದೆ. ಚೋಳಕನ್ನೆಯನ್ನು ಕಲ್ಯಾಣದ ಚಲುಕ್ಯ ವಿಕ್ರಮಾದಿತ್ಯನು ಮದುವೆಯಾದನು. ಪೂರ್ವಚಾಲುಕ್ಯರೂ ಚೋಳರೂ ಒಂದೇ ಕುಟುಂಬದವರೆನಿಸುವಷ್ಟು ಅವರಲ್ಲಿ ಬಳಕೆಯಿತ್ತು. ರಾಷ್ಟ್ರಕೂಟ ಇಂದ್ರನು ಚಲುಕ್ಯ ರಾಜಕುಮಾರಿಯನ್ನು ಮದುವೆಯಾಗಿದ್ದನು. ಗಂಗರು ಮತ್ತು ರಾಷ್ಟ್ರಕೂಟರಲ್ಲಿ ವಿವಾಹಾದಿಗಳು ಬೇಕಾದಷ್ಟು ಆಗಿವೆ.

ಚೋಳ, ಚೇರರು ಅರಸುಕುಲದವರಾದರೆ ಅವರ ವಂಶ ಸಂಬಂಧಿಗಳೂ ಅದೇ ಜನಾಂಗದವರೂ ಆದ ವಡುಕ ಹಟ್ಟಿಕಾರರು ಸಹ ರಾಜನ್ಯರ ವರ್ಗದವರಾಗುವುದಿಲ್ಲವೆ? ನೆಯ್ಕಾರರು ಜಾಡರು ರಾಜನ್ಯರಾಗುವುದು ಸಾಧ್ಯವೆ? ಎಂದು ಒಂದು ಸಂದೇಹವು ತಲೆದೋರುವ ಸಂಭವವಿದೆ. "Sword follows the trade" ಎಂಬುದು ಸಾರ್ವಕಾಲಿಕಸತ್ಯ ವಾಣಿಜ್ಯವೆಲ್ಲಿಯೋ ಅಲ್ಲಿಯೇ ರಾಜವೈಭವ. ಇದನ್ನೆ ನಮ್ಮ ಪೂರ್ವಿಕರ ಸಾಂಕೇತಿಕ ಭಾಷೆಯಲ್ಲಿ ಇನ್ನೊಂದು ಬಗೆಯಿಂದ ಹೇಳಬಹುದು: ರಾಜನು ವಿಷ್ಣುವಿನ ಅಂಶ; 'ನಾವಿಷ್ಣುಃ ಪೃಥಿವೀ ಪತಿಃ' ವಿಷ್ಣುವಿಗೆ ಶ್ರೀದೇವಿ ಮತ್ತು ಭೂದೇವಿಯರು ಹೆಂಡಿರು. ವಿಷ್ಣುವು ಯಾವಾಗಲೂ ಇರುವುದು ಅತ್ತೆಯ ಮನೆಯಲ್ಲಿ! ಯಾರ ಕೈಯಲ್ಲಿ ವ್ಯಾಪಾರವೊ ಅವರ ಹತ್ತಿರವೇ ಧನಕನಕ. ಶ್ರೀದೇವಿ-ಭೂದೇವಿಯರ ತವರು ಮನೆ ಅದು. ಧನಕನಕವಿದ್ದಲ್ಲಿ ಅಧಿಕಾರ; ಒಡೆತನ ಎಂದರೆ ವಿಷ್ಣುಶಕ್ತಿಯು ಅಲ್ಲಿ ಬಂದೇ ಬರುವುದು.

ದನಗಾರಿಕೆಯ ಯುಗದಲ್ಲಿ 'ಗೋ'-ಪನು ಭೂ-ಪನಾಗಿದ್ದನು. ಮುಂದೆ ವಸ್ತ್ರಯುಗವು ಉದಯವಾಯ್ತು; ಜಾಡ, ಚೇರ, ಚೋಡ, ಚಾಲುಕ್ಯರು ರಾಜರಾದರು. ಹತ್ತಿಯು ಹಿಂದೂದೇಶದ ಹೊರತು ಹೊರಗೆ ಎಲ್ಲಿಯೂ ಬೆಳೆಯುತ್ತಿದ್ದಿಲ್ಲ. ಕಾಂಚಿ, ಪೈಠಣ, ಮಚ್ಛಲೀಪಟ್ಟಣಗಳು ಬಟ್ಟೆಗಳಿಗಾಗಿ ಬಹಳ ಪ್ರಖ್ಯಾತವಾಗಿದ್ದುವು. ಇಜಿಪ್ತ-ಗ್ರೀಸದತ್ತಣಿಂದ ಅಗಣಿತ ಸಂಪತ್ತು ಹಿಂದೂದೇಶಕ್ಕೆ ಈ ವ್ಯಾಪಾರದ ಮೂಲಕವಾಗಿ ಬರುತ್ತಿತ್ತು. ಆಗ ಸಂಪತ್ತಿನ ತವರುಮನೆಯೆಂದರೆ ಜಾಡರೇ. ಆದುದರಿಂದ, ಇವರಿಗೆ ಸಂಬಂಧಪಟ್ಟ ಜನಾಂಗದ ಕಡೆಗೆ ರಾಜಕೀಯ ಸೂತ್ರಗಳೂ ಬಂದಿರುವುದು ಸಹಜವಾಗಿದೆ. ಒಮ್ಮೆ 'ಗೊ-ಪನೇ ರಾಜನು; ಈಗ ಪಟ್ಟಕಾರ (ಹಟಕಾರ)ನೇ ಪಟ್ಟಾಧಿಕಾರಿ-ಅರಸು. ಪಟ್ಟಕಾರರೆಂದರೆ ಜಾಡರು; ಎಂದರೆ ಪೂರ್ವಸೂರಿಗಳ ಭಾಷೆಯಲ್ಲಿ ಯಾದವರು.

ಯದು-ತುರ್ವಶರು; (ಆ ಕಾಲದ) ರಾಜರ್ಷಿಗಳು. ರಾಜಾಧಿರಾಜರೆಂದು ಸಾವಿರಾರು ವರುಷಗಳಿಂದಲೂ ನಡೆದು ಬಂದ ಪರಂಪರೆಯು ಈ ರೀತಿಯಿಂದ ಅಕ್ಷರಶಃ ಸತ್ಯವಾಗಿದೆ.[೬]

ಕೌಟಿಲ್ಯ ಮೊದಲಾದವರು, 'ಅರ್ಥಶಾಸ್ತ್ರ'ದಲ್ಲಿ ರಾಜಕಾರಣಶಾಸ್ತ್ರವನ್ನು ಸೇರಿಸಿಬಿಟ್ಟಿದ್ದಾರೆ. Economics ಮತ್ತು Politics ಎಂದು ಈಗ ಅದರ ಎರಡು ಶಾಖೆಗಳಾಗಿವೆ. ಆದರೆ Economics ಎಂದರೆ ಅರ್ಥಶಾಸ್ತ್ರವೇ ಎಲ್ಲ ರಾಜಕಾರಣದ ಅಡಿಗಲ್ಲು. ಅರ್ಥದ ಹತ್ತಿರದಲ್ಲಿಯೆ ಅರಸುತನ. ಆದುದರಿಂದ, ಇವರೆಡೂ ಮೂಲತಃ ಒಂದೇ. ಆದರೆ, ಮುಂದೆ ಇದರ ಎಚ್ಚರವು ಬೇಗನೆ ಹಾರಿಹೋಯ್ತಿತು. ಒಕ್ಕಲುತನ, ವ್ಯಾಪಾರೋದ್ಯೋಗಗಳಿಂದ ಧನದ ಅಭಿವೃದ್ಧಿಯೆಂಬುದು ಮರೆತು ಹೋಗಿ ರಾಜರಲ್ಲಿ ಬಾಹುಬಲದಿಂದ ಧನಸಂಪಾದನೆ ಮಾಡುವ ರೂಢಿಯು ತಲೆದೋರಿತು. ಲಕ್ಷ್ಮಿಯ (ಇಡಾ ಅಥವಾ ಚಂದ್ರಾ) ಸ್ಥಾನವನ್ನು ದುರ್ಗೆಯು ವ್ಯಾಪಿಸಿದಳು. ಗೋ-ಪರೂ (ಗೌಡರೂ) ಪಟ್ಟಕಾರರೂ ಭುಜಬಲಶಾಲಿಗಳಾದ ಕ್ಷತ್ರಿಯರಾದರು. ರಾಜನ್ಯರಿಗೆ ಕ್ಷತ್ರಿಯರೆಂಬ ಹೆಸರು ಮುಂದೆ ಬಂದಿತು.[೭] 'ಕಳವರ್,' 'ಮರವರ್,' 'ಕುರುನಿಲ ಮುನ್ನೆಯರ್' ಇವರುಗಳ ಪರಾಕ್ರಮಕ್ಕೆ ಪ್ರಾಚೀನ ತಮಿಳು ಕಾವ್ಯಗಳೇ ಸಾಕ್ಷಿಯಾಗಿವೆ. ಈ ಜನಾಂಗದವರು ಆಗಾಗ್ಗೆ ತಮಿಳರ ಮೇಲೆ ಆಕ್ರಮಣ ಮಾಡುತ್ತಿದ್ದುದರಿಂದಲೆ ಅವರು ವಡುಕರಿಗೆ 'ಕಳವರ್' ಎಂದು ಹೆಸರಿಟ್ಟಿದ್ದರು. ಕ್ರಿ. ಪೂ. ೨೫೦ ರಲ್ಲಿ ಮೈಸೂರ ದಂಡಾಳುಗಳು ಚೋಳರಾಜನೊಡನೆ ಸಿಲೋನಿನ ಮೇಲೆ ದಾಳಿ ಮಾಡಿ ಅದನ್ನು ಗೆದ್ದುಕೊಂಡುದು ಸಿಲೋನಿನ ಕಾಗದ-ಪತ್ರಗಳಿಂದಲೇ ಗೊತ್ತಾಗುತ್ತಿದೆ.[೮]

'ಕಳವರ್' ಎಂದು ಯಾರನ್ನು ಹೀಯಾಳಿಸಿ ನುಡಿಯುತ್ತಿದ್ದರೋ ಅವರೇ ಕಳಭ್ರರೆಂಬ ಹೆಸರಿನಿಂದ ತಮಿಳು ನಾಡನ್ನು ಗೆದ್ದು ಅಲ್ಲಿ ರಾಜ್ಯವಾಳಿದರು (೭ನೆಯ ಶತಮಾನ). ಅಚ್ಯುತ ಕಳಭ್ರನೆಂಬ ರಾಜನು ಆರ್ಯ-ಸಂಸ್ಕೃತಿಯನ್ನು ತಮಿಳು ನಾಡಿನಲ್ಲಿ ಹಬ್ಬಿಸಿದನು.[೯] ವಡುಕ ಹಟ್ಟಿಕಾರರು ಆಯರ್, ಆರಿಯರ್ ಆದುದನ್ನು ಈ ಮೊದಲೆ ಹೇಳಿದೆ. ಆದುದರಿಂದ ಆರ್ಯ-ಸಂಸ್ಕೃತಿಯ ಭಾಗೀರಥಿಯನ್ನು ತಮಿಳುನಾಡಿಗೆ ತಂದ ಶ್ರೇಯಸ್ಸು, ರಾಮೇಶ್ವರನಿಗೆ ಈ ಗಂಗೋದಕದಿಂದ ಮೊದಲು ಅಭಿಷೇಕ ಮಾಡಿಸಿದ ಮೊದಲನೆಯ ಮಾನವು ಈ ಜನಾಂಗಕ್ಕೇ ಸಲ್ಲತಕ್ಕುದಾಗಿದೆ. ಪ್ರಾಚೀನ ತಮಿಳು ಕಾವ್ಯಗಳಲ್ಲಿ ಉಲ್ಲೇಖಿತರಾದ 'ಕುರುನಿಲಯನ್ನೆಯರ' ಅರ್ವಾಚೀನ ಕಾಲದ ಅವಶೇಷಗಳೆ ದಕ್ಷಿಣ ಕರ್ಣಾಟದಲ್ಲೆಲ್ಲ ತುಂಬಿಕೊಂಡಿರುವ ಪಟ್ಟ-ಪಾಳ್ಯಗಳು.[೧೦] ಹಟ್ಟಿಕಾರ-ಕುರುಬರಲ್ಲಿರುವ ಪುರಾತನ-ಸಿದ್ಧವೀರರ ಹಾಡುಗಳನ್ನು ಸಂಗ್ರಹಿಸಿ ಅಚ್ಚುಹಾಕಿಸಿದರೆ ಇವರ ಕಡುಗಲಿತನದ ಪ್ರಾಚೀನ ಪರಂಪರೆಯು ಇನ್ನೂ ಚೆನ್ನಾಗಿ ಬೆಳಕಿಗೆ ಬರುವಂತಿದೆ. ಶ್ರೀಮಾನ್ ಕಂದಾಡೆ ಕೃಷ್ಣಯ್ಯಂಗಾರರು ಒಂದು ಮಹತ್ವದ ಲೇಖನದಲ್ಲಿ ಈ ಜನಾಂಗದ ಬಗ್ಗೆ ಬರೆದಿರುವುದೇನೆಂದರೆ.

> "ಶೌರ್ಯವೇ ಈ ಪಾಳೆಯಗಾರನ ಸರ್ವಸ್ವ. ಎಲ್ಲಕ್ಕೂ ಮೂಲ...... ಸ್ವಂತ ಶೌರ್ಯ ಸಾಹಸಗಳಿಂದ ಕೋಟೆಗಳನ್ನು ಕಟ್ಟಿಕೊಂಡು ಯಥಾಶಕ್ತಿ ಪಾಳಯವನ್ನು ರಚಿಸಿಕೊಂಡು ಮೆರೆದ ಈ ಗುಂಪಿನವರು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಎಲ್ಲೆಲ್ಲಿಯೂ ಇದ್ದವರು. ಗೌಡ, ನಾಯಕ, ರಡ್ಡಿ (ದೇಸಾಯಿ) ಎಂಬುವು ಬೇರೆ ಬೇರೆ ಪ್ರದೇಶಗಳಲ್ಲಿ ಅವರಿಗೆ ಸಲ್ಲುತ್ತಿದ್ದ ಹೆಸರುಗಳು."[೧೧]

ಪಟ್ಟಿ-ಪಾಳಯಗಳನ್ನು ಕಟ್ಟಿಕೊಂಡ ಪತ್ತಿ-ಪದಾತಿ ಅಥವಾ ಇಂದಿನ ಪಾಯಿಕ (ಪೈಕ)-ಹಳಪೈಕ, ಹಳಬರು ಶೌರ್ಯ ಧೈರ್ಯಗಳಿಗಾಗಿ ಎಂದಿನಿಂದಲೂ ಬಹಳ ಹೆಸರಾದವರು. ವಿಜಯನಗರದ ಗಂಡುಗಲಿಗಳಲ್ಲಿ ಇವರು ಪ್ರಮುಖರಾಗಿದ್ದರೆಂದು ಎಂಥೋವೆನ್‌ರು ಬರೆಯುತ್ತಾರೆ.[೧೨] ಕುರುಬರಲ್ಲಿ ತಾವು 'ಬಲ್ಲಾಳ ರಾಯನ ಕುಲ'ದವರೆಂಬ ನೆನಹು ಮಿಣಿಮಿಣಿಯಾಗಿ ಇನ್ನೂ ಜೀವಂತವಿದೆ. ಎಷ್ಟೋ ಕುರುಬರು ತಾವು 'ಚಂದ್ರ'ವಂಶಿಗಳು ಎಂದು ಹೇಳಿಕೊಳ್ಳುವರು.[೧೩] ಅರಸು ಜಾತಿಯವರಿದ್ದಾರೆ. 'ರಾಜು' ಎಂಬ ಅಡ್ಡಹೆಸರಿನ ಪ್ರಸಿದ್ಧ ವ್ಯಕ್ತಿಗಳ ಆಧುನಿಕ ಹೆಸರುಗಳನ್ನು ಎಷ್ಟೋ ಜನರು ಕೇಳಿರಬಹುದು. ಅವರೆಲ್ಲ ಹಟ್ಟಿಕಾರ ಜನಾಂಗದವರೇ. ಇವರಲ್ಲಿ 'ಸಾಮಂತ' ಕುರುಬರೂ ಹಲವರುಂಟು.

ಪ್ರಾಚೀನಕಾಲದ ರಠಿಕ-ರಥಿಕ-ರಾವುತರು ಈ ಜನಾಂಗದಲ್ಲಿಯೆ ಹುಟ್ಟಿದರು. ಅಂಡೆಕುರುಬರ ಇತಿಹಾಸವನ್ನು ಪರಿಶೋಧಿಸಿದರೆ ಇದಕ್ಕೆ ಆಧಾರಗಳು ದೊರೆಯುತ್ತವೆ. ಇವರಿಗೆ 'ಅಂಡೆವಜೀರ'ರೆಂದೂ ಹೆಸರಿದೆ.

> And Kurubas consider themselves superior to both, claim to have been a warrior caste and themselves Ande-Rauts.[೧೪]

ಇಂಗ್ಲೀಷ ಸೈನಿಕರಿಗೂ ಮೀರಿನಿಂತ ಹೈದರನ ದಂಡಾಳುಗಳಾರು? ಈ ಹಟ್ಟಿಕಾರರು-ಪಾಳೆಯಗಾರರು.

> The Kurubas formed an important fighting element in the armies of Haider Ali and the Ankushagiri paligars, and several fiets of militery still remain in the possession of Inamdars of Ande caste. Their favourite caste title is Nayak.[೧೫]

ಸೇಲಂ ಗೆಜೆಟಿಯರಿನಲ್ಲಿ ಹೇಳಿದ ಈ ಜನಾಂಗದ ಒಳಬಣಗಳ ಹೆಸರುಗಳ ಬಹಳೇ ಅರ್ಥಪೂರ್ಣವಾಗಿವೆ. 'ರಾಜಕುಲ,' ಗೌಡಕುಲ,' 'ಅರಸುಕುಲ,' 'ಸಂಗಮಕುಲ,' 'ಒಡೆಯರ ಕುಲ' 'ಸಾಮಂತ ಕುಲ' ಈ ಹೆಸರುಗಳಲ್ಲಿ ಎಷ್ಟೊಂದು ಇತಿಹಾಸವು ಹುದುಗಿಕೊಂಡಿದೆ! ಈ ಜನಾಂಗವೆ ನಮ್ಮ ನಾಡಿನ ಶೌರ್ಯ-ವೀರ್ಯದ ಖಣಿಯೆಂದು ಈ ಹೆಸರುಗಳು ಎಷ್ಟು ಚೆನ್ನಾಗಿ ಸಿದ್ಧಪಡಿಸುತ್ತಲಿವೆ!

ದಕ್ಷಿಣ ಕರ್ಣಾಟದ ಹಟ್ಟಿಕಾರ-ದನಗಾರರಷ್ಟೇ, ಪ್ರಾಚೀನ ಕಾಲದ ಉತ್ತರ ಕರ್ಣಾಟ ಎಂದರೆ ವಿದರ್ಭದ ಕಡೆಯ ಹಟ್ಟಿಕಾರರೂ (ಧನಗರ)ರೂ ಪರಾಕ್ರಮ, ಪೌರುಷದಲ್ಲಿ ಹೆಸರಾದವರು. ಹಟ್ಟಿಕಾರರೆಂದು ಮರಾಠರಲ್ಲಿ ಒಳಭೇದವಿದೆ. ಆರೇ ಮಾತಿನಲ್ಲಿ ಇವರಿಗೆ ಹಟಗಾರರೆಂಬುವರು. ಅಲ್ಲದೆ, 'ಬಾರಗಿ ಧನಗರ' (ದನಗಾರ) ಎಂದೂ ಹೆಸರು.[೧೬] ಐನ್-ಎ-ಅಕಬರಿಯಲ್ಲಿ 'ಇವರು ಬಹಳ ಸ್ವಾಭಿಮಾನಿಗಳೂ ಶೂರರೂ ಆದ ರಾಜಪುತ್ರ (ರಾಜಪುತ) ರೆಂದು ಹೇಳಲಾಗಿದೆ.[೧೭] ಜಹಾಂಗೀರನು ತನ್ನ ಆತ್ಮಚರಿತ್ರದಲ್ಲಿ ಇವರಿಗೆ ಬಾರಗಿಮರಾಠರು ಎಂದಿದ್ದಾನೆ.[೧೮] ವಿಜಯನಗರದ ದಂಡಿನಲ್ಲಿದ್ದ ಪಾಳೆಯಗಾರರಿಗೂ ಬಾರಗಿಗಳೆಂದು ಮುಸಲ್ಮಾನರು ಹೇಳುತ್ತಿದ್ದರು.[೧೯] ಬಾರಗಿಯೆಂಬುದರ ವ್ಯುತ್ಪತ್ತಿಯ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಎನ್‌ಥೊವೆನ್‌ರು ಬಾರ್ಗಿ ಎಂಬುದು ಪರ್ಶಿಯನ್ ಶಬ್ದವಿದ್ದು ಅದರ ಅರ್ಥ ರಾವುತರೆಂದು ಹೇಳುತ್ತಾರೆ. ಮಹಮ್ಮದೀಯರ ಕಾಲದಲ್ಲಿ ದಂಡಾಳುಗಳಿಗೆಲ್ಲ ಸಾಮಾನ್ಯವಾಗಿ ಬಾರ್ಗಿ ಎಂದು ಕರೆಯುತ್ತಿರಬೇಕು; ಅಹಮ್ಮದ ನಗರಿನ ಬಾರ್ಗಿಗಳು ಬಹಳ ಗಟ್ಟಿಗರೂ ಶ್ರಮಸಹಿಷ್ಣುಗಳೂ ಆಗಿದ್ದರೆಂದು ವರ್ಣನೆಗಳಿವೆ. ಶಿವಾಜಿಯ ಅಜ್ಜನು (ತಾಯಿಯ ತಂದೆ) ಜಾಧವನು ಬಾರಗಿ ಎಂದು ಹೇಳಿದೆ.[೨೦] ಶಿವಾಜಿಯ ದಂಡಿನಲ್ಲಿ ಮುಖ್ಯವಾಗಿ ಹಟ್ಟಿಕಾರ ದನಗಾರರೇ ಹೆಚ್ಚಾಗಿದ್ದರು.

> "The most trusted of Shivaji's foot-men and many of the bravest Maratha Generals among whom the Hatkars were the most distinguished, belong to this tribe."

ಈ ದನಗಾರ (ಧನಗರ)ರ ಬಗ್ಗೆ ಕಾಪ್ಟನ್ ಫಿಡ್ಜ್-ಜೆರಾಲ್ಡನು ಬರೆಯುವುದೇನೆಂದರೆ:

> The (the Hatkars) declare that they migrated from the north, to this part of India many years ago. The Hatkars were all Bargi Dhangars, or the Shephords with spears.[೨೧]

ಈ ಹಟ್ಟಿಕಾರರ ಕೈಗುಣವು ಬ್ರಿಟಿಶ ಸೇನಾಪತಿಗಳಿಗೂ ಚೆನ್ನಾಗಿ ಗೊತ್ತಿದೆ. ಇವರ ಪುಂಡಾಟಿಕೆಯನ್ನು ಅಡಗಿಸುವುದಕ್ಕಾಗಿ ಎಷ್ಟೊ ಸಾರೆ ಕ್ರೂರವಾದ ಉಪಾಯಗಳನ್ನು ಯೋಜಿಸಿದ್ದಾರೆ.[೨೨] ವರ್‍ಹಾಡದಲ್ಲಿ ದನಗಾರರಷ್ಟೆ ಅಲ್ಲ; ಹಳಬರೆಂಬ ಹೆಸರಿನವರೂ ಇದ್ದಾರೆ. ಇವರು ಸೈನಿಕರು ಬಹಮನಿಗಳ ದಂಡಿನಲ್ಲಿ ಮುಖ್ಯವಾಗಿ ವರ್‍ಹಾಟದ ದಂಡಾಳುಗಳೇ ಇರುತ್ತಿದ್ದರು.[೨೩] ಇವರೆಲ್ಲ ಮುಖ್ಯವಾಗಿ ಪತ್ತಿಗಳೇ.

They would appear to been have all foot men. To this day the temper of the Hatgar is said to be obstinate and quarrel-some.[೨೪]

ತುಂಬಾ ದೃಢ ನಿಶ್ಚಯಿಗಳು, ಯುದ್ಧಪ್ರಿಯರು. ಪ್ರಾಚೀನ ಕಾಲಕ್ಕೆ ವಿಂಧ್ಯದಿಂದ ನೀಲಗಿರಿಯ ವರೆಗಿನ ನಾಡಿನ ವೀರರೆಲ್ಲ ಈ ಪತ್ತಿಗಳು, ಹಟ್ಟಿಕಾರರು.

ಉತ್ತರಾಪಥದ ಸಾಮ್ರಾಟನಾದ ಹರ್ಷವರ್ಧನನನ್ನು ಹೆದರಿಸಿ ಹಿಂದಕ್ಕಟ್ಟಿದ ಎರಡನೆಯ ಪುಲಕೇಶಿ ಮಹಾರಾಜನ ಕಡುಗಲಿಗಳಾರು? ಈ ಪುಲಿಕೇಶಿಯು ವಾತಾಪೀ ಪುರವರಾಧೀಶ್ವರ. ಹಲವು ಹೊಸ ಜನಾಂಗಗಳು ಬಂದು ನೆಲಸಿದ ಇಂದಿನ ಕಾಲದಲ್ಲಿಯೂ ಈ ಬಾದಾಮಿನಾಡಿನ (ವಿಜಾಪೂರ ಜಿಲ್ಲೆ) "ಬೆನ್ನೆಲುವು" (Back-bone) ಮುಖ್ಯ ಜನಾಂಗವು ಹಟ್ಟಿಕಾರರೇ ಆಗಿದ್ದಾರೆ ಎಂದಮೇಲೆ ಅಂದಿನ ಸ್ಥಿತಿಯ ಬಗ್ಗೆ ಕೇಳುವುದೇನು? ಈ ನಾಡೇ ಇವರದು. ವಿಂಧ್ಯದ ವರೆಗೂ ಪ್ರಬಲರಾಗಿದ್ದರು. ಹಿಂದಕ್ಕೆ ಬೇಡಪಡೆ, ಬಿಲ್ಲವರ ದಂಡುಗಳು ಪರಾಕ್ರಮವನ್ನು ತೋರಿಸಿಲ್ಲವೆಂತಲ್ಲ. ಆದರು ಇವರು ಈ ನಾಡಿನ ಬಹು ಸಂಖ್ಯಾಕರೂ ಪ್ರಮುಖರೂ ಆದ ಹಟ್ಟಿಕಾರರ ಅಂಕೆಯಲ್ಲಿಯೇ ಇದ್ದು ಕೆಲಸಮಾಡಬೇಕಾಗುತ್ತಿರಬೇಕು. ರಥಿಕರೂ (ರಾವುತರೂ), ಯೋಧರೂ (ಆನೆಯ ಮೇಲಿಂದ ಯುದ್ಧಮಾಡತಕ್ಕವರು), ಸೇನಾಪತಿಗಳೂ ಬಹುತರವಾಗಿ ಹಟ್ಟಿಕಾರ ವರ್ಗದೊಳಗಿನ ಮೇಲ್ತರಗತಿಯವರೇ ಇರುತ್ತಿರಬೇಕು. ಬೇಡರೂ ಬಿಲ್ಲವರೂ ಮೇಲಣ ಅಧಿಕಾರಗಳನ್ನು ಪಡೆದವರಾಗಿದ್ದರೆ ಇಂದು ಇಷ್ಟು ವಿಪನ್ನಾವಸ್ಥೆಯಲ್ಲಿರುವುದೇ ಸಾಧ್ಯವಿದ್ದಿಲ್ಲ; ಹಲಕೆಲವು ಸಂಸ್ಥಾನ, ಜಹಗೀರುಗಳಾದರೂ ಅಲ್ಲಿ ಇಲ್ಲಿ ಉಳಿದಿರಬೇಕಾಗಿತ್ತು. ಸುರಪುರದಂತಹ ಒಬ್ಬಿಬ್ಬರ ಹೊರತು ಈ ಜನಾಂಗದ ಅರಸುಮನೆತನದವರ ಹೆಸರೇ ಕೇಳಲಿಕ್ಕೆ ಸಿಕ್ಕುವದಿಲ್ಲ.

ನಮ್ಮ ನಾಡಿಗರು ಗಂಡುಗಲಿಗಳ ಕುಲದವರೆಂಬುದು ಹಳ್ಳಿಗರ ಹಾಡುಗಳಿಂದಲೂ ಕಂಡುಬರುತ್ತಲಿದೆ. ಹಳ್ಳಿಯ ಹೆಣ್ಣುಮಕ್ಕಳು ತಮ್ಮ ಅಣ್ಣತಮ್ಮಂದಿರನ್ನು ಕುರಿತು ಹೇಗೆ ಹಾಡುತ್ತಾರೆಂಬುದನ್ನು ನೋಡಿ.

ಹಂಡಬಂಡದ ಕುದುರೆ ಗೊಂಡೆಯದ ಕಡಿವಾಣ।
ಕಂಡೆನಾ ಊರ ತೆವರೊಳಗೆ ॥
ಕಂಡೆನಾ ಊರ ತೆವರೊಳಗೆ ನನ ತಮ್ಮ।
ದಂಡಾಡಿ ದುರ್ಗ ಹೊಕ್ಕಽನು ॥

ಸರಿಗೆ ಕೊಂಡೆಯ ಹಾಗೆ ತಿರುಗಿ ಬಂದಿವೆ ಮೀಸೆ।
ಕದಿರಿನಲಿ ಬಾಳ ಚೆಲುವ ನನ್ನ ತಮ್ಮಯಗೆ।
ಕರಿಬೇವಿನ ದೃಷ್ಟಿ ಮುರಿದೇನು।

ಕುದುರೆಯನು ಕುಣಿಸುತ ಆನೆಯನು ನಡಿಸುತ।
ಅರಗಿಳಿಗೆ ಮಾತ ಕಲಿಸುತ ॥
ಮರಿಗುದುರೆ ಫೇರಿ ತಿರುಹುತ ಬರುತಾನೆ।
ಬರಿಗೊಡದಮ್ಮ ಬದಿಗಾಗೆ

ಸರಕಾರವೆಂಬುವುದು ದರಕಾರ ನಮಗಿಲ್ಲ।
ಸರಕಾರದೊಳಗೆ ಸರಿಪಾಲು।
ಸರಕಾರದೊಳಗೆ ಸರಿಪಾಲು ತರುವಂಥ।
ಸರಜ ತಮ್ಮಯ್ಯ ಮನೆಯೊಳಗೆ ॥[೨೫]

ಹೀಗಿದು ನಮ್ಮ ನಾಡಿನ ಜನಜೀವನದ ಚಿತ್ರವು! ನಮ್ಮ ಜನರು ಹಿಡಿಯುವ ಕೋಲು (ಬಾಣ), ಬಡಿಗೆಗಳು ಈಗ ಸೌಮ್ಯ ಸ್ವರೂಪವನ್ನು ತಾಳಿದ್ದರೂ ಕನ್ನಡರ ಮೊದಲಿನ ಇರುವನ್ನು ಸೂಚಿಸಲು ಸಮರ್ಥವಾಗಿವೆ. ಬಂಡಿಗಳು ಈಗ ಬರಿ ಒಕ್ಕಲತನಕ್ಕೆ ಉಪಯೋಗಿಸಲ್ಪಡುತ್ತಿರುವವಾದರೂ ಹಿಂದಕ್ಕೆ ಬಂಡಣ (ಯುದ್ಧ) ದಲ್ಲಿ ಹಗೆಗಳನ್ನು ಒಕ್ಕಲಿಕ್ಕಿ ಬರುವುದಕ್ಕೆ ಬಹಳೇ ಉಪಯುಕ್ತ ವಾಹನಗಳಾಗಿದ್ದುವು. ಸಾಧಾರಣವಾಗಿ ಊರೂರಿಗೂ ಕಾಣಲಿಕ್ಕೆ ಸಿಕ್ಕುವ ಮಾಸತಿಕಲ್ಲು, ವೀರಗಲ್ಲುಗಳು ಈ ಹಟ್ಟಿಕಾರ ತುರುಕಾರರ ಶೌರ್ಯ, ಧೈರ್ಯ, ಸಾಹಸಗಳನ್ನೇ ಸಾರುತ್ತಿಲ್ಲವೆ? ಜೀವದ ಹಂಗು ತೊರೆದು ಈ ಬಗೆಯಾಗಿ ಕಾದುವ ಪರಾಕ್ರಮಶಾಲಿಗಳಾದ ಗಂಡುಗಲಿಗಳ ಬೆಂಬಲವಿದ್ದ ಯಾವ ರಾಜನನ್ನು ಜಯಲಕ್ಷ್ಮಿಯು ಬಂದು ವರಿಸಲಿಕ್ಕಿಲ್ಲ?

ಇಂತಹ ಗಂಡುಗಲಿಗಳಿದ್ದುದರಿಂದಲೇ ಬಂಗಾಲದ ರಾಜರು ಕರ್ಣಾಟದಿಂದ ದಂಡಾಳುಗಳನ್ನು (recruit) ಕರೆದೊಯ್ಯುತ್ತಿದ್ದರು.[೨೬] ಅರಿಯರಾದ ನಮ್ಮ ಮರವ ಹಟ್ಟಿಕಾರರನ್ನು ಒಬ್ಬ ಕವಿಯು ಹೀಗೆ ವರ್ಣಿಸುತ್ತಾನೆ:[೨೭] "ದೃಢ ಲಘು ಶ್ಯಾಮಾಂಗಾನ್, ಸಹಮಾನ್, ಅಭಿಮಾನ್-ಕಲಹಶೀಲಾಂಶ್ಚ." ಪ್ರಾಕೃತಗ್ರಂಥಗಳಲ್ಲಿ "ಮರಹಟ್ಟಬಲ"ದ ಉಲ್ಲೇಖಗಳಿವೆ. ಕವಿರಾಜ ರಾಜಶೇಖರನು ಕರ್ಣಾಟದ ಗಂಡುಗಲಿಗಳನ್ನು ಕುರಿತು ಬರೆಯುವುದೇನೆಂದರೆ:[೨೮]

ಕರ್ಣಾಟೋ ಯುದ್ಧತಂತ್ರೇ ಚತುರಮತಿಃ
ಸಮರಕರ್ಮಣಿ ನಿಸರ್ಗೋದ್ಭಟಾ ಏವ ಕರ್ಣಾಟಾಃ

ಇದೇ ಕವಿಯು ಇನ್ನೊಂದೆಡೆಯಲ್ಲಿ ಮುಕ್ತಕಂಠದಿಂದ ಹೀಗೆ ಸ್ತುತಿಸಿದ್ದಾನೆ: 'ಕಿಂ ಬ್ರೂಥ!........ ಅಖಂಡಿತ ಪುರುಷಾಕಾರಾ ಹಿ ಕರ್ಣಾಟಾಃ! 'ಮಹಾರಾಷ್ಟ್ರ ಚೂಡಾಮಣಿ'ಗಳ ವಂಶಸ್ಥನಾದ ಒಬ್ಬ ಮಹಾಕವಿಯು ಮಾಡಿದ ವರ್ಣನೆಯಿದು! ಇದರಲ್ಲಿ ಎಳ್ಳಷ್ಟೂ ಸುಳ್ಳಿಲ್ಲ.

ಈ ಮಾತಿಗೆ ಕರ್ಣಾಟ ಇತಿಹಾಸವೇ ಸಾಕ್ಷಿಯಾಗಿದೆ. ಶಾತವಾಹನರಿಂದ ಕರ್ಣಾಟದ ಇತಿಹಾಸ ಕಾಲಕ್ಕೆ ಆರಂಭವಾಗುವುದು. ಸಾತವಾನರಿಗೆ ಆಂಧ್ರರು, ಆಂಧ್ರಭೃತ್ಯರೆಂದು ಪುರಾಣಗಳು ಹೇಳುತ್ತವೆ. ಸ್ಮಿತ್ ಮೊದಲಾದ ಇತಿಹಾಸಕಾರರು (ತೆಲುಗರೆಂಬ) ಭ್ರಮೆಯನ್ನುಂಟುಮಾಡುವ ಸಂಧಿಗ್ಧಾರ್ಥವುಳ್ಳ ಈ ಹೆಸರನ್ನೇ ಸ್ವೀಕರಿಸಿದ್ದುದು ಶೋಚನೀಯವಾಗಿದೆ, ಎಂದು ಆಧುನಿಕ ಸಂಶೋಧಕರು ಅಭಿಪ್ರಾಯಪಡುತ್ತಲಿದ್ದಾರೆ. ಡಾಕ್ಟರ ವ್ಹಿ. ಎಸ್. ಸುಖಟನಕರರು ಈ ಬಗ್ಗೆ ಒಂದು ಮಹತ್ವದ ಲೇಖನವನ್ನು ಪ್ರಕಟಿಸಿದ್ದಾರೆ. ತಿರುಮಲೆ ತಾತಾಚಾರ್ಯರೂ ಈ ಮಾತನ್ನು ಇನ್ನೂ ನಿಃಸಂದಿಗ್ಧ ರೀತಿಯಲ್ಲಿ ಬರೆದು ಶಾತವಾಹನರು ಕರ್ಣಾಟರೇ ಎಂದು ನಿರ್ಧರಿಸಿದ್ದಾರೆ. ಇವರಿಬ್ಬರೂ ಸಂಶೋಧಕರ ಅಭಿಪ್ರಾಯದಂತೆ ಸಾತವಾಹನರ ಮೂಲಸ್ಥಾನವು ಬಳ್ಳಾರಿ ಜಿಲ್ಲೆ.[೨೯] ಬಳ್ಳಾರಿ ಜಿಲ್ಹೆಯು ವಿಜಾಪುರದಂತೆಯೇ ಈಗಲೂ ಹಟ್ಟಿಕಾರ-ಕುರುಬರ ಆಗರವೆಂದು ಅಲ್ಲಿಯ ಗ್ಯಾಝಿಟಿಯರಿನಿಂದ ಗೊತ್ತಾಗುತ್ತಿವೆ. ಸಾತವಾಹನರು ಆಂಧ್ರರೆಂಬುದರ ಅರ್ಥವನ್ನು, ಈ ಮೊದಲಿನ ವಿಚಾರಕ್ರಮಕ್ಕೆ ಅನುಸರಿಸಿ, ಇವರು ಅಂಡೆಕುರುಬರು ವರ್ಗಕ್ಕೆ ಸೇರಿದವರೆಂದು ಗ್ರಹಿಸಬಹುದಾಗಿದೆ. ಶಾತವಾಹನ ಶಬ್ದಕ್ಕೆ ಏನು ಅರ್ಥವಿರಬಹುದೆಂದು ಹಲವು ತರ್ಕವಿತರ್ಕಗಳು ಈವರೆಗೆ ಆಗಿವೆ. ಇವರ ನಾಣ್ಯಗಳ ಮೇಲೆ ಎತ್ತು, ಮರಗಳ ಚಿಹ್ನಗಳಿದ್ದುದು ವಿಚಾರಣೀಯವಾಗಿದೆ. ಪುಲುಮಾಯಿ, ಚುಟುಕುಡಾನಂದರ ನಾಣ್ಯಗಳ ಮೇಲೆ ಗಿಡದ ಚಿಹ್ನವಿದೆ.[೩೦] ಆದುದರಿಂದ ಶಾತವಾಹನವೆಂಬಲ್ಲಿ (ಶಾತ=ಸಾದೋಂ) (ಮುಂಡ ಭಾಷೆ) ಕುದುರೆ-ರಾವುತರು. 'ಶಾತ' ಶಬ್ದವು ಶಾಕ (ಗಿಡ)ವೆಂಬರ್ಥಸೂಚಕವಾಗಿರಲಿಕ್ಕಿಲ್ಲವಷ್ಟೆ? ಕಕಾರವು ತಕಾರವಾದದನ್ನು ಕೆಳಗೆ-ತೆಳಗೆ ಇಂತಹ ಶಬ್ದಗಳಲ್ಲಿ ಕಾಣಬಹುದಾಗಿದೆ. ಆದರಂತೆ ಮೊದಲು ಶಾಕವೆಂದಿದ್ದುದೇ ಮುಂದೆ ಶಾತವಾಗಿ ಪರಿಣಮಿಸಿರಲಿಕ್ಕಿಲ್ಲವಷ್ಟೆ? ಇವರ ಹೆಸರಿನಿಂದಲೇ ನಡೆವ 'ಶಕ'ವರುಷವೆಂದು ಹೇಳುವಲ್ಲಿ ಈ ಸಂದೇಹಕ್ಕೆ ಇನ್ನೂ ಆಸ್ಪದವು ದೊರೆಯುತ್ತಿದೆ. ಆದುದರಿಂದ, ಶಾತವಾಹನರು ಮರವರಾಗಿರಬಹುದೇನೋ ತಿಳಿಯದು.

ಬನವಾಸಿಯಲ್ಲಿ ಆಳಿದ ಚುಟುಕಡಾನಂದರು ಶಾತಕರ್ಣಿಗಳ ಒಂದು ಶಾಖೆಯವರು. ಇವರ 'ಕಾವಲ ಮರವು' (guardian tree) ಕದಂಬ. ಆದಕಾರಣ ಶಾತವಾಹನರಿಗೂ ಒಂದೊಂದು ಕಾವಲ ಮರವು ಇರಬೇಕೆಂದೆನಿಸುತ್ತದೆ.

ಶಾತವಾಹನರಿಗೆ ಶಾತಕರ್ಣಿಗಳೆಂದು ಹೇಳುವ ಪರಿಪಾಠವಿದೆ. ಶಾತವೆಂಬ ಪದವು ಎರಡರಲ್ಲಿಯೂ ಕಾಣಿಸಿಕೊಳ್ಳುವುದು. ಶಾತ(ಕ)ವು ವಾಹನ (ಧ್ವಜ?)ವಾಗಿ ಉಳ್ಳಂತಹರೆಂದು ಇವರಿಗೆ ಶಾತವಾಹನರೆಂದು ಹೆಸರು ಬಂದಿರಬೇಕಲ್ಲವೆ? ಇನ್ನು ಎರಡನೆಯ ಹೆಸರಿನೊಳಗಿನ (ಶಾತ) ಕರ್ಣಿ ಪದಕ್ಕೇನು ಅರ್ಥ? ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಶಾತಕರ್ಣಿ ಇದನ್ನು 'ನೂರುವರ್ ಕಣ್ಣರ್' ಎಂದು ಭಾಷಾಂತರಿಸಿಕೊಂಡುದಾಗಿ ಪ್ರೊ. ಪಿ. ಟಿ. ಶ್ರೀನಿವಾಸ ಅಯ್ಯಂಗಾರ್ಯರು ಹೇಳುತ್ತಾರೆ.[೩೧] 'ಕಣ್ಣರ್' ಇವರು ಯಾರಿರಬಹುದು? ಮನುಸ್ಮೃತಿಯ "ಝಿಲ್ಲೋಮಲ್ಲಶ್ಚ" ಎಂಬ ಶ್ಲೋಕದಲ್ಲಿ ವ್ರಾತ್ಯಕ್ಷತ್ರಿಯರಲ್ಲಿ 'ನಟ'ರೊಡನೆ 'ಕರಣ'ರ ಹೆಸರು ಬಂದಿದೆ. ಈ ಕರಣರೂ ಪ್ರಸ್ತುತ 'ಕಣ್ಣರೂ' ಒಂದೇ ಆಗಿರಬಹುದೇ? ಇತಿಹಾಸ ಸಂಶೋಧಕರಾದ ರಾಜವಾಡೆಯವರು ಸೂಚಿಸಿರುವಂತೆ ಕಣ್ಣರೂ (ಕರಣ) ನಾಟರೂ ಸೇರಿ ಕಣ್ಣಾಡರು-ಕರಣಾಟರು ಆಗಿರುವುದೂ ಸಾಧ್ಯವಿಲ್ಲವೇ? ಅಂತು, ಇಲ್ಲಿ ಶಾತಕರ್ಣಿಗಳ ಈ ವಂಶನಾಮದಿಂದಲೂ ಇವರು ಕಣ್ಣಾಡರಿಗೇ ಸಂಬಂಧಪಟ್ಟವರೆಂದು ಕಂಡು ಬರುತ್ತಿದೆ! ಸಾಲದುದಕ್ಕೆ ಇವರಿಗೆ ಕುಂತಲ ಸಾತಕರ್ಣಿ'ಗಳೆಂದು ಹೆಸರು ಬೇರೆ!

'ಕುಂತಲದೇಶದ ರಾಜನ ಅಂತಃಪುರದಲ್ಲಿ ಪ್ರಾಕೃತ ಭಾಷೆಯೆ ಇದ್ದಿತೆಂದು' ಹಿರಿಯರು ಹೇಳುತ್ತಿದ್ದುದನ್ನು ರಾಜಶೇಖರನು ಬರೆದಿಟ್ಟಿದ್ದಾನೆ. ಅಂತಃಪುರದಲ್ಲಿ ಪ್ರಾಕೃತಭಾಷೆಯು ನಡೆಯುತ್ತಿದ್ದ ಮಾತ್ರಕ್ಕೆ ಅವರು' ಮನುವು ಹೇಳುವ 'ಕರಣ'-ಕಣ್ಣಾಡ (ದ್ರಾವಿಡ) ಕುಲದವರಲ್ಲವೆಂದು ಸಿದ್ಧವಾಗುವುದಿಲ್ಲ. ರಾಜಾಧಿರಾಜರಾಗಿದ್ದವರಿಗೆ ಆರ್ಯರು ತಮ್ಮ ಹೆಣ್ಣುಮಕ್ಕಳನ್ನು ಧಾರೆಯೆರೆದು ಕೊಡುತ್ತಿದ್ದುದನ್ನು ಇತಿಹಾಸವು ಹೇಳುತ್ತಿದೆ. ಇಂತಹ ಆರ್ಯ ಮಹಿಳೆಯರು ಅಂತಃಪುರದಲ್ಲಿ ಪ್ರಾಕೃತವನ್ನಾಡುತ್ತಿರುವುದು ಸಹಜವಿದೆ. ಈ ಶಾತಕರ್ಣಿಗಳು ತಮ್ಮ ಗೋತ್ರ ಹೇಳುವುದನ್ನು ನೋಡಿದರೆ ಡಾ. ದೇವದತ್ತ ಭಂಡಾರಕರರು ಪ್ರತಿಪಾದಿಸಿರುವಂತೆ ಆ ಕಾಲಕ್ಕೆ ಅನುಲೋಮ, ಪ್ರತಿಲೋಮ ವಿವಾಹಗಳು ರೂಢಿಯಲ್ಲಿದ್ದುವೆಂಬ ಮಾತು ನಿಜವೆಂದು ತೋರುತ್ತದೆ. ಈ ವಿಷಯದಲ್ಲಿ ಆರ್ಯ (ಆರೇ) ಮತ್ತು ಕರ್ಣಾಟರಲ್ಲಿರುವ ವಂಶನಾಮಗಳನ್ನು ಸರಿಹೋಲಿಸಿ ನೋಡುವ ಹಾಗಿದೆ. ಪ್ರಾಚೀನ ತಮಿಳು ಕಾವ್ಯಗಳ ಕಾಲದಿಂದ ವಿಖ್ಯಾತರಾದ ಕಣ್ಣಾಡ ಮನ್ನೆಯರು ಆರ್ಯರಾಗಿ ಮಾನೆ ಆದರು. ಇದರಂತೆ ದಳವಾಯಿ-ದಳವಿ; ಕಂಬಳಿ-ಕಾಂಬಳೇ; ಕದಂಬ-ಕದಮ; ಸಾಮಂತ-ಸಾವಂತ; ಸಾತವಾಹನ-ಸಾಹುಅಣ-ಚಹ್ವಾಣ; ದನಗಾರ-ಧನಗರ; ಕನ್ನಡ-ಕಾನಡೇ; ಮರವ-ಝಾಡೇ-(ಜಾಡ)-ಜಾದವ-ಯಾದವ; ಹೊಯ್ಸಳ∠ಪೊಯ್ಸಳ ∠ಬೋಸಳೆ; ಚಾಳುಕ್ಯ-ಸಾಳುಂಕಿ; ಇತ್ಯಾದಿ.

'ಸಾಳಿ'ಗಳು ಕ್ಷತ್ರಿಯರೆಂದು ಹೇಳುವುದುಂಟು. ಸಾಳಿ ಮತ್ತು ಸಾಳುಂಕಿಗಳು ಒಂದೇ ಜನಾಂಗದವರಾಗಿರಬೇಕು. ಸಾಳುಂಕಿಗಳ ಮೊದಲಿನ ಹೆಸರು ಚಾಲುಕ್ಯವೆಂದು ಗ್ರಹಿಕೆಯಿದೆ. ಸಾಳಿಗಳು ಈಗ ನೇಯ್ಕಾರಿಕೆಯಲ್ಲಿ ಹೆಸರಾದವರು. ಚಾಲುಕ್ಯರ ರಾಜಧಾನಿಯಾಗಿದ್ದ ಪೈಠಣ, ಬಾದಾಮಿಗಳ ಸುತ್ತಲಿನ ಪ್ರದೇಶದಲ್ಲಿರುವ ದೇವಾಂಗದವರ ಪ್ರಸಿದ್ಧಿಯನ್ನು ನೋಡಿದರೆ ಚಾಲುಕ್ಯರೂ ಜಾಡರ-ಮರವರ ಪಂಗಡಕ್ಕೆ ಸೇರಿದವರಾಗಿರಬೇಕೆಂದು ಗೋಚರವಾಗುತ್ತದೆ. ಚೋಳ, ಕೇರಳ, ಪಾಂಡ್ಯ, ಶ್ರೀಹರ್ಷರ ದಂಡುಗಳನ್ನು ದುವ್ವಾಳಿಸಿದ ತಮ್ಮ ಸೈನ್ಯಕ್ಕೆ ಚಾಲುಕ್ಯರು. 'ಕರ್ಣಾಟಕ ಬಲ' ವೆಂದು ನಾಮಕರಣ ಮಾಡಿದ್ದರು.

ರಾಷ್ಟ್ರಕೂಟರ ಬಗೆಗಂತೂ ಸಂದೇಹವೆ ಇಲ್ಲ. ಇವರ ಚಿಹ್ನವು (emblem) 'ನೇಗಿಲು' ಎಂದು ರಾವ ಬಹದ್ದೂರ ಸಿ. ಹಯವದನರಾಯರು ಕಂಡು ಹಿಡಿದಿರುವರು.[೩೨] ಸ್ಮಿತ್ ಮೊದಲಾದ ಇತಿಹಾಸಕಾರರ ಅಭಿಪ್ರಾಯದಂತೆ ಇವರು 'The indigenous tribes of the Deccan'; ಇಲ್ಲಿಯ ಜನಾಂಗ; ಅಚ್ಚಕೆಚ್ಚಿನ ಕರ್ಣಾಟರು. ರಾಷ್ಟ್ರಿಕರು-ರಾಷ್ಟ್ರಕೂಟರೆಂಬ ಇವರ ಹೆಸರಿನಿಂದಲೂ ಇವರು ನಮ್ಮ ನಾಡವರು ಎಂಬ ಮಾತು ನಿದರ್ಶನಕ್ಕೆ ಬರುತ್ತಿವೆ. ರಾಷ್ಟ್ರಕೂಟರಿಗೆ ವಲ್ಲಭ (ಬಲ್ಲಹ)ರೆಂದು ಹೆಸರಿತ್ತು. ವಲ್ಲಭನೆಂದರೆ ಗೋವಳರಲ್ಲಿ

ಮುಖ್ಯನು. ವಲ್ಲಭನೆಂದು ಮಹಾಭಾರತದಲ್ಲಿ ಗೋವಳನಿಗೆ ಹೆಸರಿದೆ (೨೦.೪೦.೬) ಆದುದರಿಂದ ರಾಷ್ಟ್ರಕೂಟರು. ವಲ್ಲಭರು, ಎಂದರೆ ನಮ್ಮ ನಾಡಗೌಡರು. ಪಾಟೀಲರೆಂದರೂ ಇದೇ ಅರ್ಥ. 'ಪಟ್ಟಿಲ' (ಪಾಟೀಲ)ರೆಂದರೆ ಹಟ್ಟಿಕಾರರು; ಗೋವಳರು; ಗೌಡರು. ಆದುದರಿಂದ, ಪಟ್ಟಿಲ (ಪಾಟೀಲ)ರೆಂದರೂ ಗೌಳ-ಗೌಡರೇ. ನಮ್ಮ ನಾಡವರು, ಇವರೇ ರಾಷ್ಟ್ರಕೂಟರು.

ವಿಜಯನಗರದ ಅರಸರಾದ ಹುಕ್ಕ-ಬುಕ್ಕರು ಕುರುಂಬರೆಂದು ಕೆಳದಿ ನೃಪವಿಜಯದಲ್ಲಿದೆ. ವಿದ್ಯಾರಣ್ಯರು ಕಾಲಜ್ಞಾನದಲ್ಲಿ ಅವರನ್ನು "ಕುರುವಂಶ ಪ್ರಸೂತಿಜೌ" ಎಂದು ವರ್ಣಿಸಿದ್ದಾಗಿದೆ! ಕೆಳದಿಯ ಅರಸರು ಮಲವರೆಂದು ಹೇಳುವುದುಂಟು. ಮಲವರು ಹಟ್ಟಿಕಾರರಲ್ಲಿ ಅಗ್ರೇಸರರು. ಕ್ರಿ. ಶ. ಎರಡನೆಯ ಶತಮಾನದ ತಮಿಳು ಕಾವ್ಯಗಳಲ್ಲಿ ಇವರ ವರ್ಣನೆಗಳು ಸಿಕ್ಕುತ್ತವೆ. ಗಂಗರ ಬಗ್ಗೆ ಈ ಮೊದಲೆ ಹೇಳಿದೆ. ಗಂಗರು ಹೋದರೂ ತುರ್ವಸುಗಳ ವಂಶವು ನಮ್ಮ ನಾಡಿನೊಳಗಿಂದ ಸಂಪೂರ್ಣವಾಗಿ ನಾಮಶೇಷವಾಗಿಲ್ಲ. ಬೆಳಗಾಂವಿ ಜಿಲ್ಲೆಯ ಎಷ್ಟೋ ದೇಸಾಯರುಗಳೂ ಗೌಡರೂ ತುರುಕಾರರ ಪಂಗಡದವರಾಗಿದ್ದುದು ಸುಪ್ರಸಿದ್ಧವೇ ಇದೆ. ಅಲ್ಲದೆ, ಉತ್ತರ ಕರ್ಣಾಟದ ಹಲಕೆಲವು ದೇಸಾಯರು, ತಾವು ರಟ್ಟ (ರಡ್ಡಿ?) ವಂಶದವರೆಂದು ಅಭಿಮಾನಪಡುವದುಂಟು. ಈ ಜನಾಂಗದ ಸ್ತ್ರೀಯರು ಸಹ ಅಸಾಧಾರಣಕರ್ತೃತ್ವಶಾಲಿಗಳಾಗಿದ್ದಾರೆ. ಪುಲಿಮಾಯಿ, ಪುಲಿಕೇಶಿ, ವಿಕ್ರಮ, ಗೋವಿಂದ, ಕೃಷ್ಣ, ಧ್ರುವ, ಬೂತುಗ, ಬುಕ್ಕ ಮೊದಲಾದ ಕಡುಗಲಿಗಳನ್ನು ಹೆತ್ತ ತಾಯಂದಿರ ಯೋಗ್ಯತೆಯೇನು ಸಣ್ಣದೇ? ಈ ಜನಾಂಗದಲ್ಲಿ ಹೊರಟಷ್ಟು ಕರ್ತೃತ್ವಶಾಲಿಗಳೂ ಲೋಕವಿಖ್ಯಾತರೂ ಆದ ಸ್ತ್ರೀಯರು ಬೇರೆ ಯಾವ ಸಮಾಜದಲ್ಲಿಯೂ ಮುಂದೆ ಬಂದಿಲ್ಲವೆಂದು ಹೇಳಿದರೆ ಅಷ್ಟೇನೂ ಅತಿಶಯೋಕ್ತಿ ಯಾಗಲಾರದು. 'ಹಾಟಕ' ಎಂದರೆ ವಿದರ್ಭದೇಶದ ಸ್ತ್ರೀಯರು ವೇದಕಾಲದಿಂದಲೂ ಸುವಿಖ್ಯಾತರಾಗಿದ್ದಾರೆ. ಲೋಪಾಮುದ್ರೆ, ದಮಯಂತಿ, ರುಕ್ಮಿಣಿ ಮೊದಲಾದವರು ಈ ನಾಡಿನವರೇ. ಸಾತಕರ್ಣಿಗಳ ರಾಜ್ಞಿಯರ ಔದಾರ್ಯ, ಧರ್ಮಬುದ್ಧಿಗಳನ್ನು ಸಾರುತ್ತಿರುವ ಶಾಸನಗಳು ನಾಸಿಕದ ಹತ್ತಿರ ಈಗಲೂ ಇವೆ. ಬಾದಾಮಿ ಚಾಲುಕ್ಯ ವಿಕ್ರಮನ ಅಣ್ಣ, ಚಂದ್ರಾದಿತ್ಯನ ಹೆಂಡತಿಯಾದ ವಿಜಯಭಟ್ಟಾರಿಕೆಯು ಒಂದು ನಾಡಿನ ಆಧಿಪತ್ಯವನ್ನು ನಡೆಸುತ್ತಿದ್ದಳು. ಇವಳೇ ಎರಡನೆಯ ಪುಲಿಕೇಶಿಯ ಸೊಸೆ. ವಿಜಯಾಂಬಿಕೆಯೆಂಬ ಒಬ್ಬ ಕವಿಯಿತ್ರಿಯ ಯಶೋದುಂದುಭಿಯು ಸಂಸ್ಕೃತ ಸಾಹಿತ್ಯದಲ್ಲೆಲ್ಲ ಕೇಳಬರುತ್ತಿದೆ. ಮೊದಲು ಹೇಳಿದ ವಿಜಯ ಭಟ್ಟಾರಿಕೆಯೇ ವಿಜಯಾಂಬಿಕೆಯೆಂದು ಶ್ರೀ ಪಿ. ವಿ. ಕಾಣೆ ಅವರ ಅಭಿಪ್ರಾಯವಿದೆ.[೩೩] ಇವಳಿಗೆ ತನ್ನ ಕಾವ್ಯಶಕ್ತಿಯಲ್ಲಿ ತುಂಬ ಆತ್ಮವಿಶ್ವಾಸವಿದ್ದಂತೆ ತೋರುತ್ತದೆ. ಇವಳ ಗ್ರಂಥಗಳು ದೊರೆತಿಲ್ಲ. ಆದರೂ ಇವಳ ಒಂದು ಪದ್ಯದಿಂದಲೇ ವಿಜಯಾಂಬಿಕೆಯ ವೈಶಿಷ್ಟ್ಯವು ವ್ಯಕ್ತವಾಗುತ್ತಿದೆ.

ಏಕೋ ಭೂನ್ನಲಿನಾತ್, ತತಶ್ಚಪುಲಿನಾತ್ ವಲ್ಮೀಕತಶ್ಚಾಪರಃ।
ತೇ ಸರ್ವೇ ಕವಯೋ ಭವಂತಿ ಗುರುವಃ ತೇಭ್ಯೋ ನಮಸ್ಕುರ್ಮಹೇ।
ಅರ್ವಾಂಚೋ ಯದಿಗದ್ಯಪದ್ಯರಚನೈಃ ಚೇತಶ್ಚ ಮತ್ಕುರ್ವತೇ।
ತೇಷಾಂ ಮೂರ್ಧ್ನಿ ದದಾಮಿ ವಾಮಚರಣಂ ಕರ್ಣಾಟ-ರಾಜಪ್ರಿಯಾ॥

ಈ ಪದ್ಯದಲ್ಲಿ ಈ ಕರ್ಣಾಟ ರಾಜಪ್ರಿಯೆಯ ಆತ್ಮವಿಶ್ವಾಸವನ್ನು ವ್ಯಕ್ತಮಾಡುವ ಬಗೆಯು ಇಂದಿನ ಬರ್ನಾರ್ಡಶಾನನ್ನು ಸಹ ಹಿಂದಿಕ್ಕಬಹುದು. ಕನ್ನಡ ಗಂಡುಗಲಿಗಳ ಮನೆತನದವಳು; ಸಿರಿ-ಸರಸ್ವತಿಯರ ವರಕೃಪೆಗೆ ಪಾತ್ರಳಾದವಳು; ಇವಳ ಬಾಯಿಯಿಂದ ಈ ಬಗೆಯ ಗಡುಸು ಮಾತು ಹೊರಬಿದ್ದರೆ ಸೋಜಿಗವೇನು. ಈ ಸ್ವಾಭಿಮಾನವು ಹುರುಳಿಲ್ಲದ ಒಣಹೆಮ್ಮೆಯ ಮಾತಲ್ಲ. ಏಕೆಂದರೆ, ಇವಳ ಕಾವ್ಯಶಕ್ತಿ ಬುದ್ಧಿವಂತಿಕೆಗಾಗಿ ರಾಜಶೇಖರ, ಭೋಜ ಮಹಾರಾಜರಂತಹ ಮಹಾಕವಿಗಳೂ ಬೆರಗಾಗಿದ್ದಾರೆ.

'ಕಾಲಿದಾಸನ ನಂತರ ಸುಮಧುರಶೈಲಿಯಲ್ಲಿ ಸಂಸ್ಕೃತವನ್ನು ಯಾರಾದರೂ ಬರೆದಿದ್ದರೆ
ಅವಳು ವಿಜಯಾಂಬಿಕೆಯೇ; ಇವಳು ಪ್ರತ್ಯಕ್ಷ ಕರ್ಣಾಟಸರಸ್ವತಿಯೇ ಸರಿ!

ಎಂದು ರಾಜಶೇಖರನು ಮನಸಾರೆ ಹೊಗಳುತ್ತಾನೆ.

ಸರಸ್ವತೀವ ಕಾರ್ಣಾಟೀ ವಿಜಯಾಂಕಾ ಜಯತ್ಯಸೌ।
ಯಾ ವೈದರ್ಭಿ ಗಿರಾಂವಾಸಃ ಕಾಲಿದಾಸಾದನಂತರಂ॥

ಇದಕ್ಕೆ ಭೋಜರಾಜನೂ ಒಪ್ಪಿಗೆಯನ್ನಿತ್ತಿದ್ದಾನೆ. ದಂಡಿ ಮಹಾಕವಿಯು ಒಂದು ಪದ್ಯದಲ್ಲಿ ಸರಸ್ವತಿಯು ಬೆಳ್ಳಗಿದ್ದಾಳೆಂದು ವರ್ಣಿಸಿದುದಕ್ಕೆ ವಿಜ್ಜಿಕೆಯು (ಇವಳೇ ವಿಜಯಾಂಬಿಕೆಯೆಂದು ಶ್ರೀ ಪಿ. ವಿ. ಕಾಣೆಯವರು ಪ್ರತಿಪಾದಿಸಿದ್ದಾರೆ) ಬರೆದ ಒಂದು ಉತ್ತರವಿದೆ.

ನೀಲೋತ್ಪಲದಲ ಶ್ಯಾಮಾಂ ವಿಜ್ಜಿಕಾಂ ಮಾಮಜಾನತಾ।
ವೃಥೈವ ದಂಡಿನಾ ಪ್ರೋಕ್ತಾ ಸರ್ವಶುಕ್ಲಾಸರಸ್ವತೀ॥

ದಂಡಿಯು ಈಕೆಗೆ ಸಮಕಾಲೀನನು. ಇವನಿಗೂ ಕರ್ನಾಟಕಕ್ಕೂ ಬಹಳ ಸಂಬಂಧವಿದೆ. "ಇವನು 'ಸರಸ್ವತಿ'ಯನ್ನು ಬೆಳ್ಳಗೆಂದು ವರ್ಣಿಸಿದ್ದುದು ಅನ್ಯಾಯ; ಏಕೆಂದರೆ ಕರ್ಣಾಟ ಸರಸ್ವತಿಯಾದ ತಾನು ಕನ್ನೈದಿಲೆಯಂತೆ ಮೈಬಣ್ಣವುಳ್ಳವಳೆಂದು" ವಿಜಯಾಂಬಿಕೆಯು ಹೇಳಿಕೊಂಡಿದ್ದಾಳೆ. ಆಗಿನ ಕಾಲದಲ್ಲಿ ತನಗೆ 'ಸರಸ್ವತಿ' ಎಂಬ ಸರ್ವಮಾನ್ಯವಾದ ಬಿರುದು ಇದ್ದುದನ್ನು ವ್ಯಕ್ತಪಡಿಸಿದ್ದಾಳೆ.

ಕಲ್ಯಾಣ ಚಾಲುಕ್ಯರ ಮನೆತನದ ಸೋಮೇಶ್ವರನ ಹೆಂಡಿರಾದ ಮೈಲಾದೇವಿ ಮತ್ತು ಕೇತಲಾದೇವಿಯರು ಅನುಕ್ರಮವಾಗಿ ಬನವಾಸಿ ಮತ್ತು ಹೊನ್ನವಾಡಗಳನ್ನು ಆಳುತ್ತಿದ್ದರು (ಕ್ರಿ. ಶ. ೧೦೫೩)[೩೪] ಚಲುಕ್ಯರ ಮನೆತನದಲ್ಲಿ ಹುಟ್ಟಿ ಕದಂಬ ರಾಜಕುಮಾರನನ್ನು ವರಿಸಿದ ಅಕ್ಕಾದೇವಿಯು (ಕ್ರಿ. ಶ. ೧೦೨೨) ಕಿಸುಕಾಡು (ಬಾದಾಮಿನಾಡು) ಮತ್ತು ಹಾನುಗಲ್ಲುಗಳ ರಾಜ್ಯಭಾರವನ್ನು ನಡೆಸಿದಳು. ಕುಂಕುಮದೇವಿಯು (ಕ್ರಿ. ಶ. ೧೦೭೭) ಪುಲಿಗೆರೆ (ಲಕ್ಷ್ಮೇಶ) ನಾಡಿನ ಒಡತಿಯಾಗಿದ್ದಳು. ಶಕಸ್ಥಾಪಕನಾದ ೬ನೆಯ ವಿಕ್ರಮನ ಮಹಾದೇವಿಯಾದ ಲಕ್ಷ್ಮೀದೇವಿಯು (ಕ್ರಿ. ಶ. ೧೦೯೫) ಹದಿನೆಂಟು ಅಗ್ರಹಾರಗಳ ಆಡಳಿತವನ್ನು ನೋಡುತ್ತಿದ್ದಳು. ಈ ಬಗೆಯಾದ ಕರ್ತೃತ್ವಶಾಲಿಗಳಾದ ಸ್ತ್ರೀಯರ ಪರಂಪರೆಯು ತೀರ ಅರ್ವಾಚೀನ ಕಾಲದ ವರೆಗೂ ಬಂದು ಮುಟ್ಟುವುದು. ವೀರ ಕಂಪಣರಾಯ ಚರಿತೆಯನ್ನು ಬರೆದ ವಿಜಯನಗರದ ಗಂಗಾದೇವಿ.[೩೫] ಶಿವಾಜಿಗೆ ತನ್ನ ಕಲಿತನದ ಚುರುಕು ತೋರಿದ ಬೆಳವಡಿ ಮಲ್ಲಮ್ಮ, ಕುತ್ತಿನಲ್ಲಿ ಸಿಕ್ಕಿದ ಮರಾಠರ ರಾಜನಾದ ರಾಜಾರಾಮನಿಗೆ ನೆರವಾಗಿ ಮೊಗಲರ ಕೋಪಾಗ್ನಿಗೆ ಈಡಾದ ಕೆಳದಿಯ ರಾಣಿಚೆನ್ನಮ್ಮ, ಸ್ವಾಭಿಮಾನಿಯಾದ ಕಿತ್ತೂರಿನ ಚೆನ್ನಮ್ಮ ಇವರೇ ಮೊದಲಾದವರೆಲ್ಲ ಈ ನಾಡಿನ ವೀರ-ಕುಲವನಿತೆಯರು.

ಭಕ್ತರಂತಹ ದೇವರು. ಭಕ್ತನು ಧ್ಯಾನಿಸುವ ಪರಮಾತ್ಮನ ಸ್ವರೂಪದ ಮೇಲಿಂದ ಆ ಭಜಕನ ಹೃದಯವು ಚೆನ್ನಾಗಿ ಗೊತ್ತಾಗುವುದು. ನಮ್ಮ ಹಟ್ಟಿಕಾರ ಜನಾಂಗದ ದೇವರ ಹೆಸರುಗಳನ್ನು ನೋಡಿದರೂ ಇವರ ವೀರ ವೃತ್ತಿಯೆ ಗೋಚರವಾಗುತ್ತಿದೆ. ಬೀರ-ಸಿದ್ಧವೀರನು ಕುರುಬರ ದೇವರು. ಈ ದೇವನನ್ನು ಉತ್ತರದ ಆರ್ಯರು ಸಹ ಸ್ವೀಕರಿಸಿದಂತೆ ಕಾಣುತ್ತದೆ. ಬೀರಪ್ಪನೇ ಆರ್ಯರ ಭಾಷೆಯಲ್ಲಿ ಭೈರವನಾಗಿದ್ದಾನೆ. ಇದೂ ಒಂದು ರುದ್ರನ ಸ್ವರೂಪ, ಮಲ್ಲಯ್ಯ, ಮಲ್ಲಿಕಾರ್ಜುನ, ವೀರಭದ್ರನೆಂಬ ಹೆಸರಿನಿಂದ ಇನ್ನು ಕೆಲರು ಭಜಿಸುವ ದೇವನೂ ವೀರನೇ. ಪತ್ತಿ (ಪಟ್ಟಿ)ಗಳ ಪತಿಯು ಸಿಡಿಲಿನಂತೆ ಘುಡುಘುಡಿಸುವ ರುದ್ರ-ಶಿವನು. "ಗುಗ್ಗುಳಕಾರ್ಯ"ದಲ್ಲಿ ಪುರವಂತರ ಉಗ್ಘಡಣೆಯನ್ನು ಕೇಳಬೇಕು. ಮೈ ಜುಮ್ಮೆನ್ನುತ್ತದೆ. "ಉಚ್ಚೈರ್ಘೋಷಾಯಾಕ್ರಂದಯತೇ" ಎಂಬ ರುದ್ರಮಂತ್ರದ ನೆನಪಾಗುತ್ತದೆ. ಆಗ ಶಸ್ತ್ರದಿಂದ ಇರಿದುಕೊಳ್ಳುವುದಂತೂ ವೀರಜೀವರ ಹೊರತು ಉಳಿದವರಿಗೆ ಅದು ಅಸಾಧ್ಯ., 'ರುದ್ರ-ಮಾಹೇಶ್ವರರು,' ವೀರ-ಮಾಹೇಶ್ವರು, 'ವೀರ ಬಣಂಜುಗಳು' ಎಂದು ಪ್ರಾಚೀನ ಕಾಲದಿಂದಲೂ ಈ ಪಂಗಡಗಳಿಗೆ ಹೆಸರುಗಳು! ಇದು ಅಂತಹ ಇಂತಹ ಶೈವವಲ್ಲ; ವೀರರ ಶೈವ ಕರ್ಣಾಟದ ಈ ಜನಾಂಗದ ಒಂದು ಶಾಖೆಯವರೇ ರಾಜಸ್ಥಾನದ ರಾಜಪುತ್ರರು, ರಾಜಪುತ್ರರು ಸಹ ತಾವು ಯದು-ತುರ್ವಶರು ತುರು ವಂಶದವರೆಂದೇ ಹೇಳಿಕೊಳ್ಳುತ್ತಾರೆ; ಇವರೂ ಚಂದ್ರವಂಶಿಗಳು. ತುರರು ತುರುವಂಶದವರು; ಯಾದವರೆಂಬ ಪಂಗಡದಲ್ಲಿ ಭಟ್ಟಿ (ಹಟ್ಟಿ?) ಹೆಸರಿನ ದೊಡ್ಡಶಾಖೆಯಿದೆ. ಇವರ ತರುವಾಯ ಇನ್ನೊಂದು ದೊಡ್ಡ ಶಾಖೆಯ

ಹೆಸರು 'ಜಾಡ'ವೆಂದಿದೆ! ಕರ್ನಲ್ ಟಾಡ್‌ರು ರಾಜಸ್ಥಾನದ ಇತಿಹಾಸದಲ್ಲಿ ಬರೆಯುವುದೇನೆಂದರೆ: "Jareja or Jadaja is most important of Yadu race next ot Bhatti[೩೬] ಜಾರೆ ಜಾಡಿಯವರ ಮೂಲಸ್ಥಾನವು ಸಹ ಶೂರಸೇನ ದೇಶ, ಸಿಂಧೂ ತೀರಗಳ ಕಡೆಗೇ! ಯದು ಶಬ್ದವನ್ನು ಆ ಭಾಗದಲ್ಲಿ ಜಾಡನ್ ಎಂದು ಉಚ್ಚರಿಸುತ್ತಾರಂತೆ!

> The Yadus or as pronounced in the dialects "Jadon" are scattered over Inida.

ಹಿಂದೂದೇಶದಲ್ಲೆಲ್ಲ ಇವರು ಪಸರಿಸಿರುವರಂತೆ! ಈ ಜಾಡರು ಮರಾಠರಲ್ಲಿಯೂ ಉಂಟೆಂದು ಟಾಡ್‌ರು ಬರೆಯುತ್ತಾರೆ! ಶೌರ್ಯದಲ್ಲಿ ಸುಪ್ರಸಿದ್ಧರಾದ ಜಾಟರು ಈ ಜನಾಂಗದವರಾಗಿರಬೇಕೆಂದು ತೋರುತ್ತದೆ. ಕಕಾಲಿ, ಜೆಸಲಮೀರ, ಕಚ್ಚಗಳ ರಾಜರು ಜಾಡವಂಶದವರಂತೆ. ರಾಜಸ್ಥಾನದ ಈ ಜಾಡರಲ್ಲಿಯೂ ವೀರಪೂಜೆಯಿದೆ; ವಗ್ಗಯ್ಯಗಳುಂಟು. ಇನ್ನೂ ಆಶ್ಚರ್ಯಕರವಾದ ಸಂಗತಿಯೆಂದರೆ ಶಾಕಾಂಬರೀ ಪೂಜೆ ಶಾಕಾಂಬರಿಯೇ ನಮ್ಮ ಬನಶಂಕರಿ. ಶಾಕಾಂಬರಿಯ ಪೂಜೆಮಾಡಿ ಪ್ರಸಾದವನ್ನು ಪಡೆದುಕೊಳ್ಳದೆ ಯಾವ ಹೊಸ ಕೆಲಸಕ್ಕೂ ಈ ಜನಾಂಗದವರು ಕೈಯಿಕ್ಕುವುದಿಲ್ಲವಂತೆ! ನಮ್ಮ ಜಾಡರ ಕುಲಸ್ವಾಮಿನಿಯೂ ಶಾಕಂಬರಿ-ಬನಶಂಕರಿಯೇ!

ಆದುದರಿಂದ, ನಮ್ಮ ಹಟ್ಟಿಕಾರರು ಅರಸುಕುಲದವರೆಂಬ ಬಗ್ಗೆ ಸಂದೇಹವೇ ಉಳಿಯುವುದಿಲ್ಲ. ಕರ್ಣಾಟದ ಹೆಸರನ್ನು ಬಂಗಾಳ ಅಸ್ಸಾಮ ವರೆಗೆ ಕೇಳಿಸಿದವರು, ನೇಪಾಳದ ಸಿಂಹಾಸನವನ್ನೇರಿ ಕರ್ಣಾಟದ ಕೀರ್ತಿಧ್ವಜವನ್ನು ಹಿಮಾಲಯದ ಉತ್ತುಂಗ ಶಿಖರದ ಮೇಲೆ ಒಯ್ದು ನಿಲ್ಲಿಸಿದ ಜನಾಂಗದವರು, 'ಗಂಡುಗಲಿಗಳು'-'ಅರಸುಕುಲದವರೆ'ಂದು ಸಿದ್ಧಪಡಿಸುವುದಕ್ಕೆ ನಿಜವಾಗಿ ಬೇರೆ ಯಾವ 'ಒಣಬಣಗು' ಪ್ರಮಾಣಗಳೇ ಬೇಕಾಗಿಲ್ಲ. ಇದು ಸ್ವತಃ ಸಿದ್ಧ ಸಂಗತಿಯಾಗಿದೆ. ಹಾಗಾದರೆ ಇಂತಹ ಸತ್ವಶಾಲಿಯಾದ ಈ ಜನಾಂಗವು ಮೊದಲಿನಂತೆ ಈಗ ತನ್ನ ತೇಜಸ್ಸನ್ನು ಏಕೆ ಹೊರಗೆಡುಹಲೊಲ್ಲದು? ಶ್ರೀಮಾನ್ ಜಯಸ್ವಾಲರು ಈ ಪ್ರಶ್ನೆಗೆ ಕೊಟ್ಟ ಉತ್ತರವು ಬಹಳ ವಿಚಾರಾರ್ಹವಾಗಿದೆ:

> The social system of the republican communities was based on equality. They new no caste. They consisted of one caste only. The orthodox system, on the other hand was based on inequality and caste where mass patriotism could not be mobilized as it could easily be done amongst the Malvas, the Yaudheyas..... They (communities) were the excercise ground for state making, for petriotism, for individual ambition, capabilities and leadership.

ನಮ್ಮ ಹಟ್ಟಿಕಾರರಲ್ಲಿ 'ಮಂದಿ'ಗೆ 'ಗಣ'ಕ್ಕೆ ಮಹತ್ವ. ಇದು ವ್ಯಕ್ತಿನಿಷ್ಠ ಸಮಾಜವಲ್ಲ. 'ದೈವದವರ' ಆಡಳಿತಕ್ಕೆ ಸಂಪೂರ್ಣವಾಗಿ ಒಳಪಟ್ಟ ಜನಾಂಗ. ಇದರ ಶಕ್ತಿ ಸರ್ವಸ್ವವು ಒಂದು ತನದಲ್ಲಿಯೇ ಅಡಕವಾಗಿತ್ತು. ತನ್ನ ಪಂಗಡದ ಹಿರಿಯನಾಗಿ ಅದನ್ನು ನಡೆಸಿಕೊಂಡು ಹೋಗುವಾಗ ಹಲವರಿಗೆ ಆಡಳಿತದ ಅನುಭವವನ್ನು ಪಡೆಯುವುದಕ್ಕೆ ದೊರೆಯುತ್ತಿತ್ತು; ಹೊಣೆ ಹೊತ್ತುಕೊಂಡು, ಮುಂದೆ ಬಂದು ಕೆಲಸಮಾಡುವ ಸಂಧಿ ದೊರೆಯುತ್ತಿತ್ತು. ಅದರಲ್ಲಿ ಪ್ರತಿಸ್ಪರ್ಧಿಗಳೊಡನೆ ಧೈರ್ಯದಿಂದ ಪ್ರತಿಭಟಿಸಿ ತನ್ನ ಕೆಲಸವನ್ನು ಗೆದ್ದುಕೊಳ್ಳುವ ಹದವು ಗೊತ್ತಾಗುತ್ತಿತ್ತು. ಈ ಬಗೆಯ ಸಾಂಘಿಕ ಜೀವನವಿರುವ 'ಗಣಂಗಳ' ಸಮಾಜವೆಂದರೆ, ಅದೊಂದು ಸೇನಾಪತಿ, ಮಂತ್ರಿ,

ಸಾಮಂತರನ್ನು ತಯಾರಿಸುವ ಗರುಡಿಯೇ ಆಗಿತ್ತು. ವೀರರಿಗೂ, ಧೀರರಿಗೂ, ಧೀಮಂತರಿಗೂ ಪೂರ್ವಾಭ್ಯಾಸಕ್ಕೆ ಅದೊಂದು ಪಾಠಶಾಲೆಯೇ ಸರಿ.

ಆದರೆ, ಕಾಲಾಂತರದಲ್ಲಿ ಮೊದಲಿನ 'ಮಂದಿ'ಗಳು, ಗಣ (ರಾಜ್ಯ)ಗಳು ಒಡೆದುವು. ಈ ಜನಾಂಗದಲ್ಲಿ ಮುಂದಡಿಯಿಡುತ್ತ ಮುಂದೆ ನಡೆದವರು ಮುಂದೆಯೇ ಹೋದರು; ಉಳಿದವರು ಹಿಂದೆಯೇ ಬಿದ್ದರು. ಇದು ಒಂದು ಸೃಷ್ಟಿಯ ಕ್ರಮವೇ ಎನ್ನಿ. ಹಾಲುಮತವೆಂಬುದೊಂದು ಮೊದಲು ದೊಡ್ಡ ಜನಾಂಗ. ಹಾಲಿನಲ್ಲಿ ಮೊಸರು, ಬೆಣ್ಣೆ, ತುಪ್ಪಗಳಾದ ಬಳಿಕ ಅವು ಒಂದರಿಂದೊಂದು ಬೇರೆಯಾಗುವುದೂ ಸ್ವಾಭಾವಿಕವೇ. ಆದರು ಉಪಮೆಯ ಪದಾರ್ಥಗಳಂತೆ ಮನುಷ್ಯನು ನಿರ್ಜೀವಿಯಲ್ಲ; ನಿರ್ಬುದ್ಧನೂ ಅಲ್ಲ; ವಿವೇಕಿಯೂ ವಿಚಾರವಂತನೂ ಪ್ರಯತ್ನ ಬಲದಿಂದ ಅಸಾಧ್ಯವನ್ನೂ ಸಾಧಿಸುವ ಸಾಮರ್ಥ್ಯವುಳ್ಳವನೂ ಆಗಿರುವುದರಿಂದ ತಮ್ಮೊಳಗಿನ ಭೇದಭಾವ ವನ್ನು ಪರಿಶ್ರಮದಿಂದ ಎಷ್ಟೋ ಮಟ್ಟಿಗೆ ಕಡಿಮೆ ಮಾಡಿಕೊಳ್ಳಬಲ್ಲನು......ನಾವು ಇದೆಲ್ಲವೂ ಒಂದೇ ಜನಾಂಗ ವೆಂದೆನ್ನುತ್ತಿದ್ದುದು ಅದರ ಮೊದಲಿನ ಸ್ವರೂಪವನ್ನನುಲಕ್ಷಿಸಿ.

ಈಗಿನ ಸ್ಥಿತಿಯಲ್ಲಿ ಸಹ ಈ ಜನಾಂಗದವರು ತಮ್ಮ ತಮ್ಮಲ್ಲಿಯೇ ಗಣಗಳನ್ನು ರಚಿಸಿ ಪುನರ್ಘಟನೆಯನ್ನು ಮಾಡಿಕೊಂಡರೆ ಮತ್ತೆ ಇವರಲ್ಲಿ ನವಚೈತನ್ಯವು ತಲೆದೋರದೆ ಇರಲಾರದು. ಈಗಿನ 'ಕ್ಷುದ್ರಹೃದಯ ದೌರ್ಬಲ್ಯವು' ನಾಶವಾಗಿ ಸರ್ವಸಂಗ್ರಾಹಕವಾದ, ವಿಶಾಲವಾದ ಧೀರೋದಾತ್ತ ವೃತ್ತಿಯು ಪ್ರಾಪ್ತವಾಗಲಿ. ಕರ್ಣಾಟವು ಮೊದಲಿನಂತೆ ತನ್ನ ಉಜ್ವಲ ತೇಜಸ್ಸಿನಿಂದ ಮೆರೆದು ಜಗತ್ತಿನಲ್ಲಿ ಭಾರತಾಂಬೆಯ ಕೀರ್ತಿಯನ್ನು ಬೆಳಗಲಿ. ಮಾನವ್ಯದ ಸೇವೆಯನ್ನು ಮಾಡಲಿ.

ಸಂಗಚ್ಛಧ್ವಂ ಸಂ ವದಧ್ವಂ ಸಂ ವೋ ಮನಾಂಸಿ ಜಾನತಾಮ್।
ದೇವಾಭಾಗಂ ಯಥಾಪೂರ್ವೇ ಸಂಜಾನಾನಾ ಉಪಾಸತೇ॥

-ಋಗ್ವೇದ ಸಂಹಿತೆ

ಟಿಪ್ಪಣಿಗಳು

೧. Dr. Ayangar S. K., ***Satwats*** (Second Oriental Conference Proceedings)

೨. Deexithar, ***Studies in Tamil Literature and History***, p. 178-9

೩. Srinivasa Iyangar P.T., ***History of Tamils***; P. 345-46

೪. cf. Ibid : "ಕಳವರ್" the strong men; ಕಟ್=Strength. P. 8; 190-191

೫. cf, Dr. Bhandarkar D. R., Charmichael Lectures, 1918; p. 8-9
ಚೋಳ ಚೇರ, ಮೊದಲಾದವರು' ದಕ್ಷಿಣಕ್ಕೆ ಬಂದು ರಾಜ್ಯ ಸ್ಥಾಪಿಸಿದ ಯದು-ತುರ್ವಶರ ಕುಲದವರೆಂದು ಪದ್ಮಪುರಾಣವು ಹೇಳುತ್ತಿದೆ. ಗಂಗರ ಬಗ್ಗೆ ಇದೇ ಬಗೆಯ ಐತಿಹ್ಯವಿದೆ. ಆದರೆ, ಚೋಳ ಚೇರಾದಿಗಳಂತೂ 'ದ್ರಾವಿಡ' ರೆಂದು ಗೊತ್ತಾಗಿದೆ. ಆದುದರಿಂದ, ಈ ದೃಷ್ಟಿಯಿಂದ ನೋಡಿದರು ಯಾದವರು 'ಆರ್ಯೇತರರು-'ದ್ರಾವಿಡರು'ಎಂದೇ ಗೋಚರವಾಗುತ್ತಿದೆ

೬. ದೇವಾಂಗರು ರಾಜನ್ಯರು-ಕ್ಷತ್ರಿಯರೆಂಬುದು ಅವರ ಪುರಾಣದಿಂದಲು ವ್ಯಕ್ತವಾಗುತ್ತಿದೆ. ಅದರಲ್ಲಿ ಈ ಜನಾಂಗದ ಮೂಲಪುರುಷ ನೆಂದು ಹೇಳುವ ದೇವಾಂಗನಿಗೆ 'ರಾಜರ್ಷಿ' ಎಂದು ವರ್ಣಿಸಿದ್ದಾರೆ (ಪು. ೧೧೧); ಈತನು ಪಟ್ಟಾಭಿಷಕ್ತನಾದುದನ್ನು ಹೇಳಿದೆ (ಪು. ೩೪) ರಾಜನೆಂದು ಉಲ್ಲೇಖವಿದೆ. (ಪು. ೬೭. ៩೧) ಒಂದೊಂದು ಯುಗದಲ್ಲಿ ಒಂದೊಂದು ವಸ್ತುವಿಗೆ ಮಹತ್ವ; ಅದು ಯಾರ ವಶದಲ್ಲಿಯೊ ಅವರ ಕೈಯಲ್ಲಿ ರಾಜ್ಯಸೂತ್ರ. ಈ ತತ್ವದ ಸತ್ಯತೆಯನ್ನು ಈಗಲೂ ಕಾಣಬಹುದು. ಹತ್ತಿಯ ಯುಗದ ನಂತರ ಯಂತ್ರಯುಗವು ಎಂದರೆ ಅದರಲ್ಲಿಯೂ ಕಬ್ಬಿಣ ಕಲ್ಲಿದ್ದಲಿಯ ಯುಗವು ತಲೆಯೆತ್ತಿತ್ತು; ಈಗ ಕಲ್ಲೆಣ್ಣೆ ಪೆಟ್ರೋಲಿಯಮ್ಮಿನ ಸ್ಪರ್ಧೆ ನಡೆದಿದೆ; ಇದರ ಖಣಿಗಳು ಸಾಮ್ರಾಜ್ಯ ವೈಭವದ ಅಡಿಗಲ್ಲಾಗಿವೆ.

೭. Mac-donell, ***Vedic Index***. Vol II 216; 252

೮. Narasimhachar. R., ***History of Kannad Language***, 1934 p. 48

೯. Srinivasa Iyangar, P. T., ***History of Tamils***, P. 535

೧೦. i ಪ್ರಾಚೀನ ಶಾಸನಗಳಲ್ಲಿ 'ಕುರುಬರ ಹಟ್ಟಿ' 'ಕುರುಬರ ಹಳ್ಳಿ', 'ಕುರುಬೂರ ವಿಷಯ' ಇಂತಹ ಹೆಸರುಗಳನ್ನು ಹೇರಳವಾಗಿ ಕಾಣಬಹುದು. cf. Ephigraphia Carnatica, Index, Vol. I

ii ಪಟ್ಟಿ-ಪಾಳ್ಯ, ಕಿಟ್ಟೆಲ್ಲರ ಕೋಶವನ್ನು ನೋಡಿ.

iii ಶ್ರೀ ಎಂ. ಎಸ್. ಪುಟ್ಟಣ್ಣನವರು: ಹಾಗಲವಾಡಿ, ಪಾಳೆಯಗಾರರು ಮುಂತಾದ ಗ್ರಂಥಗಳನ್ನು ನೋಡಿ

೧೧. ವಿಶ್ವಕರ್ಣಾಟಕ, ಮಾರ್ಚ ೧೦, ೧೯೩೫, ಶ್ರೀಮಾನ್ ಎಂ. ಎಸ್. ಪುಟ್ಟಣ್ಣನವರು, ಚಿತ್ರಕಲ್ಲದುರ್ಗದ ಪಾಳೆಯಗಾರರು ಗುಮ್ಮನಾಯಕನ ಪಾಳೆಯಗಾರರು ಶೌರ್ಯಸಾಹಸಾದಿಗಳನ್ನು ತಮ್ಮ ಗ್ರಂಥಗಳಲ್ಲಿ ವಿಸ್ತಾರವಾಗಿ ವರ್ಣಿಸಿದ್ದಾರೆ. ಅವುಗಳನ್ನು ಓದಿ ನೋಡಬೇಕು. ಇದರಂತೆಯೆ ಕರ್ಣಾಟದ ಉಳಿದ ಭಾಗದ ದೇಸಾಯರು, ಗೌಡರು ತಮ್ಮ ಮನೆತನದ ಚರಿತ್ರೆಗಳನ್ನು ಸಾಧಾರಣವಾಗಿ ಬರೆಯಿಸಿ ಅಚ್ಚು ಹಾಕಿಸಿದರೆ ಆಗದೆ? ಸಿರಿವಂತರಾದ ಈ ವತನದಾರರು ಉಳಿದ ಕ್ಷುಲ್ಲಕಮಾತಿನಲ್ಲಿ ವೆಚ್ಚಮಾಡುವ ಹಣದೊಳಗಿಂದ ಸ್ವಲ್ಪ ಭಾಗವನ್ನು ಉಳಿಸಿ ತಮ್ಮ ಪೂರ್ವಜರ ಇತಿಹಾಸವನ್ನು ಬೆಳಕಿಗೆ ತಂದರೆ ಅದರಿಂದ ಅವರಿಗೇ ಮರ್ಯಾದೆ ಬರುವಂತಿದೆ.

೧೨. "Very largely employed in the service of Vijayanagar, an important element in the fighting forces of the Hindu kingdom of the sourth" ***Castes and Tribes of Bombay***. Vol II. P. 35

೧೩. Thurston E., ***Castes and Tribes of S. India***, Vol. II P. 15

೧೪. i Russell, R. V., ***Castes and Tribes of C.P.***, Vol. I 367

ii Castes and Tribes of Nizam's Dominions, ಧನಗರ ಮತ್ತು ಹಟ್ಟಗಾರ ನೋಡಿ.

ಈ ಲೇಖಕರು ಬಾರಗೀ ಧನಗರ ಮತ್ತು ಸಾದಾ ದನಗರರಲ್ಲಿ ಏನೂ ಸಂಬಂಧವಿಲ್ಲೆಂದು ಗ್ರಹಿಸಿದ್ದಾರೆ. ಆದರೆ, ವೃತ್ತಿ ಭೇದದಿಂದ ಅವರಲ್ಲಿ ಪಂಗಡಗಳಾಗಿವೆಯೆ ಹೊರತು ಮೂಲ ಒಂದೇ ಜನಾಂಗವೆಂದು ವಂಶಶಾಸ್ತ್ರಜ್ಞರೇ ಒಪ್ಪಿಕೊಂಡಿದ್ದಾರೆ.

೧೫. ಮೇಲಣ ii ನೆಯ ಟಿಪ್ಪಣೆಯನ್ನು ಗ್ರಂಥ ನೋಡಿ

೧೬, ೧೭, ೧೮ Enthoven : ***castes and tribes of Bombay***, Vol. III P. 6 and Satara Gazetteer. ಧನಗರ ಎಂಬ ಪರಿಭಾಷೆಯನ್ನು ನೋಡಿ.

೧೯,೨೦,೨೧, ೧೫ನೆಯ ಟಿಪ್ಪಣಿಯ ಗ್ರಂಥ

"Shepherds with spears" ಎಂದರೆ ಕುಂತಲರೆಂದರ್ಥ ; ಕುಂತ=ಬರ್ಚಿ, ಕುರಿಯವರೆಂದು ಕುಂದಲರು; ಇವರ ಆಯುಧಕ್ಕೂ ಇದರಿಂದಲೇ ಹೆಸರು!

೨೨. ಮರಾಟ ಜ್ಞಾನಕೋಶ ವರ್ಹಾಡ ಪಹಾ

೨೩ ೨೧ನೆಯ ಟಿಪ್ಪಣಿಯ ಗ್ರಂಥ ; ಪು. ೨೪೯

೨೪. Dixitar, ***Studies in Tamil Literature and History***, P. 228-22

೨೫. ಕವಿಭೂಷಣ ಬೆಟಗೇರಿ ಕೃಷ್ಣಶರ್ಮಾ, ***ಹಳ್ಳಿಗರ ಹಾಡುಗಳು***, ಪು. ೧೩

೨೬. Althekar, ***The Rastrakutas and their times***, P. 247

೨೭. ***ಅಪಭ್ರಂಶ ಕಾವ್ಯತ್ರಯೀ***, ಬಡೋದಾ ಸಿರೀಜ.

೨೮. ಪಂಡಿತ ಕೇಶವಶರ್ಮಾ ಗಲಗಲಿಯವರ ಲೇಖ, ಜಯಕರ್ನಾಟಕ, ಸಂ. I ಪು. ೮೩, ೮೫

ii ಜಯಕರ್ಣಾಟಕ, ಸಂಪುಟ I ೨೯೮ ಪು. ಕಣ್ಮರೆಯಾದ ಕನ್ನಡದಲ್ಲಿ ಹಾಲ, ಪುಲಿಮಾಯಿ ಈ ಹೆಸರುಗಳನ್ನು ಕುರಿತು ಬರೆದ ಟಿಪ್ಪಣಿ ನೋಡಿ ಪು. ೭೬-೭೭

೨೯. Sukhatankar V. S., Annals of B.O.R.I. ಸಂಚಿಕೆಯ ಲೇಖನವನ್ನು ನೋಡಿರಿ.

೩೦. Hayavadana Ra. C., ***Mysore Gazetteer***, Vol. II Part I. P. 74-76

೩೧. Srinivasa Iyangar P.T., ***History of Tamils***. P. 600

೩೨. ೨೯ನೆಯ ಟಿಪ್ಪಣಿಯ ಗ್ರಂಥದ ಪು. ೧೫೬

೩೩. i ಸಂಸ್ಕೃತ ಕವಿಯತ್ರಿಯರನ್ನು ಕುರಿತು: **Mythic Society Journal Silver Jubilee** ಸಂಚಿಕೆಯನ್ನು ನೋಡಿ.
ii 'ದಂಡಿ ಮಹಾಕವಿ'ಯನ್ನು ಕುರಿತು ಬರೆದ ಪಾನ್ಯಂ ಸುಂದರಶಾಸ್ತ್ರಿಗಳ ಲೇಖ: ಕರ್ಣಾಟಕ ಸಾಹಿತ್ಯ ಪರಿಷತ್ ಪತ್ರಿಕೆ ಸಂಪುಟ, ೧.

೩೪. Althekar, ***The Rastrakutas and their times***, P. 154

೩೫. ಡಾ. ಸಾಲೆತೂರರು ಅತ್ಯಂತ ಪರಿಶ್ರಮ ಪೂರ್ವಕವಾಗಿ ಬರೆದ ***Social and Political Life in the Vijayanagara empire*** Vol I. and II. ಇವುಗಳಲ್ಲಿ ಇಂತಹ ಹಲವು ಉದಾಹರಣೆಗಳನ್ನು ನೋಡಿಕೊಳ್ಳಬಹುದು.

೩೬. Cornol Tade, ***Annals and antiqueties of Rajastan,*** 1920; P. 102-104; 76

ಪರಿಶಿಷ್ಟ ೧

ಹತ್ತಿಯ ಕತೆ

ಜಗತ್ತಿನಲ್ಲಿ ಹತ್ತಿಯ ಉಪಯೋಗವನ್ನು ಮೊಟ್ಟ ಮೊದಲಿಗೆ ಕಂಡು ಹಿಡಿದವರು ಹಿಂದುಸ್ತಾನದವರೇ, ಎಂಬ ಬಗ್ಗೆ ಭಿನ್ನಾಭಿಪ್ರಾಯಗಳೆ ಇಲ್ಲ. ಪ್ರಾಚೀನ ಕಾಲದಲ್ಲಿ ಏಶಿಯದ ಪಶ್ಚಿಮಭಾಗ ಮತ್ತು ಯುರೋಪಿನ ದಕ್ಷಿಣಭಾಗದ ಜನರು ಮುಖ್ಯವಾಗಿ ಉಣ್ಣೆಯ ಬಟ್ಟೆಗಳನ್ನೇ ಧರಿಸುತ್ತಿದ್ದರು. ಉತ್ತರ ಯುರೋಪಿನಲ್ಲಿ ನಾರಿನ ವಸ್ತ್ರಗಳು, ಚೀನದಲ್ಲಿ ರೇಶಿಮೆ. ಹಿಂದೂ ದೇಶದಲ್ಲಿ ಮಾತ್ರ ಅರಳೆಯ ವಸ್ತ್ರಗಳಿದ್ದುವು[೧] ಹಿಂದೂ ದೇಶದಲ್ಲಿ ಅರಳೆಯ ವಸ್ತ್ರಗಳು ಎಂದಿನಿಂದ ಮತ್ತು ಹೇಗೆ ಅಸ್ತಿತ್ವದಲ್ಲಿ ಬಂದುವೆಂಬುದನ್ನು ನಿಶ್ಚಿತವಾಗಿ ಹೇಳುವುದು ಬಹಳ ಕಠಿಣ. ಕ್ರಿಸ್ತಪೂರ್ವ ೮೦೦ ರಿಂದ ಹಿಂದೂದೇಶದಲ್ಲಿ ಹತ್ತಿಯ ಉಪಯೋಗ ಮಾಡುತ್ತಿದ್ದುದರ ಆಧಾರಗಳು ಸಿಕ್ಕುತ್ತವೆಂದು ಯುರೋಪೀಯ ಗ್ರಂಥಕಾರರನೇಕರು ಬರೆಯುತ್ತಾರೆ.[೨] ಆದರೆ, ಅದಕ್ಕೂ ಮುಂಚೆ ತಲೆತಲಾಂತರ ಗಳಿಂದಲೂ ಈ ಕಲೆಯು ಹಿಂದೂದೇಶದಲ್ಲಿ ಚೆನ್ನಾಗಿ ಗೊತ್ತಿದ್ದಿತೆಂದು ಮತ್ತೆ ಹಲವು ವಿದ್ವಾಂಸರು ಅನೇಕ ಪ್ರಮಾಣಗಳಿಂದ ಸಿದ್ಧಪಡಿಸಿದ್ದಾರೆ. ಕ್ರಿಸ್ತಪೂರ್ವ ೧೫೦೦ ರಿಂದ ಕ್ರಿ.ಶ. ೧೫೦೦ ವರೆಗೆ -೩೦೦೦ ವರುಷಗಳ ವರೆಗೂ ಹಿಂದೂದೇಶವೇ ಜಗತ್ತಿನಲ್ಲಿ ಹತ್ತಿಯ ಮುಖ್ಯ ಕೇಂದ್ರವಾಗಿದ್ದಿತೆಂದು ತಜ್ಞರ ಅಭಿಪ್ರಾಯವಿದೆ.

ಕ್ರಿಸ್ತಪೂರ್ವ ೧೫೦೦ ವರುಷಗಳೇ ಏಕೆ ಅದಕ್ಕೂ ಪ್ರಾಚೀನಕಾಲದಿಂದಲೆ ಹಿಂದೂದೇಶದಿಂದ ಹತ್ತಿಯ ಬಟ್ಟೆಗಳು ಬಾಬಿಲೋನ, ಇಜಿಪ್ತ ಮೊದಲಾದ ಪರದೇಶಗಳಿಗೆ ಹೋಗುತ್ತಿದ್ದುವು. ಡಾ. ಸಾಯಿಷ ಎಂಬ ಸುವಿಖ್ಯಾತ 'ಅಸೀರಿಯ ಶಾಸ್ತ್ರಜ್ಞನು' (As syriologist) ಬಾಬಿಲೋನಿನಲ್ಲಿ ಹಿಂದೂ ದೇಶದ ಬಟ್ಟೆಗಳಿಗೆ 'ಸಿಂಧೂ' ಎಂಬ ಹೆಸರಿದ್ದುದನ್ನು ಹೇಳುತ್ತಾನೆ.[೩] ಇಜಿಪ್ತಿನ ಪುರಾತನ ಗೋರಿ (ಪಿರಾಮಿಡ್) ಗಳಲ್ಲಿರುವ ಹೆಣಗಳಿಗೆ ಸುತ್ತಿದ ಬಟ್ಟೆಯು ಹಿಂದೂದೇಶದ್ದೇ ಎಂದು ಕೆಲರು ಹೇಳುವರು; ಕೆಲರಿಗೆ ಇದರ ಬಗ್ಗೆ ಸಂದೇಹವಿದೆ. ಆದರೂ ಇಜಿಪ್ತಿಗೆ ಹಿಂದೂ ದೇಶದ ಆರ್ಯಪೂರ್ವ ಜನಾಂಗದವರು ಬಟ್ಟೆಗಳನ್ನು ಕಳಿಸುತ್ತಿದ್ದ ಹಾಗೂ ಅದಕ್ಕೆ 'ಪಟ'ವೆಂಬುದು ಇಜಿಪ್ತಿನಲ್ಲಿ ಪ್ರಾಚೀನ ಕಾಲಕ್ಕೆ ಹೆಸರಿದ್ದ ಸಂಗತಿಯನ್ನು ಡಾ. ಪಂಚಾನನ ಮಿತ್ರರು ಕಂಡು ಹಿಡಿದಿರುವರು[೪] ಆದುದರಿಂದ 'ಪಟ'ವೆಂಬ ವಸ್ತ್ರವಾಚಕ ಶಬ್ದವು ಆರ್ಯ-ಪೂರ್ವ ಜನಾಂಗದ ಭಾಷೆಗೆ ಸಂಬಂಧಪಟ್ಟಿದ್ದಾಗಿರಬೇಕೆಂಬುದು ಸ್ಪಷ್ಟವಿದೆ. ಸಾಧಾರಣವಾಗಿ ಬಟ್ಟೆಗಳಿಗೆ ಅದು ಹುಟ್ಟುವ ಆಯಾ ದೇಶಗಳಿಂದಲೆ ಹೆಸರು ಬಂದುದನ್ನು ಈಗಲೂ ಕಾಣುತ್ತೇವೆ. ಬಾಬಿಲೋನಿನ 'ಸಿಂಧು' ಎಂಬುದು ಪ್ರಾದೇಶಿಕನಾಮವೆ ಆಗಿದೆ. 'ಆಕ್ಸಫರ್ಡ' 'ಹಾಲಂಡ,' 'ಕ್ಯಾಲಿಕೊ' 'ಚೀನ' ಮುಂತಾದವುಗಳಂತೆ 'ಪಟ'ವೆಂಬುದೂ ಹಿಂದೂದೇಶ ದೊಳಗಿನ

ಆರ್ಯ-ಪೂರ್ವ ಜನಾಂಗದ ಆವುದೊಂದು ದೇಶವನ್ನೇ ಸೂಚಿಸುತ್ತಿರಲಿಕ್ಕಿಲ್ಲವೆ? ಡಾ. ಪಂಚಾನನ ಮಿತ್ರರ ಅಭಿಪ್ರಾಯದಂತೆ 'ಪಟವು' ಆರ್ಯ-ಪೂರ್ವ ಜನಾಂಗದ ಭಾಷೆಯೊಳಗಿನ ಶಬ್ದ. ಆದುದರಿಂದ ಜಗತ್ತಿಗೆಲ್ಲ ಮೊಟ್ಟಮೊದಲಿಗೆ ಬಟ್ಟೆಕೊಟ್ಟವೆನ್ನುವ ಈ ಪಟಕಾರರು-ಹಟಕಾರ (ಜಾಡ) ರು ಆರ್ಯ-ಪೂರ್ವ ಜನಾಂಗವೆಂದು ಸಿದ್ಧವಾಗುತ್ತಿಲ್ಲವೆ?

ಈ ವರೆಗೆ ಗೊತ್ತಾಗಿರುವಂತೆ ಹಿಂದೂದೇಶದೊಳಗಿನ ಆರ್ಯಪೂರ್ವ ಜನಾಂಗಗಳು ಎರಡು. ಒಂದು 'ದ್ರಾವಿಡ'; ಇನ್ನೊಂದು 'ಆಸ್ಟ್ರೋ-ಏಶಿಯಾಟಿಕ್'. ಪಟ, ಕರ್ಪಟ, ಕರ್ಪಸಗಳು ಈ ಎರಡನೆಯ ಜನಾಂಗದ ಭಾಷೆಗೆ ಸೇರಿದ ಶಬ್ದಗಳೆಂದು ಡಾ. ಪ್ರಿಲಸ್ಕಿಯವರ ಅಭಿಪ್ರಾಯ.[೫] ಆದರೆ, ಇದು ಅಷ್ಟು ಸಬಲವಾದ ಮಾತೆಂದು ತೋರುವುದಿಲ್ಲ. ಏಕೆಂದರೆ

(೧) ಆಸ್ಟ್ರೋ ಏಶಿಯಾಟಿಕ ಜನಾಂಗದ ಮುಖ್ಯವಾದ ನೆಲವೀಡು ಹಿಂದೂದೇಶದ ಪೂರ್ವಭಾಗ, ಬಂಗಾಳದತ್ತಣಿಂದ ಕೋಸಲದ ವರೆಗೆ. "ದ್ರಾವಿಡರು" ಹಿಂದೂ ದೇಶದ ಪಶ್ಚಿಮಭಾಗದಲ್ಲಿ ಸಿಂಧೂ ತೀರದಿಂದ ಕನ್ಯಾಕುಮಾರಿಯ ವರೆಗೆ ನೆಲೆಸಿದ್ದವರು. ಹಿಂದೂ ದೇಶದ ಹತ್ತಿ. ಬೆಳೆಯುವ ಮಹತ್ವದ ಕೇಂದ್ರಗಳೆಲ್ಲ ಇದೇ ಭಾಗದಲ್ಲಿವೆ.

(೨) 'ಆಸ್ಟ್ರೋ ಏಶಿಯಾಟಿಕ' ಜನಾಂಗವೆಂದು ಹೇಳುವ ಯಾವ ತಂಡವೂ ಒಕ್ಕಲತನದಲ್ಲಿ ವಿಶೇಷ ಖ್ಯಾತಿಯನ್ನು ಪಡೆದಿಲ್ಲ; ಎಲ್ಲಿಯೂ ಒಕ್ಕಲಾಗಿಲ್ಲ. ಇಂದಿಗೂ ಹೆಚ್ಚಾಗಿ ಅಲೆಯುತ್ತಿರುವ ತಂಡಗಳನ್ನೇ ನೋಡಿಕೊಳ್ಳಬಹುದು.

(೩) ಇವರು ತಮ್ಮ ಮೂಲಸ್ಥಾನದಿಂದ ಎಂದರೆ ಆಸ್ಟ್ರೇಲಿಯಾ ಅಥವಾ ಮಲಯಾ ಗಳತ್ತಣಿಂದ ಹತ್ತಿಯ ಗಿಡವನ್ನು ತಂದರೆಂದು ಹೇಳಲಿಕ್ಕೂ ಬಾಯಿಯಿಲ್ಲ. ಏಕೆಂದರೆ, ಹತ್ತಿಗಿಡವು ಹಿಂದೂದೇಶದಿಂದಲೆ ಆನಾಡಿಗೆ ಹೋಯಿತೆಂದು ಬಲ್ಲವರು ಹೇಳುತ್ತಾರೆ. ಇಜಿಪ್ತ, ಚೀನದೇಶಗಳು ಜಗತ್ತಿನ ಅತಿಪ್ರಾಚೀನ ರಾಷ್ಟ್ರಗಳಲ್ಲಿ ಅಗ್ರಗಣ್ಯ. ಆದರೆ, ಅಲ್ಲಿಗೆ ಹಿಂದೂದೇಶದಿಂದಲೇ ಹತ್ತೀ ಗಿಡವು ಹೋಯಿತು. ಚೀನದೊಡನೆ ವ್ಯಾಪಾರವು ನಡೆಯುತ್ತಿದ್ದಾಗ ಜಾವಾ ಮೊದಲಾದ ನಡುವಿನ ವಸತಿಸ್ಥಾನ ಗಳಿಗೆ ಮಹತ್ವವು ಬಂದಿತು. ಆಗ ಅಲ್ಲಿ ಹಿಂದೂವರ್ತಕರ ವಸಾಹತುಗಳು ಬೆಳೆದುವು.[೬] ಆ ಸುಮಾರಿಗೇ ಅಲ್ಲಿ ಹತ್ತಿಯಗಿಡವೂ ಹೋಗಿರಬೇಕು.

(೪) ಅಲ್ಲದೆ, ಇನ್ನೂ ಒಂದು ಮಹತ್ವದ ಕಾರಣವಿದೆ. ಆಧುನಿಕ ಯಾಂತ್ರಿಕ ಯುಗದಲ್ಲಿ ಕಲ್ಲಿದ್ದಲು, ಕಬ್ಬಿಣ, ಕಲ್ಲೆಣ್ಣೆಗಳ ಆಗರವು ಯಾರ ಕೈಯಲ್ಲಿವೆಯೊ ಅವರ ವಶದಲ್ಲಿಯೇ ಜಗತ್ತಿನ ರಾಜಕೀಯ ಸೂತ್ರಗಳೆಲ್ಲ. ಅದರಂತೆ ಇದರ ಹಿಂದಿನ ಯುಗದಲ್ಲಿ ಸುಮಾರು ೪-೫ ಸಾವಿರ ವರುಷಗಳ ವರೆಗೆ "ಹತ್ತಿಯೇ ಜಗಚ್ಚಾಲಕ ಶಕ್ತಿಯಾಗಿತ್ತು.[೭]" ಹಿಂದೂದೇಶವು "ಸುವರ್ಣ ಭೂಮಿ" ಯಾಗುವುದಕ್ಕೆ ಹತ್ತಿಯ ವ್ಯಾಪಾರವೇ ಮುಖ್ಯ ಕಾರಣ. ಆಸ್ಟ್ರೋ ಏಶಿಯಾಟಿಕ್ ಜನಾಂಗದವರಿಗೆ ಹತ್ತೀಬಟ್ಟೆಗಳ ಗುಟ್ಟು ಗೊತ್ತಾಗಿದ್ದುದಾದರೆ, ಅವರು ಇಂದಿಗೂ ಈ ಬಗೆಯ ಕೀಳ್ಮೆಯಲ್ಲಿರುತ್ತಿದ್ದಿಲ್ಲ. ಈ ಜನಾಂಗವು ಒಮ್ಮೆ ಸಹ ಪ್ರಬಲವಾಗಿ ತನ್ನ ರಾಜಕೀಯ ಅಥವಾ ಸಾಮಾಜಿಕ ವರ್ಚಸ್ಸನ್ನು ಎಲ್ಲಿಯೂ ತೋರಿಸಿ ಕೊಂಡಿಲ್ಲ. ಹತ್ತಿಯ ಹದವು ಗೊತ್ತಿದ್ದವರು ಆ ಆರಂಭಕಾಲದಲ್ಲಾದರೂ ಪ್ರಭಾವಶಾಲಿಗಳಾಗಿರಬೇಕಾಗಿತ್ತು.

ಡಾ. ಪ್ರಿಲಸ್ಕಿಯವರು 'ಕರ್ಪಸ' ಶಬ್ದದ ಮೇಲೆ ತಮ್ಮ ಮುಂದಿನ ಊಹೆಗಳ ಕಟ್ಟಡವನ್ನು ನಿಲ್ಲಿಸಿದ್ದಾರೆ. ಆದರೆ, ಕರ್ಪಸ ಅಥವಾ ಕಾರ್ಪಾಸ ಇವೆಲ್ಲ ಸಂಯುಕ್ತ ಶಬ್ದಗಳು; ಮೂಲ ಶಬ್ದಗಳಲ್ಲ. ಪಸ-ಪಡ-'ಪಟವು' ಇವೆಲ್ಲಕ್ಕೂ ಅಡಿಗಲ್ಲು. ಪಟ, ಕರ್ಪಟ ಅಥವಾ ಕರ್ಪಸ ಶಬ್ದಗಳು ವೈದಿಕ ಸಾಹಿತ್ಯದಲ್ಲಿ ಸಿಕ್ಕುವುದಿಲ್ಲ. ಮುಂದಿನ "ಸೂತ್ರ"ಗಳ ಕಾಲಕ್ಕೆ ಸಂಸ್ಕೃತದಲ್ಲಿ ಈ ಶಬ್ದಗಳಿಗೆ ಪ್ರವೇಶವು ದೊರೆತಿರಬೇಕು. ಆದುದರಿಂದ ಇವು ಮೂಲ ಸಂಸ್ಕೃತ ಶಬ್ದಗಳಲ್ಲವೆಂದು ಊಹಿಸಬಹುದಾಗಿದೆ. ಬ್ರಾಹ್ಮಣರೊಳಗಿನ 'ಮಡಿ'ಯ ಬಟ್ಟೆಗಳ ತಾರತಮ್ಯವನ್ನು ನಿರೀಕ್ಷಿಸಿದರೆ ಈ ವಿಷಯದ ಮೇಲೆ ಇನ್ನೂ ಹೆಚ್ಚು ಬೆಳಕುಬೀಳುವುದು. 'ಹಳೆಯದೆ ಹೊನ್ನು' ಎಂಬುದು ಮನುಷ್ಯ ಸ್ವಭಾವದೊಳಗಿನ ಒಂದು ಮಹತ್ವದ ಗುಣ. ಆದುದರಿಂದಲೆ ಮನುಷ್ಯನು ಸಾವಿರಾರು ವರುಷಗಳ ಹಿಂದಿನ ಪರಂಪರೆಗಳನ್ನು ಹಾಗೆಯೇ ನಡೆಸಿಕೊಂಡು ಬಂದುದನ್ನು ಈಗಲೂ ನೋಡಲಿಕ್ಕೆ ಸಿಕ್ಕುತ್ತದೆ. ಮಡಿಯಿಂದ ಇದ್ದಾಗ ತಲೆಗೆ ಏನೂ ಹಾಕುವುದಿಲ್ಲ ಕಾರಣವೇನು? ಮೊದಲು ಆ ರೂಢಿ ಇದ್ದಿರಲಿಲ್ಲ-ಇದೇ ಕಾರಣ. ಕೆರವು ವೈದಿಕ ಬ್ರಾಹ್ಮಣರಿಗೆ ಆಗದು; ಮದುವೆಯಲ್ಲಿ ವರನಿಗೆ ಕೊಡುವುದು, ಕಾಲ್ಮರೆಯಲ್ಲ; ಮೊಚ್ಚೆ! ಊಟ ಉಡಿಗೆಯಲ್ಲಿಯೂ ಹೀಗೆಯೇ. ಪ್ರಾಚೀನ ಕಾಲದಿಂದ ಬಂದ ಗಡ್ಡೆಗೆಣಸು, ಕಾಯಿಪಲ್ಲೆ ನಡೆಯುವುವು; ಹೊಸತಾಗಿ ಬಂದ ಮೂಲಂಗಿ, ಬದನೆಗಳು ನಿಷಿದ್ಧ. ಇವು 'ನಿಷಿದ್ಧ' ವಾಗುವುದಕ್ಕೆ ಸಾತ್ವಿಕ ರಾಜಸ-ತಾಮಸಾದಿ ಇನ್ನೂ ಬೇರೆ ಕಾರಣಗಳನ್ನು ಹೇಳಬಹುದು. ಆದರೆ 'ಪರಕೀಯತೆ'ಯೂ ಒಂದು ಮಹತ್ವದ ಕಾರಣವಿದೆಯೆಂಬುದನ್ನು ಮರೆತು ನಡೆಯದು. ಬ್ರಾಹ್ಮಣರ ಮಡಿಗೆ ಕೃಷ್ಣಾಜಿನವು ಸರ್ವಶ್ರೇಷ್ಠ. ಉಣ್ಣೆಯ ಬಟ್ಟೆಗಳು ಬೇಕಾದ ಹಾಗೆ ಬರುತ್ತವೆ; ರೇಷ್ಮೆಗೂ ಅಡ್ಡಿಯಿಲ್ಲ, ಆದರೆ, ಹತ್ತಿಯ ಬಟ್ಟೆಯು ಒಂದು ವಿಶಿಷ್ಟ ರೀತಿಯಲ್ಲಿ ಮಾತ್ರ ಮಡಿ. ಅದಕ್ಕೆ ಈ ಬಗೆಯ ಗೌಣಸ್ಥಾನವು ಏಕೆ ಸಿಕ್ಕಿರಬಹುದು? ಹತ್ತಿಯು ಆರ್ಯರಿಗೆ ಮೊದಲು ಗೊತ್ತಿರಲಿಲ್ಲವೆಂಬುದೇ ಇದಕ್ಕೆ ಮುಖ್ಯ ಕಾರಣವಾಗಿರಲಿಕ್ಕಿಲ್ಲವೆ?

ಇವೆಲ್ಲ ಕಾರಣಗಳ ಸಲುವಾಗಿ ಹತ್ತಿಯು 'ದ್ರಾವಿಡ' ಹಟ್ಟಿಕಾರರಿಗೆ ಸಂಬಂಧಿಸಿದುದೆಂದು ಹೇಳಬಹುದಾಗಿದೆ. ಆದುದರಿಂದ ಹತ್ತಿಯನ್ನು ಕಂಡು ಹಿಡಿದು ಜಗತ್ತಿಗೆ ಕೊಟ್ಟ ಶ್ರೇಯಸ್ಸು ಹಟ್ಟಿಕಾರರಿಗೇ ಸಲ್ಲತಕ್ಕುದಾಗಿದೆ. ಈಗ ಸಹ ಹತ್ತಿ ಬೆಳೆವ ನಾಡುಗಳ ನಿರೀಕ್ಷಣೆಯನ್ನು ಮಾಡಿದರೂ ಈ ಅಭಿಪ್ರಾಯವೇ ಬಲಪಡುತ್ತಿದೆ. ಹಿಂದೂ ದೇಶದಲ್ಲಿ ಕಾಡುಹತ್ತಿಯ ಗಿಡವು ಸಿಂಧಪ್ರಾಂತದಲ್ಲಿ ದೊರೆಯುತ್ತದೆಂದು ಕಂಡು ಹಿಡಿದಿರುವರು. ಹತ್ತಿಯ ಶಾಸ್ತ್ರದಲ್ಲಿ ನಿಷ್ಣಾತರಾದ ಧಾರವಾಡ ಫಾರ್ಮಿನ ರಾವಸಾಹೇಬ ಕೊಟ್ಟೂರರವರು ಕಾಡುಹತ್ತಿಯ ಒಂದು ಜಾತಿಯು ಬಾದಾಮಿಯ ಭಾಗದಲ್ಲಿಯೂ ಇರುವುದನ್ನು ಹುಡುಕಿದ್ದಾರೆ. ಪ್ರಾಥಮಿಕ ಸ್ಥಿತಿಯೊಳಗಿನ ಹತ್ತಿಯ ಈ ಮಾತು ಹಾಗಿರಲಿ. ಹಿಂದೂದೇಶದಲ್ಲಿ ಹತ್ತಿ ಬೆಳೆಯುವುದಕ್ಕೆ ಯೋಗ್ಯವಾಗಿರುವ ಹವೆ ಮತ್ತು ಭೂಮಿಗಳ ಶಾಸ್ತ್ರೀಯ ನಿರೀಕ್ಷಣಮಾಡಿ, ಒಕ್ಕಲತನದ ವಿದ್ಯೆಯಲ್ಲಿ ಪಾರಂಗತರಾದ ಅಮೇರಿಕೆಯ ವಿಜ್ಞಾನಿಗಳು ಗ್ರಂಥಗಳನ್ನು ಬರೆದಿಟ್ಟಿದ್ದಾರೆ.

ಹಿಂದೂ ದೇಶದಲ್ಲಿ ಹತ್ತಿ ಬೆಳೆಯಲು ಯೋಗ್ಯವಾದ ಭೂಮಿಯಲ್ಲಿ ಮೂರು ವಿಭಾಗಗಳನ್ನು ಮಾಡಿದ್ದಾರೆ.[೮] (೧) ಮುಂಬೈ ಇಲಾಖೆಯ ಮಧ್ಯಪ್ರದೇಶ, ಹೈದರಾಬಾದ (ನಿಜಾಂ) ಉತ್ತರಭಾಗ, ವರ್‍ಹಾಡ ಮಧ್ಯ ಹಿಂದುಸ್ತಾನದ ಪಶ್ಚಿಮಭಾಗ, ಕಾಠೇವಾಡಿನ ಬಹುಭಾಗ, ಸೂರತ್, ಅಹಮದಾಬಾದಿಗಳು; ಮದ್ರಾಸಿನ ದಕ್ಷಿಣಭಾಗ; ಇದೆಲ್ಲವೂ ಹತ್ತಿಯ ಎರೆಭೂಮಿ; (೨) ಮಸಾರಿ (ಕೆಂಪು) ಭೂಮಿಯು ಮದ್ರಾಸ ಇಲಾಖೆ, ಹೈದರಾಬಾದ (ನಿಜಾಂ) ಪೂರ್ವಭಾಗ, ಒರಿಸ್ಸಾಗಳಲ್ಲಿದೆ. (೩) ಸಿಂಧೂ-ಗಂಗಾ ತೀರದ ರೇವೆ ಮಣ್ಣಿನ ಭೂಮಿ; ನರ್ಮದಾ ತಾಪಿಗಳ ಕೊಳ್ಳಗಳು. ಆದರೆ, ಇದಕ್ಕಿಂತಲೂ The Cotton plant ಎಂಬ ಗ್ರಂಥದಲ್ಲಿ ಸುಮಾರು ಇದೇ ಬಗೆಯಾಗಿ ನಾಲ್ಕು ವಿಭಾಗಗಳನ್ನು ಕಲ್ಪಿಸಿದ್ದು ಅವುಗಳ ತಾರತಮ್ಯಗಳನ್ನು ನಿರ್ಣಯಿಸಿದ್ದಾರೆ. ಪು. (೪೩, ೪೪) (೧) ಗಂಗಾನದಿಯ ಕೊಳ್ಳ; (೨) ಡೆಕ್ಕನ್ (೩) ಪಶ್ಚಿಮ ಹಿಂದುಸ್ಥಾನ (೪) ದಕ್ಷಿಣ ಹಿಂದುಸ್ಥಾನ. "ಬಂಗಾಳದ ಹತ್ತಿಯ ಬೆಳೆಯು ಮಹತ್ವದ್ದಾಗಿಲ್ಲ. ಬಂಗಾಳದ ಬೆಲೆಯುಳ್ಳ ಭೂಮಿಯಲ್ಲಿ ಉಳಿದುದೆಲ್ಲವೂ ಬೇಕಾದಷ್ಟು ಸೊಗಸಾಗಿ ಫಲಿಸಿದರೂ ಹತ್ತಿಯು ಮಾತ್ರ ಯಥಾಯಥಾ! ಡಾಕ್ಕಾದ ಮಕ್‍ಮಲಿನ ಜಗತ್‍ಪ್ರಸಿದ್ಧ ಹತ್ತಿಯು

ಇಲ್ಲಿಯೆ ಬೆಳೆದುದು. ಆದರೆ ಅದರ ಪ್ರಮಾಣವು ಬಹಳ ಕಡಿಮೆ. ಇನ್ನು ಗಂಗೆಯ ದಂಡೆಗುಂಟ ಹತ್ತಿಯನ್ನು ಬೆಳೆಯಲು ಚೆನ್ನಾದ ಅನುಕೂಲತೆಗಳಿಲ್ಲ. ಮಳೆ ಬಹಳ, ಕೊಳಚೆ, ಆದರೂ ಕೆಲವೆಡೆಯ ಎತ್ತರ ಪ್ರದೇಶದಲ್ಲಿ ಕೆಲಮಟ್ಟಿಗೆ ಹತ್ತಿಬೆಳೆಯಲು ಸಾಧ್ಯವಿದೆ. ಬುಂದೇಲಖಂಡದ ಹತ್ತಿಯು ಚೆನ್ನಾಗಿದ್ದುದು ನಿಜ. ಆದರೆ ಅಲ್ಲಿ ಮಳೆಯಾಗುವದಿಲ್ಲ. 'ಒಮ್ಮೆ ಅತಿವೃಷ್ಟಿ, ಒಮ್ಮೆ ಅನಾವೃಷ್ಟಿ'!

ಡೆಕ್ಕನ್ ಅಥವಾ ಮಧ್ಯಹಿಂದುಸ್ಥಾನವು ಹಿಂದೂದೇಶದ ಮಹತ್ವದ ಹತ್ತಿಯ ನಾಡು (the great cotton section of India) ಇಲ್ಲಿಯ ಭೂಮಿಯು ಹತ್ತಿಗೆ ಬಹಳ ಉತ್ಕೃಷ್ಟವಾಗಿದೆ (of the great excellence and rihness). ಈ ಮಣ್ಣಿನಲ್ಲಿ ಬಹಳ ಕಾಲದ ವರೆಗೆ ಹಸಿಯನ್ನು ಹಿಡಿದಿಡುವ ಗುಣವಿದೆ. ಪರದೇಶಕ್ಕೆ ಹೋಗುವ ಹತ್ತಿಯೆಲ್ಲವೂ ಬಹುತರವಾಗಿ ಇಲ್ಲಿಯದೇ." ಡೆಕ್ಕನ್ನಿನಲ್ಲಿ ನಾಗಪೂರ, ಹೈದರಾಬಾದ, ವರ್ಹಾಟ ಮತ್ತು ಧಾರವಾಡ ಎಂದು ನಾಲ್ಕು ಉಪಭಾಗಗಳನ್ನು ಮಾಡಿದ್ದಾರೆ. ನಾಗಪುರದ ನೆಲವು ಚೆನ್ನಾಗಿದೆ; ಹೈದರಾಬಾದಿನದೂ ಉತ್ತಮ; ಧಾರವಾಡಿನದೂ ಅಡ್ಡಿಯಿಲ್ಲ. ಆದರೆ, ವರ್ಹಾಡಭೂಮಿಗೆ ಸರಿ-ಸಮಾನವಾದ ಬೇರೆ ಭೂಮಿಯೇ ಎಲ್ಲಿಯೂ ಇಲ್ಲ. (unsurpassed in richness and depth adaptability to the cultivation of cotton). ದಕ್ಷಿಣ ಹಿಂದುಸ್ಥಾನದಲ್ಲಿ ಕೊಯಿಮತ್ತೂರು ಮತ್ತು ತಿನವೆಲ್ಲಿ ಭಾಗದ ಹತ್ತಿಯೂ ನೆಟ್ಟಗಿರುತ್ತದೆ.

ಆರ್ಯರ ಮೊದಲಿನ ವಸತಿಸ್ಥಾನವೆನಿಸಿದ ಸಪ್ತಸಿಂಧು ಪ್ರದೇಶವು ಹತ್ತಿಗಾಗಿ ಎಂದೂ ಹೆಸರಾಗಿಲ್ಲ. ಆದುದರಿಂದ, ಆ ಭಾಗದ ಜನರಿಗೆ ಅದರಲ್ಲೂ ಆರ್ಯರಿಗೆ ಹತ್ತಿಯು ಹೊಸತು. ಆದುದರಿಂದಲೇ ಆರ್ಯರಿಗೆ ಹತ್ತಿ ಪರಕೀಯ. ಈ ಮೊದಲೇ ಸೂಚಿಸಿರುವಂತೆ 'ಧಾಬಳಿ'ಗಿಂತ ಹತ್ತಿಯ ಬಟ್ಟೆಯ ಮಡಿಯು ಎರಡನೆಯ ತರಗತಿಗೆ ಬರುವುದಕ್ಕೂ ಇದೇ ಕಾರಣವಿರಬೇಕು. ವೇದಮೂರ್ತಿ, ವಿದ್ಯಾನಿಧಿ, ಚಿತ್ರಾವಶಾಸ್ತ್ರಿಗಳು ಋಗ್ವೇದದ ಭಾಷಾಂತರದಲ್ಲಿ ಒಂದು ಮಹತ್ವದ ಮಾತನ್ನು ಓದುಗರ ಗಮನಕ್ಕೆ ತಂದು ಕೊಟ್ಟಿದ್ದಾರೆ. ಸೋಮರಸವನ್ನು ಹಿಂಡಿ ಸೋಸುವಾಗ ಪ್ರಾಚೀನ ಋಷಿಗಳು ಉಣ್ಣೆಯ ಬಟ್ಟೆಯನ್ನೇ ಉಪಯೋಗಿಸುತ್ತಿರಬೇಕೆಂದು ತೋರುತ್ತದೆ. ಆದರೆ, ಉಣ್ಣೆಯ ಮಸವು ಸೋಸುವುದಕ್ಕೆ ಅಷ್ಟು ಸರಿಯಾದುದಲ್ಲ; ರಸವು ಹೊರ ಬರುವುದಕ್ಕೆ ತೊಂದರೆಯಾಗುತ್ತದೆ. ಆದುದರಿಂದ ಈಗಿನವರು ಹತ್ತಿಯ ವಸ್ತ್ರವನ್ನು ಉಪಯೋಗಿಸುವರು. ಆದರು ಹತ್ತಿಯ ವಸ್ತ್ರದ ಎರಡೂ ಕಡೆಗೆ ಸ್ವಲ್ಪ ಉಣ್ಣೆಯ ಬಟ್ಟೆಯ ತುಂಡನ್ನು ಜೋಡಿಸಿ ಹಿಡಿಯುವ ಪರಿಪಾಠವು ಮಾತ್ರ ಉಳಿದಿದೆ. ಶ್ರೀಮಾನ್ ಸಿದ್ಧೇಶ್ವರಶಾಸ್ತ್ರೀ ಚಿತ್ರಾವ ಈ ಊಹೆಯು ಸರಿಯಾಗಿದೆ. ಸಪ್ತಸಿಂಧೂತೀರದ ಆರ್ಯರಿಗೆ ಮೊದಲು ಹತ್ತಿಯು ಗೊತ್ತಿರುವ ಸಂಭವವಿಲ್ಲ. ಹತ್ತಿಯ ಬಟ್ಟೆಯು ಗೊತ್ತಿದ್ದರೆ ಸೋಸುವುದಕ್ಕೆ, ಇದನ್ನು ಬಿಟ್ಟು ಉಣ್ಣೆಯ ವಸ್ತ್ರವನ್ನು ಯಾರು ತಾನೇ ತಕ್ಕೊಂಡಾರು?

ಇವೆಲ್ಲ ಸಂಗತಿಗಳನ್ನು ಪರ್ಯಾಲೋಚಿಸಿದರೆ ಹತ್ತಿಯು ಹಟ್ಟಿನಾಡಿನ ವಸ್ತುವಾಗಿರಬೇಕೆಂದು ಊಹಿಸ ಬಹುದಾಗಿದೆ. ಜಗತ್ತಿಗೆ ಮೊದಲು ಬಟ್ಟೆಯನ್ನು ಪೂರಯಿಸಿದವರು ತಾವೇ ಎಂದು ಅಭಿಮಾನದಿಂದ ತಮ್ಮ ಪರಂಪರೆಯನ್ನು ಹೇಳುವ ದೇವಾಂಗರ ರಾಷ್ಟ್ರವು, ದೇವರಾಷ್ಟ್ರವು ಇಲ್ಲಿಯೇ ಇದೆ. ಜಾಡರ ಜಾಡಿಮಂಡಲ-ಝಾಡಿಮಂಡಲವೂ ಇದೆ. ಮರ (ಮರ=ಝಾಡ) ಹಾಟವು ಇದೇ. ಉತ್ತರ ಕರ್ನಾಟದ ಗೆಜೆಟಿಯರಿನಲ್ಲಿ ಜಾಡರು ಬೆಳಗಾಂವಿ, ಧಾರವಾಡ, ವಿಜಾಪೂರಗಳ ಕಡೆಗೆ ಉತ್ತರದಿಂದ ಬಂದರೆಂದು ಹೇಳುವ ಈ ಜನಾಂಗದ ನೆಲೆವೀಡು (ಪ್ರಥಮ ರಾಷ್ಟ್ರ) ಇಲ್ಲಿಯೇ.

ಜಗತ್ತಿಗೆ ಮೊಟ್ಟಮೊದಲಿಗೆ ಬಟ್ಟೆಗಳನ್ನು ಕೊಟ್ಟವರು ದೇವಾಂಗರೆಂದು ಇವರ ಪುರಾಣವು ಸಾರುತ್ತಲಿದೆ. ಬಟ್ಟೆಯ ಇತಿಹಾಸವನ್ನು ನೋಡಿದರೆ 'ಹಟಗಾರರಿ'ಗೇ ಇದರ ಶ್ರೇಯಸ್ಸು ಸಲ್ಲುವುದೆಂದು ಕಂಡುಬರುತ್ತದೆ. ಮನುಷ್ಯನ ಬಟ್ಟೆಯ ವಿಕಾಸಕ್ರಮದಲ್ಲಿ ಮೊದಲು ನಾರಿನ ವಸ್ತ್ರ; ಬಳಿಕ ಉಣ್ಣೆ; ನಾರು ಮತ್ತು ಉಣ್ಣೆ ಎರಡೂ ವಸ್ತ್ರಗಳು ಕೆಲವೊಂದು ಕಾಲದಲ್ಲಿ ಉಪಯೋಗದಲ್ಲಿದ್ದುವು. ಚೀರ, ಸೀರೆ, ಚೇಲ, ಸಾಡಿ, ಶಾಟಿಗಳು ಮೂಲತಃ

ವಲ್ಕಲಗಳು, ಎಂದರೆ ನಾಡಿನ ಬಟ್ಟೆಗಳೆಂಬುದೂ, ನವುರು ಚೋಳಿಗಳು ಉಣ್ಣೆಯವೆಂಬುದೂ ಆ ಶಬ್ದಗಳಿಂದಲೇ ಧ್ವನಿತವಾಗುತ್ತಿದೆ. ಅದರಂತೆ, ಜವಳಿಯು, ನಾರು ಮತ್ತು ಉಣ್ಣೆಬಟ್ಟೆಯ ಎರಡೂ ಪ್ರಕಾರಗಳೂ ವ್ಯವಹಾರದಲ್ಲಿದ್ದಾಗ ರೂಢವಾದ ಶಬ್ದವಾಗಿರಬೇಕು. ಮುಂದೆ ಹತ್ತಿಯು ಬಂದು, ನಾರುಬಟ್ಟೆಗಳನ್ನು ಹಿಂದಿಕ್ಕಿತು. ಮರವರು-ಜಾಡರು ತೀರ ಆರಂಭಕಾಲದಿಂದಲೂ ಬಟ್ಟೆಯ ಉದ್ಯೋಗವನ್ನು ಬಲ್ಲವರಾಗಿರಬೇಕು. ಅವರ ಈ ನೆನಹು ಅವರ ಪುರಾಣದಲ್ಲಿ, ದೇವಾಂಗನೇ ಜಗತ್ತಿಗೆ ಮೊದಲು ಬಟ್ಟೆಯನ್ನು ಕೊಟ್ಟನೆಂಬ ರೀತಿಯಲ್ಲಿ ಉಲ್ಲೇಖಿತವಾಗಿದೆ. ಅವರ ಬನಶಂಕರಿ ಮತ್ತು ಚೌಡೇಶ್ವರಿ ಎಂಬ ದೇವತೆಗಳು ನಾರು ಮತ್ತು ಉಣ್ಣೆಗಳ ಯುಗದ ನೆನಪು ಕೊಡುವ ದೇವತೆಗಳಾಗಿದ್ದಾರೆ. ಹತ್ತಿಯು ಗೊತ್ತಾಗುವ ಹೊತ್ತಿಗೆ ಈ ಜನಾಂಗವು ಈಗಿನ ವರ್‍ಹಾಡ, ಮರಹಾಟಕ್ಕೆ ಬಂದು ನೆಲೆಯಾಗಿರಬೇಕೆಂದು ಊಹಿಸಬಹುದಾಗಿದೆ.

ಇವರ ದೇವಾಂಗ ಪುರಾಣದಲ್ಲಿ ದೇವಾಂಗನು ಜಂಬೂದ್ವೀಪ, ಪ್ಲಕ್ಷದ್ವೀಪ, ಕುಶದ್ವೀಪ, ಕ್ರೌಂಚದ್ವೀಪ, ಶಾಕದ್ವೀಪ, ಶಾಲ್ವಲದ್ವೀಪ ಮೊದಲಾದ ದ್ವೀಪಗಳಿಗೆ ಹೋಗಿ ಅಲ್ಲಿ ತಾನು ನಿರ್ಮಿಸಿದ ವಸ್ತ್ರಗಳನ್ನು ಕೊಟ್ಟು ಆಯಾ ದೇಶಗಳಿಂದ ಅನರ್ಘ್ಯವಾದ ಮುತ್ತು ರತ್ನಾದಿ ಸಂಪತ್ತನ್ನು ತನ್ನ ರಾಜ್ಯಕ್ಕೆ ತಂದ ವರ್ಣನೆಯಿದೆ. (ಪು. ೯೮); ಜುಂಬೂದ್ವೀಪಕ್ಕೆ ಬಂದು ಮಾಳವ, ಕೊಂಕಣ, ದ್ರವಿಡ, ಕೇಕಯ, ಕಳಿಂಗ, ಚೋಳ, ನೇಪಾಳ, ಮದ್ರ, ಸಿಂಧು ಮೊದಲಾದ ನಾಡುಗಳಲ್ಲೆಲ್ಲ ವಸ್ತ್ರ-ಪ್ರಸಾರವನ್ನು ಮಾಡಿದುದನ್ನೂ ಹೇಳಲಾಗಿದೆ. ಈ ಪುರಾಣವು ಇತ್ತೀಚೆಗೆ ಬರೆಯಲ್ಪಟ್ಟಿರುವುದರಿಂದ ಇಲ್ಲಿ ಈ ಹೇಳಿಕೆಯ ತಾತ್ಪರ್ಯವೇನೆಂಬುದನ್ನು ಮಾತ್ರ ಮುಖ್ಯವಾಗಿ ಗ್ರಹಿಸಬಹುದಾಗಿದೆ. ಈ "ಹಟಗಾರ-ಜಾಡರೇ" ನಮ್ಮ ನಾಡಿನಲ್ಲಿ ಹತ್ತಿಯ ವಸ್ತ್ರವನ್ನು ಮೊಟ್ಟಮೊದಲು ನಿರ್ಮಿಸಿದವರು. ದೇಶದೇಶಕ್ಕೆಲ್ಲ ಈ ಬಟ್ಟೆಗಳನ್ನು ಪೂರೈಸುವುದೂ ಮೊದಲು ಇವರ ಕೈಯಲ್ಲಿಯೇ ಇತ್ತು. ಆದುದರಿಂದಲೆ, 'ಕುಬೇರನಿಗೂ ಸಾಲಕೊಡಲು ಸಮರ್ಥರಾದ ಸೆಟ್ಟಿಗಳು', 'ಬಣಂಜುಗಳು' ಇದ್ದ ವರ್ಣನೆಗಳು ಸಿಕ್ಕುವವು. 'ಪರದರಮನೆಗಳವು ಧನದನ ಮನೆಯನು ಏಳಿಪವು' ಎಂದು ಪಂಪನು ನಮ್ಮ ವರ್ತಕರ ವೈಭವವನ್ನು ಹೇಳುತ್ತಾನೆ. "ಹಿಂದಕ್ಕೆ ರೋಮ ಪಟ್ಟಣದಲ್ಲಿ ಹತ್ತಿ, ಮತ್ತು ಹತ್ತಿಯ ಬಟ್ಟೆಗಳಿಗೆ ಕಲ್ಪನಾತೀತವಾಗಿ ಹಣವು ಸಿಕ್ಕುತ್ತಿತ್ತು. ಆ ಕಾಲಕ್ಕೆ ಹಿಂದೂದೇಶದ ಹೊರತು ಬೇರೆ ಎಲ್ಲಿಯೂ ಹತ್ತಿಯೇ ಬೆಳೆಯುತ್ತಿದ್ದಿಲ್ಲ."[೯] ರೋಮ ಸಾಮ್ರಾಜ್ಯದಿಂದ ಪ್ರತಿ ವರ್ಷ ೪೮೬, ೯೭೯ ಪೌಂಡುಗಳಿಗಿಂತಲೂ ಹೆಚ್ಚು ಹಣವು ಬಗೆಬಗೆಯ ವ್ಯಾಪಾರದ ಮೂಲಕವಾಗಿ ಹಿಂದೂದೇಶಕ್ಕೆ ಹೋಗುತ್ತಿದೆಯೆಂದು ಪ್ಲಿನಿಯೆಂಬ ಕ್ರೈಸ್ತಶಕದ ಆರಂಭದ ಲೇಖಕನು ಬರೆಯುತ್ತಾನೆ. ಹೀಗೆ ಜಗತ್ತಿನ ಸುವರ್ಣದ ಪ್ರವಾಹವು ಹಿಂದೂದೇಶದ ಕಡೆಗೆ ತಿರುಗಿದ್ದುದರಿಂದಲೆ ಈಗ ಭಾರತ ವರ್ಷವು ಸುವರ್ಣಭೂಮಿಯೆನಿಸಿರಬಹುದಲ್ಲವೆ? ಅದರೊಳಗೂ ಕಾಲಾನುಕ್ರಮದಲ್ಲಿ ದ್ವಾರಾವತಿ (Gate way of India) ಬರೋಡ, ಸೋಪಾರಾ, ಭಟ್ಕಳ್, ಉದ್ಯಾವರ (ಮಲ್ಪೆ) ಗಳು ಆಗಿನ ಪಶ್ಚಿಮ ದಂಡೆಯ (ಕುಂತಲದ) ವ್ಯಾಪಾರದ ಮುಖ್ಯ ಬಂದರಗಳಾಗಿ ಲಕ್ಷ್ಮಿಯ ನಿವಾಸಸ್ಥಾನವಾಗಿದ್ದರೆ ಸೋಜಿಗವೇನು? ಈ ಭಾಗವೆಲ್ಲವು ಕುಂತಳ, ಹಟ್ಟಿನಾಡು, ಪ್ರಾಚೀನ ಕರ್ಣಾಟಕಕ್ಕೇ ಸಂಬಂಧಪಟ್ಟುದೆಂಬುದನ್ನು ಮರೆಯಲಾಗದು.

ಜಗತ್ತಿನ ಎಲ್ಲ ಸುಧಾರಣೆಗಳ ಉಗಮಸ್ಥಾನವು ಚೀನವೇ ಎಂದು ಪ್ರತಿಪಾದಿಸುವವರು ಕೆಲರು; ಈಜಿಪ್ಟವೇ ಎಂದು ಹಟ ಹಿಡಿದಿರುವವರು ಹಲರು. ಆದರೆ, ಇವೆರಡೂ ದೇಶಗಳಲ್ಲಿ ಹತ್ತಿಯು ಹೋದುದು ಹಿಂದೂ ದೇಶದಿಂದಲೇ! ಈಜಿಪ್ಟಭಿಮಾನಿ ಸಂಶೋಧಕರೊಬ್ಬರು "ಇಲ್ಲಿಯ ಪುರಾತನ ವಸ್ತುಗಳಲ್ಲಿ ಹತ್ತಿಯ ಅವಶೇಷಗಳು ಈಗ ಸಿಕ್ಕರದಿದ್ದರೂ ಇಂದಿಲ್ಲ ನಾಳೆಯಾದರೂ ಅವು ಸಿಕ್ಕಲೇಬೇಕೆಂದು ನನ್ನ ವಿಶ್ವಾಸವಿದೆ."ಯೆಂದು ಆಗ್ರಹದಿಂದ ಬರೆದಿದ್ದಾರೆ ಹಿಂದೂದೇಶದಿಂದ ಅತಿ ಪ್ರಾಚೀನ ಕಾಲದಲ್ಲಿಯೇ ಹೋದ ಹತ್ತಿಯಗಿಡವು ಕ್ರಿ.ಶ. ೧೩೦೦ರ ವರೆಗೆ ಚೀನ ದೇಶದ ತೋಟಗಳಲ್ಲಿ ಒಂದು 'ವಿಚಿತ್ರ'ಗಿಡವೆಂದು ಅಂದಚೆಂದದ ಗಿಡಬಳ್ಳಿಗಳೊಡನೆ ಬೆಳೆಸಲ್ಪಡುತ್ತಿತ್ತು ಅಸ್ಸೀರಿಯಾದ ರಾಜನು ಕ್ರಿ. ಪೂ. ೭೦೦ರಲ್ಲಿ ಹಿಂದೂದೇಶದಿಂದ ಹತ್ತಿಯ ಗಿಡವನ್ನು ತನ್ನ ನಾಡಿಗೆ ಒಯ್ದನೆಂದು ಪ್ರಾಚೀನ ಸಂಶೋಧಕರು ಕಂಡುಹಿಡಿದಿದ್ದಾರೆ.[೧೦] ಲ್ಯಾಟಿನ್ ಮತ್ತು ಹಿಬ್ರೂ ಭಾಷೆಗಳಲ್ಲಿ

'ಕಾರ್ಪಾಸ' ಎಂಬ ಶಬ್ದವಿದೆ. ಹತ್ತಿಗೆ ಇಂಗ್ಲಿಷಿನಲ್ಲಿ ಕೌಟನ್ (Cotton) ಎಂಬುದು ಅರಬ್ಬಿ ಭಾಷೆಯಿಂದ ಬಂದ ಶಬ್ದವೆಂದು ಹೇಳುತ್ತಾರೆ. ಆದರೆ, ಅರಬ್ ಸ್ಥಾನವು ಹತ್ತಿಯ ಮೂಲಸ್ಥಾನವೇ ಅಲ್ಲ. ಆದುದರಿಂದ 'ಕಾಟನ್' ಇದು 'ಕರ್ಪಟಮ್' ಎಂಬುದರ ಅರಬ್ಬೀ ರೂಪವಿರಬಹುದೆ? ಏಕೆಂದರೆ ಅರಬ್ಬಿ ವರ್ತಕರು ಹಿಂದೂದೇಶದಿಂದಲೆ ಕರ್ಪಟ-ಕರ್ಪಾಸಗಳನ್ನು ಒಯ್ಯುತ್ತಿದ್ದರೆಂದು ಇತಿಹಾಸವು ಹೇಳುತ್ತಿದೆ. ಹತ್ತಿಯ ಗಿಡವು ಯುರೋಪಿಯರಿಗೆ ಎಷ್ಟೋ ಶತಮಾನಗಳ ವರೆಗೂ ಅತ್ಯಂತ ಆಶ್ಚರ್ಯಕರವಾದ ವಸ್ತುವಾಗಿತ್ತು. ಗ್ರೀಕ್‌ಲೇಖಕರು ಹತ್ತಿಯ ಗಿಡಕ್ಕೆ 'ಉಣ್ಣೆಯ ಮರ' 'ಕುರಿಯ ಮರ' ವೆಂದು ಹೆಸರಿಟ್ಟಿದ್ದರು ಹತ್ತಿಯಗಿಡದ ಬಗ್ಗೆ ತುಂಬ ಕುತೂಹಲವುಳ್ಳ ಯುರೋಪೀಯ ಜನಾಂಗಗಳಲ್ಲಿ ಇದನ್ನು ಕುರಿತು ಬಹಳ ಸೋಜಿಗದ ಕಟ್ಟುಕತೆಗಳು ಹರಡಿಕೊಂಡಿದ್ದುವು. ಈ 'ಕುರಿಯಮರ'(Vegetable Lamb or Zoophyte) ವನ್ನು ಕುರಿತು ಆಗಿನ ಕಲ್ಪನೆಗಳನ್ನು ಓದಿದರೆ ನಮ್ಮ ದೇವಾಂಗಪುರಾಣದ ಕಥೆಯ ನೆನಪು ಆಗದೆ ಇರದು.[೧೧]

> "ಈ ಗಿಡವು ಕುರಿಯಂತಿರುತ್ತದೆ; ಇದರ ಹೊಕ್ಕಳೊಳಗಿಂದ ಒಂದು ಶಾಖೆಯು ಅಥವಾ ಬೇರು ಹೊರಡುತ್ತದೆ; ಇದರ ಆಧಾರದ ಮೇಲೆ ಈ ವೃಕ್ಷರೂಪದ ಪ್ರಾಣಿಯು ಸ್ಥಿರವಾಗಿ ನಿಲ್ಲುತ್ತದೆ!....... ಮತ್ತು ಇದರ ಬೇರು ತನ್ನ ಅಳವಿನಲ್ಲಿ ಸಿಕ್ಕುವ ವನಸ್ಪತಿಗಳನ್ನು ತಿಂದು ಬದುಕುತ್ತದೆ. ಇದನ್ನು ದೊರಕಿಸುವುದಕ್ಕೆ ಹೊರಟ ಬೇಟೆಗಾರರು ಸರಿಯಾಗಿ ಗುರಿಯಿಟ್ಟ ಬಾಣಗಳಿಂದ ಅದನ್ನು ಕತ್ತರಿಸಿ ಬಿಡುವವರೆಗೂ ಅದನ್ನು ಎತ್ತಲಿಕ್ಕೆ ಬರುವುದಿಲ್ಲ; ಚೆನ್ನಾಗಿ ಕತ್ತರಿಸಿದ ಬಳಿಕ ಮಾತ್ರ, ಅದು ನೆಲಕ್ಕುರುಳಿ ಜೀವಬಿಡುವುದು. ಇದರ ಎಲುವುಗಳನ್ನು ಭವಿಷ್ಯವಾದಿಯಾಗಲು ಅಪೇಕ್ಷೆಯುಳ್ಳವರ ಬಾಯಲ್ಲಿ ವಿಧಿಪೂರ್ವಕವಾಗಿ ಹಾಕುವರು. ಕೂಡಲೆ ಆ ಮನುಷ್ಯನಿಗೆ ದೈವೀಶಕ್ತಿಯು ಪ್ರಾಪ್ತವಾಗಿ ಅವನು ಕಾಲಜ್ಞಾನಿಯಾಗುವನು'

ಸರ್ ಜೊನ್ ಮಂಡೆವಿಲ್ಲ ಎಂಬ ಪ್ರವಾಸಿಯು ೧೩೨೨ರಲ್ಲಿ ಇಂಗ್ಲೆಂಡಿನಿಂದ ಹೊರಟಿದ್ದನು. ಆತನು ಈ ವಿಚಿತ್ರ ಚಮತ್ಕಾರವನ್ನು ಕುರಿತು ಬರೆಯುವುದೇನೆಂದರೆ:

> "ನಾನು ವಿಶ್ವಾಸಾರ್ಹರಾದ ಹಲವು ಗೃಹಸ್ಥರಿಂದ ಒಂದು ಸೋಜಿಗದ ಸಂಗತಿಯನ್ನು ಕೇಳಿದೆನು (ಹತ್ತಿಯ) ಗುಂಡುಗಳು ಬಿಚ್ಚಿದೊಡನೆ ಅದರೊಳಗಿಂದ ಒಂದು ಪುಟ್ಟ ಕುರಿಯಂತಹದೊಂದು ಪ್ರಾಣಿಯು ಹೊರ ಬೀಳುವುದು. ಅದರಿಂದ ಅವರಿಗೆ ಒಂದೇ ಕಾಲಕ್ಕೆ ಕಲ್ಲಂಗಡಿ ಮತ್ತು ಮಾಂಸಗಳೆರೆಡೂ ಒಂದರಲ್ಲಿಯೆ ದೊರೆಯಿತಂತೆ! ಕೆಲರು, ಕದಾಚಿತ್ ಇದನ್ನು ನಂಬಲಿಕ್ಕಿಲ್ಲ; ಆದರೂ ಇದೂ ಸಂಪೂರ್ಣ ಸತ್ಯವಿದೆ."

ಈ ಬಗೆಯ ಕಥೆಯಲ್ಲಿ ಇಂಗ್ಲೆಂಡಿನವರಿಗೆ ಹದಿನೇಳನೆಯ ಶತಮಾನದ ವರೆಗೂ ನಂಬುಗೆಯಿದ್ದಿತು.[೧೨]

ದೇವಾಂಗ ಪುರಾಣದಲ್ಲಿ ಇಂತಹದೆ ಒಂದು ವರ್ಣನೆಯಿದೆ. ವಿಷ್ಣುವಿನ ಹೊಕ್ಕಳಲ್ಲಿ ಇದ್ದ ಮಾನಿ, ಅಭಿಮಾನಿಗಳೆಂಬ ಸ್ತ್ರೀಯರು ನೂಲಿನ ಉತ್ಪತ್ತಿಗಾಗಿ ಸ್ಥಾವರ (ಗಿಡ) ಗಳಾಗಿ ಜನ್ಮಿಸಿದರಂತೆ. ಈ ಗ್ರಂಥದ ಬೇರೊಂದೆಡೆಯಲ್ಲಿ ಹೇಳಿದಂತೆ (ಪು. ೨೧) ವಿಷ್ಣು ಶಬ್ದಕ್ಕೆ ಕುರಿ ಎಂದು ಅರ್ಥ ಮಾಡಿದರೆ; ಯುರೋಪಿನಲ್ಲಿ ಪ್ರಸಾರವಾಗಿದ್ದ ಆ ಮೇಲಣ ಕಥೆಗೂ ದೇವಾಂಗ ಪುರಾಣದೊಳಗಿನ ಈ ಕಲ್ಪನೆಗೂ ಎಷ್ಟೋ ಸಾಮ್ಯವಿದೆ! ಯುರೋಪದಲ್ಲಿ ಹಬ್ಬಿದ್ದ ಆ ಕಥೆಯು ದೇವಾಂಗಪುರಾಣದೊಳಗಿಂದ ದೇವಾಂಗರಿಂದಲೆ ಪ್ರಚಾರದಲ್ಲಿ ಬಂದಿರಲಿಕ್ಕಿಲ್ಲವಷ್ಟೆ? ಈ ಬಗೆಯ ಸಂದೇಹವುಂಟಾಗುವುದಕ್ಕೆ ಕಾರಣವಿದೆ. ಏಕೆಂದರೆ ಹಿಂದೂದೇಶದಿಂದ ಇಜಿಪ್ತ-ಗ್ರೀಸದೇಶಗಳಿಗೆ ಹತ್ತಿಯು ಹೋಗುತ್ತಿದ್ದ ವ್ಯಾಪಾರಮಾರ್ಗದಲ್ಲಿದ್ದ ದೇಶಗಳಲ್ಲಿ ಹಿಂದೂದೇಶದ ಎಷ್ಟೋ ಆಚಾರ-ವಿಚಾರಗಳು ನೆಲೆಗೊಂಡುದರ ಪ್ರಾಚೀನ ಇತಿಹಾಸವು ಬೆಳಕಿಗೆ ಬರುತ್ತಲಿದೆ. ಇಜಿಪ್ತಿನ ದೇವತೆಗಳಲ್ಲಿ Ammon (ಅಮ್ಮನವರು) ಇದ್ದಾರೆ; ಬಾಬಿಲೋನ ಗ್ರೀಕ್ ದೇಶಗಳಲ್ಲಿ ಶೆನ್ (ಚೆನ್, ಚಂದಿರ)

ಶಬ್ದವು ಕಂಡು ಬರುತ್ತದೆ. ಗ್ರೀಸದೇಶದೊಳಗೆ ಕ್ರಿ. ಪೂ. ಆರನೆಯ ಶತಮಾನದಲ್ಲಿ ಪ್ರಚಾರದಲ್ಲಿದ್ದ ಪರ್ವತ ಪೂಜೆಯು ಪೂರ್ವದೇಶದಿಂದ ಬಂದರೆಂದು ಇತಿಹಾಸಜ್ಞರು ಹೇಳುತ್ತಾರೆ.[೧೩] ಪಾರ್ವತಿ, ಗುಡ್ಡದ ಅವ್ವ, ಎಲ್ಲಮ್ಮ ಮೊದಲಾದ ಹೆಸರುಗಳಿಂದ ನಮ್ಮ ಹಟ್ಟಿಕಾರರು ಪೂಜಿಸುವ ದೇವತೆಗೂ ಗ್ರೀಸ, ಏಶಿಯಾಮೈನರ, ಬ್ಯಾಬಿಲೋನಗಳಲ್ಲಿ ಆರಾಧಿಸುತ್ತಲಿದ್ದ ದೇವತೆಗೂ ಆಶ್ಚರ್ಯಕಾರಕರಾದ ಸಾಮ್ಯವಿದೆ. (ಪು. ೧೮ ಇದೇ ಗ್ರಂಥ ನೋಡು) ಈ ದೇವಿಗೆ 'ಮಾ ಅಥವಾ ಅಮ್ಮನವರು (Ammas). ಎಂದು ಅಲ್ಲಿ ಹೆಸರು 'Mother of all Gods and all Men' ಎಂದು ಅವಳ ಖ್ಯಾತಿಯಿದೆ, ಆ ದೇಶಗಳಲ್ಲಿ ನಮ್ಮ ನಾಡಿನಲ್ಲಿ 'ಎಲ್ಲಮ್ಮ' (ಜಗದಂಬೆ) ಎಂಬುದರ ಅರ್ಥವಾದರೂ ಅದಕ್ಕಿಂತ ಬೇರೆ ಏನಿದೆ? ಇವಳಿಗೆ Cybele ಅಥವಾ Cybebe ಎಂಮೂ ಹೆಸರಿದೆ. ಇದು 'ಶಿವೆ', 'ಶಿವಬ್ಬೆ' ಎಂದರೆ ಪಾರ್ವತಿ ಎಂಬ ಹೆಸರೂ ಆಗಿರಬಹುದಲ್ಲವೆ? ಅಮ್ಮ ಎಂಬ ಹೆಸರೇ ಆ ನಾಡಿನಲ್ಲಿ ಪ್ರಚಾರದಲ್ಲಿತ್ತೆಂದ ಬಳಿಕ 'ಶಿವೆ' 'ಶಿವಬ್ಬೆ' ಎಂಬುದೂ ಏಕೆ ರೂಢಿಯಲ್ಲಿರಲಿಕ್ಕಿಲ್ಲ?

ಏಶಿಯಾಮೈನರಿನಿಂದ ಗ್ರೀಸದೇಶಕ್ಕೆ ಈ ದೇವಿಯು ದಯಮಾಡಿಸಿದಳಂತೆ. ಏಶಿಯಾಮೈನರ, ಬ್ಯಾಬಿಲೋನ, ಈಜಿಪ್ಟ್‌ದೇಶಗಳೊಡನೆ ಹಿಂದೂದೇಶದ ಜನರು-'ದ್ರಾವಿಡರು' ಬಹಳ ಪ್ರಾಚೀನ ಕಾಲದಿಂದಲೂ ತುಂಬ ವ್ಯಾಪಾರ ನಡಿಸುತ್ತಿದ್ದರೆಂಬುದು ಸರ್ವಮಾನ್ಯವಾದ ಸಂಗತಿಯಾಗಿದೆ. ಆದುದರಿಂದ, ಹಿಂದೂದೇಶದ ಹತ್ತಿಯೊಡನೆ ಈನಾಡಿನ ಆಚಾರ-ವಿಚಾರಗಳೂ ಅಲ್ಲಿಗೆ ಹೋಗಿರುವ ಸಂಭವವಿಲ್ಲವೆ? ಕನ್ನಡ ಮಾತುಗಳುಳ್ಳ ಒಂದು ಗ್ರೀಕ ನಾಟಕವು ಈಜಿಪ್ಪಿನಲ್ಲಿ ದೊರೆತುದು ಸುಪ್ರಸಿದ್ಧವಿದೆ. ಹಿಂದೂದೇಶದ ಪಶ್ಚಿಮ ಕರಾವಳಿಯಿಂದ ಪರದೇಶಗಳೊಡನೆ ವ್ಯಾಪಾರಮಾಡಲು ಪ್ರಾಚೀನ ಕಾಲದಲ್ಲಿ ತಮಿಳರಿಗಿಂತಲು ಕರ್ಣಾಟರಿಗೆ ಹೆಚ್ಚು ಬಂದರಗಳಿದ್ದುವು; ಹೆಚ್ಚು ಅನುಕೂಲತೆಗಳಿದ್ದುವು. ಆದುದರಿಂದ, ಈಜಿಪ್ಟ್, ಗ್ರೀಸ್ ಮೊದಲಾದ ದೇಶಗಳೊಡನೆ 'ದ್ರಾವಿಡರಲ್ಲಿ' ತಮಿಳರಿಗಿಂತಲೂ ಕರ್ಣಾಟಕ ಸಂಬಂಧಗಳೇ ಹೆಚ್ಚು ಬಂದಿರುವುದು ಸ್ವಾಭಾವಿಕವಾಗಿದೆ. ಆ ಕಾಲದಲ್ಲಿ ಅಲೆಕ್ಸಾಂಡ್ರಿಯಾ (ಇಜಿಪ್ತ) ಬಂದರದಲ್ಲಿ ಕನ್ನಡ ಜನಗಳ ಒಂದು ವಸಾಹತು ಇದ್ದು ಅದರೆದುರು ಕನ್ನಡ ಮಾತಿನ ಗ್ರೀಕಪ್ರಹಸನವನ್ನು ಆಡಿತೋರಿಸುತ್ತಿರುವ ಸಂಭವವೂ ಇಲ್ಲದಿಲ್ಲವೆಂದು ಶ್ರೀಮಾನ್ ಮಂ ಗೋವಿಂದ ಪೈಗಳು ಊಹಿಸಿದ್ದುದರಲ್ಲಿ ಹುರುಳಿದೆ (ಪ್ರಬುದ್ಧ ಕರ್ಣಾಟಕ ೧೯೩೦). ಅಲ್ಲದೆ ಕ್ರಿಸ್ತಪೂರ್ವ ೧೦೦೦ದ ಸುಮಾರಿನ ಹಿಬ್ರೂಭಾಷೆಯ ಬೈಬಲ್ಲಿನಲ್ಲಿ ಸಿಕ್ಕುವ ತೋಕೆ (ಸೋಗೆ) ಮೊದಲಾದ ಶಬ್ದಗಳು ಕೇವಲ ತಮಿಳುಮಾತುಗಳೆಂದು ಹೇಳಲಿಕ್ಕಾಗದು; 'ದ್ರಾವಿಡ ಭಾಷೆಗಳ ತಾಯ್ನುಡಿಯಾದ ಪ್ರಾಚೀನ ದ್ರಾವಿಡಕ್ಕೆ ಸಂಬಂಧಪಟ್ಟವುಗಳಿರಬೇಕು. ಅಲ್ಲವೆ ಕನ್ನಡ ನುಡಿಯೇ ಆಗಿರಬೇಕು' ಎಂದು ಶ್ರೀಮಾನ್ ಗೋವಿಂದ ಪೈಗಳು ಪ್ರತಿಪಾದಿಸಿದ್ದುದು ತುಂಬ ಸಮಂಜಸವಾಗಿದೆ.[೧೪]

ಪ್ರಾಚೀನ ಕಾಲದಲ್ಲಿ ಬ್ಯಾಬೀಲೋನ, ಗ್ರೀಸ್ ಮತ್ತು ಈಜಿಪ್ಟ್‌ಗಳೊಡನೆ ಹಿಂದೂದೇಶದ ವ್ಯಾಪಾರವು ಬಹ್ಳ ದೊಡ್ಡಪ್ರಮಾಣದಿಂದ ಸಾಗುತ್ತಿದ್ದುದನ್ನು ಸಂಶೋಧಕರು ಸಂದೇಹಕ್ಕೆ ಸ್ವಲ್ಪವೂ ಅವಕಾಶವಿಲ್ಲದಂತೆ ಸಿದ್ಧಪಡಿಸಿದ್ದಾರೆ. ಹಿಂದೂದೇಶದ ಬಟ್ಟೆಯಂತೆ ಕಟ್ಟಿಗೆಯೂ ಪರದೇಶಕ್ಕೆ ಹೋಗುತ್ತಿತ್ತು. ಉರ್ ಎಂಬಲ್ಲಿ ದೊರೆಯುವ ೩-೪ ಸಾವಿರ ವರುಷಗಳ ತೇಗಿನ ತೊಲೆಗಳು ಬನವಾಸಿ ನಾಡಿನ ಕಾಡಿನಿಂದಲೇ ಹೋಗಿರಬೇಕೆಂದು ತಜ್ಞರು ಊಹಿಸುತ್ತಾರೆ. ಹಿಂದೂ ದೇಶದ ಈ ಸರಕುಗಳೊಡನೆ ಇಲ್ಲಿಯ ಸಂಸ್ಕೃತಿಯ ಅನೇಕ ಅಂಶಗಳೂ ಪರದೇಶದಲ್ಲಿ ಪ್ರಸಾರವನ್ನು ಹೊಂದಿದ್ದರೆ ಸೋಜಿಗವಿಲ್ಲ. ಆದುದರಿಂದ, ನಮ್ಮ ನಾಡಿನ ಹತ್ತಿಯೊಡನೆ ಇಲ್ಲಿಯ ಅಮ್ಮನವರ ದೇವಸ್ಥಾನಗಳು, ಲಿಂಗಪೂಜೆ, ವೃಷಭಧ್ವಜ, ಶಿನ್-ಚಂದಿರ ಪೂಜೆ (ಚಂದಲಾಪರಮೇಶ್ವರಿ) ಇತ್ಯಾದಿ ಪ್ರಕಾರಗಳೂ ಖಾಲ್ಡಿಯಾ ಗ್ರೀಸಗಳ ಕಡೆಗೆ ಲೋಕಪ್ರಿಯವಾಗಿರುವ ಸಂಭವವೂ ಇಲ್ಲದಿಲ್ಲ.

ಟಿಪ್ಪಣಿಗಳು

೧. i. ***H. C. Brown, Prof. of Cotton breeding*** U.S.A. Cotton; 1927. P. I

ii. ***The Cotton Plant***, U.S.A. Department of Agriculture Bulletin No. 33, Washington; p. 17

೨. ೧ನೆಯ ಟಿಪ್ಪಣಿಯ ಅದೇ ಗ್ರಂಥ ಪು. ೧೯

೩. ***Hand-Spinning and Hand-Weaving,*** Published under the patronage of Mahatmaji 1926; p. 13

೪. ***Journal of the Department of Letters***, Calcutta Vol. I. p. 13

೫. ***Prizulisky, Pre Aryan and Pre Dravidian***, P. 23-25

೬. ೩ನೆಯ ಟಿಪ್ಪಣಿಯ ಗ್ರಂಥ ಪು. ೧೫

೭. James Scherer,, cf. ***"Cotton as a world power"*** New york

೮. ೧ನೆಯ ಟಿಪ್ಪಣಿಯ ಮೊದಲನೆಯ ಗ್ರಂಥ ಪು. ೨೨೨, ನೋಡಿ

೯. ೩ನೆಯ ಟಿಪ್ಪಣಿಯ ಗ್ರಂಥ, ಪುಟ ೧೮, ನೋಡಿ

೧೦. ***Annual Bibliography of Indian Archaeology,*** Kern Institute, Leyden (Holland),1932; p. 7

೧೧. ೧ನೆಯ ಟಿಪ್ಪಣಿ ಗ್ರಂಥ ಪು. ೪, ನೋಡಿ

೧೨. ೩ನೆಯ ಟಿಪ್ಪಣಿ ಗ್ರಂಥ ಪು. ೧೪ (ಅಡಿಯಲ್ಲಿ)

೧೩. ***Encyclopaedia Britanica,*** 11th Edition; the Great Goddess etc.

೧೪. ***ಪ್ರಬುದ್ಧ ಕರ್ನಾಟಕ,*** ೧೯೩೦ರ ಸಂಪುಟ.

ಶಿವ - ರಹಸ್ಯ

ಅರಿಕೆ

'ಕನ್ನಡದ ನೆಲೆ'ಯನ್ನು ಅರಿತುಕೊಳ್ಳಬೇಕೆಂದು ಅಗಿಯುತ್ತಲಿರುವಾಗ ನನಗೆ ಕಂಡ ನೋಟವಿದು. ಇದು ನಿಜವೆ, ನನ್ನ ಭ್ರಮೆಯೆ, ಆವುದನ್ನೂ ನಾನರಿಯೆ, ನಿಜವಿದ್ದರೆ, ನನಗಾದ ಹಿಗ್ಗಿನಲ್ಲಿ ಎಲ್ಲರೂ ಪಾಲುಗಾರರಾಗಲೆಂಬ ಹಾರೈಕೆ; ತೊದಳಿದ್ದರೆ ಅದರ ಸತ್ಯಸ್ವರೂಪವಾದರೂ ಬೆಳಕಿಗೆ ಬರಲಿ ಎಂಬ ಹಂಬಲ. ತಿಳಿಮಾತಿನ ಮಥನದಿಂದ ಸತ್ಯಜ್ಯೋತಿಯು ಪುಟಗೊಳ್ಳುವುದು. ಆದುದರಿಂದ, ತನಗೆ (ಸತ್ಯವೆಂದು) ಅನಿಸಿದುದನ್ನು ಆಡುವುದು ಲೇಸೆಂದು ಬಗೆದು ಇದನ್ನು ಬರೆದುದು; ಅಲ್ಲದೆ ಇದ್ದರೆ ವೇದ, ಉಪನಿಷತ್ತುಗಳನ್ನು ಎತ್ತಿ ಮಾತನಾಡುವುದು ನನ್ನ ಅಳವಿನೊಳಗಿನ ಮಾತಲ್ಲ.

ವೇದಶಾಸ್ತ್ರಸಂಪನ್ನರಾದ ಮ್ಯಾಕಡೊನೆಲ್ಲರು ವೇದದೊಳಗಿನ ಸಂಗತಿಗಳು ಮತ್ತು ದೇವದೇವತೆಗಳನ್ನು ಕುರಿತು ಆ ಅಮೌಲಿಕ ಗ್ರಂಥಗಳನ್ನು ಬರೆಯದೆ ಇದ್ದರೆ, ನನ್ನ ಪ್ರಬಂಧವು ಬೆಳಕುಕಾಣುವುದೇ ಸಾಧ್ಯವಿದ್ದಿಲ್ಲ. ಆದುದರಿಂದ, ಈ ಪ್ರಬಂಧದೊಳಗಿನ ವೇದದ ವಿಚಾರಗಳ ಶ್ರೇಯಸ್ಸು ಎಲ್ಲವೂ ಮ್ಯಾಕಡೊನೆಲ್ಲರಿಗೆ ಸಲ್ಲುತ್ತಿದೆ. ಅವರ ಗ್ರಂಥಗಳಿಂದ ವಿಚಾರಗಳನ್ನು ಅನುಗೊಳಿಸಿ ಬರೆದ ಹೊಣೆಗಾರಿಕೆಯು ಮಾತ್ರ ನನ್ನದು. ಕೇವಲ ಶಬ್ದಸಾಮ್ಯದಿಂದ ಯಾವ ವಿಚಾರವೂ ಪ್ರಸ್ತಾಪಿತವಾಗುತ್ತಿರುವದಿಲ್ಲವೆಂಬ ಮಾತಿನ ಅರಿವು ಇನ್ನು ಯಾರಿಗಿಂತಲೂ ನನ್ನಲ್ಲಿ ಕಡಮೆ ಇಲ್ಲ. ಸ್ವಲ್ಪತಾಳ್ಮೆಯಿಂದ ಓದುವವರಿಗೆ ನಾನು ಬರಿ ಸಾಮ್ಯದ ಮೇಲೆಯೆ ಕೈಯ್ಯೂರಿ ಕುಳಿತಿಲ್ಲ ವೆಂಬುದರ ಮನವರಿಕೆಯಾಗದೆ ಇರಲಾರದು. ಶೈವ, ವೀರಶೈವ ಮತ್ತು ಮಾಧ್ವ ಈ ಮೂರು ಪರಂಪರೆಗಳ ಸೂಕ್ಷ್ಮವಾದ ವಾತಾವರವಣದ ಪರಿಚಯವಿದ್ದವರಿಗಲ್ಲದೆ ಉಳಿದವರಿಗೆ ಇದರೊಳಗಿನ ಎಷ್ಟೋ ಮಾತುಗಳ ಅರ್ಥವಾಗಲಾರದು. ಧಾರವಾಡದಲ್ಲಿ ಒಂದು ದೊಡ್ಡ ಗ್ರಂಥಸಂಗ್ರಹಾಲಯವು ಇಲ್ಲದಿರುವುದರಿಂದ ನನಗೆ ಎಲ್ಲ ಪುಸ್ತಕಗಳ ಸಹಾಯವನ್ನು ಪಡೆಯುವುದಕ್ಕಾಗದೆ ಇದ್ದುದಕ್ಕೆ ವಿಷಾದಿಸುತ್ತೇನೆ.

ಇದನ್ನು ಬರೆಯುವುದಕ್ಕೆ ಪ್ರೊ. ಜಹಗೀರದಾರ, ಪ್ರೊ. ಮಾಳವಾಡರಿಂದ ಗ್ರಂಥಸಹಾಯವಾಯಿತು. ಕರ್ನಾಟಕ ವಿದ್ಯಾವರ್ಧಕಸಂಘ, ಇತಿಹಾಸ ಮಂಡಳಗಳ ನೆರವನ್ನು ಮರೆಯುವಂತಿಲ್ಲ. ಶ್ರೀಮಾನ್ ಆಲೂರ ವೆಂಕಟರಾಯರು ಮತ್ತು ಕಲಮದಾನಿ ನಾರಾಣರಾಯರು, ಹನುಮ-ಭೀಮರ ವಿಚಾರದಲ್ಲಿ ನಾನು ಬರೆದುದನ್ನು ಕೇಳಿಕೊಂಡು ಉಪಯುಕ್ತ ಸೂಚನೆಗಳನ್ನು ಮಾಡಿದರು; ಡಾ. ನಂದೀಮಠ ಪ್ರೊ. ಬಸವನಾಳ ಶ್ರೀ ಪುರಾಣಿಕ ಬುದ್ಧಯ್ಯನವರು, ಶ್ರೀ ಕಟ್ಟೀಮನಿ ಮೊದಲಾದವರು ನಾನು ಬರೆಯುತ್ತಿರುವ ವಿಚಾರಗಳನ್ನು ಕೇಳಿ ಕೊಂಡು ಸಹಾನುಭೂತಿಯನ್ನು ತೋರಿಸಿದರು. ಇದಕ್ಕಾಗಿ ಇವರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ.

ಸಂಸ್ಕೃತ ಪಾಠಶಾಲೆಯ ವಿದ್ವನ್ಮಣಿ ಚಿದಂಬರ ದೀಕ್ಷಿತರು ನಾನು ಆಗಾಗ್ಗೆ ಕೊಟ್ಟ ತೊಂದರೆಗಳನ್ನು ಮನ್ನಿಸಿ ವೇದಾರ್ಥದ ವಿಚಾರದಲ್ಲಿ ಕಾಲಕಾಲಕ್ಕೆ ನೆರವಾದುದಕ್ಕಾಗಿ ಅವರ ಉಪಕಾರಗಳನ್ನು ಎಷ್ಟು ಸ್ಮರಿಸಿದರೂ ತೀರದು. ದೇಶಭಕ್ತ ಶ್ರೀ. ದಿವಾಕರ ರಂಗರಾಯರು ಪಿ.ಇ.ಎನ್. ನಲ್ಲಿ ವಿಮರ್ಶೆ ಮಾಡುವಾಗ ನನ್ನ ಪುಸ್ತಕದ ಸಾರಾಂಶವಾದರೂ ಇಂಗ್ಲಿಷಿನಲ್ಲಿ ಪ್ರಕಟವಾಗುವುದು ಅವಶ್ಯವೆಂದು ಸೂಚಿಸಿ ಗೌರವಿಸಿದ್ದಕ್ಕಾಗಿ ಅವರಿಗೆ ಋಣಿಯಾಗಿದ್ದೇನೆ. ಪ್ರೊ. ಜಹಗೀರದಾರರು ತಮ್ಮ ಮುನ್ನುಡಿಯೊಡನೆ ಈ ಪ್ರಬಂಧದ ಸಾರವನ್ನು ಬರೆದು ಕೊಟ್ಟು ಉಪಕಾರ ಮಾಡಿದ್ದಾರೆ. ಶ್ರೀ ರಾಯದುರ್ಗ ಕೃಷ್ಣರಾಯರು ಮುದ್ರಣಾಲಯದ 'ಮೋಹನ'ವೆಂಬ ಹೆಸರು ಸಾರ್ಥಕವಾಗಬೇಕೆಂದು ಪರಿಶ್ರಮಬಟ್ಟು ಪುಸ್ತಕವನ್ನು ಅಂದವಾಗಿ ಮುದ್ರಿಸಿ ಕೊಟ್ಟುದಕ್ಕಾಗಿ ಅವರನ್ನು ಕೊಂಡಾಡದೆ ಇರಲಾರೆ.

ಶಂ. ಬಾ. ಜೋಶಿ

೨ನೆಯ ಅಚ್ಚಿನ ಅರಿಕೆ

ಮೊದಲ ಅಚ್ಚಿನ ಪ್ರತಿಗಳು ತೀರಿ ಮೂರುವರುಷಗಳಾಗುತ್ತ ಬಂದುವು. ಕಾಗದ, ಮುದ್ರಣಾಲಯಗಳ ಅನನುಕೂಲತೆಯ ಮೂಲಕ ಮರಳಿ ಅಚ್ಚಿಸುವುದು ಈವರೆಗೆ ಹಾಗೆಯೆ ಉಳಿಯಿತು. ಈ ಪುಸ್ತಕವು ಮೊದಲು ಅಚ್ಚಾದ ಬಳಿಕ,ಕಳೆದ ೬-೭ ವರುಷಗಳ ಅವಧಿಯಲ್ಲಿ ಇದರಲ್ಲಿ ಅಡಕವಾದ ಸಂಗತಿಗಳನ್ನು ಕುರಿತು ಕೆಲವು ವಾದ, ಪ್ರತಿವಾದಗಳು ಆದುವು; ಮದರಾಸ ವಿಶ್ವವಿದ್ಯಾನಿಲಯದ ಶಿವದೇವತೆಯನ್ನು ಕುರಿತು ಪ್ರಕಟವಾದ ಎರಡು ಮಹಾ ಪ್ರಬಂಧಗಳನ್ನೂ ಓದಿದ್ದಾಯಿತು. ಆದರೆ, ನನಗೆ ಮೊದಲು ಕಾಣಿಸಿದ ಸಂಗತಿಗಳಲ್ಲಿ ಬದಲು ಮಾಡಿಕೊಳ್ಳಬೇಕೆಂಬುವಂತಹ ಒಂದು ಹೊಸ ಮಾತೂ ಕಂಡುಬರಲಿಲ್ಲ. ನನ್ನ ಮೊದಲಿನ ಅಭಿಪ್ರಾಯವೇ ಹೆಚ್ಚು ದೃಢವಾಗಿದೆ.

ನಮ್ಮ ಧಾರ್ಮಿಕ ರೂಢಿ. ಸಂಪ್ರದಾಯಗಳನ್ನು ಐತಿಹಾಸಿಕ, ವಿಮರ್ಶಕ ದೃಷ್ಟಿಯಿಂದ ತೂಗಿ ನೋಡುವುದಕ್ಕೆ ನಮ್ಮ ಮನಸ್ಸು ಒಮ್ಮೆಲೆ ಒಪ್ಪುವುದಿಲ್ಲ. ಏನಿದ್ದುದುದೆಲ್ಲವೂ ಅನಾದಿಕಾಲದಿಂದ ಹಾಗೆಯೇ ನಡೆದುಬಂದಿದೆ; ಆದುದರಿಂದ ಅದೆಲ್ಲ ಸನಾತನ, ಎಂಬ ಒಂದು ಕುರುಹು ನಂಬುಗೆ, ಮತ್ತು ಆ ನಂಬುಗೆಯಿಂದುಂಟಾದ ವಿಚಿತ್ರ ಹೆಮ್ಮೆಯು ನಮ್ಮ ಸಾಮಾನ್ಯ ಜನಗಳನ್ನು ಕವಿದಿದೆ. ಇದರಿಂದ ಧರ್ಮದ ನಿಜಸ್ವರೂಪವೇ ತಿಳಿಯದಾಗಿ ಸಮಾಜದಲ್ಲಿ ಜಾತಿವೈಷಮ್ಯ, ಅಸಹಿಷ್ಣುತೆಯು ತಲೆದೋರಿದೆ.

ಇತಿಹಾಸದ ಹಿನ್ನೆಲೆಯಿಲ್ಲದೆ ಇಲ್ಲಿಯ ಯಾವ ಸಂಗತಿಯ ನಿಜವಾದ ಜ್ಞಾನವೂ ಆಗಲಾರದು. ಅಮರರೆಂದು ಹೇಳುವ ನಮ್ಮ ದೇವತೆಗಳಿಗೂ ಅಳಿವು ಬೆಳವುಗಳುಂಟೆಂದು ಇತಿಹಾಸದಿಂದ ಕಂಡುಬರುತ್ತದೆ. ದೇವತೆಗಳಿಗೆ ಎಲ್ಲಿಯ ಕ್ಷಯ-ವೃದ್ಧಿಗಳೆಂದು ಕೆಲರು ಗಾಬರಿಗೊಳ್ಳಬಹುದು. ಸತ್ ಚಿದಾನಂದ ಸ್ವರೂಪಿಯಾದ ಆ ಪರಮನು ದಿಕ್‌ಕಾಲಾತೀತನು. ಆದರೆ, ಬ್ರಹ್ಮ, ವಿಷ್ಣು, ಮಹೇಶಾದಿ ನಾಮರೂಪ-ಗುಣಗಳ ಒಂದೊಂದು ತತ್ವಾಂತದ ಮೂರ್ತಿಗಳು ಭೂಮಿಯಲ್ಲಿ ಭಾವುಕರ ಭಾವರಾಜ್ಯದಲ್ಲಿ ಬಂದಿಳಿದೊಡನೆ ಕಾಲ-ಪರಿಸ್ಥಿತಿಯ ಬಂಧನಕ್ಕೊಳಗಾದಂತೆಯೆ; ಭಕ್ತರ ಭಾವರಾಜ್ಯದಲ್ಲಿ ಹುಟ್ಟಿ ಬೆಳೆವ ಈ ದೇವತೆಗಳಿಗೆ ಅಳಿವು ಬೆಳವುಗಳಿಲ್ಲವೆಂಬುದು ಆಡಿದ್ದನ್ನೆ ಅಲ್ಲಗಳೆಂದತಲ್ಲವೆ? ಏಕೆಂದರೆ ಹುಟ್ಟಿದುದಕ್ಕೆ ಸಾವು ತಪ್ಪದು.

ವೇದಕಾಲದಿಂದ ಇಲ್ಲಿಯ ವರೆಗೆ, ಪರೀಕ್ಷಿಸಿದಲ್ಲಿ ಹಲವು ದೇವತೆಗಳು ತಲೆಯೆತ್ತಿ ತಲೆಮರೆಸಿಕೊಂಡಿವೆ. ಹಲವು ಹೊಚ್ಚ ಹೊಸವು ಮುಂದೆ ಬಂದಿವೆ. ವೇದಕಾಲದ ಇಂದ್ರನು ಇಂದು ಪದಚ್ಯುತನು. ರಾಷ್ಟ್ರಕೂಟರ ಕಾಲದಲ್ಲಿ ಜರುಗುತ್ತಲಿದ್ದ ಇಂದ್ರೋತ್ಸವವು ಇಂದು ಕೇಳಲಿಕ್ಕೂ ಸಿಕ್ಕದು. ವಿಷ್ಣುವಿನ ದಶಾವತಾರಗಳಲ್ಲಾಗಲಿ, ಅಮರಸಿಂಹನ ಕೋಶದಲ್ಲಾಗಲಿ ಎಲ್ಲಿಯೂ ಸುಳುವುದೋರದ ವೆಂಕಟರಮಣನು ಸುಮಾರು ೧೨ನೆಯ

ಶತಮಾನದಿಂದ ಈಚೆಗೆ ವಿಷ್ಣುವಿನ ಸ್ಥಾನದಲ್ಲಿ ಥಕ್ಕನೆ ಮುಂದೆ ಬಂದಿದ್ದಾನೆ. ಹಳೆಯ ತಮಿಳಕಾವ್ಯಗಳಲ್ಲಿ ವೆಂಗಡದ ಉಲ್ಲೇಖವಿದೆ. ಆದರೆ, ಅದಕ್ಕೆ ವಿಷ್ಣುವಿನ ಇಂದಿನ ಸ್ಥಾನಮಾನಗಳಿದ್ದುವೆಂದು ಕಂಡು ಬರುವುದಿಲ್ಲ. ಕೆಲವು ದೇವತೆಗಳು ಹಿಗ್ಗಿ ತಮ್ಮಲ್ಲಿ ಹಲವನ್ನು ಒಳಗೊಂಡಿವೆ. 'ಇಂದ್ರಾ ಪರ್ವತಾ' 'ಮಲ್ಲಯ್ಯ-ಮಲ್ಹಾರಿ-ಮಾರ್ತಾಂಡ ಖಂಡೋಬ' 'ಶಿವ-ಲಿಂಗ' 'ಹನುಮವಾಯು' ಮುಂತಾದುವು. ಮುಲ್ತಾನದ ಸೂರ್ಯದೇವಾಲಯವು ಪುರಾತನಕಾಲದಿಂದಲೂ ಸುಪ್ರಸಿದ್ಧ ಮೂಲಸ್ಥಾನವು ಆಗಿನ ಪುಣ್ಯಕ್ಷೇತ್ರ. ಆರಂಭದ ಮಹಮ್ಮದೀಯರ ಆಕ್ರಮಣದಲ್ಲಿಯೆ ಅದು ನಾಶವಾಯಿತು. ಕಂನಾಡಿನಲ್ಲಿ ಸೂರ್ಯದೇವಾಲಯಗಳಿದ್ದುವು. ನಮ್ಮ ನಾಡವರು ಸೂರ್ಯನ ಪೂಜೆಗೆ ಇಂದು ಎರವಾಗಿದ್ದಾರೆ. ಬೆಳಕಿನಿಂದ ದೂರವಾಗಿದ್ದಾರೆ. ಬೆಳಕಿನಿಂದ ತಿರುಗಿ ಕಲ್ಲು, ಕಂಚಿನ ಬೊಂಬೆಗಳ ಪೂಜೆಯನ್ನು ಮಾಡುವುದರಲ್ಲಿ ಧನ್ಯತೆಯನ್ನು ತಾಳುತ್ತಲಿದ್ದಾರೆ. ಇದರ ಅರಿವನ್ನುಂಟುಮಾಡಿ ಎಚ್ಚರಿಸ ಹೋದರೆ, ಗಾಢನಿದ್ದೆಯಲ್ಲಿದ್ದವನು ಎಚ್ಚರಿಸ ಬಂದವನ ಮೇಲೆ ರೇಗುವಂತೆ, ಕೈಯೆತ್ತಿ ಬಾಯಿಬಿಡುವವರೂ ಉಂಟು. ಇದರ ಅಲ್ಪ, ಸ್ವಲ್ಪ ಅನುಭವವು ನನಗೂ ಬಾರದೆ ಇಲ್ಲ.

ಸತ್ಯವು ಯಾರ ಪಕ್ಷಪಾತಿಯಲ್ಲ. ಐತಿಹಾಸಿಕ ದೃಷ್ಟಿಯಿಂದ ನಿಜವನ್ನು ತಿಳಿಯ ಹೊರಟಾಗ ಅದರಲ್ಲಿ ಯಾವಾಗಲೂ ಯಾವ ಒಂದೇ ಪಕ್ಷಕ್ಕೆ ಅನುಕೂಲವಾದ ಸಂಗತಿಗಳು ಕಾಣಿಸಿಕೊಳ್ಳುವುವೆಂಬ ಭರವಸೆಯಿಲ್ಲ. ನಿಜವಾದ ಸಂಶೋಧಕನು ತನಗೆ ಕಂಡ ಪ್ರತಿಕೂಲವಿರುವ ಸಂಗತಿಗಳನ್ನು ಸಂತೋಷದಿಂದ ಸ್ವೀಕರಿಸಬೇಕು. ಯಾವುದೊಂದು ಜಾತಿ, ಮತ, ಪಂಥಕ್ಕೆ ಕಟ್ಟುಬಿದ್ದ ಅಂಧಃಶ್ರದ್ಧೆಯವರು ಸಂಶೋಧನಕ್ಕೆ ಎಂದೆಂದಿಗೂ ಅನರ್ಹರು. ಸಂಶೋಧನಕ್ಕೆ ತೊಡಗಿದಾಗ, ಅಂತರಾಳದ ಅಂತರಾಳದಲ್ಲಿ ತಾವು ಯಾವ ದೇಶ-ಕಾಲ; ಪಕ್ಷದವರೂ ಅಲ್ಲ; ಸತ್ಯವೇ ತಮ್ಮ ಗುರಿ ಎಂಬ ಪ್ರತಿಜ್ಞಾ ಬದ್ಧನಾಗಿರಬೇಕು. ಇಲ್ಲವಾದರೆ, ಅವರಿಗೆ ಕಾಣುವುದೆಲ್ಲವೂ ಅವರ ಮತ-ಪಂಥದ ಮಂಡನಪರವಾದ ಮಾತೇ. ಇವರು ತಮ್ಮ ಜಾತಿಯನ್ನೆ ತಾವು ಸಂಶೋಧನಕ್ಕಾಗಿ ಕೈಗೊಂಡ ಕವಿ, ಮಹಾಪುರುಷರಲ್ಲಿ ಕಾಣುತ್ತಾರೆ. ಅಮೇರಿಕೆಯೊಳಗಿನ 'ಕ್ಯಾನಡಾ' (ಕರ್ಣಾಟದ) ಕಾನಡಾ; ಇಂಗ್ಲೆಂಡಿನ ಡ್ರುಯಿಡ್‌ರು (ದಕ್ಷಿಣ ಭಾರತದ) ದ್ರಾವಿಡರಾಗಿ ಅವರಿಗೆ ಭಾಸವಾಗುವುದು. ವೇದದಲ್ಲಿ ಹೇಳಿದುದೆಲ್ಲ, ಶಿವಪರ, ಅಥವಾ ವಿಷ್ಣುಪರವಾಗಿಯೆ ಇದೆಯೆಂಬ ಭ್ರಾಂತಿಯುಂಟಾಗುವುದು. ಅಷ್ಟೇ ಏಕೆ? ಸೃಷ್ಟಿಕರ್ತನಾದ ಇದೆಯೆಂಬ ಭ್ರಾಂತಿಯುಂಟಾಗುವುದು. ಅಷ್ಟೇ ಏಕೆ? ಸೃಷ್ಟಿಕರ್ತನಾದ ದೇವರು ಕೇವಲ ತಮ್ಮ ಜಾತಿಮತದವನೇ ಎಂದು ನೆರೆನಂಬಿದ ವಿದ್ವಾಂಸರಿದ್ದಾರೆ. ಇಂತಹರು ತಮ್ಮ ಏಕಪಕ್ಷೀಯ ಅಭಿಮಾನದ ಮೂಲಕ ಇನ್ನುಳಿದ ದಿಕ್ಕಿನಿಂದ ನೋಡುವ ಕಣ್ಣುಗಳಿಗೆ ಎರವಾಗಿರುತ್ತಾರೆ.

ತನ್ನದಲ್ಲದೆ ಇನ್ನೂ ಹಲವು ದೃಷ್ಟಿಗಳಿಂದ, ಸಹ-ಅನುಭೂತಿಯಿಂದ ನೋಡಿ ಯಾವುದೊಂದು ವಿಷಯವನ್ನು ಗ್ರಹಿಸುವ ಹದವು ತಿಳಿಯುವುದು, ಇದೊಂದು ಜೀವನದೊಳಗಿನ ಸಿದ್ಧಿಯಾಗಿದೆ; ಒಮ್ಮೆಲೆ ಸಾಧಿಸುವ ಮಾತಲ್ಲ. ಆದರೂ ನಮ್ಮ ಗುರಿಯು ಅದಾಗಿರಬೇಕು. ಮುತ್ತು, ಬಂಗಾರ, ಅಥವಾ ವಜ್ರಗಳಿಗಾಗಿ ಒಳಹೊಕ್ಕು ಕೆಲಸಮಾಡಿ ಮೇಲೆ ತಂದುದೆಲ್ಲವೂ ಬೆಲೆಬಾಳುವ ಒಡವೆಯೆ ಆಗುತ್ತದೆಂಬುದತ್ತೆಲ್ಲ. ಇದೇ ಮಾತು ಸಂಶೋಧನದಲ್ಲಿ, ಕಾಲದ ಒರೆಗಲ್ಲಿಗೆ ಹತ್ತಿ ಯಾವ ಸಂಗತಿಗಳು ತಕ್ಕುವು ಎಂದು ನಿಲ್ಲುವುವೋ ಅವು ಸರಿ. ತಾತ್ಕಾಲಿಕ ಹೊಗಳಿಕೆ ತೆಗಳಿಕೆಗಳಲ್ಲಿ ಕೆಲವು ಸಾರೆ ರಾಗದ್ವೇಷಗಳು ಹುದುಗಿಕೊಂಡಿರುವ ಸಂಭವವಿರುತ್ತದೆ. ಈಗ ಏಳು ವರುಷಗಳ ಮೇಲೂ ನನಗೆ ಸರಿಯೆಂದು ಮನವರಿಕೆಯಾಗಿರುವ ಇದರೊಳಗಿನ ಕೆಲವೇ ಸಂಗತಿಗಳನ್ನು, ಇನ್ನು ಮುಂದೆ ಹೊಸ ಸಂಶೋಧನದಿಂದ ಬರುವ ಬೆಳಕಿನಲ್ಲಿ ತಿದ್ದಿಕೊಳ್ಳಲು ಆಸ್ಪದ ದೊರೆತರೆ ನನಗೆ ಅದರಲ್ಲಿ ಹೆಚ್ಚಿನ ಸತ್ಯವು ತಿಳಿಯಿತೆಂಬ ಸಮಾಧಾನವೇ ಇದೆ.

ಈ ಪುಸ್ತಕವು ಮೊದಲನೆಯ ಬಾರಿ ಪ್ರಕಟವಾದೊಡನೆ ಓದಿ, ವೀರಶೈವರಿಗೂ ಸ್ಪಷ್ಟವಾಗಿ ಗೊತ್ತಿರದ ಹಲವು ಹೊಸ ಸಂಗತಿಗಳನ್ನು ಬೆಳಕಿಗೆ ತಂದುದಕ್ಕಾಗಿ ಅಭಿನಂದಿಸುವ ಕಾಗದವನ್ನು ಬರೆದ ಶ್ರೀ ವಾಲಿ

ಮಲ್ಲೇಶರೇ ಇದಕ್ಕೆ ಮುನ್ನುಡಿ ಬರೆದು ಕೊಟ್ಟುದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. 'ಶಿವರಹಸ್ಯಕ್ಕೆ ಶ್ರೀ. ಮಲ್ಲೇಶರ ಮುನ್ನುಡಿಯಿರುವಲ್ಲಿ ಹೆಚ್ಚಿನ ಔಚಿತ್ಯವಿದೆ. ಈ ಪುಸ್ತಕವನ್ನು ಹಲವು ತೊಂದರೆ ಸಹಿಸಿಯೂ ಬೇಗ ಮುದ್ರಿಸಿ ಕೊಟ್ಟುದಕ್ಕೆ ಶ್ರೀ. ಜೋಶಿ ಶ್ರೀನಿವಾಸರನ್ನೂ ಅಭಿನಂದಿಸಬೇಕಾಗಿದೆ. ನನ್ನ ಲೇಖನ ಕಾರ್ಯದಲ್ಲಿ ಆಸ್ಥೆವಹಿಸಿ, ಕಾಗದದ ಬರಗಾಲದ ಈ ದಿನಗಳಲ್ಲಿ ಕಾಗದವನ್ನು ಕೊಟ್ಟು ನೆರವಾದುದಕ್ಕೆ ಅವರ ಉಪಕಾರವನ್ನು ಸ್ಮರಿಸುವುದು ಕರ್ತವ್ಯವಾಗಿದೆ.

ಮಹಾಶಿವರಾತ್ರಿ
೧೯-೨-೯೩

ಶಂ. ಬಾ. ಜೋಶಿ

FOREWORD

The History of India is written not in text-books or Chronicles but in the vast traditional lore, in the religious beliefs, in the customs and superstitions and in the very phrases and proverbs of everyday use; in other words, our history is daily and ever-continuously exhibited in our life. And Life in India has been one continuous flow where different races and cultures have mingled together to form one majestic but slow-moving stream. This fact promises romantic adventures to those scholars who are paddling against the current in search of the tributaries and the original sources.

For a long time it was believed that earlier Sanskrit literature contained the History of India, but now it is found that Sanskrit literature is only one of the many tributaries. The Dravidian group of languages was spoken by an equally vast, vigorous and ancient people and earlier than 2000 years before Christ i. e. in the Vedic period itself the Aryans and the Dravidians had come into close contact with each other. It is true that even today the Dravidian languages and culture are easily to be distinguished from the Aryan; yet, it is inevitable that both stand mutually indebted and influenced. Our history would not be complete till it explains satisfactorily the facts and problems of both these races. But unfortunately for Scholarship in India, Dravidic studies have not attracted as much attention as their importance requires. My friend Mr. S. B. Joshi is one of the very few humble pioneers in Dravidian research work. The more one reads his works the more one is convinced of that importance of Dravidian studies for sifting, appreciating and evaluating researches in Sanskrit literature.

As early as the Rigveda, the Aryan language has words which have no satisfactory derivation in the Indo-European roots; the Vedic pantheon has gods

and deities that have no Aryan heritage; the Vedic tradition shows religious and ritual tendencies not to be traced in Sanskrit literature; and the Hindu life shows customs and superstitions unwarranted by the thought-beliefs of the seers and sages. Where was the source of these 'un-Vedic' elements that became a regular and permanent part of the life and living of the Aryan Hindus?

The author of the present thesis provokes our curiosity by his elaborate and authoritative study of an aspect of the Veerashaiva religion. The Dravidian God Shiva (or Śhiva as he prefers to say) is shown as borrowed by the Rigvedic seers under the name Rudra; the various epithets and attributes of Rudra, un-understandable as Sanskrit words, are explained satisfactorily in their Dravidian (Kannada) equivalents; the entire entourage of Rudra is tracked down in the various details of Veerashaiva mythology.

This is not the place nor mine the authority to give a critical estimate of Mr. Joshi's thesis. Almost all his arguments are supported by convincing logic, first-hand evidence and scholarly authority. It is a sincere attempt to find out facts and not to preach or profane this or that religion. The importance of such a work lies in its showing the essentiality of Dravidic studies for a better understanding of Ancient Indian History.

In writing this foreword, all the pleasure is mine. Mr. S. B. Joshi is a scholar, but 'unqualified' in the academic sense; I am academically qualified and by associating with Mr. Joshi I might turn out a scholar.

KARNATAKA COLLEGE
DHARWAR

R. V. Jagirdar

RESUME

'Karnatakas' are not immigrants to India during the historical period. Modern historians agree that they are a pre-Aryan race belonging to the Dravidian tribe. A study of the history of the religious traditions of the 'Veerashaivas,' who cover the greater part of the original race, would serve to reveal the earliest forms and associations of Kannada race.

The Vedic 'Rudra' is termed 'Shiva' by the Kannadas.

Writers on comparative philology point out that the word 'Rudra' means ruddy, shiny or auspicious. 'Rudra' (of. ರುಧಿರ and Ruddy) is found to have been used in the Vedas as an adjective to 'Agni.' The Sutra "ಅಸೌಯಃ......." also supports the interpretation.

'Shiva' on the other hand is a Dravidian word derived from the root 'Shiv' also meaning red. The villagers still pronounce the word with the nasal sound as 'ಶಿಂವ.'

Red is the most auspicious colour to Dravidians. Wearing a red mark on the forehead is a Dravidian custom; so also the sprinkling red-coloured water on auspicious occasions. ಚೆನ್ನಿಗ (derived from 'Shiv') also means 'red' or 'fair coloured'. 'Red' is a synonym for 'beautiful' or 'auspicious', Thus 'Shiva' is not a mere euphemistic word but means 'beautiful' or 'auspicious.'

Though an auspicious deity to the Dravidians 'Rudra' is described as a god of terror by the Aryans. A deity is usually given a perverted form when described by another race. *E. g.* Indra of the Aryans is painted as a demon in the 'Avesta' of the Parsis.

The occurrence of the term 'Rudrashiva' in the Vedas has misled some Sanskrit Pandits and Western Scholars into believing that 'Shiva' is used as an adjective to

'Rudra'. But the word is only a doublet. Philology tells us that where two races with different languages come across or mingle with each other, words taken from both the languages very often together form one word meaning the same thing. *E.g.* 'Chandramas,' ತುರುವಸು, ಕೂಡಲಸಂಗಮ, ನಡುಮಧ್ಯೆ, ಛಪ್ಪನ್ನೈವತ್ತಾರು etc. Thus Shiva is a Dravidian deity and not Aryan.

The terming of Rudra as 'asura', allocation of an inferior position to him in the heirarchy of Aryan deities and the denial of any place or share to him in the rituals further prove that Rudra is a Dravidian deity. Rudra is also described as a 'cow-killer,' 'killer of man,' 'inhabitant of burial grounds' etc.

Besides, Rigveda tells us that the 'ganas' or the followers of Rudra are 'Maruts'. The latter are also described as the sons of 'Rudra.' Bana, Ravana etc., among them are later considered as 'asuras.' Dr. S. K. Chatterji opines that the word 'gana' is of Dravidian origin. Hillebrandt has connected the Vedic term 'Marut' with the Dravidian term 'Marutta' and interprets the former as meaning a Vaidya or a physician.

The traditions of Veerashaivas of Karnatak lend further support to the theory. The Veerashaivas do not worship any other deity except Shiva. They have religious heads known as 'Gaṇas'. Their mode of worshipping Shiva is similar to that of the 'Maruts' of Rigveda. In Rigveda Shiva is termed 'Vṛṣabha'; and the Veerashaivas worship Shiva as 'Basawa' himself. Rigveda terms 'Maruts' as 'sons of cows' (ಗೋಮಾತರಃ); and the Veerashaivas call themselves descendants of mother cow. Rigveda calls 'Maruts' heroes (ವೀರಾಃ); and Veerashaivas lay stress on the adjective 'Veera'. Further Rigveda describes Rudra as having heroic sons; and the Veerashaivas describe themselves as sons of Shiva. To add to this there is another crowning similiarity. 'Maruts' are stated by Rigveda to be 63 (ತ್ರಿಷಷ್ಟಿಃ); and the Veerashaivas still worship their 63 ancestors and believe the latter to be 'Rudragaṇas'.

We have already shown in our book 'ಕರ್ನಾಟಕದ ವೀರ ಕ್ಷತ್ರಿಯರು' that 'Haṭṭikāra Maravares', a Dravidian branch were the ancestors of the Veershaivas. Thus we agree with Hillebrandt's conclusion although at not exact in the same way as he does.

Hanuma belonged to a monkey race which was non-Aryan. Writers like Sir Pargiter and others hold that the monkeys described in the Rāmāyaṇa belonged to a Dravidian race. The 'Kurkhs' (Dravidians) of Karnatak also claim to be the descendants of the monkey race. The territory described as 'Kishkindha' undoubtedly formed part of Karnatak. Thus the Heroic Hanuma of the Rāmāyaṇa fame is one of the earliest Kannadigas.

By calling Hanuma as the son of the 'Marut' Vālmīki has linked the 'Maruts' of the Vedic period with the hero of the 'Maravar' race. Here again the relation of the 'Maruts' and the Veerashaivas of Karnatak is well established. Both the Rāmāyaṇa and the verses of Purandaradāsa testify to the fact that Hanuma was the descendant of Rudra (ರುದ್ರಾಂಶ). Rudrashiva is already shown above as meaning red. Even today the image of Hanuman in 'Maharashtra' is besmeared with red colour. Hanuman is described as 'red' in Rāmāyaṇa and also by Ramdas (ಚಂದ್ರವರ್ಣ ಮರುತಃ).

'Maruts' are described in Rigveda as great physicians, and in Rāmāyaṇa Vālmīki sends 'Marut' and not 'Jambuvanta' or anybody else to bring back Rama and Laxmana to life.

'Māruti' or 'Hanuma' is the most popular god of the masses in Karnatak. It is to him that people pray for cure from various kinds of ailments.Though some higher castes have adopted Rāma, Krishna, Venkatesh and other deities for the purpose the vast population in villages still look to 'Maruti' for relief.

Another notable feature is that the actual Pujâris in the temples of 'Shiva' or 'Maruti' are mostly non-Brahmins. The reference to 'Shiva' as 'ಸ್ತೇನಾನಾಂಪತಿಃ' etc. in Yajurveda points out more clearly that Shiva is not an Aryan god. The term stena denotes a race like Choras (cholâs) in Dravidian country and has nothing to do with thieves and robbers as is wrongly thought. The Malawars and Kalawars of Karnatak are included in the name Stenas and Marutâs names by which they are referred to in the Vedās.

The foundations of Veerashaiva philosophy could be easily seen in the Vedas. The origin of its principle of equality could be traced to the Rigvedic saying 'ಅಜ್ಯೇಷ್ಠಾ, ಅಕನಿಷ್ಠಾ' describing the followers of Rudra. The Rigveda also refers to the unique devotion of the 'Rudras', and history shows us numerous instances where-in Veerashaivas have considered everything that was not offered to Shiva as only fit to be discarded and destroyed. It is this exterme devotion of the Veerashaivas that forms the basis of 'Bhakti-yoga' (ಭಕ್ತಿಯೋಗ) which the Aryans learnt from the Dravidians.

Thus one can find the beginnings and foundations of the Veerashaiva traditions in the Vedas, and the same incidently establishes the antiquity of the Kannada race.

ಪ್ರಸ್ತಾವನೆ

ಶ್ರೀ. ಶಂ. ಬಾ. ಜೋಶಿಯವರ ಪುಸ್ತಕಕ್ಕೆ ಮುನ್ನುಡಿ ಬರೆವುದು ಸ್ವಲ್ಪ ಸಾಹಸದ ವಿಷಯವಾಗಿದೆಯಾದರೂ ಇಂಥ ಸುಂದರವಾದ ಸಂಶೋಧನಾತ್ಮಕ ಪುಸ್ತಕಕ್ಕೆ ಪ್ರಸ್ತಾವನೆಯನ್ನು ಬರೆವ ಸುಯೋಗ ಲಭಿಸಿದ್ದಕ್ಕಾಗಿ ಆನಂದವೆನಿಸುತ್ತದೆ. ಶ್ರೀ ಶಂಕರರಾಯರು ಕಂಡುಹಿಡಿದು ಜನರೆದುರಿಗೆ ಇಡುವ ವಿಷಯಗಳು ಸಾಮಾನ್ಯವಾಗಿ ತೀರ ಹೊಸವು; ಈವರೆಗೆ ಯಾರಿಗೂ ಹೊಳೆಯದೆ ಇದ್ದುವು. ಆದರು, ಅವನ್ನು ಅಲ್ಲವೆನ್ನಲು ಮನಸ್ಸಾಗುವುದಿಲ್ಲ ಏಕೆಂದರೆ ಅವರು ಅವನ್ನು ಅನೇಕ ಪ್ರಮಾಣಗಳನ್ನು ಕೊಟ್ಟು ಮನವೊಪ್ಪುವಂತೆ ಬರೆಯುತ್ತಾರೆ. ಆದರೆ ಒಮ್ಮೆಲೆ ಅಹುದೆನ್ನುವುದಕ್ಕೂ ಸಂಕೋಚ; ಏಕೆಂದರೆ ಅವರ ಸಂಶೋಧನದ ರೀತಿಯು ಹೊಚ್ಚಹೊಸದಾಗಿದ್ದು; ಆ ವಿಷಯದ ತಜ್ಞರಿಗೂ ಹಲವು ಬಾರಿ ಬೆರಗುಗೊಳಿಸುವಂತಹವಾಗಿರುತ್ತದೆ. ಅಂದಮೇಲೆ ನನ್ನಂಥವನ ಪಾಡು ಏನು?

ಆದರೂ ಅವರು ಕಂಡುಹಿಡಿದ ಹಲವು ಸಂಗತಿಗಳನ್ನು ಸಂಶೋಧಕರೆಲ್ಲ ಈಗ ಒಪ್ಪಿಕೊಳ್ಳಲೇಬೇಕಾಗಿದೆ. ಕರ್ನಾಟಕದ ಮೊದಲಿಗರು 'ಕಣ್ಣರು', ಎಂಬ ಮಾತನ್ನು ಸ್ಮೃತಿ, ಪುರಾಣಾದಿಗಳ ಆಧಾರದಿಂದ ಅವರು ಮನವರಿಕೆಯಾಗುವಂತೆ ಮಂಡಿಸಿದ್ದಾರೆ. ಅವರ ಈ ಆಧಾರಗಳನ್ನು ಸುಳ್ಳೆಂದು ಖಂಡಿಸದೆ ಕರುನಾಡು, ಕರಿದುನಾಡು, (ಕರ್ ನಾಡು) ಎಂಬ ಪಕ್ಷಗಳು ತಲೆಯೆತ್ತಿ ಉಳಿಯಲಾರವು ಎಂದು ಬೇರೆ ಹೇಳಬೇಕಾಗಿಲ್ಲ. ಇದರಂತೆ 'ಶಿವರಹಸ್ಯ'ದಲ್ಲಿ ಶಿವದೇವತೆಯ ವಿಷಯದಲ್ಲಿ ಇವರು ಮಾಡಿದ ಸಂಶೋಧನೆಯು, ಮೊದಲನೆಯ ಆವೃತ್ತಿಯಲ್ಲಿಯೇ ಈ ಪುಸ್ತಕವನ್ನೋದಿದಾಗ, ನನಗೆ ತುಂಬ ಒಪ್ಪಿಗೆಯಾದುದರಿಂದ ಅವರ ಈ ಎರಡನೆಯ ಆವೃತ್ತಿಗೆ ಮುನ್ನುಡಿ ಬರೆಯುವಲ್ಲಿ ನನಗೆ ಒಂದು ಬಗೆಯ ಸಂತೋಷವೇ ಇದೆ.

ಶ್ರೀ. ಶಂಕರರಾಯರು ಕೇವಲ ಸತ್ಯ ಸಂಶೋಧಕನ ಭೂಮಿಕೆಯ ಮೇಲಿಂದಲೆ ತಮ್ಮ ಈ ವಿಚಾರಗಳನ್ನು ವ್ಯಕ್ತಪಡಿಸುವ ಸಂಕಲ್ಪವುಳ್ಳವರಾಗಿರುವುದರಿಂದ ಅವರ ಬರೆಹದಲ್ಲಿ ಯಾವುದೊಂದೇ ಪಕ್ಷದ ಮಂಡನ ಅಥವಾ ಖಂಡನೆ ಕಾಣಿಸಿಕೊಳ್ಳಲಾರದು. ತಮ್ಮ ಪಕ್ಷಸಮರ್ಥನೆಗೆ ಅನುಕೂಲವಾದುದನ್ನು ಎತ್ತಿ ಹಿಡಿದು ಪ್ರತಿಕೂಲವಾದುದನ್ನು ಬಚ್ಚಿಡುವುದಕ್ಕೆ ಬುದ್ಧಿಪೂರ್ವಕವಾಗಿ ಶ್ರೀ. ಜೋಶಿಯವರು ಎಂದೂ ಮನಸ್ಸುಮಾಡರು. ಶಿವರಹಸ್ಯದಲ್ಲಿ ಈ ಮಾತನ್ನು ಚೆನ್ನಾಗಿ ಮನಗಾಣಬಹುದಾಗಿದೆ. ಶಿವನು ಕಣ್ಣರ ದೇವನು; ಆರ್ಯರ ದೇವತೆಯಲ್ಲ. ಶಿವ-ವಿಷ್ಣುಗಳಿಬ್ಬರೂ ವೈದಿಕರಿಗೆ ಒಂದು ಕಾಲಕ್ಕೆ ಅಮುಖ್ಯ ದೇವತೆಗಳು; ವೇದದೊಳಗಿನ ಇಂದ್ರನಾಗಲಿ, ಉಪನಿಷತ್ತಿನೊಳಗಿನ ಬ್ರಹ್ಮನಾಗಲಿ, ಇಂದು ವೈದಿಕರಲ್ಲಿ ಕಣ್ಮರೆಯಾಗಿದ್ದೂ ವೈದಿಕ ಸಂಪ್ರದಾಯದ ಅಭಿಮಾನಿಗಳು ತಾವು ಈ ಸನಾತನ ಕಾಲದಿಂದ ಬದಲಾವಣೆ ಹೊಂದದೆ, ಎಂದಿನಿಂದಲೂ ಶಿವ-ವಿಷ್ಣು ದೇವತೆಗಳನ್ನೇ

ಮುಖ್ಯವಾಗಿ ಪೂಜಿಸುತ್ತ ಬಂದೆವೆಂದು ಅಂದುಕೊಳ್ಳುತ್ತಾರೆ! ಎಂಬ ಮಾತನ್ನು ತಾವು ವೈದಿಕರಾದರೂ ನಿಸ್ಸಂಕೋಚವಾಗಿ ಪ್ರತಿಪಾದಿಸುವ ಧೈರ್ಯವನ್ನು ತೋರಿಸಿದ್ದಾರೆ. ಅದರಂತೆಯೆ, ತಾವು ಶೈವರಾಗಿದ್ದರೂ ಶಿವ ಮತ್ತು ಲಿಂಗದೇವರು ಭಿನ್ನವೆಂದು ಸಿದ್ಧಪಡಿಸಿ ಹಲಕೆಲವು ಪೂರ್ವ ಪರಂಪರಾಭಿಮಾನಿಗಳ ಕೋಪಕ್ಕೆ ಗುರಿಯಾಗಬೇಕಾದರೂ ಈ ಅಪ್ರಿಯಸತ್ಯವನ್ನು ಬಯಲಿಗೆಳೆಯುವ ಸಾಹಸ ಮಾಡಿದ್ದಾರೆ.

ಸಂಶೋಧನ ಕ್ಷೇತ್ರದಲ್ಲಿ ಆರ್ಯ-ದ್ರಾವಿಡ ಎಂಬ ಪಕ್ಷಗಳನ್ನೆತ್ತಿಕೊಂಡು ಯಾವುದೊಂದೇ ಪಕ್ಷದ ವಕಾಲತು ವಹಿಸಿದಂತೆ ಈಗ ಕೆಲವು ಲೇಖನಗಳು, ಗ್ರಂಥಗಳು ಪ್ರಕಟವಾಗುತ್ತಿದ್ದುದು ಸತ್ಯಸಂಶೋಧನೆಯ ದೃಷ್ಟಿಯಿಂದ ಶೋಚನೀಯವಾಗಿದೆ. ಈಗ ನಿಜವಾದ ಆರ್ಯರಾಗಲಿ ದ್ರಾವಿಡರಾಗಲಿ ಎಲ್ಲಿಯೂ ಉಳಿದಿಲ್ಲ. ಅನೇಕ ಶತಮಾನಗಳ ಮೊದಲೆ ಆರ್ಯ-ದ್ರಾವಿಡರ ಸಂಗಮವಾಗಿ ಹೋಗಿದೆ. ಇಂದು ತಲೆದೋರುತ್ತಿರುವುದು ಭಾರತೀಯ ಒಂದು ಜನಾಂಗ. ಆದುದರಿಂದ, ಆ ಹಳೆಯ ಆರ್ಯದ್ರಾವಿಡರೆಂಬ ಕಾದಾಟದ ಪಕ್ಷಾಭಿಮಾನದ ಮಾತುಗಳು ನಮ್ಮ ನಾಡಿನ ಒಕ್ಕಟ್ಟಿಗೆ ನೆರವಾಗದೆ ತಡೆಯನ್ನೇ ಉಂಟುಮಾಡಬಲ್ಲವು. ನಮಗೆ ಇಂದು ಈ ಬಗೆಯ ಪಕ್ಷಾಭಿಮಾನದಿಂದ ಸಾಗಿದ ಸಂಶೋಧನೆ ಬೇಕಾಗಿಲ್ಲ. ಭಾರತದಲ್ಲಿ ನೆಲೆಸಿದ ಬೇರೆ ಬೇರೆ ಜನಾಂಗಗಳು ಇಂದಿನ ಸಂಯುಕ್ತ ಭಾರತೀಯ ಸಂಸ್ಕೃತಿಗೆ ಹೇಗೆ ನೆರವಾಗಿವೆ, ತಮ್ಮ ಯಾವ ಯಾವ ಕಾಣಿಕೆಯನ್ನು ಒಪ್ಪಿಸಿವೆ ಎಂಬುದನ್ನು ನಿಷ್ಪಕ್ಷಪಾತದಿಂದ ಕಂಡುಹಿಡಿದು ಹೇಳುವವರು ಬೇಕಾಗಿದ್ದಾರೆ.

ಇಂದು ನಮ್ಮ ಸಂಸ್ಕೃತಿಯಲ್ಲಿರುವ ಉತ್ತಮವಾದ ಅಂಶಗಳೆಲ್ಲ ಆರ್ಯರಿಗೆಯೇ ಸೇರಿದುವು ಎಂಬುದು ಒಣಹೆಮ್ಮೆಯ ಮಾತು ಅಥವಾ ಎಲ್ಲವೂ ದ್ರಾವಿಡರಿಂದ ಆರ್ಯರಿಗೆ ದೊರೆತ ಕಾಣಿಕೆ ಎಂದು ಪ್ರತಿಪಾದಿಸುವುದು ಅಸಂಬದ್ಧವಾಗಿದೆ. ಸುಗುಣಗಳ ಅಥವಾ ದುರ್ಗುಣಗಳ ಗುತ್ತಿಗೆ ಯಾವುದೊಂದೇ ಜನಾಂಗಕ್ಕಿಲ್ಲವೆಂಬುದನ್ನು ನೆನಪಿನಲ್ಲಿಡತಕ್ಕದ್ದು. ಎರಡು ಭಿನ್ನ ಜನಾಂಗಗಳು, ಒಂದರೊಂದರ ನೆರೆಯಲ್ಲಿ ಬಂದು ಅವುಗಳಲ್ಲಿ ಸಂಪರ್ಕ ಸಮ್ಮಿಶ್ರಣವು ಹೆಚ್ಚಾದಂತೆ ಒಬ್ಬರೊಬ್ಬರ ಆಚಾರವಿಚಾರಗಳ ಪರಿಣಾಮಗಳು ಒಬ್ಬರೊಬ್ಬರ ಮೇಲೆ ಆಗಲೇಬೇಕು. ಆದುದರಿಂದ, ಇಂದಿನ ಸಂಸ್ಕೃತಿಯು ಕೇವಲ ಆರ್ಯ ಅಥವಾ ಕೇವಲ ದ್ರಾವಿಡವೆಂದು ಹಟ ಹಿಡಿಯುವುದು ಅನೈತಿಹಾಸಿಕ; ಸತ್ಯ ಸಂಶೋಧಕರಿಗೆ ಇದು ಶೋಭಿಸುವುದಿಲ್ಲ.

ಇನ್ನು, ಭಾರತದಲ್ಲಿ ದ್ರಾವಿಡರೆಂಬ ವರ್ಗವೇ ಇದ್ದಿಲ್ಲ; ಮೊದಲಿನಿಂದಲೂ ಇಲ್ಲಿ ನೆಲೆಸಿದ್ದವರು ಆರ್ಯರು. ಆದುದರಿಂದ, ಇದೆಲ್ಲವೂ ಕೇವಲ ಆರ್ಯರ ಸಂಸ್ಕೃತಿಯೆಂದು ಪ್ರತಿಪಾದಿಸುವ ಒಂದು ಪಂಥವಿದೆ. ದ್ರಾವಿಡ ವೆಂಬುದು ಪಾಶ್ಚಿಮಾತ್ಯರು ಎಬ್ಬಿಸಿದ ಭೂತ. ವೇದಕಾಲದ ಮೊದಲಿನಿಂದಲೂ ಇದ್ದರೆಂದು ಹೇಳುವ ದ್ರಾವಿಡರ ಹೆಸರು ವೇದೋಪನಿಷತ್ತುಗಳಲ್ಲಿ ಒಂದೆಡೆಯಲ್ಲಾದರೂ ಸಿಕ್ಕಲಾರದೇಕೆ? ಆದುದರಿಂದ, ದ್ರಾವಿಡರೆಂಬ ಮಾತೇ ನಿರಾಧಾರ. ಆರ್ಯರೊಳಗಿನ ವ್ರಾತ್ಯಪತಿತರೆ ದ್ರಾವಿಡಾದಿಗಳೆಂದು ಹೇಳುವ ಇಂದಿನ ಜನಾಂಗವೆಂದು ಈ ಪಂಥದವರ ಅಭಿಪ್ರಾಯವಿದೆ.

ಆರ್ಯವೆಂಬ ಸ್ಥೂಲಹೆಸರಿನ ಮರೆಯಲ್ಲಿ ಅಡಗಿಕೊಂಡ ಜಾತಿ ಬ್ರಾಹ್ಮಣ್ಯದ ಅಭಿಮಾನವು ಆಡಿಸುತ್ತಿರುವ ಮಾತುಗಳಿವು. ಭಾರತದಲ್ಲಿರುವ ದ್ರಾವಿಡಾದಿ ವರ್ಗಗಳೆಲ್ಲ ಆರ್ಯರೇ ಆಗಿದ್ದರೆ, ಅವರಿಗೆ ಪತಿತರು ಎಂದು ಏಕೆ ಹೇಳುವುದು? ಅವರು ಪತಿತ ಆರ್ಯರಾದರೆ, ಇಂದಿನ ಶುದ್ಧ ಆರ್ಯರು ಯಾರು? ಬ್ರಾಹ್ಮಣರ ಹೊರತು ಉಳಿದ ವರ್ಣಗಳೆಲ್ಲ ಕಲಿಯುಗದಲ್ಲಿ ನಷ್ಟವಾಗಿವೆ, ಎಂಬ ಶಾಸ್ತ್ರವಚನವನ್ನೆತ್ತಿಕೊಂಡು ತಾವು ಈಗಲೂ ಶುದ್ಧ ಆರ್ಯರಾಗಿ ಉಳಿದ ಆನಂದವನ್ನು ಹಚ್ಚಿಕೊಳ್ಳುವ ಹಲವು ಬ್ರಾಹ್ಮಣರಿದ್ದಾರೆ. ಆದರೆ, ಒಂದು ಕಾಲಕ್ಕೆ ಅನುಲೋಮ ವಿವಾಹಾದಿಗಳಿಂದ ಉಂಟಾದ ಸಂತತಿಯನ್ನು ಬ್ರಾಹ್ಮಣರೆಂದು ಎಣಿಸಿದ್ದಾಗಿ ವೇದಕಾಲದ ಉದಾಹರಣಗಳಿವೆ. ಹೀಗಿರುವಾಗ ಬ್ರಾಹ್ಮಣರು ತಾವು ಮಾತ್ರ ಪವಿತ್ರರು ಉಳಿದವರು ಪತಿತರು ಎಂದು ಭಾವಿಸುವುದು ವಿಚಿತ್ರವೇ ಸರಿ. ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೂ ಅದು ಲೋಕಕ್ಕೆ ಕಾಣದಿರುವುದೇ? ಇಂದು ಬ್ರಾಹ್ಮಣರಲ್ಲಿರುವ ವಿವಿಧ ವರ್ಣ, ರೂಪ, ಆಕಾರಗಳೇ ಅವರ ವಂಶಮಿಶ್ರಣಕ್ಕೆ ಸಾಕ್ಷಿಯಾಗಿವೆ.

ದ್ರಾವಿಡರೆಂಬ ಹೆಸರು ವೇದ ಉಪನಿಷತ್ತುಗಳಲ್ಲಿ ಸಿಕ್ಕುವುದಿಲ್ಲವಾದ್ದರಿಂದ ಈ ಜನಾಂಗವೇ ಇದ್ದಿಲ್ಲವೆಂಬ ವಾದವು ಭ್ರಾಮಕವಾಗಿದೆ. ಆದರೆ, ದ್ರಾವಿಡವೆಂಬ ಹೆಸರಿನಿಂದಲೇ ಈ ಜನಾಂಗವು ವೇದ-ಪೂರ್ವಕಾಲದಿಂದಲೂ ಇದ್ದಿತೆಂದು ಹೇಳುವರೂ ಅಷ್ಟೇ ಅಸಮಂಜಸವಾಗಿದೆ. ಪ್ರಾಚೀನ ಕಾಲದಲ್ಲಿ ಭಾರತದೊಳಗೆ ಆರ್ಯರದೊಂದೇ ಜನಾಂಗವಿದ್ದಿತು. ಮತ್ತು ಮೊದಲಿನಿಂದ ಇಲ್ಲಿಯೇ ಇದ್ದವರು, ಎಂಬ ವಾದಕ್ಕೆ ಇತಿಹಾಸ, ಭಾಷಾಶಾಸ್ತ್ರ, ವಂಶಶಾಸ್ತ್ರ (Ethnology) ಗಳು ಸ್ವಲ್ಪವೂ ಪೋಷಕವಾಗಿಲ್ಲ. ಇಂಡೋ ಜರ್ಮ್ಯಾನಿಕ್ ಭಾಷೆಗಳ ಇತಿಹಾಸವು, ಭಾರತೀಯ ಆರ್ಯರ ಸಂಬಂಧವು ಈ ನಾಡಿನ ಹೊರಗೆ ಇದ್ದುದನ್ನು ಸಿದ್ಧಪಡಿಸುತ್ತದೆ. ವೇದ ಉಪನಿಷತ್ತುಗಳಲ್ಲಿ ದೊರೆಯುವ ಮಟಚಿ, ಅರಣಿ, ಕಲಾ, ಕಾಲ, ಗಣ, ನಾನಾ, ಪುಷ್ಪ ಮೊದಲಾದ ಶಬ್ದಗಳು ಸಂಸ್ಕೃತ ವರ್ಗಕ್ಕೆ ಸೇರಿದುವಲ್ಲವೆಂದು ಭಾಷಾಶಾಸ್ತ್ರಜ್ಞರೆಲ್ಲರು ಒಪ್ಪುತ್ತಾರೆ. ವೇದದಲ್ಲಿಯೇ ಭಿನ್ನವರ್ಣಗಳ ಭಿನ್ನರೂಪಗಳ (ಅರ್ಥಾತ್ ಭಿನ್ನ ಜನಾಂಗಗಳ) ಜನರ ವರ್ಣನೆಗಳಿವೆ. ಇಂದಿನ ವಂಶಶಾಸ್ತ್ರಜ್ಞರ ಸಂಶೋಧನೆಗಳು ಆ ವರ್ಣನೆಗಳಿಗೆ ಬೆಂಬಲವನ್ನೀಯುತ್ತಿವೆ. ಆದಕಾರಣ, ಪ್ರಾಚೀನಕಾಲದಲ್ಲಿ ಭಾರತದಲ್ಲಿ ಕೇವಲ ಆರ್ಯರೆ ಇದ್ದರೆಂದು ಪ್ರತಿಪಾದಿಸುವುದು ಸಮಂಜಸವಾಗಲಾರದು.

ಕನ್ನಡ, ತಮಿಳು, ತುಳು, ತೆಲಗು, ಕೊಡಗು ಮೊದಲಾದ ಭಾಷೆಗಳು ಸಂಸ್ಕೃತ ವರ್ಗದವು ಅಲ್ಲ. ಈ ಭಾಷೆಗಳಿಗೆ ಸಂಬಂಧಿಸಿದ ಶಬ್ದಗಳೇ ವೇದಗಳಲ್ಲಿ ದೊರೆತಿವೆ. ಆದಕಾರಣ, ಮೂಲದಲ್ಲಿ ಈ ಭಾಷೆಗಳನ್ನಾಡುವ ಜನರ ಪೂರ್ವಜರ ಒಂದು ಪಂಗಡವು ವೇದಕಾಲದಿಂದಲೂ ಈ ನಾಡಿನಲ್ಲಿ ಇದ್ದೇ ಇದ್ದಿತೆಂದು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಆದರೆ, ಈ ಜನಾಂಗಕ್ಕೆ ಆ ಕಾಲದಲ್ಲಿ ಯಾವ ಹೆಸರಿದ್ದಿತೆಂಬುದು ಮಾತ್ರ ತಿಳಿಯದೇ ಇದ್ದುದರಿಂದ ಕಾಲ್ಡವೆಲ್ಲ ಪ್ರಭೃತಿಗಳು (ಅವರಿಗೆ ತಮಿಳಿನ ಎಂದರೆ ದ್ರಾವಿಡದ ಪರಿಚಯವೇ ವಿಶೇಷವಾಗಿದ್ದುದರಿಂದ) ಆ ಜನಾಂಗಕ್ಕೆ ದ್ರಾವಿಡರೆಂದು ಕರೆದರು. ಈ ದ್ರಾವಿಡವೆಂಬ ಹೆಸರು, ಇದು ತಾತ್ಪೂರ್ತಿಕವಾಗಿ ಅವರನ್ನು ಗುರ್ತಿಸಲು ಇಟ್ಟುದೆಂದು ತಿಳಿಯಬೇಕಲ್ಲದೆ, ಈ ಜನಾಂಗಕ್ಕೆ ವೇದಕಾಲದಿಂದಲೂ ಇದೇ ಹೆಸರು ಇದ್ದಿತೆಂದು ಎಣಿಸುವುದು ತೀರ ತಪ್ಪು.

ದ್ರಾವಿಡವೆಂಬ ಹೆಸರು ತುಂಬ ಸಂದಿಗ್ಧವಾಗಿದೆ. most in-appropriate and singularly missleading ಎಂದು ವಿನ್ಸೆಂಟ್ ಸ್ಮಿತ್ ಮೊದಲಾದವರು ಅಭಿಪ್ರಾಯಪಟ್ಟಿದ್ದಾರೆ. ಶ್ರೀ. ಶಂ. ಬಾ. ಜೋಶಿಯವರು ಇವೇ ದಿಶೆಯಲ್ಲಿ ಇನ್ನು ಹೆಚ್ಚು ಅಭ್ಯಾಸ ಮಾಡಿ ಹೊಸ ಮಹತ್ವದ ಮಾತನ್ನು ಬೆಳಕಿಗೆ ತಂದಿದ್ದಾರೆ. ವೇದಕಾಲದಲ್ಲಿ ಈ ಜನಾಂಗವು ಯಾವ ಹೆಸರಿನಲ್ಲಿ ಮೆರೆಯುತ್ತಿದ್ದಿತೆಂಬುದನ್ನು ಕಂಡುಹಿಡಿದು ಅಖಿಲ ಭಾರತೀಯ ಮಹತ್ವದ ಒಂದು ಸಂಗತಿಯನ್ನು ತಮ್ಮ ಸಂಶೋಧನದಲ್ಲಿ ಕಂಡುಹಿಡಿದಿದ್ದಾರೆ. 'ಕರ್ಣಾಟದ ವೀರ ಕ್ಷತ್ರಿಯರು' ಮತ್ತು 'ಕನ್ನಡದ ನೆಲೆ' ಎಂಬ ಎರಡು ಗ್ರಂಥಗಳಲ್ಲಿ ಈ ವಿಷಯವನ್ನು ಸಾಧಾರವಾಗಿ ವಿವೇಚಿಸಿದ್ದುಂಟು. ಈ ಜನಾಂಗದ ಪ್ರಾಚೀನ ಹೆಸರು 'ಯದು-ತುರ್ವಸು' ಎಂಬುದಾಗಿದ್ದಿತೆಂದು ಶ್ರೀ ಜೋಶಿಯವರು ಸ್ಥಾಪಿಸಿದ್ದಾರೆ. ಇದನ್ನು ಈವರೆಗೆ ಯಾರು ಅಲ್ಲಗಳೆದಿಲ್ಲ.

ಕರ್ಣಾಟಕ, ತಮಿಳು ತೆಲಗು ಮೊದಲಾದ ಈ ನಾಡುಗಳ ಮೊದಲಿಗರ ಪೂರ್ವಜರು 'ಯದು-ತುರ್ವಸು'ಗಳು ಎಂಬ ಮಾತು ಸಿದ್ಧವಾಗುವುದರಿಂದ ನಮ್ಮ ಪ್ರಾಚೀನ ಇತಿಹಾಸವನ್ನು ತಿಳಿದುಕೊಳ್ಳುವುದರಲ್ಲಿ ತಡೆಯನ್ನುಂಟು ಮಾಡುತ್ತಿದ್ದ ಅನೇಕ ಸಂದಿಗ್ಧ ಸಮಸ್ಯೆಗಳೆಲ್ಲ ದೂರವಾಗುತ್ತವೆ. ಇದು ಪ್ರಾಚೀನ ಇತಿಹಾಸದ ಮೇಲೆ ತುಂಬ ಹೊಸ ಬೆಳಕನ್ನು ಕೊಡುವ ಅತ್ಯಂತ ಮಹತ್ವದ ಸಂಶೋಧನವಾಗಿದೆ. ಪ್ರಸ್ತುತ 'ಶಿವರಹಸ್ಯ' ದಲ್ಲಿ ವಿವರಿಸಿರುವ ಶಿವದೇವತೆಯು ಈ ಯದು-ತುರ್ವಸುಗಳಿಗೆಯೇ ಮುಖ್ಯವಾಗಿ ಸಂಬಂಧಪಟ್ಟುದೆಂದು ಶ್ರೀ ಜೋಶಿಯವರ ಸಿದ್ಧಾಂತವಾಗಿದೆ. ಯದು-ತುರ್ವಸುಗಳು ಹಟ್ಟಿಕಾರ ದನಗಾರರು; ಇವರು ಪರ್ವತ ಪೂಜಕರು. ಇಂದ್ರನು (ಆರ್ಯರು) ಪರ್ವತವೈರಿ. ಆದರೆ, ವೇದಕಾಲದಲ್ಲಿಯೇ ಇವೆರಡೂ ಜನಾಂಗಗಳಲ್ಲಿ ಹಲವು ಪಂಗಡಗಳು ಒಂದರೊಡನೊಂದು ಬೆರೆತುಕೊಳ್ಳಲಾರಂಭಿಸಿದುದನ್ನು ಸೂಚಿಸುವ ಹಲವು ಮಾತುಗಳು

ದೊರೆಯುತ್ತವೆ. 'ಇಂದ್ರಾ-ಪರ್ವತಾ' ಎಂಬ ಜೋಡುದೇವತೆಯು ಈ ಸಮ್ಮಿಶ್ರಣದ ದ್ಯೋತಕವಾಗಿದೆ. ವೇದಕಾಲದ ಈ 'ಇಂದ್ರಾ-ಪರ್ವತಾ' ದೇವತೆಯೇ ಆಧುನಿಕ 'ಮಲ್ಹಾರಿ-ಮಲ್ಲಯ್ಯ'- ಶಿವನೆಂದು ಶ್ರೀ ಜೋಶಿಯವರು 'ಕರ್ನಾಟದ ವೀರಕ್ಷತ್ರಿಯರು' ಮತ್ತು 'ಶಿವರಹಸ್ಯ'ದಲ್ಲಿ ಕಾಣಿಸಿದ್ದಾರೆ. ಮಲ್ಲಯ್ಯ ಎಂದರೆ ಪರ್ವತದ ಅರಿ (ಇಂದ್ರ)- ಅವನೇ ಮಲ್ಹಾರಿ; ಮಲ್ಲಯ್ಯ, ಮಲ್ಲೇಶನೆಂದರೆ ಪರ್ವತಪ್ಪ-ಶಿವನು.

ಶಿವನು ಹಟ್ಟಿಕಾರ-ಯದು-ತುರ್ವಸುಗಳ ದೇವತೆ ಎಂಬುದಕ್ಕೆ ನಮ್ಮ ನಾಡಿನ ವೀರಶೈವರು, ರಡ್ಡಿಗಳು, ಕುರುಬರು, ದೇವಾಂಗರು ಮೊದಲಾದವರು ಈಗಲು ಉಳಿಸಿಕೊಂಡು ಬಂದಿರುವ ಪ್ರಾಚೀನ ಪರಂಪರೆಗಳೇ ಸಾಕ್ಷಿಯಾಗಿವೆ. 'ರುದ್ರ-ಶಿವ' ಎಂಬ ದ್ವಿರುಕ್ತಿಯು ಕೂಡಲಸಂಗಮ ಎಂಬಂತೆ ಸಂಸ್ಕೃತ ಮತ್ತು ಕನ್ನಡ (ದ್ರಾವಿಡ) ಎರಡು ಭಾಷೆಗಳ ಸಂಯುಕ್ತ ಶಬ್ದವೆಂದು ಶ್ರೀ. ಜೋಶಿಯವರು ಹೇಳುವ ಮಾತು ಸಂಶೋಧಕರಿಗೆ ತುಂಬಾ ವಿಚಾರಾರ್ಹವಾಗಿದೆ. ಅವರ ಈ ಒಂದೇ ಮಾತೆ ಶಿವನು ಹಟ್ಟಿಕಾರರ ದೇವರೆಂದು ಸಿದ್ಧಪಡಿಸಲು ಸಾಕಿದೆ. ರುದ್ರಾಧ್ಯಾಯದೊಳಗಿನ ಶಿವನ ಹಲವು ಪರ್ಯಾಯನಾಮಗಳು ಕೆಂಪಣ್ಣ, ಪರ್ವತಪ್ಪ, ಕಾಡಪ್ಪ ಇತ್ಯಾದಿ ಅಂಕಿತನಾಮಗಳು ವೀರಶೈವರೆ ಮೊದಲಾದವರಲ್ಲಿ ಉಳಿದುಕೊಂಡು ಬಂದಿರುವಂತೆ ಆರ್ಯರಲ್ಲಿ ಕಾಣಿಸುವುದಿಲ್ಲ. ಶಿವನು ಆರ್ಯರ ದೇವತೆಯಾಗಿದ್ದರೆ, ವೇದದೊಳಗಿನ ತ್ರಿಷಷ್ಠಿ ಮರುತರ-೬೩ಪುರಾತನರ ಪರಂಪರೆಯ, ಬ್ರಾಹ್ಮಣವರ್ಗದಲ್ಲಿ ಏಕೆ ಉಳಿಯಬಾರದಾಗಿತ್ತು?

ಶ್ರೀ. ಶಂಕರರಾಯರ ಸಂಶೋಧನೆಯ ರೀತಿ ಅನ್ಯಾದೃಶವಾಗಿದೆ. ದ್ರಾವಿಡ ಸಂಸ್ಕೃತಿಯ ದೃಢ ಅಭ್ಯಾಸಿಗಳಾದ ಅವರ 'ಕಣ್ಮರೆಯಾದ ಕನ್ನಡ' 'ಕನ್ನಡದ ನೆಲೆ' 'ಕರ್ನಾಟದ ವೀರ ಕ್ಷತ್ರಿಯರು' ಹಾಗೂ ಕನ್ನಡಿಗರ ಸುದೈವದಿಂದ ಇದೀಗ ಎರಡನೆಯಾವೃತ್ತಿಯನ್ನು ಕಾಣಲಿರುವ 'ಶಿವರಹಸ್ಯ' ಪುಸ್ತಕವನ್ನೋದಿದವರಿಗೆ ದ್ರಾವಿಡ ಸಂಸ್ಕೃತಿಯ ಅಭ್ಯಾಸದ ಮಹತಿಯ ಬಗ್ಗೆ ಮನವರಿಕೆಯಾಗದಿರಲಾರದು. ವೇದಕಾಲದಲ್ಲಿಯೂ ವೀರಶೈವ ಮತದ ಬೇರುಗಳನ್ನು ಕಂಡುಹಿಡಿದು, ಆ ವಿಷಯವನ್ನು ತಮ್ಮ 'ಶಿವರಹಸ್ಯ' ಪುಸ್ತಕದಲ್ಲಿ ತರ್ಕಶುದ್ಧವಾದ ಹಾಗೂ ವಿಶ್ವಾಸಾರ್ಹವಾದ ರೀತಿಯಿಂದ ವಿಶದಗೊಳಿಸಿ ವೀರಶೈವರ 'ತ್ರಿಷಷ್ಠಿ' ಪುರಾತನರ ಕಲ್ಪನೆಗೆ ಋಗ್ವೇದವು ಮೂಲಾಧಾರವಾಗಿರುವ ಸಂಗತಿಯನ್ನು ಸಪ್ರಮಾಣವಾಗಿ ದೃಢಪಡಿಸಿ, ವೀರಶೈವ ಮತದ ಪುರಾತನತೆಯನ್ನು ತೋರಿಸಿಕೊಟ್ಟು; ಅವರು ವೀರಶೈವ ಜನಾಂಗದ ಮೇಲೆ ದೊಡ್ಡ ಉಪಕಾರ ಮಾಡಿದ್ದಾರೆ. ದ್ರಾವಿಡ ಭಾಷೆ-ಸಂಸ್ಕೃತಿಗಳ ಉನ್ನತ ಪರಂಪರೆಯ ವಾರಸುದಾರರಾದ ಕನ್ನಡಿಗರು, ನನ್ನ ಮಿತ್ರರಾದ ಶ್ರೀ. ಶಂಕರರಾಯರ 'ಶಿವ-ರಹಸ್ಯ' ಪುಸ್ತಕದ ಎರಡನೆಯಾವೃತ್ತಿಯನ್ನು ಪ್ರೇಮಾದರಗಳಿಂದ ಬರಮಾಡಿಕೊಂಡು ಶಿವನ ಪ್ರೀತಿಗೆ ಪಾತ್ರರಾಗುವರೆಂದು ಆಶಿಸುತ್ತೇನೆ. ದ್ರಾವಿಡ ಸಂಸ್ಕೃತಿಯ ಅಭ್ಯಾಸದ ಬಗೆಗೆ ಹದಗೊಂಡ ಅವರ ಲೆಕ್ಕಣಿಕೆಯಿಂದ ಇನ್ನೂ ಹೆಚ್ಚಿನ ಸಂಶೋಧನಾತ್ಮಕ ಕೃತಿಗಳು ಚೆನ್ನಿಗ ಶಿವನ ಕೃಪೆಯಿಂದ ಕನ್ನಡಿಗರ ಕೈಗೆ ದೊರಕಲೆಂದು ಹಾರಯಿಸುತ್ತೇನೆ.

೩೧-೧-೧೯೪೭ — ಎಂ. ಪಿ. ವಾಲಿ

ಬೆಳಗಾವ

ಮುನ್ನುಡಿ

ವೀರಶೈವ ಮತವು ವೈದಿಕ, ಎಂದು ಒಂದು ಪಂಗಡ; ಅವೈದಿಕ, ಎಂದು ಇನ್ನೊಂದು ಪಂಗಡ! ಈ ಬಗೆಯ ಒಂದು ವಾಗ್ಯುದ್ಧವು ಕೆಲವರುಷಗಳ ಹಿಂದೆ ನಡೆದುಹೋಯ್ತು; ಈಗಲೂ ಸಣ್ಣ, ಪುಟ್ಟ ಮಾತಿನ-ಮಲ್ಲ ಗಾಳೆಗಗಳು ಆಗ ಈಗ ಒಮ್ಮೊಮ್ಮೆ ನಡೆಯುವುದುಂಟು. ಆದರೆ, ಅವುಗಳ ಮನೋಭೂಮಿಕೆಯೆ ಬೇರೆ. ಅವು ಐತಿಹಾಸಿಕ ದೃಷ್ಟಿಯಿಂದ ನಡೆದ ಚರ್ಚೆಗಳಲ್ಲ. ಧಾರ್ಮಿಕ ಭಾವನೆಗಳೇ ಆ ಅರೆದಾಟ, ತಿಕ್ಕಾಟಗಳ ಮೂಲ ಕಾರಣ, ಮುಖ್ಯ ಕಾರಣ. ಆದರೆ, ಈಗ ನಾನು ಈ ಸಮಸ್ಯೆಯ ಅಭ್ಯಾಸ ಮಾಡುತ್ತಿರುವ ದೃಷ್ಟಿ ಬೇರೆಯಿದೆ. ನಮ್ಮ ನಾಡಿನ ಜನಾಂಗಗಳ ಐತಿಹಾಸಿಕ ಪರಂಪರೆಯನ್ನು ಅರಿತುಕೊಳ್ಳಬೇಕೆಂಬ ಒಂದು ಕುತೂಹಲವಲ್ಲದೆ, ಇದರಲ್ಲಿ ಬೇರೆ ಯಾವ ಭಾವನೆಗೂ ಆಸ್ಪದವಿಲ್ಲ. ನಮ್ಮ ನಾಡಿನ ಜನಾಂಗಗಳ ಐತಿಹಾಸಿಕ ಪರಂಪರೆಗಳ ಸಮ್ಯಕ್‌ಜ್ಞಾನವಿಲ್ಲದಿರುವುದರಿಂದ ಐತಿಹಾಸಿಕಸತ್ಯದ ಕಡೆಗೆ ಬೆನ್ನು ತಿರುವಿರುವುದರಿಂದ ಇಂದಿನ ನಮ್ಮ ಏಳಿಗೆಗೆ ಅಡ್ಡಿಯಾಗಿದೆ. ತಮ್ಮನ್ನು ತಾವು ಚೆನ್ನಾಗಿ ಅರಿತುಕೊಂಡಿರುವವರಿಗೆ ಅವರ ಮೇಲ್ಮೆಯ ಸರಿಯಾದ ದಾರಿ ದೊರಕಲೇಬೇಕು. ಈ ಬಗೆಯ ತಿಳಿಗೇಡಿತನವು ನಮ್ಮ ಇಳಿಗಾಲಕ್ಕೆ ಕಾರಣ ವಾಗಿದೆ. ಹಿಂದಿನ ಪರಂಪರೆ ಇಲ್ಲದೆ ಇರುವುದೂ ಒಂದು ದೃಷ್ಟಿಯಿಂದ ಲೇಸು; ಅಂತಹರೂ ಏಳ್ಗೆಯನ್ನು ಹೊಂದಬಲ್ಲರೆಂಬುದಕ್ಕೆ ಇಂಗ್ಲೆಂಡಿನ ಉದಾಹರಣವು ಸಾಕು. ಅನಂತಕಾಲದ ಪರಂಪರೆಯಿದ್ದು ಸರಿಯಾದ ಅರಿವು ಇಲ್ಲದವರು ಮಾತ್ರ, ತಮ್ಮ ಪ್ರಾಚೀನ ಪರಂಪರೆಗಳ ವಿಚಿತ್ರ ಕಲ್ಪನಾಸೃಷ್ಟಿಯಲ್ಲಿಯೆ ಮೈಮರೆತು ಬದಲಾದ ಕಾಲ-ಪರಿಸ್ಥಿತಿಗಳಿಗೆ ಅಯೋಗ್ಯರಾದ ಅವ್ಯವಹಾರ್ಯರಾದ ಜನಾಂಗದವರಾಗಿ ಮೂಲೆ ಗುಂಪಾಗದೆ ಇರಲಾರರು.

ಕನ್ನಡಿಗರಿಗೆ, ಈಗ ತಮ್ಮ ಸಾಂಸ್ಕೃತಿಕ ಪರಂಪರೆಗಳ ಸತ್ಯಸ್ವರೂಪವು ತಿಳಿಯುವುದು ಅವಶ್ಯವಿದೆ. ಸಾವಿರಾರು ವರುಷಗಳ ಹಿಂದಿನಿಂದ ನಡೆದು ಬಂದ ಸಂಗತಿಗಳ ಸತ್ಯಸ್ವರೂಪವು 'ಇದು ಹೀಗೆಯೇ' ಎಂದು ನಿಶ್ಚಿತವಾಗಿ ಎದೆತಟ್ಟಿ ಹೇಳುವುದು ಸಾಹಸವೆನಿಸದೆ ಇರದು. ಆದರೂ 'ಇದು ಹೀಗೆಯೇ' ಎಂದು ನಿರ್ಧರಿಸಿ ಹೇಳುವಷ್ಟು ಪ್ರಮಾಣಗಳು ಯಾವಾಗ ದೊರೆಯುವುವೊ ದೊರೆಯಲಿ-ಅಥವಾ ಆ ಬಗೆಯ ಪ್ರಮಾಣಗಳು ದೊರೆಯವುದಕ್ಕಾಗಿಯೇ 'ಇದು ಹೀಗಿರಬಹುದಲ್ಲವೆ?' 'ಹೀಗೆ ಏಕೆ ಇರಲಿಕ್ಕಿಲ್ಲ' 'ಈ ಈ ಕಾರಣಗಳ ಸಲುವಾಗಿ ಹೀಗಿರುವ ಸಂಭವವೂ ಇಲ್ಲದೆ ಇಲ್ಲ' ಎಂಬೀ ಬಗೆಯಾಗಿ-ವಿಚಾರ-ವಿಮರ್ಶೆಗಳಿಗೆ ಆರಂಭ ವಾಗುವುದೂ ಬೇಡವೆ? ಅನಂತಕಾಲದ ನಮ್ಮ ಸಾಂಸ್ಕೃತಿಕ ಪರಂಪರೆಗಳ ಸತ್ಯಸ್ವರೂಪದ ಮೇಲೆಲ್ಲ ಮುಸುಕಿಕೊಂಡಿರುವ ಮರೆವಿನ ಹೊದಿಕೆಯನ್ನು ಅಲ್ಪಸ್ವಲ್ಪಾದರೂ ಓರೆಮಾಡಿ (ಅದನ್ನು ಸಂಪೂರ್ಣ ತೆರೆವ

ಪುಣ್ಯವಂತನು ಬರುವವರೆಗೆ) ಸತ್ಯಸೂರ್ಯನ ಕೆಲವೊಂದು ಬೆಳಕಾದರೂ ನಮ್ಮ ಮೇಲೆ ಬಿದ್ದರೆ, ನಾವು ಕೃತಾರ್ಥರೇ ಸರಿ. ಅಷ್ಟರಿಂದಲೂ ನಮ್ಮ ಏಳಿಗೆಯ ಮುಂದಿನ ದಾರಿಯು ಎಷ್ಟೋ ಮಟ್ಟಿಗೆ ಸ್ಪಷ್ಟವಾಗದೆ ಇರದು.*

ಸತ್ಯಸಂಶೋಧನೆಯಲ್ಲಿ, ನಮಗೆ ಈಗ ಪ್ರಿಯಕರವಾಗಿರುವ ಎಷ್ಟೋ ಸಂಗತಿಗಳಿಗೆ ಪ್ರತಿಕೂಲವಾದ ವಿಚಾರಗಳು ನಮ್ಮೆದುರು ನಿಲ್ಲುವವು. ಈ ಹೊಸಮಾತುಗಳು ಸತ್ಯವೆಂದು (ಬೇರೆ ಬೇರೆ ಬಗೆಗಳಿಂದ ವಿಮರ್ಶಿಸಿದರೂ) ಸಿದ್ಧವಾದಲ್ಲಿ ಅವನ್ನು ಒಪ್ಪಿಕೊಳ್ಳುವುದಕ್ಕೆ ಎಂದೂ ಹಿಂಜರಿಯಲಾಗದು; ಎಷ್ಟೋ ಸಾರೆ ಒಮ್ಮೆಲೆ ಒಪ್ಪಿಕೊಳ್ಳಬೇಕಾದುದಿಲ್ಲವಾದರೂ, ಹೊಸದಾಗಿ ಬೆಳಕಿಗೆ ಬಂದ ಸಂಗತಿಯನ್ನು ಶಾಂತರೀತಿಯಿಂದ ಬಗೆದು ಭಾವಿಸಿ ನೋಡುವುದಕ್ಕಾದರೂ ನಮ್ಮ ಮನಸ್ಸು ಸಿದ್ಧವಾಗಿರಲೇಬೇಕು. ಇಲ್ಲದಿದ್ದರೆ, ಕಾಲಕಾಲಕ್ಕೆ ದೊರೆಯತಕ್ಕ ಹೊಸ ಬೆಳಕಿಗೆ ಎರವಾಗಿ ತಿಳಿಗೇಡಿತನದ ಕಗ್ಗತ್ತಲೆಯಲ್ಲಿ ಮುಗ್ಗರಿಸುತ್ತ ಬಿದ್ದುಕೊಂಡು ಜಗತ್ತಿನ ಮುಂದುವರೆದ ಜನರಿಂದ ನಗಿಸಿಕೊಳ್ಳುವುದೊಂದೇ ದಾರಿ, ನಮ್ಮ ಪಾಲಿಗೆ!

ಮೂಲಮಾತು

'ಕರ್ಣಾಟ(ಕ)'ವೆಂಬ ಹೆಸರು ಭಾರತದಲ್ಲಿ ದೊರೆಯುತ್ತಿದ್ದರೂ ಈನಾಡಿನ ಜನಾಂಗವು ಅದಕ್ಕೂ ಮೊದಲಿನಿಂದಲೆ ಭರತಖಂಡದಲ್ಲಿ ಇದ್ದಿತೆಂಬ ಬಗೆಗೆ ಯಾರೂ ಎರಡು ನುಡಿಯುವುದಿಲ್ಲ. ಕರ್ಣಾಟರೆಂದು ಅವರಿಗೆ ಆಗ ಹೆಸರಿರಲಿಕ್ಕಿಲ್ಲ. ಇನ್ನು ಯಾವುದೋ ಹೆಸರಿನಿಂದಲಾದರೂ ಅವರು ಇಲ್ಲಿ ಬಾಳಿ ಬದುಕಿದ್ದರೆಂಬುದು ನಿಶ್ಚಿತ. ಏಕೆಂದರೆ, ಈ ಜನಾಂಗದವರು ಋಗ್ವೇದ ಕಾಲದಿಂದ ಈಚೆಗೆ ತಿಳಿದುಬಂದ ಐತಿಹಾಸಿಕ ಪರಂಪರೆಯ ಮೇಲಿಂದ, ನಡುವೆ ಎಲ್ಲಿಂದಲಾದರೂ ಭಾರತದ (ಹೊರನಾಡಿನಿಂದ) ಅಲೆಯುತ್ತ ಇಲ್ಲ ನೆಲೆಯಾಗಲು ಬಂದವರಲ್ಲವೆಂದು ಎಲ್ಲ ವಿದ್ವಾಂಸರೂ ಒಪ್ಪಿಕೊಂಡಿದ್ದಾರೆ. ಇದು ನಿಜವಿದ್ದರೆ 'ಕರ್ಣಾಟ(ಕ)' ಎಂಬ ಹೆಸರಿನ ಮೊದಲು ಈ ಜನಾಂಗಕ್ಕೆ ಏನೆಂದು ಕರೆಯುತ್ತಿದ್ದರು.? ಏನಾದರೊಂದು ಹೆಸರಂತೂ ಇರಲೇಬೇಕಲ್ಲವೆ? ಅದು ಅವುದಿರಬಹುದು? ಎಂಬ ಈ ಮಾತಿನ ವಿಚಾರವನ್ನು 'ಕನ್ನಡದ ನೆಲೆ' ಎಂಬ ಸ್ವತಂತ್ರ ಪ್ರಬಂಧದಲ್ಲಿ ಮಾಡಿದ್ದಾಗಿದೆ. ಈಗ ಆ ಜನಾಂಗದ ವೈದಿಕ ಪರಂಪರೆ ಯಾವುದು? ಎಂಬುದೇ ಮುಖ್ಯ ಸಮಸ್ಯೆಯಾಗಿದೆ.

ಕರ್ಣಾಟದಲ್ಲಿ ಇನ್ನೂ ಅಂಶರೂಪದಲ್ಲಿ ಒಂದೊಂದು ಧರ್ಮದಲ್ಲಿ ಉಳಿದುಕೊಂಡು ಬಂದಿರುವ ಪ್ರಾಚೀನ ಪರಂಪರೆಗಳು ಪಶ್ಚಿಮದೇಶದ ಸಂಶೋಧಕರಿಗೆ ಗೊತ್ತಾದರೆ ಅವರು ಸೋಜಿಗಗೊಳ್ಳದೆ ಇರಲಾರರು. ಈಗ ವೀರಶೈವ ಮತದ ವಿಚಾರವನ್ನೇ ತಕ್ಕೊಳ್ಳುವ. ಕರ್ಣಾಟದ ಮೂಲಜನಾಂಗದ ಬಹ್ವಂಶವು ಈ ವೀರಶೈವ ಸಮಾಜದಲ್ಲಿ ಒಳಗೊಂಡಿದೆ. ಕರ್ಣಾಟಕ ಮೊದಲಿಗರ ವೇದಕಾಲದ ಸಂಬಂಧಸೂತ್ರಗಳನ್ನು ಅರಿತುಕೊಳ್ಳಲು ವೀರಶೈವರ ಧಾರ್ಮಿಕ ಪರಂಪರೆಗಳ ಇತಿಹಾಸವು ಬಹಳ ಉಪಯುಕ್ತವಾಗಿದೆ. ವೀರಶೈವರ 'ಶಿವ-ರುದ್ರ'ನಲ್ಲಿರುವ ಏಕಾಂತಿಕವಾದ ಅವ್ಯಭಿಚಾರಿಣಿ ಭಕ್ತಿಯು ಒಂದೇ ಈ ಮತವು ವೈದಿಕವೆಂದು ಸಿದ್ಧಪಡಿಸುವುದಕ್ಕೆ ಸಾಕು. ಏಕೆಂದರೆ 'ರುದ್ರ-ಶಿವನು' ವೈದಿಕ ದೇವತೆ; ಎಂದರೆ ವೇದದಲ್ಲಿ ಈ ದೇವತೆಯ ಮಂತ್ರಗಳಿವೆ. ತಮ್ಮ ಆರಾಧ್ಯ ದೈವತವಾದ 'ರುದ್ರ-ಶಿವನ' ಸಂಬಂಧದ ಈ ವೈದಿಕಮಂತ್ರಗಳ ಮೇಲೆ ವೀರಶೈವರಿಗೆ ಇರುವ ಅಧಿಕಾರವು, ಉಳಿದ ಯಾವ ವೈದಿಕ ಮತಾನುಯಾಯಿಗಳಿಗಿಂತಲೂ ಕಡಿಮೆ ಇಲ್ಲ;

---

* ಶಂಬಾ ಅವರು ತಮ್ಮ ಮೊದಲಕೃತಿ 'ಕಣ್ಮರೆಯಾದ ಕನ್ನಡ' ಬರೆದಾಗ ಅವರ ಒಟ್ಟು ಬರೆಹದ ಹಿಂದೆ ಇದ್ದ ಉದ್ದೇಶ ಇದೇ. ಆ ಪುಸ್ತಕದ ಆರಂಭದ ಪುಟದಲ್ಲೇ ಈ ಮಾತನ್ನು ಹಾಕಿದ್ದಾರೆ. ಇದು ಸತ್ಯಶೋಧನೆಯ ಒಂದು ಜೀವಂತ ಸಂಶೋಧನಕ್ರಮ ಆಗಿರುವುದನ್ನು ಉಳಿದ ಗ್ರಂಥಗಳ ಬೆಳಕಿನಲ್ಲಿ ಕಾಣಬಹುದಾಗಿದೆ. (ಸಂ)

ತಿರುಗಿ ಕೇಳಿದರೆ, ಈ ಮಂತ್ರಗಳ ಸಂಬಂಧವು, ವಿಶೇಷತಃ ರುದ್ರಾಧ್ಯಾಯದ ಸಂಬಂಧವು ವೀರಶೈವರಿಗೆ ಇರುವಷ್ಟು ಬೇರೆ ಇನ್ನಾರಿಗೂ ಇಲ್ಲ. ರುದ್ರ-ಶಿವನನ್ನಲ್ಲದೆ ಬೇರೊಂದು ದೈವತವನ್ನು ಕಣ್ಣೆತ್ತಿಯೂ ನೋಡಲು ಸಿದ್ಧವಿಲ್ಲದ ಈ ಜನಗಳ ಮತವಿಚಾರದ ಬೇರುಗಳು ವೇದದಲ್ಲಿ ಕಂಡುಬಂದರೆ ಸೋಜಿಗವೇನು? ಕೆಲವರು ಗ್ರಹಿಸಿರುವಂತೆ ವೀರಶೈವ ಮತದ ಆರಂಭವು ಶ್ರೀಮದಲ್ಲಮ, ಬಸವಣ್ಣರಿಂದಾಗಲಿ, ಅಷ್ಟೇ ಏಕೆ, ಶ್ರೀಪಂಚಾಚಾರ್ಯರಿಂದಾಗಲಿ ಆಗಿಲ್ಲ. ಇವರುಗಳೆಲ್ಲ ಕಾಲಕಾಲಕ್ಕೆ ತಮಗೆ ಸರಿದೋರಿದ ರೀತಿಯಲ್ಲಿ ವೀರಶೈವಧರ್ಮಕ್ಕೆ ಹೊಸ ಸಂಸ್ಕಾರಗಳನ್ನು ಕೊಟ್ಟವರು. 'ರುದ್ರ-ಶಿವ'ನ ಆರಾಧನೆಯ ಪರಂಪರೆಯು ಇವರಿಗಿಂತಲೂ ಮೊದಲಿನಿಂದ-ವೇದದಲ್ಲಿಯೇ ದೊರೆಯುತ್ತಿರುವುದರಿಂದ (ಇನ್ನೂ ಹಲವು ವಿದ್ವಾಂಸರ ಅಭಿಪ್ರಾಯದಂತೆ ವೇದಪೂರ್ವಕಾಲದಿಂದಲೆ ನಡೆದುಬಂದುದರಿಂದ) ಈ ಮತದ ಉಗಮವು ವೇದಗಳಲ್ಲಿ ಕಣ್ಣಿಗೆ ಬೀಳುವುದು ಸ್ವಾಭಾವಿಕವಾಗಿದೆ.

ರುದ್ರ-ಶಿವ

ವೇದಗಳಲ್ಲಿ ಶಿವ ಎಂಬ ದೇವತೆಯಿಲ್ಲ; ರುದ್ರನಿದ್ದಾನೆ. 'ರುದ್ರ'ನಿಗೆ 'ಶಿವ ಎಂಬ ವಿಶೇಷಣವನ್ನು ಹಚ್ಚಿದುದುಂಟು. 'ಶಿವ' ಎಂದರೆ ಕಲ್ಯಾಣ, ಮಂಗಲ; ಶಿವ-ರುದ್ರ ಅಥವಾ ರುದ್ರ-ಶಿವ ಎಂದರೆ ಕಲ್ಯಾಣಕರನಾದ, ಮಂಗಲಸ್ವರೂಪಿಯಾದ ರುದ್ರನು ಎಂದೇ ಅರ್ಥ. ರುದ್ರನು ಉಗ್ರನು. ಮಾಧ್ವರಲ್ಲಿ ಶಿವನೆಂದು ಕರೆಯುವ ಸಂಪ್ರದಾಯವಿಲ್ಲ. ರುದ್ರದೇವರು, ಉಗ್ರದೇವರು ಎಂದು ಹೇಳುವ ವಾಡಿಕೆಯುಂಟು. ಮಾಧ್ವರು ಈ ದೇವರನ್ನು ಶಿವನೆಂದು (ಎಂದರೆ ಮಂಗಲಸ್ವರೂಪಿಯೆಂದು) ಸಂಬೋಧಿಸದೆ, ಉಗ್ರ ಎಂಬುವುದರಲ್ಲಿಯೆ ಅವರು ಸೂಕ್ಷ್ಮವಾಗಿ ತಮ್ಮ ತಾರತಮ್ಯವನ್ನು ಸೂಚಿಸುವರಾದರೂ ಇದು ವೈದಿಕಪರಂಪರೆಗೆ ಸರಿಯಾದ ಮಾತಾಗಿದೆ.

ಶೈವರು ಶಿವಸರ್ವೋತ್ತಮನೆಂದರೂ, ವೈಷ್ಣವರು ವಿಷ್ಣುಸರ್ವೋತ್ತಮನೆಂದರೂ ಇವೆರಡು (ವೇದಗಳ ಅರ್ಥವನ್ನು ನೋಡಿದರೆ) ಅ-ವೈದಿಕ ವಿಚಾರಗಳು. ವೇದದಲ್ಲಿಯ ಹಿರಿಯ ಪಟ್ಟವು ಯಾರಿಗಾದರೂ ಇದ್ದರೆ ಅದು ಇಂದ್ರನಿಗೇ. ಇಂದ್ರನ ಎದುರು ರುದ್ರ, ವಿಷ್ಣುಗಳು ಏನೂ ಅಲ್ಲ. ಇಂದ್ರನಿಗಿರುವ ಮಂತ್ರಗಳ ಕಾಲುಪಾಲು ಸಹ ಈ ದೇವತೆಗಳಿಗಿಲ್ಲ! ಅರ್ವಾಚೀನ ಕಾಲದ ಅಮರಕೋಶದವನೂ ವಿಷ್ಣುವಿಗೆ 'ಉಪೇಂದ್ರ'ನೆಂಬ ಪರ್ಯಾಯನಾಮವಿದ್ದುದನ್ನು ಹೇಳುತ್ತಾನೆ! ಇಂದ್ರನ ಸ್ಥಾನವನ್ನು ಕುರಿತು ಮ್ಯಾಕಡೊನೆಲ್ಲರು ಬರೆಯುವುದೇನೆಂದರೆ:

> Indra is the favourite national god of Vedic Indians. His importance is indicated by the fact that about 250 hymns celebrate his greatness, more than those devoted to any other god.[೧]

ಋಗ್ವೇದದಲ್ಲಿ ರುದ್ರನ ಪಾಲಿಗೆ ಮೂರು ಸಂಪೂರ್ಣ ಸೂಕ್ತಗಳಿವೆ. ಸೋಮನೊಂದಿಗೆ ಒಂದು ಸೂಕ್ತವಿದೆ; ಅಂಶತಃ ಕೆಲವೆಡೆಗೆ; ಸುಮಾರು ಎಪ್ಪತ್ತೈದು ಸಾರೆ ಈತನ ಹೆಸರು ಅಲ್ಲಿ ಇಲ್ಲಿ ಕಾಣಿಸಿಕೊಳ್ಳುವುದು.[೨] ಆದರೆ, ಯಜುರ್ವೇದದಲ್ಲಿ ಇದಕ್ಕೂ ಸ್ವಲ್ಪ ಹೆಚ್ಚಿನ ಸ್ಥಾನವುಂಟು.

"ರುದ್ರನಿಗೆ ಒಂದು ಕೈಯಿದೆ; ಭುಜಗಳಿವೆ; ದೃಢವಾದ ಅವಯವಗಳುಳ್ಳವನು ಇವನು; ಇವನಿಗೆ ಅಂದವಾದ ತುಟಿಗಳುಂಟು; ಜಡೆಬಿಟ್ಟವನು; ಕೆಂಬಣ್ಣದವನು; ತಳತಳನೆ ತೊಳಗುವನು; ವಿವಿಧ ರೂಪನು; ಬಂಗಾರದಂತೆ ಹೊಳೆಯುವನು. ಸೂರ್ಯನಂತೆ ತೊಳಗುವನು. ಬಂಗಾರದ ಅಲಂಕಾರಗಳ ಸೊಬಗಿನವನು. 'ನಿಷ್ಕ'ಗಳ ಹಲವು ಸರಗಳನ್ನು ಕೊರಳಲ್ಲಿ ಹಾಕಿದವನು. ತೇರನ್ನೇರಿರುವನು. ಅವನು ಸಹಸ್ರಾಕ್ಷನಾಗಿದ್ದಾನೆ. ಇವನಿಗೆ ಒಂದು ಹೊಟ್ಟೆಯಿದೆ, ಒಂದು ಮುಖವುಂಟು, ಒಂದು ನಾಲಗೆ, ಹಲ್ಲುಗಳಿವೆ. ಇವನ ಹೊಟ್ಟೆ ಕಪ್ಪು; ಬೆನ್ನು

ಕೆಂಪು ನೀಲಕಂಠನು; ನೀಲಕೇಶನು; ತಾಮ್ರವರ್ಣದವನು; ಕೆಂಪು ಮೈಬಣ್ಣವುಳ್ಳವನು; ಚರ್ಮಾಂಬರಧಾರಿ; ಗಿರಿವಾಸಿ. ರುದ್ರನಿಗೆ 'ತ್ರ್ಯಂಬಕ'ನೆಂಬ ಹೆಸರಿದೆ. ಆದರೆ, ಅಲ್ಲಿರುವ ಅರ್ಥವು ಮಾತ್ರ ಮುಕ್ಕಣ್ಣನೆಂದಲ್ಲ! ಮೂವರು ತಾಯಂದಿರುಳ್ಳವನು, ಎಂದು ಅಲ್ಲಿ ಅರ್ಥವಿರಬೇಕೆಂದು ಊಹೆ. ಪುರಾಣಕಾಲದಲ್ಲಿ ಹೆಂಡತಿಯೆಂದು ಹೇಳಲ್ಪಡುವ ಅಂಬಿಕೆಯು ವಾಜಸನೇಯ ಸಂಹಿತೆಯಲ್ಲಿ ರುದ್ರ ತಂಗಿಯೆಂದು ಹೇಳಿದ್ದಾಗಿದೆ ಉಮಾ ಮತ್ತು ಪಾರ್ವತಿಯರು ತೈತ್ತಿರೀಯ ಅರಣ್ಯಕ ಮತ್ತು ಕೇನೋಪನಿಷತ್ತುಗಳಲ್ಲಿ ಮೊದಲಿಗೆ ಕಾಣಿಸಿಕೊಳ್ಳುವರು[೩]

ಋಗ್ವೇದದಲ್ಲಿ ಅಗ್ನಿಯೊಡನೆ ಅನೇಕ ದೇವತೆಗಳನ್ನು ಹೋಲಿಸಿದ್ದುಂಟು; ಅದರಂತೆ ರುದ್ರನನ್ನೂ ಅಗ್ನಿಯೆಂದು ವರ್ಣಿಸಿದ್ದಾಗಿದೆ. ಅಥರ್ವವೇದ, ತೈತ್ತಿರೀಯ ಸಂಹಿತೆ, ಶತಪಥ ಬ್ರಾಹ್ಮಣಗಳಲ್ಲಿಯೂ ರುದ್ರನನ್ನು ಅಗ್ನಿರೂಪದಲ್ಲಿ ಕಂಡಿದ್ದಾರೆ. ಹಲವೆಡೆಗಳಲ್ಲಿ ಅಗ್ನಿಗೆ ರುದ್ರ ಶಬ್ದವನ್ನು ವಿಶೇಷಣದಂತೆಯೂ ಉಪಯೋಗಿ ಸಿದ್ದುಂಟು. ವಾಜಸನೇಯ ಸಂಹಿತೆಯಲ್ಲಿ ಅಗ್ನಿ, ಅಶನಿ, ಪಶುಪತಿ, ಭವ, ಶರ್ವ, ಈಶಾನ, ಮಹಾನ್‌ದೇವ, ಉಗ್ರದೇವ ಮೊದಲಾದವುಗಳೆಲ್ಲ ಒಂದೇ ದೇವತೆಯ ವಿವಿಧ ರೂಪಗಳೆಂದು ಹೇಳಿದೆ. ಅಗ್ನಿಯ ಅಷ್ಟವಿಧ ಸ್ವರೂಪಗಳನ್ನು ವಿವರಿಸುವುದಕ್ಕಾಗಿ ಆತನಿಗೆ ರುದ್ರ, ಶರ್ವ, ಪಶುಪತಿ, ಉಗ್ರ, ಅಶನಿ, ಭವ, ಮಹಾನ್‌ದೇವ ಮೊದಲಾದವುಗಳೆಲ್ಲ ಒಂದೇ ದೇವತೆಯ ವಿವಿಧ ರೂಪಗಳೆಂದು ಹೇಳಿದೆ. ಅಗ್ನಿಯ ಅಷ್ಟವಿಧ ಸ್ವರೂಪಗಳನ್ನು ವಿವರಿಸುವುದಕ್ಕಾಗಿ ಆತನಿಗೆ ರುದ್ರ, ಶರ್ವ, ಪಶುಪತಿ, ಉಗ್ರ, ಅಶನಿ, ಭವ, ಮಹಾನ್‌ದೇವ ಎಂಬ ಹೆಸರುಗಳುಂಟೆಂದು ಶತಪಥ ಬ್ರಾಹ್ಮಣ ಮತ್ತು ಶಾಂಖಾಯನ ಬ್ರಾಹ್ಮಣಗಳಲ್ಲಿ ಬಂದಿದೆ. ಮತ್ತು ಶರ್ವ, ಭವ, ಪಶುಪತಿ ಮತ್ತು ರುದ್ರ ಇವೆಲ್ಲವೂ ಅಗ್ನಿಯ ಹೆಸರುಗಳೆಂದು ಶತಪಥ ಬ್ರಾಹ್ಮಣದಲ್ಲಿಯೆ ಹೇಳಿದೆ.

ರುದ್ರನು ಉಗ್ರನು, ಎಂದು ಋಗ್ವೇದವು ವರ್ಣಿಸುತ್ತದೆ. ಮೃಗ (ಸಿಂಹ) ದಂತೆ ಭೀಮ (ಭಯಂಕರ)ನೂ, ಉಗ್ರನೂ, ವಿನಾಶಕಾರಕನೂ ಆಗಿದ್ದಾನೆ. ಇದೊಂದು ದೇವಲೋಕದ ಕೆಂದುಬಣ್ಣದ ಕಾಡು ಹಂದಿ. ಇದೊಂದು 'ವೃಷಭ' (ಗೂಳಿ). ಈ ದೇವನು ಅತುಲ ಬಲಶಾಲಿ. 'ವೀರರ' ಒಡೆಯ. ಲೋಕೈಕನಾಥ; ಲೋಕದ ತಂದೆ; ಕವಿಯೂ, ಪ್ರಚೇತ (ಧೀಮಂತ) ನೂ ಆಗಿದ್ದಾನೆ. ಈತನು ಭಕ್ತರಿಗೆ ವರಗಳನ್ನು ಕೊಡುವವನೂ, ಉದಾರನೂ ಆಗಿರುವನು. ಇವನು ಕೂಡಲೆ ಒಲಿಯುವವನೂ ಅಲ್ಪಸ್ವಲ್ಪ ತಪ್ಪಿಗಾಗಿ ತಟ್ಟನೆ 'ಒಂಕು' ಆಗತಕ್ಕವನೂ."

ಋಗ್ಭಾಷ್ಯದಲ್ಲಿ ಸಾಯಣಾಚಾರ್ಯರು ಈ ಶಬ್ದಕ್ಕೆ ಆರುಬಗೆಯಿಂದ ಅರ್ಥಮಾಡಬಹುದೆಂದು ತೋರಿಸಿದ್ದಾರೆ:

೧. ರೋದಯತಿ ಸರ್ವಂ ಅಂತಕಾಲೇ ಇತಿ ರುದ್ರಃ;
೨. ರುತ್ ಸಂಸಾರಾಖ್ಯಂ ದುಃಖಂ ತತ್ ದ್ರಾವಯತಿ ಅಪಗಮಯತಿ, ವಿನಾಶಯತಿ, ಇತಿ ರುದ್ರಃ;
೩. ರುತ್ ಶಬ್ದರೂಪಾ ಉಪನಿಷದಃ, ತಾಭಿಃ ದ್ರೂಯತೇ ಗಮ್ಯತೇ ಪ್ರತಿಪಾದ್ಯತ ಇತಿ ರುದ್ರಃ;
೪. ರುತ್ ಶಬ್ದಾತ್ಮಿಕಾ ವಾಣೀ, ತತ್ ಪ್ರತಿಪಾದಧ್ಯಾತ್ಮವಿದ್ಯಾ, ವಾ ತಾಮುಪಾಸಕೇಭ್ಯಃ ರಾತಿ ದದಾತಿ ಇತಿ ರುದ್ರಃ;
೫. ರುಣದ್ಧಿ ಆವೃಣೋತಿ, ಇತಿರುತ್ ಅಂಧಕಾರಾದಿ ತಂದೃಣಾತಿ ವಿದಾರಯತಿ ಇತಿ ರುದ್ರಃ;
೬. ಕದಾಚಿತ್ ದೇವಾಸುರ ಸಂಗ್ರಾಮೇ ಅಗ್ನ್ಯಾತ್ಮಕೋ ರುದ್ರಃ ದೇವೈಃ ನಿಕ್ಷಿಪ್ತಂ ಧನಂ ಅಪಹೃತ್ಯ ನಿರಾಗತ್। ಅಸುರಾನ್ ಜಿತ್ವಾ ದೇವಾಃ ಏವಂ ಅನ್ವಿಷ್ಯ ದೃಷ್ಟ್ವಾ ಧನಂ ಅಹರನ್। ತದಾನೀಮ್ ಅರುದತ್। ತಸ್ಮಾತ್ ರುದ್ರ ಇತ್ಯಾಖ್ಯಾಯತೇ

ಇದೇ ಮೇರೆಗೆ ತೈತ್ತಿರೀಯ ಸಂಹಿತೆಯಲ್ಲಿ ಹೇಳಿರುವುದೇನೆಂದರೆ:

ಸೋರೋದಿದ್ಯದರೋದೀತ್ ತತ್ ರುದ್ರಸ್ಯ ರುದ್ರತ್ವಂ॥

'ಗ್ರಾಸ್ಮನ್' ಎಂಬವನ ಅಭಿಪ್ರಾಯದಂತೆ ರುದ್ರ ಶಬ್ದವು ರುದ್ (ಹೊಳೆ, ಪ್ರಕಾಶಿಸು) ಧಾತುವಿನಿಂದ ಹುಟ್ಟಿದೆ; ರುದ್ರನೆಂದರೆ ತಳತಳನೆ ಹೊಳೆವವನೆಂದು ಈತನ ಮತ. ಪಿಶ್ಚೆಲನು ರುದ್ರ ಶಬ್ದಕ್ಕೆ 'ಕೆಂಪು' ಎಂದು

ಅರ್ಥಮಾಡುತ್ತಾನೆ,' ಎಂದು ವಿವರಿಸಿ ಮೆಕಡೊನೆಲ್ಲರು 'ಈ ಶಬ್ದದ ಅರ್ಥವು ಇನ್ನೂ ಸಂದಿಗ್ಧವಾಗಿದ್ದರೂ, ಈ ಬಗೆಯಾಗಿ ಹೊಳೆವವನು ಅಥವಾ ಕೆಂಬಣ್ಣದವನು ಎಂಬ ಅರ್ಥವಾಗುತ್ತದೆ' ಎಂದು ಕೊನೆಗೆ ಹೇಳಿದ್ದಾರೆ.[೪]

'ರುದ್ರ' ಮತ್ತು 'ಶಿವ' ಎರಡು ದೇವತೆಗಳೆ?

ಎ. ಬಿ. ಕೀಥ್ ಎಂಬ ವಿದ್ವಾಂಸರು ಒಂದೆಡೆಗೆ, ರುದ್ರದೇವತೆಯೊಡನೆ ಶಿವ ಎಂಬ ಇನ್ನೊಂದು ದೇವತೆಯನ್ನು ತಂದು ಕೂಡಿಸಿ ಅಭೇದ ಸಂಬಂಧವನ್ನು ಕಲ್ಪಿಸಿದ್ದಾಗಿದೆ, ಎಂದು ಅಭಿಪಾಯಪಟ್ಟಿದ್ದಾರೆ. ಆದರೆ, ಅವರು ತಮ್ಮ ಈ ಅಭಿಪ್ರಾಯಕ್ಕೆ ಯಾವ ಕಾರಣಗಳನ್ನೂ ಹೇಳಿಲ್ಲ! 'ರುದ್ರ' ಶಬ್ದದ ಅರ್ಥವು ಕೆಂಪು, ಹೊಳಪು ಎಂದು ಇರುವುದಾಗಿ ಬಲ್ಲಿದರು ಹೇಳಿದುದನ್ನು ಮೇಲೆ ಕೊಟ್ಟಿದೆ. 'ರುದ್ರ' ಶಬ್ದದ ಬಳಗದ 'ರುಧಿರ' ಎಂಬ ಇನ್ನೊಂದು ಪದವನ್ನು ಇದರೊಡನೆ ಹೋಲಿಸಿ ನೋಡಿದರೆ ಆ ಶಬ್ದದಲ್ಲಿ ಹುದುಗಿರುವ 'ಕೆಂಪು'ತನದ ಮನವರಿಕೆಯಾಗದೆ ಇರದು. ವೈದಿಕ ಋಷಿಗಳ ಕಣ್ಣಿಗೆ ರುದ್ರನು ಕೆಂಪುಮೂರ್ತಿಯಾಗಿ ಕಾಣುತ್ತಿದ್ದನೆಂಬುದರಲ್ಲಿ ಸಂದೇಹವಿಲ್ಲ. ಋಗ್ವೇದದಲ್ಲಿ ಅಗ್ನಿಗೆ 'ರುದ್ರ' ಎಂಬ ಪದವನ್ನು ವಿಶೇಷಣದಂತೆ ಉಪಯೋಗಿಸಿರುವುದೂ, ಅಗ್ನಿಯೇ ರುದ್ರನೆಂದಿರುವುದೂ ಇದಕ್ಕೆ ಸಾಕ್ಷಿ.[೫] ಆದುದರಿಂದ, ಅಗ್ನಿಸ್ವರೂಪಿಯಾದ ರುದ್ರನ ಕೆಂಪುಬಣ್ಣದ ಬಗ್ಗೆ ಸಂದೇಹವೆ ಇಲ್ಲ.

ರುದ್ರನಿಗೆ 'ಬಭ್ರುಃ' 'ಪ್ರ-ಬಭ್ರುಃ' ಎಂದು ಋಗ್ವೇದಲ್ಲಿ ವರ್ಣಿಸಿದೆ.[೬] 'ಬ್ರಭ್ರು' ಶಬ್ದಕ್ಕೆ ಪೀತವರ್ಣ ಎಂದು ಸಿದ್ಧೇಶ್ವರಶಾಸ್ತ್ರೀ ಚಿತ್ರಾವ ಅರ್ಥಮಾಡಿದ್ದಾರೆ. ಪಿಂಗಲವರ್ಣವೆಂದು ಒಂದು ಅರ್ಥವುಂಟು. ಮ್ಯಾಕಡೊನೆಲ್ಲರು, ಬ್ರೌನ್ ಎಂಬುವರು' ಚಿತ್ರಾವ ಶಾಸ್ತ್ರಿಗಳು ಹೇಳುವ ಹಳದಿಯೆಂದರೆ ಬಿಳಿದರ ಕಡೆಗೆ ಒಲವಿರುವ ಗೌರವರ್ಣವಲ್ಲ; ಅದು (ಬ್ರಭ್ರು) ಕೆಂಪಿನ ಹತ್ತರಿನ ಹಳದಿಯಾಗಿರಬೇಕು. ಏಕೆಂದರೆ ರುದ್ರನು ಬಂಗಾರದಂತೆ ಹೊಳೆಯುತ್ತಾನೆ ಎಂದೂ ಕೆಲವೆಡಗಳಲ್ಲಿ ವರ್ಣಿಸಿದ್ದುಂಟು.[೭] ರುದ್ರಾಧ್ಯಾಯದೊಳಗಿನ ವಿಶೇಷಣಗಳನ್ನು ನೋಡಿದರೆ ರುದ್ರನ ಸ್ವರೂಪದ ಅರ್ಥದ ಬಗ್ಗೆ ಸಂಶಯಕ್ಕೆ ಆಸ್ಪದವೇ ಉಳಿಯುವುದಿಲ್ಲ;

ಅಸೌಯಃ ತಾಮ್ರೋ ಅರುಣ ಉತ ಬಭ್ರುಃ ಸುಮಂಗಲಃ।

'ಶಿವ ಶಬ್ದಕ್ಕೆ ಸಂಸ್ಕೃತದಲ್ಲಿ 'ಮಂಗಲ', 'ಕಲ್ಯಾಣ' ಎಂದು ಅರ್ಥವನ್ನು ಹೇಳುವರಾದರೂ ಅದರ ವ್ಯುತ್ಪತ್ತಿಯು ಮಾತ್ರ ಅವರಿಗೆ ಇನ್ನೂ ನಿಶ್ಚಿತವಾಗಿ (ಈ ಅರ್ಥಕ್ಕೆ ಸರಿಯಾಗುವಂತೆ) ಗೊತ್ತಾಗಿಲ್ಲ 'ಶೀ' (ಮಲಗು) ಧಾತುವಿನಿಂದ ಶಿವ ಶಬ್ದವು ಹುಟ್ಟಿತೆಂದು ಕೋಶಗಳಿಂದ ಕಂಡುಬರುತ್ತದೆ. ಮಲಗುವುದು ಎಂದರೆ ಮಂಗಳಕರ! ಎಂದು ಹಿಡಿದು ಎಳೆತಂದು ಬಿಟ್ಟಿಯ ಅರ್ಥಮಾಡಿಕೊಳ್ಳಬೇಕು ಇನ್ನು!

ದ್ರಾವಿಡ ಭಾಷಾಕೋವಿದರು ಹೇಳುವಂತೆ 'ಶಿವ ಇದು ಮೂಲ ಸಂಸ್ಕೃತಶಬ್ದವೇ ಅಲ್ಲ. ಆದುದರಿಂದಲೇ' ಅದಕ್ಕೆ ಸಂಸ್ಕೃತದಲ್ಲಿ ಧಾತ್ವರ್ಥವು ದೊರೆಯವುದಿಲ್ಲ ಅಥವಾ 'ಶಿವ' ಈ ಬಳಗದ ಬೇರೆ ಹಲವು ಸಾಧಿತ ಶಬ್ದಗಳೂ ಸಂಸ್ಕೃತ ಭಾಷೆಯಲ್ಲಿ ವಿಪುಲವಾಗಿಲ್ಲ. ಮೂಲ ದ್ರಾವಿಡಭಾಷೆಯಲ್ಲಿ 'ಶಿನ್' ಎಂಬುದೊಂದು ಬೀಜ ಶಬ್ದವಿದೆ. 'ಶಿನ್' ಎಂದರೆ ಕೆಂಪು ಎಂದು ಮೂಲಾರ್ಥ. ಶಿನ್ ಇದರ ಬಳಗಕ್ಕೆ ಸೇರಿದ ಚಿನ್, ಚೆನ್, ಕೆನ್ ಈ ನುಡಿಗಡಣವನ್ನು ಹೇಗೆ ಅರೆದು ಒರೆದುನೋಡಿದರೂ ಅದರಿಂದ ಕೆಂಪು ಎಂಬರ್ಥವೆ ಹೊರ ಹೊಮ್ಮುತ್ತಲಿದೆ. 'ಶಿವ' ಎಂಬ ಪದವು 'ಶಿನ್' ಇದರಿಂದಲೆ ಹುಟ್ಟಿದೆ. 'ಶಿನ್' (ದಂತೆ ಇರುವ) ಅವನೇ ಶಿವನು. ಕನ್ನಡಿಗರಲ್ಲಿ ಜನಸಾಮಾನ್ಯರು 'ಶಿವ' ಶಬ್ದವನ್ನು ಹೇಳುವ ಬಗೆಯಲ್ಲಿ ಒಂದು ಸೊಗಸು ಇದೆ; ಶಿವ ಶಬ್ದದ ಮೂಲ ಸ್ವರೂಪದ ಹತ್ತರ ಹತ್ತರಿನ ಉಚ್ಚಾರವನ್ನು ಅವರ ಬಾಯಿಂದ ಕೇಳಲು ಸಿಕ್ಕುತ್ತದೆ. ಸುಶಿಕ್ಷಿತರು ಎಂಬುವವರ ಆ 'ವ್ಯಾಕರಣಶುದ್ಧ' ಉಚ್ಚಾರದ ಕೃತ್ರಿಮಬಂಧನದಲ್ಲಿ ಅನೇಕ ಶಬ್ದಗಳು ಮೂಲಸ್ವರೂಪವೆ

ತಿಳಿಯದಷ್ಟು ಮಾರ್ಪಾಟು ಹೊಂದಿವೆ; 'ಹಾವು' ಎಂದು ಸುಶಿಕ್ಷಿತರು ಬರೆದಂತೆ ಓದುವರು; ಇದು ಅಶುದ್ಧ. 'ಪಾಮ್' ಪಾಮು-'ಹಾಂವು'; ಇದು ನಿಜಸ್ವರೂಪ. ಹಳ್ಳಿಗಳ ಈ ಶಬ್ದದ ಉಚ್ಚಾರದಲ್ಲಿ 'ಹ'ಕಾರದ ಮುಂದೆ ಸ್ವಲ್ಪ ಅನುನಾಸಿಕಾಕ್ಷರವು ಕೇಳಬರುತ್ತದೆ. ಅದರಂತೆ ಹಳ್ಳಿಗರು 'ಶಿವ' ಎಂಬುದಾಗಿ ಎಂದೂ ಉಚ್ಚರಿಸುವುದಿಲ್ಲ; ಶಿಂವ (ಶಿನ್‌ವ) ಎಂದೇ ಹೇಳುವುದುಂಟು. ಆದಕಾರಣ 'ಶಿವ' ಎಂದರೂ ಕೆಂಪು ಎಂದೇ ಅರ್ಥವು. ರುದ್ರನು ಕೆಂಪು; ಶಿವನೂ ಕೆಂಪು. ರುದ್ರನಿಗೆ 'ಶಿವ' ಎಂದು ವಿಶೇಷಣವನ್ನು ವೈದಿಕಋಷಿಗಳು ಉಪಯೋಗಿಸುತ್ತಿದ್ದು, ಅದು ಎಷ್ಟೊಂದು ಉಚಿತಾರ್ಥವುಳ್ಳದೆಂಬುದು ಈಗ ಗೊತ್ತಾಗುವುದು!. ಆದುದರಿಂದ ರುದ್ರ ಮತ್ತು ಶಿವ ಎಂದರೆ ಬೇರೆ ಅಲ್ಲ, ರುದ್ರ ಎಂದರೆ ಶಿವ; ಶಿವ ಎಂದರೆ ರುದ್ರ.

ರುದ್ರ ಎಂಬ ಮಾತು ವೇದಗಳಲ್ಲಿದೆ, ಸಂಸ್ಕೃತ ಪರಂಪರೆಯಲ್ಲಿದೆ. ನಮ್ಮ ಕನ್ನಡ ಜನಾಂಗವು ರುದ್ರನೆಂದು ಹೆಚ್ಚಾಗಿ ಹೇಳುವುದಿಲ್ಲ. ನಮ್ಮ ಜನಗಳು ಹೇಳುವುದು 'ಶಿ(೦)ವ'! ಇದು ಕನ್ನಡ (ದ್ರಾವಿಡ) ಪರಂಪರೆಯ ಶಬ್ದ. 'ಶಿ(೦)ವ' ಎಂಬ ನಮ್ಮ ಜನಾಂಗದ ಮಾತನ್ನೇ ಸಂಸ್ಕೃತಕ್ಕೆ ಪರಿವರ್ತಿಸಿಕೊಂಡು ಶಿವ (ಕೆಂಪು) ಎಂಬರ್ಥದ್ದೇ ಆದ 'ರುದ್ರ' ಎಂಬ ಪರ್ಯಾಯ ಶಬ್ದವನ್ನು ಸಿದ್ಧಪಡಿಸಿಕೊಂಡರು! ಮತ್ತೆ 'ರುದ್ರ-ಶಿವ' ಎಂಬ ಈ ಜೋಡುನುಡಿಯು, ಕೂಡಲ-ಸಂಗಮ, ಚಂದ್ರ-ಮಸ್, ತುರು-ವಸು ಎಂಬೀ ವರ್ಗದ ಕೂಡು ನುಡಿಯಾಯ್ತು! ಈ ಬಗೆಯ ಜೋಡುನುಡಿಗಳು ಎರಡು ಭಿನ್ನಭಾಷೆಯ ಜನಾಂಗಗಳ ದೃಢವಾದ ಸಂಬಂಧ, ಸಂಪರ್ಕಗಳು ಉಂಟಾದಾಗ ತಲೆದೋರುವುದುಂಟು. ಛಪ್ಪನ್ನೈವತ್ತಾರು, ಕಾಗದ-ಪತ್ರ ಎಂಬಿವೇ ಮೊದಲಾದ ಮಾತುಗಳಲ್ಲಿ ಇದನ್ನು ನೋಡಿಕೊಳ್ಳಬಹುದು.

ಆದುದರಿಂದ ರುದ್ರ-ಶಿವನು, ಆರ್ಯ-ದ್ರಾವಿಡ ದೇವತೆಯೆಂಬುದು ನಿಶ್ಚಿತ. ರುದ್ರನು ಬೇರೆ, ಶಿವನು ಬೇರೆಯಾಗಿರದೆ ಒಂದೇ ದೇವತೆಗೆ ಇರುವ ಭಿನ್ನಭಾಷೆಯೊಳಗಿನ ಎರಡು ಶಬ್ದಗಳು ಇವು. ರುದ್ರ-ಶಿವನು ಯಾರ ದೈವತ? ಆರ್ಯರದೆ? ದ್ರಾವಿಡರದೆ? ಈ ದೇವತೆಯು ದ್ರಾವಿಡರದೆಂಬ ಬಗ್ಗೆ ಜರ್ಮನ್ ಭಾಷೆಯಲ್ಲಿ ಆ ನಾಡಿನ ಅನೇಕ ವಿದ್ವಾಂಸರು ಪರಿಶ್ರಮಪೂರ್ವಕವಾಗಿ ಹಲವು ಸಣ್ಣ ದೊಡ್ಡ ಹೊತ್ತಗೆಗಳನ್ನು ಬರೆದುದುಂಟೆಂದು ಎ. ಬಿ. ಕೀಥರ ಗ್ರಂಥದಿಂದ ತಿಳಿದುಬರುತ್ತದೆ. ಆದರೆ, ಕೀಥರಿಗೆ ಆ ಯಾವ ಅಭಿಪ್ರಾಯಗಳೂ ಮಾನ್ಯವಿಲ್ಲ. ಆದರೂ ಅವರು ಕೊಟ್ಟ ಕಾರಣಗಳಲ್ಲಿ ವಿಶೇಷ ತಥ್ಯಾಂಶವಿಲ್ಲ. ಈ ಮಾತನ್ನು ನನಗೆ ತಿಳಿದಮಟ್ಟಿಗೆ ೨-೩ ಬಗೆಗಳಿಂದ ಪರೀಕ್ಷಿಸಿ ಕಂಡುಬಂದ ಮುಖ್ಯಾಂಶಗಳು ಯಾವವೆಂದರೆ:

ವೈದಿಕಋಷಿಗಳು ಮಾಡಿದ ಇಂದ್ರನ ವರ್ಣನೆಯೊಡನೆ ರುದ್ರನ ವರ್ಣನೆಯನ್ನು ಹೋಲಿಸಿದರೆ, ಇವರಿಬ್ಬರ ವಿಷಯಕ್ಕಿದ್ದ ಆ ಋಷಿಗಳ ಮನೋಭಾವವು ಎಂತಹದು ಎಂಬುದು ಚೆನ್ನಾಗಿ ವ್ಯಕ್ತವಾಗುತ್ತದೆ. ವೇದದಲ್ಲಿ ಇಂದ್ರನಿಗಿರುವ ಪ್ರಾಶಸ್ತ್ಯವು ರುದ್ರನಿಗಿಲ್ಲ. ಇಂದ್ರನ ವಿಷಯಕ್ಕಿರುವ ಆದರ ಕೌತುಕಗಳ ಭಾವನೆಯು ರುದ್ರನಲ್ಲಿ ಇಲ್ಲ. ಆರ್ಯಋಷಿಗಳಲ್ಲಿ ರುದ್ರನ ಬಗ್ಗೆ ಪ್ರೀತಿಗಿಂತಲೂ ಭೀತಿಯೆ ಹೆಚ್ಚಾಗಿದ್ದುದು ಕಂಡುಬರುತ್ತಿದೆ. "ನಮ್ಮನ್ನು ಕೊಲ್ಲಬೇಡ, ಕಾಯು" ಎಂಬೀ ಬಗೆಯ ಪ್ರಾರ್ಥನೆಗಳೇ ಋಗ್ವೇದದಲ್ಲಿ ಕೇಳಬರುತ್ತವೆ. ಅದರಿಂದ ರುದ್ರನು ಇಂದ್ರನಂತೆ ಯಾವಾಗಲೂ ಆರ್ಯಋಷಿಗಳ ಸಂರಕ್ಷಕ ಮಿತ್ರನಲ್ಲವೊ? ಎಂಬ ಸಂದೇಹವು ತಲೆದೋರುವುದು.

ಮಾನೋ ಮಹಾಂತ ಮುತ ಮಾನೋ ಅರ್ಭಕಂ ಮಾನ ಉಕ್ಷಂತಮುತಮಾನ
ಉಕ್ಷಿತಮ್।
ಮಾನೋವಧೀಃ ಪಿತರಂ ಮೋತ ಮಾತರಂ ಮಾನಃ ಪ್ರಿಯಾಸ್ತನ್ವೋ ರುದ್ರರೀರಿಷಃ॥[೮]

ಎಲೈ ರುದ್ರನೆ, ನೀನು ನಮ್ಮ ಹಿರಿಯರನ್ನು ಇಲ್ಲವೆ ಕಿರಿಯರನ್ನು ಕೊಲ್ಲಬೇಡ. ನಮ್ಮಲ್ಲಿ ಹುಟ್ಟುತ್ತಿರುವ ಇಲ್ಲವೆ ಹುಟ್ಟಿರುವವರನ್ನೂ ಕೊಲ್ಲಬೇಡ. ನಮ್ಮ ತಂದೆತಾಯಿಗಳನ್ನೂ ಕೊಲ್ಲಬೇಡ. ಇಲ್ಲವೆ ನಮ್ಮ ನಚ್ಚುಮೆಚ್ಚಿನ

ಮೈಯನ್ನೂ ಮಡಿಸ(ಚ)ಬೇಡ. ಇದರ ಮುಂದಿನ ಒಂಬತ್ತನೆಯ ಋಚೆಯೂ ಇದೆ ಬಗೆಯದಾಗಿದೆ. ಹತ್ತನೆಯ ಋಚೆಯಲ್ಲಿರುವ ಒಂದೆರಡು ಮಾತುಗಳು ಬಹಳ ವಿಚಾರಾರ್ಹವಾಗಿವೆ.

ಆರೇತೇ ಗೋಘ್ನಮುತ ಪೂರುಷಘ್ನಂ ಕ್ಷಯದ್ವೀರ ಸುಮ್ನಮಸ್ಮೇತೇ ಅಸ್ತು।
ಮೃಳಾಚನೋ ಅಧಿ ಚ ಬ್ರೂಹಿದೇವಾಧಾಚನಃ ಶರ್ಮಯಚ್ಛ ದ್ವಿಬರ್ಹಾಃ॥[೯]

ಎಲೈ ವೀರಪುತ್ರಯುಕ್ತ ರುದ್ರನೆ, ನಿನ್ನ ಆ ಆಕಳನ್ನು ಕೊಲ್ಲುವ, ಜನರನ್ನು ಕೊಲ್ಲುವ ಆಯುಧವನ್ನು ದೂರವಿರಿಸು. ನಮ್ಮ ಮೇಲೆ ಕರುಣಿಸು. ಎಲೈ ದೇವ, ಸುಖವು ದೊರೆಯುವಂತೆ ನಮ್ಮ ಮೇಲೆ ಕೃಪೆಮಾಡು; ಮತ್ತು ನಮ್ಮ ಕೈವಾರಿಯಾಗಿ ಮಾತನಾಡು' ಹಾಗೂ ನೆಲ ಮುಗಿಲುಗಳಲ್ಲಿರತಕ್ಕ ನೀನು ನಮಗೆ ಎಲ್ಲವನ್ನೂ (ಸುಖವನ್ನು) ದಯಪಾಲಿಸು. ಈ ಋಚೆಯಲ್ಲಿ ರುದ್ರನ ಆಯುಧಕ್ಕೆ ಕೊಟ್ಟಿರುವ ವಿಶೇಷಣಗಳು ಓದುಗರ ಮನಸ್ಸನ್ನು ಸೆಳೆಯದಿರಲಾರವು. ಆಕಳು ಕೊಲ್ಲವಂತಹ ಶಸ್ತ್ರಗಳು, ಮನುಷ್ಯರನ್ನು ಕೊಲ್ಲುವಂತಹ ಶಸ್ತ್ರಗಳು ಎಂದು ರುದ್ರನನ್ನು ಕುರಿತು ಹೇಳುವುದೇಕೆ? ಇಂತಹ ವಿಶೇಷಣಗಳನ್ನು ಇಂದ್ರನಿಗೆ ಹಚ್ಚಿದುದು ಎಲ್ಲಿಯೂ ದೊರೆಯಲಾರದು.

ಮಾಧ್ವರು ಶೈವರಿಗೆ 'ಅಸುರರು' ಎಂದು ಹೇಳುವ ವಾಡಿಕೆಯಿದೆ. ಪುರಾಣಗಳಲ್ಲಿ ಶಿವನು ಅಸುರರ ದೇವರೆಂಬ ಹಾಗೆ ವರ್ಣನೆಗಳಿದ್ದುದೇ ಇದಕ್ಕೆ ಕಾರಣವಿರಬಹುದೇನೋ ತಿಳಿಯದು. ವೇದಗಳಲ್ಲಿ ರುದ್ರನು ದಸ್ಯುಗಳ, ರಕ್ಕಸರ ಪಕ್ಷಪಾತಿಯೆಂದು ಸ್ಪಷ್ಟವಾಗಿ ಎಲ್ಲಿಯೂ ಹೇಳಿಲ್ಲವಾದರೂ ಇಂದ್ರನೆ ಮೊದಲಾದವರ ಹಾಗೆ ಇವನು ದಸ್ಯುಸಂಹಾರಕನೆಂದು ಮುಂತಾಗಿ ಮಾಡಿದ ವರ್ಣನೆಗಳು ಸಹ ಎಲ್ಲಿಯೂ ಕಾಣಲು ದೊರೆಯುವುದಿಲ್ಲ! ಆದರು, ಸೋಜಿಗದ ಸಂಗತಿಯೊಂದುಂಟು: ಋಗ್ವೇದದಲ್ಲಿ ಎರಡು ಕಡೆಗಳಲ್ಲಿ (ಅಲ್ಲಿ ಆ ಶಬ್ದಕ್ಕೆ ಬೇರೆ ಅರ್ಥವಿದ್ದರೂ) ರುದ್ರನಿಗೆ 'ಅಸುರ'ನೆಂಬ ವಿಶೇಷಣವು ಕೊಡಲ್ಪಟ್ಟಿದೆ!

ತ್ವಂ ಅಗ್ನೆ ರುದ್ರೋಃ ಅಸುರೋಃ ಮಹೋದಿವಃ
ತ್ವಂ ಶರ್ಧೋಃ ಮಾರುತಂ ಪೃಕ್ಷ ಈಶಿಷೇ।
ತ್ವಂ ವಾತೈಃ ಅರುಣೈಃ ಯಾಸಿ ಶಂಗಯಃ ತ್ವಂ ಪೂಷಾ ವಿಧತಃ ಪಾಸಿ ನು ತ್ಮನಾ॥[೧೦]

ಇದರಂತೆ ಇನ್ನೊಂದೆಡೆಗೆ

ಸೌಮನಸಾಯ ರುದ್ರಂ ನಮೋಭಿಃ ದೇವಂ ಅಸುರಂ ದುವಸ್ಯ।[೧೧]

ಇವೆರಡೂ ಕಡೆಗಳಲ್ಲಿ ಅಸುರ ಶಬ್ದಕ್ಕೆ ಬಲಶಾಲಿಯೆಂಬ ಅರ್ಥವುಂಟೆಂದು ಭಾಷ್ಯಕಾರರ ಅಭಿಪ್ರಾಯವಿದೆ. ಮ್ಯಾಕಡೊನೆಲ್ ಮೊದಲಾದವರಿಗೆ ಈ ಅರ್ಥವು ಸಮ್ಮತವಿದೆ. ಫಾರ್ಸಿಗಳ 'ಅವೆಸ್ತಾ' ಎಂಬ ಧರ್ಮಗ್ರಂಥವು ಸುಮಾರು ಋಗ್ವೇದದಷ್ಟು ಪ್ರಾಚೀನವಿದ್ದು ಅದರಲ್ಲಿ ಅಸುರ ಶಬ್ದವು ಬಲಿಷ್ಠ, ದಿವ್ಯ ಎಂಬರ್ಥದಲ್ಲಿಯೆ ಉಪಯೋಗಿಸಲ್ಪಟ್ಟಿದೆ. ಋಗ್ವೇದದಲ್ಲಿಯೆ, 'ಅಸುರ' ಶಬ್ದವು ಮೇಲು ಮತ್ತು ಕೀಳು ಎಂಬ ಎರಡು ಅರ್ಥಗಳಲ್ಲಿಯೂ ಪ್ರಯೋಗಿಸಿದ್ದುಂಟು. ಅಸುರಹನ್ ಎಂಬ ಶಬ್ದವು ಮೂರುಸಾರೆ ಬಂದಿದ್ದು ಅಲ್ಲಿ ದೈತ್ಯಸಂಹಾರಕ ಎಂಬ ಅರ್ಥವು ನಿಃಸಂದಿಗ್ಧವಾಗಿದೆ. ಅಸುರಘ್ನನೆಂದು ಇಂದ್ರನನ್ನು[೧೨], ಅಗ್ನಿಯನ್ನು[೧೩] ಮತ್ತು ಸೂರ್ಯನನ್ನು[೧೪] ವರ್ಣಿಸಿದ್ದಾಗಿದೆ.

ಆದುದರಿಂದ, ರುದ್ರನಿಗೆ ಅಸುರನೆಂದು ಬೇಕಾದರೆ ಸ್ತುತಿ, ಬೇಕಾದರೆ ಅಸ್ಪಷ್ಟವಾಗಿ ನಿಂದಾವ್ಯಂಜಕವಾಗುವಂತೆ ('ಪಂಡಿತರು ತಾವು' ಎಂಬ ಹಾಗೆ) ಸೂಕ್ಷ್ಮವಾಗಿ ಸೂಚಿಸಿರಲಿಕ್ಕಿಲ್ಲವಷ್ಟೆ? ಪುರಾಣಾದಿಗಳಲ್ಲಿ ವರ್ಣಿತನಾದ ರುದ್ರ-ಶಿವನು ಅಸುರರ ಆರಾಧ್ಯದೇವತೆಯಾಗಿದ್ದಾನೆ. ಈ ಪರಂಪರೆಯೆ, ಋಗ್ವೇದದೊಳಗಿನ ರುದ್ರನ ವರ್ಣನೆಯಲ್ಲಿ ಉಪಯೋಗಿಸಿದ 'ಅಸುರ' ಶಬ್ದದಲ್ಲಿಯೂ ಅಂಕುರ ರೂಪದಿಂದ ಮೂಡಿರಲಿಕ್ಕಿಲ್ಲವಷ್ಟೆ? ಋಗ್ವೇದಲ್ಲಿ ಈ ದೇವತೆಗೆ ಶಿವನೆನ್ನದೆ 'ರುದ್ರ'ನೆಂದು ಸಂಬೋಧಿಸಿದುದರಲ್ಲಿಯೆ ಇವನು ಆಗಿನ ಆರ್ಯರ ಅಷ್ಟು ಮೆಚ್ಚಿಕೆಯ ದೇವತೆಯಲ್ಲವೆಂಬುದು ವ್ಯಕ್ತವಾಗುತ್ತಲಿದೆ. ಈ ಉಗ್ರದೇವನು ತಮ್ಮನ್ನು ಪೀಡಿಸದೆ ಇರಲಿ

ಎಂದು, ಆತನಿಗೆ 'ನೀನು ಮಂಗಳಕರನು, ಎಂದರೆ ಶಿವನು' ಎಂದು ಹೇಳಿದ್ದಾರೆ ಅಷ್ಟೆ. ಮ್ಯಾಕಡೊನೆಲ್ಲರು ಇದನ್ನು ಕುರಿತು ಹೀಗೆ ಬರೆಯುತ್ತಾರೆ:

> The god Rudra occupies a curiously parallel position to Vishnu in the history of Indian religion. For while he is invoked as seldom as Vishnu in Rigveda, he later become the other chief god in Hinduism. But while the good will of Vishnu is conspicuous, Rudra is the only god whose melevolence is already characteristic, and later becomes even more prominent. The hymns addressed to him mainly express fear for his terrible shafts and deprecation of his anger. In the post-Vedic period he appears under the regular name of Shiva, a euphemistic epithet meaning 'auspicious;' and already applied to him in the Rigved. Rudra is, of course, not purely malevolent like a demon, For he is besought not only to preserve from calamity, but to bestow welfare and healing on man and beast. This is, no doubt, only a euphemistic way of alluding to the injurious side of his activities.[೧೫]

ಅ-ಮಂಗಳ ಎನ್ನಬಾರದು. ಆದುದರಿಂದ, ಮಂಗಳ ಎಂದು ಕರೆಯುವುದು! ಇದುವೆ ಶಿವಸ್ತುತಿ! ಆದಕಾರಣ, ವೈದಿಕಋಷಿಗಳು ಹೇಳಿದ ಶಿವನ-ಅಲ್ಲ, ರುದ್ರನ ಮಂತ್ರಗಳಲ್ಲಿರುವುದು ಇದೇನು ಹೊಗಳಿಕೆಯೊ ಅಥವಾ ತೆಗಳಿಕೆಯೊ, ಇದೆ ತಿಳಿಯದಾಗುತ್ತದೆ! ಇಕೊ, ನೋಡಿ! ರುದ್ರಾಧ್ಯಾಯದೊಳಗಿನ ಕೆಲಮಂತ್ರಗಳನ್ನು!

> ಸ್ತೇನಾನಾಂ ಪತಯೇನಮಃ; ವಂಚತೇ ಪರಿವಂಚತೇ ಸ್ತಾಯೂನಾಂ
> ಪತಯೇ ನಮಃ; ನಮೋ ನಿಚೇರವೇ ಪರಿಚರಯಾರಾಣ್ಯಾನಾಂ ಪತಯೇ ನಮಃ
> ತಸ್ಕರಾಣಾಂ ಪತಯೇ ನಮಃ; ಪುಷ್ಪಾನಾಂ ಪತಯೇ ನಮಃ;
> ಉಚ್ಚೈರ್ಘೋಷಾಯಾಕ್ರಂದಯತೇ ಪತ್ತೀನಾಂ ಪತಯೇ ನಮಃ
> ನಮಃ ಶ್ವಭ್ಯಃ ಶ್ವಪತಿಭ್ಯಃ......... [೧೬]

ದೇವರಿಗೆ ಮಂತ್ರ, ಸ್ತೋತ್ರಗಳನ್ನು ಹೇಳುವುದು ಏತಕ್ಕೆ? ಆ ದೇವನು ಒಲಿದು ಮೆಚ್ಚಬೇಕೆಂದೇ ಅಲ್ಲವೆ? 'ದೇವಾ, ನೀನು ಕಳ್ಳರೊಡೆಯನು'; 'ಸುಳ್ಳರಲಿ ಹಿರಿಯನು'; 'ತುಂಟರ ಅರಸನು' ಎಂದು ಮುಂತಾಗಿ ಅವನನ್ನು ಸಂಬೋಧಿಸಿದರೆ, ಇದು ಆದೇವನ ಹೊಗಳಿಕೆಯೆನಿಸಬಹುದೆ?ಈ ಬಗೆಯಾಗಿ ವರ್ಣಿಸಿದ್ದುದು ಆ ದೇವನ ಸರ್ವಾಂತರ್ಯಾಮಿತ್ವವನ್ನು ಸಿದ್ಧಪಡಿಸುವುದಕ್ಕಾಗಿ, ಎಂದು ಭಾಷ್ಯಕಾರರು ಸಮಾಧಾನವನ್ನು ಹೇಳುತ್ತಾರೆ!

> 'ರುದ್ರೋ ಹಿ ಲೀಲಯಾ ನಟ ಇವ ತತ್ ತತ್ ವೇಷಂ ಧತ್ತೇ;
> ಯದ್ವಾ..ರುದ್ರಸ್ಯ ಸರ್ವಾತ್ಮ್ಯಂ ಅನುಸಂಧಾತುಂ ಮಂತ್ರೈಃ ಏವಂ ಉಚ್ಯತೇ'.

ಆದರೆ, ಈ ಬಗೆಯ ಕೋಟಿಕ್ರಮದಿಂದ ಓದುಗರ ಮನಸಿಗೆ ಸಮಾಧಾನವಾಗದೆ, ಪ್ರತ್ಯಕ್ಷ ಭಾಷ್ಯಕಾರರಾದ ಸಾಯಣಾಚಾರ್ಯರಿಗೂ ಎಷ್ಟೊಂದು ತೊಡಕುಬಿದ್ದಿದೆಯೆಂಬುದು ಚೆನ್ನಾಗಿ ಬಯಲಿಗೆ ಬರುತ್ತಲಿದೆ. ಮ್ಯಾಕಡೊನೆಲ್ ಪ್ರಭೃತಿ ಆಧುನಿಕ ವೇದಾಭ್ಯಾಸಿಗಳಿಗೂ ಇದೊಂದು ದೊಡ್ಡ ಸಮಸ್ಯೆಯೇ ಆಗಿದೆ. ರುದ್ರನು

ಸರ್ವವ್ಯಾಪಿಯೆಂಬುದನ್ನು ತೋರಿಸಲು ಈ ಬಗೆಯ ವರ್ಣನೆಯನ್ನು ಮಾಡಿದ್ದುಂಟು, ಎಂದು ನಂಬುವುದಾದರೆ ಇಂದ್ರ, ವಿಷ್ಣು ಮೊದಲಾದ ಇನ್ನುಳಿದ ದೇವತೆಗಳ ವಿಶ್ವವ್ಯಾಪಕತೆಯನ್ನು ವರ್ಣಿಸುವುದಕ್ಕೂ ಇದೇ ತೆರನಾದ ಮಂತ್ರಗಳನ್ನು ಏಕೆ ಹೇಳಲಿಲ್ಲ? ಎಂದು ಒಂದು ಶಂಕೆಯು ಮುಂದೆ ನಿಲ್ಲುವುದು!

'ರುದ್ರನು ಸಂಹಾರಕಾರಿ, ಪ್ರಳಯದ ದೇವತೆ. ಆತನ ಸ್ವರೂಪವೆ ಹಾಗಿರುವುದರಿಂದ ಋಷಿಗಳ ವರ್ಣನೆಯು ಅದಕ್ಕೆ ತಕ್ಕಂತೆಯೆ ಇದೆ', ಎಂದು ಕೆಲವರು ಹೇಳಬಹುದು. ಈ ಉತ್ತರವು ಮೇಲುತೋರಿಕೆಯಲ್ಲಿ ಸರಿಯೆನಿಸಿದರೂ ಒಳಗೆ ಹುರುಳಿಲ್ಲ. ಸಂಹಾರಕರ್ತನು ರುದ್ರನು, ಎಂದು ಹೇಳಿದುದೇ ಮೊದಲು ಸಂಪೂರ್ಣ ಸತ್ಯವಲ್ಲ. ರುದ್ರನು ಉಗ್ರನೆಂದು ಋಗ್ವೇದವು ಹೇಳುತ್ತದೆ. ಆದರೆ ಪ್ರಳಯ, ಸಂಹಾರದ ದೇವರು, ಯಮನ ಅಪರಾವತಾರವೆಂಬ ಕಲ್ಪನೆಯು ವೇದದಲ್ಲಿಲ್ಲ. ಯಮನಿಗೂ ರುದ್ರನಿಗೂ ಸಂಬಂಧವನ್ನು ಜೋಡಿಸುತ್ತಿರುವುದಕ್ಕೆ ಸಾಕಷ್ಟು ಬಲವಾದ ಆಧಾರಗಳಿಲ್ಲ. ಎ. ಬಿ. ಕೀಥರು, ಈ ಕಲ್ಪನೆಯು ಮೂಲರುದ್ರನ ವೈದಿಕಕಲ್ಪನೆಗೆ ಅಸಂಬದ್ಧವಾಗಿದೆಯೆಂದು ತೋರಿಸಿದ್ದಾರೆ.

> Further, it is difficult not recognize the strong difference between Yama, a real death god,and Rudra, which indicate an original difference of origin; they belong to different regions, Yama to the south: Rudra to the north. Everything in the ritual goes to support the view of Rudra as a complex figure at the time when it was recorded, combines clear traits of divine and chthonic character, as is natural in a god formed by the syncretism of different beliefs. ೧೭

ಮೃತ್ಯುದೇವತೆ (ಯಮ) ಮತ್ತು ರುದ್ರನು ಒಂದು ಎಂದು ಹೇಳುವುದೂ ದಕ್ಷಿಣವೆಂದರೇ ಉತ್ತರವೆನ್ನುವುದೂ ಒಂದೇ! ಎ. ಬಿ. ಕೀಥರ ಮಾತಿನಲ್ಲಿಯೆ ಹೇಳಬೇಕಾದರೆ, ರುದ್ರ-ಶಿವನು ಹೀಗೆ ಬಗೆಬಗೆಯಾಗಿ ಕಲ್ಪಿಸಲ್ಪಟ್ಟಿರುವುದಕ್ಕೆ ಮುಖ್ಯ ಕಾರಣವೆಂದರೆ "syncretism of different beliefs" ಆದುದರಿಂದಲೆ ರುದ್ರ-ಶಿವನು ಮೂಲದಲ್ಲಿ ದ್ರಾವಿಡರ ದೇವತೆಯಾಗಿರಬೇಕೆಂದು ಹೇಳಬಹುದಾಗಿದೆ.

"ಯಾವ ಜನಾಂಗದ ದೇವರಾದರೇನು? ಎಲ್ಲ ದೇವರುಗಳೂ ಒಂದು;
ಶಿವನೆಂದು ಕೆಲರು ಹೇಳುವ ದೇವತೆಯೆ ಇನ್ನು ಕೆಲರಿಗೆ ವಿಷ್ಣುವಾಗಿದ್ದಾನೆ....."

ಎಂದು ಮುಂತಾಗಿ ಹೇಳುವ ತತ್ವಜ್ಞಾನವು ಉಪನಿಷತ್ಕಾಲದಲ್ಲಿ ಸ್ಪಷ್ಟವಾಗಿ ಬೆಳಗಲಾರಂಭಿಸಿದರೂ ಅದು ಇಂದಿಗೂ ಚೆನ್ನಾಗಿ ಮೈಗೂಡಿಲ್ಲ. ಈ ತತ್ವಜ್ಞಾನವನ್ನು ಹೇಳುವ ಹಿಂದೂಜನರಲ್ಲಿಯೆ ಹಲವರಿಗೆ 'ಅಲ್ಲಾ' ಅಥವಾ 'ಏಸು'ವಿಗೆ ಸಮಾನಸ್ಥಾನ ಕೊಡಲು ಮನಸ್ಸಿಲ್ಲ! ಎಂದ ಬಳಿಕ ಹಿಂದಿನ ಕಾಲದ ಮಾತೇಕೆ? ಹಿಂದಕ್ಕೆ (ಈಗ ಸಹ ಧರ್ಮದ ವಿಪರೀತ ಅಭಿಮಾನಿಗಳಿಗೆ) ದೇವರು ಎಂಬುವನು ಕೇವಲ ತಮ್ಮ ಜಾತಿಯವನೇ, ಎಂದು ದೃಢಶ್ರದ್ಧೆ! ಈ ಮನೋಭಾವನೆಯನ್ನು ಶ್ರೀಮಾನ್ ಮಾಸ್ತಿಯವರು 'ಇಲ್ಲಿಯ ತೀರ್ಪು' ಎಂಬ ಕತೆಯಲ್ಲಿ ತಮ್ಮ ಮನೋಹರವಾದ ಮುಗುಳುನಗೆ ಮಾತಿನಿಂದ ಬಹಳ ಚೆನ್ನಾಗಿ ತೋರಿಸಿದ್ದಾರೆ. ಆರ್ಯರ ಇಂದ್ರನಿಗೆ ಪಾರ್ಸಿಗಳ ಧರ್ಮದಲ್ಲಿ ದೇವಪದವಿ ಇಲ್ಲ! ಇಷ್ಟೇ ಏಕೆ, ಸಂಸ್ಕೃತ 'ದೇವ'ನು ಕನ್ನಡದಲ್ಲಿ ಬಂದರೆ 'ದೆವ್ವ' ಆಗುವುದು! ಇದೇ ಮನೋಭಾವನೆಯ ರುದ್ರ-ಶಿವನ ಆರ್ಯ ಮತ್ತು ದ್ರಾವಿಡ ಪರಂಪರೆಗಳಲ್ಲಿಯೂ ಅಡಿಗಡಿಗೆ ಅನುಭವಕ್ಕೆ ಬರುತ್ತಲಿದೆ. ಆರ್ಯರ ಮಂತ್ರಗಳಲ್ಲಿ ಶಿವನು ಉಗ್ರನಾಗುವುದಕ್ಕೆ, ದೇವಾಂಶವು (ಸಾತ್ವಿಕ ಭಾವವು) ಕಡಿಮೆ ಇರುವುದಕ್ಕೆ ಈ ದೇವತೆಯನ್ನು ಆರ್ಯರು ಭಿನ್ನಮತದವರಿಂದ ಎತ್ತಿಕೊಂಡುದೇ ಕಾರಣವಾಗಿರಬಹುದೆ?

ಋಗ್ವೇದದಲ್ಲಿ ಯಮ ಎಂಬ ಸ್ವತಂತ್ರ ದೇವತೆಯಿದೆ. ಮೃತಾತ್ಮಗಳ ಒಡೆಯ ಯಮ. ಯಮನು ಘೋರರೂಪಿಯಾಗಿರಬೇಕು. ಆದರೆ, ಈತನಿಗೆ ಉಗ್ರನೆಂಬ ವಿಶೇಷಣವಿಲ್ಲ! 'ಯಮ-ಧರ್ಮರಾಜಃ' ಎಂದು ಈತನನ್ನು ಮುಂದಿನವರು ಸಂಬೋಧಿಸಿದ್ದಾರೆ! ಆದರೆ, ರುದ್ರನ ರೂಪವು ಮಾತ್ರ ಮುಂದಿನ ಕಾಲದ ಬ್ರಾಹ್ಮಣಗ್ರಂಥಗಳಲ್ಲಿ ಋಗ್ವೇದಕ್ಕಿಂತಲೂ ಇನ್ನೂ ಹೆಚ್ಚು ಹೆಚ್ಚು ವಿಕೃತವಾಗುತ್ತ ನಡೆದುದೇ ಕಣ್ಣಿಗೆ ಬೀಳುತ್ತಿದೆ. 'ರುದ್ರ-ಶಿವನಿಗೆ ಶರ್ವ ಮತ್ತು ಭವ ಎಂಬ ಎರಡು ಹೆಸರುಗಳಿರುವವೆಂದು ವಾಜಸನೀಯ ಸಂಹಿತೆಯು ಹೇಳುತ್ತದೆ. ಆದರೆ, ಶರ್ವ ಹಾಗು ಭವ ಎಂಬಿವು ಪರಸ್ಪರ ಸಂಬಂಧವಿಲ್ಲದ ಎರಡು ಭಿನ್ನದೇವತೆಗಳು. ಈ ಎರಡೂ ದೇವತೆಗಳನ್ನು ಮುಂದೆ ರುದ್ರನಲ್ಲಿಯೇ ಆರೋಪಿಸಿ, ರುದ್ರನೆಂದರೆ ಶರ್ವ, ರುದ್ರನೆಂದರೆ ಭವ ಎಂದು ವರ್ಣಿಸಲ್ಪಟ್ಟಿದೆ. ಆದರೆ, ಶಾಂಖಾಯನ ಶ್ರೌತಸೂತ್ರದಲ್ಲಿರುವುದೇ ಬೇರೆ! ಶರ್ವ ಮತ್ತು ಭವ ಎಂಬುವರು ರುದ್ರನ ಮಕ್ಕಳೆಂದು ಹೇಳಿ, ಈ ಇಬ್ಬರು ಮಕ್ಕಳನ್ನೂ ಬೇಟೆಯನ್ನು ತಿನ್ನಲು, ಹಸಿದು ಹಾತೊರೆಯುತ್ತಿರುವ ಎರಡು ತೋಳಗಳಿಗೆ ಹೋಲಿಸಿದ್ದಾಗಿದೆ![೧೮] 'ಶತಪಥ ಬ್ರಾಹ್ಮಣ'ದಲ್ಲಿ ಹೀಗೆ ಹೇಳಿದೆ: 'ಶರ್ವ' ಎಂಬುದು ಪೂರ್ವದಿಕ್ಕಿನವರು ಕೊಟ್ಟ ಅಗ್ನಿಯ ಹೆಸರು; ಭವ ಎಂಬುದು ಬಾಹಿಕರ ಅಗ್ನಿಯ ಹೆಸರು. ಇವೆರಡೂ ರುದ್ರನಲ್ಲಿ ಒಳಗೊಂಡಿವೆ.[೧೯] ಮಹಾದೇವ ಎಂಬ ಹೆಸರಿನ ಈ ದೇವರು ಪ್ರಾಮುಖ್ಯವಾಗಿ ದನಗಾಹಿ (ಪಶುಪತಿ)ಅಲ್ಲ; ದನಗಡಕನಾಗಿದ್ದಾನೆ. ಇಷ್ಟೇ ಅಲ್ಲ, ಜನಗಡಕನಾಗಲೂಬಹುದೆಂದು ಆಶ್ವಲಾಯನಗೃಹ್ಯಸೂತ್ರವು ಹೇಳುತ್ತದೆ.'[೨೦] ಈ ರೂಪವಿಕೃತಿಯನ್ನು ಇನ್ನೂ ಹೆಚ್ಚು ಹೆಚ್ಚು ನೋಡುತ್ತ ಹೋಗುವುದು ಅನಾವಶ್ಯಕ. ಯಜ್ಞವು ಆರ್ಯರ ಆರ್ಯತ್ವದ ಹಿರಿಗುರುತು. ಯಜ್ಞಮಂಟಪದ ಪ್ರಧಾನ ದೇವತೆಗಳಲ್ಲಿ ರುದ್ರ-ಶಿವನಿಗೆ ಸ್ಥಾನವಿಲ್ಲ. ಇಲ್ಲಿ ರುದ್ರನಿಗೆ ಇರುವ ಮರ್ಯಾದೆಯನ್ನು ನೋಡಿದರೆ ಈ ದೇವತೆ ಆರ್ಯರದು ಅಲ್ಲವೇ ಅಲ್ಲವೆಂಬ ಭಾವನೆಯು ಬಲಗೊಳ್ಳುತ್ತದೆ. ಯಜ್ಞದಲ್ಲಿ ರುದ್ರನಿಗೆ ಮೊದಲು ಬರಗೊಡುತ್ತಿದ್ದಿಲ್ಲವಂತೆ. ಆದರೆ, ರುದ್ರನು ಪೀಡಿಸಿದ ಬಳಿಕ ಕೊನೆಗೊಂದು ಸ್ವಲ್ಪ ಎಡೆ ದೊರೆತಿತು. ಯಜ್ಞಕ್ಕಾಗಿ ಬರಮಾಡಿಕೊಳ್ಳುವ ಇಂದ್ರಾದಿ ಮುಖ್ಯದೇವತೆಗಳೊಡನೆ ರುದ್ರನಿಗೆ ಹವಿಸ್ಸು ದೊರೆಯುವುದಿಲ್ಲ. ಯಜ್ಞದ ಕೊನೆಗೆ ಅಲ್ಲಿ ಹರವಿದ ಸಮಿತ್ತು ದರ್ಭೆಗಳನ್ನೇ ಆಹುತಿಹಾಕಿ 'ರುದ್ರಾಯ ಪಶುಪತಯೇ ಸ್ವಾಹಾ' ಎಂದು ಕೈ ತೊಳೆದುಕೊಳ್ಳುವರು.

ಆದುದರಿಂದ, ರುದ್ರಾಧ್ಯಾಯದಲ್ಲಿ ಹೇಳಿದುದೇ ನಿಜ.: ಇವನು 'ಸ್ತೇನಾನಾಂ ಪತಿ': ಕಳ್ಳರ ದೇವರು. 'ಪತ್ತೀನಾಂ ಪತಿ'; ಹಟ್ಟಿಕಾರರ ದೇವರು. 'ಪುಷ್ಟಾನಾಂ ಪತಿ'; ವೀರರ ದೇವರು. ಇವನು ಆರ್ಯರ ದೇವರಲ್ಲ; ಆರ್ಯರು ಕಳ್ಳರಿಂದ-ಹಟ್ಟಿಕಾರರಿಂದ ಸ್ವೀಕರಿಸಿದ ದೇವರು.*

ವೈದಿಕ ಪಂಥಗಳಲ್ಲಿ ಕೆಲರು ರುದ್ರ-ಶಿವನಿಗೆ ಕೆಲವೊಂದು ವಿಚಿತ್ರ ರೂಪಗಳನ್ನು ಕೊಡುತ್ತ ನಡೆದರೂ ಅವರಲ್ಲಿ ಈ ದೇವತೆಯ ಆರಾಧಕರ ಸಂಖ್ಯೆಯು ಹೆಚ್ಚುತ್ತಲೆ ಹೋಯಿತು. ಶೈವಮಾರ್ಗದ ತತ್ತ್ವಜ್ಞಾನವು ವಿಶೇಷ ಪ್ರಚಾರದಲ್ಲಿ ಬಂದಿತು. ರುದ್ರ-ಶಿವನಿಗೆ ಉಪನಿಷತ್ತುಗಳಲ್ಲಿ ಪರಬ್ರಹ್ಮನ ಅತ್ಯುನ್ನತ ಸ್ಥಾನ ಕೊಡಲ್ಪಟ್ಟಿತು.

ಏಕೋ ಹಿ ರುದ್ರೋ ನ ದ್ವಿತೀಯಾಯ ತಸ್ಥುಃ
ಯ ಇಮಾನ್ ಲೋಕಾನ್ ಈಶತ ಈಶನೀಭಿಃ

ಎಂದು ಅಭಿಮಾನದಿಂದ ಹೇಳುವ ಆರ್ಯರ ಪಂಗಡವು ಮುಂದೆ ಬಂದಿತು. ಶ್ವೇತಾಶ್ವತರ ಎಂಬ ಉಪನಿಷತ್ತು ರಚಿಸಲ್ಪಟ್ಟಿತು. ಈಗ ರುದ್ರ-ಶಿವನು ಆರ್ಯರ ದೈವತವಲ್ಲ, ಎಂದು ಹೇಳಿದರೆ ಯಾರಿಗೂ

---

* 'ಹಟ್ಟಿಕಾರರ ದೇವರು' ಎಂಬ ಬಗ್ಗೆ 'ಕರ್ನಾಟಕದ ವೀರಕ್ಷತ್ರಿಯರು' ಮತ್ತು 'ಕಳ್ಳರ ದೇವರು' ಎಂಬುದರ ಬಗೆಗೆ ಕನ್ನಡದ ನೆಲೆಯ ಆರನೆಯ ಅಧ್ಯಾಯಗಳಲ್ಲಿ ವಿವರಪೂರ್ಣವಾದ ಚರ್ಚೆಗಳಿವೆ (ಸಂ)

ನಂಬುಗೆಯುಂಟಾಗದಷ್ಟು ಆರ್ಯರು ಇವನನ್ನು ತಮ್ಮವನನ್ನು ಮಾಡಿಕೊಂಡಿದ್ದಾರೆ! ವೇದಾಭಿಮಾನಿಗಳಲ್ಲಿ ಶಿವ-ರುದ್ರನು ತಮ್ಮವನೆಂದು ಹೇಳುವವರು ಯಾರು? ಅ-ದ್ವೈತ ತತ್ವಜ್ಞಾನವನ್ನು ಅನುಸರಿಸುವವರು.

'ಈಶಾವಾಸ್ಯಂ ಇದಂ ಸರ್ವಂ
ಯತ್ ಕಿಂಚ ಜಗತ್ಯಾಂ ಜಗತ್'

ಎಂಬ ಶ್ರದ್ಧೆಯವರು ಇವರಿಗೆ ತಾತ್ವಿಕ ದೃಷ್ಟಿಯಿಂದ ಶಿವನೇನು? ಅಲ್ಲಾ ಏನು? ಎಲ್ಲವೂ ಒಂದೇ. ಇವರಲ್ಲಿ ತಾರತಮ್ಯವಿಲ್ಲ. ಆದುದರಿಂದ, ಈ ವರ್ಗದವರು ಶಿವ-ರುದ್ರನಿಗೆ ಮನ್ನಣೆ ಕೊಟ್ಟು ತಮ್ಮವನೆಂದು ಹೇಳುತ್ತಾರೆಂದು ಇದು ಆರ್ಯರ ದೇವತೆಯೆ ಇರಬೇಕೆಂದು ಸಿದ್ಧಾಂತಮಾಡಲಿಕ್ಕೆ ಆಗುವುದಿಲ್ಲ.

ಆರ್ಯರು ಮೊದಲು ಈ ದೇವತೆಗೆ 'ರುದ್ರ' ಎಂಬ ಹೆಸರಿಟ್ಟುದು ಈಗ ಮರೆತುಹೋದಂತಾಗಿದೆ. 'ಶಿವ' ಎಂಬುದೇ ಈಗ ಎಲ್ಲರ ತುದಿನಾಲಗೆಯ ಮೇಲಿರುವ ಹೆಸರು! ನಡುವೆ ಬಂದುದು ನಡುವೇ ಹೋಗುವುದು, ಎಂಬ ತತ್ತ್ವವೇ, ರುದ್ರವು ಹಿಂದೆ ಬಿದ್ದು ಶಿವ ಶಬ್ದವೇ ಉಳಿಯುವುದಕ್ಕೂ ಕಾರಣವಿರಬಹುದೆ? ಮೂಲ 'ಶಿವ' ಶಬ್ದದ ಸೊಗಸು ಸಂಸ್ಕೃತ 'ರುದ್ರ' ಶಬ್ದದಲ್ಲಿ ಇಲ್ಲ. ಕನ್ನಡದ ಜನಸಾಮಾನ್ಯರಲ್ಲಿ 'ಶಿವ' ಶಬ್ದದ ಸೊಗಸು ಸಂಸ್ಕೃತ 'ರುದ್ರ' ಶಬ್ದದಲ್ಲಿ ಇಲ್ಲ. ಕನ್ನಡದ ಜನಸಾಮಾನ್ಯರಲ್ಲಿ 'ಶಿವ'ನ ವಿಷಯದಲ್ಲಿರುವ ಆತ್ಮೀಯ ಭಾವವನ್ನು ನೋಡಿದರೆ ವೈದಿಕ ಋಷಿಗಳಿಗೆ ಇಂದ್ರನ ವಿಷಯಕ್ಕಿರುವ ಆತ್ಮೀಯತೆ, ಪ್ರೇಮಾದರಗಳ ನೆನಪು ಆಗುತ್ತದೆ. ಈ ಜನಗಳಿಗೆ ಬಗೆಬಗೆಗಳಿಂದ ಶಿವನ ಹೆಸರುಗಳನ್ನು ಇಡುವುದರಲ್ಲಿ ಇಟ್ಟುಕೊಳ್ಳುವುದರಲ್ಲಿ ಅದೆಷ್ಟು ಹಿಗ್ಗು! ಭಕ್ತರು ತಮ್ಮ ಹೃದಯಾಂತರಾಳದಲ್ಲಿ ತಮಗೆ ಅತ್ಯಂತ ಪ್ರಿಯಕರವೆನಿಸುವುದನ್ನು ತಮ್ಮ ನೆಚ್ಚಿನ ದೇವರ ಮೇಲೆ ಆರೋಪಿಸುವುದುಂಟು. ಆ ಹುಡುಗೆ ಚೆಲುವೆಯಾಗಿದ್ದಾಳೆಂದು ಹೇಳಬೇಕಾಗಿದ್ದರೆ 'ಕೆಂಪು' ಇದ್ದಾಳೆ ಎನ್ನುವುದು ವಾಡಿಕೆ, ನಮ್ಮ ಜನಗಳಲ್ಲಿ. ಹೀಗೆ, ನಮ್ಮ ನಾಡಿನ ಜನಗಳ ಸೌಂದರ್ಯದ ಕಲ್ಪನೆಯು ಕೆಂಪಿನಲ್ಲಿ ಅಡಕವಾಗಿದೆ. ಸೌಂದರ್ಯವಷ್ಟೆ ಅಲ್ಲ; ಮಾಂಗಲ್ಯದ ಪ್ರತೀಕವೂ ಕೆಂಪೇ. ಆವುದೆ ಮಂಗಲಕರ ಪ್ರಸಂಗವಿರಲಿ, ಕೊನೆಗೆ ಕೆಂಪು ಓಕುಳಿಯ ಚೆಲ್ಲಾಟ-ಚಿಣ್ಣಾಟವಾಗದೆ ಅದರ ಮುಕ್ತಾಯವಾಗುವಂತಿಲ್ಲ. ಹೆಂಗುಸರಿಗೆ ಶಿನ್‌ಧೂರ (ಕುಂಕುಮ)ವು ಸೌಭಾಗ್ಯದ ಹೆಗ್ಗುರುತು! (ಹೆಣ್ಣು ಮಕ್ಕಳು ಕುಂಕುಮವನ್ನು ಹಚ್ಚುವ ಪದ್ಧತಿಯು ಹಿಂದುಸ್ತಾನದ ಹೊರಗಿನ ಆರ್ಯಜನಾಂಗದ ಬೇರೆ ಶಾಖೆಗಳಲ್ಲಿ ಎಲ್ಲಿಯೂ ಕಾಣಬರುವುದಿಲ್ಲ.)

ನಮ್ಮ ನಾಡಿಗರು ತಮ್ಮ ದೇವತೆಗೆ ಶಿ(ಂ)ವ ಎಂಬ ಹೆಸರನ್ನು ಇಟ್ಟುದರ ರಹಸ್ಯವು ಈಗ ಚೆನ್ನಾಗಿ ಗೊತ್ತಾಗುತ್ತದೆ. 'ಶಿವ' ಶಬ್ದಕ್ಕೆ ಮಂಗಲ, ಕಲ್ಯಾಣ ಎಂಬ ಅರ್ಥವನ್ನು ಸಂಸ್ಕೃತದವರು ಸುಮ್ಮನೆ ಹೇಳುವರು ಮಾತ್ರ. ಆದರೆ, ಆ ಅರ್ಥಶಕ್ತಿಯು ಸಂಸ್ಕೃತದಿಂದ ವ್ಯಕ್ತವಾಗುವುದಿಲ್ಲ. ಮೇಲ್ಕಾಣಿಸಿದ ಕನ್ನಡ ಪರಂಪರೆಯನ್ನು ನೋಡಿದರೆ ಶಿವ(ರುದ್ರ) ದೇವತೆಯು ಕೆಂಪು ಎಂದು ವೇದಗಳು ವರ್ಣಿಸಿದುದು ಸತ್ಯವೆಂಬ ಮನವರಿಕೆಯಾಗದೆ ಇರದು; ಶಿವನು (ಕೆಂಪು) ನಿಜವಾಗಿ ಮಂಗಲಕರನು ಅಹುದು. ಶಿನ್‌ದಿಂದ ಶಿ(ಂ)ವ ಎಂಬ ರೂಪವು ಸಿದ್ಧವಾದಂತೆ ಚಿನ್, ಚೆನ್, ಕೆನ್ ಎಂಬ ನುಡಿಗಳ ಬಳಗವೂ ಉಂಟಾಗಿದೆ. ಋಗ್ವೇದ ಮತ್ತು ಉಪನಿಷತ್ತುಗಳಲ್ಲಿ ಶಿವನನ್ನು ಚಿನ್ನ (ಬಂಗಾರ) ದಂತಹನೆಂದು ವರ್ಣಿಸಿದ್ದುಂಟು.

'ಹಿರಣ್ಯಮಿವ ರೋಚತೇ', 'ನಮೋ ಹಿರಣ್ಯಬಾಹವೇ
ಹಿರಣ್ಯವರ್ಣಾಯ ಹಿರಣ್ಯರೂಪಾಯ ಹಿರಣ್ಯಪತಯೇ'

ಎಂದು ಮುಂತಾಗಿ ವರ್ಣಿಸಿದುದೆಲ್ಲವೂ ಶಿನ್ (ಚಿನ್-ಚಿನ್ನ) ಶಬ್ದಕ್ಕೆ ಸಂಸ್ಕೃತದಿಂದ ಭಾಷ್ಯಮಾಡಿದಂತೆಯೆ ಸರಿ. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಕನ್ನಡದ ಜನಸಾಮಾನ್ಯರಲ್ಲಿ ಹಲವರ ಹೆಸರುಗಳಲ್ಲಿ 'ಶಿವ' ಪರ ಅರ್ಥವು ಎಷ್ಟು ತುಂಬಿ ತುಂಬಿ ಹೊರಸೂಸುತ್ತಲಿದೆ! ಚಿನ್ನಪ್ಪ, ಚೆನ್ನಪ್ಪ, ಚೆಂಬಣ್ಣ, (ಚೆಂಬುಕೇಶ್ವರ, ಜೆಂಬುಕೇಶ್ವರ)[೨೧] ಕೆಂಚಪ್ಪ, ಕೆಂಪಣ್ಣ, (ಕೆಂಪೇಗೌಡ) ಇವೆಲ್ಲವೂ ಶಿ(ಂ)ವನ ಪರ್ಯಾಯನಾಮಗಳಲ್ಲದೆ ಮತ್ತೇನು?

ಶಿವ (ರುದ್ರ)ನ ವೇದಕಾಲದ ಪರಂಪರೆಯು ವೀರಶೈವರಲ್ಲಿ ಈಗಲೂ ಎಷ್ಟು ದೃಢವಾಗಿ ಉಳಿದಿದೆ ಯೆಂಬುದನ್ನು ನೋಡಿ ಸೋಜಿಗವೆನಿಸುತ್ತಿದೆ! ರುದ್ರಾಧ್ಯಾಯದೊಳಗಿನ 'ಗಿರೀಶ', ಅರಣ್ಯಾನಾಂ ಪತಿ', 'ಸ್ತೇನಾನಾಂ ಪತಿ' ಎಂಬ ಈ ಬಗೆಯ ಹೆಸರುಗಳು, ವೇದಾಭಿಮಾನಿಗಳಾದ ಯಾವ (ಶೈವ) ಬ್ರಾಹ್ಮಣರಲ್ಲಿಯೂ ದೊರೆಯಲಾರವು. ಆದರೆ, ನಮ್ಮ ವೀರಶೈವರಲ್ಲಿ ನೋಡಿ: ಗಿರಿಯಪ್ಪ, ಮಲ್ಲಯ್ಯ (ಮಲೆಯ ಅಯ್ಯ)ಮುರುಗಪ್ಪ, ಗುಡ್ಡಪ್ಪ, ಪರ್ವತಪ್ಪ ಎಂಬಿವುಗಳೆಲ್ಲವೂ ಗಿರೀಶನೆಂಬರ್ಥದ ಹೆಸರುಗಳು; 'ಅಡಿವೆಪ್ಪ', 'ಕಾಡಪ್ಪ' ಎಂದರೆ ಅರಣ್ಯಾನಾಂ ಪತಿ; 'ಸ್ತೇನಾನಾಂ ಪತಿ' ಎಂಬುದಕ್ಕೆ ಯಾರು ಯಾವ ಅಪಾರ್ಥವನ್ನು ಮಾಡುವರೋ ಮಾಡಲಿ[೨೨] ಕಣ್ಣಪ್ಪ, ಕನ್ನಯ್ಯ ಎಂಬ ಈಗಿನ ಹೆಸರುಗಳಲ್ಲಿ 'ಸ್ತೇನಾನಾಂಪತಿ' ಎಂಬುದರ ಪ್ರತಿಬಿಂಬವನ್ನೇ ಕಾಣಬಹುದು. ಕಳ=ಕಣ; ನೊಳ=ನೊಣ; ಕುಳಿ=ಕುಣಿ ಎಂಬಿವೆ ಮೊದಲಾದ ಕಡೆಗಳಲ್ಲಿ ಮೊದಲಿನ 'ಳ' ಕಾರವು 'ಣ'ಕಾರ ವಾದಂತೆ ಕಳ್ಳಪ್ಪನೆಂಬ ಹೆಸರು ಈಗ ಕಣ್ಣಪ್ಪ ಎಂದಾಗಿದೆ. ಆದುದರಿಂದ, ಕಳ್ಳಪ್ಪ (ಕಣ್ಣಪ್ಪ) ನೆಂದರೆ ಸ್ತೇನಾನಾಂ ಪತಿಯಾದ ಶಿವನೆಂಬರ್ಥವು. ಶಿನ್-(ಂ)ವ ಶಬ್ದದಿಂದ ಈ ದೇವನ ಇನ್ನೂ ಒಂದು ಸಾಕ್ಷಾತ್ಕಾರ ವಾಗುತ್ತದೆ. ಶಿವನು 'ಚಂದ್ರಮೌಳಿ' ಎಂದು ವರ್ಣಿಸುವುದುಂಟು. ಚಂದ್ರ ಶಬ್ದವು ಸಂಸ್ಕೃತವಲ್ಲ. ಶಿನ್-ಚಿನ್-ಚೆನ್. ಇದರಿಂದಲೆ ಚೆಂದಿರನೆಂಬ ಶಬ್ದವು ಸಿದ್ಧವಾಗಿರುವುದನ್ನು ಬೇರೊಂದೆಡೆಯಲ್ಲಿ ವಿವರಿಸಿದ್ದಾಗಿದೆ.* ಚೆಂದ್ರ ಶಬ್ದಕ್ಕೆ ಋಗ್ವೇದದಲ್ಲಿ ಬಂಗಾರದ ಬಣ್ಣ, ಕೆಂದು ಬಣ್ಣವೆಂದು ಮಾತ್ರ ಅರ್ಥವುಂಟು; ಈಗಿನ ಚೆಂದ್ರ (moon) ಎಂಬರ್ಥವು ಅಥರ್ವವೇದದಿಂದ ಮುಂದಿನ ಕಾಲದಲ್ಲಿ ಬಂದಿತು. ಮ್ಯಾಕಡೊನೆಲ್ಲರು ಈ ಶಬ್ದದ ಬಗ್ಗೆ ಬರೆದ ಟಿಪ್ಪಣಿಯಲ್ಲಿ ಹೇಳುವುದೇನೆಂದರೆ:

> Chandra appears to denote 'gold' in a certain number of pasages
> from the Rigveda onwards.[೨೩]

ಸೋಮ (ಚಂದ್ರ)ವಾರ-mon (moon) day ಇದು ಶಿವನ ವಾರವೆಂದು ನಮ್ಮ ನಾಡಿಗರ ನಂಬುಗೆ! ಶಿವನನ್ನು ಮನುಷ್ಯಾಕಾರದ ಪ್ರಾಣಿಯನ್ನು ಮಾಡಿದಾಗ ಕೆಂಪು (ಬೆಂಕಿ) ಸಂಬಂಧವು ತೀರ ಅಳಿದುಹೋಗ ಬಾರದೆಂದೋ ಏನೊ, ಹಣೆಗಣ್ಣಿನಲ್ಲಿ 'ಉರಿ'ಯನ್ನು ಇಟ್ಟಂತೆ ತೋರುತ್ತದೆ. ಹೀಗೆ, ಮತ್ತೆ ಶಿವನಿಗೆ ಚಂದ್ರ (ಶಿನ್-ಚೆನ್), ಕೆಂಪು ಶಬ್ದದ ಸಂಬಂಧವು ಬಂದಿತು! ಎಂದರೆ ಕೆಂಪು, ಬಂಗಾರದ ಬಣ್ಣದವನೆಂಬ ಮಾತು ಮತ್ತೆ ಮತ್ತೆ ದೃಢಪಡಿಸುತ್ತಲಿದೆ! ಈ ಶಿವನು ಚೆನ್ನಿಗನು ಚೆನ್ನನು ಚೆನ್ನು! ಎಂಬ ಕನ್ನಡನುಡಿಯಲ್ಲಿ ಹುದುಗಿಕೊಂಡಿರುವ ಅಂದ ಅಂದದ ಅರ್ಥವನ್ನು ಬಿಡಿಸಿ.

> ಅಸೌಯಸ್ತಾಮ್ರೋ ಅರುಣ ಉತ ಬಭ್ರುಃ ಸುಮಂಗಲಃ।

ಎಂಬ ಮಂತ್ರದಲ್ಲಿ ವೈದಿಕಋಷಿಗಳು ವೇದವಚನಗಳಿಂದ ಬಣ್ಣಿಸಿದ್ದಾರೆ. ಆದರು, ಒಂದು ಶಿವ(ಚೆನ್ನು) ಶಬ್ದದಲ್ಲಿ ಸೂಚಿತವಾಗುವ ಸೂಕ್ಷ್ಮಾರ್ಥಗಳನ್ನೆಲ್ಲ ವಿವರಿಸಿ ಹೇಳಬೇಕಾದರೆ ಸಂಸ್ಕೃತದಲ್ಲಿ ಮೂರು ನಾಲ್ಕು ಪದಗಳನ್ನು ಉಪಯೋಗಿಸಬೇಕಾಯಿತು! 'ನಿನಗೆ ಕಲ್ಯಾಣವಾಗಲಿ, ಒಳಿತಾಗಲಿ' ಎಂದು ಹೇಳುವುದಾದರೆ, 'ಚೆನ್ನು' (ಕೆಂಪು) ಆಗಲಿ ಎಂಬುದು ನಮ್ಮವರ ಹರಕೆ. ಆದುದರಿಂದಲೆ ಶಿ(ಂ)ವ ಎಂದರೆ ಚೆನ್ನು (ಮಂಗಲ).

ನಮ್ಮ ನಾಡಿಗರು, ಒಟ್ಟಿನಲ್ಲಿಯೇ ಮೊದಲಿನ ದ್ರಾವಿಡರು ಮೂಲದಲ್ಲಿ ಕಪ್ಪು ಎಂಬ ತಿಳುವಳಿಕೆ ತಪ್ಪು; ಇವರು ಕೆಂಪು. ಇದಕ್ಕೆ ಶಿವನೇ ಆಧಾರ. ಆಸ್ಟ್ರೊ-ಏಶಿಯಾಟಿಕ್‌ರು ನಿಗ್ರಿಟೋ-ಕಪ್ಪು; ಅಚ್ಚ ಕರಿ. ಕನ್ನಡಿಗರ ಸೌಂದರ್ಯದೇವಿ 'ಚೆನ್ನಿ'-ಕೆಂಪಾಂಬೆ. ಕನ್ನಡಮಾತಿನಲ್ಲಿ ಒಳ್ಳೆಯ ಮೈಬಣ್ಣಕ್ಕೆ ಕೊಡುವ ಹೋಲಿಕೆಗಳು ಯಾವುವು? 'ಗೋಧಿಗೆಂಪು'; ಕೇದಗಿ, ಲಿಂಬಿಹಣ್ಣು, ಬಂಗಾರ ಇಂತಹ ಮೈಬಣ್ಣವೆಂದು ವರ್ಣಿಸಿದುದನ್ನು ಲಾವಣಿ

---

* 'ಕರ್ನಾಟದ ವೀರಕ್ಷತ್ರಿಯರು' ಎಂಬ ಪುಸ್ತಕದಲ್ಲಿ ಭಾಷಿಕ ಮತ್ತು ಸಾಂಸ್ಕೃತಿಕ ನೆಲೆಗಳೆರಡಲ್ಲೂ 'ಚಂದ್ರ', ಚೆಂದ್ರ, ಶ್ಚಂದ್ರ ಸಂಸ್ಕೃತ ಶಬ್ದವಲ್ಲ ಎಂಬುದನ್ನು ಹಲವು ಬಗೆಗಳಿಂದ ಸಾಧಿಸಿ ತೋರಿಸಿದ್ದಾರೆ. (ಸಂ)

ಮೊದಲಾದ ಹಳ್ಳಿಯ ಹಾಡುಗಳಲ್ಲಿಯೂ ಗೌರಿ-ಗಂಗೆಯರ (ಶುಕ್ರವಾರ, ಮಂಗಳವಾರ) ಹಾಡುಗಳಲ್ಲಿಯೂ ಕಾಣಬಹುದು. ಆದರೆ, ಇದು ಕೇವಲ ಹಳದಿ ಮಾತ್ರ ಅಲ್ಲ; ಬಿಳಿದಂತೂ ಮೊದಲೇ ಅಲ್ಲ. ಕೆಂಪಿನ ಸಮೀಪದ ಹಳದಿ ಎನ್ನಬಹುದೆಂದು ಮೇಲೆ ಒಮ್ಮೆ ಸೂಚಿಸಿದ್ದುಂಟು. ಇದರ ಮನವರಿಕೆಗಾಗಿ ಗೌರಿ ಮತ್ತು ಸಿರಿದೇವಿ (ಲಕ್ಷ್ಮಿ)ಯರ ಅಂಗಕಾಂತಿಯ ವರ್ಣನೆಗಳನ್ನು ಸರಿಹೋಲಿಸಿ ನೋಡಬಹುದು. ಗೌರಿಯು ಹೈಮವತಿ. ಅವಳ ಮೈಬಣ್ಣ ಬಿಳಿದು. ಸಿರಿದೇವಿಯು (ಶಿನ್-ಚಿನ್) 'ಚಂದ್ರಾಭಾ', 'ಹಿರಣ್ಯವರ್ಣಾ' (ಬಂಗಾರದ ಬಣ್ಣದವಳು), 'ತಪ್ತಕಾಂಚನ ಸನ್ನಿಭಾ' ಎಂದು ಮುಂತಾಗಿ ಅವಳನ್ನು ವೈದಿಕರು ಶ್ರೀಸೂಕ್ತದಲ್ಲಿ ಬಣ್ಣಿಸಿದ್ದಾರೆ. ಈ ವ್ಯತ್ಯಾಸವು ಏಕೆ?

ಸತ್ತ್ವ, ರಜ, ತಮಗಳೆಂಬ ಗುಣತ್ರಯಗಳ ಚಕ್ರದಲ್ಲಿ ಸಿಲುಕಿಸಿ, ಶಿವನನ್ನು- ಆತನು ವೇದದಲ್ಲಿ ಕೆಂಪು ಇದ್ದರೂ ವೇದವಚನಗಳನ್ನು ಲೆಕ್ಕಿಸದೆ, ಮುಂದಿನವರು ಕಪ್ಪುಬಣ್ಣದವನನ್ನಾಗಿ ಮಾಡಿದ್ದಾರೆ! ಏಕೆಂದರೆ, ಶಿವರುದ್ರನಿಗೆ ಪ್ರಳಯದ ಮೃತ್ಯುದೇವತೆಯ ಕೆಲಸವನ್ನು ಬಿಟ್ಟುಕೊಟ್ಟರು. ಆಯಿತು. ಇಲ್ಲಿ ಕಪ್ಪಾಗಿದರೂ ಇನ್ನೊಂದೆಡೆಯಲ್ಲಿ ಈ ಹಾನಿಯು ತುಂಬಿಬಂದಿದೆ. ಶಿವನು ಇನ್ನೂ ಕೆಲವರ್ಣನೆಗಳಲ್ಲಿ 'ಕರ್ಪೂರ ಗೌರ'ನು; 'ರಜತಗಿರಿನಿಭ'ನು, 'ಧವಲಾಂಗನು'! ಶಿವನ ಸಂಬಂಧವನ್ನು ಮುಂದೆ ಧವಲಗಿರಿ, ಕೈಲಾಸಗಿರಿ ಎಂದು ಹಿಮಾಲಯದೊಡನೆ ಹೆಚ್ಚಾಗಿ ತಂದುದರ ಪರಿಣಾಮದಿಂದ ಶಿ(ಂ)ವ, ಗೌರಿಯರ ಮೈಬಣ್ಣವು ಬಿಳಿಯದಾಗಿ ಬದಲಾಗಿರಬೇಕು. ಇಲ್ಲವೆ, ಶ್ವೇತವರ್ಣದ ಆರ್ಯರ ಸೌಂದರ್ಯದ ಆದರ್ಶವು ಕರ್ಪೂರಗೌರವಾಗಿರುವುದು ಸ್ವಾಭಾವಿಕ. ಆದುದರಿಂದ, ಮೂಲ ಶಿವನು ಕೆಂಪು ಇದ್ದರೂ, ವೇದಗಳು ಹಾಗೆ ಹೇಳುತ್ತಿದ್ದರೂ ಮುಂದಿನ ಕಾಲದ ಸಂಸ್ಕೃತಕವಿಗಳು, ದ್ರಷ್ಟಾರರುಗಳಿಗೆ ಆತನು ಕರ್ಪೂರಗೌರನಾಗಿಯೆ ದರ್ಶನವಿತ್ತಿರುವನು! ಈ ಬಗೆಯ ಧವಲರೂಪಕ್ಕೂ ಮೂಲದಲ್ಲಿ ಕೆಲವೊಂದು ಅವಕಾಶವು ಇಲ್ಲದೆ ಇಲ್ಲ. ಆದರೆ, ಕಪ್ಪು ಎಂದು ಹೇಳುವುದು ಮಾತ್ರ ಮೂಲ ಶಿವಕಲ್ಪನೆಗೆ ತೀರ ವಿರೋಧಕವಾಗಿದೆ.

ವೇದಗಳಲ್ಲಿ ಬಂದಿರುವ ಶಿವ-ರುದ್ರನ ವರ್ಣನೆಗಳಲ್ಲಿ ಆತನ ಪರ್ಯಾಯನಾಮವೆಂದು 'ಲಿಂಗ'ದ ಹೆಸರನ್ನು ಎಲ್ಲಿಯೂ ಹೇಳಿಲ್ಲ. ಋಗ್ವೇದದಲ್ಲಾಗಲಿ, ರುದ್ರಾಧ್ಯಾಯದಲ್ಲಾಗಲಿ ಶಿವನಿಗೆ 'ನೀನು ಲಿಂಗರೂಪನಾಗಿರುವೆ' ಎಂಬೀ ಬಗೆಯಾದ ಉಲ್ಲೇಖವು ಒಂದೆಡೆಯಲ್ಲಿಯೂ ಇರದಿರುವುದು ವಿಚಾರಾರ್ಹವಾಗಿದೆ! ಪ್ರಾಚೀನ ದಶೋಪನಿಷತ್ತುಗಳಲ್ಲಿ ಸಹ ಈ ಹೆಸರು ಇಲ್ಲ! ಶ್ವೇತಾಶ್ವತರವು ಶಿವನ ಶ್ರೇಷ್ಠತೆಯನ್ನು ಹೇಳುವುದಕ್ಕೇ ಶೈವಪಂಥಿಗಳಿಂದ ರಚಿಸಲ್ಪಟ್ಟುದು. ಆದರೆ, ಅದರಲ್ಲಿಯೂ ರುದ್ರ-ಶಿವನಿಗೆ ಲಿಂಗವೆಂಬ ಪ್ರತಿಶಬ್ದವು ಬಂದಿದೆ. ಆಗಮ, ಪುರಾಣಾದಿಗಳಲ್ಲಿ ಬಂದಿದೆ. ಆದರೆ, ಇವೆಲ್ಲ ಇತ್ತೀಚಿನವು.

ರುದ್ರ-ಶಿವನ ಅನುಯಾಯಿಗಳಿಗೆ ಶೈವರು, ವೀರಶೈವರೆಂಬ ಹೆಸರುಗಳೇ ಪ್ರಾಮುಖ್ಯತೆಯಿಂದ ಕೇಳಬರುತ್ತವೆ. ವೀರಶೈವರಿಗೆ ಲಿಂಗವಂತರೆಂಬ ಹೆಸರು ರೂಢವಾಗಿ ಬಹಳ ಕಾಲವು ಸಂದಿಲ್ಲವೆಂದು ಊಹಿಸಬಹುದಾಗಿದೆ. ಏಕೆಂದರೆ: ಅವರ ಧರ್ಮಸಿದ್ಧಾಂತ ಗ್ರಂಥಗಳಲ್ಲಿಯೂ 'ವೀರಶೈವ' ಎಂಬ ಹೆಸರಿಗೇ ವಿಶೇಷ ಪ್ರಾಶಸ್ತ್ಯವುಂಟು. 'ಲಿಂಗ' ಶಬ್ದವು ಸಂಸ್ಕೃತವಲ್ಲ; ದ್ರಾವಿಡ ಭಾಷೆಗೂ ಸಂಬಂಧಪಟ್ಟಿಲ್ಲವೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಫ್ರಾನ್ಸದೇಶದ ಪ್ರಖ್ಯಾತ ಸಂಶೋಧಕರಾದ ಪ್ರಿಲಸ್ಕಿ (Przyluski) ಎಂಬವರು 'ಲಾಂಗಲ, ಲಾಂಗೂಲ, ಮತ್ತು ಲಿಂಗ' ಎಂಬ ಶಬ್ದಗಳ ವಿಷಯಕ್ಕೆ ಬರೆದ ಸುಪ್ರಸಿದ್ಧ ಲೇಖನದಲ್ಲಿ ಈ ಮಾತನ್ನು ಚೆನ್ನಾಗಿ ಸ್ಪಷ್ಟ ಪಡಿಸಿದ್ದಾರೆ. ಹೊಸದಾಗಿ ಮುಂದೆ ಬಂದ ಯಾವ ಮಾತನ್ನೂ ಅಲ್ಲಗಳೆದು, ಅರೆದು ಮನವರಿಕೆಯಾದ ಮೇಲೆಯೆ ಅಹುದೆನಲು ಮನಸ್ಸು ಮಾಡುವ ಎ. ಬಿ. ಕೀಥರು ಸಹ ಪ್ರಿಲಸ್ಕಿಯವರ ವಿಚಾರಸರಣಿಗೆ ಸಮ್ಮತಿಯನ್ನಿತ್ತಿದ್ದಾರೆ. ಕೀಥರು ಹೇಳುವುದೇನೆಂದರೆ:

> It may be noted that here the paucity of phallic worship in the case of other Indo-European peoples strenghtens the argument for borrowing.[೨೪]

ಯುರೋಪದಲ್ಲಿ ಭೂಮಧ್ಯಸಮುದ್ರ ತೀರದ ಕೆಲವು ಜನಗಳಲ್ಲಿ ಲಿಂಗಚಿಹ್ನವನ್ನು ತಾಯತದಂತೆ ಪೀಡಾನಿವಾರಣೆಗಾಗಿ ಕೊರಳಲ್ಲಿ ಕಟ್ಟಿಕೊಳ್ಳುವ ರೂಢಿಯಿದ್ದಿತು. ಆದರೂ ಅದು ಆರ್ಯ ಜನಾಂಗದ ಆಚಾರ ವಲ್ಲವೆಂದು ಎಲ್ಲರೂ ಒಪ್ಪಿದ್ದಾರೆ. ಅಲ್ಲದೆ, ದ್ರಾವಿಡರ ದೇವತೆಯೂ ಅಲ್ಲ. ಹಿಂದೂದೇಶದೊಳಗಿನ ಆರ್ಯರೂ ದ್ರಾವಿಡರೂ 'ಲಿಂಗ'ದೇವರನ್ನು ಆಸ್ಟ್ರೋ-ಏಶಿಯಾಟಿಕ್ ಜನಾಂಗದವರಿಂದ ಸ್ವೀಕರಿಸುವ ಸಂಭವವಿದೆಯೆಂದು ಪ್ರಿಲಸ್ಕಿಯವರ ಮತ. ಇವರು ಬರೆಯುವುದೇನೆಂದರೆ:

> It is more probable that the Aryan (and Dravidian) have borrowed from the aborigines of India the cult of linga as well as the name of the idol. These popular practices, despised by the Brahmins were ill known in old times.[೨೫]

ಪ್ರಿಲಸ್ಕಿಯವರು ೫-೬ ವರುಷಗಳಿಗಿಂತಲೂ ಹೆಚ್ಚುಕಾಲ ಈ ಮಾತನ್ನು ಕೂಲಂಕಷವಾಗಿ ವಿಚಾರಿಸುವುದರಲ್ಲೇ ಕಳೆದು ತಮ್ಮ ಸಂಶೋಧನೆಯಲ್ಲಿ ಕಂಡುಬಂದ ಸಂಗತಿಗಳ ಮೇಲಿಂದ 'ಲಿಂಗ'ವು ಆರ್ಯರು ಅಥವಾ ದ್ರಾವಿಡರಲ್ಲಿ ಯಾರದೂ ಅಲ್ಲ. ಇವರಿಗಿಂತಲೂ ಮೊದಲು ಇಲ್ಲಿ ಇದ್ದ ಕೋಲ-ಮುಂಡಾ (ಆಸ್ಟ್ರೋ-ಏಶಿಯಾಟಿಕ್) ಜನಗಳ ಸಂಪರ್ಕದಿಂದ ಈ ದೇವರು ಆರ್ಯರಲ್ಲಿಯೂ ದ್ರಾವಿಡರಲ್ಲಿಯೂ ಸೇರಿಕೊಂಡಿತು, ಎಂಬ ನಿಶ್ಚಿತವಾದ ಮತವುಳ್ಳವರಾಗಿದ್ದಾರೆ. ಕೊನೆಗೆ ಅವರು ಬರೆಯುವುದೇನೆಂದರೆ:

> It is clear from what has been written that the history of a word like *linga* is not without importance for the study of religion. I have begun in 1923 a series of study meant to prove that a certain number of myths, legends and tales of Aryan India have been borrowed from Austro Asiatic people. The first two of these articles will shortly appear in the...[೨೬]

ವೇದಗಳಲ್ಲಿ ಎಲ್ಲಿಯೂ ಕಾಣಬರದೆ ಇರುವ 'ಲಿಂಗ'ವೆಂಬ ಸಂಜ್ಞೆಯು ರುದ್ರನಿಗೆ ಎಲ್ಲಿಂದ ಬಂದಿತು? ಇದೊಂದು ತೊಡಕಿನ ಮಾತಾಗಿದೆ. ಶಿವನನ್ನು 'ಲಿಂಗ' ರೂಪದಿಂದ ಪೂಜಿಸುವ ಪರಿಪಾಠವೂ ಏಕೆ ಉಂಟಾಯಿತೆಂಬುದನ್ನು ಕುರಿತು ಪುರಾಣಕತೆ ಒಂದು ಇದೆ. ಆದರೆ, ಅದು ಪುರಾಣಕಾರರ ಕೈಗಂಟು ಆಗಿರಬೇಕು. ಏಕೆಂದರೆ, ಒಬ್ಬ ಋಷಿಯು ಶಿವನೆಡೆಗೆ ಹೋದಾಗಿನ ಕೆಲವೊಂದು ಪ್ರಸಂಗದ ವರ್ಣನೆಯನ್ನು ಹೇಳಿದೆ ಅದರಲ್ಲಿ! ಆ ಪುರಾಣಕಾರನು ಶಿವ-ಪಾರ್ವತಿಯರೆಂದರೆ ಅವರೂ ತನ್ನಂತೆ ಸಂಸಾರ ಮಾಡಿಕೊಂಡು ಎಂದೂ ಒಮ್ಮೆ ಇದ್ದಂತೆ ನಂಬಿದ್ದಾನೆ ಅಥವಾ ಉಳಿದ ಜನಗಳು ನಂಬಬೇಕೆಂದಿದ್ದಾನೆ! ಜಗಚ್ಚಾಲಕ ಶಕ್ತಿ ಶಿವನೆಂಬ ಕಲ್ಪನೆಗೂ ಮೇಲಣ ಕತೆಯು ವಿಪರೀತವಾಗಿದೆ. ವೇದದಲ್ಲಿ ಕಾಣುವ ರುದ್ರ-ಶಿವನ ಕಲ್ಪನೆಗೂ ಈ ಕತೆಯು ಅಸಂಬದ್ಧವಾಗಿದೆ. ವೇದದಲ್ಲಿ ವರ್ಣಿತನಾದ ರುದ್ರ-ಶಿವನು ಒಂದು ದಿವ್ಯಶಕ್ತಿ. ಈ ಪೌರಾಣಿಕರು ಹೇಳುವುದು ಒಂದು ಸಾಂಸಾರಿಕ ವ್ಯಕ್ತಿ! ಆ ಕತೆಯಿಂದ ಗೊತ್ತಾಗುವ ಮಾತು ಇಷ್ಟು: ರುದ್ರ ಶಿವನನ್ನು ಜನಗಳು ಮುಂದಿನ ಕಾಲದಲ್ಲಿ ಲಿಂಗರೂಪದಿಂದ ಆರಾಧಿಸಲಾರಂಭಿಸಿದರು. ಇದಕ್ಕೂ ಹೆಚ್ಚಿನ ಅರ್ಥವೇ ಅದರಿಂದ ಹೊರಡುವುದಿಲ್ಲ.[೨೭]

ಈ ಲಿಂಗದ ಆಕಾರವು ಮಾನುಷ ಲಿಂಗದಂತೆಯೇ ಇದ್ದಿತೆಂಬ ಮಾತನ್ನು ಆ ಪುರಾಣ ಕತೆಯಿಂದ ಊಹಿಸಬಹುದಾಗಿದೆ. ಮೊಹೆಂಜೋದಾರೊಗಳಲ್ಲಿ ದೊರೆತ (ವೇದಪೂರ್ವಕಾಲೀನವೆಂದು ಸಂಶೋಧಕರು ಹೇಳುವ) ಲಿಂಗಗಳು ಇಂತಹವುಗಳೇ ಆಗಿರುತ್ತವೆ. ಗುಡಿಮಲ್ಲಾಪುರದಲ್ಲಿರುವ ಶಿವಾಲಯದೊಳಗಿನ ಲಿಂಗವನ್ನು ನೋಡಿದ ಬಳಿಕಂತು ಈ ವಿಷಯಕ್ಕೆ ಸಂದೇಹವೇ ಉಳಿಯುವುದಿಲ್ಲ.

ಋಗ್ವೇದದಲ್ಲಿ ದೊರೆತ ಎರಡು ಉಲ್ಲೇಖಗಳು ಈ ಮಾತಿಗೆ ಪೋಷಕವಾಗಿವೆ. _ವೇದದಲ್ಲಿ 'ಶಿಶ್ನೋ ದೇವಾಃ' ಎಂಬ ಮಾತು ಏಳನೆಯ ಹಾಗು ಹತ್ತನೆಯ ಮಂಡಲಗಳಲ್ಲಿ ಬಂದಿದೆ. 'ಶಿಶ್ನೋದೇವರು' ಎಂಬ ಪದಕ್ಕೆ ಸಾಯಣರು 'ಅಬ್ರಹ್ಮಚಾರಿ'ಗಳು ಎಂದು ಅರ್ಥಮಾಡಿದ್ದಾರೆ. 'ಮಾತೃದೇವೋಭವ' ಎಂಬಲ್ಲಿರುವಂತೆ 'ಶಿಶ್ನೋದೇವ' ಎಂಬಲ್ಲಿಯೂ ದೇವಶಬ್ದವು 'ಆನಂದ' ಎಂರ್ಥದಲ್ಲಿದೆಯೆಂದು ಸಾಯಣರನ್ನು ಎತ್ತಿ ಹಿಡಿದು ಪಂಡಿತ ವಿಧೂಶೇಖರ ಭಟ್ಟಾಚಾರ್ಯರು ಪ್ರತಿಪಾದಿಸಿದ್ದಾರೆ. ಶಿಶ್ನದಲ್ಲಿ ಆನಂದಪಡತಕ್ಕವರು ಎಂದರೆ ಬ್ರಹ್ಮಚಾರಿಗಳು ಎಂದು ಅರ್ಥಮಾಡಲೂಬಹುದು. ಆದರೆ, ಋಗ್ವೆದದ ಆ ಋಚೆಯಲ್ಲಿ ಈ ಅರ್ಥವು ಸರಿಹೋಗುವುದಿಲ್ಲ.

ನ ಯಾತವಃ ಇಂದ್ರ ಜೂಜುವುಃ ನ ವಂದನಾ ಶವಿಷ್ಠ ವೇದ್ಯಾಭಿಃ।

ಸಶರ್ಧತ್ ಅರ್ಯಃ ವಿಷುಣಸ್ಯ ಜಂತೋಃ ಮಾಶಿಶ್ನಽ ದೇವಾಃ ಅಸಿಗುಃ ಋತಂ ನಃ॥೨೮

ಎಲೈ ಇಂದ್ರನೆ, ರಕ್ಕಸರು ನಮ್ಮನ್ನು ಕೊಲ್ಲದಿರಲಿ. ಎಲೈ ಬಲಿಷ್ಟನಾದ ಇಂದ್ರನೆ, ನಾವು ನಿನ್ನನ್ನು ಅರಿತು ತಲೆವಾಗಿದ್ದೇವೆ. ಆ ನಮ್ಮ ಒಡೆಯನು ದುಷ್ಟಜಂತು (ಜನ)ಗಳ ಮೇಲೆ ಆಳುವುದಕ್ಕೆ ಉತ್ಸುಕನಾಗಿದ್ದಾನೆ. ಲಿಂಗಪೂಜಕರು ನಮ್ಮ ಯಜ್ಞದಲ್ಲಿ ಬಾರದಿರಲಿ. ಈ ವರ್ಣನೆಯಲ್ಲಿ ದುಷ್ಟಜಂತುಗಳೊಡನೆ 'ಶಿಶ್ನೋ ದೇವರ' ಮಾತು ಬರುತ್ತಿರುವುದರಿಂದ ಇವರು ಆರ್ಯ ವಿರೋಧಿಗಳ ವರ್ಗದವರೇ ಯಾರಾದರೂ ಇದ್ದಿರಬೇಕು. ಆದುದರಿಂದ, ಶಿಶ್ನೋದೇವರು ಎಂದರೆ ಬರಿ ಅಬ್ರಹ್ಮಚಾರಿಗಳಾಗಿರಲಾರರು. ಈ ವಿಷಯವು ಹತ್ತನೆಯ ಮಂಡಲದಲ್ಲಿ ಇನ್ನೂ ಹೆಚ್ಚು ಸ್ಪಷ್ಟವಾಗುವಂತಿದೆ.

ಸಃ ವಾಜಮ್ ಅಪದುಃಽಪದಾ ಯನ್ ಸ್ವಃಽಪರಿಸದತ್ ಸನಿಷ್ಯನ್।

ಅನರ್ವಾ ಯತ್ ಶತಽ ದುರಸ್ಯ ವೇದಃ ಘ್ನನ್ ಶಿಶ್ನಽದೇವಾನ್ ಅಭಿವರ್ಪಸಾ ಭೂತ್॥[೨೯]

ದಾಳಿಗೆ ಹೊರಟು ಇಂದ್ರನು ನೇರವಾಗಿ ಏರಿಹೋಗಿ ಹಗೆಗಳನ್ನು ಸುಲಿದು ಯುದ್ಧಮಾಡುವನು. ಕಾಳಗದಿಂದ ಹಿಂದಿರುಗಿದ ಇಂದ್ರನು ಲಿಂಗಪೂಜಕರನ್ನು ಕೊಂದು ನೂರುಬಾಗಿಲುಗಳನ್ನು ಒಡೆದು ಧನವನ್ನು ಸೂರೆ ಗೊಳ್ಳುತ್ತಾನೆ. ಸಾಯಣಾಚಾರ್ಯರು ಭಾಷ್ಯದಲ್ಲಿ 'ಶಿಶ್ನ ದೇವಾನ್' ಎಂಬ ಪದವನ್ನು ಕುರಿತು "ಶಿಶ್ನದೇವಾನ್ ಅ- ಬ್ರಹ್ಮಚರ್ಯಾನ್ ಶತದ್ವಾರೇಷು ಶತ್ರುಪುರ ಸಂಬಂಧಿಷು ವರ್ತಮಾನಾನ್ ಘ್ನನ್ ಹಿಂಸನ್" ಎಂದು ಬರೆದಿರುವರು. ಆದರೆ ಬರಿ ಅಬ್ರಹ್ಮಚಾರಿಗಳಾಗಿದ್ದರೆ ಅವರನ್ನು ಇಂದ್ರನು ಕೊಲ್ಲುವ ಕಾರಣವಿದ್ದಿಲ್ಲ. ಅ-ಬ್ರಹ್ಮಚಾರಿ ಗಳೆಂಬ ಅರ್ಥ ದಿಂದ ಅವರು ಆರ್ಯರೂ ಇರಬಹುದೆಂಬ ಸಂದೇಹವುಂಟಾಗುವಂತಿದೆ.

ಪಾಶ್ಚಾತ್ಯ ಪಂಡಿತರು ಸಾಯಣರ ಅರ್ಥವನ್ನು ಮಾನ್ಯಮಾಡದೆ ಲಿಂಗಪೂಜಕರು ಎಂದು ಹೇಳಿದ ಅರ್ಥವೆ ಹೆಚ್ಚು ಸಮರ್ಪಕವೆಂದು ತೋರುತ್ತದೆ. ವಿದ್ಯಾನಿಧಿ ಚಿತ್ರಾವಶಾಸ್ತ್ರಿಗಳೂ ಋಗ್ವೇದದ ತಮ್ಮ ಭಾಷಾಂತರದಲ್ಲಿ ಈ ಅರ್ಥವನ್ನೇ ಸ್ವೀಕರಿಸಿದ್ದಾರೆ. ಈಗ ಇದರಿಂದ ಒಂದು ಮಾತು ಸ್ಪಷ್ಟವಾಗುತ್ತಲಿದೆ: ವೇದಗಳಿಗೆ ರುದ್ರಶಿವನು ಸಮ್ಮತವಾಗಿದ್ದಾನೆ. ವೇದಗಳಲ್ಲಿ ಅವನ ಅನುಯಾಯಿಗಳಿಗೂ ಕೆಲವೊಂದು ಮನ್ನಣೆಯು ದೊರೆತಿದೆ. ಆದರೆ, ಲಿಂಗದೇವರಾಗಲಿ, ಲಿಂಗ ಪೂಜಕರಾಗಲಿ ವೇದಗಳಿಗೆ ಸ್ವಲ್ಪವೂ ಒಪ್ಪಿಗೆಯಿಲ್ಲ!

ಮೂಲದಲ್ಲಿ ರುದ್ರ-ಶಿವನು ಲಿಂಗಸ್ವರೂಪಿಯೆ ಆಗಿದ್ದರೆ, ಅಥವಾ ಲಿಂಗವೆಂದರೆ ಶಿವನಾಗಿದ್ದರೆ ವೇದಗಳಲ್ಲಿ ಈ ಬಗೆಯ ನೋಟವು ಕಣ್ಣಿಗೆ ಬೀಳುವುದು ಸಾಧ್ಯವಿಲ್ಲ. ರುದ್ರ-ಶಿವನನ್ನು ವರ್ಣಿಸಿದ ಋಗ್ವೇದದ ಋಚೆಗಳಲ್ಲಿ ಲಿಂಗದ ಹೆಸರು ಬಂದಿಲ್ಲ ಈ ಹೆಸರು ಶಿವನಿಗೆ ಇದ್ದರೆ ಅದು ಒಂದೆಡೆಗಾದರೂ ಬಾರದಿರುವುದು ಸಾಧ್ಯವಿಲ್ಲ. ಆದುದರಿಂದ, ಐತಿಹಾಸಿಕ ದೃಷ್ಟಿಯಿಂದ ಮಾತನಾಡುವುದಾದರೆ ರುದ್ರ-ಶಿವ ಪೂಜಕರೂ ಲಿಂಗಪೂಜಕರೂ ಒಂದೇ ಎಂದು ಭಾವಿಸುವುದು ತಪ್ಪು, ಎಂದು ಹೇಳುವುದು ಅನಿವಾರ್ಯವಾಗಿದೆ. 'ಲಿಂಗ' ಶಬ್ದಕ್ಕೆ ಸಂಸ್ಕೃತದಲ್ಲಿ ಸರಿಯಾದ ನಿರುಕ್ತವಿಲ್ಲ. 'ಲಿ' ಎಂದರೆ ಇಂತಹ ತತ್ತ್ವ, ಅನುಸ್ವಾರಕ್ಕೆ ಈ ಅರ್ಥ, 'ಗ' ಎಂದರೆ ಅದರ ರಹಸ್ಯವಿದು ಎಂದು ಮುಂತಾಗಿ ಹೇಳುವ ಅರ್ಥಗಳೂ, ಮಾಡಿರುವ ಭಾಷ್ಯಗಳೂ, ಆಯಾ

ಲೇಖಕರ ಶ್ರದ್ಧೆ, ಭಾವನಾಶಕ್ತಿಗಳ ವೈಪುಲ್ಯವನ್ನೂ ವಿಶಾಲತೆಯನ್ನೂ ತೋರಿಸಬಲ್ಲುವೆ ಹೊರತು ಭಾಷಾಶಾಸ್ತ್ರದ ದೃಷ್ಟಿಯಿಂದ ಸಮರ್ಪಕವಾದ ವ್ಯುತ್ಪತ್ತಿಯು ಅವುಗಳಲ್ಲಿ ದೊರೆಯಲಾರದು. ಲಿಂಗದ ಮೂಲಕಲ್ಪನೆಯೊಳಗಿನ ಭೌತಿಕ ಅರ್ಥವನ್ನು ಸಂಪೂರ್ಣವಾಗಿ ತೊಡೆದುಹಾಕಿ ಅದಕ್ಕೊಂದು ವಿಶಾಲವಾದ ಉಚ್ಚ ವಿಚಾರದ ತತ್ತ್ವಜ್ಞಾನವನ್ನು ತಂದು ಜೋಡಿಸಿದ್ದುದು ಪ್ರಶಸಂನೀಯವಾಗಿದೆ. ಆದರೆ, ಅದರಿಂದ ಮೂಲದಲ್ಲಿ ಲಿಂಗವೆಂಬುದಕ್ಕಿದ್ದ ಅರ್ಥವನ್ನು ಮಾತ್ರ ಅಲ್ಲಗಳೆಯಲಾಗುವುದಿಲ್ಲ. ಲಿಂಗ ಶಬ್ದಕ್ಕೆ ಶಿಶ್ನ ಎಂಬರ್ಥವಲ್ಲದೆ ಕುರುಹು, ಗುರುತು, ಚಿಹ್ನ, ಸೂಕ್ಷ್ಮರೂಪ ಎಂಬ ಸಾಧುವಾದ ಅರ್ಥಗಳೂ ಉಂಟು. ಈ ಎರಡನೆಯ ಅರ್ಥದಲ್ಲಿ ಲಿಂಗಶಬ್ದವು ಶ್ವೇತಾಶ್ವರೋಪನಿಷತ್ತಿನಲ್ಲಿ ಬಂದಿದೆ. ವೀರಶೈವರಲ್ಲಿಯ ವಿದ್ವಾಂಸರು ತಾವು ಲಿಂಗ ಶಬ್ದವನ್ನು ಈ ಅರ್ಥದಲ್ಲಿಯೇ ಉಪಯೋಗಿಸುತ್ತೇವೆಂದು ಹೇಳುವರು. ಅದೊಂದು ಶಿವ ಕುರುಹು, ಚಿಹ್ನ ಎಂದು ಅದಕ್ಕೆ ಲಿಂಗವೆಂಬ ಹೆಸರು. ಲಿಂಗ-ಶರೀರ ಎಂಬಲ್ಲಿ ಸೂಕ್ಷ್ಮಶರೀರವೆಂಬ ಅರ್ಥವೆ ನಿರ್ದಿಷ್ಟವಾಗಿರುತ್ತದೆ. ಆದಕಾರಣ, 'ಲಿಂಗ' ಎಂದರೆ ಶಿಶ್ನದೇವರೆಂದು ಅರ್ಥಮಾಡುವುದು ಅಸಮರ್ಪಕವಾದೀತೆಂದು ಹೇಳಬಹುದು.

ಈ ಮಾತನ್ನು ಕೆಲವೊಂದು ಮಟ್ಟಿಗೆ ಒಪ್ಪಿಕೊಂಡರೂ ಅದು ಸಂಪೂರ್ಣ ಸರಿಯೆನ್ನಲಿಕ್ಕಾಗುವುದಿಲ್ಲ. ಲಿಂಗ ಶಬ್ದವು ಮೊದಲು ಸಂಸ್ಕೃತಕ್ಕೆ ಸಂಬಂಧಪಟ್ಟುದೇ ಅಲ್ಲವೆಂದು ಪ್ರಿಲಸ್ಕಿ ಪ್ರಭೃತಿಗಳ ಮತ. ಇನ್ನು ಸಂಸ್ಕೃತವೆಂದು ಎಣಿಸಿದರೂ ಲಿಂಗ ಶಬ್ದದ ಪ್ರಧಾನ ಅರ್ಥವು ಆವುದು? ಗೌಣ ಅರ್ಥವಾವುದು? ಲಾಕ್ಷಣಿಕವಾವುದು? ಎಂಬುದನ್ನು ನೋಡಿಕೊಳ್ಳಬೇಕು. ಲಿಂಗ್ ಅಥವಾ ಲೀ ಯಾವುದೇ ಧಾತುವಿನಿಂದ ಈ ಶಬ್ದವು ಆಯ್ತೆಂದು ಭಾವಿಸಿದರೂ ಶಿಶ್ನ ಎಂಬುದೇ ಮುಖ್ಯಾರ್ಥವಾಗಿ ಇದ್ದುದು ಕಂಡುಬರುತ್ತದೆ. ಲಿಂಗ್, ಲೀ ಗಳಿಗೆ ಹೊಗು, ಸೇರು, ಅಡಗು, ಎಂಬರ್ಥಗಳುಂಟು. ಆಲಿಂಗಿಸು ಶಬ್ದವು ಈಗ ಬಹಳ ಸಂಭಾವಿತವಾಗಿ ಕಂಡರೂ ಆ-ಲಿಂಗನದ ಮೂಲಾರ್ಥವು ಸ್ತ್ರೀ-ಪುರುಷಪ್ರೇಮದ ಪರಮಾವಧಿ ದರ್ಶಕವಾಗಿದೆ. ಲಿಂಗ ಶಬ್ದಕ್ಕೆ ಚಿಹ್ನ ಸೂಕ್ಷ್ಮಸ್ವರೂಪವೆಂಬರ್ಥಗಳು ಆನುಷಂಗಿಕ; ಪ್ರಧಾನವಲ್ಲ. ಶ್ವೇತಾಶ್ವತರದಲ್ಲಿ 'ಲಿಂಗ' ಶಬ್ದವನ್ನು ಸೂಕ್ಷ್ಮರೂಪವೆಂಬರ್ಥದಲ್ಲಿ ಉಪಯೋಗಿಸಿದ ರೀತಿ ಕಾವ್ಯಮಯವಾಗಿದೆ. ಲಿಂಗ ಶಬ್ದದೊಳಗಿನ ಮೂಲ ಅರ್ಥಶಕ್ತಿಯನ್ನು ಅರಿತ ಆ ಋಷಿಯು ಆ ಶಬ್ದವನ್ನು ಪ್ರಯೋಗಿಸಿದ ಬಗೆಯಲ್ಲಿಯೇ ಔಚಿತ್ಯವು ತುಂಬಿಕೊಂಡಿದೆ. ಬಿಡಿಸಿ ಹೇಳಿದರೆ ಅದರ ಸ್ವಾರಸ್ಯವು ಹಾಳಾಗುವಂತಿದೆ. "ವಹ್ನೇರ್ಯಥಾ ಯೋನಿಗತಸ್ಯ ಮೂರ್ತಿ ನ ದೃಶ್ಯತೇ ನೈವಚ ಲಿಂಗನಾಶಃ"(೧.೧೨). ಕಟ್ಟಿಗೆಯಲ್ಲಿ ಹುದುಗಿಕೊಂಡಿರುವ ಬೆಂಕಿಯ ರೂಪವು ಕಣ್ಣಿಗೆ ಬೀಳದಿದ್ದರೂ ಅದರ ಸೂಕ್ಷ್ಮರೂಪವು ನಷ್ಟವಾಗಿರುವುದಿಲ್ಲ; ಎಂದು ಹೇಳುವುದು ಮೂಲ ಉದ್ದೇಶ. ಶಾಂಕರ ಭಾಷ್ಯದಲ್ಲಿ ಲಿಂಗಸ್ಯ ಸೂಕ್ಷ್ಮರೂಪಸ್ಯ ಎಂದು ಹೇಳಲಾಗಿದೆ. ಇದನ್ನು ರುದ್ರ ಅಥವಾ ಶಿವ ಶಬ್ದಕ್ಕೆ ಪ್ರತಿಶಬ್ದವೆಂದು ಹೇಳಿಲ್ಲ. ಆದರೂ ಶಿವ ಶಬ್ದಕ್ಕೆ ಲಿಂಗ (ಕುರುಹು) ಎಂಬ ಅರ್ಥದಿಂದ ಈ ಪದವನ್ನು ಪ್ರಯೋಗಿಸಲಾರಂಭಿಸಿದುದನ್ನು ಇಲ್ಲಿ ಕಾಣಬಹುದು. ಆದರೆ, 'ಲಿಂಗ' ಪದವನ್ನು ಪ್ರಯೋಗಿಸುವ ಸಂದರ್ಭದಲ್ಲಿ ಈ ಉಪನಿಷತ್ಕಾರನಿಗೆ 'ಯೋನಿ'ಯ ನೆನಪೂ ಆಗದೆ ಇಲ್ಲ. ಅಥವಾ ಮೊದಲು 'ಯೋನಿಗತಸ್ಯ' ಎಂಬುದನ್ನು ಪ್ರಯೋಗಿಸಿದೊಡನೆ ಅದರ ಸಾಹಚರ್ಯದಿಂದ 'ಲಿಂಗ'ವೆಂಬ ಶಬ್ದವೂ ಮುಂದೆ ಬಂದುಬಿಟ್ಟಿರಬೇಕೆಂದು ತೋರುತ್ತದೆ.[೨೦] ಆದುದರಿಂದ ಯಾವ ಬಗೆಯಿಂದ ನೋಡಿದರೂ ಲಿಂಗಶಬ್ದಕ್ಕೆ ಶಿಶ್ನವೆಂಬುದೇ ಮೂಲಾರ್ಥ. ವೇದಗಳಲ್ಲಿ ರುದ್ರ-ಶಿವನಿಗೆ ಲಿಂಗವೆಂದು ಹೇಳಿಲ್ಲ. ಅಲ್ಲಿ ಶಿಶ್ನೋ ದೇವರು ರುದ್ರದೇವರಿಂದ ಭಿನ್ನವಾಗಿದೆ. ಆದುದರಿಂದ ಶಿವನನ್ನು ಲಿಂಗವೆಂದು ಭಾವಿಸಿರುವುದು ಅರ್ವಾಚೀನ.

> The epithets of the shatarudriya being derived partly from Rudra=Storm and partly from Agni=Fire.

ಎಂದು ಮ್ಯಾಕಡೊನೆಲ್ಲರು ಹೇಳುತ್ತಾರೆ. ಹಿಂದುಸ್ತಾನದೊಳಗಿನ ಪರಮ ಪವಿತ್ರವಾದ ಶಿವಕ್ಷೇತ್ರಗಳೆಂದು ಹೆಸರಾದ ಸೌರಾಷ್ಟ್ರದ ಸೋಮನಾಥ, ಶ್ರೀಶೈಲದ ಮಲ್ಲಿಕಾರ್ಜುನ ಮೊದಲಾದ ಹದಿನೆರಡು ಸ್ಥಳಗಳಲ್ಲಿಯೂ

ಈಗ ಲಿಂಗರೂಪದಲ್ಲಿಯೆ ಆರಾಧನೆಯು ನಡೆಯುತ್ತಿದೆ. ಹ್ಯೂಯನ್‌ತ್ಸಾಂಗನು ಕಾಶಿಯಲ್ಲಿ ತಾನು ಶಿವಮೂರ್ತಿ (ಲಿಂಗವಲ್ಲ) ನೋಡಿದೆನೆಂದು ಬರೆದುದನ್ನು ಓದಿದಂತಿದೆ. ಅದನ್ನು ಬಿಟ್ಟರೂ ಮೇಲ್ಕಾಣಿಸಿದ ಹದಿನೆರಡು ಶಿವಾಲಯಗಳಲ್ಲಿ ಜ್ಯೋತಿರ್ಲಿಂಗಗಳುಂಟೆಂದು ಹೇಳುವ ವಾಡಿಕೆ. ವೇದಗಳಲ್ಲಿ ವರ್ಣಿತನಾದ ರುದ್ರ-ಶಿವನು ಜ್ಯೋತಿರ್ಮಯನೇ ಆಗಿದ್ದಾನೆ. ವೀರಶೈವ ಅನುಭಾವವುಳ್ಳ ವಚನಕಾರರಲ್ಲಿ ಹಿರಿಯರೆಲ್ಲರೂ 'ಬಚ್ಚ ಬರಿ ಬೆಳಕು' 'ಬೆಳ್ಳಂಬೆಳಗು' ಎಂದು ಆತನನ್ನು ಹೇಳುವುದುಂಟು. ಜ್ಯೋತಿಯೆ ಜ್ಞಾನಜ್ಯೋತಿಯಾಯ್ತು. ಜ್ಞಾನನಿಧಿಯೆ ಶಿವನು. ಜ್ಞಾನವೇ ಸತ್ಯ. ಸತ್ಯವೇ ಶಿವ. ಸತ್ಯವು ಸ್ವಯಂಪ್ರಕಾಶವುಳ್ಳುದು. ಮಾತೆಂಬುದು ಜ್ಯೋತಿರ್ಲಿಂಗವೆಂದು ಅಲ್ಲಮಪ್ರಭುಗಳ ಅನುಭಾವ ವಚನವಿದೆ. ಮಹಾರಾಷ್ಟ್ರ, ಕರ್ನಾಟಗಳ ಎಷ್ಟೋ ಮನೆತಗಳಲ್ಲಿ ಮದುವೆಯಂತಹ ಮಂಗಲಕಾರ್ಯದ ಮುನ್ನಾದಿನವೆ ಮಾಡಲ್ಪಡುವ 'ಗುಗ್ಗುಳ' ಸಮಾರಂಭವೆಂದರೆ, 'ಜ್ಯೋತಿ' ರೂಪದಲ್ಲಿ ನಡೆವ ಶಿವಪೂಜೆಯೆ ಅದು. 'ಶಿವ' ಎಂಬುದಕ್ಕೆ 'ಗುಗ್ಗುಳ' ಎಂದು ಸಂಸ್ಕೃತ ಕೋಶಗಳಲ್ಲಿರುವ ಅರ್ಥವು ತೀರ ಸುಮ್ಮನೆ ಬಂದಿರಬಹುದೆಂದು ಗ್ರಹಿಸುವುದಕ್ಕೆ ಮನಸ್ಸು ಒಪ್ಪುವುದಿಲ್ಲ. ಶಿವನಿಗೆ 'ನೀಲ-ಲೋಹಿತ'ನೆಂಬ ಹೆಸರಿದೆ. ನೀಲಕಂಠನು ಶಿವನೆಂಬ ಮಾತಿನ ರಹಸ್ಯವು ಈಗ ಚೆನ್ನಾಗಿಯೆ ಗೊತ್ತಾಗುತ್ತದೆ. ಕೆಂಪುಜ್ಯೋತಿಯಲ್ಲಿ ನಡುನಡುವೆ ನೀಲವರ್ಣದ ಛಾಯೆಯೊಂದು ಕಣ್ಣಿಗೆ ಹೊಳೆದುಹೋಗುವುದುಂಟು. ಅದುವೆ, ಕಾರಣವಿರಬೇಕು ಶಿವನಿಗೆ ನೀಲಲೋಹಿತನೆಂದೂ ನೀಲಕಂಠನೆಂದೂ ಹೆಸರುಗಳು ಬರುವುದಕ್ಕೆ ಅಥವಾ ತುದಿಯ ಕಪ್ಪ-ಕಾಡಿಗೆಯೆ ಕರಿಗೊರಲನೆಂಬ ಹೆಸರಿಗೆ ಮೂಲಕಾರಣವಿರಬೇಕು. ಶಿವಸ್ತೋತ್ರ ರತ್ನಾಕರದಲ್ಲಿರುವ ಕೆಲವುವಿಶೇಷಣಗಳು ಈ ದೇವತೆಯು ಜ್ಯೋತಿರೂಪವೆಂಬುದಕ್ಕೆ ಪುಷ್ಟಿಕರವಾಗಿವೆ 'ಓಂ ಜ್ವಲಜ್ವಾಲಾಮಾಲಿನೇ', 'ಸಹಸ್ರಕರ', 'ಚತುರ್ಮುಖ' (ಎಲ್ಲ ದಿಕ್ಕುಗಳಲ್ಲಿಯೂ ಮೋರೆಯುಳ್ಳವ) 'ನೀಲರುಚಿಃ', 'ತೇಜೋರೂಪ', 'ತೇಜೋಮಯ' ಇತ್ಯಾದಿ ಇತ್ಯಾದಿ. ಆದುದರಿಂದ ಮೂಲದಲ್ಲಿ ಶಿವನು ಕೆಂಪು, ಮಂಗಲಜ್ಯೋತಿರೂಪನೆಂಬುದೇ ನಿಜ.

ಇಂದು ಶಿವನಿಗೆ ವೃಷಭನೆಂದು ಹೇಳಿದರೆ, ಧಾರ್ಮಿಕ ಆಚಾರ-ವಿಚಾರಗಳಲ್ಲಿ ಕಾಲಕಾಲಕ್ಕೆ ಬದಲಾವಣೆಗಳು ಅನಿವಾರ್ಯವಾಗಿ ಆಗುತ್ತಲಿರುತ್ತವೆಂಬ ಅರಿವು ಇಲ್ಲದ ತಲೆತಿರುಕನು ತಟ್ಟನೆ ರೊಚ್ಚಿಗೆದ್ದುಬಿಡಬಹುದು. ಆದರೆ, ಋಗ್ವೇದದಲ್ಲಿ ರುದ್ರ-ಶಿವನಿಗೆ 'ವೃಷಭ' ಎಂದು ಒಂದು ಕಡೆಯಲ್ಲಿ ಅಲ್ಲ, ಹಲವೆಡೆಗಳಲ್ಲಿ ಹೇಳಿದ್ದಾಗಿದೆ. ಎರಡನೆಯ ಮಂಡಲದ ಒಂದು ಸೂಕ್ತದಲ್ಲಿಯೆ ನಾಲ್ಕುಬಾರಿ ಈ ಹೆಸರು ಬಂದಿದೆ (೩೩;೬;೭;೮;೧೫), ವೃಷಭನೆಂದು ಇಂದ್ರನಿಗೆ ಹಲವೆಡೆಗಳಲ್ಲಿ ಹೇಳಿದ್ದುಂಟು. ಅಗ್ನಿಗೂ ಈ ಹೆಸರಿನ ಸಂಬಂಧವು ಬಂದಿದೆ. ವೃಷಭನೆಂದರೆ (ವೃಷ್) ವರ್ಷಯಿತೃವು, ಧಾತಾರನು ಎಂದು ಮೂಲಾರ್ಥವಿರುವುದಾಗಿ ಸಾಯಣರು ಹೇಳಿದ್ದಾರೆ. ಮ್ಯಾಕಡೊನೆಲ್ಲ ಮತ್ತು ಮೋನಿಯರ ವಿಲಿಯಂಸ್ ತಮ್ಮ ಕೋಶಗಳಲ್ಲಿ manly, mighty, vigours, strong, chief, lord, eminent ಎಂದು ಮುಂತಾಗಿ ಕೊಟ್ಟಿದ್ದಾರೆ. ಯಾವ ಅರ್ಥವಾದರೂ ಸರಿಯೆ 'ವೃಷಭ' ಶಬ್ದದಲ್ಲಿ ಬಹಳ ಹೆಚ್ಚಿನ ಹುರುಳಿದೆಯೆಂಬುದರಲ್ಲಿ ಸಂದೇಹವಿಲ್ಲ. ಸಂಸ್ಕೃತ ಭಾಷೆಯಲ್ಲಿ ಶಿವ ಶಬ್ದಕ್ಕೆ ಕನ್ನಡದಷ್ಟು ವಿಪುಲವಾದ ಅರ್ಥವು ಹೊರಡದಿದ್ದರೂ 'ವೃಷಭ' ಶಬ್ದದಲ್ಲಿರುವ ತಿರುಳು ಬೇರೆ ಯಾವ ಪ್ರತಿಶಬ್ದದಲ್ಲಿಯೂ ದೊರೆಯದು. ಈ ಕಾರಣದಿಂದಲೇ ವೃಷಭ (ಬಸವ) ಶಬ್ದದ ಬಗ್ಗೆ ಕನ್ನಡಿಗರಿಗೆ ಇಷ್ಟೊಂದು ಅಚ್ಚುಮೆಚ್ಚು! ವೃಷಭ (ಬಸವ)ನ ಪೂಜೆ, ವೃಷಭ (ಬಸವ)ನ ಹೆಸರನ್ನಿಟ್ಟುಕೊಳ್ಳುವ ವೇದಕಾಲದ ಆ ಪರಂಪರೆಯು ಇನ್ನೂ ಇಷ್ಟು ಸುಸ್ಪಷ್ಟವಾಗಿ ಉಳಿದುದು ಕರ್ನಾಟದ ಹೊರಗೆ ಕ್ವಚಿತ್ತಾಗಿಯೆ ಕಾಣಲಿಕ್ಕೆ ಸಿಕ್ಕುವುದು! ಕನ್ನಡ ಜೈನ ಕವಿಗಳು 'ವೃಷಭ' ಶಬ್ದವನ್ನು ಅದರ ಮೂಲಾರ್ಥದಲ್ಲಿಯೆ ಉಪಯೋಗಿಸಿದ್ದುದನ್ನು (ಕವಿ ವೃಷಭರಾ ಪ್ರಯೋಗಗಳೊಳಂ) ಕವಿರಾಜಮಾರ್ಗದಲ್ಲಿ ನೋಡಿಕೊಳ್ಳಬಹುದು. ಒಂಬತ್ತನೆಯ ಶತಮಾನದ ವರೆಗೂ ಮೂಲಾರ್ಥವನ್ನು ಉಳಿಸಿಕೊಂಡು ಬಂದ ವೃಷಭ (ಬಸವ) ಶಬ್ದವು ಮುಂದೆ (ಬರಿ ಮುದಿ) ಎತ್ತಾಗಿ ವ್ಯವಹರಿಸಲಾರಂಭಿಸಿದುದು ವಿಷಾದಕರ.

ಶಿವನು ವೃಷಭನು; ಎಂದರೆ ಸಾಯಣರ ಅರ್ಥದಂತೆ ದಾತಾರನು. ಭಕ್ತರಿಗೆ ಬೇಡಿದ ವರಗಳನ್ನು ಈಯುವವನು. ಆದರೆ, ವೃಷಭನೆಂದರೆ ಗಂಡುಗಲಿ, ವೀರ ಎಂದು ಅರ್ಥಮಾಡಿದಲ್ಲಿ ನಮ್ಮ ನಾಡಿನ ಐತಿಹಾಸಿಕ ಪರಂಪರೆಯ ಮೇಲೆ ತುಂಬ ಬೆಳಕು ಬೀಳುತ್ತಲಿದೆ. ಶಿವನು ವೃಷಭನು ಎಂದರೆ ವೀರನು; ಈತನು ವೀರದೇವರು-ಬೀರದೇವರು; ವೀರನೂ ಭದ್ರನೂ (ಭದ್ರ-ಕಲ್ಯಾಣ-ಮಂಗಲ-ಶಿವ) ಆದ ದೇವರು. ಆದುದರಿಂದ ವೀರರ ದೇವರು. ದೇವನೂ ವೃಷಭನು. ಅನುಯಾಯಿಗಳೂ ವೃಷಭರು (ಬಸವಣ್ಣನವರು). ವೀರದೇವರ ಆರಾಧಕರು ವೀರಕ್ಷತ್ರಿ ಯರಾಗಿರುವುದು* ಸ್ವಾಭಾವಿಕವಲ್ಲವೆ?

'ವೀರ' ಶೈವರು

ಬರಿ 'ಶೈವರು' ಎಂದಿಷ್ಟೇ ಹೇಳಿದ್ದರೆ ಆಗುತ್ತಿರಲಿಲ್ಲವೆ? ರುದ್ರ-ಶಿವನ ಅನುಯಾಯಿಗಳಲ್ಲಿ ಒಂದು ಪಂಗಡಕ್ಕೆ 'ವೀರ' ಶೈವರೆಂದು ಹೆಸರು ಬಂದ ಕಾರಣವು ಆವುದು? ಸ್ವಲ್ಪ ಸ್ಪಷ್ಟವಾಗಿಯೇ ಹೇಳಬೇಕಾದರೆ ವಿಚಾರಶೀಲರಾದ ವೀರಶೈವರಿಗೂ ಇದೊಂದು ದೊಡ್ಡ ಸಮಸ್ಯೆಯೇ ಆಗಿದೆ. ರುದ್ರ-ಶಿವನ ಬಗ್ಗೆ ವೀರ ಅಭಿಮಾನವುಳ್ಳವರೆಂದು ಇವರಿಗೆ ವೀರ-ಶೈವರೆಂಬ ಹೆಸರು; ಹೀಗೊಂದು ಊಹೆಯುಂಟು. ಇನ್ನೊಬ್ಬರು ಹೇಳಿದರು; ವೀ ಮತ್ತು ರ ಈ ಪವಿತ್ರ ವರ್ಣಗಳಿಗೆ ಕೆಲವೊಂದು ಗುಹ್ಯಾರ್ಥವುಂಟು. 'ವಿ' ಎಂದರೆ ವಿದ್ಯಾ, 'ರ' ಎಂದರೆ ರತನಾದವನು; ಶಿವಜೀವೈಕ್ಯ ವಿದ್ಯೆಯಲ್ಲಿ ರತನಾದವನೇ ವೀರ-ಶೈವನು, ಎಂದು ಹೇಳುವರು. ಇದು ಸಶಾಸ್ತ್ರೀಯ ವ್ಯುತ್ಪತ್ತಿಯೆಂದು ವೀರಶೈವರೂ ಹೇಳಲಾರರು. ಆದರೆ, ನನಗೆ ತಿಳಿದ ಮಟ್ಟಿಗೆ ಈ ಶಬ್ದದ ಮೂಲವು ಋಗ್ವೇದದಲ್ಲಿದೆ. ರುದ್ರನು ವೃಷಭನು ಎಂದರೆ ವೀರನು. ಆದುದರಿಂದ ಆತನ ಉಪಾಸಕರೂ ವೀರರು; ಆದರಿಂದ ಈ ಹೆಸರು. ಹೀಗೆ ಬರಿ ತರ್ಕಿಸಿ ಇದನ್ನು ಎಣಿಕೆ ಹಾಕಬೇಕಾದುದೂ ಇಲ್ಲ.

ಇಮಾ ರುದ್ರಾಯ ತವಸೇ ಕಪರ್ದಿನೇ ಕ್ಷಯದ್ವೀರಾಯ ಪ್ರ ಭರಾಮಹೇ ಮತೀಃ।
ಯಥಾಶಮಸದ್ದ್ವಿಪದೇ ಚತುಷ್ಪದೇ ವಿಶ್ವಂ ಪುಷ್ಟಂ ಗ್ರಾಮೇ ಅಸ್ಮಿನ್ನನಾತುರಮ್॥[೩೧]

ಬಲಿಷ್ಠನೂ, ಜಟಾಧಾರಿಯೂ ವೀರಪುತ್ರರನ್ನುಳ್ಳವನೂ ಆದ ರುದ್ರನನ್ನು ಕೊಂಡಾಡೋಣ. ಆದರಿಂದ ಈ ಊರಲ್ಲಿ ಎರಡು ಕಾಲಿನವರ ಹಾಗು ನಾಲ್ಕು ಕಾಲಿನವರ ಕಲ್ಯಾಣವಾಗಿ, ಎಲ್ಲರೂ ನಿರೋಗಿಗಳೂ ಪುಷ್ಟರೂ ಆಗುವರು. ಇದೊಂದೇ ಋಚೆಯಲ್ಲಿ ಅಲ್ಲ; ಇದರ ಮುಂದಿನ ಮಂತ್ರಲ್ಲಿಯೂ ಬೇರೆ ಮಂಡಲಗಳಲ್ಲಿಯೂ ರುದ್ರ-ಶಿವನು ವೀರರ ತಂದೆ, ವೀರರ ಒಡೆಯ ಎಂಬ ಮಾತು ಅಲ್ಲಲ್ಲಿ ಬಂದಿದೆ. ಶಿವ (ರುದ್ರ)ನ ಪುತ್ರರು ('ಶಿವಪುತ್ರ') ಎಂದು ಗೌರವದಿಂದ ಹೇಳಿಕೊಳ್ಳುವ ಮತ್ತು ಆ ಬಗೆಯಾದ ದೃಢಶ್ರದ್ಧೆಯಿರುವ ಶಿವಭಕ್ತರಿಗೆ ಅಲ್ಲದೆ, ಬೇರೆ ಇನ್ನಾರಿಗೂ ವೀರ (ಶೈವ) ರೆಂಬ ಹೆಸರು ಸಮರ್ಪಕವಾಗಲಾರದು. ಕರ್ಣಾಟದಲ್ಲಿಯೇ ಈ 'ವೀರ'ರು ರುದ್ರನ ಅನುಯಾಯಿಗಳಾದ ರುದ್ರಿಯರು ಇರುತ್ತಿರುವುದರಿಂದ ಈ ನಾಡಿನ ಜನಾಂಗಗಳ ವೇದಕಾಲದ ಐತಿಹ್ಯವನ್ನು ಅರಿತುಕೊಳ್ಳಲು ಈ ಶಬ್ದವು ಬಹಳ ಉಪಯುಕ್ತವಾಗಿದೆ. 'ವೀರ' ಬಣಂಜುಗಳು[೩೨] ವೀರ ಪಂಚಾಳರು ಎಲ್ಲರೂ ರುದ್ರಿಯರೇ.

ನಮ್ಮ ನಾಡಿನ ಈ ಜನಗಳ ವೇದಕಾಲದ ಸಂಬಂಧಗಳನ್ನು ನೆನಪಿಗೆ ತಂದುಕೊಡುವ ಮಹತ್ವ -ಶಬ್ದಗಳಲ್ಲಿ 'ಗಣ' ಎಂಬುದೂ ಒಂದು. ಇದು ಈಗಲೂ ನಮ್ಮಲ್ಲಿ ಬಳಕೆಯಲ್ಲಿರುವ ಜೀವಂತ ಶಬ್ದ!

---

* ಈ ವಿಚಾರದ ವಿಸ್ತೃತ ಚರ್ಚೆ ಹಾಗು ವ್ಯಾಖ್ಯಾನವನ್ನು 'ಕರ್ಣಾಟದ ವೀರಕ್ಷತ್ರಿಯರು' ಪುಸ್ತಕದಲ್ಲಿ ಆಗಿದೆ. ಕಂನಾಡ ಮೂಲಿಗರನ್ನು ಕುರಿತ ಅಧ್ಯಯನವು ಪರ್ಯಾಯವಾಗಿ ಧನಗಾರರು, ಹಟ್ಟಿಕಾರರ ಕಡೆ ಕರೆದೊಯ್ಯುತ್ತದೆ. ಆಸಕ್ತರು ಗಮನಿಸಬಹುದು. (ಸಂ.)

ವೇದಕಾಲದಿಂದ ಬಂದುದು! ರುದ್ರಗಣಕ್ಕೆ ವೇದದಲ್ಲಿ ಮುಖ್ಯವಾಗಿ ಮರುದ್ಗಣವೆಂದು ಹೆಸರಿದೆ. 'ವೃಷ' ಗಣಂಗಳ ಹೆಸರು ಒಂದು ಕಡೆಯಲ್ಲಿ (೯, ೯೭, ೮.) ಬಂದಿದೆ. ಇವರು ಹಾಡುತ್ತ ಅಲೆದಾಡುವ ಗಣಂಗಳೆಂದು ತಿಳಿಯುತ್ತದೆ. 'ವಾಣ' ಎಂಬ ವಾದ್ಯದೊಂದಿಗೆ ಹಾಡುವರು. 'ವೃಷ' (ಭ?) ಗಣಂಗಳು ಇಂದಿನ ವೀರಶೈವರೊಳಗಿನ ಸಾರುವ ಅಯ್ಯನವರ ನೆನಪುಕೊಡುತ್ತಾರೆ. 'ಶಿವಾಃ' ಎಂಬ ಹೆಸರಿನ ಮಂದಿಯು ಇದ್ದು, ಅವರ ಸಂಬಂಧವು ವಿಷಾಣಿನ್ (ಕೋಡಿನವರು) ಮೊದಲಾದ ಕೆಲವರೊಡನೆ ಬಂದುದು ಗೊತ್ತಾಗುತ್ತದೆ.[೩೩]

ಇನ್ನು, ಡಾ. ಸುನೀತಿ ಕುಮಾರ ಚಟರ್ಜಿಯವರ ಅಭಿಪ್ರಾಯದಂತೆ ವೇದದಲ್ಲಿ ಬಂದಿರುವ 'ಗಣ' ಶಬ್ದವು ಸಂಸ್ಕೃತವೇ ಅಲ್ಲ. 'ಗಣ' ಶಬ್ದಕ್ಕೆ ಸಮೂಹಾರ್ಥವಿದೆ. ಗಳ್ (ಗಳು) ಎಂಬುದು ದ್ರಾವಿಡ ಭಾಷಾವರ್ಗದಲ್ಲಿ ಬಹುವಚನದ ಪ್ರತ್ಯಯ. ಳ-ಣ ಆದುದರಿಂದ ಗಣ (ಸಮೂಹ)ಎಂಬ ಶಬ್ದವು ದ್ರಾವಿಡ ಭಾಷಾವರ್ಗಕ್ಕೆ ಸಂಬಂಧಪಟ್ಟದೆಂದು ಊಹಿಸಬಹುದಾಗಿದೆ. ನಿಜ, ಶಿ(ಂ)ನು ಯಾವ ಬಳಗದವನೊ ಆ ಬಳಗದವರೆ ಅವನ ಗಣಗಳು. ಶಿ(ಂ)ವ ಶಬ್ದವು ದ್ರಾವಿಡ; ಗಣ ಶಬ್ದವೂ ದ್ರಾವಿಡ! ಈ (ಮರುತ್) ಗಣಕ್ಕೆ 'ವೀರ' ರೆಂಬ ವಿಶೇಷಣವಿದ್ದುದೂ ನೆನಪಿಡುವಂತಿದೆ.

ಮರುತರು ಶಿವನ ಗಣ[೩೪]. ಶಿವನ ಗಣಕ್ಕೆ 'ಸತ್ವಾನಃ' ಎಂದು ಒಂದೆಡೆಗೆ ಹೇಳಿದೆ. ಎಂದರೆ ಸತ್ವಶಾಲಿಗಳು, ಬಲಶಾಲಿಗಳು ಎಂದು ಅದರ ಅರ್ಥ. ಅದರಂತೆ ಭೂತಾನಾಂ ಪತಿ ಎಂದು ಶಿವನಿಗೂ, ಭೂತಗಣ ಎಂದು ಆತನ ಪರಿವಾರಕ್ಕೂ ಹೆಸರಿದೆ. ಭೂತ ಎಂದರೆ ಪ್ರಾಣಿ ಎಂದು ಅರ್ಥವಾಗುವುದು ನಿಜ. ಆದರೆ, ಇಲ್ಲಿ ಅಸುರ ಶಬ್ದದಂತೆ. 'ಭೂತ' ಶಬ್ದವೂ ದ್ವ್ಯರ್ಥವುಳ್ಳದಾಗಿದೆ. ರುದ್ರನಂತೆ ಮರುದ್ಗಣಕ್ಕೂ 'ಅಸುರರು' ಎಂದುದುಂಟು ವೇದದಲ್ಲಿ. ಆದರೆ, ಈ 'ಅಸುರ' ಶಬ್ದಕ್ಕೆ ಒಳ್ಳೆಯ ಅರ್ಥವಾಗುವಂತಿದೆ. ಆದರು ಸಾಯಣಾಚಾರ್ಯರು ತಮ್ಮ ಭಾಷ್ಯದಲ್ಲಿ ಒಂದೆಡೆಗೆ ಹೇಳಿದ ಒಂದು ಕಥೆಯು ವಿಚಾರಾರ್ಹವಾಗಿದೆ; 'ಇದಂ ಪಿತ್ರೇಮರುತಾಂ' ಎಂದು ಋಗ್ವೇದದಲ್ಲಿ ಬಂಧ ಋಚೆಯ ಮೇಲೆ ಭಾಷ್ಯ ಬರೆಯುವಾಗ ಸಾಯಣರು ಹೇಳಿದ ಕತೆ ಹೀಗಿದೆ:

"ರುದ್ರಸ್ಯ ಚ ಮರುತಾಂ ಪಿತೃತ್ವಂ ಏವಂ ಆಮ್ನಾಯತೇ
ಪುರಾ ಕದಾಚಿತ್ ಇಂದ್ರಃ ಅಸುರಾನ್ ಜಿಗಾಯ
ತದಾನೀಂ ದಿತಿಃ ಅಸುರಮಾತಾ ಇಂದ್ರಹನನ ಸಮರ್ಥಂ ಪುತ್ರಂ
ಕಾಮಯಮಾನಾ ತಪಸಾ ಭರ್ತುಃ.
ಸಕಾಶಾತ್ ಗರ್ಭಂ ಲೇಭೇ. ಇಮಂ ವೃತ್ತಾಂತಂ ಅವಗಚ್ಛನ್
ಇಂದ್ರೋ ವಜ್ರಹಸ್ತಃ ಸನ್ ಸೂಕ್ಷ್ಮರೂಪೋ ಭೂತ್ವಾ,
ತಸ್ಯಾ ಉದರಂ ಪ್ರವಿಶ್ಯ ತಂ ಗರ್ಭಂ ಸಪ್ತಧಾಬಿಭೇದ.
ಪುನರಪಿ ಏಕೈಕಂ ಸಪ್ತಖಂಡಂ ಅಕರೋತ್.
ತೇ ಸರ್ವೇ ಗರ್ಭೈಕ ದೇಶಾಃ ಯೋನೇರ್ನಿಗತ್ಯ ಅರುದನ್.
ಏತಸ್ಮಿನ್ ಅವಸರೇ ಲೀಲಾರ್ಥಂ ಗಚ್ಛಂತೌ ಪಾರ್ವತೀ
ಪರಮೇಶ್ವರೌ ಇಮಾನ್ ದದೃಶತುಃ.
ಮಹೇಶಂ ಪ್ರತಿ ಪಾರ್ವತೀ ಏವಂ ಅವೋಚತ್.
ಇಮೇ ಮಾಂಸಖಂಡಾಃ ಯಥಾ ಪ್ರತ್ಯೇಕಂ ಪುತ್ರಾ.
ಸಂಪದ್ಯಂತಾಂ ಏವಂ ತ್ವಯಾ ಕಾರ್ಯಂ, ಮಯಿಚೇತ್ ಪ್ರೀತಿಃ ಅಸ್ತಿ ಇತಿ.
ಸಃ ಮಹೇಶ್ವರಃ ತಾನ್ ಸಮಾನ ರೂಪಾನ್ ಸಮಾನ ವಯಸಃ
ಸಮಾನಾಲಂಕಾರಾನ್ ಪುತ್ರಾನ್ ಕೃತ್ವಾ ಗೌರ್ಯೈಃ ಪ್ರದದೌ.
ತವ ಇಮೇ ಪುತ್ರಾಃ ಸಂತು ಇತಿ ಅತಃ
ಸರ್ವೇಷು ಮಾರತೇಷು ಸೂಕ್ತೇಷು ಮರುತಃ ರುದ್ರ-ಪುತ್ರಾಃ ಸ್ತೂಯಂತೇ"[೩೫]

ಸಾಯಣರ ಮೇಲಣ ಕತೆಯು ಇತಿಹಾಸವಲ್ಲ; ಅದು ಕತೆ. ಆದುದರಿಂದ, ಇದು ವಸ್ತುಸ್ಥಿತಿಯೆಂದು (fact) ನಂಬುವುದು ಸರಿಯಾಗದು. ಮರುದ್ಗಣ-ರುದ್ರಗಣಗಳ ಬಗ್ಗೆ ನಮ್ಮ ದೇಶದಲ್ಲಿ ಕೆಲವೊಂದು ಪಂಗಡದವರಲ್ಲಿ ಯಾವ ಬಗೆಯ ಮನೋಭಾವವು (notion) ಇದ್ದಿತು ಎಂಬುದು ಮಾತ್ರ ನಿಶ್ಚಿತವಾಗಿ ತಿಳಿಯಬಲ್ಲದು.

ಮರುತ ಎಂದರೆ ಬಿರುಗಾಳಿ; ಮರುತರು ಝಂಝಾವಾತದ-ಸುಟ್ಟುರೆ ಗಾಳಿಯ ದೇವರು (Storm God) ಎಂಬ ಬಗ್ಗೆ ಯಾರಿಗೂ ಸಂದೇಹವುಂಟಾಗದಷ್ಟು ಅಲ್ಲಿಯ ವರ್ಣನೆಗಳು ಸ್ಪಷ್ಟವಾಗಿವೆ. ಆದರು ವೇದಗಳ ವರ್ಣನೆಗಳಲ್ಲಿ ಒಂದು ಚಮತ್ಕಾರವಿದೆ. ಅಗಾಧವಾದ ಅರ್ಥದ ಸೊಗಸಿದೆ. ಅಭೂತಪೂರ್ವವಾದ ಪ್ರತಿಭೆಯ ನಿರರ್ಗಳ ವಿಲಾಸವಿದೆ. ದ್ರಷ್ಟಾರನಾದ ಋಷಿಯು ಕವಿಯಾಗಿ 'ಚಂದ'ದಿಂದ (ಛಂದೋಬದ್ಧವಾಗಿ) ಹಾಡಲಾರಂಭಿಸಿದನೆಂದರೆ ಭೂಲೋಕದ ಭೌತಿಕ ಸಂಗತಿಗಳನ್ನು ನಿಮಿತ್ತಮಾತ್ರಕ್ಕೆ ಸೋಂಕಿ, ಫಕ್ಕನೆ ಬಾಂದಳಕ್ಕೆ ಹಾರುವನು; ಅಲ್ಲಿಂದಲೂ ಮೇಲೆ ಮೇಲೆ, ನೆಲ ಮುಗಿಲುಗಳನ್ನು ಮೀರಿಹೋಗಿ ಈ ಹಾಡಿನಲ್ಲಿ ಅನುಭಾವದ (mystic) ಅಮೃತದ ಸವಿದೋರುವನು! ಆದುದರಿಂದ, ಋಗ್ವೇದದೊಳಗಿನ ಅನೇಕ ವರ್ಣನೆಗಳನ್ನೋದುವಾಗ ನೆಲದ ಮೇಲಿನ ಆಗುಹೋಗುಗಳ-ಐತಿಹಾಸಿಕ ಘಟನೆಗಳ ಕೆಲವೊಂದು ಗುರುತು ಸಿಕ್ಕುವುದೆಂದು ಅವನ್ನು ಗಟ್ಟಿಯಾಗಿ ಹಿಡಿದಿಡಬೇಕೆನ್ನುವಷ್ಟರಲ್ಲಿ ಆ ವರ್ಣನೆಗಳು ನಮ್ಮ ಕೈಯಿಂದ ಕೊಸರಿಕೊಂಡು ಮುಗಿಲಿಗೆ ನೆಗೆಯುವುವು; ಮಾಯವಾಗುವವು. 'ಆ' ಎಂದು ಬಾಯಿ ಬಿಡಿಸುವುವು; ಆ-ಶ್ಚರ್ಯಪಡಿಸುವುವು. ಆತನತ್ತ ಮನಸ್ಸು ಸೆಳೆಯುವುವು! ಇಲ್ಲಿಯ (ಭೂಲೋಕದ) ಮಾತಿನ ಸೂತ್ರವು ನಡುವೆ ತಪ್ಪಿದ್ದು ತಪ್ಪಿಯೇ ಹೋಗುವುದು. ಆದುದರಿಂದ, ಅವುಗಳಲ್ಲಿ ಇಲ್ಲಿಯ ಸಂಗತಿಗಳ ಸೂತ್ರಬದ್ಧ ವಿವರಣೆಯು ಸಿಕ್ಕುವುದೆಂಬ ಆಸೆಯು ವ್ಯರ್ಥ ಅಥವಾ ಅವುಗಳಲ್ಲಿ ಕೇವಲ ಆಧ್ಯಾತ್ಮಿಕ ಅರ್ಥವೆ ಇದೆಯೆಂಬುದೂ ಸುಳ್ಳು. ಆತನ ನೆನಪು ಕೊಡಲಿಕ್ಕೆ ಇದನ್ನು (ಇಲ್ಲಿಯ ಘಟನೆಗಳನ್ನು) ಉಪಯೋಗಿಸಿಕೊಂಡುದುದಾಗಿದೆ. ರಾಮಾಯಣಾದಿ ಮುಂದಿನ ಕಾಲದ ಗ್ರಂಥ ಗಳಲ್ಲಿಯೂ, ನಮ್ಮ ನಾಡಿನ ಇತಿಹಾಸವನ್ನು ಬರೆವ ಈ ವೈದಿಕ ಋಷಿಗಳ ಪರಂಪರೆಯ ಅನುಕರಣವೇ ಕಂಡುಬರುತ್ತಿದ್ದರೂ ಅದು ಬರುಬರುತ್ತ ಅಂಧಾನುಕರಣವಾಗಿ, ಆ, ಈ ಅವಾರ್ಚೀನ ಕಂತೆಪುರಾಣಗಳಲ್ಲಿಯ ಹುಚ್ಚು ಪೆಚ್ಚು ಮಾತುಗಳ ಹಾಳು ಹರಟೆಯಲ್ಲಿ ಪರಿಣಮಿಸಿದುದನ್ನು ಕಾಣಬಹುದು!

ಪ್ರಸ್ತುತ ಮರುದ್ಗಣ, ಎಂದರೆ ರುದ್ರಗಣ; ಇದರ ವಿಚಾರ; ವೀರಶೈವರು ತಮ್ಮಲ್ಲಿ 'ತ್ರಿಷಷ್ಟಿ' ಪುರಾತನರು ಎಂದು ಹೇಳುವುದೊಂದು ವಾಡಿಕೆ. ಆದರೆ, ಅವರು ಅರುವತ್ತುಮೂರೇ ಏಕೆ? ಎಂಬುದೊಂದು ಪ್ರಶ್ನೆ. ಈ ಪ್ರಶ್ನೆಯನ್ನು ಡಾ. ಶಿ. ಚೆ. ನಂದೀಮಠರಿಗೆ ಕೇಳಿದೆ. ಇದು ಜೈನರ ತ್ರಿಷಷ್ಟಿ ಶಲಾಕಾಪುರುಷರ ಅನುಕರಣವಿರಬೇಕೆಂದು ಅವರು ಅಭಿಪ್ರಾಯಪಟ್ಟರು. ಇನ್ನೂ ಒಂದು ಸೋಜಿಗ: ಈಗ ನಮ್ಮ ವೀರಶೈವರು ಹೇಳುವ ಪುರಾತನರ ಹೆಸರುಗಳೆಲ್ಲವೂ ತಮಿಳುನಾಡಿನವು ಆಗಲಿ, ಅವರಿಗಾದರೂ ಪುರಾತನರು ಎಂಬ ಸಂಜ್ಞೆ ಸಮರ್ಪಕವಾಗಿ ಅನ್ವಯಿಸುವುದೆ? ಊಂ ಹುಂ! ವೀರಶೈವ ಮತದ ಪುರಾತನತ್ವದ ಮಾನದಿಂದ ತಮಿಳುನಾಡಿನ ಅರುವತ್ತುಮೂರು ಪುರಾತನರು ನಿಜವಾಗಿಯೂ ಪುರಾತನರೇ ಅಲ್ಲ; ತೀರ ಅರ್ವಾಚೀನರು. ಐತಿಹಾಸಿಕ ಕಾಲದೊಳಗಿನವರು. ಮೊನ್ನೆ ತಾನೆ ಆಗಿಹೋದವರು. ನಮ್ಮ ನಾಡಿನಲ್ಲಿಯೂ ಆಗಿಹೋದ ತ್ರಿಷಷ್ಟಿಪುರಾತನರ ಬೇರೆ ಹೆಸರುಗಳು ಇದ್ದರೂ ಇರಬೇಕೆಂದು ನನ್ನ ಊಹೆ. ಕರ್ಣಾಟ-ಮಹಾರಾಷ್ಟ್ರದಲ್ಲಿ-ಎಂದರೆ ಪ್ರಾಚೀನ ವಿಶಾಲ ಕರ್ಣಾಟದಲ್ಲಿ 'ತ್ರಿಷಷ್ಟಿ' ಶಬ್ದಕ್ಕೆ ಬಂದಿರುವ ವಿಚಿತ್ರ ಅರ್ಥವು ವಿಚಾರಾರ್ಹವಾಗಿದೆ. ಒಂದು ಧರ್ಮದವರ ಒಂದು ಪವಿತ್ರ ಶಬ್ದವು ಇನ್ನೊಂದು ಧರ್ಮದವರ ನಗೆಗೆ ಕಾರಣವಾಗುತ್ತಲಿರುತ್ತದೆ. ಜೈನರ 'ಭವ್ಯರು' ಶಬ್ದಕ್ಕೆ ಬಂದಿರುವ ಅರ್ಥವನ್ನು ನೋಡಿದರೆ ನಮ್ಮ ಈ ಭಾಗದಲ್ಲಿಯೂ 'ತ್ರಿಷಷ್ಟಿ'ಗಳು ಆಗಿಹೋಗಿರಬೇಕೆಂದು ನಿಶ್ಚಿತವಾಗಿ ತಿಳಿದುಕೊಳ್ಳಬಹುದಾಗಿದೆ. ಆರೇಮಾತಿನಲ್ಲಿ 'ತಿರಸಟ' ಎಂದೂ ಕನ್ನಡದಲ್ಲಿ 'ತ್ರಿಸಟ್ಟಿ' ಅಥವಾ 'ತಿರಸಟ್ಟಿ' ಎಂದೂ ಒಂದು ಪಡೆನುಡಿ (idiom) ಇದೆ. ಇದನ್ನು ಸಿಡುಕ, ವಿಚಿತ್ರಮನುಷ್ಯ, ನಾಲ್ಕುಮಂದಿಗಿಂತ ಬೇರೆ ರೀತಿಯವ, ತೃತೀಯಃ ಪಂಥಿ ಎಂಬರ್ಥದಲ್ಲಿ ಸುಮಾರಾಗಿ ಉಪಯೋಗಿಸುವುದುಂಟು. ಯಾವುದೊಂದು

ವಿಶಿಷ್ಟ ನಡೆನುಡಿಯವರನ್ನು ಕಣ್ಣೆದುರು ಕಾಣದೆ ಈ ಬಗೆಯ ವಿಶಿಷ್ಟಾರ್ಥಕ ಮಾತುಗಳು ಭಾಷೆಯಲ್ಲಿ ಎಂದೂ ತಲೆದೋರಲಾರವು. ಇನ್ನು ಈ ಪಡೆನುಡಿಯು ವೀರಶೈವರ ತ್ರಿಷಷ್ಠಿ ಪುರಾತನರಂತೆ ಜೈನರ ತ್ರಿಷಷ್ಠಿ ಶಲಾಕಾ ಪುರುಷರ ಮೇಲಿಂದಲೂ ಬಂದಿರುವ ಸಂಭವವಿದೆ. ಏಕೆಂದರೆ, ಈ ನಾಡಿನಲ್ಲಿ ಜೈನಧರ್ಮವು ಅತ್ಯಂತ ವೈಭವದಿಂದ ಬೆಳಗಿದ ಕಾಲವೊಂದುಂಟು. ವೇದದೊಡನೆ ಇರುವ ವೀರಶೈವರ ಹತ್ತುಗೆಯನ್ನು ನೆನೆದರೆ ವೀರಶೈವರ ಪರಂಪರೆಯ ಉಗಮವು ವೇದದಲ್ಲಿಯೆ ಉಂಟೆಂದು ನನ್ನ ಮನವರಿಕೆಯಾಗಿದೆ. ಜೈನರಿಂದ ಅನುಕರಿಸಿ ಅರುವತ್ತುಮೂರು ಪುರಾತನರನ್ನು ನಿರ್ಮಿಸಿಕೊಂಡಿಲ್ಲ. ಋಗ್ವೇದದಲ್ಲಿ ರುದ್ರ-ಶಿವನು ಇದ್ದಾನೆ; ಆತನ ಗಣಗಳು ಬಂದಿದ್ದಾರೆ. ರುದ್ರಾಧ್ಯಾಯದೊಳಗಿನ ಹೆಸರಿನ ಹಲವು ಅವಶೇಷಗಳು ವೀರಶೈವರ ವೈಶಿಷ್ಟ್ಯವಾಗಿದೆ. ಅದರಂತೆ 'ತ್ರಿಷಷ್ಠಿ' ಪುರಾತನರ ಕಲ್ಪನೆಗೂ ಋಗ್ವೇದವೇ ಮೂಲಾಧಾರವಾಗಿದೆ.

ಋಗ್ವೇದದಲ್ಲಿ ಬಂದಿರುವ ರುದ್ರಗಣದ (ಮರುತರ) ವರ್ಣನೆಗಳೊಳಗಿನ ಆಕಾಶತತ್ವದ ಮಾತುಗಳನ್ನು ಬೇರ್ಪಡಿಸಿ ಭೂಲೋಕದ ವಿವರಣೆಗೆ ಸರಿಹೋಗುವ ಮಾತುಗಳನ್ನಷ್ಟೇ ಎತ್ತಿಕೊಂಡರೆ, ವೀರಶೈವ ಪರಂಪರೆಯ ರುದ್ರಗಣದ ಸಂಪೂರ್ಣ ಚಿತ್ರವನ್ನು ಅಲ್ಲಿ ಕಂಡುಕೊಳ್ಳಬಹುದಾಗಿದೆ. 'ಪುರಾತನರು', ಶಿವ-ಪುತ್ರರು ಅರುವತ್ತುಮೂರು, ಮಂದಿಯೇ ಏಕೆ? ಋಗ್ವೇದದೊಳಗಿನ ಮರುತರ ಸಂಖ್ಯೆಯಿಂದ ನಿಃಸಂದಿಗ್ಧವಾಗಿ ನಿರ್ಣಯಿಸಬಹುದಾಗಿದೆ. ರುದ್ರನೇ ವೃಷಭ. ರುದ್ರಿಯರು ಎಂದರೆ ರುದ್ರಪುತ್ರರು-ಮರತರು; ಇವರು ಗೋ-ಪುತ್ರರೆಂದು, ಮೇಲಣ ರೂಪಕವನ್ನೇ ಮುಂದುವರಿಸಿದರೆ, ಸಹಜ ಮನೋಹರವಾಗಿ ಸಿದ್ಧವಾಗುತ್ತದೆ. ನಮ್ಮ ಹಳ್ಳಿಯ ವೀರಶೈವ ರೈತರು ಬಹಳ ಭಕ್ತಿಭಾವದಿಂದ ಅಂತಃಕರಣಪೂರ್ವಕವಾಗಿ ತಾವು ಬಸವಣ್ಣನ (ಶಿವ-ರುದ್ರನು) ಮಕ್ಕಳೆಂದು ಹೇಳಿಕೊಳ್ಳುವುದುಂಟು! ನಮ್ಮ ನಾಡಿಗರ ನುಡಿಯು ಋಗ್ವೇದದ ಮಂತ್ರಗಳ (೧, ೮೫, ೩; ೮.೨೦ ಮುಂತಾದವು) ಕನ್ನಡ ಭಾಷಾಂತರವೇ ಆಗಿದೆ.

ರುದ್ರಗಣಕ್ಕೆ 'ಗೋಮಾತರಃ' ಎಂದು ಋಗ್ವೇದದಲ್ಲಿ ಹೇಳಿದೆಯಷ್ಟೆ. ಮರುತರನ್ನು ಕುರಿತು ಮ್ಯಾಕಡೊನೆಲ್ಲರು ಸಂಗ್ರಹಿಸಿದ ಸಂಗತಿಗಳ ಕೆಳಗೆ ಕೊಟ್ಟ ಆವಶ್ಯಕ ಭಾಗವನ್ನು ಓದಿಕೊಂಡರೆ ಇನ್ನೂ ಲೇಸು.

> They (Maruts) form a troop, gana (a word generally used in connection with them)or Shardhas, of deities mentioned only in the plural.....They are sons of Rudra, being also often called Rudras and some times Rudriyas, and of Prishni often also receiving the epithet prishni - matarah, 'having Prishni for their mohter'.The cow Prishni, or simply a cow is their mother (8.83) and they bear the epithet Gomatarah 'having a cow for their mother....and once they are called the sons of heaven (10.77.2), being also referred to as the heroes (ವೀರಾಃ) of heaven (1, 64.4; 122; 5.54.10) or as the males (ಮರ್ಯಾಃ) of heaven. Once they are said to have the ocean for their mother, (ಸಿಂಧುಪುತ್ರಾಃ) elsewhere they are said to be self born.[೩೬]

ಋಗ್ವೇದದ ಈ ಒಂದು ಋಚೆಯೂ ಅರ್ಥವತ್ತಾಗಿದೆ.

> ತೇ ಜಜ್ಞಿರೇ ದಿವಃ ಋಷ್ವಾಸಃ ಉಕ್ಷಣಃ ರುದ್ರಸ್ಯ ಮರ್ಯಾಃ ಅಸರಃ ಅರೇಪಸಃ।
> ಪಾವಕಾಸಃ ಶುಚಯಃ ಸೂರ್ಯಾಃS ಇವ ಸತ್ವಾನಃ ನ ದ್ರಪ್ಸಿನಃ ಘೋರSವರ್ಪಸಃ॥[೩೭]

ವಿದ್ಯಾನಿಧಿ ಚಿತ್ರಾವ ಶಾಸ್ತ್ರಿಗಳು ಇದರ ಭಾಷಾಂತರವನ್ನು ಹೀಗೆ ಮಾಡುತ್ತಾರೆ: "ಆ ರುದ್ರಪುತ್ರ ಮರುತರು ದೇವಲೋಕದಲ್ಲಿ ಹುಟ್ಟಿದವರು; ಮಹಾನ್ ವೀರರು; ನಿರ್ದುಷ್ಟರು; ಪವಿತ್ರರು; ಸೂರ್ಯನಂತೆ ತೇಜಸ್ವಿಗಳು; ಮಳೆಗರೆವವರು; ಬಂಟನಂತೆ ಭಯಂಕರರು."

ಈ ವರ್ಣನೆಯಲ್ಲಿ ಮರುತರಿಗೆ 'ಅಸುರರು' ಎಂದುದುಂಟು. ಸಾಯಣರು 'ಅಸುರಾಃ ಶತ್ರೂಣಾಂ ನಿರಸಿತಾರಃ' (ಹಗೆಗಳನ್ನು ಓಡಿಸುವವರು) ಎಂದು ಅರ್ಥಮಾಡಿದ್ದಾರೆ. ಈ ಅರ್ಥವು ಎಲ್ಲರಿಗೂ ಮಾನ್ಯವಿದೆ. ಈ ಋಚೆಯಲ್ಲಿಯೇ 'ಮರ್ಯಾಃ' ಎಂಬುದಿನ್ನೊಂದು ಪದವಿದೆ. ಸಾಯಣರು 'ಮರ್ಯ ಶಬ್ದೋ ಮನುಷ್ಯವಾಚೀ' ಎಂದು ಹೇಳಿದ್ದಾರೆ. ಆದರೆ, ಮುಂದೆ

'ಇಹಮರುತಾಂ ಮರ್ತ್ಯತ್ವಸಂಭವಾತ್ ಪುತ್ರಾಃ
ಇತಿ ಅಸ್ಮಿನ್ ಅರ್ಥೇ ಪರ್ಯವಸ್ಯತಿ'

ಈ ಸಂದರ್ಭದಲ್ಲಿ ಮರುತರಿಗೆ ಮರ್ಯರು ಎಂದರೆ ಮನುಷ್ಯರು ಎಂದು ಅರ್ಥ ಮಾಡಿದರೆ ಸರಿಯಾಗದು. ಏಕೆಂದರೆ ಮರುತರು ರುದ್ರಗಣ; ಮರ್ಯಾಃ ಎಂದರೆ ಮನುಷ್ಯರು; ಮಕ್ಕಳು. 'ರುದ್ರಸ್ಯ ಮರ್ಯಾಃ' ಎಂದರೆ ರುದ್ರಿಯರು ರುದ್ರನ ಉಪಾಸಕ ಜನರು. ಆದರೆ, ಇವರು ದೇವಲೋಕದೊಳಗಿನ ಮರುದ್ಗಣವೆಂದು ಅರ್ಥ ಮಾಡಬೇಕೆಂದು ಸಾಯಣರ ಅಭಿಪ್ರಾಯ ಆಗಬಹುದು. ಆದರೆ, ಈ ಗಣಗಳ ವರ್ಣನೆಯು ಕೇವಲ ದೇವಲೋಕಕ್ಕೆ ಸಂಬಂಧಿಸಿದುದೇ ಇದೆಯೆಂದು ಹೇಳಲಿಕ್ಕಾಗದು. ಭೂಲೋಕದಲ್ಲಿ ಕಂಡುದು ದೇವಲೋಕದಲ್ಲಿಯೂ ಉಂಟೆಂಬ ಶ್ರದ್ಧೆಯಿಂದ ದಿವ್ಯರೂಪದಲ್ಲಿ ಬಗೆದು ಭಾವಿಸಿ ಮಂತ್ರರೂಪದಲ್ಲಿ ಉಸುರಿರಬೇಕು. ವೀರಶೈವ ಪರಂಪರೆಯನ್ನು ನೋಡಿದರೆ ಕೈಲಾಸದಲ್ಲಿ ಶಿವಗಣಗಳಿರುವಂತೆ ಭೂಲೋಕದಲ್ಲಿ ಗಣಂಗಳುಂಟು; ಗಣಾರಾಧನೆಯುಂಟು. ಅಲ್ಲಿಯಂತೆ ಇಲ್ಲಿ; ಇಲ್ಲಿಯಂತೆ ಅಲ್ಲಿ. ಈ ಬಗೆಯ ಶ್ರದ್ಧೆಯನ್ನು ಜಗತ್ತಿನ ಎಲ್ಲ ಧರ್ಮಗಳಲ್ಲಿಯೂ ಕಂಡುಕೊಳ್ಳಬಹುದು. ಈ ತತ್ತ್ವಕ್ಕನುಸರಿಸಿ ದೇವಲೋಕದಲ್ಲಿರುವ ರುದ್ರಗಣದ ಸಂಖ್ಯೆಯು ತಿಳಿದರೆ ಭೂಲೋಕದ ಸಂಖ್ಯೆಯನ್ನೂ ನಿರ್ಧರಿಸಬಹುದಾಗಿದೆ. ಋಗ್ವೇದದಲ್ಲಿ ರುದ್ರಗಣದ ಸಂಖ್ಯೆಯು ಇಪ್ಪತ್ತೊಂದು ಎಂದು ಒಂದೆಡೆಗೆ ಬಂದಿದೆ. ಇನ್ನೊದೆಡೆಗೆ 'ತ್ರಿಃ ಷಷ್ಟಿಃ ತ್ವಾ ಮರುತಃ' ಎಂದು ಸ್ಪಷ್ಟವಾದ ವರ್ಣನೆಯಿದೆ.[೩೮] 'ಆಕಳ ಹಿಂಡಿನಂತೆ ತ್ರಿಃಷಷ್ಟಿಗಣಗಳು ನಮಗೆ ಪೂಜ್ಯರಾಗಿದ್ದಾರೆ' ಎಂದು ವೈದಿಕಋಷಿಯು ಅವರಿಗೆ ತಲೆವಾಗಿದ್ದಾನೆ. ಇವರೇ ನಮ್ಮ ವೀರಶೈವರ ಅರುವತ್ತಮೂರು ಪುರಾತನರೆಂದು ನನ್ನ ಅಭಿಪ್ರಾಯ.

ರುದ್ರಗಣದಲ್ಲಿ ಆರ್ಯರುಂಟೆ?

ಋಗ್ವೇದದೊಳಗಿನ ಉಲ್ಲೇಖಗಳಿಂದ ಈ ಮಾತನ್ನು ನಿಶ್ಚಿತವಾಗಿ ಹೇಳಲಿಕ್ಕಾಗುವುದಿಲ್ಲ. ಆದರು ಯಜುರ್ವೇದದ ಕೆಲವೊಂದು ಮಂತ್ರಗಳಿಂದಲೂ,ಅದಕ್ಕೂ ಮುಂದಿನ ಕಾಲದ ಪುರಾಣ ಮೊದಲಾದ ಸಾಹಿತ್ಯದಲ್ಲಿ ಬಂದ ಶಿವಗಣದ ವರ್ಣನೆಗಳಿಂದಲೂ ಈ ವಿಷಯವು ಸ್ವಲ್ಪ ಹೆಚ್ಚು ಸ್ಪಷ್ಟವಾಗುವಂತಿದೆ. ಋಗ್ವೇದದಲ್ಲಿ ಬಂದ ಮರುತರ ವರ್ಣನೆಗಳನ್ನು ಸ್ವಲ್ಪ ಸೂಕ್ಷ್ಮವಾಗಿ ನಿರೀಕ್ಷಿಸಿದರೆ ಅದರಲ್ಲಿ ಯಜುರ್ವೇದದ ರುದ್ರಾಧ್ಯಾಯದೊಳಗಿನ ಕೆಲವೊಂದು ಮಂತ್ರಗಳ ಪೂರ್ವಪೀಠಿಕೆಯಿದ್ದುದು ಗೋಚರವಾಗುತ್ತದೆ. ರುದ್ರನ ಮಕ್ಕಳಾದ ಮರುದ್ಗಣದ ಹುಟ್ಟನ್ನು ಹೇಳುವಾಗ ಸಾಯಣರು 'ಅವರು ದಿತಿಯ ಮಕ್ಕಳು', ಎಂದು ಪರಂಪರಾಗತವಾಗಿ ತಾವು ಕೇಳಿದ ಒಂದು ಕತೆಯನ್ನು ಹೇಳಿದ್ದಾರೆ. ದಿತಿಯು ಇಂದ್ರನನ್ನು ಸೋಲಿಸುವುದಕ್ಕಾಗಿ ಮಕ್ಕಳನ್ನು ಪಡೆಯಬೇಕೆಂದಿದ್ದಳಂತೆ. ಇಂದ್ರನು ಸೂಕ್ಷ್ಮರೂಪದಿಂದ ಪ್ರವೇಶಿಸಿ ಅವಳ ಗರ್ಭವನ್ನೇ ಹೊರದೆಗೆದು ತುಂಡರಿಸಿದನಂತೆ. ಇಂದ್ರನು ಆರ್ಯರ ಸಂರಕ್ಷಕ ದೇವತೆ. ಅವನು ರುದ್ರಗಣ-ಮರುತರುಗಳನ್ನು ವಿರೋಧಿಸುವುದರಿಂದ ರುದ್ರನ ಪರಿವಾರದ ಆರ್ಯತ್ವದ ಬಗ್ಗೆ ಸಂದೇಹವುಂಟಾಗುತ್ತದೆ. ಈ ಮೊದಲು ಒಮ್ಮೆ 'ಗಣ' ಶಬ್ದದ ಮೇಲಿಂದ ರುದ್ರನ ಅನುಯಾಯಿಗಳು ಆರ್ಯರಿಂದ ಭಿನ್ನರಾದ ದ್ರಾವಿಡ ವರ್ಗದವರೆ ಆಗಿರಬೇಕೆಂದು ಊಹಿಸಿದ್ದಾಗಿದೆ.

ಮರುತರೆಂಬವರು ಇಂದ್ರ, ಅಗ್ನಿ ದೇವತೆಗಳಿಗೂ ಅನುಯಾಯಿಗಳಾಗಿದ್ದಾರೆ. ಇಂದ್ರ, ಅಗ್ನಿಗಳು ಆರ್ಯರ ಪ್ರೀತಿಯ ದೈವತಗಳು. ಆದುದರಿಂದ, ಮರುದ್ಗಣವು ದ್ರಾವಿಡವಾಗಿರಬೇಕೆಂದು ತರ್ಕಿಸುವುದು ತಪ್ಪು, ಎಂದು ಆಕ್ಷೇಪಿಸಲು ಅವಕಾಶವಿದೆ. ಆದರೆ, 'ಮರುತರು' ಎಂಬ ಹೆಸರು ಒಂದೇ ಆಗಿದ್ದರೂ ರುದ್ರನ ಅನುಯಾಯಿ ಮರದ್ಗಣಕ್ಕೂ, ಅಗ್ನಿ, ಇಂದ್ರಾದಿ ದೈವತಗಳ ಮರುದ್ಗಣಕ್ಕೂ ಸ್ವಲ್ಪ ಭೇದವಿರಬೇಕೆಂದು ತೋರುತ್ತದೆ. ಆದರೆ ಈ ಭೇದವನ್ನು ಋಗ್ವೇದದ ಮಂತ್ರಗಳಲ್ಲಿ ಎಲ್ಲೆಡೆಗಳಲ್ಲಿ ಸಂಪೂರ್ಣವಾಗಿ ನೆನಪಿಟ್ಟುಕೊಂಡು ನಡೆದಂತೆ ಕಾಣುವುದಿಲ್ಲವಾದರೂ ಇಂದ್ರನಿಗೂ ಮರುತರಿಗೂ ಆದ ತಿಕ್ಕಾಟದ ಒಂದು ಸಣ್ಣ ಉಲ್ಲೇಖವೂ ಇಲ್ಲದಿಲ್ಲ.

> "The Maruts are, however two or three times said to have left Indra in the lurch. They involved him alone in the fight with the dragon and they abandoned him. One verse even gives evidence of bostility between Indra and the Maruts, when the latter say to him; 'Why dost thou seek to kill us Indra? Do not kill us in the fray' A Brahmana passage also refers to a conflict between the Maruts and Indra'[೩೯]

ಆದಕಾರಣ, ಮ್ಯಾಕಡೊನೆಲ್ಲರು, ನಾನು ಮೇಲೆ ಸೂಚಿಸಿರುವ ಭೇದವನ್ನು ಹೇಳಿರುವುದಿಲ್ಲವಾದರೂ ನನ್ನ ತಿಳಿವಳಿಕೆಯಂತೆ ಇಂದ್ರನ ಮಕ್ಕಳಂತಿರುವ ಆತನ ಪರಿವಾರದ ಮರುತರೇ ಬೇರೆ. ಈ ಮಾತು ಮ್ಯಾಕಡೊನೆಲ್ಲರು ಮುಂದೆ ಕೊಟ್ಟ ರುದ್ರಪುತ್ರ ಮರುತರ ವರ್ಣನೆಯಿಂದ ಚೆನ್ನಾಗಿಯೆ ದೃಢಪಡಿಸುತ್ತದೆ.

> "When not associated with Indra the Maruts occasionly exibit malevolent traits; they then to some extent participate in the maleficent nature of thei father Rudra"[೪೦]

ಋಗ್ವೇದದ ವರ್ಣನೆಗಳಲ್ಲಿ ರುದ್ರಪುತ್ರರಿಗೆ ಕೊಟ್ಟ ವಿಶೇಷಣಗಳಲ್ಲಿ ಹೆಚ್ಚಾದ ಭಾಗವು ಅವರ ಕಠೋರತೆಯನ್ನು ತೋರಿಸುವಂತಹದಾಗಿದೆ. ರುದ್ರಿಯರು 'ವೀರ'ರೆಂದು ಆಗಾಗ್ಗೆ ಹೇಳಿದ್ದುಂಟು. ಅಲ್ಲದೆ. ಒಳ್ಳೆ ಅರ್ಥವಾಗುವ ಹಾಗೆಯೆ ಎನ್ನಲು ಅಡ್ಡಿಯಿಲ್ಲ-'ಅಸುರ'ರೆಂದೂ ಹೇಳಿದ್ದಾಗಿದೆ. ಅದರೊಡನೆಯ ಉಗ್ರರು ಓಜಸ್ವಿಗಳಾಗಿದ್ದರೂ ಸಿಟ್ಟಿನವರು ಘೋರವರ್ಪಸಃ (ಭಯಾನಕರು) ಎಂದು ಮುಂತಾಗಿ ಇವರನ್ನು ವಿಶೇಷಿಸಿದ್ದಾಗಿದೆ.

ಋಗ್ವೇದದಲ್ಲಿ ಸ್ವಲ್ಪ ಸೂಕ್ಷ್ಮರೂಪದಿಂದ ಇರುವ ರುದ್ರಾನುಯಾಯಿಗಳ ವರ್ಣನೆಯು ಮುಂದಿನ ಕಾಲದಲ್ಲಿ ಹೆಚ್ಚು ಬಿಚ್ಚುಮಾತಿನಲ್ಲಿಯೆ ಬಂದುಬಿಟ್ಟಿದೆ. 'ಭೂತ'ಗಳೂ, ವಿಕಾರವಾದ ಮೋರೆ ಮೈಯುಳ್ಳ ಬಗೆ ಬಗೆಯ ಅನುಯಾಯಿಗಳೂ ಶಿವಗಣದಲ್ಲಿ ಸೇರಿಕೊಂಡುದು ತಿಳಿದುಬರುತ್ತದೆ. ರುದ್ರಾಧ್ಯಾಯದಲ್ಲಿ ಪ್ರತ್ಯಕ್ಷ ಮರುತರ ವರ್ಣನೆಯನ್ನು ಹೇಳಿಲ್ಲವಾದರೂ 'ಸ್ತೇನಾನಾಂ ಪತಯೇ ನಮಃ', 'ಪುಷ್ಟಾನಾಂ ಪತಯೇ ನಮಃ' ಇಂತಹ ವರ್ಣನೆಗಳು, ಆ ದೇವನ ಅನುಯಾಯಿಗಳ ಅದರ ಮೇಲಿಂದ ಆತನ ಗಣಗಳ ಬಗೆಯನ್ನು ನಿಶ್ಚಯಿಸಲು ಸಹಾಯಕವಾದವುಗಳೇ ಆಗಿವೆ.

ಭಕ್ತರಂತೆ ದೇವ; ಅಥವಾ ದೇವರಂತೆ ಭಕ್ತರು, ಈ ದೃಷ್ಟಿಯಿಂದ ವಿಚಾರಿಸಿದರೆ ರುದ್ರಾಧ್ಯಾಯದ ಶಿವನ ವರ್ಣನೆಗಳು ಬಹಳ ಉದ್ಬೋಧಕವಾಗಿವೆ. ರುದ್ರಾಧ್ಯಾಯದಲ್ಲಿ ಮರುದ್ಗಣದ ಹೆಸರು ಬಂದಿಲ್ಲವಾದರೂ ಋಗ್ವೇದದಲ್ಲಿ ಮರುತರನ್ನು ಶರ್ಧ, ವ್ರಾತ ಮತ್ತು ಗಣ ಈ ಮೂರು ಹೆಸರುಗಳಿಂದ ಉಲ್ಲೇಖಿಸಿದೆ. ರುದ್ರಾಧ್ಯಾಯದಲ್ಲಿ 'ಗಣೇಭ್ಯೋ, ಗಣಪತಿಭ್ಯಶ್ಚವೋ ನಮಃ' 'ವ್ರಾತೇಭ್ಯೋ ವ್ರಾತಪತಿಭ್ಯಶ್ಚವೋ ನಮಃ' ಎಂದು ವರ್ಣಿಸಿರುವುದರಿಂದ, ಋಗ್ವೇದದ ಋಷಿಗಳು ಕಾವ್ಯಮಯ ಭಾಷೆಯಲ್ಲಿ ದಿವ್ಯಲೋಕದ ರುದ್ರಿಯರನ್ನೇ (ಇಲ್ಲಿಯ ಒಂದೆರಡು ಮಾತುಗಳನ್ನಾಡುವುದರೊಳಗಾಗಿ) ವರ್ಣಿಸಲಾರಂಭಿಸುತ್ತಿದ್ದುದು ಹೋಗಿ ರುದ್ರಾಧ್ಯಾಯದಲ್ಲಿ

ಭೂಲೋಕದೊಳಗಿನ ವ್ರಾತ, ಗಣ, ಪತ್ತಿ, ಚೋರ, ರಥಕಾರ, ನಿಷಾದ ಮೊದಲಾದ ಜನಗಳ ನಾಮಾವಳಿಯನ್ನು ಹೆಚ್ಚು ಸ್ಪಷ್ಟ ಅರ್ಥವಾಗುವಂತೆ ಹೇಳಿ ಹಾಡಲಾರಂಭಿಸಿದುದು ಕಂಡುಬರುತ್ತಲಿದೆ! ರುದ್ರಾಧ್ಯಾಯದ ಈ ವರ್ಣನೆಗಳಲ್ಲಿ 'ನಮಃ ಉಚ್ಚೈರ್ಘೋಷಾಯಾಕ್ರಂದಯತೇ ಪತ್ತೀನಾಂ ಪತಯೇ ನಮಃ' ಎಂದು ಬಂದಿದೆ. ಮರುತರ ಕೂಗಾಟ, ಆರ್ಭಾಟಗಳ ಧ್ವನಿಯ ವರ್ಣನೆಗಳು ಋಗ್ವೇದದಲ್ಲಿ ಹಲವೆಡೆಗೆ ಬಂದಿವೆ. ರುದ್ರಗಣಗಳ ವೈಶಿಷ್ಟ್ಯಗಳಲ್ಲಿ ಗರ್ಜನೆಯು ಒಂದು. ಇದನ್ನೇ 'ಉಚ್ಚೈರ್ಘೋಷಾಯಾಕ್ರಂದಯತೇ, ಎಂದು ರುದ್ರಾಧ್ಯಾಯದಲ್ಲಿ ಹೇಳಿದೆ. ವೀರಶೈವರಲ್ಲಿ ಗುಗ್ಗುಳದ ಕಾಲಕ್ಕೆ ನಡೆವ ಗುಡುಗಾಟದ ಅಬ್ಬರವನ್ನು ಕೇಳಿದವರಿಗೆ ಕರಡಿ ಮಜಲಿನ ಕಿವಿಗಡಚಿಕ್ಕುವ ನಿನಾದದೊಡನೆ ಸ್ಪರ್ಧಿಸಿ "ಉಚ್ಚೈರ್ಘೋಷದಿಂದ" ಗರ್ಜಿಸುತ್ತಲಿರುವ ಆ ಪುರವಂತನ ಅಬ್ಬರವನ್ನು ನೋಡಿದವರಿಗೆ, 'ಆಹಾ! ರುದ್ರಾಧ್ಯಾಯದ ಆ ವರ್ಣನೆಯು ಈ ವೀರಭಕ್ತರ ಪೂರ್ವಿಕರನ್ನು ಕಂಡು ಮಾಡಿದ್ದಾಗಿರಬಹುದೆ?' ಎಂಬ ವಿಚಾರವು ಥಕ್ಕನೆ ಹೊಳೆಯದೆ ಹೋಗುವುದಿಲ್ಲ. ಗುಗ್ಗುಳ ಕಾರ್ಯದಲ್ಲಿ ಪುರವಂತನ ಉಗ್ಘಡಣೆಯಲ್ಲಿ ಆಗಾಗ ಪಲ್ಲವಿಯಂತೆ ಕೆಲವು ನುಡಿಗಳು ಬರುವುದುಂಟು; 'ಹಾ! ರುದ್ರ ಎಂದ; ಹಾ! ಶರ್ಪ (ರ್ಪ=ರ್ಬ?) ಎಂದ' ಎಂದು ಗರ್ಜಿಸುವುದುಂಟು. 'ಇದು ಸತ್ಯ' ಎಂದು. ಅದಕ್ಕೆ ಪೋಷಕವಾಗಿ ಮರುನುಡಿ, 'ಹಾ ಖಡೆ (ಖರೆ) ಎಂದ' ಎಂದು ಬರುವುದುಂಟು. ಇದರಲ್ಲಿ 'ಶರ್ಪ' ಎಂದು ಹೇಳುವ ಮಾತು ಅಸ್ಪಷ್ಟವಾಗಿದೆ. 'ಶರಭ' ಎಂದು ಆ ಶಬ್ದವಿರಬೇಕೆಂದು ಊಹಿಸಬಹುದಾಗಿದೆ. ಪರಾಕ್ರಮಕ್ಕೆ ಸಿಂಹವೆಂದು ಹೇಳುವಂತೆ ಶರಭವೆಂದು ಎನ್ನುವ ವಾಡಿಕೆಯುಂಟು. ವೀರ ಎಂಬರ್ಥದಲ್ಲಿ 'ಶರಭ' ಎಂದು ಉಗ್ಘಡಣೆಯಿರಬೇಕೆಂದೂ ಹೇಳಬಹುದಾಗಿದೆ. ಇದು ಸರಿ ಎನಿಸುವಂತಿರುವುದಾದರೂ ಪ್ರಾಚೀನ ಪರಂಪರೆಯ ರೀತಿಯಲ್ಲಿ ನೋಡಿದರೆ ಇದು ಅಷ್ಟು ಸಮರ್ಪಕವಾಗಿ ತೋರುವುದಿಲ್ಲ. ಪುರವಂತನು ಉತ್ಸಾಹದ ರಭಸದಲ್ಲಿ 'ಶರಭ' ಎಂದಿರುವುದನ್ನು 'ಶರ್ಪ' ಎನ್ನುತ್ತಿರಬೇಕೆಂದು ಎಣಿಸಬಹುದಾಗಿದೆ. ಆದರೆ, ಇದು 'ಶರ್ಧ' ಎಂದು ವೇದಮಂತ್ರದೊಳಗಿನ ಶಬ್ದವಾಗಿರುವ ಸಂಭವವೇ ಹೆಚ್ಚಾಗಿದೆ. 'ಶರ್ಧ' ಎಂದರೇ ಗಣ, ಸಮೂಹವೆಂದೂ, ವೀರ, ಬಲಶಾಲಿ ಎಂದೂ ವೇದದಲ್ಲಿ ಎರಡು ಅರ್ಥಗಳಿವೆ ಮತ್ತು ರುದ್ರಗಣಗಳಿಗೆ ಸಂಬಂಧಿಸಿದಾಗಲೇ ಈ ಪದವು ಋಗ್ವೇದದಲ್ಲಿ ಆಗಾಗ್ಗೆ ಬಂದಿದೆ. (೧.೩೭.೧; ೫;)

ಆದುದರಿಂದ ಕಿವಿ ಗಡಚಿಕ್ಕುವ ಉಗ್ಘಡಣೆಯಿಂದ ಅಷ್ಟೇ ಅಲ್ಲ; ರುದ್ರದೇವರ 'ಶರ್ಧ' ಎಂಬ ವೈದಿಕ ಶಬ್ದದಿಂದಲೂ ಈ ಜನಾಂಗದ ಪ್ರಾಚೀನ ಸಂಬಂಧ ಸೂತ್ರಗಳ ನಿಶ್ಚಿತ ಕಲ್ಪನೆಯುಂಟಾಗುವಂತಿದೆ. ಕೂಗಾಟಗಳಲ್ಲಿ ಮರುತರು ಅದ್ವಿತೀಯರೆಂದು ಋಗ್ವೇದದಲ್ಲಿ ಅಲ್ಲಲ್ಲಿ ವರ್ಣನೆಗಳು ಬಂದಿವೆ. ಕೂಗಾಟದ ಆರ್ಭಾಟವನ್ನು ಗುಗ್ಗುಳದಲ್ಲಿ ಕಂಡವರಿಗೆ ಮರುತರ ಋಗ್ವೇದದ ವರ್ಣನೆಗಳ ನೆನಪು ಆಗದೆ ಇರದು. ಕೂಗಿ ಮಾತನಾಡುವುದು ನಮ್ಮ ಜನಗಳ ಒಂದು ವೈಶಿಷ್ಟ್ಯವೆಂದು ನೆರೆಹೊರೆಯ ಪ್ರಾಂತದವರ ಗ್ರಹಿಕೆಯಿದೆ.

'ವ್ರಾತೇಭ್ಯೋ' ಎಂದು ಹೇಳಲ್ಪಡುವ ರುದ್ರನ ಅನುಯಾಯಿಗಳು ಯಾರು? ಇವರೇ ಮುಂದಿನ ಕಾಲದಲ್ಲಿ ವ್ರಾತ್ಯರೆಂಬ ಹೆಸರಿನಿಂದ ಮುಂದೆ ಬಂದಿರಬೇಕೆ? ವ್ರಾತ್ಯರು ಎಂದರೆ ಆರ್ಯರ ಗುಂಪಿನಿಂದ ಹೊರಗಾದವರು ಎಂದು ಎಲ್ಲರೂ ಒಪ್ಪುವರು. ಆದರೆ 'ಅವರು ಆರ್ಯೇತರರಲ್ಲ; ಆರ್ಯರ ಕರ್ಮಾನುಷ್ಠಾನಗಳನ್ನು ಬಿಟ್ಟವರು, ಎಂದು ಒಂದು ಪಂಗಡ; ಅಲ್ಲ, ಅವರು 'ಆರ್ಯೇತರ ಪಂಗಡದವರೇ' ಎಂದು ಇನ್ನೊಂದು ಪಂಗಡ, ಏನೆ ಆಗಲಿ ಈ ವ್ರಾತ್ಯರು ಪತಿತರೆಂಬುದು ನಿಶ್ಚಿತ.[೪೧] ಶಿವನು ಇವರ ದೇವರು, ಅಂತು ಶಿವನು ಆರ್ಯವೈದಿಕರ ದೃಷ್ಟಿಯಿಂದ ಪತಿತರ ದೇವರು; ಇವನ ಗಣಗಳೂ ಅಂತಹವೇ.

ವ್ರಾತ (ವ್ರಾತ್ಯ)ರು ಇದೊಂದು 'ಮಂದಿ' ಎಂದರೆ ತಂಡ; ಗಣವ್ರಾತ್ಯರ ಕೆಲವು ಉಡಿಗೆ ತೊಡಿಗೆಗಳ ವರ್ಣನೆಗಳು ಇಲ್ಲಿ ಸಿಕ್ಕುತ್ತವೆ. "ಇವರು ಪಾವುಡ (ಉಷ್ಣೀಷ) ಸುತ್ತುವರು; ಬಾರಕೋಲು (ಪ್ರತೋದ) ಹಿಡಿವರು; ಕೋಲು, ಬಿಲ್ಲು (ಜಾಹ್ರೋಡ) ಉಪಯೋಗಿಸುವರು, ಕರೆವಸ್ತ್ರ (ಕಂಬಳಿ? ಕೃಷ್ಣಶ) ವನ್ನು ಮತ್ತು ಕೃಷ್ಣಾಜಿನ ವಲಕ್ಷ (ಬಿಳಿ) ಚರ್ಮಗಳನ್ನು ಹೊದ್ದುಕೊಳ್ಳುವರು; ಅಡ್ಡದಾರಿಯಲ್ಲಿಯೂ ಹೊಡೆಯಬಹುದಾದ

ಬಂಡಿ (ವಿಪಥ) ಉಳ್ಳವರು (ಆ ಬಂಡಿಯ ಮೇಲೆ ಫಲಕ (ಫಳ) ಹಾಕಿರುತ್ತಿದ್ದರು;) ನಾಯಕನನ್ನು ಬಿಟ್ಟು ಉಳಿದವರು ಕೆಂಪು ಅಂಚಿನ ಅಜಿನಗಳನ್ನು ಧರಿಸುವರು. ಕಪ್ಪು ಬಣ್ಣದ ಕಾಲಮರಿ (ಉಪಾನಹ) ಹಾಕಿಕೊಳ್ಳುವರು. ನಾಯಕನು ಬೆಳ್ಳಿಯ ನಿಷ್ಕದ ಸರಗಳನ್ನು ಕೊರಳಲ್ಲಿ ಹಾಕಿಕೊಳ್ಳುವನು.[೪೨]

ಶಿವನ ಕೊರಳಲ್ಲಿ ಬಂಗಾರದ ನಿಷ್ಕಗಳ ಸರಗಳಿದ್ದ ವರ್ಣನೆ ವೇದದಲ್ಲಿದೆ. ಆತನ ಅನುಯಾಯಿಗಳ ಕೊರಳಲ್ಲಿ ಬೆಳ್ಳಿಯ ನಿಷ್ಕಗಳ ಸರಗಳು ಈ ನಿಷ್ಕಗಳ ಸರಗಳು ಎಂತಹವು ಇರಬಹುದೊ ತಿಳಿಯದು. ನಮ್ಮ ನಾಡಿನ ಹಿಂದಿನ ವೀರರ ಕೊರಳಲ್ಲಿ ನೆಲ್ಲೀಕಾಯಿ (ಬಂಗಾರ, ಬೆಳ್ಳಿಗಳಿಂದ ಮಾಡಿದುವು ಅವರವರ ಯೋಗ್ಯತೆಯಂತೆ) ಸರಗಳು ಇರುತ್ತಿದ್ದವು. ಇವೆ ವೇದಕಾಲದ ನಿಷ್ಕರ ಸರಗಳೊ ಹೇಳಲಿಕ್ಕಾಗುವುದಿಲ್ಲ. ಬಂಡಿಗಳು ನಮ್ಮ ನಾಡಿನಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಉಪಯೋಗಿಸುತ್ತಿಲಿದ್ದ ವಾಹನ. ಬಂಡಿಯನ್ನು ಬಂಡಣ (ಯುದ್ಧ)ದಲ್ಲಿ ಉಪಯೋಗಿಸುತ್ತಿದ್ದರು. ಬಂಡಿ, ಬಂಡಣ ಬಂಟ (ವೀರ) ಇವೆಲ್ಲ ಮಾತುಗಳನ್ನು ಒಂದೆಡೆಗೆ ತಂದು ನೋಡಿದರೆ ಅವು ತಮ್ಮ ಹಿಂದಿನ ಕಾಲದ ಅಲ್ಪಸ್ವಲ್ಪ ಕತೆಯನ್ನು ಸೂಚಿಸಲು ಸಮರ್ಥವಾಗಿವೆ.

ಕೋಲು ಪ್ರಾಚೀನ ಕಾಲದಿಂದಲೂ ನಮ್ಮ ವೀರ ಬಲ್ಲಾಳುಗಳ ಆಯುಧ. ಕಾಳಗದಲ್ಲಿ ಹಗೆಗಳನ್ನು ಕೊಲ್ಲಲು, ಆತ್ಮರಕ್ಷಣೆ ಮಾಡಿಕೊಳ್ಳಲು ಉಪಯೋಗಿಸುತ್ತಿದ್ದ ಸಾಧನವು. 'ಕೋಲು' ಇಂದು ಸಭ್ಯರೂಪವನ್ನು ತಾಳಿದ್ದರೂ ಮೂಲದಲ್ಲಿ ಇದು ಕೊಲ್ಲುವ ಸಾಧನವೆಂಬುದರಲ್ಲಿ ಸಂದೇಹವಿಲ್ಲ. ಆರ್ಯರಿಗೆ ರುದ್ರನ (ರುದ್ರಿಯರ?) ತೀಕ್ಷ್ಣ ಬಾಣಗಳ ಹೆದರಿಕೆಯಿದ್ದುದರ ಧ್ವನಿಯು ವೇದಮಂತ್ರಗಳಲ್ಲಿ ಕೇಳಬರುತ್ತದೆ.

'ನಮಸ್ತೇ.....ಇಷವೇ ನಮಃ',

'ಯಾತ ಇಷು ಶಿವತಮಾ ಶಿವಂ ಬಭೂವ ತೇ ಧನುಃ',

"ಶಿವಾ ಶರವ್ಯಾಯಾ ತವ ತಯಾನೋ ರುದ್ರ ಮೃಡಯ' (ಶಿವನೇ ನಿನ್ನ ಬಾಣಗಳಿಗೆ ಕೈಮುಗಿಯುವೆ; ನಿನ್ನ ಬಿಲ್ಲಿಗೆ ತಲೆವಾಗುವೆ; ನಿನ್ನ ಬಿಲ್ಲು ಬಾಣಗಳು ನಮಗೆ ಶಿವ-ಎಂದರೆ ಮಂಗಲ, ಶಾಂತರೂಪವಾಗಲಿ ಎಂದು ಮುಂತಾಗಿ ಕರಳು ಕರಗುವಂತೆ ಬೇಡಿಕೊಂಡುದು ವೇದಗಳಲ್ಲಿದೆ. ಈ ಜನಗಳು ಹಿಡಿಯುತ್ತಲಿದ್ದ ಕೋಲುಗಳಲ್ಲಿ ಕೆಲವು ಪ್ರಕಾರಗಳಿದ್ದುವು. ಬಾರಕೋಲು (ಪ್ರತೋ), ಕುಡು (ಕೊಂಕು) ಗೋಲು; ನಿಡುಗೋಲು (ಸರಳ) ಆದರೆ, ಇದಕ್ಕಿಂತಲೂ ಇನ್ನೊಂದೆರಡು ಬೇರೆ ವಿಶೇಷಣಗಳು ಶಿವನ ಹಾಗು ಅವನ ಗಣದ ನಿಜಸ್ವರೂಪವನ್ನು ಇನ್ನೂ ಚೆನ್ನಾಗಿ ವ್ಯಕ್ತಗೊಳಿಸುತ್ತವೆಂದು ನನ್ನ ಅಭಿಪ್ರಾಯ.

ಪಾವುಡವು ಆರ್ಯರ ವೈಶಿಷ್ಟ್ಯವಲ್ಲ. ಮಡಿಯಿಂದಿರುವಾಗ ಬೊಕ್ಕನೆತ್ತಿ ನಡೆಯುತ್ತಿದೆ. ತಲೆಗೆ ಹಾಕದಿರುವುದು ಅಮಂಗಲಕರವೆಂಬುದು ಆರ್ಯರ ತಿಳುವಳಿಕೆಯಿಲ್ಲ. ಇಂದಿಗೂ ಪಾವುಡವು ಈ ನಾಡಿಗರ ವೈಶಿಷ್ಟ್ಯವಾಗಿದೆ. ಅಂಬಿಗರ ಚೌಡಯ್ಯನ ಒಂದು ವಚನದಲ್ಲಿ ತನ್ನವರಿಗೆ ಚುಚ್ಚಿ ಮಾತನಾಡುವಾಗ 'ದೊಡ್ಡ ಪಾವುಡದ ಅಣ್ಣಗಳೇ' ಎಂದು ಒಂದೆಡೆಗೆ ಹೇಳಿದ್ದಾನೆ. ಪಾವುಡದ ಪ್ರೀತಿ ನಮ್ಮ ನಾಡಿಗರಿಗೆ ಬಹಳ. ಇದೂ ಅಷ್ಟು ಮಹತ್ವದ್ದಲ್ಲ. ಶಿವನಿಗೆ 'ವಿಶಿಖಾಸಃ' 'ವ್ಯುಪ್ತಕೇಶಃ ಮತ್ತು 'ಕಪರ್ದಿ' ಎಂಬ ವಿಶೇಷಣಗಳಿವೆ. ಕಪರ್ದಿ ಎಂದರೆ ಜಡೆ ಬಿಟ್ಟವನೆಂದಾಯ್ತು. 'ವಿಶಿಖನು' ಎಂದರೆ 'ಶಿಖಾ' (ಚಂಡಿಕೆ) ಇಲ್ಲದವನು, ಎಂದರ್ಥ. ವ್ಯುಪ್ತಕೇಶಃ, ಮುಂಡಿತಕೇಶಃ ಎಂದು ಸಾಯಣರು ಅರ್ಥ ಹೇಳಿದ್ದಾರೆ. ಶಿಖಾ (ಯಜ್ಞೋಪವೀತವುಂಟು ನಮೋ.....ಉಪವೀತಿನೇ ಪುಷ್ಟಾನಾಂ. ಪತಯೇ ನಮಃ) ಆರ್ಯ ಸಂಸ್ಕಾರದ ಮಹತ್ವದ ಚಿಹ್ನ. ಶಿವನಿಗೆ ಶಿಖೆಯೆ ಇಲ್ಲ! ಇವನಿಗೆ ಹೆಂಡತಿ ಇದ್ದಾಳೆ, ಸಂನ್ಯಾಸಿ ಎಂದು ಹೇಳುವುದು ಕಷ್ಟ. ದೇವರ ಮೇಲಿಂದ ಅವನ ಭಕ್ತರನ್ನು ಚೆನ್ನಾಗಿ ಅರಿತುಕೊಳ್ಳಬಹುದು. ಚಂಡಿಕೆಯಿಲ್ಲದ ಶಿವನ ಗಣಕ್ಕೂ, ಚಂಡಿಕೆಯೇ ಇಲ್ಲದಿದ್ದರೆ ವಿಶೇಷವೇನು? ಅಥವಾ ಚಂಡಿಕೆಯಿಲ್ಲದ ಮಂದಿಯ ದೇವರೂ ವಿಶಿಖಾಸನಾಗಿದ್ದರೆ ಸೋಜಿಗವೇನು? ರುದ್ರಗಣದೊಳಗಿನ ಕೆಲವು ಪ್ರಮುಖ ಹೆಸರುಗಳನ್ನು ನಮ್ಮ ಸಂಸ್ಕೃತ ಸಾಹಿತ್ಯದಿಂದ ಕಂಡುಕೊಂಡರೆ ಅಲ್ಲಿ ಕಾಣುವವರಾರು? ಬಾಣ, ರಾವಣ, ಚಂಡೀಶ ಪ್ರಭೃತಿಗಳು![೪೩] ಬಾಣ, ರಾವಣರು ಪ್ರಮುಖರಾಗಿರುವ ಗಣವು ರಾಕ್ಷಸ (?) ಗಣವೆ ಹೊರತು ಆರ್ಯಗಣವಾಗಿರಲಾರದು.

ಇನ್ನು ಪೌರಾಣಿಕರು ಯಾರಿಗಾದರೂ ರಾಕ್ಷಸರು ಎಂದು ಹೇಳಿದ ಕೂಡಲೆ ಹೆದರಬೇಕಾದುದಿಲ್ಲ. ಇದರ ಅರ್ಥವು ಇಷ್ಟೇ, ಇವರು (ರಾಕ್ಷಸರು) ಪುರಾಣಕರ್ತರಾದ ಬ್ರಾಹ್ಮಣರಿಗೆ ಬೇಡವಾದವರು. ರಾವಣಾದಿಗಳೆಲ್ಲರೂ ಮನುಷ್ಯರೇ. ಆದರೂ ಆರ್ಯವಿರೋಧಿಗಳು. ಆದರಿಂದ ಪೌರಾಣಿಕರ ದೃಷ್ಟಿಯಿಂದ ಇವರು ರಾಕ್ಷಸರಾದರು.[೪೪]

ಇಂತು ಯಾವ ಬಗೆಯಿಂದ ನೋಡಿದರೂ ರುದ್ರಗಣವು ಆರ್ಯೇತರ ಪಂಗಡಕ್ಕೆ ಮುಖ್ಯವಾಗಿ ದ್ರಾವಿಡ ವರ್ಗಕ್ಕೆ ಸಂಬಂಧಪಟ್ಟುದೇ ಆಗಿದ್ದಿತೆಂದು ಕಂಡುಬರುತ್ತಲಿದೆ.

ಮಾರುತಿ ಮತ್ತು ವಾಯುದೇವರು

ನಮ್ಮ ನಾಡಿನ ಹನುಮನ ಪರಂಪರೆಯ ಅಭ್ಯಾಸವು ಈ ಮಾತಿನಮೇಲೆ ತುಂಬ ಬೆಳಕು ಕೊಡುವಂತಿದೆ. ಆದರೆ, ಅನಾದಿಕಾಲದ ವೈದಿಕ ಪರಂಪರೆಯ ಮರೆವು ಉಂಟಾಗಿ ಹನುಮನ ನಿಜಸ್ವರೂಪದ ಅರಿವು ಇಲ್ಲದಂತಾಗಿದೆ. ಮಾರುತಿ ಎಂಬುದಕ್ಕಿಂತ ಹನುಮಂತನೆಂಬ ಹೆಸರು ಕರ್ನಾಟದಲ್ಲಿ ಬಹಳ ಪ್ರಚಾರದಲ್ಲಿದೆ. ಆದರೆ, ಹನುಮಾನ್ ಶಬ್ದದ ಅರ್ಥವು ಪ್ರಾಚೀನ ಪರಂಪರೆಗೆ ಅನುಸರಿಸಿದ್ದಲ್ಲ. ಹನುಮಾನ್ ಅಥವಾ ಹನುಮಂತ ಶಬ್ದದ ಅರ್ಥದಲ್ಲಿಯೂ ಐತಿಹಾಸಿಕ ಮಹತ್ತ್ವದ ವಿಶೇಷ ಸೊಗಸು ಇಲ್ಲ. ಮಾರುತಿ, ಮರುನ್ನಂದನ, ಮರುತ್ಪುತ್ರ ಈ ಹೆಸರುಗಳೆಲ್ಲವೂ ಈ ದೇವತೆಯ ವೈದಿಕ ಪರಂಪರೆಯನ್ನು ಸೂಚಿಸುತ್ತಲಿವೆ.

ಋಗ್ವೇದದಲ್ಲಿ ಮರುತರು ಬಂದಿದ್ದಾರೆ. ಮರುತ ಶಬ್ದದಿಂದಲೆ, 'ಮಾರುತ'ವೆಂಬುದು ಸಾಧಿತ ಶಬ್ದ. ಮಾರುತನಿಗೆ ಸಂಬಂಧಪಟ್ಟವನು ಮಾರುತಿ; ಇವನಿಗೇ ಮರುತ್ಪುತ್ರನೆಂದೂ ಹೆಸರು. ಇದೆಲ್ಲವೂ ಸರಿ. ಆದರೆ, ಮರುತ್ಪುತ್ರನೆಂದು ಕರೆಯುವಂತೆ ಈ ದೇವರಿಗೆ 'ವಾಯುಪುತ್ರ' ಅಥವಾ 'ವಾಯುದೇವರು' ಎಂದು ಹೇಳುವ ವಾಡಿಕೆಯೂ ಉಂಟು! ವೇದದಲ್ಲಿ ಮರುತರು ಬೇರೆ, ವಾಯುದೇವರು ಬೇರೆಯಾಗಿದ್ದಾರೆ! ನಮ್ಮ ಇಂದಿನ ಮಾತಿಗೂ ಹಿಂದಿನ ವೈದಿಕಪರಂಪರೆಗೂ ಸೂತ್ರ ಸ್ವಲ್ಪಸ್ವಲ್ಪ ತಪ್ಪುತ್ತ ಬಂದಿರುವುದಕ್ಕೆ ಇದೊಂದು ದೃಷ್ಟಾಂತ. ಒಮ್ಮೆ ವಾಯುಪುತ್ರನೆಂದು ಕರೆವುದು; ಮುಂದೆ ಆತನಿಗೇ ವಾಯುದೇವರು, ಮುಖ್ಯಪ್ರಾಣ ಎಂದೂ ಹೇಳುವುದು ಅ-ಸಂಬದ್ಧವಾಗಿದೆ. ಮೊದಲಿನ ರುದ್ರ-ಶಿವನು ಮುಂದಿನ ಕಾಲದಲ್ಲಿ ಶಿಶ್ನ (ಲಿಂಗ) ದೇವರಾಗಿ ಹೇಗೆ ಪರಿಣಮಿಸಿರಬಹುದೆಂಬುದರ ಕಲ್ಪನೆಯು ಹನುಮನ ಕತೆಯಿಂದಲೂ ಎಷ್ಟೋ ಮಟ್ಟಿಗೆ ತಿಳಿದುಬರುವಂತಿದೆ.

ಶನಿವಾರಕ್ಕೂ ಹನುಮನಿಗೂ ತಳಕುಹಾಕಿದುದರ ಕಾರಣವೇನಿರಬಹುದು? ಶನಿಕಾಟ ತಪ್ಪಿಸಿಕೊಳ್ಳಲು ಶನಿವಾರ ದಿನ ಹನುಮನಿಗೆ ನಡಕೊಳ್ಳುವ ಪರಿಪಾಠವುಂಟು. ಶನಿ ಎಂದರೆ ಹನುಮನೆಂಬ ಗ್ರಹಿಕೆ ಈಗ ಅಲ್ಲಿ ಇಲ್ಲಿ ತಲೆದೋರುತ್ತಿರುವುದು ಕಂಡುಬರುತ್ತದೆ. ಆದರೆ, ಶನಿಗೂ ಹನುಮನಿಗೂ ಬಾದ್ರಾರಾಯಣ ಸಂಬಂಧಕ್ಕಿಂತ ಯಾವ ಹೆಚ್ಚಿನ ಹತ್ತುಗೆಯೂ ಇಲ್ಲ; ಗೆಡೆ(ಗೆಳೆ)ಯೂ ಇಲ್ಲ. ಆದರೂ ಶನಿಯು ಫಲಜ್ಯೋತಿಷ್ಕರ ಸಹಾಯದಿಂದ ಹನುಮನ ಸ್ಥಾನವನ್ನು ಸುಮಾರಾಗಿ ಆಕ್ರಮಿಸಿಬಿಟ್ಟಿದ್ದಾನೆ. ('ಶನಿವಾರ ಸಿದ್ಧಿ' ಎಂದು ಹೊಯ್ಸಳ ರಾಜನೊಬ್ಬನು ತನ್ನನ್ನು ವಿಶೇಷಿಸಿಕೊಳ್ಳುತ್ತಾನೆ (೧೩ನೆಯ ಶತಮಾನ). ಆದರೆ ಅವರವರ ಕತೆಗಳಲ್ಲಿ ನೋಡಿದರೆ ಹನುಮನು ಮರುನ್ನಂದನ, ಇಲ್ಲವೆ ವಾಯುಪುತ್ರ; ಶನಿಯು ರವಿನಂದನನು!

ಈಗ ನಮ್ಮಲ್ಲಿ ಜೀವಂತವಾಗಿರುವ ಒಂದೊಂದು ದೇವತೆಯಲ್ಲಿ ಹಿಂದಿನ ಕಾಲದ ಎರಡೆರಡು ಮೂರು ಮೂರು ದೇವತೆಗಳು ಸೇರಿಕೊಂಡು ಪೂಜಾ-ನೈವೇದ್ಯಗಳನ್ನು ಸ್ವೀಕರಿಸುತ್ತಲಿವೆ. ವಿಷ್ಣು, ವಾಸುದೇವ, ನಾರಾಯಣ, ಕೃಷ್ಣರ[೪೫] ಸಂಗಮವು ಮನೋಹರವಾಗಿದೆ. ಮಲ್ಲಾರಿ-ಮಲ್ಲಯ್ಯರ[೪೬] ಸಹಕಾರವು ಇಂದಿನ ಯುಗಕ್ಕೆ ಆದರ್ಶವಾಗಿದೆ. ಆದರಂತೆಯೆ, ಶಿವ ಮತ್ತು ಲಿಂಗ ದೇವರಗಳು ಒಂದು ಗೂಡಿದ್ದು ಇವೆರಡೂ ದೇವತೆಗಳು ಭಿನ್ನವೆಂದು ಹೇಳಿದರೆ ಶಿವನಲ್ಲಿ ವೀರ ಅಭಿಮಾನವುಳ್ಳವರಿಗೂ ಸುಳ್ಳೆನಿಸುವಂತಾಗಿದೆ! ಹನುಮನಲ್ಲಿಯೂ ಇದೇ ತೊಡಕು ಕಂಡುಬರುತ್ತಲಿದೆ. ಹನುಮನೆಂಬ ಹೆಸರು ಯಾವ ವಿಶಿಷ್ಟ ಪಂಥದ ಅಥವಾ ಪರಂಪರೆಯನ್ನು ಸೂಚಿಸುವುದಿಲ್ಲವಾದುದರಿಂದ, ಆ ಹೆಸರಿನ ಹಿಂದೆ ಭಿನ್ನಭಿನ್ನ ಮತಗಳಿಗೆ ಹುದುಗಿಕೊಂಡಿರಲು ಇಂಬು ದೊರೆತಿದೆ.

ಹನುಮನೆಂಬ ಹೆಸರಿನಲ್ಲಿ ಅಡಕವಾಗುತ್ತಲಿರುವ ಬೇರೆಬೇರೆ ಪಂಥದ ದೇವತೆಗಳ ನಿಜಸ್ವರೂಪವು ಗೊತ್ತಾಗಬೇಕಾದರೆ ಹನುಮನೆಂಬ ಹೆಸರನ್ನು ಸ್ವಲ್ಪ ಬದಿಗಿರಿಸುವುದು ಲೇಸು. ಹನುಮನೆನ್ನಲಿ, ಮಾರುತಿಯೆಂದು ಹೇಳಲಿ, ವಾಯುಸುತನೆಂದು ಸಂಬೋಧಿಸಲಿ, ಪ್ರಾಣದೇವರೆಂದು ಕರೆಯಲಿ ಇವೆಲ್ಲವುಗಳ ಗುಡಿಗಳು ಭಿನ್ನವಿಲ್ಲ; ಒಳಗಿನ ದೇವತೆಯ ರೂಪ, ಆಕಾರಗಳು ಸುಮಾರಾಗಿ ಒಂದೇ. ಈಗಿನ ಈ ದೇವತೆಯನ್ನು ಆರಾಧಿಸುತ್ತಿರುವುದು ಕಪೀಶ್ವರನ ರೂಪದಲ್ಲಿಯೇ. ಇದೇ ಹೆಸರನ್ನು ಕನ್ನಡದಿಂದ ಹೇಳಿದರೆ-ಆ ದೇವರಿಗೆ ಅಲ್ಲ; ಅವನ ಭಕ್ತರಿಗೆ-ಸಿಟ್ಟು ಬರುವ ಸಂಭವವಿದೆ. ಕೇಳಲು ಅಸಹ್ಯವಾದ ಹೆಸರುಗಳನ್ನು ಪರಭಾಷೆಯ ಮಾತಿನಿಂದ ಹೇಳುವ ಸಂಪ್ರದಾಯವು ಸುಧಾರಿಸಿದ ಎಲ್ಲ ಜನಾಂಗಗಳಲ್ಲಿ ಕಾಣಬರುತ್ತದೆ. ಇದೊಂದು ಮನುಷ್ಯ ಸ್ವಭಾವ. ಹೇಳಬಾರದೆನ್ನುವ ಹೆಸರುಗಳನ್ನು ಇನ್ನೊಂದು ಬಗೆಯಿಂದ-ಇನ್ನೊಬ್ಬರ ಮಾತಿನಿಂದ ಹೇಳುವುದುಂಟು. ಮಾನಸಶಾಸ್ತ್ರದ ಈ ತತ್ವವೇ, 'ಶಿಶ್ನ' ಎಂಬ ಸಂಸ್ಕೃತ ಶಬ್ದದ ಸ್ಥಳವನ್ನು 'ಲಿಂಗ' ಎಂಬ ಪರಭಾಷೆಯ ಶಬ್ದವು ಬಂದು ಆಕ್ರಮಿಸಿರುವಲ್ಲಿ ಅನುಭವಕ್ಕೆ ಬರುತ್ತಲಿದೆ. ಆದರೆ ಕಪಿದೇವರು ಎಂಬುವಂತೆ 'ಮಂಗ' ದೇವರು ಎಂದರೆ ಕನ್ನಡದ ಅಭಿಮಾನಿಗಳಿಗ ನಿಜವಾಗಿ ಸಿಟ್ಟು ಬರಲು ಕಾರಣವಿಲ್ಲ. ಎಲ್ಲಮ್ಮ-ಜಗದಂಬೆ; ಹಾಗೆ ಮಾರುತಿ-ಮಂಗದೇವರು ಎಂದು ಹೇಳಲು ಅಡ್ಡಿಯೇನು? ಮಂಗ, ಎಂಬುದು ಅ-ವಾಚ್ಯ ಶಬ್ದವಲ್ಲ. ಭೀಮೇಶವಿಠ್ಠಲರು 'ಮರೆಯದೆ ಸಲಹೆನ್ನನು ಯಾದವ ಗಿರಿ ಧೊರೆ ಮಂಗರಾಯ ನೀನು' ಎಂದು ಹಾಡಿದ್ದುಂಟು. ಆದರೂ 'ಮಂಗ' ಶಬ್ದವು ಬೇಡವಾಗಿದ್ದರೆ ಅದನ್ನು ಬಿಟ್ಟು ಮರ್ಕಟ, ಮರ್ಕಟೇಶ್ವರ ಎಂದರೆ ಆಗಬಹುದೆ? ಆದರೆ, 'ಮರ್ಕಟ' ಎಂಬುದು ಸಂಸ್ಕೃತದಲ್ಲಿ ಸೇರಿದ ಕನ್ನಡ ಮಾತು. ಬ್ರಾಹ್ಮಣಗಳಲ್ಲಿ ಬಂದ ದ್ರಾವಿಡಶಬ್ದಗಳ ಒಂದು ಪಟ್ಟಿಯನ್ನು ಡಾ. ಸುನೀತಿಕುಮಾರ ಚಟರ್ಜಿಯವರ ಸಿದ್ಧಪಡಿಸಿದ್ದಾರೆ[೪೭] ಅದರಲ್ಲಿ ಮರ್ಕಟ ಎಂಬುದನ್ನು ಕೊಟ್ಟಿದ್ದಾರೆ. ಮರಕಟ ಎಂದರೆ ಮರದ ಬದಿಯಲ್ಲಿರುವ ಮರದ ಮೇಲಣ ಪ್ರಾಣಿಯೆಂಬರ್ಥವಿರುವಂತೆ ತೋರುತ್ತದೆ. ಮಂಗ ಎಂಬುದು ಮರ್ಕಟಕ್ಕೆ ಸಮೀಪದ ಶಬ್ದ. ಕೋಡಗ (ಶಾಖಾಮೃಗ) ಎಂಬುದರಲ್ಲಿ ಮರ್ಕಟದ ಅರ್ಥವು ಸ್ಪಷ್ಟವಾಗಿದೆ. ಕುರುಬರಲ್ಲಿ ಮರಗಪ್ಪ ಎಂಬ ಹೆಸರನ್ನಿಡುವ ಪದ್ಧತಿಯುಂಟು. ಮರಗಪ್ಪ, ಮರಗವ್ವ ಎಂಬ ದಿಕ್ಕಿನಿಂದ ವಿಚಾರಿಸಿದರೆ ಹನುಮನ ಜಾತಿ-ಜನಾಂಗದ ಮೇಲೆ ಇನ್ನೂ ನಿಚ್ಚಳಾದ ಬೆಳಕು ಬೀಳುತ್ತಲಿದೆ. ರಾಮಾಯಣದಲ್ಲಿ ಮೊದಲು ಈ ಮರಗ (ಮರ್ಕಟ) ದೇವರ ಹೆಸರು ಕಾಣುವದು. ಅಲ್ಲಿ ಬಂದ ಕಪಿಗಳು ಈಗ ನಾವು ಭಾವಿಸಿರುವಂತೆ ಗಿಡದ ಮೇಲಣ ಮಂಗಗಳಲ್ಲ. ಅವರಿಗೆ ಸಂಸ್ಕೃತದಲ್ಲಿರುವ ಇನ್ನೊಂದು ಹೆಸರು ಬಹಳ ಅರ್ಥಪೂರ್ಣವಾಗಿದೆ. ಇವರು ವಾ-ನರರು, 'ಅಥವಾ ಮನುಷ್ಯರು'; ಮನುಷ್ಯರೆಂದರೆ ಆರ್ಯರು, ಎಂಬ ಅಭಿಮಾನವಿದ್ದವರು ಆರ್ಯೇತರರನ್ನು ಮನುಷ್ಯೇತರ ಪ್ರಾಣಿವರ್ಗದಲ್ಲಿ ಎಣಿಸುತ್ತಿದ್ದರೆ ಸೋಜಿಗವಿಲ್ಲ. ಆರ್ಯರಕ್ತದೊಳಗಿನ ಈ ಸ್ವಾಭಿಮಾನದ ಊರ್ಮಿಯು ಈಗಲೂ ಜರ್ಮನಿಯಲ್ಲಿ ಉಕ್ಕಿಉಕ್ಕಿ ಹೊರ ಹೊಮ್ಮುತ್ತಲಿರುವುದನ್ನು ನೋಡಿದರೆ ಹಿಂದೂದೇಶದ ಆರ್ಯರ ಪ್ರಾಚೀನ ಸಾಹಿತ್ಯದಲ್ಲಿ ಆರ್ಯೇತರ ಜನಾಂಗದ ಕೆಲವರಿಗೆ ಮಂಗಗಳು (ವಾನರು), ಕೆಲರಿಗೆ ಹಕ್ಕಿಗಳು (ವಂಗರು), ಕೆಲರಿಗೆ ಕಿಂ-ನರರು, ಕಿಂ-ಪುರುಷರು ಎಂಬಿವೇ ಮೊದಲಾದ ಹೆಸರುಗಳು ದೊರೆತಿರುವುದು ಸ್ವಾಭಾವಿಕವೆ ಆಗಿದೆ.

ರಾಮಾಯಣದಲ್ಲಿ ವರ್ಣಿತರಾದ ವಾನನರು ಮಂಗಗಳಲ್ಲ; ಮನುಷ್ಯರೆಂಬ ಬಗ್ಗೆ ಸಂಶೋಧಕರಾದ ವಿದ್ವಾಂಸರಲ್ಲಿ ಯಾರಿಗೂ ಸಂದೇಹವೇ ಇಲ್ಲ. ಮತ್ತು ವಾನರರು ಆರ್ಯರಾಗಿರದೆ ದ್ರಾವಿಡ ಪಂಗಡಕ್ಕೆ ಸೇರಿದವರೆಂಬ ವಿಚಾರವೂ ಸುಮಾರಾಗಿ ಸರ್ವಸಾಮಾನ್ಯವಾಗಿದೆ. ಜಸ್ಟಿಸ್ ಪಾರ್ಜಿಟರರು ತಮ್ಮ ಗ್ರಂಥದಲ್ಲಿ ವಾನರರು ಸುಧಾರಿಸಿದ ಜನಾಂಗವೆಂಬ ಬಗ್ಗೆ ಹೀಗೆ ಬರೆದಿದ್ದಾರೆ.

> Thus only civilized communities in Southern India mentioned at that time were in Janasthana and Kishkindha, no others are alluded to,not even the Pandyas, through whose country Rama passed. Hence Pandya had not then come into existence, nor therefore cholas or Keralas.[೪೮]

ಕಿಷ್ಕಿಂಧೆಯು ಕರ್ಣಾಟದೊಳಗಿನದೆಂದು ಎಲ್ಲರಿಗೂ ಗೊತ್ತಿದ್ದ ಮಾತು. ಆದುದರಿಂದ , ರಾಮಾಯಣಕಾಲದ ವಾನರರೆಂಬ ಜನಾಂಗವು ಕರ್ಣಾಟರ ಮೊದಲಿಗರಿಗೆ ಸಂಬಂಧಪಟ್ಟದ್ದೆಂಬುದು ನಿಶ್ಚಿತ. ಆದುದರಿಂದ ಹನುಮನು ಪ್ರಾಚೀನ ಕರ್ಣಾಟದ ಒಂದು ಮಹಾವ್ಯಕ್ತಿ. ಮರ್ಕಟ ಕುಲದ ಹನುಮನು ಈ ನಾಡಿನ ಮರವರೆಂಬ ಪ್ರಾಚೀನ ಜನಾಂಗಕ್ಕೆ ಸಂಬಂಧಪಟ್ಟವನಾಗಿರಬೇಕೆಂದು ತೋರುತ್ತದೆ. ಮರವರು ಹಿಂದಕ್ಕೆ ವಿಂಧ್ಯದಿಂದ ದಕ್ಷಿಣಕ್ಕೆ ನಾಡಿನಲ್ಲಿ ಬಹಳ ಪ್ರಬಲರಾದ ಜನಾಂಗದವರಾಗಿದ್ದರೆಂಬುದನ್ನೂ ಅವರು ವೀರರೂ ಧೀರರೂ ಆಗಿದ್ದರೆಂಬುದನ್ನೂ ಈ ಮೊದಲು ವಿವರಿಸಿದ್ದಾಗಿದೆ.* ಮರವರ ನೆಲೆವೀಡಾದ ಪ್ರಾಚೀನ ಕರ್ಣಾಟ (ಈಗಣ ಮಹಾರಾಷ್ಟ್ರ ಸಹಿತ) ದೇಶದಲ್ಲಿರುವಷ್ಟು ಹನುಮನ ಮಹಾತ್ಮ್ಯವು ಹಿಂದೂದೇಶದ ಉಳಿದ ಭಾಗದಲ್ಲಿ ಎಲ್ಲಿಯೂ ಇಲ್ಲ. ಕರ್ಣಾಟದ ಪ್ರಾಚೀನ ಜನಾಂಗಕ್ಕೆ ಸಂಬಂಧಪಟ್ಟವರಾದ ಮಧ್ಯ ಹಿಂದುಸ್ಥಾನದ ಕುರ್ಖ (ಕುರುಬ)ರು ತಾವು, ಹನುಮನ ಕುಲದವರೆಂದು ಪರಂಪರಾಗತವಾಗಿ ಹೇಳಿಕೊಳ್ಳುತ್ತ ಬಂದಿದ್ದಾರೆ.[೪೯] ಅಂತು, ಎಂತು ನೋಡಿದರೂ ಹನುಮನೆಂಬ ಮರ್ಕಟವೀರನು ಆರ್ಯನಂತೂ ಅಲ್ಲವೇ ಅಲ್ಲ; ದ್ರಾವಿಡ ವರ್ಗದವನು-ಕನ್ನಡಿಗನು.

ವಾಲ್ಮೀಕಿ ರಾಮಾಯಣದೊಳಗಿನ ಮರುನ್ನಂದನನು ಇವನೇ. ಇವನಿಗೆ ವಾಯುಪುತ್ರ; ಪವಮಾನಸೂನು ಎಂದು ಮುಂತಾಗಿಯೂ ಹೇಳುವುದುಂಟು. ಹನುಮನಿಗೆ ಉಪಯೋಗಿಸಿದ ಪರ್ಯಾಯ ಶಬ್ದಗಳನ್ನು ನೋಡಿದರೆ ವೇದಗಳಲ್ಲಿ ಉಪಯೋಗಿಸಿದ ಮರುತ್, ಪವಮಾನ ಮೊದಲಾದ ಶಬ್ದಗಳ ಮೂಲಾರ್ಥವು ಬದಲಾದುದು ಗೋಚರವಾಗುತ್ತದೆ.[೫೦] ವೇದಗಳಲ್ಲಿ ಮರುತರಿಗೆ ವಾಯುವಿನಷ್ಟು ಉಚ್ಚಸ್ಥಾನವಿಲ್ಲ. ಮರುತರು ಸೇವಕರು. ವಾಯುವು ಇಂದ್ರನಿಗೆ ಗೆಳೆಯನು. ಸಮಾನಸ್ಕಂಧನು. ಸಮಾನ ಆಸನವುಳ್ಳವನು. ಮರುತರು ಇವನ ಪರಿವಾರದವರಂತೆ ಒಂದೆಡೆಗೆ ಋಗ್ವೇದದಲ್ಲಿ ಕಂಡಬರುತ್ತದೆ.[೫೧] ವಾಯುದೇವರಿಗೆ ಇರುವ ಇಂದ್ರನ ಹತ್ತರಿನ ಸಮಾನಸ್ಥಾನದ ಮೇಲ್ಮೆಯು ವಿಷ್ಣುವಿಗಾಗಲಿ ಬೇರಿನ್ನಾವ ದೇವರಿಗಾಗಲಿ ಇಲ್ಲ. ನಾಳೆ ಬರುವ ಕಲ್ಪದ ಬ್ರಹ್ಮಪದವಿಯು ವಾಯುದೇವರಿಗೆ ಸಲ್ಲತಕ್ಕುದಿದೆಯೆಂದು ಮಾಧ್ವಸಂಪ್ರದಾಯದಲ್ಲಿರುವ ನಂಬುಗೆಯ ಮೇಲಿಂದಲೂ ವಾಯುದೇವರ ಸ್ಥಾನವು ಶ್ರೇಷ್ಠವಾಗಿದೆಯೆಂಬ ಮಾತು ನಿದರ್ಶನಕ್ಕೆ ಬರುತ್ತಲಿದೆ. ವಾಯುದೇವರಿಗೆ ಪ್ರಾಣದೇವರು, ಮುಖ್ಯಪ್ರಾಣನೆಂದು ಕರೆವ ವಾಡಿಕೆಯಿದೆ. ಈ ಪರಂಪರೆಯು ಋಗ್ವೇದಕ್ಕೆ ಅನುಸರಿಸಿದೆ. 'ಆತ್ಮಾ ತೇ ವಾತಃ' (೭.೮೭.೨; ೧೦.೯ ೨.೧೩) ಎಂಬರ್ಥದ ವಚನಗಳುಂಟು. ಆದುದರಿಂದ ಪ್ರಾಣ ದೇವರೆನಿಸುವ ವಾಯುವು ಪರಿವಾರಗಣವೆನಿಸುವ ಮರುತನಾಗಲಾರ. ಆದಕಾರಣ, ಮುಂದಿನ ಕಾಲದಲ್ಲಿ ಹನುಮನಿಗೆ ವಾಯುಸುತನೆಂದು ಹೇಳಿದುದು ಅಸಮರ್ಪಕ. ಮರುತ್, ಮತ್ತು ವಾಯುಮೂಲದಲ್ಲಿ ಸಮಾನಾರ್ಥಕ ಶಬ್ದಗಳಲ್ಲ. Vayu is rarely connected with the Maruts ಎಂದು ಮ್ಯಾಕಡೊನೆಲ್ಲರು ತಾವು ಋಗ್ವೇದದಲ್ಲಿ ಕಂಡುದನ್ನು ಹೇಳಿದ್ದಾರೆ.

ಇಂದ್ರಸಖ, ಮುಖ್ಯಪ್ರಾಣ, ವಾಯುದೇವರು ಬೇರೆ; ಪರಿವಾರದವರಾದ ಮರುತಲ್ಲಿ ಒಬ್ಬನಾದ ಮರುನ್ನಂದನ ಹನುಮನು ಬೇರೆ. ಆದರೆ, ಲೋಕರೂಢಿಯಲ್ಲಿ ಈ ತಾರತಮ್ಯವಿವೇಕವು ಮುಂದೆ ಉಳಿಯದೆ ಹನುಮನೇ ಮುಖ್ಯಪ್ರಾಣನೆಂಬ ಗ್ರಹಿಕೆಯು ದೃಢವಾಗುತ್ತ ಬಂದಿರಬೇಕು. ಮರವರ ಕುಲದಲ್ಲಿ ಹುಟ್ಟಿದ (ಮರ್ಕಟರಾಯ) ವೀರನೊಬ್ಬನಿಗೆ ಮರುತ್ಪುತ್ರನೆಂದು ವರ್ಣಿಸಿರುವುದರಲ್ಲಿ ವಾಲ್ಮೀಕಿಯು ವೇದಕಾಲದ ಪರಂಪರೆಯನ್ನೇ ಇನ್ನೊಂದು ಬಗೆಯಿಂದ ಸ್ಪಷ್ಟಗೊಳಿಸಿದ್ದಾನೆ. ಮರುದ್ಗಣವು ಆರ್ಯಪಂಗಡಕ್ಕೆ ಸಂಬಂಧ ಪಟ್ಟುದಲ್ಲವೆಂದು ಮೇಲೆ ಬೇರೆ ಬೇರೆ ಕಾರಣಗಳನ್ನು ಕೊಟ್ಟು ವಿವರಿಸಿದ್ದಾಗಿದೆ. ಈಗ ವಾಲ್ಮೀಕಿಯು ವರ್ಣಿಸಿದ ಮರುತ್ಪುತ್ರನ ಕುಲಗೋತ್ರಗಳ ವಿಚಾರವೂ ಅದಕ್ಕೆ ಇನ್ನಿಷ್ಟು ದೃಢತೆಯನ್ನುಂಟು ಮಾಡುತ್ತಲಿದೆ.

---

* ಈ ಸಂಬಂಧವಾದ ಚರ್ಚೆಗಳನ್ನು ಗಮನಿಸುವವರು 'ಕರ್ಣಾಟದ ವೀರಕ್ಷತ್ರಿಯರು' ಗ್ರಂಥದ ಮೊದಲ ಆರು ನೆಲೆಗಳಲ್ಲಿ ಬರುವ ವಿವರಗಳನ್ನು ಗಮನಿಸಬೇಕು (ಸಂ.)

ವಾಯುವು ಮರುತರ ಜನ್ಮಕ್ಕೆ ಕಾರಣನೆಂದು ಋಗ್ವೇದದಲ್ಲಿ ಒಂದೆಡೆಗೆ (೧.೧೩೪.೪) ಬಂದಿರುವುದಾದರೂ ಮುಖ್ಯವಾಗಿ ಇವರು ರುದ್ರಪುತ್ರರು ಮರುತರು, ರುದ್ರಿಯರು, ರುದ್ರಪುತ್ರರು ಎಂದು ಹಲವೆಡೆಗಳಲ್ಲಿ ವರ್ಣನೆಗಳು ಬಂದಿವೆ. ವಾಯುವು ಜೀವನಧಾರಣೆಗೆ, ಪೋಷಣೆಗೆ ಆವಶ್ಯಕವಾದ ಪ್ರಶಾಂತರೂಪಧಲ್ಲಿದ್ದುದು. ಮರುತ ವೆಂಬುದು ಝಂಝಾವಾತ; ಸುಟ್ಟರೆಗಾಳಿ. ರುದ್ರಪುತ್ರರು ಮರುತರು ಎಂದು ವೈದಿಕಋಷಿಗಳು ಹೇಳಿರುವಲ್ಲಿ ಬೇಸಗೆಯ ಉರಿಯಿಂದಲೆ ಸುಟ್ಟರೆಗಾಳಿಗಳು, ಚಕ್ರಾಕಾರವಾಗಿ ತಿರುಗುವ ಬಿರುಗಾಳಿಗಳು ಏಳುವುದೆಂದು ಅವರ ಭಾವನೆ ಇದ್ದಿತೇನೊ ತಿಳಿಯದು. ಏಕೆಂದರೆ, ರುದ್ರನು ಉರಿ (ಅಗ್ನಿ) ರೂಪನೆಂದು ವೇದಗಳಲ್ಲಿ ವರ್ಣನೆಗಳುಂಟು. ವಾತ (ವಾಯು)ವು ಮರುತ (ಬಿರುಗಾಳಿ) ಮೂಲನೆಂದೂ ಆಧುನಿಕರು ಹೇಳಬಹುದಾಗಿದೆ. ಈ ದೃಷ್ಟಿಯಿಂದ ವಾಯುವು ಮರುತರ ತಂದೆಯೆಂದು ಗ್ರಹಿಸಬಹುದಾಗಿದ್ದರೂ ಉಳಿದ ವೈದಿಕ ಪರಂಪರೆಗಳನ್ನು ಇದರೊಡನೆ ವಿಚಾರಿಸಿದರೆ ಮರುತರು ರುದ್ರ-ಪುತ್ರರೆಂಬುದೇ ವೇದಗಳ ಗ್ರಹಿಕೆಯಾಗಿದ್ದಿತೆಂದು ಹೇಳಬೇಕಾಗುತ್ತದೆ.

ಇದು ಏನೇ ಇರಲಿ; ಈಗ ಹನುಮನೆಂಬ ದೇವತೆಯಲ್ಲಿ ಶೈವ ಮತ್ತು ಮಾಧ್ವ ಹೀಗೆ ಎರಡು ಪರಂಪರೆಗಳ ಸಂಗಮವಾಗುತ್ತಿದ್ದುದು ಕಂಡುಬರುತ್ತದೆ. ಮಾಧ್ವರು ಮುಖ್ಯಪ್ರಾಣ, ವಾಯುದೇವರು ಎಂದು ಹನುಮನಿಗೆ ಹೇಳುವುದು ತಾರತಮ್ಯದ ತತ್ವಜ್ಞಾನದ ದೃಷ್ಟಿಯಿಂದ ಸರಿ ಹೋಗುವುದಿಲ್ಲ. ನಾಳಿನ ಕಲ್ಪದ ಬ್ರಹ್ಮನು, (ವೇದದಲ್ಲಿ ಇಂದ್ರನ ಸಮಾನಸ್ಕಂಧನು) ಆದ ಮುಖ್ಯಪ್ರಾಣನು ರಾಮನ ಸೇವಕನೆಂದು ಗ್ರಹಿಸುವುದು ಉಚಿತವೆನಿಸಲಾರದು. ತಾರತಮ್ಯ ದೃಷ್ಟಿಯಿಂದಂತಲೂ ಇದು ಸ್ವಲ್ಪವೂ ಸರಿ ಹೋಗುವುದಿಲ್ಲ. ಶ್ರೀರಾಮಸೇವಕ ಹನುಮನು ಪರಿವಾರ ಗಣದ ಮರುತರಲ್ಲೊಬ್ಬನೆಂಬುವುದೇ ಹೆಚ್ಚು ಸಮಂಜಸವಾಗಿದೆ. ವೈದಿಕ ಪರಂಪರೆಗೂ ಇದು ಅನುಸರಿಸಿದೆಯೆಂಬ ಮಾತನ್ನು ಮೇಲೆ ಹೇಳಿದ್ದಾಗಿದೆ. ಶೈವ ಪರಂಪರೆಯ ಹನುಮನ ವರ್ಣನೆಗಳಲ್ಲಿ ಇನ್ನೂ ಚೆನ್ನಾಗಿ ಈ ಮಾತಿನ ಮನವರಿಕೆಯಾಗುತ್ತದೆ. ವಿಭೀಷಣಕೃತವೆಂದು ಹೇಳುವ ಹನುಮತ್‌ಸ್ತೋತ್ರವೊಂದುಂಟು. ಅದರಲ್ಲಿ 'ವಡವಾನಲ ಹನೂಮಾನ್ ದೇವತಾ', 'ಮಹಾವೀರ ರುದ್ರಾವತಾರ', 'ವೀರ', 'ಗಂಭೀರನಾದ' ಎಂದು ಮುಂತಾದ ವರ್ಣನೆಯಿದೆ. ಅಭಿಷೇಕದ ಕಾಲಕ್ಕೆ ಹನುಮನಿಗೆ ರುದ್ರಾಧ್ಯಾಯದ ಮಂತ್ರಗಳನ್ನು ಹೇಳುವರು. ಯಾವುದೊಂದು ದೇವತಾ ಸ್ಥಾಪನಾಕಾಲದಲ್ಲಿ ಆಯಾ ದೇವರ ವಿಶಿಷ್ಟ ಮಂತ್ರಗಳುಂಟು. ಹನುಮನ ಸ್ಥಾಪನೆಯ ಕಾಲಕ್ಕೆ ರುದ್ರನ ಸಂಬಂಧದ ಮಂತ್ರಗಳನ್ನೇ ಹೇಳುವರು. ಮಹಾರಾಷ್ಟ್ರದಲ್ಲಿ ನವಚೈತನ್ಯವನ್ನುಂಟುಮಾಡುವುದಕ್ಕಾಗಿ ರಾಮದಾಸರು ಹನುಮನ ಉಪಾಸನೆಯನ್ನು ಆರಂಭಿಸಿದರು. ಆ ಹನುಮನನ್ನು ಸ್ತುತಿಸಿದ ಒಂದು ಸ್ತೋತ್ರವನ್ನು ರಾಮದಾಸರು ಬರೆದಿದ್ದು, ಅದು ಆ ಪ್ರಾಂತದಲ್ಲಿ ಬಹಳ ಲೋಕಪ್ರಿಯವಾಗಿದೆ. ಅದರಲ್ಲಿ ಅವರು ಆರಂಭವನ್ನೇ ಹೀಗೆ ಮಾಡಿದ್ದಾರೆ; 'ಭೀಮರೂಪೀಮಹಾರುದ್ರ, ವಜ್ರಹನುಮಾನ, ಮಾರುತೀ'; ಅಲ್ಲದೆ 'ಪ್ರಭಂಜನಾ' 'ಭವ್ಯಸಿಂಧೂರ ಲೇಪನಾ', 'ಪುರಾತನಾ', 'ಕಾಲಾಗ್ನಿ, ಕಾಲರುದ್ರಾಗ್ನಿ ಈ ಮಾತುಗಳೂ ಅರ್ಥವತ್ತಾಗಿವೆ. 'ಭೀಮ'ನೆಂಬ ಹೆಸರು ಮೊದಲು ಶಿವನಿಗೇ ಇದ್ದುದು ವೇದದಿಂದ ತಿಳಿಯುತ್ತದೆ. ವಿಭೀಷಣಕೃತವೆಂದು ಹೇಳುವ ಸಂಸ್ಕೃತದ ಸ್ತೋತ್ರದಲ್ಲಿಯೂ, ರಾಮದಾಸರ ಆರೇ ಪದದಲ್ಲಿಯೂ ಹನುಮನನ್ನು ಅಗ್ನಿಗೆ, ರುದ್ರನಿಗೆ, ಕೆಂಪಿಗೆ (ಸಿನ್‌ಧೂರ) ಹತ್ತರದಲ್ಲಿ ತಂದು ನಿಲ್ಲಿಸಿದುದು ಶಿ(೦)ವನ ಮೂಲಕಲ್ಪನೆಗೆ ಎಷ್ಟು ಹೊಂದಿಕೆಯುಳ್ಳದಾಗಿದೆ!

ಆದುದರಿಂದ, 'ಚಂಡಿಸಿ ಶಿವನ ವರಗಳನ್ನೆಲ್ಲ ಖಂಡಿಸಿದಾತನು' ಎಂದು ಪುರಂದರದಾಸರು ಆರತಿ ಎತ್ತಿದ ಮಾಧ್ವಪರಂಪರೆಯ ಹನುಮನು ಜನಸಾಮಾನ್ಯರಿಂದ ಪೂಜೆಗೊಳ್ಳುತ್ತಿರುವ ಹನುಮನಲ್ಲವೆಂದು ಹೇಳದೆ ಗತಿಯಿಲ್ಲ. ಆದರೆ, ಮಾಧ್ವರು ವಾಯುದೇವರನ್ನೂ ಮುಖ್ಯಪ್ರಾಣನನ್ನೂ ಜನಸಾಮಾನ್ಯರ ಹನುಮನ ಮೇಲೆಯೆ ಆರೋಪಿಸಿದುದು ಸುಮ್ಮನೆ ತೊಡಕಿಗೆ ಕಾರಣವಾಗಿದೆ. ಮುಖ್ಯಪ್ರಾಣ (ವಾಯು) ದೇವರ ಸ್ವತಂತ್ರ ಗುಡಿಗಳು ಇಲ್ಲದೆ ಇದ್ದುದರಿಂದ ಈ ಬಗೆಯ ಕದಲು ಬದಲಿಗೆ ಇಂಬು ದೊರೆತಿರುವ ಸಂಭವವುಂಟು, ಅಥವಾ ವ್ಯಾಸರಾಯರೆ ಮೊದಲಾದವರು ಸ್ಥಾಪಿಸಿದ ಗುಡಿಗಳಲ್ಲಿ ಮುಖ್ಯಪ್ರಾಣನ ರೂಪ ಆಕಾರಗಳನ್ನು, ಜನಸಾಮಾನ್ಯರಲ್ಲಿ ಮೊದಲಿನಿಂದ

ರೂಢವಾಗಿದ್ದ ಹನುಮನ ಆಕಾರದಂತೆಯೆ ಸಾಮಾನ್ಯವಾಗಿ ಮಾಡಿಬಿಟ್ಟುದ್ದರಿಂದಲೂ ಈ ದಿಗ್ಭ್ರಮೆಯು ತಲೆದೋರಿರಬಹುದು. ದಾಸರ ವರ್ಣನೆಗಳಲ್ಲಿಯೆ ಒಂದು ಸಂದಿಗ್ಧ ಸ್ಥಳವು ನನಗೆ ತೋರುತ್ತಲಿದೆ. 'ರೋಮರೋಮಕೆ ಕೋಟಿ ಲಿಂಗವುದುರಿಸಿದ' ಎಂದು ಪುರಂದರದಾಸರು ಹನುಮನನ್ನು ಕುರಿತು ಹಾಡಿದ್ದುಂಟು. ಇಲ್ಲಿ ಲಿಂಗ ಎಂದರೆ ರುದ್ರ-ಶಿವನೆಂಬರ್ಥವೆಂದು ಎಲ್ಲರೂ ಒಪ್ಪುವರು. ಇವರು ಪೂರ್ವಾಪರ ಕಥೆಯಲ್ಲಿಯೂ ಇದೆ ಅರ್ಥ ವುಂಟು. 'ರೋಮ-ರೋಮಕೆ ಕೋಟಿ ಲಿಂಗಗಳನ್ನು ಉದುರಿಸುವ ಶಕ್ತಿಯು ಹನುಮನಿಗೆ ಹೇಗೆ ಬಂದಿತು? ಬೆಂಕಿಯೆ ಬೆಂಕಿಯ ಕಿಡಿಗಳನ್ನು ಉದುರಿಸಬಲ್ಲುದು, ಅಲ್ಲವೊ? ಹನುಮನಲ್ಲಿ ಶಿವಶಕ್ತಿಯು ಇಲ್ಲದಿದ್ದಲ್ಲಿ ಶಿವಲಿಂಗಗಳನ್ನು ಆತನು ಹೇಗೆ ತಾನೆ ಉದುರಿಸಲು ಸಮರ್ಥನಾಗುತ್ತಿದ್ದನು? ಎಂದರೆ ಇಲ್ಲಿ, ಮಾಧ್ವಪರಂಪರೆಯ ವರ್ಣನೆಯಲ್ಲಿಯೂ ಸ್ವಲ್ಪ ತೊದಲಿನಂತೆ ತೋರುತ್ತಲಿದೆ.

ಬಲಭೀಮನು ವೀರದೇವರು; ವೀರರ ದೇವರು; ಎಂದು ಎಲ್ಲರೂ ಒಪ್ಪತಕ್ಕ ಮಾತು. ಮರುತರ ತಂದೆಯಾದ ರುದ್ರ-ಶಿವನು ವೀರದೇವರು, ಎಂದು ಈ ಮೊದಲು ವೇದಗಳ ಉಲ್ಲೇಖಗಳಿಂದ ತೋರಿಸಿದ್ದಾಗಿದೆ. ಜನಸಾಮಾನ್ಯರು ನಮ್ಮ ನಾಡಿನಲ್ಲಿ ತಮ್ಮ ಬೇನೆ ಬೇಸರಿಕೆಗಳನ್ನು ಕಳೆದುಕೊಳ್ಳಲು, ನಿರೋಗಿಗಳೂ ವೀರ್ಯವಂತರೂ ಆಗಲು ಬಲಭೀಮನ ಸೇವೆ ಮಾಡುವ ರೂಢಿಯು ಅನಾದಿಕಾಲದಿಂದಲೂ ನಡೆದುಬಂದಂತೆ ತೋರುತ್ತದೆ. ಬರಿ ರಾಮಾಯಣದ ಹನುಮನ ವರ್ಣನೆಗಳಿಂದ ಈ ಪರಂಪರೆಯ ಸಂಪೂರ್ಣ ಅರ್ಥವು ನನಗೆ ಆಗಿದ್ದಿಲ್ಲ. ಶ್ರೀರಾಮಸೇವಕ ಹನುಮನು ಮಹಾಪರಾಕ್ರಮಶಾಲಿ; ಆ ಪರಾಕ್ರಮಶಾಲಿಯ ಆದರ್ಶವು ಕಣ್ಣೆದುರಿಗಿರಬೇಕೆಂದು ಗರುಡಿಯವರೂ, ವಿದ್ಯಾರ್ಥಿಗಳೂ ಆತನ ಪೂಜೆಮಾಡುತ್ತಿರಬಹುದು. ಆದರೆ ಕೆಮ್ಮು, ನೆಗಡಿ, ಚಳಿ,ಉರಿ, ಗಾಳಿ, ಧೂಳಿ ಏನೇ ಆದೊಡನೆ ಹನುಮನಿಗೆ ನಡಕೊಳ್ಳುವ ಸಂಪ್ರದಾಯವು ಹಳ್ಳಿಗರಲ್ಲಿದೆ. ಇದಕ್ಕೆ ಕಾರಣ ವೇನು? ಶ್ರೀರಾಮನು ಹನುಮನ ಒಡೆಯನಂತೆ ಹಾಗಾದರೆ ಅವನಿಗೆ ಶರಣುಹೋಗದೆ ಜನಸಾಮಾನ್ಯರು ಹನುಮನಿಗೆ ಮೊರೆಯಿಡುವ ಕಾರಣವೇನು? ಋಗ್ವೇದದ ಋಚೆಗಳಲ್ಲಿ ಇದರ ಉತ್ತರವು ನನಗೆ ದೊರೆತಿತು. ಈ ದೇವರು ಬರಿ ರಾಮಾಯಣ ಕಾಲದ ಕಪಿ ಅಲ್ಲ; ವೇದಕಾಲದಿಂದಲೂ ಪರಂಪರೆಯಿಂದ ಬಂದ ದೇವರು ಇದು. ಮರುತರೆಂಬ ಹೆಸರಿನಿಂದ ವೇದಕಾಲದಲ್ಲಿ ಪೂಜೆಗೊಳ್ಳುತ್ತಿದ್ದ ದೇವತೆಯನ್ನೇ ವಾಲ್ಮೀಕಿಯು ತನ್ನ ಪ್ರತಿಭಾಶಕ್ತಿಯ ಪ್ರಭಾವದಿಂದ ರಾಮಾಯಣದ ಕುಂದಣದಲ್ಲಿ ಹೊಳೆವ ಒಂದು ರತ್ನವನ್ನಾಗಿ ಮಾಡಿರಿಸಿದ್ದಾನೆ. ರಾಮಾಯಣ ಕಾಲದ ಒಬ್ಬ ಮಹಾವೀರನಿಗೆ-ಹನುಮನಿಗೆ, ವೇದಕಾಲದ ಮರುತ್ ಪರಂಪರೆಯನ್ನು ತಂದು ತಳುಕು ಹಾಕಿದ್ದಾನೆ. ನಮ್ಮ ಆದಿಪಂಪನು ಅರಿಕೇಸರಿಯನ್ನು ವಿಕ್ರಮಾರ್ಜುನನ್ನಾಗಿ ಮಾಡಿರುವಂತೆ. ಆದುದರಿಂದ ಪಂಪನ ಈ ರೀತಿ ಹೊಸದಲ್ಲ; ವ್ಯಾಸ-ವಾಲ್ಮೀಕಿಗಳು ಮಾಡಿದ ಕೈವಾಡ (ಮಾಟ)ವನ್ನೇ ಪಂಪನಲ್ಲಿಯೂ ಕಾಣಬಹುದಾಗಿದೆ. ಮರುತರು ಉತ್ತಮೋತ್ತಮ ಔಷಧಿಗಳಿರುವ ಸ್ಥಳಗಳನ್ನು ಬಲ್ಲರು; ಅವರು ಅಲ್ಲಿಂದ ದಿವ್ಯ ಔಷಧಿಗಳನ್ನು ತಂದು ರೋಗಪರಿಹಾರ ಮಾಡುವರು, ಅಮೋಘಶಕ್ತಿಯನ್ನೀ ಯುವರೆಂಬ ಶ್ರದ್ಧೆಯು ಮೂಲವೇದದಲ್ಲಿಯೆ ಇದೆ.

> ಯುತ್ ಸಿಂಧೌ ಯತ್ ಅಸಿಕ್ನ್ಯಾಂ ಯತ್ ಸಮುದ್ರೇಷು ಮರುತಃ।
> ಸುಟಿಬರ್ಹಿಷಃ ಯತ್ ಪರ್ವತೇಷು ಭೇಷಜಂ॥
> ವಿಶ್ವಂ ಪಶ್ಯಂತಃ ಬಿಭೃಥ ತನೂಷು ಆ ತೇನ ನಃ।
> ಅಧಿವೋಚತ ಕ್ಷಮಾರಪಃ ಮರುತಃ ಆತುರುಸ್ಯ ನಃ ಇಷ್ಕರ್ತವೀಽಹ್ರುತಂ ಪುನಃ

ಎಲೈ ಕಾಂತಿಯುಕ್ತರಾದ ಮರುತರೆ, ಸಿಂಧೂನದಿಯಲ್ಲಿರುವ, ಅಸಿಕ್ನಿ ನದಿಯಲ್ಲಿರುವ (ಸಮುದ್ರದಲ್ಲಿರುವ) ಆದರಂತೆ ಪರ್ವತಗಳಲ್ಲಿರುವ ಔಷಧಿಗಳನ್ನು ನೀವು ಬಲ್ಲಿರಿ; ಅವನ್ನು ನೀವು ನಮ್ಮ ಮೈಯಲ್ಲಿ ತನ್ನಿರಿ. ನಮ್ಮನ್ನು ನಿರೋಗಿಗಳನ್ನಾಗಿ ಮಾಡಿರಿ. ಎಲೈ ಮರುತರೆ, ನಮ್ಮಲ್ಲಿ ಬೇನಿಗನಾಗಿದ್ದವನ ಬೇನೆಯ ಲಕ್ಷಣ ಗಳನ್ನು ಹೋಗಲಾಡಿಸಿರಿ; ಅವನನ್ನು ಮತ್ತೆ ಮೊದಲಿನಂತೆ ಮಾಡಿರಿ.

ಈ ವೈದಿಕ ಪರಂಪರೆಗೆ ಅನುಸರಿಸಿಯೆ ವಾಲ್ಮೀಕಿಯು ರಾಮಲಕ್ಷ್ಮಣರನ್ನು ಬದುಕಿಸುವುದಕ್ಕಾಗಿ ಸಂಜೀವಿನಿಯ ದಿವ್ಯಔಷಧಿಯನ್ನು ತರಲು ತನ್ನ ಕಾವ್ಯದಲ್ಲಿ ಅಂಗದ, ನೀಲ, ಜಾಂಬುವಂತರನ್ನು ಬಿಟ್ಟು ಹನುಮನ ಯೋಜನೆಯನ್ನೇ ಮಾಡಿರುವುದರಲ್ಲಿ ತುಂಬ ಔಚಿತ್ಯವಿದೆ; ಪೂರ್ವಪರಂಪರೆಯ ರಹಸ್ಯವು ಅಡಗಿದೆ. ಬೇನೆ ಬೇಸರಿಕೆಗಳನ್ನು ಕಳೆದುಕೊಳ್ಳಲು ವೇದಕಾಲದಲ್ಲಿ ರುದ್ರ-ಶಿವ ಮತ್ತು ಮರುತರನ್ನೇ ಆರಾಧಿಸುವ ಪದ್ಧತಿ ಇದ್ದಿತೆಂದು ಋಗ್ವೇದದಿಂದ ಕಂಡಬರುತ್ತದೆ. ಆ ಪರಂಪರೆಯು ತಲೆತಲಾಂತರಗಳಿಂದ ಸಾಗಿ ಬಂದುದನ್ನು ನಮ್ಮ ಹಳ್ಳಿಗರಲ್ಲಿಯೆ ಕಾಣಬಹುದು. ಸುಶಿಕ್ಷತರೆನಿಸುವ ಮೇಲಿನ ವರ್ಣದವರಲ್ಲಿ ಮಾತ್ರ ಈ ಸಂಪ್ರದಾಯವು ಉಳಿದಿಲ್ಲ. ಹನುಮನ (ಮರುತರ) ಹಕ್ಕನ್ನು ವೆಂಕಟೇಶ, ರಾಮಕೃಷ್ಣಾದಿ ಬೇರೆ ದೇವತೆಗಳು ಕಸಿದುಕೊಂಡಿದ್ದಾರೆ. ಹಳ್ಳಿಗರು ಮಾತ್ರ ಇನ್ನೂ ಹನುಮನ (ಮರುತರ) ಬೆನ್ನು ಬಿಟ್ಟಿಲ್ಲ! ವೇದಕಾಲದ ನಡೆವಳಿಯು ಹಾಗೆಯೆ ಅವರಲ್ಲಿ ಇಂದಿಗೂ ಜೀವಂತವಾಗಿದೆ. ಆದರೆ, ಅದರ ಅರಿವು ಮಾತ್ರ ಅವರಿಗೆ ಉಳಿದಿಲ್ಲ!

ವೇತಾಳದ ಒಡೆಯ ಹನುಮ

ಕಾಯುವ ಶಕ್ತಿಯಿರುವ ಈ ರುದ್ರ-ಶಿವನಲ್ಲಿ ಹಾಗೂ ಆತನ ಪರಿವಾರದ ಮರುದ್ಗಣದಲ್ಲಿ ಕೊಲ್ಲುವ ಸಾಮರ್ಥ್ಯವು ಉಂಟೆಂಬ ನಂಬುಗೆಯಾಗುವುದು ಸ್ವಾಭಾವಿಕವಾಗಿದೆ. ಕೊಲ್ಲುವ ಸಾಮರ್ಥ್ಯವುಳ್ಳ ದೇವರು, ಎಂದ ಬಳಿಕ ಆತನು ಮೃತ್ಯುದೇವತೆಯೂ ಅಹುದು ಎಂಬ ಭಾವನೆಯು ಕಾಲಕ್ರಮದಲ್ಲಿ ಬೆಳೆದುಕೊಂಡು ಬಂದಿರಬೇಕು. ಅದರಿಂದ ಶಿವನಿಗೆ ಶ್ಮಶಾನವಾಸವು ಪ್ರಾಪ್ತವಾಗಿರಲಿಕ್ಕೆ ಸಾಕು. ಇದಕ್ಕೆ ಕಾಪಾಲಿಕರ ಸಹಕಾರವು ಸಾಕಷ್ಟು ದೊರೆತಿದೆ.

ಈ ಭಾವನೆಗಳ ಪ್ರಾಬಲ್ಯವು ಹೆಚ್ಚಾದಂತೆ ಶಿವನ ಪರಿವಾರವು ಭೂತಗಣವಾಯಿತು. ವೇದಕಾಲದ ಮರುತರ ನೆನಪು ಹಾರಿಹೋಯಿತು. ಶ್ರಾದ್ಧದಲ್ಲಿ ರುದ್ರನು ಬಂದನು. ಮಡಿದ ತಂದೆ ವಸುಸ್ವರೂಪ. ಅಜ್ಜನು ರುದ್ರರೂಪ; ಮುತ್ತನು ಆದಿತ್ಯನಾಗುವನೆಂದು ಶ್ರದ್ಧೆ ತಲೆದೋರಿತು. 'ಗಾಳಿ' ಆದರೆ ಹನುಮನಿಗೆ ಶರಣು ಹೋಗುವ ಪದ್ಧತಿಯು ಹಳ್ಳಿಗಳಲ್ಲೆಲ್ಲ ಕಂಡುಬರುತ್ತದೆ. ದೆವ್ವ (ಭೂತ) ಗಳ ಮೇಲಧಿಕಾರಿ ವೇತಾಳ; ಆ ವೇತಾಳನ ಮೇಲಧಿಕಾರಿ ಹನುಮನೆಂಬ ನಂಬುಗೆಯು ಸಾರ್ವತ್ರಿಕವಾಗಿದೆ. ಶ್ರೀರಾಮದೂತ ಹನುಮನು ಭೂತ-ವೇತಾಳಗಳ ಒಡೆಯನಾಗುವುದಕ್ಕೆ ಕಾರಣವಿಲ್ಲ. ಇಲ್ಲಿ ರುದ್ರನ ಅಂಶರಾದ ಮರುತರ ಅಂಶನೆಂದು ಪ್ರತೀತಿಯಿರುವ ಹನುಮನು ಭೂತ-ವೇತಾಳಗಳನ್ನು ಆಳುತ್ತಾನೆಂದು ಹೇಳಿದರೆ ಮಾತ್ರ ಅದು ಹೆಚ್ಚು ಸಮಂಜಸ ವಾದೀತು. ಆ ಬಗೆಬಗೆಯಾಗಿಯೂ ರುದ್ರ-ಮರುನ್ನಂದರ ಸಂಬಂಧವೇ ದೃಢಪಡುತ್ತಲಿದೆ.

ಮರುನ್ನಂದನ ಹನುಮನ ಮೂರ್ತಿಯನ್ನು ಕರ್ನಾಟದಲ್ಲಿ ಮಾತ್ರ ಯಥಾವತ್ತಾಗಿ ಕಾಣಬಹುದೆಂದು ನನ್ನ ಮನವರಿಕೆಯಾಗಿದೆ.' ಮರುನ್ನಂದನ ಎಂಬ ಶಬ್ದಯೋಜನೆಯಿಂದ ವೈದಿಕಮರುತರಿಗೆ ಸಂಬಂಧವಿಟ್ಟು ವರ್ಣಿಸಿದಂತಹ ಹನುಮನೆಂಬ ರಾಮಾಯಣದ ವ್ಯಕ್ತಿಯನ್ನು ಮಂಗನ ಆಕಾರದಿಂದ ಚಿತ್ರಿಸಿದ್ದುದರ ರಹಸ್ಯವೇನು? ಮಂಗಗಳು ಮರದಿಂದ ಮರಕ್ಕೆ ನೆಗೆವ, ಜಿಗಿವ, ಹಾರುವ ಚಪಲಪ್ರಾಣಿಗಳು, ಆದುದರಿಂದ, ಈ ರೂಪ ಎಂದು ಸಮರ್ಥನೆ ಮಾಡಬಹುದು; ಏಕೆಂದರೆ ಮರುತರು ಚಂಚಲರು; ಹಾರಾಡುವವರು ಸರಿ. ಹನುಮನನ್ನು ಈ ದೃಷ್ಟಿಯಿಂದ ಮಂಗನ ಆಕಾರದಲ್ಲಿಯೆ ಎಲ್ಲೆಲ್ಲಿಯೂ ಕೆತ್ತಿದುದುಂಟು. ಆದರೆ, ಕನ್ನಡ ಹನುಮನಲ್ಲಿ ನೋಡಿದರೆ ಇದೀಗ ಮುಗಿಲಿಗೆ ನೆಗೆವನೊ ಎಂಬಂತಿದೆ. ಎದುರು ಮೋರೆಯ ಹನುಮನಲ್ಲಿ ಆ ಗತಿಯ-ತೀವ್ರ ವೇಗದ ಭಾವವು ಬಾರದು. ಗಾಳಿಯ ಒಡಯನೀತ ಮಾರುತಿ. ವಾತ, ವಾಯುವಿನ ಮೂರ್ತಿಯ ವರ್ಣನೆಗಳು ವೇದದಲ್ಲಿ ಸ್ಪಷ್ಟವಾಗಿ ಕಣ್ಣೆದುರು ನಿಲ್ಲುವಂತೆ ಚಿತ್ರಿಸಲ್ಪಟ್ಟಿಲ್ಲವೆಂದು ಮ್ಯಾಕಡೊನೆಲ್ಲರು ಗೊಣಗುತ್ತಾರೆ. ಆದರೆ ವಾಯುವು ಕಣ್ಣಿಗೆ ಕಾಣುವವನೇ ಅಲ್ಲ; ಅವನನ್ನು ಚಿತ್ರಿಸುವುದು ಹೇಗೆ? ಹೊಯ್ದಾಟವಿಲ್ಲದವರನ್ನು ಸಾಹಿತ್ಯದ

ಕನ್ನಡಿಯಲ್ಲಿ ಚೆನ್ನಾಗಿ ಮೂಡಿಸಿಕೊಳ್ಳಲಿಕ್ಕೆ ಆಗುವುದಿಲ್ಲ. ಗಾಳಿಯೋ, ಅದು ಕೆಲವೊಂದು ರೂಪದಲ್ಲಿ ಕಾಣಿಸಿಕೊಳ್ಳುವುದು. ಹಾಗೆ ವಾಯುವಿನ ಸ್ಥಿತಿಯಿಲ್ಲ. ಗಾಳಿ-ಸುಟ್ಟುರೆಗಾಳಿಗಳು ಗಿಮಿಗಿಮಿ ತಿರ್‍ರನೆ ತಿರುಗಿ ಎಲ್ಲವನ್ನು ತೂರಿಕೊಂಡು ಜಗತ್ತನ್ನೆ ಬೆರಗುಗೊಳಿಸುವುದನ್ನು ಯಾರು ತಾನೆ ಕಂಡಿಲ್ಲ?

ಗಾಳಿಯ ಚಿತ್ರವನ್ನು ಸಂಕೇತದಿಂದ ತೋರಿಸಬಹುದಾಗಿದ್ದರೆ, ತಿರುಗುವ ಕಲ್ಪನೆಯನ್ನು ಕೊಡುವ ಚಿಹ್ನವನ್ನು ಸಿದ್ಧಪಡಿಸುವುದೊಂದೇ ಉಪಾಯ. ಆದುದರಿಂದಲೆ, ನಮ್ಮ ಪೂರ್ವಿಕರು ಈ ಚಿಹ್ನದಲ್ಲಿ ಗಾಳಿದೇವರನ್ನು ಮರುತರನ್ನು-ಹನುಮನನ್ನು ಕಂಡಿರಬೇಕು. ಮರುತರು ಆಯುರಾರೋಗ್ಯವನ್ನು ಕೊಡತಕ್ಕವರು, ವೀರ್ಯ ಧೈರ್ಯಗಳನ್ನು ದಯಪಾಲಿಸತಕ್ಕವರು. ಆದುದರಿಂದ ಇದುವೆ ಶಕ್ತಿಯ ಗುರುತು; ಓಜಸ್ಸಿನ ಕುರುಹು. ತೇಜಸ್ಸಿನ ಸಂಕೇತ. ಶಿವ (ಮಂಗಲ) ಸ್ವರೂಪದ 'ಸ್ವಸ್ತಿಕಚಿಹ್ನ'ವೆನಿಸಿ ಶುಭಕಾರ್ಯಗಳಲ್ಲಿ ಈ ಚಿಹ್ನವನ್ನು ಬರೆಯುವ ವಾಡಿಕೆಯುಂಟಾಗಿರಬೇಕು. ಇದುವೆ ದೇವತಾರೂಪದಲ್ಲಿ ಮಾರುತ ಪುತ್ರ ಹನುಮನಾಗಿರಬೇಕು. ನಮ್ಮ ನಾಡಿನ ಜಟ್ಟಿಗಳ, ಮಲ್ಲರ ಉಪಾಸ್ಯ-ದೈವತವಿದು. ಮಹಾರಾಷ್ಟ್ರದಲ್ಲಿ ಹನುಮನ ಮೈಗೆಲ್ಲ ಸಿನ್‌ದೂರವನ್ನು ಬಳಿಯುವುದುಂಟು. ಈ ಸಂಪ್ರದಾಯದ ಅರ್ಥ ಅರಿವು ಅಲ್ಲಿಯೂ ಉಳಿದಿಲ್ಲ! ಶಿ(ನ್)ವ ದೇವರ ಅಂಶ ಇವನು. ಆದುದರಿಂದ ಕೆಂಪು, ಹನುಮನ ಸ್ತುತಿಯಲ್ಲಿ 'ಆಂಜನೇಯಮತಿಪಾಟಲಾನನಂ, ಕಾಂಚನಾದ್ರಿ ಕಮನೀಯ ವಿಗ್ರಹಂ' ಎಂದು ಹೇಳಿದುದು ಸುಮ್ಮನೆ ಅಲ್ಲ. 'ಮರುತಃ ಚಂದ್ರವರ್ಣಾಃ' (೧.೧೬೫.೧೨) ಎಂದು ವೇದವಚನವಿದೆ. ಸ್ವಸ್ತಿಕವನ್ನು ಯಾವಾಗಲೂ ಕೆಂಪುಬಣ್ಣದಿಂದಲೇ ಬರೆವ ವಾಡಿಕೆ. ಇಂತಿದು ಮಾರುತ ರೂಪ!

ರಾಮಾಯಣದ ಮರುನ್ನಂದನೇ ಭಾರತಕಾಲದಲ್ಲಿ ಭೀಮನಾಗಿ ಅವತರಿಸಿದನೆಂದು ಒಂದು ನಂಬುಗೆಯಿದೆ. ಇವನಿಗೆ ವಾಯುದೇವರ ಅಂಶವೆಂದೂ ಹೇಳುವುದುಂಟು. ಹನುಮನೇ ಭೀಮನಾಗಿ ಜನಿಸಿದನೆಂಬುದನ್ನು ನಂಬುವುದೂ ಬಿಡುವುದೂ ಅವರವರ ಶ್ರದ್ಧೆಯ ವಿಷಯ. ಆದರೆ, ಭೀಮನು ವಾಯುದೇವರ ಅಂಶವೆಂದು ಹೇಳುವುದು ಮಾತ್ರ ಋಗ್ವೇದಕ್ಕೆ ತೀರ ವಿರೋಧಕವಾಗಿದೆ. ಮೇಲೆ ಒಮ್ಮೆ ಹೇಳಿರುವಂತೆ ಋಗ್ವೇದದಲ್ಲಿ ವಾಯು ಮತ್ತು ಮರುತರು ಭಿನ್ನರು. ವೇದದ ಮುಂದಿನ ಕಾಲದಲ್ಲಿ ಮರುತ ಮತ್ತು ವಾಯು ಇವೆರಡೂ ಶಬ್ದಗಳನ್ನು ಸಮಾನಾರ್ಥಕವೆಂದು ಭಾವಿಸುವ ರೂಢಿಯು ಪ್ರಬಲವಾಗಿ ಇದೆಲ್ಲ ತೊಡಕು ಉಂಟಾಗಿದೆ. ಭೀಮನ ಗುಣ-ಶೀಲಗಳನ್ನು ವಿಚಾರಿಸಿದರೂ ಈತನು ಮರುತರಿಗೆ ಹೆಚ್ಚು ಸಮೀಪದವನಾಗಿ ಕಾಣುವನೆ ಹೊರತು ವಾಯುವಿಗಲ್ಲ. ವಾಯುವಿನ ಶಾಂತಿ, ಪ್ರಸನ್ನ-ಗಂಭೀರತೆ ಇವುಗಳ ಲವಲೇಶವೂ ಭೀಮನಲ್ಲಿಲ್ಲ. ಭೀಮನ ಪ್ರಚಂಡ ರಣಗರ್ಜನೆಗಳು, ಆತನ ಬಿರುಗಾಳಿಯಂತಹ ಮನಸ್ಸಿನ ಆವೇಗ, ಸಿಡಿಲಿಗೂ ಮೀರಿದ ಸಿಡುಕಿನ ಸ್ವಭಾವ ಇವೆಲ್ಲವುಗಳು ವೇದದೊಳಗಿನ ರುದ್ರೀಯರ ಎಂದರೆ ಮರುತರ ಸ್ವಭಾವ ವಿಶೇಷಗಳಾಗಿವೆ. 'ನಮ ಉಗ್ರಾಯ ಚ ಭೀಮಾಯ ಚ' ಎಂದು ಯಜುರ್ವೇದದಲ್ಲಿ ರುದ್ರನಿಗೆ ಹೇಳಿದ್ದುಂಟು. ಆದುದರಿಂದ, ಭೀಮನು ಯಾರಾದರೂ ಅವತಾರವೆಂದು ಹೇಳುವುದೇ ಇದ್ದರೆ ಅವನು ರುದ್ರ ಅಥವಾ ರುದ್ರಿಯರ ಅಂಶನೆಂದು ವರ್ಣಿಸುವುದೇ ಯುಕ್ತವಾದೀತು. 'ಭೀಮ' ಎಂಬ ಹೆಸರೇ ಮೊದಲು ರುದ್ರನ ವೈದಿಕ ಪರಂಪರಾದರ್ಶಕವಾಗಿದೆ. ಇಷ್ಟೇ ಅಲ್ಲದೆ, ಭಾರತದ ಇಡಿ ರಚನೆಯನ್ನು ನೋಡಿದರೆ ಪಾಂಡವರಲ್ಲಿ ಅರ್ಜುನನಿಗೆ ಇರುವ ಪ್ರಾಶಸ್ತ್ಯವು ಭೀಮನಿಗೆ ಇಲ್ಲ. ಶ್ರೀಕೃಷ್ಣನು ಭಗವದ್ಗೀತೆಯನ್ನು ಹೇಳಿದುದು ಅರ್ಜುನನಿಗೆ. ವಿಶ್ವರೂಪದರ್ಶನವನ್ನಿತ್ತುದು ಅರ್ಜುನನಿಗೆ. ಭೀಷ್ಮದ್ರೋಣರು ಮೆಚ್ಚಿದುದು ಅರ್ಜುನನಿಗೆ. ಇಂದ್ರನ ಮಗನೆಂದು ಹೇಳುವುದು ಅರ್ಜುನನಿಗೇ. ಆದುದರಿಂದ, ಋಗ್ವೇದದಲ್ಲಿ ಇಂದ್ರನ ಸಮಾನಸ್ಕಂಧನೆಂಬುವಂತೆ ವರ್ಣಿತನಾದ ವಾಯುದೇವರ ಅಂಶನೆಂದು ಹೇಳುವುದಿದ್ದರೆ ಲಾಕ್ಷಣಿಕವಾಗಿ ಅದು ಅರ್ಜುನನಿಗೇ ಹೆಚ್ಚು ಸರಿಹೋದೀತಲ್ಲದೆ ಭೀಮನಿಗಲ್ಲ. ಗಿಡಗಳನ್ನು ಮುರಿಯುವುದು ಬಿರುಗಾಳಿಯ ಲಕ್ಷಣ; ಎಂದರೆ ಮರುತರ ಸ್ವಭಾವ. ಮರುತರು 'ಅಸುರ'ರೆಂದು ವೇದದಲ್ಲಿ (ಒಳ್ಳೆಯ ಅರ್ಥದಲ್ಲಿಯೆ ಆಗಲೊಲ್ಲದೇಕೆ) ವಿಶೇಷಿಸಿದ್ದಾಗಿದೆ. 'ದಿತಿಯ ಮಕ್ಕಳು ಮರತರು', ಎಂದು ಸಾಯಣರು ಪರಂಪರಾಗತ ಒಂದು ಕಥೆಯನ್ನು ಕೊಟ್ಟು ಮರುತರನ್ನು ದೈತ್ಯರಿಗೆ ಸಮೀಪದವರನ್ನಾಗಿ ಮಾಡಿದ್ದಾರೆ.

ಭೀಮನು ಹಿಡಿಂಬೆ ಎಂಬ ದೈತ್ಯಕನ್ನೆಯ ಕೈಹಿಡಿದುದನ್ನು ತೋರಿಸಿ ವ್ಯಾಸರು ಮರುತರ 'ಅಸುರ ಪರಂಪರೆಯನ್ನೇ ಪರಿಪೋಷಿಸಿದಂತೆ ತೋರುತ್ತದೆ. ಹನುಮ (ಆಂಜನೇಯ), ಮತ್ತು ಭೀಮ (ಕುಂತೀಸುತ) ಇವರಿಬ್ಬರ ಹೆಸರಿನ ರೀತಿಗಳನ್ನು ನೋಡಿದರೆ ಇವರು ಮಾತೃಪ್ರಧಾನ ಕುಟುಂಬ ಪದ್ಧತಿಯವರೆಂದು ಹೇಳಬೇಕಾಗುತ್ತದೆ. ಆರ್ಯದಲ್ಲಿ ಪಿತೃಪ್ರಧಾನ ಕುಟುಂಬ ಪದ್ಧತಿಯೇ ನಡೆದುಬಂದುದು. ಮಾತೃಪ್ರಧಾನ ಕುಟುಂಬ ಪದ್ಧತಿಯು ದ್ರಾವಿಡರದು, ಕೊನೆಗೆ ಆರ್ಯರದಂತೂ ಅಲ್ಲ, ಎಂದು ವಿದ್ವಾಂಸರ ಅಭಿಪ್ರಾಯವಿದೆ. ಮಾತೃಪ್ರಧಾನ ಕುಟುಂಬಪದ್ಧತಿಯಲ್ಲಿ ತಾಯಿಗೆ ಮಹತ್ವ; ತಂದೆ ಛಾಯಾಜೀವಿ. ಅವನಿಗೆ ಸ್ವತಂತ್ರ ಅಸ್ತಿತ್ವವಿಲ್ಲ. ಆಂಜನೇಯ ಮತ್ತು ಕುಂತೀಸುತರ ತಂದೆ ಎಲ್ಲಿಯೊ ತೆರೆಮರೆಯಲ್ಲಿದ್ದು ಅವರ ಹೆಸರು ಸಹ ಗೊತ್ತಾಗದಷ್ಟು ಅ-ಮುಖ್ಯರಾಗಿದ್ದಾರೆ!

ಹೀಗೆ, ಯಾವುದೇ ದಿಕ್ಕಿನಿಂದ ವಿಚಾರ ವಿಮರ್ಶೆಗಳನ್ನು ನಡೆಯಿಸಿದರೂ ಹನುಮನಾಗಲಿ ಭೀಮನಾಗಲಿ ಇವರು ವೀರ ರುದ್ರಿಯರೆಂಬ ಮಾತೇ ಅನುಭವಕ್ಕೆ ಬರುತ್ತಲಿದೆ. ವಾಯುದೇವರಿಗಿಂತ ಮರುದ್ಗಣಕ್ಕೇ ಇವರ ಸಾಮ್ಯವು ಹೆಚ್ಚಿಗೆ ಇದೆ.

ವೀರರುದ್ರಿಯರ ತತ್ತ್ವಜ್ಞಾನ

ಈ ಮೊದಲು ತೋರಿಸಿದ ಹಾಗೆ ಇಂದಿನ ವೀರಶೈವರ ಅರುವತ್ತುಮೂರು ಪುರಾತನರ ಕಲ್ಪನೆಯ ಮೂಲವು ಋಗ್ವೇದದಲ್ಲಿ ಕಂಡುಬರುವಂತೆ ಇವರ ತತ್ತ್ವಜ್ಞಾನದ ಬೇರುಗಳನ್ನೂ ಅಲ್ಲಿಯೆ ಕಾಣಬಹುದಾಗಿದೆ. ಶಿವಶರಣರೆಲ್ಲ ಸಮಾನಸ್ಕಂಧರು, ಇವರಲ್ಲಿ ಮೇಲುಕೀಳುಗಳನ್ನು ಹಿರಿಕಿರಿತನಗಳನ್ನು ಎಣಿಸಲಾಗದು; ಎಂಬೀ ಬಗೆಯ ವೀರಶೈವ ಧರ್ಮದೊಳಗಿನ ಸಾಮ್ಯವಾದದ ಕಲ್ಪನೆಯ ಅಂಕುರವು ಋಗ್ವೇದದಲ್ಲಿಯೆ ಕಾಣಿಸಿಕೊಳ್ಳುತ್ತಿದೆ 'ಈ ವೀರರೆಲ್ಲರೂ ಬಾಂಧವರು' (೫.೫೯.೫) 'ಇವರಲ್ಲಿ ಜ್ಯೇಷ್ಠರು ಯಾರು, ಕನಿಷ್ಠರು ಯಾರು, ನಡುವಿನವರಾರು ಇದಾವುದೂ ತಿಳಿಯುವುದಿಲ್ಲ. ಏಕೆಂದರೆ, ಅವರು ತಮ್ಮ ತೇಜಸ್ಸಿನಿಂದ ವೃದ್ಧಿಂಗತರಾಗಿರುತ್ತಾರೆ. ಎಲೈ ಮರುತರೆ, ನೀವು ಸಂತರಾಗಿದ್ದೀರಿ; ಗೋಮಾತೆ (ಪೃಶ್ನಿ)ಯ ಮಕ್ಕಳಾಗಿದ್ದೀರಿ. ನೀವು ನಿಮ್ಮ ಜನ್ಮದಿಂದಲೆ ಸ್ವರ್ಗೀಯ ವೀರರಾಗಿರುವಿರಿ. ಆದುದರಿಂದ, ನೀವು ನಮ್ಮೆಡೆಗೆ ಬನ್ನಿರಿ (೫.೬೯.೬) ಎಂಬ ಈ ಮಂತ್ರಗಳಲ್ಲಿ ಅಡಕವಾದ ಅಂಶಗಳೆ ಮುಂದಿನ ವೀರಶೈವ ತತ್ತ್ವಜ್ಞಾನದ ಅಡಿಗಲ್ಲಾಗಿರುವಂತೆ ತೋರುತ್ತಲಿದೆ.

> ತೇ ಅಜ್ಯೇಷ್ಠಾಃ ಅಕನಿಷ್ಠಾ ಸಃ ಉತಽಭಿದಃ ಅಮಧ್ಯಮಾಸಃ
> ಮಹಸಾ ವಿವೃಧುಃ। ಸುಽಜಾತಸಃ ಜನುಷಾ ಪೃಶ್ನಿಮಾತರಃ
> ದಿವಃ ಮರ್ಯಾಃ ಆನಃ ಅಚ್ಛಜಿಗಾತನ।। ೫.೬೯.೬

ಇನ್ನೊಂದೆಡೆಗೆ (೧.೧೬೫.೧. ಮತ್ತು ೭.೫೬.೧) ಸಮಾನ ವಯಸ್ಸಿನವರೂ ಒಂದೆಡೆಗೆ ಇರುವವರೂ ಎಂದೂ ಹೇಳಿದೆ.

ಶಿವನ ವಿಷಯದಲ್ಲಿರುವ ಅತ್ಯಂತಿಕವಾದ ಅಭಿಮಾನ ನಿಷ್ಠೆಗಳಿಗಾಗಿ ಈ ರುದ್ರಿಯರು (ಇವರಿಗೆ ವೇದದಲ್ಲಿ ರುದ್ರಸ್ಯ ಮರ್ಯಾಃ ಎಂದರೆ ರುದ್ರನ ಜನಗಳು ಎಂದೂ ಹೆಸರುಂಟು) ಎಂದಿನಿಂದಲೂ ಹೆಸರಾದವರೆಂದು ತೋರುತ್ತದೆ. ಈ ಅಂಶವು ಕೆಳಗಿನ ಋಚೆಯಿಂದ ಚೆನ್ನಾಗಿ ವ್ಯಕ್ತವಾಗುತ್ತಲಿದೆ.

> ಯುವಾನಃ ರುದ್ರಾಃ ಅಜರಾಃ ಅಭೋಕ್ಽಹನಃ
> ವವಕ್ಷುಃ ಅಧ್ರಿಗಾವಃ ಪರ್ವತಾಃಽ ಇವ।
> ದೃಹ್ಲಾ ಚಿತ್ ವಿಶ್ವಾಭುವನಾನಿ ಪಾರ್ಥಿವಾ
> ಪ್ರಚ್ಯವಯಂತಿ ದಿವ್ಯಾನಿ ಮಜ್ಮನಾ।।[೫೨]

ಹರೆಯದವರೂ, ಮುಪ್ಪಿಲ್ಲದವರೂ, ಅಧಾರ್ಮಿಕರನ್ನು ಕೊಲ್ಲುವವರೂ, ಯಾರಿಂದಲೂ ತಡೆಯಲಿ ಕ್ಕಾಗಾದವರೂ, ಪರ್ವದಂತೆ ದೃಢಾಂಗರೂ ಆದ ಈ ಶಿವನ ಮಕ್ಕಳು ತಮ್ಮ ಸಾಮರ್ಥ್ಯದಿಂದ ದ್ಯಾವಾ ಭೂಮಿಗಳನ್ನೆಲ್ಲ ಅಲ್ಲಾಡಿಸಿಬಿಡುವರು.

ಇದರಲ್ಲಿ 'ಅಭೋಗ್ಘನಃ' (ಯೇ ದೇವಾನ್ ಹವಿಭಿಃ ನ ಭೋಜಯಂತಿ ತೇಷಾಂ ಹಂತಾರಃ) ಎಂಬ ಪದವು ಶಿವಗಣದ ತಮ್ಮ ದೇವರ ವಿಷಯಕವಾಗಿರುವ ವೀರಭಕ್ತಿದರ್ಶಕವಾಗಿದೆ. ಈ ವಿಶೇಷಣವು ರುದ್ರನ ಅನುಯಾಯಿಯ ಗಣಕ್ಕೇ ಇದೆ! ಶಿವಾರ್ಪಿತವಲ್ಲದುದೆಲ್ಲವೂ ತ್ಯಾಜ್ಯ, ವಧ್ಯ ಎಂಬ ಉಗ್ರವೃತ್ತಿಯು ನಮ್ಮ ವೀರಶೈವರಲ್ಲಿದ್ದುದರ ಐತಿಹಾಸಿಕ ಉದಾಹರಣೆಗಳಿಗೆ ಕೊರತೆಯಿಲ್ಲ. ಈಬಗೆಯ ವೃತ್ತಿಯು ಆಧುನಿಕ ಯುಗದಲ್ಲಿ ತಲೆತಿರುಕತನ, ಧಾರ್ಮಿಕ ದುರಭಿಮಾನ, ಅಂಧಶ್ರದ್ಧೆ ಎಂದು ಮುಂತಾಗಿ ಹೀಯಾಳಿಸಲ್ಪಡುತ್ತಿರುವುದರಿಂದ ಅದು ಮೊದಲಿನಷ್ಟು ತೀಕ್ಷ್ಣಸ್ವರೂಪದಲ್ಲಿ ಕಾಣಿಸಿಕೊಳ್ಳುವುದು ಸಾಧ್ಯವಿಲ್ಲವಾದರೂ ಅದರ ಕಾವು ಇನ್ನೂ ಕಡಿಮೆ ಇಲ್ಲ. ಕೆಲಸಾರೆ ಹೆದರಿಕೆಯನ್ನುಂಟುಮಾಡುವಷ್ಟು ತೀಕ್ಷ್ಣರೂಪವನ್ನು ಧರಿಸುವುದುಂಟು.

'ಅಭುಗ್ಘನ'ರಾದ ರುದ್ರಗಣಗಳು ಇಷ್ಟೊಂದು ಕಡುನಡೆಯವರಾಗಿರುವರಾದರೂ ನಂಬಿದರೆ ನಚ್ಚಿದರೆ ಅವರಷ್ಟು ಸರಳಸ್ವಭಾವದ ನಿಷ್ಕಪಟ ವೃತ್ತಿಯವರನ್ನು ಬೇರೆ ಎಲ್ಲಿಯೂ ಕಾಣುವುದೇ ಅಸಂಭವ. ಋಗ್ವೇದದಲ್ಲಿ ರುದ್ರಿಯರ ಈ ಬಗೆಯ ಸ್ವಭಾವದ ಸುಂದರವಾದ ವರ್ಣನೆಯಿದೆ. ಉಚಿತವಾದ ಉಪಮೆಗಳಿಂದ ವಿಷಯವನ್ನು ವರ್ಣಿಸುವುದರಲ್ಲಿ ವೈದಿಕ ಋಷಿಗಳನ್ನು ಯಾರೂ ಮೀರಲಾರರು. (ಗೋಮಾತೆಯ ಮಕ್ಕಳಾದ) ಮರುದ್ಗಣಗಳು ಮಗುಗಳಂತಹರು; ಬಾಲಭಾವವುಳ್ಳವರು; ಸುಮಾತೆಯ ಮಕ್ಕಳಂತೆ ಆಟಗುಳಿಗಳು; ಸಿಂಹದಂತೆ ಗುಡುಗಾಡುವರು ಎಂದು ಮುಂತಾಗಿ ವರ್ಣಿಸಿದ್ದುಂಟು. (ನೋಡಿ. ೧.೬೪.೮; ೧೦.೭೮.೬; ೭.೫೬.೧೬; ೧. ೧೬೬.೨).

ಭಕ್ತಿಯೋಗದ ಉಗಮವು ಈ ಬಗೆಯ ಮನೋಭೂಮಿಕೆಯಲ್ಲಿಯೆ ಇದೆ. ರುದ್ರನ ವಿಷಯಕ್ಕೆ ರುದ್ರಿಯಲ್ಲಿರುವ ನಿಷ್ಠೆಯು ಎಷ್ಟೊಂದು ಅನನ್ಯ ಸಾಧಾರಣವಾದುದಾಗಿದ್ದಿತೆಂಬುದನ್ನು ವೈದಿಕ ಋಷಿಯು 'ಅಭುಗ್ಘನಃ' ಎಂಬ ವಿಶೇಷಣದಿಂದ ಚೆನ್ನಾಗಿಯೆ ವ್ಯಕ್ತಪಡಿಸಿದ್ದಾನೆ. 'ಗಗನಂ ಗಗನಾಕಾರಂ'; ಮುಗಿಲು ಹೇಗಿದೆ? ಮುಗಿಲಿನಂತೆಯೆ ಇದೆ; ಅದಕ್ಕೆ ಬೇರೊಂದು ಹೋಲಿಕೆಯಿಲ್ಲ. ವೇದದಲ್ಲಿ ಉಲ್ಲೇಖಿತವಾದ ಬೇರೆ ಇನ್ನಾವ ಪಂಗಡದಲ್ಲಿಯೂ ತಮ್ಮ ಉಪಾಸ್ಯದೈವತದ ಬಗ್ಗೆ ಇಷ್ಟೊಂದು ಕೂರ್ಮೆಯು-ತೀವ್ರ ಪ್ರೀತಿಯು ಇದ್ದುದು ವರ್ಣಿತವಾಗಿಲ್ಲ. ರುದ್ರಿಯರಿಗೆ ರುದ್ರನ ವಿಷಯದಲ್ಲಿರುವ ಕಡುಕೂರ್ಮೆಯು ಸಾಹಿತ್ಯರೂಪದಿಂದ ಶ್ವೇತಾಶ್ವತರೋಪನಿಷತ್ತಿನ ರೂಪದಲ್ಲಿ ಸ್ಥಿರವಾಗಿ ನಿಂತಿದೆ. ಭಾರತೀಯ ಸಾಹಿತ್ಯದಲ್ಲಿ ಭಕ್ತಿಯೋಗವು ದೊಡ್ಡಪ್ರವಾಹ ರೂಪದಿಂದ ಸ್ಪಷ್ಟವಾಗಿ ಗೋಚರವಾಗುತ್ತಿದ್ದುದು ಮೊಟ್ಟಮೊದಲು ಈ ಶ್ವೇತಾಶ್ವತರ ಉಪನಿಷತ್ತಿನಲ್ಲಿಯೇ, ಎಂದು ಡಾ. ರಾಮಕೃಷ್ಣಪಂತ ಭಂಡಾರಕರರು ಹೇಳಿದ್ದರಲ್ಲಿ ಯಥಾರ್ಥವಿದೆ. ಈ ದೃಷ್ಟಿಯಿಂದ ವಿಚಾರಿಸಿದರೆ ಡಾ. ಭಂಡಾರಕರರು ಸೂಚಿಸಿರುವಂತೆ 'ಏಕೋಹಿ ರುದ್ರಃ' (ಶಿವಸರ್ವೋತ್ತಮತ್ವ) ಇದರ ಸರಣಿಯಲ್ಲಿಯೇ ಮುಂದೆ ಹರಿ ಸರ್ವೋತ್ತಮತ್ವದ ಕಥೆ, ಪುರಾಣ, ಆಗಮಾದಿಗಳು ತಲೆದೋರಿದುವೆಂದು ಹೇಳಬಹುದಾಗಿದೆ. ಆದರೆ, ಆ ಹರಿ-'ದಾಸ' ಪಂಥವೂ ದ್ರಾವಿಡವೆಂದು ಹಲವು ವಿದ್ವಾಂಸರ ಅಭಿಪ್ರಾಯವಿದೆ.* ನಿಷ್ಕಪಟ ವೃತ್ತಿ, ಬಾಲಭಾವ, ತನ್ನ ಇಷ್ಟವಸ್ತುವಿನ ಹೊರತು ಜಗತ್ತಿನಲ್ಲಿ ಉಳಿದುದೆಲ್ಲವೂ ತುಚ್ಛ, ತ್ಯಾಜ್ಯ ಎಂಬ ಕಡುನಂಬಿಗೆ, ಈ ಏಕಾಂತಿಕ ಶ್ರದ್ಧೆಯಿಂದ ನಡೆದುಕೊಳ್ಳುವಾಗ ಅಡ್ಡಬಂದುದನ್ನು ತೊಡೆದುಹಾಕುವುದು, ಹೊಡೆದು ಹಾಕುವುದು, ಅದಕ್ಕಾಗಿ ಹೊತ್ತುಬಂದರೆ ತನ್ನ ಆತ್ಮಾಹುತಿಯನ್ನು ಅರ್ಪಿಸುವುದು ಇವೆಲ್ಲವೂ ವೀರಭಕ್ತನ ಲಕ್ಷಣಗಳು ಅಥವಾ ಭಕ್ತಿಯ ವೀರವೃತ್ತಿಯ ಕುರುಹುಗಳು. ಭಕ್ತಿಪಂಥವು ಆರ್ಯರದ್ದಲ್ಲ; ದ್ರಾವಿಡರದೆಂದು ಬಲ್ಲಿದರು ಹೇಳುವರು. ಭಾಗವತದಲ್ಲಿ ಭಕ್ತಿಯ ಉಗಮವು ದ್ರಾವಿಡದೇಶದಲ್ಲಿ ಆದುದನ್ನು ಹೇಳಲಾಗಿದೆ. ಆದುದರಿಂದ, ಋಗ್ವೇದದಲ್ಲಿ ಸೂಚಿತವಾಗಿರುವಂತೆ ವೀರರುದ್ರಿಯರೇ ಭಕ್ತಿಪಂಥದ ಮೂಲಗುರುಗಳೆಂದು ಹೇಳಲು ಅಡ್ಡಿಯಿಲ್ಲ. ಅಂದಿನ ವೀರರುದ್ರಿಯರು ಇಂದಿನ ವೀರಶೈವರ ಮೊದಲಿಗರು, ಎಂದು ಸಿದ್ಧಪಡಿಸುವ ಕಾರಣವಿಲ್ಲ. ಇಂದು ಇವರು

---

* ಕರ್ನಾಟದ ವೀರ ಕ್ಷತ್ರಿಯರು ಹಾಗೂ ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ ಇವುಗಳಲ್ಲಿ ಇದರ ಸಂಬಂಧವಾದ ವ್ಯಾಖ್ಯಾನರೂಪೀ ವಿವರಣೆಗಳು ಬಂದಿವೆ. (ಸಂ.)

'ಲಿಂಗವಂತ'ರೆಂದುಕೊಳ್ಳುತ್ತಿದ್ದರೂ ಲಿಂಗಶಬ್ದವು ಮೂಲಾರ್ಥವಿಹೀನವಾಗಿದೆ. ಆದರು, 'ವೀರಶೈವ' ಎಂಬುವುದರಲ್ಲಿರುವ ಸೊಗಸು 'ಲಿಂಗವಂತ'ದಲ್ಲಿಲ್ಲ. ವೀರಶೈವ ವಚನಕಾರರು ಉಪಯೋಗಿಸಿದ ಲಿಂಗಶಬ್ದಕ್ಕೂ ಲಿಂಗಶಬ್ದದ ಮೂಲಾರ್ಥಕ್ಕೂ ಸಂಬಂಧವೇ ಉಳಿದಿಲ್ಲವಾದರೂ ಆ ಶಬ್ದಕ್ಕಿರುವ ಮುಖ್ಯಾರ್ಥವನ್ನು ಶಬ್ದಕೋಶಗಳೊಳಗಿಂದಲೂ ಜಗಜ್ಜನದ ಮನಸ್ಸಿನೊಳಗಿಂದಲೂ ಬೇರ್ಪಡಿಸಿ ಕಿತ್ತೊಗೆಯುವುದು ಅಸಾಧ್ಯ. ವೀರಶೈವ ಶರಣರ ವಚನಗಳನ್ನು ಓದಿದರೆ ಅವರು ರುದ್ರ-ಶಿವನನ್ನು ಶಕ್ಯವಿದ್ದಷ್ಟರ ಮಟ್ಟಿಗೂ ಪರಂಜ್ಯೋತಿ ಸ್ವರೂಪದಲ್ಲಿ ಹಾಗೆ ಕಾಯ್ದುಕೊಂಡು ಬಂದಿರುವವರೆಂದು ಯಾರಾಗಲಿ ಒಪ್ಪಿಕೊಳ್ಳಲೇಬೇಕು.

ಮರುದ್ಗಣದ ಭಕ್ತಿಯೋಗದ-(ಶಿವಯೋಗದ) ತತ್ತ್ವಗಳಿಗೆ ಮನಸೋತು ಆ ತತ್ತ್ವಜ್ಞಾನವನ್ನು ಆರ್ಯಪಂಗಡದವರೂ ಸ್ವೀಕರಿಸಿದರು. ಒಂದು ಕಾಲಕ್ಕೆ ಒಂದು ಜನಾಂಗದ ಧರ್ಮವಾಗಿರಬಹುದಾದ ಈ ವೀರಶೈವ ತತ್ತ್ವಜ್ಞಾನವು ಇಂದು ಎಲ್ಲ ಮುಮುಕ್ಷುಗಳ ಸೊತ್ತೂ ಆಗಿದೆ. ಇಂದಿನ ವೀರಶೈವರೆಂದರೆ ಅದು ಒಂದು ಜನಾಂಗವಲ್ಲ; ಧರ್ಮಪಂಥ. ಅದರಲ್ಲಿ ಆರ್ಯರು, ದ್ರಾವಿಡರು ಎಂಬ ಭಿನ್ನಭೇದಗಳಿಲ್ಲ. ಆ ತತ್ತ್ವಜ್ಞಾನವನ್ನು ಅನುಸರಿಸುವವರೆಲ್ಲರೂ ವೀರಶೈವರು. ಅದರಲ್ಲಿ 'ಜ್ಯೇಷ್ಠ', 'ಕನಿಷ್ಠ' ಎಂಬ ಭಾವನೆಗೆ ಅವಕಾಶವಿಲ್ಲ. ಬಸವಣ್ಣನವರು ಸಮಾನ ಭಾವದ ಇದೇ ತತ್ತ್ವವನ್ನೆ ಸಂಪೂರ್ಣ ಆಚರಣೆಗೆ ತಂದು 'ಮಾದರನೆಂಬೆನೆ ಚೆನ್ನಯ್ಯನ?' ಎಂದು ಎದೆಗಾರಿಕೆಯಿಂದ ಕೇಳಿದರು. 'ಶ್ವಪಚ ಮೊದಲು ಹಾರುವ ಕಡೆಯಾಗಿ' ಎಲ್ಲರನ್ನೂ ಒಂದಾಗಿ ಭಾವಿಸಿದರು; ಹಾಗೆ ನೆರೆನಂಬಿದರು.

ರುದ್ರ-ಶಿವನು ವೈದಿಕ ದೇವತೆ. 'ತ್ರಿಷಷ್ಠಿ' ಶರ್ಧರನ್ನು-ವೀರ ರುದ್ರ ಗಣಂಗಳನ್ನು ವೇದದಲ್ಲಿ ಪೂಜ್ಯರೆಂದು ವರ್ಣಿಸಲಾಗಿದೆ. ಆದುದರಿಂದ, ವೀರರುದ್ರಿಯರಿಗೆ ಎಂದರೆ ಇಂದಿನ ವೀರಪಾಂಚಾಳ, ವೀರಶೈವರಿಗೆ (ಇವರಲ್ಲಿ ಹಟ್ಟಿಕಾರ ಜಾಡರೂ ದೇವಾಂಗರೂ ಮುಂತಾದವರು. ಒಳಗೊಳ್ಳುವರು, ಇಂದಿನ ಲಿಂಗ ಧರಿಸಿದವರಷ್ಟೇ ಅಲ್ಲ) ವೇದಗಳ ಮೇಲೆ ಅಧಿಕಾರ ಹೇಳುವ ಹಕ್ಕು ಇಲ್ಲದೆ ಇಲ್ಲ. ರುದ್ರ ಮತ್ತು ಆತನ ಗಣಗಳ ಸಂಬಂಧದ ಭಾಗದ ಮೇಲಂತೂ ಇವರಷ್ಟು ಬೇರೆ ಇನ್ನಾರ ಅಧಿಕಾರವೂ ಇಲ್ಲ. ಇದು ಸಂಪೂರ್ಣವಾಗಿ ಇವರದೇ ಸೊತ್ತು. ಒಬ್ಬರನ್ನು ತಡೆದು ನಿಲ್ಲಿಸಲು ಹವಣಿಸುವವನು ತನ್ನ ಮುನ್ನಡೆಗೂ ಎರವಾಗುವನು. ಬಂಧನದಲ್ಲಿಡಲೆತ್ನಿಸುವವನೆ ಸ್ವಯಂಬದ್ಧನಾಗುತ್ತಾನೆ. ಹೆರವರ ವೇದಾಧಿಕಾರವನ್ನು ಕಸಿದುಕೊಳ್ಳುವ ಗಲಾಟೆ ಯಲ್ಲಿ ಹಾರುವರೂ ವೇದಬಾಹಿರರಂತಾಗಿದ್ದಾರೆ. ವೇದಗಳೆ ಮೂಲಾಧಾರವೆಂದು ಬಾಯ್ಮಾತಿನಿಂದ ಹೇಳಿ ಪ್ರತಿದಿನದ ವ್ಯವಹಾರದಲ್ಲಿ ಪುರಾಣ ಮತ್ತು ಆಗಮೋಕ್ತ ಕರ್ಮಾನುಷ್ಠಾನಗಳಿಗೆ ಪ್ರಾಶಸ್ತ್ಯವಿದೆ. 'ಯಜನವು ತನ್ನ ಮೂಲಾರ್ಥವನ್ನು ಕಳೆದುಕೊಂಡಿತು. 'ಪೂ'ಜನವು ಯಜನ(ಯಜ್ಞ)ದ ಸ್ಥಾನವನ್ನಾಕ್ರಮಿಸಿತು.' ಸಂಶೋಧಕ ವಿದ್ವಾಂಸರು ಕಂಡುಹಿಡಿದಿರುವಂತೆ ಪೂವಿನಿಂದ ದೇವರನ್ನು ಅರ್ಚಿಸುವುದು ದ್ರಾವಿಡ ಪದ್ಧತಿ. 'ಅಗ್ನಿಮುಖಾ ವೈ ದೇವಾಃ' ಎಂಬುದು ಆರ್ಯರ ಶ್ರದ್ಧೆ. ಆದುದರಿಂದ, ಅಗ್ನಿಯಲ್ಲಿ ಹವಿಸ್ಸನ್ನರ್ಪಿಸಿ ದೇವರನ್ನು ಸಂತೋಷ ಗೊಳಿಸುವುದು ಆರ್ಯರ ರೀತಿ. ಈ ಯಜನ ಕ್ರಿಯೆಯು ಲೋಪವಾಗಿ ಪೂಜನವೇ ಹಿರಿದಾಯಿತು. ಅಲ್ಲದೆ, ವೇದದಲ್ಲಿ ನಿಜವಾಗಿ ನೋಡಿದರೆ 'ಶಿವಸರ್ವೋತ್ತಮ' ಅಥವಾ 'ಹರಿಸರ್ವೋತ್ತಮ' ಎಂಬ ಅತಿವಾದಕ್ಕೆ ಇಂಬಿಲ್ಲ. ವೇದಗಳಲ್ಲಿ ಇಂದ್ರನ ಮಾತೇ ಮಾತು. ಆದುದರಿಂದಲೆ ಶಿವಸರ್ವೋತ್ತಮ, ಹರಿಸರ್ವೋತ್ತಮ ಎಂಬೀ ಪಂಥಗಳಿಗೆ ವೇದಮಂತ್ರಗಳು ಅಷ್ಟು ಅನುಕೂಲವೆನಿಸದೆ, ಆಯಾ ಪಂಗಡದ ಮನಸಾರೆ ಮಹತ್ವವನ್ನು ಹೇಳುವ ಆಗಮ ಪುರಾಣಾದಿ ಗ್ರಂಥಗಳು ತಲೆದೋರಿ ಒಟ್ಟಿನಲ್ಲಿ ವೇದಗಳು ಮೂಲೆಗುಂಪಾದುವು (ನಿಜವಾಗಿ ಮೂಲೆಗುಂಪಾಗಿದ್ದುದನ್ನು ಕಾಣುತ್ತಿರುವೆವಾದರೂ 'ಮೂಲೆಗುಂಪಾದುವು' ಎಂದು ಹೇಳಿದರೆ, ಕೇಳಿದರೆ ಮನಸ್ಸಿಗೆ ಹೇಗೋ ಎನಿಸುವದು) ಋಗ್ವೇದದ ಋಷಿಗಳು ರುದ್ರನನ್ನು ಹೆಚ್ಚಾಗಿ ಅಗ್ನಿರೂಪದಲ್ಲಿ ಕಂಡುದುಂಟು. ಇಂದು ಮಾಧ್ವಸಂಪ್ರದಾಯದಲ್ಲಿ ದೇವದೇವೋತ್ತಮರಿಗೆ ಅರ್ಪಿಸತಕ್ಕುದೆಲ್ಲವನ್ನೂ ಶ್ರೀಮದ್ಧನುಮದಂತರ್ಗತವೆಂದು ಹೇಳಿ ಸಲ್ಲಿಸುವುದುಂಟು. ರುದ್ರದೇವರು ಪ್ರಸನ್ನರಾದಮೇಲೆಯೆ ಮುಂದಿನ ಪ್ರಗತಿಯ ಆಸೆ; ವಿಷ್ಣುದರ್ಶನಕ್ಕೆ

ದಾರಿ; ಎಂಬೀ ಬಗೆಯ ನಂಬುಗೆಯೂ ಉಂಟು. ಇದು ಅಗ್ನಿಮುಖಾಂತರವಾಗಿ ದೇವರನ್ನು ಆರಾಧಿಸತಕ್ಕ ವೈದಿಕ ಸಂಪ್ರದಾಯದ ಪ್ರಚ್ಛನ್ನರೂಪವೆಂದು ತೋರುತ್ತದೆ. ಏಕೆಂದರೆ, 'ವಜ್ರದೇಹಾಯ ಕಾಲಾಗ್ನೇ ನಮಸ್ತೇ ರುದ್ರಮೂರ್ತಯೇ' ಎಂಬುದು ರಾಮಾಯಣ. 'ಸ್ವಾಮೀ ಮುಖ್ಯಪ್ರಾಣಾ ಏಕಾದಶರುದ್ರ! ನೀನ್ಹಿಡಿದಿಯೋ ರಾಮನ ಮುದ್ರಾ' ಎಂಬರು ಪುರಂದರದಾಸರು. ಹನುಮತ್ಕವಚ, ಹನುಮನ್ನಾಟಕಗಳೂ ಹೀಗೆಯೇ ಹೇಳುತ್ತವೆ. ಆದುದರಿಂದ, ಮಾಧ್ವಪರಂಪರೆಯಲ್ಲಿಯೂ ಹನುಮ ರುದ್ರರು (ಕಾಲ)ಅಗ್ನಿರೂಪರೆಂಬ ಮಾತನ್ನು ಸೂಕ್ಷ್ಮವಾಗಿ ವಿಚಾರಿಸಿದರೆ ಒಪ್ಪಿಕೊಳ್ಳದೆ ಗತಿಯಿಲ್ಲ.

ಗೊನೆ

ನಮ್ಮ ನಾಡಿನ ಮೂಲಜನಾಂಗವು ಐತಿಹಾಸಿಕ ಕಾಲದಲ್ಲಿ ಥಕ್ಕನೆ ಎಲ್ಲಿಂದಲೋ ಅಲೆಯುತ್ತ ಬಂದು ಇಲ್ಲಿ ನೆಲೆಸಿದುದಲ್ಲ; ಕನ್ನಡದ ಮೊದಲಿಗರು ದ್ರಾವಿಡವರ್ಗಕ್ಕೆ ಸೇರಿದ ಒಂದು ಪಂಗಡ. ದ್ರಾವಿಡರು ಆರ್ಯಪೂರ್ವಜನಾಂಗ; ಎಂಬ ಈ ಮಾತುಗಳನ್ನು ಅಡಿಗಡಿಗೆ ಕೇಳುತ್ತೇವೆ. ಆದರೆ, ನಮ್ಮ ನಾಡಿನ ಸಂಸ್ಕೃತಿಯ, ಇತಿಹಾಸದ ಕತೆಯನ್ನು ಮಾತ್ರ ನಾಲ್ಕು-ಐದನೆಯ ಶತಮಾನದಿಂದ ಹೇಳುತ್ತಲಿದ್ದೇವೆ; ಕೇಳುತ್ತಲಿದ್ದೇವೆ! ಈ ನಾಡಿನ ಮೊದಲಿಗರು ಆರ್ಯ-ಪೂರ್ವ ಜನಾಂಗದವರಾದ ದ್ರಾವಿಡರ ಪಂಗಡಕ್ಕೆ ಸೇರಿದವರಾಗಿರಲಿ ಅಥವಾ ಇನ್ನೂ ಕೆಲವರ ಅಭಿಪ್ರಾಯದಂತೆ ಅಲ್ಲವಾಗಿರಲಿ, ಈ ಜನಾಂಗವು ವೇದಕಾಲದಿಂದಲೂ ಭರತ ಖಂಡದಲ್ಲಿ ನೆಲೆಸಿದ್ದುದು ನಿಜವಷ್ಟೆ? ಆದುದರಿಂದ, ನಮ್ಮ ನಾಡಿನ ಸಂಸ್ಕೃತಿಯು ಆರಂಭದ ಎಷ್ಟೋ ಅಂಶಗಳು ವೇದಗಳಲ್ಲಿ ಒಂದಿಲ್ಲೊಂದು ಬಗೆಯಾಗಿ ದೊರೆಯಲೆ ಬೇಕಲ್ಲವೆ? ಹಾಗಾದರೆ ವೇದಗಳಲ್ಲಿ ಈ ನಾಡಿನ ಮೊದಲಿಗರು ಯಾವ ಬಗೆಯಾಗಿ ಕಾಣಿಸಿಕೊಳ್ಳುತ್ತಲಿದ್ದರೆಂಬುದು ಈವರೆಗೆ ನನ್ನ ತಲೆತಿನ್ನುತ್ತಲಿದ್ದ ದೊಡ್ಡ ಕೊರೆತ ನನ್ನ ಮನಸ್ಸಿನಲ್ಲಿ ಉಂಟಾದ ಕೊರಗೆ ದೊರೆತ ಉತ್ತರದ ಒಂದಂಶವನ್ನು ವಿಮರ್ಶೆಗಾಗಿ ವಿದ್ವಾಂಸರೆದುರು ಇರಿಸಿದ್ದೇನೆ. ಇದು ಸರಿಯಲ್ಲದಿದ್ದರೆ ಇನ್ನಾವ ಬಗೆಯಿಂದಲಾದರೂ ನನ್ನ ಕೊರೆಗೆ (ಪ್ರಶ್ನೆಗೆ) ಉತ್ತರವು ದೊರೆಯಲೆಂಬುದೆ ಇದರೊಳಗಿನ ಹಿರಿಯ ಹಾರೈಕೆ.

ರುದ್ರಗಣ ಮರುತರ ಋಗ್ವೇದದೊಳಗಿನ ವರ್ಣನೆ, ಮತ್ತು ಯಜುರ್ವೇದದೊಳಗಿನ ರುದ್ರಾಧ್ಯಾಯದಲ್ಲಿ ಬಂದಿರುವ ಕೆಲ ಉಲ್ಲೇಖಗಳಿಂದ ನಮ್ಮ ನಾಡಿನ ಮೊದಲಿಗರು ಹಟ್ಟಿಕಾರ ಮರವರೇ, ಎಂಬ ಮಾತು ಇನ್ನೂ ಹೆಚ್ಚು ದೃಢಪಡುತ್ತಲಿದೆ. ಹಟ್ಟಿಕಾರರು (ಕರ್ನಾಟದ ವೀರಕ್ಷತ್ರಿಯರು) ಎಂಬ ಪುಸ್ತಕದಲ್ಲಿ ಮರವರ ವಿಚಾರವು ಪ್ರಾಮುಖ್ಯವಾಗಿ ಬಂದಿದೆ. ಋಗ್ವೇದದೊಳಗಿನ ಮರವರ ವಿಚಾರವು ಪ್ರಾಮುಖ್ಯವಾಗಿ ಬಂದಿದೆ. ಋಗ್ವೇದದೊಳಗಿನ ಮರುತರ ವರ್ಣನೆಗಳು, ಮರವರ, ಕಾವ್ಯಮಯವಾಗಿರುವ ದಿವ್ಯಸ್ವರೂಪದ ವರ್ಣನೆಗಳೆಂದು ಸ್ಥೂಲವಾಗಿ ಹೇಳಬಹುದಾಗಿದೆ. 'ಮರುತರು ದಿವ್ಯ ಔಷಧಿಗಳನ್ನು ಬಲ್ಲವರು' ಎಂಬ ಮಾತನ್ನು ಹಿಂದೆ ವಿವರಿಸಿದ್ದಾಗಿದೆ. ಜರ್ಮನ್‌ದೇಶದ ವಿದ್ವಾಂಸನಾದ ಹಿಲ್ಲೆಬ್ರಾಂಟ (Hillebrandt) ಮರುತ್ ಶಬ್ದಕ್ಕೆ ಹೇಳುವ ನಿರುಕ್ತವು ಈ ನನ್ನ ವಿಚಾರ ಕ್ರಮಕ್ಕೆ ಪೋಷಕವಾಗಿದೆ. ಕೀತ್‌ರಿಗೆ ಇದಾವ ಮಾತು ಮಾನ್ಯವಿಲ್ಲವಾದರೂ ಅವರಿಗೆ ನಮ್ಮ ನಾಡಿನ ವೀರಶೈವ ಪರಂಪರೆಯು ಸರಿಯಾಗಿ ತಿಳಿದು ಬಂದರೆ ತಮ್ಮ ಅಭಿಪ್ರಾಯವನ್ನು ಬದಲಿಸದೆ ಇರಲಾರರೆಂದು ನನ್ನ ನಂಬುಗೆ. ಹಿಲ್ಲೆಬ್ರಾಂಟರು ಮರುತ್ ಶಬ್ದಕ್ಕೂ ಮರುತ್ತ (ವೈದ್ಯ) ಎಂಬ ದ್ರಾವಿಡ ಭಾಷೆಯ ಪದಕ್ಕೂ ಸಂಬಂಧವುಂಟೆಂದು ಊಹಿಸುತ್ತಾರೆ ಮರ್ದು (ಮದ್ದು) ಎಂದರೆ ಔಷಧ. ಮದ್ದು ಬಲ್ಲವರು ಮರುತರು, ಎಂದು ಜರ್ಮನಿಯ ವಿದ್ವಾಂಸನ ಊಹೆ, ಮಾರುತಿ ಮದ್ದು ಬಲ್ಲವನು. ರಾಮ

ಲಕ್ಷ್ಮಣರ ಜೀವನವನ್ನುಳಿಸಿದರು. ಮದ್ದು, ಮರವರು, ಮರುತರು ಈ ಪದಗಳ ಸಂಬಂಧವನ್ನು ಸರಿಪಡಿಸುವ ಆವಶ್ಯಕತೆ ನನಗೆ ಇಲ್ಲ. ಮರವರು ರುದ್ರಿಯರು; ಶಿವೋಪಾಸಕರೆಂಬ ಮಾತನ್ನು ಹಟ್ಟಿಕಾರರ ಬಗ್ಗೆ ಬರೆವಾಗಲೆ ವಿವರಿಸಿದ್ದಾಗಿದೆ. ಮರುತರು 'ರುದ್ರಸ್ಯ ಮರ್ಯಾಃ' ಎಂದು ಋಗ್ವೇದವು ಹೇಳುತ್ತಲಿದೆ. ಗಣ, ಶರ್ಭ, ತ್ರಿಷಷ್ಠಿ ಪುರಾತನರು, ಶಿ(ಂ)ವ ಶಬ್ದದ ಕನ್ನಡದೊಳಗಿನ ಅಂದಚೆಂದದ ನುಡಿಗಳ ಸೊಬಗು, ಹಿರಿಕಿರಿ ಭಾವವಿಲ್ಲವೆಂಬ ತತ್ತ್ವಜ್ಞಾನ, ವೀರವೃತ್ತಿ, 'ಶಿವನೇ ಬಸವ (ವೃಷ್ಣ) ಬಸವಾ ಶಿವನೇ' ಎಂದು ಈಗಲು ಅಖಂಡವಾಗಿ ಹಳ್ಳಿ ಹಳ್ಳಿಗೂ ವೀರಶೈವರಲ್ಲಿ ನಡೆವ ಭಜನೆ, ರುದ್ರನಿಗೆ ವೃಷಭನೆಂದು ಋಗ್ವೇದವು ಹೇಳಿದ ವೇದವಚನದ ಪ್ರತೀತಿ, ಗುಗ್ಗುಳ ಕಾರ್ಯದ ವೈಶಿಷ್ಟ್ಯ, ಶರಣರಿಗೆ ಜ್ಯೋತಿಃ ಸ್ವರೂಪದಲ್ಲಿ ಆದ ಶಿವನ ಅನುಭಾವ ಇವೆ ಮೊದಲಾದ ಸಂಗತಿಗಳನ್ನು ಒಂದೆಡೆಗೆ ತಂದು ನೋಡಿದರೆ ಋಗ್ವೇದದ ಮರುತರಿಗೂ ಇಂದಿನ ವೀರಶೈವರ ಮೊದಲಿಗರಾದ ಈ ನಾಡಿನ ಮರವರಿಗೂ ಇರುವ ಹತ್ತರ ಹತ್ತರಿನ ಸಂಬಂಧವೂ ಸಾಮ್ಯವೂ ಹೆಚ್ಚು ಹೆಚ್ಚು ಮನದಟ್ಟಾಗುತ್ತ ಹೋಗದೆ ಇರಲಾರದು.

ಟಿಪ್ಪಣಿ

೧. Macdonell, ***Vedic Mythology,*** P. 54
೨. ಅದೇ ಗ್ರಂಥ ಪು. ೭೪
೩. ***ಕೇನೋಪನಿಷತ್*** ೧-೪
೪. ಅದೇ, ***Vedic mythology,*** p. 77
೫. ***ಋಗ್ವೇದ ಸಂಹಿತೆ*** ೧-೨೭.೧೦ ಮತ್ತು ೨-೧-೬
೬. ಅದೇ, ೨.೩೩.೫ ಮತ್ತು ೨.೮.೧೫
೭. ಅದೇ, 'ಹಿರಣ್ಯಮಿವ ರೋಚತೇ' ೧.೪೩.೫
೮. ರುದ್ರಾಧ್ಯಾಯ ೧.೧೧೪.೮ (ಸಾಯಣ ಮತ್ತು ಭಟ್ಟಭಾಸ್ಕರ ಪ್ರಣೀತ ಭಾಷ್ಯ, ಆನಂದಾಶ್ರಮ ೧೮೯೦)
೯. ಅದೇ. ೧-೧೧೪-೧೦
೧೦. ಅದೇ. ೨.೧.೬
೧೧. ಅದೇ. ೫.೪೨.೧೧
೧೨. ಅದೇ. ೬.೨೨.೪
೧೩. ಅದೇ ೭.೧೩.೧
೧೪. ಅದೇ ೧೦.೧೭೦.೨
೧೫. Macdonell, ***India's Past,*** P. 29-30
೧೬. ರುದ್ರಾಧ್ಯಾಯ ಪೂರ್ವೋಕ್ತ
೧೭. Keith. A.B., ***The Religion and Philosophy of the Veda and Upanisads***, p. 148
೧೮. Mac-Donall, ***Vedic mythology,*** p. 76.
೧೯. Keith. A.B., ***The Religion and Philosophy of the Veda and Upanishads,*** P. 147; 144
೨೦. ಅದೇ ಪು. ೧೪೪
೨೧. ಜಂಬುಕ ಮತ್ತು ಶಿವ ಎಂದು ಸಂಸ್ಕೃತದಲ್ಲಿ ನರಿಗೆ ಹೆಸರುಗಳಿವೆ. ಜಂಬುಕ ಎಂದರೆ ಸಂಸ್ಕೃತದಲ್ಲಿ ನೇರಿಳೆ (ಬಣ್ಣ) ಎಂದರ್ಥ. ಆದರೆ, ಶಿವ, ಜಂಬುಕ ಎಂಬುದಕ್ಕೆ ಕೆಂಪು (ಬಣ್ಣ) ಎಂಬರ್ಥ ಮಾಡಿದರೆ; ಅವು ರುದ್ರನಿಗೆ ಸರಿಯಾದ, ಸಮರ್ಪಕವಾದ ಹೆಸರುಗಳಾಗಬಲ್ಲುವು. ನಮ್ಮ ನಾಡಿನಲ್ಲಿ ನರಿಯು ಯಾವಾಗಲೂ ಕೆಂದು ಬಣ್ಣದ್ದೇ. ಆದುದರಿಂದಲೆ ನರಿಗೆ ಈ ಹೆಸರುಗಳು. ನಸುಕಿನಲ್ಲಿ ನರಿಮೋರೆ ನೋಡಿದರೆ ಶುಭ, ಲಾಭದಾಯಕವೆಂದು ನಮ್ಮ ಜನಗಳ ನಂಬುಗೆ. ಸರಿ, ಶಿವ (ಕೆಂಪು=ನರಿ) ದರ್ಶನವು ಶುಭವೆಂಬ ಭಾವನೆಯು ಯೋಗ್ಯವೇ ಆಗಿದೆ.
೨೨. ಇದರ ನಿಜವಾದ ಅರ್ಥದ ಬಗ್ಗೆ ***'ಕನ್ನಡದ ನೆಲೆ'*** ೪ ಮತ್ತು ೫ನೆಯ ಪ್ರಕರಣಗಳನ್ನು ನೋಡಿ.
೨೩. Ibid, ***Vedic Index.*** Vol. I. P. 254
೨೪. Ibid, ***The Religion and Philospphy of Vedas and Upanishads,*** Vol. II P. 632 n. 3
೨೫. Journal of the Asiatic Society, ***'Pre Aryan and pre Dravidin'*** P. 8-15
೨೬. Ibid, p. 8-15
೨೭. ಡಾ. ಭಂಡಾರಕರರು ***'ಶೈವಿಜಂ ವೈಷ್ಣವಿಜಂ ಅಂಡ್ ಮೈನರ್ ರಿಲೀಜಿಯಸ್ ಸಿಸ್ಟಮ್ಸ್'*** ಎಂಬ ತಮ್ಮ ಪ್ರಬಂಧದಲ್ಲಿ ಕೊಟ್ಟ ಇದೇ ಜಾತಿಯ ಇನ್ನೊಂದೆರಡು ಕತೆಗಳುಂಟು. ಓದುಗರ ಅರಿಕೆಗಾಗಿ ಅವನ್ನಿಲ್ಲಿ ಕೊಟ್ಟಿದೆ.

೧. ಬ್ರಹ್ಮದೇವನು ಶಂಕರನಿಗೆ ಇನ್ನು ಹೆಚ್ಚು ಹುಟ್ಟಿಸದಿರಲಿಕ್ಕೆ ಬೆಸಗೈದನಂತೆ. ಆಗ ಶಿವನು ನೀರಿನಲ್ಲಿ ಮುಳುಗಿ ಕುಳಿತನು. ಹಲವು ಕಾಲ ಹೊರಬರಲಿಲ್ಲ. ಪ್ರಜೋತ್ಪಾದನೆಯು ನಿಂತುದನ್ನು ಕಂಡು ಬ್ರಹ್ಮನು ಇನ್ನೊಬ್ಬ ಪ್ರಜಾಪತಿಯನ್ನು ನಿರ್ಮಿಸಿದನು. ಅವನು ಹಲವು ಪ್ರಜಾನಿರ್ಮಾಣ ಮಾಡಿದನು. ಈ ಪ್ರಾಣಿಗಳಿಗೆ ಹೊಟ್ಟೆಗಿಲ್ಲದೆ ಪ್ರಜಾಪತಿಯನ್ನೆ ತಿನ್ನಲು ಹೋದುವು. ಪ್ರಜಾಪತಿಯು ಹಿರಣ್ಯಗರ್ಭನಿಗೆ ಮೊರೆಹೊಕ್ಕನು. ಹಿರಣ್ಯಗರ್ಭನು ಎರಡು ಬಗೆಯ ಅನ್ನವನ್ನು ಹುಟ್ಟಿಸಿದನು.

ಅದನ್ನುಂಡು ಆ ಪ್ರಾಣಿಗಳು ತಣ್ಣಗಾದುವು. ಇದಾದ ಕೆಲದಿನಗಳ ತರುವಾಯ ಶಿವನು ನೀರಿನಿಂದ ಹೊರಬಂದು ನೋಡಿದನು. ಹೊಸ ಸೃಷ್ಟಿಕಾರ್ಯವು ಸುಸೂತ್ರವಾಗಿ ಸಾಗಿದ್ದುದನ್ನು ಕಂಡು, ತನ್ನ ಲಿಂಗದ ಆವಶ್ಯಕತೆಯು ಇನ್ನು ಮುಂದೆ ಇಲ್ಲವೆಂದು ಅದನ್ನು ಕತ್ತರಿಸಿ ನೆಲದ ಮೇಲಿರಿಸಿದವನೆ ಮುಂಜವತ್ಪರ್ವತಕ್ಕೆ ತಪಸ್ಸಿಗಾಗಿ ಹೊರಟು ಹೋದನು (ಮಹಾಭಾರತ ಸೌಪ್ತಿಕಪರ್ವ ಅಧ್ಯಾಯ ೭)

೨. ಬ್ರಹ್ಮದೇವನು ನೀಲಲೋಹಿತ(ಶಿವ)ನಿಗೆ ಪ್ರಜೋತ್ಪಾದನ ಮಾಡಲು ಬಿನ್ನವಿಸಿದನು. ಶಿವನು ಸತಿಯೊಡಗೂಡಿ ತನ್ನಂತೆ ಅಮರರಾದ, ತನ್ನ ಹಾಗಿರುವ ಸಾವಿರಾರು ಪ್ರಾಣಿಗಳನ್ನು ಹುಟ್ಟಿಸಿದನು. ಆಮೇಲೆ ಶಿವ ಪ್ರಜಾನಿರ್ಮಾಣ ಶಕ್ತಿಯೆಲ್ಲವೂ ತೀರಿಹೋಯ್ತು. ಬಳಿಕ ಅವನು ಯೋಗಸಿದ್ಧಿಗಾಗಿ ಹೊರಟನು.

ವಾಯುಪುರಾಣದಲ್ಲಿ (ಅಧ್ಯಾಯ. ೧೦)

೩. ಉಪಮನ್ಯು ಎಂಬವನು (ಭಾರತದಲ್ಲಿ) ಶಕ್ತಿಸಹಿತ ಶಿವನನ್ನು ಲಿಂಗ ಮತ್ತು ಯೋನಿಗಳು ಕೂಡಿದ ರೂಪದಿಂದ ಪೂಜಿಸುವುದು ಇದೊಂದೇ ದೇವರ ವೈಶಿಷ್ಟ್ಯವಾಗಿದೆ, ಎಂದು ಹೇಳಿರುವನು. ಆದರೆ, ಈ ಪೂಜೆಯು ಎಷ್ಟೆ ರೂಢವಾಯ್ತೆಂಬುದು ಆತನ ಮಾತಿನಿಂದ ಏನೂ ತಿಳಿಯುವುದಿಲ್ಲ.

೨೮. ***ಋಗ್ವೇದ ಸಂಹಿತೆ*** (ಸಾಯಣ ಭಾಷ್ಯ ಸಹಿತ) ೨೭.೨೧.೫

೨೯. ಅದೇ. ೧೦.೨೦.೨

೩೦. ಇದೇ ಉಪನಿಷತ್ತಿನಲ್ಲಿ (೫.೨೫) ಮುಂದೆ ಯೋನಿ ಶಬ್ದವು ಹಲವು ರೀತಿಯಿಂದ ಬಂದಿದ್ದರೂ ಅಲ್ಲಿ ಶಿವನಿಗೆ ಲಿಂಗರೂಪನೆಂದು ಸ್ಪಷ್ಟವಾಗಿ ಹೇಳಿಲ್ಲ. ಎಳೆದು ಅರ್ಥ ಮಾಡಿದರೆ, ಆ ಅರ್ಥವನ್ನು ಹೊಂದಿಸಲು ಬರುವಂತೆ ಸೂಚನೆಯಿದೆ. ಆದರೂ ಈ ಉಪನಿಷತ್ತಿನ ಕಾಲಕ್ಕೆ ಶಿವನನ್ನು ಶಿಶ್ನೋ ದೇವರೆಂದು (ಲಿಂಗವೆಂದು) ಇನ್ನೂ ಬಿಚ್ಚುಮಾತಿನಲ್ಲಿ ಹೇಳುವಷ್ಟು ಇವೆರಡರ ಅದ್ವೈತ ಸಿದ್ಧಿಯಾಗಿದ್ದಿಲ್ಲವೆಂದು ತೋರುತ್ತದೆ. ಮುಂದಿನ ಸಿದ್ಧಿಯ ಪ್ರಸ್ತಾವನೆಯನ್ನಿಲ್ಲಿ ಕಾಣಬಹುದು.

೩೧. ***ಋಗ್ವೇದ ಸಂಹಿತೆ*** ೧.೧೧೪.೧

೩೨. ವೀರಬಣಂಜುಗಳೆಂಬ ಹೆಸರು ಪ್ರಾಚೀನ ಶಾಸನಗಳಲ್ಲಿ ಹಲವೆಡೆಗೆ ದೊರೆಯುತ್ತವೆ. ಇವರು ಜೈನರೂ ಆಗಿದ್ದರೆಂದು ತೋರುತ್ತದೆ. ಆದರೆ, ಮೂಲದಲ್ಲಿ ಶೈವರಾಗಿದ್ದು ಜೈನಧರ್ಮದ ಏರಿಕೆಯ ಕಾಲದಲ್ಲಿ ಆ ಮತವನ್ನು ಅವಲಂಬಿಸಿರಬೇಕು.

೩೩. Macdonell, ***Vedic Index,*** Vol. II. p. 381

೩೪. ತ್ರಿಷಷ್ಟಿ ಶಲಾಕಾಪುರುಷರು, ಋಷಭದೇವ ತೀರ್ಥಂಕರ ಎಂಬಿವೇ ಮೊದಲಾದ ಜೈನಪರಂಪರೆಗಳ ವಿಚಾರವೂ ತುಂಬ ಉದ್ಬೋಧಕವಾಗದೆ ಇರಲಾರದು.

೩೫. ***ಋಗ್ವೇದ ಸಂಹಿತೆ*** (ಋಗ್ಭಾಷ್ಯ ಸಹಿತ) ೧.೧೧೪.೬

೩೬. Macdonell, ***Vedic mythology*** P. 78

೩೭. ***ಋಗ್ವೇದ ಸಂಹಿತೆ*** ಪೂರ್ವೋಕ್ತ, ೧.೧೧೪.೬

೩೮. ಅದೇ. ೮.೯೬.೮

೩೯. Macdonell, ***Vedic Mythology,*** P. 81

೪೦. Ibid, p. 81

೪೧. ಭವ (ಶಿವ) ನು ವ್ರಾತ್ಯರನ್ನು ಸಂರಕ್ಷಿಸತಕ್ಕ ದೇವರು. ಶಿವನು ಎಲ್ಲೆಡೆಗಳಲ್ಲಿಯೂ ವ್ರಾತ್ಯರನ್ನು ಕಾಪಾಡತಕ್ಕ ದೇವರು ಎಂದು ಅಥರ್ವವೇದದಲ್ಲಿ ಹೇಳಿದೆ. Bhandarkar, Vol. IV. P. 149

೪೨. Macdonell, ***Vedic Index,*** II pp. 343, 344

೪೩. ತಾರಾನಾಥ ತರ್ಕವಾಚಸ್ಪತಿ, ***ವಾಚಸ್ಪತ್ಯಕೋಶಂ***

೪೪. "In all those cases these names (ರಾಕ್ಷಸ, ದೈತ್ಯ) obviously refer to human beings......These names next became terms of hatred-and abuse" ***Ancient Indian Tradition***, P. 291

೪೫. ಡಾ. ಭಂಡಾರಕರರ 'ವೈಷ್ಣವಿಸಂ.....' ಎಂಬ ಪ್ರಬಂಧವನ್ನು ಓದಿ.

೪೬. ***ಕರ್ನಾಟದ ವೀರಕ್ಷತ್ರಿಯರು*** ಆನೆಯ ನೆಲೆಯಾದ 'ಸಂಕ್ರಮಣ ನೆಲೆ'ಯಲ್ಲಿ ಬರುವ ವಿವರಗಳನ್ನು ಗಮನಿಸಬಹುದು.

೪೭. ಎಸ್. ಕೆ. ಚಟರ್ಜಿಯವರ, The Origin and Development of Bengali Language. ಹಾಗು ವಿವರಗಳನ್ನು ಗಮನಿಸುವವರು 'ಕರ್ನಾಟದ ವೀರಕ್ಷತ್ರಿಯರು' ಪುಸ್ತಕದ ಆರು ಮತ್ತು ಏಳನೆಯ ಅಧ್ಯಾಯಗಳನ್ನು ಗಮನಿಸಬೇಕು.

೪೮. Pargitar F. E., ***Ancient Indian Historical Tradition***, P. 278

೪೯. Roy S. C., ***Oraons of Chotanagapur***

೫೦. ಋಗ್ವೇದದಲ್ಲಿ ಮರುತ=ಬಿರುಗಾಳಿ; ವಾಯು=ಪ್ರಶಾಂತ ಹವೆ; ಪವಮಾನವೆಂಬ ಶಬ್ದವು ಒಂಬತ್ತನೆಯ ಮಂಡಲದಲ್ಲಿ ಹಲವೆಡೆಗಳಲ್ಲಿ ಬಂದಿದ್ದು ಅಲ್ಲಿ ಸಾಯಣರು ಪವಮಾನ (ಸೋಮ)=ಪೂಯಮಾನ (ಸೋಮ) ಎಂದು ಅರ್ಥ ಹೇಳಿದ್ದಾರೆ. ಗಾಳಿ ಎಂಬ ಅರ್ಥವು ಮುಂದಿನ ಕಾಲದ್ದು.

೫೧. ***ಋಗ್ವೇದ ಸಂಹಿತೆ,*** ೧.೧೪೨.೧೨

೫೨. ಅದೇ. ೧.೬೪.೩

ಅನುಬಂಧಗಳು

ಶಂಬಾ ಕೃತಿಗಳ ವಿವರಣಾತ್ಮಕ ಸೂಚಿ

ಆಕರಗ್ರಂಥಗಳ ಸೂಚಿ

ಶಬ್ದಸೂಚಿ

ಶಂಬಾ ಕೃತಿಗಳ ವಿವರಣಾತ್ಮಕ ಸೂಚಿ

ಕಣ್ಮರೆಯಾದ ಕನ್ನಡ

ಈ ಪುಸ್ತಕವು ಎರಡು ಬಾರಿ ಮುದ್ರಣಗೊಂಡಿದೆ. ಇದು ೧೯೩೩ರಲ್ಲಿ ಮೊದಲು ಮುದ್ರಣಗೊಂಡಿತು. ಪುಸ್ತಕದ ಪ್ರಕಾಶಕರು ಶಂ. ಬಾ. ಜೋಶಿ, ಸಾಧನಕೇರಿ, ಧಾರವಾಡ. ಶ್ರೀ ಬಳವಂತ ನಾರಾಯಣ ಬಾಗಲ ವಾಡಿ, ಮೋಹನ ಮುದ್ರಣಾಲಯ, ಧಾರವಾಡ ಇವರು ಇದರ ಮುದ್ರಕರು. ಈ ಪುಸ್ತಕವನ್ನು ಶಂಬಾ ಅವರು ಸ್ವರ್ಗಸ್ಥರಾದ ತಂದೆ. ತಾಯಿಗೆ ಮತ್ತು ಭಾವ ಬಾಪಟ ತ್ರ್ಯಂಬಕರಾಯರಿಗೆ ಮುಡಿಪು ಮಾಡಿದ್ದಾರೆ. ಇದು ಮನೋಹರ ಗ್ರಂಥ ಪ್ರಕಾಶನ ಸಮಿತಿಯ ಮೊದಲ ಬಿಡಿಮುತ್ತು ಮತ್ತು ಇದರ ಬೆಲೆ ಹನ್ನೆರಡಾಣೆ. ಪುಟ xvi +110. ಈ ಪುಸ್ತಕವು ಮರಳಿ ಮುದ್ರಣಗೊಂಡಿದ್ದು, ೧೯೮೮ರಲ್ಲಿ. ಮಾಧವ ಬಲ್ಲಾಳ ಬಂಧುಗಳು, ಧಾರವಾಡ ಇವರ ಪರವಾಗಿ ಪ್ರಕಟಿಸಿದವರು ಸಾಹಿತ್ಯ ಪ್ರಕಾಶನ ದಾಜೀಬಾನಪೇಟೆ ಹುಬ್ಬಳ್ಳಿ. ಇದು ಕ್ರೌನ್ ಅಷ್ಟದಳಾಕಾರದ ೯೬ ಪುಟಗಳಿಂದಲೂ ಹನ್ನೆರಡು ರೂಗಳಿಂದಲೂ ಕೂಡಿದೆ. ತ್ವರಿತಮುದ್ರಣ ಗಂಗಾಪೂರ ಪೇಟೆ ಇಲ್ಲಿ ಮುದ್ರಣಗೊಂಡಿದೆ. ಪುಸ್ತಕದ ಕೊನೆಗೆ ಇಂಗ್ಲಿಷ್, ಮರಾಠಿ ಮತ್ತು ಕನ್ನಡ ಗ್ರಂಥಗಳ ಪಟ್ಟಿ ನೀಡಿದ್ದಾರೆ.

ಮಹಾರಾಷ್ಟ್ರದ ಮೂಲ

ಈ ಪುಸ್ತಕವು, ಮೂರು ಬಾರಿ ಮುದ್ರಣಗೊಂಡಿದೆ. ೧೯೩೪ರಲ್ಲಿ ಮೊದಲ ಮುದ್ರಣ. ಈ ಮುದ್ರಣದ ಪ್ರಕಾಶಕರು ಗೋವಿಂದ ವೆಂಕಟೇಶ ಚುಳಕಿ ಸಾಧನಕೆರೆ ಧಾರವಾಡ. ಇದು ಮನೋಹರ ಗ್ರಂಥಪ್ರಕಾಶನ ಸಮಿತಿ ಧಾರವಾಡ ಇದರ ಎರಡನೆಯ ಬಿಡಿಮುತ್ತು. ಈ ಪುಸ್ತಕವನ್ನು 'ಕನ್ನಡರ ಗತವೈಭವವನ್ನು ತೋರಿ ಅವರ ಕಣ್ತೆರೆದ ಶ್ರೀಮಾನ್ ಆಲೂರ ವೆಂಕಟರಾಯರಿಗೆ ಮುಡಿಪು' ಮಾಡಿದ್ದಾರೆ. ಪುಸ್ತಕದ ಆರಂಭಕ್ಕೆ

ಹೊನ್ನಮುಸುಕನ್ನು ಓಸರಿಸಿ ತಾಯ್ ನನ್ನಿಯೇ
ನಿನ್ನ ಮೊಗವನ್ನು ತೋರೆ।
ಬನ್ನ ಬಡುತಿಹೆ ನಾನು ನಿನ್ನ ದರುಶನಕಾಗಿ
ಹಡೆದಮ್ಮ ವರವ ನೀಡ।

ಎಂಬ ಸ್ವರಚಿತ ಕವಿತೆಯೊಂದಿದೆ. ಇದು 'ಈಶಾವಾಸ್ಯ'ದ ನೆನಪನ್ನು ತರಿಸುತ್ತದೆ. ಬೆಲೆ ಎಂಟಾಣೆಯಿದ್ದು ಐವತ್ತೈದು ಪುಟಗಳ ಪುಟ್ಟ ಹೊತ್ತಗೆ. ಎರಡನೆಯ ಮುದ್ರಣ ೧೯೮೮ರಲ್ಲಿ ಆಗಿದೆ. ಮಾನವಧರ್ಮ ಪ್ರತಿಷ್ಠಾನ,

ರಾಯಭಾಗ ಇವರು ಮುದ್ರಿಸಿದ್ದಾರೆ. ಪುಟಗಳು xii+60 ಇದ್ದು ಬೆಲೆ ಎಂಟು ರೂಪಾಯಿ. 'ಕನ್ನಡದ ಅವಿರತ ಹೋರಾಟಗಾರ ಡಾ. ದೇ. ಜವರೇಗೌಡ ಅವರಿಗೆ ಗೌರವಪೂರ್ವಕವಾಗಿ ಮುಡಿಪು' ಮಾಡಿದ್ದಾರೆ. ಅದೇ ವರ್ಷ 'ಮಾಧವ ಬಲ್ಲಾಳ ಬಂಧುಗಳು, ಧಾರವಾಡ ಇವರ ಪರವಾಗಿ 'ಸಾಹಿತ್ಯ ಪ್ರಕಾಶನ ದಾಜೀಬಾನ್ ಪೇಟೆ, ಹುಬ್ಬಳ್ಳಿ ಇವರು ಪ್ರಕಾಶಿಸಿದ್ದಾರೆ. ಈ ಪುಸ್ತಕಕ್ಕೆ The New approach to the Dravidian problem ಎಂಬ ಇಂಗ್ಲಿಷಿನ ಉಪಶೀರ್ಷಿಕೆ ಉಂಟು. ಎರಡನೆಯ ಮುದ್ರಣಕ್ಕಾಗಿ ಮುನ್ನುಡಿಯೊಂದನ್ನು ಬರೆದಿದ್ದಾರೆ. ಇದು ಗದುಗಿನ ತ್ವರಿತ ಮುದ್ರಣಾಲಯದಲ್ಲಿ ಮುದ್ರಿತವಾಗಿದೆ. ಪುಸ್ತಕದ ಬೆಲೆ ಎಂಟು ರೂಗಳು.

ಮರ್‍ಹಾಟೀ ಸಂಸ್ಕೃತಿ : ಕೆಲವು ಸಮಸ್ಯೆಗಳು

ಇದು ೧೯೫೮ರಲ್ಲಿ ಮೊದಲು ಮುದ್ರಣಗೊಂಡು, ೧೯೮೦ರಲ್ಲಿ ಪರಿಷ್ಕೃತ ಆವೃತ್ತಿಯ 'ಮರ್‍ಹಾಟೀ ಸಂಸ್ಕೃತಿ: ಕಾಂಹಿ ಸಮಸ್ಯಾ' ಎಂಬ ಮರಾಠಿ ಪುಸ್ತಕದ ಅನುವಾದ. ಇದರ ಅನುವಾದಕರು ಕೀರ್ತಿನಾಥ ಕುರ್ತಕೋಟಿ. 'ಮರ್‍ಹಾಟೀ ಸಂಸ್ಕೃತಿ : ಕಾಂಹಿ ಸಮಸ್ಯಾ' ಪುಸ್ತಕವು ಸ. ಜ. ಭಾಗವತ ಅವರ ಅಂತರಭಾರತಿ ಪ್ರಕಾಶನದಿಂದ ಮೊದಲು ಮುದ್ರಣಗೊಂಡಿತು. ೧೯೮೦ ರಲ್ಲಿ ಡಾ. ವಸಂತ ಸಂ. ಜೋಶಿ ಅವರಿಂದ ಸಂಪಾದನೆಗೊಂಡ ಪರಿಷ್ಕೃತ ಆವೃತ್ತಿ ಬಂದಿತು. ವ್ಹೀನಸ್ ಪ್ರಕಾಶನ ಪುಣೆ ಇವರು ಪ್ರಕಾಶಿಸಿದ್ದಾರೆ. ಶಶಿಕಾಂತ ಮಹಾದೇವ ದೇವ ಪುಣೆ ಮುದ್ರಿಸಿದ್ದಾರೆ. ಇದರ ಪ್ರಕಾಶಕರು ಸದಾಶಿವ ಕೃಷ್ಣ ಪಾಧ್ಯ. 296+32 ಪುಟಗಳಿಂದ ಇದು ಕೂಡಿದೆ. ಈ ಪುಸ್ತಕವು 'ಆಚಾರ್ಯ ಸ. ಜ. ಭಾಗವತ ಹಾಗೂ ಪ್ರಾ. ದಿ. ಕೆ. ಬೇಡೇಕರ್ ಅವರ ಪುಣ್ಯಸ್ಮೃತಿಗೆ ಅರ್ಪಿತ'ವಾಗಿದೆ. ಕನ್ನಡಾನುವಾದವು ೧೯೮೯ರಲ್ಲಿ ಪ್ರಕಟಗೊಂಡಿದೆ. ಪ್ರಕಾಶಕರು ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗರಸ್ತೆ, ಬೆಂಗಳೂರು. ಇದರ ಬೆಲೆ ಇಪ್ಪತ್ತು ರೂಪಾಯಿಗಳು. ಅನುವಾದಕರಾದ ಪ್ರೊ. ಕೀರ್ತಿನಾಥ ಕುರ್ತಕೋಟಿ ಅವರು ಆರುಪುಟಗಳ ಅನುವಾದಕರ ಮುನ್ನುಡಿಯನ್ನು ಬರೆದಿದ್ದಾರೆ. ರಶ್ಮಿ ಮುದ್ರಣ, ಸುಧಾಮನಗರ, ಬೆಂಗಳೂರು ಇವರು ಮುದ್ರಿಸಿದ್ದಾರೆ.

ಕರ್ನಾಟದ ವೀರಕ್ಷತ್ರಿಯರು

ಇದು ಎರಡು ಬಾರಿ ಮುದ್ರಣವಾಯಿತು. ೧೯೩೬ರಲ್ಲಿ ಇದರ ಮೊದಲ ಮುದ್ರಣ. 'ಋಗ್ವೇದಕಾಲದಿಂದ ಕನ್ನಡರ ಕತೆ' ಎಂಬ ಮಾತೂ ಜತೆಗೆ A New approach to the Dravidian problem ಎಂಬ ಉಪಶೀರ್ಷಿಕೆಯೂ ಉಂಟು ಈ ಪುಸ್ತಕವು 'ಶಂಬಾ ಅವರನ್ನು ಸಲುಹಿದ ಜೋಗಳೇಕರ ಸೀತಾಬಾಯಿ ಅಮ್ಮನಿಗೆ ಮುಡಿಪು' ಮಾಡಿದ್ದಾರೆ. ಪ್ರಕಾಶಕರು ದತ್ತಾತ್ರಯ ಬಾಳಕೃಷ್ಣ ಕುಲಕರ್ಣಿ, ಮನೋಹರ ಗ್ರಂಥಭಂಡಾರ ಧಾರವಾಡ. ಮುದ್ರಕರು ಕೆ.ಜಿ. ರಾಯದುರ್ಗ ಮೋಹನ ಮುದ್ರಣಾಲಯ, ಧಾರವಾಡ. ಪುಸ್ತಕದ ಬೆಲೆ ಒಂದು ರೂಪಾಯಿ ಪುಸ್ತಕದ ಕೊನೆಗೆ ಗ್ರಂಥಕಾರರ ಗ್ರಂಥಪಟ್ಟಿ, ಹಾಗೂ ವಿಷಯಸೂಚಿ ನೀಡಿದ್ದಾರೆ. ಈ ಪುಸ್ತಕವು ಮರಳಿ ೧೯೬೬ರಲ್ಲಿ 'ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ (ಪ್ರಸ್ತಾಪ) ಎಂಬ ಹೊಸ ಹೆಸರಲ್ಲಿ ಮುದ್ರಣಗೊಂಡಿತು. ಮನೋಹರ ಘಾಣೇಕರ, ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ ಇವರು ಇದರ ಪ್ರಕಾಶಕರು. ಈ ಪುಸ್ತಕವು ದಿ. ಮಂಜೇಶ್ವರ ಗೋವಿಂದ ಪೈ ಅವರಿಗೆ ಸಮರ್ಪಿಸಿದ್ದಾರೆ. ಶ್ರೀ ವಿ. ಎನ್. ದೇಶಪಾಂಡೆ ಅವರ ಮುನ್ನುಡಿಯನ್ನು ಹೊತ್ತಿದೆ. ಪಠ್ಯದ ಒಳವಿವರಗಳು ಮೊದಲ ಮುದ್ರಣದ್ದೇ ಆಗಿದೆ. ಈ ಮುದ್ರಣದಲ್ಲಿ ಯಾವ ಬದಲಾವಣೆಯೂ ಇಲ್ಲ. ಪುಸ್ತಕದ ಕೊನೆಗೆ ಹಟ್ಟಿಕಾರರ ವಂಶವೃಕ್ಷವನ್ನು ನೀಡಲಾಗಿದೆ.

ಶಿವ – ರಹಸ್ಯ

ಇದು ಎರಡು ಬಾರಿ ಮುದ್ರಿತವಾಗಿದೆ. ಮೊದಲ ಮುದ್ರಣ ೧೯೩೯ರಲ್ಲಿ ಹೊರಬಂದಿತು. ಈ ಪುಸ್ತಕಕ್ಕೆ 'ವೇದದಲ್ಲಿ ಕಾಣುವ ವೀರಶೈವ ಮತದ ಬೇರುಗಳು' ಎಂಬ ಉಪಶೀರ್ಷಿಕೆ ಉಂಟು. ಪುಸ್ತಕದ ಮೊದಲಿಗೆ

ಭಾವಕ್ಕಗಮ್ಯ ಕಂಡೆನಯ್ಯಾ! ಎನ್ನ ಒಳಹೊರಗೆ
ಸರ್ವಾಂಗ ಪರಮ ಪ್ರಕಾಶದೊಳು ಬೆಳಗುವ
ಜ್ಯೋತಿಯ ಕಂಡೆ ನೋಡಾ ಗುಹೇಶ್ವರಾ!

ಎಂಬ ಅಲ್ಲಮನ ವಚನವನ್ನು ಕೊಟ್ಟಿದ್ದಾರೆ. ಶ್ರೀ. ಕೆ. ಜಿ. ರಾಯದುರ್ಗ, ಧಾರವಾಡ, ಮೋಹನ ಮುದ್ರಣಾಲಯ ಇವರು ಮುದ್ರಿಸಿ ಪ್ರಸಿದ್ಧಿಸಿದರು ಎಂಬ ಒಕ್ಕಣಿಕೆ ಉಂಟು. ಕರ್ನಾಟಕ ಕಾಲೇಜು, ಧಾರವಾಡದಲ್ಲಿ ಸಂಸ್ಕೃತ ಅಧ್ಯಾಪಕರಾಗಿದ್ದ ಆರ್. ವಿ. ಜಾಗೀರ್‌ದಾರ್ (ಶ್ರೀರಂಗ) ಅವರಿಂದ ಇಂಗ್ಲಿಷ್ ಮುನ್ನುಡಿ, ಪುಸ್ತಕದ 'ರೆಸ್ಯೂಮೆ' ಇದೆ. ಸಿಂಧೂಸಂಸ್ಕೃತಿಯಲ್ಲಿ ದೊರೆತ ವೃಷಭ ಮುದ್ರಿಕೆಯು ಮುದ್ರಿತವಾಗಿದೆ. ಪುಸ್ತಕವನ್ನು 'ರುದ್ರ-ಶಿವನ ಅಡಿಯಲ್ಲಿ ಮುಡಿಪು' ಮಾಡಿದ್ದಾರೆ. ಇದರ ಬೆಲೆ ಒಂದು ರೂಪಾಯಿ. ಎರಡನೆಯ ಮುದ್ರಣ ೧೯೪೭ರಲ್ಲಿ ಬಂದಿತು. 'ಎರಡನೇ ಅಚ್ಚಿನ ಅರಿಕೆ' ಉಂಟು. ಇದರಲ್ಲಿ ಬೆಳಗಾಂವದ ಎಂ. ಪಿ. ವಾಲಿ ಎಂಬುವರ ಪ್ರಸ್ತಾವನೆ ಇದೆ. ಈ ಎರಡನೇ ಆವೃತ್ತಿಯನ್ನು '೧೯೪೩ರ ಸಂಕಷ್ಟದಲ್ಲಿ ನೆರವಾದ ಆಪದ್‌ಬಾಂಧವ ಶ್ರೀ ಕೇಳಕರ ಗೋವಿಂದರಾಯರಿಗೆ ಕಾಣಿಕೆ' ಎಂದು ಅರ್ಪಿಸಿದ್ದಾರೆ. ಇದು ಸಮಾಜ ಪುಸ್ತಕಾಲಯ, ಧಾರವಾಡ ಇವರು ಮುದ್ರಿಸಿ ಪ್ರಸಿದ್ಧಿಸಿದ್ದಾರೆ. ಬೆಲೆ. ೧.೪.೦ ಆಣೆ.

ಆಕರಗ್ರಂಥಗಳ ಸೂಚಿ

ಇಂಗ್ಲಿಷ್ ಪುಸ್ತಕಗಳು

Brown C.P. ; (1857) *A grammar of the Telugu Language*, Madras

A.A. Macdonell ; (1889) *Vedic Mythology*, Walter De Gruyter and Co, Stratsburg

Fleet J.F. ; (1895) *Dynasties of the Kanerese Districts of Bombay Presidency*, Bombay

Hopkins E.W. ; (1902) *Religions of India*, Ginn and Co., Boston

Grierson G.A. (4 Vols. assisted by Sten Konow); (1906) (ed.) *Linguistic Survey of India*, Calcutta

E. Thurston and Rangachari K. ; (1909-10) *Castes and Tribes of Southern India*

Haddon A.C. ; (1911) *The Wanderings of People*, Cambridge

Aiyangar S.K.S. ; (1911) *Ancient India*, London

Macdonell and A.B. Keith ; (1912) *Vedic Index of Names and Subjects* (Two Vols.), John Murrey, London

Caldwell R ; (1913) *A Comparative Grammar of Dravidian Languages*, London

Rapson E.J. ; (1914) *Ancient India*, Cambridge University

Risley H.H. ; (1915) *People of India*, Calcutta

Chandra R.P. ; (1916) *The Indo-Aryan Races*, Varendra Research Society, Rajshahi

Krinshna Shastri ; (1916) *South Indian Images of Gods and Goddesses*, Government Press, Madras

R.V. Russell and Hiralal ; (1916) *Tribes and Castes of the Central Provinces of India*, London

Jadunath Sarkar ; (1919) *Shivaji and His Times*, Poona

Pargiter F.E. ; (1922) *Ancient Indian Historical Traditions*, London

R.G. Bhandarkar ; (1923) *Vaishnavism, Shaivism and Minor Religious Systems*; Karl.J.Trubner, Stratsburg

A.B. Keith ; (1925) *The Religion and Philosophy of the Vedas and Upanishads* (Two Vols.), Harvard University

Winternitz ; (1927) *History of Indian Literature*, Calcutta University, Calcutta

Otto Jesperson; (1928) *Language : It's nature, development and origin*, London

P.C. Bagachi (Tr.) ; (1929) *Pre-Aryan and Pre-Dravidan in India*, Calcutta

P.V. Kane ; (1930) *History of Dharmashastra*, Vol. 1., Bhandarkar Oriental Research Institute, Poona

John Marshall ; (1931) *Mohenjodaro and the Indus Civilization* (3 Vols.), Aurthur Probsthain, London

Yazadani ; (1932) *Early History of the Deccan* (2 vols.), London

G.S. Ghurye ; (1932) *Caste and Race in India* ; Kegan Paul, Trench, Trubner, London

R. Narasimhachar ; (1934) *History of Kannada Language*, Mysore

A.S. Altekar ; (1934) *The Rastrakutas and their times*, Oriental Book Agency, Poona

G.C. Bhate ; (1939) *History of Modern Marathi Literature 1800-1938*, Mahad

P.V. Kane ; (1941) *History of Dharmashastra*, Vol. 2., Bhandarkar Oriental Research Institute, Poona

Stuart Piggot ; (1950) *Pre-historic India*, London

H.C. Wyld ; Historical study of the Mother Tongue

H.C. Wyld ; A short history of English

S.K. Chatterji ; *The Origin and Development of Bengali Language*, Calcutta

V.R. Dixitar ; *Studies in Tamil Literature and History*, Madras

Henry Sweet ; *The History of Language*

C.R. Reddy ; *Telugu Literature*, Heritage of India series

Vincent Smith ; *Early History of India*, Madras

P.T. Srinivasa Iyengar ; *History of Tamils*, Calcutta

Krishnaswamy Iyengar ; *Beginnings of South Indian History*, Madras

Krishnaswamy Iyengar ; *Some contributions of South India to Indian Culture*, Madras

C.V. Vaidya ; *The History of Maharastra*, Poona

W.J. Perry ; *The Growth of Civilization*

Dotryhensky T ; *Evolution of Man*

Mujumdar ; Explorations of Sindh

K.P. Jaiswal ; *History of India*

Fredrich Hertz ; *Race and Civilization*

Ramaprasada Chanda ; *Races of India*

A.L. Krober ; *Culture : A Critical Review of Concepts and Definitions*, Vintage Books, New York

V.R. Dixitar ; *Sources of early Andhra History*, Hyderabad

F. Muller - Lyer ; *History of Social Development*, London

M.G. Ranade ; *Rise of Maratha Power*, Poona

Bhandarkar ; *The Early History of Deccan* ; B.O.R.I., Poona

R.D. Banerjee ; *Pre-historic, Ancient and Hindu India*

Levi ; *Pre-Aryan and Pre-Dravidian*, Calcutta

N.K. Duttu ; *Aryanisation of India*

Saletur ; *Social and Political Life in the Vijayanagar Empire*, Dharwar

Macdonell ; *India's past*

Nandalal Day ; *Geographical Dictionary of Ancient India*, Calçutta

Jean Broonc ; *Human Geography*

C.J. Brown ; *The Coins of India*, Heritage of India Series, Calcutta

R.D. Ranade ; *Mysticism in Maharastra*, Poona

R.C. Mujumdar and Altekar ; *Vakataka Gupta*, Calcutta

B.C. Law ; *Some Kshatriya Tribes in Ancient India*

Sharat Chandra Roy ; *Oraons of Chota-Nagpur*, Ranchi

E. Thurston ; *Indigenous Tribes*

R.E. Enthoven ; *Tribes and Casts of Bombay*

R.E. Enthoven ; *Hatgar and Dhangar*

R.V. Russell ; *Casts and Tribes in Berar*

S.V. Ketkar ; *History of Caste in India* (Two Vols.) ; Taylor and Carpenter, New York

H.V. Nanjundaiah ; *Ethnological Survey of Mysore*, Mysore

ಇಂಗ್ಲಿಷ್ ಲೇಖನಗಳು

A.C. Burnell ; (1872) *Specimen of South Indian Dialects*, Mangalore

Sten Konow ; (1903) *Notes on Dravidian Philology*; Indian Antiquery, Calcutta

Grierson G.A. (Assisted by Sten Konow) ; (1906) *Munda and Dravidian Languages*; Linguistic Survey of India Vol. IV, Calcutta

Jules Bloch ; (1919) *The Intervocalic Consonants in Tamil* (Tr. by J.D. Anderson), Indian Antiquery 48

Col. Todd ; (1920) *Annals and Antiquities of Rajastan*, Calcutta

Ramaprasada Chanda ; (1921) *Survival of the pre-historic civilization of Indus Valley* : Memoir of Archeological Survey of India

S.K. Iyengar ; (1922) *The Satwats* : Proceedings of the Second Oriental Conference

R.D. Banerjee ; (1927) *Dravidian Civilization*; Modern Review Sept.-Nov., Calcutta

Jules Bloch ; (1929) *Pre-Aryan and Pre-Dravidian in India*, (Tr. by P.C. Bagachi), Sanskrit and Dravidian Bulletin of the Society of Linguistics, Paris XXV

B.C. Law ; (1935) *Some Ancient Indian Tribes*; Indian Culture

Panchanana Mitra ; (1935) *Annual Bibliography of Indian Archeology*, Calcutta

M.R. Mujumdar ; (1936) *Growth of Gujarathi Languages*; Bombay University Journal Vol. V Part III

T. Burrow ; (1938) *Collected Papers on Dravidian Linguistics*, Dravidian Studies I BSO(A)S

N.K. Duttu ; *Pre-historic Culture and Races of India*; Journal of the Department of Letters, Calcutta University

Jean Przyluski ; *The Great Goddess in India and Iran*; Indian Historical Quarterly Vol. X

R.V. Jahagirdar ; *Influence of Old Kannada on Jnaneshwari*

Alfred Master ; *Parallelisms in Indo-Aryan and Dravidian with special reference to Marathi*, Gujarathi and Kanarese

Alfred Master ; *Maharastra and Kannada*, Indian Antiquery

Jean Przyluski ; *Name of the God Vishnu and Krishna Legend* ; Mythic Society Silver Jubilee Number

James Scherer ; *Cotton as a World Power*, New York

Kolerian and Dravidian Place Names ; Journal of Royal Asiatic Society Part III

ಕೋಶ, ಗೆಜೆಟಿಯರ್‌ಗಳು ಇತ್ಯಾದಿ

Kittel F. ; (1894) *A Kannada Dictionary*, Mangalore

Sir Monier Monier Williams ; (1899) A Sanskrit-English Dictionary, Oxford University Press, London

Census of India (1901)

Epigraphia Carnatica, Rice. B.L. (Ed) 1886-1914, Bangalore

D.R. Bhandarkar (1918) ; *The Charmichael Lectures*

Mysore Gazetter (1927-30), C. Hayavadana Rao (5 Vols.), Bangalore

Mysore Archeological Survey Report (1929, 1938), Mysore

Berar Gazetter

Imperial Gazetter

Khandesh Gazetter

Salem Gazetter

Nasik Gazetter

Kanara Gazetter

Bijapur Gazetter

Cambridge History of India

Encyclopaedia Britannica, 11th Edition, Britain

Epigraphia Indica, Calcutta

South Indian Inscriptions, Vol. 1.

Historical Inscriptions of Southern India

Bombay Karnataka Inscriptions

Hastings J. (Ed.) ; *Encyclopaedia of Religion and Ethics* (13 Vols.), New York

Ramakrishna Panth Bhandarkar ; *Wilson Philological Lectures*, Calcutta

Bhandarkar Commemoration Volume

ಕನ್ನಡ

ಪಂಪ	**ವಿಕ್ರಮಾರ್ಜುನ ವಿಜಯಂ**	(೧೯೩೧) (ಸಂ) ಬೆಳ್ಳಾವೆ ವೆಂಕಟ ನಾರಾಯಣಪ್ಪ, ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು
ಗೋವಿಂದ ವೈದ್ಯ	**ಕಂಠೀರವ ನರಸರಾಜ ವಿಜಯಂ**	(೧೯೨೮) (ಸಂ) ಆರ್. ಶಾಮಶಾಸ್ತ್ರೀ, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು
ಲಿಂಗಣ್ಣಕವಿ	**ಕೆಳದಿ ನೃಪವಿಜಯಂ**	(೧೯೨೧) (ಸಂ) ಆರ್. ಶಾಮಶಾಸ್ತ್ರಿ, ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು
ಕೇಶಿರಾಜ	**'ಶಬ್ದಮಣಿದರ್ಪಣಂ'**	(೧೯೨೦) (ಸಂ) ಆವೃತ್ತಿ ಪಂಡಿತ, ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು
ನೃಪತುಂಗ	**ಕವಿರಾಜಮಾರ್ಗಂ**	(೧೯೩೦) (ಸಂ) ಎ. ವೆಂಕಟರಾವ್, ಎಚ್. ಶೇಷಯ್ಯಂಗಾರ್ ಮದರಾಸು ಓರಿಯಂಟಲ್ ರೀಸರ್ಚ್ ಇನ್ಸ್ಟಿಟ್ಯೂಟ್, ಮದರಾಸು
ಭಟ್ಟಾಕಳಂಕ	**ಕರ್ಣಾಟಕ ಶಬ್ದಾನುಶಾಸನಂ**	(೧೯೨೩) ಸಂ: ಆರ್. ನರಸಿಂಹಾಚಾರ್, ಬಿಬ್ಲಿಯೋಥಿಕಾ ಕರ್ನಾಟಿಕಾ, ಬೆಂಗಳೂರು
ನಾಗವರ್ಮ	**ಕರ್ಣಾಟಕ ಭಾಷಾಭೂಷಣಂ**	(೧೮೮೪) ಸಂ: ಲ್ಯೂಯಿಸ್ ರೈಸ್., ಮೈಸೂರು ಗವರ್ನಮೆಂಟ್ ಪ್ರೆಸ್, ಬೆಂಗಳೂರು
ಕಮಲಾಪುರ	**ಭೀಮರಾಯರು**	ಸತ್ಕಥಾ
ಪುಟ್ಟಣ್ಣ ಎಂ. ಎಸ್.	**ಪಾಳೆಯಗಾರರು ಐದು ಉಪನ್ಯಾಸಗಳು**	(೧೯೨೩), ಬೆಂಗಳೂರು
”	**ಚಿತ್ರದುರ್ಗದ ಪಾಳೆಯಗಾರರು**	(೧೯೨೩), ಬೆಂಗಳೂರು
	ಹಾಗಲವಾಡಿ ಪಾಳೆಯಗಾರರು	(೧೯೨೪), ಬೆಂಗಳೂರು
ಲಕ್ಷ್ಮೀನಾರಾಯಣರಾವ್ ಎನ್		
ಪಂಚಮುಖಿ ಆರ್. ಎಸ್.	**ಕರ್ನಾಟಕದ ಅರಸುಮನೆತನಗಳು**	(೧೯೪೬) ಧಾರವಾಡ
ನರಸಿಂಹಾಚಾರ್ಯ ಆರ್.	**ಕನ್ನಡ ಕವಿಚರಿತೆ**	(೧೯೨೪) (ಭಾಗ೧), ಬೆಂಗಳೂರು
”	**ಕನ್ನಡ ಕವಿಚರಿತೆ**	(೧೯೧೯) (ಭಾಗ ೨), ಬೆಂಗಳೂರು
”	**ಕನ್ನಡ ಕವಿಚರಿತೆ**	(೧೯೨೯) (ಭಾಗ ೩), ಬೆಂಗಳೂರು

ಆಲೂರು ವೆಂಕಟರಾಯರು	**ಕರ್ಣಾಟಕ ಗತವೈಭವ**	(೧೯೧೭) ಧಾರವಾಡ
ದೇವುಡು ನರಸಿಂಹಶಾಸ್ತ್ರೀ	**ಕರ್ಣಾಟಕ ಸಂಸ್ಕೃತಿ**	(೧೯೩೫) ಬೆಂಗಳೂರು ಸಿಟಿ, ಬೆಂಗಳೂರು ಪ್ರೆಸ್ ಮೈಸೂರು ರೋಡು
ಹನುಮಂತಯ್ಯ ವಿ. ಆರ್.	**ಕುರುಬರ ಚರಿತ್ರೆ,**	ಬೆಂಗಳೂರು
ಬೆಟಗೇರಿ ಕೃಷ್ಣ ಶರ್ಮ	**ಹಳ್ಳಿಗರ ಹಾಡುಗಳು**	ಧಾರವಾಡ
ನಾರಾಯಣರಾಯರು ಹ.	**ಕನ್ನಡದ ಕಥಾನಕ**	ಧಾರವಾಡ

ಸಂಸ್ಕೃತ

ಅಮರಸಿಂಹ	**ಅಮರಕೋಶಃ**	(೧೯೦೮) ಭಾನುಜಿ ದೀಕ್ಷಿತ (ಸುಧಾವ್ಯಾಖ್ಯಾ ಸಹಿತ) ನಿರ್ಣಯ ಸಾಗರ ಮುದ್ರಣ, ಮುಂಬಯಿ
ಕೌಟಿಲ್ಯ	**ಅರ್ಥಶಾಸ್ತ್ರಂ**	(೧೯೧೯ ದ್ವಿ. ಮುದ್ರಣ) ಡಾ. ಶಾಮಶಾಸ್ತ್ರೀ (ಸಂ) ಪ್ರಾಚ್ಯ ಸಂಶೋಧನಾಲಯ ಮೈಸೂರು.
ವರಾಹಮಿಹಿರ	**ಬೃಹತ್‌ಸಂಹಿತಾ**	(೧೯೨೫) ಸುಧಾಕರದ್ವಿವೇದಿ (ಸಂ) ಸಂಸ್ಕೃತ ಗ್ರಂಥಮಾಲಾ ವಾರಣಾಸಿ
ರಾಜಶೇಖರ	**ಕಾವ್ಯಮೀಮಾಂಸಾ**	(೧೯೩೪) ಸಿ. ಡಿ. ದಲಾಲ್, ಆರ್. ಎ. ಶಾಸ್ತ್ರೀ. ಗಾಯಕಾಡ್ ಓರಿಯಂಟಲ್ ಸಿರೀಸ್, ಬರೋಡಾ. ಶೌನಕ, ಬೃಹದ್ದೇವತಾ, (೧೯೦೪) ಮೆಕ್‌ಡೊನೆಲ್ (ಸಂ), ಹಾರ್ವರ್ಡ್ ವಿಶ್ವವಿದ್ಯಾಲಯ
ರಾಜಶೇಖರ	**ಕರ್ಪೂರ ಮಂಜರೀ**	ಡಾ. ಬುಹ್ಲರ್ (ಸಂ.) ಹಾರ್ವರ್ಡ್ ವಿಶ್ವವಿದ್ಯಾಲಯ
ತಾರಾನಾಥ ತರ್ಕವಾಚಸ್ಪತಿ	**ವಾಚಸ್ಪತ್ಯ**	(೧೯೧೮) ವಾರಣಾಸಿ ಸಂಸ್ಕೃತ ಮಹಾ ವಿದ್ಯಾಲಯ, ವಾರಣಾಸಿ (ಆರು ಸಂಪುಟಗಳು)
ಭಟ್ಟಾಕಳಂಕ,	**ಕರ್ನಾಟಕ ಶಬ್ದಾನುಶಾಸನಂ**	(೧೮೯೦) ಬಿ. ಎಲ್. ರೈಸ್ (ಸಂ.) ಬೆಂಗಳೂರು
ಪಿ. ವಿ. ಕಾಣೆ,	**ತಂತ್ರವಾರ್ತಿಕಂ**	(೧೯೨೫) ಓ. ಬಿ. ಬಿ. ಆರ್. ಎ. ಎಸ್. ಹೊಸಮಾಲೆ
ನಾರಾಯಣ	**ಈಶಾದಿವಿಂಶೋತ್ತರ**	
ರಾಮ ಆಚಾರ್ಯ	**ಶತೋಪನಿಷದಃ**	(೧೯೪೮) ನಿರ್ಣಯ ಸಾಗರ ಪ್ರೆಸ್, ಮುಂಬಯಿ
ಮನು	**ಮನುಸ್ಮೃತಿಃ**	ಬುಹ್ಲರ್ (ಸಂ) ಮೇಧಾತಿಥಿ ವ್ಯಾಖ್ಯಾನ ಕಲ್ಕತ್ತ ರಾಯಲ್ ಏಷಿಯಾಟಿಕ್ ಸೊಸೈಟಿ
ಸೋಮೇಶ್ವರ	**ಮಾನಸೋಲ್ಲಾಸಃ**	(೧೯೨೫) ಶ್ರೀಗೋಂಡಕರ್ ಜಿ. ಕೆ. (ಸಂ) ಗಾಯಕ್ವಾಡ್ ಓರಿಯಂಟಲ್ ಸೀರಿಸ್, ಬರೋಡಾ
ರಾಜಶೇಖರ	**ಬಾಲರಾಮಾಯಣಂ**	
ಬಿಲ್ಹಣ	**ವಿಕ್ರಮಾಂಕದೇವಚರಿತಂ**	
ಮರಾರಿಕವಿ	**ಅನರ್ಘ ರಾಘವಂ**	
ಗಂಗಾದೇವಿ	**ವೀರಕಂಪಣರಾಯ ಚರಿತಂ**	

ವಾಜಸನೀಯ ಸಂಹಿತಾ	(೧೮೫೭) ಮೇಟಲ್. ಎಂ. (ಸಂ) ಮಹೀಧರ ಭಾಷ್ಯ ಸಂಹಿತ, ಲಂಡನ್.
ಬೌಧಾಯನ ಧರ್ಮಸೂತ್ರ	(೧೮೮೪) ಲೈಪ್‌ಸಿಗ್ ಹುಲ್ಟ್ಷ್ (ಸಂ.) ಆನಂದಾಶ್ರಮ, ಪುಣೆ
ಬೌಧಾಯನ ಗೃಹ್ಯಸೂತ್ರ	(೧೯೦೪) ಆರ್. ಶಾಮಶಾಸ್ತ್ರಿ (ಸಂ) ಮೈಸೂರು ಪ್ರಾಚ್ಯ ಸಂಶೋಧನಾಲಯ, ಮೈಸೂರು ವಿಶ್ವ ವಿದ್ಯಾಲಯ, ಮೈಸೂರು
ರುದ್ರಾಧ್ಯಾಯ	(೧೮೯೦) ಸಾಯಣಾಚಾರ್ಯ ಮತ್ತು ಭಟ್ಟ ಭಾಸ್ಕರರ ಭಾಷ್ಯ, ಆನಂದಾಶ್ರಮ, ಪುಣೆ
ಸಾಮವೇದ ಸಂಹಿತಾ	(೧೯೦೮) ಸ್ವಾಮಿ ವಿಶ್ವೇಶ್ವರಾನಂದ, ಸ್ವಾಮಿ ನಿತ್ಯಾನಂದ, ನಿರ್ಣಯಸಾಗರ ಮುದ್ರಣಾಲಯ, ಮುಂಬಯಿ
ಋಗ್ವೇದ ಸಂಹಿತಾ	ಮ್ಯಾಕ್ಸ್ ಮುಲ್ಲರ್ (ಸಂ) ಸ್ಯಾಕ್ರೆಡ್ ಬುಕ್ಸ್ ಆಫ್ ದಿ ಈಸ್ಟ್ ಸೀರಿಸ್ (ಎರಡು ಸಂಪುಟಗಳು)
ಋಗ್ವೇದ ನಿತ್ಯವಿಧಿಃ	(೧೯೧೯) ನಿರ್ಣಯ ಸಾಗರ ಪ್ರೆಸ್, ಮುಂಬಯಿ
ಗೌತಮ ಧರ್ಮಸೂತ್ರ	(೧೯೧೦) ಹರದತ್ತನ ವ್ಯಾಖ್ಯಾನ, ಆನಂದಾಶ್ರಮ, ಪುಣೆ
ದೇವಾಂಗಪುರಾಣಂ	(೧೯೨೩) ಪ್ರಕಾಶಕರು ಶಂಕರಪ್ಪ ಸಕ್ಕರಿ, ಇಳಕಲ್ಲ (ವಿಜಾಪುರ)
ಐತರೇಯ ಬ್ರಾಹ್ಮಣ	ಕಾಶಿ ಮುದ್ರಣ
ಹಠಯೋಗ ಪ್ರದೀಪಿಕಾ	ನಿರ್ಣಯ ಸಾಗರ ಪ್ರೆಸ್, ಮುಂಬಯಿ
ನಾರದಸ್ಮೃತಿ	ನಿರ್ಣಯ ಸಾಗರ ಪ್ರೆಸ್, ಮುಂಬಯಿ
ಪಾತಂಜಲಿ	ನಿರ್ಣಯ ಸಾಗರ ಪ್ರೆಸ್, ಮುಂಬಯಿ

ಮರಾಠಿ ಪುಸ್ತಕಗಳು

ಕೇತಕರ್	**ಮಹಾರಾಷ್ಟ್ರ ಜ್ಞಾನಕೋಶ**
”	**ಪ್ರಾಚೀನ ಮಹಾರಾಷ್ಟ್ರ**
”	**ಮಹಾರಾಷ್ಟ್ರ ಸಂಸ್ಕೃತೀಚಾ ಇತಿಹಾಸ**
ವೈದ್ಯ ಸಿ. ವಿ.	**ಮಧ್ಯಯುಗೀನ ಭಾರತ**
ಮುಕುಂದರಾಜ	**ವಿವೇಕಸಿಂಧು**
ಭಾಸ್ಕರಭಟ್ಟ	**ಶಿಶುಪಾಲವಧ**
ನರೇಂದ್ರ	**ರುಕ್ಮಣೀ ಸ್ವಯಂವರ**
ಪಂಡಿತ ದಾಮೋದರ	**ವಚ್ಛಹರಣ**
ಚಕ್ರಧರ	**ಲೀಳಾಚರಿತ್ರ**
ಮುಕ್ತೇಶ್ವರ	**ಸಭಾಪರ್ವ, ವನಪರ್ವ, ವಿರಾಟಪರ್ವ**
ವಾ.ಗೋ. ಆಪ್ಟೆ	**ಮರಾಠೀಕೋಶ**

ಅಜಗಾಂವಕರ	ಮರಾಠೀ ಚರಿತ್ರ
ಪಾಂಗಾರಕರ	ಮಹಾರಾಷ್ಟ್ರ ವಾಙ್ಮಯಾಚಾ ಇತಿಹಾಸ
ರಾಜವಾಡ. ವಿ. ಕೆ.	ಐತಿಹಾಸಿಕ ಪ್ರಸ್ತಾವನಾ ಸಂಗ್ರಹ
”	ಜ್ಞಾನೇಶ್ವರೀ (ಪ್ರಸ್ತಾವನಾ ಪ್ರಥಮ ಖಂಡ)
ಕುಲಕರ್ಣಿ, ಕೃ. ಪಾ	ಮರಾಠಿ ಭಾಷಾ ಉದ್ಗಮ ವ ವಿಕಾಸ
ಭಾವೆ.	ಮಹಾರಾಷ್ಟ್ರ ಸಾರಸ್ವತ
ಇರಾವತಿ ಬಾಯಿ ಕರ್ವೆ	ಮರಾಠೀ ಲೋಕಾಂಚಿ ಸಂಸ್ಕೃತಿ
ಪೆಂಡಸೆ	ಮಹಾರಾಷ್ಟ್ರ ಸಂಸ್ಕೃತಿ
ಪಾಧ್ಯೆ	ಹೇಮಾಡಪತಾಂಚೇ ಚರಿತ್ರ
ಜೋಶಿ. ಆರ್. ಬಿ.	ಮರಾಠೀಭಾಷೇಚೀ ಘಟನಾ
ಸಿದ್ಧೇಶ್ವರಶಾಸ್ತ್ರೀ ಚಿತ್ರಾವ	ಋಗ್ವೇದಾಚೇ ಮರಾಠೀ ಭಾಷಾಂತರ
ಭಾಷೆ. ಬಾ. ಅ.	ಮರಾಠಿ ಭಾಷಾ ವ ವಾಙ್ಮಯಾಚಾ ಇತಿಹಾಸ
ಭಿಡೇ	ಮಹಾರಾಷ್ಟ್ರ ಭಾಷಾ ವ ವಾಙ್ಮಯಾಚಾ ಇತಿಹಾಸ, ಮಹಾರಾಷ್ಟ್ರ ಸಾಹಿತ್ಯ ಪತ್ರಿಕಾ (೧೯೨೭) ವರ್ಷಾಠಿ, ಮರಾಠಿ, ವಿವಿಧಜ್ಞಾನವಿಸ್ತಾರ
ವಿ. ರಾ. ಸಿಂಧೇ	ಅಸ್ಪೃಶ್ಯತೇಚಾ ಪ್ರಶ್ನ
ನಾ. ಶ್ರೀ. ರಾಜಪುರೋಹಿತ	ಕಾನಡಿ ಆಣಿ ಮರಾಠೀ, ಕೇಸರಿ ಪತ್ರಿಕೆ

ಶಬ್ದಸೂಚಿ

ಡಾ. ಶಂಕರರಾವ್ ಬಾಳದೀಕ್ಷಿತ ಜೋಶಿ ಅವರು ಕರ್ನಾಟಕ ಕಂಡ ಅತ್ಯಂತ ಶ್ರೇಷ್ಠ ಸಾಂಸ್ಕೃತಿಕ ಸಂಶೋಧಕರು. ನಮ್ಮ ಈ ನಾಡಿನ ಪ್ರತಿಭಾಪೂರ್ಣ ವಿದ್ವತ್ ಪರಂಪರೆಯಲ್ಲಿ ಡಾ. ಜೋಶಿ ಅವರದ್ದು ಅಪೂರ್ವವೂ ಮತ್ತು ವಿಶಿಷ್ಟವೂ ಆದ ಮಾರ್ಗ. ಜೋಶಿ ಅವರು ಹಿಡಿದಿರುವ ಮತ್ತು ನಡೆದುಬಂದಿರುವ ಈ ಮಾರ್ಗ ಅನ್ಯಸುಗಮವಾದುದಲ್ಲ. ಅವರು ಪರಂಪರಾಗತ ಸಂಶೋಧನೆಗೆ ಮತ್ತು ಕರ್ನಾಟಕದ ಸಾಂಸ್ಕೃತಿಕ ಹಾಗೂ ವಿದ್ವತ್ ಕ್ಷೇತ್ರಕ್ಕೆ ವಿನೂತನ ಆಯಾಮವನ್ನು ನೀಡಿದ ಅಪರೂಪದಸಂಶೋಧಕರು.

ಡಾ. ಶಂಬಾ ಅವರ ಆಸಕ್ತಿ, ಅಧ್ಯಯನ, ಸಂಶೋಧನೆ ಮತ್ತು ಚಿಂತನೆಗಳ ಬೀಸು ತುಂಬಾ ವ್ಯಾಪಕವಾದುದು. ಈ ಕಾರಣ ಅವರು ಇತಿಹಾಸದ ಭಾಷಾ ವಿಶ್ಲೇಷಣಾ ಪದ್ಧತಿಯನ್ನು–ಕರುನಾಡಿನುಡೆಗಳಹೆಸರುಗಳ, ದೇವತಾಪ್ರತಿರೂಪಗಳ, ಸಾಂಕೇತಿಕ ನೆಲೆಗಳ, ಮನೋವೈಜ್ಞಾನಿಕ ಶೋಧನೆಗಳ, ಧಾರ್ಮಿಕ ಚಿಂತನೆಗಳ ಸಂಕೀರ್ಣ ಪಥವನ್ನು ಹಿಡಿದು ನಡೆದರು. ತಿರುವು ಮುರುವು ಆಗಿರುವ ಸಮಕಾಲೀನ ಮೌಲ್ಯಗಳ ಜೊತೆಗೆ ಪ್ರಾಚೀನ ಸಂಸ್ಕೃತಿಯ ಸಾಧಾರವಿವರಗಳನ್ನು ಇಟ್ಟು, ತೌಲನಿಕವಾಗಿ ನೋಡಿದ್ದು ಮತ್ತು ವಿಶ್ಲೇಷಿಸಿದ್ದು ಜಾಗತಿಕ ಸಾಂಸ್ಕೃತಿಕ ಅಧ್ಯಯನದ ಅಖಂಡ ಇತಿಹಾಸದಲ್ಲೇ ಹೊಸಬಗೆಯದು.

ಡಾ. ಶಂಬಾ ಅವರದು ಬಹುಮುಖವಾದ ಮತ್ತು ಬಹುಶ್ರುತವಾದ ಅಪರೂಪದ ವ್ಯಕ್ತಿತ್ವ. ಅವರು ನಮ್ಮ ಸಾಂಸ್ಕೃತಿಕ ಚಿಂತಕರಲ್ಲಿ ಪ್ರಥಮರಲ್ಲಿ ಪ್ರಥಮರು. ಕಲ್ಪನಾಪ್ರಧಾನ ಸಾಂಪ್ರದಾಯಕ ಸಾಂಸ್ಕೃತಿಕ ಇತಿಹಾಸದ ಪರಂಪರೆಯ ಮೃದುಶಯ್ಯೆಯ ಮೇಲೆ ನಿರಾಳವಾಗಿ ಮಲಗಿದ್ದ ವೈದಿಕಶಾಹಿ ಚಿಂತನಕ್ರಮವನ್ನು ತಮ್ಮ ಜಾತ್ಯತೀತ ನಿಲುವಿನ ಸತ್ಯಶೋಧನೆಯ ಅಚ್ಚರಿಗೊಳಿಸುವ ಫಲಿತಗಳ ಮೂಲಕ ತಲ್ಲಣಗೊಳಿಸಿ, ಹೂತುಹೋಗಿದ್ದ ತಥ್ಯಗಳಿಗೆ ಜೀವದಾನ ಮಾಡಿ ಹೊಸಬೆಳಕಿನ ಪಥವನ್ನು ನಿರ್ಮಿಸಿದ ಅಸಾಧಾರಣ ವ್ಯಕ್ತಿ. ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾಳಜಿಗಳು, ವಿಶಾಲ ನೆಲೆಗಟ್ಟಿನ ಸೂಕ್ಷ್ಮತಮ ಚಿಂತನೆಗಳು, ಅಪ್ರಿಯವಾದರೂ ಕಷ್ಟದ ಕಲ್ಲುಮುಳ್ಳುಗಳನ್ನು ತುಳಿದು ಸತ್ಯಸೂರ್ಯನನ್ನು ದರ್ಶನ ಮಾಡಿಸುವ ವಿದ್ವತ್ ತಪಸ್ಸು–ಇವುಗಳೆಲ್ಲಅನ್ಯಾದೃಶ್ಯವಾಗಿ ಮೈತಳೆದು ನಿಂತ ಅವರ ಬರಹಗಳ ಸುಮಾರು ೪೦೦೦ಪುಟಗಳ ಬೃಹತ್ ರಾಶಿಯೇ ನಮ್ಮಮುಂದಿದೆ.

ಡಾ: ಎಚ್.ಜೆ. ಲಕ್ಕಪ್ಪಗೌಡ
ಅಧ್ಯಕ್ಷರು

ISBN 81-7713-000